Reg No. B 1270.

Monday, 14th October, 1935

ಕಾನಡಾವೃತ್ತ.

THE KANARA NEWS.

ವರ್ಷ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಲಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ,
ರೂ. 3-1-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೫

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಉದ್ದ ೮ ಸಾಲುಗಳವರೆಗೆ ರೂ 1-0-0
೮ ನಂತ್ರ ಪ್ರತಿಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ಠರಿಸಲ್ಪಡುವದು.

—(ಕುಮಟಾ-- ಕಾನಡಾವೃತ್ತ, ಸೋಮವಾರ ತಾರೀಖು ೧೪ ಮಾಹೆ ಅಕ್ಟೋಬರ ಸನ್ ೧೯೩೫ನೇ ಇಸವಿ.)—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩½ ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧½ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪಿ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ,

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧ ೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು:— ಉಡುಪಿ, ಬ್ರಹ್ಮಾವರ, ಹೊನ್ನಾವರ ಕುಂದಾಪುರ ಕುಮಟಾ ಕಾರವಾರ ಸಿಟಿ, ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ ಕಸ್ಬಾ ನಗರ, ಪದ್ಮನೂರ, ಹಂಗಾರಕಟ್ಟಾ, ಕುಕ್ಕೆರಿ ಮತ್ತು ಕಾಂಞ್ಞಾಂಗಾಡು

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/ , 10/-, 100/- ಕೊಡಲ್ಪಡುವವು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6½ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ. ನಮ್ಮ **ಪಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ
ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ
ಚಿನ್ನಾಭರಣಗಳ ಈಡಿನ ಮೇಲೆ ಒಳ್ಳೆಯ ರಿಯ್ಯಾತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು
ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

ಕುಮಟಾ
ತಾ [illegible]೧೯೩೫

G. S. Nayak,
ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೇಶ್ವರ ಪ್ರಸನ್ನಃ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ. (ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಶಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಿಕ

ಕೆಲವು ಮಾಹಿತಿ.

ಇತ್ತ [illegible]-ಹಬಸಿ ದೇಶಗಳೊಳಗೆ ಈಗ ಯುದ್ಧ ನಡೆದಿದೆ ಆದರಿಂದ ಹಬಸಿ ದೇಶದ ವರ್ಣನೆಯನ್ನು ಕೊಡುವದುಚಿತ. ಹಬಸಿ ದೇಶ ಪೂರ್ವ ಆಫ್ರಿಕೆಯಲ್ಲಿದ್ದು ಸುತ್ತು ಮುತ್ತು ಇತಾಲಿ-ಸೋಮಾಲಿ [illegible]-ಸೋಮಾಲಿ ಪ್ರದೇಶ, ಫ್ರೆಂಚ [illegible] ಸೋಮಾಲಿ ಪ್ರದೇಶ, ಎರಿಟ್ರೆ ಎಂಬ ಇತಾಲಿಯ ವಸಾಹತ ಇಜಿಪ್ತ ಸೂಡಾನ, [illegible] ವಸಾಹತುಗಳು ಇವೆ ಯಾವದೇ [illegible] ದೃಷ್ಟಿ ಪ್ರದೇಶದಲ್ಲಿ [illegible] ಇಲ್ಲವೆ ಎರಿಟ್ರೆ ಪ್ರದೇಶದ [illegible] ಕ್ಕೆ ಹೋಗಬೇಕು [illegible] ಜನರು [illegible] ಇವರ [illegible] ಹಬಸಿ [illegible] ಕ್ರಿಸ್ತಿ ಧರ್ಮದವರು, [illegible] ಸಂಪ್ರದಾಯದವರು [illegible] ಕುದುರೆಗಳು [illegible] ಗಳಲ್ಲಿ ಗಿಡ್ಡ ಕುದುರೆಗಳು [illegible] ಕಷ್ಟಗಳನ್ನು [illegible] ಹತ್ತಿ, ಕಬ್ಬು, ಖರ್ಜೂರ, ಕಾಫಿ, ದ್ರಾಕ್ಷಿ ಇವು ಮುಖ್ಯ ಬೆಳೆ ಇಲ್ಲಿ ಗುಲಾಮರ ವ್ಯಾಪಾರ ನಡೆಯುತ್ತದೆ ಘಟ್ಟದ ಮೇಲಿನ ಜನರು ಬಂದು ಘಟ್ಟದ ಕೆಳಗಿನ ಪ್ರದೇಶದ ಮೇಲೆ [illegible] ಹುಡುಗರಿಗೆ, ಹೆಂಗಸರಿಗೆ ಹಿಡಿದೊಯ್ಯುತ್ತಾರೆ ರಾತ್ರೆ ಒಂಟೆಗಳ ಮೇಲೆ ಇವರನ್ನು [illegible] ಅರಬಿಸ್ತಾನದ ಕಡೆಗೆ ಹೋಗಿ ಮಾರಾಟ ಮಾಡುತ್ತಾರೆ ಪ್ರತಿಯೊಂದು ಮನೆಯಲ್ಲಿಯೂ ಗುಲಾಮರಿದ್ದಾರೆ [illegible] ಗುಲಾಮರೇ ಮನೆಯೊಳಗಿನ [illegible] ಮಾಡುತ್ತಾರೆ ಗುಲಾಮರಿಗೆ ಇಟ್ಟು [illegible] ಇದೊಂದು ದೊಡ್ಡಸ್ತನ ಗುಲಾಮರ [illegible]ವನ್ನು ನಡೆಸಬಾರದಾಗಿ ಬಾದಶಹರು [illegible] ಹೊರಡಿಸಿದ್ದಾರೆ ಆದಾಗ್ಯೂ ಗುಪ್ತವಾಗಿ ಈ ವ್ಯಾಪಾರ ನಡೆಯುತ್ತದೆ ಬಾದಶಹರಾದ ರಾಸ ತಫರಿಯವರು [illegible] ಸಾಲಿನಲ್ಲಿ ಪಟ್ಟವನ್ನೇರಿದರು ಅವರ ವಯಸ್ಸು ಈಗ ಅಜಮಾಸ ೪೫ ವರುಷ [illegible] ಎಂಬ ಬಿರುದಿದೆ ಪ್ರಾಚೀನ ಕಾಲದಿಂದ ಹಬಸಿ ದೇಶ ಒಂದು ದೇಶವಲ್ಲ ಬೇರೆ ಬೇರೆ [illegible] ಬೇರೆ ಬೇರೆ ಪ್ರಾಂತದಲ್ಲಿ ತಮ್ಮ [illegible] ನಡೆಸುತ್ತಿದ್ದರು [illegible] ಇತಾಲಿಯ [illegible] ಬಾದಶಹರಾದ ಮೆನೆಲಿಕ್‌ರವರು ಬೇರೆ ಬೇರೆ [illegible] ರಾಜರಿಗೆ ಇರುವ ಮತಭೇದಗಳನ್ನು [illegible] ವನ್ನುಂಟು ಮಾಡಿ ಹಬಸಿ ದೇಶದೊಳಗೆ ಏಕರಾಷ್ಟ್ರೀಯ ಭಾವನೆಯನ್ನುಂಟು ಮಾಡಿದರು ಅಂದಿನಿಂದ ಈ ವರೆಗೆ ಹಬಸಿ ದೇಶದಲ್ಲಿ ದೇಶಾಭಿಮಾನ ಬೆಳೆದು ದೇಶದ ಸ್ವಾತಂತ್ರ್ಯಪಾಲನೆಗಾಗಿ ಹಬಸಿ ಜನರು ಜೀವದ ಪರಿವೆಯಿಲ್ಲದೆ ಹೋರಾಡಲಿಕ್ಕೆ ಸಿದ್ಧರಿದ್ದಾರೆ ಇವರು ಜಾಣರು, ಸ್ವಾಮಿನಿಷ್ಠರು, ಸತತೋದ್ಯೋಗಿಗಳು, ದೃಢಕಾಯರು. ಹಿಂಸ್ರ ಪಶುಗಳೊಡನೆ ಗುಡ್ಡ ಪ್ರದೇಶಗಳಲ್ಲಿ, ನದಿ ಪ್ರದೇಶಗಳಲ್ಲಿ ಇವರು ಹೋರಾಡುವ ನಮೂನೆ ನೋಡಿ ವಿಲ್‌ಫ್ರೆಡ ಒಸಗೂಡರವರು ಚಕಿತರಾಗಿದ್ದಾರೆ ಒಸಗೂಡರವರು ಪ್ರಾಣಿಶಾಸ್ತ್ರಜ್ಞರು ಅಮೇರಿಕೆಯ ನೈಸರ್ಗಿಕ ಇತಿಹಾಸದ ಪದಾರ್ಥ ಸಂಗ್ರಹಾಲಯದ ಅಧಿಕಾರಿಗಳು. ಹಬಸಿ ದೇಶವು ದೊಡ್ಡ ದೊಡ್ಡ ಪರ್ವತಶ್ರೇಣಿಗಳಿಂದ ಸುರಕ್ಷಿತವಿದೆ ೮೦೦೦ ಅಡಿ ಎತ್ತರವುಳ್ಳಪ್ರದೇಶ ಪರ್ವತಗಳು ೧೦ರಿಂದ ೧೪ ಸಾವಿರ ಫೂಟು ಎತ್ತರವಿವೆ ಅಲ್ಲಲ್ಲಿ ಫಕ್ಕನೆ ಪರ್ವತಗಳು ಒಡೆದು ಆಳವಾದ ಕಂದರಗಳುಂಟಾಗಿವೆ ಇವುಗಳ ಪತ್ತೆ ಹಬಸಿ ಜನರಿಗೇ ಗೊತ್ತು, ಕಂದರಗಳುಂಟೆಂದು ಕಾಣುವದು ಸಹ ಕಠಿಣ ಆ ಪ್ರಕಾರದಿಂದ ಇಲ್ಲಿ ಗಿಡಗಂಟೆ ಬೆಳೆದು ಜನರಿಗೆ ಮೋಸ ಮಾಡುತ್ತಿವೆ ೬ ಸಾವಿರ ಅಡಿ ಏರಿಹೋಗಿ ಹಬಸಿ ದೇಶದ ತಪ್ಪಲು ಪ್ರದೇಶ ಸೇರಿದರೂ ಮುಂದರಿಯುವದು ಕಷ್ಟ ಹಬಸಿದೇಶದೊಳಗಿನ ಗುಡ್ಡಗಳಲ್ಲಿಯೂ, ಕಂದರಗಳಲ್ಲಿಯೂ ಅಡಗಿ ಕೂತು ಇವರು ಇತಾಲಿಯವರಿಗೆ ದಣಿಸುವರು ಇತಾಲಿಯವರು ತೋಪುಗಳನ್ನು ಹತ್ತಿಸಿಕೊಂಡು ಗುಂಡು ಹಾರಿಸಿದರೆ ತಾಗುವದು ಗುಡ್ಡಕ್ಕೆ, ಗಿಡ-ಗಂಟೆಗಳಿಗೆ ಜನರಿಗೆ ಅವುಗಳ ಸಪ್ಪಳ ಮಾತ್ರ ಕೇಳಹೋದೀತು ಅಲ್ಲಿ ನೀರಿನ ಕೊರತೆ ವಿಶೇಷ ಇದೇ ದೊಡ್ಡ ಕಷ್ಟ ಸೈನಿಕರಿಗೆ ಕುಡಿಯಲಿಕ್ಕೆ, ತೊಳೆಯಲಿಕ್ಕೆ ೨ ಪಿಂಟು ಅಂದರೆ [illegible]

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯಾಗತ ಅನುಭವ ಸಿದ್ಧೌಷಧಗಳು !

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಪ್ರಶಸ್ತ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
[illegible] (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅಮೃತ [illegible] (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
[illegible] (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶವಾಗಿ ನೋಡಿ ಕಂಡು ಆನಂದಪಟ್ಟೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ[illegible] ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಪೂರ್ಣವಾಗಿ ಇರುತ್ತವೆ ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಣವತ್ತಾದ ಅನೇಕ ವನಸ್ಪತಿಗಳ ಪರಿಶೀಲನವೂ ಇವರಿಗಿರುತ್ತದೆ ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಪ್ರದರ್ಶನೀಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸಿದರಾದಾಗಲೇ ಆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ ೧೦-೧೧-೧೯೩೪

ವಿದ್ವಾನ್ ಕೇ ಕೇಶವಶಾಸ್ತ್ರಿ ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ [illegible] ಪರಿಷತ್ ಅಧ್ಯಕ್ಷ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟ್, ದ. ಕನ್ನಡ

೭೪ ಶೆಂಟಿ ಗ್ರೇಡ ಏರುತ್ತದೆ. ಇಷ್ಟರೊಳಗೆ ಒಂದು ದಿನದ ನೀರಿನ ಪೂರೈಕೆ ಮಾಡಿಕೊಳ್ಳಬೇಕು ಸಮುದ್ರದ ಉಪ್ಪು ನೀರಿನಿಂದ ಸೀ ನೀರು ಮಾಡುವ ಯಂತ್ರ ಒಂದಿಟ್ಟಿದೆ. ಈ ಯಂತ್ರದಲ್ಲಿ ತಯಾರಾದ ನೀರು ನಿತ್ಯದ ಉಪಯೋಗ ಸಾಲುವದಿಲ್ಲ. ಇಟಾಲಿಯರು ಹಡಗದ ಮೇಲೆ ಕಳಿಸಿಕೊಂಡು ೩೦೦ ಮೈಲು ಪ್ರವಾಸ ಮಾಡಿ ಸೂಡಾನ ಬಂದರಕ್ಕೆ ಹೋಗಿ ಬ್ರಿಟಿಶ ಅಧಿಕಾರಿಗಳ ಕಡೆ ನೀರು ಖರೀದಿ ಮಾಡ ಹೋಗಿದ್ದರು ಬೇಕಷ್ಟು ಹಣ ಕೊಡಲಿಕ್ಕೆ ಸಿದ್ಧರಿದ್ದರು ಅಲ್ಲಿಯೂ ನೀರಿನ ಬರಗಾಲ. ಸೋಸಿ ನೀರನ್ನು ತಯಾರಿಸಬೇಕು ದಕ್ಷಿಣ ಭಾಗದಲ್ಲಿರುವ ಹವಾಡ ಮತ್ತು ಓಗಡೆನ್ ಪ್ರದೇಶಗಳು ಮರುಭೂಮಿ. ಕ್ಷಿತಿಜದ ಮೇಲೆ ಎಲ್ಲಿ ನೋಡಿದರಲ್ಲಿ ಗಿಡಗಂಟಿಗಳೇ ಮತ್ತು ಉಸುಬು ಈ ಪ್ರದೇಶದಲ್ಲಿ ಮನುಷ್ಯ ಪ್ರಾಣಿ ಸಂಚರಿಸುವದು ಕಠಿಣ. ಒಳಯಲ್ಲಿ ಆಹಾರ ಮತ್ತು ನೀರು ಪೂರೈಸಿಕೊಂಡರೆ ಮಾತ್ರ ಮನುಷ್ಯನ ಬಾಳ್ವೆ ಉತ್ತರ ಪಾರ್ಶ್ವದ ದನಕಾಲಿ ಪ್ರದೇಶವು ಮತ್ತೂ ಕಷ್ಟಕರವಾದುದು "ಸೃಷ್ಟಿಯೊಳಗಿನ ನರಕಕುಂಡವೆಂದು (Hell-hole of Creation)" ಎಂಬದಾಗಿ ನೆಸ್ಬಿಟ ಎಂಬ ಭೂಗೋಲಶಾಸ್ತ್ರಜ್ಞರು ವರ್ಣಿಸಿದ್ದಾರೆ ಈ ಭಾಗವು ತಗ್ಗಾಗಿ ಸುತ್ತುಮುತ್ತು ಗುಡ್ಡಗಳಿದ್ದ ತಗ್ಗುಗಳಲ್ಲಿ ನೀರು: ಉಪ್ಪು ನೀರು. ೧೬೮ ಅಂಶ ಉಷ್ಣತೆ ಇಲ್ಲಿ ಸೈನ್ಯ ಕಳುಹಿದರೆ ಬೆಂದು ಸಾಯುವವು. ಇಟಾಲಿಯವರ ಕಡೆ ೬೦೦ ವಿಮಾನುಗಳಿವೆ. ಆದರೆ ಹಬಸಿ ದೇಶದಲ್ಲಿ ೬ ವಿಮಾನಗಳನ್ನು ಇಳಿಸಿಕೊಳ್ಳಲು ಅನುಕೂಲತೆಯಿಲ್ಲ ವಿಮಾನುಗಳಿಲ್ಲಿ ಆಕಾಶಮಾರ್ಗದಲ್ಲಿಯೇ ಹಾರ್‍ಯಾಡುತ್ತಿರುವ ಪ್ರಸಂಗ! ಆದರೆ ಸತತವಾಗಿ ಆಕಾಶದಲ್ಲಿಯೇ ಹಾರ್‍ಯಾಡುತ್ತ ಉಳಿಯಲು ವಿಮಾನುಗಳಿಗೆ ಸಾಧ್ಯವಿಲ್ಲ. ಎರಿಟ್ರಿ ಇಟಾಲಿಯ ವಸಾಹತಿನಿಂದ ಹಾರಿಹೋಗಿ ೧ ಸಾವಿರ ಮೈಲು ಪ್ರವಾಸ ಮಾಡಿ ಪುನಃ ಸ್ವಸ್ಥಾನಕ್ಕೆ ಮರಳಿ ಬರಬೇಕು ಮಧ್ಯದಲ್ಲಿ ಇಳಿದರೆ ಅಪಾಯವೇ. ಘಕ್ಕನೆ ಮರಳಿ ಸ್ವಸ್ಥಾನಕ್ಕೆ ಬರಲಾಗದಿದ್ದರೆ ಶತ್ರುಗಳ ಕೈಸೇರಬಾರದೆಂದು ವೈಮಾನಿಕರಿಗೆ ತುಬಾಕಿ ಕೊಡಲಾಗಿದೆ. ಹಬಸಿ ದೇಶದೊಳಗೆ ವಿಮಾನು ಇಳಿಯುವ ಪ್ರಸಂಗದಲ್ಲಿ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ವೈಮಾನಿಕರಿಗಲ್ಲ ಅಪ್ಪಣೆ. ಹಬಸಿ ದೇಶವನ್ನು ಒಮ್ಮೆಲೇ ವಶಮಾಡಿಕೊಂಡು ಸುತ್ತು ಮುತ್ತು ಸೈನ್ಯ ಠಾಣ್ಯಗಳನ್ನಿಡುವದು ಕಠಿಣ ಯಾಕಂದರೆ ಈ ಠಾಣ್ಯದಲ್ಲಿರುವವರಿಗೆ ನೀರು, ಆಹಾರ ಸಾಮಗ್ರಿಗಳನ್ನು ಪೂರೈಸುವದು ದುರುಘಾಸ್ತ ಮಾತ್ರ ಮಳೆಗಾಲ ಈಗಲೇ ಮುಗಿದದೆ. ಆದರೂ ನೀರಿನ ಬರಗಾಲ ತಪ್ಪದು ಹುಲ್ಲು ಸಿಗುವದು ಕಠಿಣ. ಹಬಸಿ ದೇಶವನ್ನು ಪಾದಾಕ್ರಾಂತ ಮಾಡಿಕೊಳ್ಳಲಿಕ್ಕೆ ಸೃಷ್ಟಿಕರ್ತನೇ ಅಭೇದ್ಯವಾದ ವ್ಯವಸ್ಥೆ ಮಾಡಿರುತ್ತಾನಾಗಿ ರೋಮ ವಿಶ್ವವಿದ್ಯಾಲಯದ ಪರವಾಗಿ ಮುಸೋಲಿನಿಯವರ ಅಪೇಕ್ಷೆಯಂತೆ ಹಬಸಿ ದೇಶದ ನಿರೀಕ್ಷಣ ಮಾಡಿದ ಕೆಪ್ಟನ್ ಎಂಟೋನಿಯೋ ಝುಟೋರವರು ಲಂಡನಿನೊಳಗಿನ 'ಸಂಡೇ ಡಿಸ್ಪೆಚ್' ಪತ್ರಿಕೆಯಲ್ಲಿ ಬರೆಯುತ್ತಾರೆ. ಕೆಪ್ಟನ್ ಝುಟೋರವರು ದಕ್ಷಿಣ ಪಾರ್ಶ್ವದ ಇಟಾಲಿ-ಸೋಮಾಲಿ ಪ್ರಾಂತದಿಂದ ಉತ್ತರಕ್ಕೆ ಲಿಬಿಯಾ ಪ್ರದೇಶದ ವರೆಗೆ ಸಂಚರಿಸಿ ಅಲ್ಲಿಯ ಯಾವತ್ತೂ ಸೃಷ್ಟಿ ಸ್ಥಿತಿಯನ್ನು ಗ್ರಹಿಸಿಕೊಂಡಿದ್ದಾರೆ. ಝುಟೋರವರು ಸೈನಿಕರು, ಪೃಥ್ವೀ ಪ್ರದಕ್ಷಿಣೆ ಹಾಕುವವರು, ಸಂಶೋಧಕರು ಮುಸೋಲಿನಿಯವರು ಇವರಿಗೆ ಅಲ್ಲಲ್ಲಿಯ ರಣಾಂಗಣದ ಸ್ಥಳೀಕ ಮಾಹಿತಿ ಕೊಟ್ಟು ಸೈನ್ಯಾಧಿಕಾರಿಗಳಿಗೆ ಸಲಹೆ ಕೊಡುವದಕ್ಕಾಗಿ ನೇಮಿಸಿದ್ದಾರೆ ಲಂಡನಿನೊಳಗಿನ ಸಚಿತ್ರ 'ಲಂಡನ್ ನ್ಯೂಸ್' ಪತ್ರಕರ್ತರು ಹಬಸಿ ದೇಶದ ಸ್ವಾಭಾವಿಕ ಸ್ಥಿತಿಯ ನಕಾಶೆಯನ್ನು ಪ್ರಕಟಿಸಿದ್ದಾರೆ ಅದರೊಳಗೆ ಬೆಟ್ಟ, ಗುಡ್ಡ, ದರಿ, ಕಂದರ, ಮರುಭೂಮಿ, ಗಿಡ-ಗಂಟಿಗಳನ್ನೆಲ್ಲ ತೋರಿಸಿ ಹಬಸಿ ದೇಶ ಇಟಾಲಿಯ ಸ್ವಾಧೀನವಾಗಲು ಮರ್ಮಸ್ಥಾನ (Vulnerable spots)ಗಳಿರುವದರಿಂದ ದುರ್ಲಭವೆಂತಲೂ, ಸಮಪಾತಳಿಯ ಸ್ಥಳ ಹಬಸಿ ದೇಶದೊಳಗೆ ಇಲ್ಲವಾಗಿಯೂ ಇಡೀ ದೇಶ ಗುಡ್ಡ ಮತ್ತು ದರಿ-ಕಂದರಗಳಿಂದ, ಹೊಳೆ ಹಳ್ಳಗಳಿಂದ ತುಂಬಿ ಹೋಗಿರುವದಾಗಿಯೂ ಬರೆದಿದ್ದಾರೆ ಅಡಿಸ ಅಬಾಬಾ ಮತ್ತು ದಕ್ಷಿಣ ಪ್ರದೇಶಗಳಿಗೆ ತಲ್ಪಬೇಕಾದರೆ ಉಷ್ಣ ಪ್ರದೇಶದೊಳಗಿಂದ ಹನಿ ನೀರಿಲ್ಲದ ಮರು ಭೂಮಿಯೊಳಗಿಂದ ಕೂಚುಮಾಡಿ ಹೋಗಬೇಕು. ಶತ್ರುಗಳಿಗಿಂತ ಇದೇ ಬಹು ದೊಡ್ಡ ಪ್ರತಿಬಂಧವೆಂದು ಹಬಸಿ ಪ್ರಕೃತಿ ಬಲ್ಲವರ ಅಭಿಪ್ರಾಯ. ಇದನ್ನೆಲ್ಲ ಪರಿಹರಿಸಿಕೊಂಡು ಹಬಸಿ ದೇಶವನ್ನು ಪಾದಾಕ್ರಾಂತ ಮಾಡಹೋದರೆ ೩ ವರ್ಷಗಳಿಗೆ ಕಡಿಮೆಯಾಗಿ ಈ ದೌಡು ಕೊನೆಗಾಣದೆಂದು ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡ ಮಿ| ವಿಲಿಯಮ್ ಮೆಕಿನ್‌ರವರು ಬರೆಯುತ್ತಾರೆ ಕನಿಷ್ಟ ೫ ಲಕ್ಷ ಜನರು ಸತತೋದ್ಯೋಗದಿಂದ, ದೃಢನಿಶ್ಚಯದಿಂದ ದುಡಿದರೆ ಮಾತ್ರ ಸಾಧ್ಯವಿದೆ. ಬಹು

THE AGRICULTURAL & INDUSTRIAL BANK, LIMITED.
(Incorporated in British India)
Head office:- COONDAPOOR. Branch:- KUMTA

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು:— ಕುಂದಾಪುರ. ಬ್ರೇಂಚ:— ಕುಮಟಾ.

ಕಾಯಂ ಠೇವಣಾತಿಗಳು.

	3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,	
ಸೇವಿಂಗ್ಸ ಬೇಂಕ ಠೇವಣಾತಿಗೆ	6 ತಿಂಗಳಿಗೆ ... . 4½ರಂತೆ,	ಚಾಲ್ತಿ ಠೇವಣಾತಿಗೆ
ಶೇಕಡಾ	12 ತಿಂಗಳಿಗೆ ... ... 5½ ,,	2½ರಂತೆ
4% ರಂತೆ ಬಡ್ಡಿ	24 ತಿಂಗಳಿಗೆ ... . 6 ,,	ಬಡ್ಡಿ
	3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ	

ಬಡ್ಡಿ ದರದಿಂದ ಅಂಗೀಕರಿಸಲ್ಪಟ್ಟು ಪ್ರತಿ ೬ ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವದು.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಸಿ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟ್‌ಗಳೂ ಕೊಡಲ್ಪಡುವವು

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಗೈರೆ ವಸೂಲಿಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಕೊಳ್ಳಬಹುದು.

ಕುಮಟಾ,
ತಾ 12—10—1935.

K. Vaman Shenai &
G. Balakrishna S. Nayak.
Managing Directors.

ಕರವಾಗಿ ಸೈನಿಕರು ಹರೆಯದವರು ಸೇನಾಧಿಕಾರಿಗಳು ೨೫ ವರ್ಷದೊಳಗಿನ ೨|| ಲಕ್ಷ ಜನರು ಇಂದಿಗೆ ಎರಿಟ್ರಿ ಮತ್ತು ಇಟಾಲಿಸೋಮಾಲಿ ಪ್ರಾಂತದಲ್ಲಿ ಶೇಖರಿಸಿಕೊಂಡಿದ್ದಾರೆ ಸೇನಾಧಿಕಾರಿಗಳು ಮಾತ್ರ ವಯಾತೀತರು, ಅನುಭವಿಕರ ನವಸ್ಫೂರ್ತಿಯ ನವಯುವಕರ ಸಂಗ್ರಾಮವಿದೆಂದು ಕಪ್ತಾನ ಝುಟೋರವರ ಅಂಬೋಣ ಸೃಷ್ಟಿಕರ್ತನಿಂದ ಸ್ವಾತಂತ್ರ್ಯದ ತವರೂರೆಂದು ಕಲ್ಪಿಸಲ್ಪಟ್ಟ ಆಫ್ರಿಕಾ ದೇಶದೊಳಗೆ ಈ ತನಕ ಸ್ವಾತಂತ್ರ್ಯ ಕಾಪಾಡಿಕೊಂಡಿದ್ದ ಹಬಶಿ ಜನಾಂಗ ಇಟಲಿಗೆ ಆಹುತಿಯಾಗಿ ಬೀಳಬಹುದೇ? ಎಂಬ ಪ್ರಶ್ನೆಗೆ ಡಾ|| ಟಿ ಎ ಲೆಂಬಿ ಎಂಬ ಅಮೇರಿಕೆಯ ವೈದ್ಯವಿದ್ಯಾವಿಶಾರದರಾದ ಧರ್ಮೋಪದೇಶಕರು ದುಸ್ಸಾಧ್ಯ ಮಾತೆಂದು ಅಭಿಪ್ರಾಯ ಕೊಡುತ್ತಾರೆ ಡಾ|| ಲೆಂಬಿಯವರು ಹಬಶಿದೇಶದಲ್ಲಿ ೩೦ ವರ್ಷ ಉಳಿದು ಸದ್ಯಕ್ಕೆ ಅಮೇರಿಕೆಗೆ ಮರಳಿದ್ದಾರೆ ಬಹದ್ದೂರರಾದ ರಾಸ ತಫಾರಿಯವರ ಜೀವದ ಗೆಳೆಯರು 'ಜವಳುಭೂಮಿಯಲ್ಲಿ ಮನುಷ್ಯರು ನೊಣಗಳಂತೆ ಸಾಯುತ್ತಾರೆ ವಿಷಮಜ್ವರ, ಚಳಿಜ್ವರ ಇವೇ ಮಾನವ ಪ್ರಾಣಿಯ ಘಾತ ಮಾಡುತ್ತವೆ ಜವಳು ಪ್ರದೇಶ ಬಿಟ್ಟು ತಪ್ಪಲು ಪ್ರದೇಶದ ಮೇಲಿಂದ ಕೂಚು ಮಾಡಬಯಸಿದರೆ ಘಟ್ಟ ದರಿ-ಕಂದರ ಇವೇ ಹಬಶಿ ದೇಶದ ಮೇಲೆ ಪರಚಕ್ರ ಹೂಡುವವರ ಸಂಕಟಗಳು" ಇವನ್ನು ಪರಿಹರಿಸಿಕೊಂಡು ಪಾರಾಗುವದು ಕಠಿಣವೆಂದೇ ಡಾ|| ಲೆಂಬಿಯವರ ಅಭಿಪ್ರಾಯ

⁂

ಇಟಾಲಿ ಹಬಶಿ ದೇಶಗಳೊಳಗೆ ಯುದ್ಧದ ಪ್ರಸಕ್ತಿ, ರಾಷ್ಟ್ರಸಂಘದ ಮಧ್ಯಸ್ಥಿಕೆಯನ್ನು ಇಟಾಲಿಯು ತಿರಸ್ಕರಿಸುವಲ್ಲಿ ಸುಯೇಜ ಕಾಲುವೆಯನ್ನು ಮುಚ್ಚಬೇಕೋ ಹೇಗೆ? ಎಂಬದೊಂದು ವಿವಾದ ವಿಷಯವಿತ್ತು ಆ ಕುರಿತು ಸುಯೇಜ ಕಾಲುವೆ ಕಂಪನಿಯ ಸಭೆ ಪ್ಯಾರಿಸ ಪಟ್ಟಣದಲ್ಲಿ ಕಳೆದ ವಾರ ನಡೆದು ಆ ಕಾಲುವೆಯನ್ನು ಮುಚ್ಚಬಾರದೆಂದು ನಿರ್ಣಯವಾಗಿದೆ ಸುಯೇಜ ಕಾಲುವೆಯ ಕರಾರಿನಂತೆ ಯಾವತ್ತು ಪ್ರಸಂಗಗಳಲ್ಲಿ ಆ ಕಾಲುವೆಯನ್ನು ಯಾವತ್ತು ರಾಷ್ಟ್ರಗಳ ಹಡಗಗಳಿಗೆ ಓಡಾಡಲು ಯಾವ ದೇಶದ ಪ್ರತಿಬಂಧವಿರಕೂಡದೆಂದು ನಿಶ್ಚಿತ ಶರತ್ತಿದೆಯೆಂದು ಕಾಲುವೆ ಕಂಪನಿಯವರ ನಿರ್ಣಯಿಸಿದ್ದಾರೆ ಈ ಕಂಪನಿಯಲ್ಲಿ ಫ್ರೆಂಚರ ಪ್ರಾಬಲ್ಯ ಫ್ರೆಂಚರ ಒಲವು ಇಟಾಲಿಯ ಬದಿಗೆ ಸುಯೇಜ ಕಾಲುವೆಯ ಇತಿಹಾಸ ತಿಳಕೊಳ್ಳುವದುಚಿತ ಈ ಕಾಲುವೆ ೯೯ ಮೈಲು ಉದ್ದವಿದೆ, ೪೫ ಅಡಿ ಆಳವಿದೆ, ೭೦ ಗಜ ಅಗಲವಿದೆ ದಿನಾ ೧೫ ಹಡಗಗಳು ಈ ಕಾಲುವೆಯೊಳಗಿಂದ ಅಡ್ಡಾಡಬಹುದು ಈ ಕಾಲುವೆಗಾಗಿ ೧ ಕೋಟಿ ೭೦ ಲಕ್ಷ ಪವನು ಖರ್ಚು ಬಿಂತು ಅದರೊಳಗೆ ೨|| ಲಕ್ಷ ಪವನು ಇಜಿಪ್ತ ದೇಶದ ಅರಸರಾದ ಖಿದೀವರವರಿಗೆ ಕಾಲುವೆ ತೋಡಿಯಲು ಅಪ್ಪಣೆ ಕೊಟ್ಟ ಬಗ್ಗೆ ಕೊಟ್ಟಿತ್ತು ಈ ಕಾಲುವೆಯ ಕಲ್ಪನೆ ಹುಟ್ಟಿಸಿದ್ದ ಲೆಸೆಪ್ಸ ಎಂಬ ಫ್ರೆಂಚ ಇಂಜಿನಿಯರರಿಗೆ ಫ್ರೆಂಚ ಕಂಪನಿಯವರು ೨ ಲಕ್ಷ ಪವನು ಖರ್ಚು ಮಾಡಿ ಕಾಲುವೆ ಅಗಿದು ೧೮೬೯ನೇ ಇಸ್ವಿಯಲ್ಲಿ ಅದನ್ನು ತೆರೆದರು ಆ ಕಾಲುವೆ [illegible] ೨೬ ಫೂಟು ತಗ್ಗಿತ್ತು ಆಮೇಲೆ ೪೫ ಫೂಟು ತಗ್ಗು ಮಾಡಲ್ಪಟ್ಟಿತು, ಆ ಕಾಲುವೆಯು ಸ್ಥಳ ತುರ್ಕಸ್ಥಾನದ್ದು ತುರ್ಕಸ್ಥಾನದವರ ಇಜಿಪ್ತದೇಶಕ್ಕೆ ಒಪ್ಪಿಸಿದರು ಇಜಿಪ್ತ ಪ್ರದೇಶವದು ೨|| ಲಕ್ಷದ ಶೇರು ಪಡೆದ ಸುಯೇಜ ಕಾಲುವೆ ಕಂಪನಿಗೆ ೯೯ ವರ್ಷಗಳ ತನಕ ಒಪ್ಪಿಸಿದ್ದಾರೆ ಶೇರುಗಳ ಹೊರತು ಕಂಪನಿಯು ಪಡೆಯುವ ಲಾಭದಲ್ಲಿ ಶೇಕಡಾ ೧೫ ಇಜಿಪ್ತ ಸರಕಾರಕ್ಕೆ ಸಲ್ಲಬೇಕು ಬಹುತರವಾಗಿ ಎಲ್ಲ ಶೇರುಗಳು ಫ್ರೆಂಚರದೇ ಬ್ರಿಟಿಶ ಸಾವಕಾರರಿಗೆ ಈ ಸಾಹಸದಲ್ಲಿ ಶಕ್ತಿಯಿರಲಿಲ್ಲ ಇದೊಂದು ಹೊಲಸು ಜವಳು ನೀರು ನಿಂತ ಕೊಂಡೆಂದು (Dirty Stagnant Ditch) ತಿರಸ್ಕಾರದಿಂದ ಬ್ರಿಟಿಶ [illegible] ಸಂಬೋಧಿಸುತ್ತಿದ್ದರು ಮುಂದ ಈ ಕಾಲುವೆಯ ಮಹತ್ವ ಬ್ರಿಟಿಶರಿಗೆ ತಿಳಿದು ಬಂತು ಈ ಕಾಲುವೆಯ ಮಾರ್ಗವಾಗಿ ಪ್ರಯಾಣ ಮಾಡಿದರೆ ೩೪ ದಿನಗಳು ಉಳಿಯುತ್ತವೆ ಅದರಿಂದ ಈ ಕಾಲುವೆಯಲ್ಲಿ ತಮ್ಮ ಹಿತಸಂಬಂಧವಿರಬೇಕಾಗಿ ಬ್ರಿಟಿಶರಿಗೆ ಅನಿಸಿತು ಆ ಸಮಯ ಖಿದೀವರವರ ಅಡಚಣಿಗೆ ಬಂದರು ತಮ್ಮ ಶೇರುಗಳನ್ನು ಅವರು ೪ ಲಕ್ಷ ೮೦ ಸಾವಿರ ಪವನುಗಳಿಗೆ ಮಾರಿದರು ಈಗ ಈ ಶೇರುಗಳ ಕಿಮ್ಮತ್ತು ೩ ಕೋಟಿ ಪವನಿಗೆ ತಲ್ಪಿದೆ ಅವರಿಗೆ ೪೬|| ಲಕ್ಷ ಪವನು ಕಳೆದ ವರ್ಷ ಹಂಚೋಣಿಯಿಂದ ಕಂಪನಿಗೆ ವರ್ಷಕ್ಕೆ ಸರಾಸರಿ ೬೦ ಲಕ್ಷ ಪವನು ಖರ್ಚು ಬರುತ್ತದೆ [illegible] ಕೋಟಿ ಪವನಿನ ಮಿಕ್ಕೆ ಉತ್ಪನ್ನವಿದೆ ಈ ಕಂಪನಿಯ ಡಾಯರೆಕ್ಟರು ೩೨ ಮಂದಿ ೧೦ ಮಂದಿ ಬ್ರಿಟಿಶರು ಒಬ್ಬರು ಡಚ್ಚರು ಉಳಿದ ೨೧ ಮಂದಿ ಫ್ರೆಂಚರು ಫ್ರೆಂಚ ಪ್ರಧಾನರಿಗೆ ಇದೊಂದು ಸನ್ಮಾನ ಪಡೆಯುವ ಸಂಸ್ಥೆಯಾಗಿದೆ ಪ್ರತಿಯೊಬ್ಬ ಡಾಯರೆಕ್ಟರನಿಗೆ ವರ್ಷಕ್ಕೆ ೬ ಸಾವಿರ ಪವನು ಪಗಾರ ಸಿಗುತ್ತದೆ ಕಾಲುವೆಯ ಆಡಳಿತೆಯ ಬಗ್ಗೆ ಆದ ಮೊದಲನೇ ಕರಾರಿನಲ್ಲಿ ಸಮಸ್ತ ದೇಶಗಳ ವ್ಯಾಪಾರ ಹಡಗಗಳಿಗೆ ಈ ಕಾಲುವೆಯೊಳಗಿಂದ ಹೋಗಗೊಡಬೇಕೆಂದು [illegible] ಶರತ್ತು ಯುದ್ಧ ಹಡಗಗಳ ಕುರಿತು ಏನೂ ಉಲ್ಲೇಖವಿರಲಿಲ್ಲ ೧೮೮೮ನೇ ಇಸ್ವಿಯಲ್ಲಿ ಇಂಗ್ಲಂಡ, ಫ್ರಾನ್ಸ, ಇಟಾಲಿ, ರಶಿಯಾ, ಜರ್ಮನಿ, ಆಸ್ಟ್ರಿಯಾ ಹಂಗೇರಿ, ಸ್ಪೇನ, ಹಾಲಂಡ, ತುರ್ಕಸ್ಥಾನ ಈ ದೇಶಗಳೊಳಗೆ ಒಂದು ಹೊಸ ಕರಾರಾಯಿತು ಈ ಕರಾರಿನಲ್ಲಿ ಯುದ್ಧ ಹಡಗುಪಡೆಗಳಿಗೂ, ವ್ಯಾಪಾರ ಹಡಗಪಡೆಗಳಿಗೂ ಈ ಕಾಲುವೆಯೊಳಗಿಂದ ನಿಶ್ಶಂಕವಾಗಿ ಹಾದುಹೋಗಗೊಡಬೇಕಾಗಿ ಸ್ಪಷ್ಟ ಶರ್ತವಿದೆ ಯುದ್ಧಕಾಲದಲ್ಲಿ ಸಹ ಯುದ್ಧಮಾನ ರಾಷ್ಟ್ರಗಳ ಹಡಗಗಳಿಗೆ ನಿರಾತಂಕವಾಗಿ ಹಾದುಹೋಗಗೊಡಬೇಕು ಈ ಕರಾರು ಕಾನಸ್ಟಾಂಟಿನೋಪಲ್‌ದಲ್ಲಿ ಆಯಿತು ಸ್ಪೇನ, ಅಮೇರಿಕಾ ದೇಶಗಳೊಳಗೆ ಯುದ್ಧವಾದಾಗ, ರಶಿಯಾ-ಜಪಾನದೇಶಗಳೊಳಗ ಯುದ್ಧವಾದಾಗ ಇತ್ತಟ್ಟಿನ ಹಡಗಗಳಿಗೆ ಕಾಲುವೆಯೊಳಗಿಂದ ಹಾದುಹೋಗಗೊಟ್ಟಿದ್ದರು ೧೯೧೧ನೇ ಇಸ್ವಿಯಲ್ಲಿ ಇಟಾಲಿ–ತುರ್ಕಸ್ಥಾನ ದೇಶಗಳೊಳಗೆ ಯುದ್ಧವಾಯಿತು ಕಾಲುವೆಯ ಪ್ರದೇಶ ತುರ್ಕಸ್ಥಾನದ್ದಾಗ್ಯೂ ಆ ಕಾಲದಲ್ಲಿ ಮುಚ್ಚಿಸಲಾಗಲಿಲ್ಲ ಮಹಾಯುದ್ಧದಲ್ಲಿ ಮಾತ್ರ ಬ್ರಿಟಿಶರು ಈ ಕರಾರನ್ನು ಮುರಿದು ಕಾಲುವೆಯನ್ನು ಜರ್ಮನ್ ಮೊದಲಾದ ಶತ್ರು ಹಡಗಪಡೆಗಳಿಗೆ ಓಡಾಡಗೊಡಲಿಲ್ಲ 'ಇಜಿಪ್ತ ದೇಶದ ಪಾರುಪತ್ಯಾಧಿಕಾರ ೧೯೧೪ನೇ ಇಸ್ವಿಯಲ್ಲಿ ನಮ್ಮ ಕಡೆಗೆ ಬಂದಿದೆ ೧೯೨೨ನೇ ಇಸ್ವಿಯ ಕರಾರು ಆ ಒಡೆತನಕ್ಕೆ ಒಳಪಟ್ಟದ್ದು ಅದನ್ನು ಮುಚ್ಚಲಿಕ್ಕೆ ನಮಗೆ ಇಜಿಪ್ತದೇಶದ ಸಾರ್ವಭೌಮ ಅಧಿಕಾರವಿದೆ" ಎಂಬದಾಗಿ ಬ್ರಿಟಿಶರು ವಾದಿಸಿ ಕಾಲುವೆಯನ್ನು ಮುಚ್ಚಿದರು ಕಾಲುವೆಯ [illegible] ೩ ಮೈಲು ಕಕ್ಷೆಯೊಳಗಿರುವ ಹಡಗಗಳ ಝಡತಿ ಮಾಡಬಾರದಾಗಿ ಸ್ಪಷ್ಟ ಶರ್ತವಿದೆ ಅದನ್ನು ಸಹ ಉಲ್ಲಂಘಿಸಿ ಮಹಾ ಯುದ್ಧದಲ್ಲಿ ಬ್ರಿಟಿಶರು ಹಡಗಗಳನ್ನೆಲ್ಲ ಝಡತಿ ಮಾಡಲಾರಂಭಿಸಿದರು, ಕರಾರುಗಳನ್ನು ಪಾಲಿಸಬೇಕೆಂದು ವೇದಾಂತ ಹೇಳುವ ಬ್ರಿಟಿಶರ ಮನೋವೃತ್ತಿ ಈ ಸಂಗತಿಯ ಮೇಲಿಂದ ಸ್ಪಷ್ಟವಾಗುತ್ತದೆ ಮಹಾಯುದ್ಧ ನಿಂತು ವರ್ಸೇಲೀಸದಲ್ಲಿ ಒಪ್ಪಂದವಾಯಿತು ಆ ಒಪ್ಪಂದದಲ್ಲಿ ಈ ಕರಾರು ಸ್ಥಿರಪಡಿಸಲಾಗಿದೆ ರಾಷ್ಟ್ರಸಂಘದ ಘಟನೆಗೆ ವಿರುದ್ಧವಾದ ತಹನಾಮೆಗಳೆಲ್ಲ ಆ ಘಟನೆಯ ಮಟ್ಟಿಗೆ ರದ್ದೆಂದು ರಾಷ್ಟ್ರಸಂಘದ ೨೦ನೇ ಕಲಮಿದೆ ಬ್ರಿಟಿಶ ಸರಕಾರದ ಇಜಿಪ್ತ ದೇಶದ ಮೇಲಿನ ಸಾರ್ವಭೌಮ ಅಧಿಕಾರ ೧೯೨೨ನೇ ಇಸ್ವಿಯಲ್ಲಿ ಅಂತ್ಯವಾಗಿದೆ ಬ್ರಿಟಿಶರಿಗೆ ಈ ಕಾಲುವೆಯ ಆಯತ್ತಿಯಿಲ್ಲ ಈ ಕಾಲುವೆಯನ್ನು ಮುಚ್ಚಲಿಕ್ಕೆ ರಾಷ್ಟ್ರಸಂಘಕ್ಕೆ ಅಧಿಕಾರವಿಲ್ಲವಾಗಿ ಅಮೇರಿಕೆಯ ಪರರಾಷ್ಟ್ರೀಯ ಧೋರಣ ಸಂಘದ ಅಧ್ಯಕ್ಷರಾದ ಮಿ|| ಬೂಯೆಲ್‌ರವರು ಅಭಿಪ್ರಾಯಪಡುತ್ತಾರೆ ಸುಯೇಜ ಕಂಪನಿಯಲ್ಲಿ ಫ್ರೆಂಚ ಡಾಯರೆಕ್ಟರರ ಪ್ರಾಬಲ್ಯವಿದ್ದದ್ದರಿಂದ ಸದ್ಯಕ್ಕೆ ಕಾಲುವೆಯನ್ನು ಮುಚ್ಚಬಾರದಾಗಿ ನಿರ್ಣಯವಾದಾಗ್ಯೂ ಮುಂದೆ ಇಜಿಪ್ತ ದೇಶದ ಮೇಲೆ ಸಂಕಟ ಬಂದೊದಗಿದ್ದಲ್ಲಿ 'ಬಲವಂತನೇ ನ್ಯಾಯವಂತ' ಎಂಬ ನಾಣ್ಣುಡಿಯಂತೆ ಈ ಕಾಲುವೆ ಮುಚ್ಚಲ್ಪಡಲಿಕ್ಕಿಲ್ಲವಾಗಿ ಹೇಳುವದು ಕಠಿಣ ಸುಯೇಜ ಕಾಲುವೆ ಮುಚ್ಚಿದರೆ ಇಟಾಲಿಗೆ ಪೂರ್ವ ಆಫ್ರಿಕೆಗೂ ಇರುವ ಸಂಬಂಧವೇ ತುಂಡರಿದು ಹೋಗಿ ಹಬಶಿ ದೇಶದೊಳಗಿನ ಸೈನಿಕರು ದಿಕ್ಕಿಲ್ಲದವರಾಗುತ್ತಾರೆ ಇಟಾಲಿಯವರು ಗುಡ್ ಹೋಪ ಭೂಶಿರದ ಮಾರ್ಗವಾಗಿ ಆಫ್ರಿಕಾ ಖಂಡಕ್ಕೆ ಸುತ್ತುಹಾಕಿ ತಮ್ಮ ಸೋಮಾಲಿ ಪ್ರಾಂತಕ್ಕೆ ಹೋಗಬೇಕಾಗುತ್ತದೆ ಈ ಹಾದಿಗೂ ಒಂದು ಪ್ರತಿಬಂಧವಿದೆ ಜಿಬ್ರಾಲ್ಟರ ಸಾಮುದ್ರಧುನಿಯಿಂದ ಈ ಹಾದಿ ಹೋಗು. ಜಿಬ್ರಾಲ್ಟರ ಸಾಮುದ್ರಧುನಿ ಬ್ರಿಟಿಶರ ಅಂಕೆಯೊಳಗಿನದು ಅದನ್ನು ಮುಚ್ಚಿದರೆ ಇಟಾಲಿಯ ಹಡಗುಪಡೆಗಳು ಭೂಮಧ್ಯ ಸಮುದ್ರದಲ್ಲಿ ಸಿಲುಕಿ ಹೋಗುವದೇ! ಪ್ರಸಂಗ ಬಿದ್ದಲ್ಲಿ ಬ್ರಿಟಿಶರು ಜಿಬ್ರಾಲ್ಟರ ಸಾಮುದ್ರಧುನಿಯನ್ನು ಮುಚ್ಚಲಿಕ್ಕೂ ಹಿಂಜರಿಯುವವರಲ್ಲ ಅದರಿಂದ ಇಟಾಲಿಯರು ಇಜಿಪ್ತ ದೇಶದ ಮೇಲಿಂದ ಆಕಾಶ ಮಾರ್ಗವಾಗಿ ಎರಿಟ್ರಿ ಪ್ರಾಂತದೊಳಗಿನ ರಣಕ್ಷೇತ್ರದೊಡನೆ ಸಂಬಂಧವನ್ನಿಡಲು ಪ್ರಯತ್ನಿಸುತ್ತಿದ್ದಾರೆ ಮುಸೊಲಿನಿಯವರು ಇಜಿಪ್ತ ಸರಕಾರದೊಡನೆ ಒಡಂಬಡಿಕೆ ಮಾಡಿಕೊಳ್ಳಲು ಅಂತರಂಗದಿಂದ ಪ್ರಯತ್ನ ನಡಿಸುವ ಕಾರಣವಾದರೂ ಈ ಪ್ರಸಂಗಕ್ಕೆ ಇದಿರಾಗುವದಕ್ಕಾಗಿಯೇ

⁂

ಇನ್ನು ಇಜಿಪ್ತ ದೇಶದ ಸಂಬಂಧವನ್ನು ಹೇಳಬೇಕಾಗಿದೆ ಇಜಿಪ್ತ ದೇಶದ ಇಟಾಲಿಯ ಲಿಬಿಯಾ

[ಮುಂದೆ ೧೧ನೇ ಪಾನ ನೋಡಿರಿ]

ॐ स्वस्ति श्रीमन्महागणपतये नमः ॥

अथ जातीलताशाखाहरणं काव्यम् ।

नमोनतविलासाय नमो दुर्गम्यवैभव ।
यस्य प्रसादात्सर्वत्र योग्यायोग्यपरं जगत् ॥

श्रृंग्युवाच– मित्र भगिनि किं ते कर्णपथमागतं पारिजातहरणं नाम चम्पूकाव्यम् ?

भृंग्याह साश्रमवलोकितं तन्नवरसपरिपूर्णं,कवि-श्लाघनिष्टिकाविष्ठितः । तथापि चिरंतनं ।

शृंगी– चिरंतनमिति किं संकोचनं ? अर्वाचीनं किमपि दृष्टं भव्यम् ?

भृंगी– चिरंतनं नाम प्राचीनं प्राचीनमेवा सर्वे त्रापि अर्वाचीनाय स्पृहयति–

वर्षीयानप्यर्वाचीना कालस्त्यत्र क संदेह ।

यस्यापरं नामधेयं मनन्दनमिति

शृंगी किमेव ।

भृंगी– अवधारय–

स्वर्गादैरावतं भीम आनिषीदिति भारते ।
कथा प्रस्तूयते किंतु केवलं कर्णगोचरा ॥

शृंगी– तर्हि प्रकृतं किं ?

भृंगी – आनिनायैव नाकाद्धि पुरन्दरप्रियं वनं ।
वेश्यागनागणं तावच्चकार नंदनं वनं ॥

शृंगी– अविद्वाविद्मोः । भीमाद्भीमपराक्रमः
आ तर्हि श्रावय शुश्रूषुरस्मि ।

भृंगी– तदेवेदं यस्यायमादिमः श्लोकः श्री पार्वतीपरमेश्वर संवादपरं —

अथकदा वारिधिदर्शनोत्सुक ।
तरंगशोभामुदितो मृडेश्वर ॥
मनोविनोदाय कथामिमां शनै ।
गिरींद्रजाये पुरतः समूचिवान ॥ १ ॥

एकस्मिन्समये समागममुखे कन्दर्पदर्पावृत ।
मन्दमन्दमुवाच सुन्दरगिरा सा सुन्दरी मंदिरे ॥
जातीपुष्पसमावृतं यदिभवेन्मे प्रांगणं सर्वदा ।
नाहिस्यान्मम धन्यता च कृतिमान्भूयाहि
विश्वेश्वर ॥ २ ॥

इत्थं निशम्य वचनं कुटिलालकाया ।
कर्तुं प्रियं प्रियजनस्य वशी वदीसौ ॥
विश्वेश्वरोपि मदनेषुसुपीडितांग ।
अंगीचकार चरणाब्जयुगस्य सेवा ॥ ३ ॥

नानाप्रयासवशगो बहुदूरतश्च ।
भूरिव्ययेन बहुकष्टसमुद्भवानाम् ॥
आसेचनव्रतधुरंधुररक्षितानां ।
कंसासुरोपरं इवाशु लताङ्कुराणाम् ॥ ४ ॥

कामातुराणां न भयं न लज्जा ।
लज्जाविहीनस्य किमस्ति शंका ॥
शंकाविहीनस्य जनापवाद ।
सिंदूरसेको रुचिरो गजानाम् ॥ ५ ॥

इमं जनं स्तेनमिति प्रवक्तुं ।
कोवा समर्थो वद मे पृथिव्याम् ॥
अथ प्रमादो हि तथापिपक्षे ।
यद्याद्विभृत्यादि तु तर्कयति ॥ ६ ॥

दिने दिने चारुमुखात्म्यय च ।
जातीलतागुल्मभुवं प्रविश्य ॥
आपूरयत्प्रांगणमाशु तस्या ।
आलवलस्याप्यधिकं चकार ॥ ७ ॥

सा सुंदरी धन्यतमा जगत्यां ।
विश्वेश्वरो दासजनो बभूव ॥
तन्मंगलं तुङ्गमवश्य दिव्यं ।
कुर्वंतु नीराजनमद्यकेपि ॥ ८ ॥

जातीलताहारक मंगलं ते ।
विश्वेश्वराहर्हर मंगलं ते ॥
निर्व्याज संचारण मंगलं ते ।
एवं शुभं मंगलमाचरति ॥ ९ ॥

एतं चरित्रमिदमत्र मृडेश्वर श्री ।
गायेत्क्षणं विपुलतोषकरं सुहृद्यं ॥
साम्राज्यपीठमनघं सहमेत्यदेवं ।
देवो रिरक्षयिपुरो सगणो ननंद ॥ १० ॥

इदं जातीलताशाखाहरणं काव्यमुत्तमम् ॥
विद्वज्जनमुदे भूयाद्ध्रुवं ते समबुत्थय: ॥ ११ ॥

इति वदतौ निष्क्रान्तौ । इति शिव
के शर्मा.

ಮಾರುವದಿದೆ !

ಕುಮಟಾ ತಾಲೂಕ ಗೋಕರ್ಣ ಗ್ರಾಮದ ಸರ್ವೆ ನಂಬರು ೬೩೪, ಪೋಟ ಹಿಸ್ಸಾ ೨, ಎಕ್ರೆ ೦-೬-೦ ಆಕಾರ ೦-೨-೦ಕ್ಕೆ ಒಪ್ಪಿದ ಸ್ಥಳ, ಅದರೊಳಗಿರುವ ಕಲ್ಲು ಪಂಚಾಂಗ ಕರ್ಗಲ್ಲಿನ ನೆಲಗಟ್ಟು ಸಹ ಮಾರುವದಿದೆ! ಖಾಯಿಸವುಳ್ಳವರು ಈ ಕೆಳಗಿನ ಪತ್ತೆಯ ಮೇಲೆ ಸಮಕ್ಷ ಇಲ್ಲವೆ ಪತ್ರದ್ವಾರಾ ತಿಳಕೊಳ್ಳತಕ್ಕದ್ದು ಧಾರೇಶ್ವರ ತಾ ೩೦-೯ ೩೫

ಕೃಷ್ಣ ಶ್ರೀಧರ ಭಟ್ಟ, ಧಾರೇಶ್ವರ

ಜಾಹೀರ ನೋಟೀಸು.

ಸಂಪತು ಯಾನೆ ರುಕ್ಮಿಣಿ ಕೋಂ ಕೃಷ್ಣಾ ಗಾಂವಕರ ಇವಳು ಈ ಮೂಲಕ ಯಾವತ್ತು ಜನರಿಗೆ ತಿಳಿಸುವದೇನಂದರೆ —

ನಾನು ಅಂಕೋಲಾ ತಾಲೂಕ ಅಲಗೇರಿ ಗ್ರಾಮದ ನಿವಾಸಿಕ ಕೃಷ್ಣ ತಿಪ್ಪ ಗಾಂವಕರ ಇವರ ಲಗ್ನದ ಹೆಂಡತಿಯಾಗಿರುತ್ತೇನೆ ನನ್ನ ಗಂಡನು ದುರ್ವ್ಯಸನಕ್ಕೆ ಬಿದ್ದು ನನ್ನನ್ನು ಹೊಡದು-ಬಡದು ಮನೆಯ ಹೊರಗೆ ಹಾಕಿರುತ್ತಾನೆ ಮ ನನ್ನನ್ನು ಸಾಕಲಿಕ್ಕೆ ಸಹ ಕಬೂಲ ಮಾಡುವದಿಲ್ಲ ಆದ್ದರಿಂದ ನಾನು ನನ್ನ ಭುಕ್ತ್ಯಾಂಶದ ಬಗ್ಗೆ ನನ್ನ ಗಂಡನ ಮೇಲೆ ದಾವೆ ದಾಖಲ ಮಾಡುವ ತಯಾರಿಯಲ್ಲಿರುವದನ್ನು ಕಂಡು ಅವನು ನನ್ನನ್ನು ಮೋಸ ಮಾಡುವ ಇರಾದೆಯಿಂದ ತನ್ನ ಆಸ್ತಿಯನ್ನೆಲ್ಲ ಪರಾಧೀನ ಮಾಡುವ ತಯಾರಿ ನಡಿಸಿದ್ದಾನೆ ನನ್ನ ಗಂಡನು ನನಗೆ ಸಾಕಲಿಕ್ಕೆ ಕಾಯಿದೆಯಂತೆ ಮ ನೀತಿಯಂತೆ ಸಹ ಬದ್ಧನಿದ್ದದ್ದರಿಂದ ಅವನ ಸಂಪೂರ್ಣ ಆಸ್ತಿಯ ಮೇಲೆ ನನ್ನ ಭುಕ್ತ್ಯಾಂಶದ ಹಕ್ಕು ಇರುತ್ತದೆ ಕಾರಣ ಯಾರಾದರೂ ನನ್ನ ಗಂಡ ಸದ್ರಿ ಕೃಷ್ಣಾ ತಿಪ್ಪ ಗಾಂವಕರ ಇವರಿಂದ ಅವನ ಎಷ್ಟಾದರೂ ಭೂಮಿ ಖರೀದಿಗೆಯಾ ಅಡವಿಗೆ ಹಿಡಿದಲ್ಲಿ ಅವರು ಸದ್ರಿ ಭೂಮಿಯ ಜವಾಬದಾರಿಯಿಂದ ನನ್ನ ಭುಕ್ತ್ಯಾಂಶ ಕೊಡಲಿಕ್ಕೆ ಜವಾಬದಾರರಾಗಬೇಕಾಗುವದು

ಅಂಕೋಲಾ ತಾಲೂಕ
ಅಲಗೇರಿ
ತಾ ೫ ೧೦-೧೯೩೫

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಸಂಪತು ಯಾನೆ ರುಕ್ಮಿಣಿ ಕೋಂ ಕೃಷ್ಣಾ ಗಾಂವಕರ ಇವಳದು

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ ಟೀಕಾ, ತಾತ್ಪರ್ಯ ಸಹಿತ

III ನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು II ನೇ ಭಾಗ ಜನ್ಮಾದ್ಯಧಿಕರಣಗಳು ಈಗಲೇ ತಯಾರಾಗಿದೆ ಪುಟಗಳು ೩೩೦ ಚಂ ರೂ ೧-೮-೦

I ನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೨೩೦ ಚಂದಾ ರೂ ೨-೮-೦

II ನೇ ಸಂಚಿಕೆ ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೦೮ ಚಂದಾ ರೂ ೪-೮-೦ ಟಪಾಲು ಆಸಲು ಪ್ರತ್ಯೇಕ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಆನರರಿ ಟ್ರೆಝರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ
(ದಕ್ಷಿಣ ಕನ್ನಡ)

Murdeshwar, Shrinivasrao&Co
Commission Agents,
Yellapur (N Kanara)

ಮುರ್ಡೇಶ್ವರ, ಶ್ರೀನಿವಾಸರಾವ್ ಎಂಡ್ ಕೋ
ದಲಾಲ, ಯಲ್ಲಾಪುರ

ನಮ್ಮ ಅಡಿಕೆ, ಯಾಲಕ್ಕಿ, ಮೆಣಸು ವಗೈರೆ ದಲಾಲಿ ಅಂಗಡಿ ತಾ. ೭-೧೦-೩೫ ನೇಯಿಂದ ಶುರು ಆಗುವದು !

ShrinivasRao,
Managing Agent, YELLAPUR

ವಿಮರ್ಶೆ.

ಮಂಗಳೂರಿನ ಪ್ರೊವ್ಹಿಶಿಯಲ ಇನ್ಶ್ಯೂರನ್ಸ ಕಂಪನಿಯು ಪಂಚವಾರ್ಷಿಕ ವೆಲ್ಯುಯೇಶನ್ ರಿಪೋರ್ಟು ನಮ್ಮ ಕೈಸೇರಿದೆ. ಪ್ರಸಿದ್ಧ [illegible] ಎಕ್ಚ್ಯುಅರಿಗಳಾದ ರಾ. ಜಿ. ಎಸ್. [illegible] ಕಂಪನಿಯ ಸಾಂಪತ್ತಿಕ ಸ್ಥಿತಿ [illegible] ನ್ನು ಮಾಡಿ ಕಂಪನಿಗೆ [illegible] ೫ ವರ್ಷಗಳಲ್ಲಿ ರೂ [illegible] ಉಳಿದಿರುತ್ತದೆಂಗಿ ಕಂಡು [illegible] ಮತ್ತು [illegible] ವರೆಂದು ಸಾರಿದರ [illegible] ಕಳೆದ [illegible] ಪಂಚವಾರ್ಷಿಕ ವೆಲ್ಯುಯೇಶನ್‌ದಲ್ಲಿ [illegible] ಈ ಕಂಪನಿಯು [illegible] ಕಾರಭಾರ ಮಾಡುವಲ್ಲಿ [illegible] ಕರ್ನಾಟಕಕ್ಕೆ ಭೂಷಣಭೂತ ಸಂಸ್ಥೆಯಾಗುವದೆಂದು [illegible] ನಾವು ನಂಬಿದ್ದೇವೆ

ನೋಟೀಸು.

ಕಾರವಾರ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಪತ್ತಿನ ಸಹಕಾರಿ ಸಂಘದ ನೋಂದಾಯಿಸಿದ ಪತ್ತೆ 'ಕಾರವಾರ ಎಂತಾ ಇದ್ದದ್ದನ್ನು [illegible]' ಎಂತಾ ಬದಲಾಯಿಸಿದೆ. [illegible] ಇನ್ನು ಮುಂದೆ ಸದ್ರಿ ಸಂಘದ ವ್ಯವಹಾರವೆಲ್ಲ [illegible] ಪತ್ತೆಯ ಮೇಲೆ ನಡೆಯತಕ್ಕದ್ದು

ತಾ. ೩೦—೯—೧೯೩೫

M D KARKI
Chairman,
Primary Teachers
Co-operative Society
Dt Karwar

ಸಮಾಜ.

ಚಂದಾ ಅಂಚೆ ಸಹಿತ ಸಾಲಿ ಒಂದಕ್ಕೆ ರೂ [illegible]

ಸಂಪಾದಕ - ಬಾಲಚಂದ್ರ ಘಾಣೇಕರ

ಈ ಸಚಿತ್ರ ಮಾಸಪತ್ರಿಕೆಯಲ್ಲಿ ಪ್ರತಿ ತಿಂಗಳೂ ವಿಚಾರಕ್ರಾಂತಿಯನ್ನುಂಟುಮಾಡುವ ಸಾಮಾಜಿಕ, ರಾಜಕೀಯ ಮನೋರಂಜಕ ಲೇಖಗಳೂ, ನಾಟಕ [illegible], ಉತ್ತಮ ಕಥೆಗಳೂ ತಪ್ಪದೆ ಬರುವವು [illegible] ಕಳಿಸಿ ಇಂದೇ ಚಂದಾದಾರರಾಗಿ [illegible] ಕಳಿಸಿರಿ

ಮ್ಯಾನೇಜರ, 'ಸಮಾಜ', ಧಾರವಾಡ.

ಬಡಗ ಕನ್ನಡದ ಕರ್ನಾಟಕ ಸಂಘದ ಪರವಾಗಿ ಒತ್ತರದ ಅರಿಕೆ.

ಹಿಂದಿನ ಸಂಚಿಕೆಯಲ್ಲಿ ಸಂಘವು ಕೈಕೊಳ್ಳಲಿರುವ ಎರಡು ಮುಖ್ಯ ಕೆಲಸಗಳನ್ನು ಹೇಳಿಕೊಂಡಿದ್ದೆವೆ. ಅವುಗಳಲ್ಲಿ ೧ ಜಿಲ್ಲೆಯ ಸಾಹಿತ್ಯ ಸಮ್ಮೇಲನವನ್ನು ನಡಿಸುವದು ೨ 'ಕವನ ಸಂಗ್ರಹ' ಪುಸ್ತಕವನ್ನು ಪ್ರಕಟಿಸುವದು. ಇವೆರಡು [illegible] ಕೆಲಸಗಳು ಹಣವಿಲ್ಲದೆ [illegible] ಅದಕ್ಕೆ ಸಂಘವು ಸ್ವಾಗತ ಮಂಡಳಿ [illegible] ಮಾಡಿಕೊಂಡದ್ದು ಸ್ವಾಗತ ಮಂಡಳದ ಸದಸ್ಯರಿಗೆ ಇರುವ ಅಧಿಕಾರಗಳು [illegible] ಅವುಗಳ ವಿವರ—

- ೧ ಸದಸ್ಯರು [illegible] ಮಂಡಳಿಯ ಸದಸ್ಯರೆನಿಸುವರು. ಅವರು ಒಮ್ಮೆ ನಿರ್ದಿಷ್ಟವಾದ [illegible] ರೂ ಒಂದು ಕೊಡತಕ್ಕದ್ದು
- ೨ ಕವನ ಸಂಗ್ರಹದ ಒಂದು ಪ್ರತಿ ಅವರಿಗೆ ಉಚಿತವಾಗಿ ದೊರೆಯುವದು
- ೩ ಸ್ವಾಗತ ಮಂಡಳಿಯ ಅಧ್ಯಕ್ಷರನ್ನು ಗೊತ್ತುಪಡಿಸುವ ಅಧಿಕಾರ ಅವರಿಗಿರುವದು
- ೪ ಸಮ್ಮೇಲನಕ್ಕೆ ಅಧ್ಯಕ್ಷರ ಹೆಸರನ್ನು ಸೂಚಿಸುವ ಅಧಿಕಾರ ಅವರಿಗಿರುವದು ಆ ಮೇಲೆ,
- ೫ ಸಮ್ಮೇಲನದಲ್ಲಿ ಬರುವ ಗೊತ್ತುವಳಿಗಳಿಗೆ ಮತ ಕೊಡುವ ಅಧಿಕಾರವು ಅವರಿಗೆ ಸೇರಿರುವದು

ಜಿಲ್ಲೆಯ ಪ್ರತಿಯೊಂದು ಊರಿನಲ್ಲಿ, ಈ ಯೋಜನೆ ಆವಶ್ಯವೆಂದು ತಿಳಿಯುವ ಜನರೆಲ್ಲ ತಮ್ಮ ಹೆಸರ ನಮಗೆ ತಿಳಿಸಿ ವಂತಿಗೆಯನ್ನು ಸಲಿಸಬೇಕು. ಜನರ ಕೈಯಿಂದ ಹಣ ಬಾರದಿದ್ದರೆ ಸಂಘದ ಕೆಲಸಗಳು ಕೊನೆಗಾಣುವದು ನಿಜವಾಗಿಯೂ ಅಸಾಧ್ಯ

ಇಲ್ಲಿಯ ವರೆಗೆ ನಮ್ಮ ಕೈಸೇರಿದ ಕವನಗಳನು ಓದಿ ಮೇಲಾದವುಗಳನ್ನು ಆಯ್ದುಕೊಂಡಿದ್ದೇವೆ ಶ್ರೀ| ದಿನಕರ ದೇಸಾಯಿಯವರಿಗೆ ಬಿನ್ನೈಸಿಕೊಂಡರೂ ಅವರ ಕವನಗಳು ಇನ್ನೂ ನಮ್ಮ ಕೈಸೇರಲಿಲ್ಲ ಅವರು ಎಲ್ಲಿಯೇ ಇರಲಿ, ಕಾಗಾದರೂ ತಮ್ಮ ಕವನಗಳಲ್ಲಿ ಸವಿಯಾದವು ಕೆಲವನ್ನು ನಮಗೆ ಕಳುಹಿಸುವಂತೆ ದಯಮಾಡಬೇಕೆಂದು ಬಿನ್ನಹ

'ಕವನ ಸಂಗ್ರಹ'ವು ವಿದ್ವಾಂಸರಾದ ಬಿ ಎಮ್ ಶ್ರೀಕಂಠಯ್ಯನವರ ಮುನ್ನುಡಿಯೊಡನೆ ಪ್ರಕಟವಾಗುವದು

ಸಂಘದ ಸ್ವಾಗತ ಮಂಡಲಕ್ಕೆ ತೀರ ಕಡಿಮೆ ಅಂದರೆ ೧೦೦ ಮಂದಿ ಸದಸ್ಯರಾದರೂ ಸೇರದಿದ್ದರೆ ಸಮ್ಮೇಲನ ಕಾರ್ಯ ನೆರವೇರುವದು ಅಸಾಧ್ಯವೆಂಬುದು ಸ್ಪಷ್ಟವದೆ

ಕಾರವಾರ,
೨೭ ೯ ೧೯೩೫

ವೆಂಕಟೇಶ ಪ್ರಭು,
ರಂಗಪ್ಪ ಭೀಮಪ್ಪ ಪೋದ್ದಾರ.
ಕಾರ್ಯದರ್ಶಿಗಳು
ಕರ್ನಾಟಕ ಸಂಘ, ಕಾರವಾರ

THE INDIAN MERCANTILE INSURANCE CO. LTD., BOMBAY.

(Established in 1907)

A Solid and purely Indian Life Office which has substantial growth under the Chairmanship of the late Sir Manmohandas Ramji, Kt.

WANTED Energetic & Influential Agents and experienced Organisers both on commission & pay for the Karnatak Districts.

For particulars apply to—

G. Yellapurkar & Sons,
Chief Agents for Karnatak,
Market Square, KARWAR.

ಇಂಡಿಯನ್ ಮರ್ಕೆಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು ಕಮಿಶನ್ ಹಾಗು ತಲಬ ಸಿಗುವದು ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ ಕಾರವಾರ.

ಮುಂಬಯಿ ಕಾಯಿದೆ ಕೌನ್ಸಿಲು.

ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನ ನಡೆದಿದೆ. ಧರ್ಮನಿಧಿಗಳ ಮೇಲೆ ಸರಕಾರವು ನಿಯಂತ್ರಣವನ್ನಿಡಲೋಸುಗ ಹೊಸ ಕಾಯಿದೆ ನಿರ್ಮಾಣವಾಗಿದೆ. ವರ್ಷಾಸನ ರೂ ೧೦೦೦ಕ್ಕೆ ಮಿಕ್ಕಿ ಉತ್ಪನ್ನವಿರುವ ದೇವಸ್ಥಾನ, ಛತ್ರ, ಪಾಠಶಾಲೆ ಮೊದಲಾದ ಧರ್ಮನಿಧಿಗಳ ವ್ಯವಸ್ಥೆ ಯೋಗ್ಯ ರೀತಿಯಿಂದ ನಡೆಯುತ್ತದೋ ಇಲ್ಲವೋ? ಎಂಬದನ್ನು ನೋಡುವ ದೆಸೆಯಿಂದ ಸರಕಾರವು ಈ ಕಾಯಿದೆಯನ್ನು ಘಟಿಸಿದೆ. ಸರಕಾರಿ ಲೆಕ್ಕ-ತಪಾಸಕರು ಪ್ರತಿ ವರ್ಷ ಲೆಕ್ಕದ ಪುಸ್ತಕಗಳನ್ನು ನೋಡಿ ತಪಾಸ ಮಾಡಬೇಕು ಈ ಬಗ್ಗೆ ಪ್ರತ್ಯೇಕ ಇಲಾಖೆ ನಿರ್ಮಾಣಿಸಲ್ಪಡುವದು ಈ ಕಾಯಿದೆಗನುಸಾರವಾಗಿ ನಿಯಮ ಮಾಡುವ ಹಕ್ಕು ಕಾಯಿದೆಯಂತೆ ಕಾಯಿದೆ ಕೌನ್ಸಿಲಿನವರದು ಆದರೆ ಸಂಪ್ರದಾಯದಂತೆ ಸರಕಾರದ್ದು ಧರ್ಮನಿಧಿ ಕಾಯಿದೆಯನ್ವಯ ಸರಕಾರ ಮಾಡುವ ನಿಯಮಗಳನ್ನು ಕೌನ್ಸಿಲಿನಲ್ಲಿಟ್ಟು ಅವುಗಳ ಮನ್ನಣೆಯಾದ್ದಲ್ಲಿ ಅವನ್ನು ಅಮಲಿನಲ್ಲಿ ತರಬೇಕಾಗಿ ಕಾಯಿದೆ ಕೌನ್ಸಿಲಿನವರು ಉಪಸೂಚನೆ ತಂದರು. ಈ ಪ್ರಕಾರ ಉಪಸೂಚನೆ ಸೂಚಿಸಲಿಕ್ಕೆ ಸಭಾಸದರಿಗೆ ಹಕ್ಕಿಲ್ಲವಾಗಿ ಸರಕಾರಿ ಕಾಯಿದೆ ಪಂಡಿತರು ವಿರೋಧಿಸಿದರು ಅಧ್ಯಕ್ಷರು ವಿರೋಧವನ್ನು ತಿರಸ್ಕರಿಸಿ ಇಂಥ ಉಪಸೂಚನೆ ತರಲಿಕ್ಕೆ ಸಭಾಸದರಿಗೆ ಹಕ್ಕಿರುವದಾಗಿಯೂ ಕಾಯಿದೆಯನ್ವಯ ನಿಯಮಗಳನ್ನೇರ್ಪಡಿಸುವ ಅಧಿಕಾರ ಕಾಯಿದೆ ಕೌನ್ಸಿಲಿನದೆಂದೂ ನಿರ್ಣಯಕೊಟ್ಟು ಉಪಸೂಚನೆಯನ್ನು ಚರ್ಚೆಗೆ ತಂದರು. ಇದಕ್ಕೆ ಸರಕಾರದ ಪರವಾಗಿ ಪ್ರತಿಸೂಚನೆ ಸೂಚಿಸಲಾಯಿತು. ಸರಕಾರವು ಸೂಚಿಸಿದ ನಿಯಮಗಳಲ್ಲಿ ಕಾಯಿದೆ ಕೌನ್ಸಿಲಿನವರು ಸೂಚಿಸಿದ ತಿದ್ದುಪಡಿ ಕಾಯಿದೆಯ ಉದ್ದೇಶಕ್ಕೆ ವಿಘಾತಕವೆಂದು ಸರಕಾರದ ಅಭಿಪ್ರಾಯವಾಗುವ ಸಂಗತಿಯಲ್ಲಿ ಸರಕಾರವು ಮಾಡಿದ ನಿಯಮಗಳೇ ಊರ್ಜಿತ ಉಳಿಯತಕ್ಕದ್ದಾಗಿ ಈ ಸೂಚನೆಯ ಅರ್ಥ. ಅಂದರೆ ಕಾಯಿದೆ ಕೌನ್ಸಿಲಿನವರು ಮಾಡಿದ ಕಾಯಿದೆಯ ಉದ್ದೇಶ ಕಾಯಿದೆ ಕೌನ್ಸಿಲಿನವರಿಗಿಂತ ಸರಕಾರಕ್ಕೆ ತಿಳಕೊಳ್ಳಲು ಹೆಚ್ಚಿನ ಶಕ್ತಿಯಿದೆ, ಕಾಯಿದೆ ಕೌನ್ಸಿಲಿನವರಿಗೆ ಅಷ್ಟು ಜ್ಞಾನವಿಲ್ಲ ಇಷ್ಟು ಸ್ವಾಭಿಮಾನಶೂನ್ಯ, ಸ್ವಾಧಿಕಾರಘಾತಕ ಸರಕಾರಿ ಪ್ರತಿಸೂಚನೆ ಕಾಯಿದೆ ಕೌನ್ಸಿಲಿನಲ್ಲಿ ಬಹುಮತದಿಂದ ಮಂಜೂರಾಗಿ ಬಿಟ್ಟಿತು ಕಾಯಿದೆ ಕೌನ್ಸಿಲಿಗೆ ವ್ಯವಹಾರಿಕ ಬುದ್ಧಿ ಇರುವದಿಲ್ಲೆಂಬ ಸಂಗತಿ ಕೌನ್ಸಿಲಿನಲ್ಲೇ ಮಂಜೂರಾದ ಬಳಿಕ ಸರಕಾರವು ಪ್ರತಿಸೂಚನೆ ಸೂಚಿಸಿದ್ದು ತಪ್ಪೆಂದು ಹೇಳುವದು ಕಠಿಣ ಈಗಿನ ಮುಂಬಯಿ ಕಾಯಿದೆ ಕೌನ್ಸಿಲಿನ ಅವಸ್ಥೆಯಿದು!

⁂

ಇದೇ ಕೌನ್ಸಿಲಿನಲ್ಲಿ ದಬ್ಬಾಳಿಕೆಯ ಕಾನೂನು ಮಂಜೂರಾಯಿತು. ೫೫ ಅನುಕೂಲ, ೩೩ ಪ್ರತಿಕೂಲ ಸತ್ಯಾಗ್ರಹದ ಮನ್ವಂತರದಲ್ಲಿ ಪೋಲೀಸರಿಗೂ, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೂ ಸರಕಾರಕ್ಕೂ ಇರುವ ನಿರಂಕುಶ ಅಧಿಕಾರಗಳೆಲ್ಲ ಈ ಕಾಯಿದೆಯಿಂದ ಸ್ಥಿರವಡಿಸಲಾಗಿವೆ. ಆಪತ್ಕಾಲವೆಂದು ತಂಗಾಮಿಯಾಗಿ ಈ ಕಾಯಿದೆಗಳ ನಿರ್ಮಾಣವಾಗಿತ್ತು ಇದೇ ಬರುವ ಡಿಸೆಂಬರ ತಿಂಗಳಲ್ಲಿ ಇವುಗಳ ಆಯುಷ್ಯ ಕ್ಷೀಣವಾಗುತ್ತದೆ. ಚಿರಸ್ಥಾಯಿ ಮಾಡುವದಕ್ಕಾಗಿ ಈ ಹೊಸ ಕಾಯಿದೆ ಸೂಚಿಸಲಾಗಿದೆ ಈ ಕುರಿತು ಕಾಯಿದೆ ಕೌನ್ಸಿಲಿನಲ್ಲಿಯೂ, ಜನಸಾಮಾನ್ಯರಲ್ಲಿಯೂ ಸಂತಾಪ ಉಂಟಾಗಲು, ಸರಕಾರವು ಚಾತುರ್ಯದಿಂದ ಈ ಕಾಯಿದೆಯನ್ನು ೩ ವರ್ಷ ಉಳಿಯುವದಾಗಿ ಉಪಸೂಚನೆ ತಂದು ಕೆಲವು 'ವಿಚಾರವಂತ' ಕೌನ್ಸಿಲ ಸಭಾಸದರಿಗೆ ಮನ ಒಲಿಸಿಕೊಂಡು ಕಾಯಿದೆಯ ಪ್ರಥಮ ವಾಚನವನ್ನು ಮನ್ನಿಸಿದೆ. "ಈ ಕಾಯಿದೆ ಭಯಂಕರವಿದೆ ಲೋಕಶಾಹಿಗೆ ವಿಘಾತಕವಾದದ್ದಿದೆ ಯಾರಿಗೂ ಭದ್ರತೆ ದೊರೆಯುವದಿಲ್ಲ. ಬೇಕಾದಾಗ ಬೇಕಾದವರಿಗೆ ಬೇಕಾದ ಹಾಗೆ ಪೋಲೀಸರು ದಣಿಸಬಹುದು ಇಂಥ ನಿರಂಕುಶ ಅಧಿಕಾರವನ್ನು ಸರಕಾರಕ್ಕೆ ನಾವು ಒಂದು ಘಳಿಗೆಯ ಪೂರ್ತ ಸಹ ಕೊಡಲಾರೆವು" ಎಂಬದಾಗಿ ಹಿಂದೆ ದಿವಾಣರಾಗಿದ್ದ ಮೌಲವಿ ರಫಿಯುದ್ದೀನರವರು ಆರ್ಭಾಟದಿಂದ ವಿರೋಧಿಸಿದಾಗ್ಯೂ ಪ್ರಥಮವಾಚನ ಬಹುಮತದಿಂದ ಮಂಜೂರಾಗಿದೆ ಈ ಕಾನೂನಿನ ಬಗ್ಗೆ ಈಗಿನ ದಿನಮಾನದಲ್ಲಿ ವಿಶೇಷ ಸಂತಾಪಪಡಬೇಕಾದುದೇನಿಲ್ಲ ಇಂಥ ಕಾಯಿದೆಗಳನ್ನು ಮುಂದಾಗಿಯೇ ಎಣಿಸಿ ರಾಷ್ಟ್ರೀಯ ಸಭೆಯವರು ಸ್ವರಾಜ್ಯ ಸಂಗ್ರಾಮವನ್ನು ನಡಿಸತಕ್ಕದ್ದಿದೆ

⁂

"ಆದರೆ ದಬ್ಬಾಳಿಕೆಯ ಕಾನೂನಿನಿಂದ ಜನಸಾಮಾನ್ಯರಿಗೆ ಬಾಧೆಯಿಲ್ಲ; ಅವರೆಲ್ಲರು ಸುರಕ್ಷಿತರು ಸತ್ಯಾಗ್ರಹಿ, ಕ್ರಾಂತಿಕಾರಕ, ಹಿಂಸಾವಾದಿಗಳಿಗೆ ಮಾತ್ರ ಈ ಕಾಯಿದೆ ಅನ್ವಯಿಸುತ್ತದೆ. ಇವರ ಉಪಟಳದಿಂದ ಜನಸಾಮಾನ್ಯರನ್ನು ರಕ್ಷಿಸಲೋಸುಗ ಈ ಕಾಯಿದೆಯನ್ನು ಸರಕಾರವು ಘಟಿಸಿದೆ ಲೋಕರಕ್ಷಣೆಯೇ ಈ ಕಾಯಿದೆಯ ಉದ್ದೇಶ ಪ್ರಜಾಪೀಡನೆಗಾಗಿ ಪ್ರಜೆಗಳ ಸ್ವರಾಜ್ಯ ಕಾರ್ಯವನ್ನು ದಬ್ಬುವದಕ್ಕಾಗಿ ಈ ಕಾಯಿದೆ ಘಟಿಸಲಾಗಲಿಲ್ಲ" ಎಂಬದಾಗಿ ಸರಕಾರವು ವಾದಿಸಿ ಲೋಕರಕ್ಷಣೆಯ ವೇದಾಂತ ಹೇಳಿದೆ ಮುಂಬೈ ಹೈಕೋರ್ಟಿನ ಮುಖ್ಯನ್ಯಾಯಾಧೀಶ ಅಧಿಕಾರವನ್ನು ನಡಿಸಿ ಈಗ ಪೆನ್ಶನು ಪಡೆಯುತ್ತಿರುವ ಸರ್ ಗೋವಿಂದರಾವ ಮಡಗಾಂವಕರರವರು ಆರ್ಭಟಿಸಿ ಟೀಕೆ ಮಾಡಿದ್ದಾರೆ ಗೋವಿಂದರಾವ ಮಡಗಾಂವಕರರವರು ರಾಷ್ಟ್ರೀಯ ಸಭೆಯವರಲ್ಲ ಸರ್ ಎಂಬ ಸರಕಾರಿ ಬಿರುದು ಪಡೆದ ಬ್ರಿಟಿಶ ರಾಜ್ಯದೊಳಗಿನ ಸರದಾರರು. ಮೇಲಾಗಿ ಆಯ್. ಸಿ ಎಸ್ ವರ್ಗಕ್ಕೆ ಸೇರಿದವರು. ಅಸಿಸ್ಟಂಟ ಕಮಿಶನರ, ಡಿಸ್ಟ್ರಿಕ್ಟ ಜಡ್ಜ, ಜುಡಿಶಿಯಲ್ ಕಮಿಶನರ, ಹೈಕೋರ್ಟ ಜಡ್ಜ ಹೀಗೆ ದೊಡ್ಡ ದೊಡ್ಡ ಹುದ್ದೆಗಳನ್ನು ನಡಿಸಿ ಮಾನ್ಯತೆ ಪಡೆದವರು. ಇಂಥ ಮಹಾನುಭಾವರು ಈ ಕಾಯಿದೆಯನ್ನು ವಿರೋಧಿಸಿ ಬಹು ದೊಡ್ಡ ಕ್ರಾಂತಿಯನ್ನೇ ಎಬ್ಬಿಸಿಬಿಟ್ಟಿದ್ದಾರೆ ಅನಪೇಕ್ಷಿತವಾಗಿ ಈ ಟೀಕೆಯುಂಟಾಗಿದೆ ಲೋಕಕಂಟಕ ಕಾನೂನಿಗೆ ನ್ಯಾಯದೇವತೆ ಹೇಸಿದಳೆಂದೇ ನನ್ನ ಅಭಿಪ್ರಾಯ. ನ್ಯಾಯಮೂರ್ತಿ ಮಡಗಾಂವಕರರವರು ಬರೆದ ಸವಿಸ್ತರ ಲೇಖದ ತಾತ್ಪರ್ಯವೇನೆಂದರೆ— "ಕಾಯಿದೆಯ ಉದ್ದೇಶ ಪತ್ರಿಕೆಯಲ್ಲಿ ಸತ್ಯಾಗ್ರಹಿ ಮೊದಲಾದವರ ಉಲ್ಲೇಖವಿದೆ. ಕಾಯಿದೆ ಕಲಮಿನಲ್ಲಿ ಈ ಉಲ್ಲೇಖವಿಲ್ಲ ಆದರಿಂದ ಈ ಕಾಯಿದೆಯನ್ನು ಬೇಕಾದವರಿಗೆ ಹಚ್ಚಬರುತ್ತದೆ. ಫಿರ್ಯಾದಿ ಸ್ಥಾನದಲ್ಲಿ ಸರಕಾರವಿದೆ, ನ್ಯಾಯಸ್ಥಾನದಲ್ಲಿಯೂ ಸರಕಾರವೇ. ಆರೋಪ ಹೊರಿಸುವವರೇ ವಿಚಾರ ಮಾಡುವ ನ್ಯಾಯಾಧೀಶರಾದ ಬಳಿಕ ಆರೋಪಿಗೆ ನ್ಯಾಯ ದೊರೆಯುವದುಂಟೇ ? ಸಾರ್ವಜನಿಕ ಸುರಕ್ಷಿತತೆ, ಶಾಂತತೆ ಇವುಗಳ ಕಲ್ಪನೆ ಮಾಡಿಕೊಂಡು ಅಧಿಕಾರಿಗಳು ಬೇಕಾದವರಿಗೆ ದಣಿಸಬಹುದು. ಅಧಿ

[ಮುಂದೆ ೧೦ನೇ ಪಾನು ನೋಡಿರಿ.]

For sale ! **For sale !!** **For sale !!**

Udipi Syndicate Bank Preference Shares for sale !

Rate less than the market rate !

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs 7 by the Bank authorities.

These shares will be sold less than the market rates. Intending buyers should apply to the following address:--

Vithal Subraya Prabhu Shiroorkar,
Post ANKOLA.

ಶಂಖಾನ್ ದಧ್ಮುಃ!

[ನಿರೀಕ್ಷಕನು ಬರೆದುದು.]

ಇಟಾಲಿ–ಹಬಸಿ ದೇಶಗಳೊಳಗಿನ ವಿವಾದಗಳು ಅಂತು ಯುದ್ಧದಲ್ಲಿಯೇ ಪರಿಣಮಿಸಿದವು! ಸೀಮೋಲ್ಲಂಘನ ಸಮಯದಲ್ಲಿಯೇ ಅಂದರೆ ಅಕ್ಟೋಬರ ತಾ. ೩ನೇ ಶುಕ್ರವಾರ ಬೆಳಗಿನ ೩-೧೫ ಘಂಟೆಗೆ ಇಟಾಲಿಯ ಸೇನಾಪತಿಗಳಾದ ಡಿ ಬೋನೋರವರು ಯುದ್ಧ ಪ್ರಕಟಣೆಯನ್ನು ಹೊರಡಿಸಿ ಗಡಿಸೀಮೆಯಾದ ಮರೆಬ ನದಿಯ ಸೀಮೋಲ್ಲಂಘನ ಮಾಡಲಿಕ್ಕೆ ಸೈನ್ಯಾಧಿಕಾರಿಗಳಿಗೆ ಅಪ್ಪಣೆ ಕೊಟ್ಟರು. ಯುದ್ಧ ಪ್ರಕಟಣೆಯು ಇಟಾಲಿ–ಅಮ್ಹರಿ-ಅರಬಿ ಭಾಷೆಗಳಲ್ಲಿ ಪ್ರಕಟಿಸಲ್ಪಟ್ಟಿತ್ತು. "ಹಬಸಿ ದೇಶದ ಗೆಳೆತನಕ್ಕಾಗಿ ಇಟಾಲಿಯು ಪಿಕ್ಕಪ್ರಯತ್ನ ಮಾಡಿತು. ಒಪ್ಪಂದಗಳನ್ನೆಲ್ಲ ಹಬಸಿ ಜನಾಂಗವು ಮುರಿದು ಎರಿಟ್ರಿ ಮತ್ತು ಸೋಮಾಲಿ ಪ್ರಾಂತಗಳಲ್ಲಿ ಲೂಟಿ ಮಾಡಿತು; ಖೂನಿ ಮಾಡಿತು. ಇಟಾಲಿಯ ದ್ರೋಹ ಬಗೆಯಿತು. ಬುದ್ಧಿಪೂರ್ವಕವಾಗಿ ಇಟಾಲಿಯ ಅಪಮಾನ ಮಾಡಿತು. (ಗಡಿನಾಡಿನ ಜನರನ್ನುದ್ದೇಶಿಸಿ) ನಿಮ್ಮ ಸಂರಕ್ಷಣಕ್ಕಾಗಿಯೇ ಸೀಮೋಲ್ಲಂಘನ ಮಾಡಲು ನಾನು ಸೈನಿಕರಿಗೆ ಇಂದಿಗೆ ಆಜ್ಞೆ ಮಾಡಿರುತ್ತೇನೆ. ಜನಸಾಮಾನ್ಯರು ಹೆದರುವ ಕಾರಣವಿಲ್ಲ. ಸಮಸ್ತರೂ ರಣದೇವತೆಯ ಬಳಿ ನಮ್ಮ ವಿಜಯಕ್ಕಾಗಿ ಪ್ರಾರ್ಥನೆ ನಡಿಸಬೇಕು." ಈ ಪ್ರಕಾರ ಸೇನಾಪತಿ ಡಿಬೋನೋರವರ ಯುದ್ಧ ಪ್ರಕಟಣೆಯಂತೆ ಇಟಾಲಿಯ ಸೈನಿಕರು ಉತ್ಸಾಹದಿಂದ ಸೀಮೋಲ್ಲಂಘನ ಮಾಡಿ ಉಸುರಿಗೇ ಅಡೋವಾ ಪಟ್ಟಣವನ್ನೂ, ಅಡಿಗ್ರಾಟ ಪಟ್ಟಣವನ್ನೂ ಶೌರ್ಯದಿಂದ ಸ್ವಾಧೀನಪಡಿಸಿಕೊಂಡರು. ಬಳಿಯಲ್ಲಿದ್ದ ಅಕ್ಸೂಮ ಎಂಬ ಪುರಾತನ ದೇವಸ್ಥಾನಗಳ ಪಟ್ಟಣವೂ ಇಟಾಲಿಯವರ ಕೈವಶವಾಗಿದೆ. ೪-೫ ದಿನಗಳಲ್ಲಿ ತಕ್ಕಮಟ್ಟಿಗೆ ಉತ್ತರ ಪಾರ್ಶ್ವದಲ್ಲಿ ೭೦ ಮೈಲು ಇಟಾಲಿಯವರು ಮುಂದರಿದು ಬಿಟ್ಟಿದ್ದಾರೆ. ದಕ್ಷಿಣ ಪಾರ್ಶ್ವದಿಂದ ಓಗಡೆನ ಭಾಗದಲ್ಲಿಯೂ ಇಟಾಲಿಯವರು ಮುಂದರಿದಿದ್ದಾರೆ. ಹಬಸಿ ಸೈನಿಕರು ರಾಸಕಾಸಾರವರ ಅಧಿಪತ್ಯದಲ್ಲಿ ಉತ್ತರ ಪಾರ್ಶ್ವದೊಳಗೆ ಹೋರಾಡುತ್ತಿದ್ದಾರೆ. ಅಡೋವಾ ಪಟ್ಟಣವನ್ನು ರಕ್ಷಿಸುವದಕ್ಕಾಗಿ ಹಬಸಿ ಸೈನ್ಯಾಧಿಕಾರಿಗಳು ವಿಶೇಷ ಪ್ರಯತ್ನಪಡಲಿಲ್ಲ. ಇಟಾಲಿಯವರು ಮುಂದರಿಯುತ್ತಾರೆಂದು ಕಂಡ ಕೂಡಲೆ ಜನಸಾಮಾನ್ಯರಿಗೆ ಪಟ್ಟಣವನ್ನು ಬಿಟ್ಟು ಹೋಗಲು ಆಜ್ಞೆಯಾಯಿತಂತೆ. ರಾಸಕಾಸಾರವರು ೧೩ ಸಾವಿರ ಅಡಿ ಎತ್ತರವಾದ ಗುಣಾ ಪರ್ವತದ ಮೇಲಿನ ಡಿಬ್ಲಾಟಿಬೋರದಲ್ಲಿ ಠಾಣ್ಯ ಹೂಡಿದ್ದು ಅಲ್ಲಿಂದ ಯುದ್ಧ ಸೂತ್ರಗಳನ್ನು ಚಲಿಸುತ್ತಿದ್ದಾರೆ. ಬಳಿಯ ಗೋಂಡರ ಪ್ರಾಂತದಲ್ಲಿ ರಾಸಕಾಸಾರವರ ಮಗಂದಿರಾದ ಡೆಡಜಾಝು ಒಲ್ಡೇ ಟಸೇನರವರು ಸೈನ್ಯಾಧಿಕಾರಿಗಳು. ಅವರು ತಮ್ಮ ಸೈನ್ಯ ಪಥಕಗಳನ್ನು ಕೂಚುಮಾಡಿ ಬರುವ ಹಾದಿಯ ಮೇಲೆ ಅಲ್ಲಲ್ಲಿ ಪಸರಿಸಿಟ್ಟು ಇಟಾಲಿ ಸೈನಿಕರಿಗೆ ಇದಿರಾಗುತ್ತಿದ್ದಾರೆ. ರಾಸ ಸೆಯೂಮರವರು ಮತ್ತೊಂದು ಭಾಗದಿಂದ ಎರಿಟ್ರಿ ಪ್ರದೇಶವನ್ನು ಒಳನುಗ್ಗುತ್ತಿದ್ದಾರೆ. ಈ ಪ್ರಕಾರ ಮೂರೂ ಪಾರ್ಶ್ವಗಳಿಂದ ಹಬಸಿ ಜನರು ಎರಿಟ್ರಿ ಪ್ರದೇಶದಲ್ಲಿ ಒಳಸೇರಿ ಅಡೋವಾ, ಅಡಿಗ್ರಾಟ, ಅಕ್ಸೂಮ ಪ್ರದೇಶದ ಮಾರ್ಗವಾಗಿ ಹಬಸಿ ದೇಶ ಒಳಸೇರಿದ ಸೈನಿಕರ ಮೇಲೆ ಹಿಂಬದಿಯಿಂದ ಹಲ್ಲೆ ಮಾಡಿ ಇಟಾಲಿಯವರಿಗೆ ಹಣ್ಣಿಗೆ ತರಲು ಯೋಚನೆಹಾಕಿದ್ದಾರೆ. ಹಬಸಿ ಜನರಿಗೆ ಭೂಪ್ರದೇಶದ ಒಳ್ಳೇ ಮಾಹಿತಿಯು ಇರುವದರಿಂದ ಹಬಸಿ ಜನರು ಚಾತುರ್ಯದಿಂದ ಇಕ್ಕಟ್ಟಿನ ಪ್ರದೇಶಗಳಲ್ಲಿ ನಿಂತು ಇಟಾಲಿಯವರಿಗೆ ಅಡ್ಡಗಟ್ಟುತ್ತಿದ್ದಾರೆ. ಇಟಾಲಿಯವರು ಮುಂದರಿದ ಹಾಗೆ ಅವರ ಸಂಕಟಗಳು ಹಿರಿಗಿಲಾಗುತ್ತಿವೆ. ಅಸ್ಮಾರಾದೊಳಗಿನ ಇಟಾಲಿಯ ಸೈನ್ಯಾಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳ ಬಳಿ ನುಡಿದದ್ದೇನಂದರೆ:– "ನಾವು ಮೂರು ಪಾರ್ಶ್ವಗಳಿಂದ ಒಂದೆಡೆ ಹಲ್ಲೆ ಮಾಡಹೋಗುತ್ತೇವೆ. ಮೂರೂ ಕಡೆ ಜನರೊಳಗೆ ವ್ಯವಹಾರ ಇಡುವದು ಕಠಿಣ. ಗುಡ್ಡಗಳಿಂದ ಈ ಪ್ರದೇಶ ತುಂಬಿ ಹೋಗಿದೆ. ಹಬಸಿ ಜನರು ಗುಡ್ಡದ ಕಡುಮಂಡಿಯಲ್ಲಿ ನಿಂತು ಇಡೀ ಸೈನ್ಯ ಪಥಕಕ್ಕೆ ಇದಿರಾಗುತ್ತಾರೆ. ತೋಫುಗಳನ್ನು ನಡಿಸಲಿಕ್ಕೆ ಗುಡ್ಡಗಾಡು ಪ್ರದೇಶದಲ್ಲಿ ಅಸಾಧ್ಯ. ಈ ಪ್ರಕಾರ ಅವರು ನಮ್ಮ ಸೈನ್ಯವನ್ನು ಒಂದೆಡೆ ಕೆಲ ಕಾಲದ ವರೆಗೆ ಅಡ್ಡಗಟ್ಟಿಬಿಟ್ಟರು." ಇಟಾಲಿಯ ಸೈನ್ಯಾಧಿಕಾರಿಗಳು ಈ ಪ್ರಕಾರ ನುಡಿಯುತ್ತಾರೆಂದ ಬಳಿಕ ಹಬಸಿ ದೇಶವನ್ನು ಸ್ವಾಧೀನಪಡಿಸಿಕೊಳ್ಳುವದು ಸುಲಭ ಮಾತು ಅಲ್ಲೆಂದು ನಾ ಹೇಳುತ್ತೇನೆ. 'ಮುಂಬಯಿ ಟೈಮ್ಸ' ಪತ್ರಿಕೆಯ ರಣಕ್ಷೇತ್ರದ ವಾರ್ತಾವಾಹಕರಾದ ಮಿ| ಲಡಿಸ್ಲಾಸ ಫರೆನೋರವರು ಇದೇ ಪ್ರಕಾರ ಅಭಿಪ್ರಾಯ ಪಡುತ್ತಾರೆ. "ಅಡೋವಾ, ಅಡಿಗ್ರಾಟ ಪಟ್ಟಣಗಳನ್ನು ಇಟಾಲಿಯವರು ಸ್ವಾಧೀನ ಮಾಡಿಕೊಂಡದ್ದೇನೋ ಅಹುದು ಆದರೆ ಇದರಂತೆಯೇ ಸೈನ್ಯವನ್ನು ಭೂಮಾರ್ಗವಾಗಿ ಮುಂದರಿಸಿ ಪ್ರದೇಶವನ್ನು ಆಕ್ರಮಿಸಿಕೊಳ್ಳುವದು ಕಠಿಣ ಕಾಣುತ್ತದೆ. ಹಬಸಿ ಸೈನಿಕರು ಮರ್ಮಸ್ಥಾನಗಳನ್ನು ಆಕ್ರಮಿಸಿಕೊಂಡಿದ್ದಾರೆ. ಅವರ ಬೆಂಬಲಕ್ಕೆ ದೊಡ್ಡ ದೊಡ್ಡ ಬಂಡೆಗಲ್ಲುಗಳೂ, ಹಂಗಾಮಿಯಾಗಿ ಕಟ್ಟಿದ ಕೋಟೆಗಳೂ ಇವೆ. ಶತ್ರುಗಳಿಗೆ ಮುಂದೆ ಸಾಗಲು ಕಷ್ಟವಾಗುವದು." ರಾಸ ಸೆಯೂಮ ಸೇನಾಪತಿಗಳು ಒಬ್ಬ ಇಟಾಲಿಯ ಕರ್ನಲ್‌ರಿಗೂ, ೩೦ ಮಂದಿ ಸೈನ್ಯಾಧಿಕಾರಿಗಳಿಗೂ, ಇತರ ಅನೇಕರಿಗೂ ಸೆರೆಹಿಡಿದರಾಗಿಯೂ ಅವರಲ್ಲೆಲ್ಲ ಅಡಿಸ ಅಬಾಬಾ ಪಟ್ಟಣಕ್ಕೆ ರವಾನಿಸುತ್ತಾರಾಗಿಯೂ ಪ್ರಕಟವಾಗಿದೆ. ದನಕಾಲಿ ಪ್ರದೇಶದೊಳಗಿನ ಅಸ್ಸಾಬ ಗ್ರಾಮದ ನೆರೆಹೊರೆಯಲ್ಲಿ ಇಟಾಲಿಯರಿಗೂ, ಹಬಸಿ ಜನರಿಗೂ ಕಡು ಸಂಗ್ರಾಮವಾಗಿ ಇತ್ತಿತ್ತಣವರೂ ಮಲ್ಲರಂತೆ ಹೋರಾಡಿದರಂತೆ. ೧೩೦೦ ಹಬಸಿ ಜನರೂ, ೭೦೦ ಮಂದಿ ಇಟಾಲಿಯರೂ ಮಡಿದರಾಗಿ ಹೇಳುತ್ತಾರೆ. ದಕ್ಷಿಣ ಪಾರ್ಶ್ವದಲ್ಲಿ ಸೋಮಾಲಿ ಪ್ರಾಂತದ ಮೇಲೆ ವಹೀಬ ಪಾಶಾರವರು ಸಾಗಿಹೋಗಿ ಉಲವೆಲ್ ಗ್ರಾಮವನ್ನು ಕೈವಶ ಮಾಡಿಕೊಂಡರಂತೆ. ವಹೀಬ ಪಾಶಾರವರು ವಯೋವೃದ್ಧ ಅನುಭವಿಕ ತುರ್ಕ ಸೇನಾಪತಿಗಳು. ೬೦ ವರ್ಷದ ಮುದುಕರು. ಮಹಾಯುದ್ಧ ಕಾಲದಲ್ಲಿ ದಾರ್ಡಾನೆಲಿಸ ಸಾಮುದ್ರಧುನಿಯ ಪ್ರದೇಶದಲ್ಲಿ ಬ್ರಿಟಿಶರಿಗೆ ಎದುರಾಳಿಗಳಾಗಿ ಶೌರ್ಯದಿಂದ ಹೋರಾಡಿದವೀರಭಟರು. ಇಟಾಲಿಯವರು ತಮಗೆ ಗೆಲವಾಯಿತೆನ್ನುತ್ತಾರೆ! ಹಬಸಿ ದೇಶದವರು ತಾವೇ ಗೆದ್ದೆವೆನ್ನುತ್ತಾರೆ! ೨|| ಸಾವಿರ ಹಬಸಿ ಜನರು ತೀರಿಕೊಂಡರಂತೆ; ೭೦೦ ಜನರಿಗೆ ಸೆರೆಹಿಡಿದಿದ್ದಾರಂತೆ. ಪ್ರತಿಯಾಗಿ ಇಬ್ಬ ಇಟಾಲಿಯ ಸೈನ್ಯಾಧಿಕಾರಿಗಳೂ ತೀರಿಕೊಂಡರಂತೆ! ೧೦೦ ಮಂದಿ ಘಾಯಪಟ್ಟಿದ್ದಾರಂತೆ. ಈ ವಾರ್ತೆ ಕೇಳಿ ಡಿಬೋನೋರು ಸಮಾಧಾನ ಪ್ರದರ್ಶಿಸುತ್ತಾರೆ. ಇಟಾಲಿಯರ ಆಫ್ರಿಕೆಯೊಳಗಿನ ಸೈನಿಕರು ಸಪರಿವಾರ ಹಬಸಿ ದೇಶದ ಪಕ್ಷಕ್ಕೆ ಕೂಡಿದರೆಂದು ಒಂದು ವಾರ್ತೆ. ಗಾಲ್ಲಾ ಮಕ್ಕಾಲೆ ಪ್ರಾಂತದೊಳಗಿನ ಹಬಸಿ ಸರದಾರರು ಇಟಾಲಿಗೆ ಶರಣಾಗತರಾಗಿ ಸ್ವಜನರೊಡನೆ ಹೋರಾಡುವರಂತೆ! ಆನ್ನಾ ಪ್ರದೇಶದ ಕಡೆ ಕೂಚು ಮಾಡಬಂದ ಇಟಾಲಿಯವರಿಗೆ ನೀರು ಸಿಗಬಾರದೆಂದು ಹಬಸಿ ಜನರು ಬಾವಿಗಳಲ್ಲೆಲ್ಲ ಉಪ್ಪು ಚೆಲ್ಲಿ ನೀರು ಕೆಡಿಸಿಬಿಟ್ಟಿದ್ದಾರೆ. ಇತ್ತ ಕಡೆ ಮರುಭೂಮಿಯಲ್ಲಿ ನೀರು ಸಿಗಬಲ್ಲ ಪ್ರದೇಶ ಇದೊಂದೇ! ಆದರೆ ರಣಕ್ಷೇತ್ರದೊಳಗಿನ ವಾರ್ತೆ ಇದ್ದಕ್ಕಿದ್ದ ಹಾಗೆ ಹೊರಬೀಳುವದಿಲ್ಲ. ಅಡೀಸ ಅಬಾಬಾ ಪಟ್ಟಣದಲ್ಲಿಯೂ ರೋಮ ಪಟ್ಟಣದಲ್ಲಿಯೂ ಬೇರೆ ಬೇರೆ ಕೇಂದ್ರಗಳಲ್ಲಿಯೂ ಸುದ್ದಿಗಳನ್ನು ತಪಾಸ ಮಾಡಿ ಕಳಿಸುವ ಏರ್ಪಾಟಾಗಿದೆ. ತಮತಮಗೆ ಅವಶ್ಯವುಳ್ಳ ಸುದ್ದಿಗಳಷ್ಟೇ ಹೊರಬೀಳುವ ವ್ಯವಸ್ಥೆಯಾಗಿದೆ. "ಸುಳ್ಳು ವಾರ್ತೆಗಳನ್ನು ಹಬ್ಬಿಸುವವರಿಗೆ ನಾನು ನಿರ್ದಯದಿಂದ ಕೊಂದುಬಿಡುವೆ" ಎಂಬದಾಗಿ ಸೇನಾಪತಿ ಡಿಬೋನೋರವರು ಯುದ್ಧಪ್ರಕಟಣೆಯಲ್ಲಿಯೇ ಘೋರಾಜ್ಞೆ ಹೊರಡಿಸಿದ್ದಾರೆ. ಇದರರ್ಥವೇನಂದರೆ ಇಟಾಲಿಗೆ ಪ್ರತಿಕೂಲವಾದ ವಾರ್ತೆಗಳನ್ನು ಯಾರೂ ಎಷ್ಟಕ್ಕೂ ಹೊರಗೆಡಹಕೂಡದು. ಅದರೊಳಗೂ ಹಬಸಿ ದೇಶ ಗುಡ್ಡಗಾಡು. ಟಪಾಲ-ತಂತಿ ಖಾತೆಗಳ ವ್ಯವಸ್ಥೆ ರಣಕ್ಷೇತ್ರದ ಬಳಿಯಲ್ಲಿ ಕಡಿಮೆ. ಆದರಿಂದಲೂ ನಿಜವಾದ ವಾರ್ತೆಗಳನ್ನು ತಿಳಕೊಳ್ಳಲಸಾಧ್ಯ. ಅಡೋವಾ ಪಟ್ಟಣ ಇಟಾಲಿಯ ಕೈವಶವಾದ ತಂತಿ ಬಂದ ದಿನ ಯುದ್ಧವೇ ಪ್ರಾರಂಭವಾಗಿಲ್ಲವಾಗಿಯೂ ಮುಂಭಾಗದೊಳಗಿನ ಸೈನ್ಯ ಪಥಕಗಳ ಹೋರಾಟಕ್ಕೆ ಮಾತ್ರ ಪ್ರಾರಂಭವಾಗಿರುವದಾಗಿಯೂ ಮುಂಬಯಿ 'ಟೈಮ್ಸ' ಪತ್ರಿಕೆಯ ರಣಕ್ಷೇತ್ರದ ವಾರ್ತಾವಾಹಕರು ತಂತಿಮಾಡುತ್ತಾರೆ. ಇಂಥ ಮರುಭೂಮಿಯೊಳಗಿನ ರಣಾಂಗಣದೊಳಗೆ ಏನು ನಡೆದಿದೆಯೆಂದು ನಾನೇನು ಹೇಳಲಿ? ಇತ್ತಿತ್ತಣವರೂ ಹೋರಾಡುತ್ತಿದ್ದಾರೆ; ಒಂದೆಡೆ ಒಬ್ಬರು ಗೆಲ್ಲುತ್ತಾರೆ, ಮತ್ತೊಂದೆಡೆ ಮತ್ತೊಬ್ಬರು ಗೆಲ್ಲುತ್ತಾರೆ. ಉತ್ತರ-ದಕ್ಷಿಣ ಪಾರ್ಶ್ವದಲ್ಲಿ ಸೈನ್ಯ ಪಥಕಗಳು ಕೂಚು ಮಾಡುತ್ತಿವೆ. ಇಷ್ಟೇ ನಾನು ಹೇಳಬಲ್ಲೆ. ರಾಷ್ಟ್ರಸಂಘದೊಳಗಿನ ಇಟಾಲಿಯ ಪ್ರತಿನಿಧಿಗಳಾದ ಬೆರನ್ ಎಲ್ಯೋಸಿರವರಂತು ರಾಷ್ಟ್ರಸಂಘದ ಯಾವದೇ ಶರ್ತುಗಳನ್ನು ಇಟಾಲಿಯವರು ಮುರಿಯಲಿಲ್ಲವಾಗಿಯೂ, ಆತ್ಮಸಂರಕ್ಷಣಕ್ಕಾಗಿ ಉಪಾಯ ಕೈಕೊಳ್ಳುತ್ತಾರಾಗಿಯೂ ಹೇಳುತ್ತಾರೆ. ಯುದ್ಧ ಪ್ರಕಟಣೆಯಂತು ಹೊರಟುಬಿಟ್ಟಿದೆ. ಈಗಿನ ರೂಪ ಹೀಗೆ.

ರಾಷ್ಟ್ರಸಂಘದವರು ಮಧ್ಯಸ್ಥಿಕೆಯ ಯಾವತ್ತೂ ಆಶೆಗಳನ್ನು ತೊರೆದು ಇಟಾಲಿಯೇ ಲೋಕಕಂಟಕ ಜನಾಂಗವೆಂದು ಒಮ್ಮನಸ್ಸಿನಿಂದ ನಿರ್ಧಾರ ಮಾಡಿದ್ದಾರೆ. ಐವರ ಕಮೀಟಿ, ಆರು ಜನರ ಕಮೀಟಿ, ೧೩ ಜನರ ಕಮೀಟಿ ಹೀಗೆ ಮಂಡಳ, ಉಪಮಂಡಳ, ಪ್ರಧಾನ ಮಂಡಳಗಳ ಆಲೋಚನೆ ಮುಗಿದು ೫೦ ರಾ

ಷ್ಟ್ರಗಳದೊಂದು ಮಹಾಸಭೆ ಜಿನೀವಾಪಟ್ಟಣದಲ್ಲಿ ಸೇರಿ ಇಟಾಲಿಯೇ ಅನ್ಯಾಯಗಾರ ರಾಷ್ಟ್ರವೆಂದು ತೀರ್ಮಾನಿಸೋಣಾಗಿದೆ. ಎಲ್ಯೊಸಿರವರು ಗಟ್ಟಿಗರು. ಪ್ರತಿಯೊಂದು ಮಂಡಳದಲ್ಲಿ ಇಟಾಲಿಯ ವಕೀಲಿಯನ್ನು ಹೃತ್ಪೂರ್ವಕವಾಗಿ ನಡಿಸಿದ ಹಬಸಿದೇಶದ ಅಪಕೃತ್ಯಗಳನ್ನೆಲ್ಲ ರಸಭರಿತವಾಗಿ ವರ್ಣಿಸಿದಾಗ್ಯೂ ಮಹಾಸಭೆಯಲ್ಲಿ ಒಬ್ಬರೂ ಇಟಾಲಿಗೆ ಅನುಕೂಲರಾಗಲಿಲ್ಲ. ಎಲ್ಲರೂ ಎದ್ದೆದ್ದು ಇಟಾಲಿಯೇ ತಪ್ಪುಗಾರ ಜನಾಂಗವೆಂದು ಮತ ಕೊಟ್ಟರು. ಎಲ್ಯೊಸಿರವರಿಗೆ ಬಹು ವ್ಯಸನವಾಯಿತಂತೆ. ಜೇಬಿನೊಳಗಿಂದ ಸಿಗರೇಟನ್ನು ತೆಗೆದು ಫ್ರೆಂಚರಾಜ್ಯಭಾರಿಗಳಾದ ಲಾವಲ್‌ರವರಿಗೆ ನೇತ್ರಸಂಕೇತ ಮಾಡಿ ನಗೆಮೊಗದಿಂದ ಸಿಗರೇಟನ್ನು ಸೇದಿ ತಾವು ಸೋತೆವೆಂದು ಧ್ವನಿಸಿದರಂತೆ. ಇಟಾಲಿಯ ಲೋಕಕಂಟಕತನ ನಿರ್ಣಯವಾಯಿತು. ಮುಂದೇನು ? ಶಾಸನೆ ಮಾಡುವ ಬಗೆ ಹೇಗೆ? ರಾಷ್ಟ್ರಸಂಘದ ಘಟನೆಯ ೧೬ನೇ ಕಲಮಿನಂತೆ ಶಾಸನ ಮಾಡಲು ರಾಷ್ಟ್ರಸಂಘಕ್ಕೆ ಅಧಿಕಾರವಿದೆ:- (೧) ಇಟಾಲಿಯ ರಾಜ್ಯಭಾರಿಗಳೊಡನೆ ಇರುವ ಸಂಬಂಧವನ್ನು ತುಂಡರಿಸುವದು; (೨) ಇಟಾಲಿಗೆ ಸರಕುಗಳನ್ನು ಪೂರೈಸದಿರುವದು; ಇಟಾಲಿಯಿಂದ ಸರಕುಗಳನ್ನು ತರಿಸದಿರುವದು. (೩) ಇಟಾಲಿಯ ಬಂದರಗಳ ವ್ಯವಹಾರ ಕಟ್ಟಾಗುವಂತೆ ಪ್ರತಿಬಂಧಗಳನ್ನೇರ್ಪಡಿಸುವದು. ತಾತ್ಪರ್ಯವೇನಂದರೆ ಇಟಾಲಿಯನ್ನು ಬಹಿಷ್ಕರಿಸುವದು. ತಪ್ಪುಗಾರ ರಾಷ್ಟ್ರವನ್ನು ಪೃಥಕ್ಕರಿಸಿ ಅಲಿಪ್ತವಾಗಿಡುವದು. ಜಾತಿ-ಬಹಿಷ್ಕಾರೋಪಾದಿಯಲ್ಲಿ ಶಾಸನ ಕ್ರಮವಿದೆ. ಶಾಸನೆ ವಿಚಾರಕ್ಕಾಗಿ ಮಂಡಳ ನೇಮಿಸೋಣಾಗಿದೆ. ಶಾಸನಗಳನ್ನು ಕೈಕೊಂಡ ಕೂಡಲೆ ಇಟಾಲಿ-ಹಬಸಿ ವಾದಕ್ಕೆ ಒಮ್ಮೆಲೇ ಉಗ್ರರೂಪ ಬಂದು ಇಡೀ ಲೋಕವೇ ಯುದ್ಧದಲ್ಲಿ ಸೇರಿ ಹೋಗುವ ಸಂಭವವಿದೆ. ಇದೀಗಲೇ ಆಸ್ಟ್ರಿಯಾ-ಹಂಗೇರಿ ದೇಶಗಳು ಇಟಾಲಿಗೆ ಶಾಸನ ಮಾಡಲು ಎಷ್ಟಕ್ಕೂ ಒಪ್ಪುವದಿಲ್ಲ. ''ಪುರಾತನ ಕಾಲದಿಂದ ನಾವು ಗೆಳೆಯರು. ಇಟಾಲಿಗೆ ಶಾಸನ ಮಾಡಲು ನಮಗೆ ಒಪ್ಪಿಗೆಯಿಲ್ಲ, " ಎಂಬದಾಗಿ ಇವೆರಡೂ ರಾಷ್ಟ್ರಗಳು, ಇಟಾಲಿಗೆ ತಪ್ಪುಗಾರವೆಂದು ಮತಕೊಟ್ಟ ರಾಷ್ಟ್ರಗಳು ಈಗ ಅಲಿಪ್ತವಾಗಿವೆ. ಸ್ವಿಟ್ಸರ್ಲಂಡ ದೇಶದವರು ಸಂಪೂರ್ಣವಾಗಿ ಸಹಕರಿಸಲೊಪ್ಪುವದಿಲ್ಲ. ಸ್ಪೇನ ದೇಶದವರು ಇಟಾಲಿಗೆ ವಿರೋಧಿಸಲು ಒಪ್ಪುವದಿಲ್ಲವಾಗಿ ಲೋಕವಾರ್ತೆ. ಇಷ್ಟಾಗಿ ಸ್ಪೇನ ಸರಕಾರದ ಪ್ರತಿನಿಧಿಗಳಾದ ಸಾಲ್ವಾಡೋರ ಮದರಿಂಗಾರವರು ಇಟಾಲಿ-ಹಬಸಿ ವಾದದ ಮೂಲ ವಿಚಾರ ಮಂಡಳದ ಅಧ್ಯಕ್ಷರು. ಜರ್ಮನರಂತೂ ರಾಷ್ಟ್ರಸಂಘದಿಂದ ಈ ಮೊದಲೇ ಹೊರಬಿದ್ದಿದ್ದಾರೆ. ಅವರೂ ಇಟಾಲಿಗೆ ಅನುಕೂಲರಾಗುವರಂತೆ. ಅವರು ಅನುಕೂಲರಾಗುವ ಲಕ್ಷಣವನ್ನು ನಾನು ಈ ಹಿಂದೆಯೇ ನಮೂದಿಸಿ ಬಿಟ್ಟಿದ್ದೇನೆ. ಯುಗೋಸ್ಲಾವಿಯಾ-ಆಲ್ಬೇನಿಯಾ-ಇಟಾಲಿ ದೇಶಗಳೊಳಗೆ ಆಡ್ರಿಯಾಟಿಕ್ ಸಮುದ್ರದ ಮತ್ಸರವಿದ್ದಾಗ್ಯೂ ಈ ರಾಷ್ಟ್ರಗಳು ಈ ಪ್ರಸಂಗದಲ್ಲಿ ಒಂದಾಗಬಹುದಾಗಿ ಕೆಲವರ ಎಣಿಕೆ. ರಾಷ್ಟ್ರಸಂಘದ ಮುಖ್ಯ ಆಧಾರಸ್ತಂಭರಾದ ಬ್ರಿಟಿಶ-ಫ್ರೆಂಚರೊಳಗೆ ಶಾಸನ ಕ್ರಮಗಳ ಕುರಿತು ವಿವಾದವೆದ್ದಿದೆ. ಜರ್ಮನಿಯು ಫ್ರಾನ್ಸ ದೇಶದ ಮೇಲೆ ಸಾಗಿಬಂದಲ್ಲಿ ಬ್ರಿಟಿಶರು ತಮಗೆ ನೆರವಾಗುವರೇನೆಂದು ಫ್ರೆಂಚ ಸರಕಾರದ ಪೃಚ್ಛೆ. ''ಜರ್ಮನರು ರಾಷ್ಟ್ರಸಂಘದ ಹೊರಗಿನವರು. ರಾಷ್ಟ್ರಸಂಘದ ಕಕ್ಷೆಯೊಳಗಿನ ಕರ್ತವ್ಯವನ್ನಷ್ಟು ನಾವು ಮಾಡಬಲ್ಲೆವು. ಆದಕ್ಕೆ ಮಿಕ್ಕಿ ನಾವು ಯುರೋಪ್ಯ ರಾಜಕಾರಣದಲ್ಲಿ ಸೇರಲಾರೆವು,'' ಎಂಬದಾಗಿ ಬ್ರಿಟಿಶ ಪ್ರಧಾನ ಮಂಡಳದ ಜಂಬೋಣ. ಬ್ರಿಟಿಶ ಪ್ರಧಾನ ಮಂಡಳದ ಸಭೆಯಾಗಿ ವಿಚಾರ ನಡೆಯುತ್ತಿದೆ. ಇದೇ ಬರುವ ಅಕ್ಟೋಬರ ೨೨ನೇ ತಾರೀಖಿಗೆ ಅಂದರೆ ಮುಂದಿನ ಮಂಗಳವಾರ ಪಾರ್ಲಿಮೆಂಟಿನ ಸಭೆಯಾಗಿ ಬ್ರಿಟಿಶರ ಧೋರಣ ನಿಶ್ಚಯವಾಗುವದಿದೆ. ಇದೀಗಲೇ ಇಟಾಲಿಯವರು ಬ್ರಿಟಿಶರ ಮೇಲೆ ಹಗೆ ಹಿಡಿಯಲಾರಂಭಿಸಿದ್ದಾರೆ. ''ರಾಷ್ಟ್ರಸಂಘದ ಘಟನೆಯಂತೆ ತಪ್ಪುಗಾರ ರಾಷ್ಟ್ರಗಳನೇಕವಿವೆ. ಅವುಗಳ ಮೇಲೆ ಶಾಸನಕ್ರಮ ಕೈಕೊಳ್ಳಲಿಲ್ಲ. ನಮ್ಮ ಮೇಲೆ ಮಾತ್ರ ಶಾಸನಕ್ರಮದ ವಿಚಾರ ಗಾಬರಿಯಿಂದ ನಡೆದಿದೆ. ಬ್ರಿಟಿಶರೇ ಒತ್ತಾಯಪಡಿಸುತ್ತಿದ್ದಾರೆ," ಹೀಗೆ ಇಟಾಲಿಯವರು ಬ್ರಿಟಿಶರಿಗೆ ದೂರುತ್ತಿದ್ದಾರೆ. ಅಮೇರಿಕೆಯ ಸರಕಾರವೂ, ಜಪಾನ ಸರಕಾರವೂ ರಾಷ್ಟ್ರಸಂಘದೊಡನೆ ಸಹಕರಿಸಲೊಪ್ಪಿವೆ. ಆದರೆ ಸ್ವದೇಶದ ಸ್ವಾರ್ಥಕ್ಕೆ ಬಾಧೆ ತಟ್ಟದಂತೆ ಲೋಕೋಪಕಾರ ಮಾಡಲು ಇವೆರಡೂ ರಾಷ್ಟ್ರಗಳು ಸಿದ್ಧವಿವೆ. ಮದ್ದು-ಗುಂಡುಗಳನ್ನು ಪೂರೈಸಲಿಕ್ಕಿಲ್ಲವಾಗಿ ಈಗಿನ ಧೋರಣ. ಉಡಿಗೆ-ತೊಡಿಗೆ-ಅನ್ನ ಸಾಮುಗ್ರಿಗಳನ್ನು ಪೂರೈಸಲಿಕ್ಕೆ ಇವರಡರ ಆಕ್ಷೇಪವಿಲ್ಲ ಮುಂದಿನ ಧೋರಣವೇನೆಂದು ನಾ ಹೇಳಲಾರೆ.

ಫ್ರೆಂಚರ ಧೋರಣದ ಮೇಲೆ ಹಬಸಿ ದೇಶದ ಭವಿತವ್ಯ ಹೊಂದಿಕೊಂಡಿದೆಂದು ತೋರುತ್ತದೆ. ರಾಸ ತಫಾರಿಯವರ ಕಡೆ ಹೇರಳ ಸುವರ್ಣಸಂಗ್ರಹವಿದೆ. ಒಂದು ಕೋಟಿ ಚಿನ್ನದ ಥಾಲರ ನಾಣ್ಯಗಳಿವೆ. ಈ ರಕಮು ೧೮೯೬ನೇ ಇಸ್ವಿಯಲ್ಲಿ ಅಡೋವಾ ಪಟ್ಟಣದೊಳಗೆ ವಿಜಯ ಸಂಪಾದಿಸಿದಾಗ ಇಟಾಲಿಯ ಕಡೆಯಿಂದ ನಷ್ಟಭರಪಾಯಿ ಪಡಕೊಳ್ಳೋಣಾಗಿತ್ತಂತೆ. ಬಾದಶಹರು ಮದ್ದು-ಗುಂಡುಗಳನ್ನು ಫ್ರೆಂಚರ ಮುಖಾಂತರ ತರಿಸಿ ಜಿಬುಟಿ ಬಂದರದಲ್ಲಿ ಇಳಿಸಿಟ್ಟಿದ್ದಾರೆ. ಅವನ್ನು ಫ್ರೆಂಚ ರಾಜ್ಯಭಾರಿಗಳಾದ ಲಾವಲ್‌ರವರು ಹಬಸಿ ದೇಶಕ್ಕೆ ಒಯ್ಯಬಾರದಾಗಿ ಅಪ್ಪಣೆ ಮಾಡಿ ಜಿಬುಟಿಯಲ್ಲಿಯೇ ತಡೆದಿಟ್ಟಿದ್ದಾರೆ. ಫ್ರೆಂಚರು ಇಟಾಲಿಗನುಕೂಲವಾದರೆ ಹಬಸಿ ದೇಶದ ದುಡ್ಡಿನಿಂದ ತರಿಸಿದ ಮದ್ದು-ಗುಂಡೆಲ್ಲ ಇಟಾಲಿಗೆ ಒಪ್ಪಿಸಿಬಿಟ್ಟರೆ ಹಬಸಿ ದೇಶಕ್ಕೆ ಕಷ್ಟವೇ. ಲಾವಲ್‌ರವರು ಮದ್ದು-ಗುಂಡುಗಳನ್ನು ತಡಿಸಿ ತಮ್ಮ ಕೈಯಲ್ಲಿ ಹಬಸಿ ದೇಶದ ಪ್ರಾಣವನ್ನೇ ಇಟ್ಟುಕೊಂಡಿದ್ದಾರೆಂದು ಹೇಳಬಹುದು. ಲಾವಲ್‌ರವರು ಏನು ಮಾಡುತ್ತಾರೆಂದು ನೋಡಬೇಕಾಗಿದೆ.

ಹಿಂದುಸ್ಥಾನದೊಳಗೆ ಒಳ್ಳೇ ಗಡಿಬಿಡಿಯುಂಟಾಗಿದೆ. ಹಬಸಿ ದೇಶದೊಡನೆ ಸಹಾನುಭೂತಿಯನ್ನು ಎಲ್ಲರೂ ಪ್ರದರ್ಶಿಸುವವರೇ. ಕರಾಚಿಯೊಳಗಿನ ಮುಸಲ್ಮಾನರಿಗೆ ಹಬಸಿ ದೇಶದೊಳಗಿನ ಧರ್ಮಬಾಂಧವರ ಚಿಂತೆಯುಂಟಾಗಿದೆ. ಅವರಿಗೆ ಕಾಪಾಡಬೇಕೆಂದು ಅವರ ಅಭಿಪ್ರಾಯ. ಮುಂಬಯಿ ಬಂದರದಲ್ಲಿ ಒಳ್ಳೇ ಗಡಿಬಿಡಿ. ಎರಡು ಹಡಗಗಳು ಸೂಚನೆಯಾದೊಡನೆ ಸೈನಿಕರನ್ನು ಒಯ್ಯಲು ಕಲ್ಲಿದ್ದಲಿಯನ್ನು ತುಂಬಿಕೊಂಡು ಸಜ್ಜಾಗಿ ನಿಂತಿವೆ. ಘಾಯಪಟ್ಟವರ ಶುಶ್ರೂಷೆಗಾಗಿ ಹಡಗಗಳು ಸಿದ್ಧಪಡಿಸೋಣಾಗಿವೆ. ಕಲಕತ್ತೆಯಿಂದ ಎರಡು ಹಡಗಗಳು ಮುಂಬಯಿಗೆ ಲಗಬಗೆಯಿಂದ ಓಡಿಬರುತ್ತಿವೆ. ಕರಾಚಿ ಬಂದರದಲ್ಲಿ ೧೦ ಹಡಗಗಳು ಸೈನಿಕರಿಗೆ ಒಯ್ಯಲು ಸಿದ್ಧವಿರುವವಾಗಿ ಕರಾಚಿಯ ವಾರ್ತೆ. ಎಲೋರಾ ಹಡಗವು ಮುಂಬಯಿ ಕರಾಚಿ ಬಂದರಗಳಲ್ಲಿ ಪ್ರಯಾಣಿಕರಿಗೆ ಒಯ್ಯುತ್ತಿತ್ತು. ಮಹಾಯುದ್ಧಕಾಲದಲ್ಲಿ ಇದು ಶುಶ್ರೂಷಾ ಹಡಗವಿತ್ತು. ಪ್ರಸ್ತುತ ಇದನ್ನು ರೂಪಾಂತರಗೊಳಿಸಿ ಶುಶ್ರೂಷಾ ಹಡಗವನ್ನಾಗಿ ಪರಿಣಮಿಸಿ ಹಬಸಿ ದೇಶಕ್ಕೆ ರವಾನೆಯಾಗುವದು. ಈ ಹೊತ್ತೇ ಮುಂಬಯಿಯಿಂದ ಅದು ಹೊರಡುವದಾಗಿ ಹೇಳುತ್ತಾರೆ. ಮುಂಬಯಿಯೊಳಗಿನ ವರ್ತಕರು ಈಗಿನಿಂದಲೇ ಮುಂಜಾಗ್ರತೆ ಕೊಳ್ಳಲಾರಂಭಿಸಿದ್ದಾರೆ. ಸರಕುಗಳಿಗಾಗಿ ಇಟಾಲಿಗೆ ಕಳಿಸಿದ ಆರ್ಡರುಗಳು ರದ್ದಾಗುತ್ತಿವೆ. ಆದರಿಂದ ಮುಂಬಯಿಯಲ್ಲಿ ಇಟಾಲಿಯಿಂದ ಬರುವ ಉಣ್ಣೆಯ ವಸ್ತ್ರ ಮೊದಲಾದವುಗಳ ದರ ೧॥ ಪಟ್ಟಿಗೆ ಏರಿತು. ಇಟಾಲಿಯ ಹಡಗಗಳಲ್ಲಿ ಪ್ರಯಾಣಿಕರು ದೊರಕುವದಿಲ್ಲ. ಕಳೆದ ಗುರುವಾರ ಲ್ಲಾಯ್ಡ ಟ್ರಿಸ್ಟಿನೋ ಎಂಬ ಇಟಾಲಿ ಕಂಪನಿಯ 'ವಿಕ್ಟೋರಿಯಾ' ಹಡಗವು ಮುಂಬಯಿಯಿಂದ ಹೊರಟಿತು. ೫೭೦ ಪ್ರಯಾಣಿಕರನ್ನೊಯ್ಯುವ ಹಡಗವಿದು. ಬರೇ ೮೦ ಪ್ರಯಾಣಿಕರೊಡನೆ ಅದು ಹೊರಡಬೇಕಾಯಿತು. ರಂಗೂನಿನಲ್ಲಿ ಹಡಗದ ಮೇಲೆ ಬರ್ಮಾ ಕಂಪನಿಯವರು ಮೇಣಬತ್ತಿಗಳನ್ನು ತುಂಬಿ ಕಳುಹಲಿಕ್ಕಿದ್ದರು. ಅಷ್ಟರಲ್ಲಿ ಲಂಡನಿನಿಂದ ಸರಕು ಕಳಿಸಬಾರದಾಗಿ ಅಪ್ಪಣೆ ಬಂದದ್ದರಿಂದ ಹೇರಿದ ಮೇಣಬತ್ತಿಗಳು ಇಳಿಸಿಕೊಳ್ಳಲ್ಪಟ್ಟವು. ಹಡಗವು 'ಬಂದ ದಾರಿಗೆ ಸುಂಕವಿಲ್ಲೆಂಬಂತೆ' ಬರಿದಾಗಿ ಹಿಂತಿರುಗಿತು. ಬಹಿಷ್ಕಾರವು ಇದೀಗಲೇ ಇಷ್ಟು ಕಠೋರ ರೂಪ ತಾಳಿದೆ.

ಲಾಹೋರದ ' ಶ್ರೀಮತಿ ಅನ್ನಿಕ ಕೌರರವರು ಸರ್ವಾಧಿಪತಿಗಳ ಅಪ್ಪಣೆ ಪಡೆದು ಘಾಯಪಟ್ಟವರ ಶುಶ್ರೂಷೆಗಾಗಿ ಅವಶ್ಯವುಳ್ಳ ೫ ಸಾವಿರ ರೂಪಾಯಿಗಳ ಸಾಹಿತ್ಯಗಳನ್ನು ಹಬಸಿ ಶುಶ್ರೂಷಾ ಸಂಘಕ್ಕೆ ಕಳುಹಿಸಿದ್ದಾರೆ. ಸ್ವಿಡನ್ ದೇಶದಿಂದ ಅಡಿಸ ಅಬಾಬಾ ಪಟ್ಟಣಕ್ಕೆ ಶುಶ್ರೂಷಾ ಪಥಕ ಕಳುಹೋಣಾಗಿದೆ. ಬ್ರಿಟಿಶ ದೇಶದಲ್ಲಿ ೩೫ ಸಾವಿರ ಪವನುಗಳ ನಿಧಿಯನ್ನೇರ್ಪಡಿಸಿ ರಣಾಂಗಕ್ಕೆ ಯಾವತ್ತೂ ಸಾಹಿತ್ಯಗಳಿಂದಲೂ ಪರಿವಾರದಿಂದಲೂ ಪೂರಿತವಾಗಿ ಶುಶ್ರೂಷಾ ಪಥಕಗಳನ್ನು ಕಳುಹುವ ನಿರ್ಧಾರವಾಗಿದೆ. ಹೊಲಂಡ ದೇಶದಲ್ಲಿ ೩೦ ಸಾವಿರ ಪವನುಗಳ ನಿಧಿಗಳನ್ನೇರ್ಪಡಿಸಿ ಹಬಸಿ ದೇಶಕ್ಕೆ ಶುಶ್ರೂಷಾ ಪಥಕ ಕಳುಹಲ್ಪಡುವವು. ಅಮೇರಿಕೆಯವರು ನಿಧಿಗೂಡಿಸಿ ಶುಶ್ರೂಷೆಗೆ ಅವಶ್ಯವುಳ್ಳ ಸಾಹಿತ್ಯಗಳನ್ನು ಮಾತ್ರ ಪೂರೈಸುವ ನಿರ್ಣಯ ಮಾಡಿದ್ದಾರೆ. ಹಬಸಿ ದೇಶದೊಡನೆ ಬೇರೆ ಬೇರೆ ರಾಷ್ಟ್ರಗಳು ಬೇರೆ ಬೇರೆ ಪ್ರಕಾರಗಳಿಂದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತವೆ.

ಇತ್ತ ಯುದ್ಧ ವಾರ್ತೆಗಳು ವಿಶೇಷವಿಲ್ಲ- ಇಟಾಲಿಯವರು ಗೆದ್ದ ಪ್ರದೇಶಗಳನ್ನು ಭದ್ರ ಪಡಿಸುತ್ತಾರಂತೆ. ಅಡಿಸ ಅಬಾಬಾ ಉಗಿಬಂಡಿಯ ಕಡೆಗೆ ಸಾಗು ಮಾಡಹೋದ ದಕ್ಷಿಣ ಪಾರ್ಶ್ವದೊಳಗಿನ ಇಟಾಲಿ ಸೈನ್ಯದ ಅವಸ್ಥೆ ಏನಾಯಿತೆಂದು ತಿಳಿಯುವದಿಲ್ಲ. ರಾಷ್ಟ್ರಸಂಘದ ಶಾಸನಕ್ರಮದ ನಿಶ್ಚಯವಾಗಿ ಬ್ರಿಟಿಶ ಫ್ರೆಂಚರ ಧೋರಣ · ಪ್ರಕಟವಾದನಂತರ ಯುದ್ಧಕ್ಕೆ ಕಳೆಯೇರದು. ಇನ್ನು ಒಂದೆರಡು ವಾರಗಳಲ್ಲಿಯೇ ಯುದ್ಧದ ವಿಶ್ವರೂಪ ಪ್ರದರ್ಶನವಾಗುವದಿದೆ! ಇಟಾಲಿ-ಹಬಸಿ ದೇಶಗಳ ಸಂಗ್ರಾಮವು ಮುಂದಿನ ಮಹಾಯುದ್ಧದ ಪೂರ್ವ ಪೀಠಿಕೆ ಅದಕ್ಕಾಗಿಯೇ ಭಾರತ ಮಹಾಯುದ್ಧ ಪೂರ್ವದಲ್ಲಿ ಶಂಖನಾದವಾದಂತೆ ' ಶಂಖಾನ್ ದಧ್ಮುಃ ' ಎಂಬದಾಗಿ ಮೊಟ್ಟಮೊದಲು ನಾನು ಹೇಳಿದುದು

ಸ್ಥಾನಿಕ ವೃತ್ತಾಂತ.

ಕುಮಟಾ— ಪ್ಲೇಗು ಹಿಂದಾಯಿತೆಂದು ಹೇಳುವಷ್ಟರಲ್ಲಿ ಕಳೆದ ವಾರ ೩ ಮರಣಗಳು ಸಂಭವಿಸಿದವು. ಎಲ್ಲಿಯಾದರೂ ಇಲಿ ಬಿದ್ದ ವಾರ್ತೆ ಕೇಳಬರುತ್ತದೆ. ಅಂತು ಪ್ಲೇಗಿನ ಬಿಡಾರು ಕುಮಟೆಯಲ್ಲಾಗಿಯಿತೆಂದು ಸಾಮಾನ್ಯವಾಗಿ ಹೇಳಬಹುದು.

ನವರಾತ್ರಿ ಉತ್ಸವವು ಎಂದಿನಂತೆ ನೆರವೇರಿತು. ಪರ್ವಾಸನದಂತೆ ಅಹಿಂಸಾವಾದಿಗಳ ದಸರೆಯ ಮುಂಚಿನ ದಿನ ಮತ್ತು ದಸರೆಯ ದಿನ ಗಲಾಟೆ ನಡೆಯಿತು. ಶ್ರೀ ವಿಠ್ಠಳನ ದೇವಸ್ಥಾನದಲ್ಲಿ ಇಂಗ್ಲಿಷ ಶಾಲೆಯ ವಿದ್ಯಾರ್ಥಿಗಳು ಅಹಿಂಸೆಯ ಮೇಲೆ ಭಾಷಣ ಮಾಡಿದರು. ವಿದ್ಯಾರ್ಥಿಗಳಲ್ಲಿ ಎಚ್. ಆರ್. ಪ್ರಭು, ಶ್ರೀನಿವಾಸ ಪೈ, ಗಾಂವಕಾರ, ಡಿ. ಎನ್. ಮಡಿವಾಳ, ವೈ. ಪೈ. ಪೈ, ಎಸ್. ಪೈ. ನಾಯ್ಕ ಮತ್ತು ಆರ್. ಎಸ್. ಭಟ್ಟ ಎಂಬ ೬ ಹುಡುಗರಿಗೆ ಬೆಳ್ಳಿಯ ಪದಕಗಳು ಅರ್ಪಿಸಲ್ಪಟ್ಟವು. ಮೊದಲಿನ ಮೂವರ ಅಹಿಂಸೆಯ ಮೇಲಿನ ಭಾಷಣಗಳು ಚಿತ್ತವೇಧಕವಾದವಂತೆ. ಆದರೆ ಅಹಿಂಸಾ ಚಳವಳಿಗಾರರಲ್ಲಿ ಅಹಿಂಸೆಯು ಪ್ರಸಾರವಾದದ್ದು ಕಂಡುಬರಲಿಲ್ಲ. ದಸರೆಯ ದಿನ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದವರು ಶಾಂತಿಭಂಗವಾಗುವದೆಂದು ಪೋಲೀಸರಿಗೆ ಬಂದೋಬಸ್ತಿಡಲು ಅರ್ಜಿ ಮಾಡಿಕೊಂಡಿದ್ದರು. ಮುಂದೆ ಮಧ್ಯಾಹ್ನದ ಸಮಯ ಕೆಲವರು ಶ್ರೀ ದೇವರ ಕಡೆ ಅಪ್ಪಣೆ ಬೇಡಿಕೊಂಡರಂತೆ. ಶ್ರೀ ದೇವರು ಕುರಿಗಳಿಗೆ ಕಿವಿಕೊಯ್ದು ಬಿಡಬೇಕಾಗಿಯೂ, ಕೋಳಿಗಳಿಗೆ ಕುಡಿಯ ಕೊಯ್ದು ಬಿಡಬೇಕಾಗಿಯೂ ಅಪ್ಪಣೆ ಕೊಟ್ಟಿತಂತೆ! ಅದರಂತೆ ಊರತುಂಬ ವಾದ್ಯದ ಮೇಲೆ ಪ್ರಕಟಣೆ ಹೊರಡಿಸಲಾಯಿತು. ರಾತ್ರಿ ಬಲಿಯ ಸಮಯ ದರ್ಶನದ ಕಡೆ ವಿಚಾರಿಸಲು ಪರ್ವಾಸನದಂತೆ ಬಲಿಯಾಗಬೇಕಾಗಿ ಅಪ್ಪಣೆ ಕೊಟ್ಟು ದರ್ಶನ ವಿಸರ್ಜನ ಹೊಂದಿತು. ಬಾಲಕರು ಕೃತಸಂಕಲ್ಪದಂತೆ ಕಿವಿ ಕುರಿಯ ಕೊಯ್ದು ದಸರೆಯನ್ನು ಸಾಂಗಗೊಳಿಸಿದರು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಬಲಿಯ ಸಮಯ ಕೆಲ ಅಹಿಂಸಾವಾದಿಗಳು ಚರ್ಚೆಗೆ ಹೋಗಿದ್ದರು. "ಅಹಿಂಸೆ ತತ್ವ ನಮಗೆ ಒಪ್ಪಿಗೆಯುಂಟು. ಬಲಿಯನ್ನು ನಿಲ್ಲಿಸಬೇಕಾಗಿ ನಮ್ಮನೂ ಅಭಿಪ್ರಾಯವಿದೆ. ಈ ಹಿಂದೆಯೇ ನಾವು ಪ್ರಯತ್ನ ಮಾಡಿದ್ದೇವೆ. ಆದರೆ ಸಾಧ್ಯವಾಗಲಿಲ್ಲ. ಶ್ರೀ ದೇವರ ಅಪ್ಪಣೆಯಾದಂತೆ ವರ್ತಿಸಲಿಕ್ಕೆ ನಾವು ಈಗಲೂ ತಯಾರಿದ್ದೇವೆ. ಎಲ್ಲ ಭಜಕರು ಈಗ ಇಲ್ಲಿ ಇರುವದಿಲ್ಲ. ನೀವು ಕೆಲ ದಿನಗಳ ಪೂರ್ವದಲ್ಲಿಯೇ ಬಂದು ಈ ವಿಷಯವನ್ನು ನಿರ್ಣಯಿಸಿಕೊಳ್ಳಬೇಕಾಗಿದ್ದಿತು. ಈಗ ಚರ್ಚೆ ಮಾಡಿ ಫಲವಿಲ್ಲ" ಎಂಬದಾಗಿ ಅಹಿಂಸಾವಾದಿಗಳಿಗೆ ತಿಳಿಹೇಳಿ ಕಳಿಸಿದರು. ಹಿಂದಿನಹಬ್ಬದ ಸಮಯ ಅಹಿಂಸಾವಾದಿಗಳ ಚಳವಳಿಯಾಗಬಹುದಾಗಿ ಹೇಳುತ್ತಾರೆ. ಆದರೆ ಅಹಿಂಸಾವಾದಿಗಳ ಪ್ರಮುಖರು ಶ್ರೀ ಗ್ರಾಮದೇವಸ್ಥಾನದ ಮಹಾಜನರಾಗಿರುವದರಿಂದ ಅಹಿಂಸಾವಾದಿಗಳ ಪ್ರಯತ್ನಗಳು ಸುಲಭವಾಗಿ ಸಾಧ್ಯವಾಗುವಂತಿವೆ.

ಕುಂದಾಪುರದ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಶಾಖೆ ಇಲ್ಲಿ ಕಳೆದ ಶುಕ್ರವಾರ ಹೊರಡಿಸಲ್ಪಟ್ಟಿತು. ಪ್ರಾತಃಕಾಲ ೬ ಘಂಟೆಗೆ ವೈದಿಕ ವಿಧಿಯಿಂದ ಮುಹೂರ್ತವಾಯಿತು. ೯ ಘಂಟೆಗೆ ಇಲ್ಲಿಯ ಜನಾಬ ಅಲ್ಲಿಸಾಹೇಬ ಇವರು ಸಾಹೇಬ ಬಸ್ತಿಹಸ್ತಿಬರವರ ಅಧ್ಯಕ್ಷತೆಯಲ್ಲಿ ಆನಾವರಣ ಸಮಾರಂಭವಾಯಿತು. ಮೊಟ್ಟ ಮೊದಲು ಬೇಂಕಿನ ಡಾಯರೆಕ್ಟರ ಮಂಡಳದ ಅಧ್ಯಕ್ಷರಾದ ರಾ| ಕೇ. ನಾರಾಯಣ ಶೆಣೈ ವಕೀಲರವರು ಸಭಿಕರಿಗೆ ಸ್ವಾಗತ ಮಾಡಿ ಉಭಯ ಕನ್ನಡ ಜಿಲ್ಲೆಗಳ ಅಪೂರ್ವ ಸಂಯೋಗ ಸಂದರ್ಭವಿದೆಂದು ಹೇಳಿ ಇಂಥ ಪ್ರಸಂಗಗಳಿಂದ ಉಭಯ ಜಿಲ್ಲೆಗಳ ಜನರೊಳಗೆ ಐಕ್ಯಭಾವನೆ [illegible]ತ್ತದೆಂದರು. ಬೇಂಕು ಉಭಯ ಜಿಲ್ಲೆಗಳ ಪ್ರಮುಖರಿಂದ ಪುರಸ್ಕರಿಸಲ್ಪಟ್ಟಿರುತ್ತದೆಂಬುದಾಗಿ ಹೇಳಿ ಜನಾಬ ಅಲ್ಲಿಸಾಹೇಬರವರಿಗೆ ಸಭಾಪತಿಗಳಾಗಬೇಕಾಗಿ ವಿನಂತಿಸಿಕೊಂಡರು. ಅಧ್ಯಕ್ಷರು ಈ ಬೇಂಕಿನಿಂದ ವ್ಯಾಪಾರಸ್ಥರಿಗೆ ಪ್ರಯೋಜನವಾಗುವದಾಗಿಯೂ, ಬೇಂಕಿನವರು ಸರಕು ಇಟ್ಟುಕೊಂಡು ಹಣ ಪೂರೈಸಿ ವರ್ತಕರಿಗೆ ನೆರವಾಗುವದಾಗಿಯೂ ಹೇಳಿ ಬೇಂಕು ಲೋಕಪ್ರಿಯವಾಗಿ ಉರ್ಜಿತಾವಸ್ಥೆಗೆ ಬರಲೆಂದ ಹಾರೈಸಿ ಬೇಂಕ ಮೆನೇಜಿಂಗ ಡಾಯರೆಕ್ಟರರಾದ ರಾ| ಕೇ. ವಾಮನ ಶೆಣೈರವರು ಉಭಯ ಜಿಲ್ಲೆಗಳೊಳಗಿನ ಪುರಾತನ ಸಂಬಂಧವನ್ನು ಹೇಳಿ ಎಲ್ಲರೂ ಭೇದಭಾವವನ್ನು ಹಿಡಿಯದೆ ತಮ್ಮದೇ ಸಂಸ್ಥೆ ಎಂಬದಾಗಿ ಗ್ರಹಿಸಬೇಕಾಗಿಯೂ ಹೇಳಿ ಬೇಂಕು ಜನರಿಗೆ ಪ್ರಯೋಜನವಾಗುವಂತೆ ನಡೆಯುವದೆಂದರು. ಆಭಾರಪ್ರದರ್ಶನವಾದ ಬಳಿಕ ತಾಂಬೂಲ ಸತ್ಕಾರಗಳೊಡನೆ ಸಮಾರಂಭವು ವಿಸರ್ಜನೆ ಹೊಂದಿತು. ಈ ಸಮಾರಂಭಕ್ಕೆ ಊರ ಪ್ರಮುಖರು ಸೇರಿದ್ದರು.

ಸುಪರಿಂಟೆಂಡಿಂಗ ಇಂಜನಿಯರರು ಭಟಕಳಕ್ಕೆ ನಿವಾಸದ ರಾಜ್ಯದ ಸ್ಥಳ ನೋಡಲಿಕ್ಕೆ ಹೋಗಿದ್ದರು. ಅಲ್ಲಿ ಸ್ಥಳ ನಿರ್ಣಯ ಮಾಡಿಕೊಂಡು ಈ ಒನ್ನೇ ಹೊನ್ನಾವರ ಇಲ್ಲಿ ಬಂದು ಹೊಸ ತಾಲೂಕ ಕಚೇರಿಯ ಸ್ಥಳ ನೋಡಿಕೊಂಡು ಹೋದರು. ಹಾಲಿ ದೇವರ ಗುಡ್ಡದ ಹಿಂಭಾಗದಲ್ಲಿ ತಾಲೂಕ ಕಚೇರಿ ಕಟ್ಟುವ ಕೆಲಸಕ್ಕೆ ಪ್ರಾರಂಭವಾಗಿದೆ. ಇದೇ ಬರುವ ಮಳೆಗಾಲದೊಳಗೆ ಈ ಕೆಲಸ ಪೂರ್ಣತೆಯಾಗುವದಂತೆ.

ಹೆಗಡೆಯ ಪತ್ರೊಬ್ಬರು ತಿಳಿಸುವದೇನಂದರೆ:- ತಾ. ೩೦-೯-೩೫ನೇ ಸಂಚಿಕೆಯಲ್ಲಿ ಶಿಕ್ಷಕರ ಮೇಲೆ ಸುದ್ದಿಗಾರರು ಆಕ್ಷೇಪ ಮಾಡುತ್ತಾರೆ. ಗಾಂಧಿ ಜಯಂತ್ಯುತ್ಸವದಲ್ಲಿ ಸೇರಬಾರದೆಂದು ಶಿಕ್ಷಕರು ಹುಡುಗರಿಗೆ ಹೇಳಿದರಾಗಿ ಇವರ ಆರೋಪ. ಆದರೆ ರಾಷ್ಟ್ರೀಯ ಭಕ್ತರೆನ್ನಿಸಿಕೊಂಡು ದೇಶಭಕ್ತಿಯ ಬಾಯ್ಬಡಿಕೆ ಹೇಳುವ ದೇಶಭಕ್ತರು ಮೆರವಣಿಗೆಯಲ್ಲಿ ಇರಲಿಲ್ಲ. ಚಹದಂಗಡಿಯಲ್ಲಿ ಕೂತು ಬೀಡಿ ಸಿಗರೇಟುಗಳನ್ನು ಸೇದುತ್ತಿದ್ದರು. ಉಂಡಾಡಿಗಳಾಗಿ ಪರದೇಶೀ ಸಕ್ಕರೆ ಹಾಕಿ ಚಹ ಕುಡಿಯುತ್ತಿದ್ದರು. ಪರದೇಶೀ ಸರಕಿನ ವ್ಯಾಪಾರ ಮಾಡುವವರು ದೇಶಭಕ್ತಿಯ ಬಾಯ್ಬಡಿಕರು. ಗಾಂಧಿ ಜಯಂತಿಯಲ್ಲಿ ದೇಶಭಕ್ತರು ದೇಶೀ ಸರಕುಗಳನ್ನು ಉಪಯೋಗಿಸುವ ನಿರ್ಧಾರ ಮಾಡಿದ್ದಾಗಲೀ, ವ್ಯಸನ ಬಿಟ್ಟಿದ್ದಾಗಲಿ ಇಲ್ಲ. ಇಂಥ ಉಂಡಾಡಿ ದೇಶಭಕ್ತರ ದೇಶಘಾತಕ ನಡತೆ ಜಗಜಾಹೀರವಿದ್ದರೂ ಬರೆಯದಿದ್ದದ್ದು ಆಶ್ಚರ್ಯ. ರಾ| ತಿಮ್ಮಣ್ಣ ಹೆಗಡೆ ಕಟ್ಟಿ ಇವರು ಮಾತ್ರ ಭಕ್ತಿಯಿಂದ ಗಾಂಧಿ ಜಯಂತ್ಯುತ್ಸವವನ್ನು ನೆರವೇರಿಸಿದರು. ನಿಜವಾದ ಗಾಂಧಿ-ಭಕ್ತರು ಇವರೊಬ್ಬರೇ. ಇತ್ಯಾದಿ.

ಹಂದಿಗೋಣದ ‘ಸುದ್ದಿ ಸಹ್ಯಾದ್ರಿ’ಗಳು ಬರೆಯುವದೇನಂದರೆ:— ಧಾರೇಶ್ವರದ ಶ್ರೀ ಧಾರಾನಾಥ ದೇವಸ್ಥಾನದಲ್ಲಿ ವ್ಯವಸ್ಥೆ ಸಟ್ಟಿಗಿಲ್ಲ. ದಸರೆಗೆ ಇಲ್ಲಿ ಶ್ರೀ ದೇವರ ಸವಾರಿ ಸಂಜೆ ೫|| ಘಂಟೆಯೊಳಗೆ ಬರುವ ರಿವಾಜು ಉಂಟು. ಈ ವರ್ಷ ೮ ಘಂಟೆ ರಾತ್ರಿಗೆ ಉತ್ಸವ ಪಲ್ಲಕ್ಕಿ ಬಂತು. ೫ ಘಂಟೆಗೆ ನೆರೆದ ಜನರು ಉತ್ಸವದ ದಾರಿ ಕಾಯ್ದು ಬೇಸತ್ತು ಮನೆಗೆ ಹಿಂತಿರುಗಿದರು. ೮ ಘಂಟೆಗೆ ೧೦-೧೨ ಜನರಿದ್ದರು. ಶ್ರೀ ದೇವರಿಗೆ ಇಲ್ಲಿ ಪನಿವಾರದ ನೈವೇದ್ಯ ಮಾಡಿ ಕೂಡಿದವರಿಗೆ ಹಂಚುವ ರಿವಾಜು ಉಂಟು. ಈ ಬಾರಿ ಅದು ಲೋಪವಾಗಿದೆ. ವ್ಯವಸ್ಥಾಪಕರು ದೇವತಾ ವಿನಿಯೋಗವನ್ನು ಸಕಾಲದಲ್ಲಿ ಪರಂಪರೆಯಂತೆ ನಡಿಸದೆ ಲೋಪ ಮಾಡುವದು ವಿಹಿತವಲ್ಲ. ಮೊಕ್ತೇಸರರೊಳಗೆ ಜವಾಬದಾರ ಜನರು ಕಡಿಮೆ. ದೇವಳ ಆಡಳಿತದವರು ಇತ್ತ ಕಡೆ ಲಕ್ಷಗೊಡಬೇಕು. ಇತ್ಯಾದಿ.

ಹೊನ್ನಾವರ— (ತಾ. ೧-೧೦-೩೫) ರಾ| ಎಸ್. ಕೇ. ಕಲ್ಲಾಪುರ ವಕೀಲ ಇವರು ಬರೆಯುವದೇನಂದರೆ:— ನಾನು ಮ್ಯುನಿಸಿಪಾಲಿಟಿಯಲ್ಲಿ ರಾಜಿನಾಮೆ ಕೊಟ್ಟ ಮೆಂಬರನು. ದ.ಗೀರ್ದೇವಿಯ ರಸ್ತೆಯ ಪ್ರಕರಣದ ಬಗ್ಗೆ ಹೇಸಿ ನಾನು ರಾಜಿನಾಮೆ ಕೊಡಲಿಲ್ಲ. ನನ್ನ ರಾಜಿನಾಮೆಗೂ ಆ ರಸ್ತೆಯ ಪ್ರಕರಣಕ್ಕೂ ಏನೂ ಸಂಬಂಧವಿಲ್ಲ. ಸ್ವತಃ ನನ್ನ ಕೆಲಸದ ಮೂಲಕ ಮ್ಯುನಿಸಿಪಾಲಿಟಿಯ ಕೆಲಸ ನಡಿಸಲಿಕ್ಕೆ ಅಸಾಧ್ಯವಾದ್ದರಿಂದ ನಾನು ರಾಜಿನಾಮೆ ಕೊಟ್ಟಿರುತ್ತೇನೆ. ನನಗೆ ಇಲೆಕ್ಷನ್ನಿನಲ್ಲಿ ನೆರವಾದ ಮತದಾರರಿಗೂ, ಸಹಕಾರಿ ಮೆಂಬರರಿಗೂ ನಾನು ಆಭಾರ ಮನ್ನಿಸುತ್ತೇನೆ. ಇತ್ಯಾದಿ.

(೧೩—೧೦—೩೫) ೮ ದಿನಗಳ ಹಿಂದೆ ಮಳೆಯಾಗಿತ್ತು. ನಿನ್ನೆಯೂ ಸಣ್ಣದೊಂದು ಮಳೆಯಾಗಿದೆ. ಗದ್ದೆ ಕೊಯ್ಲಿಕೆ ಶುರುವಾಗಿದೆ.

ಮ್ಯು| ಯು| ವಾರ್ಷಿಕ ಆಡಳಿತದ ವರದಿಯನ್ನು ಮುದ್ರಿಸಿ ಜನರಿಗೆ ಹಂಚಬೇಕಾಗಿ ಠರಾವಾಗಿ ಬಹಳ ಕಾಲವಾಯಿತು. ಆ ಬಗ್ಗೆ ವಾರ್ಷಿಕ ಅಂದಾಜ ಪತ್ರಿಕೆಯಲ್ಲಿ ೮ ನೆಸ್ಟ ಸಹ ಮಾಡಲ್ಪಟ್ಟಿದೆ. ಆದರೆ ವರದಿಯು ಮಾತ್ರ ಹೊರಗೆ ಬೀಳುವದಿಲ್ಲ! ಯಾಕೆ?

ಮುಳ್ಳಕೋಟ್ಟಗೆ ಎಂಬಲ್ಲಿ ೪ ಕಾಡಾನೆಗಳು ಬಂದು ಕಟ್ಟಿದ ತೋಟಗಳನ್ನು ತುಳಿದು ಹಾಳುಗೆಡಹಿದವು. ರಾ| ಹೆಗ್ಗೆರೆ ಭಟ್ಟರು ದನೆಯ ಸಮಾಚಾರ ತಿಳಿಸ್ಸುತ್ತಾರೆ.

ಕಾಳ ಕೃಷ್ಣನ ಪತ್ತೆ ಹಚ್ಚಲಿಕ್ಕೆ ಪೋಲೀಸರಿಗೆ ಬಹಳೇ ಪ್ರಯಾಸವಾಯಿತು. ಕೊನೆಗೆ ಬೈಲೂರದಲ್ಲಿ ಒಂದು ಮನೆಯಲ್ಲಿ ಅವನು ಸಿಕ್ಕಿದನು. ಅವನಿಗೆ ಹಿಡಿದಾಗ ಅವನ ಬಳಿಯಲ್ಲಿ ಕೋವಿಯಿತ್ತು. ಕೃಷ್ಣನು ಕೋವಿಯನ್ನು ಹಾರಿಸಿದನಂತೆ. ಸುದೈವದಿಂದ ಯಾರಿಗೂ ಘಾಯವಾಗಲಿಲ್ಲ. ಕೃಷ್ಣನಿಗೆ ಆಶ್ರಯ ಕೊಟ್ಟವನ ಮೇಲೆ ಸಹ ಖಟ್ಲೆಯಾಗುವದಾಗಿ ತಿಳಿಯುತ್ತದೆ

ಶ್ರೀ ದ.ಗೀರ್ದೇವಿ ರಸ್ತೆಯ ಕೆಲಸ ನಡಿಸಬಾರದಾಗಿ ತರಿಗೆದಾರರಾದ ರಾ| ಬಾಬು ಭಟ್ಟರವರು ಇಲ್ಲಿಯ ಸಬ್‌ಜಜ್ಜ ಕೋರ್ಟಿನಲ್ಲಿ ದಾವೆ ದಾಖಲ ಮಾಡಿ ಮ್ಯುನಿಸಿಪಾಲಿಟಿ ಮತ್ತು ಕಂಟ್ರಾಕ್ಟರರ ಮೇಲೆ ನಿಷೇಧ ಪ್ರತಿಬಂಧಕ ಹುಕುಮು ಪಡೆದಿದ್ದಾರೆ. ಕುಮಟೆಯ ರಾ| ಲಕ್ಷ್ಮಣ ಕಾಮತ ವಕೀಲರು ವಾದಿಯ ಪರವಾಗಿ ಕೆಲಸ ನಡಿಸಿದ್ದರು.

ಅಂಕೋಲಾ— (ತಾ. ೧೦-೧೦-೩೫) ಇಲ್ಲಿಯ ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಿಯ ದೇವಸ್ಥಾನವು ದೊಡ್ಡದು. ಕೀರ್ತಿಯಿಂದಲೂ ದೊಡ್ಡದು; ಐಶ್ವರ್ಯದಿಂದಲೂ ದೊಡ್ಡದು. ಆದಾಗ್ಯೂ ಮೊಕ್ತೇಸರರಿಗೆ ಹಣದ ಹೆಚ್ಚಿಕೆ ಬೆನ್ನು ಬಿಡದು. ಬಹು ಭಕ್ತರು ಶ್ರೀ ದೇವರ ಸೇವೆ ಮಾಡಲಪೇಕ್ಷಿಸಿದರೆ ಅವರಿಗೆ ನಿಯಮಿತ ಖರ್ಚಿನ ಹೊರಗೆ ಕಾಣಿಕೆ ಪಟ್ಟಿ ಕೊಟ್ಟು ಕಷ್ಟ ಕೊಡುತ್ತಾರೆ. ಇದರಿಂದ ಭಕ್ತಸಮಾಜದಲ್ಲಿ ಉದ್ವಿಗ್ನತೆಯುಂಟಾಗುತ್ತದೆ. ಮೇಲಾಗಿ ನವರಾತ್ರಿ ಉತ್ಸವವು ಇಲ್ಲಿ ದೊಡ್ಡದು. ಈ ಉತ್ಸವಕ್ಕಾಗಿ ನಾಲ್ಕೂ ಕಡೆಯಿಂದ ಭಕ್ತರು ಬರು— ಆದಾಗ್ಯೂ ಹರಿದಾಸರೊಬ್ಬರಿಗೆ ಕರೆಸಿ ಹರಿಕೀರ್ತನ ಮಾಡಿಸಬೇಕೆಂದು ಮೊಕ್ತೇಸರರಿಗೆ ಅನಿಸುವದಿಲ್ಲ. ಶ್ರೀ ದೇವರ ಭಜಕ ಸಮಾಜದವರು ಎಚ್ಚರಾಗಿ ವಿಚಾರ ಮಾಡಬೇಕು. ಇಂಥ ದೇವಸ್ಥಾನಗಳಲ್ಲಿ ನವರಾತ್ರಿಯಂಥ ಉತ್ಸವ ಪ್ರಸಂಗಗಳಲ್ಲಿ ಹರಿಕೀರ್ತನೆಯು ಏರ್ಪಾಟಿಲ್ಲದಿದ್ದರೆ ಅದೊಂದು ನ್ಯೂನತೆಯೇ, ಇತ್ಯಾದಿ

ಶ್ರೀ ಗಣೇಶೋತ್ಸವದ ಕಾಲಕ್ಕೆ ಉತ್ಸವಮಂಡಳದವರು ವಿದ್ಯಾರ್ಥಿಗಳ ಕಡೆಯಿಂದ "ಸಾರ್ವಜನಿಕ ಗಣೇಶೋತ್ಸವದ ಸಮಾಜ ಸುಧಾರಣಾ ಕಾರ್ಯದಲ್ಲಿ ಮಹತ್ವ" ಎಂಬ ವಿಷಯದ ಮೇಲೆ ನಿಬಂಧಗಳನ್ನು ಕರೆಯಿಸಿದ್ದರೆಂಬುದು "ವೃತ್ತ"ದಲ್ಲಿ ಈ ಹಿಂದೆ ಪ್ರಕಟವಾಗಿತ್ತು. ೪೪ ವಿದ್ಯಾರ್ಥಿಗಳು ನಿಬಂಧಗಳನ್ನು ಕಳಿಸಿದ್ದರು. ಎಜ್ಯುಕೇಶನ ಹೈಸ್ಕೂಲಿನ ಕು| ಗೋಪಾಳ ಹಾಂವಶೇಕರ ಮಾಮಾನ ಶ್ರೀನಿವಾಸ ಪೈ ಮತ್ತು ಮನೋಹರ ಮಾಂಗೇಶ ನಾಡಕರ್ಣಿ ಈ ಮೂವರ ನಿಬಂಧಗಳು ಉತ್ತಮವೆಂದು ಪರೀಕ್ಷಕರು ನಿರ್ಣಯಿಸಿದಂತೆ ಅವರಿಗೆ ಇನಾಮುಗಳು ಕೊಡಲ್ಪಟ್ಟವು. ಬೇರೆ ೬ ಹುಡುಗರಿಗೆ ಸಾಂತ್ವನ-ಪಾರಿತೋಷಕಗಳನ್ನು ಕೊಡಬೇಕಾಗಿ ಪರೀಕ್ಷಕರು ಶಿಫಾರಸು ಮಾಡಿದ್ದರು. ಇವರಲ್ಲಿ ಕು| ಪ್ರಮಿಲಾ ಶೇಟಗ ಎಂಬ

ವಿದ್ಯಾರ್ಥಿನಿಯು ತನ್ನ ನಿಬಂಧವನ್ನು ಹಿಂದೀ ಭಾಷೆಯಲ್ಲಿ ಬರೆದು ತಿಳಿಸಿದ್ದಳು. ಮೇಲಾಟದಲ್ಲಿ ಯಶಸ್ವಿಯಾದ ಹುಡುಗರಿಗೆ ಎಸ್ತರ್ ಹೈಸ್ಕೂಲಿನ ಶಾರದಾ ಪೂಜೆಯ ಸಮಾರಂಭದ ಕಾಲಕ್ಕೆ ಮಾ। ಕೇಪಗಿರಿ ಸುಬ್ರಾಯ ಕಾಮತರ ಕೈಯಿಂದ ಬಹುಮಾನಗಳು ಕೊಡಿಸಲ್ಪಟ್ಟವು.

ಎಸ್ತರ್ ಹಾಯ್‌ಸ್ಕೂಲ ವಿದ್ಯಾರ್ಥಿಗಳ ಶ್ರೀ ಶಾರದಾ ಪೂಜೆಯ ಉತ್ಸವವು ಕಳೆದ ವಾರ ವಿಜೃಂಭಣೆಯಿಂದ ನೆರವೇರಿತು. ಶ್ರೀ ಶಾರದಾಂಬೆಯ ಪ್ರತಿಮೆಯ ಮೂರ್ತಿಯು ಬಹಳ ಅಂದವಾಗಿತ್ತು. ಹುಡುಗರ ಹಾಡಗಳೂ, ಚಿತ್ರ-ಪ್ರಯೋಗಗಳೂ ನಡೆದವು. "ಬಿ. ಎ." ಎಂಬ ನಾಟಕದ ಪ್ರಯೋಗವು ಮಾಡಿ ತೋರಿಸಲ್ಪಟ್ಟಿತು.

ಹಳಿಯಾಳ— ಇಲ್ಲಿಯ ಗೋರಕ್ಷಣ ಸಂಸ್ಥೆಯು ವಿದ್ಯಮಾನ ಜರುಗಬೇಕೆಂದು ಮಾಡಿದ "ಶೇತಕಿ ಜಾನುವಾರಗಳ ಪ್ರದರ್ಶನ" ಇದೇ ಬರುವ ನವಂಬರ ತಾ. ೩-೪-೫ನೇಗೆ ನಡೆಯುವದು. ಜಾನುವಾರಗಳ ಪ್ರದರ್ಶನದಲ್ಲಿ ಆಕಳು, ಎತ್ತು, ಹೋರಿಗಳು ತೋರಿಸಲ್ಪಡುವವು. ಜಾನುವಾರಗಳ ಬಗ್ಗೆ ಯೋಗ್ಯತೆಯಂತೆ ಬೆಳ್ಳಿ-ಬಂಗಾರಗಳ ಪದಕಗಳೂ, ಬೇರೆ ಮೌಲ್ಯವುಳ್ಳ ಇನಾಮುಗಳೂ, ಪ್ರಶಸ್ತಿಪತ್ರಗಳೂ ಕೊಡಲಾಗುವವು. ಪ್ರದರ್ಶನ ಕಾಲಕ್ಕೆ ಕ್ರಯ-ವಿಕ್ರಯ ಮಾಡಲಿಕ್ಕೆ ಅನುವು ದೊರೆಯುವದು. ದೂರದಿಂದ ಜಾನುವಾರಗಳನ್ನು ತರುವವರು ಮುಂಚಿತವಾಗಿ ತಿಳಿಸಿದಲ್ಲಿ ಅವರಿಗೆ ಜಾಗೆಯ ಹಾಗೂ ಮೇವು-ತಿನಸುಗಳ ವ್ಯವಸ್ಥೆ ಮಾಡಲಾಗುವದು. ಈ ಪ್ರದರ್ಶನದ ಜೊತೆಗೆ ಒಕ್ಕಲತನಕ್ಕೆ ಉಪಯುಕ್ತವಾದ ಭತ್ತದ ನಮೂನೆಗಳು, ಕೂಡ ಹೊಸ ಆಯುಧಗಳು, ಗೊಬ್ಬರಗಳು, ತರತರದ ಬೆಳೆಗಳು ಇವನ್ನು ತೋರಿಸುವ ಬೇಸಾಯ ಬಗೆಯನ್ನು ತಿಳಿಯಬೇಕೆಂದು ಆಲೋಚಿಸಿಯದೆ. ಪ್ರದರ್ಶನದಲ್ಲಿ ತಜ್ಞರ ವ್ಯಾಖ್ಯಾನಗಳೂ, ಪ್ರಯೋಗಗಳೂ ಆಗುವವು. ರೈತ ಜನರು ಪ್ರದರ್ಶನಕ್ಕೆ ಬಂದು ಲಾಭ ಪಡೆಯಬೇಕಾಗಿ ವಿನಂತಿ. ರೈತ ಜನರಿಗೆ ಉಪಯುಕ್ತವಾದ ವಸ್ತು-ಒಡವೆಗಳನ್ನು ಪ್ರದರ್ಶನದಲ್ಲಿಡಲಿಕ್ಕೆ ವ್ಯಾಪಾರಿಗಳಿಗೂ, ಕೈಗಾರಿಕೆಯವರಿಗೂ ಒಳ್ಳೇ ಸಂಧಿಯಿದೆ. ಮುಂಚಿತವಾಗಿ ತಿಳಿಸಿದರೆ ಸ್ಟಾಲುಗಳ ವ್ಯವಸ್ಥೆ ಮಾಡಿ ಕೊಡಲಾಗುವದು. ವಿಶೇಷ ಮಾಹಿತಿಯನ್ನು ಪ್ರದರ್ಶನ ಕಾರ್ಯದರ್ಶಿಯಿಂದ ಪಡೆಯಬಹುದು.

(ತಾ. ೧೧—೧೦—೩೫) ಹೊಲಗಳಿಗೆ ಇನ್ನೂ ಮಳೆ ಬೇಕು. ಅಲ್ಲಲ್ಲಿ ಚಳಿಜ್ವರದ ಬಾಧೆಯಿದೆ

ನಾಡಹಬ್ಬವಾದ ನವರಾತ್ರಿ ಉತ್ಸವವು ಈ ವರ್ಷ ಬಹಳ ಸಂಭ್ರಮದಿಂದ ಜರುಗಿತು. ಶ್ರೀ ಉಡಚಮ್ಮ ದೇವಿಯ ಗುಡಿಯಲ್ಲಿ ರಾ। ಲಕ್ಷ್ಮಣಬುವಾ ಖಾನಾಪೇಟಕರರ ಕೀರ್ತನೆಗಳು ನಡೆಯುತ್ತಿದ್ದವು. ಸ್ತ್ರೀ-ಪುರುಷರು ಬಹಳ ಕೂಡುತ್ತಿದ್ದರು. ಮುಂದೇ ನವಮಿಯ ದಿನ ಗಾಡಿಗಳನ್ನು ಆನೆಗಳಂತೆ ಸಿಂಗರಿಸಿ ಮೆರೆಸಿದರು. ದಸರೆಯ ದಿನ ಸೀಮೋಲ್ಲಂಘನೆಯ ಉತ್ಸವವಾಯಿತು. ಆ ಕಾಲಕ್ಕೆ ಕೆಲವರು ಲಾಠಿ, ಲೇಝೀಮ, ದಾಂಡಪಟ್ಟಾ ಮುಂತಾದ ವ್ಯಾಯಾಮಗಳನ್ನು ಮಾಡಿತೋರಿಸಿದರು

ಕಳೆದ ೮ಮಿ ದಿನ ರಾತ್ರಿ ಶ್ರೀ ದೇವಮ್ಮ ದೇವಿಯ ಗುಡಿಯಲ್ಲಿ ಕಳವಾಯಿತು. ಕಳ್ಳರು ಕಿಡಕಿಯಲ್ಲಿ ಗಂಡಿಮಾಡಿ ಒಳಹೊಕ್ಕರು. ಸುದೈವದಿಂದ ದೇವಿಯ ಮೈ ಮೇಲಿನ ಹೆಚ್ಚಿನ ಬೆಲೆಯುಳ್ಳ ಆಭರಣಗಳನ್ನು ಪಂಚರು ಅದೇ ರಾತ್ರಿ ತೆಗೆಸಿಟ್ಟದ್ದರಿಂದ ಕಳ್ಳರು ದೇವಿಯ ಮಂಗಳಸೂತ್ರ ಮುಂತಾದ ಕಿರುಕೋಳ ಆಭರಣಗಳನ್ನು ಅಪಹರಿಸಿಯೇ ತೃಪ್ತಿ ಪಡೆದರು. ಕಳವಿನ ತಪಾಸನಡೆದಿದೆ.

ಜಾನುವರ ಪ್ರದರ್ಶನ ಕಮಿಟಿಯ ಸಭೆಯಾಗಿ, ಜಾನುವರ ಪರೀಕ್ಷೆ, ಧಾನ್ಯ ಮುಂತಾದವುಗಳ ಪರೀಕ್ಷೆ, ಪ್ರದರ್ಶನ ವಗೈರೆ ಬಗ್ಗೆ ಹಲವು ಉಪ-ಮಂಡಳಿಗಳು ನೇಮಿಸಲ್ಪಟ್ಟವೆ. ಪ್ರದರ್ಶನದ ತಯಾರಿ ಎಚ್ಚರದಿಂದ ನಡೆದಿದೆ.

ಕಾರವಾರ— ಗೋವೆಯಿಂದ ಇತ್ತ ಕಡೆಗೆ ಸುಂಕ ತಪ್ಪಿಸಿ ಕಳವುತನದಿಂದ ಸಿಗರೇಟುಗಳು ಆಮದಾಗುತ್ತಿವೆಯೆಂದು ಅಧಿಕಾರಿಗಳ ಅನುಮಾನವಿದೆ ಅವರು ಈ ಬಗ್ಗೆ ತಪಾಸ ನಡೆಸುತ್ತಿದ್ದಾರೆ. ತಾ. ೯ಕ್ಕೆ ಇಲ್ಲಿಂದ ಕೊಲ್ಹಾಪುರಕ್ಕೆ ಹೋಗುವ ಒಂದು ಮೋಟಾರ ಗಾಡಿಯಲ್ಲಿ ಕೆಲವು ಸಿಗರೇಟ-ಪೆಟ್ಟಿಗೆಗಳು ಜಪ್ತ ಮಾಡಲ್ಪಟ್ಟಿವೆ

ಈಗ ಈ ಊರಲ್ಲಿ ಮ್ಯುನಿಸಿಪಾಲಿಟಿಯವರು ಟರ್ಮಿನಲ್ ಟ್ಯಾಕ್ಸದ ಪದ್ಧತಿಯನ್ನು ಕೈಕೊಂಡಿದ್ದಾರೆ. ಅದರಂತೆ ಪ್ರತಿ ವಿಮಾನ ಟಿಕೀಟಿಗೆ, ಅದರೊಳಗಿನ ವಿಮಾನಗಳ ಕಿಮ್ಮತ್ತು ಏನೇ ಇರಲಿ, [illegible] ಇರಲಿ- ೩ ಪೈ ತೆರಿಗೆ! ಮೇಲೆ ಪುನಃ ಮಾರ್ಕೆಟ ಟ್ಯಾಕ್ಸ ೩ ಪೈ! ಇಷ್ಟು ತೆರಿಗೆ ಕೊಡಬೇಕಾದದು ನ್ಯಾಯವಲ್ಲವಾಗಿ ನಮ್ಮ ವಿಮಾನಗಾರರು ಮ್ಯುನಿಸಿಪಾಲಿಟಿಗೆ ಅರ್ಜಿ ಮಾಡಿದ್ದರು. ತಾ. ೨೮-೯-೩೫ಕ್ಕೆ ಕೂಡಿದ ಮ್ಯು। ಸಭೆಯಲ್ಲಿ ವಿಮಾನ ಟಿಕೀಟುಗಳ ಮೇಲಿನ ಟರ್ಮಿನಲ್ ಟ್ಯಾಕ್ಸ ರದ್ದು ಪಡಿಸಬೇಕಾಗಿ ಒಂದು ಸೂಚನೆ ಸಹ ಬಂದಿತ್ತು. ಅಧ್ಯಕ್ಷರು ಅದನ್ನು "ನಿಯಮಬಾಹ್ಯ"ವೆಂದು ತಿರುಗಿಸಿ ಚರ್ಚೆಯನ್ನೇ ಮಾಡಗೊಡಲಿಲ್ಲ! ಅಧ್ಯಕ್ಷರ ವೃತ್ತಿಯಿಂದ ಸಭೆಯಲ್ಲಿ ಕ್ಷೋಭೆಯುಂಟಾಯಿತು. ರಾ। ಕಾನಡೇಕರ ವಕೀಲರು ಎದ್ದುನಿಂತು ಮಾತಾಡಲು ಆರಂಭ ಮಾಡುವಷ್ಟರಲ್ಲಿ ಅಧ್ಯಕ್ಷರು "ಕೂಡುಕೊಳ್ಳಿರಿ, ಶಾಲೆಯ ಹುಡುಗರಂತೆ ನಡೆಯಬೇಡಿರಿ" ಎಂದು ಗುದ್ದರಿಸಿದರು! ಮೊನ್ನೆ ಮೊನ್ನೆ ಮುಂಬಯಿ ಕೌನ್ಸಿಲಿನಲ್ಲಿ ನಡೆದ ಕಂಬ್ಳಿ-ಗಂಗೊಳ್ಳಿ ತಿಕ್ಕಾಟದಲ್ಲಿ, ಸಭಾಸದರು ತಮ್ಮ ಸಂಗಡಿಗರಿಗೆ ಇಂಥ ಅಪಮಾನಕಾರಕ ಶಬ್ದಗಳನ್ನಾಡುವದು ಯೋಗ್ಯವಲ್ಲೆಂದು ಕೌನ್ಸಿಲ ಅಧ್ಯಕ್ಷರು ಕೊಟ್ಟ ನಿರ್ಣಯವು ನಮ್ಮ ಅಧ್ಯಕ್ಷರ ಕಣ್ಣಿಗೆ ಬಿದ್ದಿಲ್ಲವಿರಬಹುದು! ಅಧ್ಯಕ್ಷ-ಸಭಾಸದರ ತಿಕ್ಕಾಟದಲ್ಲಿ ಬಡ ವಿಮಾನಗಾರರ ಅರ್ಜಿಗಳು ಗಾಳಿ ತಪ್ಪಿ ಬಳದುಹೋದವು!!

'ನ್ಯಾಯ ಪ್ರಿಯ' ರೊಬ್ಬರು ಬರೆಯುತ್ತಾರೆ:— 'ಕೆಲವು ತಿಂಗಳ ಹಿಂದೆ ಅವರ್ಸೆ ನಾಕೆಯ ಹತ್ತರ ಒಂದು ಮೋಟಾರ ಅಪಘಾತವಾಗಿ ಹರಿಕಂತ್ರ ಜಾತಿಯ ಹುಡುಗಿಯೊಬ್ಬಳು ಅದಕ್ಕೆ ಬಲಿ ಬಿದ್ದಿದ್ದಳು. ಆ ಬಗ್ಗೆ ಡ್ರೈವ್ಹರನ ಮೇಲೆ ಏನೂ ಪ್ರಕರಣ ನಡೆದದ್ದು ಕೇಳಿಬಂದಿಲ್ಲ! ಈಗ ಕೆಲವು ದಿವಸಗಳ ಹಿಂದೆ ಮಾಜಾಳಿ ಸಮೀಪದ ಒಂದು ಅಪಘಾತ ಸಂಭವಿಸಿ ಒಬ್ಬ ಹೆಂಗಸು ಮೋಟಾರದಡಿಗೆ ಬಿದ್ದು ಸತ್ತು ಹೋಗಿದ್ದಾಳೆ. ಈ ಬಗ್ಗೆ ಚೌಕಶಿ ಆಗುವದೋ!" ಇತ್ಯಾದಿ.

'ಒಬ್ಬ ಖಾವಿರ 'ಮೆಂಬರ'ರು ತಿಳಿಸುತ್ತಾರೆ:— ಕಳೆದ ತಾ. ೭—೧೦—೩೫ಕ್ಕೆ ಇಲ್ಲಿಯ (ಕಾರವಾರ) ವಿಮಾನಪೇಟೆಯಲ್ಲಿ ದಾದು ಎಂಬ ಹೆಸರಿನ ಭಂಗಿಯು ಸರಾಯಿ ಕುಡಿದು ಬಹಳ ಧಾಂದಲೆ ಎಬ್ಬಿಸಿದನು. ವಿಮಾನ ಟಿಕೀಟುಗಳನ್ನು ಬೀಸಾಡುತ್ತಿದ್ದನು ಹೆಂಗಸರಿಗೆ ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದನು. ಕೆಲವರು ಸಮೀಪದಲ್ಲಿದ್ದ ಪೋಲೀಸ ಕಚೇರಿಗೆ ಹೋಗಿ ಫೌಜದಾರರ ಕಡೆ ದೂರಿಕೊಂಡರು. "ಅವನು ಮ್ಯುನಿಸಿಪಾಲಿಟಿಯ ನೌಕರನು. ಅವನ ಬಂದೋಬಸ್ತು ಮಾಡುವದು ನಮ್ಮ ಕೆಲಸವಲ್ಲ" ಎಂದು ಹೇಳಿ ಫೌಜದಾರರು ಅವರಿಗೆ ಮ್ಯು। ಅಧ್ಯಕ್ಷರ ಕಡೆಗೆ ಕಳಿಸಿಕೊಟ್ಟರು. ಅಧ್ಯಕ್ಷರು ಪೋಲೀಸರ ಕಡೆಗೆ ಬೆರಳು ತೋರಿಸಿದರು. ಕೊನೆಗೆ ರಾ। ವಾಮನ ಕಾರ್ವೆ ವಕೀಲರು ಬಂದು ಪೋಲೀಸರ ಸಹಾಯದಿಂದ ಸದ್ರಿ ಭಂಗಿಯನ್ನು ಪೇಟೆಯಿಂದ ಹೊರಹಾಕಿದರು. [illegible] ಸದ್ರಿ ಭಂಗಿಯು ಮೇಲಿಂದ ಮೇಲೆ ಸರಾಯಿ ಕುಡಿದು ಮಾರ್ಕೆಟದಲ್ಲಿ ಅಲೆಯುತ್ತಾನೆ. ಡಿ. ಪಿ. ಆಕ್ಟಿನ ಕಲಂ ೬೧ (ಪಿ) ಮತ್ತು (ಆರ್) ದನ್ವಯ ಖಟ್ಲೆ ಹೂಡಿ ಪೋಲೀಸರು ಭಂಗಿಯ ಬಂದೋಬಸ್ತ ಮಾಡಬಾರದೇ?

ಬಾಜ 'ನ್ಯೂ ಇಂಗ್ಲಿಷ ಸ್ಕೂಲ'ನ ವಿದ್ಯಾರ್ಥಿಗಳು ಈ ವರ್ಷ ಶಾರದೋತ್ಸವವನ್ನು ವಿಶೇಷ ವಿಜೃಂಭಣೆಯಿಂದ ಜರುಗಿಸಿದರು. ಮಹಾನವಮಿಯ ದಿನ ಶ್ರೀ। ಬೇಂದ್ರೆಯವರ 'ಜಾತ್ರೆ' ಎಂಬ ಏಕಾಂಕ ನಾಟಕವನ್ನೂ, ಪ್ರೊ। ಜಡಗೀರದಾರರ 'ನಿರುತ್ತರ ಕುಮಾರ' ಎಂಬ ಪ್ರಹಸನವನ್ನೂ 'ಮೂರು ಸೇರು ಮಾಂಸ' ಎಂಬ ಇನ್ನೊಂದು ದೃಶ್ಯವನ್ನೂ ವಿದ್ಯಾರ್ಥಿಗಳು ಯಶಸ್ವಿಯಾಗಿ ಅಭಿನಯಿಸಿ ತೋರಿಸಿದರು. 'ಜಾತ್ರೆ'ಯಲ್ಲಿ ಹಾಸ್ಯದ ಪಾತ್ರ ವಹಿಸಿದ ಕಾಮತ, ದೊರೆಯಾದ ರಾಣೆ, 'ನಿರುತ್ತರ ಕುಮಾರ'ದಲ್ಲಿ ಕೃಷ್ಣನಾದ ಕೇ. ಪಿ. ಸಾವಂತ, ಉತ್ತರ ಕುಮಾರನಾದ ಡಿ. ವಿ. ನಾಯ್ಕ, 'ಮೂರು ಸೇರು ಮಾಂಸ'ದಲ್ಲಿ ವಿಜಯೇಂದ್ರ ಕುಮಾರನಾದ ಸೊಳಗಾಂವಕರ, ಬಾಲಕಚಂದನಾದ ಖಲವಾಡೇಕರ ಇವರೆಲ್ಲರೂ ತಮ್ಮ ಅಭಿನಯ ಕೌಶಲ್ಯವನ್ನು ಚನ್ನಾಗಿ ವ್ಯಕ್ತಪಡಿಸಿದರು. ಸುಶೀಲಾ ದಿವೇಕರ ಇವಳ ಸಂಗೀತವೂ ಪಿ. ಎಚ್. ನಾಯ್ಕ ಎಂಬುವನ ಪೋವಾಡ ಗಾಯನವೂ ಆದವು. ಆ ದಿನ ಜಾಗವಿಲ್ಲದೆ ಅನೇಕರು ಹಿಂದಿರುಗಿ ಹೋಗಬೇಕಾದ್ದರಿಂದ ಲೋಕಾಗ್ರಹಕ್ಕಾಗಿ ಮೇಲಿನ ಕಾರ್ಯಕ್ರಮವೇ ದಸರೆಯ ದಿನ ರಾತ್ರಿ ಇಡಲ್ಪಟ್ಟಿತು! ಅದಕ್ಕೂ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ಕಾರ್ಯಕ್ರಮವನ್ನು ಯಶಸ್ವಿ ಮಾಡುವದರಲ್ಲಿ ಶಾಲೆಯ ಹಿಂದಿನ ವಿದ್ಯಾರ್ಥಿಗಳಾದ ಸದಾನಂದ ಫೌಂಡ ಪಂಢರೀನಾಥ ಮಾಂಜರೇಕರ ಇವರ ಸಹಾಯವು ವಿಶೇಷವಾಗಿತ್ತು ಇತ್ಯಾದಿ ಪ್ರೇಕ್ಷಕರೊಬ್ಬರು ತಿಳಿಸುತ್ತಾರೆ.

ಕಾರ್ಯದರ್ಶಿ ಕರ್ನಾಟಕ-ಸಂಘ ಕಾರವಾರ ಇವರು ಬರೆಯುವದೇನಂದರೆ:- ಸಂಘವು ಪ್ರಕಟ ಮಾಡಬೇಕೆಂದಿದ್ದ 'ಕವನ ಸಂಗ್ರಹ'ಕ್ಕೆ ಶ್ರೀ। ದಿನಕರ ದೇಸಾಯಿಯವರ ಕವನಗಳು ಇನ್ನೂ ಬಾರದೆ ಇದ್ದದರಿಂದ ಪುಸ್ತಕವು ಬರುವ ನವಂಬರ ತಿಂಗಳ ಮೊದಲನೆಯ ವಾರದಲ್ಲಿ ಅಚ್ಚಾಗಿ ಬರುವಂತೆ ಕಾಣುವದಿಲ್ಲ. ಕವನ ಸಂಗ್ರಹಕ್ಕೆ ವಿಲಂಬವಾಗುವದರಿಂದ ಸಮ್ಮೇಲನ ಕಾರ್ಯ ಮಾದರಿ ಮುಂದರಿಯುವದು ಅನಿವಾರ್ಯವಾಗಿದೆ. ಎಂಬುದನ್ನು ಸಂಘದ ಸದಸ್ಯರೂ ಉಳಿದ ಸಂಘದ ಅಭಿಮಾನಿಗಳೂ ಗಮನಿಸುವರೆಂದು ನಂಬಿಗೆ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ। ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ತಿಳಿಯುವದು.

Kumta Agents -
D. K. Nayak Bros.
D. S. Pai.
K. N. Nayak.
Honavar Agent:
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State

ಮುಂಬಯಿ ಕಾಯಿದೆ ಕೌನ್ಸಿಲು.

[೫ನೇ ಪಾನಿನಿಂದ ಮುಂದರಿಸಿದ್ದು]

ಈ ರೀತಿ ಮನಸ್ಸಿಗೆ ಈ ಕೃತಿಯ ಅಸಮ್ಯಕ್ತ್ವ ಪ್ರಾರಂಭವಾದದ್ದು ಡಿ| ಮೆಜಿಸ್ಟ್ರೇಟರು ಜನರಿಗೆ ತಮ್ಮ ತಮ್ಮ ಗ್ರಾಮಗಳೊಳಗಿಂದ ಗಡಿಪಾರು ಮಾಡಿ ಇಲ್ಲವೆ ಯೊಳಗೆ ಜೇಲದಲ್ಲಿ ಹೋಗಿ ಉಪವಾಸ ಸಾಯಲು ಅಪ್ಪಣೆ ಕೊಡಬಹುದು. ಉತ್ತರ ಸಿಂಧ ಪ್ರಾಂತದಿಂದ ದಕ್ಷಿಣಕ್ಕೆ ಕನ್ನಡ ಜಿಲ್ಲೆಯ ಪರ್ಯಂತ ಊರಿಗೆ ಓಡಾಡಿಸಬಹುದು. ಪೋಲೀಸರ ಅಪಮಾನಗೊಳಿಸುವದಕ್ಕಾಗಿ ಬೇಕಾದ ನಮೂನೆಯಿಂದ ಶಿಕ್ಷೆಗಳನ್ನು ಹೊರಿಸಬಹುದು. ನನಗೆ ಸಮಾಜಸತ್ತಾವಾದದ ರಶಿಯಾ ದೇಶದ ಮಾಹಿತಿ ಕಡಿಮೆ. ಬೊಲ್ಶೆವಿಯಾನೆ ಮುಸೋಲಿನಿ ಪಂಥದ, ಇಟಲಿ ಯಾನೆ ಹಿಟ್ಲರ ಪಂಥದ ಕಾಯಿದೆಗಳನ್ನು ನಾನು ಸಂಪೂರ್ಣವಾಗಿ ಅರಿಯೆನು. ಬೇರೆ ಬೇರೆ ದೇಶಗಳ ಕಾಯಿದೆಗಳನ್ನು ನಾ ಕೇಳಿದ ಮಟ್ಟಿಗೆ ಒಳ್ಳೆ ಸಂಸ್ಥಾನದೊಳಗಿನ ಕಾಯಿದೆಗಳನ್ನು ನಾ ಒಳ್ಳೆ ಈಗಿನ ಕಾಯಿದೆಯ ಸ್ವರೂಪದ ಕಾಯಿದೆ ನನಗೆಲ್ಲಿಯೂ ಸಿಗಲಿಲ್ಲ. [illegible] ಲಾರ್ಡ [illegible] ಸಾರಿ ಮಂಡಿಸಿದ [illegible] ವಿಚಾರ ಮಾಡಿದ ಹೊರತು ಕ್ರಿಮಿನಲ್ ಪ್ರೊಸಿಜರ ಕೋಡಿನಂತೆ ಶಿಕ್ಷೆ ಕೊಡತಕ್ಕದ್ದಿಲ್ಲ. ಆದರೆ ಈ ಕಾಯಿದೆಯಲ್ಲಿ ಆರೋಪಿಗೆ ವಿಚಾರ ಇಲ್ಲದೆ ಅಪರಾಧಿ ಎಂದು ತಿಳಿಸುವದಿಲ್ಲ. ಅವರ ಸಲುವಾಗಿ ಕೋರ್ಟಿಗೆ ಹೋಗಲು ಪ್ರತಿಬಂಧವಿದೆ. ಈ ಕಾಯಿದೆಯ ಕರಡು ಸರಕಾರದ ಒಂದೊಂದಾಗಿ [illegible] ನಾನು ಪರಾಂಬರಿಸಿ ನೋಡಿದೆ. ಆದರೂ ನನಗೆ ಈ ಕಾಯಿದೆ ಅವಶ್ಯವಿರುವದೆಂದು ತೋರುವದಿಲ್ಲ. ಈ ಕಾಯಿದೆ ಮತ್ತು ಅದರಿಂದ ವಿಧಿಸಿದ ಕ್ರಮ ಇವೆರಡೂ ಅದರ [illegible] ನಿರ್ಣಯ ಕೊಳ್ಳತಕ್ಕದ್ದಕ್ಕೆ ಸ್ವಾತಂತ್ರ್ಯ ಕೆಡಿಸುವವನಿಗೆ ಮೆಜಿಸ್ಟ್ರೇಟರು ತಕ್ಕಷ್ಟು ಪ್ರಮಾಣದ [illegible] ವಾಗಿ ತೀರ್ಪು ಕೊಟ್ಟರೂ ಸಹ ಕೋರ್ಟಿನಲ್ಲಿ ಅವರ ವಿಚಾರವಾಗುತ್ತದೆ. ಇಂಥ ರಾಜ್ಯಪದ್ಧತಿಯಲ್ಲಿ ಸತ್ಯಾಗ್ರಹ ಮೊದಲಾದವರಿಗೆ ವಿಚಾರವಾಗಿ ಶಾಸನವಾಗಬೇಕೆಂದು ನನ್ನ ಅಭಿಪ್ರಾಯವಿದೆ. ನನಗೆ ಗವರ್ನರರ ಮೊದಲ ದ ಅಧಿಕಾರಿಗಳಿಗೆ ಈ ದೇಶದಲ್ಲಿ ಸಂಬಂಧವಿದೆ. ನಾನು ಬ್ರಿಟಿಶ ರಾಜ್ಯದ ಸೇವೆ ಮಾಡಿದ್ದೇನೆ, ಸಂಸ್ಥಾನಿಕರ ಸೇವೆ ಮಾಡಿದ್ದೇನೆ. ಇಬ್ಬರ ಹಿತವನ್ನೂ ನಾನು [illegible] ನಾನು ಸಮಾಜಸತ್ತಾವಾದಿಯಲ್ಲ. [illegible] ದಿಂದ ಕ್ರಾಂತಿ ಮಾಡುವವನಲ್ಲ. ನಾನು [illegible] ಯೂ ಅಲ್ಲ. ಸಮಾಜಸತ್ತಾವಾದಿಗಳು ಜನರ ಲೂಟಿಗಾರರೆಂದು ನನಗೆ ನಿಂದಿಸಿದರೂ ಪರಿವೆಯಿಲ್ಲ. ಕ್ರಾಂತಿಕಾರಕರು ನನಗೆ ಸರ್ಕಾರದ [illegible] ನೆಂದು ಹಳಿದು ನನ್ನ ಮೇಲೆ ಬಾಂಬು ಒಗೆದರೂ ನನ್ನ ಆಕ್ಷೇಪವಿಲ್ಲ. ನಾನು ದೇಶಾಭಿಮಾನಶೂನ್ಯನೆಂದೂ ಸ್ವಾರ್ಥಪರನೆಂದೂ ನಿಂದಿಸಿ ಬಹಿಷ್ಕರಿಸಿದರೂ ನನ್ನ ಅಭ್ಯಂತರವಿಲ್ಲ. ನನ್ನ ಕಲ್ಪಿತ ರಕ್ಷಣೆಗಾಗಿ ಈ ಕಾಯಿದೆಯು ಬೇಡ. ಈ ಕಾಯಿದೆಗಿಂತ ಈಗಿನ ಸ್ಥಿತಿಯೇ ಶ್ರೇಯಸ್ಕರವಾದುದು. ಇಂಥ ಕಾಯಿದೆಯನ್ನು [illegible] ಸರಕಾರವು ಮಾಡಿದರೂ ನನ್ನ [illegible] ಅಂದ ಬಳಿಕ ಈಗಿನ ಸರಕಾರವು ಘಟಿಸುವ ಈ ಕಾಯಿದೆಗೆ ನನ್ನ ಆಕ್ಷೇಪ ವಿಶೇಷ. [illegible] ಈ ತರದ ಕಾಯಿದೆ ಮತ್ತು ಕೋರ್ಟುಗಳಿಂದ ಸಿಗುವ ನ್ಯಾಯವೇ ಸಾಕು. ದೇಶದೊಳಗೆ [illegible] ಆದಗ್ಯೂ [illegible] ತೆರಿಗೆ [illegible] ಸ್ವಾತಂತ್ರ್ಯವನ್ನು ಒಸಗುವ [illegible] ರಾಷ್ಟ್ರೀಯ [illegible] ದೋಣಿಗುತ್ತಿದೆ. [illegible] ವ್ಯವಸ್ಥೆ [illegible] ದಿಂದ [illegible] ಘಟಿಸ [illegible] ಸತಿಸನರಿಗೆ [illegible] ಮಿಯಾದ ಹೇಳದ [illegible] ಅಂತೆಯೇ [illegible] ಅವಸ್ಥೆ [illegible] ಪ್ರಥಮ [illegible] ಕನ್ನಡ [illegible] ದು [illegible] ಈ [illegible] ಹಿಂದುಸ್ಥಾನ [illegible] ತೆ [illegible] ಸಭಾಸದರೂ ಸುಶಿಕ್ಷಿತರ [illegible] ಕಾಯಿದೆಯನ್ನು ಮುಂದರಿಸಬೇಕಾಗಿಯೇ [illegible] ಮುಖ್ಯಪ್ರಧಾನ [illegible] ಬ್ರಿಟಿಶರವರಿಗೆ ಹಿಂದುಸ್ಥಾನದ [illegible] ಇನ್ನರಡು [illegible] ದೇಶದ ಕ್ಷೇಮ [illegible] ಬಾಗಿದೆ. ಇದಕ್ಕೆ [illegible] — ಬ್ರಿಟಿಶ ಹಿಂದುಸ್ಥಾನದ ರಾಷ್ಟ್ರೀಯತ್ವವನ್ನು ಮನ್ನಿಸಬೇಕು. ಹಿಂದಿಯರು ಬ್ರಿಟಿಶರ ಸಾಮ್ರಾಜ್ಯ [illegible] ಸ್ವಾತಂತ್ರ್ಯವನ್ನು ಹೊಂದಬೇಕು. ಸಾಮ್ರಾಜ್ಯ [illegible] ಸ್ವಾತಂತ್ರ್ಯ [illegible] 'ಒಕ್ಕೂಟಗಳಾಗಬೇಕು' ಎಂಬದಾಗಿಯೂ [illegible] ಮಾ [illegible] ರವರು ಸಲ್ಲಿಸಿ ಒದಗುತ್ತಿರ [illegible] ಮೆಡ [illegible] ಹಿತೋಕ್ತಿಯನ್ನಾದರೂ ಸರಕಾರವು ಲಾಲಿಸುವದೇ?

* * *

ಅಂತು ಕಾಯಿದೆ ಕೌನ್ಸಿಲಿನಲ್ಲಿ ಸ್ತ್ರೀಯರೇ ವಿಜಯಶಾಲಿಗಳಾದರು. ಪುರುಷರ ಕಾಟ ಕೌನ್ಸಿಲಿನಲ್ಲಿ ನಡೆಯಲಿಲ್ಲ. ಅವಿಭಕ್ತ ಹಿಂದು ಕುಟುಂಬದೊಳಗಿನ ವಿಧವೆಯರಿಗೆ ದತ್ತಕ ಕೊಳ್ಳಲು ಅಧಿಕಾರವಿದು ಎಂದಾಗಿ ಪ್ರಿವ್ಹಿ ಕೌನ್ಸಿಲಿನವರ ಘಾತವಾದದ್ದ ಒಂದು ಪ್ರಕರಣದಲ್ಲಿ ನಿರ್ಣಯಿಸಿದ್ದಾರೆ. ಈ ನಿರ್ಣಯು ಹಿಂದು ಪರಂಪರಗೆ ವಿರುದ್ಧವಾದದ್ದೆಂದು ಹಿಂದು ಧರ್ಮಶಾಸ್ತ್ರಜ್ಞರ ಅಭಿಪ್ರಾಯ. ಈ ವರೆಗ ನಡೆದು ಬಂದ ಹಿಂದು ಪರಂಪರಗೂ ವಿರುದ್ಧವಾದದ್ದೆಂದು ಅನೇಕರು ಟೀಕೆ ಮಾಡಿದ್ದಾರೆ. ಸ್ತ್ರೀಯರಿಗೆ, ಈ ನಿರ್ಣಯದಂತೆ ಅವಿಭಕ್ತ ಕುಟುಂಬದೊಳಗಿನ ವಿಧವೆಯರಿಗೆ ಪ್ರಾಪ್ತವಾದ ದತ್ತ ಸ್ವೀಕಾರದ ಹಕ್ಕಿನಿಂದ ಹಿಂದು ಮನೆತನಗಳಿಗೆ ಅಪಾಯವಿರುವದಾಗಿ ಲೋಕಾಭಿಪ್ರಾಯವಾದ ಮೇರೆಗೆ ಸಭಾಸದರಾದ ರಾ| ದೇಸಾಯಿಯವರು ಈ ಹಕ್ಕನ್ನು ರದ್ದುಪಡಿಸುವ ಕಾನೂನನ್ನು ಸೂಚಿಸಿದ್ದರು. ಈ ಕಾನೂನಿಗೆ [illegible] ವಿರೋಧಿಸಿ ರಾವಸಾಹೇಬ ಎಸ್. ಕೆ. ಬೋಲೆ ಮೊದಲಾದ ಸ್ತ್ರೀ-ಪಕ್ಷಪಾತಿ [illegible] ವಿರೋಧಿಸಿದರು. ಪ್ರಾಂತಿಕ ಕಾಯಿದೆ ಕೌನ್ಸಿಲಿನೊಳಗಿನ ವಿಷಯವಲ್ಲವಾಗಿ ಸರಕಾರದ ಆಕ್ಷೇಪ. ಸ್ತ್ರೀಸ್ವಾತಂತ್ರ್ಯ ಅಪಹರಿಸಬಾರದಾಗಿ ರಾವಸಾಹೇಬ ಬೋಲೆ ಪ್ರಭೃತಿಗಳ ಆಗ್ರಹ. ರಾವಸಾಹೇಬ ಬೋಲೆಯವರು ನಾವಿರು ಸ್ತ್ರೀಯರ ಆಕ್ಷೇಪ ಅರ್ಜಿಗಳನ್ನು ಕೌನ್ಸಿಲಿಗೆ ಹಾಜರಪಡಿಸಿದ್ದರು. 'ಸ್ತ್ರೀಯರು ಅರ್ಜಿ ಮಾಡಿದ್ದಾರೆಂದು ಹೇಳೋಣಾಗುತ್ತದೆ. ಆದರೆ ಅನೇಕ ಖೊಟ್ಟಿ ಸಹಿಗಳಿದ್ದಾವೆ" ಎಂಬದಾಗಿ ರಾ| ದೇಸಾಯಿಯವರು ಆಕ್ಷೇಪಿಸಿದರು. ಸ್ತ್ರೀಯರ ಸಹಿ ಖೊಟ್ಟಿ ಇರುವದಾಗಿ ರಾ| ಸಾ| ಬೋಲೆಯವರು ಖಾತ್ರಿ ಹೇಳದ ಬಳಿಕ ಸಹಕರಿ ಸಭಾಸದರ ಮೇಲೆ ಸುಳ್ಳುತನದ ಆರೋಪ ಹೊರಿಸುವದು ಯುಕ್ತವಲ್ಲವಾಗಿ ಅಧ್ಯಕ್ಷರು ನಿರ್ಣಯ ಕೊಟ್ಟರು. ದೇಸಾಯಿಯವರಿಗೆ ಸುಮ್ಮಗಿರಿಸಿದರು. ಮತ ಎಣಿಕೆ ಮಾಡಲು ಹಿಂದು ಸಭಾಸದರು ಅನುಕೂಲ ಇದ್ದರೂ ರಾ| ದೇಸಾಯಿಯವರ ಕಾಯಿದೆಯು ನಾಪಾಸಾಯಿತು. ಹಿಂದ ಅಧ್ಯಕ್ಷರು ಜಾಹೀರ ಮಾಡಿದರು. ಪ್ರೇಕ್ಷಕ ಸ್ತ್ರೀಯರೂ ಸಭಾಸದರೂ ಚಪ್ಪಾಳೆಗಳ ಘೋಷ ಮಾಡಿದರಂತೆ. ಅಂತು ಪುರುಷರೇ ಸ್ತ್ರೀಯರಿಗೆ ಜಯ ಸಂಪಾದಿಸಿ ಕೊಟ್ಟರು. ಸ್ತ್ರೀವಿಜಯದ ವಿಶೇಷವಿದು.

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ !!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ನೋಟು ಮಾರುವದಿದೆ. ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೭ರಂತೆ ಬಡ್ಡಿಯಿದೆ. ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತದಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಸ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ— ವಿಠ್ಠಲ ಸುಬ್ರಾಯ ಪ್ರಭು, ಶಿರೂರಕರ,
ಪೋಸ್ಟ — ಅಂಕೋಲಾ.

ಕೆಲವು ಮಾಹಿತಿ.

[೬ನೇ ಪಾನಿನಿಂದ ಮುಂದರಿಸಿದ್ದು]

ಪ್ರಾಂತದ ಪೂರ್ವ ಪಾರ್ಶ್ವದಲ್ಲಿದೆ ಇಜಿಪ್ತ ದೇಶವನ್ನು ಕೈವಶ ಮಾಡಿಕೊಂಡಲ್ಲಿ ಸುಯೇಜ ಕಾಲುವೆಯನ್ನು ಮುಚ್ಚಲಿಕ್ಕೆ ಒಳ್ಳೆ ಅನುಕೂಲವಾಗುವಂತಿದೆ ಇಜಿಪ್ತ ದೇಶದ ಗಡಿನಾಡಿನಲ್ಲಿ ಇತಾಲಿಯವರು ಅರ್ಧ ಲಕ್ಷ ಸೈನಿಕರನ್ನು ಕಲೆಹಾಕಿದ್ದಾರೆ. ೩೫೦ ಬಾಂಬು ಒಗೆಯುವ ವಿಮಾನುಗಳೂ, ಅನೇಕ ಜಲನಾವೆಗಳೂ ಅಲ್ಲಿಯೇ ಸುಳಿದಾಡುತ್ತಿವೆ ಬ್ರಿಟಿಶರು ಅಲೆಕ್ಝಾಂಡ್ರಿಯಾ ಪೋರ್ಟ ಸೈಯ್ಯದ, ಸುಯೇಜ, ಅಕಬಾ ಬಂದರಗಳಲ್ಲಿ ೨೦೦ ಹಡಗುಪಡೆಗಳನ್ನಿಟ್ಟಿದ್ದಾರೆ ಅಲೆಕ್ಝಾಂಡ್ರಿಯಾದೊಳಗಿನ ಅಬುಕಿರ ವೈಮಾನಿಕ ಠಾಣ್ಯದಲ್ಲಿ ೩೦೦, ಕೈರೋದೊಳಗಿನ ಹಿಲೊಪೊಲಿಸ ಠಾಣ್ಯದೊಳಗ ೬೦೦ ವಿಮಾನುಗಳನ್ನಿಟ್ಟಿದೆ ಇವುಗಳಲ್ಲಿ ೨೦೦ ವಿಮಾನುಗಳು ಭಯಂಕರ ಬಾಂಬಾ ದುರ್ವಾರ ಸಪ್ಪಳ ಮಾಡುವದಿಲ್ಲ! ಇವುಗಳಿಗೆ ಆಕಾಶ ಬಣ್ಣ ಕೊಟ್ಟದ್ದರಿಂದ ಇವು ಕಾಣುವದೂ ಇಲ್ಲ ಇವು ನಿಟ್ಟಗೆ ಭೂಮಿಗೆ ಇಳಿಕೊಂಡಾಗಿ ಹಾರಿಕೊಳ್ಳಬಲ್ಲವು ಹಾಗೆಯೇ ಸರಳ ರೀತಿಯಿಂದ ಇಳಿಯಬಲ್ಲವು ಗಾಲಿ ಕೊಟ್ಟು ಕೂಡಲೆ ತಾವಾಗಿಯೇ ಬಾಂಬು ಹಾರಿಸುವ ಯೋಜನೆಯದೆ ಮೇಲಾಗಿ ಕೈರೋದಲ್ಲಿ ತೋಫು ಮದ್ದು-ಗುಂಡುಗಳನ್ನು ಬ್ರಿಟಿಶ ಸೈನ್ಯ ಇಲಾಖೆಯವರು ಸಂಗ್ರಹಿಸಿಟ್ಟುಕೊಂಡಿದ್ದಾರೆ 'ವಾಯರ' ಎಂಬ ಮರಣ ಕಿರಣಗಳಿಂದ ಹಾರಿಹೋಗುವ ಶತ್ರುಗಳ ವಿಮಾನನ್ನು ಥಕ್ಕನೆ ಕೆಡವಿ ಚೂರು ಚೂರು ಮಾಡಬಹುದು ಇಜಿಪ್ತ ಸರಕಾರವು ಇಡೀ ದೇಶತುಂಬ ಹಸ್ತಪತ್ರಿಕೆಗಳನ್ನು ಹಂಚಿ ಜನರಿಗೆ ಜಾಗ್ರತೆಯಿಂದ ನಡಕೊಳ್ಳಲು ಪುನಃ ಪುನಃ ಎಚ್ಚರಿಸುತ್ತಿದೆ ವಿಷಾರಿ ಹೊಗೆಗೆ ಜನರು ಬಲಿಬೀಳಬಾರದೆಂದು ಸಮಸ್ತರಿಗೆ ಹೊಗೆಯ ಕವಚವನ್ನು ಸರಕಾರವು ಪೂರೈಸಿದೆ ೪|| ಲಕ್ಷ ಕವಚಗಳನ್ನು ಸರಕಾರವು ಸಿದ್ಧನಲ್ಲಿಟ್ಟಿದೆ ಬ್ರಿಟಿಶ ಇಜಿಪ್ತ ಅಧಿಕಾರಿಗಳು ಎಮೆಯಿಕ್ಕದ ಆಗಿಂದಾಗ ಉಂಟಾಗುವ ವಿತ್ತ್ಯಂಕರಗಳನ್ನು ಕೂಲಂಕುಶವಾಗಿ ಅಭ್ಯಾಸ ಮಾಡುತ್ತಿದ್ದಾರೆ ಭೂಮಧ್ಯ ಸಮುದ್ರದೊಳಗಿನ ನೌಕಾಧಿಪತಿಗಳು ವಿಮಾನು ಮಾರ್ಗದಿಂದ ಹಾರಿಹೋಗಿ ಸೈನ್ಯಾಧಿಕಾರಿಗಳೊಡನೆ ದೀರ್ಘಾಲೋಚನೆ ಮಾಡಿಕೊಂಡು ಸ್ವಸ್ಥಾನಕ್ಕೆ ತೆರಳಿದರಂತೆ ಹಬಸಿ ದೇಶದೊಡನೆ ಇಜಿಪ್ತ ದೇಶವನ್ನೂ ನುಂಗಿ ಪುರಾತನ ರೋಮ ಸಾಮ್ರಾಜ್ಯದಂತೆ ಹೊಸ ಸಾಮ್ರಾಜ್ಯವನ್ನು ಸ್ಥಾಪಿಸಲೋಸುಗ ಮುಸೊಲಿನಿಯವರು ಕಾರಸ್ಥಾನ ಹೂಡಿದ್ದಾರೆಂದು ಇಜಿಪ್ತ ದೇಶದೊಳಗೆ ಗದ್ದಲ ಅಬುಕಿರ ವೈಮಾನಿಕ ಠಾಣ್ಯದಲ್ಲಿ ೭೫ ಮಂದಿ ಇತಾಲಿಯ ಶಿಲ್ಪಿಗಳು ಕೆಲಸ ಮಾಡುತ್ತಿದ್ದರು ಅವರಿಗೆ ಒಮ್ಮೆಲೇ ಪದಚ್ಯುತ ಮಾಡಲಾಗಿದೆ ಇತಾಲಿ-ಹಬಸಿ ವಾದದ ಪರಿಮಿತಿ ಎಲ್ಲೆಲ್ಲಿಗೆ ಮುಟ್ಟಿರುವದಾಗಿ ಇವರ ಮೇಲಿಂದ ಕಲ್ಪಿಸಬಹುದು ಇತಾಲಿ-ಹಬಸಿ ದೇಶದೊಳಗಿನ ರಣಕುಂಡದೊಳಗೆ ಯಾವ್ಯಾವ ಇಂದ್ರರೂ, ರಕ್ಷಕರೂ ಬಂದು ಬೀಳುತ್ತಾರೆಂದು ಸದ್ಯಕ್ಕೇ ಕಾಣುವದು ಬ್ರಿಟಿಶರ ರಾಜ್ಯಧೋರಣ ಬಹುತರವಾಗಿ ನಿರ್ಣಯವಾಗಿದೆಂದು ಹೇಳಬಹುದು ನಿರ್ಣಯವಾಗದಿದ್ದಾಗ್ಯೂ ಸದ್ಯಕ್ಕೆ ಅದು ಆಗಲೇಬೇಕು ಮುಸೊಲಿನಿಯವರ ಮಹತ್ವಾಕಾಂಕ್ಷೆಯಿಂದ ಬ್ರಿಟಿಶ ಸಾಮ್ರಾಜ್ಯಕ್ಕೆ ಬಾಧೆಯಿದೆ ಅದರಿಂದ ಬ್ರಿಟಿಶರು ರಣಾಂಗಣದಲ್ಲಿ ಸದ್ಯಕ್ಕೇ ದುಮುಕಲೇ ಬೇಕು

* * *

ಹಬಸಿ ದೇಶದ ಹಿಶೆಪಟ್ಟಿ ೧೯೦೬ನೇ ಇಸ್ವಿಯಲ್ಲಿ ಬ್ರಿಟಿಶ, ಫ್ರೆಂಚ, ಇತಾಲಿಯವರೊಳಗೆ ಆಗಿದ್ದುದೆ ತ್ರಿಮೂರ್ತಿಗಳೊಳಗೂ ಹಬಸಿ ದೇಶದಲ್ಲಿ ಸಂಸ್ಥಾನದ ಹಕ್ಕುಗಳನ್ನು ಇಟ್ಟು ಒಬ್ಬರ ಮೇಲೆ ಮತ್ತೊಬ್ಬರು ಹೋರಾಟ ಮಾಡಬಾರದಾಗಿಯೂ, ಒಬ್ಬರು ಮತ್ತೊಬ್ಬರಿಗೆ ಯಾವದೇ ಪ್ರಕಾರದಿಂದ ಬಾಧೆ ಕೊಡಬಾರದಾಗಿಯೂ ೧೯೦೬ನೇ ಇಸ್ವಿಯಲ್ಲಿ ಲಂಡನಿನೊಳಗೆ ಕರಾರುನಾಮೆಯಾಗಿದೆ ಹಬಸಿ ದೇಶವನ್ನು ಇದ್ದಂತೆ ಇರಗೊಡಬೇಕು, ೧೯೦೬ನೇ ಇಸ್ವಿಯಲ್ಲಿ ತ್ರಿಮೂರ್ತಿಗಳಿಗಿರುವ ಹಕ್ಕುಗಳನ್ನು ಕಾಪಾಡುವದಕ್ಕಾಗಿ ತ್ರಿಮೂರ್ತಿಗಳೂ ಒಮ್ಮನಸ್ಸಿನಿಂದ ಯತ್ನಿಸಬೇಕು, ಎಂಬದಾಗಿ ಈ ಕರಾರನಾಮೆಯಾಗಿದೆ ಹಬಸಿ ದೇಶಕ್ಕೆ ಈ ಕರಾರಿನಲ್ಲಿ ಸಂಬಂಧವಿಲ್ಲ ಈಗ ಈ ಕರಾರಿನಂತೆ ಮುಸೊಲಿನಿಯವರು ಬ್ರಿಟಿಶ ಫ್ರೆಂಚ ದೇಶಗಳೊಡನೆ ಸಂಧಾನ ನಡಿಸುತ್ತಿರುವರಾಗಿ ವಾರ್ತೆ ರಾಷ್ಟ್ರಸಂಘದ ಮಧ್ಯಸ್ಥಿಕೆ ಒಂದೆಡೆ, ಗುಪ್ತಕಾರಸ್ಥಾನ ಮತ್ತೊಂದೆಡೆ!

ಅಶ್ವಾರೂಢ ಕವಚ!

ವ್ಯಾಪಾರ, ಉದ್ಯೋಗಸಿದ್ಧಿ ವ್ಯವಹಾರಜಯ, ಕರ್ಮಬಾಧ ಇತ್ಯಾದಿ ವಿಷಯಗಳಲ್ಲಿ ಪ್ರಯತ್ನಿಸಿ ನಿರಾಶರಾದವರಿಗೆ ''ಅಶ್ವಾರೂಢ'' ಯಂತ್ರವು ''ಗುರು-ಪರ್ವತದಲ್ಲಿ ಮಧು ವೃಷ್ಟಿಯಂತೆ' ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು ೪ ಆಣೆ ಸ್ಟಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ, ಯಾವ ಉತ್ತರ ಕಳಿಸಲಾಗುವದು

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರಗಳ್ಕೆ ಬೆಲೆ ರೂ 20 0-0, ಬೆಳ್ಳಿಯ ಯಂತ್ರಕ್ಕೆ ರೂ. 3 0-0, ತಾಮ್ರದ ಯಂತ್ರಕ್ಕೆ ರೂ 2-0-0.

ಪತ್ತೆ - ದೇವಿದಾಸ ಪಿ. ಕೆ. ಕೇ. ಎಸ್.,
ಜ್ಯೋತಿಷಿ, ಕುಮಟಾ [ಉ ಕನ್ನಡ]

Siromani Udipi Narayanacharya,
CHAUKHAMBA, BENARES CITY

ಮಹಾಶಯರೇ ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ ಮಾಳ್ಯೆ 108ರ ಸರ 1ಕ್ಕೆ 0-6 0 ಯಿಂದ 10 ರೂ ಬಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32 ಪರ 1ಕ್ಕೆ ರೂ 0 8 0 ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3-8-0 ರಿಂದ ೨೦ವರೆಗೆ ಮತ್ತು ಬೇರೆ ಮಾಲುಗಳ ವಿವರ ಅರಿಯಲು ಅಪೇಕ್ಷಿಸುವವರು 0 1 0 ಸ್ಟ್ಯಾಂಪು ಕಳಿಸಿದರೆ 1 ಕಾಶಿ ಪತ್ರ, 1 ವಿಶ್ವೇಶ್ವರನ ದರ್ಶನವನ್ನು ಕೆಟಲಾಗು ಸಹ ಇನಾಂ ಕಳಿಸಲಾಗುವದು

ಪತ್ತೆ **ಶಿರೋಮಣಿ ನಾರಾಯಣಾಚಾರ್ಯ**
ಚೌಕಾಂಬಾ, ಕಾಶೀ ಕ್ಷೇತ್ರ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು- ಸ್ವಾಸ್ಥ್ಯನಿಲಯ, ಧಾರವಾಡ.

ಡಾ|| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕರ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು ಕ್ರಯ ರೂ ೧-೮-೦

ಅಶ್ವಗಂಧ ಟೊನಿಕ್ — ಮಜ್ಜಾ, ಮಾಂಸ ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿಯರಿಗೆ ಇದು ದಿವ್ಯೌಷಧ ರೂ ೧-೮-೦

ಎಗ್ಸ್ ಮಿಕ್ಸ್ಚರ, ಫೀವರ ಡ್ರೊಪ್ಸ. ಅಮೃತ ಸುಧಾ, ಕರ್ಪೂರಾರ್ಕ, ಸಾಯುರಸ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿಶ್ಚಿಗಟ್ಟಲೆ ಇವುಗಳ ಉಪಯೋಗವಾಗುವ್ವದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿಮಲೇರಿಯಲ್ ಮಿಕ್ಸ್ಚರ ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಡರೇಲ, ಡಿಲ್ ಪೊಡರ ಸಾಯುರಪ್ ಕ್ಯಾಲ್ಸಿಲೆಕೋ ಫಾಸ್ಫೇಟ್, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು -

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ಓಂ

'दशमूलारिष्ट.'
'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯವೈದ್ಯರಿಗೂ ಹಾಗೂ ಎಲ್ಲಾ ಗ್ರಾಮಸ್ಥರಿಗರಲ್ಲೂ [illegible] ನ ಔಷಧವು ಮುಕ್ತವೆ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣ ಧರ್ಮ [illegible] ಕಡಿಮೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ತಾಜಾವದಿಂದ ವನಸ್ಪತಿಗಳನ್ನು [illegible] ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು ಆದರೆ ಈ [illegible] ವನಸ್ಪತಿಗಳು ತಾಜಾ [illegible] ದರಿಂದ ಇದರ ಗುಣವು [illegible] ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಯಾಗಿ ಎಂಥ ಅಶಕ್ತರ ಉದರವೂ [illegible] ರಕ್ತವನ್ನು, ಶಕ್ತಿಯನ್ನು ಉಂಟುಮಾಡುವ [illegible] ತದೆ

ಇದರಿಂದ ಅರುಚಿ ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, [illegible]) ಕಾಮಿಲಿ ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ ಉದರರೋಗ, ಹೃದ್ರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಶುದ್ಧಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗ ಗರ್ಭ ವಿಕಾರಗಳಿಗೆ, ಸಂಚಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ [illegible] ತಾದ ರೋಗಗಳಿಗೆ ಅತ್ಯಂತ ಉಪಯುಕ್ತವಾಗಿರುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡು ವೇಳೆ) ಒಂದೊಂದು [illegible] ನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಉಂಟಾಗದೆ ಮೊದಲಿನಂತೆ ನವತಾರುಣ್ಯವತಿಯಾಗ [illegible]

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡಬೇಕು

೧೬ ಔಂಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬ [illegible]
,, ಬಾಟ್ಲಿ ೧೨ಕ್ಕೆ ರೂ ೧೨—೦ ೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ--

ಪಿ. ಅಚ್ಯುತ ಪಂಡಿತ,
ಮಾಲಿಕ,
ಆಯುರ್ವೇದ ಧನ್ವಂತರಿ ಔಷಧಾಲಯ,
ಪೋಸ್ಟ - **ಕುಮಟಾ.** (ಉ ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೇ ಸಂಸ್ಥೆಗೆ ಉತ್ತೇಜನ ಕೊಡಿ!!!

ಪ್ರೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: **ಮಂಗಳೂರು.**

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪಾಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ! ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನು ಸಾಕಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ಪಿ. ಸೂ. ಇಂಡಸ್ಟ್ರಿಯಲ್ ವಿಮೆ 'ಎಂಬ 'ರೂಪಾಯಿ ಪೊಲಿಸಿ ಗಳ ಸುಲಭ ಕಂತಿನ ವಿಮೆಯ [illegible] ಗಿ ವಿಚಾರಿಸಿರಿ

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು
ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —
ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು - **ಮೆಸರ್ಸ ಜೀವನ ಏಜನ್ಸಿ, ಕಾರವಾರ.**

Established 1900

ಓಂ

FIXED RATE

ದಾಸಪ್ಪಾ ಕೃಷ್ಣಪ್ಪಾ
ಢಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಷ್ಮೆಯ ಖಣಗಳೂ ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ [illegible] ನಾದ ಮಡಿಗಳು, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು [illegible] ಮೋಸ ಹೋಗುವ [illegible] ಯಾವದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು ರೋಖ ವ್ಯಾಪಾರಕ್ಕೆ ಕಮಿಶನ್ [illegible] ವದು.

"*Honesty*"] **D. K. DHAKAPPA BROS.,**

ಹೊಸ ಮಾಲು.

Cloth Merchants,
SIRSI. N KANARA

ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ** ಸುಲಭ ಕ್ರಯ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಕಾಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಅಂತರಕ್ಕೆ [illegible] ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪೋಸ್ಟ [illegible] ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. [illegible] ಡಜನ್ ೧ಕ್ಕೆ ರೂ [illegible]

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ - ಗುರು ಬಸವ ಅಂಡ್ ಕಂಪನಿ ಲಿಮಿಟೆಡ್, ಪೋ. ಬಾ. [illegible] ಪಾರ್ಕಟೌನ [illegible]

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No B 1270.

Monday, 21st October, 1935.

ವರ್ಷ ೧೪

ಸಂಚಿಕೆ ೧೭

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ 1 0-0 ಆ ನಂತರ ಪ್ರತಿಸಾಲಿಗೆ 0-2-0

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹೀರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವವು.

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೧ ಮಾಹೆ ಅಕ್ಟೋಬರ ಸನ್ ೧೯೩೫ನೇ ಇಸವಿ)*—

ರೂ ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ
ವಟಾಯಿಸಬರುತ್ತವೆ

**ಅಂತು ದರಸಾಲ ಶೇಕಡಾ ೪-೬-೦
ರಂತೆ ಬಡ್ಡಿ ಸಿಗುತ್ತದೆ!**

ಆರಾರು ತಿಂಗಳಿಗೆ ದರಸಾಲ ಶೇಕಡಾ ೩½ ರಂತೆ
ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ
ಶೇಕಡಾ ೧½ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು.
ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ,
ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ
ರೂ ೧೨೨-೧೩-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

**ಈ ಕೆಳಗಿನ ನಗರಗಳಲ್ಲೂ ನಮ್ಮ
ಶಾಖೆಗಳಿವೆ:—**

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ,
ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಮ್,
ಆಲಪ್ಪಿ, ಬೆಂಗಳೂರು, ದಾವಣಗೇರೆ, ಚಿಕ್ಕಮಗಳೂರು,
ಮಂಗಳೂರು-ಬಂದರ, ಮಂಗಳೂರು-ಶಹರ,
ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ,
ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೪,೬೨,೦೦೦
ವ್ಯವಹಾರದ ಹಣ	೬೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು:- ಉಡುಪಿ ಬ್ರಹ್ಮಾವರ, ಹೊನ್ನಾವರ ಕುಂದಾಪುರ ಕುಮಟಾ ಕಾರವಾರ, ಶಿರ್ಸಿ,
ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ ಕಣ್ಣಾನೂರ,
ಪಯ್ಯನೂರ, ಹಂಗಾರಕಟ್ಟೆ, ಬಳ್ಳಾರಿ ಮತ್ತು ಕಾಂಞಂಗಾಡು

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3 12-0, 7-8 0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ. 5/-, 10/-, 100/- ಕೊಡಲ್ಪಡುವದು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6¼ರಷ್ಟು ಬಡ್ಡಿ ಸಿಗುವದು. ಇವುಗಳನ್ನು ಮುದ್ದತ್ತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ
ರೂ 5, 5½, 6 ರಂತೆ ಬಡ್ಡಿ
ಚಾಲ್ತಿ ಮತ್ತು ಸೇವಿಂಗ್ಸ ಬ್ಯಾಂಕ ಠೇವುಗಳಿಗೆ ಶೇಕಡಾ 2 ಮತ್ತು 3½ಯಂತೆ
ಚಿನ್ನಾಭರಣಗಳ ಈಡಿನ ಮೇಲೆ ಒಳ್ಳೆಯ ರಿಯಾಯತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು
ಇವುಗಳಲ್ಲದೆ ಬ್ಯಾಂಕಿನ ಎಲ್ಲಾ ತರದ ವಹಿವಾಟುಗಳು ನಡೆಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

ಕುಮಟಾ,
ತಾ ೧೫-೬-೧೯೩೫

G. S Nayak,
ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್, ಕುಮಟಾ.

(ಉ ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

WANTED

immediately realy good Agents, guaranteeing business throughout Goa, Belgaum, Dharwar and North-Kanara for an Excellent Life Company on attractive Commission basis Please apply to

Banavali Brothers,
KARWAR.

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿಯ ಮೂಲ ಟೀಕಾ ತಾತ್ಪರ್ಯಸಹಿತ

I ನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು I ನೇ ಭಾಗ ಜನ್ಮಾದ್ಯಧಿಕರಣದ ವಿವರಣದೊಂದಿಗೆ ಈಗಲೇ ತಯಾರಾಗಿವೆ ಪುಟಗಳು [illegible] ಬೆಲೆ [illegible]

I ನೇ ಭಾಗ [illegible] ಅಧಿಕರಣ ಪುಟಗಳು [illegible] ಬೆಲೆ [illegible]

II ನೇ ಸಂಚಿಕೆ [illegible] ಉಪನಿಷದ್ ಗ್ರಂಥಗಳ ಪುಟಗಳು [illegible] ಬೆಲೆ [illegible] ಹಣ ಕಳಿಸಲು ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

[illegible]

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ
(ದಕ್ಷಿಣ ಕನ್ನಡ)

ಅಲ್ಲಲ್ಲಿ ಇಷ್ಟಿಷ್ಟು!

ಮೈಸೂರಿನಲ್ಲಿ ದಸರೆಯೊಂದರೆ ಅಪೂರ್ವ ಉತ್ಸವ ಪ್ರಸಂಗ. ದಸರೆಯನ್ನು ಶ್ರೀಮನ್ಮಹಾರಾಜರವರು ಭಕ್ತಿಯಿಂದಲೂ ಉತ್ಸಾಹದಿಂದಲೂ ಪಾಲಿಸುವ ಸಂಪ್ರದಾಯವನ್ನಿಟ್ಟಿದ್ದಾರೆ. ಅಖಿಲ ಭರತಖಂಡದಲ್ಲಿ ಮೈಸೂರಿನ ದಸರೆ ಪ್ರಸಿದ್ಧವಾದದ್ದು. ಮನೆಮೂಲ ಸಂಪ್ರದಾಯದಂತೆ ನಡೆಯುವ ಧಾರ್ಮಿಕ ವಿಧಿಗಳು ಸಾಂಗವಾಗಿ ನೆರವೇರುತ್ತವೆ. ವಿಜಯದಶಮಿಯ ದಿನ ಶ್ರೀಮನ್ಮಹಾಸ್ವಾಮಿಯವರು ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತುಕೊಂಡು ಊರತುಂಬ ವಿಶಾಲವಾದ ರಾಜಮಾರ್ಗದ ಮೇಲಿಂದ ಮೆರೆಯುವ ನೋಟ ಅಪೂರ್ವವಾದದ್ದು. ಆ ಸಡಗರ, ಆ ಸಂಭ್ರಮ [illegible] ನೋಡಿದವನೇ ಭಾಗ್ಯವಂತನು! ಈ ಮೆರವಣಿಗೆಯನ್ನು ನೋಡುವದಕ್ಕಾಗಿ ಮಾರ್ಗದ ಎರಡೂ ಪಕ್ಕಗಳಲ್ಲಿ ಜನರು ನಿಲ್ಲುತ್ತಾರೆ. ಶ್ರೀಮನ್ಮಹಾಸ್ವಾಮಿಯವರ ದರ್ಶನ ಪಡೆಯಬೇಕೆಂಬುದೇ ಎಲ್ಲರ ಉದ್ದೇಶ. ಮಹಾಸ್ವಾಮಿಯವರ ದರ್ಶನೋತ್ಸುಕ ಲೋಕಗಂಗೆಯನ್ನೂ ಶ್ರೀಮನ್ಮಹಾರಾಜರವರ ವೈಭವಪೂರಿತವಾದ ಮೆರವಣಿಗೆಯನ್ನೂ ನೋಡಿದವರು ಶ್ರೀಮನ್ಮಹಾರಾಜರವರ ಲೋಕಪ್ರೀತಿಯ ಸಾಕ್ಷಿ ಪಡೆದಿರರು. ಈ ಒಂದು [illegible] ವಿಶೇಷವಿತ್ತು. ಶ್ರೀಮನ್ಮಹಾರಾಜರವರು ಅಸ್ವಾಸ್ಥ್ಯದಿಂದ ಸ್ವಸ್ಥರಾಗಿದ್ದರು. ಶ್ರೀಮನ್ಮಹಾರಾಜರವರ ದರ್ಶನ ಪಡೆಯಲು ಲೋಕಾತುರತೆ ವಿಶೇಷ. ಲಕ್ಷಕ್ಕೆ ಮಿಕ್ಕ ಜನಸಮುದಾಯ ಸೇರಿತ್ತು. ಚಾಮರಾಜ ಒಡೆಯರ ಸ್ಮಾರಕ ಸ್ಥಳದಲ್ಲಿ ಶ್ರೀಮನ್ಮಹಾರಾಜರವರ ಮೆರವಣಿಗೆ ಬಂದೊಡನೆ ಲೋಕಗಂಗೆ ಉಕ್ಕೇರಿಬಂತಂತೆ. ಮಹಾಸ್ವಾಮಿಯವರು ಬನ್ನಿ ಮಂಟಪಕ್ಕೆ ಹೋದರು. ಮಹಾರಾಜರು ಅಲ್ಲಿ ಶಮೀಪೂಜೆಯ ವಿಧಿಯನ್ನು ಮುಗಿಸಿ ಸಂಜೆ ೭ ಘಂಟೆಗೆ ಹಿಂದಿರುಗಿ ರಾತ್ರೆ ೧೦|| ಘಂಟೆಗೆ ಅರಮನೆಯನ್ನು ಸೇರಿದರು. ಮಹಾಸ್ವಾಮಿಯವರ ಮೆರವಣಿಗೆಯ ವೈಭವವನ್ನು ನೋಡಿ ಜನಗಳನೇಕರಿಗೆ ಇಂಥ ವೈಭವದ ನೆನಪಾದರೆ ಆಶ್ಚರ್ಯವಿಲ್ಲ. ಶ್ರೀಮನ್ಮಹಾರಾಜರವರಿಗೆ ಶ್ರೀ ಚಾಮುಂಡಿ ದೇವಿಯು ಆಯುರಾರೋಗ್ಯವನ್ನಿತ್ತು ಶ್ರೀಮನ್ಮಹಾರಾಜರವರ ಕಡೆಯಿಂದ ಕರ್ನಾಟಕದ ಉದ್ಧಾರವನ್ನು ಇನ್ನೂ ಹೆಚ್ಚಿಚ್ಚಾಗಿ ಸಾಧಿಸಿಕೊಳ್ಳಲಿ.

⁂

ದಸರೆ ಉತ್ಸವದ ಸಮಯ ಇಲ್ಲಿ ಪ್ರದರ್ಶನ ಸೇರುತ್ತದೆ. ಪ್ರದರ್ಶನ ವಿಭಾಗವು ರಮಣೀಯವಿದ್ದು ಉದ್ಬೋಧಕವಿರುತ್ತದೆ. ದೇಶ ವಿದೇಶಗಳೊಳಗಿನ ಸರಕು ಶಿಲ್ಪ-ಕಲಾಕೌಶಲ್ಯಗಳು ಇಲ್ಲಿ ಪ್ರದರ್ಶಿಸಲ್ಪಡುತ್ತವೆ. ಈ ಬಾರಿಯ ಪ್ರದರ್ಶನವು ಒಳ್ಳೇ ಚನ್ನವಾಗಿದ್ದಿತು. ಪ್ರದರ್ಶನ ಪ್ರಾಕಾರದ ಪ್ರವೇಶ ದ್ವಾರದ ಮೇಲಿನ ಗಂಡಬೇರುಂಡ ಪಕ್ಷಿಯ ಚಿತ್ರವು ಬಹು ಚಿತ್ತಾಕರ್ಷಕವಿತ್ತು. ಸುಮಾರು ೨೦೦ಕ್ಕೆ ಮಿಕ್ಕ ಮಳಿಗೆಗಳಿದ್ದವು. ಅವುಗಳಲ್ಲಿ ಸುಮಾರು [illegible]೮೦ ಮಳಿಗೆಗಳು ಹಿಂದೀ ಉದ್ದಿಮೆದಾರರವು. ಮೈಸೂರು, ಬೆಂಗಳೂರು, ಪುಣೆ, ಮುಂಬಯಿ, ಕಲಕತ್ತಾ, ಮದ್ರಾಸ ಮೊದಲಾದ ಕಡೆಯ ಬೇರೆ ಬೇರೆ ಕಾರಖಾನೆಯವರ ಮಳಿಗೆಗಳಿದ್ದವು. ಜಪಾನ ದೇಶದ ಮಿಟ್ಸುಬಿಶಿ ಕೈಸಾ ಮೊದಲಾದ ವಿದೇಶೀಯರ ಮಳಿಗೆ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ದ್ರಾಕ್ಷಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಶಿವಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾಗರ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅವ್ಯಕ್ತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಕರ್ಣ ಕರಡ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—

ಹೆಚ್ಚಿನ ವಿವರಗಳಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ [illegible] ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾ[illegible]ವನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ [illegible] ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರೋಕ್ತವಾಗಿ ಅನುಭವಪೂರ್ಣವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಉತ್ತಮವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂಥಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂಥಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ [illegible] ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ [illegible] ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ ೧೦-೧೧-೧೯೩೩

ವಿದ್ವಾನ್ ಕೇ. ಕೇಶವಶಾಸ್ತ್ರಿ ಪ್ರಧಾನ ಮಂತ್ರಿ
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಗಳಿದ್ದವು. ಟಪಾಲು ಖಾತೆಯವರು ತಮ್ಮದೊಂದು ಮಳಿಗೆಯನ್ನು ಸ್ಥಾಪಿಸಿ ಟಪಾಲು-ತಂತಿ ಖಾತೆಗಳ ಸುಧಾರಣೆಯಿಂದ ಉಂಟಾದ ಲೋಕಾನುಕೂಲತೆಗಳನ್ನು ಪ್ರತ್ಯಕ್ಷ ಸಿದ್ಧಪಡಿಸುತ್ತಿದ್ದರು. ಪೂರ್ವಕಾಲದಲ್ಲಿ ಟಪಾಲನ್ನೊಯ್ಯುವ ಸಾಧನಗಳನ್ನೂ ಈಗಿನ ಸಾಧನಗಳನ್ನೂ, ತೋರಿಸಿ ಈಗಿನ ವ್ಯವಸ್ಥೆಯಿಂದ ಟಪಾಲು ಶೀಘ್ರವಾಗಿ ಆಯಾ ಸ್ಥಳಕ್ಕೆ ತಲ್ಪುತ್ತದೆಂದು. ನೋಡಬಂದವರಿಗೆ ತಿಳಿಸಿ ಹೇಳುತ್ತಿದ್ದರು. ಮುಂಚೆ ಗಾಡಿಗಳ ಮೂಲಿಂದ ಟಪಾಲು ಊರೂರಿಗೆ ರವಾನೆಯಾಗುತ್ತಿತ್ತು. ಆ ಮೇಲೆ ಉಗಿಬಂಡಿ ಬಂತು ಹಾಗೆಯೇ ಮೋಟಾರೂ ಬಂತು. ಸಮುದ್ರಾಂತರ ಪ್ರದೇಶಗಳಿಗೆ ಹಡಗಗಳ ಮೂಲಿಂದ ಟಪಾಲು ಒಯ್ಯುತ್ತಿದ್ದರು, ಈಗ ಉಗಿಹಡಗಗಳ ಮೂಲಿಂದ ಒಯ್ಯುತ್ತಾರೆ. ಈಗ ನೆಲಮಾರ್ಗ, ಜಲಮಾರ್ಗ ಇವೆರಡರ ಜೊತೆಗೆ ಆಕಾಶ ಮಾರ್ಗ ಪ್ರಾರಂಭವಾಗಿದೆ. ವಿಮಾನಗಳಿಂದ ಟಪಾಲು ಊರೂರಿಗೆ ಹಾರಿ ಹೋಗುತ್ತಿದೆ. ಹಿಂದುಸ್ಥಾನದಿಂದ ಇಂಗ್ಲಂಡಿಗೆ ಟಪಾಲು ಹೋಗಲು ಮುಂಚೆ ೯ ತಿಂಗಳು ಹತ್ತುತ್ತಿದ್ದವು. ಈಗ ೬ ದಿನಗಳಲ್ಲಿ ಇಲ್ಲಿಯ ಟಪಾಲು ಲಂಡನಿಗೆ ತಲ್ಪುತ್ತದೆ. ತಂತಿ ವ್ಯವಸ್ಥೆಯೂ ಹಾಗೆಯೇ. ನಿಮಿಷ ಸಹ ಕಾಲಹರಣವಾಗದಂತೆ ಏರ್ಪಾಟಾಗಿದೆ. ಕಲಾಪ್ರದರ್ಶನದಲ್ಲಿ ಸುಮಾರು ೪೫೦ ಚಿತ್ರಗಳನ್ನಿಟ್ಟಿದ್ದರು. ಕರ್ನಾಟಕಸ್ಥರೂ, ಮದ್ರಾಸಿಗಳೂ, ಮಹಾರಾಷ್ಟ್ರೀಯರೂ, ಯುರೋಪಿಯನ್ನರೂ ಪಾರ್ಸಿಗಳೂ, ಮುಸಲ್ಮಾನರೂ ತಮ್ಮ ತಮ್ಮ ಕಲಾಕೌಶಲ್ಯವನ್ನು ಲೋಕಕ್ಕೆ ಪ್ರದರ್ಶಿಸಿದ್ದರು. ಕಲಕತ್ತೆಯ ಟಿಟಾಘರ ಕಾಗದ ಕಾರಖಾನೆಯವರು ತಮ್ಮ ಕಾರಖಾನೆಯಲ್ಲಿ ತಯಾರಾಗುವ ವಿವಿಧ ಕಾಗದಗಳನ್ನಿಟ್ಟಿದ್ದರು. ಮೈಸೂರ ಸರಕಾರದ ಆಶ್ರಯದಲ್ಲಿ ನಡೆಯುವ ಸಾಬೂನ ಕಾರಖಾನೆಯವರೂ, ವಿದ್ಯುತ್ ಕಾರಖಾನೆಯವರೂ ತಮ್ಮ ತಮ್ಮ ಕಾರಖಾನೆಗಳಲ್ಲಿ ತಯಾರಾಗುವ ತರತರದ ಜಿನಸುಗಳನ್ನು ಜನರಿಗೆ ತೋರಿಸಿ ಅವುಗಳ ಉಪಯುಕ್ತತೆಯನ್ನು ವರ್ಣಿಸುತ್ತಿದ್ದರು. ೧೦ ರತ್ತಲು ತೆಂಗಿನ ಎಣ್ಣೆಯಲ್ಲಿ ೧||| ರತ್ತಲು ಕೊಸ್ಟಿಕ್ ಸೋಡಾ ಮಿಶ್ರಣ ಮಾಡಿ ಕಲಿಸಿ ಕಟ್ಟಿಗೆಯ ಪೆಟ್ಟಿಗೆಯಲ್ಲಿ ಇಟ್ಟರೆ ೧೨ ತಾಸಿನೊಳಗೆ ಒಗೆಯುವ ಸಾಬೂನವಾಗುತ್ತದಾಗಿ ಪ್ರತ್ಯಕ್ಷ ತೋರಿಸೋಣಾಯಿತು. ವಿದ್ಯುತ್ ಕಂಪನಿಯವರು ತಮ್ಮ ಕಂಪನಿಯಲ್ಲಿ ತಯಾರಿಸುವ ಒಂದು ಪ್ರಕಾರದ ಬಟ್ಟಲುಗಳನ್ನು ತೋರಿಸಿದರು. ಇವು ಒಡೆಯುವದಿಲ್ಲ. ಇವುಗಳೊಳಗ ಬಿಸಿ ಪದಾರ್ಥ ಇಡಲಿಕ್ಕೂ ಅಡ್ಡಿಯಿಲ್ಲ. ಸಹೋದ್ಯಮಪುರದೊಳಗಿನ ಧಾತು ಉದ್ಯೋಗ ಕಾರಖಾನೆಯ ಕೊಡಲಿ, ಚೂರಿ ಮೊದಲಾದ ಜಿನಸುಗಳು ನೋಡತಕ್ಕಂಥವಿದ್ದವು. ಕಬ್ಬಿಣದ ಒಂದು ಉಪಯುಕ್ತ ಪಿವೆ ೧|| ಇಂಚು ಉದ್ದ ಎಲೆಯಿದ್ದ ಚಾಕುವನ್ನು ಸಹಜವಾಗಿ ಮಡಚಿ ಕಿಸೆಯಲ್ಲಿ ಹಾಕಿಕೊಳ್ಳಬಹುದು. ಪಾತ್ರೆಗಳ ಅಂಗಡಿಗಳಲ್ಲಿ ಕುಕ್ಕರ ಎಂಬ ಪಾತ್ರೆಯಿದೆ. ಈ ಪಾತ್ರೆಯೊಳಗೆ ಕೇಕ, ಬಿಸ್ಕೀಟ, ಟೋಸ್ಟ ಮೊದಲಾದ ಸವಿ ಸವಿ ಖಿರೋಸ್ಯ ಪದಾರ್ಥಗಳನ್ನು ಸುಧಾರಿಸಿದವರು ತಯಾರಿಸಿ ತಿಂದು ಸಾಹೇಬ ಸುಖ ಪಡೆಯಬಹುದು. ಬೆಂಗಳೂರಿನ ಶಾಸ್ತ್ರ ಸಂಶೋಧಕ ಇಲಾಖೆಯವರು ತಮ್ಮ ಶೋಧಗಳ ಪ್ರದರ್ಶನ ಮಾಡಿದ್ದರು. ಆಕಾಶ ನೀಲಿ ಬಣ್ಣದ್ದಾಕೆ ? ಎಂಬುದನ್ನು ತಿಳಿಸುವ ಯಂತ್ರವಿತ್ತು. ಬೆಳಕು ನಿಂತು ಕತ್ತಲೆಯಾದೊಡನೆ ಗುಣುಗುಟ್ಟುವ ಯಂತ್ರ ಮತ್ತೊಂದಿತ್ತು. ಬೇರೆಬೇರೆ ತರದ ರಸಾಯನ ಶೋಧಗಳೂ, ಅವುಗಳಿಂದ ತಯಾರಿಸಿದ ರಸಾಯನಗಳೂ ಈ ವಿಭಾಗದಲ್ಲಿ ಕಾಣಬಹುದಿತ್ತು. ಮೈಸೂರಿನ ಔದ್ಯೋಗಿಕ ಇಲಾಖೆಯವರು ಪ್ರತ್ಯೇಕ ಮಳಿಗೆಯನ್ನು ಕೊಂಡು ಖಾತೆಯವರು ನಡಿಸಿದ ಔದ್ಯೋಗಿಕ ಪ್ರಗತಿಯನ್ನು ಜನರಿಗೆ ತೋರಿಸಿದರು. ಖಾದಿಯ ಬೇರೆ ಬೇರೆ ನಮೂನೆಗಳನ್ನಿಟ್ಟಿದ್ದರು. ಗಂಧದ ಕಟ್ಟಿಗೆಯ ಮೇಲೆ ಕೊರೆದ ಮೂರ್ತಿಗಳಿದ್ದವು. ಚಿತ್ರದ ಖುರ್ಚಿ-ಮೇಜುಗಳಿದ್ದವು. ಕಡೂರು, ಶಿವಮೊಗ್ಗ, ಸಾಗರ ಮೊದಲಾದ ಕಡೆ ತಯಾರಾಗುವ ಗಂಧದ ಎಣ್ಣೆ ಪ್ರಿಂಟ್ ಶರಗತಿಯದಿತ್ತು. ಮೈಸೂರ ಸಕ್ಕರೆ ಕಾರಖಾನೆಯ ಮಣ್ಣಿನ ನಕ್ಷೆ ನೋಡಿ ಆ ಪ್ರಚಂಡ ಕಾರಖಾನೆಯ ಕಲ್ಪನೆಯಾಗುತ್ತಿತ್ತು. ದಿನಾ ೧೪೦ ಟನ್ (= ೪೨ ಮಣ) ಸಕ್ಕರೆ ತಯಾರಾಗುತ್ತದೆ. ಈ ಕಂಪನಿಯ ಸುತ್ತುಮುತ್ತು ಕಬ್ಬಿನ ದೊಡ್ಡದೊಡ್ಡ ತೋಟಗಳಿವೆ. ಮೈಸೂರ ಸರಕಾರದ ಜಂಗಲ ವಿಭಾಗದಲ್ಲಿ ಪಾಟಿ ಕಡ್ಡಿಗಳಿವೆ. 'ಟಲಿನ್' ಎಂಬ ಪದಾರ್ಥದಿಂದ ಈ ಪಾಟಿ-ಕಡ್ಡಿಗಳಾಗುತ್ತಿವೆ. ಇವನ್ನು ಕೂತಲ್ಲಿಯೇ ಮನೆಯಲ್ಲಿ ತಯಾರಿಸಬಹುದು. ಇವುಗಳಿಂದ ಪಾಟಿಗೆ ಗೆರೆ ಬೀಳುವದಿಲ್ಲ. ಮೈಸೂರ ಕಬ್ಬಿಣ ಕಾರಖಾನೆಯೊಳಗಿನ ಪಂಪು ಮೊದಲಾದ ಸಾಮಾನುಗಳು ಬಾಳಿಕೆಯವು. ಪ್ರಸಿದ್ಧ ಟಾಟಾ ಕಂಪನಿಯವರು ತಯಾರಿಸುವಂಥ ಉಕ್ಕಿನ ತರತರದ ಸಾಮಾನುಗಳನ್ನು ತಯಾರಿಸುವ

THE AGRICULTURAL & INDUSTRIAL BANK, LIMITED.
(Incorporated in British India)
Head office.- COONDAPOOR **Branch.- KUMTA**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು:— ಕುಂದಾಪುರ. **ಬ್ರೇಂಚ:— ಕುಮಟಾ.**

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
ಸೇವಿಂಗ್ಸ ಬೇಂಕ ಠೇವಣಾತಿಗೆ 6 ತಿಂಗಳಿಗೆ ... ... 4½ರಂತೆ, ಚಾಲ್ತಿ ಠೇವಣಾತಿಗೆ
ಶೇಕಡಾ 12 ತಿಂಗಳಿಗೆ . . . 5½ ,, 2½ ಮತ್ತು 1½ರಂತೆ
4% ರಂತೆ ಬಡ್ಡಿ 24 ತಿಂಗಳಿಗೆ . ... 6 ,, ಬಡ್ಡಿ
3 ವರ್ಷ ಯಾ ಹೆಚ್ಚಿನ ಅವಧಿಗೆ ... 6½ರಂತೆ

ಬಡ್ಡಿ ದರದಿಂದ ಅಂಗೀಕರಿಸಲ್ಪಟ್ಟು ಪ್ರತಿ ೩ ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವದು

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ,
ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು, ಚಕ್ಕುಗಳು ವಸೂಲಿ ವಟಾಯಿಸಲ್ಪಡುವವು.
ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು
ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು
ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಕೊಳ್ಳಬಹುದು

ಕುಮಟಾ,
ತಾ 12—10—1935

K. Vaman Shenai &
G. Balakrishna S. Nayak.
Managing Directors

ತಯಾರಿ ನಡೆದಿದೆ. ಸ್ಟ್ಯಾಂಡರ್ಡ್ ಟೈಲ್ಸ ಎಂಡ ಕ್ಲೇ ವರ್ಕ್ಸ ಎಂಬ ಹಂಚಿನ ಕಾರಖಾನೆಯಲ್ಲಿ ಪದ್ರಪಾಪ ಇಟ್ಟಂಗಿ ತಯಾರಾಗುತ್ತದೆ. ಈ ಇಟ್ಟಂಗಿ ಮಧ್ಯದಲ್ಲಿ ಪೊಳ್ಳು. ಆದರೆ ಗಟ್ಟಿ ಇಟ್ಟಂಗಿಗಿಂತ ಈ ಪೊಳ್ಳು ಇಟ್ಟಂಗಿಯೇ ಭದ್ರವಾದದ್ದು ರಿತಿವೆ. ಹೊಳಗಳನ್ನು ಸಾಕಿ ಅವುಗಳಿಂದ ಉಣ್ಣೆ ತಯಾರಿಸುವ ಕ್ರಮ. ಸಹ ತೋರಿಸಲಾಯಿತು. ಆ ಉಣ್ಣೆಯಿಂದ ತಯಾರಾದ ನೂಲು-ವಸ್ತ್ರ ಮೊದಲಾದವು ಸಹ ತೋರಿಸಲ್ಪಟ್ಟವು. ಒಟೊಮೆಟಿಕ್ ಪೆಟ್ಟಿ ಎಂಬ ಕೈ-ಮಗ್ಗಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಪ್ರಸರಿಸಿ ಒಕ್ಕಲಿಗರಿಗೆ ಸಂಪಾದನೆಯ ಮಾರ್ಗ ತೋರಿಸುವ ವ್ಯವಸ್ಥೆಯಾಗಿದೆ. ಮೈಸೂರಿನಲ್ಲಿ ವಿದ್ಯುತ್ತು ತೀರ ಅಗ್ಗವಾದದ್ದು ಹಳ್ಳಿ-ಹಳ್ಳಿಗಳಲ್ಲಿ ಸಹ ವಿದ್ಯುತ್ತಿನ ಪೂರೈಕೆಯಾಗಿದೆ. ಮೈಸೂರಿನ ಸುತ್ತುಮುತ್ತ ೧೦೦ ಗ್ರಾಮಗಳಲ್ಲಿ ವಿದ್ಯುತ್ತು ಪೂರೈಸಲ್ಪಟ್ಟಿದೆ. ಈ ಮಗ್ಗಗಳನ್ನು ಆ ಹಳ್ಳಿಗಳಲ್ಲಿ ಉಪಯೋಗಿಸಿದರೆ ಒಂದೊಂದು ಮಗ್ಗದಿಂದ ಒಂದೊಂದು ಹಳ್ಳಿಗ ಅವಶ್ಯಕ ಸಂಪೂರ್ಣ ಅರಿವೆಯನ್ನು ಪೂರೈಸಬಹುದು. ಮೈಸೂರಿನ ಅಗರಬತ್ತಿ, ಊದಬತ್ತಿಗಳು ಲೋಕಪ್ರಸಿದ್ಧವಿವೆ. ಮೇಣದ [illegible] ಸುಗಂಧದಿಂದ ಮನಸ್ಸು ಆಹ್ಲಾದವಾಗುತ್ತಿತ್ತು. ಮೈಸೂರ ಸರಕಾರದವರು ವಿಮಾ ಕಂಪನಿಗಳನ್ನು ತೆರೆದಿದ್ದಾರೆ. ವಿಮೆಯ ಕಂತು ಸಣ್ಣದು. ಸರಕಾರಿ ನೌಕರರಲ್ಲಿಯೂ ವಿಮೆ ಇಳಿಸಲೇಬೇಕು. ಜನರೂ ಇಳಿಸಬಹುದು. ಈ ಪ್ರಕಾರ ಈ ದಸರೆಯ ಪ್ರದರ್ಶನದಲ್ಲಿ ಮೈಸೂರ ಸಂಸ್ಥಾನದೊಳಗೆ ನಡೆಯುವ ಒಂದು ವರ್ಷದ ಪ್ರಗತಿಯ ಆಭಾಸ ನೋಡಬಹುದು.

⁂

ಒಂದು ಸಂಗತಿಯನ್ನು ಮಾತ್ರ ಪ್ರತ್ಯೇಕವಾಗಿ ಹೇಳಬೇಕು. ವಸ್ತ್ರಕೌಶಲ್ಯದ ವಿಭಾಗದಲ್ಲಿ ಜಮಖಂಡಿಯ ವಿಧವೆ ರಾಣೀ ಸಾಹೇಬರವರು ಇಟ್ಟ ಹೆಣಿಗೆಯ ಚಿತ್ರ ಚಿತ್ತವೇಧಕವಿತ್ತು. ರಾಣೀ ಸಾಹೇಬರು ಉಚ್ಚ ಶಿಕ್ಷಣ ಪಡೆದವರು. ಸುಸಂಸ್ಕೃತರು. ನೇಯ್ಗೆ ಕಲೆಯಲ್ಲಿ ನಿಷ್ಣಾತರು. ಪತಿಗಳ ನಿಧನದ ತರುವಾಯ ರಾಣೀ ಸಾಹೇಬರವರು ಸಂಸ್ಥಾನದ ಕಾರಭಾರವನ್ನು ಚೊಕ್ಕವಾಗಿ ನಡಿಸಿ ಕೀರ್ತಿ ಪಡೆದಿದ್ದಾರೆ. ವಿದೇಶಗಮನ ಮಾಡಿ ಅಲ್ಲಿಯ ಅನುಭವವನ್ನೂ ಪಡೆದಿದ್ದಾರೆ. ಪ್ರಸಿದ್ಧ ಎಂಡ್ರೊಕ್ಲೀಸ ನಾಟಕನು ನಿಬಿಡಾರಣ್ಯದಲ್ಲಿ ಸಿಂಹದ ಮುಳ್ಳು ತೆಗೆಯುವ ದೃಶ್ಯವನ್ನು ರಾಣೀಸಾಹೇಬರವರು ಹೊಲಿಗೆಯಿಂದ ಚಿತ್ರಿಸಿದ್ದಾರೆ. ಎಂಡ್ರೊಕ್ಲೀಸರವರು ಮುಳ್ಳು ತೆಗೆಯುವಾಗ ಸಿಂಹವು ಕೃತಜ್ಞತೆಯಿಂದ ಎಂಡ್ರೋಕ್ಲೀಸರವರಿಗೆ ನೋಡುತ್ತಿರುವ ಮುಖಮುದ್ರೆಯಂತೂ ನೋಡತಕ್ಕಂಥದ್ದಿದೆ. ಮಹಾರಾಣಿಯವರು ಈ ಭಾವವನ್ನು ಹೊಲಿಗೆಯಿಂದ ಹೇಗೆ ಪ್ರತಿಬಿಂಬ ಮಾಡಿದರೆಂದು ತಿಳಿಯದೆ ಮನುಷ್ಯನ ದಿಙ್ಮೂಢನಾಗುತ್ತಾನೆ. ಎಂಡ್ರೋಕ್ಲೀಸನವರ ಅಂಗಿ, ದೇಹಯಷ್ಟಿ, ಮುಖಮುದ್ರೆ, ಸಿಂಹದ [illegible] ಇವೆಲ್ಲ ರಾಣೀಸಾಹೇಬರವರ ಹಸ್ತಕೌಶಲ್ಯಪ್ರಾವೀಣ್ಯವನ್ನು ಬಲು ಸೊಗಸಾಗಿ ಚಿತ್ರಿಸುತ್ತವೆ. ಅಲ್ಲಲ್ಲಿ ಬೇರೆ ಬೇರೆ ಬಣ್ಣಗಳ ನೂಲನ್ನು ರಾಣೀಸಾಹೇಬರವರು ನೇಯ್ದದ್ದರಿಂದ ಚಿತ್ರವು ವಿಶೇಷ ರಮಣೀಯವಾಗಿದೆ. ಸ್ತ್ರೀ ಕಲಾಕೌಶಲ್ಯ ವಿಭಾಗದಲ್ಲಿ ಒಪ್ಪುತ್ತಿರುವ ಕುದುರೆಯೂ, ಹೂದೋಟಗಳವೆ, ಇನ್ನೂ ಅನೇಕ ಚಿತ್ರಗಳಿವೆ. ಆದರೆ ಎಲ್ಲವುಗಳಿಗಿಂತಲೂ ಈ ಚಿತ್ರ ನೋಡಿದರೆ ಅಲ್ಲಿಂದ ಕದಲಲಾರದವರಿಲ್ಲ. ಮಹಾರಾಣಿ[illegible]ವರಿಗೆ ಈ ಚಿತ್ರ ತಯಾರಿಸಲು ಒಂದು ವರ್ಷ ತಗಲಿತಂತೆ. ಪ್ರದರ್ಶನ ಮಂಡಳದವರು ಸಂತೋಷಪಟ್ಟು ಮಹಾರಾಣಿಯವರಿಗೆ ಸುವರ್ಣ ಪದಕವನ್ನು [illegible] ಮಹಾರಾಣಿಯವರು ಸಂಸ್ಥಾನದೊಳಗಿನ ಸ್ತ್ರೀಯರಿಗೂ ಕಲಾಕೌಶಲ್ಯದ ಅಭಿರುಚಿ ಹಚ್ಚಿ ಅವರ ಕಡೆಯಿಂದ ಕಲಾಕೌಶಲ್ಯದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಈ ಪ್ರಕಾರ ಲೋಕಕಲ್ಯಾಣವು ಸಾಧಿಸುವ ಮಹಾರಾಣಿಯವರ ಕಡೆಯಿಂದ ನೆಟ್ಟಗೆ [illegible] ಲೋಕಕಲ್ಯಾಣವಾಗಲಿ [illegible] ಕಾರ್ಯ [illegible]ಸುತ್ತೇವೆ.

⁂

[illegible] ಕತ [illegible] ಬೇಸಾಯದ [illegible] ಮಾಡುವಾಗ ಬೇಸಾಯದ ಉದ್ಯಮ [illegible] ವಿಚಾರಗಳು ಮನಸ್ಸಿಗೆ ಬರುತ್ತವೆ. ಬೇಸಾಯ ಉದ್ದಿಮೆಯಲ್ಲವಾಗಿ ಕೆಲವರು ಹೇಳುತ್ತಾರೆ. ಇದಕ್ಕೆ ನನ್ನ ಒಪ್ಪಿಗೆಯಿಲ್ಲ. ಬೇಸಾಯವು ಒಂದು ಉದ್ದಿಮೆಯೇ. [illegible] ಕಾರಖಾನೆಯಂತೆ ಆದಾಯದ [illegible] ಬೇಸಾಯದಿಂದ ಸರಿಗೆ ಅನ್ನ, [illegible] ಸರಕಾರಗಳಿಗೆ ಕಂದಾಯ ಸಿಗುತ್ತದೆ. ಇದನ್ನು ಉನ್ನತಿಪಡಿಸುವದಕ್ಕಾಗಿ ಸರಕಾರವೂ ಜನರೂ ಪ್ರಯತ್ನ ಪಡಬೇಕು. ಯಾವದೇ ಉದ್ದಿಮೆ ಸರಿಯಾಗಿ ನಡೆಯಬೇಕಾದರೆ ಆ ಉದ್ದಿಮೆದಾರರಿಗೆ ಯೋಗ್ಯ ಲಾಭ ಸಿಗಬೇಕು, ಉದ್ದಿಮೆ ನಡಿಸುವ ಕೂಲಿಕಾರರಿಗೆ ತಕ್ಕ ಕೂಲಿ ಸಿಗಬೇಕು. ಇವೆರಡೂ ಪೂರೈಕೆಯಾಗುವಂತೆ ಆ ಉದ್ದಿಮೆಯ ಸರಕು ಮಾರಾಟವಾಗತಕ್ಕದ್ದು. ಹಿಂದುಸ್ಥಾನಕ್ಕೆ ವಿದೇಶಗಳಿಂದ ಅನ್ನ ಸಾಮುಗ್ರಿ ಆಮದು ಮಾಡುವ ಗರಜಿಲ್ಲ. ಒಂದಾನೊಂದು ಕಾಲದಲ್ಲಿ ಆಹಾರ ಸಾಮುಗ್ರಿ ಕಡಿಮೆ ಬೀಳುತ್ತದಾಗಿ ಎಣಿಸಿದಾಗ್ಯೂ ಬಂಜರು ಬಿದ್ದ ಭೂಮಿಗಳನ್ನು ಸಾಗುವಳಿ ಮಾಡಿ ಆಹಾರ ಸಾಮುಗ್ರಿಗಳನ್ನು ಬೆಳಸಬಹುದು. ಸುಧಾರಿಸಿದ ಕ್ರಮಗಳನ್ನು ಕೈಕೊಂಡು ಬೆಳೆಯುವದನ್ನೂ ಹೆಚ್ಚಿಸಬಹುದು. ಆದರೆ ಅದಕ್ಕೆ ಪ್ರೋತ್ಸಾಹ ಬೇಕು. ಕಾಳು ಕಡಿಗಳ ದರ ಯೋಗ್ಯವಾಗಿ ಸಿಗುತ್ತಿದ್ದರೆ ಬೇಸಾಯಕ್ಕೆ ಪ್ರೋತ್ಸಾಹ ಸಿಗುತ್ತದೆ. ಸರಕಾರವು ವಿದೇಶದಿಂದ ಬರುವ ಅಕ್ಕಿ, ಜತ್ತ ಇವುಗಳ ಮೇಲೆ ಪ್ರತಿಬಂಧ ಇಡದ್ದರಿಂದ ಅಕ್ಕಿಯ ದರ ಇಳಿದು ಬೇಸಾಯಕ್ಕೆ ತೊಂದರೆಯಾಗಿದೆ. ಸರಕಾರವು ಪ್ರತಿಬಂಧಗಳನ್ನೊದಗಿಸಿ ಆಹಾರ ಸಾಮುಗ್ರಿಗಳ ದರವನ್ನು ಸ್ಥಿರಪಡಿಸತಕ್ಕದ್ದು. ಮತ್ತೊಂದು ಮಾತೇನಂದರೆ, ಬೇಸಾಯಕ್ಕೆ ವಿನಿಯೋಗವಾಗುವ ಬಂಡವಲಿನ ಮೇಲೆ ತಕ್ಕ ಪ್ರತಿಫಲ ಸಿಗಬೇಕು. ಬಂಡವಲಿನ ಮೇಲಿನ ಬಡ್ಡಿ ಉದ್ದಿಮೆಯಲ್ಲಿ ಹುಟ್ಟದಿದ್ದರೆ ಆ ಉದ್ದಿಮೆ ಏಳ್ಗೆ ಹೊಂದದು. ಸಾಮಾನ್ಯ

THE INDIAN MERCANTILE INSURANCE CO. LTD.,
BOMBAY.

(*Established in 1907*)

A Solid and purely Indian Life Office which has substantial growth under the Chairmanship of the late Sir Manmohandas Ramji, Kt.

WANTED Energetic & Influential Agents and experienced Organisers both on commission & pay for the Karnatak Districts.

For particulars apply to

G. Yellapurkar & Sons,
Chief Agents for Karnatak,
Market Square, **KARWAR.**

ಇಂಡಿಯನ್ ಮರ್ಕೆಂಟೈಲ ಇನ್ಸ್ಯೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು
ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗೂ ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ ಕಾರವಾರ.

ವರುಷಗಳಲ್ಲಿ ಶೇಕಡಾ ೨ರಿಂದ ೫ರ ತನಕ ಬೇಸಾಯದಿಂದ ಬಡ್ಡಿ ಹುಟ್ಟುತ್ತದೆ. ಒಳ್ಳೇ ಬೆಳೆಯಾದರೆ ಶೇಕಡಾ ೬ರಂತೆ ಬಡ್ಡಿ ಹುಟ್ಟಿದರೆ ಹೆಚ್ಚಾಯಿತು. ೫ ವರ್ಷಕ್ಕೊಮ್ಮೆ ಬೆಳೆ ಕೆಟ್ಟು ಹೋಗುತ್ತದೆ. ಇಂಥ ಸಂದರ್ಭದಲ್ಲಿ ಶೇಕಡಾ ೬ ಸಲೆ ಬಡ್ಡಿಯಿಂದ ಋಣ ಪಡೆದರೆ ಕ್ರಮವಾಗಿ ಬೇಸಾಯಗಾರನು ನಾದಾರಿಯಾಗಲೇಬೇಕು. ಶೇಕಡಾ ೬ ಸಲೆ ಬಡ್ಡಿ ಹಿಂದುಸ್ಥಾನದಲ್ಲಿ ವಿಪರೀತವೆಂದು ಎಣಿಸಲೇ ಬೇಕು. ೬ಕ್ಕಿಂತ ಹೆಚ್ಚು ಬಡ್ಡಿಗೆ ಸಾಲ ಪಡೆದವರು ಬೇಸಾಯದಿಂದ ಆ ಸಾಲದ ಬಡ್ಡಿಯನ್ನು ತೀರಿಸಲಾರರು. ಭೂಮಿಯನ್ನು ಸಾವಕಾರರಿಗೆ ಮಾರಲೇ ಬೇಕು. ಬೇಸಾಯಗಾರರಿಗೆ ಬದುಕಿಸಲಿಚ್ಛಿಸುವವರು ತೀರ ಕಡಿಮೆ ಬಡ್ಡಿಯನ್ನು ಆಕರಿಸಿ ಸಣ್ಣ ಸಣ್ಣ ಕಂತು ಮಾಡಿ ಕೊಡಬೇಕು"

⁂

ಡಾ| ಸತ್ಯನಾಥನ್‌ರವರು ಚೌಕಶಿಯಿಂದ ಬರೆದ ಅಭಿಪ್ರಾಯವನ್ನು ಸರಕಾರವು ಆಳವಾಗಿ ಪರಾಂಬರಿಸಬೇಕಾಗಿ ನಮ್ಮ ಸೂಚನೆ. ಸತ್ಯನಾಥನ್‌ರವರು ಬೇಸಾಯದಿಂದ ಶೇಕಡಾ ೨ರಿಂದ ೫ರ ತನಕ ಪ್ರತಿಫಲ ಸಿಗುತ್ತದಾಗಿ ಹೇಳುತ್ತಾರೆ. ಶೇಕಡಾ ೬ ಸಲೆ ಬಡ್ಡಿ ವಿಪರೀತವೆಂದೂ ಅವರ ಅಂಬೋಣ. ಅದನ್ನು ಪ್ರಾಮಾಣಿಕ ಬೇಸಾಯಗಾರರು ತೀರಿಸುವದಸಾಧ್ಯವೆಂದೂ ಈ ದರದಿಂದ ಬಡ್ಡಿಗೆ ಕೊಡುವ ಸಾವಕಾರರು ಮುಂದೆ ಭೂಮಿಯನ್ನೇ ಪಡೆಯುತ್ತಾರೆಂದೂ ಅವರು ಅಭಿಪ್ರಾಯಪಡುತ್ತಾರೆ. ಸಾವಕಾರರಿಗೆ ಸಾಲಗಾರನ ಭೂಮಿಯ ಮೇಲೆ ಕಣ್ಣಿಲ್ಲ, ಅವನ್ನವರು ಅಪೇಕ್ಷಿಸುವದಿಲ್ಲ. ಅವರಿಗೆ ಬೇಕಾದದ್ದು ದುಡ್ಡು! ದುಡ್ಡಿನ ಅಭಾವದಲ್ಲಿ ನಿರುಪಾಯದಿಂದ ಅವರು ಭೂಮಿ ಕೊಳ್ಳಬೇಕಾಗುತ್ತದೆ. ಹೀಗೆ ಸಾವಕಾರರಿಗೆ ವ್ಯಾಕರಿಕೆ ಉಂಟಾಗುವದರಿಂದ ಸಾಲಗಾರರ ದುಡ್ಡಿನ ಭೂಮಿ ಸಾವಕಾರರಿಗೆ ದಮಡಿನ ಮಾರಿ ಹೋಗುತ್ತದೆ. ಭೂಭದ್ರ ಬೇಂಕುಗಳನ್ನು ಸ್ಥಾಪಿಸಿದ್ದರಿಂದ ಈ ಸ್ಥಿತಿ ಬದಲದ. ಭೂಭದ್ರ ಬೇಂಕಿನ ಬಡ್ಡಿಯ ದರ ಶೇಕಡಾ ೬ರಂತೆ! ಡಾ| ಸತ್ಯನಾಥನ್‌ರವರ ಅಭಿಪ್ರಾಯದಂತೆ ಈ ಬಡ್ಡಿ ವಿಪರೀತವಾದುದು. ಈ ಬಡ್ಡಿ ತೆರುವ ಸಾಮರ್ಥ್ಯ ಸಾಮಾನ್ಯ ಬೇಸಾಯಗಾರರಿಗಿಲ್ಲ. ಈ ದರದಿಂದ ಸಾಲ ಪಡೆದಲ್ಲಿ ಸಾವಕಾರರಿಗೆ ಭೂಮಿ ಒಪ್ಪಿಸುವ ಪ್ರಸಂಗವಿರುವದಾಗಿ ಹೇಳಿದ ಬಳಿಕ ಭೂಭದ್ರ ಬೇಂಕಿನಿಂದ ಸಾಲಗಾರರ ಋಣವಿಮೋಚನೆಯಾಗುವದರ ಬದಲಿಗೆ ಸಾಲಗಾರರ ಭೂಮೋಚನವಾಗಿ ಬೇಸಾಯ ಸಮಾಜದ ಘಾತವಾಗುವದೆಂದು ವಿಚಾರವಂತರು ಗ್ರಹಿಸಿದರೆ ವಸ್ತುಸ್ಥಿತಿಯ ನಿದರ್ಶಕವಾಗುವದು. ಸರಕಾರವು ಈ ವಿಷಯ ವಿಚಾರ ಮಾಡಿ ಈಗಿನಿಂದಲೇ ಮುಂಜಾಗ್ರತೆ ಕೈಕೊಳ್ಳತಕ್ಕದ್ದು.

⁂

ಸಾಲಗಾರರಿಗೆ ಸರಕಾರವು ನೆರವಾಗುವ ಪರಿಮಿತಿಯನ್ನೇ ಡಾ| ಸತ್ಯನಾಥನ್‌ರವರು ತಿಳಿಸಿದ್ದಾರೆ. ಚಿಕ್ಕ ಕಂತುಗಳನ್ನು ಮಾಡಿಕೊಡತಕ್ಕದ್ದು. ಬಡ್ಡಿಯ ದರ ಇಳಿಸತಕ್ಕದ್ದು. ಪಂಚಾಯತಿಯಿಂದ ಸಾಲದ ಮೊಬಲಗನ್ನು ಕುಗ್ಗಿಸತಕ್ಕದ್ದು. ಆದರೆ ಕಂತಿನ ರಕಮಾಗಲಿ, ಬಡ್ಡಿಯ ರಕಮಾಗಲಿ ಬೇಸಾಯಗಾರರ ಉತ್ಪತ್ತಿಯೊಳಗಿಂದಲೇ ತೀರುವಂತೆ ಏರ್ಪಾಟಾಗತಕ್ಕದ್ದು. ಶೇಕಡಾ ೨ರಿಂದ ೫ರ ತನಕ ಬೇಸಾಯದಿಂದ ಪ್ರತಿಫಲ ಸಿಗುತ್ತದೆಂದಾದ ಬಳಿಕ ಋಣವಿಮೋಚನೆ ಯೋಜನೆಯೊಳಗೆ ಪರ್ಯಾಸವೇ. ಇದಕ್ಕೂ ಮಿಕ್ಕಿ ಹಣ ತೆರುವ ಪ್ರಸಂಗವಿದ್ದಲ್ಲಿ ಅದನ್ನು ತೆರುವ ಬಗೆ ಹೇಗೆಂದು ಸರಕಾರವೇ ಕಲ್ಪಿಸಿ ಪರಿಹಾರ ಯೋಜನೆಯನ್ನು ಕೈಕೊಳ್ಳತಕ್ಕದ್ದು, ಕೈಕೊಂಡರ ಮಾತ್ರ ಋಣಪಾತಕಿಗಳು ಋಣಪಾತಕದೊಳಗಿಂದ ವಿಮುಕ್ತರಾದಾರು. ಟಪಾಲು ಖಾತೆಯಲ್ಲಿ ಸೇವಿಂಗ್ಸ ಬೆಂಕ ಠೇವಿನಿಂದ ಸರಕಾರವು ಕೋಟ್ಯಾವಧಿ ರೂಪಾಯಿಗಳನ್ನು ಸಂಗ್ರಹಿಸುತ್ತಿದೆ. ಈ ಹಣವನ್ನು ಜಪಾನ ಸರಕಾರವು ಪ್ರಾಮುಖ್ಯವಾಗಿ ಬೇಸಾಯಗಾರರಿಗಾಗಿ ವಿನಿಯೋಗಿಸುತ್ತದೆ. ಸರಕಾರವು ಈ ಹಣವನ್ನು ಭೂಭದ್ರ ಬೇಂಕುಗಳ ವಿದ್ಯಮಾನ ಬೇಸಾಯಗಾರರಿಗೆ ಹಂಚಬಹುದು. ಹೆಚ್ಚೆಂದರೆ ಶೇಕಡಾ ೪ರಂತೆ ಬಡ್ಡಿ ಬೀಳುವ ಒಂಡವಲನ್ನು ಭೂಭದ್ರ ಬೇಂಕುಗಳ ವಿದ್ಯಮಾನ ಸಾಲಗಾರರಿಗೆ ಕೊಡುವ ಯೋಜನೆಯಾಗಬೇಕು. ಹಳ್ಳಿ-ಹಳ್ಳಿಗಳಲ್ಲಿ ಉಪ-ಧಂದೆಗಳನ್ನು ನಿರ್ಮಿಸತಕ್ಕದ್ದು. ಗ್ರಾಮೋದ್ಧಾರದ ಬಾಯ್ಬಡಿಕೆಯನ್ನಷ್ಟೇ ನಡಿಸದೆ ಪ್ರತ್ಯಕ್ಷವಾಗಿ ಗ್ರಾಮೋದ್ಧಾರವನ್ನು ಕೈಕೊಳ್ಳತಕ್ಕದ್ದು. ಗ್ರಾಮೋದ್ಧಾರದ ಪ್ರಧಾನ ಅಂಗ ಉಪ ವ್ಯವಸಾಯಗಳ ಉದ್ಧಾರ. ಯಾವದೊಂದು ಉದ್ದಿಮೆಯನ್ನು ಬೇಸಾಯಗಾರರಿಗೆ ಪೂರೈಸದೆ ಬರೀ ಗ್ರಾಮೋದ್ಧಾರದ ಉದ್ದುದ್ದ ಪ್ರಕಟಣೆಗಳನ್ನು ಹೊರಡಿಸಿ ಪ್ರಯೋಜನವಿಲ್ಲ. ನೆರೆ-ಹೊರೆ ಬೆಟ್ಟವಿದ್ದಲ್ಲಿ ಬೆಟ್ಟದ ಕೈಗಾರಿಕೆಗಳನ್ನು ಪ್ರೋತ್ಸಾಹಿಸತಕ್ಕದ್ದು. ತಾಳೇ ಮರಗಳಿದ್ದಲ್ಲಿ ತಾಳೇ ಕೊಡೆಗಳ ಪುರಸ್ಕಾರವಾಗತಕ್ಕದ್ದು. ಕೈನೂಲ-ಕೈಮಗ್ಗಗಳನ್ನು ಏರ್ಪಡಿಸಲು ಗ್ರಾಮೋದ್ಧಾರ ಸಂಕಲ್ಪ ಮಾಡಿದ ಸರಕಾರವೇ ಮುಂದಾಗಬೇಕು. ಔಂಧ ಸಂಸ್ಥಾನಿಕರಂತೆ ರಾಜಾರ್ಧವನ್ನು ನೂಲಿನಿಂದ ಸರಕಾರವು ಕೊಳ್ಳಲೊಪ್ಪಿದಲ್ಲಿ ಗ್ರಾಮಗಳಲ್ಲಿ ವಿಲಕ್ಷಣವಾದ ಕ್ರಾಂತಿಯುಂಟಾದೀತು. ನೂಲಿನಂತೆ ಬೇರೆ ಕಾಯಕಷ್ಟದ ಇಲ್ಲವೆ ಹಸ್ತಕೌಶಲ್ಯದ ಸಾಮಗ್ರಿಗಳನ್ನು ಸರಕಾರವು ಏರ್ಪಡಿಸಬಹುದು. ಈ ಪ್ರಕಾರ ಬೇಸಾಯಗಾರರ ಸಂಪಾದನೆಯನ್ನು ಸರಕಾರವು ಬೆಳಸಿ ಅದಕ್ಕನುಸಾರವಾಗಿ ಸಾಲದ ಕಂತುಗಳನ್ನು ನಿರ್ಧರಿಸಿದರೆ ಮಾತ್ರ ಭೂಭದ್ರ ಬೇಂಕುಗಳಿಂದ ಸಾಲಗಾರರು ಸರಕಾರದ ಸತ್ಸಂಕಲ್ಪದಂತೆ ಋಣವಿಮೋಚನೆ ಹೊಂದುವರು. ಸಾಲಗಾರರ ವಿಪತ್ತು ಬೀಳುವದೇ ಪತ್ತಿನ ಸಂಘಗಳ ಸ್ಥಾಪನೆಯ ಪೂರ್ವಪೀಠಿಕೆ. ವಿಪತ್ತಿನ ಅಭಾವದಲ್ಲಿ ಪತ್ತಿನ ಸಂಘಗಳಿಂದ ಇದ್ದ ಪತ್ತು ಶೀಘ್ರವೇ ಬಯಲಾಗಿ ಸಾಲಗಾರರು ಮತ್ತಿಷ್ಟು ದರಿದ್ರರಾಗುತ್ತಾರೆ. ಸಾವಕಾರರ ಸಾಲ ತೀರಿಸಲಿಕ್ಕೆ, ಪತ್ತಿನ ಸಂಘಗಳ ಸಾಲ ತೀರಿಸಲಿಕ್ಕೆ ಭೂಭದ್ರ ಬೇಂಕು, ಭೂಭದ್ರ ಬೇಂಕಿನ ಸಾಲ ತೀರಿಸಲಿಕ್ಕೆ ಭದ್ರತೆ ಕೊಟ್ಟ ಭೂಮಿ" ಈ ಪ್ರಕಾರ ಸಾಲಗಾರರ ಅವಸ್ಥೆಯಾಗಿದೆ. ಸರಕಾರಕ್ಕೆ ಸಾಲಗಾರರ ಸ್ಥಿತಿ ಈಗ ಒಂದಿಲ್ಲೊಂದು ರೀತಿಯಿಂದ ತಿಳಿದು ಹೋಗಿದೆ. ಇಂಥ ಪ್ರಸಕ್ತಿಯಲ್ಲಿ ಅದಕ್ಕನುಸಾರವಾಗಿ ಉಪಾಯಯೋಜನೆ ಮಾಡದೆ ಬರೀ ಭೂಭದ್ರ ಬೇಂಕುಗಳನ್ನು ಸ್ಥಾಪಿಸುವದರಿಂದೇನು ಪ್ರಯೋಜನ?

Murdeshwar Shrinivasrao &Co ,
Commission Agents,
Yellapur. (N. Kanara)

ಮುರ್ಡೇಶ್ವರ, ಶ್ರೀನಿವಾಸರಾವ್ ಎಂಡ್ ಕೋ,
ದಲಾಲ, ಯಲ್ಲಾಪುರ.

ನಮ್ಮ ಅಡಿಕೆ, ಯಾಲಕ್ಕಿ, ಮೆಣಸು ವಗೈರೆಯ ದಲಾಲಿ ಕಂಪನಿ ಕೆಲಸಕ್ಕೆ ಶುರು ಮಾಡಿರುತ್ತದೆ. ಹೆಚ್ಚಿಗೆ ಮಾಹಿತಿ ಬಗ್ಗೆ ಪತ್ರವ್ಯವಹಾರದಿಂದ ಅಥವಾ ಸಮಕ್ಷ ಬಂದಲ್ಲಿ ತಿಳಿದೀತು

ShrinivasRao,
Managing Agent, YELLAPUR.

For sale ! For sale !! For sale !!

Udipi Syndicate Bank Preference Shares for sale !

Rate less than the market rate !

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs 7 by the Bank authorities.

These shares will be sold less than the market rates Intending buyers should apply to the following address:-

Vithal Subraya Prabhu Shiroorkar,
Post ANKOLA.

ಬ್ರಿಟಿಶರು ದುಮುಕುತ್ತಾರೆ!

[ನಿರೀಕ್ಷಕನು ಬರೆದುದು.]

ನಮ್ಮ ಬ್ರಿಟಿಶರು ಯಾವ ಪಕ್ಷಕ್ಕೆಂದು ನನಗೆ ಎಲ್ಲರೂ ಕೇಳುವವರೇ! ಸಾಮಾನ್ಯವಾಗಿ ಅವರು ಹಬಸಿ ಪಕ್ಷಕ್ಕೆಂದು ನಾನು ಮೊದಲೇ ಹೇಳಿಬಿಟ್ಟಿದ್ದೇನೆ. ಈಗಿನ ಘಟನೆಗಳೂ ಆ ಕಡೆಗೇ ಮುಂದರಿಯುತ್ತಿವೆ ಇತಾಲಿಗೆ ಲೋಕಕಂಟಕ (aggressor) ರಾಷ್ಟ್ರವೆಂದು ರಾಷ್ಟ್ರಸಂಘ ತೀರ್ಮಾನಿಸಿದ್ದೇನೋ ನಿಜ. ಲೋಕಕಂಟಕತನಕ್ಕೆ ಶಾಸನ ಮಾಡುವದಕ್ಕಾಗಿ ರಾಷ್ಟ್ರಸಂಘದವರು ಬೇರೆ ಬೇರೆ ಮಂಡಳಗಳನ್ನು ನೇಮಿಸಿಕೊಂಡು ವಿಚಾರಮಗ್ನರಾಗಿದ್ದಾರೆ "ಇತಾಲಿಯ ಸರಕುಗಳನ್ನು ಬಹಿಷ್ಕರಿಸಬೇಕು; ಇತಾಲಿಯವರಿಗೆ ಉದ್ದರಿ ಕೊಡಬಾರದು, ಇತಾಲಿಗೆ ಸರಕುಗಳನ್ನು ಕಳಿಸಕೂಡದು." ಇವೇ ಮೊದಲಾದ ಶಾಸನ ಕ್ರಮಗಳನ್ನು ರಾಷ್ಟ್ರಸಂಘದ ಮಂಡಳಗಳು ಮನ್ನಿಸಿಕೊಳ್ಳುತ್ತಿವೆ. ರಾಷ್ಟ್ರಸಂಘಕ್ಕೊಪ್ಪಿದ ರಾಷ್ಟ್ರಗಳೊಳಗೆ ಇತಾಲಿ ದೇಶದೊಳಗಿಂದ ರಫ್ತಾಗುವ ಮುಕ್ಕಾಲು ಪಾಲು ಸರಕು ಸೇರುತ್ತಿದ್ದದ್ದರಿಂದ ಬಹಿಷ್ಕಾರ ಕ್ರಮದಿಂದ ಇತಾಲಿಯು ಹಣ್ಣಿಗೆ ಬರಬಹುದೆಂದು ರಾಷ್ಟ್ರಸಂಘದ ಅಭಿಮಾನಿಗಳ ಆಲೋಚನೆ. ಇತಾಲಿಯು ಇಂಥ ಶಾಸನಕ್ಕೆ ಬೆದರುವದಿಲ್ಲವಾಗಿಯೂ, ಇವನ್ನೆಲ್ಲ ಮುಂದಾಗಿಯೇ ಎಣಿಸಿ ಹಬಸಿವಾದವನ್ನು ಇತಾಲಿಯು ನಡಿಸಿರುವದಾಗಿಯೂ ರೋಮ ಪಟ್ಟಣದಲ್ಲಿ ಹೇಳುತ್ತಾರೆ. ಮಿ| ಬ್ರೇಲ್ಸಫರ್ಡರವರು ನುಡಿದಂತೆ ಬ್ರಿಟಿಶ-ಫ್ರೆಂಚರು ಒಕ್ಕಟ್ಟಾಗಿ ಎಡೆಗಟ್ಟಿ ಮಾಡಿ ಸುಯೇಜ ಕಾಲುವೆಯನ್ನು ಒಮ್ಮೆಲೇ ಮುಚ್ಚಿಬಿಟ್ಟಿದ್ದರೆ ಮುಸೊಲಿನಿಯವರ ದರ್ಪ ಒಮ್ಮೆಲೇ ಇಳಿಯಬಹುದಿತ್ತು. ಆದರೆ ಅದೇನೂ ಘಟಿಸಲಿಲ್ಲ. ಫ್ರೆಂಚರು ಅಂತಃಕರಣಪೂರ್ವಕವಾಗಿ ಬ್ರಿಟಿಶರೊಡನೆ ಸಹಕಾರ ಮಾಡಬಯಸುವದಿಲ್ಲ. ಫ್ರೆಂಚ ರಾಯಭಾರಿಗಳಾದ ಲಾವಲ್‌ರವರು ಇನ್ನೂ ಮುಸೊಲಿನಿಯ ಗಡ್ಡ ಹಿಡಿದು ಸಂಧಿ ಪ್ರಸ್ತಾವನ್ನು ನಡಿಸುತ್ತಿದ್ದಾರೆ. ಮುಸೊಲಿನಿಯವರು ಸಿಟ್ಟಿಗೇಳಬಾರದೆಂದು ಶಾಸನ ಕ್ರಮವನ್ನು ಸೌಮ್ಯರೂಪದಲ್ಲಿಯೇ ಪ್ರಯೋಗಿಸಬೇಕಾಗಿ ಲಾವಲ್‌ರವರು ರಾಷ್ಟ್ರಸಂಘದಲ್ಲಿ ಬಲವಂತ ಮಾಡುತ್ತಾರಾಗಿ ವಾರ್ತೆ. ಭೂಮಧ್ಯ ಸಮುದ್ರದೊಳಗೆ ಬ್ರಿಟಿಶರು ಹಡಗುಪಡೆಗಳನ್ನು ಶೇಖರಿಸಿ ಪ್ರಬಲರಾದ ಸಂಗತಿ ಈ ಹಿಂದೆಯೇ ನಾನು ನಮೂದಿಸಿಬಿಟ್ಟಿದ್ದೇನೆ. ಪ್ರತಿಯಾಗಿ ಇತಾಲಿಯವರು ಸಿಸಿಲಿ ದ್ವೀಪದಲ್ಲಿಯೂ, ದಕ್ಷಿಣ ಪಾರ್ಶ್ವದೊಳಗಿನ ಇತಾಲಿಯ ಬಂದರಗಳಲ್ಲಿಯೂ ಹಡಗುಪಡೆಗಳನ್ನು ಕೂಡಿಸುತ್ತಿದ್ದಾರೆ. ಸಿಸಿಲಿಯಲ್ಲಿ ಸಾವಿರಾರು ಕೂಲಿಯಾಳುಗಳು ಹಗಲಿರುಳು ದುಡಿದು ವಿಮಾನ ಠಾಣ್ಯಗಳನ್ನು ರಚಿಸುತ್ತಿದ್ದಾರೆ. ಜಲನಾವೆಗಳು ಈ ಪ್ರದೇಶದಲ್ಲಿ ಸುಳಿದಾಡುತ್ತಿವೆ. ಇತಾಲಿಯ ಸಿಸಿಲಿಯಿಂದ ಬ್ರಿಟಿಶರ ಮಾಲ್ಟಾ ಒಂದು ೩೦ ನಿಮಿಷಗಳ ಆಕಾಶ ದಾರಿ. ಆಕಾಶ ಮಾರ್ಗದಿಂದ ವಿಮಾನ ಹಾರಿಹೋಗಿ ಬಾಂಬು ಎಸೆದು ಮಾಲ್ಟಾ ನಡುಗಡ್ಡೆಯನ್ನು ಧ್ವಂಸ ಮಾಡಬಹುದು ಮಾಲ್ಟಾ ನಡುಗಡ್ಡೆ ಸುಯೇಜ ಕಾಲುವೆಯ ಉತ್ತರ ಪಾರ್ಶ್ವದಲ್ಲಿದ್ದು ಅಲ್ಲಿಂದಲೇ ಬ್ರಿಟಿಶ ಹಡಗಗಳು ಮುಂದೆ ಪೂರ್ವ ಆಫ್ರಿಕೆಗೆ ಬರಬೇಕು. ಅಲ್ಲಿಯೇ ಬ್ರಿಟಿಶ ಹಡಗುಪಡೆಗಳಿಗೆ ಹಿಡಿದಿಟ್ಟು ಭೂಮಧ್ಯ ಸಮುದ್ರದೊಳಗಿಂದ ಪರಿದಾಡಗೊಡದಂತೆ ಇತಾಲಿಯು ಹೊಂಚು ಹಾಕಿದೆ. ತಮ್ಮ ಪೂರ್ವ ಆಫ್ರಿಕೆಯ ಎರಿಟ್ರಿಯಾ ಪ್ರಾಂತದ ಮಸೋವಾ ಬಂದರದಲ್ಲಿಯೂ ಇತಾಲಿಯವರು ೧೫ ಇಂಚು ಪರಿಘದ ತೋಪುಗಳನ್ನೂ ೪ ೬ ಇಂಚು ಪರಿಘದ ತೋಪುಗಳನ್ನೂ ಹಡಗುಪಡೆಗಳನ್ನೂ ನಿಲಿಸಿಟ್ಟಿದ್ದಾರೆ. ಬ್ರಿಟಿಶ ಇತಾಲಿ ದೇಶಗಳೊಳಗಿನ ವೈಮನಸ್ಸು ಸಂಗ್ರಾಮದೊಳಗೆ ಪರಿಣಮಿಸಿದಲ್ಲಿ ಮಾಲ್ಟಾ ಪಟ್ಟಣ ತಪ್ಪಿಸಿಕೊಂಡು ಬಂದ ಹಡಗುಪಡೆಗಳು ಇಲ್ಲಿ ಜಲಸಮಾಧಿ ಹೊಂದಬೇಕಾದೀತು ಎರಿಟ್ರಿ ಪ್ರದೇಶದಲ್ಲಿ ೫೦೦ ವಿಮಾನಗಳಿವೆ. ಇತಾಲಿಯವರು ಸೋಮಾಲಿ ಪ್ರಾಂತದಲ್ಲಿ ೩೦೦ ವಿಮಾನಗಳನ್ನು ಸಜ್ಜಾಗಿ ಇರಿಸಿಟ್ಟುಕೊಂಡಿದ್ದಾರೆ ಇದರಿಂದ ಕೆಂಪು ಸಮುದ್ರದಲ್ಲಿ ನಿರಾತಂಕವಾಗಿ ಓಡಾಡುವದು ಬ್ರಿಟಿಶ ಹಡಗಗಳಿಗೆ ಗಂಡಾಂತರವು. ಇಜಿಪ್ತ ದೇಶದ ಪಶ್ಚಿಮ ಭಾಗದಲ್ಲಿ ಲಿಬಿಯಾ ಪ್ರಾಂತವಿದೆ. ಇದು ಇತಾಲಿಯದು. ಇಜಿಪ್ತ ದೇಶದವರು ಜಾಗ್ರತೆಯಿಂದಿರಬೇಕೆಂದು ಲಿಬಿಯಾ ಪ್ರಾಂತದಲ್ಲಿ ಮುಸೋಲಿನಿಯವರು ಸೈನ್ಯಸಂಗ್ರಹ ಮಾಡತೊಡಗಿದ್ದಾರೆ. ಗುಪ್ತವಾಗಿ ಸೈನ್ಯಪಥಕಗಳು ರವಾನೆಯಾಗುತ್ತಿವೆ. ಬ್ರಿಟಿಶರು ಇಜಿಪ್ತ ದೇಶದ ಹೈಫಾ, ಪೋರ್ಟಸೈಯ್ಯದ, ಸುಯೇಜ, ಅಲೆಕ್ಝಾಂಡ್ರಿಯಾ ಮತ್ತು ಅರ್ಬ ಬಂದರಗಳಲ್ಲಿ ಸುಮಾರು ೩೦ ಫೂಟು ಉದ್ದವಾದ ಬಾಂಬುಗಳನ್ನು ಹೂಗಿದಿಟ್ಟಿದ್ದಾರೆ ಹಡಗುಪಡೆಗಳೂ ಸಜ್ಜಾಗಿ ನಿಂತಿವೆ. ಈ ಪ್ರಕಾರ ಭೂಮಧ್ಯ ಸಮುದ್ರದೊಳಗೆ ಇತ್ತಿತ್ತ ಸೈನ್ಯ ಇಡುವದು ಸುರಕ್ಷಿತ ತೋರದೆ ಲಾವಲ್‌ರವರು ಮಧ್ಯಸ್ಥಿಕೆ ನಡಿಸಿದರಂತೆ! "ಬ್ರಿಟಿಶರು ತಮ್ಮ ಹಡಗುಪಡೆಗಳನ್ನು ಹಿಂಗೆಳೆದುಕೊಳ್ಳಬೇಕು ಇತಾಲಿಯರೂ ಹಾಗೆಯೇ ನಡಕೊಳ್ಳಬೇಕು." ಎಂಬದಾಗಿ ಲಾವಲ್‌ರವರು ಪ್ಯಾರೀಸದೊಳಗಿನ ಬ್ರಿಟಿಶ ರಾಯಭಾರಿಗಳಿಗೆ ಸೂಚಿಸಿದರಂತೆ! ಬ್ರಿಟಿಶ ಪ್ರಧಾನ ಮಂಡಳವು ಈ ಸೂಚನೆಯನ್ನು ಕಳೆದ ಬುಧವಾರದ ಸಭೆಯಲ್ಲಿ ಕೂಲಂಕಷವಾಗಿ ಆಲೋಚಿಸಿ ಅಸಾಧ್ಯವೆಂದು ಉತ್ತರ ಕಳುಹಿದ್ದಾರೆ! ಲಾವಲ್‌ರವರು ಬ್ರಿಟಿಶರಿಗೆ ಇನ್ನೂ ಅನೇಕ ಸೂಚನೆಗಳನ್ನು ಮಾಡಿದ್ದರಂತೆ. ಅವನ್ನೆಲ್ಲ ಬ್ರಿಟಿಶ ಪ್ರಧಾನ ಮಂಡಳದವರು ಆಲೋಚಿಸುತ್ತಿದ್ದಾರಂತೆ. ಅವುಗಳ ರೂಪವೇನೆಂದು ತಿಳಿಯಲಿಲ್ಲ. ಆದಾಗ್ಯೂ ಲಾವಲ್‌ರವರ ಸೂಚನೆ ಬ್ರಿಟಿಶರಿಗೆ ಮಾನ್ಯವಾದೀತೆಂದು ನಾ ಹೇಳಲಾರೆ. ಲಾವಲ್‌ರವರ ಮಧ್ಯಸ್ಥಿಕೆ ನಿರರ್ಥಕವಾಗುವದಾಗಿ ರಾಷ್ಟ್ರಸಂಘದವರ ಅಭಿಪ್ರಾಯವಾಗಿರುವದಂತೆ. "ಈ ಮಧ್ಯಸ್ಥಿಕೆಗೆ ಮುಸೊಲಿನಿಯವರು ಒಪ್ಪಿಕೊಳ್ಳಬಹುದು, ಆದರೆ ಹಬಸಿ ಬಾದಶಹರು ಒಪ್ಪಿಕೊಳ್ಳಲಾರರು. ರಾಷ್ಟ್ರಸಂಘವು ಹಬಸಿ ಜನಾಂಗಕ್ಕೆ ಬೆಂಬಲವನ್ನೀಯಲು ಬದ್ಧವಿದೆ" ಎಂಬದಾಗಿ ಜಿನೆವಾದೊಳಗಿನ ಅಭಿಪ್ರಾಯ ಗ್ರೀಸ ದೇಶದೊಳಗಿನ ಘಟನೆಗಳೂ ಬ್ರಿಟಿಶ-ಇತಾಲಿ ವಾದಕ್ಕೇ ಸಂಬಂಧಪಟ್ಟಿವೆ. ಗ್ರೀಸ ದೇಶದ ರಾಜಪುತ್ರಿ ಮೆರಿನಾರವರಿಗೂ ನಮ್ಮ ಪಂಚಮ ಜಾರ್ಜ ಭೂಪಾಲರ ಮಗಂದಿರರಿಗೂ ಕಳೆದ ನವಂಬರ ತಿಂಗಳಲ್ಲಿ ಮದುವೆಯಾದ ವಾರ್ತೆಯನ್ನೂ, ಒಂದು ಪಕ್ಷದ ಹಿಂದೆ ಮೆರಿನಾರವರಿಗೆ ಪುತ್ರೋತ್ಸವವಾದ ಸಂಗತಿಯನ್ನೂ ರಾಜನಿಷ್ಠರೆಲ್ಲರೂ ಬಲ್ಲಾದ ವಿಷಯ. ರಾಜಪುತ್ರೋತ್ಸವದ ಸಂಭ್ರಮವನ್ನು ರಾಜನಿಷ್ಠರನೇಕರು ಪಾಲಿಸಿ ಸಂತೋಷಪಟ್ಟಿರಬಹುದು. ಈ ಮದುವೆಯೊಳಗೆ ರಾಜಕಾರಣವಿದೆ. ಗ್ರೀಸ ದೇಶದೊಳಗೆ ಈಗ ಲೋಕಸತ್ತೆಯಿದೆ ಅಲ್ಲಿದ್ದ ಅರಸರಿಗೆ ಪದಚ್ಯುತ ಮಾಡಲಾಗಿತ್ತು. ಲೋಕಸಭೆಯಲ್ಲಿ ಅರಸರಿಗೆ ಕರೆತರಬೇಕಾಗಿ ಕಳೆದವಾರದಲ್ಲಿಯೇ ನಿರ್ಣಯವಾಗಿದೆ ನವಂಬರ ೩ನೇಗೆ ರಾಷ್ಟ್ರದ ಮತಗಳ ಎಣಿಕೆಯಾಗಿ ಪದಚ್ಯುತರಾದ ಜೋರ್ಜ ಅರಸರಿಗೆ ಪಟ್ಟಾಭಿಷೇಕವಾಗುವದಿದೆ. ಗ್ರೀಸ ದೇಶದ ಪೂರ್ವ ಪಾರ್ಶ್ವದಲ್ಲಿ ಡೊಡಕೆನೀಸ ರೋಡ್ಸ್ ಎಂಬದೊಂದು ೧೩ ನಡುಗಡ್ಡೆಗಳ ಸಮೂಹವಿದೆ ಸುಯೇಜ ಕಾಲುವೆಗೆ ತೀರ ಸಮೀಪವಾದ ನಡುಗಡ್ಡೆಗಳಿವು. ೩೦೦-೪೦೦ ಮೈಲಿನೊಳಗಿವೆ. ಈ ನಡುಗಡ್ಡೆಗಳು ಸುಯೇಜ ಕಾಲುವೆ ಮತ್ತು ದಾರ್ಡಾನೆಲಿಸ ಸಾಮುದ್ರಧುನಿ ಇವುಗಳ ಹಾದಿಯ ಮೇಲಿದ್ದು ಭೂಮಧ್ಯ ಸಮುದ್ರದ ಮರ್ಮಸ್ಥಾನವೆಂದು ಎಣಿಸಬಹುದು. ಇವನ್ನೆಲ್ಲ ಇತಾಲಿಯರಿಗೆ ಕೊಡಬೇಕೆಂದು ಮಿತ್ರ ರಾಷ್ಟ್ರಗಳೊಳಗೆ ಗುಪ್ತ ತಹನಾಮೆಯಾಗಿತ್ತು. ಈ ಲೋಭದಾಶೆಯಿಂದ ಇತಾಲಿಯು ಮಿತ್ರಪಕ್ಷಕ್ಕೆ ಸೇರಿತ್ತು. ಆದರೆ ಒಪ್ಪಂದವಾಗುವಾಗ ಗುಪ್ತ ತಹನಾಮೆಗಳೆಲ್ಲ ರದ್ದೆಂದು ರಾಷ್ಟ್ರಸಂಘದ ಘಟನೆಯಲ್ಲಿ ನಮೂದಾಗಿ ಇತಾಲಿ-ಠರಾವಿನ ಬಾಂಧೊಳಗಿಂದ ೧೨ ದ್ವೀಪ-ಕಲ್ಪಗಳು ಜಾರಿ ಹೋಗಿ ಗ್ರೀಸ ದೇಶದ ಆತಳತೆಯಲ್ಲಿಯೇ ಉಳಿದವು. ೧೯೨೩ನೇ ಅಕ್ಟೋಬರದಲ್ಲಿ ಮುಸೊಲಿನಿಯವರು ಬಲಾತ್ಕಾರದಿಂದ ಕೈವಶ ಮಾಡಿಕೊಂಡಾಗ್ಯೂ ಅಲ್ಲಿ ಗ್ರೀಕರ ಆಡಳಿತೆಯೇ ನಡೆಯುತ್ತಿದೆ. ಆ ನಡುಗಡ್ಡೆಗಳು ತಮ್ಮ ಅಧಿಕಾರಿಯಲ್ಲಿ ಇರಬೇಕೆಂದು ಬ್ರಿಟಿಶರು ಮೆರೀನಾ ರಾಜಪುತ್ರಿಯನ್ನು ಕೆಂಟ ರಾಜಪುತ್ರರೊಡನೆ ವಿವಾಹ ಮಾಡಿ ಕಾರಸ್ಥಾನ ಹೂಡಿದ್ದಾರೆ. ಲೋಕರೀತಿ ಅಂತ್ಯವಾಗಿ ರಾಜಾಧಿಪತ್ಯವಾಗುವ ಕಾರಸ್ಥಾನವಾದರೂ ಬ್ರಿಟಿಶರದೇ. ಈ ಗಂಡಾಂತರವನ್ನು ಮುಂದಾಗಿಯೇ ಎಣಿಸಿ ಇತಾಲಿಯವರು ಇವುಗಳ ಬಳಿಯಲ್ಲಿರುವ ಲಿರೋಸ ದ್ವೀಪದಲ್ಲಿ ವಿಮಾನ ಠಾಣ್ಯವನ್ನು ರಚಿಸಿ ಸುತ್ತುಮುತ್ತು ಸ್ಫೋಟಕ ದ್ರವ್ಯವನ್ನಿಟ್ಟು ಜಲನಾವೆಗಳಿಂದ ಅದನ್ನು ಭದ್ರಪಡಿಸತೊಡಗಿದ್ದಾರೆ. ಗುಡ್ಡಕ್ಕೆ ಏರಿಹೋಗುವದಕ್ಕಾಗಿ ಮಾರ್ಗಗಳನ್ನು ಗಡಿಬಿಡಿಯಿಂದ ಕಟ್ಟಿಸುತ್ತಿದ್ದಾರೆ. ಈ ರಾಜಕಾರಣವನ್ನೆಲ್ಲ ಪರಾಂಬರಿಸಿದರೆ, ಬ್ರಿಟಿಶ-ಇತಾಲಿ ದೇಶಗಳೊಳಗಿನ ದೀರ್ಘ ಕಾಲದ ಮತ್ಸರವನ್ನು ನೆನಿಸಿದರೆ, ಒಂದೆರಡು ವರ್ಷಗಳಿಂದ ನಡೆಯುತ್ತಿರುವ ರಾಜಕಾರಣಸೂತ್ರಗಳನ್ನು ಸುದೀರ್ಘವಾಗಿ ಆಲೋಚನೆ ಮಾಡತೊಡಗಿದರೆ ಬ್ರಿಟಿಶ-ಇತಾಲಿ ದೇಶಗಳೊಳಗೆ ಸದ್ಯದಲ್ಲಿಯೇ ಸಂಗ್ರಾಮವಾಗಲೇಬೇಕು. ಲಾವಲ್‌ರವರ ಮಧ್ಯಸ್ಥಿಕೆಯನ್ನು ಬ್ರಿಟಿಶ ಪ್ರಧಾನರು ತಿರಸ್ಕರಿಸುವಾಗ ಇತಾಲಿಯೊಳಗಿನ ವೃತ್ತಪತ್ರಿಕೆಗಳು ತಮ್ಮ ಮೇಲೆ ಹಗೆ ಹಿಡಿದಿರುವವಾಗಿಯೂ ಮತ್ಸರ

ಗ್ರಸ್ತ ಇತಾಲಿಯಿಂದ ಸಂರಕ್ಷಣೆ ಮಾಡಿಕೊಳ್ಳಲು ಯುದ್ಧ ಹಡಗುಪಡೆಗಳನ್ನು ಸಜ್ಜಾಗಿ ಇಡದಿದ್ದಲ್ಲಿ ಬ್ರಿಟಿಶರಿಗೆ ಅಪಾಯವಿರುವದಾಗಿಯೂ ಸೂಚಿಸಿದರಂತೆ. ಕರಾಚಿ ಬಂದರದೊಳಗಿಂದ ಹಡಗ ತುಂಬಿ ಸೈನ್ಯ ಪಥಕಗಳು ರವಾನಿಸಲ್ಪಡುತ್ತವೆ. ಅನ್ನಸಾಮಗ್ರಿಗಳನ್ನೊಯ್ಯಲು ಹಡಗಗಳು ಬಂದರದಲ್ಲಿ ಬಂದು ನಿಂತಿವೆ. ಲಂಡನದಿಂದ ಹುಕುಮು ಬಂದೊಡನೆ ಅವು ಹೊರಡುವವಂತೆ. ಹಿಂದುಸ್ಥಾನದೊಳಗಿನ ಉಕ್ಕು-ಮತ್ತು ಕಬ್ಬಿಣ ತಯಾರಿಸುವ ಕಾರಖಾನೆಗಳೆಲ್ಲ ಯಾವತ್ತೂ ಉಕ್ಕು ಮತ್ತು ಕಬ್ಬಿಣವನ್ನು ಸರಕಾರಕ್ಕೇ ಮಾರತಕ್ಕದ್ದಾಗಿ ಹಿಂದುಸ್ಥಾನ ಸರಕಾರದ ಅಪ್ಪಣೆ ಹೊರಟಿರುವದಾಗಿ ಮುಂಬಯಿಯೊಳಗಿನ ಸುದ್ದಿಗಾರರ ಅಂಬೋಣ. ಶಸ್ತ್ರಾಸ್ತ್ರಗಳನ್ನೂ ಮದ್ದುಗುಂಡುಗಳನ್ನೂ ತಯಾರಿಸಲಿಕ್ಕೆ ಇವು ಉಪಯೋಗಿಸಲ್ಪಡುವವಂತೆ. ಬ್ರಿಟಿಶರು ಯುದ್ಧದಲ್ಲಿ ಸೇರಿದರೆ ಮಾತ್ರ ಉಕ್ಕು-ಕಬ್ಬಿಣ ಖರೇದಿಯಾಗುವವು. "ಯುದ್ಧವೆಸಗಿದ್ದಲ್ಲಿ!" ಎಂಬ ಸರಕಾರದ ಶಬ್ದದಿಂದ ಸದ್ಯಕ್ಕೇ ಬ್ರಿಟಿಶರು ಯುದ್ಧದಲ್ಲಿ ಧುಮುಕುತ್ತಾರೆಂಬು ಸಾಮಾನ್ಯ ವ್ಯವಹಾರಜ್ಞನು ಸಹ ಹೇಳಬಲ್ಲನು. ಅದಕ್ಕೆ ನಿರೀಕ್ಷಕನಂಥ ಅಭ್ಯಾಸಿಯ ಗರಜಿಲ್ಲ. ಅದಕ್ಕಾಗಿಯೇ ಬ್ರಿಟಿಶರು ಯುದ್ಧದಲ್ಲಿ ಧುಮುಕುತ್ತಾರೆಂದು ಮುಂಚಿತವಾಗಿಯೇ ನಮೂದಿಸಿ ಆ ಮೇಲೆ ಯುದ್ಧವಾರ್ತೆಯನ್ನು ಹೇಳಬಹುದಾಗಿ ನಾನೆಣಿಸಿದೆನು. ನಾಳೆಯಿಂದ ಪಾರ್ಲಿಮೆಂಟಿನ ಸಭೆಗೆ ಪ್ರಾರಂಭವಾಗುತ್ತದೆ. ಪರದೇಶ ರಾಜಕಾರಣ ಮಾತ್ರ ಚರ್ಚಿಸಲ್ಪಡುವದು. ೩-೪ ದಿನಗಳ ತನಕ ಅದೇ ಚರ್ಚೆ. ತಾ. ೨೫ನೇ ಶುಕ್ರವಾರಕ್ಕೆ ಪಾರ್ಲಿಮೆಂಟಿನ ಸಭೆ ವಿಸರ್ಜನೆಯಾಗಿ ಹೊಸ ಇಲೆಕ್ಷನು ಆಗುವದಿದೆ. ನವೆಂಬರ ೪ನೇ ತಾರೀಖಿಗೆ ಉಮೇದವಾರರು ತಮ್ಮ ಹೆಸರುಗಳನ್ನು ದಾಖಲಪಡಿಸಿಕೊಂಡು ನವೆಂಬರ ೧೪ನೇ ತಾರೀಖಿಗೆ ಇಲೆಕ್ಶನಿನಲ್ಲಿ ಹೋರಾಡಬೇಕು. ಇತಾಲಿ ಹಬಸಿ ವಾದದೊಳಗೆ ಬ್ರಿಟಿಶರು ಬಿದ್ದು ಅದಕ್ಕಾಗಿ ಆವಶ್ಯಕ್ಕೆ ಲೋಕಬೆಂಬಲವನ್ನು ಸಂಘಟಿಸುವ ಹಂಚಿಕೆಯಿದು. ಲೋಕಾಶ್ರಯ ಸಂಗ್ರಹಕ್ಕಾಗಿಯೇ ಭಾರತ ಮಂತ್ರಿಗಳ ಅಪೇಕ್ಷೆ ಮೇರೆಗೆ, ಸರ್ವಾಧಿಪತಿಗಳ ಅಪ್ಪಣೆ ಮೇರೆಗೆ ಗೃಹ ಮಂತ್ರಿಗಳಾದ ಹೆನ್ರಿ ಕ್ರೇಕರವರು ಘಕ್ಕನೆ ಸಿಮ್ಲಾದಿಂದ ಕಲಕತ್ತೆಯ ಮಾರ್ಗವಾಗಿ ದಾರ್ಜಿಲಿಂಗಕ್ಕೆ ಗುರುವಾರ ತ್ವರೆಯಿಂದ ಓಡಿಹೋದುದು. ಹಿಂದುಸ್ಥಾನದಲ್ಲಿ, ಪ್ರಾಮುಖ್ಯವಾಗಿ ಬಂಗಾಲದೊಳಗೆ ರಾಜಬಂದಿಗಳು ಸೆರೆಮನೆಗಳಲ್ಲಿ ಆರೋಪ ವಿಚಾರವಿಲ್ಲದೆ ಕೊಳೆಯುತ್ತಿದ್ದಾರೆ. ಅದರಿಂದ ವಂಗದೇಶ ಉದ್ವಿಗ್ನವಾಗಿದೆ. ಸಂಗ್ರಾಮ ಸಮಯದಲ್ಲ ವಂಗದೇಶವನ್ನು ಸಂತೈಸುವದು ಪ್ರಶಸ್ತ. ಈ ದೀರ್ಘಾಲೋಚನೆಯಿಂದಲೇ ಕ್ರೇಕರವರು ಬಂಗಾಲ ಗವ್ಹರ್ನರರೊಡನೆ ಸಮಕ್ಷ ಸಂಭಾಷಣೆ ನಡಿಸಹೋಗಿದ್ದಾರೆಂದು ನನ್ನ ಎಣಿಕೆ. ಕಲಕತ್ತೆಯ ಸುದ್ದಿಗಾರರು ಧ್ವನಿಸಿದಂತೆ ನೂತನ ರಾಜ್ಯಘಟನೆಯ ವಿಚಾರವಾಗಿದ್ದರೆ ಇಷ್ಟು ಗಾಬರಿ ಅನವಶ್ಯಕ. ರಾಜ್ಯಸುಧಾರಣೆಯ ಪೂರ್ವ ತಯಾರಿಯೆಂದು ಲೋಕಕಂಟಕ ದಬ್ಬಾಳಿಕೆಯ ಕಾನೂನುಗಳನ್ನು ಘಟಿಸುತ್ತಿರುವಾಗ ರಾಜಬಂದಿಗಳ ಬಿಡುಗಡೆ ಮಾಡಲು ಭಾರತಮಂತ್ರಿಗಳಾಗಲಿ, ಸರ್ವಾಧಿಪತಿಗಳಾಗಲಿ ಹಾತೊರೆಯುವದು ಅಸಂಭವ! ಬ್ರಿಟಿಶರ ಯುದ್ಧ ಸೇರುವ ಪೂರ್ವತಯಾರಿಯಿಂದಲೇ ಈ ಸೂತ್ರಗಳೆಲ್ಲ ಓಡಾಡುತ್ತಿವೆ. ಅವನ್ನು ಗ್ರಹಿಸಬೇಕೆಂದು ಈ ರಾಜಕಾರಣವನ್ನು ನಾನು ಮೊಟ್ಟಮೊದಲು ಇಂದಿಗೆ ಪ್ರಸ್ತಾಪಿಸಿದುದು.

ಇನ್ನು ಯುದ್ಧ ವಾರ್ತೆಗಳನ್ನು ನಾನು ನಮೂದಿಸುವದುಚಿತ. ಪರಸ್ಪರ ವಿರುದ್ಧವಾದ ವಾರ್ತೆಗಳನ್ನೋದಿ ನನಗೆ ವಿನೋದವಾಗುತ್ತದೆ. ಆದರೆ ವಾರ್ತೆಗಳನ್ನು ಸುಸಂಗತವಾಗಿ ನಮೂದಿಸಬರುವದಿಲ್ಲವಲ್ಲಾ ಎಂದು ವ್ಯಸನ! ಯುದ್ಧವಾಗಿದೆಯೆಂದು ಎಲ್ಲರೂ ಹೇಳುತ್ತಾರಲ್ಲವೇ? ಅಡೋವಾ, ಆಡಿಗ್ರಾಟ, ಅಕ್ಸೂಮ ಪಟ್ಟಣಗಳು ಇತಾಲಿಯ ಕೈವಶವಾದವಂತೆ! ಸೇನಾಪತಿ ಡಿಬೊನೋರವರೂ ಇತರೇ ಸೈನ್ಯಾಧಿಕಾರಿಗಳೂ ಅವನ್ನು ಸಂಭ್ರಮದಿಂದ ಸೇರಿದರಂತೆ. ಪ್ರಜೆಗಳು ಅವರಿಗೆ ಆನಂದಾತಿಶಯದಿಂದ ಖರೆ ಮಾಡಿಕೊಂಡರಂತೆ. ಇತಾಲಿಯ ಸೇನಾಪತಿಗಳು ಅವರೆಲ್ಲರಿಗೆ ವಾತ್ಸಲ್ಯದಿಂದ ನಡಿಸಿಕೊಳ್ಳುವ ಅಭಿವಚನವನ್ನಿತ್ತಿದ್ದಾರಂತೆ. ಆದಾಗ್ಯೂ ಯುದ್ಧ ಪ್ರಕಟಣೆ ಹೊರಡಲಿಲ್ಲವಾಗಿ ರೋಮ ಪಟ್ಟಣದಿಂದ ತಾ. ೧೯ನೇಗೆ ತಂತಿ ಬಂದಿರುವದಾಗಿ ಹಿಂದುಸ್ಥಾನದೊಳಗಿನ ಇತಾಲಿಯ ರಾಯಭಾರಿಗಳು ಪ್ರಕಟಿಸುತ್ತಾರೆ. ಇದಕ್ಕೆ ನಾನೇನು ಹೇಳಲಿ? ಪಾಶ್ಚಾತ್ಯ ರಾಜಕಾರಣದ ಪರಿಭಾಷೆಯನ್ನು ನಾನಿನ್ನೂ ಗ್ರಹಿಸಲಾರೆ! ಅಮೇರಿಕೆಯ 'ಶಿಕಾಗೋ ಟ್ರಿಬ್ಯೂನ', ಲಂಡನಿನ 'ಡೇಲಿ ಹೆರೊಲ್ಡ' ಪತ್ರಿಕೆಗಳ ರಣಕ್ಷೇತ್ರದೊಳಗಿನ ಸುದ್ದಿಗಾರರಿಬ್ಬರು ಹಬಸಿ ದೇಶದ ಜ್ವರಕ್ಕೆ ಬಲಿಬಿದ್ದು ತೀರಿಕೊಂಡರಂತೆ. ಮುಂಬಯಿಯ 'ಟೈಮ್ಸ' ಪತ್ರಿಕೆಯ ಸುದ್ದಿಗಾರರಾದ ಮಿ| ಫರೆಗೊರವರು ಅಸ್ವಸ್ಥ ಬಿದ್ದಿದ್ದಾರಂತೆ. ಹಬಸಿ ದೇಶ ಅನಾರೋಗ್ಯಕರವಾದುದು. ವಿದೇಶೀಯರಿಗೆ ಅಲ್ಲಿ ಬಾಳ್ವೆ ಮಾಡುವದು ಕಠಿಣ. ಮಳೆಗಾಲದಲ್ಲಂತು ಅಲ್ಲಿ ಉಳಿಯಲಸಾಧ್ಯ. ಈಗ ಪುನಃ ಮಳೆ ಸುರಿಯಲಾರಂಭಿಸಿದ್ದರಿಂದ ರಣೋತ್ಸಾಹ ಸ್ವಲ್ಪ ತಣ್ಣಗಾಗಿದೆ. ಇತಾಲಿಯ ಸೈನಿಕರು ಅಸ್ವಸ್ಥ ಬೀಳುತ್ತಿದ್ದಾರೆ. ದಕ್ಷಿಣ ಪಾರ್ಶ್ವದ ಓಗಡೆನ್ ಪ್ರದೇಶದೊಳಗಿನ ಕಷ್ಟಗಳನ್ನು ತಾಳಲಾರದೆ ಅಸ್ವಸ್ಥ ಬಿದ್ದ ೧೦ ಸಾವಿರ ಸೈನಿಕರಿಗೆ ಸೇನಾಪತಿಗಳು ಅಲ್ಲಿಂದ ಎರಿಟ್ರಿ ಪ್ರದೇಶಕ್ಕೆ ರವಾನೆ ಮಾಡಿದರಂತೆ. ಸೋಮಾಲಿ ಜನರಿಗೆ ಇತಾಲಿಯರು ಸೈನಿಕರಾಗಲು ಹುರಿದುಂಬಿಸುತ್ತಿದ್ದಾರೆ. ಆದರೆ ಅವರು ಒಪ್ಪುವದಿಲ್ಲವಾಗಿ ಸುದ್ದಿಗಾರರ ವಾರ್ತೆ. ಸೋಮಾಲಿಯೊಳಗಿನ ಮುಸಲ್ಮಾನ ಸ್ತ್ರೀ-ಪುರುಷರಿಗೆ ಇತಾಲಿಯರು ಹಿಡಿಹಿಡಿದು ಅವರ ಕಡೆಯಿಂದ ಕೆಲಸ-ಬೊಗಸೆಗಳನ್ನು ಬಲಾತ್ಕಾರದಿಂದ ಮಾಡಿಸಿಕೊಳ್ಳುತ್ತಾರಂತೆ. ನೀರು ತರಬೇಕು; ಒಹು ದೂರದಿಂದ ತರಬೇಕು; ಕತ್ತೆ, ಹೇಸರಗತ್ತೆಗಳ ಮೇಲೆ ತರಬೇಕು. ಬೆಟ್ಟಕ್ಕೆ ಹೋಗಿ ಉರುವಲಕಟ್ಟಿಗೆ ತರಬೇಕು; ಅಡಿಗೆ ಮಾಡಿಹಾಕಬೇಕು; ಅರಿವೆಗಳನ್ನು ತೊಳೆಯಬೇಕು; ಸೈನ್ಯ ಠಾಣ್ಯಗಳಲ್ಲಿ ಕಸಗುಡಿಸಬೇಕು. ಹೀಗೆ ಬಲಾತ್ಕಾರ ಮಾಡುವದು ವಿಹಿತವಲ್ಲೆಂದು ಸೋಮಾಲಿ ಪ್ರಾಂತದ ಮುಕಡ್ಸಿ ಪಟ್ಟಣದೊಳಗಿನ ಸುಫೀದರಿಯಾ ಪಂಥದ ಹಿರಿಯರಾದ ಶಾಯಿಖ ಮಹಮ್ಮದ ಹಸನರವರು ಫತ್ವಾ ಹೊರಡಿಸಿದ ಬಗ್ಗೆ, ಅವರ ಮೇಲೆ ಗುಪ್ತ ವಾರ್ತೆ ಪತ್ರಗಳಿಗೆ ಕೊಟ್ಟ ಆರೋಪ ಹೊರಿಸಿ ಅವರಿಗೆ ಗಲ್ಲಿಗೇರಿಸಲಾಯಿತು. ಇದರಿಂದ ಸೋಮಾಲಿಯೊಳಗಿನ ಮುಸಲ್ಮಾನರೆಲ್ಲರೂ ಸಂತಪ್ತರಾಗಿರುವರಂತೆ. ಇಲ್ಲಿಯ ಸೋಮಾಲಿ ಪಾಳೆಯಗಾರರು ೩ ಸಾವಿರ ಸೈನಿಕರೊಡನೆ ಹಬಸಿ ಸೇನಾಪತಿಗಳಿಗೆ ಕೂಡಿದರಂತೆ. ಗರ್ಲಗೋಬಿ ಪ್ರದೇಶದ ಮೇಲೆ ಸಾಗಿಹೋಗುವ ತಯಾರಿ ನಡೆದಿತ್ತು. ಆದರೆ ಅಷ್ಟರಲ್ಲಿ ಜಡಿಮಳೆ ಸುರಿಯಲಾರಂಭಿಸಿದ್ದರಿಂದ ಸೈನಿಕರಿಗೆ ಮುಂದೆ ಸರಿಯಲಾಗದೆ ಗರೊಹೈ ಗ್ರಾಮದಲ್ಲಿಯೇ ತಡೆದು ನಿಲ್ಲಬೇಕಾಗಿದೆ. ವಿಮಾನಗಳಿಂದ ೨೦೦ ಬಾಂಬುಗಳನ್ನೆಸೆದು ತಫಾರಿ-ಖಾಟ್ಮಾ ಹಳ್ಳಿಗಳೊಳಗಿನ ಐವರನ್ನು ಇತಾಲಿಯವರು ಕೊಂದರು, ೨೦ ಮಂದಿಗಳನ್ನು ಘಾಯಗೊಳಿಸಿದರು. ಹಾರಿಹೋಗುವ ಎರಡು ವಿಮಾನಗಳಿಗೆ ಹಬಸಿ ಸೈನಿಕರು ಇಳಿಸಿದರು. ಮತ್ತು ಅವರಿಗೆ ಸೆರೆಹಿಡಿದೊಯ್ದರು. ಓಗಡೇನ ಪ್ರದೇಶದಲ್ಲಿ ಸೇನಾಪತಿಗಳು ಮುಂದರಿದು ಹೋಗಬಯಸುವದಿಲ್ಲ. ಇತಾಲಿಯ ಸೈನಿಕರು ಮುಂದರಿದು ಬಂದೊಡನೆ ಕಡುವಂತಿಯಲ್ಲಿ ನಿಂತು ಸದೆಬಡಿಯಬೇಕೆಂದು ಅವರು ಆಲೋಚನೆ ಮಾಡಿದ್ದಾರೆ. ಜ್ವರ ಬಾಧೆಯಿಂದ ಇತಾಲಿಯ ಸೈನ್ಯ-ಪಥಕಗಳು ಎರಿಟ್ರೆಗೆ ವರ್ಗಾಯಿಸಲ್ಪಟ್ಟರೆ ಹಬಸಿ ಸೇನಾಪತಿಗಳು ಒಮ್ಮೆಲೇ ಮುಂದರಿದು ಹೋಗಿ ಇತಾಲಿ-ಸೋಮಾಲಿ ಪ್ರದೇಶವನ್ನು ಕೈವಶ ಮಾಡಿಕೊಳ್ಳುವ ಆಲೋಚನೆಯಲ್ಲಿದ್ದಾರೆ. ಈಗ ವೆಬಿಶಿಬೇಲಿ ನದಿಯ ಮಾರ್ಗವಾಗಿ ಇತಾಲಿ ಸೈನಿಕರು ಕೂಚು ಮಾಡುತ್ತಿದ್ದಾರೆ ಆದರೆ ಭಯಂಕರ ಕಷ್ಟ. ವಿಪರೀತ ಶಕೆ, ಪಾಳೆಯಗಾರರು ಉಪದ್ರವ ಕೊಡುತ್ತಾರೆ. ದಿನಾಲು ನಡಕೊಂಡು ಕೂಚು ಮಾಡುತ್ತ ಮಾರ್ಗಕ್ರಮಣ ಮಾಡುವದು ಅಸಾಧ್ಯ ಮಾತು. ಆದರಿಂದ ಓಗಡೇನ ಪಾರ್ಶ್ವದಲ್ಲಿ ಚಟುವಟಿಕೆ ಹೆಚ್ಚಾಗಿ ಕೇಳಬರುವದಿಲ್ಲ. ಉತ್ತರ ಪಾರ್ಶ್ವದ ಮಕಾಲೆ ಪಟ್ಟಣದ ಮೇಲೆ ಇತ್ತಟ್ಟಿನವರ ಕಟಾಕ್ಷವಿದೆ. ಮಕಾಲೆ ಪಟ್ಟಣವು ಅಡ್ವಾ ಪಟ್ಟಣಕ್ಕೆ ಸಮ್ಮುಖವಾಗಿ ಮುಂಭಾಗದಲ್ಲಿದ್ದು ಅದು ಇತಾಲಿಯರ ಸ್ವಾಧೀನವಾದಲ್ಲಿ ಹಬಸಿ ಸೇನಾಪತಿ ತಮ್ಮ ಸೈನ್ಯ ಠಾಣ್ಯಗಳನ್ನು ಬದಲಿಸುವ ಪ್ರಸಂಗವಿದೆ. ಅದಕ್ಕಾಗಿ ಇತ್ತಟ್ಟಿನವರೂ ಆ ಕಡೆಗೆ ದೃಷ್ಟಿ ಹರುಬಿದ್ದಾರೆ. ಅಡ್ವಾ, ಆಡಿಗ್ರಾಟ, ಅಕ್ಸೂಮ ಭಾಗದೊಳಗಿಂದ ಇತಾಲಿಯ ಸೈನ್ಯ ಪಥಕಗಳು ಮಕಾಲೆಯ ಮಾರ್ಗವಾಗಿ ಮುಂದರಿಯುತ್ತಿವೆ. ಹಬಸಿಸೇನಾಪತಿಗಳಾದ ರಾಸ ಸೇಯುಮರವರೂ, ರಾಸ ಕಾಸಾರವರೂ ಇತಾಲಿಯ ಬಲ ಪಾರ್ಶ್ವದ ಮೇಲೆ ಸಾಗಿಹೋಗಿ ಅಕ್ಸೂಮ ಕ್ಷೇತ್ರವನ್ನು ಪುನಃ ವಶಪಡಿಸಿಕೊಳ್ಳುವ ಆಲೋಚನೆಯಲ್ಲಿದ್ದಾರೆ. ಮಕಾಲೆ ಪ್ರದೇಶದ ಮೇಲೆ ಮುಸೊಲಿನಿಯವರ ಮಗಂದಿರಾದ ಬ್ರೂನೋರವರು ವಿಮಾನದಿಂದ ಹಾರ್ಯಾಡ ಹೋಗಿದ್ದರು. ಹಬಸಿ ಜನರು ಅವರ ವಿಮಾನದ ಮೇಲೆ ನಾಲ್ಕು ಗುಂಡು ಹೊಡೆದರು. ಸುದೈವದಿಂದ ಅವರಿಗೇನೂ ಪೆಟ್ಟಾಗಲಿಲ್ಲ. ಸುರಕ್ಷಿತವಾಗಿ ತಮ್ಮ ಠಾಣ್ಯವನ್ನು ಅವರು ಸೇರಿದರಂತೆ. ವಿಮಾನಗಳ ಮೇಲಿಂದ ಬಾಂಬು ಒಗೆದು ಮಕಾಲೆಯ ದಕ್ಷಿಣ ಭಾಗದಲ್ಲಿದ್ದ ಹಬಸಿ ಜನರ ಮದ್ದು-ಗುಂಡಿನ ಭಾಂಡಾರವನ್ನು ಇತಾಲಿಯವರು ನಾಶಪಡಿಸಿದರಂತೆ. ೬೦ ಸಾವಿರ ಇತಾಲಿ ಸೈನಿಕರು ಈ ಭಾಗದಲ್ಲಿ ಒಕ್ಕಟ್ಟಾಗಿ ಅಡಿಸ ಅಬಾಬಾ ಪಟ್ಟಣಕ್ಕೂ ಮಕಾಲೆಗೂ ಇರುವ ಸಂಬಂಧವನ್ನು ತುಂಡರಿಸುವ ಆಲೋಚನೆ ನಡೆದಿದೆ. ಮಕಾಲೆ ಪ್ರದೇಶದೊಳಗಿನ ಕೆಲವು ಪಾಳೆಯಗಾರರು ಹಬಸಿ ಬಾದಶಹರ ಮೇಲಿನ ದ್ವೇಷದಿಂದ ಇತಾಲಿಗೆ

ಶರಣುಹೋದದರಿಂದಾಗಿ ರೋಮದೊಳಗಿನ ವಾರ್ತೆ ಈ ಭಾಗದೊಳಗೆ ೩॥ ಸಾವಿರ ಇತಾಲಿಯರನ್ನು ಕೊಂದರಾಗಿಯೂ, ಆಕ್ಸಿಮ ಕ್ಷೇತ್ರವನ್ನು ಪುನಃ ಕೈವಶ ಮಾಡಿಕೊಳ್ಳಲು ಹಬಸಿ ಜನರು ಹೋರಾಡುತ್ತಾರೆಂಗಿಯೂ ಇತಾಲಿ ಸೈನಿಕರು ಮಕಲೆಯ ಕಡೆಯಿಂದ ರಿವ ಕೂಡಲೆ ಹಿಂಬದಿಯಿಂದ ಅವರ ಮೇಲೆ ಹಲ್ಲೆ ಮಾಡುವ ವ್ಯೂಹ ನಡೆದದಾಗಿಯೂ ವಾರ್ತೆ ಶರಣಾಗತರಾದ ಪಾಳೆಯಗಾರರೊಬ್ಬರಿಗೆ ಸೇನಾಪತಿ ಡಿಬೋನೋರವರು ಟಿಗ್ರೆ ಪ್ರಾಂತದ ಗವ್ಹರ್ನರೆಂದಾಗಿ ಅಭಿಷೇಕ ಮಾಡಿದರಂತೆ ಇತಾಲಿಯರ ಕೊಲೆಯಾದ ವಾರ್ತೆ ಸುಳ್ಳೆಂದು ರೋಮದೊಳಗಿನ ವಾರ್ತೆ ಹಬಸಿ ಪಾಳೆಯಗಾರರ ಸ್ವಾಮಿದ್ರೋಹ ಮಾಡುವ ಸಂಗತಿಯನ್ನು ಆಡಿಸ ಅಬಾಬ ದೊಳಗಿನ ಸುದ್ದಿಗಾರರು ಅಲ್ಲಗಳೆಯುತ್ತಾರೆ ಲಿಬಿಯಾ ಪ್ರಾಂತದಲ್ಲಿ ಅರಬರು ಹೊಂಚಿ ಮಾಡಿ ಇತಾಲಿಯರಿಗೆ ದಣಿಸುತ್ತಾರಾಗಿ ಕೈರೋದೊಳಗಿನ ವಾರ್ತೆ ಇದು ಸುಳ್ಳೆಂದೂ, ಲಿಬಿಯಾದೊಳಗಿನ ಪ್ರಜೆಗಳು ಇತಾಲಿಗೆ ಅನುಕೂಲರುವರೆಂದೂ ಮುಂಬಯಿಯೊಳಗಿನ ಇತಾಲಿ ರಾಯಭಾರಿಗಳ ತಿದ್ದುಪಡಿ ಆಕ್ಸಿಮ ಕ್ಷೇತ್ರದೊಳಗೆ ಕಾಲಾಳುಗಳ ಬಂಡಾರವೇ ಇತಾಲಿಯ ಹಸ್ತಗತವಾಯಿತಂತೆ ಆದನ್ನು ಸೇನಾಪತಿ ಬೋನೋರವರು ಪಾಳೆಯಗಾರರಿಗಲ್ಲ ದರ್ಬಾರ ಮಾಡಿ ದೊಡ್ಡವರಾಗಿದ್ದರಿಂಗಿ ಕೆಲ ಕತ್ತ್ರಿಯೊಳಗಿನ ಇತಾಲಿ ರಾಯಭಾರಿಗಳ ಪ್ರಕಟಣೆ ಪಶ್ಚಿಮಭಾಗದ ದನಕಾಲಿ ಪ್ರದೇಶದಲ್ಲಿ ಇತಾಲಿಯರು ವಿಮಾನಗಳ ಮೇಲಿಂದ ಬಾಂಬುಗಳನ್ನು ಹಾರಿಸಿ ಜನರಿಗೆ ಕೊಂದರಂತೆ ಜನರು ಕಂದಕಗಳನ್ನು ಅಗಿದುಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುತ್ತಾರೆ ದಕ್ಷಿಣ ಭಾಗದ ಗರ್ಲಗೋಬಿಯಲ್ಲಿ ಹೀಗೆ ಸಂರಕ್ಷಣೆಗಾಗಿ ಕಂದಕಗಳಲ್ಲಿ ಸೇರಿಕೊಂಡ ೩೦ ಜನರ ಬಾಂಬು ಬಿದ್ದ ಸುರಂಗದಿಂದ ಮಣ್ಣು ಕುಸಿದು ಬಿದ್ದು ಹೂತು ಹೋದರಂತೆ ದನಕಾಲಿಯಲ್ಲಿ ಇತಾಲಿಯರಿಗೆ ಹಬಸಿ ಜನರು ಇದಿರಾಗಿ ಮುಂದರಿಯಗೂಡಲಿಲ್ಲವಂತೆ ಎರಿಟ್ರೆ ಪ್ರದೇಶದೊಳಗಿನ ಅಸ್ಮಾರಿಯಾನ ಪಾಳೆಯಗಾರರು ದ್ರೋಹ ಮಾಡುವದರಿಂದ ಇತಾಲಿಯ ಸೇನಾಪತಿಗಳು ಚಿಂತಾಮಗ್ನರಾಗಿರುವರಾಗಿ ಆಡಿಸ ಅಬಾಬಾದೊಳಗಿನ ವಾರ್ತೆ ಓಗಡೇನ ಪ್ರಾಂತದೊಳಗಿನ ಪ್ರಜೆಗಳ ಕಡೆಗೆ ಇರುವ ಕಾಳು-ಕಡಿಗಳನ್ನು ಬಾದಶಹರು ಜಪ್ತ ಮಾಡಿದ್ದರಿಂದ ಆ ಪಾರ್ಶ್ವದೊಳಗಿನ ಜನರು ಬಾದಶಹರ ಮೇಲೆ ಮುನಿದಿರುವರಾಗಿಯೂ ಹಬಸಿ ದೇಶದ ಮೇಲೆ ಸಾಗಿಹೋಗಲು ಇತಾಲಿಗೆ ಅನುಕೂಲರಾಗಿರುವರಾಗಿಯೂ ಹೇಳುತ್ತಾರೆ ಆದಾಗ್ಯೂ ಇತಾಲಿಯವರು ಮುಂದರಿಯುವದಿಲ್ಲವಂತೆ ಹಬಸಿಜನರು ಹರ್ರಾರ ಪ್ರಾಂತದಲ್ಲಿ ಈಗ ಠಾಣ್ಯ ಹೂಡಿ ಅಲ್ಲಿಂದ ದಕ್ಷಿಣ ಪಾರ್ಶ್ವದ ಓಗಡೇನ ಪ್ರದೇಶದೊಳಗಿನ ಯುದ್ಧ ಸೂತ್ರಗಳನ್ನು ನಡಿಸುತ್ತಿದ್ದಾರೆ ಹಬಸಿ ಬಾದಶಹರ ಮೇಲೆ ಪಾಳೆಯಗಾರರಿಗೂ ಜನಸಾಮಾನ್ಯರಿಗೂ ಒಳ್ಳೇ ಭಕ್ತಿಯಿದೆ ಗುರುವಾರ ಗೋಫಾ ಜಾತಿಯ ಪಾಳೆಯಗಾರರ ಅರ್ಧ ಲಕ್ಷ ಸೈನಿಕರು ಆಡಿಸ ಅಬಾಬಾ ಪಟ್ಟಣಕ್ಕೆ ಸಾಗಿಹೋಗಿ ಬಾದಶಹರಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರು ಉತ್ಸಾಹ ಭರದಲ್ಲಿ ಕೆಲವು ಗಲಾಟೆಯೂ ಆಯಿತು ಜೀವದ ಪರಿವೆಯಿಲ್ಲದೆ ದೇಶಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂದು ಬಾದಶಹರು ಸಮಸ್ತರಿಗೆ ಹುರಿದುಂಬಿಸಿದರಂತೆ ಸಪ್ಟಂಬರ ೨೮ನೇ ತಾರೀಖಿಗೆ ಹಬಸಿ ದೇಶದಲ್ಲಿ ಮಸ್ಕಲ್ ಯಾನೆ ಯುಗಾದಿ ಹಬ್ಬ ಆ ಕಾಲದಲ್ಲಿ ದೇಶದೊಳಗಿನ ಪಾಳೆಯಗಾರರು ಒಕ್ಕಟ್ಟಾಗಿ ಬಾದಶಹರಿಗೆ ಉತ್ಸಾಹದಿಂದ ನಿಷ್ಠೆಯನ್ನು ಪ್ರದರ್ಶಿಸಿದರಂತೆ ಇಷ್ಟು ಉತ್ಸಾಹ ಹಿಂದೆಂದಿಗೂ ನಡೆದಿಲ್ಲವಾಗಿ ಸದ್ದಾರರ ಅಂಬೋಣ ಆ ದಿನ ಮಳೆ ಬಿದ್ದದರಿಂದ ಹಬಸಿ ಜನರಲ್ಲಿ ವಿಶೇಷ-ವಿಪರೀತ ಆನಂದ ಈ ದಿನ ಮಳೆ ಬಿದ್ದರೆ ಶುಭವೆಂದು ಜನ- ಮನಸ್ಕರ ಎಣಿಕ ಮಳೆ ಬಿತ್ತು! ಮೋಬ ಆಣಕಲ್ಲಿಗಳು ಬಿದ್ದವ! ಇತಾಲಿಯವರು ಇದರ ಮೇಲಿಂದ ಬಂಗ್ರತೆ ಪಡೆಯುವರೆಂದಾಗಿ ಹಬಸಿ ಜನರು ನುಡಿದರಂತೆ ಅತಿ ಸ್ವಲ್ಪ ಕ್ಷಣದಲ್ಲಿ ಇತಾಲಿಯರಿಗೆ ಸೋಲಿಸಿ ಓಡಿಸಿದ ಬಾದಶಹರಾದ ಮೆನಲಿಕ್‌ರವರ ಮೂರ್ತಿ ಸಮೀಪದ ಮೈದಾನದ ಮಧ್ಯಭಾಗದಲ್ಲಿತ್ತು ಮೆನಲಿಕ್‌ರವರು ಕೈಯಲ್ಲಿ ಖಡ್ಗ ಹಿಡಿದು ಇತಾಲಿಯ ಎರಿಟ್ರೆ ವಸಾಹತಿನ ಮೇಲೆ ದೃಷ್ಟಿ ಇಟ್ಟಿದ್ದರು ವಾಳೆ ಪಕ್ಷ್ಯ ಸಮಾಧಾನ ಹೊಂದಿದ ಬಳಿಕ ಬಾದಶಹರು ಸಿಂಹಾಸನದಿಂದ ಇಳಿದು ವಿಧಿಯಂತೆ ಸೇಲಗಿನ ವೃಕ್ಷಗಳಿಗೆ ಮೂರು ಪ್ರದಕ್ಷಿಣೆ ಹಾಕಿ ನಿಂತರು ಕೂಡಲೆ ಸಹಸ್ರ ಪಾಳೆಯಗಾರರು ಒಬ್ಬೊಬ್ಬರಾಗಿ ಬಾದಶಹರಿಗೆ ವಂದಿಸಿ

ರಕ್ತಬಿಂದು ಇರುವ ವರೆಗೆ ಬಾದಶಹರಿಗಾಗಿ ಸ್ವದೇಶಕ್ಕಾಗಿ ನಾವು ಹೋರಾಡುವೆವು ಎಂದು ಪ್ರತಿಜ್ಞೆ ಮಾಡಿದರು ಆ ಮೇಲೆ ಕಾಲಾಳುಗಳು ರಾವುತರು ಮದ್ದು-ಗುಂಡಿನವರು, ತೋಫಖಾನೆಯವರು ರಕ್ತಸ್ರಾವ ಪಥಕದವರು, ಮುಂಭಾಗದವರು ಎಲ್ಲರೂ ಬಾದಶಹರಿಗೆ ವಂದಿಸಿ ರಾಜಭಕ್ತಿಯನ್ನು ಸಂಗ್ರಾಮಸಿದ್ಧರವನ್ನೂ ಪ್ರದರ್ಶಿಸಿದರೆ ಫಕ್ಕನೆ ಮುಂಬದ ಮೇಲಿಂದ ಎರಡು ಹಬಸಿ ವಿಮಾನಗಳು ಹಾರಿ ಬಾದಶಹರ ಅಭಿಷೇಕ ಚಿಂತನ ಮಾಡಿದವು ಈ ಪ್ರಕಾರ ಹಬಸಿ ದೇಶದ ಮುಖ್ಯ ಪಟ್ಟಣಗಳಲ್ಲಿ ಸಮಾರಂಭ ನಡೆಯಿತು ಹಬಸಿ ದೇಶ ಬಾದಶಹರ ಅಧೀನದಲ್ಲಿರುವದಿಲ್ಲವಾಗಿ ಇತಾಲಿಯ ರಾಯಭಾರಿಗಳು ಜಿನಿವದಲ್ಲಿ ಹೇಳಿದ ಸಂಗತಿ ಸಂಪೂರ್ಣವಾಗಿ ಸುಳ್ಳೆಂದು ಮಸ್ಕಲ ಉತ್ಸವದ ಉತ್ಸಾಹಾತಿರೇಕವನ್ನು ಪ್ರತ್ಯಕ್ಷ ನೋಡಿದ ಸುದ್ದಿಗಾರರು ಬರೆಯುತ್ತಾರೆ ಇದರಲ್ಲಿ ಪಾಳೆಯಗಾರರ ಸ್ವಾಮಿದ್ರೋಹವನ್ನು ನಂಬುವ ಬಗತೆಗೆ ಮುಂಬಯಿಯ ಒಬ್ಬ ವರ್ತಕರು ನುಡಿದಂತೆ, 'ಸುಳ್ಳು ಹೇಳುವ ಒಂದು ವ್ಯಾಪಾರವೇ' (lying trade) ನಡೆದದೆ ಹಬಸಿ ಸರಕಾರಕ್ಕೆ ಮದ್ದು-ಗುಂಡುಗಳನ್ನು ಪೂರೈಸಬಾರದೆಂಬ ಪ್ರತಿಬಂಧವನ್ನು ರಾಷ್ಟ್ರ ಸಂಘದವರು ದೂರಪಡಿಸಿದ್ದಾರೆ ಇಂಗ್ಲಂಡದಿಂದ ತಿಹದಗ ಮದ್ದು ಗುಂಡು ಹಬಸಿ ದೇಶಕ್ಕೆ ರವಾನೆಯಾಗಿರುವದಾಗಿಯೂ, ಗುರುವಾರ ಸುಯೇಜ ಕಾಲುವೆಯನ್ನು ಅವು ಸೇರಿದವಾಗಿಯೂ ಪಾರೀಸದೊಳಗಿನ 'ಸ್ವೋರ' ಪತ್ರಿಕೆಯ ಸುದ್ದಿಗಾರರು ತಿಳಿಸುತ್ತಾರೆ ಇತಾಲಿ ಸೈನಿಕರ ಸಂಕಟಗಳು ಮಿಗಿಲಾಗುತ್ತಿವೆ ಆಹಾರ ಸಾಮಗ್ರಿಯ ಕೊರತೆಯಾಗಿರವದಂತೆ ನೀರು ಸಿಗದೆ ಮಸೋವಾದಲ್ಲಿ ಕೊಂಡರೆ ಒಂದು ಟನ್ನು ನೀರಿಗೆ ೧೦ ಶಿಲಿಂಗು ಅಂದರೆ ಸರಾಸರಿ ೬-೭ ರೂಪಾಯಿ ಸುಯೇಜದಲ್ಲಿ ಅಷ್ಟೇ ನೀರಿಗೆ ೧ ಶಿಲಿಂಗು ಸೂಡಾನ ಬಂದರದಲ್ಲಿ ೩॥ ಶಿಲಿಂಗು ಸೈನಿಕರು ಬೇಸರಪಡುತ್ತಿದ್ದಾರೆ ಅಸ್ಮಾರದಲ್ಲಿ ಇವರಿಗ ಉಗಬಗೆಯಿಂಗ ಒಯ್ದು ಸಂತೈಸಬೇಕಾಂದರೆ ಒಂದರದಲ್ಲಿ ಹಡಗಗಳ ಗಲಾಟೆಯಾದ್ದರಿಂದ ಅಶಕ್ಯವಾಗಿದೆ, ಹಡಗಗಳ ಮೇಲಿನ ಸೈನಿಕರು ರೊಟ್ಟಿ ನೀರುಗಳಿಗಾಗಿ ಸೈನ್ಯಾಧಿಕಾರಿಗಳ ಕಡೆ ದೀನಮುದ್ರೆ ಮಾಡಿ ಬೇಡುವ ನೋಟ ನೋಡಿ ಇತಾಲಿ ಸೈನಿಕರು ಉತ್ಸಾಹಭಂಗರಾದರೆಂದು ಲೋಕವಾರ್ತೆ ಅಸ್ಮಾರಾದೊಳಗೆ ಸೈನಿಕರ ವ್ಯವಸ್ಥೆ ಕೆಟ್ಟಿಗಿದೆ ಆದೇನಿದ್ದಾಗ್ಯೂ ಮುಸೊಲಿನಿಯವರಿಗೆ ಹಬಸಿ ದೇಶವನ್ನು ನುಂಗ ಬಂದೀತೆಂದು ನಾ ಹೇಳಲಾರೆ ಇತಾಲಿಯಲ್ಲಿಯೂ, ಪೂರ್ವ ಆಫ್ರಿಕಾಯಲ್ಲಿಯೂ ಸಂಚರಿಸಿದ ಯುರೋಪಿಯನ್ ಪ್ರವಾಸಿಗರೊಬ್ಬರು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳ ಬಳಿ ನುಡಿದದ್ದೇನಂದರೆ - "ಅಡಿಸ ಅಬಾಬಾ ಪಟ್ಟಣಕ್ಕೆ ಇತಾಲಿಯವರಿಗೆ ತಲ್ಪಲು ೫ ವರ್ಷ ತಗಲುವವು ಹಬಸಿ ದೇಶದವರೇ ವಿಜಯಶಾಲಿಯಾಗುವರು ವಿಮಾನಗಳಿಂದ ಬಾಂಬು ಹಾರಿಸಿ ಕಾರ್ಯಭಾಗವಗದು ನೀರು ಸಿಗದೆ ಸೈನಿಕರು ಸಾಯಬೇಕಾಗುವರು ದಿನಾ ಅರ್ಧ ಗೆಲನು ಅಂದರೆ ೩ ಶೇರ ನೀರು ಒಬ್ಬೊಬ್ಬರಿಗೆ ಹಂಚಿದಾಗ್ಯೂ ದಿನಾ ಒಂದು ಲಕ್ಷ ಗೆಲನು ನೀರು ಬೇಕು ಇದನ್ನು ಏಸಾ ಏಡನ್‌ದಿಂದ ಕೊಂಡುಕೊಂಡು ತರಬೇಕು ಇಷ್ಟೇ ಇತಾಲಿಯ ಮೃತ್ಯು ಹಬಸಿ ಜನರು ಸ್ವದೇಶದವರು ಅವರಿಗೆ ನೀರಿನ ಆವಶ್ಯಕತೆ ಅಷ್ಟು ತಗಲುವದಿಲ್ಲ ಈಗ ಇತಾಲಿಯವರು ಇದೇ ದೇಶ ಗದ್ದಿಗ್ಯೂ ಮಳೆ ಬಂದಕೂಡಲೆ ಇತಾಲಿಯರೆಲ್ಲರೂ ಹಬಸಿ ದೇಶದೊಳಗಿಂದ ಗಂಟು ಮೂಟೆ ಕಟ್ಟಿ ಹೊರಬೀಳಬೇಕು ಇಲ್ಲದಿದ್ದರೆ ಹಬಸಿ ಜನರು ಅವರಿಗೆ ಅಡಗಿಕೂತುಕೊಂದುಬಿಡುವರು ಒದಿದೆ ಇತಾಲಿಯರಿಗೆ ಅಪಜಯವಾದಲ್ಲಿ ಮುಸೊಲಿನಿಯವರು ಪದಭ್ರಷ್ಟರಾಗಿ ಇತಾಲಿಯೊಳಗೆ ಕ್ರಾಂತಿಯಾಗುವದು" ಹೀಗೆಲ್ಲ ಪರಿಸ್ಥಿತಿಯಿದ್ದ ಮುಸೊಲಿನಿಯವರು ಆದಾಗ್ಯೂ ತಮ್ಮ ಹಟ ಬಿಡುವವರಲ್ಲ ಮುಂದಿನ ಅವಸ್ಥೆಯ ವಿಚಾರ ಮುಂದಿನ ವಾರ

— ಸೌ| ಕಮಲಾ ನೇಹರೂರವರ ಪ್ರಕೃತಿ ಸುಧಾರಿಸಿದ್ದಲ್ಲಿ ಪಂ| ಜವಾಹರಲಾಲ ನೇಹರೂರವರು ಲಂಡನಿಗೆ ಹೋಗುವ ವಿಚಾರದಲ್ಲಿದ್ದಾರೆಂದು ತಿಳಿಯುತ್ತದ

HOUSE FOR SALE IN KUMTA.

A fine house, sometime known as "Navjeevan Hall", at Nellekeri, Kumta, is offered for sale — Nine large rooms and plenty of veranda space — stands in about 1/2 an acre of garden — outhouses, garage, stables etc — Suitable as residence or for offices Offers are invited Apply Kalyanpurker on the premises or write to **Dr K. R. Row, Haveri** (M & S M Ry)

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದ ಪ್ರಾರಂಭಕ್ಕೆ ಬಹಳೇ ಸೆಕೆಯಾಗಿ ಕೊನೆಗೆ ಗುರುವಾರದಿಂದ ಜಡಿ ಮಳೆ ಬೀಳ ಹತ್ತಿದೆ. ಭಯಂಕರ ಸಿಡಿಲು-ಗುಡುಗುಗಳಾಗುತ್ತಿವೆ. ಗುರುವಾರ ಸಂಜೆ ಸಿಡಿಲು ಬಿದ್ದು, ಸಿರ್ಸಿಯಿಂದ ಕುಮಟೆಗೆ ಬರುವ ಮೋಟಾರ ಮೇಲಿಂದ ಹೆಗಡೆಗೆ ಹೋಗಲು ಹೆಗಡೆ ರಸ್ತೆ ಮೇಲೆ ಇಳಿದ ಗಾಮವಕ್ಕಲ ಜಾತಿಯ ಒಬ್ಬ ಗಂಡಸು ಮತ್ತು ಇನ್ನೊಬ್ಬ ಹೆಂಗಸು ಒಮ್ಮೆಲೇ ಸತ್ತುಬಿದ್ದರು! ಮಾಸ್ಕೇರಿಯಲ್ಲಿ ಹೊಲದೊಳಗೆ ಕೆಲಸ ಮಾಡುತ್ತಿದ್ದ ಒಬ್ಬ ಹೆಣ್ಣುಮಗಳ ಮೈಗೆ ತಾಗಿ ಸಿಡಿಲು ಹಾರಿದ್ದರಿಂದ ಆಕೆಯ ರೋಮಗಳು ಸುಟ್ಟು ಹೋಗಿವೆಯೆಂದು ಸುದ್ದಿ. ಈ ಅಕಾಲಿಕ ಮಳೆಯಿಂದ ಬಹಳೇ ಅನರ್ಥವಾಗಿದೆ. ಕೊಯ್ದು ಹಾಕಿ ಬಿದ್ದ ಪೈರು ಒಟ್ಟುಗೂಡಿಸಿ ಗೊಣಬೆ ಹಾಕಿಕೊಳ್ಳಲು ಅವಕಾಶವಿಲ್ಲ! ಪೈರು ಬರುವಾಗ ಮಳೆಯಿಲ್ಲದ್ದರಿಂದ ಮೊದಲೇ ನಷ್ಟ! ಈಗ ಈ ಮಳೆಯಿಂದ ಬೆಳೆದ ಭತ್ತವು ಉದುರಿ ಇಲ್ಲವೆ ಕೊಳೆತು ಇನ್ನೂ ನಷ್ಟವಾಗುವದು. ಅಂತು ರೈತರ ಕಷ್ಟಗಳಿಗೆ ಸೀಮೆಯಿಲ್ಲ!

ತಾ ೧೮ನೇ ಸಂಜೆ ಕುಮಟಾ ಟೌನ ಮುನಸಿಪಾಲಿಟಿ ಕಮಿಟಿಯ ವಿಶೇಷ ಸಭೆಯಾಯಿತು. ಕಮಿಟಿಯ ಚೇರಮನ್ನರಾಗಿದ್ದ ಪ್ರಾಂತ ಸಾಹೇಬರು ಮುದ್ದಾಂ ಈ ಸಭೆಗೆ ಬಂದಿದ್ದರು. ಮ್ಯುನಿಸಿಪಲ್ ಸೆಕ್ರೆಟರಿಗಳಾದ ರಾ| ಟಿ ವೆಂಕಟರಾಯ ಪ್ರಭುರವರ ಮೇಲೆ ಹಲವು ತರದ ದೋಷ, ಗೈರವರ್ತನ, ಕರ್ತವ್ಯ-ಲೋಪ ಮುಂತಾದ ಆರೋಪಗಳನ್ನು ಹೊರಿಸಿ 'ಆ ಬಗ್ಗೆ ನಿಮಗೆ ಯಾಕೆ ಬಡತರ್ಫ ಮಾಡಬಾರದು? ಎಂದು ಕಾರಣ ತೋರಿಸಬೇಕಾಗಿ" ರಾ| ಪ್ರಭುರಿಗೆ ನೋಟೀಸ ಕೊಡಲ್ಪಟ್ಟಿತ್ತು. ಸದ್ರಿ ಪ್ರಕರಣದ ಚೌಕಶಿಯು ಈ ಸಭೆಯಲ್ಲಿ ನಡೆಯಲಿಕ್ಕಿತ್ತು. ರಾ| ಪ್ರಭುಗಳು ತಮ್ಮ ಅಭಿಯೋಗವನ್ನು ಕಾಗದ ಪತ್ರಗಳ ಸಹಾಯದಿಂದ ತಯಾರಿಸಿ ಬರೆದು ಕೊಡಲಿಕ್ಕೆ ಒಂದು ತಿಂಗಳ ಅವಧಿ ಬೇಡಿದರಂತೆ. ರಜೆ ಕೊಂಡರೆ ಅವಧಿ ಕೊಡಲಾದೀತೆಂದು ಕಮಿಟಿಯವರು ಹೇಳಿದ್ದರಿಂದ ಸೆಕ್ರೆಟರಿಗಳು ಒಂದು ತಿಂಗಳ ರಜೆಯ ಬಗ್ಗೆ ಅರ್ಜಿ ಮಾಡಿದರಂತೆ! ಕಮಿಟಿಯವರು ರಾ| ಪ್ರಭುಗಳಿಗೆ ಒಂದು ತಿಂಗಳ ಅವಧಿಯನ್ನೂ ರಜೆಯನ್ನೂ ಕೊಟ್ಟಿರುತ್ತಾರೆಂದು ತಿಳಿಯುತ್ತದೆ.

ಕುಮಟಾ ಮ್ಯುನಿಸಿಪಾಲಿಟಿಯ ಚುನಾವಣೆಯ ಕಾರ್ಯಕ್ರಮವು ಪ್ರಸಿದ್ಧವಾಗಿದೆ. ಚುನಾವಣೆಯು ೧೯೩೬ನೇ ಇಸ್ವಿಯ ಫೆಬ್ರುವರಿ ತಾ ೧೦ಕ್ಕೆ ನಡೆಯುವದು. ಮತದಾರ ಯಾದಿಗಳು ಇದೇ ತಾ ೧೫ಕ್ಕೆ ಪ್ರಕಟವಾಗಿವೆ. ಮತಾಧಿಕಾರಯುಕ್ತರೆಯಿದ್ದು ತಮ್ಮ ಹೆಸರು ಈ ಯಾದಿಯಲ್ಲಿ ದಾಖಲಾಗದವರೂ, ದಾಖಲ ಆದ ಹೆಸರುಗಳ ಬಗ್ಗೆ ತಕ್ರಾರು ಉಳ್ಳವರೂ ತಮ್ಮ ತಕ್ರಾರ ಅರ್ಜಿಗಳನ್ನು ಈ ತಿಂಗಳ ಕೊನೆಯೊಳಗೆ ಮ್ಯುನಿಸಿಪಲ್ ಕಚೇರಿಯಲ್ಲಿ ಹಾಜರಪಡಿಸಿ ಪಾವತಿ ತೆಗೆದುಕೊಳ್ಳಬೇಕು.

ವಾಡಿಕೆಯಂತೆ ಗಿಬ್ಬ ಹೈಸ್ಕೂಲಿನ ವಿದ್ಯಾರ್ಥಿಗಳ ಸಮ್ಮೇಳನವೂ, ಬಕ್ಷೀಸ ಸಮಾರಂಭವೂ ಮೊನ್ನೆ ಶನಿವಾರ ಜರುಗಿದವು. ಈ ಭಾಗದ ಪ್ರಾಂತ ಸಾಹೇಬರಾದ ಮಿ|| ಆಲೆಕ್ಸಾಂಡರರವರು ಬಕ್ಷೀಸ ಸಮಾರಂಭದ ಅಧ್ಯಕ್ಷರಿದ್ದರು. ಇಲ್ಲಿಯ ಆ| ಇಂಜನಿಯರರಾದ ರಾ| ಶಿ ಬುವೇಕರವರು ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮಳೆಯ ಮೂಲಕ ಕೆಲವು ಕಾರ್ಯಕ್ರಮಗಳಲ್ಲಿ ರಸಭಂಗವಾಯಿತು.

ಪ್ಲೇಗು ಬೇನೆಯು ಇನ್ನೂ ಹಿಂದೆಗೆದಿಲ್ಲದಿದ್ದರೂ ಈ ವಾರದಲ್ಲಿ ಮರಣಗಳೇನೂ ಸಂಭವಿಸಲಿಲ್ಲ. ಆದರೂ ಅಲ್ಲಲ್ಲಿ ಇಲಿಗಳು ಬೀಳುತ್ತಿವೆಯಂತೆ. ಶುಕ್ರವಾರ ತಾಲೂಕ ಕಚೇರಿಯಲ್ಲಿ ಮೇ| ಮಾಮಲೇದಾರ ಸಾಹೇಬರ ಕಚೇರಿಯ ಎದುರಿಗೆ ಒಂದು ಇಲಿ ಬಿದ್ದಿತು.

ಪಶ್ಚಿಮ ಭಾಗದ ಸಹಕಾರಿ ಇಲಾಖೆಯ ಆ| ರಜಿಸ್ಟ್ರಾರರಾದ ರಾ| ಪಾಟೀಲರು ಇಲ್ಲಿಗೆ ದಯಮಾಡಿಸಿದ್ದರು. ಸಹಕಾರಿ ಯೂನಿಯನ್ನಿನ ಸಭೆ ಸೇರಿಸಿ, [illegible] ಸಾಲಗಾರರ ಹಿತಕ್ಕಾಗಿ ಮಂಜೂರ ಮಾಡಿದ ಸವಲತ್ತುಗಳು ೧೯೩೬ನೇ ಇಸವಿಯ ಜೂನ ಕೊನೆಯ ವರೆಗೆ ಅಮಲಿನಲ್ಲಿರುವವೆಂಬುದೂ, ಅಷ್ಟರಲ್ಲಿ ಸಾಲ ವಸೂಲಿಯನ್ನು ಮಾಡಿ ಸಂಘಗಳ ಕಾರಭಾರ ಸುಧಾರಿಸಿಕೊಳ್ಳಬೇಕೆಂಬುದೂ ಉಪದೇಶ ಮಾಡಿದರು.

ಗುಡೇಅಂಗಡಿಯ ತರುಣ ಸಂಘದವರು ಬಾಡದ ಶ್ರೀ ಕಾಂಚಿಕಾಂಬಾ ದೇವಸ್ಥಾನದಲ್ಲಿ ಹೊಸ ಉಪಕ್ರಮ ಮಾಡಿ ಈ ವರ್ಷದ ನವರಾತ್ರಿ ಉತ್ಸವವನ್ನು ವಿಶೇಷ ವಿಜೃಂಭಣೆಯಿಂದ ನೆರವೇರಿಸಿದರು. ಆಶ್ವಿನ ಶು| ಪ್ರತಿಪದೆಯಿಂದ ಹುಣ್ಣಿಮೆಯ ತನಕ ದಿನಾಲು ಸಂಜೆ ಹರಿಕೀರ್ತನೆಗಳಾದವು. ಒಟ್ಟು ೧೦ ದಿವಸ ಉತ್ಸವದ ಮಂಗಲವಾಯಿತು. ಅಂದು ಸಂಘದವರು ಯಕ್ಷಗಾನ ಮಂಡಳದವರ ಕಡೆಯಿಂದ 'ಪ್ರಲ್ಹಾದ ಚರಿತ್ರ" ಆಟವನ್ನು ಆಡಿಸಿದರು. ಆಟ ಒಳ್ಳೇದಾಯಿತು. ಇತ್ಯಾದಿ ಗುಡೇಅಂಗಡಿ ನಿವಾಸಿಗರೊಬ್ಬರು ಬರೆಯುತ್ತಾರೆ. ಸಂಘದವರ ಉಪಕ್ರಮ ಸ್ತುತ್ಯವಿದೆ.

ಹೆಗಡೆಯ ಇನ್ನೊಬ್ಬರು ತಿಳಿಸುತ್ತಾರೆ— "ಗಾಂಧಿ-ಜಯಂತ್ಯುತ್ಸವದ ಕೆಲ ಚಾಲಕರ ಮೇಲೆ ಕಳೆದ "ವೃತ್ತ"ದ ಸಂಚಿಕೆಯಲ್ಲಿ ಬಂದ ಟೀಕೆಯು ನಿರರ್ಥಕ ಮಾಡಿದ್ದು. ಅನುಕೂಲವಿದ್ದ ಚಾಲಕರೆಲ್ಲರೂ ಮೊದಲಿಗೆ ಮುಲ್ಕಿಸೆ ಇದ್ದರು. ಅನುಕೂಲವಿಲ್ಲದವರು ಶ್ರೀ ಅಚ್ಯುತನ ಗುಡಿಯಲ್ಲಿ ನಡೆದ ಉತ್ಸವ-ಸಭೆಯಲ್ಲಿ ಬಂದು ಸೇರಿದ್ದರು. ಅಂಥವರ ದೋಷಗಳೇನಿದ್ದಾಗ್ಯೂ, 'ಮಹಾತ್ಮರ ಉತ್ಸವದಲ್ಲಿ ನಾವೂ ಸೇರೆವು, ಹುಡುಗರಿಗೂ ಸೇರಗೊಡೆವು" ಎನ್ನುವ ಶಾಲಾ ಮಾಸ್ತರರನ್ನು ಅಪ್ಪಗಾರರು ಅವರೂ ಗಳಾದರು ಮೇಲಾಗಿ ಹಿಂದಿನ ದೋಷಗಳ ಕಡೆಗೆ ಬೊಟ್ಟು ತೋರಿಸಿದ ಮಾತ್ರಕ್ಕೆ ಶತ್ರುಗಳು ಅಲ್ಲವೆ ಅವರ ಬಹಿಷ್ಕೃತರು ನಿರ್ದೋಷಿಗಳಾಗುವದಿಲ್ಲ. ಆದ್ದರಿಂದ ದುಷ್ಟ ದೇಶಸೇವೆ ಮಾಡುವವರ ಮೇಲೆ ಬಾಯಿಗೆ ಬಂದಂತೆ ಹರಿಹಾಯದೆ ಸಲ್ಲದ ದೋಷಗಳೆಂದು ತೋರಿಸಿಕೊಡುವವರೂ ಸ್ವತಃ ಆ ದೋಷಗಳಿಂದ ಅಲಿಪ್ತರಾಗಿರಬೇಕು" ಇತ್ಯಾದಿ.

ಅಂಕೋಲಾ— ಈಗ ಕೆಲ ಕಾಲದಿಂದ ಕಾರವಾರ ವಿಭಾಗದ ಪ್ರಾಂತ ಸಾಹೇಬರಾದ ರಾ| ರಾ| ವೆಂಕಟಪ್ಪಯ್ಯನವರು ಈ ತಾಲೂಕಿನ ಹಳ್ಳಿ ತಪಾಸಣೆ ಕೆಲಸ ನಡೆಸಿದ್ದಾರೆ. ಸಾಹೇಬರು ಕಾಯಿದೆಯ ಪರಮ ಭಕ್ತರು. ಕಾಯಿದೆಯ ಗೌರವ ಪ್ರಸ್ಥಾಪಿಸುವದೇ ಅವರ ಮುಖ್ಯ ಧ್ಯೇಯ. ಕಾಯಿದೆಯ ಪಾಲನೆಯಿಂದಲೇ ಪ್ರಜೆಗಳ ಕಲ್ಯಾಣವಾದೀತೆಂಬುದೂ ಕಾಯಿದೆಯಲ್ಲಿ ಅನ್ಯಾಯಕ್ಕೆ ಎಡೆ ಇಲ್ಲೆಂಬುದೂ ಜನರ ಅನುಭವಕ್ಕೆ ತಂದುಕೊಟ್ಟು ಸರಕಾರದ ಮೇಲೆ ಜನರಿಗೆ ಪ್ರೀತಿ ಹುಟ್ಟುವಂತೆ ಅವರು ಹಗಲಿರುಳು ದುಡಿಯುತ್ತಿದ್ದಾರೆ. ರುವರ್ರಾರ್ಗಗಳು ಸಾಹೇಬರ ನ್ಯಾಯನಿಷ್ಠುರತೆ ನನೆದು ಬೆದರುತ್ತಾರೆ. ಪ್ರಜಾಪಕ್ಷವನ್ನೇ ಹಿಡಿದು ಸಾಹೇಬರು ಕೆಲಸ ಮಾಡುತ್ತಾರೆಂದು ಕೆಲವರು ಹೇಳುವದು ಸರಿಯಲ್ಲ. ಅವರ ನ್ಯಾಯನಿಷ್ಠುರತೆಯಿಂದ ಪ್ರಜೆಗಳ ಹಿತವಾದೀತೆಂಬ ಮಾತು ಬೇರೆ. ಸಾಹೇಬರು ತಮ್ಮ ಚೌಕಶಿಯಲ್ಲಿ—ಜಾಬ ವರ್ತಮಾನಗಳನ್ನು ಶಾಂತವಾಗಿ ಪರೀಶೀಲಿಸುತ್ತಾರೆ. ಬಾಹ್ಯ ಆಡಂಬರಗಳಿಗೆ ಮರುಳಾಗುವದಿಲ್ಲ. ದೊಡ್ಡವರು, ಬಡವರು, ಸ್ಪೃಶ್ಯರು, ಅಸ್ಪೃಶ್ಯರು ಎಂಬ ಭೇದಭಾವ ತೋರಿಸದೆ ಎಲ್ಲರ ಹೇಳಿಕೆಯನ್ನು ತಾಳ್ಮೆಯಿಂದ ಕೇಳಿಕೊಳ್ಳುತ್ತಾರೆ. ಕೇವಲ ಕೃತಿಗಳನ್ನು ನೋಡದೆ, ಕೃತಿ ಮಾಡುವವರ ಅಂತರ್ಯ-ಉದ್ದೇಶಗಳನ್ನು ಕಂಡು ಹಿಡಿಯುತ್ತಾರೆ. ನಿಜವಾಗಿ ಸರಕಾರನಿಷ್ಠರ್ಯಾರು? ಕೊಂಗ್ರೆಸ ನಿಷ್ಠರ್ಯಾರು? ಸ್ವಾರ್ಥ ಸಾಧಿಸುವದಕ್ಕೆ ಆ ಆ ಪಕ್ಷಗಳಿಗೆ ಸೇರಿಕೊಂಡು ಪಕ್ಷನಿಷ್ಠೆ ನಟಿಸುವವರ್ಯಾರು? ಎಂಬುದನ್ನು ಅರಿಯುವದರಲ್ಲಿ ಸಾಹೇಬರು ಬಹಳೇ ಚಾಣಾಕ್ಷರಿದ್ದಾರೆ, ತಮ್ಮ ದರ್ಬಾರಿಯಲ್ಲಿ ದೂರಿಂದಲೂ ತಪ್ಪುಗಳಾಗುವದು ಸಹಜವಿದೆಂಬುದನ್ನು ಅವರು ಮರೆಯುವದಿಲ್ಲ. ಅಪರಾಧಿಗಳಿಗೆ ರಕ್ಷಣೆಯು ದೊರೆಯದಂತೆ, ನಿರಪರಾಧಿಗಳಿಗೆ ದಂಡವಾಗದಂತೆ ಅವರು ದಕ್ಷತೆಯಿಂದ ವರ್ತಿಸುತ್ತಾರೆ. "ಬಳ್ಳಗಿದ್ದವರೆಲ್ಲ ಹಾಲಲ್ಲ, ಕಪ್ಪಿದ್ದವರೆಲ್ಲ ಕೆಡಕಲ್ಲ" ಎಂಬ ತತ್ವವನ್ನು ಅವರು ಚನ್ನಾಗಿ ಮನಗಂಡಿದ್ದಾರೆ. ಅವರ ಚೌಕಶಿಯಿಂದ ಪ್ರಜೆಗಳಿಗೆ ನ್ಯಾಯ ಸಿಕ್ಕೀತೆಂಬ ನಂಬಿಗೆಯಿದೆ. ಇತ್ಯಾದಿ ಒಬ್ಬ ನಾಗರಿಕರು ಬರೆದು ತಿಳಿಸುತ್ತಾರೆ.

ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವಸ್ಥಾನದಲ್ಲಿ ಅಷ್ಟಮಿ ದಿನ ದೇವಕಾರ್ಯವಾಯಿತು. ಆ ದಿನ ಬಹಳ ಅನ್ನಸಂತರ್ಪಣೆಯಾಗುತ್ತದೆ. ದೇವಸ್ಥಾನದ ಅಂಗಳದಲ್ಲೂ ಎಲೆಗಳನ್ನು ಹಾಕಿ ಬಡಿಸುತ್ತಾರೆ. ಈ ವರ್ಷ ಮಳೆ ಬೀಳಲಾರಂಭಿಸಿದ್ದರಿಂದ ಬಹಳ ಜನರು ಊಟ ಮಾಡದೆ ತಿರುಗಿ ಹೋಗಬೇಕಾಯಿತು.

ನಾಲ್ಕೈದು ದಿನಗಳಿಂದ ಗುಡುಗು ಮಿಂಚುಗಳಿಂದ ಕೂಡಿ ಒತ್ತಾಗಿ ಮಳೆ ಬೀಳುತ್ತಿದೆ. ಬೆಳೆ-ಕೊಯ್ಲಿಗೆ ಬಹಳ ಕಷ್ಟ, ರೈತರು ಗೋಳಾಡುತ್ತಾರೆ.

ಶಿರಸಿ— ಸಪ್ಟಂಬರ ತಿಂಗಳಲ್ಲಿ ಕರ್ನಾಟಕ ಚರಖಾ ಸಂಘದ ಕೇಂದ್ರಗಳಲ್ಲಿ ಅಂತು ರೂ ೧೩೧೦-೩-೦ಗಳ ಖಾದಿ ಮಾರಾಟವಾಯಿತು, ಗಾಂಧಿ ವಾರದಲ್ಲಿ ರೂ ೩೧೦-೧-೭ರ ಮಾರಾಟವಾಯಿತು. ನಮ್ಮ ಸಿರ್ಸಿಯಲ್ಲಿ ಅನುಕ್ರಮವಾಗಿ ರೂ ೧೪೦ ಮತ್ತು ರೂ. ೮೮೦ ವಿಕ್ರಿಯಾಗಿರುತ್ತದೆ.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಶಿಲ್ಕು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಇಲ್ಲವೆ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros.
D S Pai
K. N Nayak
Honavar Agent
R V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S M. State.

ಒಂದಿಷ್ಟು !

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ದಬ್ಬಾಳಿಕೆಯ ಕಾನೂನಿನ ಮೂರೂ ವಾಚನಗಳು ಮುಗಿದು ಸರಕಾರದ ಅಪೇಕ್ಷೆಯಂತೆ ಕಾನೂನು ಮನ್ನಿಸೋಣಾಗಿದೆ. ೩ನೇ ವಾಚನದ ಕಾಲಕ್ಕೆ ನಿಷೇಧವೆಂದು ೨೯ ಮಂದಿ ಸಭಾಸದರು ಸಭಾಸ್ಥಾನದಿಂದ ಎದ್ದು ನಡೆದರು. ಉಳಿದವರಲ್ಲಿ ನಾಲ್ವರ ವಿರೋಧಿಸಿದರು. ಅಂತು ಪ್ರಚಂಡ ಬಹುಮತದಿಂದ ಸರಕಾರಕ್ಕೆ ನಿರಂಕುಶ ಅಧಿಕಾರ ಸಿಕ್ಕಿದೆ. ಈ ಅಧಿಕಾರವನ್ನು ಜನಸಾಮಾನ್ಯರ ಸುರಕ್ಷಿತತೆಗಾಗಿ ಕ್ಷೇಮಕ್ಕಾಗಿ ಸರಕಾರವು ಪ್ರಯೋಗಿಸುವದೆಂದು ಸರಕಾರದ ಆಶ್ವಾಸನವಿದೆ. ದುರುಪಯೋಗವಾಗದೆಂದೂ, ದುರುಪಯೋಗವಾಗುವದೆಂದು ಕಾಯಿದೆ ಕೌನ್ಸಿಲಿನ ಅಂಬೋಣ. ಇಂಥ ಕಾಯಿದೆಯ ಉಪಯೋಗ ಯಾರ್ಯಾರಿಗೆಂದು ಎಲ್ಲರೂ ಬಲ್ಲದ ವಿಷಯ.

⁂

ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ಕ್ವೆಟ್ಟಾ ಭೂಕಂಪದ ಕುರಿತು ಬರೆದ ಎರಡು ಲೇಖಗಳಿಂದ ಸರಕಾರದ ತಿರಸ್ಕಾರವಯುತವಾಗಿ ರೂ ೨೦ ಸಾವಿರಗಳನ್ನು ಸರಕಾರವು ಜಪ್ತಮಾಡಿತ್ತು. ಈ ಹುಕುಮಿನ ವಿರುದ್ಧ ಮುಂಬಯಿ ಹೈಕೋರ್ಟಿನಲ್ಲಿ ದಾಖಲು ಪಡಿಸಲಾದ ಅರ್ಜಿಯ ವಿಚಾರವನ್ನು ಮುಖ್ಯ ನ್ಯಾಯಮೂರ್ತಿ ಸರ್ ಜಾನ ಬೂಮಂಟ್, ನ್ಯಾಯಮೂರ್ತಿ ಬ್ಲೇಕವೆಲ್ ಮತ್ತು ಎನ್. ಜೆ. ವಾಡಿಯಾರವರು ನಡಿಸಿ ಸರಕಾರಿ ಹುಕುಮು ಕಾಯಿದೆಯಂತೆ ಯೋಗ್ಯವಾದದ್ದೆಂದು ಅಭಿಪ್ರಾಯಪಟ್ಟು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ನ್ಯಾಯಮೂರ್ತಿ ಬೊಮಂಟ ಮತ್ತು ಬ್ಲ್ಯಾಕವೆಲ್‌ರವರಿಗೆ ಎರಡೂ ಲೇಖಗಳು ಆಕ್ಷೇಪಾರ್ಹವೆಂದು ತೋರಿತು. ನ್ಯಾಯಮೂರ್ತಿ ವಾಡಿಯಾರವರಿಗೆ ಒಂದು ಲೇಖ ಮಾತ್ರ ಆಕ್ಷೇಪಾರ್ಹ ತೋರಿತು. ಅಭಿಪ್ರಾಯದೊಳಗೆ ಭೇದ ತೋರಿದಾಗ್ಯೂ ಪರಿಣಾಮದಲ್ಲಿ ಏನೂ ಭೇದವಾಗಲಿಲ್ಲ. ಮೂವರೂ ನ್ಯಾಯಮೂರ್ತಿಗಳು ರೂ ೨೦ ಸಾವಿರಗಳ ಜಪ್ತಿಯನ್ನು ಎತ್ತಿಹಿಡಿದಿದ್ದಾರೆ. ನ್ಯಾಯಮೂರ್ತಿಗಳು ಪ್ರಾಮಾಣಿಕರಿದ್ದಾರೆ. ಪಕ್ಷಪಾತ ಮಾಡಲಿಲ್ಲ. ಕಾಯಿದೆಯೇ ಅಷ್ಟು ವ್ಯಾಪಕವಿದೆ! ಇದಕ್ಕಾಗಿಯೇ ವರಿಷ್ಠ ಕಾಯಿದೆ ಕೌನ್ಸಿಲಿನೊಳಗೆ ರಾಷ್ಟ್ರೀಯ ಸಭೆಯವರು ದಬ್ಬಾಳಿಕೆಯ ಕಾನೂನಿನೊಳಗಿನ ಮುದ್ರಣಶಾಸನದ ಕುರಿತು ವಿಶೇಷವಾಗಿ ಹೋರಾಡಿದ್ದು ಮತ್ತು ಪತ್ರಿಕೆಗಳ ಒಂದು ದಿನ ಹರತಾಳವನ್ನಾಚರಿಸಿದ್ದು!

⁂

"ಸೌ. ಕಮಲಾ ನೆಹರೂರವರ ಪ್ರಕೃತಿ ಸುಧಾರಿಸಲಾರಂಭಿಸಿದೆ. ಇದರಿಂದ ನಮಗೆ ಬಹಳ ಸಮಾಧಾನವಾಗುತ್ತಿದೆ" ಎಂಬುದಾಗಿ ಪಂಡಿತ ಜವಾಹರಲಾಲರವರು ಅಕ್ಟೋಬರ ೯ನೇ ತಾರೀಖಿನ ಪತ್ರದಲ್ಲಿ ಬರೆಯುತ್ತಾರೆ. ಆಮೇಲೆ ಬಂದ ಇನ್ನೊಂದು ಪತ್ರದಲ್ಲಿಯೂ ಸೌಭಾಗ್ಯವತಿಯವರ ಪ್ರಕೃತಿ ಸುಧಾರಿಸುತ್ತದಾಗಿ ಪಂಡಿತ ಜವಾಹರಲಾಲರು ತಿಳಿಸುತ್ತಾರೆ. ರಾಷ್ಟ್ರೀಯ ಸಭೆಯ ಅಧಿವೇಶನದ ಪೂರ್ವದಲ್ಲಿ ತಮಗೆ ಹಿಂದುಸ್ಥಾನಕ್ಕೆ ಬರಲಸಾಧ್ಯವೆಂದು ಪಂಡಿತ ಜವಾಹರಲಾಲರ ಅಂಬೋಣ. ಅಕ್ಟೋಬರ ೧೬ನೇ ತಾರೀಖಿಗೆ ಬಂದ ತಂತಿಯಲ್ಲಿ "ಸೌಭಾಗ್ಯವತಿಯವರ ಪ್ರಕೃತಿ ಒಳ್ಳೇ ಸುಧಾರಿಸುತ್ತದಾಗಿ ಬರೆದದೆ. ಜ್ವರ ಇಳಿಯಲಾರಂಭಿಸಿದೆ. ಕೆಮ್ಮಿನ ಉಪದ್ರವ ಕಡಿಮೆ. ಪುಪ್ಪುಸದೊಳಗಿಂದ ಕೀವು ತೆಗೆಯಲಾಯಿತು. ಸಾಮಾನ್ಯ ಸ್ಥಿತಿ ಒಳ್ಳೆದು" ಎಂಬುದಾಗಿ ತಂತಿಯಲ್ಲಿ ಬರೆದದೆ. ಪತಿ-ಪತ್ನಿಯರು ಕ್ಷೇಮದಿಂದ ಸ್ವದೇಶಕ್ಕೆ ಹಿಂತಿರುಗಿ ಬರಲೆಂದು ಎಲ್ಲರೂ ಪ್ರಾರ್ಥಿಸುತ್ತಾರೆ.

⁂

ವರ್ಧಾದಲ್ಲಿ ಯೋಗಿ ವಿದ್ಯಾ[illegible]ರವರು [illegible] ಅದ್ಭುತ ಪ್ರಯೋಗಗಳನ್ನು ಮಾಡಿ ತೋರಿಸಿದರು! ಶೇಟ ಜಮುನಾಲಾಲ ಬಜಾಜರವರು ಅಧ್ಯಕ್ಷರಿದ್ದರು. ಹಠಯೋಗ ಸಾಧನೆಯಿಂದ ಅದ್ಭುತವಾದ ಪರಾಕ್ರಮ ಮಾಡಲಿಕ್ಕಾಗುತ್ತದೆಂದು ಅವರು ನುಡಿದರು. ತರತರದ ಆಸನಗಳನ್ನು ಮಾಡಿ ತೋರಿಸಿದ ಬಳಿಕ ೨೨ ಫೂಟು ಉದ್ದವಾದ ವಸ್ತ್ರವನ್ನು ತಿಂದರು. ನೂಲನ್ನು ಮೂಗಿನಿಂದ ಹಾಕಿ ಕುತ್ತಿಗೆಯ ನಾಳದೊಳಗಿಂದ ಹೊರತಂದರು. ಮಾರನೇ ದಿನ ವಜ್ರೋಲಿ ಕ್ರಿಯಾ ಎಂಬ ಅದ್ಭುತವಾದ ಪ್ರಯೋಗ ಮಾಡಿ ತೋರಿಸಿದರು. ವಜ್ರೋಲಿ ಕ್ರಿಯೆಯನ್ನು ನಡಿಸಿದಲ್ಲಿ ವೀರ್ಯರಕ್ಷಣೆಯಾಗುವದಲ್ಲದೆ ಬ್ರಹ್ಮಚರ್ಯದಿಂದ ಮನುಷ್ಯನು ತೇಜಃಪುಂಜನಾಗುತ್ತಾನೆ. ಗುಹ್ಯೇಂದ್ರಿಯವನ್ನು ಸಂಪೂರ್ಣವಾಗಿ ನಿಯಂತ್ರಿಸುವದೇ ವಜ್ರೋಲಿ ಕ್ರಿಯೆಯ ಉದ್ದೇಶ. ಯೋಗಿಗಳು ಮೂತ್ರಾಶಯದ ಮಾರ್ಗವಾಗಿ ಹಾಲನ್ನು ಹೀರಿಕೊಂಡು ಹೊಟ್ಟೆಗೊಯ್ದರು. ಒಂದರಹಿಂದೊಂದು ಬಟ್ಟಲು ಹಾಲನ್ನು ಬರಿದುಮಾಡುವದನ್ನು ನೋಡಿ ಪ್ರೇಕ್ಷಕರು ಚಕಿತರಾದರು. ಯೋಗಿಗಳು ಒಳ್ಳೇ ನಿಷ್ಣಾತರಿದ್ದಾರೆ. ಯೋಗಸಾಧನೆಯಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳಬರುತ್ತದೆ, ದೃಢಕಾಯರಾಗಬರುತ್ತದೆ!

⁂

ಅಸ್ಪೃಶ್ಯರಿಗೆ ಮೇಲ್ಪಂಕ್ತಿಯವರು ತರತರದಿಂದ ದಣಿಸುತ್ತಾರೆಂದು, ಅಸ್ಪೃಶ್ಯರ ಮುಂದಾಳುಗಳೆಂದು ಭಾರತ ಮಂತ್ರಿ ಸರ್ ಸಮ್ಯುಯೆಲ್ ಹೋರ ಪ್ರಭೃತಿ ದೊಡ್ಡ ದೊಡ್ಡ ಅಧಿಕಾರಿಗಳು ಅಚ್ಚು ಹೊಡೆದ ಡಾ|| ಅಂಬೇಡಕರರವರು ಧರ್ಮಾಂತರ ಹೊಂದುವ ನಿರ್ಧಾರ ಮಾಡಿದ್ದಾರೆ! ಇನ್ನೂ ಯಾವ ಧರ್ಮದಲ್ಲಿ ಸೇರಬೇಕೆಂದು ನಿರ್ಧಾರ ಮಾಡಿಲ್ಲ! ಹಿಂದು ಧರ್ಮ ಬಿಡಬೇಕೆಂದು ಮಾತ್ರ ನಿರ್ಧಾರವಾಗಿದೆ. 'ಧರ್ಮಾಂತರ ಹೊಂದುವದು ಶ್ರೇಯಸ್ಕರವಲ್ಲ'ವಾಗಿ ಮದ್ರಾಸದೊಳಗಿನ ಅಸ್ಪೃಶ್ಯರ ಮುಂದಾಳುಗಳಾದ ರಾ|| ಬ|| ಶ್ರೀನಿವಾಸನ್‌ರವರು ಪ್ರಕಟಿಸುತ್ತಾರೆ.

ಶ್ರೀ ಬಾಲಸುಬ್ರಹ್ಮಣ್ಯ ಕಾಫಿ ವರ್ಕ್ಸ್,
ಸಾಗರ. ಶಿವಮೊಗ್ಗ.

ನಮ್ಮಲ್ಲಿ ನೂತನ ಪದ್ಧತಿಯಂತೆ ಏನೂ ಬೆರಕೆ ಇಲ್ಲದ ಶುದ್ಧವೂ, ಮಧುರವೂ ಆದ ಕಾಫಿ ಪುಡಿಯನ್ನು ತಯಾರಿಸುತ್ತೇವೆ. ಯೋಗ್ಯ ಕಮಿಶನ್ ಕೊಟ್ಟು ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ! ಈ ದಿನವೇ ಬರೆಯಿರಿ!

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!
ಬಾಜಾರಿ ದರಕ್ಕಿಂತ ಕಡಿಮೆ!!
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯಿದೆ. ಇನ್‌ಕಮ ಟೇಕ್ಸ್ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೬ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಸ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ— ಪಿರ್ಕಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ — ಅಂಕೋಲಾ.

“ಧರ್ಮವೆಂದರೆ ಸ್ವೇಚ್ಛೆಯಿಂದ ಬದಲಿಸಬಹುದಾದ ವಸ್ತುವಲ್ಲ. ಧರ್ಮದಿಂದ ಅಂತರಾತ್ಮನೂ ಪರಮಾತ್ಮನೂ ಸಂಲಗ್ನರಾಗಿದ್ದಾರೆ. ಡಾ| ಅಂಬೇಡಕರರು ಪೂರ್ವಪರಂಪರೆಯನ್ನು ವಿಚಾರಿಸಿ ನಡಕೊಳ್ಳಬೇಕು. ಪೂರ್ವ ಪರಂಪರೆಯನ್ನು ಬಿಟ್ಟು ಇವರು ವರ್ತಿಸಿದ್ದಲ್ಲಿ ಇವರಿಗೆ ಯಾರೂ ಹಿಂಬಾಲಿಸರು” ಎಂಬದಾಗಿ ಮಹಾತ್ಮರು ಪ್ರಕಟಿಸುತ್ತಾರೆ. “ಶೀಖ ಪಂಥದ ಗ್ರಂಥಗಳನ್ನು ಪರ್ಯಾಲೋಚಿಸಿ ಡಾ| ಅಂಬೇಡಕರರು ಸಪರಿವಾರ ಶೀಖ ಪಂಥದಲ್ಲಿ ಸೇರಬೇಕಾಗಿ” ಸರದಾರ ದಿಲೀಪಸಿಂಗರವರು ಡಾ| ಅಂಬೇಡಕರರಿಗೆ ತಂತಿ ಮಾಡಿದ್ದಾರೆ. ಡಾ| ಅಂಬೇಡಕರರು ಅಸ್ವೀಕರಿಂದು ಹೇಳುವದು ಕಠಿಣ. ಅವರ ಧರ್ಮದ ಆವಶ್ಯಕತೆ ಇರುವದಾಗಿ ಹೇಳುವದೂ ಕಠಿಣ. ಧರ್ಮಭಾವನೆ ಇಲ್ಲದೆ ಪುಸ್ತಕಗಳ ವಾಚನದಿಂದ ಧರ್ಮಸ್ವೀಕಾರ ಮಾಡುವವರು, ನೆವ ಸಿಕ್ಕಿದ ಕೂಡಲೆ ಧರ್ಮತ್ಯಾಗ ಮಾಡಬಯಸುವವರು ಧರ್ಮ ಹಿಡಿದರೂ ಒಂದೇ, ಧರ್ಮ ಬಿಟ್ಟರೂ ಒಂದೇ! ಸುಮ್ಮನ ಇಷ್ಟೊಂದು ಕೋಲಾಹಲ. ಡಾ| ಅಂಬೇಡಕರರು ಹಿಂದು ಧರ್ಮದವರೆಂದು ಈಗ ಮಾಡುವ ಹಿಂದು ಧರ್ಮಕ್ಕೆ ಕೃಪೆ ಅಷ್ಟೇ!

* *

ಹಿಂದೀ ರಾಜಕಾರಣದಲ್ಲಿ ಸ್ಥಿತ್ಯಂತರ ಉಂಟಾಗಲಾರಂಭಿಸಿದೆ. ಗೃಹಮಂತ್ರಿಗಳಾದ ಸರ್ ಹೆನ್ರಿ ಕ್ರೇಕರವರು ಪತ್ನೀಸಹ ಕಲಕತ್ತೆಗೆ ತೆರಳಿದ್ದಾರೆ. ಅಲ್ಲಿಂದ ಅವರು ದಾರ್ಜಿಲಿಂಗಕ್ಕೆ ಹೋಗಿ ಬಂಗಾಲದ ಗವ್ಹರ್ನರರೊಡನೆ ರಾಜಕೈದಿಗಳನ್ನು ಬಿಡುಗಡೆ ಮಾಡಿ ಜನಸಾಮಾನ್ಯರಿಗೆ ಸಂತೈಸುವ ಆಲೋಚನೆಯಲ್ಲಿ ಇರುವರಂತೆ. ಭಾರತ ಮಂತ್ರಿಗಳ ಅಪೇಕ್ಷೆಯಂತೆ, ಸರ್ವಾಧಿಪತಿಗಳ ಅಪ್ಪಣೆಯಂತೆ ರಾಜಸಂದೇಶವನ್ನರುಹಿ ಬಂಗಾಲ ಗವ್ಹರ್ನರರ ಅನುಮತಿ ಪಡೆಯ ಹೋಗಿದ್ದಾರಾಗಿ ಕಲಕತ್ತೆಯ ವಾರ್ತೆ. ಹೊಸ ರಾಜ್ಯಸುಧಾರಣೆಯ ಪುರಸ್ಕಾರ ಪೂರ್ವದಲ್ಲಿ ಜನರಿಗೆ ಸಂತೈಸುವ ಆಲೋಚನೆಯಾಗಿರುವದಂತೆ. ರಾಜ್ಯಸುಧಾರಣೆಗಿಂತ ಯುದ್ಧ ಕಾರ್ಮೋಡಗಳಿಂದಲೇ ಹಿಂದೀ ಪ್ರಜೆಗಳ ಸಂತೋಷಸಂಗ್ರಹದ ವಿಚಾರವಾಗಿರಬಹುದಲ್ಲವೇ?

* *

ಮದ್ರಾಸದೊಳಗೆ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆ ಕಳೆದ ಗುರುವಾರ ನೆರವೇರಿತು. ಹೊಸ ರಾಜ್ಯಘಟನೆಯೊಳಗೆ ರಾಷ್ಟ್ರೀಯ ಸಭೆಯವರು ಅಧಿಕಾರ ಪುರಸ್ಕಾರ ಮಾಡಬೇಕೋ ತಿರಸ್ಕಾರ ಮಾಡಬೇಕೋ ಎಂಬ ಚರ್ಚೆ ನಡೆಯಿತ. ರಾಜ್ಯಘಟನೆಯ ಪ್ರಾರಂಭಕ್ಕೆ ಅವಕಾಶವಿರುವದರಿಂದ ಇಂದಿಗೇ ಆ ನಿರ್ಣಯಕ್ಕೆ ಕೊಳ್ಳುವದು ಅವಶ್ಯವಿಲ್ಲವಾಗಿ ನಿರ್ಣಯವಾಗಿದೆ. ವ್ಯಕ್ತಿಶಃ ಸಾಧಕ-ಬಾಧಕ ಚರ್ಚೆ ಮಾಡಲು ಕಾರ್ಯಕಾರಿ ಮಂಡಳದ ಪ್ರತಿಬಂಧವಿಲ್ಲ. ಈ ಸಮಯ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರವರಿಗೆ ಮಾನಪತ್ರ ಕೊಟ್ಟು ಸತ್ಕರಿಸಬೇಕೆಂದು ಮದ್ರಾಸ ಮ್ಯುನಿಸಿಪಾಲಿಟಿಯಲ್ಲಿ ಸೂಚನೆಯಿತ್ತು. ಅದು ಬಹುಮತದಿಂದ ತಿರಸ್ಕರಿಸಲ್ಪಟ್ಟಿತು. ರಾಜಕಾರಣ ಕಾರ್ಯಕ್ಕಾಗಿ ಅವರು ಮದ್ರಾಸಿಗೆ ಚಿತ್ತೈಸುತ್ತಿರಾದ್ದರಿಂದ ಅವರಿಗೆ ಮಾನಪತ್ರವನ್ನೀಯುವದು ಪ್ರಶಸ್ತವಲ್ಲವಾಗಿ ಬಹುಮತದವರ ಅಭಿಪ್ರಾಯವಾಗಿತ್ತು. ಆ ಮೇಲೆ ಶ್ರೀ| ನರಿಮಾನರವರಿಗೆ ಮಾನಪತ್ರವನ್ನೀಯಬೇಕಾಗಿ ತೀರ್ಮಾನವಾಯಿತು. ಶ್ರೀ| ನರಿಮಾನರು ಕಾರ್ಯಕಾರಿ ಮಂಡಳದ ಸಭಾಸದರು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿ, ಕಾರ್ಯಕಾರಿ ಮಂಡಳದ ಕಮಿಟಿಗಾಗಿಯೇ ಮದ್ರಾಸಿಗೆ ಹೋಗಿದ್ದಾರೆ. “ನಾನು ರಾಜಕಾರಣ ಕಾರ್ಯಕ್ಕಾಗಿಯೇ ಇಲ್ಲಿ ಬಂದಿದ್ದೇನೆ. ನಿಮ್ಮ ಮಾನಪತ್ರವನ್ನು ಸ್ವೀಕರಿಸಲಾರೆ. ರಾಷ್ಟ್ರೀಯ ಸಭೆಯ ಅಧ್ಯಕ್ಷರಿಗೆ ಮಾನಪತ್ರವನ್ನೀಯಲು ತಿರಸ್ಕರಿಸಿ ಮ್ಯುನಿಸಿಪಾಲ್ಟಿಯು ಅಪಮಾನ ಮಾಡಿದೆ” ಎಂಬದಾಗಿ ಚೊಕ್ಕ ಉತ್ತರ ಬರೆದು ಮಾನಪತ್ರವನ್ನು ತಿರಸ್ಕರಿಸಿ ಮದ್ರಾಸ ಮ್ಯುನಿಸಿಪಾಲಿಟಿಯ ಕಿವಿಯನ್ನು ಸೊಗಸಾಗಿ ಹಿಂಡಿದ್ದಾರೆ.

* *

ರೇವಾ ಸಂಸ್ಥಾನಿಕರು ದಸರೆಯ ಸಮಯ [illegible] ಬಾಕಿ ಬಿದ್ದ ತೀರ್ವೆಯನ್ನು ಸೂಟ ಬಿಟ್ಟಿದ್ದಾರೆ. ನೇಯ್ಗೆಗೆ ಉತ್ತೇಜನ ಕೊಡುವದಕ್ಕಾಗಿ ನೂಲಿನ ಮೇಲಿನ ತೆರಿಗೆಯನ್ನು ತಗ್ಗಿಸಿದ್ದಾರೆ. ಸ್ತ್ರೀ-ಚಿಕಿತ್ಸಾಲಯವನ್ನೂ ಸ್ಥಾಪಿಸುವ ಸಂಕಲ್ಪ ಮಾಡಿದ್ದಾರೆ.

ಅಶ್ವಾರೂಢ ಕವಚ!

ವ್ಯಾಪಾರ, ಉದ್ಯೋಗಸಿದ್ಧಿ, ವ್ಯವಹಾರಜಯ, ಕರ್ಮಲಾಭ ಇತ್ಯಾದಿ ವಿಷಯಗಳಲ್ಲಿ ಪ್ರಯತ್ನಿಸಿ ನಿರಾಶರಾದವರಿಗೆ “ಅಶ್ವಾರೂಢ ಯಂತ್ರವು “ಗ್ರೀಷ್ಮ-ಹರ್ಷತದಲ್ಲಿ ಮಧು ವೃಷ್ಟಿಯಂತೆ” ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು. ½ ಆಣೆ ಸ್ಟ್ಯಾಂಪಿನೊಡನೆ [illegible]ಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು.

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು. ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರಕ್ಕೆ ಬೆಲೆ ರೂ 20-0-0, ಬೆಳ್ಳಿಯ ಯಂತ್ರಕ್ಕೆ ರೂ 3-0-0, ತಾಮ್ರದ ಯಂತ್ರಕ್ಕೆ ರೂ 2-0-0

ಪತ್ತೆ ದೇವಿದಾಸ ಪಿ. ಕೆ. ಕೆ. ಎನ್.,
ಜ್ಯೋತಿಷಿ, ಕುಮಟಾ. [ಉ ಕನ್ನಡ]

Siromani Udipi Narayanacharya
CHAUKHAMBA, BENARES CITY

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ಸರ್ವ ಸಮಸ್ತ ಮನೋರಥವನ್ನು ಹೊಂದಿರಿ. ಮಣಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ಮಣಿ 1ಕ್ಕೆ ರೂ 0 8 0ಯಿಂದ ರೂ 100 ವರೆಗೆ. ಗೌರಿಶಂಕರ 1ಕ್ಕೆ ರೂ 3-8-0 ರಿಂದ ೨೦ ವರೆಗೆ. ಮತ್ತು ಬೇರೆ ಮಣಿಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ರ ಸ್ಟ್ಯಾಂಪು ಕಳಿಸಿದರೆ, 1 ಲಾಕೆಟ್ ನಕ್ಷೆ, 1 ವಿಶ್ವೇಶ್ವರನ ಪಟ ನಮ್ಮ ಕಡೆಯಾಗು ಸಹ ಇನಾಂ ಕಳಿಸಲಾದೀತು.

ಪತ್ತೆ – **ಶಿರೋಮಣಿ ನಾರಾಯಣಾಚಾರ್ಯ,**
ಚೌಖಂಬಾ, ಕಾಶೀ ಕ್ಷೇತ್ರ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು– ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಿ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ ೧-೮-೦

ಅಶ್ವಗಂಧ ಟೋನಿಕ್ — ಮಜ್ಜಾ ಮಾಂಸ, ನರಗಳನ್ನು ಬಲವಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಶುಕ್ರಕ್ಕೆ ಇದು ದಿವ್ಯೌಷಧ! ರೂ ೧-೪-೦

ಎಗ್ಸ್ ಮಿಕ್ಶ್ಚರ, ಫೀವರ ಡ್ರಾಪ್ಸ, ಅಮೃತ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿತ್ಯಗಟ್ಟಲೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!

ಇದಲ್ಲದೆ ಪ್ಲೇಗ ಪ್ರತಿಬಂಧ ಮ ನಿವಾರಣೆಯ ಬಗ್ಗಾಗಿ ಅನುಭವಸಿದ್ಧವಾದ ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ಮ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲಿಪೋಲ, ರಿಲ್ ವೊಲರ ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು.-

ಡಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ॐ

'दशमूलारिष्ट.'
'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ. ಆದರೆ ಅವರಲ್ಲಿ ಸಿಗುವ [illegible] ವನಸ್ಪತಿಗಳು ಎಲ್ಲಾ [illegible] ವಾಗಿರುವದರಿಂದ ಅದರ ಗುಣವು ಸರಿಯಾಗಿ ಕಂಡುಬರುವದಿಲ್ಲ. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವ [illegible] ವನಸ್ಪತಿಗಳನ್ನು [illegible] ರೀತಿಯಿಂದ ತಯಾರಿಸಿದ್ದು [illegible] ಎಲ್ಲಾ [illegible] ವಸ್ತುಗಳು [illegible] ದಿಂದ ಇದರ ಗುಣವು [illegible] ತ್ವರಿತವಾಗಿರುತ್ತದೆ.

ಈ ಚಿತ್ರದಲ್ಲಿದ್ದ [illegible] ಕ್ರಿಯೆ [illegible] ಎಂಥ ರೋಗಕ್ಕೆ ಇದ್ದರೂ ರೋಗ [illegible] ಮೈಯಲ್ಲಿ [illegible] ರಕ್ತವನ್ನು, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಶೀತ, ಪಿತ್ತ, ಗುಲ್ಮ, (ವಾತ, ಕ್ಷಯ, ವಾಂತಿ) [illegible] ಪಾಂಡುರೋಗ, ರಕ್ತ [illegible] ಚರ್ಮವ್ಯಾಧಿ, ವಾತವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ [illegible] ಇದ್ದರೆ [illegible] ಇರುವವರಿಗೆ [illegible] ಹೆಂಗಸರಿಗೆ ಪ್ರಸವ ಆದ ನಂತರ [illegible] ವಿಕಾರಗಳಿಗೆ, [illegible] ವಿಕಾರಗಳಿಗೆ ಹಾಗೂ [illegible] ದಿಂದ [illegible] ರೋಗಗಳಿಗೆ [illegible] ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ ಪ್ರಸೂತಿ ಆದ ನಂತರ (ದಿನ [illegible]) [illegible] ದಿನಗಳ ವರೆಗೆ [illegible] ಸಂಬಂಧವಾದ ಯಾವದೇ ತರದ ರೋಗಗಳು [illegible] ಆಗದೆ [illegible]

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔಂಸ ಬಾಟ್ಲಿ ೧ಕ್ಕೆ ರೂ ೧—೪—೦
" ಬಾಟ್ಲಿ ೬ಕ್ಕೆ ರೂ ೬-೧೨—೦.
" ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಾದಿ [illegible] ಕೂಷ್ಮಾಂಡಖಂಡ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಶಿವಲಿಂಗಕವ, ಪುನರ್ನವಾ ಆಸವ, ಅಶೋಕಾರಿಷ್ಟ ಕನಕಾರಿಷ್ಟ, [illegible] ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ [illegible] ಔಷಧಿಗಳು ತಯಾರ [illegible] ದೇಶೀಯ [illegible] ಅನುಭವ ಪಡೆಯಬೇಕು

ನಮ್ಮ ವಿಳಾಸ—

ವಿ. ಅಚ್ಯುತ ಪಂಡಿತ,

ಮಾಲಕ,

ಆಯುರ್ಧನ್ವಂತರಿ ಔಷಧಾಲಯ,

ಪೋಸ್ಟ — **ಕುಮಟಾ.** (ಉ. ಕನ್ನಡ)

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!!

ಪೊಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್,

ಮುಖ್ಯ ಕಾರ್ಯಾಲಯ: ಮಂಗಳೂರು.

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೇ ವಿಮಾ ಸಂಸ್ಥೆ.

ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ! ಸ್ತ್ರೀಯರ ಜೀವವಿಮೆಯನ್ನು ಸ್ವೀಕರಿಸಲಾಗುತ್ತದೆ!
ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಕಷ್ಟು ಸುಲಭ ದರದಲ್ಲಿ
ಒದಗಿಸಿಕೊಡುವ ಈ ಕಂಪನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

ವಿ ಸೂ: 'ಇಂಡಸ್ಟ್ರಿಯಲ್ ವಿಮೆ' ಎಂಬ 'ರೂಪಾಯಿ ಪೊಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ

ಪ್ರತಿಯೊಂದು ಜಿಲ್ಹೆಯಲ್ಲಿ ಯೋಗ್ಯ ಏಜಂಟರು ಬೇಕು!
ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು.
ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು - ಮೆಸರ್ಸ ಜೀವನ ಏಜನ್ಸಿ, ಕಾರವಾರ.

Established 1900.

ॐ

FIXED RATE

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗೆಗಳೂ, ಧೋತರ ಜೋಡುಗಳೂ, ರೇಷ್ಮೆ ಬಿಸ್ತರ ಮಂಚಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಒಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel "Honesty"] **D. K. DHAKAPPA BROS.,**

ಹೊಸ ಮಾಲು.

Cloth Merchants,
SIRSI. N. KANARA

ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ ಜೀ ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂದೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಅಂದರೆ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟಿನ ಸಾದಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ ೪ ಆಣೆ ಡಜನ್ ೧ಕ್ಕೆ ರೂ ೨-೮-೦ ವಿ. ಪಿ ೦-೬-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ - ಗುರುಬಸಪ ಅಂಡ್ ಕಂಪನಿ ಲಿಮಿಟೆಡ್, ಪೋ ಬಾ ೫೧೦, ಪಾರ್ಕ್‌ಟೌನ ಮದ್ರಾಸ

ಇದನ್ನು ಪಾಂಡುರಂಗ ಕೃಷ್ಣ ಶಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಅಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B. 1270. Monday, 28th October, 1935.

ವರ್ಷ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆಪತ್ರ ಸೇರಿ
ರೂಪಾಯಿ 3-1-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೭

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ರೈಸ್
ಲಿಸ್ಟಿನ (೧೫ ಎಮ್ ಅಗಲ)
೬ ಸಾಲುಗಳವರೆಗೆ ರೂ. 1-0-0
೬ ನಂತರ ಪ್ರತಿಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು
ಹತ್ತುವದೋ ಆ ಪರಿಮಿತಿ
ಯಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು.

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೮ ನೇ ಅಕ್ಟೋಬರ ಸನ್ ೧೯೩೫ನೇ ಇಸವಿ.)*—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ
ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ
ಪಟಾಯಿಸಬರುತ್ತವೆ.

**ಅಂತು ದರಸಾಲ ಶೇಕಡಾ ೪-೬-೦
ರಂತೆ ಬಡ್ಡಿ ಸಿಗುತ್ತದೆ!**

ಆರಾರು ತಿಂಗಳಿಗೆ ದರಸಾಲ ಶೇಕಡಾ ೩ಕ್ಕೆ ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧ಕ್ಕೆ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು. ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೩-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ
ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ–ಕೋಟೆ, ಮುಂಬಯಿ–ಮಾಂಡವಿ ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪೆ, ಬೆಂಗಳೂರು, ದಾವಣಗೇರೆ, ಚಿಕ್ಕಮಗಳೂರು, ಮಂಗಳೂರು–ಬಂದರ, ಮಂಗಳೂರು–ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ,

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು:— ಉಡುಪಿ, ಬ್ರಹ್ಮಾವರ, ಹೊನ್ನಾವರ ಕುಂದಾಪುರ, ಕುಮಟಾ ಕಾರವಾರ, ಶಿರ್ಸಿ, ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ ಕಸ್ತಾನೂರ, ಬಸ್ರೂರ ಹಂಗಾರಕಟ್ಟೆ, ಬಾರ್ಕೂರ ಮತ್ತು ಕಾಂಚನ್ನುಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೆಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವವು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6¾ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ಪಟಾಯಿಸಲ್ಪಡುವ ವ್ಯವಸ್ಥೆಯುಂಟು.

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ. ನಮ್ಮ **ಸಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು:— ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ.

ಚಿನ್ನಾಭರಣಗಳ ಆಧಾರದ ಮೇಲೆ ಒಳ್ಳೆಯ ರಿಯಾಯಿತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

ಕುಮಟಾ,
ತಾ. ೧೫-೭-೧೯೩೫

G. S. Nayak,
ಏಜಂಟ, ಕುಮಟಾ.

ಬನ್ನಿರಿ! ॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ॥ ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ. (ಉ ಕನ್ನಡ);

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೈವ್ಹಲರರಿಗೂ ಉಳಕೊಳ್ಳಲಿಕ್ಕೂ ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಜಾಹೀರ ನೋಟೀಸು.

ಮೂರೂರ ಗ್ರಾಮದ ಮೋಗಣ ದೇವಾಲಯದ ಶ್ರೀ ವಿಷ್ಣುಮೂರ್ತಿ ದೇವರ ಅರ್ಚಕರಾದ ಗಣೇಶ ತಿಮ್ಮಣ್ಣಭಟ್ಟ ವಗೈರೆರಿಗೆ. ಈ ಕೆಳಗೆ ಸಹಿ ಮಾಡಿದವರು ತಿಳಿಸುವ ವಿವರ:— ಶ್ರೀ ದೇವಸ್ಥಾನದ ಸೇವೆಯನ್ನು ವ ವಿನಿಯೋಗವನ್ನು ಸರಿಯಾಗಿ ನಡೆಸಿ ಬರಬೇಕೆಂಬ ನಿಶ್ಚಿತ ಕರಾರಿನ ಮೇಲೆ ಶ್ರೀ ದೇವರ ಬಾಬ್ತು ಭೂಮಿಯ ವ್ಯವಹಾರವನ್ನು ಅರ್ಚಕರಾದ ನಿಮ್ಮ ಕಡೆಗೆ ಕೊಟ್ಟಂತೆ ನೀವು ಸೇವೆ ನಡೆಸುತ್ತ ಬರುತ್ತೀರಿ. ಸದರ ಆಸ್ತಿಯನ್ನು ಯಾವದೇ ಪ್ರಕಾರದಿಂದ ಪರಾಧೀನ ಮಾಡಲಿಕ್ಕೆ ನಿಮಗೆ ಸ್ವತಂತ್ರ ಹಕ್ಕು-ಸಂಬಂಧವಿಲ್ಲ. ಈ ಸಂಗತಿ ನಿಮಗೆ ಗೊತ್ತಿದ್ದು ನೀವು ಬುದ್ಧ್ಯಾ ಶ್ರೀ ದೇವರ ದೇವತಾ ವಿನಿಯೋಗಗಳಿಗೆ ತೊಂದರೆಪಡಿಸುವ ಉದ್ದೇಶದಿಂದಲೂ, ಸ್ವಾರ್ಥ ಸಾಧಿಸುವ ದುರಾಲೋಚನೆಯಿಂದಲೂ ಶ್ರೀ ದೇವರ ವಿನಿಯೋಗಕ್ಕೆ ಬಿಟ್ಟ ಆಸ್ತಿಯನ್ನು ಪರಾಧೀನ ಮಾಡುವ ಆಲೋಚನೆಯಲ್ಲಿರುತ್ತೀರೆಂದು ತಿಳಿಯುತ್ತದೆ. ಕಾರಣ ಹಾಗೆ ಪರಾಧೀನ ಮಾಡಿದ್ದಲ್ಲಿ ಅದರಿಂದ ಶ್ರೀ ದೇವರ ಹಕ್ಕಿಗೆ ಏನೂ ಬಾಧೆ ಬರಲಾರದು. ದೇವತಾ ಆಸ್ತಿ ಇದ್ದ ಪ್ರಯುಕ್ತ ಪರಾಧೀನ ಮಾಡಿಕೊಂಡವರಿಗೆ ಏನೊಂದೂ ಹಕ್ಕು ಸಿಗಲಾರದು ಶ್ರೀ ದೇವರ ಬಂಡಾರಕ್ಕೆ ಒದಗುವ ಯಾವತ್ತೂ ನಷ್ಟಕ್ಕೆ ನೀವು ಮತ್ತು ಪರಾಧೀನ ಮಾಡಿಕೊಂಡವರು ಜವಾಬದಾರ ಇರಬೇಕಾದೀತು. ತಿಳಿಯುವದು

ಮೂರೂರ,
ತಾ. ೨೭-೧೦-೩೫.

ಗಣಪತಿ ವಿಘ್ನೇಶ್ವರ
ಹೆಗಡೆ ಹುಳಸೇಮಕ್ಕಿ,
ಮೊಕ್ತೇಸರ.

ಗೋಪೂಜೆ.

ಬನ್ನಿರಿ ಗೋಪೂಜೆಗೆ ನೀವೆಲ್ಲರು,
ದೇವತೆಗಳು ಗೋವನು ಪೂಜಿಸುವರು||
ಜುಳು ಜುಳು ಹರಿಯುವ ತಿಳಿ ನೀರ್ ಕುಡಿಸುತ
ಮನದಾನಂದಕೆ ಕೊಳಲನು ಊದುತ
ಗೋವಿನ ಗೆಳೆಯರ ಮೇಳದಿ ನೆರೆಯುತ
ಗೋವ್ಗಳ ಹಿಂಡನು ಮುಂದಕೆ ನಡಿಸುತ
ಬಂದನು ಗೋವಿಂದ ಕಂದನು ಮುದದಲಿ
ಬಂದಿದೆ ದೀಪಾವಳಿ ನಲಿಯುತಲಿ
ತನ್ನಿರಿ! ತನ್ನಿರಿ! ಆರತಿಯ
ಹಾಡಿರಿ! ಹಾಡಿರಿ! ಗೋಸ್ತುತಿಯ.

(೨)

ಒಕ್ಕಲ ಮಕ್ಕಳ ನಾಡಿದು ನಮ್ಮದು
ಗೋವ್ಗಳ ಮಕ್ಕಳ ಭಾರತ ನಮ್ಮದು
ಸುವರ್ಣ ಭೂತಳವೆಂಬಾ ಬಿರುದು
ಗೋವ್ಗಳ ಒಲವಿಂದೇ ಬಂದಿಹುದು
ಅಂದಿಗೆ ಬಿರುದು ಇಂದಿಗೆ ಬರಿದು
ಗೋ ಸಮುದಾಯವು ಬಳಗುಂದಿಹುದು
ಬಾಳಿನ ಬೇನೆಯ ಕಳೆ ನೀನೆಂದು
ಗೋವಿನ ಪೂಜೆಯು ಮಾಳ್ಪುದು ಇಂದು.

(೩)

ನಮ್ಮಯ ಹೊಟ್ಟೆಯ ಬಟ್ಟೆಯ ತುಂಬಲು
ನಿಂತಿಹ ಹೊಲದಲಿ ಗೋವಿನ ಮಕ್ಕಳು
ಮಳೆಗಾಳಿಗಳಲಿ ಬಿಸಿಲಲಿ ದುಡಿಯಲು
ಬಂದಿಹ ದೀಪಾವಳಿ ಸಂತಸದೊಳು
ಕಿರಿಯರು ಹಿರಿಯರು ಎಲ್ಲರು ಬನ್ನಿ!
ಗೋವಿನ ಪೂಜೆಗೆ ತಿಂಡಿಯ ತನ್ನಿ!
ಬಲಿಯಲು ಗೋವ್ಗಳ ಸೀಳಿಗೆಯು
ತಿನ್ನಲು ದೊರೆವುದು ಹೋಳಿಗೆಯು.

(೪)

ತಾಯಿ ಮೊಲೆಯ ಹಾಲಿಲ್ಲದೆ ಹಸುಳರು
ಹಸಿವೆಯ ಸಹಿಸದೆ ಬಿಕ್ಕುತಲಳುವರು
ಹಸುವಿನ ಹಾಲನು ಕುಡಿಸಲು ಹಿರಿಯರು
ಹಸಿವೆಯ ಕುಸಿಯಲು ನಗುವರು ಕಿರಿಯರು
ಹಸುವೇ! ಹಸುಳರು ನಿನ್ನಯ ಕರುಗಳು
ಕರುಗಳ ದಯದಿಂ ಹರುಷದ ದಿನಗಳು
ಬರುವದು ಗೋ ಪೂಜೆಗೆ ನೀವೆಲ್ಲರು
ದೇವತೆಗಳು ಗೋವನು ಪೂಜಿಸುವರು.

(೫)

ಕೃಷ್ಣನು ದೇವನು ಗೋವ್ಗಳ ಕಾಯ್ದನು
ಆದರಿಂದಾತನು ಗೋಪಾಲಕನು
ಆ ಗೋಪಾಲನ ದಯವಿರಬೇಕೈ
ಗೋವ್ಗಳ ಪೂಜೆಯ ಮಾಡಲು ಬೇಕೈ.
ಗೋವಿನ ಮಕ್ಕಳ ಸಲಹಲು ಬೇಕು
ಗೋಮಾತೆಯು ನೊಂದರೆ ಒಲು ಕೆಡಕು.
ಮಾಡಿದ ತಪ್ಪಿಗೆ ಕ್ಷಮೆಯನು ಬೇಡಿ
ಮಾತೆಗೆ ವಂದಿಸಿ ಪೂಜೆಯ ಮಾಡಿ.

(೬)

ಬಂಡಿಯ ಮೇಲ್ಕುಳಿತಿಹ ನೀನಾರೋ?
ನೇಗಿಲ ಹೊಡೆಯುವ ಜಾಣನು ಯಾರೋ?
ಬಿಸಲಿನ ತಾಪವು ಹಸಿವೆಯ ತಾಪವು
ದನಗಳಿಗಾಗದೆ? ನಿಮಗಾದಂತೆಯೆ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಷಾ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾದರ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷಪಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ
ಭುವನಾಂಜನ (ಸರ್ವ ತರದ ಶಾರೀರಕ ನೇತ್ರರೋಗಗಳಿಗೆ ಅತ್ಯಂತ ಗುಣಕಾರಿ.
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ಔಷಧಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗುಣಿಗಳಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಸ್ವರೂಪವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಚಾರ ಸಮಿತಿಗೆ ಅವಶ್ಯಕವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸುವವರಾಗಲು ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಬಡ ಬಡ ಬಡ ಬಡ ಬಡಿಯಲು ಬೇಡಿ
ಸಡೆ ನಡೆಸುನ್ನುತ ಬಾಯಿಂದಾಡಿ.
ಬನ್ನಿರಿ ಬನ್ನಿರಿ ಗೋವ್ಗಳ ಪೂಜೆಗೆ
ಸಲಹಿರಿ ಗೋವ್ಗಳ ಮಕ್ಕಳ ಜೊತೆಗೆ.

(೭)

ಎತ್ತಿಗೆ ತೆತ್ತಿಹ ಬೆಲೆಯನು ಎಣಿಸೈ
ನಿನಗದು ತೆತ್ತಿಹ ದುಡಿತವನೆಣಿಸೈ
ತೆತ್ತಿಹ ಬೆಲೆಗದು ದುಡಿದರೆ ಸಾಕೈ
ಮತ್ತೂ ದುಡಿಸಲು ಪಾಪವು ಬಹುದೈ
ಪಾಪದ ಮನವನು ತೊರೆಯುತಲೆಂದು
ಪುಣ್ಯವ ಗಳಿಸುತ ಜೀವಿಸಲೆಂದು
ಬನ್ನಿರಿ ಗೋಪೂಜೆಗೆ ನೀವೆಲ್ಲರು
ದೇವತೆಗಳು ಗೋವನು ಪೂಜಿಸುವರು.

(೮)

ದೇವರು ಹರಿಹರ ಬ್ರಹ್ಮರು ಎಲ್ಲರು
ಇರುವರು ಗೋವಿನ ದೇಹದೊಳೆಂಬರು
ಗೋವಿನ ಮಹಿಮೆಯ ತಿಳಿದರು ಮುನಿವರು
ಕಾಮಿತ ಫಲಗಳ ಪಡೆವರು ಭಜಕರು
ಗೋವಿನ ಪೂಜೆಯು ದೇವರ ಪೂಜೆಯು
ಮಾನವ! ಪೂಜಿಸು ನಿನಗದು ತಾಯಿಯು.
ಬನ್ನಿರಿ ಗೋಪೂಜೆಗೆ ನೀವೆಲ್ಲರು,
ದೇವತೆಗಳು ಗೋವನು ಪೂಜಿಸುವರು

ತಾ. ೨೩-೧೦-೧೯೩೫.

ವಿ. ವೆ. ತೊರ್ಕೆ.

* * *

ಅಲ್ಲಲ್ಲಿ ಇಷ್ಟಿಷ್ಟು!

ಮದ್ರಾಸ ಪಟ್ಟಣದೊಳಗೆ ಆಚೆ ವಾರದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳ ಮತ್ತು ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಗಳ ಸಭೆಗಳಾಗಿ ನಡೆದ ಕಾರ್ಯ-ಕಲಾಪಗಳ ವಿವರ:- ಹೊಸ ರಾಜ್ಯ ಘಟನೆಯಲ್ಲಿ ಬ್ರಹ್ಮದೇಶ ವಿಂಗಡಿಸೋಣಾಗಿದೆ. ಹಿಂದುಸ್ಥಾನ ಸರಕಾರಕ್ಕೂ ಬ್ರಹ್ಮದೇಶಕ್ಕೂ ಇನ್ನು ಮುಂದೆ ಸಂಬಂಧವಿಲ್ಲ. ಈ ಕುರಿತು ಯಾವ ಧೋರಣವನ್ನು ರಾಷ್ಟ್ರೀಯ ಸಭೆಯವರು ಅಂಗೀಕರಿಸತಕ್ಕದ್ದೆಂದು ಚರ್ಚೆಯಾಯಿತು. ರಾಷ್ಟ್ರೀಯ ಸಭೆಯವರು ಬ್ರಹ್ಮದೇಶದವರನ್ನು ಈಗಿನಂತೆ ಮುಂದೆಯೂ ದೇಶಬಾಂಧವರೆಂದು ಎಣಿಸಿ ಅವರೊಡನೆ ಸಹಾನುಭೂತಿಯನ್ನು ಪ್ರದರ್ಶಿಸತಕ್ಕದ್ದಾಗಿಯೂ, ಈ ಹಿಂದಿನಂತೆಯೇ ಪ್ರೇಮವನ್ನಿಡತಕ್ಕದ್ದಾಗಿಯೂ ನಿರ್ಣಯವಾಗಿದೆ. ಬ್ರಹ್ಮದೇಶದ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸಭಾಸದರಾದ ರಾ| ದಾದಾಚಾಂಜಿ ಮತ್ತು ಜಾ ಮಾನರವರು ಈ ಧೋರಣದ ಬಗ್ಗೆ ಸಮಾಧಾನ ವ್ಯಕ್ತಪಡಿಸಿದರು. ಕಾರ್ಯದರ್ಶಿಗಳಾದ ಆಚಾರ್ಯ ಕೃಪಾಲಾನಿಯವರು ಕಾರ್ಯಕಾರಿಮಂಡಳದ ಠರಾವನ್ನು ಸೂಚಿಸಿದರು. "ನೂತನ ರಾಜ್ಯಘಟನೆಯ ಪ್ರಾರಂಭಕ್ಕೆ ವಿಳಂಬವಿರುವದರಿಂದ ಅಧಿಕಾರಸ್ವೀಕರಿಸುವ ಇಲ್ಲವೆ ತಿರಸ್ಕರಿಸುವ ನಿರ್ಣಯ ಕೈಕೊಳ್ಳುವದು ಜಾಣತನವಲ್ಲವಾಗಿ ಸಭೆಯ ಅಭಿಪ್ರಾಯವಾಗುತ್ತದೆ. ಆದರೆ ವ್ಯಕ್ತಿಶಃ ಈ ವಿಷಯ ಚರ್ಚೆ ಮಾಡುವಲ್ಲಿ ಮಂಡಳದ ಆಕ್ಷೇಪವಿಲ್ಲ." ಈ ಠರಾವನ್ನು ಶ್ರೀ| ಪ್ರಕಾಶಮ್ ಮೊದಲಾದವರು ವಿರೋಧಿಸಿದರು. ಅಧಿಕಾರ ಸ್ವೀಕಾರದ ಕುರಿತು ಇದೀಗಲೇ ನಿಶ್ಚಯ ಮಾಡುವದು ಅವಶ್ಯವಿರುವದಾಗಿ ಅವರ ಅಂಬೋಣ. ಶ್ರೀ| ಗಾಡಗೀಳರವರೂ ಸತ್ಯಮೂರ್ತಿಯವರೂ ಮೂಲ ಠರಾವನ್ನು ಪುರಸ್ಕರಿಸಿದರು. ಸ್ವಾಮಿ ಗೋವಿಂದಾನಂದರವರು ಲಖನೌ ರಾಷ್ಟ್ರೀಯ ಸಭೆಗೆ ಈ ಪ್ರಶ್ನೆಯನ್ನು ಒಪ್ಪಿಸತಕ್ಕದ್ದಾಗಿ ವಾದಿಸಿದರು. ಶ್ರೀ| ಸಂಪೂರ್ಣಾನಂದರವರು ಮೂಲ ಠರಾವನ್ನು ಎತ್ತಿಹಿಡಿದರು. ಇಷ್ಟಾದ ಬಳಿಕ ಶ್ರೀ| ಪ್ರಕಾಶಮ್‌ರವರ ವಿರೋಧ ಸೂಚನೆ ರದ್ದಾಗಿ ಮೂಲ ಠರಾವು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಸಂಸ್ಥಾನದೊಳಗಿನ ಹಿಂದೀ ಪ್ರಜೆಗಳ ಕುರಿತು ರಾಷ್ಟ್ರೀಯ ಸಭೆಯ ಧೋರಣ ಈ ಸಭೆಯಲ್ಲಿ ನಿಶ್ಚಯಿಸಲ್ಪಟ್ಟಿತು. ಸಂಸ್ಥಾನದ ಪ್ರಜೆಗಳ ಕುರಿತು ರಾಷ್ಟ್ರೀಯ ಸಭೆಯವರು ತಟಸ್ಥ ವೃತ್ತಿಯನ್ನು ಧರಿಸಬೇಕಾಗಿ ಕೊಂಗ್ರೆಸ ಕಾರ್ಯಕಾರಿ ಮಂಡಳದವರು ವರ್ಧಾ ಸಭೆಯಲ್ಲಿ ಕೈಕೊಂಡ ಠರಾವನ್ನು ಸರದಾರ ವಲ್ಲಭಭಾಯಿ ಪಟೇಲರವರು ಪ್ರಸ್ತಾವಿಸಿದರು. ಶ್ರೀ| ಮೇಹೆರಲ್ಲಿ ಮೊದಲಾದ ಸಂಸ್ಥಾನಿ ಪ್ರಜಾಪರಿಷತ್ತಿನ ಪುರಸ್ಕರ್ತರು ಈ ಧೋರಣವನ್ನು ಬಲವಾಗಿ ಟೀಕಿಸಿದರು. "ರಾಷ್ಟ್ರೀಯ ಸಭೆಯವರು ಸಂಸ್ಥಾನಿ ಪ್ರಜೆಗಳ ಕಷ್ಟನಿವಾರಣೆಯನ್ನು ಸಂಸ್ಥಾನೀಶರ ಸೀಮೆಯಲ್ಲಿ ನಡಿಸಿದಂತೆ ನಡಿಸಬೇಕು. ಈಗಿನ ತಟಸ್ಥ ಧೋರಣ ರಾಷ್ಟ್ರೀಯ ಸಭೆಯವರಿಗೆ ಶೋಭಿಸುವದಿಲ್ಲ." ಎಂಬದಾಗಿ ವಾದಿಸಿದರು. ತಟಸ್ಥ ವೃತ್ತಿ ಹಿಡಿದು ಸಂಸ್ಥಾನಿಕರೊಡನೆ ಸಂಸ್ಥಾನದ ಪ್ರಜೆಗಳ ಕಷ್ಟಗಳನ್ನರುಹಿ ರಾಷ್ಟ್ರೀಯ ಸಭೆಯವರು ತಮ್ಮಿಂದಾದಷ್ಟು ನಿವಾರಣೆಯ ಯತ್ನ

THE AGRICULTURAL & INDUSTRIAL BANK, LIMITED.
(Incorporated in British India.)
Head office:- COONDAPOOR. **Branch:- KUMTA.**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್,
ಹೆಡ್ ಆಫೀಸು:— ಕುಂದಾಪುರ. **ಬ್ರೆಂಚ:—** ಕುಮಟಾ.

ಕಾಯಂ ಠೇವಣಾತಿಗಳು.

3 ತಿಂಗಳಿಗೆ ಸಾಲಿಯಾನ ಶೇಕಡಾ ರೂಪಾಯಿ 3½ರಂತೆ,
ಸೇವಿಂಗ್ಸ ಬೇಂಕ ಠೇವಣಾತಿಗೆ ಶೇಕಡಾ 4%ರಂತೆ ಬಡ್ಡಿ.
6 ತಿಂಗಳಿಗೆ … … … 4½ರಂತೆ,
12 ತಿಂಗಳಿಗೆ … … … 5½ ,,
24 ತಿಂಗಳಿಗೆ … … … 6 ,,
3 ವರ್ಷ ಯಾ ಹೆಚ್ಚಿನ ಅವಧಿಗೆ … 6½ರಂತೆ
ಚಾಲ್ತಿ ಠೇವಣಾತಿಗೆ 2½ ಮತ್ತು 1½ರಂತೆ ಬಡ್ಡಿ.

ಬಡ್ಡಿ ದರದಿಂದ ಅಂಗೀಕರಿಸಲ್ಪಟ್ಟು ಪ್ರತಿ ೩ ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವದು.

ಚಿನ್ನ ವ ಬೆಳ್ಳಿಯ ಆಭರಣಗಳ ಅಡವಿನ ಮೇಲೂ, ದೇಹ ಜವಾಬದಾರಿಯ ಮೇಲೂ ಯೋಗ್ಯ ದರಗಳಲ್ಲಿ ಸಾಲಗಳೂ, ಓವರ್-ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬೀಲುಗಳು, ದರ್ಶನಿ ಹುಂಡಿಗಳು, ಚೆಕ್ಕುಗಳು ವಸ್ತೈರೆ ವಟಾಯಿಸಲ್ಪಡುವವು.

ಕರೆಂಟ, ಸೇವಿಂಗ್ಸ ಬೇಂಕ್ ಮತ್ತು ಕ್ಯುಮ್ಯುಲೆಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವವು.

ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲಾಗುವವು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಕೊಳ್ಳಬಹುದು.

ಕುಮಟಾ,
ತಾ. 12—10—1935.

K. Vaman Shenai &
G. Balakrishna S. Nayak.
Managing Directors.

[illegible]

For sale! For sale!! For sale!!!

Udipi Syndicate Bank Preference Shares for sale!

Rate less than the market rate!!

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned upto date. It is claimed that the shares go at a premium of Rs 7 by the Bank authorities.

These shares will be sold less than the market rates. Intending buyers should apply to the following address:—

Vithal Subraya Prabhu Shirodkar,
Post ANKOLA.

[illegible]

[illegible]

[illegible]

ಮಂಗಳೂರಿನ

ದಿ ಪೀಪಲ್ಸ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

[illegible]

ವರ್ಷಕ್ಕೆ ಒಂದರ ರೂಪಾಯಿ 10/-ರ ಬೋನಸ್ [illegible]

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, [illegible]

[illegible] ಯೋಗ್ಯರೂ ಆದ ಏಜಂಟರು ಬೇಕು!!

[illegible] —— [illegible]

[illegible] —— [illegible]

[illegible]

[illegible]

[illegible]

ಕಾರಸ್ಥಾನವೇ ತಿಳಿಯದು!

[ನಿರೀಕ್ಷಕನು ಬರೆದುದು.]

ಸತ್ಯಸ್ಥಿತಿಯನ್ನೇ ನಾನು ಹೇಳುತ್ತೇನೆ ನನಗೆ ಪಾಶ್ಚಾತ್ಯರ ಕಾರಸ್ಥಾನವೇ ತಿಳಿಯದು. ಯುದ್ಧ ನಡೆಯುತ್ತಿದ್ದಾಗ್ಯೂ ಇನ್ನೂ ಯುದ್ಧವಾಗಿಲ್ಲವಾಗಿ ಬ್ರಿಟಿಶ ಸರಕಾರವು ಪ್ರಕಟಿಸುತ್ತದೆ. ಇತಾಲಿ ಹಬಸಿ ದೇಶಗಳೊಳಗೆ ಶಿಷ್ಟದಂತೆ ಯುದ್ಧಸ್ಥಿತಿ ಉಂಟಾಗಲಿಲ್ಲವಂತೆ. ಆದಾಗ್ಯೂ ಬ್ರಿಟಿಶರು ಯುದ್ಧ ಕಾಲದೊಳಗಿನ ನಡಾವಳಿಯ ಕುರಿತು ೧೯೦೭ನೇ ಇಸ್ವಿಯ ಹೇಗ ತಹನಾಮೆಯಂತೆ ವರ್ತಿಸುವ ನಿರ್ಧಾರ ಮಾಡಿದ್ದಾರೆ. ಯುದ್ಧದಲ್ಲಿ ತಟಸ್ಥ ವೃತ್ತಿಯನ್ನು ಅನುಸರಿಸುವ ಕ್ರಮ ಈ ತಹನಾಮೆಯಲ್ಲಿದೆ. ಯುದ್ಧ ಹಡಗು-ಪಡೆಗಳಿಗೆ ಸೈನ್ಯಪಥಕಗಳನ್ನೊಯ್ಯುವ ಹಡಗಗಳಿಗೆ ಸೈನ್ಯ ಸಾಹಿತ್ಯಗಳನ್ನೊಯ್ಯುವ ಹಡಗಗಳಿಗೆ ೨೪ ತಾಸುಗಳಿಗಿಂತ ಹೆಚ್ಚು ಬಂದರಗಳಲ್ಲಿ ನಿಲ್ಲಿಸಿಕೊಳ್ಳಬಾರದಾಗಿಯೂ, ಹಡಗದವರಿಗೆ ಇನ್ನೊಂದು ಇತಾಲಿ ಬಂದರಕ್ಕೆ ಹೋಗಲು ಸಾಲುವಷ್ಟು ಅನ್ನ ಸಾಮಗ್ರಿ-ಕಲ್ಲಿದ್ದಲಿಗಳನ್ನು ಮಾತ್ರ ಬ್ರಿಟಿಶ ಬಂದರಗಳಲ್ಲಿ ಪೂರೈಸತಕ್ಕದ್ದಾಗಿಯೂ ಈ ತಹನಾಮೆಯಲ್ಲಿದೆ. ಈ ತಹನಾಮೆಯಂತೆ ಬ್ರಿಟಿಶರೂ, ವಸಾಹತುಗಳೂ, [illegible] ನಡೆಯುವದಾಗಿ [illegible] ಪ್ರಕಟವಾಗಿದೆ. ಇಜಿಪ್ತ ಸರಕಾರವೂ ಇದೇ ಪ್ರಕಾರ ನಿರ್ಣಯ ಕೈಕೊಂಡಿದೆ. ಬ್ರಿಟಿಶರು ಕಾರಸ್ಥಾನಿಗಳು. ಇತ್ತಟ್ಟಿನವರಿಗೆ ಈ ತಹನಾಮೆಯಂತೆ ನಡೆಸಲ್ಪಡುವದಂತೆ ತೋರಗೊಡಿಕೆ ತಟಸ್ಥ ವೃತ್ತಿಯಿದು. ಆದರೆ ಹಬಸಿ ದೇಶದವರ ಹಡಗುಪಡೆಗಳ ಸಂಚಾರದ ಅಭಾವದಲ್ಲಿ ಈ ಉಪಕ್ರಮದ ಎಲ್ಲ ಪೆಟ್ಟು ಇತಾಲಿಗೇ! ಇತಾಲಿಯ ಹಡಗು-ಪಡೆಗಳಿಗೆ, ಸೈನ್ಯ ಸಾಹಿತ್ಯಗಳನ್ನೊಯ್ಯುವ ಹಡಗಗಳಿಗೆ ಒಳ್ಳೇ ತೊಂದರೆಯುಂಟಾದೀತು. ಇಷ್ಟಾದಾಗ್ಯೂ ಬ್ರಿಟಿಶರಿಗೂ ಇತಾಲಿಯರಿಗೂ ಒಳ್ಳೇ ಪ್ರೇಮವಿದೆ. ಇತಾಲಿಯ ಸ್ನೇಹಭಾವವನ್ನು ಕಳಕೊಳ್ಳಲು ಬ್ರಿಟಿಶರು ತಯಾರಿಲ್ಲ, ಇತಾಲಿಯ ಮೇಲೆ ಸಾಗಿ ಹೋಗಲಿಕ್ಕೂ ಸಿದ್ಧರಿಲ್ಲ!! "ನಮಗೇನೂ ಸ್ವಾರ್ಥವಿಲ್ಲ. ಲೋಕಶಾಂತಿಗಾಗಿ ನಾವು ಹೆಣಗಾಡುತ್ತಿದ್ದೇವೆ. ಇತಾಲಿಯೊಡನೆ ಮಾತು-ಕಥೆ ನಡಿಸಿ 'ಯುದ್ಧಕಾಲವನ್ನು' (duration of war) ನಿಯಂತ್ರಿಸಲು ನಾವು ಪ್ರಯತ್ನಪಡುವೆವು. ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನೂ, ಮದ್ದು-ಗುಂಡುಗಳನ್ನೂ ಸಂಗ್ರಹಿಸುವೆವು. ರಾಷ್ಟ್ರಸಂಘದ ಮೇಲೆ ನಮಗೆ ಒಳ್ಳೇ ಭಕ್ತಿಯಿದೆ. ರಾಷ್ಟ್ರಸಂಘದ ಘಟನೆಯ ಚೌಕಟ್ಟಿನಲ್ಲಿ ನಾವು ನಡೆಯುವೆವು. ರಾಷ್ಟ್ರಸಂಘದವರು ಕೈಕೊಂಡ ತೀರ್ಮಾನವನ್ನು ನಾವು ಪಾಲಿಸುವೆವು. ಅದಕ್ಕೆ ಮಿಕ್ಕಿ ನಡೆಯಬಯಸುವದಿಲ್ಲ. ವ್ಯಕ್ತಿಶಃ ಇತಾಲಿಯ ಮೇಲೆ ನಾವು ಯಾವದೇ ಪ್ರಕಾರ ಶಾಸನಕ್ರಮವನ್ನು ಪುರಸ್ಕರಿಸಬಯಸುವದಿಲ್ಲ. ಈ ಸಂಗತಿಯನ್ನು ಹಿಂದೆ ಹೇಳಿದ್ದೇವೆ, ಈ ಹೊತ್ತಿಗೂ ಸ್ಥಿರಪಡಿಸುತ್ತೇವೆ," ಎಂಬದಾಗಿ ಬ್ರಿಟಿಶಪಾರ್ಲಿಮೆಂಟಿನಸಭೆಯಲ್ಲಿ ಪರದೇಶ ಇಲಾಖೆಯ ಪ್ರಧಾನರಾದ ಸರ್ ಸೆಮ್ಯುಅಲ್ ಹೋರರವರೂ, ರಾಷ್ಟ್ರಸಂಘ ಇಲಾಖೆಯ ಪ್ರಧಾನರಾದ ಮಿ| ಈಡನ್‌ರವರೂ ಮುಖ್ಯ ಪ್ರಧಾನರಾದ ಮಿ| ಬೋಲ್ಡವಿನ್ನರವರೂ ಒತ್ತೊತ್ತಿ ಹೇಳಿದರು. ಇತಾಲಿಯ ಮನವೊಲಿಕೆಗಾಗಿ ಬ್ರಿಟಿಶ ಪ್ರಧಾನರು ಹಾತೊರೆಯುವ ಕಾರಣವೇನೆಂದು ನನಗಿನ್ನೂ ತಿಳಿಯದು. ಯುದ್ಧವಾಗದಿದ್ದಲ್ಲಿ ಯುದ್ಧದ ಅವಧಿಯನ್ನು ನಿಯಂತ್ರಿಸುವ ವ್ಯಾಪಾರವೇಕೆ? ರಾಷ್ಟ್ರಸಂಘದೊಳಗೆ ಭಕ್ತಿಯಿದ್ದಲ್ಲಿ, ಲೋಕಶಾಂತಿಯನ್ನು ಸ್ಥಾಪಿಸಲು ರಾಷ್ಟ್ರಸಂಘವು ಸಮರ್ಥವಿದ್ದಲ್ಲಿ ಶಸ್ತ್ರಾಸ್ತ್ರಗಳನ್ನು ಬೆಳೆಸುವ ಕಾರಣವೇನಿದೆ? ಇತಾಲಿಗೂ ಬ್ರಿಟಿಶರಿಗೂ ಒಳಕಾರಸ್ಥಾನ ನಡೆದು ಇಜಿಪ್ತ ಮಾಲ್ಟಾಗಳ ಮೇಲೆ ಇತಾಲಿಯವರು ಹಲ್ಲೆ ಮಾಡಬಾರದಾಗಿಯೂ, ತಮಗೆ ಆ ಪ್ರಕಾರ ಅಭಿವಚನ ಕೊಟ್ಟಲ್ಲಿ ಬ್ರಿಟಿಶರು ಶಾಸನಕ್ರಮಗಳನ್ನು ಪುರಸ್ಕರಿಸಲಿಕ್ಕಿಲ್ಲವಾಗಿಯೂ ತುರ್ತ ತಹನಾಮೆಯಾಗಿರುತ್ತದೆಂಬ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ್' ಪತ್ರಿಕೆಯ ವಾರ್ತೆ. ಈ ವಾರ್ತೆ ಸಂಪೂರ್ಣ ಸಟೆಯೆಂದು ಹಿಂದುಸ್ಥಾನ ಸರಕಾರವು ಪ್ರಕಟಣೆಯನ್ನು ಹೊರಡಿಸಿದೆ. ಆದಾಗ್ಯೂ ನನಗೇನೂ ನಂಬಿಗೆ ಹುಟ್ಟದು. ಲಿಬಿಯಾದೊಳಗಿನ ಒಂದು ಸೈನ್ಯಪಥಕವನ್ನು ಮುಸೋಲಿನಿಯವರು ಹಿಂಗರೆದುಕೊಂಡಿದ್ದಾರೆ. ಬ್ರಿಟಿಶರು ಭೂಮಧ್ಯ ಸಮುದ್ರದೊಳಗಿನ ಕೆಲವು ಹಡಗುಪಡೆಗಳನ್ನು ಹಿಂಗರೆದುಕೊಳ್ಳುವರಂತೆ. "ಅಂಥ ಪ್ರಕಾರವೇನಿಲ್ಲವಾಗಿಯೂ ಗುಪ್ತ ವ್ಯವಹಾರವೇನಿಲ್ಲವಾಗಿಯೂ" ಬಾಲ್ಡವಿನ್‌ರವರು ಬುಧವಾರ ನಡೆದ ಪಾರ್ಲಿಮೆಂಟಿನ ಸಭೆಯಲ್ಲಿ ಉದ್ಗರಿಸುತ್ತಾರೆ. ಇನ್ನೂ ಸಂಧಿ ಪ್ರಸ್ತಾಪ ನಡೆಯುತ್ತದೆ. ಫ್ರೆಂಚ ರಾಯಭಾರಿಗಳಿಂದ ಲಾವಲ್‌ರವರ ಮಧ್ಯಸ್ಥಿಕೆಯ ದಲಾಲರು. ಅವರ ಮಧ್ಯಸ್ಥಿಕೆಯಿಂದಲೇ ಮುಸೋಲಿನಿಯವರು ಲಿಬಿಯಾ ದೇಶದೊಳಗಿಂದ ಸೈನ್ಯಪಥಕವನ್ನು ಹಿಂಗರೆದುಕೊಂಡು ಇಜಿಪ್ತ ದೇಶದ ಭೀತಿಯನ್ನು ಕೆಲಮಟ್ಟಿಗೆ ಪರಿಹರಿಸಿರುವರಾಗಿ ಹೇಳುತ್ತಾರೆ. ಯುದ್ಧದ ಅವಧಿಯನ್ನು ನಿಯಂತ್ರಿಸುವ ಹೋರರ ಭಾಷೆಯ ಮೇಲಿಂದ ಬ್ರಿಟಿಶ-ಇತಾಲಿ ದೇಶಗಳೊಳಗೆ ಗುಪ್ತ ತಹನಾಮೆಯಾಗಿರುವದಾಗಿಯೂ ಆ ಗುಪ್ತ ತಹನಾಮೆಗನುಸರಿಸಿ ಹೊಸ ಸೂತ್ರಗಳು ಓಡಾಡುತ್ತವಾಗಿಯೂ ನಾನು ತಿಳಿಯುತ್ತೇನೆ. ಮುಸೋಲಿನಿಯವರು ಲಾವಲ್‌ರವರಿಗೆ ಸಂಧಾನ ಸೂಚನೆಗಳನ್ನು ಕಳುಹಿಕೊಟ್ಟಿರುವರಾಗಿ ಪಾರೀಸದೊಳಗಿನ 'ಲಾ ಟ್ರೆಂಥ್ಸಿ ಯೆಂಟ' ಪತ್ರಿಕೆಯ ವಾರ್ತೆ. "ಈ ತನಕ ಹಬಸಿ ದೇಶದಿಂದ ಗೆದ್ದುಕೊಂಡ ಪ್ರದೇಶವನ್ನು ಇತಾಲಿಗೊಪ್ಪಿಸಬೇಕು ಮತ್ತು ಇತಾಲಿಗೆ ಹೆಚ್ಚಿನ ಪಾರುಪತ್ಯ ಸಿಗುವಂತೆ ಹಬಸಿ ದೇಶದ ರಾಜ್ಯದಾಡಳಿತೆಯಲ್ಲಿ ತಿದ್ದುಪಾಟವಾಗಬೇಕು." ಈ ಪ್ರಕಾರ ಮುಸೋಲಿನಿಯವರಿಂದ ಬಂದ ಸೂಚನೆಗಳನ್ನು ಲಾವಲ್‌ರವರು ಬ್ರಿಟಿಶ ಸರಕಾರಕ್ಕೆ ಅಭಿಪ್ರಾಯಕ್ಕಾಗಿ ಕಳಿಸಿರುವರಂತೆ. ಬ್ರಿಟಿಶ, ಫ್ರಾನ್ಸ, ಇತಾಲಿ ಸರಕಾರಗಳೊಳಗೆ ನಡೆದ ಗುಪ್ತ ಕಾರಸ್ಥಾನಗಳ ಸುಳುವು ದೊರೆತದ್ದರಿಂದಲೇ ರಾಷ್ಟ್ರಸಂಘದೊಳಗೆ ರುಶ್ಯದೇಶದ ರಾಯಭಾರಿಗಳಾದ ಲಿಟ್ವಿನೊಫ್‌ರವರು ಮುಂಜಾಗ್ರತೆ ಕೊಟ್ಟರೆಂದು ನಾನು ತಿಳಿಯುತ್ತೇನೆ. ರಾಷ್ಟ್ರಸಂಘದೊಳಗೆ ಲೋಕಕಂಟಕ ಇತಾಲಿಗೆ ಶಾಸನ ಮಾಡುವ ವಿಚಾರ ನಡೆದಿದೆ. ೧೮ ದೇಶಗಳ ಪ್ರತಿನಿಧಿಗಳ ಮಂಡಳ ಇತಾಲಿಯ ಸರಕುಗಳನ್ನು ಬಹಿಷ್ಕರಿಸತಕ್ಕದ್ದಾಗಿ ನಿರ್ಣಯಿಸಿದೆ, ಬ್ರಿಟಿಶರ ಸೂಚನೆ ಮೇರೆಗೆ ಈ ನಿರ್ಣಯವಾಗಿದೆ. ರಾಷ್ಟ್ರಸಂಘದ ಸಭೆಯಲ್ಲಿ ಈ ನಿರ್ಣಯ ಕೈಕೊಳ್ಳುವಾಗ ಲಿಟ್ವಿನೊಫ್‌ರವರು ನುಡಿದದ್ದೇನಂದರೆ — "ಇತಾಲಿಯೊಡನೆ ನಡೆಯುವ ವ್ಯವಹಾರದಿಂದ ರಶಿಯಾ ದೇಶಕ್ಕೆ ಒಳ್ಳೇ ಲಾಭವಿದೆ. ಆದಾಗ್ಯೂ ರಾಷ್ಟ್ರಸಂಘದ ಮೇಲೆ ನಿಷ್ಠೆಯನ್ನಿಟ್ಟು ನಾನೀ ಸೂಚನೆಯನ್ನು ಮನ್ನಿಸುತ್ತೇನೆ. ಈಗ ಮನ್ನಣೆ ಕೊಟ್ಟ ರಾಷ್ಟ್ರಗಳು ಈ ನಿರ್ಧಾರದಿಂದ ಚ್ಯುತಹೊಂದಿದ್ದಲ್ಲಿ ರಶಿಯಾ ದೇಶವು ಈ ನಿರ್ಧಾರವನ್ನು ಅಲಕ್ಷ್ಯ ಮಾಡಿ ಸ್ವತಂತ್ರವಾಗಿ ನಡೆಯುವದು." ಲಿಟ್ವಿನೊಫ್‌ರವರ ಎಚ್ಚರಿಕೆಯನ್ನೂ ಲಾವಲ್‌ರವರ ಮಧ್ಯಸ್ಥಿಕೆಯನ್ನೂ, ಬ್ರಿಟಿಶರ ಲೋಕಶಾಂತಿಯ ವೇದಾಂತವನ್ನೂ ಪರಾಂಬರಿಸಿದರೆ ಮುಂದಿನ ಕಾರಸ್ಥಾನವೇನೆಂದು ಹೇಳುವದೇ ಕಠಿಣ. ಬ್ರಿಟಿಶರು ರಾಷ್ಟ್ರಸಂಘದ ಘಟನೆಯನ್ನು ಪಾಲಿಸುವ ವ್ರತವನ್ನೇನೋ ಕೈಕೊಂಡಿದ್ದಾರೆ. ಆದರೆ ಬೇರೆ ಬೇರೆ ರಾಷ್ಟ್ರಗಳು ಸಂಘದ ಕಾರ್ಯಕ್ರಮದಲ್ಲಿ ಸಹಕಾರ ಮಾಡದಿದ್ದರೆ ಬ್ರಿಟಿಶರು ರಾಷ್ಟ್ರಸಂಘದೊಳಗಿಂದ ಬಿಡುಗಡೆಯಾಗುವರೆಂದು ಸರ್ ಆಸ್ಟಿನ್ ಚೆಂಬರಲೇನರವರು ಉದ್ಗರಿಸುತ್ತಾರೆ. ಸರ್ ಆಸ್ಟಿನ್ ಚೆಂಬರಲೇನರವರು ಪ್ರಮುಖ ಪುರುಷರು, ಪ್ರಧಾನ ಮಂಡಳದೊಳಗಿನ ಅಂತರಂಗವನ್ನು ಬಲ್ಲವರೆಂದೂ ಹೇಳಬಹುದು. ಇವರ ಸಹೋದರರೊಬ್ಬರು ಪ್ರಧಾನರು. ಇಂಥ ಸಂದರ್ಭದಲ್ಲಿ ಇವರ ಉದ್ಗಾರಗಳು ಬೇಜವಾಬದಾರವೆಂದು ನನ್ನಿಂದ ಹೇಳಬರದು. ಪ್ರಧಾನ ಮಂಡಳದ ಗುಪ್ತ ವ್ಯಾಪಾರಗಳ ಪ್ರತಿಬಿಂಬವನ್ನು ಸರ್ ಆಸ್ಟಿನ್‌ರವರು ಸ್ಪಷ್ಟ ಮಾಡಿದ್ದಿದ್ದರೆ ಬ್ರಿಟಿಶ-ಇತಾಲಿ ದೇಶಗಳೊಳಗೆ ಸಂಧಿಯಾಗಲು ಒಂದು ಆಸ್ಪದವಿದೆ. ಬ್ರಿಟಿಶರ ಸ್ವಾರ್ಥಕ್ಕೆ ಭಂಗ ಬರಬಾರದು, ಇತಾಲಿಯ ಸ್ವಾರ್ಥ ಸಾಧಿಸಬೇಕು. ಲಾವಲ್‌ರವರು ಇದೇ ಆಲೋಚನೆಯನ್ನು ನಡಿಸಿರುವರಾಗಿ ಹೇಳುತ್ತಾರೆ. [illegible] ಬ್ರಿಟಿಶ-ಇತಾಲಿಗಳೊಳಗಿನ ಮತಭೇದ ದೂರವಾಗಿ ಹಬಸಿ ದೇಶದ ಪಾಲುಪಟ್ಟಿಯಾಗಬಹುದೆಂದು ಲಂಡನಿನ ವರ್ತಕರು ಎಣಿಸುತ್ತಾರೆ. ಅದರಿಂದಲೇ ಸರಕುಗಳ ದರ ಈಗ ಕೆಲಮಟ್ಟಿಗೆ ಇಳಿಯಲಾರಂಭಿಸಿದೆ.

ಆದರೆ ಹಬಸಿ ದೇಶವು ಪಾಲುಪಟ್ಟಿಗೆ ಒಪ್ಪಬೇಕು. ಹಬಸಿ ಅರಸರು ಸ್ವಾತಂತ್ರ್ಯದ ನಿಷ್ಠಾವಂತ ಉಪಾಸಕರು. ಪರತಂತ್ರರಾಗಲು ಎಷ್ಟಕ್ಕೂ ಒಪ್ಪುವವರಲ್ಲ. ಸ್ತ್ರೀ ಪುರುಷರೆಲ್ಲರೂ ಇತಾಲಿಯೊಡನೆ ಸಂಗ್ರಾಮಕ್ಕೆ ಸಿದ್ಧರಾಗಿದ್ದಾರೆ. ಶಾಲೆಯ ಹುಡುಗರೂ, ಸೈನಿಕರೂ, ಎಲ್ಲರೂ ಇತಾಲಿಯನ್ನು ಗೆಲ್ಲುವ ಅಭಿಲಾಷೆ ಹಿಡಿದಿದ್ದಾರೆ. [illegible] ಚಿಕ್ಕ ವಯಸ್ಸಿನ ಹುಡುಗ ಮಕೊನೆನ್ನನು ಒಂದು ಬಾಲಪಥಕವನ್ನು ತಯಾರಿಸಿ ಸೈನಿಕರಿಗೆ ಮುಂಭಾಗದಲ್ಲಿ ಹೋಗಿ ಕೂಚು ಮಾಡಲಿಕ್ಕೆ ಅವಶ್ಯವುಳ್ಳ ದಾರಿಯನ್ನು ತೋರಿಸುತ್ತಿದ್ದಾನೆ. ರಾಸ ತಫಾರಿಯವರು ಪರಾಕ್ರಮಿ ಪುರುಷರು, ಸ್ವತಂತ್ರರು. ಇತಾಲಿಯ ಪಾರಪತ್ಯಕ್ಕೆ ಅವರು ಸರ್ವದಾ ಒಪ್ಪಲಿಕ್ಕಿಲ್ಲ. ಸೇನಾಪತಿಗಳೂ ಇತಾಲಿಗೆ ಹೆದರುವವರಲ್ಲ. ಮುಂಬಯಿ

ಯು 'ಟ್ಯಾಮ್ಸ್' ಪತ್ರಿಕೆಯ ರಣಕ್ಷೇತ್ರದ ಸುದ್ದಿಗಾರರ ಅಂಬೋಣದಂತೆ ಇನ್ನೂ ಇತ್ತಿಟ್ಟನಲ್ಲಿ ಹೇಳತಕ್ಕಂಥ ಸಂಗ್ರಾಮವಾಗಲಿಲ್ಲ. ಹಬಸಿ ಸೇನಾಪತಿಗಳು ಇಟಾಲಿಯವರಿಗೆ ವಿಶೇಷವಾಗಿ ಅಡ್ಡಗಟ್ಟಲಿಲ್ಲ. ಮಕಾಲೆಯಲ್ಲಿ ದೊಡ್ಡ ಸಂಗ್ರಾಮವಾಗುವದಿದೆ. ಅದಕ್ಕಾಗಿ ಸೇನಾಪತಿಗಳಾದ ರಾಸ ಕಾಸಾರವರೂ ರಾಸ ಸೆಯೂಮರವರೂ ಸಕಲ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಮಕಾಲೆಯನ್ನು ಶತ್ರುಗಳ ಕೈಸೇರದಂತೆ ಪ್ರಯತ್ನಪಡಬೇಕಾಗಿ ಬಾದಶಹರ ಅಪ್ಪಣೆ ಹೊರಬಿಡೆ. ದಕ್ಷಿಣ ಭಾಗದಲ್ಲಿಯೂ ಇಟಾಲಿಯವರು ಮುಂದರಿದು ಹೋದಂತಾಗಿ ಒಂದು ವಾರ್ತೆ. ಹರಾರದಿಂದ ೧೪೫ ಮೈಲು ಸಸಬಾನ ಗ್ರಾಮಕ್ಕೆ ಇಟಾಲಿ ಸೈನ್ಯ ತಲ್ಪಿತಂತೆ. ಗುರೋಹಿ ಗ್ರಾಮವನ್ನು ಕೈವಶ ಮಾಡಿಕೊಳ್ಳಲು ಈ ಹಂಚಿಕೆ. ಗುರೋಹಿ ಠಾಣ್ಯವು ಜಿಜಿಗಾ ದಾರಿಯ ಮೇಲಿದ್ದು ಅದು ಇಟಾಲಿಯ ಕೈವಶವಾದರೆ ಹರಾರ ಪಟ್ಟಣಕ್ಕೆ ಭೀತಿಯಿದೆ. ಇದರಿಂದ ಗುರೋಹಿ ಠಾಣ್ಯವನ್ನು ಕಾಪಾಡಬೇಕಾಗಿ ಬಾದಶಹರು ಅಪ್ಪಣೆ ಹೊರಡಿಸಿದ್ದಾರೆ. ಮುಖ್ಯ ಸೇನಾಪತಿಗಳಾದ ವಾಹಿಬ ಪಾಶಾರವರು ಇಟಾಲಿಯರು ಮುಂದರಿದಾಗ್ಯೂ ತಮಗೆ ಭೀತಿಯೇ ಇಲ್ಲವಾಗಿ ಕೈರೋದೊಳಗಿನ 'ಅಲ್ಬಲಾಗ' ಪತ್ರಿಕೆಯ ಪ್ರತಿನಿಧಿಗಳ ಬಳಿ ಉದ್ಗರಿಸುತ್ತಾರೆ "ಶತ್ರುಗಳನ್ನು ಜವಳು ಪ್ರದೇಶ ಕಟ್ಟೆ ಅಲ್ಲಿ ಕ್ರಿಮಿ-ಕೀಟಕಗಳಿಂದ ದಣಿಸುವ ಯೋಜನೆಯಾಗಿದೆ. ಓಗಡೇನ ಪ್ರದೇಶದಲ್ಲಿ ಪರಸ್ಥರ್‍ಯಾರೂ ಬದುಕರು. ಮುಂದಿಂದ ಹಾಗೆ ಅಪಾಯ ಹೆಚ್ಚು. ೬ ತಿಂಗಳಲ್ಲಿ ಅವರು ಎಷ್ಟೋ ಮುಂದರಿದು ಬಂದಾಗ್ಯೂ ಮಳೆ ಪ್ರಾರಂಭವಾದೊಡನೆ_ ೬ ತಿಂಗಳಲ್ಲಿಯೇ ಮಳೆಗಾಲಕ್ಕೆ ಪ್ರಾರಂಭ — ಇಟಾಲಿಯರು ಈ ಪ್ರದೇಶಗಳನ್ನು ಬಿಟ್ಟು ಹೋಗಲೇಬೇಕು." ಇಟಾಲಿಯರಿಗೆ ಪಾಳೆಯಗಾರರು ಶರಣಾಗತರಾಗುತ್ತಾರೆಂಬ ವಾರ್ತೆ ಸುಳ್ಳು. ಆಫ್ರಿಕೆಯೊಳಗಿನ ಸೋಮಾಲಿ ಜನರು ಇಟಾಲಿಯ ಸೈನ್ಯದೊಳಗಿಂದ ಬಿಟ್ಟು ಹೋಗುತ್ತಾರಾಗಿ ಸೇನಾಪತಿ ಡಿಬೊನೋರವರು ವಾಯರಲೆಸ್ ಯಾನಿ ಅಲೆಯಂಚೆಯಿಂದ ರೋಮ ಪಟ್ಟಣಕ್ಕೆ ಗುಪ್ತವಾಗಿ ಕಳಿಸಿದ ವಾರ್ತೆಯನ್ನು ಜಬುತಿಯವರು ತಮ್ಮ ಯಂತ್ರದಿಂದ ಅಡ್ಡಗಟ್ಟಿ ಲೋಕಕ್ಕೆ ತಿಳಿಸಿದ್ದಾರೆ. ಯೆಮೆನ ಪ್ರಾಂತದಲ್ಲಿ ಸೈನಿಕರಿಗೆ ಅವಶ್ಯವುಳ್ಳ ಶುಶ್ರೂಷಾಲಯಗಳನ್ನು ಕಟ್ಟಿಸಲಿಕ್ಕೆ ಇಟಾಲಿಯವರು ಅಪ್ಪಣೆ ಬೇಡಿದ್ದರು. ಅದನ್ನು ಯೆಮೆನದೊಳಗಿನ ಇಮಾಮರು ಕೊಡಲೊಪ್ಪಲಿಲ್ಲವಂತೆ. ಇಷ್ಟು ನಿರ್ಧಾರವಂತ ಜನಾಂಗವು ಬ್ರಿಟಿಶ-ಇಟಾಲಿ ದೇಶಗಳ ಸ್ಪರ್ಧಕ್ಕೆ ಒಲಿಬೀಳುವದಾಗಿ ನಾನು ತಿಳಿಯಲಾರೆ. ಬ್ರಿಟಿಶ ಪಾರ್ಲಿಮೆಂಟಿನ ಚುನಾವಣೆ ನವಂಬರ ತಾ. ೧೪ನೇಗೆ ಆಗುವದಿದ್ದದರಿಂದ ಯುದ್ಧವಾದ್ದಲ್ಲಿ ಚುನಾವಣೆಯಲ್ಲಿ ಗೊಂದಲವಾಗಬಹುದಾಗಿದ್ದರಿಂದ ಬ್ರಿಟಿಶರು ಲೋಕಶಾಂತಿಯ ವೇದಾಂತ ನಿರೂಪಣ ಮಾಡುತ್ತಾರಾಗಿ ನನ್ನ ಎಣಿಕೆ. ಈ ವಾರದೊಳಗೆ ರಣಕ್ಷೇತ್ರದ ವಾರ್ತೆಗಿಂತ ಬ್ರಿಟಿಶರ ಧೋರಣದ ವಾರ್ತೆಗಳೇ ಹೆಚ್ಚು. ಆದರಿಂದ ಅವನ್ನೇ ಪ್ರಾಮುಖ್ಯವಾಗಿ ನಾನು ಇಂದಿಗೆ ಪ್ರಸ್ತಾಪಿಸಿದುದು.

ಉಪಾಂತರ ವಾರ್ತೆಗಳನ್ನು ಇಲ್ಲಿಯೇ ನಮೂದಿಸುವದುಚಿತ. ಇಟಾಲಿ-ಹಬಸಿ ದೇಶಗಳೊಳಗೆ ಯುದ್ಧವಾದ ಬಳಿಕ ಅಲ್ಲಿಂದ ೮೫ ಮಂದಿ ಹಿಂದೀಯರು ಮುಂಬಯಿಗೆ ಬಂದಿಳಿದರು. ಬ್ರಿಟಿಶ ಎಲ್ಚಿಯ ಧಾರಿಗಳು ಅವರವರ ರಕ್ಷಣೆಯನ್ನು ಅವರವರೇ ಮಾಡಿಕೊಳ್ಳತಕ್ಕದ್ದಾಗಿ ಹೇಳಿದ್ದರಿಂದ ಸ್ವರಕ್ಷಣೆಗಾಗಿ ಸ್ವದೇಶಕ್ಕೆ ಇವರು ಬರಬೇಕಾಯಿತು. ಇವರಲ್ಲಿ ನೇಕರಿಗೆ ಇಲ್ಲಿ ಮನೆಮಾರಿಲ್ಲ. ಉಳಿದವರು ಹಬಸಿ ದೇಶದಲ್ಲಿಯೇ ಇದ್ದಾರೆ. ಹಬಸಿ ದೇಶದ ವಿಪತ್ತೇ ತಮ್ಮದೆಂದು ಅವರು ಎಣಿಸಿ ಅಲ್ಲಿಯೇ ಉಳಿದಿದ್ದಾರೆ. ನಮ್ಮ ಹಿಂದೀ ದೇಶಬಾಂಧವರಿಗೆ ಹಬಸಿ ದೇಶದಲ್ಲಿ ಒಳ್ಳೇ ಮರ್ಯಾದೆಯಿಂದ ನಡಿಸುತ್ತಾರೆ. ಹಿಂದೀ ಸಾವಕಾರರು ಸಂಕಟ ಕಾಲದಲ್ಲಿ ಹಬಸಿ ಜನಾಂಗಕ್ಕೆ ಮನಮುಟ್ಟಿ ನೆರವಾಗುತ್ತಿದ್ದಾರೆ. ಬೆಂಗಳೂರಿಗೆ ಕಲಿಯಹೋಗಲ ಡೆಸ್ಟಾ ಸಾಹೂನ ಎಂಬ ಹಬಸಿ ಹುಡುಗನೊಬ್ಬನು ಬಂದಿದ್ದಾನೆ. ಹಬಸಿ ಜನರು ಸ್ವದೇಶರಕ್ಷಣೆಗಾಗಿ ಜೀವದ ಪರಿವೆಯಿಲ್ಲದೆ ಹೋರಾಡುವರೆಂದು ಆತ ಹೇಳಿದನು. "ಬೋರಿ ಒಂದರ ಸ್ಟೇಶನಿನ ಮೇಲೆ ನಾನು ನನ್ನ ಸರಕನ್ನು ಇಟ್ಟು ಬಂದಿದ್ದೇನೆ. ಕಳವಾಗಬಹುದೇನು?" ಎಂದು ಆತ 'ಕ್ರಾನಿಕಲ' ಪತ್ರಿಕೆಯ ಪ್ರತಿನಿಧಿಗಳ ಬಳಿ ಕೇಳಿದನು. "ಕಳವಿನ ಸ್ಥಳವದು!" ಎಂದು 'ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ನುಡಿಯಲು, ಆತ ಆಶ್ಚರ್ಯಗೊಂಡು ನುಡಿದದ್ದೇನೆಂದರೆ "ಆಡಿಸ ಅಬಾಬಾ ಪಟ್ಟಣದಲ್ಲಿ ಇಂಥ ಪ್ರಕಾರಗಳು ಸಂಭವಿಸುವದಿಲ್ಲ, ಕಾವಲಿಲ್ಲದ ಸಾಮಾನಿಗೆ ಮುಟ್ಟುವದು ಅಪಮಾನವೆಂದು ಎಣಿಸಲ್ಪಡುತ್ತದೆ!" ಆದರೆ ಆತನ ಭೇದ ತಿಳಿಯಲಿಲ್ಲ! ಹಬಸಿ ಜನರ ಸುಧಾರಿಸಲಿಲ್ಲ! ಹಿಂದುಸ್ಥಾನವು ಬ್ರಿಟಿಶರ ಸಹವಾಸದಿಂದ ಸುಧಾರಿಸಿದೆ! ಬಾದಶಹರು ದಯಾಘನರೆಂದೂ, ಸದ್ಯಕ್ಕೇ ಅವರು ರಣರಂಗಕ್ಕೆ ಹೊರಡಲಿರುವರೆಂದೂ ಇಟಾಲಿಯವರೂ ಹಬಸಿ ಜನರಿಗೆ ದಣಿಸುತ್ತಾರಾಗಿಯೂ ಸೇನಾಪತಿಗಳೂ, ಪ್ರಾಂತಾಧಿಪರೆಲ್ಲರೂ ಸ್ವಾಮಿಭಕ್ತರೆಂದೂ ಆತ ನುಡಿದನು. ಲಿಬಿಯಾ ಪ್ರಾಂತದಲ್ಲಿ ಇಟಾಲಿ ವಿರುದ್ಧ ಜನರು ದೊಂಬಿಯನ್ನೆಬ್ಬಿಸಿದ್ದಾರೆ. ಅಲ್ಲಿ ಶಾಂತತೆಯನ್ನು ಕಾಪಾಡಲು ಇಟಾಲಿಗೆ ಕಷ್ಟವಾಗಿರುವದಂತೆ. ಮುಸೋಲಿನಿಯವರು ಸೈನಿಕರಿಗೆ ಹುರಿದುಂಬಿಸುವದಕ್ಕಾಗಿ ಗೆದ್ದ ಪ್ರದೇಶವನ್ನು ಅವರಿಗೆ ಉಂಬಳಿಯಾಗಿ ಕೊಟ್ಟು ವಸಾಹತು ಮಾಡುವ ವಿಚಾರವಿರುವದಾಗಿ ಗೋಂಡರದೊಳಗಿನ ಇಟಾಲಿಯ ರಾಯಭಾರಿಗಳು ಮುಂಬಯಿಯ 'ಟ್ಯಾಮ್ಸ'ಪತ್ರಿಕೆಯ ಪ್ರತಿನಿಧಿಗಳ ಬಳಿ ಉದ್ಗರಿಸಿದರು. ಈ ಯೋಜನೆಯಿಂದ ಎಲ್ಲ ಕೆಲಸವಾಗುತ್ತದೆ. ಇಟಾಲಿಯಲ್ಲಿ ನಿರುದ್ಯೋಗದಿಂದಿದ್ದವರಿಗೆ ಸಂಪಾದನೆಯ ಮಾರ್ಗ ದೊರೆಯಿತು. ಇಟಾಲಿ ಸರಕಾರಕ್ಕೆ ವಸಾಹತು ದೊರೆಯಿತು. ಸೈನಿಕರಿಗೆ ಪರಾಕ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಿತು. ಕಲ್ಪನೆಯೇನೋ ರಮ್ಯವಾದದ್ದು. ಆದರೆ ಹಬಸಿ ದೇಶ ಬಹು ಉಷ್ಣ ಪ್ರದೇಶ. ಅಲ್ಲಿ ಬೆಳಗಿನ ೯ ಘಂಟೆಯಿಂದ ರಾತ್ರಿ ೭ ಘಂಟೆಯ ವರೆಗೆ ಶಕೆಯಿಂದ ಹೊರಬೀಳಲಾಗುವದಿಲ್ಲ. ಸರಕಾರಿ ಕಚೇರಿಗಳ ಕೆಲಸ ಬೆಳಗಿನ ೫ ಘಂಟೆಗೆ ಪ್ರಾರಂಭವಾಗಿ ೯ ಘಂಟೆಗೆ ಮುಗಿಯುತ್ತದೆ. ಉಪಹಾರಗೃಹಗಳು ಸಹ ರಾತ್ರಿ ತೆರೆಯಲ್ಪಡುತ್ತವೆ. ಅಲ್ಲಿ ಎಲ್ಲರೂ ರೇಶಿಮೆ ವಸ್ತ್ರಗಳನ್ನು ಉಪಯೋಗಿಸುತ್ತಾರೆ. ಜಪಾನ ದೇಶದಿಂದ ಇವು ಆಮದಾಗುತ್ತವೆ. ಇಂಥ ಪ್ರದೇಶದಲ್ಲಿ ಶೀತಲಪ್ರದೇಶದ ಯುರೋಪಿಯನ್‌ರಿರುವದು ಕಠಿಣ. ಹೆಚ್ಚೆಚ್ಚು ಸೈನಿಕರು ಸಿಗಬೇಕೆಂದು ಮುಸೊಲಿನಿಯವರು ಸಂಬಳ ಏರಿಸಿದ್ದಾರೆ. ಇಟಾಲಿಯಲ್ಲಿ ಸೈನಿಕರಿಗೆ ಸರಾಸರಿ ದಿನಂಪ್ರತಿ ೪ ಆಣೆ ಸಿಗುತ್ತಿದ್ದರೆ ಪೂರ್ವ ಆಫ್ರಿಕೆಗೆ ಹೋದವರಿಗೆ ೩-೩॥ ರೂಪಾಯಿ ಸಿಗುತ್ತವೆ. ಮೇಲಾಗಿ ಮನೆಯವರಿಗೆ ದಿನಕ್ಕೆ ೧-೧॥ ರೂಪಾಯಿ ಜೀವನಕ್ಕೆ ಸಿಗುತ್ತದೆ. ಇದಲ್ಲದೆ ಆಹಾರ-ಸಾಮುಗ್ರಿಗಳ ಪ್ರಮಾಣವೂ ಹೆಚ್ಚು. ರೊಟ್ಟಿ, ಮಾಂಸ, ಕಾಯಿಪಲ್ಲೆ, ಸಕ್ಕರೆ ಇವನ್ನು ಇಮ್ಮಡಿಗೆ ಮಿಕ್ಕಿ ಹಂಚುತ್ತಾರೆ. ಹೊಗೆಸೊಪ್ಪು ಸರಾಯಿಗಳನ್ನು ಸಹ ಕೊಡುತ್ತಾರೆ. ಸೈನಿಕರಿಗೆ ಯಾವತ್ತೂ ಅನುಕೂಲತೆಗಳನ್ನು ಪೂರೈಸಿ ಹಬಸಿ ದೇಶವನ್ನು ಪಾದಾಕ್ರಾಂತ ಮಾಡಿಕೊಳ್ಳಬೇಕೆಂಬದೇ ಮುಸೊಲಿನಿಯವರ ಉದ್ದೇಶ. ಹಬಸಿ ಪಾಳೆಯಗಾರರಿಗೆ ಲಂಚ ಕೊಟ್ಟು ಸ್ವಪಕ್ಷಕ್ಕೆ ಒಲಿಸಿಕೊಳ್ಳಲಿಕ್ಕೂ ಮುಸೊಲಿನಿಯವರು ಗುಪ್ತವಾಗಿ ಯತ್ನಿಸುತ್ತಿದ್ದಾರೆ. ನಾಲ್ಕು ದ್ರೋಹಿಗಳಿಗೆ ಹಬಸಿ ಗುಪ್ತ ಚಾರರು ಪತ್ತೆಹಚ್ಚಿ ಗುಂಡುಹಾಕಿ ಕೊಂದರು. ಅವರ ಕಡೆ ಸಿಕ್ಕಿದ ೬೫ ಸಾವಿರ ಲಿರಾ ನಾಣ್ಯಗಳನ್ನು (ರೂ ೩೩೦೦೦) ಜಪ್ತ ಮಾಡಿದಂತಾಗಿ ತಿಳಿಯುತ್ತದೆ. ಇಟಾಲಿಯರು ಒಗೆದ ವಿಷಾರಿ ಗ್ಯಾಸಿನಿಂದ ರಕ್ಷಣ ಮಾಡಿಕೊಳ್ಳುವದಕ್ಕಾಗಿ ಹಬಸಿ ದೇಶದವರು ಒಂದು ದೇಶೀ ಕವಚವನ್ನು ಹುಡುಕಿ ತೆಗೆದಿದ್ದಾರೆ. ಒಂದು ಅರಿವೆ ತುಂಡನ್ನು ಕಿಸೆಯಲ್ಲಿಟ್ಟುಕೊಂಡು ವಿಮಾನದೊಳಗಿಂದ ಗೆಸ್ ಬಾಂಬು ಬಿದ್ದೊಡನೆ ಅರಿವೆ ತುಂಡನ್ನು ಒದ್ದೆ ಮಾಡಿಕೊಂಡು ಮೋರೆಯ ಮೇಲೆ ಹಾಕಿಕೊಂಡು ಬಿಡುವದು. ಗೆಸು ಹವೆಯಲ್ಲಿ ಸೇರಿ ಹೋದ ಬಳಿಕ ಅದನ್ನು ತೆಗೆದುಕೊಂಡು ಪುನಃ ಕಿಸೆಯಲ್ಲಿ ಇಟ್ಟುಕೊಂಡರಾಯಿತು. ಜರ್ಮನಿಯೊಳಗಿಂದ ಬಂದ ಹೊಗೆಯ ಕವಚಗಳು ಕಡಿಮೆ ಬಿದ್ದವರಿಂದ ಈ ಉಪಾಯ ಕೈಕೊಳ್ಳಲಾಗಿದೆ.

ಈ ವಾರದೊಳಗೆ ಯುದ್ಧವಾರ್ತೆ ಕೇಳ ಕುತೂಹಲಪಡುವವರಿಗೆ ರಮ್ಯ ವಾರ್ತೆ ಹೇಳಲಿಕ್ಕೆ ನನ್ನಿಂದ ಸಾಧ್ಯವಾಗಲಿಲ್ಲ. ಆದರಿಂದ ಸಪ್ಪೆ ವಾರ್ತೆಗಳನ್ನೇ ಹೇಳಿದ್ದೇನೆ. ವಾಚಕರು ಈ ವಾರದಲ್ಲಿ ಇಷ್ಟರ ಮೇಲೇ ಸಮಾಧಾನ ಹೊಂದಬೇಕು. ರುಚಿಕರವಾದ ವಾರ್ತೆಗಳಿಲ್ಲದಿದ್ದಲ್ಲಿ ನಾನೇನು ಮಾಡಲಿ!

— ಬ್ರಿಟಿಶರು ಲಂಡನಿನಲ್ಲಿ 'ನೆಶನಲ್ ಗ್ಯಾಸ ಸ್ಕೂಲ' ಎಂಬ ಶಾಲೆಯನ್ನು ಸ್ಥಾಪಿಸುವ ತಯಾರಿ ಮಾಡಿದ್ದಾರೆ. ವಿಮಾನುಗಳು ಹಾರಿಬಂದಲ್ಲಿ ಅವುಗಳ ಹಲ್ಲೆಯಿಂದ ತಪ್ಪಿಸಿಕೊಳ್ಳುವದಕ್ಕಾಗಿ ಈ ಶಾಲೆಯಲ್ಲಿ ಶಿಕ್ಷಣ ಕೊಡಲ್ಪಡುವದು.

— ಗುಡ್ಡಗಾಡು ಮತ್ತು ಬಂಜರು ಪ್ರದೇಶಗಳಲ್ಲಿ ವಿಮಾನುಗಳ ಪ್ರಯೋಜನ ತಿಗುವದಿಲ್ಲವಾಗಿ ಕಲಕತ್ತೆಯ 'ಸ್ಟೇಟ್ಸಮನ' ಪತ್ರಕರ್ತರ ಅಂಬೋಣ. ಹಬಸಿ ದೇಶದವರಿಗೆ ವಿಮಾನುಗಳಿಂದ ಪೆಟ್ಟು ತಗಲಿಕ್ಕಿಲ್ಲವಾಗಿ ಅವರ ಅರ್ಥ

— ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಮೋಟಾರ ತೆರಿಗೆಯ ಕಾನೂನಿನ ಚರ್ಚೆ ನಡೆದಿದೆ. ಕರಗಳ ಪ್ರಮಾಣವನ್ನು ಇಳಿಸಬೇಕಾಗಿ ಸಭಾಸದರು ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾಗಿ ಸರಕಾರದ ಸೂಚನೆ ಇದ್ದಕ್ಕಿದ್ದ ಹಾಗೆ ಮನ್ನಿಸಲ್ಪಟ್ಟಿದೆ. ಇನ್ನೂ ಚರ್ಚೆ ನಡೆಯುತ್ತದೆ. ಶುಕ್ರವಾರ ಸಭೆ ವಿಸರ್ಜನವಾಗುವದಿತ್ತು

ಸ್ಥಾನಿಕ ವೃತ್ತಾಂತ.

ಕುಮಟಾ— ಮಘಾ ನಕ್ಷತ್ರದ ಲೆಕ್ಕದ ಮಳೆ ಈಗ ಬಿದ್ದು ಕಷ್ಟ. ಈ ವಾರದಲ್ಲಿ ದಿನಂಪ್ರತಿ ಮಳೆ ಬಿದ್ದು ಬೆಳೆ ಕೊಯ್ಯುವಿಕ್ಕೆ ಬಹು ತೊಂದರೆಯಾಗಿದೆ. ಇತ್ತ ೨-೩ ದಿನಗಳಿಂದ ಮಳೆ ಕಡಿಮೆ; ಬಿಸಿಲು ಬೀಳುತ್ತಿದೆ. ೧ ವಾರ ಮಳೆ ನಿಂತಲ್ಲಿ ಇದ್ದ ಬೆಳೆ ಜನರ ಕೈ ಸೇರುವದು. ಮೇಘರಾಜನು ಉಪಕರಿಸಬೇಕು.

ಕಳೆದ ಸೋಮವಾರ ಬೆಳಗಿನ ೪—೫ ಘಂಟೆ ಸುಮಾರಿಗೆ ಶ್ರೀ [illegible] ದೇವಸ್ಥಾನದ ಮುಂದುಗಡೆಯ ಬಚ್ಚಲು ಮತ್ತು ದನದ ಕೊಟ್ಟಿಗೆಗೆ ಅಕಸ್ಮಾತ್ ಬೆಂಕಿ ಹತ್ತಿ ಗಲಾಟೆ. ದನಗಳಿಗೆ ಹೊರತೆಗೆಯು ಬೇಕಾದರೆ ಕಷ್ಟವಾಯಿತು. ೧ ಕರುಗಳಿಗೆ ಬಹಳ ಪೆಟ್ಟಾಯಿತು. ನೆರೆಹೊರೆಯವರೂ, ಇತರರೂ ಹೋಗಿ ಬೆಂಕಿಯನ್ನು ನಂದಿಸಿದರು. ಗಾಳಿಯಿದ್ದಲ್ಲಿ ನೆರೆಹೊರೆಯ ಮನೆಗಳಿಗೆ ಬೆಂಕಿ ಸೋಂಕಿ ಅನರ್ಥವಾಗುತ್ತಿತ್ತು. ಮ್ಯುನಿಸಿಪಾಲಿಟಿಯವರು ಒಂದು ನೀರಿನ ಪಂಪನ್ನು ಸಹ ಇಟ್ಟಿಲ್ಲ. ಇಂಥ ಪ್ರಸಂಗಗಳು ಒದಗುವದು ಅಪರೂಪವಾದರೂ, ಮ್ಯುನಿಸಿಪಾಲಿಟಿಯವರು ನೀರಿನ ಪಂಪನ್ನೊಂದು ಕಾದಿಡುವದು ಅವಶ್ಯ. ಕರುಗಳು ಈಗ ಗುಣಹೊಂದಿದೆ.

ಇಲ್ಲಿಯ ಮ್ಯುನಿಸಿಪಾಲಿಟಿಯವರು ರೂ. ೧೬೦೦ ಮಟ್ಟಿಗೆ ಖರ್ಚು ಮಾಡಿ ಕಟ್ಟಿಸಿದ ಉರ್ದು ಶಾಲೆಗೆ 'ಸಿಲ್ವರ ಜ್ಯುಬಿಲಿ ಸ್ಕೂಲ' ಎಂದು ನಾಮಕರಣ ಮಾಡಲಾಗಿದೆ.

ಒಬ್ಬರು ತಿಳಿಸುವದೇನಂದರೆ:- ಟಪಾಲು ಖಾತೆಯವರು ಟಪಾಲಿನ ವೇಳೆಯನ್ನು ಇದೇ ಬರುವ ನವಂಬರ ತಿಂಗಳಿನಿಂದ ಬದಲಿಸುವ ವಿಚಾರದಲ್ಲಿರುವರಂತೆ. ಹುಬ್ಬಳ್ಳಿಯಿಂದ ಅಂಕೋಲೆಗೆ ಬಂದ ಟಪಾಲು ನೆಟ್ಟಗೆ ರಾತ್ರಿಗನೇ ಕಾರವಾರಕ್ಕೆ ಒಯ್ಯಲ್ಪಡುವದು. ಇದಕ್ಕಿಂತ ಮತ್ತೊಂದು ವ್ಯವಸ್ಥೆ ಮಾಡಬಹುದು. ಮುಂಬಯಿಯಲ್ಲಿ ಬೆಳಗಿನ ಎಕ್ಸಪ್ರೆಸ್ ಗಾಡಿ ೮ ಘಂಟೆಗೆ ಹೊರಡುತ್ತದೆ. ಅದಕ್ಕೆ ಜೋಡಿಸಿ ಪುಣೆಯಿಂದ 'ಫಾಸ್ಟ ಪೆಸಂಜರ' ಗಾಡಿಯು ಮಧ್ಯಾನ್ಹ ೧೨ ಘಂಟೆಗೆ ಹೊರಟು ಮರುದಿನ ಬೆಳಗಿನ ೪ ಘಂಟೆಗೆ ಹುಬ್ಬಳ್ಳಿಗೆ ತಲ್ಪುತ್ತದೆ. ಈ ಗಾಡಿಯಿಂದ ಟಪಾಲು ತರಿಸಿದ್ದಲ್ಲಿ ಹುಬ್ಬಳ್ಳಿಯಿಂದ ಬೆಳಗಿನ ೬ ಘಂಟೆಗೆ ಹೊರಟ ಮೋಟಾರು ಕುಮಟೆಗೆ ೨ ಘಂಟೆಯೊಳಗೆ ತಲ್ಪಬಹುದು. ಇಲ್ಲಿಂದ ಉತ್ತರಕ್ಕೆ ಅಂಕೋಲಾ ಕಾರವಾರ ಕಡೆಗೂ, ದಕ್ಷಿಣಕ್ಕೆ ಹೊನ್ನಾವರ-ಭಟಕಳ ವರೆಗೂ ಅದೇ ದಿನ ಟಪಾಲು ಮುಟ್ಟಬಹುದಂತಿದೆ. ಮೇಲಾಗಿ ರಾತ್ರಿ ಪ್ರವಾಸ ಮಾಡುವ ತೊಂದರೆ ತಪ್ಪುತ್ತದೆ; ಎಲ್ಲ ಟಪಾಲು ಒಂದೇ ಹೊತ್ತಿಗೆ ಇದೇ ಜಿಲ್ಹೆಯಲ್ಲಿ ಸಿಗಲು ಅನುಕೂಲವಾಗುವಂತಿದೆ. ಟಪಾಲ ಖಾತೆಯವರು ಆಲೋಚನೆ ಮಾಡಿ ಹೊಸ ವ್ಯವಸ್ಥೆಯನ್ನು ನಿರ್ಣಯಿಸಬಹುದಾಗಿ ಸೂಚನೆ.

ಊರಲ್ಲಿ ದನಗಳ ಬೇನೆ ಬಂದಿದೆ. ಕೆಲವು ದನಗಳು ತೀರಿಕೊಂಡವು. ದನಗಳ ಚಿಕಿತ್ಸಕರು ಈ ಕುರಿತು ಸ್ವಲ್ಪ ಜಾಗ್ರತೆ ಕೊಂಡು ರೋಗ ಪ್ರಸಾರವಾಗದಂತೆ ಜನರಿಗೆ ಅವಶ್ಯವುಳ್ಳ ಸೂಚನೆ ಕೊಡಬೇಕಾದ್ದು.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ ದೀಪಾವಳಿ ಹಬ್ಬದ ದಿನ ಕೋಟಿತೀರ್ಥದ ಸಮೀಪದ ಸಮುದ್ರ ಬೇಲೆಯ ಮೇಲೆ ಶ್ರೀ ಮಹಾಬಲೇಶ್ವರ-ಗೌರೀ ದೇವರ ವಿವಾಹಮಂಗಲೋತ್ಸವ ಆಗುತ್ತದೆ. ಆ ಉತ್ಸವದ ಬಗ್ಗೆ ಹಾಕಿದ ತೋರಣದ ಮಾವಿನ ಎಲೆಯನ್ನು ಪ್ರಸಾದವೆಂದು ಒಕ್ಕಲಿಗರು ಒಯ್ಯುವ ರೂಢಿಯುಂಟು. ಇತ್ತ ಹತ್ತಿಪ್ಪತ್ತು ವರ್ಷಗಳಿಂದ ಹಾಲಕ್ಕಿ ಒಕ್ಕಲ ಜಾತಿಯಲ್ಲಿ ಇಬ್ಭಾಗಗಳಾದ್ದರಿಂದ ತೋರಣದ ಬಗ್ಗೆ ಜಗಳ-ಬಡಿದಾಟಗಳು ನಡೆಯುತ್ತಿದ್ದವು. ಶಾಂತತೆಯಿಡುವಿಕ್ಕೆ ಪೋಲೀಸರಿಗೆ ಅವಶ್ಯವಾಗುತ್ತಿತ್ತು. ಪೋಲೀಸರು ವರ್ಷಾನವರ್ಷಕ್ಕೆ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿ ಸದರಿ ತೋರಣಕ್ಕೆ ಯಾರೂ ಮುಟ್ಟದಂತೆ ಹಾಲಕ್ಕಿ ಜಾತಿಯ ಎರಡೂ ಪಕ್ಷಗಳ ಮುಂದಾಳುಗಳಿಗೆ ಇಂಜಕ್ಷನ್ ಹುಕುಮು ತಕ್ಕೊಳ್ಳುತ್ತಿದ್ದರು. ಈ ವರ್ಷ ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರು ಶ್ರೀ. ಪ್ರ. ಕೋ. [illegible]ರವರು ಇಂಜಕ್ಷನ್ ಹುಕುಮು ಕೊಟ್ಟಿದ್ದರು. ವಿವಾಹೋತ್ಸವವು ಮುಗಿದ ಮೇಲೆ ಉಗ್ರಾಣಿಗಳು ತೋರಣವನ್ನು ತೆಗೆದು ಶ್ರೀ ದೇವಸ್ಥಾನಕ್ಕೆ ಮುಟ್ಟಿಸಬೇಕಾಗಿ ಅಪ್ಪಣೆಯಾಗಿತ್ತು.

ಹೊನ್ನಾವರ— (ತಾ. ೨೦—೧೦—೩೫) ೪-೫ ದಿವಸಗಳಿಂದ ದಿನಾಲು ಸಂಜೆಗೆ ತೆರಪಿಲ್ಲದೆ ಮಳೆ ಬೀಳುತ್ತಿದೆ. ಕಡಲೊಳಗೆ ತೂಫಾನು ಇರುತ್ತದೆಂದು ಕಸ್ಟಮ್ಸ ಕಚೇರಿಯವರು ಸೂಚಿಸಿದ್ದಾರೆ.

ಹೋದ ತಾ. ೧೩ನೇ ದಿನ ಬೋಸು ಬಂದರದಲ್ಲಿ ಅಪಘಾತವಾಗಿ ಒಂದು ದೋಣಿಯು ಮುಳುಗಿತು. ಅದರಲ್ಲಿದ್ದ ೬ ಜನರೊಳಗೆ ೪ ಜನರು ಬದುಕಿರುತ್ತಾರೆ. ದೋಣಿ ತೇಯುತ್ತಿದ್ದ ಹುಡುಗನೂ, ಇನ್ನೊಬ್ಬನೂ ನೀರೊಳಗೆ ಮುಳುಗಿ ಸತ್ತರು.

ಶ್ರೀ ದುರ್ಗಾದೇವಿ ಗುಡಿಯ ಮುಂದಿನ ರಸ್ತೆ ಕೆಲಸ ಈಗ ನಿಂತಿದೆ. ರಾಮತೀರ್ಥ ರಸ್ತೆಯ ದುರುಸ್ತಿ ನಡೆದಿದೆ. ಕಂಟ್ರಾಕ್ಟರನು ರಸ್ತೆಗೆ ಹಳೇ ಉಪ್ಪು ಮಣ್ಣು ಹಾಕುತ್ತಾನೆಂದು ಊರಲ್ಲಿ ದೂರು! ರಾಮತೀರ್ಥದ ಮೇಲೆ ಗುಡ್ಡ ಅಗಿದು ಬಿದ್ದ ಬಿಳಿ-ಮಿಶ್ರ ಮಣ್ಣು ಬೇಕಷ್ಟು ಸಿಗುವಂತಿದ್ದಾಗ ಅದನ್ನು ಉಪಯೋಗಿಸುವದೇಕೆ? ನಗರ ಸಭೆಯವರು ಕಣ್ತೆರೆದು ನೋಡಬೇಕು.

ಮಾವಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿ. ಎರಡು ವಾರಗಳ ಹಿಂದೆ ೪ ಆನೆಗಳು ಬಂದು ಹೊಲ-ಹಿತ್ತಲಗಳನ್ನು ಹಾಳು ಮಾಡಿ ಬಿಟ್ಟವು. ಈಗ ತಿರುಗಿ ೩ ಆನೆಗಳು ಬಂದಿವೆ. ರೈತರ ಬೊಬ್ಬೆ ಕೇಳಲಾಗದೆ ಸರಕಾರದವರು ಒಬ್ಬ ಆನೆ-ಶಿಕಾರಿಯನ್ನು ನೇಮಿಸಿದರು. ಅವನು ಯೋಗ್ಯನಲ್ಲೆಂದು ೩ ತಿಂಗಳೊಳಗೆ ಇನ್ನೊಬ್ಬ ಬೇಟೆಗಾರನನ್ನು ನೇಮಿಸಿದರು. ಹೊಸ ಬೇಟೆಗಾರನನ್ನು ತೀವ್ರ ಕಳಿಸಲಿಕ್ಕೆ ಅರಿಕೆ ಮಾಡಿಕೊಂಡಾಗ್ಯೂ ಇನ್ನು ತನಕ ಅವನು ಬಂದು ಮುಟ್ಟಲಿಲ್ಲವಂತೆ! ಇತ್ತಲಾಗಂತು ಕಾಡಾನೆಗಳ ಭೀತಿಯಿಂದ ಜನರು ತಿರುಗಾಡಲು ಅಂಜುತ್ತಾರೆ. ತಾ. ೧೧ನೇಗೆ ಬೆಟ್ಟದಲ್ಲಿ ಕೆಲಸ ಮಾಡುತ್ತಿದ್ದ ನೂರಾರು ಕೂಲಿಯಾಳುಗಳು ಆನೆಗಳ ಆರ್ಭಾಟ ಕೇಳಿ ಕೆಲಸ ಬಿಟ್ಟು ಓಡಿಹೋದರಂತೆ. ಸರಿಯಾಗಿ ಮಳೆಯಾಗದ್ದರಿಂದ ಮೊದಲೇ ಈ ವರ್ಷದ ಬೆಳೆ ಅಷ್ಟಕ್ಕಷ್ಟೇ! ಸಿಕ್ಕ ಬೆಳೆಯೂ ಆನೆಗಳ ಉಪದ್ರವದಿಂದ ಕೈತಪ್ಪಿ ಹೋದರೆ ರೈತ ಜನರಿಗೆ ಉಪವಾಸವೇ ಗತಿ!! ಕಾರಣ ಜಿಲ್ಹಾಧಿಕಾರಿಗಳು ಚಿತ್ತಗೊಟ್ಟು ಬೇಗನೆ ಆನೆಗಳ [illegible] ಮಾಡಿ ರೈತರನ್ನು ಕಾಪಾಡಬೇಕಾಗಿ ಸೂಚನೆ. ಬೆಳೆ ಆನೆಗಳ ಪಾಲಾದರೆ ರೈತರಿಗೆ ತೀರ್ವೆ ತೆರಲಾಗದೆ ಅವರು ಸಾವಕಾರರ ಬಾಯಲ್ಲಿ ಬೀಳಬೇಕಾದೀತು. ಇಲ್ಲಿಯ ಪ್ರಾಂತ ಸಾಹೇಬರು ಪ್ರಜಾವತ್ಸಲರು; ಅವರು ಒಮ್ಮೆ ಈ ಗ್ರಾಮಕ್ಕೆ ಬಂದು ಪ್ರತ್ಯಕ್ಷ ಬೆಳೆ ನೋಡಿ ಹೋಗಬೇಕಾಗಿ ಪ್ರಾರ್ಥನೆ. ಬೇಟೆಗಾರನಿಗೆ ಕಳಿಸದಿದ್ದರೂ ಅಡ್ಡಿಯಿಲ್ಲ. ಜಿಲ್ಹಾಧಿಕಾರಿಗಳು ರೈತರ ಮೊರೆ ಆಲಿಸದರೆ ಅವರು ಯಾರಿಗೆ ಮೊರೆಹೋಗುವರು?

(ತಾ ೨೬-೧೦-೩೫) ಕಳೆದ ವಾರದಲ್ಲಿ ಮಳೆ-ಗಾಳಿಗಳು ಹೆಚ್ಚಾದ್ದರಿಂದ ಮುಂಬಯಿಯಿಂದ ಬಂದ ಉಗಿಹಡಗವು ಇಲ್ಲಿ ಬಂದರ ಮಾಡಲಿಲ್ಲ. ಮಚ್ಚವೆಗಳಿಗೂ ಬಹಳ ಪೆಟ್ಟಾಗಿದೆ. ಕಟ್ಟಿಗೆ ತುಂಬಿದ ಒಂದು ಮಚ್ಚವೆಯು ಅಳ್ವೆಬಗುಂಡಿಯಲ್ಲಿ ಜಲಸಮಾಧಿ ಹೊಂದಿತು. ಈಶ್ವರಕೃಪೆಯಿಂದ ನಾವಿಕರು ಬದುಕಿದರು.

ರಾ| ಕಲ್ಲಾಪುರ ವಕೀಲರ ರಾಜೀನಾಮೆಯಿಂದ ಖಾಲಿಯಾದ ಮ್ಯುನಿಸಿಪಾಲಿಟಿ ಮೆಂಬರ ಜಾಗೆಯ ಬಗ್ಗೆ ಮುಂದಿನ ತಿಂಗಳಲ್ಲಿ ಉಪಚುನಾವಣೆಯಾಗುವದಿದೆ.

ಮೊನ್ನೆ ತಾ. ೨೫ಕ್ಕೆ ಹೇರಂಗಡಿಯಲ್ಲಿ ಒಂದು ಕಾಡಾನೆ ಬಂದು ಮರ್ತಿಬಾಯಿ ಎಂಬ ವಿಧವೆಯ ೧॥ ಎಕರೆ ಹೊಲವನ್ನು ತುಳಿದು ನಾಶಮಾಡಿತು. ಮರ್ತಿಬಾಯಿಗೂ ಅವಳ ಇಬ್ಬರು ಸಣ್ಣ ಹುಡುಗರಿಗೂ ಈ ವರ್ಷ ಉಪವಾಸ ಬೀಳುವ ಪ್ರಸಂಗ ಬಂದಂತೆಯೇ ಸರಿ. ಈ ಕಾಡಾನೆಗಳ ಚಕ್ರವು ಯಾರ ಯಾರ ಮೇಲೆ ತಿರುಗುವದೋ ದೇವರೇ ಬಲ್ಲ! ಜಿಲ್ಹಾಧಿಕಾರಿಗಳು ಆನೆಗಳ ಉಪದ್ರವವನ್ನು ಪರಿಹರಿಸಬಾರದೆಂದು ನಿಶ್ಚಯ ಮಾಡಿರುವರೇನು?

ಶಿರಸಿ— ಕರ್ನಾಟಕದ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಪ್ರೊ| ಬಸವನಾಳರವರು ತಮ್ಮದೊಂದು ಇತಿಹಾಸ-ಗ್ರಂಥದಲ್ಲಿ, ಶ್ರೀ ಶಿವಾಜಿ ಛತ್ರಪತಿಗಳ ಮೂಲ ಉತ್ಪತ್ತಿಯ ಬಗ್ಗೆ ಐತಿಹಾಸಿಕ ಗ್ರಂಥದಲ್ಲಿ ಕಂಡು ಬರುತ್ತಿದ್ದ ಕೆಲವೊಂದು ಮಾಹಿತಿಯನ್ನು ಅಡಿ-ಟಿಪ್ಪಣಿಯಾಗಿ ಕೊಟ್ಟಿದ್ದರು. ಈ ಟಿಪ್ಪಣಿಯಿಂದ ಛತ್ರಪತಿಗಳ ಅವಹೇಲನೆಯಾಗಿರುತ್ತದೆಂದು ಮರಾಠಾ ಸಮಾಜದಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಪ್ರೊ| ಬಸವನಾಳರು ಈ ಬಗ್ಗೆ ಖುಲಾಸೆ ಮಾಡಿ, ಛತ್ರಪತಿಗಳ ನಿಂದೆ ಮಾಡುವ ಎಳ್ಳಷ್ಟು ಸಹ ಉದ್ದೇಶವು ತಮ್ಮದಿದ್ದಿಲ್ಲವೆಂದೂ, ಪುರಾಣ-ಗ್ರಂಥಗಳಲ್ಲಿ ತೋರಿಬಂದ ಮಾಹಿತಿಯನ್ನು ತಾವು ವಾಚಕರ ಮುಂದೆ ಇಟ್ಟಿರುವೆವಾಗಿಯೂ, ಇತಿಹಾಸದ ಮುಂದಿನ ಆವೃತ್ತಿಯಲ್ಲಿ ಸದರಿ ಅಡಿ-ಟಿಪ್ಪಣಿಯನ್ನು ಬಿಟ್ಟು ಬಿಡುತ್ತೇವಾಗಿಯೂ ಜಾಹೀರಪಡಿಸಿದ್ದರು. ಆದಾಗ್ಯೂ ಮರಾಠಾ ಸಮಾಜದೊಳಗಿನ ಕೆಲ ಅರೆ ತಿರುಕರಿಗೆ ಸಮಾಧಾನವಾಗಲಿಲ್ಲ. ಅವರಲ್ಲೊಬ್ಬನು ತಾರೀಖು ೨—೧೦—೩೫ನೇ ದಿನ ಬೆಳಗಾಂವಿಯಲ್ಲಿ ಪ್ರೊ| ಬಸವನಾಳರ ಮೈಮೇಲೆ ಏರಿಬಂದು ಚೂರಿಯಿಂದ ಇರಿಯಲು ಪ್ರಯತ್ನ ಮಾಡಿದನು! [illegible] ಈ ಅತ್ಯಾಚಾರದಿಂದ ಉತ್ತರ ಕರ್ನಾಟಕದಲ್ಲೆಲ್ಲ ತೀವ್ರತರವಾದ ಉದ್ವೇಗವುಂಟಾಗಿದೆ. ನಮ್ಮ ಕೇರಿಯಲ್ಲೂ ಈ ಅತ್ಯಾಚಾರದ ನಿಷೇಧ ಮಾಡುವ ಬಗ್ಗೆ ತಾ. ೧೯-೧೦-೩೫ನೇ ದಿನ ರಾ| ಅಕ್ಕದಾಸ ಗಣಪತಿ ಭಟ್ಟರ ಅಟ್ಟದ ಮೇಲೆ ರಾ| ಕೆಕ್ಕಾರ ಪುರುಷೋತ್ತಮರಾಯರ ಅಧ್ಯಕ್ಷತೆಯಲ್ಲಿ ನಾಗರಿಕರ ಸಭೆ ಸೇರಿತ್ತು. ಸಭೆಯಲ್ಲಿ ರಾ| ಜಿ. ಕೆ. ಹೆಗಡೆ, ರಾ| ಕಾಮತ, ರಾ| ಅಕ್ಕದಾಸ ಗಣಪತಿ ಭಟ್ಟ ಮುಂತಾದವರ ಭಾಷಣಗಳಾದವು. ಮತ್ತು ಪ್ರೊ| ಬಸವನಾಳರ ಮೇಲೆ ಅರೆತಿರುಕ ಮರಾಠಾ ತರುಣನೊಬ್ಬನು ಅತ್ಯಾಚಾರ ಮಾಡಲಿಕ್ಕೆ ಪ್ರವೃತ್ತನಾದ ಬಗ್ಗೆ ತೀವ್ರ ನಿಷೇಧ ವ್ಯಕ್ತ ಮಾಡುವ ಠರಾವು ಸರ್ವಾನುಮತದಿಂದ ಪಾಸಾಯಿತು. ದೇಶವು ಮುದ್ರಣಸ್ವಾತಂತ್ರ್ಯ, ಭಾಷಣಸ್ವಾತಂತ್ರ್ಯ, [illegible]ಸ್ವಾತಂತ್ರ್ಯಗಳ ಬಗ್ಗೆ ಒದ್ದಾಡುತ್ತಿರುವಾಗ, ಈ ಸ್ವಾತಂತ್ರ್ಯಗಳ ನಿಯಂತ್ರಣಕ್ಕಾಗಿ ಹಿಂದುಸ್ಥಾನ ಸರಕಾರವು ಕ್ರಿಮಿನಲ್ ಲಾ ಎಮೆಂಡಮೆಂಟ ಬಿಲ್ಲು ಮುಂದೆ ತಂದ ಬಗ್ಗೆ ದೇಶದಲ್ಲಿ ಕೋಲಾಹಲವುಂಟಾಗಿರುವಾಗ, ಒಬ್ಬ ಪ್ರಾಮಾಣಿಕ ಇತಿಹಾಸ-ಸಂಶೋಧಕರ ಮೇಲೆ ಇಂಥ ಅತ್ಯಾಚಾರವನ್ನಾಚರಿಸುವದು ಸಮಾಜಘಾತಕವಾದದ್ದೆಂದೂ ಅತ್ಯಂತ ಹೇಯವಾದದ್ದೆಂದೂ ರಾ| ಅಕ್ಕದಾಸ ಭಟ್ಟರು ಉದ್ಗರಿಸಿದರು.

ಕಾರವಾರ— (ತಾ. ೨೦-೧೦-೩೫) ಬುಧವಾರದಿಂದ ಮಳೆ ಬೀಳುತ್ತಿದೆ. ಗುರುವಾರ ದಿವಸ ಬಹಳ ಮಳೆಯಾಯಿತು. ದಿನಾಲು ಮಳೆ ಬೀಳುತ್ತಿದೆ. ಇನ್ನೊಂದು ಮಳೆಗಾಲಕ್ಕೆ ಪ್ರಾರಂಭವಾಗಿರುವಂತೆ ಭಾಸವಾಗುತ್ತದೆ!

ಅಂಕೋಲಾ— ಸತ್ಯಾಗ್ರಹ ಕಾಲದಲ್ಲಿ ಸರಕಾರದ ವಶವಾದ ಭೂಮಿಗಳ ಲಿಲಾವಿನ ಕಾಲಕ್ಕೆ [illegible] ಅಕ್ರಮಗಳನ್ನು ಮಾಡಿದ ಬಗ್ಗೆ ಇಲ್ಲಿಯ ತಾಲೂಕ ಕಚೇರಿಯೊಳಗಿನ ರಾ| ಆರ್. ಟಿ. ಹೆಗಡೆಯವರಿಗೆ ಪ್ರಾಂತ ಸಾಹೇಬರು ಕಳೆದ ಬೇಸಿಗೆಯಲ್ಲಿ ಸಸ್ಪೆಂಡ್ ಮಾಡಿ ಮನೆಗೆ ಕಳಿಸಿಕೊಟ್ಟಿದ್ದರು. ಈಗ ಅವರಿಗೆ ಬಡತರ್ಫ ಮಾಡಿರುವದಾಗಿ ಮೆ| ಕಲೆಕ್ಟರ ಸಾಹೇಬರ ಹುಕುಮವಾಗಿದೆ.

ಸರಕಾರ ಜಪ್ತ ಆದ ಭೂಮಿಗಳನ್ನು ಲಿಲಾಂವ-ಮಾರಾಟದಲ್ಲಿ ಸತ್ಯಾಗ್ರಹಿಗಳ ಆಪ್ತೇಷ್ಟರಿಗೆ ಮಾರಲಾಗದೆಂದು ಹೊರಟ ಸರಕಾರಿ ಅಪ್ಪಣೆಯನ್ನು ಉಲ್ಲಂಘಿಸಿದರೆಂತಲೂ, ಆ ಬಗ್ಗೆ ಲಂಚ ತಿಂದರೆಂತಲೂ, ಸುಳ್ಳು ಪುರಾವೆಯುಂಟು ಮಾಡಿ ನಿಜವಾದ ಪುರಾವೆಯನ್ನು ಅಡಗಿಸಿಬಿಟ್ಟರೆಂತಲೂ ರಾ॥ ಹೆಗಡೆರ ಮೇಲೆ ಆಪಾದನೆಗಳು ಹೊರಿಸಲ್ಪಟ್ಟಿದ್ದವು. ರಾ॥ ಹೆಗಡೆರು ಅಪರಾಧಗಳನ್ನು ಒಪ್ಪಿ ಕ್ಷಮೆ ಬೇಡಿದರಂತೆ. ಮ॥ ಕಲೆಕ್ಟರ ಸಾಹೇಬರು ಅವರಿಗೆ ಒಂದು ತಾಕೀತಿಯ ಮೇಲೆಯೇ ಬಿಟ್ಟುಕೊಟ್ಟಿದ್ದಾರೆ! ಖಟ್ಲೆ ವರ್ಗೆ ಮಾಡುವದು ಬೇಡೆಂದು ನಿರ್ಣಯಿಸಿದ್ದಾರೆ!

ಈ ತಾಲೂಕಿನ ಬೆಳಕೆ, ಹುಣಶೆಕಟ್ಟ, ಉಗರಗೋಳಗಳೊಳಗಿನ ಬಂದಿ-ಸತ್ಯಾಗ್ರಹಿಗಳ ಹೊಲ-ಮನೆಗಳನ್ನು ಸರಕಾರದವರು ಜಪ್ತಮಾಡಿ ಲಿಲಾಂವ ಮಾಡಿದ್ದರು. ಮುಂದೆ ರೈತ-ಸಂಕಷ್ಟ-ನಿವಾರಣಾ ಸಮಿತಿಯವರು ಸದರಿ ಹೊಲ-ಮನೆಗಳನ್ನು ಲಿಲಾಂವ-ಖರೀದಿದಾರರ ಕಡೆಯಿಂದ ಯೋಗ್ಯ ಬೆಲೆಗೆ ಕೊಂಡುಕೊಂಡು ಮೂಲ ಮಾಲೀಕರಿಗೆ ಒಪ್ಪಿಸಿದ್ದರು. ಪ್ರಾಂತ ಸಾಹೇಬರ ಟೂರಿನಲ್ಲಿ ಈ ಸಂಗತಿಯು ಅವರ ದೃಷ್ಟಿಗೆ ಬಿತ್ತಂತೆ, ಅವರು ಕಲೆಕ್ಟರರಿಗೆ ಬರೆಕೊಂಡರಂತೆ! ಕಲೆಕ್ಟರ ಸಾಹೇಬರು ಈ ಮಾರಾಟಗಳನ್ನೆಲ್ಲ ರದ್ದುಪಡಿಸಿದ್ದಾರೆ! ಈಗಂತೂ ಸತ್ಯಾಗ್ರಹವಿಲ್ಲ. ಬಹುತೇಕ ಸತ್ಯಾಗ್ರಹಿಗಳು ಕರಬಂದಿಯ ಕಾಲದಲ್ಲಿ ಸೇರಿ ತಾವು ಮೂರ್ಖತನ ಮಾಡಿದೆವೆಂದು ಅನುತಾಪ ವ್ಯಕ್ತಗೊಳಿಸುತ್ತಿದ್ದಾರೆ. ಆಳರಸರು ಇಂಥವರ ಬೆನ್ನು ಹಿಡಿದು ಅವರಿಗೆ ತಂಪಿಡುವದು ಯೋಗ್ಯವೇ? ಅನುತಾಪ ತೋರಿಸಿದ ಜನರಿಗೆ ಆಳರಸರು ತಾವಾಗಿ ಮುಂದೆ ಬಂದು ಅವರವರ ಹೊಲಗಳನ್ನು ಅವರವರಿಗೆ ತೆಗೆಸಿಕೊಡಬಹುದಾಗಿತ್ತು. ಅದರಿಂದಲೇ ಸರಕಾರದ ಪ್ರತಿಷ್ಠೆ ಹೆಚ್ಚಾಗುತ್ತಿತ್ತು. ಹೀಗೆ ಮಾಡುವದರ ಬದಲು ಸತ್ಯಾಗ್ರಹಿಗಳು ಸ್ವಪ್ರಯತ್ನದಿಂದ ತಿರುಗಿ ಸಂಪಾದಿಸಿದ ಹೊಲಮನೆಗಳನ್ನು ಅವರ ಕೈಯಿಂದ ಕಸಿದುಕೊಳ್ಳುವದರಿಂದ ಸರಕಾರದ ಬಗ್ಗೆ ತೀವ್ರ ಅಸಂತೋಷ ಹುಟ್ಟುವದು. ಜಿಲ್ಹಾಧಿಕಾರಿಗಳು ಆಳವಾಗಿ ವಿಚಾರ ಮಾಡಬೇಕು. ಇತ್ಯಾದಿ ಒಕ್ಕಲಿಗರ ಹಿತಚಿಂತಕರೊಬ್ಬರು ಬರೆಯುತ್ತಾರೆ.

— ಕಾಕಿನಾಡಿನಿಂದ ೩೦ ಮೈಲು ದೂರವಿರುವ ಅನ್ವರ್ ಗ್ರಾಮದಲ್ಲಿ ನವರಾತ್ರೆಯೊಳಗೆ ಒಬ್ಬ ಹುಡುಗಿಯನ್ನು ಮಹಾಶಕ್ತಿ ದೇವತೆಗೆ ಬಲಿಕೊಟ್ಟರಾಗಿ ತಿಳಿಯುತ್ತದೆ. ಈ ಕುರಿತು ಪೋಲೀಸರು ಚೌಕಶಿ ಮಾಡುತ್ತಿದ್ದಾರೆ

ದಿ॥ ವಿಠ್ಠಲಭಾಯಿ ಪಟೇಲರವರ ಸ್ಮರಣಾರ್ಥ ಮುಂಬಯಿಯೊಳಗಿನ ಕೊಂಗ್ರೆಸ ಮಂದಿರಕ್ಕೆ 'ವಿಠ್ಠಲ ಸದನ'ವೆಂದು ಕರೆಯಬೇಕಾಗಿ ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ನಿರ್ಣಯಿಸಿದ್ದಾರೆ.

— ಸಂಯುಕ್ತ ಪ್ರಾಂತದಲ್ಲಿ ಹರಿಜನರಿಗೆ ಅಂತು ೩೭೫ ದೇವಾಲಯಗಳಲ್ಲಿ ಪ್ರವೇಶ ಸಿಕ್ಕಿರುವದಾಗಿ ಆ ಪ್ರಾಂತದ ಹರಿಜನ ಸೇವಕ ಸಂಘದ ಪ್ರಕಟಣೆ.

— ಪ್ರೊ॥ ಬಸವನಾಳರವರ ಮೇಲೆ ಬೆಳಗಾವಿಯ ಮರಾಠಾ ಹುಡುಗರು ನಡಿಸಿದ ಅತ್ಯಾಚಾರದ ಬಗ್ಗೆ ಬೆಳಗಾವಿ, ಹುಬ್ಬಳ್ಳಿ, ಧಾರವಾಡ ಮೊದಲಾದ ಕಡೆಗಳಲ್ಲಿ ಸಭೆಗಳಾಗಿ ನಿಷೇಧ ಪ್ರದರ್ಶನವಾಯಿತು. ತೀರ ನಿಂದ್ಯ ಕರ್ಮ. ಎಲ್ಲೆಲ್ಲಿಯೂ ಇಂಥ ಅತ್ಯಾಚಾರಗಳ ನಿಷೇಧವಾಗಬೇಕು.

— ಲಖನೌ ಕೊಂಗ್ರೆಸ ಸಭೆಯ ಚಾಲಕರೊಳಗೆ ಮತಭೇದಗಳುಂಟಾಗಿ ಅಧ್ಯಕ್ಷರು ರಾಜಿನಾಮೆ ಕೊಟ್ಟಿದ್ದರು. ಈಗ ಇತ್ತಟ್ಟಿನಲ್ಲಿ ರಾಜಿಯಾಗಿ ರಾಷ್ಟ್ರೀಯ ಸಭೆಯ ಕಾರ್ಯವನ್ನು ಪುರಸ್ಕರಿಸುತ್ತಿದ್ದಾರೆ. ಸಂತೋಷ ವಾರ್ತೆ.

ಅಘೋರ ಕೃತಿ!

ಸೋಂದೆ ಅರಸರ' ವಂಶಜರು' ಗೋವಾಂತದ ಬಾಂದಿವಡೆ ಗ್ರಾಮದಲ್ಲಿರುತ್ತಾರೆ. ಇಬ್ಬರೇ ಅಣ್ಣ-ತಮ್ಮಂದಿರು. ತಾಯಿಯೂ, ಹಿರೇ ಮಗನಿಗೂ ಬದ್ಧ ದ್ವೇಷ. ಅದರಿಂದ ಇವರೊಳಗೆ ಯಾವಾಗಲೂ ಕಲಹ. ಎಲ್ಲರೊಳಗೆ ಸಂಧಿ ಮಾಡುವದಕ್ಕಾಗಿ ಪೋರ್ತುಗೀಜ ಸರಕಾರದವರು ಬಹಳ ಪ್ರಯತ್ನ ಮಾಡಿದರು. ಅದಾಗ್ಯೂ ಪ್ರಯೋಜನ ವಾಗಲಿಲ್ಲ. ಮುಂದೆ ಹಿರೇ ಮಗನು ಬಾಂದಿವಡೆಯಿಂದ ೩ ಮೈಲು ದೂರವಿರುವ ಫೋಂಡಾ ಗ್ರಾಮದಲ್ಲಿ ಉಳಿದನು. ತಾಯಿಯು ಆತನಿಗೆ ಕೊಲ್ಲುವ ಕಾರಸ್ಥಾನ ನಡಿಸಿದಳು. ಕಳೆದ ಒಂದು ತಿಂಗಳ ಹಿಂದೆ ಒಡಹುಟ್ಟಿದ ತಮ್ಮನು ಅಣ್ಣನಿಗೆ ತಾಯಿಯ ಅಪ್ಪಣೆ ಮೇರೆಗೆ ಗುಂಡು ಹಾಕಿ ಕೊಂದನು! ತಾಯಿ-ಮಗಂದಿರು ಮೋಟಾರು ಹತ್ತಿ ಓಡುತ್ತಿರುವಾಗ ಪೋಲೀಸರು ಸೆರೆಹಿಡಿದಿರುತ್ತಾರೆ. ಈ ಮನೆತನ ಬಹು ಪುರಾತನ ಕಾಲದ್ದು; ಶ್ರೀ ನಾಗೇಶ ದೇವಸ್ಥಾನದಲ್ಲಿ ಈ ಮನೆತನದವರಿಗೆ ಒಳ್ಳೇ ಮರ್ಯಾದೆ ಇದೆ. ಸೀಮೋಲ್ಲಂಘನದ ಸಮಯ ವಂಶಜರು ಮುಂಭಾಗದಲ್ಲಿ ಪಲ್ಲಕ್ಕಿ ಹತ್ತಿ ಹೋಗಿ ಆಮೇಲೆ ಶ್ರೀ ದೇವರ ಪಲ್ಲಕ್ಕಿ ಹೋಗುವ ಸಂಪ್ರದಾಯ ಬಹು ಪುರಾತನ ಕಾಲದಿಂದ ನಡೆದು ಬಂದಿರುತ್ತದೆ. ಪೋರ್ತುಗೀಜ ಸರಕಾರದಿಂದ ಇವರಿಗೆ ವರ್ಷಾಸನ ರೂ. ೬೦೦೦ ವೇತನ ಸಿಗುತ್ತದೆ. ಅದನ್ನು ಪಡೆಯಬೇಕಾಗಿ ವಂಶಜರು ಸರಕಾರದ ಮೇಲೆ ನಡಿಸಿದ ವ್ಯಾಜ್ಯದಲ್ಲಿ ರೂ. ೧೮೦೦೦ಕ್ಕೆ ಪಡೆಯಬೇಕೆಂಬ ತೀರ್ಮಾನವಾದ ಕೆಲ ದಿನಗಳಲ್ಲಿಯೇ ಅನರ್ಥ ಘಟಿಸಿದ್ದು ವ್ಯಸನಕರ. ಹಿರೇ ಮಗನಿಗೆ ಹೆಂಡತಿಯಿರುತ್ತದೆ. ಈಗ ಅವಳು ಗರ್ಭವತಿ. ಇಷ್ಟು ದೀರ್ಘ ದ್ವೇಷ ತಾಯಿ ಹಿಡಿದದ್ದು ಪರಮಾಶ್ಚರ್ಯ! ಒಡಹುಟ್ಟಿದ ತಮ್ಮನೇ ಗುಂಡು ಹೊಡೆದದ್ದು ಘೋರಾಘೋರವೇ! ಗುಂಡು ಹಾಕಲಿಕ್ಕೆ ಬೇರೊಬ್ಬನಿಗೆ ಹಣ ಕೊಟ್ಟಿತ್ತು! ಆತನ ಕೈ ನಡುಗಿತಂತೆ! ಆದರಿಂದ ತಮ್ಮನೇ ಎದೆಗಟ್ಟಿ ಮಾಡಿ ಕೊಂದನಂತೆ! ಸೋಂದೆ ಅರಸರ ವಂಶಜರ ಮನೆತನದ ಈ ಅವಸ್ಥೆ ನೋಡಿ ಮನಸ್ಸು ಕೊರಗುತ್ತದೆ. ವಿನಾಶ ಕಾಲಕ್ಕೆ ವಿಪರೀತ ಬುದ್ಧಿ!

ವಿನಂತಿ.

ಹಳಿಯಾಳ ಗೋರಕ್ಷಣ ಸಂಸ್ಥೆಯ ವತಿಯಿಂದ ಇದೇ ಬರುವ ನವಂಬರ ತಾ. ೩—೪—೫ನೇಗೆ ದನಗಳ ಹಾಗು ಬೆಳೆ, ಕಾಯಿಪಲ್ಲೆ ಹಣ್ಣು-ಹಂಪಲಗಳ ಪ್ರದರ್ಶನವು ಹಳಿಯಾಳದಲ್ಲಿ ಆಗತಕ್ಕದ್ದಿದ್ದು ಈ ಕಾಲಕ್ಕೆ ಬಂದು ತಮ್ಮ ಅನುಭವದ ಲಾಭವನ್ನು ಸರ್ವತ್ರರಿಗೆ ಕೊಡುವ ಬಗ್ಗೆ ಸಂಸ್ಥೆಯು ಎಲ್ಲ ಪ್ರಮುಖರಿಗೆ ವಿನಂತಿ ಪತ್ರಗಳು ಕಳಿಸಲ್ಪಟ್ಟಿವೆ. ಆದರೆ ಎಷ್ಟೋ ಜನರಿಗೆ ಆಮಂತ್ರಣ ಮುಟ್ಟದೆ ಉಳಿಯುವ ಸಂಭವವಿರೆ. ಅದ್ದರಿಂದ ಈ ವಿನಂತಿ ಮಾಡಿಕೊಳ್ಳುವದರಲ್ಲಿ ಬರುತ್ತದಲ್ಲ. ಈ ಆಮಂತ್ರಣವನ್ನು ಸ್ವೀಕರಿಸಿ ಸಂಸ್ಥೆಯ ಮೇಲೆ ಲೋಭವಿಟ್ಟು ಸದರಿ ಸಮಾರಂಭಕ್ಕೆ ತಾವು ಅಗತ್ಯವಾಗಿ ಬಂದು ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇನೆ

ನ. ವಾ. ದೇಶಪಾಂಡೆ,
ತಾ. ೨೧-೧೦-೩೫. ಸ್ವಾಗತಾಧ್ಯಕ್ಷ.
ಪ್ರದರ್ಶನ ಕಮಿಟಿ.

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ.

III ನೇ ಸಂಚಿಕೆ. ಶ್ರೀ ಅನುವ್ಯಾಖ್ಯಾನವು. II ನೇ ಭಾಗ "ಜನ್ಮಾದ್ಯೇಕಾದಶಾಧಿಕರಣಗಳು. ಈಗಲೇ ತಯಾರಾಗಿವೆ. ಪುಟಗಳು ೧೬೦. ಚಂ. ರೂ. ೧-೮-೦.

I ನೇ ಭಾಗ. ಜಿಜ್ಞಾಸಾಧಿಕರಣ. ಪುಟಗಳು ೨೩೧. ಚಂದಾ ರೂ. ೨ ೮ ೦.

II ನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು. ಪುಟಗಳು ೭೧೫. ಚಂದಾ ರೂ. ೪-೬-೦. ಟಪಾಲು ಹಾಸಲು ಪ್ರತ್ಯೇಕ. ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಆನರರಿ ಟ್ರೆಝುರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ.
(ದಕ್ಷಿಣ ಕನ್ನಡ.)

Murdeshwar Shrinivasrao &Co,
Commission Agents,
Yellapur. (N. Kanara)

ಮುರ್ಡೇಶ್ವರ, ಶ್ರೀನಿವಾಸರಾವ್ ಎಂಡ್ ಕೋ,
ದಲಾಲ, ಯಲ್ಲಾಪುರ.

ನಮ್ಮ ಅಡಿಕೆ, ಯಾಲಕ್ಕಿ, ಮೆಣಸು ವಗೈರೆಯ ದಲಾಲಿ ಕಂಪನಿ ಕೆಲಸಕ್ಕೆ ಶುರು ಮಾಡಿರುತ್ತದೆ. ಹೆಚ್ಚಿಗೆ ಮಾಹಿತಿ ಬಗ್ಗೆ ಪತ್ರವ್ಯವಹಾರದಿಂದ ಅಥವಾ ಸಮಕ್ಷ ಬಂದಲ್ಲಿ ತಿಳಿದೀತು.

ShrinivasRao,
Managing Agent, YELLAPUR.

ಇಂಡಿಯನ್ ಮರ್ಕಂಟೈಲ ಇನ್ಸೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತಾರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂಕೆಪೇಟೆ, ಕಾರವಾರ.

ಅಲ್ಲಲ್ಲಿ ಇಷ್ಟಿಷ್ಟು!

[ಖಾಸ [illegible]ಸಿಂದ ಮುಂದರಿದುದು]

ರೂ ೩೫ ಇತ್ತು ಒಡು [illegible] ರೂ ೩೩ಕ್ಕೆ ಒಂದೇ ಬಟ್ಟೆಯ ದರ ೬೦ ಯಿಂದ [illegible]ರ ವರೆಗೆ ಸಾರಿತು ಸುಮಾರು [illegible] ಕೈತ್ತ ಹೋಯಿತು ೧೦ ತೊಲ [illegible] ಯ [illegible] ವರ್ತಕರು [illegible] ಮ [illegible]ದಲ್ಲಿ [illegible] ಮಾಡಿದರು, ಹಿಮ್ಮ ದಿಲ್ಲಿ ಪಟ್ಟಣಕ್ಕೆ ಟೆಲಿಫೋನ ಮಾಡಿದರು ತಂತಿ ಮಾಡಿದರು ತೀರ [illegible] ತಿಳಿಯಿತು ಕಸ್ಟಮ್ ಕಮಿಶನರು [illegible] ಗೌಪ್ಯವಾಗಿ ನುಡಿದರು ದಿಲ್ಲಿಯ [illegible] ಇಲಾಖೆಯವರು ಈ [illegible] ನೆಯೆಂದು ತಿಳಿಸಿದರು [illegible] ದರ ಏರಿತ ಬೆಳ್ಳಿಯ ದ[illegible] ತಿಂಗಳಲ್ಲ [illegible] ಮಾಡಿದ [illegible] ಗ [illegible] ಮಾಡಿದ [illegible] ಬೇಗಿನ ವಾರ್ತೆ ದಿಲ್ಲಿಗೆ [illegible] ಅಲ್ಲಿಯ [illegible] ಕಚೇರಿಯ [illegible] ಗಡಿಬಿಡಿ [illegible] ಯಿತು ರೂ ೩೫ರ ಚಿನ್ನ ರೂ [illegible] ಬೆಳ್ಳಿಯ ದರವು ಅಷ್ಟು ಪ್ರಮಾಣದಿಂದ ಏರಿತು ಕಲಕತ್ತೆಯಲ್ಲಿಯೂ ಇದೇ [illegible] ಅಲ್ಲಿ ಚಿನ್ನದ ದರ ರೂ [illegible]ದಿಂದ [illegible]ಕ್ಕೆ ಇಳಿಯಿತು ಮುಂಬಯಿಯ ವಾರ್ತೆ [illegible] ಪತ್ರ [illegible] ದರ [illegible] ಪ್ರಮಾಣಕ್ಕಾಗಿ ತಲ್ಲಿತು [illegible] ಸುಳ್ಳು ಸುದ್ದಿಯನ್ನು ಹರಡಿದವರು ಯಾರು? [illegible] ಪಟ್ಟಣದಿಂದ ಪತ್ರಗಳನ್ನು ಬರೆದವರು ಯಾರು? ಪತ್ರಗಳಿಗೆ ಸರಕಾರಿ ಪತ್ರಗಳ [illegible] ಸಹಿ [illegible] ಸರಕಾರಿ [illegible] ಇವನ್ನು [illegible] ಯ [illegible] ಯೂನಿಯನ್ ಬೇಂಕ [illegible] ಸರಕಾರದ [illegible] ತಲೆಗೆ [illegible] ಮ ಸುಳ್ಳು [illegible] ಸಂಪ್ರದಾಯವಿಲ್ಲ ಕಾರಣವಿಲ್ಲ [illegible] ಕೆಲ್ಲಿ ಅಂತರಂಗದಿಂದಲೇ ನಡೆಸ [illegible] ಹೀಗಿದ್ದು ಈ ಪತ್ರಗಳನ್ನು [illegible] ನಂಬಿ ಕೊಂಡ ಬಗೆ ಹೇಗೆ? ಮೊದಲಾಗಿ [illegible] ಶನಿ ವಾರಕ್ಕೆ ಹಿಂದುಸ್ಥಾನ ಸರಕಾರವು [illegible] ಸಂಬಂಧಕ್ಕೆ ಯನ್ನು ಪ್ರಕಟಿಸಿ ಜಾಹೀರನಾಮೆ ಹೊರಡಿಸುವ ದಾಗಿ ಪತ್ರಗಳಲ್ಲಿ ಬರದಿತ್ತು. ಆದರೆ ಸೋಮವಾರ ದೊಳಗ ಈ ಸಂಗತಿ ರೀತಿಯಂತೆ ತಿಳಿಯಲವಕಾಶ ವಿತ್ತು. ಶನಿವಾರದ ವಾರ್ತೆ ಕೂಡಲೆ ತಂತಿಯಿಂದ ಎಲ್ಲಿ ಹರಡಿಸಿದರೂ ಮುಂಬಯಿಯಲ್ಲಿ ರವಿವಾರ ತಿಳಿಯಲು ಬೇಕು. ಸೋಮವಾರದ ಪತ್ರಿಕೆಗಳಲ್ಲಂತು ಪ್ರಕಟವಾಗಲೇ ಬೇಕು. ಹೀಗಿದ್ದು ವರ್ತಕರು ಮೋಸ ಹೋದ ಬಗೆ ಹೇಗೆ? ಕೆಲ ವರ್ತಕರ ಬಳಿ ಬೆಳ್ಳಿ ಶಿಲ್ಕಿತ್ತಂತೆ. ಅದನ್ನು ಮಾರಾಟ ಮಾಡುವದಕ್ಕಾಗಿ ಈ ಹೂಲಿ ಎಬ್ಬಿಸಲಾಗಿತ್ತಂತೆ. ಮುಂಬಯಿಯಲ್ಲಿಯೇ ವರ್ತಕರು [illegible] ಸಂಶಯ ಮಾಡಿದ್ದಾಗ [illegible] ಸರಕಾರಿ ಗುಪ್ತ [illegible]ರು ಬಾತಮಿ ಮಾಡುತ್ತಿದ್ದಾರೆ. ಆ ದಿನ ಚಿನ್ನ-ಬೆಳ್ಳಿ ವ್ಯಾಪಾರ ಮಾಡಿ ಲಾಭ ಹೊಂದಿದವರ ಯಾದಿಯನ್ನು ಸಂಗ್ರಹಿಸುತ್ತಿದ್ದಾರೆ. ದಿಲ್ಲಿಯಲ್ಲಿ ಹಿಂದುಸ್ಥಾನ ಸರಕಾರದ ದಫ್ತರವಿರುವಾಗ ಮುಂಬಯಿಯಿಂದ ಹೊರಟ ವಾರ್ತೆಗಳನ್ನು ನಂಬಿ ಹಳ್ಳಿಯ ಸರಾಫರು ವ್ಯವಹಾರ ಮಾಡುವ ಬಗೆ ಹೇಗೆ? ಹಿಂದುಸ್ಥಾನ ಸರಕಾರದ ಅಧಿಕಾರಿಗಳು ಗುಪ್ತ ವಾರ್ತೆಗಳನ್ನು [illegible]ಗಿಯೇ ಇಡುತ್ತಿದ್ದಾಗ ನಾಲ್ಕು ಬೇಂಕುಗಳ [illegible] ಪತ್ರ ಬಂದಿರುವದೆಂಬ ಗಾಳಿವಾರ್ತೆಯ ಮೇಲೆ ವ್ಯವಹಾರ [illegible] ಚಿನ್ನ-ಬೆಳ್ಳಿಯ ವರ್ತಕ [illegible] ಸಂದರ್ಭವೇ ನಮಗೆ ತಿಳಿ [illegible] ಬೇರೆ ಕಾರಣವಾಗಿ ನಮಗನಿಸುತ್ತದೆ. [illegible] ಕೂಲಂಕುಶವಾಗಿ ಶೋಧ ಮಾಡತಕ್ಕದ್ದು.

⁂

[illegible]ಮಿಕ ಶಿಕ್ಷಕರ [illegible] ಇನ್ನು [illegible] ರತ್ನಾಗಿರಿಯೊಳಗಿನ ಸ್ಕೂಲ ಬೋರ್ಡಿನ [illegible] ಪ್ರಾಥಮಿಕ ಶಿಕ್ಷಕರಿಗೆ ಸಂಬಳ ಕೊಡದೆ ದಣಿಸುತ್ತಿದ್ದಾರೆ. ೧೯೩೫ನೇ ಇಸ್ವಿ ನವಂಬರ ತಿಂಗಳ ಸಂಬಳ [illegible] ಪ[illegible]ದಲ್ಲಿ ಅಂತು [illegible] ೧೯೩೫ನೇ ಇಸ್ವಿ ಆಗಸ್ಟ ತಿಂಗಳ ಪಗಾರ [illegible] ಸ್ಕೂಲ ಬೋರ್ಡಿಗೆ ಗತಿ ಇಲ್ಲ. ಹಣ ಕಡಿಮೆ ಇದ್ದುದರಿಂದ ಆದಷ್ಟು ಸಂಬಳ ಹಂಚಲಾಯಿತು. ಸಪ್ಟಂಬರದ ಸಂಬಳ ಇನ್ನೂ ಪತ್ತೆ ಇಲ್ಲ. ಸ್ಕೂಲ ಬೋರ್ಡ ಆಫೀಸಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರ ಕಾರಕೂನ ಮೊದಲಾದವರಿಗೆ ಆಗಸ್ಟ ತಿಂಗಳ ಪೂರ್ಣ ಪಗಾರು ಸಿಕ್ಕಿತು, ಸಪ್ಟಂಬರ ತಿಂಗಳ ಪಗಾರೂ ಸಿಕ್ಕಿತ! ಆಕ್ಟೋಬರ ತಿಂಗಳು ಮುಗಿಯಲಿಲ್ಲದ್ದರಿಂದ ಆ ಪಗಾರು ಅವರಿಗೆ ಇನ್ನೂ ಸಿಗಲಿಲ್ಲ, ಬಾಕಿಯಲ್ಲುಂಟು. ಸ್ಕೂಲ ಬೋರ್ಡಿನ ಕಡೆ ಹಣದ ಅನುಕೂಲತೆ ಇಲ್ಲದಿದ್ದರೆ ಸ್ಕೂಲ ಬೋರ್ಡಿನವರು ದಿವಾಳಿ ಅರ್ಜಿಗಳನ್ನು ದಾಖಲಮಾಡಿಸಿ ಪ್ರಾಥಮಿಕ ಶಿಕ್ಷಕರ ಋಣಪಾಶಗಳಿಂದ ಬಿಡುಗಡೆಯಾಗುವದು ಲೇಸು. ದಿಲ್ಲಿಯಲ್ಲಿ ಸದ್ಯಕ್ಕೇ ಸರಕಾರಕ್ಕೆ ಸಂಪೂರ್ಣವಾಗಿ ಅಂಕಿತವಾಗಿರುವ ಸ್ಥಾನಿಕ 'ಸ್ವರಾಜ್ಯ' ಸಂಸ್ಥೆಗಳ ಪರಿಷತ್ತು ಸೇರುವದಿದೆ. ಸರ್ವಾಧಿಪತಿಗಳಾದ ವಿಲಿಂಗಡನ್ ದೊರೆಗಳು ಈ ಸಭೆಯ ಉದ್ಘಾಟನ ಸಮಾರಂಭವನ್ನು ನೆರವೇರಿಸುವವರಿದ್ದಾರೆ. ಆ ಸಮಯ ಪ್ರಾಥಮಿಕ ಶಿಕ್ಷಕರ ಪರಿಸ್ಥಿತಿಯ ಕುರಿತು ಚರ್ಚೆಯಾಗಿ ಯಾವದೊಂದು ನಿರ್ಣಯ ಕೈಕೊಳ್ಳುವದು ಲೇಸು. "ಹಣಾನುಕೂಲತೆ ಕಡಿಮೆಯೆಂದು ಸಂಬಳಕ್ಕೆ ಕತ್ತರಿ, ಹಣ ತಿಲ್ಕು ಇಲ್ಲವೆಂದು ಕತ್ತರಿಸಿದ ಪಗಾರ [illegible] ಕಷ್ಟ, ಮೇಲೆ ಸ್ವರಾಜ್ಯದ ಸೋಗು!" ಹೀಗ ನಡೆಯುವದು ನಿಂತಹೊರತು ಪ್ರಾಥಮಿಕ ಶಿಕ್ಷಣವು ಇಂಥ ಉಪಕ್ರಮಗಳಿಂದ ಅಭಿವೃದ್ಧಿಗೈಯ್ಯುವದಿಲ್ಲ. ನಿಜಾಮ ಹೈದರಾಬಾದದ ಶಿಕ್ಷಕರ ಸಂಘದ ಪರಿಷತ್ತಿನಲ್ಲಿ ನಿಜಾಮ ಸರಕಾರದ ರಾಜಕಾರಣ ಹಾಗು ಶಿಕ್ಷಣ ಇಲಾಖೆಯ ಸಭಾಸದರಾದ ನವಾಬ ಮೆಹದಿಯಾರಜಂಗ ಬಹದ್ದೂರರವರು ಶಿಕ್ಷಕರಿಗೆ ಯಾವಾಗಲೂ ಉತ್ತೇಜನ ಕೊಡತಕ್ಕದ್ದಬೇಕಾಗಿಯೂ, ಅಂದರೆ ಮಾತ್ರ ಅವರಿಂದ ಶಿಕ್ಷಣ ಕಾರ್ಯ ಸರಿಯಾಗಿ ಸಾಗುತ್ತದಾಗಿಯೂ ಅಭಿಪ್ರಾಯಪಟ್ಟಿದ್ದಾರೆ. ಶಿಕ್ಷಣ ಕಾರ್ಯವನ್ನು ದಕ್ಷತೆಯಿಂದ ನಡಸಿದಲ್ಲಿ ಸಂಬಳ ಏರುವದೆಂಬ ಆಶೆಯನ್ನು ಪ್ರಾಥಮಿಕ ಶಿಕ್ಷಕರೊಳಗೆ ಹುಟ್ಟಿಸಿ ಅದನ್ನು ಜಾಗ್ರತೆಯಿಂದ ಕಾಪಾಡಬೇಕು. ಅಂಥ ಆಶೆಯ ಅಭಾವದಲ್ಲಿ ಶಿಕ್ಷಕರಿಂದ ಫಲಪ್ರದವಾದ ಕಾರ್ಯವಾಗುವದಿಲ್ಲ. ಇಂಥ ಪ್ರಸಕ್ತಿಯಲ್ಲಿ ಶಿಕ್ಷಣ ಕಾರ್ಯಕ್ಕಾಗಿ ನಡೆಯುವ ಖರ್ಚು ನಿರರ್ಥಕವಾದದ್ದೆಂದು ಹೇಳುವದನವಶ್ಯಕ. ಈಗಿನ ಸ್ಕೂಲ ಬೋರ್ಡಿನ ಕಾರಭಾರದಲ್ಲಿ ಶಿಕ್ಷಕರಿಗೆ ಆಶೆ ಹುಟ್ಟುವದೊತ್ತಟ್ಟಿಗಿರಲಿ, ಇದ್ದ ಆಶೆ ಭಂಗ ಹೊಂದಿ ಶಿಕ್ಷಕರು ಬೇರೆ ಉಪಾಯಗಾಣದೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರೆ ಯಾವಾಗಲೂ ಅವರು ಅಸಂತುಷ್ಟರು

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ !!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ [illegible] ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯಿದೆ. [illegible] ಮಾಹೆ ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಷ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ — ಅಂಕೋಲಾ.

ಸ್ಕೂಲ ಬೋರ್ಡ ಸಭಾಸದರ ಅಧಿಕಾರವಶಕ್ಕೆ ಇವರಲ್ಲಿ ನೇಕರು ಬಲಿಬಿದ್ದು ಕಳಕಳದಿಂದ ನಷ್ಟ ಹೊಂದುತ್ತಲಿದ್ದಾರೆ ದಿಲ್ಲಿಯೊಳಗಿನ ಪರಿಷತ್ತಿನವರು ಈ ಕುರಿತು ಆಳವಾಗಿ ವಿಚಾರಿಸಿ ಸ್ಕೂಲ ಬೋರ್ಡಿನ ಅಧಿಕಾರಿಗಳ ಸ್ವೇಚ್ಛಾಚಾರದಿಂದ ಅಧೀನರಾದ ಪ್ರಾಥಮಿಕ ಶಿಕ್ಷಕರ ಕಷ್ಟಗಳನ್ನು ಪರಿಹರಿಸಬೇಕಾಗಿ ಸೂಚನೆ ಹಾಗಾಗದಿದ್ದಲ್ಲಿ ಪ್ರಾಥಮಿಕ ಶಾಲೆಗಳನ್ನು ರದ್ದುಪಡಿಸಿ ಪ್ರಾಥಮಿಕ ಶಿಕ್ಷಣಕ್ಕೆ ಖರ್ಚಾಗುವ ಹಣವನ್ನು ಬೇರೆ ಲೋಕೋಪಕಾರಿ ಕಾರ್ಯಕ್ಕೆ ಉಪಯೋಗಿಸುವದು ಲೇಸು ಭಕ್ತಿಯಿಲ್ಲದ ವಿದ್ಯಾದಾನದಿಂದ ಲೋಕಕ್ಕೆ ಪ್ರಯೋಜನ ದೊರೆಯುವದು ಅಸಂಭವವೆಂದು ನಿಜಾಮ ಸರಕಾರದ ವಿದ್ಯಾ ಇಲಾಖೆಯ ಸಭಾಸದರು ಅಭಿಪ್ರಾಯಪಟ್ಟ ಬಳಿಕ, ಯಾರೇನು ಹೇಳುವದುಳಿಯಿತು ?

⁂

ದಕ್ಷಿಣ ಕನ್ನಡದ ಚಿತ್ರಾಪುರದೊಳಗಿನ ಶ್ರೀಮತ್ ವಿದ್ಯಾಪೂರ್ಣತೀರ್ಥ ಶ್ರೀಪಾದಂಗಳವರು 'ಅನಂತ ನಾಮಸಾಮ್ರಾಜ್ಯ' ಎಂಬ ಉಪವಾಸವ್ರತವನ್ನು ಕೈಕೊಂಡಿದ್ದಾರೆ ಆಶ್ವಿಜ ಶು|| ೧೦ಮಿಯಿಂದ ಕಾರ್ತಿಕ ಶುದ್ಧ ೧೦ಮಿ ವರೆಗೆ ಒಂದು ಮಾಸ ಪರ್ಯಂತ ಉಪವಾಸ ಶ್ರೀಗಳು ಚಾತುರ್ಮಾಸದಲ್ಲಿ ಧಾರಣಾ-ಪಾರಣಾ ವ್ರತವನ್ನೂ ಕೈಕೊಂಡಿದ್ದರು ಧಾರಣಾ-ಪಾರಣಾ ವ್ರತವೆಂದರೆ ಒಂದು ದಿನ ಉಪವಾಸ, ಮರುದಿನ ಊಟ ಭಾದ್ರಪದ ಮಾಸದಲ್ಲಿ ಶುದ್ಧ ೭ಮಿಯು ತನಕ ೭ ದಿನ ಉಪೋಷಣ ಮಾಡಿ ಶ್ರೀಮದ್ಭಾಗವತ ಗ್ರಂಥದ ಸಪ್ತಾಹವನ್ನಾಚರಿಸಿದರು ಶ್ರೀಮದ್ವಿದ್ಯಾಪೂರ್ಣತೀರ್ಥರಂಗಳವರು ಸದ್ಧರ್ಮೋಪಾಸಕರು ಶ್ರೀಗಳವರು ಸ್ವತಃ ಧರ್ಮವ್ರತಗಳನ್ನು ಆಚರಿಸಿ ಅವುಗಳ ಫಲವನ್ನು ಸ್ವೋದಾಹರಣೆಯಿಂದ ಲೋಕಕ್ಕೆ ಸಿದ್ಧಪಡಿಸುತ್ತಿದ್ದಾರೆ ಹೊಸ ವಿಚಾರದ, ಹೊಸ ಆಚಾರದ ಹೊಸ ಮನ್ವಂತರದಲ್ಲಿ ಶ್ರೀಮದ್ವಿದ್ಯಾಪೂರ್ಣತೀರ್ಥರಂಗಳವರು ಕೈಕೊಂಡ ಧರ್ಮಕಾರ್ಯ ಪ್ರಶಂಸನೀಯವಿದೆ ಶ್ರೀಗಳವರು ಹೆಚ್ಚೆಚ್ಚಿನ ಧರ್ಮವ್ರತಗಳನ್ನು ಆಚರಿಸಿ ಧರ್ಮಬಲವನ್ನು ಸಂಗ್ರಹಿಸಿ ಸನಾತನ ಧರ್ಮದ ಪ್ರಾಬಲ್ಯವನ್ನೂ, ಕೀರ್ತಿಯನ್ನು ಲೋಕದಲ್ಲಿ ಬೆಳಗಿಸಲೆಂದು ಪರಮಾತ್ಮನದೆ ಪ್ರಾರ್ಥನೆ

⁂

ಇಟಾಲಿ-ಹಟಸಿ ದೇಶದ ಯುದ್ಧದ ಮೂಲಕ ವಿದೇಶಿ ಔಷಧ ಸಾಮುಗ್ರಿಗಳ ದರ ೧|| ಪಟ್ಟಿಗೆ ಏರಿತು ಗ್ಲಿಸರಿನದ ದರವಂತು ಮುಮ್ಮಡಿಯಾಯಿತು ಹಂಡ್ರೆಡವೇಟಿಗೆ ರೂ ೫೦ ದರವಿತ್ತು, ಈಗ ಅದು ರೂ ೧೫೦ಕ್ಕೆ ತಲ್ಪಿದೆ ಆ ದರ ಕೊಡಮಾಡಿದರೂ ಬೇಕಷ್ಟು ಗ್ಲಿಸರಿನ ದೊರೆಯುವದಿಲ್ಲ ಕರಾಚಿಯಲ್ಲಿಯೂ ಇದೇ ಗಡಿಬಿಡಿ ಧಾತುಗಳ ಸಾಮಾನಿನ ದರ ೧| ಪಟ್ಟಿಗೆ ಏರಿತು ಕಬ್ಬಿಣ ಸಾಮಾನುಗಳ ದರ ಇಮ್ಮಡಿಯಾಯಿತು ಗ್ಲಿಸರಿನದ ದರ, ಇಮ್ಮಡಿಗೂ ಮಿಕ್ಕಿತು ಯಾರೂ ಜಿನಸುಗಳನ್ನು ಮಾರಲೊಪ್ಪುವದಿಲ್ಲ ಇನ್ನೂ ಖರೀದಿ ಮಾಡತಕ್ಕವರು ಈ ಜಿನಸುಗಳನ್ನು ತರಿಸುವದಕ್ಕಾಗಿ ಆರ್ಡರುಗಳನ್ನು ಕೊಟ್ಟಿರುತ್ತಾರೆ ಅವು ಬಂದು ತಲ್ಪುವ ಮುಂಚೆಯೇ ಯುರೋಪ ಖಂಡದಲ್ಲಿ ಯುದ್ಧವಸಗಿ ಅವು ಇಲ್ಲಿ ಬಂದು ತಲ್ಪಲಿಕ್ಕಿಲ್ಲವಾಗಿ ಹೇಳುತ್ತಾರೆ

⁂

ಸುಶಿಕ್ಷಿತ ಸ್ತ್ರೀಯರಿಗೂ, ನಿರುದ್ಯೋಗದ ಬಾಧೆ ತಟ್ಟಿದೆ ಕರಾಚಿಯೊಳಗೆ ಹುಡುಗಿಯರ ಹ್ಯಾಸ್ಕೂಲಿನಲ್ಲಿ ರೂ ೩೦ ಸಂಬಳದ ಒಂದು ಜಾಗವು ಬೇಕಾಗಿತ್ತು ಅದಕ್ಕಾಗಿ ೨೬೪ ಅರ್ಜಿಗಳು, ಅರ್ಜದಾರರಲ್ಲಿ ೨೧ ಮಂದಿ ಪದವೀಧರರೂ ೪೬ ಮಂದಿ ಕಾಲೇಜ ಶಿಕ್ಷಣ ಪಡೆದವರೂ ಇದ್ದರು

⁂

ಲಖನೌ ರಾಷ್ಟ್ರೀಯ ಸಭೆಗಾಗಿ ಆಂಧ್ರ ದೇಶದ ಶ್ರೀ ಶ್ರೀಹರಿರಾವ, ವೆಂಕಟಸುಬ್ಬಯ್ಯಾ ಮತ್ತು ತಮಿಳುನಾಡಿನ ನಟರಾಜನ್‌ರವರು ನವೆಂಬರ ೬ನೇ ತಾರೀಖಿನ ಬೆಳಗಿನ ೪ ಘಂಟೆಗೆ ಪಾದಚಾರಿಗಳಾಗಿ ಬೇಝವಾಡಾದಿಂದ ಹೊರಡಲಿರುವರು

ಅಶ್ವಾರೂಢ ಕವಚ !

ವ್ಯಾಪಾರ, ಉದ್ಯೋಗಸಿದ್ಧಿ, ವ್ಯವಹಾರಜಯ, ಕರ್ಮಲಾಭ ಇತ್ಯಾದಿ ವಿಷಯಗಳಲ್ಲಿ ಪ್ರಯತ್ನಿಸಿ ನಿರಾಶರಾದವರಿಗೆ "ಅಶ್ವಾರೂಢ" ಯಂತ್ರವು "ಗುಡ-ಪರ್ವತದಲ್ಲಿ ಮಧು-ವೃಷ್ಟಿಯಂತೆ" ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು ೪ ಆಣೆ ಸ್ಟಾಂಪಿನ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರ ೧ಕ್ಕೆ ಬೆಲೆ ರೂ 20-0-0, ಬೆಳ್ಳಿಯ ಯಂತ್ರಕ್ಕೆ ರೂ 3-0-0, ತಾಮ್ರದ ಯಂತ್ರಕ್ಕೆ ರೂ 2-0-0

ಪತ್ತೆ - **ದೇವಿದಾಸ ಪಿ. ಕೆ. ಕೆ. ಎನ್.,**
ಜ್ಯೋತಿಷಿ, **ಕುಮಟಾ.** [ಉ ಕನ್ನಡ]

Siromani Udipi Narayanacharya,
CHAUKHAMBA, BENARES CITY.

ಮಾರಾಟಕ್ಕೆ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇರುಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಶಾರಿ ಸರ 32 ರ ಸರ 1ಕ್ಕೆ ರೂ. 0-8-0ಯಿಂದ ರೂ 100 ವರೆಗೆ ಗೌರಿಶಂಕರ 1ಕ್ಕೆ ರೂ 3-8-0 ರಿಂದ ೨೦ರವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0 ಸ್ಟಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ಪಟ ಮತ್ತು ಕೆಟಲಾಗು ಸಹ ಇನಾಮ ಕಳಿಸಲಾದೀತು

ಪತ್ತೆ - **ಶಿರೋಮಣಿ ನಾರಾಯಣಾಚಾರ್ಯ,**
ಚೌಖಾಂಬಾ, ಕಾಶೀ ಕ್ಷೇತ್ರ.

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು- ಸ್ವಾಸ್ಥ್ಯನಿಲಯ, ಧಾರವಾಡ.

ಡಾ|| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಕ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುತ್ತವಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅನುಕೂಲ ಲಾಭ ಹೊಂದಿರುವರು ಕ್ರಯ ರೂ ೧-೮-೦

ಅಶ್ವಗಂಧ ಟೊನಿಕ್ — ಮಜ್ಜಾ, ಸ್ನಾಯು ಸಂಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವುದ, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ತಕ್ಕಿಕ್ಕೆ ಇದು ದಿವ್ಯೌಷಧ ರೂ ೧-೨-೦

ಎಗ್ಯು ಮಿಕ್ಸ್ಚರ, ಫೀವರ ಡ್ರೊಪ್ಸ, ಅಮ್ಲ ಸುಧಾ, ಕರ್ಪೂರಾರ್ಕ, ಸಾಯರಿಸ್ ನಾಶಕ ಇವು ಪ್ರತಿಯೊಬ್ಬ ಸಂಸಾರಿಗಳು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ ! ಎಕ್ಕಾಗಟ್ಟಲೆ ಇವುಗಳ ಉಪಯೋಗವಾಗುವುದು. ಇವು ಅಮೂಲ್ಯ ಔಷಧಗಳು"

ಇದಲ್ಲದೆ **ಪ್ಲೇಗ ಪ್ರತಿಬಂಧ ವ ನಿವಾರಣೆಯ** ಬಗ್ಗೆ ಅನುಭವಸಿದ್ಧವಾದ **ಪ್ಲೇಗ ಕ್ಯೂರ, ಪ್ಲೇಗ ಸ್ಪೆಸಿಫಿಕ್** ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಡಲಿವರ ಔಲ್ ವೊಟರ ಇಸ್ಟ್ಯುರಸ್ ಕಸ್ಟಲ್ಸಿಲೆಕ್ಯೂ ಘಾಸ್ಫೇಟ, ಕ್ರಿಮಿಹರಬಿಂದು, ನೇತ್ರಬಿಂದು, ಕೇಶ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಣಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು -

ರಾ|| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ಓಂ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರಲ್ಲಿಯೂ ಹಾಗೂ ಎಲ್ಲಾ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಅವರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಹೋಗಲಾಡಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ಪಚನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ

ವಿಶೇಷವಾಗಿ ಹೆಂಗಸರಿಗೆ— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಒಂದೂ ಆಗದೆ ಮೊದಲಿನಂತೆ ಸದಾ ಆರೋಗ್ಯವತಿಯಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔನ್ಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬-೧೨—೦
,, ಬಾಟ್ಲಿ ೧೨ಕ್ಕೆ ರೂ ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಪಾಕ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ ಪಿಪ್ಪಲ್ಯಾಸವ, ಪುನರ್ನವಾಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ—

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ವೇದ ಧನ್ವಂತರಿ ಔಷಧಾಲಯ,
ಪೋಸ್ಟ — **ಕುಮಟಾ.** (ಉ. ಕನ್ನಡ)

HOUSE FOR SALE IN KUMTA.

A fine house sometime known as "Navjeevan Hall", at Nellekeri, Kumta is offered for sale—Nine large rooms and plenty of veranda space—stands in about 1/2 an acre of garden—outhouses, garage stables etc—Suitable as residence or for offices. Offers are invited. Apply Kalyanpurker on the premises or write to **Dr K. R Row, Haveri.** (M & S M Ry)

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ ಶರ್ತುಗಳೂ ಬಹಳ ಸೋವಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಕೆಳಕಂಡ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents
D K Nayak Bros
D S Pai
K N Nayak
Honavar Agent
R. V Prabhu Esq

K. Padmanabha Rao & Sons.
BELGAUM
Chief Agents for
Karnatak Districts & S M. State.

Established 1900

ಓಂ

FIXED RATE

ದಾಸಪ್ಪಾ ಕೃಷ್ಣಪ್ಪಾ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ [illegible] ಅಂಗಡಿ, ಶಿರ್ಸಿ

ನಮ್ಮಲ್ಲಿ ಚೀಟಿ [illegible] ಹೊಸ ನಮೂನೆಯ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳೂ, ಕೋಟಿನ ಮತ್ತು ಶರ್ಟಿನ ಸ್ಯಾಟಿನ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು ಜಬ್ಬೆ, ಟೊಪ್ಪಿಗಳೂ ಪೋತದ ಜೋಡುಗಳೂ, ರೇಶ್ಮೆ ಮಿಶ್ರದ ಮಡಿಗಳೂ, ನಾರಿನ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ಮತ್ತೆ ಎಲ್ಲ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸರಿಯಾದ ದರದಿಂದ ಸಿಗುವವು. ದೊಡ್ಡ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel - "Honesty"] **D K. DHAKAPPA BROS.,**

ಹೊಸ ಮಾಲು.

Cloth Merchants,
SIRSI N KANARA

ದರ ಅಗ್ಗ.

ಸುಲಭ ಕ್ರಯ! ಡಾಕ್ಟರ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು. ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಗುಣಕಾರವಾಗುವವಲ್ಲದೆ ಕಂಠಕ್ಕೆ ಸಂಬಂಧಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಪಡಿಸುತ್ತದೆ ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಿಸಿದ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ. ಪಿ. ಖರ್ಚು ಡಜನ್ ೧ಕ್ಕೆ ರೂ ೨-೮-೦ ವಿ. ಪಿ ೦-೨-೦

ದಯಮಾಡಿ ನಿಮ್ಮ ಹೆಸರನ್ನೂ, ಪತ್ತೆಯನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦ ಮಾರ್ಕೆಟ್, ಮದ್ರಾಸ

ಇದನ್ನು ಪಾಂಡುರಂಗ ಕೃಷ್ಣ ಧ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B 1270

Monday, 4th November, 1935

ವರ್ಷ ೧೮

ಕಾನಡಾವೃತ್ತ

THE KANARA NEWS.

ಸಂಚಿಕೆ ೧೮

ಪತ್ರದ ವರ್ಗಣಿ
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3 1-0.
ವ್ಹಿ. ಪಿ. ಅ-ಚವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರ್ಯಾಕ್ಯಾಪಿನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ 1-0-0
೮ ಸಂತ್ರ ಪ್ರತಿಸಾಲಿಗೆ 0-2-0
ಹತ್ತಿಂಗಳ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಪ್ರತ್ಯಕ್ಷ ತಿಳಿಸಲ್ಪಡುವದು.

—✤(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೪ ಮಾಹೆ ನವಂಬರ ಸನ್ ೧೯೩೫ನೇ ಇಸವಿ)✤—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ
ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ
ವಟಾಯಿಸಬರುತ್ತವೆ.

**ಅಂತು ದರಸಾಲ ಶೇಕಡಾ ೪-೬-೦
ರಂತೆ ಬಡ್ಡಿ ಸಿಗುತ್ತದೆ!**

ಆರಾರು ತಿಂಗಳಿಗೆ ದರಸಾಲ ಶೇಕಡಾ ೩॥ ರಂತೆ
ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ
ಶೇಕಡಾ ೧॥ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!
**ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ,
ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ
ರೂ. ೧೨೨ ೧೪-೬ ಆಗುತ್ತದೆ
ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.**

ಕೆನರಾ ಬ್ಯಾಂಕ
ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.
**ಈ ಕೆಳಗಿನ ನಗರಗಳಲ್ಲೂ ನಮ್ಮ
ಶಾಖೆಗಳಿವೆ:—**

ಮುಂಬಯಿ-ಕೋಟ, ಮುಂಬಯಿ-ಮಾಂಡವಿ
ಕಲ್ಲಿಕೋಟೆ ಕೊಚ್ಚಿ, ಎರ್ನಾಕುಳಮ್,
ಆಲಪ್ಪೆ, ಬೆಂಗಳೂರು, ದಾವಣಗೇರೆ, ಚಿಕ್ಕಮಗಳೂರು,
ಮಂಗಳೂರು-ಬಂದರ, ಮಂಗಳೂರು-ಶಹರ,
ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ,
ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ ಸಿಂಡಿಕೇಟ್, ಲಿಮಿಟೆಡ್, ಉಡುಪಿ.

ಶಾಖೆಗಳು.— ಉಡುಪಿ, ಬ್ರಹ್ಮಾವರ, ಹೊನ್ನಾವರ ಕುಂದಾಪುರ ಕುಮಟಾ, ಕಾರವಾರ ಶಿರ್ಸಿ, ಅಂಕೋಲಾ ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ ಕಲ್ಯಾಣಪೂರ, ಪಯ್ಯನೂರ, ಹಂಗಾರಕಟ್ಟ, ಬಟ್ಕಳ ಮತ್ತು ಕಾಂನ್ಯಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3-12 0, 7 8 0, 75 0-0 ಇವುಗಳಿಗೆ ಒಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವವು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6¼ರಷ್ಟು ಒಡ್ಡಿ ಸಿಗುವದು ಇವುಗಳನ್ನು ಮುದ್ದತ್ತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು.

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ - ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ
ರೂ 5, 5½, 6 ರಂತೆ ಬಡ್ಡಿ
ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ ಯಂತೆ
ಚಿನ್ನಾಭರಣಗಳ ಈಡಿನ ಮೇಲೆ ಒಳ್ಳೆಯ ರಿಯಾಯತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು
ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರೆ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

ಕುಮಟಾ,
ತಾ ೧೫-೭-೧೯೩೫

G. S. Nayak,
ಏಜಂಟ, ಕುಮಟಾ

ಬನ್ನಿರಿ! ॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ॥ ನೋಡಿರಿ!!

❀ ಉಡುಪಿ ಬ್ರಾಹ್ಮಣರ ❀

ದಿ ಮೊಡರ್ನ ಹಿಂದೂ ಹೋಟೆಲ್,
ಕುಮಟಾ. (ಉ ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ ಇತರ ಉಪಹಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೋಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಜಾಹೀರ ನೋಟೀಸು.

ಮಂಜನಾಥ ಗಣಪಯ್ಯ ಶೆಟ್ಟಿ, ಸಾ|| ಹೊಸಹೇರವಟ್ಟಾ ತಾಲೂಕ ಕುಮಟಾ ಈತನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ:-

ನನ್ನ ತಂದೆ ಗಣಪಯ್ಯ ಮಂಜಶೆಟ್ಟಿ, ಹೊಸಹೇರವಟ್ಟಿ ಶೆಟ್ಟಿ ತಾಲೂಕ ಕುಮಟಾ ಈತನು ಹೊಸಹೇರವಟ್ಟೆ ಗ್ರಾಮದೊಳಗಿನ ನಮ್ಮ ಪಿತ್ರಾರ್ಜಿತ ಆಸ್ತಿಯನ್ನು, ಈ ಉತ್ಪನ್ನದಿಂದ ನಂತರ ಮಿಣಕಿಯಲ್ಲಿ ಉಳಿದು ಸಂಪಾದಿಸಿದ ಆಸ್ತಿ, ನಮ್ಮ ಪಿತ್ರಾರ್ಜಿತ ಮನೆ-ಚರಗೊತ್ತಾಗ ನನ್ನ ಮುಂದಿನ ಆಸ್ತಿಯನ್ನು ಬೇರೆ ಪರ ವಾಜೋಬ್ಧನೆ ಒಪ್ಪಿಸಿ ಸ್ವಾಧೀನಪಡಿಸಿ ನನಗೆ ಹೊಸ ಪಾಲುದಾರನೆಂದು ಇರುತ್ತಾನೆ ಆಗಿ ತಿಳಿಯುತ್ತದೆ ಈತನು (ಪ್ರಥಮ ಹೆಂಡತಿಯಿಂದ) ನನ್ನ ಸೂಟಿನ ಮಗನಿದ್ದು ಈ ಆಸ್ತಿಗೆಲ್ಲಾ ಆಯದೆಯಂತೆ ನನಗೆ ಹಕ್ಕುದಾರನಾಗಿದ್ದು ತಂದೆಯ ಮೇಲಿನಂತೆ ಆಸ್ತಿ ಸೊತ್ತುಗಳನ್ನು ಕ್ರಯ-ಆಧಾರ ಮೂಲಗೇಣಿ ವಗೈರೆ ಮಾಡಿ ಪರಾಧೀನಪಡಿಸಿದ್ದಲ್ಲಿ ಅದು ಸಿಂಧುವಾಗಲಾರದೆಂತಲೂ, ಹಾಗೆ ಹಕ್ಕ ಬದ್ಧತೆ ಪಡೆದುಕೊಂಡವರು ವ್ಯಾಜ ನಷ್ಟಕ್ಕೆ ಗುರಿಯಾಗಬೇಕಾದೀತೆಂತಲೂ ಈ ಮೂಲಕ ಜಾಹೀರಪಡಿಸಿದ್ದೇನೆ ಸೂಚಿತವಿರಬೇಕು

ಕುಮಟಾ, ತಾ ೩೧-೧೦-೧೯೩೫

ಮಂಜನಾಥ ಗಣಪಯ್ಯ ಶೆಟ್ಟಿ.
ಹೊಸಹೇರವಟ್ಟಾ

ಅಲ್ಲಲ್ಲಿ ಇಷ್ಟಿಷ್ಟು!

ಮುಂಬಯಿ ಹೈಕೋರ್ಟ ಯಾನೆ ಮುಂಬಯಿ ಇಲಾಖೆಯೊಳಗಿನ ಮುಖ್ಯ ನ್ಯಾಯಸ್ಥಾನಕ್ಕೂ ನಾಗಪುರದ ಜುಡಿಶಿಯಲ ಕಮಿಶನರ ಯಾನೆ ಮಧ್ಯಪ್ರಾಂತದ ಮುಖ್ಯ ನ್ಯಾಯಸ್ಥಾನಕ್ಕೂ ಒಂದೆ ನ್ಯಾಯಪದ್ಧತಿ ಮುಂಬಯಿಯೊಳಗಿನ ವರ್ತಕರಿಗೂ ಬೆಂಕರುಗಳಿಗೂ, ಮಧ್ಯಪ್ರಾಂತದೊಳಗಿನ ವರ್ತಕರಿಗೂ ವ್ಯವಹಾರ ನಡೆಯು ಮಧ್ಯಪ್ರಾಂತದವರು ವ್ಯಾಪಾರದ ಅನುಕೂಲತೆಗಾಗಿ ತಮ್ಮ ಆಸ್ತಿಗಳ ಭದ್ರತೆ ಮಾಡಿಕೊಟ್ಟು ಮುಂಬಯಿ ವರ್ತಕರಿಂದ ಬೆಂಕರುಗಳಿಂದಲೂ ಸಾಲ ಪಡೆಯುತ್ತಾರೆ ಭದ್ರತೆ ಕೊಟ್ಟ ಸಾಲ ಮುಂಬಯಿಯಲ್ಲಿ ಆದದ್ದರಿಂದ ಈ ವ್ಯವಹಾರದ ನ್ಯಾಯನಿರ್ಣಯ ಮಾಡುವ ಅಧಿಕಾರ ಮುಂಬಯಿ ಹೈಕೋರ್ಟಿಗಿರುವದಾಗಿ ಗವರ್ನರು ತಪ್ಪಿಯಲ್ಲಿ ಕೋರ್ಟು ನಿರ್ಣಯಿಸಿತು. ನಾಗಪುರದ ಜುಡಿಶಿಯಲ್ ಕಮಿಶನರರ ಇಂಥ ಅಧಿಕಾರಕ್ಕಾಗಿ ಸಿಟ್ಟಾಗಿ ಮುಂಬಯಿ ಹೈಕೋರ್ಟಿನ ಹುಕುಮುಗಳನ್ನು ಪಾಲಿಸಲಿಕ್ಕೆ ಒಪ್ಪುವದಿಲ್ಲ ಕಾನೂನುಗಳ ಕ್ರಮವಂತೆ ಬ್ರಿಟಿಶ ನ್ಯಾಯಸ್ಥಾನಗಳಲ್ಲಿ ಪಡೆದ ಹುಕುಮುಗಳನ್ನು ಬ್ರಿಟಿಶ ನ್ಯಾಯಕೋರ್ಟುಗಳು ಮನ್ನಿಸಿ ಅವುಗಳಂತೆ ಸಂಬಂಧಪಟ್ಟವರ ಮೇಲೆ ವಸೂಲಿಯ ಕ್ರಮ ನಡಿಸಲಿಕ್ಕೆ ಬದ್ಧರಿವೆ. ನಾಗಪುರದ ಜುಡಿಶಿಯಲ್ ಕಮಿಶನರ ಕೋರ್ಟಿನವರು ಮುಂಬಯಿ ಹೈಕೋರ್ಟ ಮೇಲ್ಮಾಣಿಸಿದ ವ್ಯವಹಾರಗಳ ಸಂಬಂಧ ಪಡೆದ ಹುಕುಮುಗಳಂತೆ ವಸೂಲಿಯ ಕ್ರಮ ನಡಿಸಲು ನಿರಾಕರಿಸುತ್ತಾರೆ ಡಾಕ್ಟರರ ಜಗಳಾಟದಲ್ಲಿ ರೋಗಿಯು ಒಳಲುವಂತೆ, ಮುಂಬಯಿ-ನಾಗಪುರ ನ್ಯಾಯ ಕೋರ್ಟುಗಳ ನ್ಯಾಯದಲ್ಲಿ ಮುಂಬಯಿಯೊಳಗಿನ ವರ್ತಕರು ಸಂಕಟದಲ್ಲಿ ಬಿದ್ದಿದ್ದಾರೆ ಮಧ್ಯಪ್ರಾಂತದವರೊಡನೆ ಮಾಡಿದ ವ್ಯವಹಾರ ಸುಧಾರಿಸಿಕೊಳ್ಳಲಿಕ್ಕಾಗುವದಿಲ್ಲ ಇನ್ನು ವ್ಯವಹಾರ ಮಾಡಲಿಕ್ಕೆ ತಕ್ಕಷ್ಟು ಸ್ಥಿರತೆ ದೊರೆಯುವದಿಲ್ಲ ಮುಂಬಯಿಯೊಳಗಿನ ವರ್ತಕರು ಹಿಂದುಸ್ಥಾನ ಸರಕಾರದ ಕಡೆ ದೂರಿಕೊಂಡಿದ್ದಾರೆ ನಾಗಪುರದೊಳಗಿನ ಕೋರ್ಟು ಮುಂಬಯಿ ಕೋರ್ಟಿನ ಮೇಲಧಿಕಾರವುಳ್ಳ ನ್ಯಾಯಸ್ಥಾನವಲ್ಲ ಇವೆರಡೂ ಕೋರ್ಟುಗಳು ಸಮ್ರಾಟ್ ಪಂಚಮ ಜಾರ್ಜ ಭೂಪತಿಗಳ ಹಿಂದ ಸಾಮ್ರಾಜ್ಯದ ಬೇರೆ ಬೇರೆ ಭಾಗದಲ್ಲಿದ್ದು ಅವರವರ ಅಧಿಕಾರಕ್ಷೇತ್ರ ಪ್ರತ್ಯೇಕವಿದ್ದಾಗ್ಯೂ ಮುಂಬಯಿ ಹೈಕೋರ್ಟಿನ ನಿರ್ಣಯಗಳನ್ನು ನಡಿಸಲಿಕ್ಕೆ ನಾಗಪುರದ ಕೋರ್ಟು ಬದ್ಧವಿದೆ, ನಾಗಪುರ ಕೋರ್ಟಿನ ನಿರ್ಣಯಗಳನ್ನು ನಡಿಸಲಿಕ್ಕೆ ಮುಂಬಯಿ ಹೈಕೋರ್ಟ ಬದ್ಧವಿದೆ ಶಿಷ್ಟಾಚಾರದಂತೆಯೂ, ಕಾಯಿದೆಯಂತೆಯೂ ಇರಬೇಕಾದ-ಇರುವ ನಿರ್ಬಂಧನೆಗಳಿವು. ನ್ಯಾಯಕೋರ್ಟುಗಳು ನ್ಯಾಯ ಮಾಡಿಕೊಂಡಲ್ಲಿ ದೂರಿಕೊಳ್ಳುವದೆಲ್ಲಿ? ಹಿಂದುಸ್ಥಾನ ಸರಕಾರವು ಈ ವಿಷಯವನ್ನು ಪರಾಂಬರಿಸಿ ಯುಕ್ತ ಕಂಡ ಉಪಾಯಯೋಜನೆ ಮಾಡದಿದ್ದರೆ ಪರಪ್ರಾಂತದವರೊಡನೆ ವ್ಯವಹಾರ ನಡಿಸುವದು ಸಂಕಟವೇ ಸೈ!

_

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷದಗಳು!
ವೃದ್ಧಿಕಷಾಯ (ವಿತ್ತಪ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾಂಜನ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಹಾಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!
ಪ್ರಶಂಸಾ ಪತ್ರ.
ಉಡುಪಿ ತಾಲೂಕ ಕಟಪಾಡಿ ಶ್ರೀಯುತ್ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾವಕಾಶವಾಗಿ ನೋಡಿ ಬಹಳ ಆನಂದಪಟ್ಟೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗುಣಿಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಕ್ರಮವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗ ಪ್ರಕಾರ ಅನೇಕ ವನಸ್ಪತಿಗಳ ಪರೀಕ್ಷೆಯು ಇವರಿಗೆ ಇರುತ್ತದೆ ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಇವರಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸ್ಥೆವಹಿಸಿದರಾದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ
ಮೊಕ್ಕಾಂ, ಉಡುಪಿ ೧೦-೧೧-೧೯೩೪
ವಿದ್ವಾನ್ ಕೇ ಶೇಷಶಾಸ್ತ್ರಿ, ಪ್ರಧಾನ ಮಂತ್ರಿ
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಮುಂಬಯಿ ಹೈಕೋರ್ಟಿನ ವಿಷಯ ಉಲ್ಲೇಖಿಸುವಾಗ ಒಂದೆರಡು ಸಂಗತಿಗಳನ್ನು ನಮೂದಿಸಬೇಕಾಗಿದೆ. ಮುಂಬಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಸರ್ ಬೋಮಂಟರವರ ನ್ಯಾಯಪ್ರಿಯರು, ನಿರ್ವ್ಯಾಜಚಿತ್ತದವರು ಸರಕಾರದ ಪಕ್ಷಪಾತ ಹಿಡಿಯದೆ ನ್ಯಾಯಸ್ಥಾನದಲ್ಲಿ ನ್ಯಾಯದಾನ ಮಾಡುತ್ತಾರೆಂಬ ಸಂಗತಿಯು ಎಲ್ಲರಿಗೆ ವಿದಿತವಾದದ್ದೇ. ಇಂಥವರು ಅಹಮದನಗರ ಮತ್ತು ನಾಶಿಕ ಜಿಲ್ಹೆಗಳಲ್ಲಿ ಸಂಚರಿಸಹೋದಾಗ ಮಾನಪತ್ರಗಳಲ್ಲಿ ನ್ಯಾಯನಿಷ್ಠುರತೆಯನ್ನೇ ಕಾಪಾಡುವರೆಂದು ನಮ್ಮ ಎಣಿಕೆಯಿತ್ತು. ನಾಶಿಕ ಜಿಲ್ಹೆಯಲ್ಲಿ ವಕೀಲರ ಭೋಜನಸತ್ಕಾರವನ್ನು ಸ್ವೀಕರಿಸಿ ಅವರು ನುಡಿದದ್ದೇನೆಂದರೆ "ವಕೀಲರು ರಾಜಕಾರಣವನ್ನು ನ್ಯಾಯಸ್ಥಾನದ ಪ್ರಾಕಾರದಲ್ಲಿ ಸೇರಿಸಕೂಡದು. ನಾನು ಈ ಹಿಂದೆ ಇಲ್ಲಿ ಸಂಚರಿಸಬಂದಾಗ ಬಹಳ ಜನ ವಕೀಲರು ಗಾಂಧಿ ಟೊಪ್ಪಿಗೆಗಳನ್ನು ಧರಿಸುತ್ತಿದ್ದರು, ಈಗ ಅವು ಅಷ್ಟು ವಿಪುಲವಾಗಿ ಕಂಡುಬರುವದಿಲ್ಲ. ಇದನ್ನು ನೋಡಿ ನನಗೆ ಸಂತೋಷವಾಗಿದೆ. ವಕೀಲರು ಇದೇ ಪ್ರಕಾರ ಅಲಿಪ್ತರಾಗಿ ಗಾಂಧಿ ಟೊಪ್ಪಿಗೆಗಳನ್ನು ಧರಿಸದಂತೆ ಜಾಗ್ರತೆ ವಹಿಸಬೇಕು. ವಕೀಲರು ಪಕ್ಷಗಾರರಲ್ಲಿ ಕೂಡಿ ಹೋಗದಂತೆ ಅವರಿಗೆ ಪ್ರತ್ಯೇಕವಾದ ಉಡುಪು ಇರುವದು ಒಳ್ಳೇದು" ಹೀಗೆ ನ್ಯಾಯಮೂರ್ತಿಗಳು ಹೇಳಿ ಗಾಂಧಿ ಟೊಪ್ಪಿಗೆಗಳ ರಾಜಕಾರಣವನ್ನು ಚರ್ಚಿಸಿದರು. ಅದರ ಇದೇನು ದೊಡ್ಡ ಮಾತಲ್ಲ. ಗಾಂಧಿ ಟೊಪ್ಪಿಗೆಯ ರಾಜಕಾರಣಕ್ಕೆ ನ್ಯಾಯಸ್ಥಾನದಲ್ಲಿ ಪ್ರವೇಶವಿರಕೂಡದೆಂದು ಮುಖ್ಯ ನ್ಯಾಯಾಧೀಶರು ಅಭಿಪ್ರಾಯ ವ್ಯಕ್ತ ಮಾಡಿದ್ದು ಅಪ್ರಸಂಗಿಕವಲ್ಲವಾಗಿ ಹೇಳಬಹುದು. ಆದರೆ ಅಹಮದನಗರದಲ್ಲಿ ವಕೀಲರಿಗೆ ಕೊಟ್ಟ ಉಪದೇಶ ಹೇಗೆ ಸಮರ್ಥನೀಯವಾಗುತ್ತದೆಂದು ನಮಗೆ ತಿಳಿಯದು. ಬ್ರಿಟಿಶರು ಹಿಂದುಸ್ಥಾನಕ್ಕೆ ಕೊಡಮಾಡಿದ ರಾಜ್ಯಘಟನೆ ನಿಷ್ಪ್ರಯೋಜಕವೆಂದೂ, ಸ್ವಾತಂತ್ರ್ಯಾಪಹಾರಕವೆಂದೂ, ಲೋಕಕಂಟಕವೆಂದೂ ರಾಷ್ಟ್ರೀಯ ಸಭೆಯವರಂತು ತಿರಸ್ಕರಿಸುತ್ತಿದ್ದಾರೆ. ಅದನ್ನು ಸಂಪೂರ್ಣವಾಗಿ ಮುರಿದುಬಿಡಲಿಕ್ಕೆ ರಾಷ್ಟ್ರೀಯ ಸಭೆಯವರು ಬದ್ಧಕಂಕಣರಾದ ಸಂಗತಿ ಲೋಕವಿಶ್ರುತವಿದೆ. ಉದಾರಮತವಾದಿ ವಿಚಾರವಂತರು ಸಹ ಈ ರಾಜ್ಯಘಟನೆಯಿಂದ ಸ್ವರಾಜ್ಯಾಧಿಕಾರ ಪ್ರಾಪ್ತವಾಗುವದಿಲ್ಲವಾಗಿ ಖಂಡಿತ ಅಭಿಪ್ರಾಯಪಟ್ಟಿದ್ದಾರೆ. ಈ ರಾಜ್ಯಘಟನೆಯನ್ನು ಮನ್ನಿಸಿ ಹಿಂದೀ ಪ್ರಜೆಗಳು ನಡೆಯಬೇಕಾಗಿ ಒಂದು ರಾಜಕೀಯ ಪಕ್ಷದ ಆಗ್ರಹ, ಇದನ್ನು ಎಷ್ಟಕ್ಕೂ ಮನ್ನಿಸಬಾರದಾಗಿಯೂ ತಳನೋಸಿ ತಿರಸ್ಕರಿಸಬೇಕಾಗಿಯೂ ಇನ್ನೊಂದು ರಾಜಕೀಯ ಪಕ್ಷದ ಸ್ಪಷ್ಟಾಭಿಪ್ರಾಯ. ನ್ಯಾಯಮೂರ್ತಿ ಬೋಮಂಟರವರು, ರಾಜಕಾರಣದಲ್ಲಿ ವಕೀಲರು ಸೇರಬಾರದಾಗಿ ಸದುಪದೇಶ ಮಾಡುವ ಮಹನೀಯರು ಇಂಥ ಪ್ರಸಕ್ತಿಯಲ್ಲಿ ಅಲಿಪ್ತರಿರುವರೆಂದು ಎಲ್ಲರೂ ಎಣಿಸಿದ್ದರು. ಆದರೆ ಅಹಮದನಗರದಲ್ಲಿ ಇವರು ವಕೀಲರಿಗೆ ಮಾಡಿದ ಉಪದೇಶವೇ ಬೇರೆ. ಹೊಸ ರಾಜ್ಯಘಟನೆಯನ್ನು ಮನ್ನಿಸಿ ಅದಕ್ಕೆ ಅನುವು ಮಾಡಿಕೊಡುವಂತೆ ಜನರ ಮನವೊಲಿಸಲು ಸ್ಥಿತಿವಂತಿಕರಾದ ವಕೀಲರು ತಮ್ಮ ಲೋಕಪ್ರತಿಷ್ಠೆಯನ್ನು ವಿನಿಯೋಗಿಸಬೇಕಾಗಿ ಮುಖ್ಯ ನ್ಯಾಯಾಧೀಶರಾದ ಸರ್ ಬೋಮಂಟರವರು ವಕೀಲರಿಗೆ ಪ್ರೋತ್ಸಾಹಿಸುತ್ತಾರೆ. ನ್ಯಾಯಾಧೀಶರಿಗೆ ಈ ಪ್ರಕಾರ ಪಕ್ಷ ಹೊತ್ತುಕೊಂಡು ನಡೆಯುವದು ಭೂಷಣವಲ್ಲವಾಗಿ ಹೇಳಬೇಕಾಗಿಲ್ಲ. ಸ್ವತಃ ನ್ಯಾಯಮೂರ್ತಿ ಬೋಮಂಟರವರೇ ಈ ಸಂಗತಿಯನ್ನು ಒಪ್ಪಿಕೊಂಡಿದ್ದಾರೆ. ನ್ಯಾಯಮೂರ್ತಿ ಬೋಮಂಟರವರಿಗೆ ಹೊಸ ರಾಜ್ಯಘಟನೆಯ ವಿಷಯ ಅಷ್ಟೊಂದು ಮಮತೆಯಿದ್ದರೆ ಸರಕಾರವು ಇವರಿಗೆ ಹೊಸ ರಾಜ್ಯಘಟನೆಯ ಪ್ರಚಾರಕರನ್ನಾಗಿ ನೇಮಿಸಬಹುದು. ಸರಕಾರ ಪಕ್ಷವನ್ನು ಯಾ ಯಾವದೇ ಪಕ್ಷವನ್ನು ಯಾವದೇ ಪ್ರಸಂಗದಲ್ಲಿ ನ್ಯಾಯಾಧೀಶರು ಎತ್ತಿ ಹಿಡಿಯುವದು ನ್ಯಾಯದೇವಿಯ ಅಪಮಾನವಿದೆ. ಬ್ರಿಟಿಶ ನ್ಯಾಯದೇವಿಯಂತು ಲೋಕದೊಳಗೆ ನ್ಯಾಯನಿಷ್ಠುರತೆಯ ಬಗ್ಗೆ ಕೀರ್ತಿ ಪಡೆದಿದೆ. ಅಂಥ ಕೀರ್ತಿವಂತ ನ್ಯಾಯದೇವತೆಯ ಆಸ್ಥಾನವನ್ನು ಆಕ್ರಮಿಸಿಕೊಂಡ ಪುರುಷರು ಪಕ್ಷಪಾತಿಗಳಾಗಿ ವರ್ತಿಸಿದರೆ ಬ್ರಿಟಿಶ ನ್ಯಾಯದೇವತೆಯ ಬಗ್ಗೆ ಹಿಂದೀ ಪ್ರಜೆಗಳಲ್ಲಿರುವ ಭಕ್ತಿ ಕ್ಷೀಣವಾಗುವ ಸಂಭವವಿದೆ. ನೂತನ ರಾಜ್ಯಘಟನೆಯ ಚರ್ಚೆ ಕೂಲಂಕುಷವಾಗಿ ಸರ್ ಬೋಮಂಟರವರಿಗಿಂತ ವಿಶೇಷ ಅಧಿಕಾರವುಳ್ಳ ಪುರುಷರು ಚರ್ಚಿಸಿ ಆ ಯೋಜನೆ ನಿರರ್ಥಕವೆಂದೂ, ಬ್ರಿಟಿಶರು ರಾಜ್ಯಾಧಿಕಾರ ಅನುಗ್ರಹಿಸುವ ಬುದ್ಧಿಯಿಂದ ನಿರ್ಮಿಸಿದ್ದಲ್ಲವೆಂದೂ ಖಂಡಿತ ನಿರ್ಣಯ ಕೈಕೊಂಡಿದ್ದಾರೆ. ಅಂಥ ಘಟನೆಯನ್ನು ಪ್ರೋತ್ಸಾಹಿಸಲು ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾಗಲಿ, ಇವರಿಗಿಂತಲೂ ಮಿಗಿಲಾದ ಅಧಿಕಾರವುಳ್ಳ ಪ್ರಿವ್ಹಿ ಕೌನ್ಸಿಲಿನ ನ್ಯಾಯಸ್ಥಾನದವರಾಗಲಿ ಉಪದೇಶ ಮಾಡಿದಾಗ್ಯೂ ಅದರಿಂದ ಫಲಪ್ರಾಪ್ತಿಯಾಗು

THE AGRICULTURAL & INDUSTRIAL BANK, LIMITED.

(Incorporated in British India)

Head office:— COONDAPOOR   Branch:— KUMTA.

Telegrams.. "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು:— ಕುಂದಾಪುರ   ಬ್ರೇಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು - 3, 6, 12, 24 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ 3- 4½, 5½ 6, 6½ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೇರ ವರೆಗೆ ಸಾಲಿಯಾನ ಶೇಕಡಾ ರೂ 2½ ಮ ಜುಲೈಯಿಂದ ಡಿಸೆಂಬರ ಅಖೇರ ವರೆಗೆ 1½ರಂತೆ ಬಡ್ಡಿಯಿಂದ ಬಿನ್‌ಮಿಬಿನಿಸಿಂದ ಅಂಗೀಕರಿಸಲಾಗುವವು

ಸೇವಿಂಗ್ಸ ಬೇಂಕ ಠೇವು — ಶೇಕಡಾ ರೂ 4ರಂತೆ ಬಡ್ಡಿ. ಬಿನ್ ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು

ಕ್ಯುಮ್ಯುಲೆಟಿವ್ ಡಿಪೋಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ಮ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು

ದಾಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರದಿಂದ ಸಾಲಗಳೂ ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು

ಒಳ್ಳೇ ಮಾದರಿಯಾದ ಬೀಲುಗಳು, ದರ್ಶನಿಹುಂಡಿಗಳು, ಬಿಲ್ಲುಗಳು ವಸೂಲಿ ಪಟಾಯಿಸಲ್ಪಡುವವು

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು

ಬಡ್ಡಿ ದರಗಳು ವಗೈರ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು

ಸವಿಸ್ತರ ಮಾಹಿತಿ ಬಗ್ಗೆ ನಮ್ಮ ಮಾಹಿತಿ ಪುಸ್ತಕ (Rules of Business)ವನ್ನು ಪಢಿಯಿರಿ

ಕುಮಟಾ,
ತಾ 23—10—1935

K Vaman Shenai &
G Balakrishna S Nayak.
Managing Directors

ವಂತಿಲ್ಲ. ನ್ಯಾಯಮೂರ್ತಿಗಳ ಉಪದೇಶವನ್ನು ಸ್ವತಃ ಕೇಳಿಕೊಂಡ ವಕೀಲರು ಸಹ ನ್ಯಾಯಮೂರ್ತಿಗಳ ಪ್ರಚಾರ ಕೇಳಿ ಅಂತರಂಗದಲ್ಲಿಯೇ ಪರಿಹಾಸ್ಯ ಮಾಡಿರಬೇಕು. ನ್ಯಾಯಮೂರ್ತಿಗಳು ಹೀಗೆ ನಗೆಗೇಡಾದರೆ ನ್ಯಾಯಾಸನದ ಗೌರವಹಾನಿಯಾಗುತ್ತದಲ್ಲವೇ?

⁂

ನೂತನ ರಾಜ್ಯಘಟನೆಯ ಕುರಿತು ಒಂದು ಮಾತನ್ನು ಇಲ್ಲಿಯೇ ನಮೂದಿಸುವದುಚಿತ. ಬ್ರಿಟಿಶ ಪ್ರಧಾನರ ಸದ್ಧೇತುದರ್ಶಕವಿದ್ದುದರಿಂದ ರಾಜ್ಯಘಟನೆಯ ಪುರಸ್ಕರ್ತರಿಗೆ, ಪ್ರಚಾರಕರಿಗೆ ಇದರಿಂದ ಒಳ್ಳೇ ಅನುಕೂಲತೆಯಾಗುವಂತಿದೆ. ಇಂಗ್ಲಂಡ ದೇಶದೊಳಗೆ ಪಾರ್ಲಿಮೆಂಟಿನ ವಿಸರ್ಜನೆಯಾಗಿ ಇಲೆಕ್ಷನಿನ ಗಲಾಟೆ. ಇಟಾಲಿ-ಹಬಶಿ ವಾದದಿಂದ ಬ್ರಿಟಿಶ ಜನವೂ, ಯುರೋಪ್ಯ ರಾಷ್ಟ್ರಗಳೂ ವ್ಯಾಕುಲಗೊಂಡಿವೆ. ಆದರೆ ಇಂಥ ಸಂಕಷ್ಟಗಳಿಂದ ಹಿಂದುಸ್ಥಾನಕ್ಕೆ ಕೊಡಮಾಡಿದ ನೂತನ ರಾಜ್ಯಾಧಿಕಾರವನ್ನು ಸೆಳಕೊಳ್ಳುವ ವಿಚಾರವಿಲ್ಲವಾಗಿಯೂ ನೂತನ ರಾಜ್ಯಘಟನೆಯನ್ನು ಬ್ರಿಟಿಶ ರಾಜ್ಯಕರ್ತರು ಸಂಕಲ್ಪಿತ ಕಾರ್ಯಕ್ರಮದಂತೆ ಪ್ರಚುರಗೊಳಿಸುವರಾಗಿಯೂ ಮುಂಬಯಿಯ 'ಯುನೈಟೆಡ್ ಪ್ರೆಸ್'ನ ಸುದ್ದಿಗಾರರು ಪ್ರಕಟಿಸುತ್ತಾರೆ. ಇದರರ್ಥ ಸ್ಪಷ್ಟವಿದೆ. ಇಂಗ್ಲಂಡ ದೇಶದೊಳಗೆ ಪ್ರಧಾನ ಮಂಡಳದಲ್ಲಿ ಹೆಚ್ಚು-ಕಡಿಮೆಯಾದಾಗ್ಯೂ ಹಿಂದುಸ್ಥಾನಕ್ಕೆ ರಾಜ್ಯಾಧಿಕಾರ ಸಿಗದು. ಹಬಶಿ ದೇಶದ ಸ್ವಾತಂತ್ರ್ಯ ಪರಿಪಾಲನೆಗಾಗಿ ಬ್ರಿಟಿಶರು ಹೋರಾಡುತ್ತಿದ್ದಾಗ್ಯೂ ಹಿಂದೀ ಸ್ವಾತಂತ್ರ್ಯದ ಪುರಸ್ಕಾರ ಅವರಿಂದ ಈಗಿನ ಮನ್ವಂತರದಲ್ಲಿ ಸಹ ನಡೆಯದು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬಾರದೆಂಬುದರ ಕುರಿತು ಬ್ರಿಟಿಶ ದೇಶದೊಳಗೆ ಇಬ್ಬಣಗಳಿಲ್ಲ. ಹಬಶಿ ದೇಶದ ಸ್ವಾತಂತ್ರ್ಯ ರಕ್ಷಣ ಮಾಡುವ ಸ್ವಾತಂತ್ರ್ಯೋಪಾಸಕರೆಲ್ಲರೂ ಹಿಂದುಸ್ಥಾನದೊಳಗೆ ಪಾರತಂತ್ರ್ಯ ಕಾಪಾಡಬೇಕೆನ್ನುವವರೇ. ಬ್ರಿಟಿಶರ ಸ್ವಾರ್ಥಕ್ಕೆ ಸ್ವಾತಂತ್ರ್ಯದ ವೇದಾಂತ ಅನುಕೂಲವಿದ್ದರೆ ಸ್ವಾತಂತ್ರ್ಯದ ಪುರಸ್ಕಾರ; ಪಾರತಂತ್ರ್ಯ ಅನುಕೂಲವಿದ್ದರೆ ಸ್ವಾತಂತ್ರ್ಯದ ಜಪ ಮಾಡಿ ಸ್ವಾತಂತ್ರ್ಯಸಂಗ್ರಹಕ್ಕಾಗಿ ಪಾರತಂತ್ರ್ಯ ದಾನ! ಬ್ರಿಟಿಶ ರಾಜನೀತಿಯ ಕುಚೇಷ್ಟೆಗಳಿವು!! ಇಂಥ ಕಪಟ ನೀತಿಯನ್ನು ಹಿಂದೀಯರು ಬ್ರಿಟಿಶರ ಚಿರಪರಿಚಯದಿಂದ ಅರಿತುಕೊಂಡಾಗ ನೂತನ ರಾಜ್ಯಘಟನೆಯ ಪುರಸ್ಕಾರ ಕ್ರಮದಲ್ಲಿ ಸಿದ್ಧ ಪಡಿಸಾಗುವದೆಂದು 'ಯುನೈಟೆಡ್ ಪ್ರೆಸ್' ಪತ್ರಿಕೆಯ ಸುದ್ದಿಗಾರರು ಎಣಿಸಿದ ಬಗೆ ಹೇಗೆ?

⁂

ಬೆಳಗಾವಿಯ ಪ್ರೊ|| ಬಸವನಾಳರ ಮೇಲೆ ಅಕ್ಟೋಬರ ತಾ. ೨ನೇಗೆ ನಾಡಹಬ್ಬದ ಸಭೆಯ ಸಮಯ ಮರಾಠಾ ಜಾತಿಯ ಪುಂಡರಿಬ್ಬರು ನಡಿಸಿದ ಅತ್ಯಾಚಾರದ ಕುರಿತು ನಿಷೇಧ ಮಾಡಿದಷ್ಟು ಕಡಿಮೆ. ಪ್ರೊ|| ಬಸವನಾಳರು ಇತಿಹಾಸದ ಅಭ್ಯಾಸಿಗಳಿದ್ದು ಅವರೊಂದು ಕನ್ನಡ ಪ್ರಪಂಚ ಇತಿಹಾಸ ಬರೆದಿದ್ದಾರೆ. ಆ ಇತಿಹಾಸದೊಳಗೆ ಶಿವಾಜಿ ಮಹಾರಾಜರ ಪೂರ್ವಜರ ವಿಚಾರ ಮಾಡುವಾಗ ಸಂಶೋಧನದ ದೃಷ್ಟಿಯಿಂದ 'ಕೆಳದಿ ನೃಪವಿಜಯ' ಮತ್ತು 'ಶಿವತತ್ವರತ್ನಾಕರ' ಗ್ರಂಥಗಳೊಳಗಿನ ಉಲ್ಲೇಖಗಳನ್ನು ಅಡಿಟಿಪ್ಪಣೆಗಳಾಗಿ ಕೊಟ್ಟಿದ್ದಾರೆ. ಶಿವಾಜಿ ಮಹಾರಾಜರು ರಜಪೂತ ರಕ್ತದವರೆಂದು ಈ ಉಲ್ಲೇಖಗಳ ಅಭಿಪ್ರಾಯ. ಈ ಉಲ್ಲೇಖಗಳಿಂದ ಶಿವಾಜಿ ಮಹಾರಾಜರ ಅಪಮಾನವಾಯಿತೆಂದು ಪುಣೆಯ 'ಕೇಸರಿ', 'ಜ್ಞಾನಪ್ರಕಾಶ', 'ತ್ರಿಕಾಳ', ಮುಂಬಯಿಯ 'ನವಾಕಾಳ' ಮೊದಲಾದ ಪತ್ರಿಕೆಗಳಲ್ಲಿ ಉಗ್ರವಾದ ಟೀಕೆಯಾಗುತ್ತಿತ್ತು. ಬೆಳಗಾವಿಯೊಳಗಿನ ಪುಂಡರು ಪ್ರೊ|| ಬಸವನಾಳರವರನ್ನು ಹೊಂಚುಹಾಕಿ ಕೊಲ್ಲುವ ಒಳಸಂಚು ಮಾಡಿದ್ದರಂತೆ. ಪ್ರೊ|| ಬಸವನಾಳರು ಅಷ್ಟೇನು ಅಪರಾಧ ಮಾಡಿಲ್ಲ. ಶಿವಾಜಿ ಮಹಾರಾಜರ ವಿಷಯ ಅವರು ಒಳ್ಳೇ ಆದರಬುದ್ಧಿಯುಳ್ಳವರಾಗಿದ್ದಾರೆ. ಇತಿಹಾಸ ಸಂಶೋಧನವೃತ್ತಿಯಿಂದ ಅವರು ಆ ಉಲ್ಲೇಖಗಳನ್ನು ಕೊಟ್ಟಿದ್ದರು. ಅಂಥ ಉಲ್ಲೇಖಗಳಿಂದ ಶಿವಾಜಿ ಮಹಾರಾಜರ ಕೀರ್ತಿಗೆ ಎಂದೂ ಕಳಂಕ ತಗಲುವಂತಿಲ್ಲ. ಮೇಲಾಗಿ ಈ ಗ್ರಂಥಗಳನ್ನು ಪ್ರೊ|| ಬಸವನಾಳರು ಪ್ರಕಟಿಸಲಿಲ್ಲ. 'ಕೆಳದಿ ನೃಪವಿಜಯ'ವನ್ನು ಬರೆದವನು ಲಿಂಗಣ್ಣನೆಂಬ ಕವಿ. ಅದನ್ನು ಪ್ರಕಟಿಸಿದವರು ಮೈಸೂರ ವಿಶ್ವವಿದ್ಯಾಲಯದವರು. 'ಶಿವತತ್ವ ರತ್ನಾಕರ' ಎಂಬ ಗ್ರಂಥವನ್ನು ಬರೆದವರು ರಾ|| ಬ|| ಎಚ್. ಕೃಷ್ಣಶಾಸ್ತ್ರಿಗಳವರು. ಅದನ್ನು ಪ್ರಕಟಿಸಿದವರು ಮದ್ರಾಸ ಸರಕಾರದ ಕನ್ನಡ ಭಾಷಾಂತರ ಅಧಿಕಾರಿಗಳಾದ ಶ್ರೀ|| ಬಿ. ರಾಮರಾಯರವರು. ಇಂಥ ಗ್ರಂಥಾಧಾರಗಳನ್ನು ಅಡಿ ಟಿಪ್ಪಣೆಗಳ ರೂಪದಿಂದ ಸಹ ಕೊಟ್ಟಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಧವಲ ಕೀರ್ತಿಗೆ ಕಲಂಕ ತಗಲುತ್ತದಾದರೆ ಪುಂಡರಿಗೆ ಶ್ರೀ ಶಿವಾಜಿ ಮಹಾರಾಜರ ಕೀರ್ತಿಯ ಕಾರಣವಾಗಲಿ, ಅವರು ನಡಿಸಿದ ಹಿಂದು ಧರ್ಮದ ಸೇವೆಯಾಗಲಿ ಗೊತ್ತಿಲ್ಲವೆಂದೇ ಎಣಿಸಬೇಕು. ಪ್ರೊ|| ಬಸವನಾಳರವರು ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರಿಗೆ ಅಪಮಾನಗೊಳಿಸುವದಕ್ಕಾಗಿ ಈ ಉಲ್ಲೇಖಗಳನ್ನು ಮಾಡಿಲ್ಲ. ತಮ್ಮ ಅಭಿಪ್ರಾಯ ಬೇರೆ ಇದ್ದಾಗ್ಯೂ, 'ಕೆಳದಿ ನೃಪವಿಜಯ' ಮತ್ತು 'ಶಿವತತ್ವ ರತ್ನಾಕರ' ಗ್ರಂಥಕರ್ತರ ಅಭಿಪ್ರಾಯಗಳನ್ನು ಅಭ್ಯಾಸಿಗಳು ತಿಳಕೊಂಡಿರಬೇಕೆಂದು ಆ ಅಡಿ ಟಿಪ್ಪಣೆಗಳನ್ನು ಅವರು ಜೋಡಿಸಿದ್ದರು. ಮರಾಠಿ ಪತ್ರಿಕೆಗಳಲ್ಲಿ ಟೀಕೆಯಾಗಲು, ಆ ಟಿಪ್ಪಣೆಗಳನ್ನು ಹೊಸ ಆವೃತ್ತಿಯಲ್ಲಿ ಲೋಪ ಮಾಡುವ ಅಭಿವಚನ ಕೊಟ್ಟು ಅದರಂತೆ ಹೊಸ ಆವೃತ್ತಿಯ ಮುದ್ರಣ ಸಹ ನಡೆದಿದೆ. ಇಷ್ಟಾಗಿ ಈ ಪುಸ್ತಕ ಪ್ರಕಟಿಸಿದ್ದು ಇದೇ ಮೊದಲಲ್ಲ. ೧೯೩೦ನೇ ಇಸ್ವಿಯಲ್ಲಿ ಈ ಗ್ರಂಥ ಮೊಟ್ಟ ಮೊದಲು ಪ್ರಕಟವಾಯಿತು. ಈಗ ತಯಾರಾಗಲಿಕ್ಕಿದ್ದುದು ೪ನೇ ಆವೃತ್ತಿ. ಪ್ರಕ್ಷೋಭಕ್ಕೆ ಯಾವದೇ ಕಾರಣವಿಲ್ಲದೆ ಪುಂಡರಿಬ್ಬರು ಅಕ್ಟೋಬರ ತಾ. ೨ನೇ ಬುಧವಾರ ರಾತ್ರಿ ನವರಾತ್ರಿಯ ಪ್ರೀತ್ಯರ್ಥ ನಡೆದ ಸಭಾಕಾರ್ಯವನ್ನು ಮುಗಿಸಿ ಹೊರಬರುವಾಗ ಇಬ್ಬರು ಹಿಂಬದಿಯಿಂದ ಬಂದು ಅವರಿಗೆ ಬೆನ್ನ ಮೇಲೆ ತೀಕ್ಷ್ಣ ಶಸ್ತ್ರಪ್ರಹಾರ ಮಾಡಿದರು. ಸುದೈವದಿಂದ ಪ್ರೊ|| ಬಸವನಾಳರ ಉಡುಪು ಹರಿದು ಹೋಯಿತು; ಹೊರತು ಮೈಗೆ ಪೆಟ್ಟಾಗಲಿಲ್ಲ. ಇಂಥ ನರಹೇಡಿ ಅತ್ಯಾಚಾರಗಳನ್ನು ನಡಿಸುವದು ಯಾರಿಗೂ ಶೋಭಿಸದು. ಶ್ರೀ ಛತ್ರಪತಿ ಶಿವಾಜಿ ಮಹಾರಾಜರಂಥ ಸತ್ಪುರುಷರ, ಸನಾತನ ಧರ್ಮಾಭಿಮಾನಿಗಳ, ದೇಶೋದ್ಧಾರಕರ, ಸ್ವರಾಜ್ಯ ಸಂಸ್ಥಾಪಕರ ಅಭಿಮಾನಿಗಳೆಂದು ಹೇಳಿಕೊಳ್ಳುವ ಮರಾಠರಿಗಂತು ತೀರ ನಿಂದ್ಯವಾದದ್ದು; ಹೇಯವಾದದ್ದು. ಶಿವಾಜಿ ಮಹಾರಾಜರ ಅಭಿಮಾನಿಗಳಲ್ಲಿ ಇಷ್ಟು ಅವಿಚಾರಿ ಮೂರ್ಖರುಗಳಿರುವದೇ ಶಿವಾಜಿ ಮಹಾರಾಜರ ಹೆಸರಿಗೆ ಬಹು ದೊಡ್ಡ ಕಲಂಕ! ಪುಂಡರಿಗೆ ಈ ವಿಚಾರ ಹೊಳೆಯದಿದ್ದದ್ದು ಶೋಚನೀಯ. ಇಂಥ ಪ್ರಕಾರಗಳು ರೂಢವಾದಲ್ಲಿ, ಪ್ರೋತ್ಸಾಹಿಸಲ್ಪಟ್ಟಲ್ಲಿ ವಿಚಾರ ಸ್ವಾತಂತ್ರ್ಯವೆಲ್ಲಿ ಉಳಿಯಿತು? ಪುಂಡರ ಅವಿಚಾರದಂತೆ ಪ್ರೊ|| ಬಸವನಾಳರು ಶಸ್ತ್ರಪ್ರಹಾರಕ್ಕೆ ತುತ್ತಾಗಿದ್ದರೆ ಎಷ್ಟೊಂದು ಅನರ್ಥವೊದಗುತ್ತಿತ್ತು? ಪ್ರೊ||

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ!!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ವರುಷಾ ದರ ಶೇಕಡಾ ರೂಪಾಯಿ ೭ರಂತೆ ಬಡ್ಡಿಯಿದೆ. ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಶ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ:— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

ಪ್ರೊ|| ಬಸವನಾಳರವರು ಕುತ್ತಿನಿಂದ ಪಾರಾದ ಬಗ್ಗೆ ನಾವು ಅವರಿಗೆ ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಪುಂಡರಾಗಲಿ, ಯಾರೇ ಆಗಲಿ ವಿವೇಕಹೀನರಾಗಿ, ದುರ್ಬಲಮನಸ್ಕರಾಗಿ ಅತ್ಯಾಚಾರಗಳಿಗೀಡಾಗಬಾರದು. ಅದರಿಂದ ಇಹ-ಪರ ಶ್ರೇಯಸ್ಸಿಲ್ಲ.

⁂

ಸೋಂದಾ ಯಾನೆ ಸ್ವಾದಿ ಅರಸರ ವಂಶಜರೊಬ್ಬರ ಕೊಲೆಯಾದ ಸಂಗತಿ ಈ ಹಿಂದೆಯೇ ಪ್ರಕಟವಾಗಿದೆ. ಈ ಕುರಿತು ಕೆಲ ಸಂಗತಿಗಳನ್ನು ತಿಳಿಕೊಳ್ಳುವದವಶ್ಯ. ಸ್ವಾದಿ ರಾಜರ ಹೆಸರನ್ನು ನಮ್ಮೀ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಳದವರು ವಿರಳರು. ಈ ಸಂಸ್ಥಾನದ ಮೂಲ ಪುರುಷರು ವೆಂಕಟಪತಿ ರಾಜೇಂದ್ರರು. ಸುಮಾರು ಕ್ರಿ. ಶ. ೧೫೦೬ರಲ್ಲಿ ಸ್ವಾದಿ ರಾಜ್ಯಸ್ಥಾಪನೆಯಾಯಿತು. ಸ್ವಾದಿ ಪಟ್ಟಣವೇ ಈ ರಾಜ್ಯದ ರಾಜಧಾನಿ. ಸನ್ ೧೬೭೪ರಲ್ಲಿ ಸದಾಶಿವರಾಯರು ಈ ರಾಜ್ಯವನ್ನಾಳುತ್ತಿದ್ದರು. ಅಂತ್ರುಜ, ಕಾಣಕೋಣ, ಪಾಡ್ಡೆ, ಮುಳೆ, ತಲಾವಡೆ ಹೀಗೆ ಪಂಚಮಹಾಲ ಪ್ರದೇಶಗಳು ಸದಾಶಿವರಾಯರಿಗೆ ಮೋಗಲ್ ಬಾದಶಹರಿಂದ ಪಾರಿತೋಷಕವಾಗಿ ದೊರೆತವು. ಮುಂದೆ ಪೋರ್ತುಗೀಜರಿಗೂ ಈ ಮನೆತನಕ್ಕೂ ಒಳ್ಳೇ ಸ್ನೇಹವುಂಟಾಯಿತು. ಹೈದರಲ್ಲಿಯು ಇವರ ರಾಜ್ಯ ಪಡಕೊಂಡ ಬಳಿಕ ಪೋರ್ತುಗೀಜ ಸರಕಾರದ ಕಡೆಯಿಂದ ಬಾಂದಿವಡೆ ಗ್ರಾಮವನ್ನು ಪಡೆದು ಅಲ್ಲಿಯೇ ಉಳಿಯಲಾರಂಭಿಸಿದರು. ಈಗ ಸುಮಾರು ೧೭೮ ವರುಷಗಳಾದವು. ಬಾಂದಿವಡೆಯೊಳಗಿನ ಶ್ರೀ ನಾಗೇಶೀ ದೇವಸ್ಥಾನದ ಎಡ ಪಾರ್ಶ್ವದಲ್ಲಿ ವಿಶಾಲವಾದ, ಭವ್ಯವಾದ ಅರಮನೆಯಿದೆ. ಪೋರ್ತುಗೀಜ ಸರಕಾರದಿಂದ ಈ ವಂಶಜರಿಗೆ ಒಳ್ಳೇ ಮರ್ಯಾದೆಯಿಂದಲೂ ಪ್ರೇಮದಿಂದಲೂ ಈಗಲೂ ನಡಿಸಿಕೊಳ್ಳಲ್ಪಡುತ್ತದೆ. ಕೊಲೆಯಾದ ವಾರ್ತೆ ಕೇಳಿ ಸರಕಾರಿ ಅಧಿಕಾರಿಗಳು ಬಹಳೇ ವ್ಯಸನಪಟ್ಟರು. ಕೊಲೆಯಾದ ಶ್ರೀ ಬಸವಲಿಂಗ ಒಡೆಯರರವರು ಸರಳ ಸ್ವಭಾವದವರು, ಸಾತ್ವಿಕರು, ಧಾರ್ಮಿಕರು. ಇವರಿಗೆ ಕಾಣಕೋಣ ಮೊದಲಾದ ಮಹಾಲುಗಳಲ್ಲಿ ಭೂಮಿಯ ಉತ್ಪತ್ತಿಯಿದೆ, ಸಾವಿರಾರು ರೂಪಾಯಿ ವರ್ಷಾಸನ ಸಿಗುತ್ತದೆ. ಆದಾಗ್ಯೂ ಅವರು ಅವನ್ನೆಲ್ಲ ತೊರೆದು ಮನೆತನ ಮರ್ಯಾದೆಯಿಂದ ನಡೆಯಲೆಂದು ತಾವೇ ಫೋಂಡಾ ಗ್ರಾಮದಲ್ಲಿ ಪ್ರತ್ಯೇಕವಾಗಿದ್ದರು. ರಾಜವೈಭವವನ್ನೆಲ್ಲ ತೊರೆದು ಸಾಮಾನ್ಯ ಜನರಂತೆ ಅವರು ಸಂತೋಷದಿಂದ ಊಟ-ಉಡಿಗೆ ನಡಿಸುತ್ತಿದ್ದರು. "ಶ್ರೀ ರಾಮ ದೇವರು ವನವಾಸದ ಕಷ್ಟಗಳನ್ನನುಭವಿಸಿದ್ದಾನೆ. ನಾನು ಆತನಿಗಿಂತ ದೊಡ್ಡವನಲ್ಲ; ಆತನಿಗಿಂತ ಹೆಚ್ಚಿನ ಕಷ್ಟಗಳನ್ನೂ ಅನುಭವಿಸುವದಿಲ್ಲ." ಹೀಗವರು ಆಸ್ತಿಕರ ಬಳಿ ಕೊರಗಿ ನುಡಿಯುತ್ತಿದ್ದರಂತೆ. ಒಳ್ಳೇ ಸಾಹಸಿಗರು. ಬೇಟೆಯ ನಾದ ವಿಶೇಷ. ಹುಲಿಯ ಬೇಟೆಯಾಡುವ ನಮೂನೆ ಅಪ್ರತಿಮವಾದದ್ದು. ಮಲಗಿದ ಹುಲಿಗೆ ಸುಳುವು ಕೊಡದೆ ಗುಂಡು ಹಾಕಿ ಕೊಲ್ಲುವ ಬೇಟೆಗಾರರು ಇವರಲ್ಲ! ಹುಲಿಗೆ ಕುರಿ-ದನ ಮೊದಲಾದ ಮೃಗಳನ್ನು ಕಟ್ಟಿ ದೂರ ಮರದ ಮೇಲೆ ಗಟ್ಟಿ ಕೂತು ಥಕ್ಕನೆ ಗುಂಡು ಹಾರಿಸಿ ಹುಲಿಗೆ ಯುಕ್ತಿಯಿಂದ ಕೊಲ್ಲುವ ಬೇಟೆಗಾರರೂ ಇವರಲ್ಲ!! ಪ್ರತ್ಯಕ್ಷ ಮಲಗಿದ ಹುಲಿಗೆ ಎಚ್ಚರಿಸಿ ಸನ್ಮುಖದಲ್ಲಿ ನಿಂತು ಗುಂಡು ಹಾಕಿ ಕೊಲ್ಲುವ ವೀರಶ್ರೀಭರಿತ ಸಾಹಸಿಗರಿವರು!!! ಹಾಗೆಯೇ ಧರ್ಮಿಷ್ಠರಿವರು! ವೀರಶೈವ ಧರ್ಮದ ಮುಖ್ಯ ಅಧಿದೇವತೆಯಾದ ಬಸವ ದೇವರ ಮೇಲೆ ಇವರಿಗೆ [illegible] ಭಕ್ತಿ. ಗೋಮಾಂತಕದೊಳಗಿನ ದೇವಾಲಯಗಳಲ್ಲಿ ಬಸವ ದೇವರ ಅಲಂಕಾರಕ್ಕೆ ಅವಶ್ಯವುಳ್ಳ ಜರತಾರಿ ಉಡುಪನ್ನು ಇವರು ಕಳಿಸು

(೧೦ನೇ ಪಾನು ನೋಡಿರಿ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!
ಸಮರ್ಪಕ ಆಡಳಿತದಿಂದ, ಕಡಿಮೆಯಾದ, ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ
ಮಂಗಳೂರಿನ
ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್
ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯುನ್ನಿಳಿಸಿ.
ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.
ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ
ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.
ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!
ಅವರಿಗೆ ವಿಪುಲವಾದ —— ಸೌಕರ್ಯಗಳಿವೆ.
ಯಥೋಚಿತವಾದ —— ಪುರಸ್ಕಾರಗಳಿವೆ.
ತಪ್ಪದೆ ವ್ಯವಹಾರ ಬೆಳೆಸಿರಿ.
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು:— ಮೆಸರ್ಸ್ ಜೀವನ ಏಜನ್ಸಿ, ಕಾರವಾರ.
ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:— ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಭೂಮಧ್ಯಸಮುದ್ರದೊಳಗೆ!

[ನಿರೀಕ್ಷಕನು ಬರೆದುದು.]

ಹಬಸಿ ಯುದ್ಧದ ಸಮಾಲೋಚನೆಯಲ್ಲಿ ಭೂಮಧ್ಯ ಸಮುದ್ರದ ಉಲ್ಲೇಖವೇಕೆಂದು ನನಗೆ ಯಾರೂ ಕೇಳುವರು ಆದರೆ ಬ್ರಿಟಿಶರಿಗೆ ಮುಖ್ಯವಾಗಿ ಉಪದ್ರವ ಕೊಡುವದು ಭೂಮಧ್ಯ ಸಮುದ್ರದ ರಾಜಕಾರಣವೇ. ಭೂಮಧ್ಯ ಸಮುದ್ರವು ಸಂಪೂರ್ಣವಾಗಿ ಬ್ರಿಟಿಶರ ಸ್ವಾಧೀನವಿದ್ದರೆ ಬ್ರಿಟಿಶರು ಲೋಕದೊಳಗೆ ಸಾಮ್ರಾಜ್ಯಕರ್ತರೆಂದು ಮೆರೆಯಸಮರ್ಥರು. ಇಲ್ಲವಿದ್ದರೆ ಸಾಮ್ರಾಜ್ಯದ ನಾಶ ಇಳಿಯಿತೆಂದು ತಿಳಿಯುವದು. ಪಾರ್ಲಿಮೆಂಟಿನ ಸಭೆಯಲ್ಲಿ ಮಿ| ಚರ್ಚಿಲ್‌ರವರು ಈ ಸಂಗತಿಯನ್ನು ಉಲ್ಲೇಖಿಸಿ ಬ್ರಿಟಿಶ ಸರಕಾರವು ಭೂಮಧ್ಯ ಸಮುದ್ರವನ್ನು ಭದ್ರಪಡಿಸಲು ವಿಶ್ವಪ್ರಯತ್ನ ನಡಿಸತಕ್ಕದ್ದಾಗಿ ಆವೇಶಗೊಂಡು ನುಡಿದರು. ಇದಕ್ಕಾಗಿಯೇ ಫ್ರೆಂಚ ಪ್ರಧಾನರಾದ ಲಾವಲ್‌ರವರು ಮಧ್ಯಸ್ಥಿಕೆ ಮಾಡಿ ಇಟಾಲಿಯ ವಸಾಹತದ ಲಿಬಿಯಾ ದೇಶದೊಳಗಿಂದ ಸೈನ್ಯಪಥಕವೊಂದನ್ನು ಹಿಂಗರೆದು ಕೊಂಡಿದ್ದು. ಆದಾಗ್ಯೂ ಬ್ರಿಟಿಶರು ತಮ್ಮ ಹಡಗುಪಡೆಗಳನ್ನು ಭೂಮಧ್ಯಸಮುದ್ರದೊಳಗಿಂದ ಹಿಂಗರೆದುಕೊಳ್ಳಲೊಪ್ಪುವದಿಲ್ಲ. "ಲಿಬಿಯಾ ದೇಶದಲ್ಲಿ ಇನ್ನೂ ಹೆಚ್ಚಿನ ಸೈನ್ಯಸಂಗ್ರಹವಿದೆ." ಎಂಬದಾಗಿ ಬ್ರಿಟಿಶ ಪ್ರಧಾನರ ಸಾಧನೆ. ಕಳೆದ ಮಂಗಳವಾರ ರೋಮ ಪಟ್ಟಣದೊಳಗಿನ ಬ್ರಿಟಿಶ ರಾಯಭಾರಿಗಳಾದ ಸರ್ ಎರಿಕ್ ಡ್ರಮಂಡರವರಿಗೂ, ಮುಸೋಲಿನಿಯವರಿಗೂ ಅಂತರಂಗದಿಂದ ಸಂಭಾಷಣೆ ನಡೆಯಿತು. ಇಟಾಲಿ-ಹಬಸಿ ದೇಶಗಳೊಳಗಿನ ಮನಸ್ಸು ಸುಧಾರಿಸಿದನಕ ಭೂಮಧ್ಯಸಮುದ್ರದೊಳಗಿಂದ ಹಡಗುಪಡೆಗಳನ್ನು ನಾವು ಎಷ್ಟಕ್ಕೂ ಹಿಂಗರೆದುಕೊಳ್ಳಲಾರೆವೆಂದು ಅವರು ಖಂಡಿತ ಹೇಳಿದರು. ಇಟಾಲಿ-ಬ್ರಿಟಿಶ ದೇಶಗಳೊಳಗೆ ನಡಿಸಿದ ಲಾವಲ್‌ರವರ ಮಧ್ಯಸ್ಥಿಕೆ ನಿರರ್ಥಕವಾಯಿತು. ಮುಸೋಲಿನಿಯವರ ಪ್ರತಿನಿಧಿಗಳಾದ ಸಿನೋರ್ ಗ್ಯಾಡಾರವರು 'ಗೊರ್ನಾಲ ಡಿ ಇಟಾಲಿಯಾ' ಪತ್ರಿಕೆಯಲ್ಲಿ ಮಧ್ಯಸ್ಥಿಕೆ ಅಸಾಧ್ಯವೆಂದು ಸ್ಪಷ್ಟವಾಗಿ ಒರೆದಿದ್ದಾರೆ. "ಬ್ರಿಟಿಶರೂ ಫ್ರೆಂಚರೂ ಇಟಾಲಿಗೆ ಮಹಾಯುದ್ಧದಲ್ಲಿ ಸೇರಿಸಿಕೊಂಡು ತಮ್ಮ ಲಾಭ ಪಡೆದರು; ಇಟಾಲಿಗೆ ಲಾಭವಾಗುವಾಗ ಅಡ್ಡನಿಂತರು. ಈಗಲೇ ಅದೇ ಹಾಡು. ಇಟಾಲಿಯು ಇವರ ಗೆಳೆತನದ ಗೋಜಿಗೆ ಹೋಗದೆ ತನ್ನ ಹಿತ ನೋಡಿ ನಡಕೊಳ್ಳತಕ್ಕದ್ದು." ಆದಾಗ್ಯೂ ಜಿನೇವಾದಲ್ಲಿ ಶುಕ್ರವಾರ ೧ನೇ ತಾರೀಖಿಗೆ ಬ್ರಿಟಿಶ-ಫ್ರೆಂಚ-ಇಟಾಲಿ ರಾಯಭಾರಿಗಳಾದ ಈಡನ್-ಲಾವಲ್-ಎಲೋಸಿಗಳವರ ಸಂಭಾಷಣೆಯಾಯಿತು. ಮಧ್ಯಸ್ಥಿಕೆಯ ವಿಚಾರವನ್ನೇ ಅವರು ನಡಿಸಿದರಂತೆ. ಇದರಿಂದ ಕಲಹ ಕಾರಣ ಬಗೆಹರಿಯುವಾಗಿ ಬ್ರಿಟಿಶರ ಅಭಿಪ್ರಾಯವಾಗಿರುವದೆಂದು ಸುದ್ದಿಗಾರರ ಅಂಬೋಣ. ಇಟಾಲಿ-ಬ್ರಿಟಿಶರೊಳಗೆ ಯುದ್ಧವಾಗಲೇಬೇಕಾಗಿಯೂ, ಬ್ರಿಟಿಶರು ಯುದ್ಧವನ್ನೇ ಹಾರೈಸುತ್ತಾರಾಗಿಯೂ ಬರ್ಲಿನ್‌ದೊಳಗಿನ 'ಬರ್ಲಿನರ ತೇಜಬ್ಲೆಟ್' ಪತ್ರಿಕೆಯ ಸಂಪಾದಕರಾದ ಹರ್ ಫೋಲರೆಫ್‌ರವರು ಸ್ವದೇಶಸ್ಫೂರ್ತಿನಿಂದ ಲೇಖ ಬರೆಯುತ್ತಾರೆ. "ಭೂಮಧ್ಯಸಮುದ್ರದ ಸ್ವಾಮಿತ್ವದ ಕುರಿತು ಇಟಾಲಿ-ಬ್ರಿಟನ್ ದೇಶಗಳೊಳಗೆ ಒಪ್ಪಂದವಾಗುವದು ದುರಾಪಾಸ್ತ ಮಾತು. ಇಬ್ಬರಿಗೂ ಭೂಮಧ್ಯಸಮುದ್ರದ ಪಾರುಪತ್ಯ ಬೇಕಾಗಿದೆ. ಪ್ರಸಂಗದಲ್ಲಿ ಇಟಾಲಿಯನವರು ಹೋರಾಡಲಿಕ್ಕೂ ಸಿದ್ಧರೇ. ಬ್ರಿಟಿಶರು ಲೋಕಶಾಂತಿಯ ಪಾಲನೆಗಾಗಿ ಸೈನ್ಯಸಂಗ್ರಹ ಮಾಡುತ್ತಾರೆಂದು ಸರ ಸೆಮ್ಯುಅಲ್ ಹೋರರವರು ನುಡಿಯುತ್ತಾರೆ. ಲೋಕಶಾಂತಿಯೇ ತಮ್ಮ ಹೆಗ್ಗುರಿಯೆಂದೂ, ಬಳಿಕಾರಸ್ಥಾನವೇನಿಲ್ಲವಾಗಿಯೂ ಸರ್ ಸೆಮ್ಯುಅಲ್ ಹೋರರವರು ಚೆಲ್ಸಿ ಭಾಷಣದಲ್ಲಿ ನುಡಿದರು. ಹಬಸಿ ಸರಕಾರದ ರಾಯಭಾರಿಗಳು ಫ್ರೆಂಚ ಪ್ರಧಾನರೊಡನೆ ಆಲೋಚಿಸುತ್ತಿದ್ದಾರಂತೆ. ಈ ತನಕ ಯಾವದೊಂದು ಮಧ್ಯಸ್ಥಿಕೆಯ ಉಪಾಯ ಮಧ್ಯಸ್ಥರಿಗೆ ಸೂಚಿಸಲಿಲ್ಲವಾಗಿ ಸರ್ ಸೆಮ್ಯುಅಲ್ ಹೋರರವರು ಬುಧವಾರ ಭಾಷಣದಲ್ಲಿ ಉದ್ಗರಿಸುತ್ತಾರೆ. ಈಗ ಇಟಾಲಿಯವರು ಗೆದ್ದುಕೊಂಡ ಪ್ರದೇಶ ಪ್ರಾಮುಖ್ಯವಾಗಿ ಟಿಗ್ರೇ ಪ್ರಾಂತ. ಈ ಪ್ರಾಂತದ ಮೇಲೆ ಹಬಸಿ ಜನರಿಗೆ ಅಭಿಮಾನ ಬಹಳ, ವಿಪರೀತ. ಈ ಪ್ರದೇಶದ ಒಂದು ಮೆಟ್ಟುಭೂಮಿಯನ್ನು ಇಟಾಲಿಗೆ ಕೊಡಮಾಡಿದರೆ ಹಬಸಿ ಜನರು ದೊಂಬಿಯನ್ನೆಬ್ಬಿಸಿ ಹಬಸಿ ಬಾದಶಹರಿಗೆ ಅಲ್ಪ ತಾಸುಗಳಲ್ಲಿ ಪದಚ್ಯುತ ಮಾಡುವರಾಗಿ ಅಡಿಸ ಅಬಾಬಾದೊಳಗಿನ ಅಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳ ಬಳಿ ಉದ್ಗರಿಸಿದರು. ಆ ಬಗ್ಗೆ ಪ್ರತಿಫಲವೆಂದು ಹಣ ಕೊಂಡರೂ, ಬಂದರ ಪಡೆದರೂ ಪಾಳೆಯಗಾರರಿಗೆ ಸಮಾಧಾನವಾಗಲಿಕ್ಕಿಲ್ಲವಾಗಿ ಅಧಿಕಾರಿಗಳ ಅಭಿಪ್ರಾಯ. ರಾಷ್ಟ್ರಸಂಘದವರು ಶಾಸನಕ್ರಮದ ವಿಚಾರ ಮಾಡುತ್ತಿದ್ದಾರೆ. ಇಟಾಲಿಗೆ ಬಹಿಷ್ಕರಿಸಬೇಕಾಗಿ ಸುಮಾರು ೫೦ ರಾಷ್ಟ್ರಗಳ ಅಭಿಪ್ರಾಯವಾಗಿದೆ. ಇಟಾಲಿಗೆ ಉದ್ರಿ ಕೊಡಬಾರದಾಗಿ ೪೬ ರಾಷ್ಟ್ರಗಳ ನಿರ್ಧಾರ. ಇಟಾಲಿಯ ಬಂದರಗಳಲ್ಲಿ ಹಡಗಗಳನ್ನು ನಿಲ್ಲಿಸದೆ ಪರಸ್ಪರ ಒಯ್ಯುವ ವಿಚಾರ ನಡೆದಿದೆ. ಅಮೇರಿಕೆಯ ಹಡಗು ಕಂಪನಿಯವರು ಗುಡ್‌ಹೋಪ ಭೂಶಿರದ ಮಾರ್ಗವಾಗಿ ಹಡಗಗಳನ್ನು ನಡಿಸುವ ವ್ಯವಸ್ಥೆ ಮಾಡಿದ್ದಾರೆ. ಮಾರ್ಗಗಳು ಉದ್ದವಿದ್ದಾಗ್ಯೂ ಪ್ರಯಾಣಿಕರ ಸರಕುಗಳ ಟಿಕೀಟಿನ ದರ ಏರಿಸಲಿಲ್ಲ. ರಾಷ್ಟ್ರಸಂಘದವರು ಸಹಕಾರ ಮಾಡಿದರೆ ಇಟಾಲಿಯ ಬಂದರಗಳಿಗೆ ಯಾರಿಗೂ ಹೋಗಗೊಡದಂತೆ ಯುದ್ಧ-ಹಡಗುಪಡೆಗಳನ್ನು ಇಡಲಿಕ್ಕೂ ಬ್ರಿಟಿಶರು ಸಿದ್ಧರಿದ್ದಾರೆ. ಈಗಿನ ಶಾಸನಕ್ರಮದಿಂದ ಇಟಾಲಿಯ ಮೇಲೆ ಏನೊಂದೂ ಪ್ರಯೋಜನವಾಗಲಿಕ್ಕಿಲ್ಲವಾಗಿಯೂ, ಇವುಗಳಿಂದ ಮುಸೋಲಿನಿಯವರ ಅತಿಕ್ರಮಣಕ್ಕೆ ಆತಂಕವಾಗಲಿಕ್ಕಿಲ್ಲವಾಗಿಯೂ, ಒಂದು ಶಹ ಹಬಸಿ ಪ್ರಾಣ ಉಳಿಸಿಕೊಳ್ಳಲಸಾಧ್ಯವೆಂದೂ ಲೊಯಿಡ್ ಜೋರ್ಜರವರು ಕಿಡಿಕಿಡಿಕೋಪಗೊಂಡು ಲಂಡನಿನಲ್ಲಿ ನುಡಿದು ಬ್ರಿಟಿಶ ಪ್ರಧಾನಮಂಡಳದವರು ಇಟಾಲಿಗೆ ಅನುಕೂಲರಾಗಿ ವರ್ತಿಸಿದಬಗ್ಗೆ ಆಕ್ಷೇಪ ಮಾಡಿದರು. ಇಂಥ ಪರಾಕ್ರಮಶೂನ್ಯರಿಗೆ ವಿವೇಕಹೀನರಿಗೆ ಮತದಾರರು ಮತ ಕೊಟ್ಟು ಪ್ರಧಾನಾಧಿಕಾರ ಅರ್ಪಿಸಿ ಮೋಸಹೋಗಬಾರದಾಗಿ ಲೊಯಿಡ್. ಜೋರ್ಜರವರು ಮುಂಜಾಗ್ರತೆ ಕೊಟ್ಟರು. ಇಟಾಲಿಯವರು ಯುದ್ಧದ ಸಂಪೂರ್ಣ ತಯಾರಿ ಮಾಡುವ ತನಕ ಮಿಕಿ ಮಿಕಿ ನೋಡುತ್ತ ಕುಳಿತರಾಗಿಯೂ ಲೊಯಿಡ್ ಜೋರ್ಜರ ಆರೋಪ. ರಾಷ್ಟ್ರಸಂಘಕ್ಕೆ ಮುಸೋಲಿನಿಯವರು ಹೆದರುವದಿಲ್ಲ. ಗುರುವಾರ ರೋಮ ವಿಶ್ವವಿದ್ಯಾಲಯದ ಉದ್ಘಾಟನ ಸಮಾರಂಭದ ಕಾಲಕ್ಕೆ ಮುಸೋಲಿನಿಯವರು ನುಡಿದದ್ದೇನಂದರೆ:- "ಸುಧಾರಿಸಿದ ಲೋಕವು ಇಟಾಲಿಗೆ ಬಹಿಷ್ಕರಿಸುವ ಉಪಾಯ ಕೈಕೊಂಡಿದೆ. ಇಗು ನಾಚಿಕೆಗೇಡಿತನ. ನಾವದನ್ನು ನಿರ್ಧಾರದಿಂದ ವಿರೋಧಿಸುವೆವು." ಈ ಮಾತುಗಳನ್ನಾಡುವಾಗ ಮುಸೋಲಿನಿಯವರು ಕ್ರೋಧಾವಿಷ್ಟರಾಗಿ ನಡುಗುತ್ತಿದ್ದರಾಗಿ ಸುದ್ದಿಗಾರರು ವರ್ಣಿಸುತ್ತಾರೆ. ಲೋಕಶಾಂತಿಯ ಪಾತದಿಂದ ಇಟಾಲಿ-ಬ್ರಿಟಿಶ ದೇಶಗಳೊಳಗೆ ಯುದ್ಧಪರಿಹಾರವಾಗದಾಗಿ ಮೇಲ್ಕಾಣಿಸಿದ 'ಬರ್ಲಿನರ ತೇಜಬ್ಲೆಟ್' ಪತ್ರಕರ್ತರು ಅಭಿಪ್ರಾಯಪಡುತ್ತಾರೆ. ಹಬಸಿ ದೇಶದ ಸ್ವಾತಂತ್ರ್ಯಪರಿಪಾಲನೆಗಿಂತ ಬ್ರಿಟಿಶ ದೇಶದ ಭೂಮಧ್ಯಸಮುದ್ರದ ಪಾರುಪತ್ಯವೇ ಐರೋಪ್ಯ ರಾಜಕಾರಣದ ಕ್ಷಿತಿಜವನ್ನು ಸಂಪೂರ್ಣವಾಗಿ ವ್ಯಾಪಿಸಿಕೊಂಡಿದೆ. ಭೂಮಧ್ಯಸಮುದ್ರದ ಒಡೆತನಕ್ಕೆ ಭಂಗ ಬರದಿದ್ದಲ್ಲಿ ಇಟಾಲಿ-ಹಬಸಿ ದೇಶಗಳೊಳಗಿನ ವಿವಾದ ಬಗೆಹರಿಯಬಹುದಿತ್ತು. ಭೂಮಧ್ಯಸಮುದ್ರದ ರಾಜಕಾರಣವೂ, ಹಬಸಿ ರಾಜಕಾರಣವೂ ಸಂಲಗ್ನವಾಗಿರುವದರಿಂದ ಬ್ರಿಟಿಶರು ಈ ವಾದದಲ್ಲಿ ಬೀಳಲೇಬೇಕಾಗುವದು. ಸ್ವಯಮೇವ ಅವರು ಬೀಳಬಹುದು. ಆದರೆ ಇಲೆಕ್ಷನು ಮುಗಿದು ಹೊಸ ಪಾರ್ಲಿಮೆಂಟಿನ ಸಭೆಯಾಗಿ ಹೊಸ ಪ್ರಧಾನ ಮಂಡಳ ನೇಮಿಸಲ್ಪಟ್ಟ ಬಳಿಕ ಬ್ರಿಟಿಶರ ಧೋರಣ ಸ್ಫುಟವಾಗುವದು. ಸದ್ಯಕ್ಕೆ ಭೂಮಧ್ಯಸಮುದ್ರದ ಸನ್ನಿವೇಶವನ್ನು ಸಮಸ್ತರೂ ಗ್ರಹಿಸಬೇಕೆಂದು ಇಂದಿಗೆ ಈ ವಿಷಯವನ್ನು ಸ್ವಲ್ಪ ವಿಸ್ತಾರದಿಂದ ವರ್ಣಿಸಿದುದು. ಯುದ್ಧಸ್ಥಿತಿಯನ್ನು ನಿವರಿಸುವ ಮುಂಚೆ ಇನ್ನೊಂದು ವಿಷಯವನ್ನು ವಿವರಿಸುವದುಚಿತ. ಹಬಸಿ ದೇಶದಲ್ಲಿ ಉಗಿಬಂಡಿ ಮಾರ್ಗ ಇದ್ದದು ಒಂದೇ. ಫ್ರೆಂಚರ ಜಿಬುಟಿ ಬಂದರದಿಂದ ಡಿರೆಡೋವಾ ಮಾರ್ಗವಾಗಿ ಅಡಿಸ ಅಬಾಬಾ ಪಟ್ಟಣದ ತನಕ ಈ ಮಾರ್ಗವಿದೆ. ಉಗಿಬಂಡಿಯ ಕಂಪನಿ ಫ್ರೆಂಚರದು; ಚತುರ್ಥಾಂಶ ಬಂಡವಲು ಹಬಸಿ [illegible]ರದ್ದು. ಕಳೆದ ಜನವರಿ ತಿಂಗಳಲ್ಲಿ ಫ್ರೆಂಚ-ಬ್ರಿಟಿಶರೊಳಗೆ ನಡೆದ ತಹನಾಮೆಯಂತೆ ೨|| ಸಾವಿರ ಫ್ರೆಂಚರ ಶೇರುಗಳು ಇಟಾಲಿಗೆ ಕೊಡಲ್ಪಟ್ಟಿವೆ. ೧೯೦೬ನೇ ಇಸ್ವಿಯಲ್ಲಿ ಫ್ರೆಂಚ-ಇಟಾಲಿ-ಬ್ರಿಟಿಶ ದೇಶಗಳ ಸರಕಾರಗಳೊಳಗೆ ಒಂದು ತಹನಾಮೆಯಾಯಿತು. ಆ ತಹನಾಮೆಯಂತೆ ಬ್ರಿಟಿಶ-ಇಟಾಲಿ ದೇಶಗಳಿಗೆ ಉಗಿಬಂಡಿ ಡಾಯರೆಕ್ಟರ ಮಂಡಳದಲ್ಲಿ ಒಬ್ಬೊಬ್ಬ ಇಸಮು ನೇಮಿಸುವ ಅಧಿಕಾರ ಸಿಕ್ಕಿತು. ೧೯೦೮ನೇ ಇಸ್ವಿಯಲ್ಲಿ ಹಬಸಿಗಳಿಗೂ ಫ್ರೆಂಚ ಸರಕಾರಕ್ಕೂ ಒಂದು ತಹನಾಮೆಯಾಯಿತು. ಆ ತಹನಾಮೆಯಂತೆ ಈ ಉಗಿಬಂಡಿಯನ್ನು ಯುದ್ಧ ಪ್ರಸಕ್ತಿಯಲ್ಲಿ ಅಬಾಧಿತವಾಗಿ ನಡಿಸಲಿಕ್ಕೂ, ಹಬಸಿ ಬಾದಶಹರ ಅಪ್ಪಣೆಯಂತೆ ಅವರಿಗನುಕೂಲವಾಗಿ ನಡಿಸಲಿಕ್ಕೂ ಫ್ರೆಂಚ ಸರಕಾರವು ಬದ್ಧವಿದೆ. ಯುದ್ಧ ಸಾಹಿತ್ಯಗಳನ್ನು ಪೂರೈಸಿಕೊಳ್ಳುವ ಹಬಸಿ ಸರಕಾರದ ಮಾರ್ಗ ಇದೇ. ಉಗಿಬಂಡಿಯ ಮಾರ್ಗವನ್ನು ಮುರಿದುಬಿಡುವದಕ್ಕಾಗಿ ಇಟಾಲಿಯವರು ಹೊಂಚುಹಾಕಿದ್ದಾರೆ.

ವಿಮಾನಗಳಿಂದ ಬಾಂಬು ಹಾರಿಸಿ ಇಲ್ಲವೆ ಅಸಾಬ ಪಾರ್ಶ್ವದಿಂದ ಸಾಗಿಬಂದು ಇದನ್ನು ಕೈವಶ ಮಾಡಿಕೊಂಡು ಬಾದಶಹರಿಗೆ ಉಪದ್ರವ ಕೊಡುವ ಹಂಚಿಕೆ ಹೂಡಿದ್ದಾರೆ. ಉಗಿಬಂಡಿ ಫ್ರೆಂಚರದಾದ್ದರಿಂದ ಅದನ್ನು ರಕ್ಷಿಸಲು ತಹನಾಮೆಯಂತೆ ಫ್ರೆಂಚರು ಬದ್ಧರಿದ್ದಾರೆ. ನಷ್ಟಭರವಸಾಯಿ ಕೊಳ್ಳುವ ತಹನಾಮೆ ಮಾಡಿಕೊಂಡು ಫ್ರೆಂಚ ಸರಕಾರವು ಸುಮ್ಮನುಳಿಯಬಹುದಿತ್ತು. ಆದರೆ ರಾಷ್ಟ್ರಸಂಘದಲ್ಲಿ ಇಟಾಲಿ ಲೋಕಕಂಟಕವೆಂದೂ, ಅದಕ್ಕೆ ಶಾಸನ ಮಾಡಬೇಕೆಂದು ನಿರ್ಧರಿಸಿದ ಫ್ರೆಂಚರು ಸುಮ್ಮನುಳಿದರೆ ರಾಷ್ಟ್ರಸಂಘದ ಪ್ರತಿಷ್ಠೆ ಎಲ್ಲಿ ಉಳಿಯಿತು? ಫ್ರೆಂಚರ ಪ್ರಾಮಾಣಿಕತನವೆಲ್ಲಿ ಉಳಿಯಿತು? ೧೯೦೬ನೇ ಇಸ್ವಿಯ ತಹನಾಮೆಯಂತೆ ಈ ಉಗಿಬಂಡಿಯನ್ನು ರಕ್ಷಿಸದಿದ್ದರೆ ಆ ತಹನಾಮೆಯೂ ನಿರರ್ಥಕವಾಯಿತು. ಉಗಿಬಂಡಿಯನ್ನು ರಕ್ಷಿಸಲು ಫ್ರೆಂಚ ಸರಕಾರವು ಪಾರೀಸದಿಂದ ೨೦೦ ಮಂದಿಗಳ ಸೈನ್ಯ ಪಥಕವನ್ನೊಂದು ಡೆರೆಡೊವಾ ಪಟ್ಟಣಕ್ಕೆ ಕಳುಹಿದೆ. ಇವರ ಮೇಲೆ ಇಟಾಲಿಯವರು ಬಾಂಬು ಹಾರಿಸಿದಾಗ್ಯೂ ಫ್ರೆಂಚರು ಸುಮ್ಮನುಳಿಯುವರೇನು? ಹಬಸಿ ರಣಕಾರಣದೊಳಗಿಂದ ಅಲಿಪ್ತವಾಗಿರಲು ಬ್ರಿಟಿಶರಿಗಾಗಲಿ, ಫ್ರೆಂಚರಿಗಾಗಲಿ ತಹನಾಮೆಗಳಂತೆ ಅಸಾಧ್ಯ ಮಾತು! ರಾಷ್ಟ್ರಸಂಘದ ಪ್ರವರ್ತಕ ನಾತೆಯಿಂದಂತೂ ಅಶಕ್ಯವೇ. ಇಂಥ ಪ್ರಸಕ್ತಿಯಲ್ಲಿ ಬ್ರಿಟಿಶ-ಫ್ರೆಂಚರು ಇಟಾಲಿ-ಹಬಸಿದೇಶಗಳನ್ನು ಸಮಾಧಾನಗೊಳಿಸಿ ಸ್ವಾರ್ಥವನ್ನೂ, ಲೋಕಶಾಂತಿಯನ್ನೂ ಹೇಗೆ ಕಾಪಾಡುತ್ತಾರೆಂಬು ತಿಳಕೊಳ್ಳಲು ನಾನು ಕುತೂಹಲಪಡುತ್ತೇನೆ.

ಇನ್ನು ಹಬಸಿ ದೇಶದೊಳಗಿನ ವಾರ್ತೆಗಳನ್ನು ಅರುಹುತ್ತೇನೆ. ಉತ್ತರಪಾರ್ಶ್ವದಲ್ಲಿಯೂ ಇಟಾಲಿಯವರು ಮುಂದರಿದರಾಗಿ ಪ್ರಕಟವಾಗಿದೆ. ಮಕಾಲೆ ಪಟ್ಟಣದ ಮೇಲೆ ಇಟಾಲಿಯರು ಭರದಿಂದ ಸಾಗಿಬರುವ ತಯಾರಿಯನ್ನು ನಡಿಸಿದ್ದಾರೆ. ಸೇನಾಪತಿ ಸಂತನಿಯವರು ತಮ್ಮ ಸೈನ್ಯದಳದೊಂದಿಗೆ ಮುಂದರಿಯುತ್ತಿದ್ದಾರಂತೆ. ಹಗಲಿಗೆ ಮುಂದುದುವರಿದು ಬಂದ ಇಟಾಲಿಯರಿಗೆ ರಾತ್ರಿ ಹಬಸಿ ಜನರು ಮುಸಾಲಿ ಪರ್ವತದ ಬಳಿ ಉಪದ್ರವ ಕೊಡುತ್ತಾರಾಗಿ ಅಡಿಸ ಅಬಾಬಾ ಪಟ್ಟಣದೊಳಗಿನ ವಾರ್ತೆ! ಡೆಸ್ಸಿ ಪಟ್ಟಣದ ಮೇಲೆ ದಣಕಿಲ ಮರುಭೂಮಿಯ ಪಾರ್ಶ್ವದಿಂದ ಸಾಗಿಹೋಗಿ ಅದನ್ನು ಕೈವಶ ಮಾಡಿಕೊಂಡು ಅಡಿಸ ಅಬಾಬಾ ಪಟ್ಟಣದ ದಾರಿಯನ್ನೇ ಕಟ್ಟಿ ಹಬಸಿ ಜನರಿಗೆ ಸೋಲಿಸುವ ಉಪಾಯ ಕೈಕೊಂಡಿದ್ದಾರೆ. ಬಾದಶಹರ ರಾಸ ತಫಾರಿಯವರು ಈ ರಣಭೂಮಿಗೆ ಹೊರಟಿದ್ದಾರೆ. ಬಾದಶಹರೊಡನೆ ಪಾಳೆಯಗಾರರು ತಮ್ಮತಮ್ಮ ಪಾಳಯಗಳೊಡನೆ ಹೊರಟಿದ್ದಾರೆ. ಹಬಸಿ ಸರಕಾರದ ಪ್ರಧಾನರೆಲ್ಲರೂ ತಮ್ಮ ತಮ್ಮ ಅಧಿಕಾರವನ್ನು ಕೆಲ ಅಧಿಕಾರಿಗಳಿಗೊಪ್ಪಿಸಿ ರಣರಂಗಕ್ಕೆ ಸಾಗಿದ್ದಾರೆ. ಸ್ತ್ರೀಯರ ಉತ್ಸಾಹವೇ ಅವರ್ಣನೀಯವಾದದ್ದು. ಸಾವಿರಾರು ಸ್ತ್ರೀಯರು ಮಕ್ಕಳೊಡನೆ ರಣಕ್ಷೇತ್ರಕ್ಕೆ ಓಡುತ್ತಿದ್ದಾರೆ. ಬೆನ್ನಿಗೆ ಶಿಶುಗಳನ್ನು ಕಟ್ಟಿಕೊಂಡು ಅನೇಕರು ಹೊರಟಿದ್ದಾರೆ. ಸೆಟಿಟ್ ನದಿಯ ಕಡೆ ಹಬಸಿ ಜನರಿಗೂ ಇಟಾಲಿಯರಿಗೂ ಭಯಂಕರ ಹೋರಾಟ ನಡೆದು ಇಟಾಲಿಯರು ಹೇರಳ ಹಬಸಿ ಜನರಿಗೆ ಯಮಸದನಕ್ಕಟ್ಟಿದರಂತೆ. ಉಮೋಜರ ಪಟ್ಟಣದ ಬಳಿ ಈ ಸಂಗ್ರಾಮವಾಯಿತು. ಹಬಸಿ ಪಕ್ಷ ಗೆದ್ದಿತೆಂದು ಅಡಿಸಅಬಾಬಾದೊಳಗೆ ವಾರ್ತೆ ಹಬ್ಬಿ ಜಯಪ್ರಾಪ್ತಿಯ ಬಗ್ಗೆ ಒಂದು ಉತ್ಸವ ಸಹ ನೆರವೇರಿತಾಗಿ ವಾರ್ತೆ. ಈ ಪ್ರದೇಶದಲ್ಲಿ ಭಯಂಕರವಾದ ಕಪ್ಪು ೪-೫ ಗಜ ಎತ್ತರ ಹುಲ್ಲು ಬೆಳೆಯುತ್ತಿದೆ. ಎಲ್ಲಿ ನೋಡಿದಡಲ್ಲಿ ಹುಲ್ಲೇ-ಹುಲ್ಲು. ಈ ಹುಲ್ಲಿನಲ್ಲಿ ಬೀಡು ಮಾಡದ ಪ್ರಾಣಿಯಿಲ್ಲ. ಪ್ರತಿ ಅಕ್ಟೋಬರ ತಿಂಗಳಲ್ಲಿ ಹಬಸಿ ಬಾದಶಹರು ಈ ಹುಲ್ಲನ್ನು ಸುಡಿಸುತ್ತಿದ್ದರು. ಈಬಾರಿ ಅದನ್ನು ಹಾಗೆಯೇ ಇಟ್ಟಿದ್ದಾರೆ. ಅದರಿಂದ ಇಟಾಲಿಯರಿಗೆ ಮುಂದಿನ ಮಾರ್ಗದ ಗ್ರಹಿಕೆಯಾಗಲೊಲ್ಲದು. ಇಟಾಲಿಯವರು ಈ ಹುಲ್ಲನ್ನು ಬಾಂಬು ಒಗೆದು ಸುಟ್ಟು ಬಿಡುತ್ತಿದ್ದಾರೆ. ಈ ಪ್ರದೇಶದ ಕ್ಷಿತಿಜದ ಮೇಲೆ ಎಲ್ಲಿನೋಡಿದಡಲ್ಲಿ ಉರಿಯುವ ಬೆಂಕಿಯೇ ಕಾಣುತ್ತದಂತೆ. ಸೆಟಿಟ್ ನದಿಯ ಬಳಿ ದೆಜ್ಜ್ಮಾಜ ಅಯಲೂರವರು ೧೦ ಸಾವಿರ ಸೈನಿಕರೊಡನೆ ಇಟಾಲಿಗೆ ಎದಿರಾಗುತ್ತಿದ್ದಾರೆ. ಒಳೆಯಲ್ಲಿರುವ ರಾವೆದ್ ನದಿಯ ಕಂಜರದಲ್ಲಿ ಅಧ್ಭುತವಾದ ಸಂಗ್ರಾಮ ನಡೆಯುತ್ತದಂತೆ. ಈ ನದಿ ಭಯಂಕರವಾದದ್ದು. ದೊಡ್ಡ ದೊಡ್ಡ ಮೊಸಳೆಗಳೂ ಇವೆ. ಸುತ್ತುಮುತ್ತಲಿನ ಪ್ರದೇಶಗಳೊಳಗೆ ನೀರಿಲ್ಲದ್ದರಿಂದ ಸಿಂಹ, ಆನೆ, ಚಿರ್ಚೆ, ಗಂಡಕಮೃಗ, ಹುಲಿ, ಮಂಗಗಳು ಇಲ್ಲಿ ಮೂರುಸಂಜೆಯಾದೊಡನೆ ನೀರು ಕುಡಿಯಬರುತ್ತವೆ. ಅದ್ಭುತಕಾಯದ ದುಷ್ಟ ಕ್ರೂರ ಹುಲಿಗಳಿವೆ. ಇವುಗಳಿಗೆ ತೋಫಿನ ಸಪ್ಪಳ ಕೇಳಿದೊಡನೆ ಕೋಪಗೊಂಡು ಕೆರಳುತ್ತವೆ. ಇಂಥ ಘೋರಾರಣ್ಯದಲ್ಲಿ ಇಟಾಲಿ-ಹಬಸಿ ಸೈನ್ಯಗಳು ಪರಸ್ಪರ ಎದುರಾಳಿಗಳಾಗಿ ನದಿಯ ದಂಡೆಯ ಮೇಲೆ ಠಾಣ್ಯ ಹೂಡಿ ಹೋರಾಡುತ್ತಿವೆ. ಹಬಸಿ ಜನರಿಗೆ ಈ ನದಿಗಳ ಪರಿಚಯವಿದೆ. ಅವರು ನದಿ ದಾಟಿ ಇಟಾಲಿಯರಿಗೆ ಹೊಡೆದೋಡಿಸುವ ಯತ್ನ ಮಾಡಿದರು. ಆದರೆ ತೋಫಿನ ಹೊಡತಕ್ಕೆ ಹಿಂಜರಿದು ಬರಬೇಕಾಯಿತಂತೆ. ಈ ತಿಂಗಳ ಕೊನೆಯ ತನಕ ಇತ್ತಟ್ಟಿನಲ್ಲಿ ಸೋಲು-ಗೆಲವುಗಳಾಗುವದು ಕಠಿಣವೆಂದು ಯುದ್ಧಗಾರರ ಅಂಬೋಣ. ಇಟಾಲಿಯವರು ಉತ್ತರ ಪಾರ್ಶ್ವದಲ್ಲಿ ಟೆಕಾಝಿ, ಮೈವಂಬಾ ನದಿಗಳ ದಂಡೆಗುಂಟ ೩ ದಿನಗಳ ತನಕ ಪ್ರಯತ್ನ ಮಾಡಿ ಟಿರೇನ ಎಂಬ ಪಟ್ಟಣವನ್ನು ಕೈವಶ ಮಾಡಿಕೊಂಡರಾಗಿಯೂ, ಇಲ್ಲಿ ಬೇಕಷ್ಟು ನೀರು ಸಿಗುತ್ತದಾಗಿಯೂ ಇಟಾಲಿಯ ಎಂಟ್ರಿ ವಸಾಹತಿನ ಅಸ್ಮಾರಾ ಪಟ್ಟಣದ ವಾರ್ತೆ. ಟಿರೇನ ಎಂಬ ಪಟ್ಟಣವೇ ಹಬಸಿ ದೇಶದ ನಕಾಶೆಯಲ್ಲಿಲ್ಲವಾಗಿಯೂ, ಟಿರಾಯ್ ಎಂಬ ಪಟ್ಟಣವನ್ನು ತಾವು ಬಲ್ಲಿವಾಗಿಯೂ 'ಮುಂಬಯಿ ಟೈಮ್ಸ' ಕರ್ತರು ಟೀಕೆ ಮಾಡುತ್ತಾರೆ. ''ಟಿರಾಯ ಪಟ್ಟಣ ಹಬಸಿ ದೇಶದಲ್ಲಿಲ್ಲ. ಹಿಂದುಸ್ಥಾನದ ಗಡಿನಾಡಿನೊಳಗಿನ ಪಟ್ಟಣವಿದು, ಇಲ್ಲಿ ಇಟಾಲಿಯರು ಸಾಗಿಬಂದರೇ!'' ಎಂಬದಾಗಿಯೂ ಟೈಮ್ಸ ಕರ್ತರ ವ್ಯಾಜೋಕ್ತಿ. ಇಟಾಲಿಯ ಸೈನಿಕರಿಗೆ ನೀರಿನ ಕೊರತೆ. ಕೆಲವೆಡೆ ಬಾವಿ ಕಡಿಸಿದರಂತೆ. ಸಾಲು ನೀರು! ಹಡಗ ತುಂಬಿ ನೀರು ತರಬೇಕು. ಆದರಿಂದ ನೀರಿನ ಆಶ್ರಯವಿದ್ದ ಒಂದು ಪಟ್ಟಣ ತಮ್ಮ ಕೈವಶವಾಯಿತಾಗಿ ಸುದ್ದಿ ಹಾಕಿದರೆಂದು ನಾನು ತಿಳಿಯುತ್ತೇನೆ. ದಕ್ಷಿಣ ಪಾರ್ಶ್ವದಲ್ಲಿಯೂ ಇಟಾಲಿಯವರು ಓಗಡೇನ ಪಾರ್ಶ್ವದಿಂದ ಮುಂದರಿಯುತ್ತಿದ್ದಾರೆ. ಸುಮಾರು ನೂರು ಮೈಲು ಪ್ರದೇಶವನ್ನು ಇವರು ಒಳ ಸೇರಿ ಬಂದಿರಬೇಕು. ವೆಬ್ಬಿಶಿಬೇಲಿ ನದಿಯ ಮಾರ್ಗದಿಂದ ಇವರು ಮುಂದರಿಯುತ್ತಿದ್ದಾರೆ. ಶಿಲೇವಿ ಎಂಬ ಕೋಟೆ ಇಟಾಲಿಯವರ ಕೈವಶವಾಯಿತಂತೆ. ಗೋರಾಹಿ ತನಕ ಇಟಾಲಿಯವರು ಹಬಸಿ ಜನರಿಗೆ ಓಡಿಸಿಕೊಂಡು ಹೋದರಂತೆ. ಆದರೆ ನಿಜವಾಗಿ ಇನ್ನೂ ರಣಸಂಗ್ರಾಮವಾಗಲಿಲ್ಲವೆಂದೇ ಸೂಕ್ಷ್ಮದರ್ಶಿಗಳ ಅಂಬೋಣ. ಹಬಸಿ ಜನರು ಬಲವಾಗಿ ಇನ್ನೂ ಇಟಾಲಿಯರಿಗೆ ವಿರೋಧಿಸಲಿಲ್ಲ. ಇಟಾಲಿಯರಿಗೆ ಮುಂದರಿಯ ಬಿಟ್ಟಿದ್ದಾರೆ. ಉತ್ತರಪಾರ್ಶ್ವದ ಡೆಬ್ರಾಟಬೋರದಲ್ಲಿ ಘನಘೋರ ಸಂಗ್ರಾಮವಾಗುವದಿದೆ. ಗೋಂಡರದ ಬಳಿ ಈ ರಣಕ್ಷೇತ್ರದಲ್ಲಿ ಇಟಾಲಿಯರು ಸಮಾಧಿ ಹೊಂದಲೇಬೇಕಂತೆ. ಗೋಂಡರದ ತನಕ ಒಳನುಗ್ಗಲು ಹಬಸಿ ಸೇನಾಪತಿಗಳ ವಿರೋಧವಿಲ್ಲ. ಆ ಪ್ರದೇಶ ಬಿಟ್ಟೇ ಹಬಸಿ ಸೇನಾಪತಿಗಳು ಸೈನ್ಯ ಕೇಂದ್ರಿಸಿದ್ದಾರೆ. ಗಜ್ಜಮ ಪ್ರದೇಶದಲ್ಲಿ ಸೈನ್ಯದ ಮುಖ್ಯ ಠಾಣ್ಯವಿದೆ. ರಾಸ ಕಾಸಾರವರೂ ಅವರ ಚತುರ ಮಗಂದಿರಾದ ಪೆಸನ್‌ರವರೂ ಇಲ್ಲಿ ಠಾಣ್ಯ ಹೂಡಿದ್ದಾರೆ. ಗೋಂಡರವರೆಗಿನ ಪ್ರದೇಶದಲ್ಲಿ ನೀರಿಲ್ಲ; ನೆರಳಿಲ್ಲ; ಮರು ಭೂಮಿ ಕ್ರಿಮಿ-ಕೀಟಕ, ಕಾಡು ಪಶುಗಳ ಹಾವಳಿ. ಆ ಪ್ರದೇಶವನ್ನು ಆಕ್ರಮಿಸಿ ಗೋಂಡರದಲ್ಲಿ ತಲ್ಪಬೇಕಾದರೆ ಇಟಾಲಿ ಸೈನಿಕರಿಗೆ ಸಾಕುಬೇಕಾದೀತು. ಆಗ ಹಬಸಿ ಜನರು ಸಾಗಿಹೋಗಿ ಇವರಿಗೆ ಹೊಡೆದೋಡಿಸುವರು. ಡೆಬ್ರಾಟಬೋರ ಇದು ದೊಡ್ಡ ಪಟ್ಟಣವಲ್ಲ; ಸಣ್ಣ ಗ್ರಾಮ. ಆದರೆ ಆ ಗ್ರಾಮದವರ ಉತ್ಸಾಹಕ್ಕೂ ನೆರೆಯ ಪ್ರದೇಶದವರ ಆವೇಶಕ್ಕೂ ಪರಿಮಿತಿಯಿಲ್ಲ. ''ಡೆಬ್ರಾಟಬೋರದಲ್ಲಿ ಸಂಗ್ರಾಮವಾಯಿತು, ಇಟಾಲಿಯರು ಸೋತರು, ಹಬಸಿ ಜನರು ಗೆದ್ದರು,'' ಎಂಬ ಭಾವನೆಯಿಂದ ಹಬಸಿ ಜನರು ಇದೀಗಲೇ ಹುರುಳುಗೊಂಡಿದ್ದಾರಂತೆ. ಗೋಂಡರವರೆಗಿನ ಪ್ರದೇಶದಲ್ಲಿ ಕಾಡು ಪಶುಗಳ ಉಪದ್ರವದ ಜೊತೆಗೆ ಮೈಲಿ, ವಿಷಮಜ್ವರ, ಆಮಾಂಶ, ಕರಿಜ್ವರ, ಚಳಿಜ್ವರ ಮೊದಲಾದ ನಾನಾತರದ ರೋಗಗಳಿವೆ. ಈ ರೋಗಗಳಿಂದಲೂ ಇಟಾಲಿಯ ಸೈನಿಕರು ಪಾರಾಗಿ ಮುಂದರಿಯಬೇಕು. ಅಂದರೆ ಮಾತ್ರ ಹಬಸೀ ದೇಶವನ್ನು ಗೆಲ್ಲಬಹುದು. ಇಂಥ ಪ್ರದೇಶದೊಳಗಿಂದ ರಣಕ್ಷೇತ್ರದ ಮೇಲೆ ನಡೆದ ಯಥಾರ್ಥ ವಾರ್ತೆಗಳನ್ನು ತಿಳಕೊಳ್ಳುವದು ಕಠಿಣ. ೩॥ ಸಾವಿರ ಹಬಸಿ ಸೈನಿಕರು ಒಗಡೆನ ರಣಕ್ಷೇತ್ರದಲ್ಲಿ ಸ್ವರ್ಗಾರೋಹಣ ಮಾಡಿದರಾಗಿಯೂ, ಹಬಸಿ ಸೈನಿಕರೂ ಜೀವದ ಪರಿವೆಯಿಲ್ಲದೆ ಉಲವಲ್ ಪಟ್ಟಣವನ್ನು ಕೈವಶ ಮಾಡಿಕೊಳ್ಳುವದಕ್ಕಾಗಿ ಅವರ್ಣನೀಯವಾದ ಉತ್ಸಾಹದಿಂದಲೂ, ಶೌರ್ಯದಿಂದಲೂ, ಹೋರಾಡಿದರಾಗಿಯೂ, ಸೇನಾಪತಿಗಳಾದ ದಜಾಜ [illegible] ಡೆಜೆಕಿರವರು ಮಡಿದರಾಗಿಯೂ ಪಾರಿಸ ಪಟ್ಟಣದಿಂದ ಸುದ್ದಿ. ಇದು ಸುಳ್ಳೆಂದು ಅಡಿಸಅಬಾಬಾ ಪಟ್ಟಣದ ವಾರ್ತೆ. ಇಂಥ ಪರಸ್ಪರ ವಿಸಂಗತವಾದ ವಾರ್ತೆಗಳನ್ನು ನಾನು ನಮೂದಿಸಿ ಏನು ನಿರೀಕ್ಷಣ ಮಾಡಲಿ? ಉತ್ತರ-ದಕ್ಷಿಣ ಪಾರ್ಶ್ವಗಳಲ್ಲಿ ಈಗ ನಡಿಯುತ್ತಿರುವ ಸಂಗ್ರಾಮವಾಗಲಿ ಅದರೊಳಗೆ ಪ್ರಾಪ್ತವಾದ ಇಟಾಲಿಯರ ವಿಜಯವಾಗಲಿ ನಿರ್ಣಾಯಕವಲ್ಲ. ತುಮುಲ ಯುದ್ಧ ಇನ್ನೂ ಆಗಲಿಕ್ಕಿದೆ. ಅದಕ್ಕಾಗಿ ಇತ್ತಟ್ಟಿನಲ್ಲಿ ಸಕಲಸಿದ್ಧತೆಗಳೂ ನಡೆದಿವೆ. ಡೆಸ್ಸಿ, ಹರರಾ, ಡಿಬ್ರಾಟಬೋರ ಮೊದಲಾದ ಪಟ್ಟಣಗಳಲ್ಲಿ ನಡೆಯುವ ಸಂಗ್ರಾಮಗಳೇ ನಿಜವಾದ ರಣಕ್ಷೇತ್ರವೇನು ನನ್ನ ಗ್ರಹಿಕೆ. ಹಬಸಿ ದೇಶದಲ್ಲಿ ದಿನ ಹೋದ ಹಾಗೆ ಉತ್ಸಾಹಕ್ಕೆ ಕಳೆಯೇರುತ್ತಿದೆ. ಸುಧಾರಿಸಿದವರ ಯಾಂತ್ರಿಕ ಸಾಹಿತ್ಯಕ್ಕೆ ವಿಜಯಸಿಗುತ್ತದೋ, ಸುಧಾರಿಸದವರ ಕ್ಷಾತ್ರತೇಜಕ್ಕೆ ವಿಜಯಸಿಗುತ್ತದೊ ನೋಡುತ್ತಿರುವಾ!

ಸ್ಥಾನಿಕ ವೃತ್ತಾಂತ.

ಕುಮಟಾ— ಕೆಲ [illegible] ಚಳಿ, ಗುಡುಗು ಮಿಂಚುಗಳ ಆರ್ಭಾಟ[illegible] ಮಳೆಯು [illegible] ಈಗ ಮಳೆ ಹಿಂದಾಗಿ [illegible] ಒಕ್ಕಲಿಗರು ಪೈರು ಕೊಯ್ಯುವದರಲ್ಲಿ ತೊಡಗಿದ್ದಾರೆ

ದೀಪಾವಳಿ ಸವ [illegible] ಕೊಂಕಣ [illegible] ನಡೆಯಿತು. ಚತುರ್ಥಿಯಲ್ಲಿ ಹೊಂಡೆ [illegible] ಬಂದು ಕಾಯಿ ಒಳ್ಳೆಯ [illegible] ಸವದ ಮೇಲೆ ಅಂಗಡಿಕಾರರು [illegible] ಮಾತ್ರ ಹೊಡೆದು [illegible] ಹೊಂಡೆಯವರಿಗೂ [illegible] ಪೆಟ್ಟಾದ [illegible] ಗುಡೇ ಅಂಗಡಿಯಲ್ಲಿ ಕಲ್ಲಿನ ಹೊಂಡೆಯಾಡುತ್ತಾರೆ [illegible] ಬಂದು ಕಲ್ಲ ತಾಗಿ [illegible] ಹಲ್ಲುಗಳು ಉದುರಿಹೋದ [illegible] ದೀಪಾವಳಿ ಹಬ್ಬದಲ್ಲಿ ಆಟವಾಡುವ [illegible] ದಿನಗಳಲ್ಲಿ ಇಂಥ ಪ್ರಕಾರ ಘಟಿಸುವದು ಯೋಗ್ಯವಲ್ಲ ಹೊಂಡೆಯಾಟದ ಪ್ರಮುಖರು [illegible] ಮಾಡುವ ಮೊದಲೇ ಕರ್ತವ್ಯವನ್ನು [illegible]

ಮೊನ್ನೆ ಶನಿವಾರ ಇಲ್ಲಿಯ ಸಹಕಾರಿ ಸಂಘಗಳ ಪರ್ಯಾಲೋಚನದಂತೆ ತಮ್ಮ [illegible] ವನ್ನು ಪಾಲಿಸಿದಪ್ಪ ಇಲ್ಲಿಯ ಸಬಜಡ್ಜರಾದ ರಾ। ಶೆಣೈಗಳಾದವರು ಈ ಸಮಾರಂಭದ ಅಧ್ಯಕ್ಷರ [illegible] ಅಧ್ಯಕ್ಷತೆಯಲ್ಲಿ ಕಲ್ಲಟ್ಟಿಯೊಳಗೆ ನಡೆದ (*Village reconstruction*) ಎಂಬ ಗ್ರಾಮ ಪುನರ್ಘಟನಾ ಕಾರ್ಯವನ್ನು ಅಧ್ಯಕ್ಷರಿಂದ ಪ್ರಾರಂಭ [illegible] ಸಂದರ್ಶಿಸಿದರು ಆ ಮೇಲೆ ಕಲ್ಲಟ್ಟಿಯ ಸಭಾಮಂಡಪದಲ್ಲಿ ಸಹಕಾರದಿಂದ ಜಗತ್ತಿಗೆ ಆಗುವ ಲಾಭಗಳನ್ನು ಬೇರೆ ಬೇರೆ ವ್ಯಾಖ್ಯಾತರ ವ್ಯಾಖ್ಯಾನದಂತೆ ನಿವೇದಿಸಿದ ಬಳಿಕ ಸಭೆಯು ವಿಸರ್ಜನೆಯಾಯಿತು ಗ್ರಾಮೋದ್ಧಾರ ಮತ್ತು ಸಹಕಾರದ ಉಪದೇಶಕ್ಕಿಂತ ಪ್ರಮುಖರು ಗ್ರಾಮಗಳಲ್ಲಿ ವಸತಿ ಮಾಡಿ ಯಾವದೊಂದು ಗ್ರಾಮೋದ್ಧಾರ ಕಾರ್ಯವನ್ನು ಸ್ವತಃ ನಡಿಸಿದರೆ ಜನಸಾಮಾನ್ಯರಿಗೆ ಹೆಚ್ಚಿನ ಪ್ರಯೋಜನವಾಗುವಂತಿರುವ ದಾಗಿ ಸಮಾರಂಭ ನೋಡಿದವರೊಬ್ಬರು ಬರೆಯುತ್ತಾರೆ

ಇಲ್ಲಿಯ ಮ್ಯುನಿಸಿಪಾಲಿಟಿಯು [illegible] ಯಾದಿ ಪ್ರಕಟವಾಗಿದೆ ಪಕ್ಕಾ ಮತದಾರರ ಯಾದಿ ತಯಾರಾಗಲಿಕ್ಕಿದೆ ಈಗಿನಿಂದಲೆ ಮತದಾರರ ಮನವೊಲಿಕ್ಕೆ ಮಾಡಿಕೊಳ್ಳುವದಕ್ಕಾಗಿ ಉಮೇದ್ವಾರರು ಪ್ರಯತ್ನ ಪಡುತ್ತಿದ್ದಾರೆ "ಮನೆತೆರಿಗೆಯನ್ನು ನಾವು ಕಡಿಮೆ ಮಾಡುತ್ತೇವೆ ಮನೆತೆರಿಗೆ ಹೆಚ್ಚಿಸಿದ್ದು ನಮಗೆ ಸಮ್ಮತವಿಲ್ಲ" ಎಂಬುದಾಗಿ ಮನೆಮನೆಗೆ [illegible] ಪರೋಪಕಾರಿಗಳು ಮತದಾರರಿಗೆ ಗ್ರಹಿಕೆ ಕೊಟ್ಟು ಈಗಿನಿಂದಲೇ ವಚನ ಕೊಳ್ಳಬಯಸುತ್ತಾರೆ. ಮತದಾರರು ೨-೩ ಉಮೇದ್ವಾರರಿಗೆ ತೊಂದರೆಯಾಗಿದ್ದಾರೆ. ಒಬ್ಬರಿಗೆ ವಚನ ಕೊಟ್ಟು ಬೇರೊಬ್ಬರಿಗೆ ಮತ ಕೊಡುವದು ವಚನಭಂಗದ ಸದರದಲ್ಲಿಯೇ ಸೇರುವದಿಲ್ಲವಾಗಿ ಎಲ್ಲರಿಗೆ ಗೊತ್ತಾಗಿದೆ ಪರೋಪಕಾರದ ಬುದ್ಧಿಯ [illegible] ಉಮೇದ್ವಾರರು ಸ್ವಂತ ಪ್ರತಿಷ್ಠೆಗಾಗಿ, ದೊಡ್ಡಸ್ತಿಕೆಗಾಗಿ ಮ್ಯುನಿಸಿಪಾಲಿಟಿಯನ್ನು ಸೇರುತ್ತಾರೆಂದು ಅವರಿಗೆ ತಿಳಿದು ಹೋಗಿದೆ ಇಲೆಕ್ಷನಿನಲ್ಲಿ ಪರೋಪಕಾರದ ಜಂಬ ಹೊಡೆಯುವವರು ಕಷ್ಟಕಾಲದಲ್ಲಿ ಒಂದು ಪೈಸೆ ಉದರಿ ಕೊಡುವದಿಲ್ಲ ಜನರು ಪರಸ್ಪರ ತಮ್ಮ ಕಷ್ಟನಿವಾರಣೆ ಮಾಡಿಕೊಂಡು ವ್ಹೋಟನ್ನು ಮಾತ್ರ ದೊಡ್ಡವರಿಗೆ ಕೊಟ್ಟಾಯಿತು ಈ ಇಲೆಕ್ಷನಿನ ನೀತಿ ಈಗ ಎಲ್ಲರಿಗೆ ತಿಳಿದು ಹೋಗಿದೆ ಆದ್ದರಿಂದ ಮತದಾರರು ಜಾಗ್ರತೆಯಿಂದ ಇದ್ದರಾಯಿತು

ಇಲ್ಲಿಯ ಪಾ। ವೇಲಜಿ ಲದ್ಧಾ ಶೇಟ ಇವರು ವಿಷಮ ಜ್ವರದಿಂದ ಮಂಗಳವಾರ ರಾತ್ರಿ ಪರಂಧಾಮವನ್ನೈದಿದರೆಂದು ತಿಳಿಸಲು ತುಂಬ ವ್ಯಸನವಾಗುತ್ತದೆ ವೇಲಜಿ ಶೇಟರು ರಾಷ್ಟ್ರೀಯ ಸಭೆಯ ಒಳ್ಳೆ ಅಭಿಮಾನಿಗಳು [illegible] ಇಲ್ಲಿ ಚಿತ್ತೈಸಿದಾಗ ಸತ್ಕಾರ ಸಮಾರಂಭದಲ್ಲಿ ಉತ್ಸಾಹದಿಂದ ದುಡಿದಿದ್ದಾರೆ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಇಲ್ಲಿ ಚಿತ್ತೈಸಿದಾಗ [illegible] ದಂಡ ಮತ್ತು [illegible] ಪರವಾಗಿ [illegible] ಪತ್ರವನ್ನು ಇವರೇ ಓದಿ ಹೇಳಿದ್ದರು [illegible] ವಿಶೇಷ ಜ್ಞಾನವಿಲ್ಲದಿದ್ದಾಗ್ಯೂ [illegible] ಪತ್ರವನ್ನು ಗುಜರಾಥಿ ಲಿಪಿಯಲ್ಲಿ ಬರೆದುಕೊಂಡು ಅದನ್ನವರು ಓದಿಹೇಳಿದ್ದು ನಿಜವಾಗಿಯೂ ಪ್ರಶಂಸನೀಯವಿದೆ ರಾಷ್ಟ್ರೀಯ ಸಭೆಯ ಮೇಲಿನ ಭಕ್ತಿ [illegible] ರಾಷ್ಟ್ರಪತಿಗಳ [illegible] ಉತ್ಸಾಹ ಇವುಗಳಿಂದ ವ್ಯಕ್ತವಾಗುತ್ತದೆ ಬಿಹಾರ [illegible] ಭೂಕಂಪ [illegible] ರಿಗಾಗಿ ದ್ರವ್ಯಸಹಾಯವನ್ನು [illegible] ಅರ್ಪಿಸಲು [illegible] ತಮ್ಮ ಧರ್ಮಬುದ್ಧಿಯನ್ನು ವ್ಯಕ್ತ ಮಾಡಿದ್ದಾರೆ ಇವರು ಗುಜರಾಥಿ [illegible] ಸಾರ್ವಜನಿಕ [illegible] ಗಳಲ್ಲಿ [illegible] ದಿಂದ ಸೇರುತ್ತಿದ್ದರು ಇಂಥ [illegible] ಅವಸಾನ ಹೊಂದಿದ್ದು [illegible] ದುರ್ದೈವ [illegible] ಉಪಾಯ [illegible] ಸಮಾಧಾನ ಮಾಡಿಕೊಳ್ಳಬೇಕಲ್ಲದೆ ಮತ್ತೇನಿದೆ? ಮೃತಾತ್ಮರಿಗೆ ಸದ್ಗತಿ ಪ್ರಾಪ್ತಿಯನ್ನು [illegible] ಜಗನ್ನಿಯಾಮಕನ ಕಡೆ ಪ್ರಾರ್ಥನೆ

[illegible] ತುಫಾನು ಎದ್ದಾಗ ಕದಡಿಯಿಂದ ೩ ಜನರು [illegible] ಹೋಗಿದ್ದರು [illegible] ಇವರು [illegible] ದಡ ಸೇರುತ್ತಿದ್ದಾಗ [illegible] ಬರಿಗೆ ಹೋಗುವ ಮಚ್ಛವೊಂದು ಇವರಿಗೆ ಸಿಕ್ಕಿತಾಗಿಯೂ ಅದರೊಳಗೆ ಇವರಿಗೆ ಹತ್ತಿಸಿಕೊಂಡು [illegible] ರಾಗಿಯೂ ಅಲ್ಲಿ [illegible] ಶಾಂತಿ [illegible] ವದಾಗಿಯೂ ತಿಳಿಯುತ್ತದೆ ಆಯುರ್ದಾಯವಿದ್ದರೆ ಮಚ್ಛ ಸಿಗುತ್ತದೆ! ಬೇರೆಯವರು ಹತ್ತಿಸಿಕೊಳ್ಳುತ್ತಾರೆ! ಅದಿಲ್ಲದಿದ್ದರೆ ಏನೂ ಇಲ್ಲ!

[illegible] ದಲ್ಲಿ [illegible] ಸಂಘದವರು ೪ನೇ ವಾರ್ಷಿಕೋತ್ಸವವನ್ನು ನಡಿಸಿದರು ತಾ ೨೭-೨೮-೨೯ ಹೀಗೆ ಮೂರು ದಿನ ಉತ್ಸವದ ಕಾರ್ಯಕ್ರಮವಿತ್ತು ಊರ ಪ್ರಮುಖರ [illegible] ಸಂಘದವರೂ ಪ್ರತಿ ಮನೆಯೊಳಗೆ ಹೋಗಿ ಮನೆಯೊಳಗೆ ಸ್ವಚ್ಛತೆ ಕಾಪಾಡಬೇಕಾಗಿಯೂ ಆರೋಗ್ಯ ಸಂಪಾದನೆ ಮಾಡಬೇಕಾಗಿಯೂ ಉಪದೇಶಿಸಿದರು ಸಭೆಗಳಲ್ಲಿ ಗ್ರಾಮದವರು ಐಕಮತ್ಯದಿಂದ ನಡೆದು ಗ್ರಾಮಸುಧಾರಣೆ ಮಾಡಬೇಕಾಗಿಯೂ ಎಲ್ಲರೂ ಆದಾಯ ವೆಚ್ಚಗಳ ಕುರಿತು ಲಕ್ಷ್ಯವಿಡಬೇಕಾಗಿಯೂ ಉಪದೇಶ ನಡೆಯಿತು 'ಆರೋಗ್ಯವೇ ಜನರ ಸೌಭಾಗ್ಯ' ಎಂಬ ವಿಷಯದ ಮೇಲೆ ರಾ। [illegible] ಇವರ ಭಾಷಣವಾಯಿತು ಆರೋಗ್ಯವೇ ಗ್ರಾಮಸುಧಾರಣೆಯ ತಳಹದಿಯೆಂದು ವ್ಯಾಖ್ಯಾತರು ಪ್ರತಿಪಾದಿಸಿದರು ರಾ। [illegible] ಇವರ ಕೀರ್ತನೆಗಳೂ ನಡೆದವು 'ಬುದ್ಧಿಮಾನ' ಎಂಬ ಸಾಮಾಜಿಕ ನಾಟಕದ ಪ್ರಯೋಗ ನಡೆಯಿತು ಯಕ್ಷಗಾನದ ಪ್ರಸಂಗಗಳು ನಡೆದವು ಸಮಾರಂಭದ ಅಧ್ಯಕ್ಷರಾದ ರಾ। ಗಣೇಶ ತಿಮ್ಮಣ್ಣ ಹೆಗಡೆಯವರು ಅಡಿಕೆ ಮಾರಾಟದ ಸಂಘದಿಂದ ತೋಟಿಗರಿಗೆ ಬಹಳೇ ಲಾಭ ದೊರೆಯತಕ್ಕದ್ದಾಗಿಯೂ ಅಲ್ಲಿಯ ತೋಟಿಗರು ಅಡಿಕೆ ಒಯ್ದು ಮಾರಾಟ ಮಾಡಬೇಕಾಗಿಯೂ ಉಪದೇಶ ಮಾಡಿದರು ಇಷ್ಟೆಲ್ಲ ಕಾರ್ಯಕ್ರಮವಾದ ಬಳಿಕ ೩ ದಿನಗಳ ಸಮಾರಂಭ ಕೊನೆಗೊಂಡಿತು ತರುಣ ಸಂಘದವರು ಉಪದೇಶದ [illegible] ಊರೊಳಗೆ ಹುಟ್ಟುವ ಜೀವನಗಳ್ಯಾವವು? ಹುಟ್ಟಿಸಬಹುದಾದ ಜೀವನಗಳ್ಯಾವವು? ಈಗ ಆಮದಾಗುವ ಜೀವನಗಳ್ಯಾವವು? ಅವುಗಳ ಬದಲಿಗೆ ಗ್ರಾಮದೊಳಗೆ ತಯಾರಿಸಬಹುದಾದ ಜೀವನಗಳ್ಯಾವವು? ಯಾವ ಜೀವನಗಳನ್ನು ಸಂಪೂರ್ಣವಾಗಿ ಕೈಬಿಡಬಹುದು? [illegible] ಚಟದಿಂದ ಖರ್ಚಾಗುವ ಹಣವೆಷ್ಟು? ಮೊದಲಾದ ಬಾಬತ್ತು ನಡಿಸಿ ಆ ಬಾಬತ್ತಿ ಮೇಲಿಂದ ಕಂಡುಬರುವ ಪರಿಸ್ಥಿತಿಗನುಸಾರವಾಗಿ ಗ್ರಾಮೋದ್ಧಾರ ಪ್ರಯತ್ನ ನಡಿಸಿದರೆ ಮಾತ್ರ ಅದರಿಂದ ಗ್ರಾಮಕ್ಕೆ ಲಾಭವಾಗುವದು ತರುಣರು ಗ್ರಾಮೋದ್ಧಾರಕ್ಕಾಗಿ ಸಹಕರಿಸುವದಕ್ಕೆ ಮಾಡಬೇಕು

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ವೇ। ಮೂ। ವಾಸುದೇವ [illegible] ಭಟ್ಟರವರು ಕಳೆದ ಶುಕ್ರವಾರದಿಂದ ಶ್ರೀ ಮದ್ಭಾಗವತದ ಸಪ್ತಾಹಕ್ಕೆ ಪ್ರಾರಂಭಿಸಿದ್ದಾರೆ. ಬೆಳಗಿನ ಸಮಯ ಪುರಾಣ, ಸಂಜೆ ನಿರೂಪಣ ಹೀಗೆ ನಡೆಯುತ್ತದೆ ಇದೇ ಬರುವ [illegible] ಗುರುವಾರ ಮಂಗಲೋತ್ಸವ

ಆನೆ [illegible] ಮಾಡುವದರ ಸಲುವಾಗಿ [illegible] ನೇಮಿಸಲ್ಪಟ್ಟ ಹೆಗ್ಗರೆ ಕೇಶವ ನಾರಾಯಣ ವೆಂಕಟ್ರಮಣ ಭಟ್ಟ ಇವರು ಬರೆಯುವದೇನಂದರೆ,— ತಾ ೩೦—೧೦—೩೫. [illegible] ತಾಲೂಕ [illegible] ಗ್ರಾಮದ ಹೆಗ್ಗರೆ [illegible] ಬೆಟ್ಟದಲ್ಲಿ ೩ ಆನೆಗಳ [illegible] ೨ ಆನೆಗಳಿಗೆ ೬ ಗುಂಡು ಹೊಡೆದೆನು ೩ನೇ ಆನೆಗೆ ಒಂದು ಗುಂಡು ಹೊಡೆದೆನು ಇಷ್ಟರಲ್ಲಿ ಕುಬಾಕಿ ಹಾಳಾಯಿತು ಈ ಸಂಗತಿಯನ್ನು ನಾನು ಪ್ರಾಂತ ಸಾಹೇಬರಿಗೆ ಬರೆದುಕೊಂಡೆನು [illegible] ಮೊಜೆ ಸ್ಟೇಟಿನಿಂದ ತಾ [illegible] ನಾನು ಕಾರವಾರಕ್ಕೆ [illegible] ಆ ಕುಬಾಕಿಯನ್ನು ತಾ। [illegible] ನೇಗೆ ಹಾಜರಪಡಿಸಿದೆನು ಕಾರವಾರ ಪೋಲೀಸ ಹೆಡ್ ಕ್ವಾರ್ಟರಿನಲ್ಲಿ ಕುಬಾಕಿಯು ಪರೀಕ್ಷೆಯಾಯಿತು ಕುಬಾಕಿ ನಿರರ್ಥಕವೆಂದೂ ಕುಬಾಕಿ ಉಪಯೋಗಿಸುವವರಿಗೆ ಅಪಾಯಕರವೆಂದೂ ಪ್ರಾಂತಸಾಹೇಬರು [illegible] ಕಾಂಡದಾರರವರು ಅಭಿಪ್ರಾಯಪಟ್ಟರು ಕುಬಾಕಿ ನಿಷ್ಪ್ರಯೋಜಕವೆಂದು ನಿರ್ಣಯವಾಗುವ ಸಂಭವವಿದೆ [illegible] ತಾಲೂಕಿನ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿಯಿದೆ ಆದರೆ ಕುಬಾಕಿ ನಿರುಪಯೋಗಿಯಾದ್ದರಿಂದಲೂ ಅದು ರೀತಿಯಂತೆ ನಿಷ್ಪ್ರಯೋಜಕವೆಂದು ನಿರ್ಣಯವಾದನಕ ಹೊಸ ಕುಬಾಕಿ ಸಿಗುವಂತಿಲ್ಲವಾದ್ದರಿಂದಲೂ ಜನರಿಗೆ ಆಪತ್ಕಾಲದಲ್ಲಿ ಸಹಾಯ [illegible] ಅಶಕ್ಯವಾಗಿದೆ. ಇತ್ಯಾದಿ ಆನೆ ಬೇಟೆಗಾರರಿಗೆ ಹೊಸ ಕುಬಾಕಿ ಸಿಗುವ ವರೆಗೆ ಕಾಡಾನೆಗಳು [illegible] ಕಾಯುವದಿಲ್ಲ ಜನರ [illegible] ಕುಬಾಕಿಗಳಿಲ್ಲ ಬೆಳೆಯ ರಕ್ಷಣೆಯಾಗದಿದ್ದರೆ ಸರಕಾರವು ರೈತರಿಗೊದಗುವ ನಷ್ಟವನ್ನು ಹೇಗೆ ಭರಮಾಡುವ ವಿಚಾರದಲ್ಲಿದೆ? [illegible] ನಿವಾರಣೆಗಾಗಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ [illegible] ಮಂಡಳ ನೇಮಿಸಲ್ಪಟ್ಟಿದೆ ಆ ಮಂಡಳದವರು ವಿಚಾರ ಮಾಡಬಹುದು ಗ್ರಾಮೋದ್ಧಾರವು ಜಿಲ್ಲಾ [illegible] ಅಧ್ಯಕ್ಷತೆಯಲ್ಲಿಯೇ ನಡೆಯುತ್ತಿದೆ ಕಾಡಾನೆ ಮೊದಲಾದ ಹಿಂಸ್ರ ಪಶುಗಳ ಹಾವಳಿಯಿಂದ ಬೆಳೆದ ಪೈರು ನಾಶವಾಗುತ್ತಿರುವಾಗ ರಕ್ಷಣೆ ಮಾಡದಿದ್ದರೆ ಗ್ರಾಮೋದ್ಧಾರ ಮಂಡಳಗಳಿಂದೇನು ಪ್ರಯೋಜನ?

ಹೊನ್ನಾವರ— (ತಾ ೧—೧೧—೩೫) ಹೊನ್ನಾವರ ಮ್ಯುನಿಸಿಪಾಲಿಟಿಯ ಮೇಲೆ ತೆರಿಗೆದಾರರು [illegible] ಹಂಗಾಮಿ ತಾಕೀದಿಯ ವಿಚಾರ ಈ ಹೊತ್ತಿತ್ತು, ಮುನಿಸಿಪಾಲಿಟಿ ಕಡೆಯಿಂದ ರಾ। ಪಿ. ಜಿ. [illegible] ವಕೀಲರವರು ಹಾಜರಾಗಿ ಉದಾಹರಣೆಯನ್ನು [illegible] ಈ ಹಂಗಾಮಿ ತಾಕೀದಿ ಅರ್ಜಿಯ ವಿಚಾರ ಡಿಶಂಬರ ತಾ ೫ನೇಗೆ ಹಾಕಲ್ಪಟ್ಟಿರುತ್ತದೆ

(ತಾ ೨-೧೧-೩೫) ಪೋಲೀಸರು [illegible] ಬರುವ ಜನಗಳನ್ನು ದೊಡ್ಡಿಗಟ್ಟುವ ಕಾರ್ಯದಲ್ಲಿ ತೊಡಗಿದ್ದಾರೆ ದೊಡ್ಡಿ ತೆರಿಗೆ, ಮೇಲೆ [illegible] ಜನರು ಬೇಕಾಗಿದ್ದರು [illegible] ಇದ್ದಿಲ್ಲ ಅದಿಲ್ಲವೆಂದೇ [illegible] ಈ ಹೊತ್ತು ಒಂದು [illegible] ದನಗಳು [illegible] ಕೊಟ್ಟಿಗೆಗೆ ಹೋಗುತ್ತಿದ್ದವು

ಪೋಲೀಸರು ಅವಕ್ಕೆ ದೊಡ್ಡಿಗೆ ಒಯ್ಯಲಾರಂಭಿಸಿದರು ಹಟ್ಟಿಗೆ ಒಯ್ಯುವ ದಾರಿ ಕೊಟ್ಟಿಗೆ ಹಾದುಹೋಗುತ್ತದೆ ಕೊಟ್ಟಿಗೆ ಹಿಂದೊಡನೆ ದನಗಳು ತಪ್ಪಿಸಿಕೊಂಡು ಕೊಟ್ಟಿಗೆ ಸೇರಿದವು ಪೋಲೀಸರು ಎಷ್ಟು ಪ್ರಯತ್ನ ಮಾಡಿದಾಗ್ಯೂ ದೊರಕುದಿಲ್ಲ ಬಂದಕ್ಕೆ ತಾಪತ್ರ ದೊಡ್ಡ ಸರಿ!

(ತಾ ೧—೧೧—೩೫) ಈ ಹೊತ್ತು ಕುಂದಬ್ಬೆಲ ಮತ್ತು ಹಳದೀಪುರದಲ್ಲಿ ನಡೆದ ಪ್ರಕಾರಗಳನ್ನು ಕೇಳಿದರೆ ಮೈ ನಡುಗುತ್ತದೆ! ಒಬ್ಬ ಹುಡುಗನ ಕೈಗೆ ಚಿನ್ನದ ಬಳೆಯಿತ್ತು. ಅದನ್ನು ಯಾರೋ ಒಬ್ಬನು ಕಂಡು ಹುಡುಗನ ಕೈ ಅಂಗೈಸಹಿತ ಕಡಿದು ತೆಗೆದುಕೊಂಡು ಪರಾರಿ. ಹುಡುಗನು ಗದ್ದೆಗೆ ಹೋಗಿದ್ದನಂತೆ ಹುಡುಗನ ಚೀರಾಟ ಕೇಳಿ ಮನೆಯ ಜನ ಓಡಿ ಬಂದರು. ನೋಡಿದರೆ ಈ ಅನರ್ಥ!!

ಹಳದೀಪುರದ ಚಹದಂಗಡಿಯಲ್ಲಿ ಚಹ ಕುಡಿದ ಹಣ ಬಹು ದಿವಸಗಳಿಂದ ಬಾಕಿಯಿತ್ತು ಅಂಗಡಿಕಾರನಿಗೂ ಚಹ ಕುಡುಕನಿಗೂ ಮಾತಿಗೆ ಮಾತಾಗಿ ಕೊನೆಗೆ ಅಂಗಡಿಕಾರನು ಕತ್ತಿಯಿಂದ ಕೈಮೇಲೆ ಹೊಡೆದನು ಕೈಬೆರಳುಗಳಿಗೆ ಒಳ್ಳೇ ಘಾಯಗಳಾಗಿವೆ ಇದೆಂಥ ನ್ಯಾಯ? ಜನರಿಗೆ ಹೊಟ್ಟೆ ತುಂಬುವದೇ ಕಷ್ಟವಾಗಿದೆ ದುಡ್ಡು ಎಲ್ಲಿಯೂ ಇಲ್ಲ ಹೊಟ್ಟೆ ಕೇಳುವದಿಲ್ಲ, ತೃಪ್ತಿಯಿಲ್ಲ ಹೊಟ್ಟೇ ನಿನ್ನಿಂದ ಕಷ್ಟ!

ಭಟಕಳ— (ತಾ ೨—೧೧—೩೫) ಬಿಸಿಲು ಕಾಯುತ್ತದೆ ಕೆಲ ಒಕ್ಕಲಿಗರು ಗದ್ದೆ ಕೊಯ್ಯಲಾರಂಭಿಸಿದ್ದಾರೆ.

ಇಲ್ಲಿಯ ವ್ಯಾಯಾಮ ಕಲಿಸುವರು ಲಾಠಿ ಮತ್ತು ಮಲಕಂಬ ಇವುಗಳ ಕಸರತ್ತು ಕಲಿಸುವ ಏರ್ಪಾಟು ಮಾಡಿದ್ದಾರೆ

ಮುಂಡಳ್ಳಿ ಗ್ರಾಮದಲ್ಲಿ ಕಳೆದ ಜೂನ ತಿಂಗಳಲ್ಲಿ ಮಂಜಯ್ಯನೆಂಬ ದೇವಾಡಿಗನ ಖೂನಿಮಾಡಿದ ಬಗ್ಗೆ ಕಾಪ್ಪಯ್ಯ ಮತ್ತು ಮಂಜಯ್ಯ ಎಂಬ ಇಬ್ಬ ದೇವಡಿಗರ ಮೇಲೆ ನಡೆದ ಖೂನಿ ಖಟ್ಲೆಯ ವಿಚಾರ ಕಾರವಾರ ಸೆಶನ್ಸ ಕೋರ್ಟಿನಲ್ಲಿ ಕಳೆದ ತಾ ೧೫ನೇ ಯಿಂದ ೨೧ರ ತನಕ ನಡೆದು ಆರೋಪಿಗಳಿಬ್ಬರೂ ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟಿದ್ದಾರೆ

ಮುರ್ಡೇಶ್ವರದ ನಾಮಧಾರಿ ಸಮಾಜದಲ್ಲಿ ೨ ಪಕ್ಷಗಳಾಗಿವೆ ಒಂದು ಪಕ್ಷಕ್ಕೆ ಮಂಜಯ್ಯ ಪಕ್ಷವೆಂದು ಹೆಸರು ಬಿದ್ದಿದೆ. ಒಂದು ಪಕ್ಷದವರು ಸಾಬು ಮಕದೂಮ ಮಹಮ್ಮದ ಘೌಸಿಯಾ ಇವರ 'ಉರೂಸ' ಉತ್ಸವವನ್ನು ಸಾಬರುಗಳ ತಾಬ್ದ ತಿಥಿಯ ದಿನ ನೆರವೇರಿಸಿದ್ದರು ಮಂಜಯ್ಯ ಪಕ್ಷದ ಜನರು ಸದರಿ ಉತ್ಸವದಲ್ಲಿ ಸೇರಲಿಲ್ಲ ಅವರು ಆ ಸಾಬರುಗಳ ಇನ್ನೊಂದು "ಉರೂಸ" ಉತ್ಸವ ಆರಂಭಿಸಬೇಕೆಂದು ತಯಾರಿ ಮಾಡಲಾರಂಭಿಸಿದರು. ವಿರೋಧಿ ಪಕ್ಷದವರು ಇದಕ್ಕೆ ವಿರೋಧ ಮಾಡಿದರು "ಉರೂಸ" ಉತ್ಸವವನ್ನು ವರ್ಷದಲ್ಲಿ ಒಂದೇ ಸಾರೆ ಮಾಡತಕ್ಕದ್ದೆಂತಲೂ, ಅದು ಈ ಹಿಂದೆ ಯೋಗ್ಯ ಕಾಲದಲ್ಲಿ ಆಗಿಹೋಗಿರುತ್ತದೆಂತಲೂ ತಕ್ರಾರು ಮಾಡಿದರು. ಮಂಜಯ್ಯ ಪಕ್ಷದವರ ಹೊಸ ಉತ್ಸವದಿಂದ ಊರಲ್ಲಿ ಭಂಗ ಇಲ್ಲದೆ ಶಾಂತತೆ ಭಂಗವಾಗುವದೆಂದು ಕಂಡುಬಂದದ್ದರಿಂದ ಪ್ರಾಂತ ಸಾಹೇಬರು ಕ್ರಿ. ಪ್ರೋ. ಕೋಡ ಕಲಂ ೧೪೪ ರನ್ವಯ ಹೊಸ "ಉರೂಸ" ಉತ್ಸವ ಮಾಡಲಾಗದೆಂದು ಮನಾಯಿ ಹುಕುಮು ಕೊಟ್ಟಿದ್ದಾರೆ.

ಸಿದ್ದಾಪುರ— ಸಿದ್ದಾಪುರ ಸಬರಿಜಿಸ್ಟ್ರಾರರ ಕಾರಭಾರವು ಅವರ "ಮರ್ಜಿ" ಯಂತೆ ನಡೆಯಲಾರಂಭಿಸಿದೆ! ಅದಕ್ಕೆ ಕಾಯಿದೆ-ನಿಯಮಗಳ ನಿಯಂತ್ರಣವಿಲ್ಲ! ತಾ ೨೫-೧-೩೫ನೇಗೆ ಹಿರೇಕೈ ಗಣಪತಿ ರಾಮಚಂದ್ರ ಹೆಗಡೆ ಎಂಬುವರು ಅಪ್ರಾಯಸ್ಥರಿರುತ್ತಿದ್ದಾಗ್ಯೂ—೮ ದಿನ ಅವರಿಗೆ ೧೮ ವರ್ಷ ಮುಗಿಯಲು ಇನ್ನೂ ಎರಡು ದಿವಸಗಳಿದ್ದವು—ಅವರು ಜಾಲೀಕೊಪ್ಪದ ವೆಂಕಪ್ಪ ಹೆಗಡೆ ಇವರಿಗೆ ಬರಕೊಟ್ಟ ರೂ ೨..೦ರ ಕ್ರಯ ದಸ್ತನ್ನು ಸಬರಿಜಿಸ್ಟ್ರಾರರು ಬಿನ್-ತಕ್ರಾರ ರಿಜಿಸ್ಟ್ರ ಮಾಡಿದರು! ಅದೇ ಹಿರೇಕೈ ಗಣಪತಿ ಹೆಗಡೆಯವರು ಕಳೆದ ತಾ ೧೩-೧೦-೩೫ನೇಗೆ ಸಲಿವಾಣಿಯ ಗಣಪ ಭಟ್ಟ ಹೊಸಾಳಿ ಅವರಿಗೆ ರೂ ೫೦ಕ್ಕೆ ಬರಕೊಟ್ಟ ಇನ್ನೊಂದು ಕ್ರಯ ದಸ್ತು ರಿಜಿಸ್ಟ್ರಿಗೆ ಬಂದಾಗ, ಅದೇ ಸಬರಿಜಿಸ್ಟ್ರಾರರು ದಸ್ತು ಬರಕೊಟ್ಟವನು ಅಪ್ರಾಯಸ್ಥನಿರುತ್ತಾನೆಂದು, ತಕ್ರಾರು ಮಾಡಿ ದಸ್ತಐವಜು ನೋಂದಿಸಲಿಕ್ಕೆ ಬರುವದಿಲ್ಲೆಂದು ನಿರ್ಣಯ ಕೊಟ್ಟರು! "ಅಪ್ರಾಯಸ್ಥನು ಬರಕೊಟ್ಟ ದಸ್ತು ಸಿಂಧುವಲ್ಲೆಂಬ ನಾ ಬಲ್ಲೆ! ಗಣಪತಿ ಹೆಗಡೆರು ಈಗ ಅಪ್ರಾಯಸ್ಥರಲ್ಲ ಕಳೆದ ಜನವರಿಯಲ್ಲಿ ಅವರು ಬರಕೊಟ್ಟ ಕ್ರಯದಸ್ತು ನೀವು ನೋಂದಣಿ ಮಾಡಿದ್ದೀರಿ! ಈಗ ಮಾತ್ರ ಅವರು ಅಪ್ರಾಯಸ್ಥರೆಂದು ತಕ್ರಾರ ಹೇಳುತ್ತೀರಿ! ಹೀಗೇಕೆ ಮಾಡುತ್ತೀರಿ?" ಎಂದು ಗಣಪ ಭಟ್ಟರು ಕೇಳಲಾಗಿ, "ಅದು ನನ್ನ ಮರ್ಜಿ!" ಎಂದು ಸಬರಿಜಿಸ್ಟ್ರಾರರು ಉತ್ತರ ಕೊಟ್ಟರು! ಮೇಲಧಿಕಾರಿಗಳು ಈ ಮರ್ಜಿಯ ಕಾರಭಾರಕ್ಕೆ ತಡೆಹಾಕಿ ಕಾಯಿದೆಯ ಕಾರಭಾರ ಜಾರಿಯಲ್ಲಿ ತರಬೇಕಾಗಿ ಸೂಚನೆಯಿದೆ

ಅವರ್ಸಾ— ಕಳೆದ ತಾ ೨೬ನೇಗೆ ರಾ। [illegible] ಅಂಗಡಿಯಲ್ಲಿ ಲಕ್ಷ್ಮೀ ಪೂಜೆಯಾಯಿತು ಅಂಗಡಿಯ ಮುಂದಿನ ಪಟಾಂಗಣದಲ್ಲಿ ರಾ॥ ಪಟವಾರ್ಕರ ಹರಿದಾಸರ ಕೀರ್ತನೆಯಾಯಿತು ಕೀರ್ತನಕಾರರು ಅಸ್ಪೃಶ್ಯತಾನಿವಾರಣೆಯ ಆವಶ್ಯಕತೆಯನ್ನು ಸ್ಪಷ್ಟವಾಗಿ ತೋರಿಸಿದರು ಸುಮಾರು ೫೦೦ ಸ್ತ್ರೀ-ಪುರುಷರು ನೆರೆದಿದ್ದರು ಹರಿಜನ ಬಾಂಧವರು ಬೇರೆಯವರೊಡನೆ ಸೇರಿಯೇ ಕುಳಿತುಕೊಂಡಿದ್ದರು ಎಲ್ಲರೂ ಮುದದಿಂದ ಕೀರ್ತನೆ ಕೇಳಿ ಪ್ರಸಾದ ತಕ್ಕೊಂಡರು

ಇಲ್ಲಿ ಹುಲಿ ಉಪದ್ರ ವಾಗುತ್ತಿದ್ದ ಸಂಗತಿ ಮಾ। ಡಿಸ್ಟ್ರಿಕ್ಟ ಜಜ್ಜ ಸಾಹೇಬರಿಗೆ ತಿಳಿದಿದೆ ಹುಲಿ ಬೇಟೆಯಾಡುವದಕ್ಕೆ ಅವರು ೨—೩ ಸಾರೆ ಬಂದಿದ್ದರು ಊರ ಜನರ ದುರ್ದೈವದಿಂದ ಹುಲಿಯು ಅವರ ಕೈಗೆ ಬೀಳಲಿಲ್ಲ! ಸಾಹೇಬರು ಪುನಃ ತಿರುಗಿ ಬರುತ್ತೇವೆಂದು ಹೇಳಿದ್ದಾರೆ ಸಾಹೇಬರ ಕೈಯಿಂದ ಹುಲಿ-ಕಷ್ಟ ದೂರಾಗಲೆಂದು ಜನರು ಹಾರೈಸುತ್ತಾರೆ

ಕುಂಭಾರವಾಡಾ— ಅಣಶಿಯಿಂದ ಬೆಳಗಾಂವಿಗೆ ಹೋಗುವ ಇಂಜಿನಿಯರ ಖಾತೆಯ ರಸ್ತೆಯು ಈ ಊರೊಳಗಿಂದ ಹಾದು ಹೋಗುತ್ತದೆ ಈ ವರ್ಷ ರಸ್ತೆಯು ಚಾಲ್ತಿ ದುರುಸ್ತಿಯಾಗಿದೆಯೋ ಇಲ್ಲವೆಂದು ತಿಳಿಯಲಿಲ್ಲ ಈ ಊರಲ್ಲಿ ರಸ್ತೆಯ ಎರಡು ಬದಿಗೆ ಮನೆಗಳಿವೆ, ಶಾಲೆಯಿದೆ, ಸರಕಾರಿ ಆಫೀಸುಗಳಿವೆ ಜನರ ತಿರುಗಾಡುವ ರಸ್ತೆಯದು ಈಗ ರಸ್ತೆಯ ಮೇಲೆ ಗಟಾರಗಳಲ್ಲೂ ಹುಲ್ಲು ಬೆಳೆದು ನಿಂತಿದೆ ಹಾವು ಮುಂತಾದ ಪ್ರಾಣಿಗಳಿಗೆ ಒಳ್ಳೇ ಆಶ್ರಯ ದೊರೆತಿದೆ! ಶಾಲೆಗೆ ಹೋಗುವ ಚಿಕ್ಕ ಮಕ್ಕಳಿಗೂ ತಿರುಗಾಡುವ ಜನರಿಗೂ ದಾರಿಯ ಮೇಲೆ ನಿರ್ಭಯವಾಗಿ ತಿರುಗಾಡಲು ಅಂಜಿಕೆಯುಂಟಾಗುತ್ತದೆ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಲಕ್ಷ್ಯಕೊಟ್ಟು ರಸ್ತೆ ದುರುಸ್ತಿ ಮಾಡಿಸಬೇಕು

ಇಲ್ಲಿ ಸುತ್ತಲಿನ ಹಳ್ಳಿಗಳಲ್ಲಿ ದನಗಳ ಕಾಲುಬೇನೆ ಹಬ್ಬಿದೆ ಈ ಬಗ್ಗೆ ದನಗಳ ಉಪಚಾರಕ್ಕೆಂದು ತಾ ೧-೧೧-೩೫ಕ್ಕೆ ಹಳಿಯಾಳದಿಂದ ದನಗಳ ಡಾಕ್ಟರರು ಬಂದಿದ್ದರು. ಮಧ್ಯಾಹ್ನದ ಸುಮಾರಿಗೆ ಅವರು ಬಂದು ಮುಟ್ಟಿದರು! ಬಂದವರು ತಾಸು ಉಳಿದು ಹಾಗೆಯೇ ಹಳಿಯಾಳಕ್ಕೆ ತಿರುಗಿ ಹೋದರು! ಡಾಕ್ಟರರು ಯಾವ ದನವನ್ನೂ ನೋಡಲಿಲ್ಲವಂತೆ! 'ಬಂದಾ ಪುಟ್ಟ ಹೋದಾ ಪುಟ್ಟ!' ಎಂಬಂತೆ ಡಾಕ್ಟರರು ಪ್ರವಾಸ ಮಾಡಿದರೆ ರೈತರಿಗೇನು ಉಪಯೋಗ? ಡಾಕ್ಟರ ಸಾಹೇಬರು ವಿಚಾರ ಮಾಡಿ ತಮ್ಮ ಸಂಚಾರಕ್ರಮ ಸುಧಾರಿಸಬೇಕು

ಕಾರವಾರ— ಅಜ್ಞಾನ ಬಾಲಕೃಷ್ಣ ತಾಯಿ ಫೇಮ ಇವನ ಪ್ರಕರಣವು ಕಳೆದ ಬಾರಿ ಇನ್ನೊಂದಾವರ್ತಿ ಮಾ। ಡಿಸ್ಟ್ರಿಕ್ಟ ಜಜ್ಜ ಸಾಹೇಬರ ಮುಂದೆ ಬಂತು ನಾಮದಾರ ಹಾಯಕೋರ್ಟಿನವರು ನೇಮಿಸಿದ, ಸದರಿ ಅಪ್ರಾಯಸ್ಥ ಬಾಲಕೃಷ್ಣನ ರಕ್ಷಕ ರಾ। ಬಾಸೂವಲಿಮನರು ತಮ್ಮಿಂದ ಅವನ ಪಾಲನ-ಪೋಷಣ ಮಾಡುವದು ಅಸಾಧ್ಯವೆಂದು ಕಳೆದ ಸಲದ ಅರ್ಜಿಗಳಲ್ಲಿ ಕೋರ್ಟಿಗೆ ಅರುಹಿದ್ದರು (ಕ್ರಿಶ್ಚನ ಧರ್ಮದ) ನೀನಾ ಇವರು ತಾವಿಲ್ಲದ ಸಮಯದಲ್ಲಿ ಹುಡುಗನನ್ನು ಬಿಡಿಸಿಕೊಂಡು ಹೋಗುತ್ತಾರೆಂಬ ಅವರು ಕೋರ್ಟಿಗೆ ತಿಳಿಸಿದ್ದರು. ಜಜ್ಜ ಸಾಹೇಬರು ಭಾರತ ಇನಶೂರನ್ಸ ಕಂಪನಿಯ ಇಲ್ಲಿಯ ಏಜಂಟರಾದ ರಾ। ಡಿ ಎಸ್ ಮಾವಿನಕುರ್ವೆ ಇವರಿಗೆ ಪಾಲಕರಾಗಿ ನೇಮಿಸಿದ್ದರು. ನೀನಾ ಇವರೇ ಅವರ ಹೆಸರು ಸೂಚಿಸಿದ್ದರು! ಕಳೆದ ಫೆಬ್ರುವರಿ ತಿಂಗಳಲ್ಲಿ ರಾ। ಮಾವಿನಕುರ್ವೆಯವರ ನೇಮಣೂಕಿಯನ್ನು ರದ್ದುಪಡಿಸುವ ಬಗ್ಗೆ ಇನ್ನೊಂದು ಅರ್ಜಿಯಾಯಿತು. ಕೋರ್ಟ ಹುಕುಮಿನಂತೆ ರಾ। ಮಾವಿನಕುರ್ವೆಯವರು ಹುಡುಗನನ್ನು ತಮ್ಮ ಕಡೆಗೆ ಇಟ್ಟುಕೊಳ್ಳಲಿಲ್ಲವಾಗಿಯೂ, ಇವನ್ನು ಬಾಲಕೃಷ್ಣನು ನೀನಾರ ಕಡೆಗೇ ಇರುತ್ತಾನೆಂತಲೂ ಅರ್ಜಿದಾರರು ದೂರಿಕೊಂಡಿದ್ದರು ರಾ। ಮಾವಿನಕುರ್ವೆಯವರು ಈ ಸಂಗತಿ ಅಲ್ಲಗಳೆದು, ಹುಕುಮು ಆದಂದಿನಿಂದ ಹುಡುಗನು ತಮ್ಮ ತಾಬೆಯಲ್ಲಿದ್ದಾನೆಂತಲೂ ತಾವು ಹೊರಗೆ ಪ್ರವಾಸಕ್ಕೆ ಹೋಗುತ್ತೇವಾದ್ದರಿಂದ ಹುಡುಗನ ಊಟ-ಉಳಕೊಳ್ಳುವ ವ್ಯವಸ್ಥೆಯನ್ನು ತಮ್ಮ ಕಾರಕೂನರ ಮನೆಯಲ್ಲಿ ಮಾಡಿರುತ್ತೇವಾಗಿಯೂ ಕೈಫಿಯತು ಹಾಜರಪಡಿಸಿದ್ದರು ಅರ್ಜಿದಾರರ ತರ್ಫೆನಿಂದ ಮೂವರ ಸಾಕ್ಷಿಯಾಯಿತು (೧) ಬಾಲಕೃಷ್ಣನ ಕೊರಳಲ್ಲಿ ಆತನು ಕ್ರಿಶ್ಚನ ಹುಡುಗರ ಕೊರಳಲ್ಲಿರುವಂತೆ ಖುರೀಸ ಇದ್ದದ್ದು ತಾವು ನೋಡಿದ್ದೆವೆಂದು ಒಬ್ಬ ಶಿಕ್ಷಕರು ಸಾಕ್ಷಿ ಹೇಳಿದರು, ಬಾಲಕೃಷ್ಣನಿಗೆ ನೀನಾರ ಮನೆಯಲ್ಲಿ ಐದಾವರ್ತಿ ನೋಡಿದ್ದೆವೆಂದು ಒಬ್ಬ ಪೋಲೀಸ ಹವಾಲದಾರರು ನುಡಿದರು ಮೂರಾವರ್ತಿ ತಾವು ಇಗರ್ಜಿಯಲ್ಲಿ ಆ ಹುಡುಗನನ್ನು ನೋಡಿದ್ದೆವೆಂದು ಒಬ್ಬ ಕ್ರಿಶ್ಚಿ ಗೃಹಸ್ಥರು ಹೇಳಿದರು. ರಾ। ಮಾವಿನಕುರ್ವೆಯವರು ಸ್ವತಃ ವಿಚಾರದ ಕಾಲಕ್ಕೆ ಜಬಾನಿಗೆ ಬರಲಿಲ್ಲ! ಅವರ ಕಾರಕೂನನ ಜಬಾನಿ ಮಾತ್ರ ಆಯಿತು ಹೋದ ದಶಂಬರ ತಿಂಗಳ ಲಾಗಾಯಿತು ಬಾಲಕೃಷ್ಣನು ತನ್ನ ಮನೆಯಲ್ಲಿ ಊಟ ಮಾಡುತ್ತಾನೆಂತಲೂ, ರಾ। ಮಾವಿನಕುರ್ವೆಯವರ ಆಫೀಸಿನಲ್ಲಿ ಮಲಗುತ್ತಾನೆಂತಲೂ ಕಾರಕೂನರು ಜಬಾನಿ ಕೊಟ್ಟರು ಇದು ಯುಕ್ತವಲ್ಲೆಂದು ಅಭಿಪ್ರಾಯಪಟ್ಟು "ರಾ। ಮಾವಿನಕುರ್ವೆಯವರು ಹುಡುಗನನ್ನು ತಮ್ಮ ಕಡೆಗೆ ಇಟ್ಟುಕೊಳ್ಳಲು ಸಿದ್ಧರಿರುತ್ತೇವಾಗಿ ತಾ ೧೯ರೊಳಗೆ ಪ್ರತಿಜ್ಞೆಯ ಮೇಲೆ ಕೋರ್ಟಿಗೆ ಬರೆದುಕೊಡದಿದ್ದರೆ, ಅವರ ನೇಮಣೂಕಿ ರದ್ದುಪಡಿಸಲಾಗುವದು" ಎಂದು ಜಜ್ಜರು ಹುಕುಮು ಮಾಡಿದರು ತಾ ೧೯ಕ್ಕೆ ರಾ। ಮಾವಿನಕುರ್ವೆಯವರು ಸದರಿ ಹುಡುಗನನ್ನು ತಮ್ಮ ಸಹೋದರರಾದ ರಾ। ಮಾವಿನಕುರ್ವೆ ವಕೀಲರ ಮನೆಯಲ್ಲಿಡುತ್ತೇವೆಂದೂ ತಮ್ಮ ಮನೆಯ ವ್ಯವಸ್ಥೆಯಾದ ಮೇಲೆ ತಮ್ಮ ಕಡೆಗೆ ಇಟ್ಟುಕೊಳ್ಳುತ್ತೇವೆಂತಲೂ ಅಫಿಡೇವ್ಹಿಟ ಮಾಡಿದರು. ಅರ್ಜಿದಾರರು ರಾ। ಮಾವಿನಕುರ್ವೆಯವರ ನೇಮಣೂಕಿಯನ್ನು ಸ್ಥಿರಪಡಿಸಬಾರದಾಗಿ ವಾದಿಸಿ (೧) ರಾ। ಕೊಪ್ಪೀಕರ, ಪ್ಲೀಡರ, ಹಟ್ಟಿಕೇರಿ, (೨) ರಾ। ವಿಶ್ವಂಭರ ಪಡ್ತಿ, ಕಸ್ಟಮ್ ಕಚೇರಿಯ ಅವಲ ಕಾರಕೂನ (೩) ರಾ। ವಿಠ್ಠಲ ಮಜುಮದಾರ, ಮ್ಯುನ್ಸಿಪಾಲ ಶಿಕ್ಷಕ, ಕಾರವಾರ ಇವರ ಪೈಕಿ ಒಬ್ಬರನ್ನು ರಕ್ಷಕರಾಗಿ ನೇಮಿಸಬೇಕೆಂದು ಬೇಡಿಕೊಂಡರು ರಾ। ಮಾವಿನಕುರ್ವೆಯವರ ಮೇಲಿನ ಅಫಿಡೇವ್ಹಿಟದಿಂದ ಮಾ। ಜಜ್ಜ ಸಾಹೇಬರಿಗೆ ಸಮಾಧಾನವಾಗಲಿಲ್ಲ ರಾ। ಮಾವಿನಕುರ್ವೆಯವರು ತಾ ೨೫ಕ್ಕೆ ಇನ್ನೊಂದು ಅಫಿಡೇವ್ಹಿಟ ಮಾಡಿ, ಬಾಲಕೃಷ್ಣನನ್ನು ತಮ್ಮ ಕಡೆಗೇ ಇಟ್ಟುಕೊಳ್ಳಲಿಕ್ಕೆ ತಯಾರಿದ್ದೇವಾಗಿ ತಿಳಿಸಿದರು! ಪ್ರವಾಸದ ವೇಳೆ ಹೋಗಬೇಕಾಗುತ್ತದೆ, ತಮ್ಮ ಗೃಹಕೃತ್ಯ ನಡೆಯುತ್ತಿಲ್ಲ, ತಾವೇ ತಮ್ಮ ಸಹೋದರರ ಮನೆಯಲ್ಲಿ ಊಟಕ್ಕೆ ಹೋಗುತ್ತೇವೆಂದು ಪತ್ನಿ ಪ್ರತಿಜ್ಞೆಯ ಮೇಲೆ ಬರೆದಿರುವ ರಾ। ಮಾವಿನಕುರ್ವೆಯವರು ವಾರಂವಾರ ಎರಡೇ ದಿನಗಳಲ್ಲಿ ಹುಡುಗನನ್ನು ತನ್ನ ಮನೆಯಲ್ಲೇ ಇಟ್ಟುಕೊಳ್ಳುತ್ತೇನೆಂದು ಹೇಳಿದ್ದು ನೋಡಿ ಆಶ್ಚರ್ಯವಾಯಿತು! ಅದಾಗ್ಯೂ ಕೋರ್ಟಿನವರು ಈ ಹೊಸ ಅಫಿಡೇವ್ಹಿಟದಿಂದ ಸಮಾಧಾನಪಟ್ಟು ರಾ। ಮಾವಿನಕುರ್ವೆಯವರ ನೇಮಣೂಕಿಯನ್ನೇ ಸ್ಥಿರಪಡಿಸಿದರು. ರಾ। ಮಾವಿನಕುರ್ವೆಯವರ ಮನೆ ಮತ್ತು ನೀನಾರ ಮನೆ ನೆರೆಹೊರೆಯಲ್ಲಿವೆ ರಾ। ಮಾವಿನಕುರ್ವೆಯವರು ಕೋರ್ಟ ಹುಕುಮಿನಂತೆ ಹಿಂದೆ ನಡೆಯಲಿಲ್ಲವೆಂದು ಕಂಡುಬಂದಿದೆ ಹೀಗಿರುವಾಗ ಅವರನ್ನೇ ಪಾಲಕರಾಗಿ ನೇಮಿಸಿದ್ದು ಉಚಿತವಾಗಲಿಲ್ಲವೆಂದು ಜನರು ಹೇಳಿಕೊಳ್ಳುತ್ತಾರೆ ಹಿಂದೂ ಸಭೆಯವರು ಮುಂದೇನು ಮಾಡುತ್ತಾರೆಂದು ಜನರು ನಿರೀಕ್ಷಿಸುತ್ತಾರೆ

ಅಲ್ಲಲ್ಲಿ ಇಷ್ಟಿಷ್ಟು!

[೭ನೇ ಪೇಜಿನಿಂದ ಮುಂದರಿಸಿದ್ದು]

ತ್ತಿದ್ದರು ಬಂದಿವಾಡೆಯೊಳಗಿನ ಇವರ ಸಭೆಯಲ್ಲಿ ಕೊಲೆಯಾಗುವ ನರಕ ಶ್ರೀ ದೇವರ ಪೂಜೆ ಉತ್ಸವ ಮೊದಲಾದ ನಿತ್ಯ-ನೈಮಿತ್ತಿಕ ದೇವ ಕಾರ್ಯಗಳು ನಡೆಯುತ್ತಿದ್ದವು. ಈಗ ಆ ಜಂಗಮನಿಗೆ ಸರಕಾರ ಮುದ್ರೆ ಒತ್ತಿದೆ. ಒಂದು ದೀಪ ಮಾತ್ರ ಉರಿಯುತ್ತಿದೆ. ಕೊಲೆಯ ವ್ಯಸನದಿಂದಲೋ, ಪಂಜರದ ದುಃಖದಿಂದಲೋ [illegible] ಸ್ವಾಮಿಗಳ ಜಪ ತಪದ ತೇಜೇ ಬಂದೊದಗಿದ ಆಪತ್ತಿನಿಂದ ೧೦ ದಿವಸ ಪತೀಜಪ್ತಿಗೆ ಊಟವದಿಲ್ಲವಂತೆ! ಅತಿ ವ್ಯಸನಾಕ್ರಾಂತರಾಗಿ ತನ್ನ ಅಸ್ತಿತ್ವವನ್ನು ಮಾತ್ರ ಆಧಾರಿಸಿಕೊಳ್ಳಬಲ್ಲ ಗಡ ಕಾಣಿಕೆ ಕ್ಷೀಣಗಿಯೂ, ಆ ದೀಪವ ನೆರಳಿಂದಲೇ ವನ ಸಕ್ಕೆ ಒದೊದಗಿದ ಆಪತ್ತಿನ ಗ್ರಹಿಕೆಯಾಗಿ ನೆರೆಹೊರೆಯವರ ಕೊರಗುತ್ತಾರಾಗಿಯೂ ಮರಗುತ್ತಾರಾಗಿಯೂ ಹೋಗುತ್ತಾರೆ! ಶ್ರೀ ಬಸವಲಿಂಗ ಒಡೆಯರವರು ಸುರಕ್ಷಿತ ಮಾಳಿಗೆಯ ಗರ್ಭಗೃಹದ ಕೋಣೆಯ ಕಿಟಕಿಯೊಳಗಿಂದ ದರ್ಶನ [illegible] ಸ್ವತಃ ಒಡಹುಟ್ಟಿದ ತಮ್ಮಂದಿರಾದ ಮಘಲಿಂಗ ಒಡೆಯರವರು ಕೊಲೆ ಮಾಡಿದ್ದು ಆಶ್ಚರ್ಯವೇ. ಸಿಂಹ ಹುಲಿಯಂಥ ಹಿಂಸ್ರ ಪಶುಗಳಿಗೆ ಸುಳಿವು ಕೊಡದೆ ಪಕ್ಕನೆ ಕೊಲ್ಲುವದು ಪಾಪವೆಂದೂ ಅಪೌರುಷೇಯವೆಂದೂ ಎಣಿಸಿ ಅವನನ್ನು ಎಚ್ಚರಿಸಿ ಬೇಟೆಯಾಡುವ ಪುಣ್ಯಸಂಗ್ರಹ ಬಳಿಯಲ್ಲಿದ್ದಾಗ ನಿರಪರಾಧಿ ಶ್ರೀ ಬಸವಲಿಂಗ ಒಡೆಯರವರು ಈ ಪ್ರಕಾರ ತೀರಿಕೊಂಡಿದ್ದು ನಿಜವಾಗಿಯೂ ಶೋಚನೀಯ.

⁂

ಸೌ| ಕಮಲಾ ನೆಹರೂರವರ ಪ್ರಕೃತಿ ಕ್ರಮವಾಗಿ ಸುಧಾರಿಸುತ್ತ ನಡೆದಿದೆಯೆಂದು ತಿಳಿಸಲು ತುಂಬಾ ಸಂತೋಷ. ಪಂಡಿತ ಜವಾಹಿರಲಾಲರು ಒಳ್ಳೆ ಸಮಾಧಾನಪಟ್ಟು ೧೦ ದಿನಗಳ ಬಗ್ಗೆ ಲಂಡನಿಗೆ ತೆರಳಿದ್ದಾರೆ. ಮಂಗಳವಾರ ಮಧ್ಯಾಹ್ನ ಲಂಡನಿನೊಳಗಿನ ವಿಕ್ಟೋರಿಯಾ ಸ್ಟೇಶನಿನಲ್ಲಿ ಮಗಳಾದ ಇಂದಿರೆಯೊಡನೆ ಅವರು ಇಳಿದ ಕೂಡಲೆ 'ಜವಾಹಿರಲಾಲಕಿ ಜೈ' ಎಂಬ ಅದ್ಭುತವಾದ ಜಯ ಘೋಷಗಳಿಂದ ಇಡೀ ಸ್ಟೇಶನವು ತುಂಬಿಹೋಗಿತ್ತು. ಹಿಂದೀಯರೂ, ಬ್ರಿಟಿಶರೂ ಪಂಡಿತ ಜವಾಹಿರಲಾಲರ ಅಪೂರ್ವ ಸ್ವಾಗತ ಮಾಡಿದರು. ೧೯೩೧ನೇ ಇಸ್ವಿಯಲ್ಲಿ ರೌಂಡ ಟೇಬಲ್ ಪರಿಷತ್ತಿನ ಬಗ್ಗೆ ಮಹಾತ್ಮರು ಲಂಡನಿನಲ್ಲಿ ಇಳಿದಾಗ ಇದೇ ಪ್ರಕಾರ ಉತ್ಸಾಹಪೂರ್ಣ ಸ್ವಾಗತವಾಗಿತ್ತಂತೆ. ಪಂಡಿತ ಜವಾಹಿರರ ಪ್ರಕೃತಿ ನೆಟ್ಟಗಿದ್ದು ಉತ್ಸಾಹಪೂರ್ಣವಿದೆ. ಗುರುವಾರ ದಿನ ಅವರ ಸನ್ಮಾನಾರ್ಥವಾಗಿ ಭೋಜನ ಸಮಾರಂಭವು ಜರುಗಿತು. ಹಿಂದೀ ಬ್ರಿಟಿಶ ಅಧಿಕಾರಿಗಳು ಕೂಡಿ ಸುಮಾರು ೩೦೦ ಜನರು ಒಟ್ಟುಗೂಡಿದ್ದರು. ಸ್ಕೂಲ್ ದಾರಿಗಳು ಪ್ರಮುಖರು ಹಿಂದೀ-ಬ್ರಿಟಿಶ ಪ್ರಮುಖರ ಜತೆ ವಿಚಾರ ವಿನಿಮಯ ಮಾಡುವ ವ್ಯಾಪಾರದಿಂದಲೇ ಪಂಡಿತ ಜವಾಹಿರಲಾಲರು ಲಂಡನಿನಲ್ಲಿ ೧೧ ದಿನಗಳ ಮುಕ್ಕಾಮು ಮಾಡುತ್ತಾರೆ. ಅಲ್ಲಿಯ ಹಿಂದೀಯರು ಪಂಡಿತ ಜವಾಹಿರರಿಗೆ ಮಾನಪತ್ರವನ್ನು ಕೊಟ್ಟು ಸತ್ಕರಿಸಿದರು. ಪಂಡಿತ ಜವಾಹಿರಲಾಲರು ಲಂಡನಿನೊಳಗಿನ ಕಾರ್ಯ ಮುಗಿಸಿಕೊಂಡು ಪುನಃ ಬೇಡನ್‌ವಿಲ್ಲರಿಗೆ ಮರಳಿ ಅಲ್ಲಿಯೇ ಪತ್ನಿಯರು ಸಂಪೂರ್ಣವಾಗಿ ಸ್ವಾಸ್ಥ್ಯ ಹೊಂದುವವರೆಗೆ ಉಳಿಯುವರು. ಪಂಡಿತ ಜವಾಹಿರಲಾಲರು ಪ್ರಕೃತ ಪರಿಸ್ಥಿತಿಯ ಕುರಿತು ಒಂದು ಗ್ರಂಥವನ್ನು ಜೈಲಿನಲ್ಲಿ ಬರೆದಿದ್ದರು. ಅದನ್ನು ಲಂಡನಿನೊಳಗಿನ [illegible] ಸದ್ಯಕ್ಕೆ ಪ್ರಕಟಿಸ ಮಾಡಿದ್ದಾರೆ. ಸೌ| ಕಮಲಾ ನೆಹರೂರವರಿಗೆ ಶೀಘ್ರವೇ ಸ್ವಾಸ್ಥ್ಯ ಪ್ರಾಪ್ತಿಯಾಗಿ ಸತಿ-ಪತಿಯರು ಸ್ವದೇಶಕ್ಕೆ ಮರಳಿ ಬರಲೆಂದು ಹಿಂದವಾಸಿಯರ ಪ್ರಾರ್ಥನೆ.

⁂

ಪತಿಭಕ್ತಿ ಪಾತಿವ್ರತ್ಯಪ್ರಭಾವ ಇಂದಿಗೂ ನಮ್ಮೀ ಭರತ ಭೂಮಿಯಲ್ಲಿ ಕಾಣಬರುತ್ತದೆ! ಫತ್ತೇಪುರದ ಶ್ರೀ| ಜಗದೀಶಪ್ರಸಾದ ಅಸ್ಥಾನಾ ಎಂಬ ಎಳೆ ಪ್ರಾಯದ ಜಮೀನದಾರರೊಬ್ಬರು ಅಸ್ವಾಸ್ಥ್ಯದಿಂದ ತೀರಿಕೊಂಡರು. ಪತಿಭಕ್ತಿಪರಾಯಣಳಾದ ಅವರ ಪತ್ನಿಯು [illegible] ಉಲ್ಲಸಿತವೃತ್ತಿಯವರಾಗಿದ್ದರು. ಇದಾನಂದ ಕೇಳಲು ಅವಳು ನುಡಿದದ್ದೇನೆಂದರೆ - "ನಾನು ಸೂತಕದ ೧೩ ದಿನಗಳೊಳಗ ಪತಿಯೊಡನೆ ಸ್ವರ್ಗವಾಸವನ್ನನುಭವಿಸಲು ಹೋಗುತ್ತೇನೆ. ಪತಿಗಳಿಗೆ ದಹನ ಸಂಸ್ಕಾರ ಸ್ಥಳದಲ್ಲಿಯೇ ನನಗೆ ದಹನ ಮಾಡಿದರೆ ನಿಮಗೊಂದು ಚಮತ್ಕಾರ ಕಂಡುಬಂದೀತು. ಪತಿವ್ರತೆಯರ ಪಾವಿತ್ರ್ಯವು ನಿಮಗೆ ದೃಗ್ಗೋಚರವಾಗುವದು." ೧೩ನೇ ದಿನ ಅವಳು ತೀರಿಕೊಂಡಳು. ಉತ್ತರವಿಧಿಗಳು ನಡೆದವು. ಚಿತೆ ಪತಿಗಳ ದಹನ ಸ್ಥಳದಲ್ಲಿಯೇ ರಚಿಸಲ್ಪಟ್ಟಿತು. ಶವ ಇಟ್ಟು ಚಿತೆಗೆ ಬೆಂಕಿ ಹಚ್ಚುವರು. ಆದರೆ ಚಿತೆಗೆ ಬೆಂಕಿಯೇ ಹತ್ತದು! ಒಂದು ಕಡೆ ಹತ್ತಿತು, ಆದರೆ ಕೂಡಲೇ ನಂದಿಹೋಯಿತು. ದಹನ ಸಂಸ್ಕಾರಕ್ಕಾಗಿ ಹೋದವರು ಎಷ್ಟೋ ಪ್ರಯತ್ನಪಟ್ಟರೂ ಅವರಿಂದ ಚಿತೆಗೆ ಬೆಂಕಿ ಹತ್ತಿಸಲಾಗಲಿಲ್ಲ. ಏನು ಮಾಡಬೇಕೆಂದು ಆಲೋಚಿಸುತ್ತಿರುವಲ್ಲಿ ಪಕನೆ ಶವದ ಎದೆಯೊಳಗಿಂದ ಜ್ಯೋತಿಯೊಂದು ಹೊರಟು ನಿಮಿಷದಲ್ಲಿಯೇ ಇಡೀ ಶವವು ಸುವರ್ಣ ಪ್ರಕಾಶದಿಂದ ಆಚ್ಛಾದಿತವಾಯಿತು! ಹಾಗೆಯೇ ಸುಟ್ಟುಹೋಯಿತು. ಆದರೆ ಚಿತೆಗಾಗಿ ರಚಿಸಿದ ಕಟ್ಟಿಗೆಗೆ ಈ ಬೆಂಕಿ ಸ್ಪರ್ಶಿಸಲಿಲ್ಲ. ಅದು ಇದ್ದ ಹಾಗೆಯೇ ಇದ್ದಿತು. ಶವ ಸಂಪೂರ್ಣವಾಗಿ ಅದೃಶ್ಯವಾದ ಬಳಿಕ ಒತ್ತಿಗೆ ಬೆಂಕಿಹತ್ತಿ ಚಿತೆ ಸುಟ್ಟುಹೋಯಿತು. ಪಾತಿವ್ರತ್ಯದ ಮಹಿಮೆ ನೋಡಿಕೊಳ್ಳಿ! ಇಂಥ ಮಹಿಳೆಯರು ನಮ್ಮ ಭರತಭೂಮಿಯಲ್ಲಿ ಇರುವದರಿಂದಲೇ ಭಾರತೀಯರು ಬಾಳ್ವೆ ಮಾಡಿಕೊಂಡಿದ್ದಾರೆ. ಇಂಥವರ ಧರ್ಮಬಲದಿಂದಲೇ ನಮ್ಮ ಪುಣ್ಯಭೂಮಿಯ ಉದ್ಧಾರವಾಗಬೇಕು. ಇಂಥ ಪತಿಭಕ್ತಿ ಬೇರೆ ಯಾವದೇ ದೇಶದಲ್ಲಿ ದೊರಕುವದು ಕಠಿಣ. ಯಾಕಂದರೆ ಪತಿವ್ರತಾಧರ್ಮ ನಮ್ಮ ಸನಾತನ ಧರ್ಮದಲ್ಲಿಯೇ ಹೇಳಲ್ಪಟ್ಟಿದೆ. ಪತಿಸೇವೆಯನ್ನು ಭಕ್ತಿಯಿಂದ ನಡೆಸಿ ಕೃತಾರ್ಥರಾಗಬೇಕಾಗಿ ಹಿಂದು ಧರ್ಮದ ಪರಂಪರೆ ಆಜ್ಞೆ.

⁂

ಈಗಿನ ದಿನಮಾನದಲ್ಲಿ ಕಾಯಕಷ್ಟ ಬೇಡ ಮದ್ದಿಗೆ ಬೆಲೆಯಿಲ್ಲ. ಆದ್ದರಿಂದಲೇ ನಮ್ಮ ಬಡತನ. ಔಷಧೋಪಚಾರಕ್ಕಾಗಿ ಪೂರ್ವಕಾಲದಲ್ಲಿ ದೊಡ್ಡ ದೊಡ್ಡ ಮನೆತನಗಳಿಗೆ ಸಹ ಏನೊಂದೂ ಖರ್ಚು ತಗಲುತ್ತಿದ್ದಿಲ್ಲ. ಗಿಡಮೂಲಿಕೆ ಕಷಾಯ ಇವುಗಳಿಂದ ಮುಖ್ಯವಾಗಿ ಪಾಲಿಗೆ ಚಿಕಿತ್ಸೆ ರೋಗನಿವಾರಣೆಯಾಗುತ್ತಿತ್ತು. ಈಗ ಸ್ವಲ್ಪ ಶೀತವಾದರೆ ಬಾಟ್ಲಿಗಳನ್ನು ಕೊಂಡು ಡಾಕ್ಟರರ ಕಡೆ ಜನರು ಎಡತಾಕುತ್ತಾರೆ. ಔಷಧದ ಬದಲಿಗೆ ಇಂಜಕ್ಶನ್ ಕೊಂಡು ಒಮ್ಮೆಲೇ ರೋಗನಿವಾರಣೆ ಹೊಂದುವ ಭಾಗ್ಯಶಾಲಿಗಳ ದ್ವಾರೆ ಹಣದ ಪರಿವೆಯಿಲ್ಲ. ಸಂಪಾದನೆಯೇನು? ಖರ್ಚೇನು? ಎಂಬ ವಿಚಾರವೇ ಇಲ್ಲ. ಬಾಟ್ಲಿಗಳಲ್ಲಿ ದೊರೆಯುವ ಔಷಧವೆಂತಹದು? ಅದರ ಮೂಲ ಬೆಲೆಯೇನು, ಮಾರಾಟದ ಬೆಲೆಯೇನು? ಎಂಬ ವಿಚಾ

For sale! For sale!! For sale!!

Udipi Syndicate Bank Preference Shares for sale!

Rate less than the market rate!

Preference shares of the face value of Rs 100/- each fully paid bearing 6% interest free of income-tax are offered for sale with the right to recover interest earned up to date It is claimed that the shares go at a premium of Rs 7 by the Bank authorities

These shares will be sold less than the market rates Intending buyers should apply to the following address --

Vithal Subraya Prabhu Shiroorkar,
Post - ANKOLA.

ರವೇ ಇಲ್ಲ ಇಷ್ಟೆಲ್ಲ ಪೂರ್ವಪೀಠಿಕೆ ಮಾಡಲು ಒಂದು ಕಾರಣವಿದೆ ಸರಕಾರಿ ಇಂಜಿನಿಯರ ಖಾತೆಯಲ್ಲಿ ಕೆಲಸ ಮಾಡಿ ಈಗ ನಿವೃತ್ತರಾದ ಶ್ರೀ| ಎಮ್ ಎನ್ ನಾರಾಯಣರವರು ಮಹಾತ್ಮರಿಗೊಂದು ಪತ್ರ ಬರೆದು ಜನಸಾಮಾನ್ಯರ ದಡ್ಡತನವನ್ನು ಬೈಲಿಗೆಳೆದಿದ್ದಾರೆ ಶ್ರೀ| ನಾರಾಯಣರವರು ಈಗ ಗ್ರಾಮೋದ್ಧಾರ ಕಾರ್ಯವನ್ನು ಕೈಕೊಂಡಿದ್ದಾರೆ ಆ ಪ್ರದೇಶದಲ್ಲಿ ಚೇಳಿನ ಉಪದ್ರವ ಬಹಳ ದಿನಂಪ್ರತಿ ೧೦-೧೨ ಜನರಿಗೆ ಚೇಳು ಕಡಿದ ವಾರ್ತೆಯುಂಟು ಅದಕ್ಕಾಗಿ ಅವರು 'ಹಿಮಾಲಯನ್ ರೆಮಿಡೀಸ ಕಂಪನಿಯ ಔಷಧದ ಬಾಟ್ಲಿಗಳನ್ನು ತಂದಿಟ್ಟಿದ್ದರು ಒಂದು ಹನಿ ಮದ್ದನ್ನು ಕಣ್ಣಿನಲ್ಲಿ ಹಾಕಿದೊಡನೆ ಚೇಳಿನ ವಿಷ ಒಮ್ಮೆಲೇ ಇಳಿದು ರೋಗಿಯು ನಗುತ್ತ ಏಳುತ್ತಾನೆ ಬಾಟ್ಲಿಯಲ್ಲಿ ೧೫ ಹನಿಗಳಿರುತ್ತವೆ ಬೆಲೆ ೮ ಆಣೆ ಶ್ರೀ| ನಾರಾಯಣರವರಿಗೆ ಔಷಧದ ಗುಣಗಳು ಬೆಟ್ಟಿಯಾದರು ಅವರ ಕಡೆ ಚೇಳಿನ ವಿಷದ ಪರಿಹಾರ ಕೇಳಲು ಅವರ ಹೇಳಿದ್ದೇನೆಂದರೆ "ನೀರಿನಲ್ಲಿ ಉಪ್ಪು ಹಾಕಿ ಅದನ್ನು ಒಂದು ಬಾಟ್ಲಿಯಲ್ಲಿ ಒನ್ನಾಗಿ ಮಿಶ್ರಣ ಮಾಡಬೇಕು ಮತ್ತು ಆ ಮಿಶ್ರಣವನ್ನು ಒಂದು ದಿನ ಹಾಗೆಯೇ ಇಟ್ಟು ಮರುದಿನ ಆ ಮಿಶ್ರಣದೊಳಗಿಂದ ಮೇಲ್ಭಾಗದ ಸ್ವಚ್ಛ ನೀರನ್ನು ತೆಗೆದಿಡಬೇಕು ಅದರ ಒಂದು ಹನಿ ಕಣ್ಣಿನಲ್ಲಿ ಹಾಕಿದರೆ ಚೇಳಿನ ವಿಷ ಇಳಿಯುತ್ತದೆ" ಈ ಕ್ರಮವನ್ನು ಶ್ರೀ| ನಾರಾಯಣರವರು ೨೭೬ ಜನರ ಮೇಲೆ ಮಾಡಿದರು ೨೭೦ ಜನರಿಗೆ ಕೂಡಲೆ ಗುಣವಾಯಿತು ೬ ಜನರಿಗೆ ಸ್ವಲ್ಪ ವಿಳಂಬವಾಗಿ ಗುಣವಾಯಿತು 'ಹಿಮಾಲಯನ್ ರೆಮಿಡೀಸ ಕಂಪನಿ'ಯ ಬಾಟ್ಲಿಯನ್ನು ರಸಾಯನ ಶಾಲೆಯಲ್ಲಿ ಒಯ್ದು ಪೃಥಕ್ಕರಣ ಮಾಡಿಸಲು ಅದರೊಳಗೆ Na Cl (Sodium Chloride) ಎಂಬ ಪದಾರ್ಥ ವಿರುವದ ಕಂಡುಬಂತು ಸೋಡಿಯಮ್ ಕ್ಲೋರೈಡ ಇದು ರಸಾಯನ ಶಾಸ್ತ್ರದ ಶಬ್ದ ಉಪ್ಪು ಇದು ಜನಸಾಮಾನ್ಯರ ಶಬ್ದ ೧೫ ಹನಿ ಉಪ್ಪುನೀರಿಗೆ ೮ ಆಣೆ ಕೊಟ್ಟು ಶ್ರೀ| ನಾರಾಯಣ ಮೊದಲಾದ ಜನಸಾಮಾನ್ಯರು ಚೇಳಿನ ವಿಷವನ್ನು ಇಳಿಸುತ್ತಿದ್ದರೆಂದು ಸಿದ್ಧವಾಯಿತು ಇದೇ ಪ್ರಕಾರ ಇತರ ಔಷಧೋಪಚಾರಗಳ ವ್ಯವಸ್ಥೆಯಿದೆ ಜನಸಾಮಾನ್ಯರು ಸುಲಭವಾಗಿ ಬಾಟ್ಲಿಗಳು ಪೇಟೆಯಲ್ಲಿ ಸಿಗುತ್ತವೆಂದ ಕೊಂಡು ಕೊಂಡು ಮೋಸಹೋಗಲಾಗದು ಇದರಿಂದ ಮನುಷ್ಯನು ಪರಾವಲಂಬಿಯಾಗುತ್ತಾನೆ, ಸ್ವತ್ವವನ್ನು ಕಳಕೊಳ್ಳುತ್ತಾನೆ, ಮೇಲೆ ಖರ್ಚು! ಗ್ರಾಮೋದ್ಧಾರ ಮಂಡಳದವರು ಖರ್ಚು ಕಡಿಮೆ ಮಾಡುವ ದೃಷ್ಟಿ ಹಿಡಿದು ನಡಕೊಂಡಲ್ಲಿ ಗ್ರಾಮದ ಸಂಪದಭ್ಯುದಯವಾಗಿ ಗ್ರಾಮೋದ್ಧಾರವಾದೀತು ಖರ್ಚಿನ ಸುಧಾರಣೆಯು ಬೆನ್ನುಹತ್ತಿ ನಷ್ಟಪಡಲಾಗದು ಮಹಾತ್ಮರ ಗ್ರಾಮೋದ್ಧಾರ ಪ್ರಯತ್ನದ ಮೂಲ ಸಂಕಲ್ಪವಿದು

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ ಟೀಕಾ, ತಾತ್ಪರ್ಯ ಸಹಿತ

IIIನೇ ಸಂಚಿಕೆ ಶ್ರೀ ಅನುವ್ಯಾಖ್ಯಾನದ IIನೇ ಭಾಗ ಜನ್ಮಾದ್ಯಧಿಕರಣಗಳು ಈಗಲೇ ತಯಾರಾಗಿವೆ ಪುಟಗಳು ೨೬೦ ಚಂ ರೂ ೧ ೮ ೦

Iನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೨೩೯ ಚಂದಾ ರೂ ೩ ೮ ೦

IIನೇ ಸಂಚಿಕೆ ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೧೮ ಚಂದಾ ರೂ ೪ ೭ ೦ ಟಪಾಲ ಹಾಸಲು ಪ್ರತ್ಯೇಕ ಪುಸ್ತಕಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಆನರರಿ ಟ್ರೆಜರರ್,

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ

(ದಕ್ಷಿಣ ಕನ್ನಡ)

Mudeshwar Shrinivasrao & Co
Commission Agents,
Yellapur (N Kanara)

ಮುಡೇಶ್ವರ, ಶ್ರೀನಿವಾಸರಾವ್ ಎಂಡ್ ಕೋ,
ದಲಾಲ, ಯಲ್ಲಾಪುರ

ನಮ್ಮ ಅಡಿಕೆ, ಯಾಲಕಿ ಮೆಣಸು ವಗೈರೆಯ ದಲಾಲಿ ಕಂಪನಿ ಕೆಲಸಕ್ಕೆ ಶುರು ಮಾಡಿರುತ್ತದೆ ಪೇಟೆಯ ಮಾಹಿತಿ ಬಗ್ಗೆ ಪತ್ರವ್ಯವಹಾರದಿಂದ ಅಥವಾ ಸಮಕ್ಷ ಒಂದಲ್ಲಿ ತಿಳಿದೀತು

Shrinivas Rao,
Managing Agent, YELLAPUR.

ಅಶ್ವಾರೂಢ ಕವಚ!

ವ್ಯಾಪಾರ ಉದ್ಯೋಗಸಿದ್ಧಿ, ವ್ಯವಹಾರಜಯ, ಕರ್ಮಲಾಭ ಇತ್ಯಾದಿ ವಿಷಯಗಳಲ್ಲಿ ಪ್ರಯತ್ನಿಸಿ ನಿರಾಶರಾದವರಿಗೆ 'ಅಶ್ವಾರೂಢ' ಯಂತ್ರವು "ಗುಳ-ಪರ್ವತದಲ್ಲಿ ಮಧು-ವೃಷ್ಟಿಯಂತೆ' ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತು ಅನೇಕ ಶರದ ಗಳಾಗುವವು ೪ ಆಣೆ ಸ್ಟಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರ ೧ಕ್ಕೆ ಬೆಲೆ ರೂ 20 0 0, ಬೆಳ್ಳಿಯ ಯಂತ್ರಕ್ಕೆ ರೂ. 3-0-0, ತಾಮ್ರದ ಯಂತ್ರಕ್ಕೆ ರೂ 2-0 0

ಪತ್ತೆ, ವೇ| ವಿದ್ವಾನ ಪಿ. ಕೆ. ಕೆ. ಎನ್.,
ಜ್ಯೋತಿಷಿ ಕುಮಟಾ [ಉ ಕನ್ನಡ]

Siromani Udipi Narayanacharya
CHAUKHAMBA, BENARES CITY

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿ ಕೊಳ್ಳಿರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ. ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32ರ ಸರ 1ಕ್ಕೆ ರೂ 0 8 0 ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ 3-8-0 ರಿಂದ ೨೦ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ರ ಸ್ಟಾಂಪು ಕಳಿಸಿದರೆ, 1 ಕಾಶೀ ಪತ್ರೆ, 1 ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾಗುವದು

ಪತ್ತೆ – ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು– ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕರ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು ಕ್ರಯ ರೂ ೧-೮-೦

ಅಶ್ವಗಂಧ ಟಾನಿಕ್ — ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಅನಂತ ಶಕ್ತಿಕ್ಕೆ ಇದು ದಿವ್ಯೌಷಧ! ರೂ ೧-೪-೦

ಎಗ್ಸ್ ಮಿಕ್ಸ್ಚರ, ಫೀವರ ಡ್ರಾಪ್ಸ್, ಅಮೃತ ಸುಧಾ, ಕರ್ಪೂರಾರ್ಕ, ಸಾಯರಿಸ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಗಳು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ ನಿತ್ಯಗಟ್ಟಲೆ ಇವುಗಳ ಉಪಯೋಗವಾಗುವುದು ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ಮ ನಿವಾರಣೆಯ ಬಗ್ಗಾಗಿ ಅನುಭವ ಸಿದ್ಧವಾದ ಪ್ಲೇಗ ಕ್ಯೂರ ಪ್ಲೇಗ ಸ್ಪೆಸಿಫಿಕ್ ಮ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೇಲ, ಡಿಸ್ ವೊಬರ ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು ಮತ್ತು ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುಕಾಲವಾಗಿ ಎಲ್ಲ ಆರ್ಯ ವೈದ್ಯರಿಗೂ ಹಾಗೂ ಎಲ್ಲಾ ಫಾರ್ಮಾಸಿಗಳವರಿಗೂ ಗೊತ್ತಿರುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕೊಡದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ದೂರ ಮಾಡಿಸಿ ಮೈಯಲ್ಲಿ ತೇಜಸ್ಸನ್ನೂ, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ಪಾಂಡು,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಬೇನೆ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯರಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ. ೧—೮—೦
,, ಬಾಟ್ಲಿ ೬ಕ್ಕೆ ರೂ. ೮—೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೬—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಇರುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ:—

ಸಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ:— **ಕುಮಟಾ.** (ಉ. ಕನ್ನಡ.)

HOUSE FOR SALE IN KUMTA.

A fine house, sometime known as "Navjeevan Hall", at Nellikeri, Kumta, is offered for sale — Nine large rooms and plenty of veranda space — stands in about 1/2 an acre of garden — outhouses, garage, stables etc. — Suitable as residence or for offices. Offers are invited. Apply Kalyanpurker on the premises or write to **Dr. K. R. Row, Haveri.** (M & S. M. Ry.)

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: **1908.**

ಈ ಕಂಪನಿಯು ಪ್ರಾಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದು ಕೇಳಬೇಕು.

Kumta Agents
D. K. Nayak Bros
L. S. Pai
K. N. Nayak.
Honavar Agent.
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

Established 1900.

ॐ

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ

FIXED RATE.

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಜರಿ ಜರಿ ಗೂಡಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರಂಗಿನ ಖಣಗಳೂ, ಕೋಟಿಂಗ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಮಿದ್ದರ ಮಡಿಗಳು, ಸೀರೆ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಹ ಹೋಗುವ ಏನೊಂದೂ ಮೋಸವಿಲ್ಲದೆ ಸೋಯಿ ದರದಿಂದ ಸಿಗುವವು. ಠೋಕ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel - "Honesty" **D. K. DHAKAPPA BROS.,**

ಹೊಸ ಮಾಲು.

Cloth Merchants,
SIRSI. N. KANARA.

ದರ ಅಗ್ಗ.

ಸುಲಭ ಕ್ರಯ! ಡಾಕ್ಟರ ಜೀ. ಬೀ. ಗುರುವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ ಕಳಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ.ಪಿ ೪ ಆಣೆ ಡಜನ್ ೧ಕ್ಕೆ ರೂ. ೨-೮-೦, ವಿ. ಪಿ ೦-೬-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:— **ಗುರುಬಸವ ಅಂಡ್ ಕಂಪನಿ ಲಿಮಿಟೆಡ್** ಪ್ರೋ. ಬಾ ೫೧೦, ಮಾರ್ಕೆಟ್ ನ, ಮದರಾಸ

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270. **Monday, 11th November, 1935.**

ವರ್ಷ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೧೯

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪೈಕಾ ಟೈಪಿನ (೧೫ ಎಮ್ ಉದ್ದ ೮ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0 ಹೆಡ್ಡಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತವೆ.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೧ ಮಾಹೆ ನವಂಬರ ಸನ್ ೧೯೩೫ನೇ ಇಸವಿ.)*—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩ ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧೪ ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು.

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, **ಹುಬ್ಬಳ್ಳಿ.**

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪಿ, ಬೆಂಗಳೂರು, ದಾವಣಗೇರೆ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ.

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೬೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು:— ಉಡುಪಿ, ಬ್ರಹ್ಮಾವರ, ಹೊನ್ನಾವರ, ಕುಂದಾಪುರ, ಕುಮಟಾ, ಕಾರವಾರ ಕೆಫ, ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ, ಕಣ್ಣಾನೂರ, ಪಯ್ಯನೂರ, ಹಂಗಾರಕಟ್ಟಾ, ಬಳ್ಳಾರಿ ಮತ್ತು ಕಾಂಞ್ಞಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವವು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6⅔ರಷ್ಟು ಬಡ್ಡಿ ಸಿಗುವದು. ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು.

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ. ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ. ನಮ್ಮ **ಪಿಗ್ಮಿ ಡಿಪೋಜಿಟ್** ಮತ್ತು **ಕ್ಯೂಮ್ಯುಲೇಟಿವ್ ಡಿಪೋಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು:— ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ. 5, 5½, 6 ರಂತೆ ಬಡ್ಡಿ.

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ.

ಚಿನ್ನಾಭರಣಗಳ ಆಡಿನ ಮೇಲೆ ಒಳ್ಳೆಯ ರಿಯ್ಯಾತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು.

ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

ಕುಮಟಾ,
ತಾ. ೧೫-೭-೧೯೩೫.

G. S. Nayak,
ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೇಲ್, ಕುಮಟಾ.

(ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಪ್ರಸ್ಥಲರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೇಲ್ "ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ಅಲ್ಲಲ್ಲಿ ಇಷ್ಟಿಷ್ಟು!

ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸಂಘ ಪ್ರತಿ ಭಾಗದಲ್ಲಿ ಏರ್ಪಟ್ಟಾಗಿದೆ. ಇವಕ್ಕೆ ಸರಕಾರದ ಆಶ್ರಯವಿದೆ. ವರ್ಷಕ್ಕೊಮ್ಮೆ ಯಾರಾದರೊಬ್ಬ ಸರಕಾರಿ ಅಧಿಕಾರಿಗಳನ್ನೋ, ಸರಕಾರದವರನ್ನೋ ಪ್ರಮುಖರನ್ನಾಗಿ ನಿಮಂತ್ರಿಸಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಜೊತೆ ಬೇರೆ ಮಾತುಗಳ ಕುರಿತು ಭಾಷಣ ಮಾಡಿ ಹೂವಿನ ಹಾರ-ಸತ್ಕಾರವನ್ನು ಸ್ವೀಕರಿಸಿ ಸಭೆ ವಿಸರ್ಜನೆ ಹೊಂದಿದರೆ ಇಡೀ ಒಂದು ವರ್ಷದ ಸ್ಥಾನಿಕ ಸ್ವರಾಜ್ಯದ ಸೇವೆ ಮುಗಿಯಿತು. ಕೈಕೊಂಡ ನಿರ್ಧಾರಗಳನ್ನು ಸರಕಾರಕ್ಕೆ ಕಳುಹುವದು; ಅವಕ್ಕೆ ಸರಕಾರವು ಮಾಮೂಲ ಸಂಪ್ರದಾಯದಂತೆ ಉತ್ತರ ಕಳುಹುವದು. ಪುನಃ ಅವೇ ಠರಾವುಗಳನ್ನು ಪುನಃ ಭಾಷಣ ಮಾಡಿ ಮರು ವರುಷ ಸರಕಾರಕ್ಕೆ ಕಳುಹುವ ಸಂಪ್ರದಾಯ. ಸರಕಾರವು ತನ್ನ ಅಡಚಣೆ ಸಂಘಕ್ಕೆ ತಿಳಿಸುತ್ತದೆ; ಸಂಘದವರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಡಚಣೆ ತಿಳಿಸುತ್ತಾರೆ. ಹೀಗೆ ಪರಸ್ಪರ ಕಷ್ಟ ಕಥೆಗಳ ನಿರೂಪಣವಾಗುತ್ತದೆ. ಅಧಿಕಾರವೆಲ್ಲ ಸರಕಾರದ ಕಡೆಗೆ ಇರುವದರಿಂದ ಸರಕಾರದ ಕಷ್ಟನಿವಾರಣೆಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಸಂಘದ ಪ್ರಯೋಜನ ಸರಕಾರಕ್ಕೆ ದೊರೆಯುತ್ತದೆ. ಹೊರತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಇದರಿಂದ ಪ್ರಯೋಜನ ದೊರೆಯುವದಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಒದಗುವ ಅಡಚಣೆಗಳನ್ನು ಸರಕಾರಕ್ಕೆ ತಿಳಿಸಿ ಅವುಗಳ ಕಷ್ಟನಿವಾರಣೆ ಮಾಡಲೋಸುಗ ಈ ಸಂಘಗಳು ಸ್ಥಾಪಿಸಲ್ಪಟ್ಟವು. ಆದರೆ ಪರಿಣಾಮ ಇದಕ್ಕೆ ವಿರುದ್ಧವಾಗಿದೆ. ಗುಜರಾಥ ಭಾಗದ ಸ್ಥಾನಿಕ ಸ್ವರಾಜ್ಯ ಪರಿಷತ್ತಿನ ಈ ಬಾರಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರು ಸಂಘಗಳಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಏನೂ ಪ್ರಯೋಜನ ದೊರೆಯದಿಲ್ಲವಾಗಿ ಸ್ಪಷ್ಟವಾಗಿ ಹೇಳಿಬಿಟ್ಟರು. ಮ್ಯುನಿಸಿಪಾಲಿಟಿಗಳೂ, ಬೋರ್ಡುಗಳೂ ಈಗಿನ ಸ್ವಾತಂತ್ರದಲ್ಲಿ ಲೋಕಕಲ್ಯಾಣಕಾರ್ಯ [illegible] ಸ್ಪಷ್ಟವಾಗಿ ಪ್ರತಿಪಾದಿಸಿದರು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಡೆ ತಕ್ಕಷ್ಟು ಹಣವಿಲ್ಲ, ಇತ್ತ ಬೇಕಾದ ಸಾಧನಗಳಿಲ್ಲ. ಸ್ವತಃ ಸರಕಾರ, [illegible] ಯಾನೆ ಕಾರಸ್ಥಾನ ಮಾಡಿದರೂ ಈ ಸಂಸ್ಥೆಗಳಲ್ಲಿ [illegible], ಮೇಲೆ ಜಾತಿಯ ಸಂಭವವಾದ ಬೆಳೆಯುವಂತೆ ಸಭಾಸದರನ್ನು [illegible] ಗಿದೆ. ಸ್ಕೂಲ ಬೋರ್ಡುಗಳಲ್ಲಿ ಸ್ವಾರ್ಥ, ಜಗಳ, ತಕರಾರು ತುಂಬಿರುವದರಿಂದ ಸರಕಾರ [illegible] ದಿದೆ. ಗ್ರಾಮ ಪಂಚಾಯತ [illegible] ಕಾಯಿದೆಯಿಂದ ಪ್ರಾಂತಾಂತರಗಳಲ್ಲಿಯೂ ಇದೇ ಅವಸ್ಥೆಯಾಗುವದು. ಇದಕ್ಕೆಲ್ಲ ಸರಕಾರವೇ ಜನರಿಗೆ ಹೊಣೆಯಾಗಿದೆ. ಆದರೆ ನಿಜವಾಗಿ ಇವುಗಳ ಘಟನೆಯೇ [illegible] ದವಿದೆ. ಕಳೆದ ಮಾರ್ಚ ತಿಂಗಳಲ್ಲಿ [illegible] ಸ್ಥಾನಿಕ ಸ್ವರಾಜ್ಯ ಸಂಘದ ಪರಿಷತ್ತು ಸೇರಿತ್ತು. ಮುಂಬಯಿ ಸರಕಾರದ [illegible] ಪ್ರಾಂತ್ಯಭಾಗದಲ್ಲಿ ಇವುಗಳ [illegible], ಅದನ್ನು [illegible] ಏನಾದರು ಒಟ್ಟಿ [illegible]. [illegible] ಸರಕಾರವು ಅದನ್ನು ಪರಿಗಣಿಸಲಿಲ್ಲ. ಈ ತನಕ ಈ ಪರಿಷತ್ತುಗಳಲ್ಲಿ ಮಂಜೂರಾದ ಮಹತ್ವದ ಯಾವದೇ ಠರಾವನ್ನು ಮುಂಬಯಿ ಸರಕಾರವು ಮನ್ನಿಸಿ ಪಾಲಿಸಲಿಲ್ಲ. ಇಷ್ಟಾಗಿ ಸರಕಾರಿ ಸ್ಥಾನಿಕ ಸ್ವರಾಜ್ಯ ಇಲಾಖೆಯ ದಿವಾಣರೇ ಈ ಸಂಘಗಳ ಶಾಶ್ವತ ಅಧ್ಯಕ್ಷರು. ಈ ಪ್ರಕಾರ ಸಂಬಂಧವಿದ್ದಾಗ್ಯೂ ಈ ಸಂಸ್ಥೆಗಳಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಲ್ಯಾಣವಾಗದ ಬಳಿಕ ಇಂಥ ಪರಿಷತ್ತುಗಳನ್ನು ಸೇರಿಸಬೇಕೇನೆಂಬದರ ಕುರಿತು ವಿಚಾರ ಮಾಡುವದು ಲೇಸು. ನಾನು ಇಂಥ ಕಾರ್ಯಗಳನ್ನು ಪರಿಷತ್ತಿನ ಅಧ್ಯಕ್ಷನಾಗುತ್ತಿದ್ದಿಲ್ಲ. ಗೆಳೆಯರ ಒತ್ತಾಯವಾದ್ದರಿಂದ ನಾನು ಅಧ್ಯಕ್ಷನಾಗಿದ್ದೇನೆ. ಸರಕಾರಕ್ಕೆ ಇವುಗಳ ಸ್ವಾತಂತ್ರ್ಯ ಸಹನವಾಗುವದಿಲ್ಲ. ಮೊಂಟೆಗ್ಯೂ ರಾಜ್ಯದಲ್ಲಿ ಇವುಗಳ ಮೇಲಿನ ಬಂಧನವು ಮತ್ತೂ ದೃಢವಾಯಿತು. ಜಿಲ್ಲಾಧಿಕಾರಿಗಳು ಇವುಗಳೊಡನೆ ಸಹಕರಿಸದೆ, ಇವುಗಳಿಗೆ ಮೆಟ್ಟುಮೆಟ್ಟಿಗೂ ದಣಿಸುತ್ತಾರೆ. ಸರಕಾರದಿಂದ ಸಿಗತಕ್ಕ ದ್ರವ್ಯಸಹಾಯಕ್ಕೆ ಕತ್ತರಿ; ಅವು ಸ್ವಂತ ತೆರಿಗೆ ಹೇರಿ ಉತ್ಪನ್ನ ಮಾಡುವ ಬಾಬುಗಳ ಮೇಲೆ ಸರಕಾರದ ಆಕ್ರಮಣ! ಮ್ಯುನಿಸಿಪಾಲಿಟಿಯವರು ಹೊಸ ತೆರಿಗೆಗಳನ್ನು ಸೂಚಿಸಿದರು. ಇವಕ್ಕೆ ಕಾಯಿದೆಯಂತೆ ಮನ್ನಣೆ ಕೊಡುವ ಅಧಿಕಾರವು ಸರಕಾರದ್ದು! ಹಾಗೆ ಮನ್ನಣೆ ಕೊಡಬೇಕಾಗಿ ಮ್ಯುನಿಸಿಪಾಲಿಟಿಯವರು ಬರೆಕೊಂಡಲ್ಲಿ ಸರಕಾರವು ಮನ್ನಣೆ ಕೊಡದೆ ಆ ತೆರಿಗೆಗಳನ್ನು ತಾನೇ ಹೇರಿ ಉತ್ಪನ್ನ ಪಡೆಕೊಂಡಿತು. ಮುಂಬಯಿ ಸರಕಾರವು ಟೌನ್ ಪ್ಲ್ಯಾನಿಂಗ ಯಾನೆ ನಗರ ರಚನೆ, ಫ್ಲೋಟರ ಸ್ಕೀಮ ಯಾನೆ ನೆಲದ ಪೂರ್ತ್ಯಕೆಯ ಯೋಜನೆ, ಡ್ರೇನೇಜ ಯಾನೆ ಸ್ವಚ್ಛತೆ ಯೋಜನೆ ಮೊದಲಾದ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯಕ್ಕದ ಅನುಭವ ಸಿದ್ಧೌಷಧಗಳು!
ವೃಶ್ಚಿಕರಾಜ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾವಾತನಾಶ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾಂಗರ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತಪಿತ್ತ, ಅಪತಂತ್ರಕ, ಉನ್ಮಾದರೋಗಗಳಿಗೆ ರಾಮಬಾಣ.
ಭುವನರಂಜನ (ಸರ್ವ ತರದ ಶರೀರದ ನೋವುಗಳಿಗೆ ಅತ್ಯಂತ ಗುಣಕಾರಿ
ಮಹಾಶಂಖಭಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ವಿವರಕ್ಕಾಗಿಯೂ, ಕಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!
ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬಾ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಕ್ರಮವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಪ್ರದರ್ಶನೀಯವನ್ನಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೀಯರಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೨-೧೧-೧೯೩೫.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ.
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟ್, ದ. ಕನ್ನಡ

ಲೋಕಕಲ್ಯಾಣದ ಯೋಜನೆಗಳನ್ನು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಮ್ಯುನಿಸಿಪಾಲಿಟಿ ಬೋರ್ಡುಗಳು ಕೈಕೊಳ್ಳುವಲ್ಲಿ ಸರಕಾರವು ದ್ರವ್ಯಸಹಾಯ ಮಾಡುತ್ತಿತ್ತು. ಈಗ ಅದು ನಿಲ್ಲಿಸಲ್ಪಟ್ಟಿದೆ. ಮೇಲಾಗಿ ಮೇಲ್ಕಾಣಿಸಿದ ಯೋಜನೆಗಳ ತಪಾಸಿಗೆಂದು ಸರಕಾರವು ಫೀಯನ್ನು ಮ್ಯುನಿಸಿಪಾಲಿಟಿ-ಬೋರ್ಡುಗಳಿಂದ ವಸೂಲ ಮಾಡುತ್ತದೆ. ಸರಕಾರದ ಆರೋಗ್ಯ ಇಲಾಖೆಯ ಕೆಲಸ ಬರೇ ಉಪದೇಶದ್ದು. ಪಿಡುಗು ಸಂಭವಿಸಿ ಅವುಗಳನ್ನು ಪರಿಹರಿಸುವ ಜವಾಬದಾರಿ ಯಾರದೆಂದು ಕೇಳಿದರೆ, ಹೇಳುತ್ತೇನೆ, ಕೇಳಿಕೊಳ್ಳಿ: ಪಿಡುಗು ತಾನಾಗಿ ಶೀಘ್ರವೇ ಪರಿಹಾರ ಹೊಂದಿದರೆ ಆರೋಗ್ಯ ಇಲಾಖೆಯವರು ಪಿಡುಗು ಪ್ರದೇಶದಲ್ಲಿ ಕೈಕೊಂಡ ಉಪದೇಶದಿಂದ, ಕಾಲಕಾಲಕ್ಕೆ ಹೊರಡಿಸಿದ ಹುಕುಮುಗಳಿಂದ ಹೋಯಿತೆಂದು ಸರಕಾರದ ಒಡಿವರ. ಪಿಡುಗು ಬೇಗನೇ ಪರಿಹಾರ ಹೊಂದದಿದ್ದರೆ ಅದಕ್ಕೆ ಕಾರಣ ಬೋರ್ಡ-ಮ್ಯುನಿಸಿಪಾಲಿಟಿ; ಅಂದರೆ ಜನರು. ಅಧಿಕಾರ ಸರಕಾರದ ಕಡೆ ಇರುವದರಿಂದ ಈ ಅವಸ್ಥೆಯಾಗಿದೆ." ಸರದಾರ ವಲ್ಲಭಭಾಯಿ ಪಟೇಲರವರು ಮ್ಯುನಿಸಿಪಾಲಿಟಿಯ ಆಡಳಿತೆಯ ಸಾಮಾನ್ಯ ಸ್ವರೂಪವನ್ನು ಕೆಲ ಉದಾಹರಣೆ ಕೊಟ್ಟು ಸಿದ್ಧಪಡಿಸಿದರು.

⁂

"ಅಹಮದಾಬಾದ ಮ್ಯುನಿಸಿಪಾಲಿಟಿಯು ಇಡೀ ಮುಂಬಯಿ ಇಲಾಖೆಯಲ್ಲಿ ಎರಡನೇದು; ಮುಂಬಯಿ ಮ್ಯುನಿಸಿಪಾಲಿಟಿ ಮೊದಲನೇದು. ಕಾಯಿದೆಯಂತೆ ಈ ಮ್ಯುನಿಸಿಪಾಲಿಟಿಯು ಕಾರಭಾರ ನಡೆದಿದೆ. ಎಲ್ಲಿಯೂ ಉಲ್ಲಂಘನೆಯಾಗಲಿಲ್ಲ. ಸರಕಾರಿ ರಿಪೋರ್ಟುಗಳಲ್ಲಿ ಈ ಮ್ಯುನಿಸಿಪಾಲಿಟಿಗೆ ಒಳ್ಳೇ ಪ್ರಶಸ್ತಿಪತ್ರಗಳು ದೊರತಿವೆ. ಆದಾಗ್ಯೂ ಜಿಲ್ಹಾಧಿಕಾರಿಗಳಿಗೆ ಸಮಾಧಾನವಿಲ್ಲ. ಅಧ್ಯಕ್ಷ-ಉಪಾಧ್ಯಕ್ಷರವರಿಗೆ ೧೯೩೦ನೇ ಇಸ್ವಿಯಲ್ಲಿ ಸತ್ಯಾಗ್ರಹದ ಸಮಯ ಸೆರೆಹಿಡಿದ ಬಗ್ಗೆ ಶಾಲೆಗಳಿಗೆ ರಜೆ ಕೊಟ್ಟಿತ್ತು. ಆದರಿಂದ ಸರಕಾರವು ರಾಜಕಾರಣದ ದೆಸೆಯಿಂದ ಶಾಲೆಗಳಿಗೆ ಕೊಡತಕ್ಕ ಸರಕಾರಿ ದ್ರವ್ಯಸಹಾಯವನ್ನು ನಿಲ್ಲಿಸಿಬಿಟ್ಟಿತು. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾಯರೆಕ್ಟರರು ಈ ಸಾಹಸ ಮಾಡುವದು ವಿಪರೀತವೆಂದು ಸರಕಾರಕ್ಕೆ ಬರೆದಾಗ್ಯೂ ಸರಕಾರವು ಒಪ್ಪಲಿಲ್ಲ; ಗಾಂಧಿ-ಇರ್ವಿನ್ ತಹನಾಮೆಯಾದಾಗ್ಯೂ ಸರಕಾರದ ಮನಸ್ಸು ಇನ್ನೂ ಪ್ರಸನ್ನವಾಗಲೊಲ್ಲದು. ಸರಕಾರಿ ಹುಕುಮನ್ನು ಶಿರಸಾ ಮನ್ನಿಸಿ ಸರಕಾರದ ಅಪೇಕ್ಷೆಯಂತೆ ಕರಾರು ಬರೆ ಕೊಟ್ಟಲ್ಲಿ ಮಾತ್ರ ಸಂಪೂರ್ಣ ದ್ರವ್ಯಸಹಾಯ ಸಿಗುವದಾಗಿ ಸರಕಾರದ ಹಟನಿಗ್ರಹ. ಇನ್ನೂ ೩-೩॥ ಲಕ್ಷ ರೂಪಾಯಿ ಸರಕಾರದ ಮೇಲೆ ಬಾಕಿ! ಅಹಮದಾಬಾದದಂಥ ದೊಡ್ಡ ಮ್ಯುನಿಸಿಪಾಲಿಟಿಯ ಗತಿ ಹೀಗಾದ ಬಳಿಕ ಚಿಕ್ಕ-ಪುಟ್ಟ ಮ್ಯುನಿಸಿಪಾಲಿಟಿ-ಬೋರ್ಡುಗಳ ಅವಸ್ಥೆ ಏನೆಂದು ಕಲ್ಪಿಸಿದರಾಯಿತು.

ಭೂಕಂದಾಯದ ಧೋರಣವು ಅನ್ಯಾಯದ್ದಿದೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಹಿತ-ಅಧಿಕಾರಗಳ ವಿಚಾರ ಮಾಡದೆ ಸರಕಾರವು ಇದನ್ನು ಪುರಸ್ಕರಿಸುತ್ತದೆ. ಜನಸಂದಣಿಯುಳ್ಳ ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ ಸರಕಾರವು ಹೆಚ್ಚಿನ ಕರ ಹೇರಿ ಲಾಭ ಪಡೆಯುತ್ತದೆ. ಮ್ಯುನಿಸಿಪಾಲಿಟಿಯ ಸೀಮೆಯಲ್ಲಿ ಬೇಸಾಯ ಜಮೀನಯಿದೆ. ಅಲ್ಲಿ ಮನೆ ಕಟ್ಟಿದ ಬಗ್ಗೆ ಸರಕಾರವು ಬಿನ್‌ಶೇತಕಿ ಆಕಾರವನ್ನು ಎಕ್ರೆಗೆ ರೂಪಾಯಿ ೫೦ರಿಂದ ೧೦೦ರ ತನಕ ಆಕರಿಸಿ ಲಾಭ ಹೊಂದುತ್ತದೆ. ಲೋಕಾನುಕೂಲತೆಗಾಗಿ ಮ್ಯುನಿಸಿಪಾಲಿಟಿಗಳ ಸ್ಥಾಪನೆಯಾಯಿತು. ಮ್ಯುನಿಸಿಪಾಲಿಟಿಯು ಸ್ವಾಸ್ಥ್ಯದ ಅನುಕೂಲತೆಗಳಿಂದ ಜನವಸ್ತಿ ಬೆಳೆದು ಮನೆ-ಮಾರುಗಳ ಸಂಖ್ಯೆ ಬೆಳೆಯಿತು. ಪ್ರಜಾಸುಖಕ್ಕಾಗಿ ಸರಕಾರವು ಏನೂ ಪ್ರತಿಫಲ ಪಡೆಯದೆ ಮನೆ ಕಟ್ಟಿಕೊಳ್ಳಲು ಅನುಕೂಲತೆ ಮಾಡಿಕೊಡಬೇಕಾಗಿದ್ದಿತು. ಬಿನ್‌ಶೇತಕಿ ಆಕಾರ ಕೊಡಿಸುವದಾದರೆ ಮ್ಯುನಿಸಿಪಾಲಿಟಿಯು ಕೊಡಿಸಬೇಕು. ಮ್ಯು॥ಯ ಅನುಕೂಲತೆಗಳ ಮೂಲಕವಾಗಿಯೇ ಜನವಸ್ತಿ ಬೆಳೆದದ್ದು. ಅದರ ಪ್ರಯೋಜನ ಮ್ಯುನಿಸಿಪಾಲಿಟಿಗೇ ಸಿಗಬೇಕು. ಹೀಗಿದ್ದು ಸರಕಾರವು ಇದನ್ನು ಪಡೆಯುವದು ದುರಭಿಲಾಷೆ! ಇದಲ್ಲದೆ ಜನವಸ್ತಿಯುಳ್ಳ ಗ್ರಾಮಗಳೊಳಗೆ ಸರಕಾರವು ಕಲ್ಲಿಲ್ಲ ಬೈಲು ಪ್ರದೇಶಗಳನ್ನಿಟ್ಟು ಜನರಿಗೆ ಅನುಕೂಲವಾಗಿರಬೇಕು. ಅದರ ಬದಲಿಗೆ ಇದೆ ಸ್ಥಳಗಳನ್ನು ಹರಾಜ ಮಾಡಿ ಲಾಭ ಹೊಂದುತ್ತದೆ. ಮ್ಯುನಿಸಿಪಾಲಿಟಿಗೆ ಸಾಲ ಪಡೆಯಬೇಕಾದರೆ ಸರಕಾರದ ಮನ್ನಣೆ ಬೇಕು. ಸರಕಾರ ಮಾನ್ಯತೆ ಕೊಡಬೇಕಾದರೆ ಸರಕಾರವು ಮ್ಯು॥ಯ ಆದಾಯ-ವೆಚ್ಚವನ್ನೂ, ಸಾಲ ತಿರುಗಿ ಕೊಡುವ ಸಾಮರ್ಥ್ಯವನ್ನೂ ತಳಸ್ಪರ್ಶಿ ತಪಾಸ ಮಾಡಿ ಅಪ್ಪಣೆ ಕೊಡುತ್ತದೆ. ಈ ಪ್ರಕಾರ ಅಹಮದಾಬಾದ ಮ್ಯುನಿಸಿಪಾಲಿಟಿಯು ಹೊರಡಿಸಿದ ಸಾಲದ ರಕಮನ್ನು ಮ್ಯುನಿಸಿಪಾಲಿಟಿಯವರೇ ಖರ್ಚಡಿಸಿದ ಮ್ಯುನಿಸಿಪಲ್ ನೌಕರರ ಪ್ರೊವಿಡೆಂಟ ಫಂಡಿನೊಳಗಿಂದ ಪಡೆಯಲಿಕ್ಕೆ ಸರಕಾರಿ ಲೆಕ್ಕ-ತಪಾಸಕರ

THE AGRICULTURAL & INDUSTRIAL BANK, LIMITED.
(Incorporated in British India)
Head office:- COONDAPOOR. Branch:- KUMTA.
Telegrams:- "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು:— ಕುಂದಾಪುರ. ಬ್ರೆಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು:-3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ. 3½, 4½, 5½, 6, 6½ ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು.

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ. 2½ ವ ಜುಲೈಯಿಂದ ಡಿಸೆಂಬರ ಅಖೈರ ವರೆಗೆ 1½ ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು:— ಶೇಕಡಾ ರೂ. 4 ರಂತೆ ಬಡ್ಡಿ. ಬಿನ್‌ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು.

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲ್ಲುಗಳು, ದರ್ಶನಿಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ ಮಾಹಿತಿ ಪುಸ್ತಕ (Rules of Business)ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S. Nayak.
Managing Directors.

ಆಕ್ಷೇಪ ಸರಕಾರಿ ಸಾಲಗಳಲ್ಲಿಯೇ ಈ ರಕಮನ್ನು ಇಡಬೇಕಾಗಿ ಲೆಕ್ಕ—ತಪಾಸಕರು ಬಲಾತ್ಕಾರ ಮಾಡುತ್ತಾರೆ. ಈ ಪ್ರಕಾರ ಮ್ಯುನಿಸಿಪಾಲಿಟಿಯವರ ಹಣದ ಮೇಲೆ ಸರಕಾರದ ಅಂಕೆ ಇಟ್ಟದ್ದರಿಂದ ಮ್ಯುನಿಸಿಪಾಲಿಟಿಗೆ ಅರ್ಧಲಕ್ಷ ರೂಪಾಯಿಗಳ ಮಟ್ಟಿಗೆ ನಷ್ಟವಾಗಿದೆ. ನಷ್ಟವನ್ನು ಮ್ಯುನಿಸಿಪಾಲಿಟಿಯ ನೌಕರರು ಸಹಿಸಬೇಕಾಗಿ ಮ್ಯುನಿಸಿಪಾಲಿಟಿಯವರ ಅಂಬೋಣ. ಮ್ಯುನಿಸಿಪಾಲಿಟಿಯು ಸಹಿಸಬೇಕಾಗಿ ನೌಕರರ ಅಂಬೋಣ. ಹುಕುಮು ಮಾಡಿದ ಲೆಕ್ಕ ತಪಾಸಕರು ಪರಸ್ಥರ ಇದ್ದಾರೆ. ಸ್ವದೇಶಿ ಸರಕುಗಳನ್ನು ವಿಕ್ರಯಿಸುವ ದೆಸೆಯಿಂದ ಮ್ಯುನಿಸಿಪಾಲಿಟಿಯ ಅಂಗಡಿಯನ್ನು ಕೆಲ ಭಾಡಿಗೆ ಕಡಿಮೆ ಮಾಡಿ ಕೊಟ್ಟಲ್ಲಿ ಮ್ಯುನಿಸಿಪಾಲಿಟಿಯ ಸಭಾಸದರು ಕಡಿಮೆ ಮಾಡಿದ ರಕಮನ್ನು ತುಂಬಿಕೊಡಬೇಕಾಗಿ ಸರಕಾರದ ಅಪ್ಪಣೆಯಾಗುತ್ತದೆ. ಮ್ಯುನಿಸಿಪಾಲಿಟಿಯ [illegible] ಶಾಲೆಯೊಳಗೆ ಶಿಕ್ಷಕರೊಬ್ಬರು ಹುಡುಗರಿಗೆ ಕಲಿಸುತ್ತಿರುವಾಗ ಹೃದಯಾಘಾತದಿಂದ ಸತ್ತನೆ [illegible] ಕೊಂಡರು. ಎಡ್ಮಿನಿಸ್ಟ್ರೇಟಿವ್ಹ ಆಫೀಸರರು [illegible] ಯಿಂದ ಡಾಕ್ಟರರಿಗೆ ಕರೆಸಿ [illegible] ಮಾಡಿಸಿ ಮೋಟಾರ ಲಾರಿಯಲ್ಲಿ ಹಾಕಿ ಶವವನ್ನು ಶಿಕ್ಷಕರ ಮನೆಗೆ ಕಳುಹಿದರು. ಇದಕ್ಕೆ ೧೫ ರೂಪಾಯಿ ಖರ್ಚು ತಗಲಿತು. ಇದನ್ನು [illegible] ಇಲ್ಲಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಕಡೆಯಿಂದ ವಸೂಲ ಮಾಡಬೇಕಾಗಿ ಲೆಕ್ಕ ತಪಾಸಕರ ಅಭಿಪ್ರಾಯ. ಈ ಲೆಕ್ಕ ತಪಾಸಕರಿಗೆ ಸರಕಾರದ ಆಶ್ರಯದಿಂದ ಮ್ಯುನಿಸಿಪಾಲಿಟಿಯ ಹಣ ಅಪಹರಿಸುವ ಬಾಬುಗಳು ಕಾಣುವದಿಲ್ಲ. ಅಹಮದಾಬಾದ ಕಂಟೋನಮೆಂಟ (ಸೈನ್ಯ ಠಾಣ್ಯ)ದ ಮ್ಯುನಿಸಿಪಾಲಿಟಿಯ ಕಡೆಯಿಂದ ಸರಕಾರವು ನೀರನ್ನು ಪಡಕೊಂಡು ಆ ಕುರಿತು ಮ್ಯುನಿಸಿಪಾಲಿಟಿಗೆ ಇತರರಂತೆ ಯೋಗ್ಯ ಹಣ ಕೊಡುವದಿಲ್ಲ. ಶಾಸ್ತ್ರಪೂರ್ತ ಕೆಲವು ಹಣ ಕೊಡುತ್ತದೆ. ಈ ಕುರಿತು ಮ್ಯುನಿಸಿಪಾಲಿಟಿಯವರು ಕರಾರ ಬದ್ಧರಾಗಿದ್ದಾರೆಂದು ಸರಕಾರದ ಅಂಬೋಣ. ಆ ಕರಾರು ಎಲ್ಲಿ ಶೋಧಿಸಿದರೂ ಇಲ್ಲ. ಆದಾಗ್ಯೂ ಲೆಕ್ಕ ತಪಾಸಕರು ಈ ಕುರಿತು ಒಂದು ಅಕ್ಷರ ಶಬ್ದ ಬರೆಯುವದಿಲ್ಲ. ಸರಕಾರವು ಮ್ಯುನಿಸಿಪಾಲಿಟಿಗೆ ಕೆಲವು ಪ್ರಮ್ಯಸರಿಯ ಮಾಡಿತ್ತು. ಈ ಹಣ ಖರ್ಚು ಮಾಡದ ಒಳಿಕ ಸರಕಾರಕ್ಕೆ ಬಡ್ಡಿ ಕೊಡಲಿಕ್ಕೆ ಮ್ಯುನಿಸಿಪಾಲಿಟಿಯವರು ಬದ್ಧರ [illegible] ಲಿ, ಖರ್ಚಾಗದಿದ್ದರೆ ಬಡ್ಡಿ ಕೊಡಬೇಕೆಂದ ಸರಕಾರದವರು ಒತ್ತಾಯ ಮಾಡಿ ಬಲಾತ್ಕಾರದಿಂದ ಆ ರಕಮನ್ನು ವಸೂಲ ಮಾಡಿಕೊಂಡರು. ಹೀಗೆ ವಸೂಲ ಮಾಡಿದ್ದು ತಪ್ಪೆಂದು ಸರಕಾರಿ ಲೆಕ್ಕ-ತಪಾಸಕರು ಆಕ್ಷೇಪ ಮಾಡಲಿಲ್ಲ. ಮ್ಯುನಿಸಿಪಾಲಿಟಿಯವರು ಸರಕಾರದ ಮೇಲೆ ದಾವೆ ಮಾಡಿ ಅನ್ಯಾಯದ ಪರಿಹಾರ ಮಾಡಿಕೊಳ್ಳಬೇಕಾಯಿತು. ಲೆಕ್ಕ-ತಪಾಸಕರು ನಿಷ್ಪಕ್ಷಪಾತದಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಲೆಕ್ಕ-ತಪಾಸ ಮಾಡುವದಿಲ್ಲವಾಗಿ ಇದರ ಮೇಲಿಂದ ಸಿದ್ಧವಾಗುತ್ತದೆ. ಇಂಥ ಪರಿಷತ್ತುಗಳಿಂದ ಸರಕಾರದ ಮೇಲೆ ಏನೂ ಪರಿಣಾಮ ಆಗಲಿಲ್ಲ, ಆಗುವದಿಲ್ಲ. ಪರಿಷತ್ತುಗಳು ಸರಕಾರದ ನ್ಯೂನತೆಗಳನ್ನು ಅಡಗಿಸಿ ಇಟ್ಟು ಸರಕಾರದ ಕಾರಭಾರಕ್ಕೆ ಬೆಂಬಲ ಕೊಡುವ ಸಂಸ್ಥೆಗಳಾಗಿವೆ. ಸರಕಾರಕ್ಕೆ ಬೋಧಿಸಲು ನಾನು ಎಷ್ಟಕ್ಕೂ [illegible] ಆದರೆ ಏನು ಮಾಡಲಿ? ಸಂಗತಿಗಳನ್ನು ನಾನು ಸ್ಫುಟಗೊಳಿಸದಿದ್ದರೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೂ ಅವುಗಳ ಕೆಲಸವನ್ನು ನಿಸ್ಪೃಹ ಬುದ್ಧಿಯಿಂದ ನಡಿಸುವ ಅನೇಕ ಜನರಿಗೂ ಅನ್ಯಾಯವಾಗುವದು. ಈ ಪರಿಷತ್ತುಗಳು [illegible] ಸರಕಾರದಿಂದ ಪ್ರಯತ್ನ [illegible] ರಿಂದ ಈ ಪರಿಷತ್ತುಗಳು ನಿಷ್ಪ್ರಯೋಜಕವಾಗಿವೆ. ಸರಕಾರದ ವ್ಯವಸ್ಥೆಯನ್ನು [illegible] ಒಂದು ಬದಿಗೆ ಇಟ್ಟು [illegible] ಕೂಡಿಸಿ ಕಾರ್ಯ ಮಾಡಬೇಕು. ಅಂದರೆ ಸಂಸ್ಥೆಗಳಿಗೆ ಪ್ರತಿಷ್ಠೆ ದೊರಕೀತು. ಸರಕಾರದ [illegible] ಹಣ ಬೇಕು. [illegible] ದಲ್ಲಿ ಮತ್ತೂ ಖರ್ಚು ಬೆಳೆಯುವದು. ಅದರಿಂದ [illegible] ಯದ ಅಪಾಯ ಮಾಡದೆ [illegible] ಲೋಕಸೇವ ಮಾಡಬೇಕು. [illegible] ಪಾಲಿಟಿಗೆ ತಮ್ಮ ಸಭಾಸದರ [illegible] ಯಿಂದಲೂ ಈ ಸಂಸ್ಥೆಗಳು [illegible] ಗುಜರಾಥ ಪ್ರಾಂತದೊಳಗಿನ ಒಂದು ಮ್ಯುನಿಸಿಪಾಲಿಟಿಯು [illegible] ಮ್ಯುನಿಸಿಪಾಲಿಟಿಯ ಕಾರಭಾರವನ್ನು [illegible] ಮ್ಯುನಿಸಿಪಾಲಿಟಿಯನ್ನು ಕೆಲ ಕಾಲ ಡಿಸಮಿಸ್ ಮಾಡಲಾಯಿತು. [illegible] ಸರಕಾರದ [illegible] ರನ್ನಾಗಿ [illegible] ಸಭೆಗೆ [illegible] ಮ್ಯುನಿಸಿಪಾಲಿಟಿಯ [illegible] ಸರಕಾರದ [illegible] ಪಕ್ಷಪಾತಿಯು [illegible] ಸ್ಥಾನಿಕ [illegible] ಗಳ ಮೇಲೆ ಸರಕಾರ ಅಧಿಕಾರಿಗಳು ನಡಿಸುವ [illegible] ಮ್ಯುನಿಸಿಪಾಲಿಟಿಗಳ [illegible] ಬೋಧಿಸಿದರೆ [illegible] ಸ್ವಾತಂತ್ರ್ಯ [illegible] ಜನರ ಕಡೆಯಿಂದ ಎತ್ತಲಿ ಮಾಡಿದ ಹಣವನ್ನು [illegible] ಇದೆ. ಅದನ್ನು ಕಾರ್ಯ ಜಾಗೃತಿಯಿಂದ ವಿನಿಯೋಗಿಸಲು ಜಗದೊಡೆಯನು ನಿಮಗೆ ಸಾಮರ್ಥ್ಯವನ್ನಿತ್ತು ಹರಸಲಿ” ಸರದಾರ ವಲ್ಲಭಭಾಯಿ ಪಟೇಲರು, ಅಹಮದಾಬಾದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಿದ್ದು ಅನುಭವ ಪಡೆದವರಿದ್ದಾರೆ. ಅವರ ಕಾರಕಿರ್ದಿಯಲ್ಲಿ ಆ ಮ್ಯುನಿಸಿಪಾಲಿಟಿಯಲ್ಲಿ ಒಳ್ಳೇ ಸುಧಾರಣೆಗಳಾಗಿವೆ. ಸರಕಾರದ ಕಡೆಯಿಂದಲೂ ಅವರು ಪ್ರಶಂಸೆ ಪಡೆದಿದ್ದಾರೆ. ನುಡಿದಂತೆ ನಡೆಯುವ ಮಹಾನುಭಾವರವರು ರಾಷ್ಟ್ರೀಯ ಸಭೆಯ ದಕ್ಷ, ನಿಷ್ಠಾವಂತ ಲೋಕಸೇವಕರವರು. ಇಂಥ ಅನುಭವಿಕ ಪುರುಷರ ಅಭಿಪ್ರಾಯಗಳನ್ನು ಸರಕಾರವು, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಪರಾಂಬರಿಸಿ ನಡಕೊಂಡಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆ ಎಂಬ ಹೆಸರಿನೊಳಗಿನ ಸ್ವರಾಜ್ಯ ಶಬ್ದ ಸಾರ್ಥಕವಾಗುವಂತಿದೆ.

* *

“ಮೌನಂ ಸರ್ವಾರ್ಥ ಸಾಧನಂ” ಎಂಬ ಮಾತು ಈಗಲೂ ಸತ್ಯವಾದದ್ದು. ಮಹಾತ್ಮರು ಸೋಮವಾರ ಮೌನ ತಾಳುತ್ತಾರೆಂಬ ಸಂಗತಿ ಲೋಕಪ್ರಸಿದ್ಧವಿದೆ. [illegible] ವರ್ಯರು ಮಿತಭಾಷಿಗಳು. ಇಂಗ್ಲೀಷ ಗಾದೆ ಹೇಳಿದಂತೆ ಮಾತು ಕಡಿಮೆ. ಆಡಿದ ಮಾತು ನಿಶ್ಚಿತ ಸ್ವರೂಪದ್ದು. ದೊಡ್ಡ ದೊಡ್ಡವರೆನಿಸಿಕೊಳ್ಳುವ [illegible] ದಕರು ಸಣ್ಣ ದನಿಯಿಂದ ಮಾತಾಡುವ ಪ್ರಘಾತವನ್ನು ಜನಸಾಮಾನ್ಯರು ನಿತ್ಯ [illegible] ಒಲ್ಲಾದ ವಿಷಯ. ವಂಗದೇಶದ [illegible] ರು ಮೌನವ್ರತಧಾರಿಯಾಗಿ [illegible] ಇವರ [illegible] ದೇಶದವರು [illegible] ದೊಡ್ಡ ಸರಕಾರಿ [illegible] ತಿಂಗಳಿಗೆ ರೂ ೫೦೦-೦-೦ ವೇತನ [illegible] ನೌಕರಿಯ ಕೆಲಸವನ್ನು ಪ್ರತಿನಿತ್ಯ [illegible] ಅವರಿಗ ಬೇಸರ ಬಂತು. [illegible] ದೇಶಸಂಚಾರದಿಂದ [illegible] ಅನುಭವ ಪಡೆಯಬೇಕು ಎಂಬುದಾಗಿ ಅವರಿಗೆ ಅನಿಸಿತು. ಅವರು [illegible] ಕೊಟ್ಟರು. ಯಾವತ್ತೂ ಐಶ್ವರ್ಯ [illegible] ಹೆಂಡರು ಮಕ್ಕಳು, ಮನೆ-ಮಾರು ತೊರೆದರು. ಈಗ ೩೦ ವರ್ಷಗಳಿಂದ ಅವರು [illegible] ಮಾಡುತ್ತಿದ್ದಾರೆ. [illegible] ಹಿಮಾಲಯ ಪರ್ವತದ [illegible] ಗುಹೆಗಳಲ್ಲಿ ಉಳಿದು ತಪಸ್ಸು ಮಾಡಿದರು. [illegible] ಬತ್ತಲೆಯಾಗಿ ಕಂದ-ಮೂಲಗಳನ್ನು ತಿಂದು [illegible] ಮಾಡುತ್ತಾರಾಗಿಯೂ ತಪಸ್ವಿಗಳು ಈ ಪವಿತ್ರ ದೃಶ್ಯವನ್ನು ಪಡೆಯಬಹುದಾಗಿಯೂ ಅವರ ಅಂಬೋಣ. ಹಿಮಾಲಯ ಪರ್ವತದ ಶಿಖರವನ್ನು ವಿಮಾನಗಳಿಂದ ಸಹ ತಲ್ಪಲಸಾಧ್ಯ

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೭ ರಲ್ಲಿ ಸ್ಥಾಪಿಸಲಾದದ್ದು.)

ಶುದ್ಧ ಭಾರತೀಯ ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಗೊಂಡಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ನೆಂದು ಇವರು ಹೇಳುತ್ತಾರೆ ೬೦ ವರುಷದವರಾದಾಗ್ಯೂ ಇವರು ದೃಢಕಾಯರಾದವರಾಗಿದ್ದಾರೆ ಆದರೆ ಇವರ ಆಹಾರ ಅಷ್ಟು ದೊಡ್ಡದಲ್ಲ. ಅರ್ಧ ಗ್ಲಾಸು ಅಂದರೆ ಸಾಧಾರಣ ಒಂದು ಅಚ್ಚು ಹಾಲನ್ನು ಸಾವಕಾಶವಾಗಿ ಕುಡಿದು ಇಡೀ ದಿನ ನಿರ್ವಾಹ ಮಾಡುತ್ತಾರೆ. ಓದುವ ಅಭಿಲಾಷೆ ವಿಶೇಷ ಗ್ರಂಥಗಳೇ ಇವರ ಮುಖ್ಯ ಜೀವನವೆಂದು ಹೇಳಲಡ್ಡಿಯಿಲ್ಲ ಇವರು ಓದದ ಪುಸ್ತಕವಿಲ್ಲ. ಈಗ ೧೩ ತಿಂಗಳಿಂದ ಇವರು ಮಾತನಾಡುವದಿಲ್ಲ ಪ್ರಶ್ನೆ ಕೇಳಿದರೆ ಪಾಟಿಯ ಮೇಲೆ ಉತ್ತರ ಬರೆಯುತ್ತಾರೆ ಕಳೆದ ತಿಂಗಳಲ್ಲಿ ಇವರು ಕರಾಚಿಗೆ ಹೋಗಿದ್ದರು ಆ ಸಮಯ ಇವರಿಗೆ ಪತ್ರಿಕಾ ಪ್ರತಿನಿಧಿಗಳು ಭೆಟ್ಟಿಯಾಗಿ ಮೌನ ಕಾರಣ ಕೇಳಿದರು ಆಗ ಇವರು ಉತ್ತರ ಬರೆದದ್ದೇನಂದರೆ.— "ಸರ್ವದಾ ಮೌನದಿಂದ ಇರುವದು ಶರೀರ ಶ್ರೇಯಸ್ಕರವಾದದ್ದು ಅದರಿಂದ ಮನುಷ್ಯನ ಚಿತ್ತ ಏಕಾಗ್ರವಾಗಲು ಅನುಕೂಲವಾಗುತ್ತದೆ ಆತನಿಗೆ ಕಲ್ಪನೆಗಳು ಹುಟ್ಟುತ್ತವೆ, ಗಹನ ವಿಚಾರಗಳು ಹೊಳೆಯುತ್ತವೆ ದೈವೀಸ್ಫೂರ್ತಿಯುಂಟಾಗಲಿಕ್ಕೂ ಅನುಕೂಲವಾಗುತ್ತದೆ." ಈ ಸಂಗತಿಯನ್ನು ಸಮಸ್ತರೂ ದೀರ್ಘವಾಗಿ ವಿಚಾರಿಸಬೇಕು ನಾಲಿಗೆಯನ್ನು ಬಿಗಿ ಹಿಡಿಯುವದು ಯಾವಾಗಲೂ ಶ್ರೇಯಸ್ಕರವಾದದ್ದು. ಶಾಸ್ತ್ರದಿಂದಲೂ ನಾಲಿಗೆಯನ್ನು ನಿಗ್ರಹಿಸಬೇಕಾಗಿ ವಿಧಿಸಲಾಗಿದೆ ಇದನ್ನರಿತು ಜನರು ನಡೆಕೊಂಡಲ್ಲಿ ಕ್ಷೇಮವಿದೆ.

⁂

ಪಾಶ್ಚಾತ್ಯರ ಸಹವಾಸದಿಂದ ಹಿಂದೀಯರ ಮನೋವೃತ್ತಿಯೇ ಬದಲಿದೆ ಜನಸಾಮಾನ್ಯರು ಪಾಶ್ಚಾತ್ಯರ ನಡೆ-ನುಡಿಗಳನ್ನೂ, ಉಡಿಗೆ-ತೊಡಿಗೆಗಳನ್ನೂ, ಆಚಾರ-ವಿಚಾರಗಳನ್ನೂ ಅನುಸರಿಸುತ್ತಾರೆ ದೇಶೀ, ವಸ್ತುಕ್ಕೆ ತಿರಸ್ಕಾರ, ಪರದೇಶೀ ವಸ್ತುಕ್ಕೆ ಆದರ ದೊಡ್ಡ-ದೊಡ್ಡವರು ಯುರೋಪ ಖಂಡದ ಮಹಾ ಯಾತ್ರೆ ಕೈಕೊಳ್ಳುತ್ತಾರೆ. ಇಂಗ್ಲಂಡ, ಫ್ರಾನ್ಸ, ಜರ್ಮನಿ, ಸ್ವಿಝರ್ಲಂಡ, ಆಸ್ಟ್ರಿಯಾ, ಹಂಗೇರಿ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಹಿಂದುಸ್ಥಾನದಲ್ಲಿಯ ಸಂಸ್ಥಾನಿಕರೂ ಐಶ್ವರ್ಯವಂತರೂ ವಾಸ ಮಾಡುತ್ತಾರೆ ಡಂಭಾಚಾರಕ್ಕಾಗಿ ಧರ್ಮ [illegible] ತ್ತಾರೆ ತುತ್ತು ಕೂಳು ಸಿಗದೆ ಸಂಕಟಪಡುವ ದೀನ ದೇಶಬಾಂಧವರ ಪರಿವೆಯನ್ನು ಅವರು ಹಿಡಿಯುವದಿಲ್ಲ. ನಾಮದಾರ ಆಗಾಖಾನರವರು ಇಂಗ್ಲಂಡ, ಫ್ರಾನ್ಸ ದೇಶಗಳಲ್ಲಿ ನಡಿಸುವ ವಿಲಾಸಗಳನ್ನೂ, ಅದಕ್ಕಾಗಿ ವೆಚ್ಚ ಮಾಡುವ ಲಕ್ಷಾವಧಿ ರೂಪಾಯಿಗಳನ್ನೂ ಲೋಕವೇ ಬಲ್ಲದು. ಬಡೋದೆಯ ಗಾಯಕವಾಡ ಮಹಾರಾಜರವರಂತು ಯುರೋಪ ಖಂಡದಲ್ಲಿಯೇ ವಾಸವಾಗಿದ್ದಾರೆ. ಇಲ್ಲಿ ಮಹಾರಾಜರ ದರ್ಶನ ಯೋಗ ಲಭಿಸುವದು ಅಪರೂಪ ಇಂಗ್ಲಂಡ ದೇಶದಲ್ಲಿ ಇವರು ಹೆಚ್ಚಾಗಿ ಇರುತ್ತಾರೆ ದೊಡ್ಡ ದೊಡ್ಡ ಖಾನಾವಳಿಗಳಲ್ಲಿ ಇವರು ವಿಲಾಸ ಮಾಡುತ್ತಾರೆ ಖಾನಾವಳಿಯೊಳಗಿನ ನೌಕರರಿಗೆ ಇವರು ಉದಾರ ಬುದ್ಧಿಯಿಂದ ಇನಾಮು ಕೊಡುತ್ತಾರೆ ತಿಂಗಳು-೩ ತಿಂಗಳಲ್ಲಿ ಒಬ್ಬೊಬ್ಬ ಮುಖ್ಯ ನೌಕರರಿಗೆ ಸಹಜ ೧೦೦-೨೦೦ ಪವನು ಇನಾಮು ಸಿಗುತ್ತದಂತೆ ಹೊಟೆಲ ಕ್ಲೆರಿಜ ಎಂಬ ಖಾನಾವಳಿಯ ಜಲಾರ್ಡ ಎಂಬ ಮೆನೇಜರರು ಮಹಾರಾಜರಿಗೆ ಸುಖ ಪ್ರಾಪ್ತಿ ಮಾಡಿಕೊಟ್ಟ ಬಗ್ಗೆ ಮಹಾರಾಜರವರು ಅವರಿಗೆ ಕಾಲ-ಕಾಲಕ್ಕೆ ಸುವರ್ಣಾಭರಣಗಳನ್ನು ಅನುಗ್ರಹಿಸಿದ್ದಾರೆ ಅವರ ಕಡೆ ಮಹಾರಾಜರವರು ಅನುಗ್ರಹಿಸಿದ ಸುವರ್ಣಾಭರಣಗಳು ಅನೇಕವಿವೆ. ಇದರಿಂದಲೂ ಮಹಾರಾಜರವರಿಗೆ ಸಂತೋಷವಾಗಲಿಲ್ಲ ಹಿಂದುಸ್ಥಾನಕ್ಕೆ ಬಂದ ಬಳಿಕ ಮಹಾರಾಜರವರು ಹೆಸರಾದ ಶಿಲ್ಪಿಗಳವರ ಕಡೆಯಿಂದ ಚಹ ಕುಡಿಯುವ ಬೆಳ್ಳಿಯ ಪಾತ್ರೆಗಳನ್ನು ತಯಾರಿಸಿ ಕಳುಹಿದರಂತೆ! ಇಷ್ಟು ಕೀರ್ತಿಗೆಯು, ಅಮೌಲ್ಯ ಮತ್ತು ರೀತಿಯ ಚಹದ ಪಾತ್ರೆಗಳು ಎಲ್ಲಿಯೂ ದೊರಕಲಿಕ್ಕಿಲ್ಲವಾಗಿ ಜಲಾರ್ಡಯವರು ಲಂಡನಿನ 'ಹಿವಲ್' ಪತ್ರಿಕೆಯಲ್ಲಿ ಬರೆದು ಮಹಾರಾಜರವರ ಗುಣ ಸಂಕೀರ್ತನ ಮಾಡುತ್ತಾರೆ ಎಲ್ಲಕ್ಕಿಂತಲೂ ಕರ್ಪೂರ್ತಲಾ ಮಹಾರಾಜರವರ ಔದಾರ್ಯವೇ ದೊಡ್ಡದು ಇವರು ಈಗ ಹಂಗೇರಿಯಾದ ರಾಜಧಾನಿಯಾದ ಬುಡಾಪೆಸ್ಟದಲ್ಲಿದ್ದಾರೆ ಒಲ್ಟರ್ಗೇರಿಯಲ್ಲಿ ಒಂದು ಸಾರ್ವಜನಿಕ ಸ್ನಾನಗೃಹವಿದೆ ಈ ಸ್ನಾನಗೃಹದ ವ್ಯವಸ್ಥೆ ವರ್ಣಿಸಲಸದಳ, ಸಮುದ್ರದಂತೆ ತೆರೆಗಳು ಇಲ್ಲಿ ರಚಿಸಲ್ಪಟ್ಟಿವೆ ಕೃತ್ರಿಮ ತೆರೆಗಳಲ್ಲಿ ಸುಖಸ್ನಾನ ಮಾಡಬಹುದು ಚಳಿಗಾಲದಲ್ಲಿ ಸ್ನಾನಗೃಹವನ್ನು ಮುಚ್ಚುತ್ತಾರೆ ಮಹಾರಾಜರವರು ಈ ಗೃಹವನ್ನು ಮುಚ್ಚಬಾರದಾಗಿಯೂ, ಅದಕ್ಕೆ ತಗಲುವ ಖರ್ಚನ್ನು ತಾವು ತೆರುತ್ತೇವಾಗಿಯೂ ಹೇಳಿದರಂತೆ. ದಿನಾ ೪೦೦ ರೂಪಾಯಿ ಮಹಾರಾಜರವರು ತೆರುತ್ತಾರೆ ಮಹಾರಾಜರವರು ಸ್ವತಃ ಸ್ನಾನ ಮಾಡುವ ದೆಸೆಯಿಂದ ಈ ಸ್ನಾನಗೃಹವನ್ನು ಮುಚ್ಚಬಾರದಾಗಿ ಅಪೇಕ್ಷಿಸಿದ್ದರು ಈ ತನಕ ಮಹಾರಾಜರು ಒಂದು ದಿನ ಸ್ನಾನ ಮಾಡಲಿಲ್ಲ ಜನರು ಪುಕ್ಕಟೆಯಾಗಿ ಸ್ನಾನ ಮಾಡಿ ಸುಖಪಡುತ್ತಾರೆ. ಮಹಾರಾಜರಿಗೆ ಅದೇ ಸುಖ. ಈ ಪ್ರಕಾರ ಲಂಡನಿನೊಳಗಿನ 'ಡೇಲಿ ಎಕ್ಸಪ್ರೆಸ್' ಪತ್ರಿಕೆಯ ಬುಡಾಪೆಸ್ಟದೊಳಗಿನ ಸುದ್ದಿಗಾರರು ಹೊಗಳಿ ಬರೆಯುತ್ತಾರೆ ಪಾಶ್ಚಾತ್ಯರ ಸಹವಾಸದಿಂದ ಹಿಂದೀಯರ ಪತ್ನ

[ಮುಂದೆ ೧೧ನೇ ಪಾನು ನೋಡಿರಿ]

ಗೋಮಾಂತಕ ಜಾಂಬಾವಲಿ ಸಂಸ್ಥಾನದ
ಶ್ರೀ ದಾಮೋದರ ದೇವರ
ಭಾವಚಿತ್ರಗಳು
ಈ ಕೆಳಗಿನ ಪತ್ತೆಯ ಮೇಲೆ ಮಾರಲಿಗುತ್ತವೆ:
ಬೆಲೆ ೧ ರೂಪಾಯಿ
ಪತ್ತೆ:- ಪುರುಷೋತ್ತಮ ಲಕ್ಷ್ಮಯ್ಯ
ಶ್ಯಾನಭಾಗ ದುಕಾನ, ಕುಮಟಾ.
ದಾಮೋದರ ನಾಗಪ್ಪ ಶ್ಯಾನಭಾಗ
ಸ್ಟೇಶನರಿ ದುಕಾನ, ಕಾರವಾರ.
ಯಶವಂತ ವಿಷ್ಣು ನಾಯಕ ಭೊಂಬ್ರಿ,
ಮರ್ಚಂಟ, ಮಡಗಾಂವ-ಗೋವಾ.
ವೆಂಕಟೇಶ ರವಳ ಕಾಮತ,
ದಲಾಲ, ವಾಸ್ಕೋಡಿಗಾಮಾ ಗೋವಾ.
ಕಾಶಿನಾಥ ದಾಮೋದರ ನಾಯಕ, ದಲಾಲ,
ಅನಂತ ಬಿಲ್ಡಿಂಗ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ,೨

Murdeshwar,Shrinivasrao&Co ,
Commission Agents,
Yellapur. (N. Kanara)
ಮುರ್ಡೇಶ್ವರ,ಶ್ರೀನಿವಾಸರಾವ್ ಎಂಡ್ ಕೋ,
ದಲಾಲ, ಯಲ್ಲಾಪುರ.
ನಮ್ಮ ಅಡಿಕೆ, ಯಾಲಕ್ಕಿ, ಮೆಣಸು ವಗೈರೆಯ ದಲಾಲಿ ಕಂಪನಿ ಕೆಲಸಕ್ಕೆ ಶುರು ಮಾಡಿರುತ್ತದೆ, ಹೆಚ್ಚಿಗೆ ಮಾಹಿತಿ ಬಗ್ಗೆ ಪತ್ರವ್ಯವಹಾರದಿಂದ ಅಥವಾ ಸಮಕ್ಷ ಒಂದಲ್ಲಿ ತಿಳಿಯುವದು
ShrinivasRao,
Managing Agent, YELLAPUR.

For sale ! For sale !! For sale !!
Udipi Syndicate Bank Preference Shares for sale !
Rate less than the market rate !
Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs 7 by the Bank authorities.
These shares will be sold less than the market rates Intending buyers should apply to the following address:--
Vithal Subraya Prabhu Shiroorkar,
Post:- ANKOLA.

“[illegible]”

([illegible])

[illegible]

[illegible]

[illegible]

[illegible]

[illegible]

— [illegible]

— [illegible]

— [illegible]

ದನಗಳ ಪ್ರದರ್ಶನ.

ಹಳಿಯಾಳದ ದನ ಹಾಗೂ ಬೇಸಾಯದ ಪ್ರದರ್ಶನದಲ್ಲಿ ಸ್ವಾಗತ ಮಾಡುವಾಗ ಶ್ರೀ ಶಂಕರ [illegible] ವೀಸಾ ಇವರು ಮಾಡಿದ ಭಾಷಣದ ಸಾರಾಂಶ

ಜಿಲ್ಲಾಧಿಕಾರಿಗಳಾದ ರಾ| ದೀಕ್ಷಿತರವರು ಈ ತಾಲೂಕಿನ ಸಲುವಾಗಿ ಸೇರಿದ ಮೊದಲನೇ ದನಗಳ ಹಾಗು ಬೇಸಾಯ ಪ್ರದರ್ಶನಕ್ಕೆ ಅಧ್ಯಕ್ಷರಾಗಲೊಪ್ಪಿದ ಬಗ್ಗೆ ಮೊಟ್ಟ ಮೊದಲು ನಿಮ್ಮೆಲ್ಲರ ಪರವಾಗಿ ನಾನು ಅವರ ಆಭಾರ ಮನ್ನಿಸಿ ಸ್ವಾಗತ ಮಾಡುತ್ತೇನೆ. ಈ ಪ್ರದರ್ಶನದ ಕುರಿತು ಕೆಲ ಪೂರ್ವಪೀಠಿಕೆ ಮಾಡುವದವಶ್ಯ. ೧೯೧೧ನೇ ಇಸ್ವಿಯಲ್ಲಿ ಕಟುಕರ ಬಾಯಿಗಳಿಂದ ದನಗಳನ್ನು ರಕ್ಷಿಸುವದಕ್ಕಾಗಿ ಇಲ್ಲಿ ಗೋಶಾಲೆ ಸ್ಥಾಪನೆಯಾಯಿತು. ಗೋಶಾಲೆಯ ಅಧ್ಯಕ್ಷರು ರಾ| ದೇಶಪಾಂಡೆಯವರು. ಕಾರ್ಯಕಾರಿ ಮಂಡಳದ ಅಧ್ಯಕ್ಷರು ರಾ| ಹಳ್ಳಿಕೇರಿಯವರು ಕ್ರಮವಾಗಿ ಗೋಶಾಲೆಯೊಳಗೆ ಬೀಜದ ಹೋರಿಗಳನ್ನೂ, ಒಳ್ಳೇ ಹಾಲು ಹಿಂಡುವ ದನಗಳನ್ನೂ ಆರಿಸಿ ಜೋಪಾನ ಮಾಡಲಾಯಿತು. ರಾ| ದೇಶಪಾಂಡೆಯವರು ೬ ಸಾವಿರ ರೂಪಾಯಿ ಖರ್ಚು ಮಾಡಿ ೧ ಗೋಶಾಲೆಯನ್ನು ಕಟ್ಟಿಸಿಕೊಟ್ಟರು. ರಾ| ಹಳ್ಳಿಕೇರಿಯವರು ೭ ವರ್ಷಗಳ ತನಕ ಕಾರ್ಯಕಾರಿ ಮಂಡಳದ ಕೆಲಸವನ್ನು ದಕ್ಷತೆಯಿಂದ ನಡಿಸಿ ಈಗ ಅದನ್ನು ಬೇರೆ ಕಾರ್ಯಕರ್ತರಿಗೆ ಒಪ್ಪಿಸಿದ್ದಾರೆ. ವಂತಿಗೆಯಿಂದ ಗೋಶಾಲೆಯ ಖರ್ಚನ್ನು ಪೂರೈಸಿ ಈಗ ರೂಪಾಯಿ ೫ ಸಾವಿರ ನಿಧಿ ಸಂಗ್ರಹ ಮಾಡಿದ್ದಾರೆ. ಇದರ ಯಾವತ್ತೂ ಶ್ರೇಯಸ್ಸು ರಾ| ದೇಶಪಾಂಡೆ ಹಳ್ಳಿಕೇರಿಯವರಿಗೆ ಸಲ್ಲತಕ್ಕದ್ದು. ಹೊಸ ಕಾರ್ಯಕರ್ತರು ಗೋಶಾಲೆಯ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಈ ಪ್ರದರ್ಶನವನ್ನು ಏರ್ಪಡಿಸಿದ್ದಾರೆ. ರಾ| ಹುಲ್ಲಮಾನಕರರವರು ಹೊಸ ಕಾರ್ಯಕಾರಿ ಮಂಡಳದ ಅಧ್ಯಕ್ಷರಾಗಿದ್ದಾರೆ. ಈ ಪ್ರದರ್ಶನಕ್ಕೆ ತಗಲುವ ಖರ್ಚನ್ನು ಅವರೇ ಧಾರಾಳವಾಗಿ ಕೊಡಿಸಿದ್ದಾರೆ. ಗೋಶಾಲೆಯವರು ರೂಪಾಯಿ ೧೦೦, ತಾಲೂಕಾ ಡೆವಲಪ್‌ಮೆಂಟ ಎಸೋಸಿಯೇಶನ್‌ದವರು ರೂಪಾಯಿ ೧೦೦, ಹಳಿಯಾಳ ಮ್ಯುನಿಸಿಪಾಲಿಟಿಯವರು ರೂ, ೫೦, ಕಲೆಕ್ಟರರು ರೂ. ೧೦೦; ಹೀಗೆ ೩೫೦ ದೊರಕಿವೆ. ತಾಲೂಕ ಬೋರ್ಡಿನವರು ೨೫ ೩೫ ಕೊಡುವರು. ನಮ್ಮ ತಾಲೂಕಿನ ಸ್ಥಿತಿ ನೆಟ್ಟಗಿಲ್ಲ. ೪-೫ ವರ್ಷಗಳಿಂದ ಬೇಕಾದಾಗ ಮಳೆ ಬೀಳದೆ ಬೇಡಾದಾಗ ಮಳೆ ಬಿದ್ದು ಬೆಳೆಗಾಲ ಪ್ರಯೋಜನವಾಗುತ್ತಿದೆ. ಕಾಳು-ಕಡಿಗಳ ಧಾರಣೆ ಇಳಿದದ್ದರಿಂದ ಬೇಸಾಯಗಾರರಿಗೆ ಮತ್ತಷ್ಟು ಸಂಕಟವಾಗಿದೆ. ಚಳಿಜ್ವರದಿಂದಲೂ ಬೇರೆ ಬೇರೆ ಪಿಡುಗುಗಳಿಂದಲೂ ಜನಸಂಖ್ಯೆ ಕುಗ್ಗುತ್ತದೆ. ಒಕ್ಕಲಿಗರಿಗೆ ಬಿಡುವಿಲ್ಲ. ಇದೀಗಲೇ ಜನಬಲವಿಲ್ಲದೆ ಹಲವಷ್ಟು ಭೂಮಿ ಬಂಜರು ಬಿದ್ದಿದೆ. ಇದೇ ಸ್ಥಿತಿ ಮುಂದೆ ಸಾಗಿದಲ್ಲಿ ಕೃಷಿಕವರ್ಗವು ನಾಶ ಹೊಂದುವದು. ಈ ವರ್ಷದ ಬೆಳೆ ಸ್ಥಿತಿಯು ನೆಟ್ಟಗಿಲ್ಲ. ಬೇಸಾಯಗಾರರಿಗೆ ತಕ್ಕ ಶಿಕ್ಷಣ ಕೊಡುವದಕ್ಕಾಗಿ ದನ ಮತ್ತು ಬೇಸಾಯ ಪ್ರದರ್ಶನ ಏರ್ಪಡಿಸಲಾಗಿದೆ. ದನಗಳ ಪ್ರದರ್ಶನದಲ್ಲಿ ಶ್ರೇಷ್ಠ ತಳಿಯ ಹೋರಿ, ಎತ್ತು, ಆಕಳು ಪ್ರದರ್ಶಿಸಲ್ಪಟ್ಟಿವೆ. ಬೇಸಾಯ ಪ್ರದರ್ಶನದಲ್ಲಿ ತರತರದ ಹುಲ್ಲು-ಕಾಳು, ಬೇರೆ ಬೇರೆ ಜಾತಿಯ ಭತ್ತದ ಬೀಜ, ಕಾಯಿಪಲ್ಲೆ, ಕಬ್ಬು ಮೊದಲಾದವುಗಳೂ, ನೇಗಿಲು ಮುಂತಾದ ಒಕ್ಕಲತನದ ಹೋರಿಗೆ ಸಂಬಂಧಪಟ್ಟ ಸಾಹಿತ್ಯಗಳೂ ಇಡಲ್ಪಟ್ಟಿವೆ. ಆರೋಗ್ಯ ಬೇಸಾಯ ಮೊದಲಾದ ವಿಷಯಗಳ ಮೇಲೆ [illegible] ವ್ಯಾಖ್ಯಾನ ಕೊಡುವ ಏರ್ಪಾಡಾಗಿದೆ. ನಮ್ಮ ಕಡೆ ವಿಶೇಷ ದ್ರವ್ಯಬಲವಿಲ್ಲ; ಇದ್ದ ಹಣದಿಂದ ಶಕ್ತಿಮೀರಿ ಒಕ್ಕಲಿಗರಿಗೆ ಉಪಯೋಗವಾಗುವಂತೆ ವ್ಯವಸ್ಥೆ ಮಾಡಿರುತ್ತೇವೆ.

ಗೋರಕ್ಷಣ ಸಂಸ್ಥೆಯ ಚೇರಮನ್ನರಾದ ಶ್ರೀ| [illegible] ಕೇಣಿರಾವ ಭಟ್ರ ಇವರ ಭಾಷಣದ ಸಾರಾಂಶ:—

ಗೋಶಾಲೆ ಸ್ಥಾಪನೆಯಾದದ್ದು ತಾ, ೧೧-೪-೧೯೧೧ರ ಸುಮಾರಿಗೆ ಗೋಭಕ್ತ ಬಾಲಕೃಷ್ಣಬುವಾ [illegible] ಮಹಾರಾಜರವರು ಮಾಡಿದ ಗೋರಕ್ಷಣ ಉಪದೇಶದ ಫಲವಿದು. 'ಗೋರಕ್ಷಣ ಮತ್ತು ಕೃಷಿಜೀವನ ಸಂಸ್ಥೆ' ಎಂಬ ಹೆಸರಿನಿಂದ ಇದು ಸ್ಥಾಪಿತವಾಯಿತು. ಈ ತಾಲೂಕಿನವರ ಜೀವನೋಪಾಯ ಬೇಸಾಯ. ಕ್ರಮವಾಗಿ ಒಕ್ಕಲುತನದ ಕೊರತೆ ಕಣ್ಣಿಗೆ ತಟ್ಟಿದ್ದರಿಂದ ಅದರ ಉನ್ನತಿಗಾಗಿ ಈ ಸಂಸ್ಥೆ ಸ್ಥಾಪನೆಯಾಯಿತು. ಆರ್ಬಾಸನ ಗೋಶಾಲೆಯೊಳಗೆ ೩ ಉತ್ಸವಗಳಾಗುತ್ತವೆ. ೧ ಚೈತ್ರ ಶುದ್ಧ ೧೧ಕ್ಕೆ [illegible]. ಕಾರ್ತಿಕ ೧ರಿಂದ ಸಪ್ತಮಿ ತನಕ ೭ ದಿವಸ. ಶ್ರಾವಣ ಶುದ್ಧ ೧೧ಯು ವಾರ್ಷಿಕೋತ್ಸವದಲ್ಲಿ ಜಮಾ-ಖರ್ಚನ್ನು ಓದಿ ಕಾರ್ಯಕಾರಿ ಮಂಡಳ ನೇಮಿಸುವ ಕೆಲಸ ನಡೆಸುತ್ತದೆ. ಗೋಶಾಲೆ [illegible] ಮೊದಲನೇ ದಿವಸ ದನಗಳ ಮೆರವಣಿಗೆಯೊಡನೆ ಭಿಕ್ಷುಕರಿಗೆ [illegible] ಇದರಿಂದ [illegible] ಊರವರು ಮುಷ್ಟಿಫಂಡ ಎತ್ತುವಳಿ ಮಾಡುತ್ತಾರೆ. ಆದರೆ ಮುಖ್ಯ ಉತ್ಪನ್ನ ಪರಊರವರದು. ಪ್ರಚಾರಕರು ಊರೂರಿಗೆ ಹೋಗಿ ಧರ್ಮಾತ್ಮರ ಕಡೆಯಿಂದ ವಂತಿಗೆ ಕೂಡಿಸುತ್ತಾರೆ. ವರ್ಷಕ್ಕೆ ರೂಪಾಯಿ ೬೦೦-೯೦೦ ಕೂಡುತ್ತದೆ. ಆರ್ಬಾಸನ ಖರ್ಚು ಪೂರೈಸಿ ಈಗ ರೂ. ೫೦೦೦ ಗಳ ನಿಧಿ ಇದೆ. ಇಷ್ಟರ ಮೇಲೆಯೇ ಗೋಶಾಲೆಯ ವ್ಯವಹಾರ ನಡೆದಿದೆ. ಈ ಕೀರ್ತಿಯ ಸ್ವಾಗತಾಧ್ಯಕ್ಷರಾದ ಶ್ರೀ| ದತ್ತಾತ್ರಯ [illegible] ದೇಶಪಾಂಡೆಯವರು ತಮ್ಮ ತಂದೆಯವರ ಸ್ಮರಣಾರ್ಥ ೫-೬ ಸಾವಿರ ರೂಪಾಯಿ ಖರ್ಚು ಮಾಡಿ ಪ್ರಶಸ್ತವಾಗಿ ಗೋಶಾಲೆಯನ್ನು ಕಟ್ಟಿಸಿಕೊಟ್ಟಿದ್ದಾರೆ. ಶ್ರೀ| ಕೃಷ್ಣರಾವ ದೇಶಪಾಂಡೆ ಇವರ ಅಪೇಕ್ಷೆ ಮೇರೆಗೆ ಮುಂದಿನ ಕಟ್ಟಲು ಸ್ಥಳ ಅನುಕೂಲವಾಯಿತು. ಶ್ರೀ| ನಾರಾಯಣ ಭೀಮಾಜಿ ಪೇಟಕರ ಮತ್ತು ಶ್ರೀ| ವಾಂಗೀಕರ ಕೃಷ್ಣ ಧೋಂಡೋ [illegible] ಗಾಂಧಿ ತೊಂಡೆಯವರ [illegible] ಆರ್ಬಾಸನ ಅನುಕೂಲವಾಗಿ [illegible] ಇವರ ಅಪೇಕ್ಷೆಯಂತೆ ದನಗಳಿಗೆ ಮೇವು ಹಾಕುತ್ತಿದೆ. ಈ ಸಂಸ್ಥೆಯವರು ಈ ತನಕ ೧೦೦-೧೫೦ ಗೋವುಗಳನ್ನು ರಕ್ಷಿಸಿದ್ದಾರೆ. ಮತ್ತು ತಮ್ಮ ವಶದಲ್ಲಿಯ ಆಕಳು, ಎಮ್ಮೆ, ಹೋರಿಗಳನ್ನು ಬೇಸಾಯಗಾರರಿಗೆ ಕೊಟ್ಟಿರುತ್ತಾರೆ. ಈಗ ಗೋಶಾಲೆಯಲ್ಲಿ ೫೦ ದನಗಳಿವೆ. ಅವುಗಳಲ್ಲಿ ೧೫ ಬೇಸಾಯಗಾರರ ಕಡೆ. ೨೫ ಸಂಸ್ಥೆಯ ಕಡೆಗೆ ಇವೆ. ಒಳ್ಳೇ ಹಾಲು ಹಿಂಡುವ ಆಕಳುಗಳನ್ನು ಆರಿಸಿ ಅವುಗಳ ಸಂತಾನ ಮಾಡಲಿಕ್ಕೂ, ದೃಢಕಾಯದ ಎತ್ತುಗಳನ್ನು ತಯಾರಿಸಲಿಕ್ಕೂ ಈ ವರ್ಷದಿಂದ ಪ್ರಾರಂಭ ಮಾಡಿರುತ್ತೇವೆ. ಸಿಂಧ, ಮೈಸೂರ ಪ್ರಾಂತಗಳಲ್ಲಿ ಒಳ್ಳೇ ದನಗಳಿವೆ. ಅವನ್ನು ತರಿಸಬೇಕೆಂಬ ಮನಸ್ಸಿತ್ತು. ಆದರೆ ಅವು ಇಲ್ಲಿಯ ಹವಾಮಾನಕ್ಕೆ ಒಗ್ಗುವದಿಲ್ಲ. ಶೀಘ್ರವೇ ಮರಣ ಹೊಂದುತ್ತವೆ. ಆದ್ದರಿಂದ ಇದೇ ಪ್ರದೇಶದಲ್ಲಿ ಬೆಳೆಯುವ ದನಗಳ ಶೋಧ ಮಾಡಿ ಅವನ್ನು ಸಾಕುವ ಯೋಜನೆ ಮಾಡಿದ್ದೇವೆ. ೩ ಆಕಳುಗಳನ್ನು ಖರೀದಿ ಮಾಡಿ ತಂದಿದ್ದೇವೆ. ನಮ್ಮ ಪ್ರದೇಶದೊಳಗೆ ಯಾವ್ಯಾವ ನಮೂನೆಯ ದನಗಳಾಗುತ್ತವೆಂದು ತಿಳಿದುಕೊಳ್ಳುವ ದೆಸೆಯಿಂದಲೇ ಈ ಪ್ರದರ್ಶನ ಏರ್ಪಟ್ಟಿದೆ. ಜಂಗಲ ಖಾತೆಯವರು ಗೌಳಿಗರಿಗೂ, ಬೇಸಾಯಗಾರರಿಗೂ ಉಪದ್ರವ ಕೊಡದಿದ್ದರೆ ಗೋಶಾಲೆಯ ಗೊಡವೆಯೇ ನಮಗೆ ಬೇಡಾಗಿತ್ತು. ೩೦-೩೫ ವರ್ಷಗಳ ಪೂರ್ವದಲ್ಲಿ ಇಲ್ಲಿ ಗೌಳಿಗರ ತಾಂಡಗಳಿದ್ದವು. ಅವರ ಕಡೆ ನೂರಾರು ದನಗಳಿದ್ದವು. ಅದರಿಂದ ನಮಗೆ ಬೇಕಷ್ಟು ಹಾಲು, ಬೆಣ್ಣೆ ಸಿಗುತ್ತಿತ್ತಲ್ಲದೇ ಪೇಟೆಗಳಿಗೆ ನೂರಾರು ರೂಪಾಯಿಗಳ ಬೆಣ್ಣೆ ರವಾನೆಯಾಗುತ್ತಿತ್ತು. ಹೊಲಗಳಿಕ್ಕೆ ಅವಶ್ಯವಿದ್ದ ಎತ್ತುಗಳು ದೊರಕುತ್ತಿದ್ದವು. ಅವರಿಗೆ ಬೆಟ್ಟದಲ್ಲಿಯೂ ಪ್ರತಿಬಂಧವಿದ್ದದ್ದರಿಂದ ಅವರು ಗೋಮಾಂತಕ, ಮೈಸೂರ ಕಡೆ ದೇಶಾಂತರ ಮಾಡಿದರು. ದನಗಳಿಗೆ ತುಂಬ ಮೇವು ಸಿಗುತ್ತಿತ್ತು. ಅದರಿಂದ ಪ್ರತಿ ಒಕ್ಕಲಿನಲ್ಲಿಯೂ ಗೋಸಂಪತ್ತು ವಿಫುಲವಾಗಿತ್ತು. ಹೊಲಗಳಿಗೆ ಅವಶ್ಯವಿದ್ದಷ್ಟು ಗೊಬ್ಬರ ಬೇಕಷ್ಟು ಸಿಗುತ್ತಿತ್ತು. ಇದರಿಂದ ಒಕ್ಕಲಿಗರು ಸಮೃದ್ಧರಾಗಿದ್ದರು. ಜಂಗಲ ಖಾತೆಯ ಉಪದ್ರವದಿಂದ ದನಗಳಿಗೆ ಮೇಯಲು ಸ್ಥಳವಿಲ್ಲ; ಆದರಿಂದ ಗೋವುಗಳ ಸಂಖ್ಯೆಯೂ, ಬಲವೂ, ಕ್ರಮವಾಗಿ ಕುಗ್ಗಿತು. ಸರಕಾರವು ಈ ಸಂಕಷ್ಟವನ್ನು ದೂರಮಾಡುವದು ಅವಶ್ಯವಿದೆ. ಈ ವರ್ಷ ನನ್ನ ಅನುಭವವನ್ನೇ ಹೇಳುತ್ತೇನೆ. ಗೋವಂಶವನ್ನು ಸುಧಾರಿಸುವದಕ್ಕಾಗಿ ಹೊಸ ಜಾತಿಯ ದನಗಳನ್ನು ತರಿಸಿ ಒಕ್ಕಲಿಗರಿಗೆ ಒಯ್ಯಲು ಹೇಳಿದೆವು. ಒಕ್ಕಲಿಗರು ಒಯ್ಯಲು ಒಪ್ಪಲಿಲ್ಲ. ಮೇಯಲಿಕ್ಕೆ ಸ್ಥಳವಿಲ್ಲೆಂದರು. ಕೆಲವರೆ ನಾವು ದನಗಳನ್ನು ಕಟ್ಟಿ ನೋಡಿದೆವು. ೩-೪ ದನಗಳಿಗೆ ಮಿಕ್ಕಿ ದನ ಇಟ್ಟಲ್ಲಿ ದನಗಳಿಗೆ ಹೊಟ್ಟೆ ತುಂಬ ಮೇವು ಸಿಗದೆ ಉಪವಾಸ ಸಾಯಬೇಕಾಗುತ್ತದೆ. ಇಂಥ ನಿರ್ಬಂಧಗಳಿಂದ ಗೋವುಗಳ ವೃದ್ಧಿಯಾಗುವದಿಲ್ಲ. ಒಂದು ಹೋರಿ ತಂದು ಅದರ ಮಹಾದೇಶಿ ಒಳ್ಳೇ ಜಾತಿಯ ದನಗಳನ್ನು ತಯಾರಿಸಬೇಕೆಂಬ ಸಂಕಲ್ಪವಿದೆ. ಇದರ ಖರ್ಚನ್ನು ಸರಕಾರವೇ ಪೂರೈಸಬೇಕಾಗಿ ನಮ್ಮ ವಿನಂತಿ. ಗೋಶಾಲೆಯ ದನಗಳಿಗೆ ಈಗ ಮೇವು ಸಿಗುವ ಸ್ಥಳ ೫-೬ ಮೈಲು ದೂರ ಇದೆ. ದನಗಳಿಗೆ ದಿನಾ ೧೦-೧೨ ಮೈಲು ಪ್ರಯಾಣ ಮಾಡಬೇಕಾಗುತ್ತದೆ. ಇದರಿಂದ ದನಗಳು ಪುಷ್ಟವಾಗಿಲ್ಲ. ಇಲ್ಲಿಂದ ೧ ಮೈಲು ಅಂತರದ ಕೇರವಾಡ ಗ್ರಾಮದಲ್ಲಿ ಮೇಯಲು ಅನುಕೂಲತೆಯುಳ್ಳ ಸ್ಥಳವಿದೆ. ಆದೀಗ ಜಂಗಲ ಖಾತೆಯ ಸ್ವಾಧೀನದಲ್ಲಿದೆ. ಅದನ್ನು ಗೋಶಾಲೆಯವರಿಗೆ ಒಪ್ಪಿಸಬೇಕು. ಇತ್ಯಾದಿ.

ರಾ| ಶಾಂತಾರಾಮ [illegible] ಹುಲ್ಲಮಾನಕರರವರು ಮಾಡಿದ ಭಾಷಣದ ಸಾರಾಂಶ:—

ನೀವೆಲ್ಲರೂ ನನ್ನ ನಿಮಂತ್ರಣೆಯನ್ನು ಮನ್ನಿಸಿ ಈ ಸಮಾರಂಭಕ್ಕೆ ಆಗಮಿಸಿದ ಬಗ್ಗೆ ನಾನು ನಿಮಗೆಲ್ಲರಿಗೆ ಆಭಾರಿ ಇದ್ದೇನೆ. ಇಂಥ ಸಮಾರಂಭ ನಮ್ಮಲ್ಲಿ ನಡೆದದ್ದು ಇದೇ ಮೊದಲು. ಆದ್ದರಿಂದ ಆದ ನ್ಯೂನತೆಗಳನ್ನು ಉಪೇಕ್ಷಿಸಿ ನಮ್ಮೆಲ್ಲರಿಗೆ ಸಹಕಾರ ಮಾಡಬೇಕಾಗಿ ಬಿನ್ನೈಸಿಕೊಳ್ಳುತ್ತೇನೆ. ಪ್ರಜೆಯು ಗೋವರ್ಧನ ಸಂಸ್ಥೆಯವರಿಗೆ ಇಂಥ ಕಾರ್ಯದ ಅನುಭವ ಕಡಿಮೆ. ಅವರು ಈ ಕಾರ್ಯದಲ್ಲಿ ನೆರವಾಗುವರೆಂಬ ಅಪೇಕ್ಷೆ ಇತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಇಲ್ಲಿಯ ಮ್ಯುನಿಸಿಪಾಲಿಟಿ, ತಾಲೂಕಾ ಬೋರ್ಡ, ತಾಲೂಕ ಡೆವಲಪ್‌ಮೆಂಟ ಎಸೋಸಿಯೇಶನ್, ವೆಟರ್ನರಿ ಡಿಸ್ಪೆನ್ಸರಿ ಇವೇ ಮೊದಲಾದ ಸ್ಥಾನಿಕ ಸಂಸ್ಥೆಗಳು ತನು-ಮನ-ಧನದಿಂದ ಸಹಾಯ ಮಾಡಿವೆ. ಕಾರವಾರ ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷ-ಉಪಾಧ್ಯಕ್ಷರವರೂ, ಬೇಸಾಯ ಖಾತೆ ಇನ್ಸಪೆಕ್ಟರರವರೂ ತಮ್ಮ ಸಾಧನ-ಸಾಮಗ್ರಿಯೊಡನೆ ಬಂದಿದ್ದಾರೆ. ಮೆ|| ಕಲೆಕ್ಟರ ಸಾಹೇಬರು ರೂಪಾಯಿ ೧೦೦-೦-೦ಗಳನ್ನು ಅರ್ಪಿಸಿದ್ದಾರೆ. ಖಾದಿ ಪ್ರಚಾರದ ದೆಸೆಯಿಂದ ಶ್ರೀ| ಕೌಜಲಗಿ ಹನುಮಂತರಾಯರು ಬಂದು ಖಾದಿ ಅಂಗಡಿಯನ್ನು ತೆರೆಸಿದ್ದಾರೆ. ಇವರೆಲ್ಲರ ಉಪಕಾರ ಮನ್ನಿಸುತ್ತೇನೆ. ಮೆ|| ಕಲೆಕ್ಟರ ಸಾಹೇಬರವರು ಈ ಪ್ರದರ್ಶನದ ಉದ್ಘಾಟನದ ಸಮಾರಂಭವನ್ನು ನೆರವೇರಿಸಲು ಒಪ್ಪಿಕೊಂಡ ಬಗ್ಗೆ ನಾನು ಅವರಿಗೆ ಸ್ವಾಗತ ಸಮಿತಿಯ ಪರವಾಗಿ ಆಭಾರ ಮನ್ನಿಸಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಉದ್ಘಾಟನ ಸಮಾರಂಭವನ್ನು ನೆರವೇರಿಸಬೇಕಾಗಿ ಬಿನ್ನೈಸಿಕೊಳ್ಳುತ್ತೇನೆ.

ಸಮಾರಂಭದ ಅಧ್ಯಕ್ಷರಾದ ಮೆ|| ಕಲೆಕ್ಟರ ಮಿ|| ಎಮ್. ಜಿ. ದೀಕ್ಷಿತರವರು ಮಾಡಿದ ಭಾಷಣದ ಸಾರಾಂಶ:- ಮೊಟ್ಟಮೊದಲು ಗೋಶಾಲೆಯ ಕಾರ್ಯಕರ್ತರ, ಸ್ವಾಗತ ಸಮಿತಿಯವರ ಆಭಾರ ಮನ್ನಿಸಿ ನುಡಿದದ್ದೇನಂದರೆ:-

ಹಿಂದೊಮ್ಮೆ ನಾನು ಇಲ್ಲಿ ಬಂದಿದ್ದೆ. ಈಗ ಅದೇ ಸ್ಥಳ ಎಷ್ಟೊಂದು ಅಭ್ಯಂತರ ಕಾಣುತ್ತದೆ! ಈ ನಮ್ಮ ಕಾನಡಾ

ಹಳ್ಳಿ ಅತ್ಯಂತ ಹಿಂದಾದ ಪ್ರದೇಶ. ಇಂಥ ಶಿವರಾರಂಭ ಜರಗುವದು ಅಪರೂಪ. ಅದಕ್ಕೆ ಸಹಾಯ ಮಾಡುವದು ಅತ್ಯಗತ್ಯ. ಪ್ರದರ್ಶನದ ವಾರ್ತೆ ಕೇಳಿ ನನಗೆ ಸಂತೋಷವಾಯಿತು. ಇಂಥ ಪ್ರದರ್ಶನಗಳಿಂದ ಸುತ್ತುಮುತ್ತಲಿನ ಜನರು, ಒಕ್ಕಲಿಗರು, ಧನಿಕರುಗಳು ಒಟ್ಟಿಗೆ ಸೇರಿ ಪರಸ್ಪರ ಜ್ಞಾನವಾಗಿ ಲಾಭವಾಗುತ್ತದೆ. ಗೋಶಾಲೆಯ ವೃತ್ತಾಂತ ಕೇಳಿ ಸಂತೋಷವಾಯಿತು. ಹಿರೇ ಘಟ್ಟ ದೂರದೃಷ್ಟಿಯಿಂದ ಈ ಕೆಲಸ ನಡೆಸುವದಕ್ಕೋಸ್ಕರ ಕಾಲ ಮಾನಕ್ಕನುಸರಿಸಿ ಕಾರ್ಯಗಳಲ್ಲಿಯೂ ತೊಡಗಲು ಬೇಕು. ಮುದಿ ದನಗಳಿಗಿಂತ ಮೊದಲು ದನಗಳಿಗೆ ಸರಿ ಗೋವೃದ್ಧಿ ಮಾಡಬೇಕು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗೋರಕ್ಷಣೆ ಹಲವು ಬೇರೆ ರೀತಿಯಿಂದ ನಡೆದಿದೆ. ಅವರು ದನಗಳನ್ನು ಎಂದೂ ಕೊಲ್ಲುವದಿಲ್ಲ. ಎತ್ತುಗಳನ್ನು ಕೊಂಡು ತಿನ್ನುತ್ತಾರೆ. ಕಾಲಮಾನಕ್ಕನುಸಾರವಾಗಿ ನಡೆಸುವಗಳಲ್ಲಿ ತಿದ್ದುಪಾಟು ಮಾಡಿದ್ದರಿಂದ ಎಷ್ಟೋ ಲಾಭಗಳಾಗಿವೆ. ನಮ್ಮಲ್ಲಿ ಧರ್ಮಾತ್ಮರು ಪಿಂಜರಪೋಲ ಸಂಸ್ಥೆಗಳನ್ನೇರ್ಪಡಿಸಿದ್ದಾರೆ. ಅವುಗಳಲ್ಲಿ ಕೆಲಸಕ್ಕೆ ಬಾರದ ದನಗಳು ತುಂಬಿಕೊಂಡಿರುತ್ತವೆ. ಮುದಿ ದನಗಳನ್ನು ಕೊಂದು-ತಿನಬೇಕೆಂದು ನನ್ನ ಅಂಬೋಣವಿಲ್ಲ. ಗೋಶಾಲೆಗಳು ಉತ್ತಮ ತಳಿಯ ದನಗಳನ್ನು ಸಾಕುವ ಸಂಸ್ಥೆಗಳಾಗಬೇಕೆಂದು ನನ್ನ ಅಂಬೋಣ. ದನದ ತಳಿಗಳನ್ನು ಸುಧಾರಿಸಲೋಸುಗ ದನಗಳ ಸರಕಾರಿ ತಜ್ಞರ ಸಹಾಯ ದೊರಕಿಸಲಿಕ್ಕೆ ಸಹ ಪ್ರಯತ್ನ ಮಾಡುವೆನು. ಜಂಗಲ ಖಾತೆಯಿಂದ ದೊರೆಯಬೇಕಾದ ಅನುಕೂಲತೆಗಳ ಕುರಿತು ಮಾಡಬೇಕಾದರೆ, ಪ್ರಾಂತ ಸಾಹೇಬರವರ ವಿದ್ಯಮಾನ ತಮ್ಮ ಕಡೆ ಅರ್ಜಿಗಳನ್ನು ಕಳಿಸಿಕೊಟ್ಟಲ್ಲಿ ಅವುಗಳ ವಿಚಾರವಾಗುವದು. ಗ್ರಾಮ ಸುಧಾರಣೆ ಬಗ್ಗೆ ಸರಕಾರದಿಂದ ಕೆಲವು ಹಣ ಸಿಕ್ಕಿದೆ. ಅದನ್ನು ಬೇಸಾಯ ಖಾತೆಯ ವಿದ್ಯಮಾನ ಖರ್ಚು ಮಾಡಬೇಕಾಗಿ ನಾನು ಅಭಿಪ್ರಾಯಪಟ್ಟಿದ್ದೇನೆ. ಈ ತಾಲೂಕಿಗೆ ಕೆರೆ, ಗೊಬ್ಬರಗಳನ್ನು ಪೂರೈಸುವದಕ್ಕಾಗಿ ನಾನು ಪ್ರಯತ್ನಿಸುವೆನು. ಇತ್ಯಾದಿ.

ಪ್ರದರ್ಶನದ ವೃತ್ತಾಂತ:- ಈ ಮೊದಲೇ ಗೊತ್ತಾದ ಮೇರೆಗೆ ಕಳೆದ ರವಿವಾರ ತಾರೀಖ ೫ನೇ ಮಧ್ಯಾಹ್ನ ೫ ಘಂಟೆಗೆ ಗೋಶಾಲೆಯ ವಿದ್ಯಮಾನ ನಡೆದ ಗೋ-ಕೃಷಿ ಪ್ರದರ್ಶನಗಳ ಉದ್ಘಾಟನ ಸಮಾರಂಭವು ಜಿಲ್ಲಾಧಿಕಾರಿ ರಾ| ರಾ| ಕ್ಲೇರವರ ಅಧ್ಯಕ್ಷತೆಯಲ್ಲಿ ಬಹಳ ಸಡಗರದಿಂದ ನೆರವೇರಿತು. ಸಮಾರಂಭಕ್ಕಾಗಿ ಹಾಕಿದ ಪೆಂಡಾಲವು ವಿಶಾಲವಾಗಿತ್ತು. ಅಲ್ಲಲ್ಲಿ ಸುಬೋಧ ವಚನಗಳನ್ನೂ, ಪಟಗಳನ್ನೂ, ಭೂಪಟಗಳನ್ನೂ ಹಚ್ಚಿ ಹೂಮಾಲೆಗಳಿಂದ ಮನೋಹರವಾಗಿ ಸಿಂಗರಿಸಿದ್ದರು. ಸೆಟ್ಟಿಕೊಪ್ಪಲು ರಾ| ಹುಸ್ನಾವಾಡಕರರು ಖುದ್ದ ಮಾಡಿ ಸಭಾಪತಿಗಳಾಗಲು ಬಿನ್ನೈಸಿಕೊಂಡರು. ಈ ದಕ್ಕೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಕ್ಷೇತ್ರದವರು ಅನುಮೋದಿಸಿದ ಬಳಿಕ ಮಿ| ಕಲೆಕ್ಟರರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಸ್ವಾಗತಾಧ್ಯಕ್ಷರಾದ ದತ್ತಾತ್ರಯ ವಾಮನರಾವ ದೇಶಪಾಂಡೆ ಪ್ರಸಂಗಕ್ಕನುಸಾರವಾಗಿ ಸಮಯಸ್ಫೂರ್ತಿ ಸ್ವಾಗತವನ್ನಿತ್ತು ಗೋಶಾಲೆಯ ವೃತ್ತಾಂತವನ್ನರುಹಲು ರಾ| ಶಂಕರ ಶಾಮರಾವ ವೀಣಾ ಮತ್ತು ವಸಂತ ಶಿವರಾಮ ಭಟ್ಟ ಅವರಿಗೆ ಅಪ್ಪಣೆ ಮಾಡಿದರು. ಅವರೀರ್ವರ ಭಾಷಣಗಳಾದ ಬಳಿಕ ಅಧ್ಯಕ್ಷರಿಗೂ, ಅಧ್ಯಕ್ಷರ ಪತ್ನಿಯವರಿಗೂ ಇತರ ಮಹಾನುಭಾವರಿಗೂ-ಪುಷ್ಪಹಾರವನ್ನರ್ಪಿಸಿದ ಬಳಿಕ ಮಿ| ಕಲೆಕ್ಟರರ ಭಾಷಣವಾಯಿತು. ಬಹಳ ಹೊತ್ತಾಗಿದ್ದರಿಂದ ಸಭಾಕಾರ್ಯವನ್ನು ಮಿ| ಕಲೆಕ್ಟರರು ಬೇಗ ಮುಗಿಸಿ ದನಗಳ ಪ್ರದರ್ಶನ ತೆರೆದು ನಿರೀಕ್ಷಣೆ ಮಾಡಿದರು. ಧಾರವಾಡ ಕೋಬಡರೀಸ ಇನ್‌ಸ್ಟಿಟ್ಯೂಟಿನ ರಾ| ಬಸಪ್ಪರವರು ಹಾಲು ಸುಧಾರಣೆ ಮಾಡುವ ಕ್ರಮವನ್ನು ಮ್ಯಾಜಿಕ್‌ಲ್ಯಾಂಟರ್ನಿನಿಂದ ತೋರಿಸಿ ವ್ಯಾಖ್ಯಾನ ಮಾಡಿದರು. ಇದರಿಂದ ಅನೇಕರಿಗೆ ಜ್ಞಾನ ಪ್ರಾಪ್ತವಾಯಿತು. [ರಾ| ಹಲ್ಲಾವಾಡಕರ, ವೀಣಾ, ಭಟ್ಟ ಮತ್ತು ಅಧ್ಯಕ್ಷರವರ ಭಾಷಣದ ಸಾರಾಂಶ ಇನ್ನೊಂದೆಡೆ ಕೊಟ್ಟಿದೆ.]

ಪ್ರದರ್ಶನಕ್ಕಾಗಿ ದನಗಳ ದವಾಖಾನೆಯ ಸುತ್ತುಮುತ್ತು ಚಪ್ಪರ ಹಾಕಿದ್ದರು. ರಾ| ಶಿವರಾಮ ಭಟ್ಟ ಅವರ ಮಾಡಿನ ತೋಟದಲ್ಲಿ ದನಗಳನ್ನು ಕಟ್ಟುವ ವ್ಯವಸ್ಥೆ ಮಾಡಿತ್ತು. ತೋಟದೊಳಗೆ ತಂಪು ಇತ್ತು. ಬಿಸಿಯಲ್ಲಿಯೂ ಕರೆ ಮತ್ತು ಹುಲ್ಲುಬೇಲಿಗಳಿದ್ದದರಿಂದ ಪಂಟಪದಿಂದ ಬಂದ ದನಗಳಿಗೆ ಒಳ್ಳೇ ವ್ಯವಸ್ಥೆಯಾಗಿತ್ತು. ಚಪ್ಪರದ ಒಳಹೊರಗೆ ಶಿಸ್ತಿನ ಆಟ ಆಡಲು ವ್ಯವಸ್ಥೆ ಇಟ್ಟಿತ್ತು. ದವಾಖಾನೆ ಕಟ್ಟಿ ಎಷ್ಟೋ ಕಾಲವಾದಾಗ್ಯೂ ಕಟ್ಟಲಿಕ್ಕೆ ತಂದ ಕಲ್ಲು, ಇಟ್ಟಿಗೆ, ಮಣ್ಣು ರಾಶಿ ಅಲ್ಲಲ್ಲಿಯೇ ಬಿದ್ದಿದ್ದವು. ಗಿಡ-ಗಂಟಿಗಳು ಸುತ್ತು-ಮುತ್ತು ಬೆಳೆದುಕೊಂಡಿದ್ದವು. ಅವನ್ನೆಲ್ಲ ಪ್ರದರ್ಶನ ಮಂಡಳದವರು ತೆಗೆದು ಸ್ವಚ್ಛಗೊಳಿಸಿ ಪ್ರದರ್ಶನದ ಏರ್ಪಾಟು ಮಾಡಿದ್ದರು. ಪ್ರದರ್ಶನದ ಏರ್ಪಾಟಿನಿಂದ ದವಾಖಾನೆಗೆ ಯಾವದೇ ಪ್ರಕಾರದಿಂದ ತೊಂದರೆಯಾಗಲಿಲ್ಲ. ಅವಾರಗಳಿಗೆ ಹಚ್ಚುವ ದನಿಯಿಂದ ಡಾಂಬರ, ಬಣ್ಣಗಳನ್ನು ರಾ| ಸಿಂಗಪ್ಪ ಕಲ್ಕೆರೆಯವರು ಔದಾರ್ಯದಿಂದ ಕೊಟ್ಟರು. ದವಾಖಾನೆ ಲೋಕಲ್ ಬೋರ್ಡಿನದು. ಗಿಡ-ಗಂಟಿ, ಕಸ-ಕಡ್ಡಿ, ಕಲ್ಲು-ಮಣ್ಣುಗಳನ್ನು ದವಾಖಾನೆ ಕಂಪೌಂಡಿನೊಳಗಿಂದ ತೆಗೆದು ಸ್ವಚ್ಛಗೊಳಿಸುವ ಕೆಲಸದಲ್ಲಿ ಬೋರ್ಡಿನವರು ಪ್ರದರ್ಶನ ಮಂಡಳದವರಿಗೆ ನೆರವಾಗುವದು ಒತ್ತಟ್ಟಿಗಿರಲಿ, ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ರಾ| ಗಂಗೊಳ್ಳಿ ಮಠರು ಪ್ರದರ್ಶನದ ವ್ಯವಸ್ಥೆಯನ್ನು ಬೇರೆಕಡೆ ಮಾಡಬೇಕಾಗಿ ಬಾಲಕರಿಗೆ ಹೇಳಿದರು. ಪ್ರದರ್ಶನಕ್ಕೆ ಯಾವದೇ ಪ್ರಕಾರ ಸಹಕಾರ ತೋರಿಸಲಿಲ್ಲ. ಮಿ| ಕಲೆಕ್ಟರರ ಸೂಚನೆಯ ಮೇರೆಗೆ ಧಾರವಾಡ ಪ್ರಾಂತ ಕೃಷಿ ಖಾತೆಯಿಂದ ಸಹಕಾರಿ ಸಂಘದವರು ತಮ್ಮಿಂದಾದಷ್ಟು ಸಹಾಯ ಮಾಡಿದರು. ಧಾರವಾಡದಿಂದ ಲಾಯ್ವಸ್ಟಾಕ್ ಇನ್ಸಪೆಕ್ಟರು ಬಂದಿದ್ದರು. ವೆಟರ್ನರಿ ಇನ್ಸಪೆಕ್ಟರ ರಾ| ಕುಲಕರ್ಣಿಯವರೂ, ಅಸಿಸ್ಟಂಟ ಕಮಿಶನರರಾದ ರಾ| ಕೌಂಡಿನ್ಯರವರೂ ಈ ಕಾರ್ಯಕ್ಕೆ ನೆರವಾಗಿದ್ದಾರೆ. ವೆಟರ್ನರಿ ಡಾಕ್ಟರರಾದ ರಾ| ವೀಣಾವರು ಪ್ರದರ್ಶನ ಮಂಡಳದವರಿಗೆ ಮಾಡಿದ ಸಹಾಯವನ್ನು ಪ್ರದರ್ಶನ ಮಂಡಳದವರು ಎಂದೂ ಮರೆಯಲಿಕ್ಕಿಲ್ಲ. ನಿತ್ಯ ದನಗಳ ಔಷಧೋಪಚಾರದ ಕೆಲಸಗಳನ್ನು ನಡಿಸಿ ಪ್ರದರ್ಶನದ ಕೆಲಸ ನಡೆಸಿದ್ದಾರೆ. ಪ್ರದರ್ಶನದ ಮುಂಚಿನ ದಿನ ಸಾಲೆಯೊಳಗಿನ ಒಂದು ಗ್ರಾಮದಲ್ಲಿ ದನಗಳಿಗೆ ಕಾಲುಬೇನೆ ಬಂದ ಸಂಗತಿ ತಿಳಿದೊಡನೆ ಅವರು ಸ್ವತಃ ಮೋಟಾರು ಮಾಡಿಕೊಂಡು ಅಲ್ಲಿ ಹೋಗಿ ಉಪಚಾರ ನಡಿಸಿ ಅದೇ ರಾತ್ರಿ ಇಲ್ಲಿ ಬಂದಿದ್ದಾರೆ. ಇಷ್ಟು ತತ್ಪರತೆಯಿಂದ ಅವರು ಪ್ರದರ್ಶನಕ್ಕೆ ನೆರವಾಗಿದ್ದಾರೆ. ಬೇಸಾಯ ಖಾತೆಯವರು ಮನಮುಟ್ಟಿ ಪ್ರದರ್ಶನ ಮಂಡಳದವರಿಗೆ ಸಹಾಯ ಮಾಡಲಿಲ್ಲ. ಅಳಿಯಂದಿರಂತೆ ಈ ಖಾತೆಯವರು ಕಣಿವಾರ ವಾಕ್ಯ ಒಂದು ಕಳಿಸಿದರು. ಇವರ ಸಾಮಾನಿನ ಪ್ರಯೋಜನ ಪ್ರದರ್ಶನದಲ್ಲಿ ಜನರಿಗೆ ತಿಳಿಸಲು ಬೇಕಾಗಿಯವರು ಇರಲಿಲ್ಲ. ಈ ಕುರಿತು ಮಂಡಳದವರು ಮಿ| ಕಲೆಕ್ಟರರ ಕಡೆಗೆ ದೂರಕೊಂಡರು. ಬೇಸಾಯ ಖಾತೆಯವರು ಹೀಗೆ ಅನಾದರ ತೋರಿಸುವದು ಯೋಗ್ಯವಲ್ಲ.

ಪರಸ್ಥಳದಿಂದ ಪ್ರದರ್ಶನಕ್ಕೆ ಬಂದ ಅಂಗಡಿಗಳಲ್ಲಿ ಕುಮಟೆಯ ರಾ| ಅನಂತ ಶೆಟ್ಟಿ ಗ ವಗಾರ ಇವರು ತಂದ ಗಂಧದ ಹಾಗೂ ಹಸ್ತಿದಂತದ ಕಲೆಯ ಸಾಮಾನು ಪ್ರೇಕ್ಷಣೀಯವಿತ್ತು. ಅಖಿಲ ಭಾರತೀಯ ಚರಖಾ ಸಂಘದ ಕರ್ನಾಟಕ ಶಾಖೆಯು ಖಾದಿಭಂಡಾರದಲ್ಲಿ ತರತರದ ಖಾದಿಯನ್ನು ಇಟ್ಟಿದ್ದಿತು. ಧಾರವಾಡದ ಕರ್ನಾಟಕ ಇಂಡಸ್ಟ್ರಿಯಲ್ ಮತ್ತು ಕೆಮಿಕಲ್ ವರ್ಕ್ಸದವರು ತಮ್ಮ ಸಾಮಾನುಗಳನ್ನಿಟ್ಟಿದ್ದರು. ಕೊಲ್ಹಾಪುರದ ಭಾಗದ ಕಂಪನಿಯ ಪ್ರತಿನಿಧಿಗಳಾದ ಕಾಳೇ ಪ್ರದರ್ಶನದಲ್ಲಿ ಸಾಮಾನುಗಳನ್ನು ಇಟ್ಟಿದ್ದರು. ತೀರ್ಥಹಳ್ಳಿಯ ಕನ್ನಡ ಶಾಲೆಯೊಳಗೆ ಬೇಸಾಯ ವರ್ಗವೊಂದಿದೆ. ಆ ವರ್ಗದ ಹುಡುಗರು ತಾವು ತಯಾರಿಸಿದ ಸಾಮಾನುಗಳನ್ನು ಪ್ರದರ್ಶಿಸಿದರು. ಒಂದು ಮಗ್ಗವನ್ನಿಟ್ಟು ಪ್ರತ್ಯಕ್ಷ ನೇಯುವ ಕೆಲಸವನ್ನು ಮಾಡಿತೋರಿಸುತ್ತಿದ್ದರು. ವಿದ್ಯಾರ್ಥಿಗಳ ಉತ್ಸಾಹವನ್ನೂ ಕಾರ್ಯವನ್ನು ನೋಡಿ ಪ್ರದರ್ಶನ ನೋಡಬಂದವರಿಗೆ ಬಹಳ ಸಂತೋಷವಾಯಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಶೇಷ ಬೀಳುವದಿಲ್ಲ. ಬೆಳೆ ಕೊಯ್ಲು ನಡೆದಿದೆ. ಗುಂಡಬಾಳಗಿನ ಕೋಮಾರಪಂತ ಜಾತಿಯವಳೊಬ್ಬಳಿಗೆ ಸರ್ಪ ಕಚ್ಚಿತ್ತು; ಇಲ್ಲಿಯ ಪ್ರಸಿದ್ಧ ಸಾಹುಕಾರ ಮನೆಯವರು ಉಪಚಾರ ಮಾಡಿ ಬದುಕಿಸಿದ್ದಾರೆ. ಈ ಮನೆಯವರು ಬಹುಕಾಲದಿಂದ ಸರ್ಪದಂಶದ ಮೇಲೆ ಔಷಧ ಕೊಡುತ್ತಾರೆ. ಗಿಡಮೂಲಿಕೆಯ ಉಪಚಾರ. ಪ್ರತಿಫಲ ಪಡೆಯುವದಿಲ್ಲ.

ಹೊನ್ನಾವರ— ಇಲ್ಲಿಯ ಮ್ಯುನಿಸಿಪಲ್ ೨ನೇ ವಾರ್ಡಿನ ಬೈ-ಇಲೆಕ್ಷನು ತಾ. ೧೬ನೇ. ೧ ಅಮೀರ ಮೀಯಾ ಮ| ಪಾಶಾ ಹಸನ, ೨ ಜೇಕಬ ಸೋಜಾ, ೩ ಶಿವಪ್ಪ ತಾಯಿ ನಾಗಿ, ೪ ಅನಂತ ವೆಂಕಟೇಶ ಕಾಮತ, ೫ ರಾಮಚಂದ್ರ ಅನಂತ ಶೆಟ್ಟಿ ದೇವಾಳಕರ; ಹೀಗೆ ೫ ಜನ ಉಮೇದ್ವಾರರು ನಿಂತಿದ್ದಾರೆ. ಅವರಲ್ಲಿ ೨-೩ನೇಯವರು ಅಸ್ಪೃಶ್ಯ ವರ್ಗದವರು. ೩ನೇಯವರು ಸತ್ಯಾಗ್ರಹದ ಸಮಯ ಪ್ರಭಾತ ಫೇರಿಯಲ್ಲಿ ಕಾರಾಗೃಹ ಸೇರಿದ್ದರು. ಅವರಿಗೆ ೬ ತಿಂಗಳ ಶಿಕ್ಷೆಯಾಗಿತ್ತು. ಅವರಿಗೇ ಓಟು ಕೊಡಬೇಕಾಗಿ ಹಲವರ ಮತ.

ಕಾರವಾರ— (ತಾ. ೯-೧೧-೩೩) ಇಲ್ಲಿಯ ಪ್ರಸಿದ್ಧ ವ್ಯಾಪಾರಿಗಳೂ, ದಲಾಲರೂ ಆದ ರಾ| ಶಂಕರ ಗೋವಿಂದ ಶಾನಭಾಗ ಇವರು ಕಟ್ಟಿಸಿದ ಹೊಸ ಮನೆಯ “ಲಕ್ಷ್ಮೀ ಮನೆ”ದ ಪ್ರವೇಶ ಸಮಾರಂಭ ನಿನ್ನೆ ಶುಕ್ರವಾರ ಬೆಳಿಗ್ಗೆ ಸಡಗರದಿಂದ ನೆರವೇರಿತು. ಊರೊಳಗಿನ ಬಹುಜನರು ಚಿತ್ತೈಸಿದ್ದರು.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents:-
D. K. Nayak Esq.
D S. Pai
K. N. Nayak.
Honavar Agent:-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು!

[೩ನೇ ಪಾನಿನಿಂದ ಮುಂದರಿಸಿದ್ದ]

ಯರ್ ಹೇಗೆ ವಿನಿಯೋಗವಾಗುತ್ತದೆಂದು ನೋಡಿದರೆ ಕರುಳು ಕರಗಿ ನೀರಾಗುತ್ತದೆ. ಹಿಂದೀ ಪವಾದದಿಂದ ಲೋಕವೇ ಮರುಗುತ್ತದೆ. ಮಹಾತ್ಮರು ದರಿದ್ರನಾರಾಯಣನ ಉದ್ಧಾರ ಮಾಡುವ ದಿವಸದಿಂದ ಹಗಲಿರುಳು ಕಷ್ಟಪಡುತ್ತಿದ್ದರೆ ಇಂಥ ಸಂದರ್ಭದಲ್ಲಿ ಸಂಸ್ಥಾನಿಕರು ಇತರ ಪ್ರಜೆಗಳಂತೆ ಎಷ್ಟು ವಸೂಲ ಮಾಡಿದ ಹಣವನ್ನು ಈ ಪ್ರಕಾರ ವಿನಿಯೋಗಿಸಿ ಧನ್ಯತೆ ಪಡೆಯುವದು ದೈವದುರ್ವಿಪಾಕವಲ್ಲವೇ?

***

ಕುಮಟಾ ತಾಲೂಕ ಲೋಕಲ್ ಬೋರ್ಡಿನ ವಿದ್ಯಮಾನ ಕಟ್ಟಿಸಿದ ಕೊಂಡಕಣಿ ಸಂಕದ ಪ್ರಕರಣದೊಳಗಿಂದ ಉದ್ಭವಿಸಿದ ವಂಚನೆಯ ವಿಷಯ ಅಂತ ಕೊನೆಗಂಡಿದೆ. ಇಲ್ಲಿಯ ಫೌಜದಾರರು ಸಬ್ ಓವ್ಹರಸೀಯರರಾದ ರಾ| ಅಯ್ಯರವರ ಮೇಲೆ ಮಾಡಿಕೊಟ್ಟ ಫಿರ್ಯಾದಿಯನ್ನು ಹಿಂತೆಗೆದುಕೊಂಡಿದ್ದಾರೆ. ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರು ಹಿಂತೆಗೆದುಕೊಳ್ಳಲು ಅಪ್ಪಣೆ ಕೊಟ್ಟಿದ್ದಾರೆ. ಈ ಪ್ರಕರಣವನ್ನು ಜಿಲ್ಲಾ ಬೋರ್ಡಿನ ಚೌಕಶಿ ಮಂಡಳದವರು ಈ ಬಗ್ಗೆ ಚೌಕಶಿಮಾಡಿ ವಂಚನೆಯಾಗಿಲ್ಲವೆಂದ ಅಭಿಪ್ರಾಯ ಕೊಟ್ಟಿರುವಾಗ ಇಲ್ಲಿಯ ಫೌಜದಾರರಾದ ರಾ| ರಾಯಜೂರರವರು ಸಬ್-ಓವರಸೀಯರರಾದ ರಾ| ಅಯ್ಯರವರಿಗೆ ದಸ್ತಗಿರಿ ಮಾಡಿಸಿದ್ದರ ಮೇಲಿಂದ ಬಿಟ್ಟಿಗೆ ದಕ್ಷಿಣ್ಯ ಸ್ಥಿರವಿರುವದರಿಂದ ಲೋಕಾಭಿಪ್ರಾಯವಾಗಿತ್ತು. ಮೆಜಿಸ್ಟ್ರೇಟರ ಕಡೆ ಆಡಿಗೆ ಬಿಟ್ಟ ಜಬಾನಿ ಸಹ ಫೌಜದಾರರು ಮಾಡಿಸಿದ್ದರು. ಸರಕಾರಿ ಲೆಕ್ಕ ತಪಾಸಕರು ಫೌಜದಾರರಿಗೆ ಲೆಕ್ಕದ ಮಾಹಿತಿ ಮಾಡಿಕೊಡಬಂದಿದ್ದರು. ವಂಚನೆಯ ಆರೋಪ ಹೊರಿಸಿದ ತಾಲೂಕ ಬೋರ್ಡಿನ ಸಭಾಸದರಾದ ರಾ| ಪುಂಡಲೀಕ ಶೇಷಗಿರಿ ಶ್ಯಾನಭೋಗರವರು ತಮ್ಮ ಅಂಬೋಣವನ್ನು ದಾಖಲೆಗಳ ಮೂಲಕ ಫೌಜದಾರರಿಗೆ ತಿಳಿಸಿ ಕೊಟ್ಟರು. ಯಾವತ್ತು ವಿಷಯಗಳನ್ನು ರಾ| ರಾಯಜೂರರವರು ಪರಾಂಬರಿಸಿ ಬಿಟ್ಟೆಯಾಗುವದಿಲ್ಲವಾಗಿ ಪ್ರಾಮಾಣಿಕತನದಿಂದ ಮನಗಂಡು ಬಿಟ್ಟಿಯನ್ನು ಹಿಂತೆಗೆದುಕೊಂಡಿದ್ದಾರೆಂದು ಈಗ ಹೇಳಲಿಕ್ಕೆ ಏನೂ ತೊಂದರೆ ಇಲ್ಲ. ಆದರೆ ಪ್ರಕರಣವನ್ನು ಸಂಪೂರ್ಣವಾಗಿ ಆಲೋಚಿಸದೆ ರಾ| ಅಯ್ಯರರವರಿಗೆ ಒಮ್ಮೆಲೇ ಸರೆಹಿಡಿದದ್ದು ತೀರ ಅನ್ಯಾಯದ್ದು. ರಾ| ಅಯ್ಯರರವರು ದಸ್ತಗಿರಿಯಾದಂದಿನಿಂದ ಬಿಡುಗಡೆ ಹೊಂದುವ ಮೇಲೆ ಇಲ್ಲ. ಅವರ ನಷ್ಟಕ್ಕೆ ಮಾನಹಾನಿಗೆ [illegible] ರಾರು? ಅವರ ಸಂಬಂಧವನ್ನು ಬೋರ್ಡಿನವರು ಪ್ರತ್ಯಕ್ಷವಾಗಿ ತೆರೆದಿಟ್ಟರು [illegible] ಫೌಜದಾರ [illegible] ವ ಡಪೆ ಒ [illegible] ಮುಂದಿದ್ದು [illegible] ಅವರ ಮನದ [illegible] ಪ್ರತಿ [illegible] ಅಯ್ಯರವರ [illegible] ಬೋರ್ಡಿನ [illegible] ಅವರು [illegible] ಓಡಿಹೋಗ [illegible] ವಂಥವರಲ್ಲ [illegible] ಅವರಿಗೆ ಸೆರೆಯಿಂದ ಬಿಡಿಸಿದ ಬಗ್ಗೆ [illegible] ತಕ್ಕ [illegible] ಫೌಜದಾರರ ಕಡೆಯಿಂದ [illegible] ಪುನಃ ಕೆಲಸದ ಮೇಲೆ [illegible] ದರಿಗಿನ ಸಂಬಳವನ್ನು ಪರತುಂಬಿಕೊಡದಿದ್ದರೆ ನ್ಯಾಯವಾಗುವಂತಿದೆ. ಸಭ್ಯ ಜನರಿಗೆ ದಣಿಸುವದು [illegible] ವೆಂದು ಪೋಲೀಸ ಅಧಿಕಾರಿಗಳು [illegible] ಆಸಿಸಬೇಕೆಂದು [illegible] ಉದ್ದೇಶ.

***

ಇದಲ್ಲದೆ ವಂಚನೆಯ ಆರೋಪ ಹೊರಿಸಿ [illegible] ಮಾಹಿತಿ ಕೊಟ್ಟ [illegible] ನ ಸಭಾಸದ ತಾಲೂಕ ಬೋರ್ಡಿನ ಕ್ರಮದಂತೆ ಇಜಾರು ನಡೆಯುವ [illegible] ಬೋರ್ಡಿನ ಅಧಿಕಾರಿ [illegible] ವರು [illegible] ಕೆಲಸವಲ್ಲವೆಂದು ಸಭಾಸದರಿಗೆ ತಿಳಿಯು [illegible] ಪರವಾಗಿ ವಂಚನೆಯ ಆರೋಪ ಮಾಡ್ದು [illegible] ರಾ| ಅಯ್ಯರರವರು ಸಾವಿರಾರು ರೂಪಾಯಿಗಳ ಕೆಲಸವನ್ನು ಪ್ರಾಮಾಣಿಕತನದಿಂದಲೂ ಮಿತವ್ಯಯದಿಂದಲೂ ನಡೆಸಿ [illegible] ತಾಲೂಕ ಬೋರ್ಡಿನ ಅಭಿಪ್ರಾಯವಾಗಿದೆ. ಜಿಲ್ಲಾ ಬೋರ್ಡಿನವರು ಚೌಕಶಿ ಮಾಡಿ ಆ ಅಭಿಪ್ರಾಯವನ್ನು ಎತ್ತಿ ಹಿಡಿದಿದ್ದಾರೆ. [illegible] ಸಮಾಜಸೇವೆ ಹೊಂದಿದ ವಂಚನೆಯ ಆರೋಪವನ್ನು ದೃಢಪಡಿಸಲು ಪ್ರಯತ್ನಿಸಿದ್ದ ಅಕ್ಷಮ್ಯವಾದದ್ದು. ಬೋರ್ಡಿನ ನೌಕರರ ಈ ಪ್ರಕಾರ ದಣಿಸುವ ಸಾಮಾನ್ಯ ಸಭಾಸದರಿಗೆ ಇಂಬುಗೊಟ್ಟರೆ ಬೋರ್ಡಿನ ಕೆಲಸವನ್ನು ಪ್ರಾಮಾಣಿಕತನದಿಂದ ನಿರ್ಭಯತೆಯಿಂದ ನಡಿಸುವದೇ ಉಳಿಯಲಿಕ್ಕಿಲ್ಲ. ಬೋರ್ಡಿನ ನೌಕರರ ಹಿತ ಕಾಪಾಡುವದಕ್ಕಾಗಿ ಫೌಜದಾರರು ರಾ| ಪುಂಡಲೀಕ ಶ್ಯಾನಭೋಗರ ಮೇಲೆ ಸುಳ್ಳು ಆರೋಪ ಹೊರಿಸಿದ ಬಗ್ಗೆ ಕಾಯಿದೆ ಕ್ರಮ ನಡಿಸಿದಲ್ಲಿ ಬಹುಮಟ್ಟಿಗೆ ರಾ| ಅಯ್ಯರರವರಿಗೆ ಸರೆಹಿಡಿದ ಪರಿಹಾರವಾಗುವಂತಿದೆ.

***

ರಾ| ಅಯ್ಯರರವರಿಗೂ ಒಂದು ಸೂಚನೆ ಮಾಡಬೇಕೆಂದೆನಿಸುತ್ತದ. ರಾ| ಅಯ್ಯರರವರ ಮೇಲೆ ಬಿಟ್ಟಿ ನಡೆದಲ್ಲಿ ಕೊಂಡಕಣಿ ಸಂಕದ ಕಟ್ಟೋಣದ ಕೆಲಸದ ಲ್ಲಿ ಅವರು ನಡಿಸಿದ ಪ್ರಾಮಾಣಿಕತನವಲ್ಲ ನ್ಯಾಯಾಲಯಕ್ಕೆ ಮನವರಿಕೆಯಾಗಿ ಅವರ ಪ್ರತಿಷ್ಠೆ [illegible] ಖಂಡಿತವಾಗಿ ಉಳಿಯುತ್ತಿತ್ತು. ವಂಚನೆಯ ಆರೋಪದೊಳಗಿಂದ ಅವರು ರೀತಿಯಂತೆ ಬಿಡುಗಡೆ ಹೊಂದುತ್ತಿದ್ದರೆ. ಅಂಥ ಪ್ರಸಂಗ ಕೈತಪ್ಪಿ ಹೋಗಿದೆ. ನಿರಾಧಾರವಾಗಿ ವಂಚನೆಯ ಆರೋಪ ಹೊರಿಸಿದ ಬಗ್ಗೆ ಅವರು [illegible] ಕ್ರಮ ಕೈಕೊಂಡು ತಮ್ಮ ಪ್ರತಿಷ್ಠೆಯನ್ನು [illegible] ಕೊಳ್ಳಬಹುದು. ಇದು ಬೋರ್ಡಿನ ನೌಕರ ಸಮಾಜದ ಹಿತದ ವಿಷಯವಾದ್ದರಿಂದ ಈ ಸೂಚನೆ ಮಾಡಬೇಕಾಗಿದೆ.

***

ಕುಂದಾಪುರದ ಮಾನ್ಯ ಪ್ರಮುಖರಾದ ರಾ| ಮಹಾಬಲೇಶ್ವರ ವಿಶ್ವೇಶ್ವರಯ್ಯ ನಾಡಕರ್ಣಿ ಯವರು ಕಳೆದ ಸೋಮವಾರ ಕಫಜ್ವರದಿಂದ ಕೈಲಾಸವಾಸಿಗಳಾದರೆಂದು ತಿಳಿಸಲು ತೀರ ವ್ಯಸನವಾಗುತ್ತದೆ. ಮರಣ ಸಮಯ ಇವರ ಪ್ರಾಯ ಒರ್ಲೆ ೩೫ ವರ್ಷ. ಇಷ್ಟು ಅಲ್ಪ ವಯಸ್ಸಿನಲ್ಲಿ ತೀರಿಕೊಂಡದ್ದು ಬಹು ಶೋಚನೀಯ! ಮುಂಜನಿಂದಲೇ ಇವರು ಅಶಕ್ತ ಪ್ರಕೃತಿಯವರು. ಅದರಿಂದ ಕೊಲೇಜಿನ ಅಭ್ಯಾಸವನ್ನು ಅರ್ಧಕ್ಕೆ ತ್ಯಜಿಸಿ ಊರವರಕ್ಕೆ ಬಂದು ತಮ್ಮ ಆಸ್ತಿಯ ಆಡಳಿತೆ ನಡಿಸಿದರು. ೧೯೩೦ನೇ ಇಸ್ವಿಯ ಅಸಹಕಾರ ಯುಗದಲ್ಲಿ ತಾಲೂಕಾ ಕೊಂಗ್ರೆಸ ಕಮಿಟಿಯ ಮಾರ್ಗದರ್ಶಕರಾಗಿ ಇವರು ಮಾಡಿದ ಜನಸೇವೆ ಕುಂದಾಪುರದವರು ಮರೆಯುವದಿಲ್ಲ. ಮರೆಯಲಾರರು. ೧೯೩೩ನೇ ಇಸ್ವಿಯಲ್ಲಿ ಹೈಕೋರ್ಟ ವಕೀಲಿ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿ ಅಂದಿನಿಂದ ಇವರು ಇಲ್ಲಿ ವಕೀಲಿ ನಡಿಸುವರು. ಶಾಂತ, ಸರಳ ಸ್ವಭಾವವುಳ್ಳವರಿದ್ದುದರಿಂದ ಇವರ ಪಕ್ಷಕಾರರ ವರ್ಗ ಬೆಳೆದು ಅಲ್ಪಕಾಲದಲ್ಲಿಯೇ ಪ್ರಮುಖ ವಕೀಲರಲ್ಲಿ ಗಣಿಸಲ್ಪಟ್ಟರು. ಸ್ಥಳಿಕ ಮ್ಯುನಿಸಿಪಾಲಿಟಿಯ ಸಭಾಸದರೂ, ಕುಂದಾಪುರ [illegible] ಬೇಂಕಿನ ಡಿರೆಕ್ಟರ್ ಮತ್ತು [illegible] ತಾಲೂಕ ಡೆವ್ಹಲಪಮೆಂಟ ಎಸೋಸಿಯೇಶನಿನ ವ್ಹಾಯಿಸ್ ಪ್ರೆಸಿಡೆಂಟರೂ ಆಗಿ ಇವರು

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ!!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಪರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ವರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯುಳ್ಳ ಇನ್‌ಕಮ್ಯುಲೇಟಿವ್ಹ ಮಾಹಿ ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತವೆಂಗಿ ಬೇಂಕಿನವರು ಹೇಳುತ್ತಾರೆ. ಖಾಯಿಷ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ— ಅಂಕೋಲಾ.

ಒಳ್ಳೆ ಸಾರ್ವಜನಿಕ ಸೇವೆ ನಡಿಸಿದ್ದಾರೆ. ಇವರು ಈಗಿನ ಜಿಲ್ಲಾ ಬೋರ್ಡಿನ ಸಭಾಸದರಾಗಿಯೂ ದುಡಿದಿದ್ದಾರೆ. ನೂತನವಾಗಿ ಸ್ಥಾಪನೆ ಹೊಂದಿದ ಭೂಪತ್ರ ಬೇಂಕಿನ ಡೈರೆಕ್ಟರರು ಆಗಿದ್ದರು. ಇಂಥ ರಾಷ್ಟ್ರೀಯ ಪ್ರವೃತ್ತಿಯ, ಸದಾಚಾರಕ್ಕೂ ಜನರಿಗೂ ಮಾನ್ಯರಾದ ಮಹನೀಯರು ತೀರಿಕೊಳ್ಳುವದು ನಿಜವಾಗಿಯೂ ದುರ್ದೈವ. ಅವರ ತಾಯಿಯವರ ಮೇಲಂತೂ ದೊಡ್ಡ ಆಪತ್ತು ಒದಗಿದೆ. ೩ ತಿಂಗಳ ಹಿಂದಿರುವಾಗ ಪತಿಗಳು ತೀರಿಕೊಂಡಿದ್ದರು. ಅಂದಿನಿಂದ ಮಗನನ್ನು ಜೋಪಾನ ಮಾಡಿ ಆತನ ಅಭಿವೃದ್ಧಿಯನ್ನು ನೋಡಿ ವೈಧವ್ಯ ದುಃಖ ಮರೆತ ಅವರ ಮಾತೋಶ್ರೀಯವರಿಗೆ ಯಾರು ಹೇಗೆ ಸಮಾಧಾನ ಮಾಡಬಲ್ಲರು! ಮರಣ ಸ್ಮರಣಾರ್ಥ ಶನಿವಾರದ ಪೇಟೆ, ಅರ್ಬನ್ ಬೇಂಕ ಮುಚ್ಚಲ್ಪಟ್ಟದ್ದು. ವಕೀಲರು ಸಭೆ ಸೇರಿ ಸಹತಾಪವನ್ನು ವ್ಯಕ್ತಪಡಿಸಿದ್ದಾರೆ. ಇವರೆಲ್ಲರೂ ದುಃಖದಲ್ಲಿ ಪಾಲುಗಾರರಿದ್ದಾರೆಂದು, ಅವರ ತಾಯಿಯವರಿಗೂ, ಹೆಂಡರು-ಮಕ್ಕಳಿಗೂ, ಅಣ್ಣಂದಿರಾದ ರಾ| ಸುಬ್ರಾವ ನಾಡಕರ್ಣಿಯವರಿಗೂ ಸಮಾಧಾನ ಮಾಡಿಕೊಳ್ಳ ಬೇಕು. ಕಾಲಚಕ್ರಕ್ಕೆ ಉಪಾಯವಿಲ್ಲ. ಮೃತಾತ್ಮರಿಗೆ ಸದ್ಗತಿ ದೊರೆಯಲೆಂದು ಪ್ರಾರ್ಥನೆ

* * *

ಗೌಡಸಾರಸ್ವತ ಬ್ರಾಹ್ಮಣ ಸ್ಕೊಲರಶಿಪ್ ಲೀಗ ಮುಂಬಯಿ.

ಈ ಸಂಸ್ಥೆಯ ೧೯ನೇ ವಾರ್ಷಿಕ ಸಾಧಾರಣ ಸಭೆಯು ಗಿರಗಾಂವದೊಳಗಿನ ವಿಠ್ಠಲಭಾಯಿ ರೋಡ-ಫೋರ್ಬಸ್ ಗುಜರಾಥಿ ಸಭಾಗೃಹದಲ್ಲಿ ತಾ|| ೧೭-೧೧ ೩೫ನೇ ಮಧ್ಯಾಹ್ನ ೩|| ಘಂಟೆಗೆ ಸೇರುವದು. ಆ ಕಾಲದಲ್ಲಿ ತಾ ೩೧-೫ ೩೫ನೇಗ ಅಂತ್ಯವಾದ ವರ್ಷದ ಜಮಾ ಖರ್ಚಿನ ಮಂಜೂರಿ, ವ್ಯವಸ್ಥಾಪಕ ಮಂಡಳದ ಪ್ರಕಟಣೆ, ಸಂಸ್ಥೆಗೆ ದೀಪಾವಳಿ ಮೊದಲಾದ ವಿಶಿಷ್ಟಪ್ರಸಂಗಗಳಲ್ಲಿ ಸಿಗುವ ಕಾಣಿಕೆಯ ಪೂರ್ಣ ರಕಮನ್ನು ಕಾದಿಟ್ಟ ನಿಧಿಯಾಗಿಡದೆ ಅರ್ಧಾಂಶದ ರಕಮನ್ನು ಆಯಾ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ವೇತನ ಕೊಡಲು ವಿನಿಯೋಗಿಸುವದು.

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ

IIIನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು IIನೇ ಭಾಗ ಜನ್ಮಾದ್ಯೇಕಾದಶಾಧಿಕರಣಗಳು ಈಗಲೇ ತಯಾರಾಗಿವೆ ಪುಟಗಳು ೧೬೦ ಚಂ ರೂ ೧-೮-೦

Iನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೨೩೧ ಚಂದಾ ರೂ ೨ ೮-೦

IIನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೦೮ ಚಂದಾ ರೂ ೪ ೬ ೦ ಟಪಾಲು ಹಾಸಲು ಪ್ರತ್ಯೇಕ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಆನರರಿ ಟ್ರೆಝರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ
(ದಕ್ಷಿಣ ಕನ್ನಡ)

ಇವೇ ಮೊದಲಾದ ಕಾರ್ಯಕ್ರಮವಿದೆ. ಸಭಾಸದರೆಲ್ಲರೂ ಅಗತ್ಯವಾಗಿ ಬರಬೇಕಾಗಿಯೂ, ಸೂಚನೆ ಮಾಡುವದಿದ್ದಲ್ಲಿ ಅವನ್ನು ೧೪ನೇ ತಾರೀಖಿನೊಳಗೆ ತಿಳಿಸಬೇಕಾಗಿಯೂ ಬಹುಮಾನ್ಯ ಕಾರ್ಯದರ್ಶಿಗಳಾದ ರಾ| ಗೋವಿಂದ ಶ್ರೀನಿವಾಸ ಶಾನಭಾಗ ಗುಡಾಳ ಮತ್ತು ರಾಮಚಂದ್ರ ನರಸಿಂಹ ಪ್ರಭು ಇವರು ತಿಳಿಸುತ್ತಾರೆ

ಅಶ್ವಾರೂಢ ಕವಚ!

ವ್ಯಾಪಾರ, ಉದ್ಯೋಗಸಿದ್ಧಿ, ವ್ಯವಹಾರಜಯ, ಕರ್ಮಲಾಭ ಇತ್ಯಾದಿ ವಿಷಯಗಳಲ್ಲಿ ಪ್ರಯತ್ನಿಸಿ ನಿರಾಶರಾದವರಿಗೆ "**ಅಶ್ವಾರೂಢ**" ಯಂತ್ರವು "ಗುಳ ಪರ್ವತದಲ್ಲಿ ಮಧು-ವೃಷ್ಟಿಯಂತೆ" ಶಾಸ್ತ್ರಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು. ೪ ಆಣೆ ಸ್ಟಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು

ಯಂತ್ರಧಾರಣ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರ ೧ಕ್ಕೆ ಬೆಲೆ ರೂ 20-0-0, ಬೆಳ್ಳಿಯ ಯಂತ್ರಕ್ಕೆ ರೂ. 3-0-0, ತಾಮ್ರದ ಯಂತ್ರಕ್ಕೆ ರೂ 2-0-0

ಪತ್ತೆ:- ದೇವಿದಾಸ ಪಿ.ಕೆ.ಕೆ.ಎನ್.,
ಜ್ಯೋತಿಷಿ, ಕುಮಟಾ. [ಉ ಕನ್ನಡ]

Siromani Udipi Narayanacharya,
CHAUKHAMBA, BENARES CITY.

ಮಹಾಶಿವರಾತ್ರೆ, ರುದ್ರಾಭಿಷೇಕ ಸ್ನಾನದ ರುದ್ರಾಕ್ಷಿಯನ್ನು ಧರಿಸಿಕೊಂಡು ನಿಮ್ಮ ಸಮಸ್ತ ಮನೋರಥವನ್ನು ಹೊಂದಿಕೊಳ್ಳಿರಿ 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಹೋಗುತ್ತ ಕ್ರಯ ಹೆಚ್ಚುವದು ಕಂಠಿ ಸರ 32ರ 1ಕ್ಕೆ ರೂ. 0 8 0ಯಿಂದ ರೂ 100 ವರೆಗೆ, ಗೌರಿಶಂಕರ 1ಕ್ಕೆ ರೂ. 3-8-0 ರಿಂದ 5ರವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ಸ್ಟಾಂಪು ಕಳಿಸಿರಿ, 1 ಕಾಶೀ ಪತ್ರೆ, 1 ವಿಶ್ವೇಶ್ವರನ ಪಟ ನಮ್ಮ ಕಡೆಯಿಂದ ಸಹ ಇನಾಮ ಕಳಿಸಲಾದೀತು.

ಪತ್ತೆ - ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಿ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು ಕ್ರಯ ರೂ ೧ ೮-೦

ಅಶ್ವಗಂಧ ಟೋನಿಕ್.— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನನಷ್ಟ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಶುಕ್ಲಕ್ಕೆ ಇದು ದಿವ್ಯೌಷಧ! ರೂ ೧-೨-೦

ಎಗ್ಯು ಮಿಕ್ಶ್ಚರ, ಫೀವರ ಡ್ರೊಪ್ಸ, ಅಮ್ಲ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿಶ್ಚಯವಾಗಿ ಇವುಗಳ ಉಪಯೋಗವಾಗುವುದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂರ ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕ್ಯಾಲರೇಲ, ಡಿಲ್ ವಾಟರ ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಪೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು ಬಾಣಂತಿ ಮದ್ದು, ಸುಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ **ಸೋಲ್ ಏಜಂಟರು.**

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ಓಂ

'ದಶಮೂಲಾರಿಷ್ಟ.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯರಿಗೂ ಹಾಗೂ ಎಲ್ಲ ಫಾರ್ಮಸಿಗಳವರಿಗೂ ತಿಳಿದ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡುಬರದೆ ಇರುತ್ತದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳನ್ನೂ ವರ್ಜಿಸದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತರಿದ್ದರೂ ಕಾರ್ಯ ಮಾಡಿಸಿ ಪ್ರತ್ಯಕ್ಷ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅರ್ಶರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯದ ಶಕ್ತಿ ಇದ್ದರೂ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವವಾದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ. ೧—೪—೦.
,, ಬಾಟ್ಲಿ ೬ಕ್ಕೆ ರೂ. ೬—೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೨—೮—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕುಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,
ಮಾಲಕ,
ಆರ್ಯಧನ್ವಂತರಿ ಔಷಧಾಲಯ,
ಪೋಸ್ಟ:— **ಕುಮಟಾ.** (ಉ. ಕನ್ನಡ.)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪಾಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.

ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂ.10/-ರ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ — ಪುರಸ್ಕಾರಗಳಿವೆ.
ತಪ್ಪದೆ ವ್ಯವಹಾರ ಬೆಳಸಿರಿ.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು:—
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900.

ಓಂ

FIXED RATE.

ದಾಸಪ್ಪ ಕೃಷ್ಣಪ್ಪ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಬೇರೆ ಬೇರೆ ಬಗೆಯ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಶ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಜಿಪ್ಪರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋವಿ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel:- "Honesty."] **D. K. DHAKAPPA BROS.,**

ಹೊಸ ಮಾಲು.

Cloth . hants,
SIRSI. N. KANARA.

ದರ ಅಗ್ಗ.

ಸುಲಭ ಕ್ರಯ! . **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಟಿಕ್ಕಟ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ ೪ ಅಣೆ ಡಜನ್ ೧ಕ್ಕೆ ರೂ. ೨-೮-೦. ವಿ. ಪಿ. ೦-೬-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:- ಗುರುಬಸವ **ಅಂಡ್ ಕಂಪನಿ ಲಿಮಿಟೆಡ್** ಪೋ.ಬಾ. ೫೧೦, ಪಾರ್ಕಟೌನ ಮದರಾಸ

ಇವನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg No. B 1270. Monday, 18th November, 1935.

ವರ್ಷ ೧೮

ಕಾನಡಾವೃತ್ತ

THE KANARA NEWS.

ಸಂಚಿಕೆ ೨೦

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು	ರೂಪಾಯಿ 2-4-0.
ಮನಿಯಾರ್ಡರಿನಿಂದ	ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ	ರೂಪಾಯಿ 3-4-0.
ಬಿಡಿ ಸಂಚಿಕೆಗೆ	0-1-0
ಹಳೇ ಸಂಚಿಕೆಗೆ	0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0 ಹೆಡ್ಡಿಂಗು ಸಾಲು ಎಷ್ಟು ಜಾಗ ತಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹೀರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೮ ನೇ ನವಂಬರ ಸನ್ ೧೯೩೫ನೇ ಇಸವಿ.)*—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩|| ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೨|| ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪಿ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ್, ಲಿಮಿಟೆಡ್, ಉಡುಪಿ.

ಶಾಖೆಗಳು — ಉಡುಪಿ, ಬ್ರಹ್ಮಾವರ, ಹೊನ್ನಾವರ, ಕುಂದಾಪುರ ಕುಮಟಾ, ಕಾರವಾರ, ಶಿರ್ಸಿ, ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ, ಕನ್ನಾನೂರ, ಪಯ್ಯನೂರ, ಹಂಗಾರಕಟ್ಟೆ, ಬಳ್ಳಾರಿ ಮತ್ತು ಕಾಂಞಂಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವವು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ. ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೋಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೋಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು.

ಠಾಯಿಂ ಠೇವು:— ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ.

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ.

ಚಿನ್ನಾಭರಣಗಳ ಅಡವಿನ ಮೇಲೆ ಒಳ್ಳೆಯ ರಿಯ್ಯಾತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು

ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

ಕುಮಟಾ,
ತಾ ೧೫-೭-೧೯೩೫ }
G. S. Nayak,
ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ. (ಉ ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಿಪ್ಪಲರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹು ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಿಕ.

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಲೋ. ಬೋ. ಕಚೇರಿಯಿಂದ ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ:—

ಸಿದ್ದಾಪುರ ತಾಲೂಕ ಬೋರ್ಡಿಗೆ ಸೇರಿದ ಮಾಣಿಮನೆ ತಾಂಗೆ ಡಿಪೋ ಕಟ್ಟುವ ಕೆಲಸ ಇದೇ ತಿಂಗಳ ತಾ. 29ನೇ ಶುಕ್ರವಾರ ದಿವಸ ಮಧ್ಯಾಹ್ನ 2 ಘಂಟೆ ಸಮಯಕ್ಕೆ ತಾಲೂಕ ಮಜಕೂರ ಲೋ. ಬೋ. ಆಫೀಸಿನಲ್ಲಿ ಕೂಡತಕ್ಕ ಜನರಲ್ ಕಮೀಟಿಯಲ್ಲಿ ಕಂಟ್ರಾಕ್ಟಿಗೆ ಕೊಡುವದಲ್ಲಿ ಬಂದೀತು. ಸದ್ರಿ ಕೆಲಸ ಯಾರು ಕಂಟ್ರಾಕ್ಟಿಗೆ ಪಡೆಯಲಿಚ್ಛಿಸುತ್ತಾರೋ ಅವರು ತಮ್ಮ ಅರ್ಜಿ ತಾ. 27-11-1935 ರೊಳಗೆ ನನಗೆ ತಲ್ಪುವಂತೆ ರವಾನಿಸಬೇಕು. ಆ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವದರಲ್ಲಿ ಬರಲಿಕ್ಕಿಲ್ಲ. ಕಂಟ್ರಾಕ್ಟ ಯಾರ ಹೆಸರಿಗೆ ಮಂಜೂರ ಆಗುತ್ತದೋ ಅವರು ಎಸ್ಟಿಮೇಟ ರಕಮಿನ 1/10 ಹಣ ಡಿಪೋಜಿಟ ತರೀಕ ತಾಲೂಕ ತೋಬ ಹಾಜರಪಡಿಸುವದಲ್ಲದೆ ಕೂಡಲೆ ಕರಾರ ಬರಕೊಡಬೇಕಾದೀತು. ಇದರಂತೆ ವರ್ತಿಸಲಿಕ್ಕೆ ತಪ್ಪಿದರೆ ಕಂಟ್ರಾಕ್ಟ ಕೂಡಲೆ ರದ್ದಾಗುವದು. ಎಸ್ಟಿಮೇಟಿನ ಮಾಹಿತಿ ವಗೈರೆ ಬೇಕಾದವರು ರಜೆ ದಿವಸಗಳ ಹೊರ್ತಾಗಿ ಇತರೇ ದಿವಸಗಳಲ್ಲಿ ಆಫೀಸ ವೇಳಾ ನಮ್ಮ ಆಫೀಸಿಗೆ ಬಂದು ಮಾಹಿತಿ ಪಡೆಯಬಹುದು. ತಿಳಿಯುವದು. ತಾ. 13-11-1935ನೇ ಇಸ್ವಿ.

Sd/- ಮಹಾದೇವಪ್ಪ ಗವಡಾ, ಕೊಣಜಿ.
President, T. L. B.
Siddapur.

ಅಲ್ಲಲ್ಲಿ ಇಷ್ಟಿಷ್ಟು!

ಇಟಾಲಿ-ಹಬಸಿ ಯುದ್ಧದಲ್ಲಿ ಮುಸೋಲಿನಿಯವರ ಹೆಸರನ್ನು ಜನರು ಆಗಿಂದಾಗ ಓದುತ್ತಿದ್ದಾರೆ. ಇವರ ಅಲ್ಪ ಪರಿಚಯವಿರುವದು ಲೇಸು. ಇವರು ೧೮೮೩ನೇ ಇಸ್ವಿಯಲ್ಲಿ ಪ್ರೆರಸೋ ಎಂಬ ಗುಡ್ಡಗಾಡ ಹಳ್ಳಿಯಲ್ಲಿ ಹುಟ್ಟಿದರು. ಇವರ ಮನೆತನದವರು ಇತ್ತ ೬೦೦ ವರ್ಷಗಳಿಂದ ಕಮ್ಮಾರರ ಕೆಲಸವನ್ನೂ ಸರಾಯಿ ದುಕಾನುಗಳ ವ್ಯಾಪಾರವನ್ನೂ ಮಾಡುತ್ತಿದ್ದರು. ಇದೇ ಇವರ ಪರಂಪರೆ. ೧೬ನೇ ಶತಮಾನದಲ್ಲಿ ಇವರ ಮನೆತನ ಹೆಸರಾದದ್ದಿತ್ತೆಂತೆ. ಇವರ ಮನೆತನದವರು ಒಂದು ಪಾಳೆಯಗಾರ ೭೭ ಮಧ್ಯಸ್ಥರಿದ್ದರು. ಮುಂದೆ ಇವರಿಗೂ ಬೇರೆ ಪಾಳೆಯಗಾರರಿಗೂ ಜಗಳವಾಗಿ ಇವರ ಮನೆತನದವರು ಸಂಪೂರ್ಣವಾಗಿ ಸೋತುಹೋದರು. ಅಂದಿನಿಂದ ಈ ವರೆಗೆ ೬೦೦ ವರ್ಷಗಳ ತನಕ ಕಮ್ಮಾರರ ಕೆಲಸದಿಂದಲೂ, ಮದ್ಯದಂಗಡಿಯ ಬಲದಿಂದ ಇವರ ಮನೆತನದವರು ಸಂಸಾರ ನಡೆಸಿದರು. ಇವರ ತಂದೆಯವರಾದ ಎಲೆಸ ಎಂಡ್ರೊರವರು ಕಮ್ಮಾರರ ಕೆಲಸವನ್ನು ಬಿಟ್ಟುಕೊಟ್ಟು ಮದ್ಯದಂಗಡಿಯನ್ನು ತೆರೆದು ಮಗನಾದ ಬೆನಿಟೊ ಮುಸೋಲಿನಿಯವರೊಡನೆ ಪಟ್ಟಣಕ್ಕೆ ಹೋಗಿ ಒಕ್ಕಲ್ಕೇ ಸರಾಯಿ ಒಂದು ಸಾದಿ ಮದ್ಯದಂಗಡಿಯನ್ನಿಟ್ಟರು. ಬೆನಿಟೋನು ಮದ್ಯದಂಗಡಿಯಲ್ಲಿ ಸರಾಯಿ ಕೊಡಗಳನ್ನು ಹೊರುತ್ತಿದ್ದನು. ನೆಲವನ್ನು ಸಾರಿಸುತ್ತಿದ್ದನು. ಅವರೆ ಕಿವಿಗಳನ್ನು ಯಾವಾಗಲೂ ತೆರೆದಿಟ್ಟುಕೊಂಡು ಮದ್ಯದಂಗಡಿಯಲ್ಲಿ ನಡೆಯುವ ಮಾತು-ಕಥೆಗಳನ್ನೆಲ್ಲ ಆಲಿಸುತ್ತಿದ್ದನು. ಮದ್ಯದಂಗಡಿಯಲ್ಲಿ ಸರಾಯಿ ಕುಡಿಯಬಂದವರಿಗೆ ಯಾವಾಗಲೂ ರಾಜಕಾರಣದ್ದೇ ಚರ್ಚೆ. ಪೂರ್ವಕಾಲದೊಳಗಿನ ರೋಮ ಪಟ್ಟಣದ ವೈಭವವನ್ನು ಉಂಡಾಡಿ ಮದ್ಯಪಿಗಳು ರುಚಿ-ರುಚಿಯಿಂದ ವರ್ಣಿಸಿ ಇಟಾಲಿಯನ್ನು ಪುನಃ ಪೂರ್ವ ವೈಭವಕ್ಕೆ ಏರಿಸಬೇಕಾಗಿ ಹರಟೆ ಹೊಡೆಯುತ್ತಿದ್ದರು. ಮುಸೋಲಿನಿಯವರ ಮೇಲೆ ಈ ಸಂಭಾಷಣೆಗಳಿಂದ ಒಳ್ಳೇ ಪರಿಣಾಮವಾಯಿತು. ಇಟಾಲಿಯ ಉದ್ಧಾರ ಮಾಡಬೇಕೆಂದು ಅವರಿಗೆ ಅನಿಸಿತು. ಇವರ ತಾಯಿ ಇವರಿಗೆ ಬರಹ ಕಲಿಸಿದಳು. ವಿದ್ಯಾರ್ಥಿ ದೆಸೆಯಲ್ಲಿ ಇವರು ವಿಶೇಷ ಹೆಸರು ಮಾಡಿಲ್ಲ. ಕಾಲು ಕೆದರಿ ಜಗಳ ಮಾಡುವದೊಂದೇ ಹೇಳತಕ್ಕಂಥ ಸಂಗತಿ. ಅಸಹಾಯರಿಗೆ ರಕ್ಷಣ ಮಾಡುವದಕ್ಕಾಗಿ ಪ್ರಯತ್ನಪಡುವದು ಇದೊಂದು ನಮೂದಿಸತಕ್ಕ ಗುಣ. ಬೆನಿಟೋನಿಗೆ ೧೭ ವರುಷ. ಆಗಲೂ ವಿದ್ಯಾರ್ಥಿಯಾಗಿದ್ದಾನೆ. ಆದರೂ ರಾಜಕಾರಣ ಸಭೆಗಳಲ್ಲಿ, ತಂದೆಯ ಮದ್ಯದಂಗಡಿಯಲ್ಲಿ ಒಳ್ಳೇ ಹುರುಪಿನಿಂದ ದುಡಿಯುತ್ತಿದ್ದನು. ಒಂದು ವರ್ತಮಾನಪತ್ರವನ್ನೂ ಹೊರಡಿಸಿದನು. ೪ ವರ್ಷಗಳ ತನಕ ಈ ಪತ್ರಿಕೆಯನ್ನು ನಡಿಸಿದನು. ಆ ಮೇಲೆ ಮತ್ತೊಂದು ಪತ್ರಿಕೆಯನ್ನು ಹೊರಡಿಸಿ ಸಮಾಜಸತ್ತಾವಾದದ ತತ್ವಗಳನ್ನು ಬೀರಿದನು. ಗುಲ್ಟೇರ ಶಾಲೆಯಲ್ಲಿ ಶಿಕ್ಷಕನಾದನು. ಆದರೆ ಈತನ ಸ್ವಭಾವ ಶಿಕ್ಷಕನಿಗೆ ಉಚಿತವಾದದ್ದಿರಲಿಲ್ಲ. ಶಾಲೆಯಲ್ಲಿ ಇಸ್ಪೀಟು ಆಡುತ್ತಿದ್ದನು; ಸರಾಯಿ ಕುಡಿಯುತ್ತಿದ್ದನು; ಎಳೆ ಪ್ರಾಯದ ಹೊಂಗಿಸಿ ತರುಣಿಯರೊಡನೆ ವಿಲಾಸ ಮಾಡುತ್ತಿದ್ದನು. ರಾತ್ರಿ ಸಂಚಾರವೇ ಈತನ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !
ವೃದ್ಧಿಕಪಾಲ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲೀವರ್ ರೋಗಕ್ಕೆ ಅತ್ಯುತ್ತಮ).
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಹಾ ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !
ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ್ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನು ಈ ದಿನ ಸಾಯಂಕಾಲ ನೋಡಿ ತುಂಬ ಆನಂದಪಟ್ಟೆನು. ಈ ವೈದ್ಯಶಾಲೆ ಈ ಪ್ರಾಂತ್ಯದಲ್ಲಿ ಜನಸಾಮಾನ್ಯರಿಗೆ ಬಹುಕಾಲದಿಂದ ಪರಿಚಿತವೆಂದು ತಿಳಿಸುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಅನುಭವಿಗಳಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಯುಕ್ತವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೀಯರಾದುದರಿಂದ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ, ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಪ್ರಧಾನಖಂಡ. ಇದರಿಂದ ಅಧಿಕಾರಿಗಳು ಇವನಿಗೆ ಹೊರೆಹಾಕಿದರು. ಮಹಾಯುದ್ಧ ಕಾಲದಲ್ಲಿ ಇವರು ತಮ್ಮ ಶಾಂತತಾವಾದವನ್ನು ತೊರೆದು ರಣೋತ್ಸಾಹಕ್ಕಾಗಿ ದೇಶಬಾಂಧವರಿಗೆ ಹುರಿದುಂಬಿಸಲಾರಂಭಿಸಿದರು. ಅದರಿಂದ ಇವರ ಲೋಕಪ್ರೀತಿಯು ಬಹುವಾಗಿ ಕುಗ್ಗಿತು. ಇಲೆಕ್ಷನಿನಲ್ಲಿ ೧೦-೧೨ ಮತ ಸಹ ದೊರೆಯಲಿಲ್ಲ 'ಅವಂತಿ' ಪತ್ರಿಕೆಯ ವಿದ್ಯಮಾನ ಮುಸೋಲಿನಿಯವರು ಭಯಂಕರ ಆಂದೋಲನವನ್ನುಂಟುಮಾಡಿದರು. ಇವರು ಸೇರಿದಾಗ ಪತ್ರಿಕೆಯ ೪೦ ಸಾವಿರ ಪ್ರತಿಗಳು ಖರ್ಚಾಗುತ್ತಿದ್ದವು. ೪-೬ ತಿಂಗಳಲ್ಲಿಯೇ ೧ ಲಕ್ಷಕ್ಕೆ ಮಿಕ್ಕಿ ಪ್ರತಿಗಳು ಖರ್ಚಾಗಹತ್ತಿದವು. ಇಲೆಕ್ಷನಿನಲ್ಲಿ ಸೋತ ಬಳಿಕ, 'ಅವಂತಿ' ಪತ್ರಿಕೆಯವರು ಇವರಿಗೆ ಹೊರತಳ್ಳಿದರು. ಆಗ ಮುಸೋಲಿನಿಯು ಭಿಕ್ಷುಕನಾದನು. ಸ್ವಿಝರ್ಲಂಡ ದೇಶದ ಲೌಸೇನಿನಲ್ಲಿ ಈತನು ತಿರಿದುಂಬುತ್ತಿದ್ದನು. ೧೧ ಬಾರಿ ಕಾರಾಗೃಹದಲ್ಲಿ ಸೇರಿದನು. ಸಾರ್ವಜನಿಕ ಸೇವೆ ಮಾಡುವವರು ಕಾರಾಗೃಹವಾಸವನ್ನನುಭವಿಸುವದು ಅವಶ್ಯವೆಂದು ಅವರು ಬರೆದಿಟ್ಟಿದ್ದಾರೆ. ಕಾಲ ಕಲ್ಲುಕುಟುಕನಾದನು. ಮದ್ಯದಂಗಡಿಯಲ್ಲಿ ಉಳಿದು ಕೆಲ ಕಾಲ ಕಳೆದನು. ಆದಾಗ್ಯೂ ಆತನಿಗೆ ಸಮಾಜಸತ್ತಾವಾದದ ಮರುಳು ಬೆನ್ನು ಬಿಡಲಿಲ್ಲ. ಸ್ವಿಝರ್ಲಂಡದಲ್ಲಿ ಈತನ ಪುಂಡಾಟ ಹೆಚ್ಚು. ಅದರಿಂದ ಸ್ವಿಝರ್ಲಂಡ ಸರಕಾರವು ಇವನನ್ನು ಹೊರತಳ್ಳಿತು. ಆ ಮೇಲೆ ಸ್ವಿಝರ್ಲಂಡದಿಂದ ಆಸ್ಟ್ರಿಯಾಕ್ಕೆ ತೆರಳಿದರು. ಅಲ್ಲಿಂದ ಪುನಃ ಸ್ವದೇಶಕ್ಕೆ ಮರಳಿದರು. ಸಮಾಜಸತ್ತಾವಾದದ ಕುರಿತು ಇವರ ಮೇಲೆ ನಡೆದ ಖಟ್ಲೆಯಲ್ಲಿ ಇವರೇ ಸ್ವತಃ ತಮ್ಮ ವಕೀಲಿ ನಡಿಸಿದರು. "ನನಗೆ ನ್ಯಾಯಸ್ಥಾನದವರು ಬಿಡುಗಡೆ ಮಾಡಬೇಕು ನಿರಪರಾಧಿಯೆಂದು ಬಿಡುಗಡೆ ಮಾಡುವದಲ್ಲ; ಅಪರಾಧಿಯೆಂದು ನನಗೆ ಬಿಡುಗಡೆಯಾಗಬೇಕು. ಇಟಾಲಿಯೊಳಗೆ ೩|| ಕೋಟಿ ಜನರಿದ್ದಾರೆ. ಎಲ್ಲರೂ ಒಂದೇ ತರದಿಂದ ವಿಚಾರ ಮಾಡಿದರೆ ಈ ದೇಶವು ಹುಚ್ಚರ ಮನೆಯಾಗುವದು. ನಿಷೇಧ ಮಾಡುವವರ ಜೊತೆಗೆ ಪ್ರಶಂಸೆ ಮಾಡುವವರಿರಬೇಕು. ನಿಮ್ಮ ಇಲಾಖೆಯವರಿಗೆ ಸ್ತುತಿ ಮಾಡುವವರ ಜೊತೆಗೆ ನಿಂದೆ ಮಾಡುವವರು ಬೇಕು. ಈಗ ದೇಶಕ್ಕೆ ಬೇಕಾದದ್ದು ವಿಚಾರಗಳ ಕಲಹ. ಎಲ್ಲರೂ ಒಂದೇ ವಿಚಾರ ಹಿಡಿದು ನಡೆದರೆ ಮನುಷ್ಯರು ನಷ್ಟವಾಗುವಷ್ಟು ದಾಸ್ಯಪ್ರಾಪ್ತವಾಗುವದು." ಮುಸೋಲಿನಿಯವರು ತಮ್ಮ ಜೀವನ ತತ್ವವನ್ನೇ ಅರುಹಿದ್ದಾರೆ. ಬಳಿಕ ಕ್ರಮವಾಗಿ ಇವರ ವಿಚಾರಕ್ಕೆ ಇಟಾಲಿಯಲ್ಲಿ ಅನುಕೂಲ ವಾತಾವರಣ ದೊರಕಿ ಮುಸೋಲಿನಿಯವರು ಈಗ ಇಲ್‌ಡೂಸ ಯಾನೆ ಇಟಾಲಿಯ ಸೂತ್ರಧಾರರಾಗಿದ್ದಾರೆ. ಇವರ ಮಾತನ್ನು ಲೋಕದವರೆಲ್ಲರೂ ಲಕ್ಷ್ಯಪೂರ್ವಕವಾಗಿ ಆಲಿಸುತ್ತಿದ್ದಾರೆ. ದೈವಗತಿ ವಿಚಿತ್ರವಾದುದು! ದೊಡ್ಡವರು ಚಿಕ್ಕವರಾಗುತ್ತಾರೆ; ಚಿಕ್ಕವರಿಗಿಂತ ಅಲ್ಪರಾಗುತ್ತಾರೆ. ಅಲ್ಪರು, ಹೆಸರು ಕೇಳದಂಥವರು ದೊಡ್ಡವರಾಗಿ ಲೋಕಕೀರ್ತಿಯನ್ನು ಪಡೆಯುತ್ತಾರೆ. ದೈವಬಲವೊಂದಿದ್ದರೆ ಲೋಕವನ್ನೇ ನಡುಗಿಸಬಹುದಲ್ಲವೇ ?

⁂

ಪಂಡಿತ ಜವಾಹರಲಾಲರು ಲಂಡನಿನಲ್ಲಿ ದೇಶಬಾಂಧವರೊಡನೆ ಸ್ವದೇಶದೊಳಗಿನ ಪರಿಸ್ಥಿತಿ ವಿಷಯ ಚರ್ಚೆಮಾಡುವಾಗ ಎರಡು ಮುಖ್ಯ ಮಾತುಗಳನ್ನು ಹೇಳಿದರು. ಇವುಗಳೆರಡರ ಪರಿಹಾರವಾಗದನಕ ದೇಶೋದ್ಧಾರವಾಗದಾಗಿ ಹೇಳಿದರು. "ಒಂದು ದಾರಿದ್ರ್ಯ, ಮತ್ತೊಂದು ಸುಲಿಗೆ" ಜನಸಾಮಾನ್ಯರ ಬಡತನದ ಪರಿಹಾರವಾಗಬೇಕು. ಜನರಿಗೆ ಊಟ-ಉಡಿಗೆಗೆ ಸಾಲುವಷ್ಟು ಸಂಪತ್ತಿರಬೇಕು. ಅವರಿಗೆ ತರತರದಿಂದ ಒದಗುವ ಸುಲಿಗೆಯನ್ನು ತಪ್ಪಿಸಬೇಕು. ಇವೆರಡರ ಪರಿಹಾರವಾದರೆ ಮಾತ್ರ ಭರತಖಂಡವು ಬಾಳಿ ಬದುಕುವದು. ಹಿಂದೀಯರು ಪ್ರಮುಖ್ಯವಾಗಿ ಬೇಸಾಯಗಾರರು. ಡಾ|| ಸತ್ಯನಾಥನ್‌ರವರು ನುಡಿದಂತೆ, ಬೇಸಾಯ ಒಂದು ಉದ್ದಿಮೆ. ಆ ಉದ್ದಿಮೆಯಲ್ಲಿ ಸರಿಯಾಗಿ ಪ್ರತಿಫಲ ದೊರೆತರೆ ಬೇಸಾಯಗಾರರಿಗೆ ಸಮೃದ್ಧಿ. ಬೆಳೆ ಹುಟ್ಟುವದು ದೈವಾಧೀನವಾದದ್ದು. ಮಳೆ ಸರಿಯಾಗಿ ಬಿದ್ದು ದೈವಾನುಗ್ರಹವಾದರೆ ಬೇಸಾಯಗಾರರ ಬಾಳ್ವೆ, ಇಲ್ಲದಿದ್ದರೆ ಅವರ ದುಸ್ಥಿತಿ ಕೇಳಬೇಕಿಲ್ಲ. ಈಗಿನ ಭೂಕಂದಾಯದ ಪದ್ಧತಿಯಿಂದ ಬೇಸಾಯಗಾರರ ದೈನ್ಯ ಮಿಗಿಲಾಗಿರುವದಾಗಿ ವಿಚಾರವಂತರ ಅಭಿಪ್ರಾಯ. ಈಗಿನ ಭೂಕಂದಾಯ ಪದ್ಧತಿಯ ಮೂಲತತ್ವವೇನಂದರೆ:- ಭೂಮಿ ಅರಸನದು, ಜನರು ಅನುಭವಿಸುವವರು. ಆದರಿಂದ ಅರಸನಿಗೆ ಜನರು ಭೂಮಿಯೊಳಗಿನ ಉತ್ಪನ್ನದ ಮಾನದಿಂದ ಗೇಣಿ ತೆರಬೇಕು. ಪುರಾತನ ಕಾಲದ ಮೂಲತತ್ವವೇ ಬೇರೆ:- ಭೂಮಿಯು ಒಡೆತನ ಜನರದು, ಸರಕಾರಕ್ಕೆ ತೆರಿಗೆ ಎತ್ತುವಳಿ ಮಾಡುವ ಅಧಿಕಾರ ಮಾತ್ರ ಉಂಟು. ಸರಕಾರವು ಪ್ರಜಾರಕ್ಷಣೆಯ ಕೆಲಸ ಮಾಡುವವರಿಂದ ಈ ಅಧಿಕಾರ ಕೊಡೋಣವಾಗಿದೆ.

THE AGRICULTURAL & INDUSTRIAL BANK, LIMITED.
(Incorporated in British India)
Head office:– COONDAPOOR. **Branch:– KUMTA.**
Telegrams:. **"BANKERS."**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು:— ಕುಂದಾಪುರ. **ಬ್ರೇಂಚ:—** ಕುಮಟಾ.

ಠೇವಣಾತಿಗಳು.

ಕಾಯಂ ಠೇವು:-3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ. 3½, 4½, 5½, 6. 6½ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು.

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ. 2½ ವ ಜುಲೈಯಿಂದ ಡಿಶಂಬರ ಅಖೈರ ವರೆಗೆ 1½ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು:-- ಶೇಕಡಾ ರೂ. 4ರಂತೆ ಬಡ್ಡಿ. ಬಿನ್‌ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು.

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ಜಾಮೀನಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಪಾತ್ರಿಯಾದ ಬಿಲುಗಳು, ದರ್ಶನಿಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ **ಮಾಹಿತಿ ಪುಸ್ತಕ (Rules of Business)**ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S. Nayak.
Managing Directors.

ವಿಚಾರವಂತರೂ ಸಹ ಇದೇ ಪ್ರಕಾರ ಅಭಿಪ್ರಾಯ ಪಡುತ್ತಾರೆ. ಈಗಿನ ಸರಕಾರವು ಇದಕ್ಕೊಪ್ಪುವದಿಲ್ಲ. ತರಿಗೆಯಂದೆಣಿಸಿದರೆ ಸರಕಾರವು ಈಗ ಆಕರಿಸುವ ತೀರ್ವೆ ವಿಪರೀತವಾಗುತ್ತದೆ. ಗೇಣಿಯೆಂದೆಣಿಸಿದರೆ ಈಗಿನ ತೀರ್ವೆ ಕಡಿಮೆಯೆಂದೇ ಎಣಿಸಬೇಕು. ಭೂಮಿಯ ಒಡೆತನದ ಕಲ್ಪನೆಯಲ್ಲಿಯೇ ಮತಭೇದವಾದ್ದರಿಂದ ಭೂಕಂದಾಯದ ಪರಿಮಾಣದಲ್ಲಿ ಅಭ್ಯಂತರ ಉಂಟಾಗುತ್ತಿದೆ. ಇಂಥ ಸಂದರ್ಭದಲ್ಲಿ ನಮ್ಮ ಹಿಂದುಸ್ಥಾನದೊಳಗಿನ ಪೂರ್ವಜರ ಕಲ್ಪನೆ ಏನಿತ್ತೆಂದು ತಿಳಕೊಳ್ಳುವದುಚಿತ.

⁂

ಹಿಂದುಸ್ಥಾನದ ಧರ್ಮಶಾಸ್ತ್ರಗಳಲ್ಲಿ ಮನುಸ್ಮೃತಿ ಮುಖ್ಯವಾದುದು. ಬೆಟ್ಟ ಕಡಿದು ತೆಗೆದು ಭೂಮಿ ಸಾಗು ಮಾಡುವವನೇ ಭೂಮಿಯ ಒಡೆಯನೆಂದು ಮನುಸ್ಮೃತಿ ವಚನವಿದೆ. ದೇಶದೊಳಗೆ ಶಾಂತತೆ ಇದ್ದಾಗ ಭೂಮಿಯ ಉತ್ಪಾದನೆಯ ಶಕ್ತಿಗನುಸಾರವಾಗಿ ಕೆಲವು ಅಂಶ [illegible] ತನಕ ತೆರಿಗೆಯೆಂದು ಅರಸರು ವಸೂಲ ಪಡೆಯಬಹುದು. ಕೇರಳ, ತ್ರಾವಣಕೋರ, ಕೊಚಿನ, ಮಲಬಾರ, ವಿಜಯನಗರ, ಬಿದನೂರು, ತುಳುವ ರಾಜ್ಯಗಳಲ್ಲಿ ಭೂಮಿ ಜನರ ಒಡೆತನದ್ದೆಂದು ಎಣಿಸಲ್ಪಡುತ್ತಿತ್ತು. ಅರಸರು ಸ್ವಲ್ಪಮಾತ್ರವೇ ತೆರಿಗೆಯನ್ನು ವಸೂಲ ಮಾಡುತ್ತಿದ್ದರು. "ಭೂಮಿಯ ಒಡೆಯನ ಕಡೆಯಿಂದ ಉತ್ಪತ್ತಿಯ ಷಷ್ಠಾಂಶಕ್ಕೆ ಮಿಕ್ಕಿ ಕಂದಾಯ ಹೊಡೆವ ಅರಸನು ಲೋಕದಲ್ಲಿ ನಿಂದ್ಯನೆಂದು ಗಣಿಸಲ್ಪಟ್ಟು ನರಕ ಯಾತನೆಗಳನ್ನನುಭವಿಸುವನೆಂದು ವಿದ್ಯಾರಣ್ಯ ಮಹಾಮುನಿಗಳ ವಚನವಿದೆ. ಮಲಬಾರದಲ್ಲಿ ಜನ್ಮ ವಾರಸಿಯೆಂತ ಭೂಮಿಯ ವಾರಸಿಗೆ ಹೇಳುತ್ತಾರೆ. ಜನ್ಮ ಅಂದರೆ ಜನ್ಮಾಧಿಕಾರ. ಜನ್ಮಾಧಿಕಾರದಿಂದಲೇ ಭೂಮಿಯ ಒಡೆತನ ಬರುತ್ತದೆ. [illegible]ನೇ ಇಸ್ವಿಯಲ್ಲಿ ತಮಿಳುನಾಡಿನ ಭೂಪದ್ಧತಿಯನ್ನು ವಿಚಾರಿಸಿ ರೆವಿನ್ಯೂ ಬೋರ್ಡಿನವರು ಜನರ ಒಡೆತನದ್ದೇ ಸ್ಪಷ್ಟ [illegible]. ಓಡಿಸಾ ಪ್ರಾಂತದ ಸ್ಥಿತಿಯ ಮೇಲೆ ಸ್ಟರ್ಲಿಂಗರವರು ಒಂದು ನಿಬಂಧ ಬರೆದಿದ್ದಾರೆ. 'ದೇಶೀ ಸರಕಾರದ ಕೈಕೆಳಗೆ ಈ ಪಾಳೆಯಗಾರರು ಭೂಮಿಯ ಪ್ರತ್ಯಕ್ಷ ಮಾಲೀಕರಾಗಿದ್ದರು" ಎಂದವರು ಬರೆಯುತ್ತಾರೆ. 'ರಾಜಸ್ಥಾನ' ಎಂಬ ಗ್ರಂಥದಲ್ಲಿ ಮೇವಾಡದೊಳಗಿನ ರೈತರ ವಿಷಯ ಇದೇ ಪ್ರಕಾರ ಉಲ್ಲೇಖವಿದೆ. ದುಬಾ ಎಂಬ ಹುಲ್ಲಿನೊಡನೆ ಗ್ರಂಥಕರ್ತರು ರೈತರ ಹಕ್ಕನ್ನು ಸರಿಹೋಲಿಸಿದ್ದಾರೆ. ಹೇಗೆ ದುಬಾ ಹುಲ್ಲು ಅಮರವಿದೆ, ಶಾಶ್ವತವಿದೆ, ಅದರಂತೆಯೇ ರೈತರ ಹಕ್ಕೆಂದು ಗ್ರಂಥಕರ್ತರ ಅಂಬೋಣ. ರಜಪುತಾನಾ ದೇಶದಲ್ಲಿ 'ಭೋಗಸ್ಯ ಧನಿ ರಾಜೋ, ಭೋಮ್ಯಾ ಧನಿ ಮಾರೋ" ಎಂಬ ನಾಣ್ಣುಡಿಯಿದೆ. 'ಅರಸನು ತೆರಿಗೆ ಪಡೆಯಲು ಮಾತ್ರ ಅಧಿಕಾರಪಟ್ಟವನು. ನಾನು ಭೂಮಿಯ ಒಡೆಯನು." ಭೋಗ ಎಂಬ ಶಬ್ದದಿಂದ ವಿಶಿಷ್ಟ ಪ್ರಕಾರದ ತೆರಿಗೆಯೇ ಅಭಿಪ್ರೇತವಾಗಿದೆ. ಭೋಗ ಅಂದರೆ ನಾಣ್ಯದಿಂದ ತೆರುವ ತೆರಿಗೆ ಅಲ್ಲ. ಕಾಳು ಕಡಿಯಿಂದ ಪ್ರಜಾರಕ್ಷಣೆ ಖರ್ಚಿಗಾಗಿ ತೆರುವ ತೆರಿಗೆ. ರಜಪುತಾನಾ ದೇಶದಲ್ಲಿ ಬೆಳೆಯಿಂದ ತೆರಿಗೆ ತೆರುತ್ತಿದ್ದರು. ಇಲ್ಲವೆ ಸರಕಾರಿ ಕೆಲಸ ಮಾಡಿ ತೆರಿಗೆ ತೀರಿಸುತ್ತಿದ್ದರು. ಸರ್ ಜ್ಹಾನ್ ಮಾಲಕಮ್‌ರವರ ಮಾಳವದೊಳಗಿನ ಪರಿಸ್ಥಿತಿಯನ್ನು' ಸಮಾಲೋಚಿಸಿ ಜನರೇ ಭೂಮಿಯ ಒಡೆಯರೆಂದೂ ಅರಸರು ಉತ್ಪತ್ತಿಯ ದಶಾಂಶವನ್ನು ತೆರಿಗೆ ಎಂದು ಎತ್ತುವಳಿ ಮಾಡುತ್ತಿದ್ದರಾಗಿಯೂ ಬರೆದಿದ್ದಾರೆ. ಮರಾಠರ ರಾಜ್ಯಭಾರದಲ್ಲಿ ಜನರೇ ಭೂಮಿಯ ಒಡೆಯರೆಂದೂ ಉತ್ಪತ್ತಿಯ ಚತುರ್ಥಾಂಶಕ್ಕೆ ಮಿಕ್ಕಿ ಎತ್ತುವಳಿಯಾಗುತ್ತಿದ್ದಿಲ್ಲವಾಗಿಯೂ ಬ್ರಿಗ್ಸರವರ [illegible] ಐನ-ಇ-ಅಕಬರಿ'ಯಲ್ಲಿ ಹಿಂದು ಅರಸರ ಉತ್ಪತ್ತಿಯ ಷಷ್ಠಾಂಶವನ್ನು ತೆರಿಗೆಯೆಂದು ವಸೂಲ ಮಾಡುತ್ತಿದ್ದರಾಗಿ ಅಬುಲ್ ಫಜಲ್‌ರವರು ಬರೆದಿದ್ದಾರೆ. ಶಹಾಜಹಾನ ಕಾರಕೀರ್ದಿಯಲ್ಲಿ ಇದು ಚತುರ್ಥಾಂಶಕ್ಕೆ ಏರಿತು. ಔರಂಗಜೇಬ ಬಾದಶಹರ ಕಾರಕೀರ್ದಿಯಲ್ಲಿ ಭೂಕಂದಾಯ ಮತ್ತೂ ಏರಿತು. ಆದರೆ ಅವರು ಬೇರೆ ತೆರಿಗೆಗಳನ್ನು ಕಡಿಮೆ ಮಾಡಿದರು. ಭೂಕಂದಾಯವನ್ನು ಬೆಳೆಯಿಂದ ಸಲ್ಲಿಸಬಹುದೆಂದರು. [illegible] ಅರಸರಾಗಲಿ ಹಿಂದಿನ ಅರಸರಂತೆ [illegible]ವನ್ನು ಆಯಾ ವರ್ಷದ ಬೆಳೆಯ ಮೇಲಿಂದಲೇ ವಸೂಲ ಮಾಡುತ್ತಿದ್ದರು. ಅನಾದಿ ಕಾಲದಿಂದ [illegible] ಭೂಮಿಯ ಒಡೆಯರಿಂದ [illegible] ರಕ್ಷಣೆ [illegible] ಕಂಪನಿಯ ತೆತ್ತಿಲ್ಲ ಸರಕಾರದ ಅವರ ಒಡೆತನವನ್ನು ಮನ್ನಿಸಲೇಬೇಕಾಗಿಯೂ ಸರ್ ಜೋಜ್ [illegible]ರವರು ಚೌಕಶಿಯಿಂದ ಬರೆಯುತ್ತಾರೆ. [illegible]ವೇನಂದರೆ ಪುರಾತನ ಕಾಲದಲ್ಲಿ ಹಿಂದು ಅರಸರಾಗಲಿ ಮುಸಲ್ಮಾನ ಬಾದಶಹರಾಗಲಿ ಭೂಮಿಯ ಒಡೆತನ ತಮ್ಮದೆಂದು ವಾದಿಸಲಿಲ್ಲ. ತಾವು ಪ್ರಜಾರಕ್ಷಕರು, ಪ್ರಜೆಗಳಿಗೆ ಒದಗಿಸಿಕೊಟ್ಟ ಶಾಂತತೆಯ ರಕ್ಷಣೆಯ ಕೆಲಸದ ಪ್ರತಿಫಲವೆಂದು ಭೂಮಿಯ ಒಡೆಯರ ಕಡೆಯಿಂದ ತೆರಿಗೆ ಎತ್ತುವಳಿ ಮಾಡುವ ಅಧಿಕಾರ ಮಾತ್ರ ತಮ್ಮದು, ಎಂಬುದಾಗಿ ಎಣಿಸಿ ಕಾಲಮಾನಕ್ಕನುಚಿತವಾಗಿ ದಶಾಂಶ ಷಷ್ಠಾಂಶ ಚತುರ್ಥಾಂಶ ಬೆಳೆ ರಾಜಾದಾಯವೆಂದು ವಸೂಲ ಮಾಡುತ್ತಿತ್ತು. ಭೂಮಿಯ ಬೆಳೆಯಿಂದಲೇ ರಾಜಭಾಗ ಕೊಡುವ ಅನುಕೂಲತೆಯ [illegible]ದಿಂದ ಬೇಸಾಯಗಾರರಿಗೆ ಬೇರೆ [illegible] ಪಟ್ಟು ತಗಲುತ್ತಿದ್ದಿಲ್ಲ. ಈಗ ಆ ವ್ಯವಸ್ಥೆ [illegible]. ಕಳೆದ ಹಲವು ವರ್ಷಗಳಲ್ಲಿಂತು ಹುಟ್ಟಿದ ಸಂಪೂರ್ಣ ಬೆಳೆ ಮಾರಾಟ ಮಾಡಿದಾಗ್ಯೂ ಖರ್ಚು ತಗಲು [illegible] ಹುಟ್ಟುವದಿಲ್ಲ. ಭೂಕಂದಾಯದ ಪದ್ಧತಿಯ ವಿಚಾರ ಮಾಡುವವರು ಈ ವಿಷಯವನ್ನು ಪರಾಂಬರಿಸಬೇಕು. ಭೂಮಿಯ ಉತ್ಪತ್ತಿ ಎಷ್ಟು? ಅದಕ್ಕೆ ತಗಲುವ ಖರ್ಚೇನು? ಸರಕಾರದಿಂದ ಸಿಗುವ ಲೋಕರಕ್ಷಣೆಯ ಪರಿಮಾಣವೆಷ್ಟು? ಎಂಬ ಸಂಗತಿಗಳನ್ನೆಲ್ಲ ಸೂಕ್ಷ್ಮವಾಗಿ ಪರ್ಯಾಲೋಚಿಸಿ ಭೂಕಂದಾಯವನ್ನು ಆಕರಿಸಿದರೆ ಜನಸಾಮಾನ್ಯರ ದಾರಿದ್ರ್ಯವೂ, ಅವರ ಮೇಲೆ ನಡೆಯುವ ಸುಲಿಗೆಯೂ ಒಮ್ಮೆಲೇ ಪರಿಹಾರ ಹೊಂದಿ ಬೇಸಾಯಗಾರರಿಗೆ ತುತ್ತು ಕೂಳು ಸಿಗುವದು.

⁂

ಜಂಗಲ ಖಾತೆಯ ಕಷ್ಟನಿವಾರಣೆ ಮಾಡುವ ಸಂಭ್ರಮ ರಭಸದಿಂದ ನಡೆದಿದೆ. ೬—೭ ತಿಂಗಳಿಗೊಮ್ಮೆ ಜಿಲ್ಲಾಧಿಪರ ಜಂಗಲ ಸಲ್ಲಾಗಾರಮಂಡಳದ ಸಭೆಯಾಗಿ ಕಷ್ಟನಿವಾರಣೆಯ ಉಪಾಯ ಮಾಡುತ್ತಾರೆ. ಆದರೆ ಇವೆಲ್ಲ ಚಟುವಟಿಕೆಗಳಿಂದ ಜಂಗಲ ಖಾತೆಯಿಂದೊದಗುವ ಕಷ್ಟಗಳ ನಿವಾರಣೆಯಾಗುವದರ ಬದಲು ಈಗ ದೊರೆತಿರುವ ಸುಖಾನುಕೂಲತೆಗಳೇ [illegible]ಯಾಗಲು ಆರಂಭಿಸಿವೆ. ಉರುವಲ ಕಟ್ಟಿಗೆಯ ಡಿಪೋಗಳಲ್ಲಿ ಬೇರೆ ಬೇರೆ ಕಂಟ್ರ್ಯಾಕ್ಟರರಿಗೆ ಉರುವಲ ಕಟ್ಟಿಗೆ ಮಾರಲು ಪ್ರತಿಬಂಧವಿರಲಿಲ್ಲ. ಅದರಿಂದ ಪೈಪೋಟಿಯಾಗಿ ಕಟ್ಟಿಗೆ ಯೋಗ್ಯ ಬೆಲೆಗೆ ಮಾರಲ್ಪಡುತ್ತಿತ್ತು. [illegible] ಇಲ್ಲಿಯ ಡಿಪೋದಲ್ಲಿ ಮಣಕ್ಕೆ ೩ ಆಣೆಯಿತ್ತು. [illegible] ಕಡಿಗಳ ದರ [illegible] ಕೂಲಿಯ ದರ ಏರಿತು. ಅದರಿಂದ ಕಟ್ಟಿಗೆಯ ದರ ೩ ಆಣೆಯಾಗಿ ಹಾಗೆಯೇ ೪॥ ಆಣೆಯ ತನಕ ಹಾರಿತು. ಇತ್ತ ೩—೪ ವರ್ಷಗಳಿಂದ [illegible] ಕಡಿಮೆ ದರ ಇಳಿದಾಗ್ಯೂ ಕಟ್ಟಿಗೆಯ ದರ ಇಳಿಯಲಿಲ್ಲ. ೨—೩ ವರ್ಷಗಳಲ್ಲಿ ಕಂಟ್ರ್ಯಾಕ್ಟರರು ಕಟ್ಟಿಗೆ ಮಾರಲಾರಂಭಿಸಿದ್ದರಿಂದ ಮಣಕ್ಕೆ ೩ ಆಣೆಯಾಯಿತು. ಗೋಕರ್ಣದಲ್ಲಿ ೫ ಆಣೆಯಿಂದ ೪ ಆಣೆ ತನಕ ದರ ಇಳಿಯಿತು. ಈಗ ಜಂಗಲ ಅಧಿಕಾರಿಗಳು ಹೊಸ ಹುಕುಮುಗಳನ್ನು ಹೊರಡಿಸಿದ್ದಾರೆಂಬ(?) ಗಿತಿಯುತ್ತದೆ. ಡಿಪೋಗಳಲ್ಲಿ ಬೇರೆ ಕೂಪ ಕಂಟ್ರ್ಯಾಕ್ಟರರು ಉರುವಲ ಕಟ್ಟಿಗೆ ಮಾರಬಾರದಾಗಿ ಜಂಗಲ ಅಧಿಕಾರಿಗಳ ಕಟ್ಟಪ್ಪಣೆ. ಇದರಿಂದ ಕಟ್ಟಿಗೆ ಡಿಪೋದವರಿಗೆ ಒಕ್ಕಲಿಯಾಗಿ(?) ಅವರ ಹೇಳುವ ದರ ತೆತ್ತು ಕೊಟ್ಟಂಥ ಕಟ್ಟಿಗೆಯನ್ನು ಜನರು ಒಯ್ಯಬೇಕಾಗುತ್ತದೆ. ಅಕ್ಕಿ, ರಾಗಿ, ಮೊದಲಾದ ಕಾಳು-ಕಡಿಗಳ ದರ ಅರ್ಧಕ್ಕೆ ಮಿಕ್ಕಿ ಇಳಿದಾಗ್ಯೂ ಉರುವಲ ಕಟ್ಟಿಗೆಯ ದರವನ್ನು ಮುಂಚಿನಷ್ಟಕ್ಕೇ ಇಡುವದು [illegible]ಯವಾದದ್ದು. ಮದ್ದು ಅಷ್ಟೇ ಕಂದಾಗ್ಯೂ ಅಕ್ಕಿಯ ದರ ಇಳಿದದ್ದರಿಂದ ಅದು ಇಮ್ಮಡಿ ಆಗುತ್ತದೆ. ಕೃತ್ರಿಮವಾಗಿ

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ– ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ ಇವರ ಅಧ್ಯಕ್ಷತೆಯಲ್ಲಿ ವಿಲಂಪ ವೃದ್ಧಿ ಹೊಂದಿದ ಕಂಪನಿಯು!

ಬೇಕಾ! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಒರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ ಕಾರವಾರ.

ಉರುವಲ ಕಟ್ಟಿಗೆಯಂಥ ಜನಸಾಮಾನ್ಯರ ಆವಶ್ಯ ವಸ್ತುಗಳ ದರವನ್ನು ಕಾಪಾಡುವದು ಲೋಕಹಿತವಲ್ಲ ಜಂಗಲ ಅಧಿಕಾರಿಗಳು ಜಂಗಲ ಉತ್ಪನ್ನ ಬೆಳೆಸುವದಕ್ಕಾಗಿ ಈ ಕುಹಕ ಮಾಡಿದ್ದಿರಬಹದು ಆದರೆ ಜಿಲ್ಲಾಧಿಪತಿಗಳೂ, ಸಲ್ಲಾಗಾರ ಮಂಡಳದವರೂ ವಿಚಾರ ಮಾಡಿ ಈ ಅನ್ಯಾಯವನ್ನು ಪರಿಹರಿಸಬೇಕು ಊರವರು ಜಿಲ್ಲಾಧಿಕಾರಿಗಳಿಗೆ ಅರ್ಜಿ ಮಾಡಿ ತಮ್ಮ ದೂರನ್ನು ತಿಳಿಸಬೇಕು 'ದೊರೆತನಕ ದೂರು ದೊಣೆ ತನಕ ಏಟು' ಎಂಬ ನಾಣ್ಣುಡಿಯೇ ಆದೆ. ವೇಳೆಗಾಗಿ ಜಿಲ್ಲಾಧಿಪರಾದ ರಾ| ದೀಕ್ಷಿತರವರು ಹಳಿಯಾಳದೊಳಗಿನ ಜೇನುಯ ಪ್ರದರ್ಶನವನ್ನು ತೆರೆಯುವಾಗ ಜಂಗಲ ದೂರುಗಳನ್ನು ತಮಗೆ ಮಾಮಲೇದಾರ-ಪ್ರಾಂತ ಸಾಹೇಬರವರ ವಿದ್ಯಮಾನ ಅರಿಕೆ ಮಾಡಿಕೊಂಡಲ್ಲಿ ಸಹಾನುಭೂತಿಯಿಂದ ವಿಚಾರವಾಗುವದಾಗಿ ಹೇಳಿದ್ದುಂಟು

⁂

ಜಂಗಲ ಅಧಿಕಾರಿಗಳು ಡಿಪೋ ಕಂಟ್ರಾಕ್ಟರರ ಇಚ್ಛೆಯನ್ನು ಪೂರ್ಣಗೊಳಿಸುವದಕ್ಕಾಗಿ ಮಾಲ್ಕಿ ಭೂಮಿಯೊಳಗಿನ ಕಟ್ಟಿಗೆಯ ಮಾರಾಟಕ್ಕೆ ಸಹ ಪ್ರತಿಬಂಧಿಸುತ್ತಾರೆಂದು ತಿಳಿಯುತ್ತದೆ ಮಾಲ್ಕಿ ಭೂಮಿಯೊಳಗಿನ ಕಟ್ಟಿಗೆಯನ್ನು ಜಂಗಲ ಕಾನೂನಿನ ನಿಯಮಗಳನ್ನು ಪಾಲಿಸಬೇಕಾದುದೇನೋ ನಿಜ ಆದರೆ ಈ ನಿಯಮಗಳಿಂದ ಮಾಲ್ಕಿದಾರನ ಒಡೆತನಕ್ಕೆ ನಿಯಂತ್ರಣ ಹಾಕಬಾರದು ಮಾಲ್ಕಿದಾರನು ತನ್ನ ಕಟ್ಟಿಗೆಯನ್ನು ಇಂಥಲ್ಲಿಯೇ ಮಾರಾಟ ಮಾಡಬೇಕು ಇಂಥಲ್ಲಿಯೇ ಮಾರಾಟ ಮಾಡಕೂಡದು, ಇಂಥವರಿಗೇ ಮಾರಾಟ ಮಾಡಬೇಕು, ಇಂಥವರಿಗೇ ಮಾರಾಟ ಮಾಡಕೂಡದು, ಎಂಬದಾಗಿ ನಿಯಂತ್ರಣ ಬರಬಾರದು ಮಾಲ್ಕೀದಾರನು ತನ್ನ ಕಟ್ಟಿಗೆಯು ಗೊಂದಲ ಮಾಡಿ ಜಂಗಲ ಖಾತೆಯ ಕಟ್ಟಿಗೆಯ ವಂಚನೆಗೆ ಇಂಬುಗೊಡಬಾರದೆಂದು ಆ ಕಟ್ಟಿಗೆಯ ವ್ಯವಸ್ಥೆಯ ದೆಸೆಯಿಂದ ಈ ನಿಯಮಗಳ ಏರ್ಪಾಟಾಗಿದೆ ಮಾಲ್ಕೀದಾರರ ಕಟ್ಟಿಗೆಯ ವ್ಯವಸ್ಥೆ ಜಂಗಲ ಅಧಿಕಾರಿಗಳ ತಿಳುವಳಿಕೆಯಿಂದ ನಡೆಯಬೇಕೆಂಬದೇ ಆ ನಿಯಮಗಳ ಉದ್ದೇಶ ಮಾಲ್ಕೀದಾರರ ಸ್ವಾತಂತ್ರ್ಯವನ್ನು ಅಪಹರಿಸುವದಕ್ಕಾಗಿ ಆ ನಿಯಮಗಳ ಏರ್ಪಾಟಾಗಿಲ್ಲ ಮಾಲ್ಕೀದಾರರಿಗೆ ತಮ್ಮ ಕಟ್ಟಿಗೆಯನ್ನು ಬೇಕಾದ ಕಡೆಯಲ್ಲಿ ಬೇಕಾದ ದರದಿಂದ ಬೇಕಾದವರಿಗೆ ಮಾರಾಟ ಮಾಡಲು ಸರ್ವಸ್ವಾತಂತ್ರ್ಯವಿದೆ ಅದಕ್ಕೆ ಜಂಗಲ ಅಧಿಕಾರಿಗಳು ಯಾವತ್ತೂ ಅನುಕೂಲತೆಗಳನ್ನು ಪೂರೈಸಿಕೊಡಬೇಕು ನಿರ್ಬಂಧಗಳನ್ನೊಡ್ಡಲು ಅವರಿಗೆ ಅಧಿಕಾರವಿಲ್ಲ ಕೂಪ ಕಂಟ್ರಾಕ್ಟರರಿಗೆ ಬೇಕಾದ ಹಾಗೆ ನಿರ್ಬಂಧಿಸಲು ಅವರಿಗೆ ಅಧಿಕಾರವುಂಟು ಯಾಕೆಂದರೆ ಜಂಗಲು ಜಂಗಲ ಖಾತೆಯವರದು, ಕೂಪ ಕಂಟ್ರಾಕ್ಟರರದಲ್ಲ ಜಂಗಲ ಅಧಿಕಾರಿಗಳು ವಿಚಾರ ಮಾಡಿ ಕಾಣದ—ಕೇಳದ ಪ್ರತಿಬಂಧಗಳನ್ನೇರ್ಪಡಿಸಿ ಜನಸಾಮಾನ್ಯರಿಗೆ ದಣಿಸಲಾಗದು

⁂

ಮಹಾತ್ಮರು ವರ್ಧಾದಲ್ಲಿ ಮಿತವ್ಯಯದ ಪ್ರಯೋಗಗಳನ್ನು ನಡಿಸುತ್ತಿದ್ದಾರೆ. ಕಳೆದ ಅಕ್ಟೋಬರ ೨೭ನೇ ತಾರೀಖಿಗೆ ಮಹಾತ್ಮರು ೯೮ ಮಂದಿ ಗ್ರಾಮಸೇವಕರಿಗೆ ಒಂದು ಔತಣ ಕೊಟ್ಟರು ಔತಣಕ್ಕೆ ರೂ ೯—೧೪—೩ ಖರ್ಚು ಬಂತು ತಕ್ಕ ಪಟ್ಟಿಗೆ ೧|| ಆಳಿಗೆ ಒಂದೊಂದು ಎಲೆ ಬಿತ್ತು ೨೩ ರತ್ತಲು ಗೋಧಿಹಿಟ್ಟು ೧೭ ರತ್ತಲು ಟೊಮಾಟೊ ೪ ರತ್ತಲು ಬೆಲ್ಲ ೨೫ ರತ್ತಲ ಸೋರೆಕಾಯಿ ½ ರತ್ತಲು ಅಗಸೆ ಎಣ್ಣೆ, ೨೭ ರತ್ತಲು ಹಾಲು, ೪ ರತ್ತಲು ಸೋಯಾ ಅವರೆ, ೪ ತೆಂಗಿನಕಾಯಿ ೧೬ ಕೋರೆ ಕಾಯಿ ಹುಣಸೆ ಹಣ್ಣು ಉಪ್ಪು ಉರುವಲ ಕಟ್ಟಿಗೆ ಕೂಡಿ ರೂ. ೯—೧೪-೩ ಇದರೊಳಗೆ ಗೋಧಿ, ಅಗಸೆಎಣ್ಣೆ ಹಾಲು ಕಟ್ಟಿಗೆ ಇವುಗಳಿಗೇ ರೂ ೬-೭-೦ ತಗಲಿದವು ರೊಟ್ಟಿ ಮಾಡದೆ ಗೋಧಿಯ ಗಂಜಿ ಮಾಡಿದ್ದಲ್ಲಿ ಕಡಿಮೆ ಶ್ರಮದೊಳಗೆ ಕೆಲಸವಾಗುತ್ತಿತ್ತು ಆದರೆ ರೊಟ್ಟಿ ಯಾನೆ ಒಕ್ಕರಿ ಮಾಡುವದರಿಂದ ಹಲ್ಲುಗಳಿಗೆ ವ್ಯಾಯಾಮ ದೊರಕುತ್ತದೆ ಒಕ್ಕರಿಗಳು ೧-೨ ದಿನ ತಡೆಯುತ್ತವೆ ಕಾಯಿಪಲ್ಲೆ ಊಟದಲ್ಲಿ ಇರಲೇಬೇಕು. ಜೀರ್ಣವಾಗಲಿಕ್ಕೆ ಅವುಗಳಿಂದ ಒಳ್ಳೇ ಅನುಕೂಲತೆಯುಂಟಾಗುತ್ತದೆ ಕೋರೆ ಹಣ್ಣಿನ ಪಲ್ಲೆಯಲ್ಲಿ ಬೆಲ್ಲ ಬೆರಿಸಿದರೆ ರುಚಿಯಾಗುತ್ತದೆ ಹುಣಸೆ ಪದಾರ್ಥಗಳಲ್ಲಿ ಉಪಯೋಗಿಸಬೇಕು ರಕ್ತಶುದ್ಧಿಗೆ ಇದರಷ್ಟು ಪರಿಣಾಮಕಾರಿ ಪದಾರ್ಥ ಬೇರೊಂದಿಲ್ಲ ಇದರೊಳಗೆ ಉತ್ಸಾಹವರ್ಧಕ ಗುಣವೂ ಇದೆ ಚಳಿಜ್ವರದ ಮೇಲೆ ಹುಣಸೆಹಣ್ಣಿನ ನೀರು ಕುಡಿಸಿದರೆ ಚಳಿಜ್ವರ ಇಳಿಯುತ್ತದೆ ಮಹಾತ್ಮರು ಈ ಪ್ರಯೋಗವನ್ನು ಆಶ್ರಮದವರೊಬ್ಬರ ಮೇಲೆ ಮಾಡಿ ನೋಡಿದ್ದಾರೆ ಮಲಬದ್ಧತೆಯ ವಿಕಾರಕ್ಕೂ ಇದರಿಂದ ಒಳ್ಳೇ ಪ್ರಯೋಜನವಾಗುತ್ತದೆ. ತುಪ್ಪ ಬಡಿಸಲಿಲ್ಲ ತುಪ್ಪದ ಆವಶ್ಯಕತೆಯಿಲ್ಲ ಸೋಯಾ ಅವರೆ-ಎಣ್ಣೆ ಇವುಗಳಿಂದ ದೇಹದ ಬೆಳವಣಿಗೆಗೆ ಅವಶ್ಯವುಳ್ಳ ನೆಣ ದೊರಕುತ್ತಿದ್ದಾಗ ತುಪ್ಪಕ್ಕಾಗಿ ಪೇಚಾಡುವದು ಯೋಗ್ಯವಲ್ಲ ಇದಲ್ಲದೆ ಒಳ್ಳೇ ತುಪ್ಪ ಸಿಗುವದು ದುರ್ಲಭ ಹಾಲು ಇಲ್ಲವೆ ಮಜ್ಜಿಗೆ ಇವು ಅತ್ಯವಶ್ಯವಾದವು ಕಾಯಿಪಲ್ಲೆಗಳ ನೆಣ ಮತ್ತು ಆಹಾರ ಸತ್ವಗಳನ್ನು ಜೀರ್ಣಗೊಳಿಸಲಿಕ್ಕೆ ಹಾಲು ಮಜ್ಜಿಗೆಗಳು ತೀರ ಅನುಕೂಲವಾದವು ತುಪ್ಪ ತಿನ್ನದಿದ್ದರೆ ಆರೋಗ್ಯಕ್ಕೆ ಕುಂದು ಒದಗುವದಿಲ್ಲ ಮಹಾತ್ಮರು ಈ ಪ್ರಯೋಗವನ್ನು ಇಬ್ಬ ಮಕ್ಕಳ ಮೇಲೆ ಮಾಡಿ ನೋಡಿದ್ದಾರೆ ಮಹಾತ್ಮರು ಈ ಪ್ರಯೋಗಗಳನ್ನು ಜನಸಾಮಾನ್ಯರಿಗಾಗಿ ಮಾಡುತ್ತಿದ್ದಾರೆ ಬಡಬಗ್ಗರು ಈಗಿನ ದುರಭ್ಯಾಸಗಳನ್ನು ತೊರೆದು ವಿಪತ್ತಿಗೆ ತಕ್ಕದ್ದಾಗಿ ತಮ್ಮ ಆಹಾರಕ್ರಮವನ್ನೂ, ಜೀವನಕ್ರಮವನ್ನೂ ಕಲ್ಪಿಸಬೇಕಾಗಿ ಸ್ವೋದಾಹರಣದಿಂದ ಮಹಾತ್ಮರು ತಿಳಿಸಿ ಹೇಳುತ್ತಿದ್ದಾರೆ ಗ್ರಾಮೋದ್ಧಾರ ಸಾಧಿಸುವವರು ಈ ಪ್ರಯೋಗಗಳಿಂದ ಅನುಭವ ಪಡೆದು ಅನಾವಶ್ಯಕ ಖರ್ಚನ್ನು ತಗ್ಗಿಸಬೇಕಾಗಿಯೂ, ಅವಶ್ಯವುಳ್ಳ ಖರ್ಚನ್ನು ಸ್ಥಳಿಕ ಜನರುಗಳಿಂದ ಪೂರೈಸಿಕೊಳ್ಳಬೇಕಾಗಿಯೂ ಮಹಾತ್ಮರು ದೇಶಬಾಂಧವರಿಗೆ ತಿಳಿಸಿ ಹೇಳುತ್ತಿದ್ದಾರೆ ಸರಕಾರಿ ಗ್ರಾಮೋದ್ಧಾರಕ ಪುರಸ್ಕರ್ತರೆಲ್ಲರೂ ಈ ದೃಷ್ಟಿ ಹಿಡಿದು ಗ್ರಾಮೋದ್ಧಾರ ನಡಿಸಿದ್ದಲ್ಲಿ ಲೋಕಹಿತವಾಗುವಂತಿದೆ

⁂

ಎಲ್ಲೆಲ್ಲಿಯೂ ಕನ್ಯಾಪಿತೃಗಳಿಗೆ ಕಷ್ಟ! ವಧುಗಳಿಗೆ ಯೋಗ್ಯರಾದ ವರರು ಸಿಗುವದು ಮಹಾದುರ್ಲಭ! ಒಂದಾವರ್ತಿ ಸಿಕ್ಕಿದಾಗ್ಯೂ ವರರ ಒಪ್ಪಿಗೆಯಾಗುವದು ಮತ್ತೂ ದುರಾಪಾಸ್ತ ದಿನ ಹೋದ ಹಾಗೆ ಅವಿವಾಹಿತ ಸ್ತ್ರೀ-ಪುರುಷರ ಸಂಖ್ಯೆ ಬೆಳೆಯುತ್ತದೆ ಕರಾಚಿಯೊಳಗೆ ಈ ಉಪದ್ರವವನ್ನು ಪರಿಹರಿಸುವದಕ್ಕಾಗಿ ಡಾ| ಹಿಂಗೋರಾಣಿ ಎಂಬ ಕರಾಚಿ ಮ್ಯುನಿಸಿಪಾಲಿಟಿಯ ಸಭಾಸದರೊಬ್ಬರು ಅವಿವಾಹಿತ ಪುರುಷರ ಮೇಲೆ ತೆರಿಗೆಯನ್ನು ಹೇರಬೇಕಾಗಿ ಒಂದು ಸೂಚನೆ ತಂದಿದ್ದಾರೆ ತಿಂಗಳಿಗೆ ರೂ ೧೦೦ಕ್ಕೆ ಮೇಲ್ಪಟ್ಟು ಸಂಬಳವಿದ್ದ ೩೫ ರಿಂದ ೪೦ ವರ್ಷಗಳವರೆಗಿನ ಪುರುಷರು ತಮ್ಮ ಉತ್ಪನ್ನದ ಚತುರ್ಥಾಂಶವನ್ನು ತೆರಿಗೆ ತೆರಬೇಕಾಗಿ ಡಾ|ಹಿಂಗೋರಾಣಿಯವರ ಸೂಚನೆ ವಿವಾಹವು ಸಹಜ ಸ್ಥಿತಿ ಎಂಬ ಸಂಗತಿಯನ್ನು

(ಮುಂದೆ ೧೦ನೇ ಪಾನು ನೋಡಿರಿ)

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ !!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೭ರಂತೆ ಬಡ್ಡಿಯಿದೆ ಇನ್‌ಕಮ್‌ಟೆಕ್ಸ ಮಾಫಿ ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ ಖಾಯಿಸ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ತೆ— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

ಬ್ರಿಟಿಶರ ಮನೋನಿಶ್ಚಯವಾಗಲಿಕ್ಕಿದೆ!

[ನಿರೀಕ್ಷಕನು ಬರೆದುದು.]

ಬ್ರಿಟಿಶರು ಇನ್ನೂ ಮನೋನಿಶ್ಚಯ ಮಾಡಿಲ್ಲ. ಸದ್ಯದಲ್ಲಿಯೇ ಮನೋನಿಶ್ಚಯಿಸುವ ಗರಿಕ್ಕಿದೆ. ಪುನಃ ಮಂಗಳವಾರ ರೋಮದೊಳಗಿನ ಬ್ರಿಟಿಶ ರಾಯಭಾರಿಗಳಾದ ಸರ್ ಎರಿಕ್ ಡ್ರಮಂಡರವರಿಗೂ, ಮುಸೊಲಿನಿಯವರಿಗೂ ಅಂತರಂಗದಿಂದ ಸಂಭಾಷಣ ನಡೆಯಿತು. ಲಿಬಿಯಾ ಪ್ರಾಂತದೊಳಗಿಂದ ಇತಾಲಿಯವರು ಸೈನ್ಯಪಥಕವನ್ನು ಹಿಂಗರೆದುಕೊಳ್ಳಬೇಕೆಂಬ ಡ್ರಮಂಡರ ಈ ಸಂಭಾಷಣದ ಉದ್ದೇಶ. ಅಲ್ಲಿನ ಸೈನ್ಯಪಥಕಗಳನ್ನು ಹಿಂಗರೆದುಕೊಂಡಲ್ಲಿ ಭೂಮಧ್ಯ ಸಮುದ್ರದೊಳಗಿನ ಯುದ್ಧ ಹಡಗುಗಳನ್ನು ತಾವು ಹಿಂಗರೆದುಕೊಳ್ಳುವದಾಗಿ ಡ್ರಮಂಡರವರು ಮುಂದಿಟ್ಟರು. ಆದರೆ ನಿರ್ಣಯವೇನಾಗಲಿಲ್ಲ. ಬ್ರಿಟಿಶ ಸಂಪುಟದ ಇಚ್ಛೆಯಂತೆ ಮಂಗಳವಾರ ಪುನಃ ಸಂಭಾಷಣ ನಡೆಯುವದಾಗಿ ಪ್ರಕಟವಾಗಿದೆ. ಇದರ ಅರ್ಥವೇನೆಂದರೆ — ಇಲ್ಲಿನ ಚುನಾವಣೆಯಲ್ಲಿ ಪುನಃ ಮಿ। ಬೋಲ್ಡ್‌ವಿನ್‌ರು ಅಧಿಕಾರಕ್ಕೆ ಬರುವ ತನಕ ಡ್ರಮಂಡರವರು ಅಂತರದಿಂದ ರಾಯಭಾರ ನಡಿಸಲಿಕ್ಕಿದ್ದಾರೆ. ಲಿಬಿಯಾ ದೇಶದೊಳಗಿಂದ ಸೈನ್ಯಪಥಕವೊಂದನ್ನು ಇತಾಲಿಯವರು ಈ ಹಿಂದೆಯೇ ಹಿಂಗರೆದುಕೊಂಡಿರುತ್ತಾರೆ. ಬ್ರಿಟಿಶರ ಮನಸ್ಸು ಒಲಿಸುವದಕ್ಕಾಗಿಯೇ ಅವನ್ನು ಮುಸೊಲಿನಿಯವರು ಹಿಂಗರೆದುಕೊಂಡಿದ್ದರೆಂದು ಆ ಕಾಲದಲ್ಲಿ ಅಭಿಪ್ರಾಯವಿತ್ತು. ಆದರೆ ಅದು ದಿಟವಿದ್ದಿಲ್ಲ. ಲಿಬಿಯಾ ದೇಶದಲ್ಲಿ ಸಿಂದ-ಅನ್ನ ಸಾಮಗ್ರಿಗಳ ಕೊರತೆಯಿದ್ದುದರಿಂದ ಮುಸೊಲಿನಿಯವರು ನಿರುಪಾಯರಾಗಿ ಆ ಪಥಕವನ್ನು ಹಿಂಗರೆದುಕೊಂಡಿದ್ದರು. ಬ್ರಿಟಿಶರ ಮನವೊಲಿಕೆಗಾಗಿ, ಸುಪ್ರಸನ್ನತೆಗಾಗಿ ಮುಸೊಲಿನಿಯವರು ಲಿಬಿಯಾ ದೇಶದೊಳಗಿನ ಸೈನ್ಯಬಲವನ್ನು ಕುಗ್ಗಿಸಲಿಚ್ಛಿಸಿದ್ದರೆ, ಡ್ರಮಂಡರವರು ಪುನಃ ಪುನಃ ರಾಯಭಾರ ನಡಿಸುವ ಪ್ರಸಂಗವಿರಲಿಲ್ಲ. ಲಿಬಿಯಾ ದೇಶದೊಳಗಿನ ಸೈನ್ಯಸಂಗ್ರಹದಿಂದ ಬ್ರಿಟಿಶ ಸಾಮ್ರಾಜ್ಯದ ಸುರಕ್ಷಿತತೆಗೆ ಭಂಗ ಬರುವಹಾಗಿಲ್ಲದಿದ್ದಲ್ಲಿ ಡ್ರಮಂಡರವರು ಪುನಃ ಪುನಃ ಮುಸೊಲಿನಿಯವರೊಡನೆ ರಾಯಭಾರ ನಡಿಸಲು ಉದ್ಯುಕ್ತರಾಗುತ್ತಿದ್ದಿಲ್ಲ. ಲಿಬಿಯಾ ಪ್ರಾಂತ ಇಜಿಪ್ತ ದೇಶದ ಪಶ್ಚಿಮ ಪಾರ್ಶ್ವದಲ್ಲಿದ್ದು ಆ ಪಾರ್ಶ್ವದಿಂದ ಇತಾಲಿಯವರು ಇಜಿಪ್ತದ ಮೇಲೆ ದಂಡೆತ್ತಿಕೊಂಡು ಬಂದರೆ ಇಜಿಪ್ತ ದೇಶವೂ, ಸುಯೇಜ ಕಾಲುವೆಯೂ ಸಂಕಟಕ್ಕೊಳಗಾಗಿ ಬ್ರಿಟಿಶ ಸಾಮ್ರಾಜ್ಯದ ನಡುಹಾದಿಯೇ ಕಟ್ಟಿಹೋಗುವದು. ಬ್ರಿಟಿಶರು ಇಜಿಪ್ತ ದೇಶದ ಸಂರಕ್ಷಣ ಮಾಡದಿದ್ದಲ್ಲಿ ಬ್ರಿಟಿಶರಿಗೆ ಸಂಕಟವಿದೆ. ಆದರಿಂದಲೇ ಕಳೆದ ಶನಿವಾರ ತಾ॥ ೯ನೇಗೆ ಲಂಡನ್ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಕೊಟ್ಟ ಮೇಜವಾನಿಯ ಸಮಯ ವಿದೇಶ ರಾಜಕಾರಣ ಇಲಾಖೆಯ ಪ್ರಧಾನರಾದ ಸರ್ ಸೆಮ್ಯುಅಲ್ ಹೋರರವರು ಇಜಿಪ್ತ ದೇಶಕ್ಕೆ ಕೊಡಮಾಡಿದ ಹೊಸ ರಾಜ್ಯಘಟನೆಯನ್ನು ಕೊಡಬಾರದಾಗಿ ಬ್ರಿಟಿಶ ಪ್ರಧಾನ ಮಂಡಳದ ನಿರ್ಣಯವಾಗಿರುವದಾಗಿ ಹೇಳಿದರು. ಈ ಪ್ರಕಟಣೆಯಿಂದ ಇಜಿಪ್ತ ದೇಶದೊಳಗಿನ ರಾಷ್ಟ್ರೀಯ ಪಕ್ಷದವರಲ್ಲಿ ಒಳ್ಳೇ ಕ್ಷೋಭವುಂಟಾಗಿ ಅವರ ಸ್ವಾತಂತ್ರ್ಯೋತ್ಸವದ ಸಮಯ ದೊಂಬಿಯಾದದ್ದು, ವಿದ್ಯಾರ್ಥಿಗಳೇ ಈ ದೊಂಬಿಯ ಮುಖ್ಯ ಪ್ರವರ್ತಕರು. ವಿದ್ಯಾರ್ಥಿಗಳು ಶಾಲೆಗಳನ್ನು ತ್ಯಜಿಸಿ ಸಂಪು ಮಾಡಿ ಸಾಮ್ರಾಜ್ಯ ಸರಕಾರದ ನಿಷೇಧ ಮಾಡಿದರು. ಬ್ರಿಟಿಶ ರಾಯಭಾರಿ ಕಚೇರಿಯ ಮೇಲೆ ಹಲ್ಲೆ ಮಾಡುತ್ತ ಸಾಗಿಹೋದರಾಗಿಯೂ, ಪೋಲೀಸರು ಆತ್ಮಸಂರಕ್ಷಣೆಗಾಗಿ ಗುಂಡು ಹಾರಿಸಬೇಕಾಯಿತಾಗಿಯೂ ೧೦೦ಕ್ಕೆ ಮಿಕ್ಕ ಜನರು ಘಾಯಪಟ್ಟವರಾಗಿಯೂ ಪ್ರಕಟವಾಗಿದೆ. "ಮತ್ಸರಗ್ರಸ್ತ ಇಟಲಿಯ ನೆರೆಹೊರೆಯಲ್ಲಿ ಇಜಿಪ್ತ ದೇಶಕ್ಕೆ ಸ್ವಾತಂತ್ರ್ಯ ಕೊಡುವದಕ್ಕೆ ಲಿಬಿಯಾ ಪಾರ್ಶ್ವದಿಂದ ಇತಾಲಿಯವರು ಇಜಿಪ್ತ ದೇಶದ ಮೇಲೆ ದಂಡೆತ್ತಿಕೊಂಡು ಬಂದರೆ ಅವರಿಗಿದಿರಾಗಿ ಸೋಲಿಸಿ ಓಡಿಸುವ ಸಾಮರ್ಥ್ಯ ಸ್ವತಂತ್ರವಾಗಬಯಸುವ ಇಜಿಪ್ತ ದೇಶದಲ್ಲಿಲ್ಲ. ಇಜಿಪ್ತ ದೇಶದವರು ಸ್ವತಂತ್ರರಾದರೆ ಇತಾಲಿಯವರಿಗೆ ಅಂಕಿತರಾಗುವ ಪ್ರಸಂಗ ಬರದಿರದು. ಅವರು ವಿಚಾರಹೀನರಾಗಿ ನಡಕೊಳ್ಳುವದು ನ್ಯಾಯವಲ್ಲ" ಎಂಬುದಾಗಿ ಮುಂಬಯಿ 'ಟೈಮ್ಸ' ಕರ್ತರು ಸಾಮ್ರಾಜ್ಯಕರ್ತರ ವಕೀಲಿ ನಡಿಸಿದ್ದಾರೆ. "ಮುಸೊಲಿನಿಯವರ ಪುಂಡಿನಿಂದ ಇಜಿಪ್ತ ದೇಶದ ರಕ್ಷಣೆಯ ಪುನರಾಲೋಚಿಸುವ ಪ್ರಸಂಗ ಬಂದಿದೆ. ಆ ಕುರಿತು ಇದೀಗಲೇ ವಿಚಾರ ಮಾಡಿ ನಿರ್ಣಯಿಸಬೇಕು. ಆದರಿಂದ ಒಂದು ನಿಶ್ಚಯವನ್ನು ಮಾಡಿಕೊಂಡು ಸಾಧಕ-ಬಾಧಕ ವಿಚಾರ ಮಾಡಿ ಧೋರಣ ನಿರ್ಣಯಿಸುವ. ಸಾಮ್ರಾಜ್ಯದ ಭದ್ರತೆಗೆ ಭಂಗ ಬರಕೂಡದು, ಇಜಿಪ್ತ ದೇಶಕ್ಕೆ ಸ್ವಾತಂತ್ರ್ಯ ಸಿಗಬೇಕು, ಈ ಪ್ರಕಾರ ವ್ಯವಸ್ಥೆ ಮಾಡುವ ಸಮಯ ಇದಲ್ಲ. ಅದಕ್ಕೆ ತಕ್ಕ ವಾತಾವರಣವು ಈಗಿಲ್ಲ" ಎಂಬುದಾಗಿ 'ಟೈಮ್ಸ' ಕರ್ತರು ವಾದಿಸುತ್ತಾರೆ. ತಾತ್ಪರ್ಯವೇನೆಂದರೆ — ಇಜಿಪ್ತ ದೇಶಕ್ಕೆ ಸ್ವರಾಜ್ಯಾಧಿಕಾರ ಕೊಡುವ ಆಲೋಚನೆ ಸಾಮ್ರಾಜ್ಯ ಸರಕಾರಕ್ಕಿಲ್ಲ! ಇತಾಲಿಗೆ ಬೊಟ್ಟು ತೋರಿಸಿ ಇತಾಲಿಯ ಬಾಯಿಗೆ ಬೀಳಬಾರದೆಂದು 'ಟೈಮ್ಸ'ಕರ್ತರು ಹೇಳಿ ಇಜಿಪ್ತ ದೇಶವನ್ನು ಸಾಮ್ರಾಜ್ಯವಾದಿ ಬ್ರಿಟಿಶರಿಗೆ ನುಂಗಗೊಡುತ್ತಾರೆ. ಇಜಿಪ್ತ ದೇಶದ ಸ್ವಾತಂತ್ರ್ಯ-ಪಾರತಂತ್ರ್ಯಗಳನ್ನು ನಾನು ವಿಚಾರಿಸಬಯಸುವದಿಲ್ಲ. ಆ ಗೊಡವೆಯೇ ನನಗೆ ಬೇಡ. ಬ್ರಿಟಿಶ-ಇತಾಲಿ ವಾದದ ಉಗ್ರಸ್ವರೂಪದ ಗ್ರಹಿಕೆಯಾಗಲೆಂದು ಆ ದೇಶದ ಸಂಬಂಧ ನಮೂದಿಸಿಟ್ಟಿದ್ದೇನೆ. ಹಬಶಿ ದೇಶದ ಪಾಲುಪಟ್ಟಿ ಈ ಹಿಂದೆಯೇ ಆಗಿರುವದಾಗಿ ಲಂಡನಿನೊಳಗಿನ ಪತ್ರಿಕೆಗಳಲ್ಲಿ ಪ್ರಕಟಗೊಂಡ ವಾರ್ತೆಯನ್ನು ನಾ ಓದಿದ್ದೆ. "ಟಿಗ್ರೇ ಪ್ರಾಂತವನ್ನು ಇತಾಲಿಯವರು ಇಟ್ಟುಕೊಳ್ಳಬೇಕು, ಟಾಂಝಾ ಸರೋವರದ ಪ್ರದೇಶ ಬ್ರಿಟಿಶರಿಗೆ ಅಂಕಿತವಾಗಿರಬೇಕು, ಹಬಶಿ ದೇಶದ ಉಳಿದ ಭಾಗವೆಲ್ಲ ಇತಾಲಿಯವರ ಅಧಿಕಾರಕ್ಕೊಳಪಟ್ಟಿದ್ದಿರಬೇಕು" ಎಂಬುದಾಗಿ ಇತಾಲಿ-ಬ್ರಿಟಿಶ ದೇಶಗಳೊಳಗೆ ಹಸಗಿ ಆಗಿರುವದಾಗಿ ಬ್ರಿಟಿಶ ಪತ್ರಿಕೆಗಳ ರಾಜಕೀಯ ಸುದ್ದಿಗಾರರು ಪ್ರಕಟಿಸಿದ್ದರು. ಈ ವಾರ್ತೆಯಲ್ಲಿ ನನಗೇನೂ ಹುರುಳು ಕಾಣುವದಿಲ್ಲ. ಬ್ರಿಟಿಶರಿಗೆ ಟಾಂಝಾ ಸರೋವರ — ಏಕೆ? ಇಡೀ ಹಬಶಿ ದೇಶ — ಸಿಕ್ಕರೂ ಬೇಡಾಗಿಲ್ಲ. ಲೋಕೋಪಕಾರಕ್ಕಾಗಿ ಅವರು ಬೇಕಷ್ಟು ದೇಶಗಳನ್ನು ಕೊಳ್ಳಲು ಸಿದ್ಧರಿದ್ದಾರೆ. ಮುಸೊಲಿನಿಯವರಂತು ನಾಚಿಕೆಯಿಲ್ಲದೆ ಹಬಶಿ ದೇಶವನ್ನು ಸುಧಾರಿಸಲು ಕಂಕಣಕಟ್ಟಿದ್ದಾರೆ. ಆದರೆ ಬಾದಶಹರಾದ ರಾಸ ತಫಾರಿಯವರಾಗಲಿ, ಹಬಶಿ ಜನರಾಗಲಿ ಸ್ವಾತಂತ್ರ್ಯ ಕಳಕೊಳ್ಳಲು ಎಷ್ಟಕ್ಕೂ ಸಿದ್ಧರಿಲ್ಲ. ಹೆಂಗಸೆಯರು ಸಹ ಸೈನಿಕರಂತೆ ಶಸ್ತ್ರಾಸ್ತ್ರಧಾರಿಗಳಾಗಿ ರಣರಂಗಕ್ಕೆ ಹೋಗುತ್ತಿದ್ದಾರೆಂದ ಬಳಿಕ ಆ ವೀರರು ಪಾರತಂತ್ರ್ಯಕ್ಕೊಳಗಾಗುವದುಂಟೇ? ಸಂಕಟ ಕಾಲದಲ್ಲಿ ಬ್ರಿಟಿಶರು ಬೆಂಬಲಿಗರಾಗಿದ್ದಾರೆಂದು ರಾಸ ತಫಾರಿಯವರು ಅವರಿಗೆ ಕೃತಜ್ಞರಾಗಿರಬಹುದು, ಆದರೆ ಅವರಿಗೆ ವಶರಾಗಲು ಅವರೆಷ್ಟಕ್ಕೂ ಒಪ್ಪರು. ಮೇಲಾಗಿ ಇತಾಲಿಯವರ ಮೇಲಂತು ಹಬಶಿ ಜನರಿಗೆ ಬದ್ಧ ದ್ವೇಷ. ಟಿಗ್ರೇ ಪ್ರಾಂತದ ಸೂಜಿಯ ಮೊನೆಯಷ್ಟು ಪ್ರದೇಶವನ್ನು ರಾಸ ತಫಾರಿಯವರು ಇತಾಲಿಯವರಿಗೊಪ್ಪಿಸಿದ್ದಲ್ಲಿ ಮರುಕ್ಷಣದಲ್ಲಿಯೇ ಅವರು ಪದಚ್ಯುತರಾಗುವ ಪ್ರಸಂಗವಿರುವದೆಂದು ಈ ಹಿಂದೆಯೇ ನಾನು ನಮೂದಿಸಿದ್ದೇನೆ. ಮತ್ತೊಂದು ಸಂಗತಿಯ ಮೇಲಿಂದಲೂ ಬಾದಶಹರ ಮನೋವೃತ್ತಿ ಕಾಣಬಹುದು. ಅಡೊವಾದಲ್ಲಿ ತಟಸ್ಥ ಪ್ರದೇಶವೊಂದನ್ನು ನಿರ್ಮಿಸಿ ಆ ಪ್ರದೇಶದ ಸುತ್ತುಮುತ್ತು ದೀಪಗಳನ್ನಿಟ್ಟು ಆಕಾಶ ಮಾರ್ಗದಿಂದ ಕಾಣುವಂತೆ ಏರ್ಪಡಿಸಬೇಕಾಗಿಯೂ ಇಲ್ಲಿ ಫ್ರೆಂಚರು ಆಶ್ರಯ ಹೊಂದುವರಾಗಿಯೂ ಫ್ರೆಂಚ ಸರಕಾರವು ಹಬಶಿ ಬಾದಶಹರ ಬಳಿ ಸೂಚಿಸಿತ್ತು. ಫ್ರೆಂಚ ಪ್ರಜೆಗಳೂ, ಫ್ರೆಂಚ ಸೈನಿಕರೂ ಈ ಭಾಗದಲ್ಲಿ ಇದ್ದು ತಮ್ಮ ಸಂರಕ್ಷಣ ನಿರ್ಮಿಸಿಕೊಳ್ಳಬಹುದು. ಆದರೆ ಬಾದಶಹರು ಎಣಿಸಿ ಆ ಪ್ರಕಾರದ ಆಜ್ಞೆ ಹೊರಡಿಸಲೊಪ್ಪಲಿಲ್ಲವಂತೆ! ಮತ್ತು ಇಂಥ ಪ್ರದೇಶ ನಿರ್ಮಿಸಿದ್ದಲ್ಲಿ ಅಡೋವಾ ಪಟ್ಟಣದ ಇತರ ಪ್ರದೇಶದಲ್ಲಿ ಇತಾಲಿಯವರಿಗೆ ಬಾಂಬು ಹಾರಿಸಲು ನಿಮಂತ್ರಣ ಕೊಟ್ಟಂತಾಗುವದಾಗಿಯೂ ಬಾದಶಹರು ಎಣಿಸಿ ಈ ಸೂಚನೆಯನ್ನು ಅಲ್ಲಗಳೆದಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಪಾಲುಪಟ್ಟಿಯ ಕಟ್ಟುಕಥೆಯಲ್ಲಿ ನನಗಂತು ನಂಬಿಗೆ ಹುಟ್ಟದು. ಪಾಲುಪಟ್ಟಿಯ ಸಂಗತಿ ದಿಟವಾಗಿದ್ದರೆ ಇತಾಲಿ-ಬ್ರಿಟಿಶ ವಾದಕ್ಕೆ ಉಗ್ರರೂಪ ಬರುತ್ತಿದ್ದಿಲ್ಲವಾಗಿ ನನ್ನ ಎಣಿಕೆ. ತರ್ಕಗಳನ್ನು ಮಾಡುತ್ತಿರುವದೇಕೆ? ಪಾರ್ಲಮೆಂಟಿನ ಇಲೆಕ್ಷನು ಇದೇ ೧೪ನೇ ತಾರೀಖಿಗೆ ಮುಗಿಯಿತು. ಮಿ। ಬೋಲ್ಡ್‌ವಿನ್‌ರವರು ಪುನಃ ಮುಖ್ಯ ಪ್ರಧಾನರಾಗುವರು. ಧೋರಣವು ಸದ್ಯದಲ್ಲಿಯೇ ಪ್ರಕಟವಾಗುವದು. ಬಹುತರವಾಗಿ ಡ್ರಮಂಡ-ಮುಸೊಲಿನಿಯವರ ಸಂಭಾಷಣವೇ ಇತಾಲಿ-ಬ್ರಿಟಿಶ ದೇಶಗಳೊಳಗಿನ ಸಂಬಂಧವನ್ನು ಸದ್ಯದಲ್ಲಿ ನಿರ್ಣಯಿಸುವದು. ಆದದರಿಂದ ಪೂರ್ವಾಪರ ಚರ್ಚೆಯನ್ನು ನಾನು ಇಂದಿಗೆ ಇಷ್ಟಕ್ಕೇ ಮುಗಿಸಿಬಿಡುವದು ಪ್ರಶಸ್ತ.

ಇತಾಲಿಯವರು ತಮ್ಮ ವಿಜಯದುಂದುಭಿಯನ್ನೇ ಮೊಳಗಿಸುತ್ತಿದ್ದಾರೆ. ಉತ್ತರ ಪಾರ್ಶ್ವದಲ್ಲಿ ಮಕಾಲೆ

ಅವರ ಕೈವಶವಾಯಿತು. ಅಲ್ಲಿಂದ ಪೂರ್ವ ದಿಕ್ಕಿಗೆ ೧೦ ಮೈಲು ಅಂತರದಲ್ಲಿರುವ ಡೋಲೋ ಪಟ್ಟಣ ಅವರ ಕೈವಶವಾಯಿತು. ಸೋಮವಾರ ಸಂಭ್ರಮದಿಂದ ಬೋನೋರವರು ನಗರಪ್ರವೇಶ ಮಾಡಿದರು. ಹರಾರ ಪಟ್ಟಣದ ಮೇಲೆ ಕೂಚುಮಾಡಲು ಇಟಾಲಿಯವರಿಗೆ ಇದರಿಂದ ಒಳ್ಳೇ ಅನುಕೂಲವಾಗುವದಂತೆ. ಆದರೆ ಹಬಸಿ ಜನರು ಎಲ್ಲೆಲ್ಲಿಯೂ ಈ ಪಾರ್ಶ್ವದಲ್ಲಿ ಹೋರಾಡಲಿಲ್ಲ. ಅವರಿಗೆ ಇದಿರಾಗುವದಕ್ಕಾಗಿ ಇಟಾಲಿಯವರು ಓಡುತ್ತಾರೆ. ಆದರೆ ಹಬಸಿ ಜನರು ಇವರಿಗಿಂತ ಶೀಘ್ರವಾಗಿ ಓಡಿ ಇಟಾಲಿಯರಿಗೆಲ್ಲಿಯೂ ಮೋರೆ ತೋರಿಸುವದಿಲ್ಲ. ಇದೇನು ವಿಚಿತ್ರವೆಂದು ರೋಮದೊಳಗೆ ಗಡಿಬಿಡಿ. ಹಬಸಿ ಬಾದಶಹರು ಮಕಾಲೆಯನ್ನು ರಕ್ಷಿಸಲೋಸುಗ ಸೈನಿಕರು ಯತ್ನಪಡಬಾರದಾಗಿಯೂ ಸಂಧಿ ಸಾಧಿಸಿ ಇಟಾಲಿಯವರಿಗೆ ದಣಿಸಿ ಹಣ್ಣಗೆ ತರಬೇಕಾಗಿಯೂ ರಾಜಾಜ್ಞೆ ಹೊರಡಿಸಿದ್ದರಂತೆ. ಅದರಿಂದ ಎಲ್ಲಿಯೂ ಇಟಾಲಿಯವರೊಡನೆ ಹಬಸಿ ಸೈನಿಕರು ಕಾದುವದಿಲ್ಲ. ಮುಂಬಯಿ 'ಟೈಮ್ಸ' ಪತ್ರಿಕೆಯ ರಣಕ್ಷೇತ್ರದ ಸಂಜಯನು ಇದೇ ಪ್ರಕಾರ ಅಭಿಪ್ರಾಯಪಡುತ್ತಾನೆ. ಅಂಬಾ ಅಲಾಜಿ ಗ್ರಾಮದ ಬಳಿ ೩೦ ಅಡಿ ಅಗಲವಾದ ಒಂದು ದೊಡ್ಡ ಕಂದರವಿದ್ದು ಆ ಕಂದರದ ಎರಡೂ ಪಕ್ಕಗಳಲ್ಲಿ ೧೦ ಸಾವಿರ ಅಡಿ ಎತ್ತರವಾದ ಪರ್ವತಗಳಿವೆ. ಅಲ್ಲಿ ಸಣ್ಣದೊಂದು ಮಾರ್ಗ ಮಾಡಿಕೊಂಡು ಇಟಾಲಿಯವರು ಈ ಪಾರ್ಶ್ವದಲ್ಲಿ ಒಂದೊಡನೆ ಸುತ್ತುಗಟ್ಟಬೇಕಾಗಿ ವ್ಯೂಹ ರಚಿಸಿದ್ದಾರೆ. ಬಾದಶಹರೇ ಈ ಗ್ರಾಮದಲ್ಲಿ ಸೇನಾಪತಿಗಳಾಗಿ ಬರುವರಂತೆ! ಅಡಿಸ ಅಬಾಬಾ ಪಟ್ಟಣದಿಂದ ಈ ಗ್ರಾಮಕ್ಕೆ ಬರಲು ೪೦ ದಿನಗಳು ಬೇಕು. ಹಬಸಿ ದೇಶದಲ್ಲಿ ಮಾರ್ಗಗಳ ಕೊರತೆ. ಎಲ್ಲಿಯೂ ಮಾರ್ಗವಿಲ್ಲ. ಇಟಾಲಿಯರಿಗೂ, ಹಬಸಿ ಜನರಿಗೂ ಇದೇ ದೊಡ್ಡ ಸಂಕಟ. ಹಬಸಿ ಜನರು ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಸ್ಫೋಟಕ ದ್ರವ್ಯಗಳಿಲ್ಲದೆ ಒಡೆಯುವ ನಮೂನೆ ಅಪ್ರತಿಮವಿದೆ. ಬಂಡೆಗಲ್ಲಿನ ಸುತ್ತುಮುತ್ತು ಬೆಂಕಿಮಾಡಿ ಬಂಡೆಗಲ್ಲು ಕಾದು ಕೆಂಡವಾದ ಬಳಿಕ ಅದರ ಮೇಲೆ ಉಪ್ಪು ನೀರು ಹಾಕುತ್ತಾರೆ. ಬಂಡೆಗಲ್ಲು ಈ ಕ್ರಮದಿಂದ ಹುಡಿಹುಡಿಯಾಗುತ್ತದೆ. ಈ ಪಾರ್ಶ್ವದಲ್ಲಿ ಇಟಾಲಿಯವರು ಪ್ರಚಂಡ ವಿಜಯಗಳನ್ನು ಸಂಪಾದಿಸಿದರೆಂಬ ವಾರ್ತೆ ಬರೇ ಪ್ರಚಾರದ್ದು. ವಿಮಾನುಗಳ ಹಲ್ಲೆಯಿಂದ ಹಬಸಿ ಜನರಿಗೆ ಏನೊಂದೂ ಭೀತಿಯಿಲ್ಲ. ಈ ಪ್ರಕಾರ ಇಟಾಲಿಯ ಸೈನ್ಯ ವಾರ್ತಾವಾಹಕರು ಸರಕಾರಕ್ಕೆ ಆಲೆಯಂಚೆಯಿಂದ ಕಳುಹಿದ ವಾರ್ತೆಯನ್ನು ಫಿಟೋರಾರಿ ಹೇಲ್ಮ ಎಂಬ ಇಟಾಲಿ ಭಾಷೆ ಬಲ್ಲಾದ ಹಬಸಿ ಅಧಿಕಾರಿಗಳು ಮಧ್ಯದಲ್ಲಿಯೇ ಅಡ್ಡಗಟ್ಟಿ ತಿಳಕೊಂಡರು. ವಿಮಾನುಗಳ ಮೇಲಿಂದ ಹಬಸಿ ದೇಶದೊಳಗಿನ ಸ್ಥಿತಿಯನ್ನು ತಿಳಕೊಳ್ಳಬರುವದಿಲ್ಲವಾಗಿಯೂ ಇಟಾಲಿ ಸರಕಾರಕ್ಕೆ ತಿಳಿಸೋಣಾಗಿದೆ. ಇಟಾಲಿ-ಎರಿಟ್ರಿ ಪ್ರದೇಶದೊಳಗಿನ ಪ್ರಜೆಗಳಾಗಲಿ, ಈಗ ಗದ್ದುಕೊಂಡ ಟಿಗ್ರೇ ಪ್ರದೇಶದೊಳಗಿನ ಹಬಸಿ ಜನರಾಗಲಿ ಇಟಾಲಿಗೆ ಅನುಕೂಲರೆಂಬ ಮಾತು ಸುಳ್ಳು. ಎರಿಟ್ರ ಮತ್ತು ಇಟಾಲಿ ಸೋಮಾಲಿ ಪ್ರಾಂತಗಳೊಳಗಿಂದ ಹಬಸಿ ಜನರು ಇಟಾಲಿಯ ಪ್ರಜಾಪೀಡನವನ್ನು ಸಹಿಸಲಾರದೆ ದೇಶಾಂತರ ಮಾಡುತ್ತಿದ್ದಾರೆ. ಡರೆಡೋವಾದಿಂದ ೨೦೦ ಮೈಲು ದೂರ ದನಕಾಲಿ ಪ್ರದೇಶದಲ್ಲಿ ಅಸಾಬಟ ಎಂಬ ಪರ್ವತವಿದೆ. ಇದು ಹಬಸಿ ದೇಶದೊಳಗೆ ಬಹು ಎತ್ತರವಾದ ಪ್ರದೇಶ. ಇದನ್ನು ವಶ ಮಾಡಿಕೊಂಡರೆ ಸುತ್ತುಮುತ್ತಲಿನ ದನಕಾಲಿ, ಔಸಾಸ ಚರ್ಚಸ ಮೊದಲಾದ ಪ್ರದೇಶವನ್ನು ಸುಲಭವಾಗಿ ಗೆದ್ದುಕೊಳ್ಳಬಹುದು. ಇಲ್ಲಿ ಪಾದ್ರಿಗಳ ವಾಸ್ತವ್ಯವಿದೆ. ಇಲ್ಲಿ ಹಬಸಿ ಸರಕಾರವು ೭೦೦ ತೋಫುಗಳನ್ನಿಟ್ಟು ಭದ್ರಪಡಿಸಿದೆ. ವಿಮಾನುಗಳಿಂದ ಈ ಪರ್ವತ ಪ್ರದೇಶದ ಮೇಲೆ ಇಟಾಲಿಯವರು ಸಾಗಿಹೋದರು. ಆದರೆ ಚನ್ನಾಗಿ ಪೆಟ್ಟು ತಿಂದು ಹಿಂಗಾಲಿನಿಂದ ಮರಳಿದರಾಗಿ ಲಂಡನಿನ 'ಡೇಲಿ ಮಿರರ' ಪತ್ರಿಕೆಯ ಸುದ್ದಿಗಾರರು ಪ್ರಕಟಿಸುತ್ತಾರೆ. ಕೋರಾಹೆ ಗ್ರಾಮದಲ್ಲಿ ಕೆಲ ಹಬಸಿ ಪಾಳೆಯಗಾರರಿಗೂ, ಇಟಾಲಿಯ ಸೈನಿಕರಿಗೂ ಹೋರಾಟ ನಡೆಯಿತ. ಅದರೊಳಗೆ ಇಟಾಲಿಯವರೇ ಸೋತು ಓಡಿಹೋದರಾಗಿಯೂ ೧೩ ತೋಫುಗಳನ್ನು ಹಬಸಿ ಜನರು ವಶಮಾಡಿಕೊಂಡರಾಗಿಯೂ 'ಡೇಲಿ ಮಿರರ' ಪತ್ರಿಕೆಯ ವಾರ್ತೆ. ಡೆಡಜಾಝು ಹೈಲೇ ಸಿಲಾಸಿ ಎಂಬ ರಾಸ ತಿಫಾರಿಯವರ ಅಳಿಯಂದಿರು ಸ್ವಾಮಿದ್ರೋಹ ಬಗೆದು ೩೦೦ ಮಂದಿ ಅನುಯಾಯಿಗಳೊಡನೆ ಇಟಾಲಿಯವರಿಗೆ ವಶರಾದ ವಾರ್ತೆ ನಿಜ. ಆದರೆ, ಇದೊಂದು ಸಂಗತಿಯ ಮೇಲಿಂದ ಹಬಸಿ ಬಹ ಜನಸಮಾಜವು ಸ್ವಾಮಿದ್ರೋಹಿಯೆಂದು ಬಗೆಯಕೂಡದು. ಡೆಜಾಝ್ಮುರವರಿಗೆ ಬುದ್ಧಿ ಕಡಿಮೆ! ೨೫-೨೬ ವರ್ಷದ ಎಳೆ ಹುಡುಗ! ವಿಲಾಸಿ ಪ್ರಾಣಿ! ಬಾದಶಹರ ಮಗಳು ಈ ಹಿಂದೆಯೇ ಬಾಣಂತಿಯಾಗಿ ತೀರಿಕೊಂಡಿದ್ದಾಳೆ. ಈತನಿಗೆ ಬಾದಶಹರು ರಾಸ ಸಿಯಾಮರವರಿಗೆ ಅಂಕಿತರಾಗಿ ಉಳಿಯಲು ಆಜ್ಞಾಪಿಸಿದ್ದರು. ಅದಕ್ಕವರು ಒಪ್ಪಲಿಲ್ಲ. ಸೇನಾಪತಿ ಬೋನೋರವರು ಇವರಿಗೆ ಲಂಚ ಕೊಟ್ಟು ಸ್ವಾಧೀನಪಡಿಸಿಕೊಂಡಿದ್ದಾರೆ. ಇವರ ಅನುಯಾಯಿಗಳೇ ಇವರಿಗೆ ಕೇಳುವದಿಲ್ಲ. ಒಬ್ಬರು ಇವರಿಗೆ ಗುಂಡು ಹಾಕಿ ಕೊಲ್ಲಲೆತ್ನಿಸಿದರು. ಪುಣ್ಯಕ್ಕೆ ಅವರು ತಪ್ಪಿದರು. ದಕ್ಷಿಣ ಪಾರ್ಶ್ವದ ಓಗಡೇನದಲ್ಲಿಯೂ ಇಟಾಲಿಯರು ಗೆದ್ದ ವಾರ್ತೆಯಿದೆ. ಸೋತ ವಾರ್ತೆಯಿದೆ. ಗೋರಾಹಿ ಗ್ರಾಮವನ್ನು ಇಟಾಲಿಯವರು ಕೈವಶ ಮಾಡಿಕೊಂಡರಾಗಿ ರೋಮದೊಳಗಿನ ವಾರ್ತೆ. ಓಗಡೇನ ಪ್ರಾಂತದ ಮುಖ್ಯಸ್ಥಾನವಿದು! ತೋಫು-ತುಬಾಕಿಗಳನ್ನೆಲ್ಲ ಬಿಟ್ಟು ಹಬಸಿ ಜನರು ತಿಕ್ಕ ಹಾದಿಯಿಂದ ಪಲಾಯನಮಾಡಿದರಂತೆ. ಡೆರೆಡೋವಾದೊಳಗಿನ 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಸುದ್ದಿಗಾರರ ವಾರ್ತೆಯೇ ಬೇರೆ — "ಹಬಸಿ ದೇಶದ ಗವ್ಹರ್ನರರು ಕೆಲ ದಿನಗಳ ಹಿಂದೆ ಇಲ್ಲಿ ಬಂದಿದ್ದರು. ೨ ಮೋಟಾರು ತುಂಬಿ ಇಟಾಲಿಯ ಶಸ್ತ್ರಾಸ್ತ್ರಗಳನ್ನೂ, ಮದ್ದು-ಗುಂಡುಗಳನ್ನೂ ಜೊತೆಗೆ ತಂದಿದ್ದರು. ಅಂಗರಕ್ಷಕರೆಲ್ಲರೂ ಇಟಾಲಿಯ ತುಬಾಕಿಗಳನ್ನು ಧರಿಸಿದ್ದರು, ಕಾಡತೂಸಗಳನ್ನು ತಂದಿದ್ದರು. ಇದರ ಮೇಲಿಂದ ಇಟಾಲಿಯವರಿಗಾದ ಅಪಜಯದ ಕಲ್ಪನೆಯಾಗುತ್ತದಾಗಿ ಅವರ ಅಂಬೋಣ. ಹಬಸಿ ಜನರು ಈ ಪಾರ್ಶ್ವದಲ್ಲಿ ಡಗಬರ ಗ್ರಾಮದ ಬಳಿ ನಿಕರದಿಂದ ಹೋರಾಡಿ ತೋಫುಗಳ ಅಗ್ನಿವೃಷ್ಟಿಗೆ ಹೆದರದೆ ಸಾಗಿಹೋಗಿ ಅನೇಕ ಶಸ್ತ್ರಾಸ್ತ್ರಗಳನ್ನೂ, ತುಬಾಕಿಗಳನ್ನೂ ಸ್ವಾಧೀನಪಡಿಸಿಕೊಂಡರು. ಇಟಾಲಿಯವರು ಜೀವದಾಸೆಗೆ ಪಲಾಯನ ಮಾಡಿದರಾಗಿ ಪ್ರಕಟವಾಗಿದೆ. ಓಗಡೇನ ಪಾರ್ಶ್ವದಲ್ಲಿ ನೀರಿನ ಕೊರತೆ ಬಹಳ. ಇದ್ದ ನೀರು ಕ್ರಿಮಿ-ಕೀಟಗಳಿಂದ ನಾರುತ್ತದೆ. ಹವೆ ಜ್ವರದ್ದು. ಅದರಿಂದ ನೂರಾರು ಸೈನಿಕರು ಅಸ್ವಸ್ಥ ಬೀಳುತ್ತಾರೆ. ವಾರಕ್ಕೆರಡು ಹಡಗ ತುಂಬಿ ಸೈನಿಕರು ಇಟಾಲಿಗೆ ರವಾನೆಯಾಗುತ್ತಿದ್ದಾರೆ. ಇದರಿಂದ ಮುಸೋಲಿನಿಯವರು ಸೇನಾಪತಿ ಬೋನೋರವರ ಮೇಲೆ ಮುನಿದಿದ್ದಾರಾಗಿಯೂ, ಅದರಿಂದ ಮಾರ್ಶಲ್ ಬೊಡೊಗ್ಲಿಯೋ ಎಂಬವರಿಗೆ ಹಬಸಿ ಯುದ್ಧ ಸೂತ್ರಗಳ ಸರ್ವಾಧಿಕಾರ ಕೊಟ್ಟು ಕಳುಹಿರುವರಾಗಿಯೂ, ಇಟಾಲಿಯ ನಿಜ ವಾರ್ತೆಗಳೆಲ್ಲಿ ದಿಬವಿದ್ದಲ್ಲಿ ಈ ಪ್ರಸಂಗವಿರಲಿಲ್ಲವಾಗಿಯೂ ಸುದ್ದಿಗಾರರ ಅಭಿಪ್ರಾಯ. ಸೇನಾಪತಿಗಳಾದ ಮಹೀದ ಪಾಶಾರವರು ನುಡಿದಂತೆ, ನೀರಿನ ಉಪದ್ರವ ತಾಳಲಾರದೆ ಇಟಾಲಿಯವರು ಸೋತು ಹೋಗಬೇಕು, ನೀರಿನ ಉಪದ್ರವ ನೋಡಿ ಹಬಸಿ ದೇಶದ ಮೇಲೆ ಇಟಾಲಿಯವರು ಬೇಸರಪಟ್ಟು ಹೋಗಬೇಕು! ಈಗ ಇಟಾಲಿಯವರು ಪರದೇಶದಿಂದ ನೀರು ತಂದು ನಿರ್ವಾಹ ಮಾಡುತ್ತಾರೆ. ಇದೇ ಪ್ರಕಾರ ಕೊನೆ ತನಕ ನಿರ್ವಾಹ ಮಾಡುವದಶಕ್ಯ. ಈ ಹಿಂದೆ ಹಬಸಿ ಜನರು ಕೈಕೊಂಡ ಯುದ್ಧಕ್ರಮವನ್ನೇ ಅವರು ಈಗಲೂ ಅನುಸರಿಸುತ್ತಿದ್ದಾರೆ. ಶತ್ರುಗಳಿಗೆ ಬೇಕಾದ ಹಾಗೆ ಒಳಪ್ರವೇಶ ಮಾಡಗೊಟ್ಟು, ಅನುಕೂಲ ಸಮಯ ಸ್ಥಳ ದೊರೆತೊಡನೆ ಶತ್ರುಗಳ ಮೇಲೆ ಸಾಗಿಹೋಗುವರು. ತಮಗೆ ಬೇಕಾದ ಸ್ಥಳದಲ್ಲಿಯೇ ಶತ್ರುಗಳು ಬಂದು ಸೇರುವಂತೆ ಅವರು ವ್ಯವಸ್ಥೆ ಮಾಡುತ್ತಾರೆ. ಅದರಿಂದ ಅಸ್ಮಾರಾ-ರೋಮ ಪಟ್ಟಣಗಳೊಳಗಿಂದ ಇಟಾಲಿಯ ಪರವಾಗಿ ಪ್ರಕಟವಾಗುವ ವಾರ್ತೆಗಳಲ್ಲಿ ನಾವು ನಂಬಿಗೆಯಿಡಲಾರೆ. ಓದುಗರೂ ನಂಬಿಗೆಯಿಡಲಾರರು.

ಇನ್ನು ಹಬಸಿ ಜನರು ಸಂಗ್ರಾಮದ ತಯಾರಿಯಲ್ಲಿಯೇ ತೊಡಗಿದ್ದಾರೆ. ಬ್ರಿಟಿಶ ದೇಶದಿಂದ ಮದ್ದುಗುಂಡ, ಶಸ್ತ್ರಾಸ್ತ್ರಗಳು ರವಾನೆಯಾಗುತ್ತಿವೆ. ಲೆಂಕೆಶಾಯರದ ಕಾರಖಾನೆಗಳಲ್ಲಿ ೨|| ಲಕ್ಷ ಸವನಿನ ಜವಳಿ ತಯಾರಿಸುವದಕ್ಕಾಗಿ ಹಬಸಿ ಸರಕಾರವು ಕೇಳಿಕೊಂಡಿದೆ. ಸೈನಿಕರಿಗಾಗಿ ಈ ಜವಳಿ ಬೇಕು. ಅಡೀಸ-ಅಬಾಬಾ ಪಟ್ಟಣದಲ್ಲಿ ತುಬಾಕಿ ಮದ್ದುಗುಂಡು, ಔಷಧ ಸಾಮುಗ್ರಿಗಳು ಹೇರಳವಾಗಿ ಆಮದಾಗುತ್ತಿವೆ. ತುಬಾಕಿಗಳು, ತೋಫುಗಳು ಕೆಟ್ಟುಹೋದಲ್ಲಿ ಅವನ್ನು ನೆಟ್ಟಗೆ ಮಾಡಲು ಆವಶ್ಯವುಳ್ಳ ಸಾಮುಗ್ರಿಗಳೂ ಆಮದಾಗಿವೆ. ಇದಲ್ಲದೆ ಸಾಗಬಂಡಿಯನ್ನು ಕಿತ್ತು ಹಾಕಿದಲ್ಲಿ ಅದನ್ನು ನೆಟ್ಟಗೆ ಮಾಡುವದಕ್ಕಾಗಿ ಸಕಲ ಸಾಹಿತ್ಯವುಳ್ಳ ಚರ ಅಂಗಡಿಗಳ ಸಾಮುಗ್ರಿಯೂ ಬಂದಿಳಿದಿದೆ. ಇಜಿಪ್ತ ಸರಕಾರದವರು ಟಾಣಾ ಸರೋವರದ ರಕ್ಷಣೆಗಾಗಿ ೨೫ ಸಾವಿರ ಸೈನ್ಯ ದಳವನ್ನು ಕಳಿಸುವವರಿದ್ದಾರೆ. ಇಜಿಪ್ತ ದೇಶದಿಂದ ೧೩೦ ಡಾಕ್ಟರರೂ, ದಾದಿಗಳೂ ೩ ಮೋಟಾರು ತುಂಬಿ ಔಷಧ ಸಾಮುಗ್ರಿಗಳ ಸಹಿತ ಅತ್ತ ಕಡೆ ಹೋಗಿದ್ದಾರೆ. ೫ ಲಕ್ಷ ಗ್ಯಾಸ ರಕ್ಷಣೆಯ ಕವಚಗಳು ಸದ್ಯಕ್ಕೆ ಬರಲಿಕ್ಕಿವೆ! ಬ್ರಿಟಿಶ ದೇಶದಿಂದ ಔಷಧ ಸಾಮುಗ್ರಿಗಳ ಸಹಿತ ಒಂದು ಶುಶ್ರೂಷಾ ಪಥಕವನ್ನು ಹಬಸಿ ದೇಶಕ್ಕೆ ಕಳುಹುವ ನಿರ್ಧಾರವಾಗಿದೆ. ಇಟಾಲಿಯವರು ತಮ್ಮ ತಯಾರಿಯನ್ನು ಭರದಿಂದ ನಡಿಸಿದ್ದಾರೆ. ಬಹಿಷ್ಕಾರದಿಂದ ಮುಂದೆ ಅಡಚಣೆಯಾಗಬಾರದೆಂದು ಇಜಿಪ್ತ ದೇಶದೊಳಗಿಂದ ಹತ್ತಿಯ ಖರೇದಿ

(ಮುಂದೆ ೧೧ನೇ ಪಾನು ನೋಡಿರಿ)

ಹಳಿಯಾಳದ

ದನಗಳ ಪ್ರದರ್ಶನ.

೨ನೇ ದಿನದ ವೃತ್ತಾಂತ.

ಸೋಮವಾರ ತಾ. ೪ಕ್ಕೆ ತಜ್ಞರ ವ್ಯಾಖ್ಯಾನಗಳ ಏರ್ಪಾಟು ಮಾಡಿತ್ತು. ಬೆಳಿಗ್ಗೆ ೯|| ಘಂಟೆಗೆ ಸಭೆ ಕೂಡಿತು. ಕಲೆಕ್ಟರ ಸಾಹೇಬರು ಅಧ್ಯಕ್ಷಸ್ಥಾನ ವಹಿಸಿದ್ದರು.

ಮೊಟ್ಟಮೊದಲು ಶೇತಕಿ ಖಾತೆಯ ಜಿಲ್ಲಾ ಓವರಸೀಯರರಾದ ರಾ| ಕುಲಕರ್ಣಿಯವರ ಭಾಷಣವಾಯಿತು. ಅವರು ಮಾಡಿದಬೋಧವೇನಂದರೆ:- ಕಬ್ಬಿಣದ ರೆಂಟೆಯನ್ನು ಉಪಯೋಗಿಸಿದರೆ ಮಾಕತ್ತದ ಲಾಭವಿದೆ. ಕಟ್ಟಿಗೆಯ ಕೊಪ್ಪರಿಗೆಯಿಂದ ಮಣ್ಣು ಬೇರಾದಲ್ಲಿ ಒಯ್ಯಬಹುದು. ಖರ್ಚು ಕಡಿಮೆ; ಕೆಲಸವೂ ಶೀಘ್ರವಾಗುತ್ತದೆ. ಹೊಲ ತಯಾರಾದ ಮೇಲೆ ಅದಕ್ಕೆ ಕಸವು ಕೊಳೆತ ಗೊಬ್ಬರ ಬೇಕು. ಗೊಬ್ಬರ ತಯಾರಿಸಲಿಕ್ಕೆ ಮನೆಯ ಹಿಂದೆ ತಗ್ಗು ಮಾಡಿ ತಿಪ್ಪೆಗಳನ್ನು ಮಾಡಬೇಕು. [illegible] ಪ್ರಯೋಜನ ಅಧಿಕವಿದೆ. [illegible] ಕೂಡಿಡಬೇಕು. ಕಗಣೆಯು ಕಡಿಮೆ ೩ ವರ್ಷ ಬಾಳುತ್ತದೆ. ಹವೆ ಮಳೆಗಳ ಮೇಲೆ ಅದರ ಕಸುವು ಅವಲಂಬಿಸಿದೆ. ಮಳೆ ಹೆಚ್ಚಾದರೆ ನೆಲತಕ್ಕೆ ಗೊಬ್ಬರ ಹರಿದು ಹೋಗುತ್ತದೆ. ಬೈಲು ಸೀಮೆಗಿಂತ ಮಲೆನಾಡಿನಲ್ಲಿ ರೋಗರಾಯ ಹೆಚ್ಚು; ದನಗಳು ಬಹಳ ಸಾಯುತ್ತವೆ. ಅವುಗಳ ಎಲುಬುಗಳನ್ನು ಸಂಗ್ರಹಿಸಿ ಪುಡಿ ಮಾಡಿದರೆ ಒಳ್ಳೆ ಗೊಬ್ಬರವಾಗುವದು. ಎಲುಬುಗಳನ್ನು ಪುಡಿ ಮಾಡಬೇಕು. ಎಮೋನಿಯಮ್ ಸಲ್ಫೇಟು ಸಹ ಒಳ್ಳೆ ಗೊಬ್ಬರ. ಆದರೆ ಅದು ವಿಶೇಷ ಮತ್ತು ಖರ್ಚಿನದು. ಎಲ್ಲರಿಗೂ ಸಾಧ್ಯವಿಲ್ಲ. ಶಕ್ಯವಿದ್ದವರು ಅದನ್ನು ಉಪಯೋಗಿಸಬಹುದು. ಅದು ಶೀಘ್ರ ಫಲಕಾರಿಯಾಗಿರುತ್ತದೆ. ಕೇವಲ ಕಗಣಿ ಸಿಗುವಲ್ಲಿ ಇಂಥ ಕೃತ್ರಿಮ ಗೊಬ್ಬರದ ಆವಶ್ಯಕತೆಯಿಲ್ಲ. ಗೊಬ್ಬರದಷ್ಟೇ ಬೀಜವೂ ಮಹತ್ವದ್ದಿದೆ. ಹೊಲಕ್ಕೆ ತಕ್ಕ ಬೀಜ ಹಾಕಬೇಕು. ಉತ್ತಮ ಗದ್ದೆಯಲ್ಲಿ ಬೀಜ ಬೆಳೆಸಿ ಸಂಗ್ರಹಿಸಬೇಕು. ಮಂಗಳೂರ ಫಾರ್ಮದಲ್ಲಿ ೬ ತರದ ಭತ್ತದ ಪ್ರಯೋಗ ನಡೆದಿವೆ. ಹಳಿಯಾಳ ತಾಲೂಕಿನಲ್ಲಿ ಸುಧಾರಿಸಿದ ಕೆಲ ಭತ್ತಗಳ ಪ್ರಚಾರಕ್ಕೆ ಬಹಳ ಅವಕಾಶವನ್ನು ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಸುಧಾರಿಸಿದ ಭತ್ತ ಉಪಯೋಗಿಸಿದಲ್ಲಿ ೧೦೦ಕ್ಕೆ ೧೧ರಷ್ಟು ಹೆಚ್ಚಿಗೆ ಉತ್ಪನ್ನ ದೊರೆಯಬಹುದು. ಭತ್ತದ ಪೈರಿಗೆ ಕಸ ಬಹಳ. ಜೋಳ ಮುಂತಾದ ಬೆಳವಣಿಗೆಗೆ ಕಸ ಕಡಿಮೆ; ಅನಾವಶ್ಯಕವಾದರೂ ಆದೀತು. ಭತ್ತಕ್ಕೆ ಗೊಣಜು, ಹಾಂಸರಗೆ ಮುಂತಾದ ಶತ್ರುಗಳುಂಟು. ಅವುಗಳ ಸಂಪರ್ಕವಿರದ ಬೀಜ ಕೊಡುವಂತಿದೆ. ಆದ್ದರಿಂದ ಉತ್ತಮ ಬೀಜ ಆರಿಸುವದು ಅವಶ್ಯ. ಈ ಬಗ್ಗೆ ಸುಧಾರಣಾ ಸಂಘದವರು ಪ್ರಯತ್ನ ಮಾಡುವರು. ಈ ಭಾಗದಲ್ಲಿ ತೋಟದ ಬೆಳೆಯನ್ನು ಹೆಚ್ಚಿಸಬೇಕಾಗಿದೆ. ಇಂಥ ಬೆಳೆಗಳನ್ನು ಬೆಳೆಸಬಹುದು. ಜಾನುವಾರ ಹತ್ತಿ ಬೆಳೆಸಬಹುದು. ಅಮೇರಿಕಾದ ಪ್ರಯೋಗಗಳು ನಡೆದಿವೆ. ಈಗ ಜಗತ್ತಿನಲ್ಲಿ ಎಣ್ಣೆಯ ಕಾಳುಗಳಿಗೆ ಬೇಡಿಕೆ ಬಹಳವಿದೆ, ಆದ್ದರಿಂದ ನೆಲಗಡ್ಲೆ, ಅಗಸಿ ಮುಂತಾದವುಗಳನ್ನು ಬೆಳೆಸಬಹುದು. ಈ ಎಲ್ಲ ಬೆಳೆಗಳಿಗೆ ದೊಡ್ಡ ಶತ್ರುವಿದ್ದಾನೆ. ಅವನು ಬೇರೆ ಯಾರೂ ಅಲ್ಲ; ಕಾಡುಹಂದಿಯು. ಹಂದಿ-ಕಾಟ ತಪ್ಪಿಸಲಿಕ್ಕೆ ಸಾಮುದಾಯಿಕ ಯತ್ನಗಳಾಗಬೇಕು. ಶಕ್ಯವಿದ್ದಲ್ಲಿ ಕಂತಿಯ ಬೇಲಿ ಹಾಕಬಹುದು. ಹಾಗೂ ಹಂದಿಕೊಲ್ಲ ಬೇಟೆ ಮಾಡಬೇಕು. ಧಾರವಾಡ ಜಿಲ್ಲೆಯಲ್ಲಿ ಕೆಲವು ಕಡೆ ಇಂಥ ಸಾಮುದಾಯಿಕ ಪ್ರಯತ್ನಗಳಿಂದ ಹಂದಿಗಳ ನಾಶ ಮಾಡಲಾಗಿದೆ. ಕೆನರಾ ಬಗ್ಗೆ ಗುಂಪುಗಳನ್ನು ಮಾಡಬೇಕು. ತೋಟದ ಭೂಮಿಗಳಲ್ಲಿ ಮಾವು, ಚಿಕ್ಕು, ಲಿಂಬೆ ಮುಂತಾದ ಗಿಡಗಳನ್ನು ನೆಡಬಹುದು. ಅವುಗಳಿಗೆ ಬರುವ ರೋಗಗಳನ್ನು ಗಂಧಕದ ಧೂಳಿ ಹಾರಿಸಿ ಪರಿಹರಿಸಬಹುದು. ಗೋರಕ್ಷಣ ಸಂಸ್ಥೆಯವರು ಮುಂದಾಗಿ ಈ ದಿಶೆಯಿಂದ ಮಾರ್ಗದರ್ಶಕರಾಗಬೇಕು.

ಆ ಮೇಲೆ ಇಲ್ಲಿಯ ನಾಗರಿಕರಾದ ರಾ| ಪಾಟೀಲರವರು ದನಗಳ ಸುಧಾರಣೆಯ ಅವಶ್ಯಕತೆಯನ್ನುದ್ದೇಶಿಸಿ ಹೇಳಿದ್ದೇನಂದರೆ:- ಹಿಂದುಸ್ಥಾನದಲ್ಲಿ ೧೦೦ಕ್ಕೆ ೮೦ ಜನರು ಶೇತ್ಕಿಯಿಂದ ಜೀವಿಸುತ್ತಾರೆ. ಶೇತಕಿಯನ್ನು ಶಾಸ್ತ್ರೀಯ ರೀತಿಯಿಂದ ಸುಧಾರಿಸತಕ್ಕದ್ದು. ವ್ಯಾಖ್ಯಾತರು ಬಾಳುಕೆಯ ದನಗಳ ಖಾನೇಸುಮಾರಿಯ ಅಂಕಿಗಳನ್ನು ಕೊಟ್ಟು, ಅವುಗಳಿಗೆ ಎಷ್ಟು ಮೇವು ಬೇಕು, ನಾವು ಎಷ್ಟು ಹಾಕುತ್ತೇವೆ? ಎಂಬುದನ್ನು ವಿವರಿಸಿ ಹೇಳಿ, ಕೊನೆಗೆ ಪ್ರತಿ ದನಕ್ಕೆ ೩-೪ ಎಕರೆ ಚರಾವು ಭೂಮಿ ಬೇಕು; ಸರಕಾರದಿಂದ ಚರಾವು ಭೂಮಿ ದೊರಕಿಸಲು ಯತ್ನ ಮಾಡಬೇಕು. ಸ್ತ್ರೈಲೇಯ ಪದ್ಧತಿಯಿಂದ ತಯಾರಿಸಿದ ಹುಲ್ಲು ಕೊಡಿರಿ. ಈ ಕಡೆ ಸೀಮೆ ಹಾಕಿ ಹುಲ್ಲು ಬೆಳೆಸುವದಿಲ್ಲ. ಅದ್ದರಿಂದ ಇಲ್ಲಿ ಇಡೀ ವರ್ಷ ಹಸಿರು ಮೇವು ಸಿಗುವದಿಲ್ಲ. ದನಗಳ ಸುಧಾರಣೆಯಾಗಬೇಕಾದರೆ ಅವುಗಳ ಜೋಪಾಸನೆ ಸರಿಯಾಗಬೇಕು. ಎಂದರೆ ಮಾತ್ರ ಹೈನದ ದನಗಳು ವಿಪುಲವಾಗಿ ನಮಗೆ ಹಾಲು, ತುಪ್ಪಗಳು ಸಿಗುವವು. ನಮ್ಮ ನಾಡಿನವರು ಪುಷ್ಟರಾಗುವರು ಎಂದು ನುಡಿದರು.

ತರುವಾಯ ಇಲ್ಲಿಯ ಕನ್ನಡ ಶಾಲೆಯ ಶಿಕ್ಷಕರಾದ ರಾ| ಗಿಂಡೆಯವರು ರೈತರ ಕಷ್ಟ-ತೊಂದರೆಗಳನ್ನು ತಿಳಿಸಿ ಹೇಳಿದರು. ಪ್ರಥಮ ಕಷ್ಟ ಹುಲ್ಲುಗಾವಲಿ ಭೂಮಿಯ ಕೊರತೆ. ಇದ್ದದ್ದರಿಂದ ದನಗಳು ಸೊರಗಿವೆ, ಹೋರಿಗಳನ್ನು ಹೊರಗಿನಿಂದ ತರಬೇಕಾಗಿದೆ! ಮುಂಚೆ ಬೆಟ್ಟದಲ್ಲಿ ಗಿಡಗಳು ಬೆಳೆಯುತ್ತಿದ್ದವು. ಆದರೆ ಈಗ ಗುತ್ತಿಗೆದಾರರು, ದನಗಳ ಅಗ್ಗದಲ್ಲಿ ಸಿಗುತ್ತಿದ್ದವು. ನಾಗ್ವಳಿಯೂ ಸುಲಭವಾಗುತ್ತಿತ್ತು. ಜನರು ಮಾತೆಯ ತಾಪ ಸಹಿಸದೆ ಈ ಗಿಡಗಳು ದೇಶಾಂತರ ಮಾಡಿದ್ದಾರೆ. ಜನರಿಗೆ ಈಗ ಹಾಲು-ಮೊಸರುಗಳು ದುರ್ಲಭವಾಗಿವೆ. ಒಕ್ಕಲಿಗರಿಗಂತೂ ಅವು ಕಣ್ಣಿಗೆ ಬೀಳುವದು ಸಹ ಕಠಿಣ. ಅಂಥ ಬಗೆಯ ನಮಗೆ ಶಕ್ತಿಯೆಲ್ಲಿಂದ ಬರಬೇಕು? ಇನ್ನು ಈ ಸ್ಥಿತಿ ಮುಂದುವರಿದರೆ ಮುಂದೆ ನಮ್ಮ ಗತಿಯೇನು? ನಮ್ಮ ಪ್ರಕೃತಿ ಕೆಟ್ಟಿದೆ. ಬೆಟ್ಟ ಮನೆ ಬಾಗಿಲಿಗೆ ಬಂದು ಮುಟ್ಟಿದೆ. ನಿಜವಾಗಿ ಬೆಟ್ಟವು ಊರಿಂದ ೧ ಮೈಲಾದರೂ ದೂರವಿರಬೇಕು. ರೈತರಿಗೆ ಯೋಗ್ಯ ಕಾಲದಲ್ಲಿ ಕಟ್ಟಿಗೆ ದೊರೆಯುವದಿಲ್ಲ. ಬಿತ್ತುವ ಹಂಗಾಮಿನಲ್ಲಿ ಕಟ್ಟಿಗೆ ಸಿಗುತ್ತದೆ. ಹೊಲ ಬಿತ್ತಬೇಕೋ? ಕಟ್ಟಿಗೆ ತರಲಿಕ್ಕೆ ಹೋಗಬೇಕೋ? ಕಟ್ಟಿಗೆ ಇಲ್ಲದ್ದರಿಂದ ರೈತರು ಕೆ [illegible] ಕುಳ್ಳನ್ನು ಸುಡುತ್ತಾರೆ. ಹೀಗಾಗಿ ಬಹಳ ಗೊಬ್ಬರ ಹಾಳಾಗುತ್ತದೆ. ಕೃತ್ರಿಮ ಗೊಬ್ಬರ ಕೊಳ್ಳಲಿಕ್ಕೆ ಶಕ್ತಿಯಿಲ್ಲ. ಅಂತೂ ಎಲ್ಲ ತರದಿಂದ ರೈತರಿಗೆ ಕಷ್ಟ! ಇದೇ ಮಾತು ಗೌಳಿಗರದು. ಬೇಲಿಗೆ ಗಳು (ಸಿಬು) ಬೇಕು. ಅವುಗಳ ಬಗ್ಗೆ ಪರವಾನಿಗಿ ಕೊಡುವ ಕ್ರಮ ತೀರ ವಿಚಿತ್ರ! ಎಲ್ಲಿ ಅವು ಇರುವದಿಲ್ಲವೋ ಅಲ್ಲಿ ಪರವಾನಗಿ ಕೊಡಲ್ಪಡುತ್ತಿದೆ. ಅಥವಾ ಬಹು ದೂರವಿರುವ ಬೆಟ್ಟದಲ್ಲಿ ಕಡಿಯಲಿಕ್ಕೆ ಅಪ್ಪಣೆ ಸಿಗುತ್ತದೆ! ಕಾಗದ-ಪತ್ರಗಳಲ್ಲಿ ಪಂಪಿಲಾಟುಗಳು ಬಹಳ. ಆದರೆ ಸೀಬು ಸಿಗುವದು ದುರ್ಲಭ! ಹೀಗೆ ರೈತರೂ, ಜಮೀನದಾರರೂ ಕಷ್ಟ ಅನುಭವಿಸುತ್ತಿರುವಾಗ ಚಳಿಜ್ವರ ಬರುತ್ತದೆ! ಬದುಕಿ ಉಳಿಯುವದು ಕಷ್ಟ! ದೇಶಾಂತರಕ್ಕೆ ಹೋಗುವದು ಒಳಿತೆಂದು ತೋರುತ್ತಿದೆ. ರೈತರ ಕಷ್ಟಗಳನ್ನು ಬಣ್ಣಿಸುವಾಗ ಕಠೋರ ಶಬ್ದಗಳನ್ನು ಆಡಿರಬಹುದು. ಉಪಾಯವಿಲ್ಲ. ಆ ಬಗ್ಗೆ ಕ್ಷಮಿಸಬೇಕು. ಕಲೆಕ್ಟರು ಸದಯಅಂತಃಕರಣದಿಂದ ವಿಚಾರ ಮಾಡಿ ಕಷ್ಟಪರಿಹಾರ ಮಾಡುತ್ತಾರೆಂದು ನಂಬಿದ್ದೇನೆ.

ಆ ನಂತರ ಇಲ್ಲಿಯ ಲೋಕಪ್ರಿಯ ಪಶುರೋಗ ಚಿಕಿತ್ಸಕರಾದ ರಾ| ವೀಸಾಪೂರವರ ಭಾಷಣವಾಯಿತು. ದನಗಳ ಸ್ಥಿತಿ ತೀರ ಕೆಟ್ಟಿದೆ. ಅವುಗಳನ್ನು ಸುಧಾರಿಸಲು ಮಾಡಬೇಕಾದ ಕ್ರಮ, ಕೊಟ್ಟಿಗೆಗಳ ವ್ಯವಸ್ಥೆ ಮುಂತಾದವುಗಳನ್ನು ವಿವರಿಸಿ, ಅವರು ನುಡಿದದ್ದೇನಂದರೆ:- "ನಮ್ಮ ಜೀವನ ದನಗಳ ಮೇಲೆ ಅವಲಂಬಿಸಿದೆ. ಅವುಗಳ ಆರೋಗ್ಯಪಾಲನೆಯು ನಮ್ಮ ಕರ್ತವ್ಯವಿದೆ. ದನಗಳ ಕೊಟ್ಟಿಗೆಗಳನ್ನು ಹಾಂಬರ, ಹುಲ್ಲುಗಳಿಂದ ಸ್ವಚ್ಛವಿಡಬೇಕು. ಅಂದರೆ ದನಗಳಿಗೆ ಕ್ರಿಮಿ-ಕೀಟಗಳ ಬಾಧೆಯಾಗದು. ಕೊಟ್ಟಿಗೆಗಳಲ್ಲಿ ಶುದ್ಧ ಹವೆ ಸಿಗುವಂತೆ ಮಾಡಬೇಕು. ಸಾಕಷ್ಟು ಮೇವಿಲ್ಲದೆ ದನಗಳು ಬೇಸಿಗೆಯಲ್ಲಿ ಕ್ಷೀಣವಾಗುತ್ತಿವೆ, ಸಾಯುತ್ತಿವೆ. ಮಳೆಗಾಲದಲ್ಲಿ ಗೊಳೆ-ಹುಚ್ಚು ರೋಗ ಹುಟ್ಟುತ್ತದೆ. ಅದಕ್ಕೆ ಮುಂಚಿತವಾಗಿ ಚುಚ್ಚಿಸುವದು ಒಳಿತು. ಈ ರೋಗಗಳ ಮೇಲೆ ಉತ್ತಮ ತರದ "ಸೀರಂ" ತಯಾರಾಗಿದೆ. "ಘಟಸರ್ಪ" ರೋಗದ ಮೇಲೂ "ಸೀರಂ" ತಯಾರಾಗಿದೆ. ಕಾರಣ ಇಂಥ ರೋಗಗಳು ಬರುವ ಲಕ್ಷಣ ಕಂಡ ಕೂಡಲೇ ಜನರು ಡಾಕ್ಟರರ ಕರತಂದು ದನಗಳಿಗೆ ಚುಚ್ಚಿಸಬೇಕು. ಪ್ಯಾಟಿಬೇನೆಯು ದೈವಿಕ ಉಪದ್ರವವೆಂದು ತಿಳಿದು ಸುಮ್ಮಗುಳಿಯಬಾರದು. ಅದರಿಂದ ಕೇಡಾಗುತ್ತದೆ. ದನಗಳಿಗೆ ನಿಯಮಿತ ಮೇವು, ತಿನಸುಗಳನ್ನು ಹಾಕಬೇಕು. ಪ್ರತಿನಿತ್ಯ ಒಂದು ಎರಡು ತೊಲೆ ಉಪ್ಪು ತಿನಸಿನಲ್ಲಿ ಬೆರಸಿ ಕೊಡಬೇಕು. ದಿನಾಲು ಮೂರು ವೇಳೆ ಶುದ್ಧ ನೀರು ಕುಡಿಸಬೇಕು. ಹೀಗೆ ಲಕ್ಷ್ಯಗೊಟ್ಟು ವ್ಯವಸ್ಥೆ ಮಾಡಿದರೆ ದನಗಳಿಗೆ ಸುಖವಾಗುವದು. ರೈತರು ಬೇಸಿಗೆಯಲ್ಲಿ ೬ ತಿಂಗಳು ನಿರುಪಯೋಗಿಗಳಿರುತ್ತಾರೆ. ಅವರಾದರೂ ಉಪಧಂದೆ ಮಾಡುವದುತ್ತಮ. ಕೋಳಿಗಳನ್ನು ಸಾಕಬಹುದು. ಫ್ರೆಂಚ ಜನರು ಹೀಗೆ ಮಾಡುತ್ತಾರೆ. ದೇಸೀ ಕೋಳಿಗಳು ವರುಷಕ್ಕೆ ೫೦—೬೦ ತತ್ತಿಗಳನ್ನು ಇಡುತ್ತವೆ. ಸುಧಾರಿಸಿದ ಕೋಳಿಗಳು ೧೫೦ರ ವರೆಗೆ ತತ್ತಿ ಇಡುವವು. ತತ್ತಿ ೧ಕ್ಕೆ ಮುಕ್ಕಾಲು ಆಣೆಯಿಂದ ೧ ಆಣೆ ವರೆಗೆ ಬೆಲೆ ಸಿಗುತ್ತದೆ. ಕಷ್ಟವಿಲ್ಲದವರು ಈ ಧಂದೆ ಮಾಡಬಹುದು. ಗ್ರಾಮ-ಸುಧಾರಣೆ ಸಂಘದವರು ಸಹಾಯ ಮಾಡುವರು. ಇಲ್ಲಿ ಚಲೋ ಹೋರಿ ತರಿಸಬೇಕಾಗಿ ಗೋರಕ್ಷಣ ಸಂಸ್ಥೆಯವರು ಪ್ರಯತ್ನ ನಡಿಸಿದ್ದರು. ಯಾಂಗಿ ಜಾತಿಯ ಹೋರಿ ಇಲ್ಲಿ ಉತ್ತಮವೆಂದು ಪಶು-ಖಾತೆಯ ಅಸಿಸ್ಟಂಟರಾದ ರಾ| ಅಂಗಡಿಯವರು ಭಾಷಣ ಮಾಡಿದ್ದರು ೩೫—೪೦ ರೂ.ಗಳಲ್ಲಿ ಹೋರಿ ಸಿಕ್ಕುತ್ತದೆಂದು ತಿಳಿಸಿದ್ದರು. ಪ್ರಸಕ್ತ ಮೇಲಧಿಕಾರಿಗಳಿಗೆ ಕೇಳಿದರೆ ರೂ. ೨೫೦-೩೦೦ ಬೆಲೆಯದೆಂದು ತಿಳಿಸಿದರು! ದನಗಳ ಮುಂದಿನ ತಳಿ ಸುಧಾರಿಸಬೇಕಾದರೆ ಬೀಜದ ಹೋರಿ ಪೂರೈಸಿದ್ದು ಇರಬೇಕು. ಅದರಿಂದ ಲಾಭವಾಗುವದು. ಈಗ ಹಳ್ಳಿಯಲ್ಲಿ ತಂದು ಹೊಡೆಯುವ ಪದ್ಧತಿ ನಡೆಯುತ್ತಿದೆ. ದನಗಳಿಗೆ ಅದರಿಂದ ಬಹಳ ಕಷ್ಟವಾಗುತ್ತದೆ. ಸುಧಾರಿಸಿದ ಹತ್ಯಾರುಗಳಿಂದ ಕಸಿ ಮಾಡುವದು ಚಲೋದು. ದನಗಳಿಗೆ ಕಷ್ಟವಾಗುವದಿಲ್ಲ. ಬೇಗನೆ ಗುಣವಾಗುತ್ತದೆ. (ಮುಂಬರಿದ ರಾ| ವೀಸಾಪೂರವರು ಹೊಸ ತರದ ಸಾಹಿತ್ಯಗಳಿಂದ ಹೋರಿಗಳನ್ನು ಕಸಿ ಮಾಡುವ ಪ್ರಯೋಗ ಮಾಡಿ ತೋರಿಸಿದರು. ಈ ಪದ್ಧತಿಯು ಇಷ್ಟವೆಂದು ಜನರೂ ಮನಗಂಡರು).

ರಾ| ವೀಸಾಪೂರವರ ಹಿಂದಿನಿಂದ ಪ್ಲೀಡರರಾದ [illegible] ರಾ| ಕುಲಕರ್ಣಿಯವರು ಮಾತಾಡಿದರು. ಅವರು ಅಂದದ್ದು:- ಸಾಕಷ್ಟು ಮೇವು ಇಲ್ಲದೆ ದನಗಳು ಸಾಯುತ್ತವೆ. ರೋಗಗಳಿಂದ ಸಾಯುತ್ತವೆಂದು ನಾವು ತಿಳಿಯುತ್ತೇವೆ. ನಿಜವಾಗಿ ಅವು ಆಹಾರ ಸಿಗದೆ ಸಾಯುತ್ತವೆಂದು ತಿಳಿಯತಕ್ಕದ್ದು. ಶಕ್ಯವಿದ್ದಮಟ್ಟಿಗೆ ಮೇವಿನ ಸಂಗ್ರಹ ಮಾಡಿ ದನಗಳನ್ನು ಕಾಪಾಡಿಕೊಳ್ಳಿರಿ. ಇತ್ತ ಕಡೆಗೆ ಬೇಸಿಗೆಯಲ್ಲಿ ದನಗಳು ಸಾಯುವದು ಹೆಚ್ಚು; ಕಾರಣ ಮಳೆಗಾಲದಲ್ಲೇ ಮೇವು ಸಂಗ್ರಹಿಸಿಡಬೇಕು; ಮುಂದೆ ತೊಂದರೆಯಾಗದು. ಯುರೋಪದಲ್ಲಿ ದನಗಳ ಆರೈಕೆ ಚೆನ್ನಾಗಿ ಮಾಡುತ್ತಾರೆಂದು ಅಧ್ಯಕ್ಷರು ಹೇಳಿದ್ದು ಅಕ್ಷರಶಃ ನಿಜವಿದೆ. ಬ್ರಿಟಿಷ ದೇಶದವರು ನಮ್ಮ ದೇಶದಿಂದ ಎಲುಬುಗಳನ್ನು ಒಯ್ದು ತಮ್ಮ ದೇಶದ ದನಗಳನ್ನು ಸುಧಾರಿಸಿಕೊಂ

ಹಿದ್ದುರೆಂಬುವನ್ನು ತೊರೆಯಬೇಕು ಹೊಸ ಕಾಲಕ್ಕೆ ಅನುಕೂಲವಾಗಿ ಅವರು ನಡೆವದ್ದೇ ಇದಕ್ಕೆ ಕಾರಣ ಎಂದು ಹೇಳಿ ಭಾಷಣ ಮುಗಿಸಿದರು.

ತರುವಾಯ ಹಿಂದೆ ಹಳಿಯಾಳ ನಗರ ಸಭೆಯ ಅಧ್ಯಕ್ಷರಾಗಿರುತ್ತಿದ್ದ ರಾ| ಕುಮಾರ ಭಟ್ಟರವರು ಎದ್ದು ನಿಂತು, ಅಧ್ಯಕ್ಷರ ಹಾಗೂ ಬೇರೆ ಬೇರೆ ವ್ಯಾಖ್ಯಾನಕಾರರ ಆಭಾರ ಮನ್ನಿಸಿ, ಅವರು ಹೇಳಿದ್ದೇನಂದರೆ:— ಹಳಿಯಾಳ ತಾಲೂಕಿನ ಉದ್ಧಾರವಾಗಬೇಕಾದರೆ ನಾವು ಧಾರ್ಮಿಕ ಭಾವನೆಗಳನ್ನು ಬದಲಿಸಬೇಕು. ಒಕ್ಕಲತನವು ಶ್ರೇಷ್ಟವಾಗುವಂತೆ ಮಾಡಬೇಕು. ಈಗ ನಾವು ಭತ್ತದ ಬೆಳೆಯ ಮೇಲೆಯೇ ಅವಲಂಬಿಸಿದ್ದೇವೆ. ಮೊದಲು ಅಂದಾಜು ನೂರು ಇಂಚು ಮಳೆಯಾಗುತ್ತಿತ್ತು; ಈಗ ೪೦ ಇಂಚು ಬೀಳುತ್ತದೆ ಆದ್ದರಿಂದ ನಾವು ಕಾಲಸ್ಥಿತಿಗನುಸಾರವಾಗಿ ಹೊಸ ಹೊಸ ಬೆಳೆಗಳನ್ನು ನಾವು ಬೆಳೆಸಿ ನೋಡಬೇಕಾಗಿದೆ. ನಾನೊಮ್ಮೆ ಮೆ| ಕಾಟಕರ ಸಾಹೇಬರ ಭೆಟ್ಟಿಗೆ ಹೋದಾಗ ಅವರು "ಭತ್ತದ ಬೆಳೆ ಸರಿಯಾಗಿರದಿದ್ದರೆ, ಕಾಯಿಪಲ್ಲೆ ಬೆಳೆಸಿರಿ! ಇಕೋ ನೋಡಿರಿ! ಈ ಅನನಸ ಹ್ಯಾಗೆ ಬೆಳೆದದೆ! ಭತ್ತದ ಪೈರು ಚನ್ನಾಗಿಲ್ಲದಿದ್ದರೆ ಇದು ಹ್ಯಾಗೆ ಬೆಳೆಯಿತು?" ಎಂದು ಉದ್ಗರಿಸಿದರು. ನನಗೆ ಆಗ ಏನೂ ತಿಳಿಯಲಿಲ್ಲ. ಮುಂದೆ ವಿಚಾರ ಮಾಡಿದ, ಅವರ ಹೇಳಿಕೆಯಲ್ಲಿ ತಥ್ಯಾಂಶವಿದೆಯೆಂದು ಕಂಡು ಬಂತು. ನಾವು ಮಳೆಯ ಮೇಲೆಯೇ ಅವಲಂಬಿಸಕೂಡದು. ಬೇರೆ ಧಂಧೆಗಳನ್ನು ನೋಡಬೇಕು. ಕಬ್ಬಿನಂತಹ ಪೈರು ಬೆಳೆಸಬೇಕು. ಇಡೀ ವರ್ಷ ದುಡಿದರೂ ನಮಗೆ ೪ ತಿಂಗಳು ಸಾಲುವಷ್ಟು ಅನ್ನ ಸಿಗುವದಿಲ್ಲ. ಬೇರೆ ಧಂದೆಯಿಲ್ಲ. ಜಂಗಲ ಖಾತೆಯಲ್ಲೂ ಕೆಲಸ ಸಿಗುವದಿಲ್ಲ ದನಗಳಿಗೆ ಮೇಯಲು ಸ್ಥಳವಿಲ್ಲ ಆದ್ದರಿಂದ ಹೊಲಗಳಲ್ಲಿ ದನಗಳ ಕಾಟವಾಗಿದೆ. ಹುಲ್ಲುಹಿನ್ನಿ ಸ್ಥಳ ಹಚ್ಚುವದ ಹೊರತು ಗತ್ಯಂತರವಿಲ್ಲ ನಾನು ತಂಬಾಕಿನ ಪ್ರಯೋಗ ನಡೆಸಿದ್ದೇನೆ. ಅನುಭವ ಪಡೆದು ತಮಗೆ ತಿಳಿಸುವೆನು. ಇಷ್ಟಾದ ಬಳಿಕ ಅಂದಿನ ಸಭೆಯ ಕೆಲಸ ತೀರಿತು. ಸಂಜೆಗೆ ಜಿಲ್ಹಾ ಸಹಕಾರಿ ಇನ್ಸ್ಟಿಟ್ಯೂಟಿನ ಉಪಾಧ್ಯಕ್ಷರಾದ ರಾ| ಜಿ. ಕೆ ಹೆಗಡೆಯವರು ಮಾಯಿಕ ದೀಪದ ಸಹಾಯದಿಂದ ಗ್ರಾಮಸುಧಾರಣೆಯ ಮೇಲೆ ವ್ಯಾಖ್ಯಾನ ಕೊಟ್ಟರು.

೩ನೇ ದಿನದ ವೃತ್ತಾಂತ.

ಮಂಗಳವಾರ ೨೭ನೇ ತಾರೀಖು ಬೆಳಗ್ಗೆ ಉತ್ತಮವೆಂದು ಆರಿಸಿದ ದನಗಳಿಗೂ ಬೆಳೆಗಳಿಗೂ ಬಕ್ಷೀಸು ಕೊಡುವ ಬಗ್ಗೆ ದೊಡ್ಡ ದರಬಾರು ಕೂಡಿತು. ರಾ| ಅಂಗಡಿಯವರು ದನಗಳ ವಿಷಯ ಉಪಯುಕ್ತ ಮಾಹಿತಿ ಕೊಟ್ಟರು. ರಾ| ವಸಂತರಾವ ಭಟ್ಟಯವರು, ಅಧ್ಯಕ್ಷ ರಾ| ದೀಕ್ಷಿತರೂ, ವ್ಯಾಖ್ಯಾನಕಾರರೂ, ಅಧಿಕಾರಿಗಳೂ, ದಿಂಡ್ರರೂ, ಸ್ಥಾನಿಕ ಸಂಸ್ಥೆಗಳ ಅಧಿಕಾರಸ್ಥರೂ ಮಾಡಿದ ಅಂತರದ ಸಹಾಯವನ್ನು ನೆನಿಸಿ, ಪ್ರದರ್ಶನವನ್ನು ಯಶಸ್ವಿ ಮಾಡಿಕೊಟ್ಟ ಬಗ್ಗೆ ಸಕಲರ ಆಭಾರ ಮನ್ನಿಸಿದರು. ಮೆ| ಕಲೆಕ್ಟರ ಸಾಹೇಬರು (ಅಧ್ಯಕ್ಷರು) ಬಕ್ಷೀಸುಗಳನ್ನು ಹಂಚಿದರು. ಕೆಲವರಿಗೆ ಭಂಗಾರದ ಪದಕಗಳೂ, ಬೆಳ್ಳಿಯ ಪದಕಗಳೂ, ಪ್ರಶಂಸಾ ಪತ್ರಗಳೂ ಕೊಡಲ್ಪಟ್ಟವು. ರಾ| ಶ್ರೀಪಾದ ದೇಶಪಾಂಡೆಯವರ ಒಂದು ಲೀಮೆಯ ಕಾಲು ಜೋಡಿಯನ್ನೂ, ರಾ| ಸಿಂಗಪ್ಪ ಹಳ್ಳಿಕೇರಿಯವರ ೪ ಜಾತಿಯ ಕಾಲು ಜೋಡಿಗಳನ್ನೂ ಎನಗಳಿಗೆ ಇನಾಮು ಕೊಟ್ಟರು. ಆ ಮೇಲೆ ಸಭೆಯಲ್ಲಿ ಈ ಕೆಳಗಿನಂತೆ ಠರಾವುಗಳಾದವು:— (೧) ಇಲ್ಲಿಯ ತಾಲೂಕ ಡೆವ್ಹಲಪ್‌ಮೆಂಟ ಎಸೋಸಿಯೇಶನ್ನು ರಜಿಸ್ಟರ ಮಾಡಿಕೊಳ್ಳುವದಕ್ಕೆ ಲೋಕಲ ಬೋರ್ಡಿನ ಡಾಯರೆಕ್ಟರರಿಗೆ ವಿನಂತಿ ಮಾಡಬೇಕು. (೨) ೧೯೩೬ನೇ ಇಸ್ವಿಯ ಜೂನ ತಿಂಗಳ ಒಳಗಾಗಿ ತಾಲೂಕಿಗೆ ಬೇಕಾಗುವಷ್ಟು "ಗನ್-ಕ್ಲಬ್ಬ" ಬೇಟೆ ಕೋವಿ-ಸಂಸ್ಥೆಗಳನ್ನು ಸ್ಥಾಪಿಸುವ ವ್ಯವಸ್ಥೆ ಮಾಡಬೇಕು (೩) ಈ ಜಿಲ್ಲೆಯಲ್ಲಿ ದನಗಳ ಸಾಮಾನ್ಯರೋಗದ ಪ್ರತಿಕಾರದ ಮಾರ್ಗಕ್ಕೆ ಬೇಕಾಗುವ ಶ್ರಮವನ್ನು ಜಾರಿಯಲ್ಲಿ ತರಲಿಕ್ಕೆ ಮೆ| ವ್ಹೆಟರ್ನರಿ ಡಾಯರೆಕ್ಟರರಿಗೆ ವಿನಂತಿ ಮಾಡಬೇಕು (೪) ತೇರಗಾಂವ ಲೋಕಲ ಬೋರ್ಡ ಶಾಲೆಯಲ್ಲಿ ಟ್ರೇಂಡ ಶಿಕ್ಷಕರನ್ನು ನೇಮಿಸುವ ಬಗ್ಗೆ ಜಿಲ್ಹಾ ಲೋಕಲ ಬೋರ್ಡಿಗೆ ವಿನ್ನೈಸ ಕಳಿಸಿದ್ದು. (೫) ಹಳಿಯಾಳ ತಾಲೂಕಿನ ಜನರಿಗೆ ಜಂಗಲ ಖಾತೆಯ ಕಾರಭಾರದಿಂದ ಆಗುವ ತೊಂದರೆಗಳನ್ನು ಮೆ| ಕಲೆಕ್ಟರ ಸಾಹೇಬರು ತಿಳಿದು ಮೇಲೆ ತಾಕಲಿಕ್ಕೆ ಒಂದು ಮಂಡಳ ನೇಮಿಸತಕ್ಕದ್ದು. (೬) ಹಳಿಯಾಳ ಗೋಂದ್ಲಿ ಸಂಸ್ಥೆಯವರಿಗೆ ಹಾಗಿ ಜಾತಿಯ ಹೋರಿಯನ್ನು ಅರ್ಧದಷ್ಟು ಬೆಲೆ ತಕ್ಕೊಂಡು ಕೊಡುವದಕ್ಕೆ ಬೇಕಾಗಿಯೂ ಹೋರಿ ತರುವರಿ ತಗಲುವ ಅರ್ಧ ಖರ್ಚನ್ನು ಕೊಡಬೇಕಾಗಿಯೂ ಪ್ರಸಿಯೊಳಗಿನ ಪಶು ಖಾತೆಯ ಡಜ್ಜರಿಗೆ ಬಿನ್ನಹ ಮಾಡಬೇಕು.

ಈ ಮೇರೆಗೆ ಠರಾವುಗಳನ್ನು ಕೈಕೊಂಡ ಮೇಲೆ ಅಧ್ಯಕ್ಷರಿಗೂ ನೆರೆದ ಮಹಾಶಯರಿಗೂ ಪುಷ್ಪಹಾರ, ತಾಂಬೂಲ ಸಮರ್ಪಣೆಯಾಗಿ ದರಬಾರು ಕೊನೆಗೊಂಡಿತು.

ಇತರ ಮಾಹಿತಿ.

ಸೋಮವಾರ, ಮಂಗಳವಾರ ಸಾಯಂಕಾಲ ಬೈಲು-ಕುಸ್ತಿಗಳೂ, ಕಸರತ್ತುಗಳೂ, ನಡೆಯುತ್ತಿದ್ದವು. ಸಾವಿರಾರು ಜನರು ನೆರೆಯುತ್ತಿದ್ದರು. ಸೋಮವಾರ ರಾತ್ರಿ ಬೆಳಗಾಂವಿಯ ಮಲ್ಲ ಭೀಮಸೇನರ ಶಕ್ತಿಯ ಪ್ರಯೋಗಗಳನ್ನು ನೋಡಿ ಜನರು ಬೆರಗಾದರು. ಪ್ರದರ್ಶನಕ್ಕೆ ಹಿಂದ ಒಂದು ಆಕಳಿಗೆ ಮೂತ್ರವಿರುವದಿಲ್ಲ. ಮೊಲೆಯ ಹತ್ತಿರದ ಭಾಗದಿಂದ ಮೂತ್ರ ಬರುತ್ತಿತ್ತು. ಜನರು ಆಶ್ಚರ್ಯಪಡುತ್ತಿದ್ದರು ಅ. ಭಾ. ಚರಖಾ ಸಂಘದ ಕರ್ನಾಟಕ ಶಾಖೆಯವರು ಖಾದಿ-ಅಂಗಡಿ ಹಾಕಿದ್ದರು. ಪ್ರದರ್ಶನದ ಮೂರು ದಿನಗಳಲ್ಲಿ ರೂ. ೫೦೦ರ ಖಾದಿ ಮಾರಾಟವಾಯಿತು. ಅಂಗಡಿಯಲ್ಲಿ ವಿಕ್ರಯಕ್ಕಿಟ್ಟ ಹೊಸ ತರದ ಖಾದಿಯನ್ನು ನೋಡಿ ಪ್ರತಿಯೊಬ್ಬರೂ ಏನಾದರೂ ಸಾಮಾನು ಕೊಂಡು ಕೊಳ್ಳುತ್ತಿದ್ದರು. ಅಂತೂ ದೇವರ ಕೃಪೆಯಿಂದ ಹಳಿಯಾಳದಲ್ಲಿ ನೆರೆದ ಮೊದಲನೇ ಪ್ರದರ್ಶನವು ಯಶಸ್ವಿಯಾದ ಬಗ್ಗೆ ಎಲ್ಲರಿಗೂ ಸಂತೋಷವಾಗಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಛಳಿ ವಿಶೇಷವಿಲ್ಲ. ಹಗಲು, ಸಂಜೆ ಶೆಕೆಯಾಗುತ್ತದೆ. ಆಗಾಗ್ಗೆ ಮೋಡಗಳೂ ಕವಿಯುತ್ತವೆ.

ಹೋದ ಸೋಮವಾರ ದಿನ ವನಭೋಜನೋತ್ಸವವು ಸಾಂಗವಾಗಿ ನೆರವೇರಿತು. ಶುಕ್ರವಾರ ಸಂಜೆಗೆ ರಥಬೀದಿಯಲ್ಲಿ ದೀಪೋತ್ಸವವಾಯಿತು.

ಮೆ|| ಜಿಲ್ಹಾ ಪೋಲೀಸ ಸುಪರಿಂಟೆಂಡೆಂಟರ ಮುಕ್ಕಾಮು ಇಲ್ಲಿರುತ್ತದೆ. ಈ ವಾರದ ಕೊನೆಯ ವರೆಗೆ ಇಲ್ಲಿರುವದಾಗಿ ತಿಳಿಯುತ್ತದೆ

ಇಲ್ಲಿಯ ೧ನೇ ನಂಬರ ಕನ್ನಡ ಶಾಲೆಯ ಹೆಡಮಾಸ್ತರರಾಗಿರುತ್ತಿದ್ದ ರಾ| ಸುಬ್ರಾಯ ಸೀತಾರಾಮ ಮಾಸ್ಕೇರಿಯವರು ಒಂದೇ ದಿನ ಜ್ವರದಿಂದ ಕಾಯಿಲೆ ಬಿದ್ದು ನಿನ್ನೆ ಬೆಳಿಗ್ಗೆ ತೀರಿಕೊಂಡರೆಂದು ತಿಳಿಸಲು ವ್ಯಸನವಾಗುತ್ತದೆ. ಮುಂದಿನ ತಿಂಗಳಲ್ಲಿ ಇವರು ನೌಕರಿಯಿಂದ ನಿವೃತ್ತರಾಗಲಿದ್ದರು. ಮೃತಾತ್ಮರಿಗೆ ಪರಮೇಶನು ಸದ್ಗತಿಯನ್ನೀಯಲಿ!

ನಾಗರಿಕರೊಬ್ಬರು ಬರೆಯುತ್ತಾರೆ:— ನಗರ ಸಭೆಯ ಚುನಾವಣೆಯು ಸಮೀಪಿಸುತ್ತ ಬಂದಿದೆ. ಗಿಬ್ಬು ನಾಯಸ್ಕರಿನ ಕೆಲ ಶಿಕ್ಷಕರು ಉಮೇದವಾರರಾಗಿ ಮುಂದೆ ಬರುವವರಿದ್ದಾರೆಂದು ಊರಲ್ಲಿ ಮಾತ ಹಬ್ಬಿದೆ. ಶಾಲಾ ಶಿಕ್ಷಕರು ಶಿಕ್ಷಣದ ಕಾರ್ಯವನ್ನು ಒಂದೇ ಮನಸ್ಸಿನಿಂದ ಅನುಸರಿಸುವದು ಕರ್ತವ್ಯವಾಗಿದೆ. ಅದಲ್ಲದೆ ಶಾಲೆಯ ಕಡೆಗೆ ದುರ್ಲಕ್ಷ ಮಾಡಿ, ಬೇಂಕು, ಮ್ಯುನಿಸಿಪಾಲಿಟಿ ಮುಂತಾದವುಗಳಲ್ಲಿ ಸೇರಿದ್ದರಿಂದ ಏನು ಪರಿಣಾಮವಾಗುತ್ತದೆಂಬುದು ಹೋದ ಮೆಟ್ರಿಕ್ ಪರೀಕ್ಷೆಯ ಪರಿಣಾಮದ ಮೇಲಿಂದ ಕಂಡುಬರುತ್ತಿದೆ. ಆದ್ದರಿಂದ ಶಾಲಾ ಶಿಕ್ಷಕರು ಇಂಥ ಚಳವಳಿಗಳಲ್ಲಿ ಸೇರಿ ಶಿಕ್ಷಣದ ಕಡೆಗೆ ಅನಾಸ್ಥೆ ಮಾಡದಂತೆ, ವಿದ್ಯಾರ್ಥಿಗಳಿಗೂ ಜನತೆಗೂ ನಷ್ಟ ಪಡಿಸದಂತೆ ಶಾಲೆಯ ಚಾಲಕರು ವ್ಯವಸ್ಥೆ ಮಾಡಬೇಕು. ಇತ್ಯಾದಿ.

ಭಟಕಳ— ಇಲ್ಲಿಯ ಲೋಕಪ್ರಿಯ ಸಬ್‌ಜಡ್ಜರಾದ ರಾ| ಶಾಂತಾರಾಮ ಪಿ. ದೇಸಾಯಿಯವರಿಗೆ ಹಳಿಯಾಳಕ್ಕೆ ವರ್ಗವಾಗಿರುತ್ತದೆ. ಕಳೆದ ನಾಲ್ಕು ವರ್ಷ ಅವರು ಇಲ್ಲಿದ್ದರು. ಅಷ್ಟರಲ್ಲಿ ತಮ್ಮ ಚಟುವಟಿಕೆಗಳಿಂದ ಒಳ್ಳೇ ಮಾನ್ಯತೆಯನ್ನು ಸಂಪಾದಿಸಿರುತ್ತಾರೆ. ಹೋದ ಜುಲಾಯಿ ತಿಂಗಳಲ್ಲಿ ಸ್ಥಾಪನೆ ಹೊಂದಿದ ಎಂಗ್ಲೋ-ವ್ಹರ್ನ್ಯಾಕ್ಯುಲರ ಶಾಲೆಯ ಇಪ್ಪಸಿಯ ಜನಕರು ರಾ| ದೇಸಾಯಿಯವರೇ ಅವರೇ ಅದಕ್ಕೆ ಮಾರ್ಗ ದರ್ಶನ ಕೊಟ್ಟವರು. ರಾ| ದೇಸಾಯಿಯವರ ಬೋಧದಿಂದಲೇ ಊರ ಮಹಾನುಭಾವರು ಶಾಲೆಗೆ ನೆರವಾಗಿರುತ್ತಾರೆ. ರಾ| ರಾಮನಾಥ ವಿಠೋಬ ನಾಯ್ಕರು ರೂ. ೩೦೦೦ ಬೆಲೆ ಬಾಳುವ ಸ್ಥಳ ಮತ್ತು ಇಮಾರತು ಕೊಟ್ಟಿದ್ದಾರೆ. ರಾ|| ಮಾಮನ ಗಣಪಯ್ಯ ಶ್ಯಾನಭಾಗರು ರೂ. ೫೦೦ರ ಕುರ್ಚಿ, ಬಾಂಕು, ಮೇಜು ಮುಂತಾದವುಗಳನ್ನು ಮಾಡಿಸಿಕೊಟ್ಟಿದ್ದಾರೆ. ರಾ| ಹನುಮಂತ ಮಾಳ ಪೈ, ನಾರಾಯಣ ಗಣಪಯ್ಯ ಶಾನಭಾಗ ಮತ್ತು ಮಂಜನಾಥ ರಘು ಕಾಮತ ಇವರು ಶಾಸ್ತ್ರೀಕ್ಷನಾದ ಸಾಹಿತ್ಯಗಳ ಬಗ್ಗೆ ರೂ. ೩೫೦ ಕೊಟ್ಟಿದ್ದಾರೆ. ಈಗ ಶಾಲೆಯಲ್ಲಿ ೩೭ ಹುಡುಗರೂ ೩ ಹುಡುಗಿಯರೂ ಕಲಿಯುತ್ತಿದ್ದಾರೆ. ರಾ| ದೇಸಾಯಿಯವರ ಕಾರ್ಯಶಕ್ತಿ ವಿಗ್ರಾಹದದ್ದು. ಹೋದ ಜ. ಬಿಲಿ ಉತ್ಸವದ ಕಾಲಕ್ಕೆ ಆಟ-ಕಸರತ್ತುಗಳ ಬಗ್ಗೆ ಪ್ರದರ್ಶಿಸಿದ ಜಾಗೆಯ ವ್ಯವಸ್ಥೆಯನ್ನು ಅವರು ಒಂದೇ ರಾತ್ರಿಯಲ್ಲಿ ಮಾಡಿಕೊಟ್ಟದ್ದನ್ನು ಯಾರೂ ಮರೆಯುವಂತಿಲ್ಲ. ರಾ| ದೇಸಾಯಿಯವರು ಯಾವ ಭಿಕ್ಷುಕನಿಗೂ ಬರಿಗೈಯಿಂದ ತಿರುಗಿ ಕಳಿಸುತ್ತಿದ್ದಿಲ್ಲ. ರಾ| ಕಿಣಿ ವಸ್ತ್ರಂದಿಗೆ ಜಾತಿಯವರು ಅನ್ಯಾಯ ಮಾಡುತ್ತಾರೆಂದು ತಿಳಿದಮೇಲೆ ಆಪ ಮಾತ ತೆಗೆದು ಅವರು ಜಾತಿಯ ಮುಖಂಡರಿಗೆ ಅನ್ಯಾಯದಿಂದ ಪರಾವೃತ್ತ ಮಾಡಿದ ಸಂಗತಿ ಎಲ್ಲರೂ ಬಲ್ಲ ವಿಷಯ. ರಾ| ದೇಸಾಯರು ಧರ್ಮದ ಮೇಲೆ ಶ್ರದ್ಧೆಯುಳ್ಳವರು, ಪುರಸತ್ತು ಸಿಕ್ಕಾಗ ತಮ್ಮ ಮಕ್ಕಳ ಜೊತೆಯಲ್ಲಿ ಕೇರಿಯೊಳಗಿನ ಹುಡುಗರಿಗೂ ಕಲಿಸುತ್ತಿದ್ದರು. ಇವರಿಗೆ ವರ್ಗವಾದದ್ದು ಕೇಳಿ ಜನರು ಮರುಗುತ್ತಾರೆ. ಎಲ್ಲರೂ ಅವರನ್ನು ತುಂಬಾ ಹರಸುತ್ತಾರೆ.

[ಸ್ಥಳಾಭಾವಕ್ಕಾಗಿ ವಾರ್ತೆಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವವು]

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.
ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಮೋಹಕವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents-
D. K. Nayak Bros.
D. S. Pai
K. N. Nayak.
Honavar Agent:-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು!

[೫ನೇ ಪಾನಿನಿಂದ ಮುಂದರಿದದ್ದು]

ಯಾದೂ ಚಿಕ್ಕಿಗಳೆಯಕ್ಕಿಂಥಾದಲ್ಲ. ಮಾನಸ ಶಾಸ್ತ್ರವಿಶಾರದರೂ, ವೈದ್ಯಶಾಸ್ತ್ರವಿಶಾರದರೂ ಇದೇ ಪ್ರಕಾರ ಅಭಿಪ್ರಾಯಪಡುತ್ತಾರೆ. ಧರ್ಮ ಶಾಸ್ತ್ರದಲ್ಲಿಂತ ಗೃಹಸ್ಥಾಶ್ರಮದ ಪ್ರಶಸ್ತಿ ವಿಶೇಷವಿದೆ. ಆದರೆ ಈಗಿನ ದಿನಮಾನದಲ್ಲಿ ವಿವಾಹ [illegible] ವೆಂದೂ, ಜವಾಬದಾರಿಯದೆಂದೂ ಹುಡುಗರು ಮದುವೆ ಮಾಡಿಕೊಳ್ಳಲೊಲ್ಲದವರಿದ್ದಾರೆ. ಒಬ್ಬ ಅವಿವಾಹಿತರು ಈ ತಿರುಗಿಯ ಸೂಚನೆಯನ್ನು ನಿರೋಧಿಸಿ ಒರೆಯುವದೇನೆಂದರೆ:- "ನಾನು ಅವಿವಾಹಿತನಿದ್ದೇನೆ. ಬೇರೆಯವರ ಹುಡುಗಿಗೆ ಸಾಕಿ ಸಲಹುವದು ನನ್ನ ಜೀವನ ಧ್ಯೇಯ (purpose of life) ವೆಂದು ನಾನೆಣಿಸುವದಿಲ್ಲ. ಅರ್ಥ [illegible] ವನ್ನು ಹೀಗೆ ತೆರಲಿಕ್ಕೆ ನಾನು ಸಿದ್ಧನಿದ್ದೇನೆ. ನಾನು ಮದುವೆ ಯಾಗುವದಿಲ್ಲ [illegible] ಸುಸಂಸ್ಕೃತ (Educated and cultured) ಎಂದು ಸಂಪ್ರದಾಯದಿಂದ [illegible] ವಿಚಾರದ [illegible] ಆಡಂಬರವನ್ನು [illegible] ಹುಡುಗಿಯರಿಗೆ [illegible] ಮದುವೆ ಗಂಡನ [illegible] ಹವೆಂದು ಅವರು ಎಣಿಸುತ್ತಾರೆ. [illegible] ಲಾಭವೆಲ್ಲ ಅವರಿಗೇ. ಗಂಡನ ಬಗ್ಗೆ ಅವರ [illegible] ಬುದ್ಧಿಯಾಗಲಿ, ಸಹಾನುಭೂತಿಯಾಗಲಿ ಇರುವದಿಲ್ಲ. ಬೆಲೆಯುಳ್ಳ ರೇಶಿಮೆ ಸೀರೆಗಳು ಬೇಕು, [illegible] ಬೇಕು, ನಾಟಕ ಸಿನೆಮಾಗಳನ್ನು ನೋಡಬೇಕು. ಇಂಥ ಕಷ್ಟದಲ್ಲಿ ಜೀವನದಕ್ಕಿಂತ ತಿರುಗಿ [illegible] ವಾಸ ಲೇಸು. ನಮಗೆ ಮನೆ ಬೇಕು; ಹೆಂಡತಿ ಬೇಕು; ಮಕ್ಕಳು ಬೇಕು, ಆದರೆ ಹೆಂಗಸರ ದಾರುಣತ್ವ ಬೇಡ, ಅವರ ವಿಲಾಸ ಬೇಡ. ಅವಿವಾಹಿತರು ಕನ್ನಿಕೆಯರ ಮೇಲೆ ಸಂತಪ್ತರಾಗಿ ಆರೋಪ ಹೊರಿಸಿದ್ದಾರೆ [illegible] ಸುಸಂಸ್ಕೃತ [illegible] ಉಪಟಳ ತಾಳಲಾರದೆ ಅವರು ಈ ಪ್ರಕಾರ ನಿರೋಧ ಮಾಡುತ್ತಾರೆ. [illegible] ಹವನ್ನು ಒದಗಿಸತಕ್ಕವರು [illegible] ಸ್ತ್ರೀಯನ್ನೇ [illegible] ವಾತಾವರಣವನ್ನು [illegible] ಉಂಟಾಗುವಂತೆ ಸಮಾಜ ಪ್ರಮುಖರು [illegible] ಬೇಕು. ಇಲ್ಲವಿದ್ದರೆ [illegible] ಉಳಿಸುವದಕ್ಕಾಗಿ ಇಡೀ ಜಗತ್ತು ಕೊಟ್ಟರೂ ಗುಣಗುಟ್ಟುವ ಪರರ ಮನೆಯ ಹುಡುಗಿಯನ್ನು ತಮ್ಮಲ್ಲಿ ತರಲಿಕ್ಕೆ ಅವಿವಾಹಿತರು ಒಪ್ಪಲಿಕ್ಕಿಲ್ಲ. ಡಾ. ಹಿಂಗೋರಾಣಿ ಪ್ರಭೃತಿ ಸಭಾಸದರು ನಿರ್ಮಲ ಚಿತ್ತದಿಂದ ವಿಚಾರಿಸುವ ವಿಷಯವಿದು.

⁂

ದೃಷ್ಟಿಮಾಂದ್ಯವಾದವರು ಪ್ರಯೋಗ ಮಾಡಿ ನೋಡಬಹುದು. ಮುಂಬಯಿ ಜೆಕೊಬ ಸರ್ಕಲಿನಲ್ಲಿರುವ ಎರುಚ್ ಪಟೇಲರವರು ತಮ್ಮ ಅನುಭವ ತಿಳಿಸುತ್ತಾರೆ: ಒಂದು ತಿಂಗಳಿನಿಂದ ನನಗೆ ತಲೆನೋವಿತ್ತು. ದಿನಾ ತಲೆನೋವು; ಎಡೆಬಿಡದೆ ತಲೆನೋವು. ನೋವು ಏರಿದ ಹಾಗೆ ಕಣ್ಣಿನ ದೃಷ್ಟಿ [illegible] ಮಂದವಾಗುತ್ತಿತ್ತು. ನಾನು ಕನ್ನಡಕ ಹಾಕಿಕೊಳ್ಳುತ್ತಿದ್ದೆ. ಡಾಕ್ಟರರ ಕಡೆ ವಿಚಾರ ಮಾಡಲು ಅವರು ಬೇರೆ ಕನ್ನಡಕ ಹಾಕಿಕೊಳ್ಳಬೇಕೆಂದರು. ಅಷ್ಟರಲ್ಲಿ ಮದ್ರಾಸಿನ [illegible] ವ್ಯಾಖ್ಯಾನವನ್ನೋದಿದೆನು. ಕಣ್ಣು ಮುಚ್ಚಿ ಸೂರ್ಯಪ್ರಕಾಶದಲ್ಲಿ ಕೆಲ ನಿಮಿಷ ದಿನಾ ನಿಂತುಕೊಂಡಲ್ಲಿ ದೃಷ್ಟಿಮಾಂದ್ಯ ಪರಿಹಾರವಾಗುತ್ತದೆಂದು ಓದಿದೆನು. ಬೆಳಗಿನ ೭ ಗಂಟೆಗೆ ಎದ್ದು ೧೫ ನಿಮಿಷಗಳ ತನಕ ಸೂರ್ಯನ ಬಿಸಿಲಿಗೆ [illegible] ಕಣ್ಮುಚ್ಚಿ ನಿಂತು [illegible] ಕೊಂಡೆನು. ಒಂದು ತಿಂಗಳಲ್ಲಿ ನನ್ನ ತಲೆನೋವು ಹೋಯಿತು. ನಾನು ವಿಶೇಷ [illegible]. ದೃಷ್ಟಿಮಾಂದ್ಯವಿದ್ದವರು ಈ ಪ್ರಯೋಗ ಮಾಡಿ ನೋಡಬಹುದು.

⁂

ಮದ್ರಾಸ [illegible] ಸತ್ಯಾಗ್ರಹದ ಮರುಳು [illegible] ಸತ್ಯಾಗ್ರಹದಲ್ಲಿ ಸೇರಿದ ಹುಡುಗರಿಗೆ [illegible] ಕಾರಣದಿಂದ [illegible] ಹೊರಡಿಸಿ [illegible] ಸರಕಾರಿ [illegible] ವಿದ್ಯಾರ್ಥಿಗಳಿಗೆ [illegible] ಈ ಕುರಿತು ಮದ್ರಾಸ ಶಾಸನ [illegible] ಯೋಗ್ಯ [illegible] ದಿವಾಣರು ಉತ್ತರ ಕೊಟ್ಟರು. ಇಂಥ [illegible] ಸರಕಾರದಿಂದ ಅಪ್ಪಣೆಯನ್ನು ಪಡೆಯಬೇಕಾಗಿಯೂ, ಆ ಕುರಿತು ವಿದ್ಯಾರ್ಥಿಗಳ ಕಡೆಯಿಂದ ಅರ್ಜಿಯನ್ನಲ್ಲಿ ಅವರ ಈಗಿನ [illegible] ತನಾಸನಮಾಡಿ ಸರಕಾರದ ಅಪ್ಪಣೆ ಕೊಡತಕ್ಕದ್ದಾಗಿಯೂ ದಿವಾಣರು ನುಡಿದರು. ದಿವಾಣರ ದೊಡ್ಡಸ್ತನ ನೋಡಿ ನಗೆಬರುತ್ತದೆ. ರಾಜಬಂದಿಗಳಿಗೆ ಶಿಕ್ಷಣ ಕೊಟ್ಟು ಸಭ್ಯ ನಾಗರಿಕರನ್ನಾಗಿ ಏರ್ಪಡಿಸಿ ಬಂಗಾಲ ಇಲಾಖೆಯೊಳಗೆ ಶಾಂತತೆ ಕಾಪಾಡಲು ಬಂಗಾಲ ಸರಕಾರವು ಪ್ರಯತ್ನಿಸುತ್ತಿದ್ದಾಗ ಮದ್ರಾಸ ಸರಕಾರವು ಈ ಪ್ರಕಾರ ಪ್ರತಿಬಂಧಗಳನ್ನಿಟ್ಟು ವಿದ್ಯಾರ್ಥಿಗಳಿಗೆ ದಣಿಸುವದುಚಿತವೇ? ಇಂಥ ಅನುಚಿತ ವ್ಯಾಪಾರಗಳಿಂದ ವಿದ್ಯಾರ್ಥಿಗಳಲ್ಲುಂಟಾದ ರಾಷ್ಟ್ರಪ್ರವೃತ್ತಿ ಕುಂದುವದೆಂದು ದಿವಾಣರು ಗ್ರಹಿಸುವದು ತೀರ ದಡ್ಡತನ.

⁂

ಧಾರವಾಡದ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಪ್ರಕಟಿಸುವದೇನಂದರೆ:-"ಡಿಸೆಂಬರ

ಗೋಮಾಂತಕ ಜಾಂಬಾವಲಿ ಸಂಸ್ಥಾನದ

ಶ್ರೀ ದಾಮೋದರ ದೇವರ

ಭಾವಚಿತ್ರಗಳು

ಈ ಕೆಳಗಿನ ಪತ್ತೆಯ ಮೇಲೆ ಮಾರಿಸುತ್ತವೆ:

ಬೆಲೆ ೧ ರೂಪಾಯಿ.

ಪತ್ತೆ:- ಪುರುಷೋತ್ತಮ ಲಕ್ಷ್ಮಯ್ಯ
ಶ್ಯಾನಭಾಗ ದುಕಾನ, ಕುಮಟಾ.
ದಾಮೋದರ ನಾಗಪ್ಪ ಶ್ಯಾನಭಾಗ
ಸ್ಟೇಶನರಿ ದುಕಾನ, ಕಾರವಾರ.
ಯಶವಂತ ವಿಷ್ಣು ನಾಯಕ ಬೊಂಬಿ,
ಮರ್ಚಂಟ, ಮಡಗಾಂವ-ಗೋವಾ.
ವೆಂಕಟೇಶ ರವಳ ಕಾಮತ,
ದಲಾಲ, ವಾಸ್ಕೋದಿಗಾಮಾ-ಗೋವಾ.
ಕಾಶೀನಾಥ ದಾಮೋದರ ನಾಯಕ, ದಲಾಲ,
ಅನಂತ ಬಿಲ್ಡಿಂಗ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ, ೨.

Murdeshwar, Shrinivasrao & Co.,
Commission Agents,
Yellapur. (N. Kanara)

ಮುರ್ಡೇಶ್ವರ, ಶ್ರೀನಿವಾಸರಾವ್ ಎಂಡ್ ಕೋ,
ದಲಾಲ, ಯಲ್ಲಾಪುರ.

ನಮ್ಮ ಅಡಿಕೆ, ಯಾಲಕ್ಕಿ, ಮೆಣಸು ವಗೈರೆಯ ದಲಾಲಿ ಕಂಪನಿ ಕೆಲಸಕ್ಕೆ ಶುರು ಮಾಡಿರುತ್ತದೆ ಹೆಚ್ಚಿಗೆ ಮಾಹಿತಿ ಬಗ್ಗೆ ಪತ್ರವ್ಯವಹಾರದಿಂದ ಅಥವಾ ಸಮಕ್ಷ ಒಂದಲ್ಲಿ ತಿಳಿದೀತು.

ShrinivasRao,
Managing Agent, YELLAPUR.

For sale! For sale!! For sale!!

Udipi Syndicate Bank Preference Shares for sale!

Rate less than the market rate!

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs. 7 by the Bank authorities.

These shares will be sold less than the market rates. Intending buyers should apply to the following address:--

Vithal Subraya Prabhu Shiroorkar,
Post:- ANKOLA.

೨೮ನೇ ತಾರೀಖಿಗೆ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವಿದ್ದು ಆದಿನ ವಿವಿಧ ಕಾರ್ಯಕ್ರಮವನ್ನು ಕೈಕೊಂಡು ರಾಷ್ಟ್ರೀಯ ಸಭೆಯಿಂದ ಭರತ ಭೂಮಿಗಾದ ಉಪಕಾರ ಸ್ಮರಣೆ ಮಾಡಬೇಕೆಂದು ಗೊತ್ತಾಗಿದೆ. ಅಲ್ಲಲ್ಲಿಯ ಕವಿಗಳು ರಾಷ್ಟ್ರೀಯ ಸಭೆಯ ಲೋಕ ಸೇವೆಯನ್ನೂ ರಾಷ್ಟ್ರೀಯ ಸಭೆಯ ವೀರಕೃತ್ಯಗಳನ್ನೂ ಹೋರಾಟಗಳನ್ನೂ ವರ್ಣಿಸುವಂಥ ಸ್ಫೂರ್ತಿದಾಯಕ ಕಾವ್ಯಗಳನ್ನು ರಚಿಸಿ ಇದೇ ಬರುವ ಡಿಸೆಂಬರ ೭ನೇ ತಾರೀಖಿನೊಳಗೆ ಬರೆದು ಕಳಿಸಬೇಕು. ಸಾಮಾನ್ಯ ಹಳ್ಳಿಗರಿಗೆ ಸುಲಭವಾಗಿ ತಿಳಿಯುವಂತೆ ತಿಳಿಯಾದ ಶೈಲಿಯಲ್ಲಿ ಕವನಗಳನ್ನು ರಚಿಸಿ ಕಳುಹಬೇಕು. ಪರೀಕ್ಷಕರು ಅವನ್ನು ಪರೀಕ್ಷಿಸಿ ಸರಸವಾದ ಹಾಡುಗಳಿಗೆ ಬಹುಮಾನ ಕೊಡುವರು. ಮತ್ತು ಈ ಪದ್ಯಗಳು ಸುವರ್ಣ ಮಹೋತ್ಸವದ ಸಮಯ ಹಾಡಲ್ಪಡುವವು. ಸ್ಪರ್ಧೆಗಾಗಿ ಬರೆಯುವವನುಚಿತವೆಂದು ಯಾರೂ ಎಣಿಸದೆ ರಾಷ್ಟ್ರಸೇವೆಯೆಂದು ಇವನ್ನು ರಚಿಸಬೇಕಾಗಿ ಬಿನ್ನಹ.

(೭ನೇ ಪಾನಿನಿಂದ ಮುಂದರಿಸಿದ್ದು.)

ಬ್ರಿಟಿಶರ ಮನೋನಿಶ್ಚಯವಾಗಲಿಕ್ಕಿದೆ!

ಯಾಗುತ್ತಿದೆ. ಕಳೆದ ನವೆಂಬರ ೩ನೇ ತಾರೀಖಿಗೆ ೬೦೨೦ ಅರಳೆಯ ಗಂಟುಗಳು ಖರೇದಿಯಾದವು. ಇನ್ನು ೪೦ ಸಾವಿರ ಗಂಟುಗಳು ಖರೇದಿಯಾಗಲಿವೆ. ಉಳ್ಳೇಗಡ್ಡೆಯ ಖರೇದಿಯೂ ವಿಶೇಷ. ೧೯೩೪-೩೫ನೇ ಸಾಲಿನಲ್ಲಿ ಸುಮಾರು ೧ ಲಕ್ಷ ಪವನಿಗೆ ಮಿಕ್ಕಿ ಇಜಿಪ್ತ ದೇಶದಲ್ಲಿ ಉಳ್ಳೆಗಡ್ಡೆಯ ಖರೇದಿಯಾಯಿತಾಗಿ ಕೈರೋ ಪಟ್ಟಣದೊಳಗಿನ ವಾರ್ತೆ. ಬಹಿಷ್ಕಾರದಿಂದ ತೊಂದರೆಯಾಗಬಾರದೆಂದು ಸ್ವದೇಶದೊಳಗಿನ ಪ್ರಜೆಗಳಿಗೆ ಸ್ವದೇಶದೊಳಗಿನ ಜಿನಸುಗಳನ್ನೇ ಉಪಯೋಗಿಸತಕ್ಕದ್ದಾಗಿಯೂ, ವಿದೇಶದೊಳಗಿಂದ ಬರುವ ಜಿನಸುಗಳನ್ನು ಖರೇದಿ ಮಾಡಬಾರದಾಗಿಯೂ ಇಟಾಲಿ ಸರಕಾರವು ಅಪ್ಪಣೆ ಹೊರಡಿಸಿದೆ. ರಾಷ್ಟ್ರಸಂಘದವರು ತಮಗೆ ಬಹಿಷ್ಕರಿಸಿದ್ದಲ್ಲಿ ಪ್ರತಿಯಾಗಿ ತಾವೂ ರಾಷ್ಟ್ರಸಂಘದ ರಾಷ್ಟ್ರಗಳಿಗೆ ಬಹಿಷ್ಕರಿಸಬೇಕಾಗಿ ಮುಸೊಲಿನಿಯವರು ಪ್ರಕಟಿಸಿದ್ದಾರೆ. ಇತ್ತಟ್ಟಿನಲ್ಲಿ ಯುದ್ಧಾವೇಶ ತುಂಬುತ್ತಿರೆ, ಸದ್ಯಕ್ಕೇ ಇತ್ತಟ್ಟಿನವರು ನಿಕರದಿಂದ ಹೋರಾಡುವರು. ಇತ್ತಟ್ಟಿನ ತಯಾರಿಯು ಪೂರ್ಣತೆಯಾಗುವಷ್ಟರಲ್ಲಿ ಬ್ರಿಟಿಶರ ಮನೋನಿಶ್ಚಯವಾಗುತ್ತದೆ. ತೈರ್ಯವೇ ಮನೋನಿಶ್ಚಯವಾಗುವದು. ಆದಕ್ಕಾಗಿಯೇ ಇಂದಿಗೆ ಬ್ರಿಟಿಶರ ಮನೋನಿಶ್ಚಯವಾಗಲಿಕ್ಕಿದೆಯೆಂದು ಮೊದಲೇ ಹೇಳಿಬಿಟ್ಟಿದ್ದು!

— ಪಂಡಿತ ಜವಾಹಿರಲಾಲರು ಲಂಡನಿನ ಪಯಣ ಮುಗಿಸಿ ಪುನಃ ಪತ್ನಿಯಿದ್ದೆಡೆ ಜರ್ಮನಿಗೆ ಹೋಗಿ ತಲ್ಪಿದ್ದಾರೆ. ಸೌ| ಕಮಲಾ ನೆಹರೂರವರ ಪ್ರಕೃತಿ ಒಳ್ಳೇ ಸುಧಾರಿಸಹತ್ತಿದೆ. ಡಾಕ್ಟರರು ಒಳ್ಳೇ ಧೈರ್ಯ ಕೊಡುತ್ತಿದ್ದಾರೆ.

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ.

IIIನೇ ಸಂಚಿಕೆ. ಶ್ರೀ ಅನುವ್ಯಾಖ್ಯಾನವು. IIನೇ ಭಾಗ ಜನ್ಮಾದ್ಯೇಕಾದಶಾಧಿಕರಣಗಳು, ಈಗಲೇ ತಯಾರಾಗಿವೆ. ಪುಟಗಳು ೧೬೦. ಚಂ. ರೂ. ೧-೮-೦.

Iನೇ ಭಾಗ. ಜಿಜ್ಞಾಸಾಧಿಕರಣ. ಪುಟಗಳು ೨೩೧. ಚಂದಾ ರೂ. ೨-೮-೦.

IIನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೨೦೮. ಚಂದಾ ರೂ. ೪-೬-೦. ಟಪಾಲು ಹಾಸಲು ಪ್ರತ್ಯೇಕ. ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಒನರರಿ ಟ್ರೆಝರರ್,

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ.

(ದಕ್ಷಿಣ ಕನ್ನಡ.)

ಅಶ್ವಾರೂಢ ಕವಚ!

ನಿರಾಶರಾದವರಿಗೆ "ಅಶ್ವಾರೂಢ" ಯಂತ್ರವು "ಗುಳ-ಪರ್ವತದಲ್ಲಿ ಮಧು-ವೃಷ್ಟಿಯಂತೆ" ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು. ೪ ಆಣೆ ಸ್ಟ್ಯಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು.

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು. ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರ ೧ಕ್ಕೆ *ಬೆಲೆ ರೂ. 20-0-0, ಬೆಳ್ಳಿಯ ಯಂತ್ರಕ್ಕೆ ರೂ. 3-0-0, ತಾಮ್ರದ ಯಂತ್ರಕ್ಕೆ ರೂ. 2-0-0.

ಪತ್ತೆ:- ದೇವಿದಾಸ ಪಿ. ಕೆ. ಕೆ. ಎನ್.,

ಜ್ಯೋತಿಷಿ, ಕುಮಟಾ. [ಉ. ಕನ್ನಡ.]

Siromani Udipi Narayanacharya,

CHAUKHAMBA BENARES CITY.

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿ ಕಂಠಿ. 108ರ ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32ರ 1ಕ್ಕೆ ರೂ. 0-8-0ಯಿಂದ ರೂ. 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0 ರಿಂದ ೨೦ವರೆಗೆ. ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟ್ಯಾಂಪು ಕಳಿಸಿದರೆ, 1 ಕಾಶೀ ಪತ್ರೆ, 1 ವಿಶ್ವೇಶ್ವರನ ಪಟ ಮತ್ತು ಕೆಟಲಾಗು ಸಹ ಇನಾಮ ಕಳಿಸಲಾದೀತು.

ಪತ್ತೆ:— ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀ ಕ್ಷೇತ್ರ.

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಕ ಔಷಧಗಳು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ದಿವ್ಯೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ. ೧-೮-೦.

ಅಶ್ವಗಂಧ ಟೋನಿಕ್:— ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ, ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನನಷ್ಟ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಪಚನ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಲಂತಿ ಕುತ್ತಕ್ಕೆ ಇದು ದಿವ್ಯೌಷಧ! ರೂ. ೧-೨-೦.

ಎಗ್ಗ್ ಮಿಕ್ಶ್ಚರ, ಫೀವರ ಡ್ರಾಪ್ಸ್, ಅಮ್ಲ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸತಕ್ಕ ಔಷಧಿಗಳಾಗಿವೆ! ನಿತ್ಯಗಟ್ಲೆ ಇವುಗಳ ಉಪಯೋಗವಾಗುವುದು, ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವ ಸಿದ್ಧವಾದ ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ-ಮಲೇರಿಯಲ್ ಮಿಕ್ಶ್ಚರ, ಟಾನಿಮ್ಯಾಕ್, ಬ್ಲಡ್ ಮಿಕ್ಶ್ಚರ, ಕಾಲರೇಲ, ಟಿಂಕ್ ವ್ರೋಕರ, ಸಾಯ. ಆಫ್ ಕ್ಯಾಲ್ಸಿಲೆಕ್ಟೊ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಅಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಲಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು:-

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ. ಕನ್ನಡ)

ಓಂ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆರ್ಯ ವೈದ್ಯಕರಿಗೂ ಪರಿಚಿತವಿದ್ದ ಔಷಧವಾದರೂ ಸಿದ್ಧಪಡಿಸುವ ವಿಧಾನ ಗ್ರಂಥೋಕ್ತ ಆದರೆ ಎಲ್ಲಿಯೂ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಾಲಕ್ಕೂ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದೇವೆ. ಆ ವರೆ ಈ ಔಷಧದಲ್ಲಿ ಎಲ್ಲಾ ತರದ ವನಸ್ಪತಿಗಳು ದೊರೆಯುತ್ತಿರುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಯಾಗಿ ಎಂಥ ಅಶಕ್ತರಿದ್ದರೂ ರೋಗ ದೂರಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿಸಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾವಿಲೆ ಮಂದಾಗ್ನಿರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶಕ್ತಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ನಂಜಿನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಕೂಡಿಕೊಂಡು ಬಂದ ರೋಗಗಳಿಗೆ ಅತ್ಯಂತ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ:— ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಪ್ರಸೂತಿಯ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವದು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ. ೧—೪—೦.
,, ಬಾಟ್ಲಿ ೬ಕ್ಕೆ ರೂ. ೬–೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕುಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಇರುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ:—

ಪಿ. ಅಚ್ಯುತ ಪಂಡಿತ,
ಮಾಲಕ,
ಆರ್ಯಧನ್ವಂತರಿ ಔಷಧಾಲಯ,
ಪೋಸ್ಟ:— **ಕುಮಟಾ.** (ಉ. ಕನ್ನಡ.)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪೊಪ್ಯುಲರ್ ಇನ್ಶೂರೆನ್ಸ್ ಕೋ ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.

ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂ. 10/-ರ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ನಿಶ್ಚಲವಾದ — ಸೌಕರ್ಯಗಳವೆ ಯಥೋಚಿತವಾದ — ಪುರಸ್ಕಾರಗಳಿವೆ.
ತಪ್ಪದೆ ವ್ಯವಹಾರ ಬೆಳೆಸಿರಿ.

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರ :—

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು:- ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900

ಓಂ

FIXED RATE.

ದಾಸಪ್ಪಾ ಕೃಷ್ಣಪ್ಪಾ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ.

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಟ್ಟಾರೇಷ್ಮೆಯ ಖಣಗಳೂ. ಕೋಟಿಂಗ ಮ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖದ್ದರ ಮಡಿಗಳೂ, ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಭೂತ ಟ್ರಂಕುಗಳೂ, ಛತ್ರಿಗಳೂ ಮೊದಲಾದ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel - "Honesty." **D. K. DHAKAPPA BROS.,**

Cloth Merchants,
SIRSI N. KANARA.

ಹೊಸ ಮಾಲು.

ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ.ಪಿ ೪ ಆಣೆ ಡಜನ್ ೧ಕ್ಕೆ ರೂ ೨-೮-೦ ವಿ. ಪಿ ೦-೬-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟಡ್, ಪೋ. ಬಾ. ೫೧೦, ಪೋಕರ್ಟೌನ ಮದರಾಸ

ಇವನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B. 1270.

Monday, 25th November, 1935.

ವರ್ಷ ೧೮

ಕಾನಡಾವೃತ್ತ

THE KANARA NEWS.

ಸಂಚಿಕೆ ೩೧

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿನಿಂದ ರೂ. 3-1-0.
ವ್ಹಿ. ಪಿ. ಖರ್ಚುವೆಚ್ಚ ಸೇರಿ ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-0
೮ ನಂತ್ರ ಪ್ರತಿಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೫ ಮಾಹೆ ನವಂಬರ ಸನ್ ೧೯೩೫ನೇ ಇಸವಿ.)—

ರೂ. ೧೦ ರಸಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩|| ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧|| ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ.

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬.)

ಬ್ಯಾಹಟ್ಟಿಯವರ ಬಿಲ್ಡಿಂಗ, **ಹುಬ್ಬಳ್ಳಿ.**

ಈ ಕೆಳಗಿನ ನಗರಗಳಲ್ಲೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಳಮ್, ಆಲಪ್ಪಿ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ.

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟು, ಲಿಮಿಟೆಡ್, ಉಡುಪಿ.

ಶಾಖೆಗಳು:- ಉಡುಪಿ, ಬ್ರಹ್ಮಾವರ, ಹೊನ್ನಾವರ, ಕುಂದಾಪುರ, ಕುಮಟಾ, ಕಾರವಾರ, ಸಿರ್ಸಿ, ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ, ಕಣ್ಣಾನೂರ, ಪಯ್ಯನೂರ, ಹಂಗಾರಕಟ್ಟಾ, ಬಳ್ಳಾರಿ ಮತ್ತು ಕಾಂಞಂಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೆಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವದು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6ಕ್ಕಿರಷ್ಟು ಬಡ್ಡಿ ಸಿಗುವದು. ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು.

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ. ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ. ನಮ್ಮ **ಪಿಗ್ಮಿ ಡಿಪೋಜಿಟ್ ಮತ್ತು ಕ್ಯುಮ್ಯುಲೇಟಿವ್ ಡಿಪೋಜಿಟ್ ಸ್ಕೀಮ** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು.

ಕಾಯಂ ಠೇವು:— ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ. 5, 5½, 6 ರಂತೆ ಬಡ್ಡಿ.

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ.

ಚಿನ್ನಾಭರಣಗಳ ಈಡಿನ ಮೇಲೆ ಶೇಕಡಾ ೭|| ಯಂತೆ ಬಡ್ಡಿ ದರದಿಂದ ಸಾಲ ಕೊಡಲಾಗುವದು

ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

ಕುಮಟಾ,
ತಾ. ೧೫-೭-೧೯೩೫

G. S. Nayak,
ಏಜಂಟ, ಕುಮಟಾ.

ಬನ್ನಿರಿ! || ಶ್ರೀ ಚಂದ್ರಮೌಳೇಶ್ವರ ಪ್ರಸನ್ನಃ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ !

ಸೂಚನೆ:- ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ಜಿಲ್ಲಾ ಸಮಾಚಾರ.

ಕುಮಟಾ— (ತಾ ೧೫-೧೧-೩೫) ಮಾಹಿತಿಗಾರರೊಬ್ಬರು ತಿಳಿಸುವದೇನಂದರೆ . ಕೋರ್ಟಿನ [illegible] ದ ಪ್ರಕರಣದ ನಿಜವಾದ ಮಾಹಿತಿ ಈ ಪ್ರಕಾರವಿರುತ್ತದೆ ೧೯೩೦ನೇ ಇಸವಿಯ ಜೂನ ತಿಂಗಳಲ್ಲಿ ೩೦ರ ಕಲಮ ಕಲಕ ತಿರಿತು. ರಾ। ಅಯ್ಯರವರು ಸಂತರ ಕೇಸ ಮಾಡಿದರು ಅವರು ಬೋರ್ಡಿನ [illegible] ಎಂಬತ ಮಾಡಿದ್ದ. ಬಂದ ದೂರು ಒಂದು ಜಿಲ್ಲಾ ಬೋರ್ಡಿನವರ ಮತ ಸಭೆಯದರ ಚಾರ್ಜು ಮಂಜೂರ ಮಾಡಿ ಸಿದರು. ಚಾರ್ಜು ನ್ಯಾಯದ ೩ ಜನ ಸಭಾಸದರು ರಾ। ಅಯ್ಯರವರು ನಿಂದುದು ಗಳಿಂದಲೇ ಘೋಷಿಸಿ ಅದರಂತೆಯೇ ಚಾರ್ಜಿಯ ಧೋರಣವನ್ನು ಅನುಸರಿಸಿದರು ಇಷ್ಟು ಸಭೆಯದರಿಗೆ ಇಷ್ಟು ಸರಿದೋರದಲ್ಲಿ ಅವರು ತಪ್ಪಿದ್ದರಿದರು ಮಂಡಳದ ಪರಿಗಣನೆ ಮಾಡಲಿಲ್ಲ ಬೋರ್ಡಿನವರು ಚಾರ್ಜು ನ ವರದಿಯನ್ನು ಬಹು ಮತದಿಂದ ಎತ್ತಿ ಹಿಡಿದರು. ರಾ ಅಯ್ಯರವರು ನಿಷೇಧಿಸಿಗಳಿಂದ ತೀರ್ಮಾನ ಮಾಡಿದರು ಅಪ್ಪೀಲಿಗೆ ೩-೪ ವರ್ಷ [illegible] ಈ ಅವಧಿಯಲ್ಲಿ ಸರಕಾರಿ ಲೆಕ್ಕ ತಪಾಸಕರು ರೀತಿಯಂತೆ ಲೆಕ್ಕ ತಪಾಸ ಮಾಡಿದರು ರಾ। ಅಯ್ಯರವರ ಲೆಕ್ಕ ಸರಿಯಾಗಿರುವದಿಲ್ಲವೆಂತಲೂ, ಚಾರ್ಜು ಸರಿಯಾಗಿದೆಯೆಂತಲೂ ಅದರ ಮೇಲಧಿಕಾರಿಗಳಿಗೆ [illegible] ಈ ವರದಿಯ ಮೂಲಕ ಮಾಡಿಯೂ ಚಾರ್ಜ ಮಂಡಳದ ವರದಿಯಿಂದ ಮು। ಕಲೆಕ್ಟರ ಸಾಹೇಬರಿಗೆ ನಿವರ್ತನವಾಗಲಿಲ್ಲ ಪ್ರಕರಣದ ದಪ್ತರಗಳು ಚಾರ್ಜ ಮಾಡಲಿಕ್ಕೆ ಇದ್ದದ್ದು ಮು। ಮಾಮಲೇದಾರ ಕಚೇರಿಗೆ ಹಾಜರಾಯಿತು ಮಾಮಲೇದಾರರು ಚಾರ್ಜ ಮಾಡಿ ವಂಚನೆಯಾದದ್ದು ಕಂಡುಬರುತ್ತದಾಗಿ ರಿಪೋರ್ಟ ಮಾಡಿದರು. ಆ ಮೇಲೆ ಮು। ಕಲೆಕ್ಟರರು ಕಾಯಿದೆ ಪಂಡಿತರ ಸಲಹೆ ತಕ್ಕೊಂಡು ರಾ। ಅಯ್ಯಂಗಾರರ ಮೇಲೆ ಖಟ್ಲೆ ಮಾಡಬೇಕೆಂದು ಇಲ್ಲಿಯ ಫೌಜದಾರರಿಗೆ ಅಪ್ಪಣೆ ಮಾಡಿದರು. ಫೌಜದಾರರ ಕೂರ್ಟ ಚಾರ್ಜು ಮಾಡಿ, ಮಂಜೂರು ಅದೀನದಲ್ಲಿ ಅಯ್ಯಂಗಾರರು ತಪ್ಪು ಕಂಡ ಹಿಡಿದು, ಆ ಮೇಲೆ ನೇ ರಾ। ಅಯ್ಯಂಗಾರರಿಗೆ ಸಹಿ ಹಾಕಿಸಿದರು ಮತ್ತು ಲೆಕ್ಕ ಪತ್ರಗಳ ಪೂರ್ಣ ಚಾರ್ಜಿಯಿಂದ ವಂಚನೆಯು ಎಲ್ಲಿ ಬರುವಗಳನ್ನು ತೋರಿಗೊಡುವದಕ್ಕೆ ಸ್ಪೆಶಲ್ ಲೆಕ್ಕ ತಪಾಸಕರನ್ನು ಬೇಡಿದರು ಅದರಂತೆ ಸ್ಪೆಶಲ್ ಲೆಕ್ಕ ತಪಾಸಕರು ಒಂದು ತಪಾಸ ಮಾಡಿದರು ಅವರಿಗೂ ವಂಚನೆ ಆದದ್ದು ನಿಜವೆಂದು ಕಂಡ ಬಂದಿದೆ ಆದರೆ ವಂಚನೆ ಮಾಡಿದ ಬಗ್ಗೆ ಪತ್ತೆಹಚ್ಚಲಿಕ್ಕೆ ಆಗದಂತೆ ಲೆಕ್ಕವಿಟ್ಟಿರುತ್ತಾರಾಗಿ ಅವರ ಅಭಿಪ್ರಾಯ ಆಗಿರುತ್ತದೆ. ಈ ಅಭಿಪ್ರಾಯವನ್ನು ಪ್ರಕರಣ ೪ ವರ್ಷ ಹಿಂದಿನದೆಂಬುವ ಸಂಗತಿಯನ್ನು ಗಮನಿಸಿ ಮೇಲಧಿಕಾರಿಗಳು ಖಟ್ಲೆ ಬೇಡವೆಂತ ನಿರ್ಣಯಿಸಿದರು ಡಿಪಾರ್ಟಮೆಂಟಲ್ ಇಲಾಜು ಮಾಡಿದರೆ ಸಾಕೆಂದು ನಿರ್ಣಯ ಮಾಡಿದರು. ಫೌಜದಾರರು ಸ್ವತಃ ಖಟ್ಲೆಯನ್ನು ಹರಕ ತಕ್ಕೊಳ್ಳಲಿಲ್ಲ. ರಾ। ಅಯ್ಯಂಗಾರರ ಮೇಲೆ ಡಿಪಾರ್ಟಮೆಂಟಲ್ ಇಲಾಜು ಮಾಡುವ ಬಗ್ಗೆ ಮು। ಕಲೆಕ್ಟರ ಸಾಹೇಬರು ಡಿ। ಲೋ। ಬೋರ್ಡಿಗೆ ಬರೆದು ಹಾಕಿದ್ದಾರೆಂದು ತಿಳಿಯುತ್ತದೆ ಫೌಜದಾರರು ಪಕ್ಷಪಾತ ಮಾಡಿಲ್ಲ. ಅವಕಾಶದಿಂದ ಬಿಡಿದು ಚಾರ್ಜು ಮಾಡಿದ್ದಾರೆ. ಅವರಿಗೆ ಎಳ್ಳಷ್ಟೂ ದೋಷ ಕೊಡಲಾಗದು. ರಾ। ಅಯ್ಯಂಗಾರರಿಗೆ ತಪ್ಪಾಗಿದ್ದರೆ ಅದಕ್ಕೆ ಅವರೇ ಹೊಣೆಗಾರರು, ಫೌಜದಾರರಲ್ಲ"

ಶ್ರೀ ಕ್ಷೇ. ಗೋಕರ್ಣನಿವಾಸಿಗಳಾದ ವೇ। ನಾಗಪ್ಪ [illegible] ಕಾರಂತರವರು ಮಾಡಿಕೊಟ್ಟ ಬರ್ಮಾಸಾರದ ಮೇರೆಗೆ ಕಳೆದ ದೀವಳಿಗೆಯಿಂದ ಈ ಮಹಾಬಲೇಶ್ವರ ದೇವಸ್ಥಾನದಲ್ಲಿ ಬಾಹ್ಮ-ಬ್ರಾಹ್ಮಣರಿಗೆ "ಸಿಧಾ" ಕೊಡುವ ವ್ಯವಸ್ಥೆಯಾಗಿರುತ್ತದೆ. ಶ್ರೀ ದೇವಸ್ಥಾನದಲ್ಲಿ ನಡೆಯುವ ಬೇರೆ ಕೆಲವು ಸೇವೆಗಳ ಖರ್ಚಿನ ವ್ಯವಸೆಯನ್ನು ಸಹ ರಾ। ಕಾರಂತರವರು ಮಾಡಿದ್ದಾರೆ ನೂತನ ಸೇವೆಗಳನ್ನು ನಿರ್ಮಿಸದೆ ಇದ್ದ ಸೇವೆಗಳನ್ನೇ ಭದ್ರಪಡಿಸಿದ್ದದು ಪ್ರಶಂಸನೀಯವು.

ಅಂಕೋಲಾ— ಕಳೆದ ಮಾಮಲೇದಾರರಾದ ರಾ। ಸಾ। ನೇಲಂಗಿಯ ಅವರಿಗೆ ಗದಗಿಗೆ ವರ್ಗವಾಗಿದೆ. ಈ ವರ್ಗವರ್ಗಿಯನ್ನು ರದ್ದುಪಡಿಸಿಕೊಳ್ಳುವದಿ ಹಲವರು ಮು। ಕಮಿಶನರ ಸಾಹೇಬರಿಗೆ ತಂತಿ ಮಾಡಿದ್ದರು ರಾ। ತಿಂಗಾ ಮಾಸ್ತರರು ಸಹ ಸ್ಪೆಶಲ್ ತಮ್ಮದೇ ತಂತಿ ಮಾಡಿದ್ದರೆಂಗಿ ತಿಳಿಯುತ್ತದೆ ಅವರಿಗೆಲ್ಲರಿಗೂ 'ನಿಮ್ಮಯ ವರ್ಗವರ್ಗಿ ರದ್ದುಪಡಿಸಲಿಕ್ಕೆ ಬರುವದಿಲ್ಲ!" ಎಂದು ಉತ್ತರ ಬಂದಿರುತ್ತದೆ.

ಶ್ರೀ ಪ.ರ. ಶ್ರೀ ಕಾಂಚೋದರಿ ಮತ್ತು ಶ್ರೀ ಮಹಾಮಾಯಾ ದೇವರ ವನಭೋಜನ ಉತ್ಸವವು ಕಳೆದ ೧೫ನೇ ದಿನ ವಿಜೃಂಭಣೆಯಿಂದ ನೆರವೇರಿತು. ರಾ। ಮಹಾಲೆಯವರು ವನಭೋಜನದಲ್ಲಿ "ಕೇಶೆ ಭಾತ" ವನ್ನು ಮಾಡಿಸಿದ್ದರು।

೧೫ನೇ ರವಿವಾರ ಹಟ್ಟಿಕೇರಿಯ ಬಳಿ ಅನರ್ಥವಾಯಿತು. ಮಾಧವ ವೈಕುಂಠ ಭಟ್ಟನೆಂಬ ಹರೆಯದವನು ಹಟ್ಟಿಕೇರಿ ಹೊಳೆಯಲ್ಲಿ ಮುಳುಗಿ ತೀರಿಕೊಂಡನು. ಅವನಿಗೆ ಈಜಬರುತ್ತಿದ್ದಿಲ್ಲ. ಒಂದು ದೋಣಿಗೆ ಹಿಡಿದು ಈಜಾಡಲಿಕ್ಕೆ ಯತ್ನಿಸುತ್ತಿದ್ದನು. ದೋಣಿಯು ಕೈಜಾರಿ ಹೋಯಿತೋ ಏನೋ? ಮಾಧವನು ಮುಳುಗಿದನು. ದೂರದಿಂದ ನೋಡಿದವರು ಓಡಿಬಂದು ಅವನನ್ನು ಮೇಲಕ್ಕೆಳೆಯಲು ಯತ್ನ ನಡಿಸಿದರು. ಆದರೆ ದೈವವೇ ತಿರುಗಿತ್ತು! ಮಾಧವನು ಕೈಗೆ ಸಿಗಲಿಲ್ಲ! ಕೊನೆಯಲ್ಲಿ ಸತ್ತೇ ಮೇಲೆ ಹೊತ್ತು

[ಮುಂದೆ ೧೧ನೇ ಪಾನ ನೋಡಿರಿ.]

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!
ವೃದ್ಧಿಕಷಾಯ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಸ್ರಾವ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾದಿಲೆಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ದ್ರಾವ (ಪಕ್ಷವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ
ಭುವನಾಂಜನ (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!
ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ಸಂಪೂರ್ಣ ಸಂತುಷ್ಟನಾದೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಪಡೆದಿರುವ [illegible] ದಂತೆ ತಿಳಿಯುತ್ತದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯರ ಸೇವಕ್ಕೆ ಸೇರಿದವರಾಗಿಯೂ, ಗುಣಿಗಳಾಗಿಯೂ ಇರುವ ಶ್ರೀಮಂತರಾಗಿರುತ್ತಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಸ್ಥವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಣಪ್ರದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗಕ್ಕೆ ಅತ್ಯಗತ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವರು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ವೇಷಣೀಯರಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೫.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಅಲ್ಲಲ್ಲಿ ಇಷ್ಟಿಷ್ಟು!

ಮೋಟರಕರ-ಹೇರಿಕೆಯ ಕಾಯಿದೆ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಪ್ರಚಂಡ ವಿವಾದದಿಂದ ಮಂಜೂರಾಗಿದೆ. ಇದಕ್ಕೆ ಗವ್ಹರ್ನರರ ಸಮ್ಮತಿ ದೊರೆತೊಡನೆ ಇದರಂತೆ ಮೋಟರ ಕರದ ವ್ಯವಸ್ಥೆಯಾಗುವದು. ಇದೇ ಬರುವ ೧೯೩೬ನೇ ಇಸ್ವಿ ಎಪ್ರಿಲ ೧ನೇ ತಾರೀಖಿನಿಂದ ಪ್ರಾಂತಿಕ ಸುಂಕದ ಕಟ್ಟೆಗಳು ನಾಮಶೇಷವಾಗುವವು. ಇವುಗಳ ಉಪದ್ರವದಿಂದ ಮೋಟರಿನವರು ತಪ್ಪಿದರು. ಆದರೆ ಸರಕಾರಕ್ಕೆ ಮೋಟರ ವಾಹನ ತೆರಿಗೆಯನ್ನು ಒಮ್ಮೆಲೇ ಕೊಡಬೇಕೆಂದು ಈ ಕಾಯಿದೆಯ ಅಭಿಪ್ರಾಯವಿದೆ. ಸುಂಕದಕಟ್ಟೆ ಹೋಗಿ ಮೋಟರ ತೆರಿಗೆ ಬಂತು. ಇಷ್ಟೇ ಈ ಕಾಯಿದೆಯ ಅಭಿಪ್ರಾಯ. ಮುಂಬಯಿ ಸರಕಾರದ ಪರವಾಗಿ ಅರ್ಥಸಚಿವರಾದ ಖಾನಬಹಾದ್ದೂರ ಕೂಪರರವರು ನುಡಿದಂತೆ,' ಸುಂಕದ ರಕಮಿನಲ್ಲಿ ಭೇದವಿಲ್ಲ. ಸುಂಕದ ಎತ್ತುವಳಿ ಕ್ರಮದಲ್ಲಿ ತಿದ್ದುಪಡಿಯಾಗಿದೆ. ಸುಂಕದ ಕಟ್ಟೆಗಳ ಸುಂಕದ ಗೊಬಲಿಗೂ ಸುಂಕದ ಕ್ರಮವೂ ವಾಹನ ಕಂಟಕವೆಂದು ಲೋಕಾಭಿಪ್ರಾಯವಾಗಿ ಅವನ್ನು ಕಿತ್ತೊಗೆಯಬೇಕಾಗಿ ಬಹು ಕಾಲದಿಂದ ಪ್ರಜಾಪ್ರಮುಖರು ಕಾದಾಡುತ್ತಿದ್ದರು. ಸರಕಾರವು ಅವನ್ನು ಶೀಘ್ರವೇ ಕಿತ್ತೊಗೆಯುತ್ತೇವಾಗಿ ಅಭಿವಚನ ಕೊಟ್ಟು ಸುಂಕದ ರಕಮಿನಿಂದ ಮೋಟರಿನವರು ಸಾಯುವದಿಲ್ಲ. ಎತ್ತುವಳಿ ಕ್ರಮದಿಂದ ಸಾಯುತ್ತಾರೆಂಬ ದೊಡ್ಡ ತತ್ವವನ್ನಾಧರಿಸಿ ಹೊಸ ಕಾಯಿದೆಯನ್ನು ಘಟಿಸಿದೆ. ಸರಕಾರೇತರ ಸಭಾಸದರು ಮೆಟ್ಟು ಮೆಟ್ಟಿಗೆ ಅಡ್ಡಗಟ್ಟಿದರು. ಸೂಚನೆ, ಉಪಸೂಚನೆ, ಮೇಲ್ಸೂಚನೆಗಳನ್ನು ತಂದು ಮೋಟರ ತೆರಿಗೆಯ ಭಾರವನ್ನು ತಗ್ಗಿಸಲು ಬಹು ಪ್ರಯತ್ನ ಮಾಡಿದರು. ಆದರೆ ಮೋಟರ ತೆರಿಗೆಯು ಪರಮಾವಧಿಯ ರಕಮು ಕಾಯಿದೆಯಲ್ಲಿ ನಮೂದಿಸಿದ್ದಾಗ್ಯೂ ಅಷ್ಟು ದರದಿಂದ ವಸೂಲಾಗಲಿಕ್ಕಿಲ್ಲವಾಗಿ ಅಭಿವಚನ ಕೊಟ್ಟು 'ವಿಚಾರವಂತ' 'ಜವಾಬದಾರ' ಸಭಾಸದರಿಗೆ ಭ್ರಮೆಯನ್ನುಂಟುಮಾಡಿ ಕಾಯಿದೆಯನ್ನು ಮಂಜೂರ ಮಾಡಿಕೊಂಡರು. ಕಾಯಿದೆಗೆ ವಿರೋಧ ಮಾಡಿ ಉಗ್ರಭಾಷಣ ಮಾಡಿದ ಕೆಲ ಬ್ರಾಹ್ಮಣೇತರ ಸಭಾಸದರೂ ಯುರೋಪಿಯನ್ನರೂ ಸರಕಾರದ ಪರವಾಗಿ ಮತ ಕೊಟ್ಟು ಕಾಯಿದೆಯನ್ನು ಮಂಜೂರ ಮಾಡಿದ್ದಾರೆ. ಪ್ರಚಂಡ ಬಹುಮತದಿಂದಲೇ ಸರಕಾರವು ಗೆದ್ದುಕೊಂಡಿತು. ೫೩ ಮಂದಿ ಸಭಾಸದರು ಸರಕಾರದ ಪರವಾಗಿ ಮತಕೊಟ್ಟರು. ೨೪ ಮಂದಿ ವಿರೋಧಿಸಿದರು. ಈ ಪ್ರಕಾರ ಈ ಕಾಯಿದೆಯು ಮಂಜೂರಾಗಿದೆ. ಸುಂಕದ ಕಟ್ಟೆಗಳು ನಾಮಶೇಷವಾದವೆಂಬದೊಂದೇ ಸಮಾಧಾನ!

* * *

ಈ ಜಿಲ್ಲೆಯೊಳಗೆ ಬಿನ್‌ಶೇತಕಿ ತಪಾಸ ನಡೆದಿದೆ. ಪುರಾತನ ಕಾಲದಿಂದ ವಾಸ್ತವ್ಯ ಮಾಡಿಕೊಂಡಿದ್ದ ಮನೆಗಳ ಸ್ಥಳ ಬಿನ್-ಶೇತಕಿಯೆಂದು ಮುಲ್ಕೀ ಅಧಿಕಾರಿಗಳು ಅಭಿಪ್ರಾಯಪಟ್ಟು ಮನಸ್ವಿ ಬಿನ್‌ಶೇತಕಿ ಆಕಾರವನ್ನು ಹೇರಿ ಜನರಿಗೆ ದಣಿಸತೊಡಗಿದ್ದಾರೆ. ಬಿನ್‌ಶೇತಕಿ ಕಾನೂನು ನಿರಂಕುಶವಾದದ್ದು. ಬಿನ್‌ಶೇತಕಿ ಮಾಡಿಕೊಳ್ಳಬೇಕಾದರೆ ೫ ಗುಂಟೆಗೆ ಕಡಿಮೆಯಾಗಿ ಮಾಡಿಕೊಳ್ಳಕೂಡದು. ೫ ಗುಂಟೆ ವಜಾ ಹೋದ ಬಳಿಕ ಉಳಿದ ಸ್ಥಳ ೫ ಗುಂಟೆಗೆ ಕಡಿಮೆ ಇರಬಾರದು. ಹೀಗೆ ಬಿನ್-ಶೇತಕಿಯ ನಿಯಮಗಳು ಈ ಹಿಂದೆಯೇ ಮಾಡಲ್ಪಟ್ಟಿವೆ. ೯ ಗುಂಟೆ ಹಿತ್ತಲಲ್ಲಿ ಮನೆಯಿದ್ದರೆ ೯ ಗುಂಟೆ ಸ್ಥಳಕ್ಕೆ ಬಿನ್-ಶೇತಕಿ ಆಕಾರ ತೆರಬೇಕು. ಮೊಟ್ಟಮೊದಲು ಈ ನಿಯಮಗಳು ಈಗಿನ ಪರಿಸ್ಥಿತಿಗೆ ಅನ್ವಯಿಸುವದಿಲ್ಲ. ಸರಕಾರದ ಕಡೆ ಬಿನ್-ಶೇತಕಿ ಮಾಡಿಕೊಳ್ಳಬೇಕಾಗಿ ಯಾರೂ ಅರಿಕೆ ಮಾಡಿಕೊಂಡಿಲ್ಲ. ಪೂರ್ವಕಾಲದಿಂದ ನಡೆದು ಬಂದಂತೆ ಜನರು ಮನೆ ಕಟ್ಟಿಕೊಂಡಿದ್ದಾರೆ. ಶೇತಕಿಯಾಗುವ ಸ್ಥಳದಲ್ಲಿ ೫ ಗುಂಟೆಗೆ ಕಡಿಮೆಯಾಗದಷ್ಟು ಅಂದರೆ ಅಂತು ೧೦ ಗುಂಟೆ ಹಿತ್ತಲ ಇಲ್ಲವೆಂಬ ನೆವದ ಮೇಲೆ ಇಡೀ ಪ್ರದೇಶವನ್ನು ಒತ್ತಾಯದಿಂದ ಬಿನ್‌ಶೇತಕಿ ಮಾಡಿ ಕರ ಹೇರುವದು ಒಳ್ಳೇ ಸುಲಿಗೆ. ಚಿಕ್ಕ-ಪುಟ್ಟ ಹಿತ್ತಲುಗಳಲ್ಲಿ ಮನೆ ಮಾಡಿಕೊಂಡಿದ್ದವರು ಮನೆ ಮಾರಾಟ ಮಾಡಿ ಬಿಟ್ಟುಹೋಗುವದೇ. ಮನೆಯ ಅಡಿಜಾಗದಷ್ಟು ಭೂಮಿಯನ್ನು ಬಿನ್‌ಶೇತಕಿ ಮಾಡಿದ್ದಲ್ಲಿ ಅದೊಂದು ದುಃಖದಲ್ಲಿ ಸುಖವಾಗುತ್ತಿತ್ತು. ಅದನ್ನು ಬಿಟ್ಟು ೫ ಗುಂಟೆ ಜಾಗಕ್ಕೆ ಕಡಿಮೆಯಾಗದಂತೆ ಮೊಟ್ಟಮೊದಲು ಬಿನ್-ಶೇತಕಿ ಮಾಡಬೇಕಾಗಿಯೂ ಆ ಮೇಲೆ ೫ ಗುಂಟೆಗೆ ಕಡಿಮೆಯಾಗದಷ್ಟು ಸ್ಥಳ ಉಳಿಯಬೇಕಾಗಿಯೂ, ಹಾಗೆ ಕಡಿಮೆ ಬೀಳುವಲ್ಲಿ ಇಡೀ ಸ್ಥಳವನ್ನು ಬಿನ್‌ಶೇತಕಿ ಮಾಡಬೇಕಾಗಿಯೂ ವಿಧಿಸುವದು ತೀರ ಅನ್ಯಾಯವಾದದ್ದು. ಬಿನ್‌ಶೇತಕಿ ಮಾಡಲು ಅಪೇಕ್ಷಿಸಿ ಮುಲ್ಕೀ ಅಧಿಕಾರಿಗಳ ಕಡೆ ಅರಿಕೆ ಮಾಡಿಕೊಳ್ಳಹೋಗುವವರಿಗೆ ಸರಕಾರವು ಬೇಕಾದ ನಿಯಮಗಳನ್ನು ಹಾಕಿ ನಿಯಂತ್ರಿಸಬಹು

THE AGRICULTURAL & INDUSTRIAL BANK, LIMITED.
(Incorporated in British India)
Head office:- COONDAPOOR. **Branch:- KUMTA.**
Telegrams:- "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯೇಂಕ್, ಲಿಮಿಟೆಡ್.
ಹೆಡ್ ಆಫೀಸು:— ಕುಂದಾಪುರ. **ಬ್ರೆಂಚ:—** ಕುಮಟಾ.

ಠೇವಣಾತಿಗಳು.

ಕಾಯಂ ಠೇವು:-3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ 3½, 4½, 5½, 6, 6¼ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ. 2½ ವ ಜುಲೈಯಿಂದ ಡಿಸಂಬರ ಅಖೈರ ವರೆಗೆ 1¼ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು:— ಶೇಕಡಾ ರೂ 4ರಂತೆ ಬಡ್ಡಿ. ಬಿನ್‌ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವವು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ನೋಡಿ ಒಳ್ಳೇ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳ ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ **ಮಾಹಿತಿ ಪುಸ್ತಕ (Rules of Business)**ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S Nayak.
Managing Directors.

ಮು. ಆದರೆ ಆ ನಿಯಮಗಳನ್ನು ಜನಸಾಮಾನ್ಯರಿಗೆ ಹಚ್ಚುವದು ನ್ಯಾಯವಲ್ಲ. ಬಿನ್‌ಶೇತಕಿ ನಿಯಮಗಳಾಗಿ ಬಹು ಕಾಲವಾದಾಗ್ಯೂ ಪುರಾತನ ಕಾಲದಿಂದಿದ್ದ ಇಮಾರತುಗಳಿಗೆ ಅವನ್ನು ಈ ತನಕ ಹಚ್ಚದೆ ಈಗಲೇ ಅವನ್ನು ಹಚ್ಚಿ ಈ ಪ್ರಕಾರ ಜನರಿಗೆ ಕಾಡುವದು ವಿಹಿತವಲ್ಲ. ಈಗಿನ ದಿನಮಾನಗಳಲ್ಲಿ ಇದ್ದ ತೆರಿಗೆಯನ್ನು ತೆರುವದೇ ಕಷ್ಟವಾಗಿದೆ. ಪಟ್ಟಣಗಳಲ್ಲಿರುವವರಿಗೆ ಹೊಟ್ಟೆ ತುಂಬಿಕೊಳ್ಳುವ ಬಗೆ ಹೇಗೆಂದು ಚಿಂತೆಯಾಗುತ್ತಿರುವಾಗ ಸರಕಾರವು ಬಿನ್‌ಶೇತಕಿ ತೆರಿಗೆ ಹೇರಿ ಕಾಡಕೂಡದು; ಬಡಬಗ್ಗರಿಗೆ ದಣಿಸಕೂಡದು. ಪುನರಾಲೋಚಿಸಿ ಸರಕಾರವು ಹುಕುಮುಗಳನ್ನು ಹೊರವಿಸಬೇಕಾಗಿ ವಿನಂತಿ.

⁂

ಒಳಗಿಂದೊಳಗೆ ಏನು ಕುದಿಯುತ್ತದೆಂದು ತಿಳಿಕೊಳ್ಳುವದು ಕಠಿಣ. ಭಾರತ ಮಂತ್ರಿಗಳಾದ ಝೆಟ್ಲೆಂಡ ದೊರೆಗಳು ಹಿಂದೀಯರ ಮನವೊಲಿಸಲು ಯತ್ನಿಸುತ್ತಾರಾಗಿ ಹೇಳುತ್ತಾರೆ. ಪಂಡಿತ ಮದನಮೋಹನ ಮಾಲವೀಯರವರು ಸದ್ಯಕ್ಕೆ ಸಂಯುಕ್ತ ಪ್ರಾಂತದ ಗವ್ಹರ್ನರರ ಕಡೆ ೧-೧| ಘಂಟೆಯ ತನಕ ಅಂತರಂಗದಿಂದ ಸಂಭಾಷಣೆ ನಡಿಸಿದರಾಗಿ ಈ ಹಿಂದೆ ಪ್ರಕಟವಾಗಿದೆ. ಪಂಡಿತಜಿಯವರು ಈ ಕುರಿತು ವಿವರ ಕೇಳಿದಾಗ್ಯೂ ಖುಲಾಸ ಮಾಡಲೊಪ್ಪಲಿಲ್ಲ. ಕರಾಚಿಯ 'ಸಿಂಧ ಒಬ್ಝರ್ವರ' ಪತ್ರಿಕೆಯ ದಿಲ್ಲಿಯ ಸುದ್ದಿಗಾರರು ರಾಷ್ಟ್ರೀಯ ಸಭೆಯವರ ಸಮಾಧಾನಕ್ಕಾಗಿ ಹಿಂದುಸ್ತಾನ ಸರಕಾರವು ಉಪಾಯ ಕೈಕೊಳ್ಳುವದಾಗಿ ತಿಳಿಸುತ್ತಾರೆ. ಸರ್ ತೇಜಬಹಾದ್ದೂರ ಸಪ್ರು ಮೊದಲಾದ ಮಹಾನುಭಾವರು ಸರ್ವಾಧಿಪತಿಗಳಿಗೆ ಪುನಃ ಪುನಃ ಭೆಟ್ಟಿಯಾಗುತ್ತಿದ್ದಾರಂತೆ. ಸರ್ವಾಧಿಪತಿಗಳು ಅಧಿಕಾರತ್ಯಾಗ ಮಾಡುವ ಪೂರ್ವದಲ್ಲಿ ಹಿಂದುಸ್ತಾನಕ್ಕೆ ಏನಾದರೊಂದು ಇನಾಮು ಕೊಡುವರಾಗಿಯೂ ಈ ಸುದ್ದಿಗಾರರ ಅಂಬೋಣ. ಸರ್ವಾಧಿಪತಿಗಳು ಮಹಾತ್ಮರ ದರ್ಶನ ಪಡೆದು ಅವರಿಗೆ ಸಂತೈಸುವರಾಗಿಯೂ ಸುದ್ದಿಗಾರರು ತರ್ಕಿಸುತ್ತಾರೆ. ಇಟಾಲಿ-ಹಬಶಿ ಯುದ್ಧ ಸಮಯದಲ್ಲಿ ಹಿಂದೀಯರನ್ನು ಸಂತೋಷಪಡಿಸುವದಕ್ಕಾಗಿ ಸಾಮ್ರಾಜ್ಯ ಸರಕಾರದ ಪ್ರಯತ್ನ ನಡೆದಿದೆಯೆಂದು ತಿಳಿಯಕೂಡದು. ಯುದ್ಧಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ. ಹೊಸ ರಾಜ್ಯಘಟನೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಹಿಂದೀ ಪ್ರಮುಖರ ಸಹಕಾರವಿರಬೇಕೆಂದು ಭಾರತ ಮಂತ್ರಿಗಳ ಸದಭಿಪ್ರಾಯವಾಗಿರುವದರಿಂದ ಈಗಿನ ಸಂಧಾನ ಸೂತ್ರಗಳು ಓಡ್ಯಾಡುತ್ತವಾಗಿ ಅವರು ಹೇಳುತ್ತಾರೆ. ಮಹಾತ್ಮರಾದಿ ರಾಷ್ಟ್ರೀಯ ಸಭೆಯವರು ಸ್ವಾಭಿಮಾನಕ್ಕೆ ನ್ಯೂನತೆ ಬರದಂತೆ ಸಂಧಾನ ಮಾಡಿಕೊಳ್ಳಲಿಕ್ಕೆ ಯಾವಾಗಲೂ ಸಿದ್ಧರೇ. ರೌಪ್ಯ ರಾಜ್ಯಾರೋಹಣ ಮಹೋತ್ಸವದಲ್ಲಿ ಹಿಂದುಸ್ತಾನಕ್ಕೆ ರಾಜಾನುಗ್ರಹವಾಗುವದೆಂದು ಸನಾತನ ಪರಂಪರೆಯವರನೇಕರು ಭಾವಿಸಿ ಮುಂದಾಗಿಯೇ ಹರುಷಗೊಂಡಿದ್ದರು. ಆಗ ಏನೂ ಪ್ರಾಪ್ತಿಯಾಗಲಿಲ್ಲ. ಈಗಾದರೂ ಹಾರೈಸುತ್ತಿರುವಾ. ಆದರೆ ಒಂದು ಮಾತು:— ಹಿಂದೀಯರಲ್ಲಿ ಪರಾಕ್ರಮವಿಲ್ಲದಿದ್ದರೆ, ಹಿಂದೀಯರು ರಾಷ್ಟ್ರಸ್ವಾತಂತ್ರ್ಯನಿರ್ಧಾರ ಹಿಡಿಯದಿದ್ದರೆ, ಅವರಿಗೆ ಅವಶ್ಯವಿದ್ದ ಸ್ವಾರ್ಥತ್ಯಾಗ ಮಾಡಲು ತಕ್ಕವರಾಗಿರದಿದ್ದರೆ ಹಿಂದೀಯರಿಗೆ ಸರ್ವಾಧಿಪತಿ ವಿಲಿಂಗಡನ್ ದೊರೆಗಳಾಗಲಿ, ಸಾಮ್ರಾಜ್ಯ ಸರಕಾರವಾಗಲಿ ಹಿಂದುಸ್ತಾನಕ್ಕೇನೂ ಕೊಡರು. ಇನಾಮು ಸಮಾರಂಭದ ಸಮಯ ಹಾರೈಸುತ್ತಿರುವ ಕೈಕೊಂಡ ಕೆಲಸವನ್ನು ರಾಷ್ಟ್ರೀಯ ಸಭೆಯವರೂ ಜನಸಾಮಾನ್ಯರೂ ಪುರಸ್ಕರಿಸಿ ರಾಷ್ಟ್ರಸಂಘಟನೆಯನ್ನು ಸಾಧಿಸಬೇಕು. ಅಂದರೆ ರಾಷ್ಟ್ರಸ್ವಾತಂತ್ರ್ಯವು ತಾನಾಗಿಯೇ ಬೆನ್ನಿಗೆ ಬಂದೀತು.

⁂

ಪಾಶ್ಚಾತ್ಯರು ಆದಿಭೌತಿಕರು. ಪೌರ್ವಾತ್ಯರು ಆಧ್ಯಾತ್ಮಿಕರು. ದೃಶ್ಯ ಸೃಷ್ಟಿಯ ಹೊರಗೆ ಜಗತ್ತಿಲ್ಲವಾಗಿ ಪಾಶ್ಚಾತ್ಯರ ಅಂಬೋಣ. ಪೌರ್ವಾತ್ಯರಿಗೆ ಅದೃಶ್ಯ ಜಗತ್ತೇ ಪ್ರಧಾನ ವಿಚಾರದ ವಿಷಯ. ಪುನರ್ಜನ್ಮ ಇದೊಂದು ಪೌರ್ವಾತ್ಯರ ಕಲ್ಪನೆ. ಪ್ರಾಣಿಯು ಕರ್ಮಾನುಸಾರವಾಗಿ ಬೇರೆ ಬೇರೆ ಯೋನಿಗಳಲ್ಲಿ, ಬೇರೆ ಬೇರೆ ಸ್ಥಳಗಳಲ್ಲಿ ಜನ್ಮ ಹೊಂದುತ್ತಾನೆಂದು ಸನಾತನಿಗಳ ಸಿದ್ಧಾಂತವಿದೆ. ಇಂಥದೊಂದು ಪ್ರಕಾರವು ದಿಲ್ಲಿಯಲ್ಲಿ ಘಟಿಸಿದೆ. ದಿಲ್ಲಿಯ ಬಳಿಯಲ್ಲಿ ಚಿರಖಾನಾ ನ್ಯಾವ ಮೊಹಲೆಗೆ ರಂಗಬಹದ್ದೂರ ಮಥುರ ಎಂಬವರಿದ್ದಾರೆ. ಅವರ ಮಗಳು ಶಾಂತೋಕುಮಾರಿ ೮ ವರುಷ ಪ್ರಾಯದವಳು. ೩-೪ ವರುಷಗಳಿಂದ ಇವಳು ತನ್ನ ಪೂರ್ವ ಜನ್ಮದ ವೃತ್ತಾಂತವನ್ನು ಹೇಳುತ್ತಾಳೆ. ತಂದೆತಾಯಿಗಳು ಮೊದಮೊದಲು ಲಕ್ಷ್ಯಗೊಡಲಿಲ್ಲ. ಹುಡುಗಿಗೆ ಸಹಜ ನೋಡಬಂದವರೊಬ್ಬರಿಗೆ ಕುತೂಹಲವುಂಟಾಯಿತು. ಅವರು ಶಾಂತೋಕುಮಾರಿಯ ಕಡೆಯಿಂದ ಪೂರ್ವ ಕಥೆಯನ್ನು ಕೇಳಿಕೊಂಡು ಮಥುರಾ ಕ್ಷೇತ್ರದ ಪಂಡಿತ ಕೇದಾರನಾಥ ಚೌಬೆಯವರಿಗೆ ಪತ್ರ ಬರೆದರು. ಪಂಡಿತ ಕೇದಾರನಾಥರವರ ತನ್ನ ಪೂರ್ವ ಜನ್ಮದ ಪತಿಗಳೆಂದು ಶಾಂತೋಕುಮಾರಿಯು ಹೇಳಿ ಅವರ ಪತ್ತೆಯನ್ನು ಅವಳೇ ಕೊಟ್ಟಿದ್ದಳು. ಕೇದಾರನಾಥರವರು ಈ ಪತ್ರ ನೋಡಿ ಅಚ್ಚರಿಗೊಂಡು ಸತ್ಯಸ್ಥಿತಿಯನ್ನು ತಿಳಿಕೊಳ್ಳುವ ಹೇತುವಿನಿಂದ ತಮ್ಮೊಂದಿಬ್ಬರಿಗೆ ಕಳುಹಿದರು. ಮನೆಯೊಳಗಿನ ಕೆಲವು ವಿಷಯಗಳನ್ನು ಅವರಿಗೆ ಕೇಳಲು, ಅವಳು ಎಲ್ಲ ಸಂಗತಿಗಳನ್ನು ಇದ್ದಕ್ಕಿದ್ದಂತೆ ಹೇಳಿದಳು. ಒಂದು ಕೋಣೆಯಲ್ಲಿ ತಾನು ಗಂಟು ಹೂಳಿಟ್ಟಿದ್ದನಾಗಿ ಶಾಂತೋಕುಮಾರಿಯು ಹೇಳಿದಂತೆ ಮಥುರೆಯೊಳಗಿನ ಮನೆಯಲ್ಲಿ ಅಗಿದು ನೋಡಲು ಅಲ್ಲಿ ಹಣದ ಗಂಟು ಸಿಕ್ಕಿತು. ಶಾಂತೋಕುಮಾರಿಯು ಎಲ್ಲ ಸಂಗತಿಗಳನ್ನು ಸಭ್ಯಜನರ ಸಮಕ್ಷ ಹೇಳಿದಳು. ಆ ವೇಳೆ ಪಂಡಿತ ಕೇದಾರನಾಥರವರು ಮಥುರೆಯಿಂದ ದಿಲ್ಲಿಗೆ ಹೋದರು. ಮೃತ ಹೆಂಡತಿಯಿಂದ ಹುಟ್ಟಿದ ಹುಡುಗನನ್ನು ಜೊತೆಗೆ ಕರಕೊಂಡು ಹೋಗಿದ್ದರು. ಇವರಿಬ್ಬರಿಗೆ ನೋಡಿದೊಡನೆ ಶಾಂತೋಕುಮಾರಿಯು ಬಿಕ್ಕಿ ಬಿಕ್ಕಿ ಅತ್ತಳು. ಹುಡುಗನಿಗೆ ಮುದ್ದಿಟ್ಟಳು. ಹುಡುಗನಿಗೆ ಗೊಂಬೆಗಳನ್ನೂ, ಇತರೇ ಆಟದ ಸಾಮಾನುಗಳನ್ನೂ ಕೊಟ್ಟಳು. ಈತನೇ ತನ್ನ ಹುಡುಗನೆಂದು ಹೇಳಿದಳು, ಪಂಡಿತ ಕೇದಾರನಾಥರವರು ತನ್ನ ಪತಿಗಳೆಂದೂ ಹೇಳಿದಳು. ಕೇದಾರನಾಥರವರು ಶಾಂತೋಕುಮಾರಿಯೊಡನೆ ಮಾತನಾಡಿ ಪೂರ್ವಸ್ಮರಣೆಯಾದೊಡನೆ ಅವರಿಗೂ ಕಣ್ಣೀರು ಬಂತು. ಈ ಸುದ್ದಿ ದಿಲ್ಲಿಯೊಳಗೆ ಹಬ್ಬಿದೊಡನೆ ಹುಡುಗಿಗೆ ನೋಡಲು ಜನರು ಮುತ್ತಿದರು. ಒಂದು ಲಕ್ಷ ಜನರು ಅವಳಿಗೆ ನೋಡಹೋದರಾಗಿಯೂ, ಇನ್ನೂ ಅರ್ಧ ಲಕ್ಷ ಜನರು ನೋಡಹೊರಟಿದ್ದಾರಾಗಿಯೂ ದಿಲ್ಲಿಯ 'ನೆಶನಲ್ ಕಾಲ್' ಪತ್ರಿಕೆಯ ಸ್ವಂತ ಸುದ್ದಿಗಾರರು ಪ್ರಕಟಿಸುತ್ತಾರೆ. ಪುನರ್ಜನ್ಮದ ಸಿದ್ಧಾಂತಕ್ಕೆ ಈ ಸಂಗತಿಯಿಂದ ಪ್ರತ್ಯಕ್ಷ ಆಧಾರ ಸಿಕ್ಕಿದೆ. ಸಂಶೋಧಕರು ಈ ಚಮತ್ಕಾರವನ್ನು ಹೇಗೆ ಬಿಡಿಸಿಹೇಳುತ್ತಾರೆಂದು ನೋಡಲು ಎಲ್ಲರೂ ಕುತೂಹಲಪಡುವದು ಸಹಜ.

⁂

ಮುಂಬಯಿಯ ಕಾಯಿದೆ ಕೌನ್ಸಿಲಿನ ಪುಣೆಯ ಸಭೆಯಲ್ಲಿ ತಾ ೧೬-೧೦-೧೯೩೫ನೇಗೆ ಬೇಸಾಯಗಾರರ ಸಾಲದ ಕುರಿತು ನಡೆದ ಪ್ರಶ್ನೋತ್ತರ ಮನನೀಯವಿದೆ: ತಾ. ೩೧-೧-೩೪ನೇ ವರೆಗೆ ಇಡೀ ಮುಂಬಯಿ ಇಲಾಖೆಯೊಳಗೆ ಬೇಸಾಯಗಾರರಿಗಿರುವ ಸಾಲದ ಪರಿಮಾಣವನ್ನು ತಿಳಿಸಲು ಅಸಾಧ್ಯವಿದೆ. ಧಪ್ರತೆಯ ಸಾಲವೆಷ್ಟು, ವ್ಯವಸಾಯ ಸಾಲವೆಷ್ಟು? ಎಂಬ ಸಂಗತಿಯನ್ನು ಸಹ ತಿಳಿಸಲಶಕ್ಯ. ಆದರೆ ಮುಂಬಯಿ ಪ್ರಾಂತಿಕ ಬೇಂಕಿಂಗ ಚೌಕಶಿ ಮಂಡಳದವರು ೧೯೨೯-೩೦ನೇ ಸಾಲಿನಲ್ಲಿ ಬೇಸಾಯಗಾರರ ಸಾಲ ೮೧ ಕೋಟಿ ಎಂದು ಅಂದಾಜು ಮಾಡಿದ್ದಾರೆ. ಇದರೊಳಗೆ ಧಪ್ರತೆಯ ಸಾಲದ ಪ್ರಮಾಣ ತೀಕಡಾ ೨೭||ರಿಂದ ೩೭||ವರೆಗೆ. ತಾ. ೩೧-೩-೩೫ನೇ ವರೆಗೆ ಸರ್ಕಾರವು ಬೇಸಾಯಗಾರರಿಗೆ ಕೊಟ್ಟ ಸಾಲ ರೂ. ೧,[illegible],೨೪೪೧. ಇದರೊಳಗೆ ಒಟ್ಟು ಹಿಡಿಯಲಿಲ್ಲ ಇಷ್ಟೇ ಅವಧಿಯಲ್ಲಿ ಸಹಕಾರಿ

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನ್ಯಾಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು !

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ಜವಾಬದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ್,
ಕರ್ನಾಟಕ ಪ್ರಾಂತ್ಯದ ಚೀಫ್ ಏಜಂಟರು,
ಸಂತೆಪೇಟೆ, ಕಾರವಾರ.

ಸಂಘಗಳಿಂದ ಸಲ್ಲತಕ್ಕ ಸಾಲದ ಮೊಬಲಗು ರೂ ೩,೩೪,೬೬,೪೬೬. ಸಹಕಾರಿ ಸಂಘಗಳ ಬಡ್ಡಿಯ ದರ ಶೇಕಡಾ ೯ರಿಂದ ೧೨ಕ್ಕೆ ತನಕ. ಭೂಸುಧಾರಣೆ ಬಗ್ಗೆ ಸಹಕಾರಿ ಸಂಘಗಳು ೬॥ ೭ಕ್ಕೆ ಬಡ್ಡಿ ಆಕರಿಸುತ್ತವೆ. ಸರಕಾರವು ರೈತರಿಗೆ ಕೊಡುವ ಸಾಲದ ಬಡ್ಡಿಯ ದರ ಸರಕಾರಕ್ಕೆ ಸಾಲದ ಮೇಲೆ ಆಕರಿಸಲ್ಪಡುವ ಬಡ್ಡಿಯ ದರದ ಮೇಲೆ ಹೊಂದಿಕೊಂಡಿದೆ. ಸನ್ ೧೯೨೪ನೇ ಇಸ್ವಿ ನವಂಬರ ತಿಂಗಳಲ್ಲಿ ರೂಪಾಯಿಗೆ ೦-೧-೩ಯಂತೆ ಬಡ್ಡಿ ಆಕರಿಸಿತು. ಆಮೇಲೆ ೩೧-೩-೧೯೨೭ರ ವರೆಗೆ ಶೇಕಡಾ ೬¾ರಂತೆ ಆಕರಿಸಿತು. ತಾ ೧-೪-೨೭ರಿಂದ ೩೧-೧೦ ೨೯ರ ವರೆಗೆ ೬¼ರಂತೆ ಆಕರಿಸಿತು. ಆ ಮೇಲೆ ತಾ. ೩೧-೩-೩೪ರ ವರೆಗೆ ೬½. ತಾ ೧-೪-೩೪ನೇಯಿಂದ ತಗಾವಿ ಸಾಲದ ದರ ಮಾತ್ರ ೬¼. ಭೂಸುಧಾರಣೆ ಸಾಲದ ದರ ತಾ. ೩೦-೪-೩೫ರ ವರೆಗೆ ೬½. ತಾ ೧-೫-೩೫ನೇಯಿಂದ ಈ ಸಾಲದ ದರ ರೂಪಾಯಿಗೆ ೦-೧-೩ಯಂತೆ ಇಳಿಸಲ್ಪಟ್ಟಿದೆ. ತಗಾವಿ ಸಾಲದ ದೆಸೆಯಿಂದ ರೈತರಿಗೆ ಕೊಡತಕ್ಕ ಸಾಲದ ಮೊಬಲಗನ್ನು ಸರಕಾರವು ಪ್ರತ್ಯೇಕ ಸಾಲ ತೆಗೆದು ಕೊಡುವದಿಲ್ಲ. ಪ್ರಾಂತಿಕ ಸಾಲ ಮತ್ತು ಮುಂಗಡ ಖಾತೆಗೆ ಜಮಾ ಇರುವ ರಕಮುಗಳೊಳಗಿಂದ ತಗಾವಿ ಸಾಲ ಕೊಡುತ್ತದೆ. ಹಿಂದುಸ್ಥಾನ ಸರಕಾರವು ನಿರ್ಣಯ ಮಾಡಿದ ಬಡ್ಡಿಯನ್ನು ಮುಂಬಯಿ ಸರಕಾರವು ತೆರಬೇಕು. ೧೯೩೧—೩೨ನೇ ಸಾಲಿನಲ್ಲಿ ಮುಂಬಯಿ ಸರಕಾರವು ತಗಾವಿ ಕುರಿತು ಸಾಲ ಪಡೆದಿತ್ತು. ಆ ಕಾಲದ ಬಡ್ಡಿಯ ದರ ೬½ ಇತ್ತು. ಆ ಮೇಲೆ ಮುಂಬಯಿ ಸರಕಾರವು ಸಾಲ ತೆಗೆಯಲಿಲ್ಲ. ಸಾವುಕಾರರು ಭದ್ರತೆ ಸಾಲಕ್ಕೆ ಪಡೆಯುವ ಬಡ್ಡಿಯ ದರ ಹೇಗೆ? ಮೈಸಾಲ ಸಾಲಕ್ಕೆ ಪಡೆಯುವ ಬಡ್ಡಿಯ ದರ ಹೇಗೆ. ಎಂಬ ಸಂಗತಿ ತಿಳಿಯುವದಿಲ್ಲ. ಸಹಕಾರಿ ಸಂಘಗಳು ಭದ್ರತೆ ಸಾಲಕ್ಕೂ, ಮೈಸಾಲ ಸಾಲಕ್ಕೂ ಒಂದೇ ದರದಿಂದ ಬಡ್ಡಿ ಆಕರಿಸುತ್ತವೆ. ತಾ. ೧—೪—೩೪ನೇಗೆ ಸರಕಾರವು ಶೇಕಡಾ ೩½-೬½ ದರದಿಂದ ಸಾಲ ಪಡೆದು ೬¼ರಂತೆ ಸಾಲ ಕೊಟ್ಟಿದ್ದು ನಿಜವೇನೆಂದು ಪ್ರಶ್ನಿಸಲು, ಅವಧಿ ಬೇಕೆಂದು ಅರ್ಥಸಚಿವರು ನುಡಿದು ಪಾರಾದರು. ೧೯೩೧-೩೨ನೇ ಇಸ್ವಿಯಲ್ಲಿ ಸರಕಾರಕ್ಕೆ ೬¼ರಂತೆ ಸಾಲ ಸಿಕ್ಕಿದಾಗ ಶೇಕಡಾ ೬½ದಂತೆ ಬೇಸಾಯಗಾರರಿಗೆ ಬಡ್ಡಿ ಆಕರಿಸುವ ಕಾರಣವೇನೆಂದು ಕೇಳಲು ಮುಳುಗುವ ಸಾಲಗಳ ಭರಪಾಯಿ ಮಾಡಿಕೊಳ್ಳುವ ದೆಸೆಯಿಂದಲೂ, ಆಡಳಿತೆ ಖರ್ಚಿನ ದೆಸೆಯಿಂದಲೂ ಎಂಬ ಉತ್ತರ ಸಿಕ್ಕಿತು. ಮುಳುಗುವ ಸಾಲದ ಸರಾಸರಿ ಎಷ್ಟು? ೧೪ ವರ್ಷಗಳ ಸರಾಸರಿ ತೆಗೆದಲ್ಲಿ ಶೇಕಡಾ ೨ ರಂತೆ ಬರುತ್ತದಾಗಿ ಉತ್ತರ ಸಿಕ್ಕಿತು. ಈಗ ಹಿಂದುಸ್ಥಾನ ಸರಕಾರವು ಶೇಕಡಾ ೩ ರಿಂದ ೩½ ತನಕ ಬಡ್ಡಿಯಿಂದ ಸಾಲ ಪಡೆಯುತ್ತದೆ. ಇಂಥ ಸ್ಥಿತಿಯಲ್ಲಿ ಬಡ್ಡಿಯ ದರ ೪—೪½ ವರೆಗೆ ಇಳಿಸಬೇಕಾಗಿ ಹಿಂದುಸ್ಥಾನ ಸರಕಾರಕ್ಕೆ ಮುಂಬಯಿ ಸರಕಾರವು ವಿನಂತಿ ಮಾಡಿಕೊಂಡಿತು. ಆದರೆ ಹಿಂದುಸ್ಥಾನ ಸರಕಾರವು ಆ ವಿನಂತಿಯನ್ನು ಬಾಯಿ ಬಾರಿಗೂ ತಿರಸ್ಕರಿಸಿತು. ೧೯೩೩-೩೪ನೇ ಸಾಲಿನಲ್ಲಿ ಸರಕಾರವು ಶೇಕಡಾ ೪ಕ್ಕೂ ಕಡಿಮೆಯಾಗಿ ಸಾಲ ಪಡೆದದ್ದು ನಿಜ. ಆದರೆ ಅದರಿಂದ ತಗಾವಿ ಸಾಲದ ಬಡ್ಡಿ ದರಕ್ಕೆ ಸಂಬಂಧವಿಲ್ಲ ಯಾಕಂದರೆ ತಗಾವಿ ಸಾಲ ಪ್ರಾಂತಿಕ ಸಾಲ ಮತ್ತು ಮುಂಗಡ ಖಾತೆಗೆ ಜಮಾ ಇರುವ ರಕಮುಗಳಿಂದ ಕೊಡಲ್ಪಡುತ್ತದೆ. ಈ ಹಣವನ್ನು ಸರಕಾರವು ಬೇಂಕಿನಲ್ಲಿ ಇಟ್ಟರೆ ಶೇಕಡಾ ೩¾-೪ರೊಳಗಿನ ಬಡ್ಡಿ ಸಿಕ್ಕೀತು. ಸರಕಾರವು ಬೇಸಾಯಗಾರರಿಗೆ ಇಮ್ಮಡಿ ಬಡ್ಡಿ ದರದಿಂದ ಸಾಲ ಕೊಟ್ಟು ಲಾಭ ಪಡೆಯುತ್ತದೆ. "ಹೀಗೇಕೆ" ಎಂಬ ಪ್ರಶ್ನೆಗೆ "ಸರಕಾರವು ಈ ವ್ಯವಹಾರದಲ್ಲಿ ನಿಶ್ಚಿತವಾಗಿಯೂ ಲಾಭ ಪಡೆಯುವದಿಲ್ಲ" ಎಂಬದೊಂದೇ ಉತ್ತರ. ಲಾಭ ಪಡೆಯುವದು ಸ್ಪಷ್ಟ ಕಾಣುತ್ತದೆಂದು ಸಿಂಧು ಪ್ರಾಂತದ ಲರಖಾನಾ ಜಿಲ್ಲೆಯ ಖಾ॥ ಬ॥ ಖುರೋರವರು ಒತ್ತಿಹೇಳಲು, ಅರ್ಥಸಚಿವ ಕೂಪರರವರು ನುಡಿದದ್ದೇನಂದರೆ:— ಬಡ್ಡಿಯ ದರ ಇಳಿ-ಇಳಿದಾಗ ಸರಕಾರಕ್ಕೆ ಸಾಲ ಸಿಗುವದಿಲ್ಲ; ಸರಕಾರವು ಹೊರಡಿಸಿದ ಸಾಲದ ಶರ್ತುಗಳಿಗನುಸಾರವಾಗಿ ಸರಕಾರವು ನಡಕೊಳ್ಳಬೇಕು. ೧೦ ವರ್ಷಗಳ ಮೇಲೆ ತೀರಿಸುವ ಶೇ. ೯ನ ಮೇಲೆ ಸರಕಾರವು ಸಾಲ ಹೊರಡಿಸಿದ್ದಲ್ಲಿ ಅದನ್ನು ಮುಂಚಿತವಾಗಿ ಅದನ್ನು ತೀರಿಸಬರುವದಿಲ್ಲ. ಎಂಬದಾಗಿ ಅರ್ಥಸಚಿವರು ಉತ್ತರ ಕೊಟ್ಟರು. ೧೯೩೩-೩೪ನೇ ಇಸ್ವಿಯಲ್ಲಿ ಸರಕಾರವು ಸಾಲ ಪಡೆದದ್ದುಂಟು. ಆದರೆ ೧೯೩೩-೩೪, ೧೯೩೪-೩೫ನೇ ಸಾಲಗಳಲ್ಲಿ ಸರಕಾರವು ಹೆಚ್ಚಿನ ಬಡ್ಡಿ ಆಕರಿಸಿ ಲಾಭ ಪಡೆಯುತ್ತದಾಗಿ ಖಾ॥ ಬ॥ ಖುರೋರವರು ಉದ್ಗರಿಸಲು, ಸರಕಾರವು ಲಾಭ ಪಡೆಯುವದಿಲ್ಲವಾಗಿ ಅರ್ಥಸಚಿವರು ಉತ್ತರ ಕೊಟ್ಟರು. ಸಾಲ ತೆಗೆಯದೆ ಸರಕಾರವು ಸಾಲ ಕೊಟ್ಟಾಗ್ಯೂ ಸರಕಾರವು ಆಕರಿಸುವ ದರದಲ್ಲಿ ಸಾಲ ಪಡೆಯುವ ಬಡ್ಡಿಯ ದರದ ವಿಚಾರದಿಂದಲೇ ಬಡ್ಡಿಯ ದರ ಆಕರಿಸಲ್ಪಡುತ್ತದೆ. ಯಾಕಂದರೆ ಸರಕಾರವು ಸಾಲ ಕೊಡುವ ಹಣ ಸರಕಾರವು ಪಡೆದ ಯಾವದೊಂದು ಸಾಲದ ಖಾತೆಗೆ ಖರ್ಚು ಹಾಕಿಕೊಡುತ್ತದೆ. "ತಾ. ೧-೪-೧೯೩೪ನೇಗೆ ಸರಕಾರವು ಬಡ್ಡಿಯ ದರವನ್ನು ಕೆಲ ಮಟ್ಟಿಗೆ ಇಳಿಸುವ ಕಾರಣವೇನು? ಸರಕಾರವು ಈ ಕುರಿತು ಸಾಲ ತೆಗೆದದ್ದು ೧೯೩೧-೩೨ನೇ ಇಸ್ವಿಯಲ್ಲಿ ಎಂಬದಾಗಿ ಹೈದರಾಬಾದ ಜಿಲ್ಲೆಯ ಸೈದ ಮಿರಾನ ಮಹಮ್ಮದ ಶಹಾರವರು ಅನ್ನಸವಾಲು ಮಾಡಲು ಅರ್ಥಸಚಿವರಾದ ಖಾ॥ ಬ॥ ಕೂಪರರವರು ನುಡಿದದ್ದೇನಂದರೆ:- "ಬಡ್ಡಿಯ ದರ ಇಳಿದದ್ದರಿಂದ ಸರಕಾರವು ಬೇಸಾಯಗಾರರಿಗೆ ಕಲ್ಯಾಣ ಮಾಡಲೋಸುಗ ಈ ನಿರ್ಣಯ ಕೈಕೊಂಡಿವೆ." "ಹಾಗಾದರೆ ಹಿಂದುಸ್ಥಾನ ಸರಕಾರದ ಬಡ್ಡಿಯ ದರ ಇಳಿಯದಿದ್ದಾಗ್ಯೂ ಪೇಟೆಯೊಳಗಿನ ಬಡ್ಡಿಯ ದರ ಇಳಿದದ್ದರಿಂದ ಸರಕಾರವು ಬಡ್ಡಿಯ ದರ ಇಳಿಸಿತಲ್ಲವೇ" ಎಂಬದಾಗಿ ಸೈಯ್ಯದ ಮಿರಾನ ಮಹಮ್ಮದ ಶಹಾರವರು ಕೇಳಲು, "ಸಾಮಾನ್ಯವಾಗಿ ನೀವು ಹೇಳಿದಂತೆಯೇ" ಎಂಬದಾಗಿ ಸರಕಾರದಿಂದ ಉತ್ತರ ಬಂತು. "ನೀವು ಸಾಲ ತೆಗೆದದ್ದು ೧೯೩೧-೩೨ನೇ ಇಸ್ವಿಯಲ್ಲಿ. ತಾ ೧-೪-೧೯೩೪ನೇ ತನಕ ಬೇಸಾಯಗಾರರಿಗೆ ಸರಕಾರವು ಶೇಕಡಾ ೬½ದಂತೆ ಬಡ್ಡಿ ಆಕರಿಸುತ್ತಿತ್ತು. ಆ ಮೇಲೆ ಶೇಕಡಾ ೬¼ಕ್ಕೆ ಇಳಿಸಲ್ಪಟ್ಟಿತು. ೧೯೩೧-೩೨ನೇ ಸಾಲಿನಲ್ಲಿ ಬಡ್ಡಿಯ ದರ ಯಾಕೆ ಇಳಿಸಲಿಲ್ಲ?" ಹೀಗೆ ಸೈದ ಮಿರಾನ ಮಹಮ್ಮದ ಶಹಾರವರು ಕೇಳಲು, "ಇಳಿಸಿದ ಬಡ್ಡಿ ವಿಶೇಷವಿಲ್ಲ. ಕೆಲ ಮಟ್ಟಿಗೆ ಅನುಕೂಲತೆಯಾಗಲೆಂದು ಬಡ್ಡಿಯ ದರ ಇಳಿಸಿತ್ತು" ಎಂಬದಾಗಿ ಖಾನಬಹಾದ್ದೂರ ಕೂಪರರವರು ಉತ್ತರ ಕೊಟ್ಟರು. ಹಿಂದುಸ್ಥಾನ ಸರಕಾರವು ಬಡ ಬೇಸಾಯಗಾರರಿಗೆ ಸಂಬಂಧಿಸಿದಾಗ ತಿರಸ್ಕಾರ ಮಾಡುವ ಕಾರಣವೇನೆಂದು ಸಭಾಸದರೊಬ್ಬರು ಕೇಳಲು, ಹಿಂದುಸ್ಥಾನ ಸರಕಾರದ ಧೋರಣವೇ ಹಾಗೆಂದು ಉತ್ತರ ಸಿಕ್ಕಿತು. "ಹಿಂದುಸ್ಥಾನ ಸರಕಾರವು ಬಡ್ಡಿಯ ದರವನ್ನು ಇಳಿಸಿ

[ಮುಂದೆ ೧೦ನೇ ಪಾನಾ ನೋಡಿರಿ.]

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ !!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯಿದೆ. ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೧೭।೦ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಸ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತ್ರ:— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

ಇನ್ನೂ ಶಿಷ್ಟಾಯಿ ನಡೆದಿದೆ!

[ನಿರೀಕ್ಷಕನು ಬರೆದುದು.]

ಫ್ರೆಂಚ ರಾಜ್ಯಭಾರಿಗಳಾದ ಲಾವಲ್‌ರವರು ಇನ್ನೂ ಶಿಷ್ಟಾಯಿಯ ಬೆನ್ನು ಬಿಡರು. ಹಬಸಿ ರಾಜ್ಯಭಾರಿಗಳೊಡನೆ ಇನ್ನೂ ಆಲೋಚಿಸುತ್ತಿದ್ದಾರೆ. ಬ್ರಿಟಿಶರೂ, ಫ್ರೆಂಚರೂ ಹಬಸಿ ದೇಶದೊಳಗೆ ಮುಸೊಲಿನಿಯವರಿಗೆ ಕೆಲ ಪ್ರದೇಶ ಕೊಟ್ಟು ಶಿಷ್ಟಾಯಿ ಮಾಡುವ ಆಲೋಚನೆ ನಡೆದದಾಗಿ ಆವೇಳೆಯೊಳಗಿನ ಹಲವು ಪತ್ರಿಕೆಗಳು ಪ್ರಕಟಿಸುತ್ತವೆ. ಕಲಕತ್ತೆಯ 'ಅಮೃತ ಬಝಾರ ಪತ್ರಿಕೆ'ಯ ಲಂಡನ್ನೊಳಗಿನ ಸುದ್ದಿಗಾರರೂ ಇದೇ ಪ್ರಕಾರ ಅನುಮಾನ ಮಾಡುತ್ತಾರೆ. ಹಬಸಿ ದೇಶವನ್ನು ತುಂಡರಿಸಿ ಬೇರೆ ಬೇರೆ ಪ್ರಕಾರಗಳಿಂದ ಬ್ರಿಟಿಶ-ಫ್ರೆಂಚ-ಇಟಾಲಿ ಸರಕಾರಗಳು ಹಂಚಿಕೊಳ್ಳುವ ಕಾರಸ್ಥಾನವನ್ನು ಬ್ರಿಟಿಶಾದಿಗಳು ಹೂಡಿಸಿರುವರಾಗಿ ಅವರ ಅಂಬೋಣ. "ಅವಕ್ಕೆ ನಿರುಪಾಯರಾಗಿ ಬಾದಶಹರು ಒಪ್ಪಬಹುದು. ಆದರೆ ಬಾದಶಹರ ಕೈಕೆಳಗಿನ ಪಾಳೆಯಗಾರರು ಒಪ್ಪಲಿಕ್ಕಿಲ್ಲ. ಅವರು ಖಂಡಿತವಾಗಿ ದೊಂಬಿಯನ್ನೆಬ್ಬಿಸುವರು. ದೇಶದೊಳಗೆ 'ಶಾಂತತೆ ಕಾಪಾಡಲೋಸುಗ' ಇಟಾಲಿಯವರು ಮುಂದಾಗಿ ಒಬ್ಬೊಬ್ಬರಾಗಿ ಪಾಳೆಯಗಾರರನ್ನು ಸೋಲಿಸಿ ಹಬಸಿ ದೇಶವನ್ನು ಸ್ವಾಧೀನಪಡಿಸಿಕೊಳ್ಳುವರು." ಎಂಬದಾಗಿಯೂ 'ಅಮೃತ ಬಝಾರ ಪತ್ರಿಕೆ'ಯ ಸ್ವಂತ ಸುದ್ದಿಗಾರರ ಸುದ್ದಿ. ಅವರು ನುಡಿದಂತೆ, ರಾಷ್ಟ್ರಸಂಘವು ಕಳ್ಳರ ಕೂಟವೆಂದೂ ನಾ ಬಲ್ಲೆ. ಪ್ಯಾರಿಸದೊಳಗಿನ 'ಗ್ರಿಂಗ್ವೊರ' ಪತ್ರಿಕೆಯಲ್ಲಿ ಹೆನ್ರಿ ಬೆರೊಡ ಎಂಬ ನಾಮಾಂಕಿತ ಫ್ರೆಂಚ ಪತ್ರಕರ್ತರು ೬ ಕಲಮು ತುಂಬ ದೊಡ್ಡದೊಂದು ಲೇಖ ಬರೆದಿದ್ದಾರೆ "ಬ್ರಿಟಿಶ ದೇಶದ ಗೆಳೆತನವೆಂದರೆ ದೇವರು ಕೋಪಗೊಂಡು ಕೊಟ್ಟ ಶಾಪ." (The friendship of England is the cruellest gift that the Gods can give to any nation.) ಎಂಬದಾಗಿ ಅವರ ಅಭಿಪ್ರಾಯ. "ಬ್ರಿಟಿಶರಿಗೆ ಬೇರೆಯವರ ಹಿತ ನೋಡುವ ಬುದ್ಧಿಯೇ ಇಲ್ಲ. ಸ್ವಾರ್ಥಪರಾಯಣರಾಗಿಯೇ ಬ್ರಿಟಿಶರು ಇಟಾಲಿ ಹಬಸಿ ವಾದದಲ್ಲಿ ಸೇರಿದ್ದಾರೆ. ಚಿಕ್ಕ ರಾಷ್ಟ್ರಗಳ ಹಿತ, ರಾಷ್ಟ್ರಸಂಘದ ಗೌರವ ಇವೆಲ್ಲ ಬರೀ ಬಾಯ್ಬಡಿಕೆ! ಇಂಥ ಲೋಕಕಂಟಕರಿಗೆ ಶಾಸನವಾಗುವ ಪ್ರಸಂಗ ಪದಕ್ಕೇ ಬರಲಿಕ್ಕಿದೆ." ಎಂಬದಾಗಿಯೂ ಬೆರೊಡರವರು ಬರೆದು ಬ್ರಿಟಿಶರ ವೇಷ ಇಳಿಸಿ ಬಿಟ್ಟಿದ್ದಾರೆ. ಮುಸೊಲಿನಿಯವರ ಗೆಳೆಯರಾದ ಗ್ಯಾಡಾರವರೂ 'ಗೊರ್ನೇಲ ದಿ ಇಟಾಲಿಯಾ' ಪತ್ರಿಕೆಯಲ್ಲಿ ಮಿ| ಈಡನ್‌ರವರಿಗೆ ಹಳಿದು ಇಟಾಲಿಯ ಗೆಳೆಯರೆಂದು ಬ್ರಿಟಿಶರು ಹೇಳುವದು ಇಟಾಲಿಯ ವಂಚನೆಯೆಂದು ನಿರ್ದಾಕ್ಷಿಣ್ಯದಿಂದ ಬರೆದಿದ್ದಾರೆ. ರೋಮದೊಳಗೆ ಪ್ರವೇಶಿಸಲು ಕೆಲ ಬ್ರಿಟಿಶ ಪತ್ರಿಕೆಗಳಿಗೆ ಪ್ರತಿಬಂಧ. ಬಾದಶಹರಾದ ರಾಸ ತಫಾರಿಯವರಂತು ಪಾಶ್ಚಾತ್ಯ ರಾಷ್ಟ್ರಗಳ ಶಕ್ತಿ ಪರೀಕ್ಷೆಯನ್ನೇ ಮಾಡುತ್ತಿದ್ದಾರೆ "ರಾಷ್ಟ್ರಸಂಘದ ಸಭಾಸದರಿದ್ದ 'ಸುಧಾರಿಸಿದ' ರಾಷ್ಟ್ರಗಳು ಗಾಂಭೀರ್ಯದಿಂದ ಕೊಟ್ಟ ಸಹಿ ಮತ್ತು ಮುಪ್ಪಿಗೆ ಮಾರಿ ನಡೆಕೊಳ್ಳಬಯಸುವಲ್ಲಿ ನನ್ನ ಉಪಾಯವಿಲ್ಲ. ನಾನು 'ಸುಧಾರಿಸದ' ಹಬಸಿ ಜನಾಂಗದವನು. ಕೊಟ್ಟ ವಚನದಂತೆ ನಡೆಯೆನೆಂದು ನನಗೆ ಸ್ವಪ್ನದಲ್ಲಿ ಹೇಳತೋಚದು. ಬರಕೊಟ್ಟ ವಚನದಂತೆ ನಾನು ನಡೆಯಲೇಬೇಕು." ಎಂಬದಾಗಿ ಬಾದಶಹರಾದ ರಾಸ ತಫಾರಿಯವರು ಮುಂಬಯಿ 'ಟೈಮ್ಸ' ಪತ್ರಿಕೆಯ ಪ್ರತಿನಿಧಿಗಳ ಬಳಿ ಉದ್ಗರಿಸಿದರಾಗಿ ಪ್ರಕಟವಾಗಿದೆ. 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಕೈರೋದೊಳಗಿನ ಪ್ರತಿನಿಧಿಗಳ ಬಳಿ ಡಾ| ಹವರಿಟ್‌ರವರು ಆಡಿದ ಮಾತು ಪರಾಂಬರಿಸಿದರೆ ಸಂಧಿ ಎಷ್ಟಕ್ಕೂ ಆಗದಾಗಿ ಭಾವನೆಯಾಗುತ್ತದೆ. ಡಾ| ಹವರಿಟ್‌ರವರು ಹಬಸಿ ದೇಶದ ರಾಜ್ಯಭಾರಿಗಳು. ರಾಷ್ಟ್ರಸಂಘದೊಳಗೆ ಹಬಸಿ ಜನಾಂಗದ ಪರವಾಗಿ ವಕೀಲಿಯನ್ನು ಇವರೇ ನಡೆಸಿದರು. ರಾಷ್ಟ್ರಸಂಘವನ್ನು ಬಿಟ್ಟು ಸ್ವದೇಶರಕ್ಷಣೆಗಾಗಿ ಹೋರಾಡಲು ಅವರು ಮುಂದಿದ್ದಾರೆ. "ಸೇನಾಪತಿಯಾಗಲಿಕ್ಕೂ ನನ್ನ ಒಪ್ಪಿಗೆ! ಸೈನಿಕನಾಗಲಿಕ್ಕೂ ನನ್ನ ಒಪ್ಪಿಗೆ!! ರಾಜಾಜ್ಞೆಯಂತೆ ನಾನು ವರ್ತಿಸುವೆನು. ನಮಗೆ ಇಟಾಲಿಯರ ಮದ್ದು-ಗುಂಡಿನ ಭಯವಿಲ್ಲ; ಯಾಂತ್ರಿಕ ತೋಫುಗಳಿಗೆ ನಾವು ಬೆದರುವದಿಲ್ಲ. ಜಗಜ್ಜನಕನ ಮೇಲೆ ನಾವು ನಂಬಿಗೆಯಿಟ್ಟು ಹೋರಾಡುವೆವು. ಇಟಾಲಿಯ ದುರಾಲೋಚನೆಯನ್ನು ನಾವು ಈ ಮುಂಚೆಯೇ ಬಲ್ಲೆವು. ನಿಷ್ಕಾರಣವಾಗಿ ಇಟಾಲಿಯರು ನಮಗೆ ದಣಿಸುತ್ತಿದ್ದಾರೆ ಇಟಾಲಿಯರಿಗೆ ಹೇಗೆ ಹಣ್ಣುಗೆತರಬೇಕೆಂದು ನಾವು ಬಲ್ಲೆವು. ಅಡೋವಾ, ಅಕ್ಸುಮ ಮೊದಲಾದ ಪ್ರದೇಶವನ್ನು ಇಟಾಲಿಯರಿಗೆ ಬಿಡಬೇಕಾಗಿ ಮುಂಚೆಯೇ ನಮ್ಮ ಸಂಕಲ್ಪವಿತ್ತು. ಈ ತನಕ ನಾವು ಸಂಗ್ರಾಮ ಮಾಡಲೇ ಇಲ್ಲ; ತೋರಗಾಣಿಕೆಗೆ ಅಲ್ಲಲ್ಲಿ ಅವರಿಗಿದಿರಾಗಿದ್ದೇವೆ. ಹಾವುಗಳಂತೆ ಅವರ ಹೊಟ್ಟೆಯಮೇಲಿಂದ ಕೂಚುಮಾಡುತ್ತಿದ್ದಾರೆ. ಕಾಡುಗಳಲ್ಲೆಲ್ಲ ನಮ್ಮ ಸೈನಿಕರು ಅಡಗಿಕೂತಿದ್ದಾರೆ. ವಿಮಾನಗಳಿಗೆ ಸಹ ದೃಷ್ಟಿಗೆ ಬೀಳರು. ಬೆಟ್ಟದಲ್ಲಿ ಯಾರೂ ಇಲ್ಲವಾಗಿ ಇಟಾಲಿಯ ವಿಮಾನಗಳು ತಮ್ಮ ಸೈನ್ಯಾಧಿಕಾರಿಗಳಿಗೆ ತಿಳಿಸಿದ ಕಾರಣ ಇದೇ. ಇಂಥಲ್ಲಿ ಇಟಾಲಿಯರಿಗೆ ನಾವು ಇದಿರಾಗಿ ಹಬಸಿ ಜನರ ಯುದ್ಧದ ರುಚಿಯನ್ನು ತೋರಿಸಿಬಿಡುವೆವು. ನಾವು ಈಗಲೇ ದೊಡ್ಡದೊಂದು ವಿಜಯ ಸಂಪಾದಿಸಿದ್ದೇವೆ. ಅದ್ಯಾವದೆಂದರೆ:- ಹಬಸಿಜನಾಂಗದೊಳಗಿನ ಪಾಳೆಯಗಾರರ ಐಕ್ಯಮತ್ಯ! ಮುಸಲ್ಮಾನರೂ ಕ್ರಿಶ್ಚಿಯನ್ನರೂ ಶ್ರೀಮಂತರೂ ಬಡವರೂ ಭಿಕ್ಷುಕರೂ ಎಲ್ಲರೂ ಸ್ವಾತಂತ್ರ್ಯಸಂಗ್ರಾಮದಲ್ಲಿ ಇಟಾಲಿಯರೊಡನೆ ಹೋರಾಡಲು ನಡ ಕಟ್ಟಿದ್ದಾರೆ" ಎಂಬದಾಗಿ ಹಬಸಿಜನಾಂಗದ ಪರವಾಗಿ ಡಾ| ಹವರಿಟ್‌ರವರು ಅಭಿಮಾನದಿಂದ ಇಟಾಲಿಯರಿಗೆ ಆಹ್ವಾನ ಕೊಡುತ್ತಿದ್ದಾರೆ. ೧೮೯೬ನೇ ಇಸ್ವಿಯಲ್ಲಿ ಇಟಾಲಿಯರಿಗೆ ಅಡೋವಾ ಪಟ್ಟಣದಲ್ಲಿ ಸೋಲಿಸಿದ ಮೆನಲಿಕ್ ಬಾದಶಹರು ಮುಂದಿನ ಆಲೋಚನೆಮಾಡಿ ತುಬಾಕಿಗಳನ್ನೂ, ಇತರ ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸಿ ಗುಪ್ತನಾಗಿಟ್ಟಿದ್ದರಂತೆ. ಅವನ್ನು ತೆಗೆದು ಬಾದಶಹರು ಸೈನಿಕರಿಗೆ ಹಂಚಿದ್ದಾರೆ. ಈ ತುಬಾಕಿಗಳಿಂದ ಹೊಸ ತುಬಾಕಿಗಳಷ್ಟು ದೂರ ಗುಂಡು ಹಾರುವದಿಲ್ಲ. ಆದರೆ ಸಮೀಪ ಪಕ್ಕ ಗುಂಡು ಹಾರಿಸಲು ಇವುಗಳಷ್ಟು ಭಯಂಕರ ತುಬಾಕಿಗಳಿಲ್ಲ. ತೋಟೆ ಗಡುತರವಾಗಿದ್ದದರಿಂದ ಭಯಂಕರ ಘಾಯಗಳಾಗುತ್ತವೆ. ಬಾದಶಹರು ಸ್ತ್ರೀಯರಿಗೆ ಆಜ್ಞೆ ಕೊಟ್ಟು ಸೈನಿಕರಿಗೆ ಅವಶ್ಯವುಳ್ಳ ತಿಂಡಿ-ತಿನಸು ತಯಾರಿಸಹೇಳಿದ್ದಾರೆ. ರೊಟ್ಟಿ ಸುಟ್ಟು ಮಾಂಸ ಹಾಕಿ ಸ್ತ್ರೀಯರು ಅದನ್ನು ಬಿಸಿಲಲ್ಲಿ ಒಣಗಿಸಿ ಆ ಮೇಲೆ ಹಿಟ್ಟು ಮಾಡಿಟ್ಟ ಪದಾರ್ಥ ಕೆಲ ಕಾಲ ಬಾಳುತ್ತದಂತೆ. ಇದರ ಸೇವನೆಯಿಂದ ಸೈನಿಕರಿಗೆ ಹುರುಪು ಬರುತ್ತದೆ. ಸ್ತ್ರೀಯರು ಇವನ್ನು ತಯಾರಿಸಲು ಉತ್ಸಾಹದಿಂದ ತೊಡಗಿದ್ದಾರೆ. ಹಬಸಿ ದೇಶದ ಐಕ್ಯಮತ್ಯದ ವಿಷಯ ಡಾ| ಹವರಿಟ್‌ರವರು ಹೇಳಿದ ಮಾತನ್ನು ಆಳವಾಗಿ ವಿಚಾರಿಸಬೇಕು. ಇಟಾಲಿಯವರು ಹಬಸಿ ಪಾಳೆಯಗಾರರಿಗೂ ಹಬಸಿ ಜನರಿಗೂ ಲಂಚ ಕೊಟ್ಟು ಸಂತೈಸಿಟ್ಟಿದ್ದರು. ಬಾದಶಹರಿಗೆ ವಿರೋಧ ಒಗೆದು ಎರಡು-ಮೂರಾವರ್ತಿ ಇಟಾಲಿಯ ರಾಜ್ಯಭಾರಿಗಳು ದೊಂಬಿಯನ್ನೂ ಎಬ್ಬಿಸಿದ್ದರು. ಇಟಾಲಿಯ ದೂತರು ಗ್ರಾಮಾಂತರಗಳಲ್ಲಿ ಗುಪ್ತವಾಗಿ ಸಂಚರಿಸಿ ಬೇಸಾಯಗಾರರಿಗೆ ಲಕ್ಷಾವಧಿ ಹಣ ಹಂಚಿದರು. ಅವರಿಂದ ಹಾಲು, ಹುಲ್ಲು ಪತ್ರಗಳನ್ನು ಕೊಂಡು ಅವರಿಗೆ ಬೇಕಷ್ಟು ಹಣ ಕೊಟ್ಟುಬಿಡುವರು. ಗೋಜಮದಲ್ಲಿ ೮೦ ಸಾವಿರ ತಾಲರುಗಳನ್ನು ಇಟಾಲಿಯ ರಾಜ್ಯಭಾರಿಗಳು ಹಂಚಿದರು. ಅಡಿಸ ಅಬಾಬಾದೊಳಗಿನ ಇಟಾಲಿಯ ರಾಜ್ಯಭಾರಿಗಳಾದ ಕೌಂಟ ವಿನ್ಸಿಯವರು ೪೦ ಲಕ್ಷ ಡಾಲರುಗಳನ್ನು ಬೇಂಕಿನೊಳಗಿಂದ ಪಡೆದು ದೇಶತುಂಬ ಹಂಚಿದರು. ದೊಡ್ಡದೊಡ್ಡವರಿಗೆ ಲಂಚ ಕೊಟ್ಟಿದ್ದರು. ಪಾಳೆಯಗಾರರು ದೊಂಬಿ ಮಾಡಿ ಬಾದಶಹರಿಗೆ ಸಂಕಟದಲ್ಲಿ ಹಾಕುವರೆಂದೂ, ಆಗ ಬಾದಶಹರಿಗೆ ಸೋಲಿಸಿ ಇಟಾಲಿಯವರು ಹಬಸಿ ದೇಶವನ್ನು ಸಹಜವಾಗಿ ಪಾದಾಕ್ರಾಂತ ಮಾಡಿಕೊಳ್ಳಬಹುದೆಂದೂ ವಿಶೇಷ ಪ್ರಯತ್ನ ಮಾಡುವದವಶ್ಯನಿಲ್ಲವಾಗಿಯೂ ಇಟಾಲಿಯ ರಾಜ್ಯಭಾರಿಗಳೂ ಸೇನಾಪತಿ ಡಿಬೋನೋರವರು ಮುಸೊಲಿನಿಯವರಿಗೆ ಗ್ವಾಹಿ ಕೊಟ್ಟಿದ್ದರು. ಆದರೆ ಈತನಕ ಸ್ವಾಮಿದ್ರೋಹದ ಪಾತಕಕ್ಕೀಡಾಗಲು ಪಾಳೆಯಗಾರರು ಒಪ್ಪಲಿಲ್ಲ. ಸಂಕಟ ಕಾಲದಲ್ಲಿ ಬಾದಶಹರಿಗೇ ನೆರವಾಗಿ ಇಟಾಲಿಯವರಿಗೆ ಇದಿರಾಗಸಿದ್ಧರಾಗಿ ಹೊರಟಿದ್ದಾರೆ. ಬಾದಶಹರು ೧ ಕೋಟಿ ರೂಪಾಯಿ ಕೊಟ್ಟು ೬ ದೇಶಗಳಿಂದ ಈಗಿನ ಮನ್ವಂತರದ ಶಸ್ತ್ರಾಸ್ತ್ರಗಳನ್ನು ತರಿಸಿ ಸೈನಿಕರಿಗೆ ಹಂಚಿದ್ದಾರೆ. ರಾಜಪುತ್ರರು ಸೈನ್ಯಸಂಗ್ರಹ ಮಾಡತೊಡಗಿದ್ದಾರೆ. ಇದೀಗಲೇ ೩ ಲಕ್ಷ ಸೈನಿಕರು ದಾಖಲಾದರು. ಅರಬರೂ ಸೈನಿಕರಾಗಿ ಇಟಾಲಿಯವರಿಗೆ ಇದಿರಾಗಲು ದಾಖಲಾಗುತ್ತಿದ್ದಾರೆ. ರಾಸ ಅಬೇಬಾರವರ ಕ್ಷಾತ್ರತೇಜ ಹೊಗಳತಕ್ಕಂಥಾದ್ದಿದೆ! ಇಟಾಲಿಯವರೊಡನೆ ೪೦ ವರ್ಷಗಳ ಹಿಂದೆ ಹೋರಾಡಿದ ವೀರ ಭಟರಿವರು!! ಇವರು ತಮ್ಮ ಮಗಂದಿರ ಕಡೆ ಅರ್ಧ ಲಕ್ಷ ಸೈನಿಕರನ್ನು ಕೊಟ್ಟು ಹಬಸಿ ರಣಸಂಗಕ್ಕೆ ಕಳುಹಿದ್ದಾರೆ. ಹಬಸಿ ದೇಶಕ್ಕೆ ಬ್ರಿಟಿಶ-ಸೋಮಾಲಿ ಪ್ರಾಂತದ ಝೀಲಾ-ಬೆರ್ಬೆರಾ ಮಾರ್ಗದಿಂದಲೂ, ಸೂಡಾನದೊಳಗಿನ ಖಾರ್ತುಮ್—ಗಂಬೇಲಾ ಮಾರ್ಗದಿಂದಲೂ ಮದ್ದು-ಗುಂಡು-ಶಸ್ತ್ರಾಸ್ತ್ರಗಳು ಪೂರೈಸಲ್ಪಡುತ್ತವೆ.

ಬ್ರಿಟಿಶರೂ, ಇಟಾಲಿಯನರೂ ಬಹಳ ಕಾಲದಿಂದ ಯುದ್ಧ ಸಾಮಗ್ರಿಗಳನ್ನೇ ತಯಾರಿಸುತ್ತಿದ್ದಾರೆ. ಅಮೇರಿಕೆಯೊಳಗೆ ಕಳೆದ ೮ ತಿಂಗಳ ಅವಧಿಯಲ್ಲಿ ಖರೀದಿಯಾದ ಯುದ್ಧ ಸಾಮಗ್ರಿಗಳ ಲೆಕ್ಕ ಕೇಳಿಕೊಳ್ಳಿ! ೩೩,೫೫,೧೯,೩೪೫ ರತ್ತಲು ಹತ್ತಿ, ೧,೬೨,೪೭,೫೪೭ ರತ್ತಲು ಗಾಯದ ಬತ್ತಿ, ೧,೬೯,೧೯೭ ಟನ್ನು ಹಳೇ ಕಬ್ಬಿಣ-ಉಕ್ಕು, ೨೭೩೫ ಟನ್ನು ಹಳೇ ತಾಮ್ರ, ೧೬೩೭ ಮೋಟಾರ ಯಂತ್ರ ಸಾಮಗ್ರಿ, ೩,೮೪,೪೬೭ ರತ್ತಲು ಗ್ಯಾಸು ಇಷ್ಟು ಸರಕುಗಳನ್ನು ಬ್ರಿಟನ್ ದೇಶದವರೇ ಖರೀದಿ ಮಾಡಿದರು. ತಕ್ಕ ಮಟ್ಟಿಗೆ ಇದರ ಮುಕ್ಕಾಲು ಪಾಲು ಖರೀದಿ ಇಟಾಲಿಯವರದು. ಈ ಪ್ರಕಾರ ಯುದ್ಧತಯಾರಿ ದೀರ್ಘಕಾಲದಿಂದ ನಡೆದಿರುವಾಗ ಶಿಷ್ಟಾಯಿಯಾಗುವದೆಂದು ನಾ ಹೇಳಲಾರೆ. ಹಬಸಿ ದೇಶದ ಹಸಗಿಯ ವ್ಯವಸ್ಥೆ ಸಮಾಧಾನದಿಂದ ಆಗುವದಾಗಿಯೂ ನಾ ಹೇಳಲಾರೆ. ಇಂಥಿಯ ಮಾತು ತಮ್ಮ ಕಡೆ ಪ್ರತ್ಯಕ್ಷವಾಗಲಿ, ಅಪ್ರತ್ಯಕ್ಷವಾಗಲಿ ಸೂಚಿಸಲ್ಪಡಲಿಲ್ಲವಾಗಿ ಬಾದಶಹರಾದ ರಾಸ ತಫಾರಿಯವರು ಪತ್ರಿಕಾ ಪ್ರತಿನಿಧಿಗಳ ಬಳಿ ಉದ್ಗರಿಸುತ್ತಾರೆ. ಕಳೆದ ವಾರ ಅವರು ವಿಮಾನಮಾರ್ಗವಾಗಿ ಅಂತರಂಗದಿಂದ ದಕ್ಷಿಣ ಪಾರ್ಶ್ವದ ರಣರಂಗಕ್ಕೆ ಹೋಗಿ ಪರಿಸ್ಥಿತಿ ನೋಡಿಕೊಂಡು ಸೇನಾಪತಿ ನಸೀಬಾ ಹಾಗೂ ವಹಿಬ ಪಾಶಾರವರೊಡನೆ ಆಲೋಚನೆ ಮಾಡಿ ಹೊಸ ಯುದ್ಧಯೋಜನೆಯನ್ನು ಕಲ್ಪಿಸಿ ಮರಳಿದರಾಗಿ ತಿಳಿಯುತ್ತದೆ. ಬಾದಶಹರು ೩ ದಿನಗಳ ತನಕ ಸಂಚಾರ ಮಾಡಿ ಆಡಿಸ ಅಬಾಬಾ ಪಟ್ಟಣಕ್ಕೆ ಮರಳಿದ್ದಾರೆ. ಮುಸೋಲಿನಿಯವರು ಸೇನಾಪತಿ ಬೋನೋರವರಿಗೆ ಹಿಂಗರೆದುಕೊಂಡು ಸೇನಾಪತಿ ಬೊಡೊಗ್ಲಿಯೊರವರಿಗೆ ನೇಮಿಸಿದ್ದಾರೆ ಇದೇ ವಾರದಲ್ಲಿ. ಸೇನಾಪತಿ ಬೋನೋರವರವರಂತೆ ಕಾಲಹರಣ ಮಾಡದೆ ತ್ವರೆಯನೇ ಹಬಸಿ ಜನಾಂಗದ ಮೇಲೆ ಸಾಗಿಹೋಗಿ ಇಡೀ ದೇಶವನ್ನು ತೀವ್ರವೇ ಸ್ವಾಧೀನಪಡಿಸಿಕೊಳ್ಳಬೇಕಾಗಿ ಬೊಡೊಗ್ಲಿಯೊರವರಿಗೆ ವೀಳ್ಯ ಕೊಟ್ಟು ಮುಸೋಲಿನಿಯವರು ರವಾನಿಸಿದ್ದಾರೆ. ಇಂಥ ಪ್ರಸಕ್ತಿಯಲ್ಲಿ ಒಡಂಬಡಿಕೆಯಾಗುವದೆಂದು ನಾನು ಹೇಗೆ ಹೇಳಲಿ? ಒಂದು ಸಂಗತಿ ಸೂಚಿಸುತ್ತದೆ. ಅದೇನಂದರೆ- ಬ್ರಿಟಿಶ-ಫ್ರೆಂಚರು ಈವಾದದೊಳಗೆ ಬೀಳುವ ಪೂರ್ವದಲ್ಲಿ ಸ್ವಾರ್ಥ ವಿಚಾರ ಮಾಡುತ್ತಿದ್ದಾರೆ. ಸ್ವಾರ್ಥ ಸಾಧಿಸಿಕೊಂಡು ಆ ಮೇಲೆ ಯುದ್ಧದಲ್ಲಿ ಧುಮುಕುವರು. ಆದಕ್ಕಾಗಿಯೇ ಹಬಸಿ ಸರಕಾರದ ವಿದೇಶ ಇಲಾಖೆಯ ಮುಖ್ಯಾಧಿಕಾರಿಗಳಾದ ಮಿ| ನೊರಿಸ ಸೀಟಿರಸನ್‌ರವರು ಬ್ರಿಟಿಶ-ಫ್ರೆಂಚ ಸರಕಾರಗಳೊಡನೆ ಆಲೋಚನೆ ಮಾಡುತ್ತಾರಾಗಿ ನಾನು ತಿಳಿಯುತ್ತೇನೆ.

ರಾಷ್ಟ್ರಸಂಘದ ಬಹಿಷ್ಕಾರ ಪ್ರಯೋಗ ಕಳೆದ ಸೋಮವಾರದಿಂದ ಪ್ರಾರಂಭವಾಗಿದೆ. ಹಿಂದುಸ್ಥಾನ ಸರಕಾರವೂ ಬ್ರಿಟಿಶ ಬಸವನ ಹಿಂದೆ ಬಾಲದಂತೆ ಹಿಂಬಾಲಿಸಿದೆ. ಬಂದೂಕಿ, ತೋಫು, ಮದ್ದುಗುಂಡು ಮೊದಲಾದ ಸ್ಫೋಟಕ ದ್ರವ್ಯಗಳನ್ನೂ, ಕಬ್ಬಿಣ, ಉಕ್ಕು, ಎಲ್ಯುಮಿನಮ್, ರಬ್ಬರ ಮೊದಲಾದ ಯುದ್ಧೋಪಯೋಗಿ ಸಾಮಗ್ರಿಗಳನ್ನೂ ತಯಾರಿಸಲು ಸುಕರವಾದ ಸರಕುಗಳನ್ನೂ ಕಳುಹಬಾರದಾಗಿಯೂ ಅಪ್ಪಣೆ ಮೀರಿ ಕಳುಹುವವರಿಗೆ ಶಾಸನವಾಗುವದಾಗಿಯೂ ಹಿಂದುಸ್ಥಾನ ಸರಕಾರದ ಪ್ರಕಟಣೆ. ಮುಸೊಲಿನಿಯವರು ಇದಕ್ಕೆ ಸೊಪ್ಪು ಹಾಕುವವರಲ್ಲ. ರಾಷ್ಟ್ರಕ್ಕೆ [illegible] ಅವರು ರಾಜಾಜ್ಞೆ ಹೊರಡಿಸಿದ್ದಾರೆ. ೧ ಲಕ್ಷ ಸೈನಿಕರಿಗೆ ಸಹಾಯ ಮಾಡಲು ಅಪ್ಪಣೆ ಕೊಟ್ಟಿದ್ದಾರೆ. ಯುದ್ಧಕ್ಕಾಗಿ ತಗಲಿದ ವೆಚ್ಚದಿಂದ ಇಟಾಲಿಯ ಕೋಶ ಬರಿದಾಗಿದೆ. ಸರಕಾರದ ಸ್ಥಿತಿ ಜನಸಾಮಾನ್ಯರಿಗೆ ತಿಳಿಯಬಾರದೆಂದು ಸರಕಾರದ ಸಾಂಪತ್ತಿಕ ಸ್ಥಿತಿಯನ್ನು ಕಾಲಕಾಲಕ್ಕೆ ತಿಳಿಸುವ ಪತ್ರಿಕೆಗಳನ್ನು ಮುಸೋಲಿನಿಯವರು ನಿಲ್ಲಿಸಿದ್ದಾರೆ. ಇಂಥ ಪ್ರಸಕ್ತಿಯಲ್ಲಿ ಹಲವು ಸ್ತ್ರೀಯರು ಮುಂದಾಗಿ ತನ್ನ ಕಡೆಗಿದ್ದ ಪಾಣಿಗ್ರಹಣದ ಉಂಗುರಗಳನ್ನು ಮುಸೋಲಿನಿಯವರಿಗೆ ಅರ್ಪಿಸಿ ಅವುಗಳ ಬದಲಿಗೆ 'ನನ್ನ ದೇಶಕ್ಕಾಗಿ' ಎಂಬ ಅಂಕಿತವಿದ್ದ ಕಬ್ಬಿಣದ ಉಂಗುರಗಳನ್ನು ಪಡೆಯಲಾರಂಭಿಸಿದ್ದಾರೆ. ತಕ್ಕ ಮಟ್ಟಿಗೆ ಒಂದೊಂದು ಉಂಗುರ ೧|| ಪವನು ಬೆಲೆಯದು, ೧ ಕೋಟಿ ಪತ್ನಿಯರು ಉಂಗುರ ಕೊಟ್ಟಲ್ಲಿ ಸರಕಾರಕ್ಕೆ ೧|| ಕೋಟಿ ಬೆಲೆಯ ಚಿನ್ನ ಸಿಕ್ಕೀತು. ಈ ಪ್ರಕಾರ ಸ್ತ್ರೀಯರು ಅಭಿಮಾನ ಹಿಡಿದು ದೇಶಕ್ಕಾಗಿ ಸ್ವಾರ್ಥತ್ಯಾಗ ಮಾಡುವ ನೋಟ ನಿಜವಾಗಿಯೂ ಅಪೂರ್ವವಾದದು. ಸೈನ್ಯಸಾಹಿತ್ಯದ ಕೊರತೆ ಇಟಾಲಿಗೆ ಒದಗುವ ಲಕ್ಷಣಗಳಿಲ್ಲ. ಜರ್ಮನಿಯಿಂದ ಬೇಕಷ್ಟು ಸರಕು ಬ್ರೆನರ ಬೆಟ್ಟದ ಮಾರ್ಗವಾಗಿ ಇಟಾಲಿಗೆ ಆಮದಾಗುತ್ತಿದೆ. ಹಿಂದುಸ್ಥಾನದೊಳಗಿನ ಸರಕು ಏಡನ್ ಪಟ್ಟಣಕ್ಕೆ ಹೋಗಿ ಕಳ್ಳತನದಿಂದ ಇಟಾಲಿ-ಸೋಮಾಲಿ ಪ್ರಾಂತಕ್ಕೆ ರಫ್ತಾಗುವದಾಗಿ ಕರಾಚಿಯೊಳಗಿನ ವಾರ್ತೆ. ವರ್ತಕರು ಆ ಪ್ರಕಾರ ವ್ಯವಸ್ಥೆ ಮಾಡಿ ಲಾಭ ಹೊಂದುವರಾಗಿಯೂ, ಒಟ್ಟಿನ ಮೇಲೆ ಬಹಿಷ್ಕಾರ ನಿರರ್ಥಕವಾಗುವದಾಗಿಯೂ ಹೇಳುತ್ತಾರೆ. ಬಹಿಷ್ಕಾರ ನಿರರ್ಥಕವಾದ ಬಳಿಕ ಪ್ರತ್ಯಕ್ಷ ರಣರಂಗದಲ್ಲಿಯೇ ಇಳಿಯಬೇಕು. ಫ್ರೆಂಚ ರಾಜ್ಯಾಧಿಕಾರಿಗಳಾದ ಲಾವಲ್‌ರವರು ಇಟಾಲಿಗೆ ವಿರೋಧವಾಗಿ ಶಸ್ತ್ರಾಸ್ತ್ರ ಹೂಡಲು ಎಷ್ಟು ಮಾತ್ರಕ್ಕೂ ಸಿದ್ಧರಿಲ್ಲ. ರಾಷ್ಟ್ರಸಂಘದ ಸಭಾಸದರಿರುವ ಮೂಲಕ ನಿರುಪಾಯರಾಗಿ ಬಹಿಷ್ಕಾರವನ್ನು ಅವರು ಪುರಸ್ಕರಿಸಬೇಕಾಗಿದೆ; ಮನ ಒಪ್ಪಿಗೆ ಇಲ್ಲದಿದ್ದರೂ ಪುರಸ್ಕರಿಸುತ್ತಿದ್ದಾರೆ. ಅಂದ ಬಳಿಕ ಬ್ರಿಟಿಶರೇ ಮುಂದಾಗಿ ಇಟಾಲಿಗೆ ವಿರೋಧಿಸುವ ಪ್ರಸಂಗ. ಬ್ರಿಟಿಶ ಪಾರ್ಲಿಮೆಂಟಿನ ಇಲೆಕ್ಷನು ಮುಗಿದು ಹೊಸ ಪ್ರಧಾನ ಮಂಡಳದ ರಚನೆಯಾಗುತ್ತಿದೆ. ಯಾರ್ಯಾರಿಗೆ ಯಾವ್ಯಾವ ಖಾತೆಗಳನ್ನು ಒಪ್ಪಿಸಬೇಕೆಂಬ ಆಲೋಚನೆ ನಡೆದಿದೆ. ಆ ವ್ಯವಸ್ಥೆಯನ್ನು ತೀರಿಸಿ ಮಿ| ಬಾಲ್ಡವಿನ್‌ರವರು ಇದೇ ಬರುವ ನವಂಬರ ೨೬ನೇ ತಾರೀಖಿಗೆ ಸೇರುವ ಹೊಸ ಪಾರ್ಲಿಮೆಂಟಿನ ಸಭೆಯಲ್ಲಿ ಬ್ರಿಟಿಶ ಧೋರಣವನ್ನು ವ್ಯಕ್ತಪಡಿಸುವವರಿದ್ದಾರೆ. ಅಲ್ಲಿಯ ವರೆಗೆ ನಾನು ಕೈತಡೆಯಬೇಕಾಗಿದೆ.

ಅಸ್ಮಾರಾ-ರೋಮ ಪಟ್ಟಣದೊಳಗಿಂದ ಬರುವ ವಾರ್ತೆಗಳನ್ನು ಎಷ್ಟಕ್ಕೂ ನಂಬಬಾರದಾಗಿ 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಡೆರೆಡೊವಾ ಪಟ್ಟಣದೊಳಗಿನ ಸುದ್ದಿಗಾರರು ಒತ್ತಿ ಹೇಳುತ್ತಾರೆ. ಅವುಗಳಲ್ಲಿ ಇಟಾಲಿಯವರಿಗೆ ಹುರಿದುಂಬಿಸಲು ಸುಳ್ಳು ವಾರ್ತೆಗಳೇ ಇರುವವೆಂದು ಅವರ ನಿಶ್ಚಿತಾಭಿಪ್ರಾಯ. ಸಾವಿರಾರು ಹಬಸಿ ಜನರು ದಕ್ಷಿಣ ಪಾರ್ಶ್ವದ ಓಗಡೇನ ಪ್ರಾಂತದಲ್ಲಿ ಬಾಂಬುಗಳಿಗೆ ತುತ್ತಾದರಾಗಿ ಅಸ್ಮಾರಾ ಪಟ್ಟಣದ ವಾರ್ತೆ. ಅದು ಸುಳ್ಳೆಂದೂ, ಬರೇ ೫೦ ಜನರು ಮಾತ್ರ ತೀರಿಕೊಂಡರಾಗಿಯೂ ಆಡಿಸ-ಅಬಾಬಾ ಪಟ್ಟಣದೊಳಗಿನ ವಾರ್ತೆ. ಮಕಾಲೆಯ ದಕ್ಷಿಣ ಪಾರ್ಶ್ವದಲ್ಲಿ ಮೈಚಾಫಿ, ಮೈ ಮುಸ್ಸಿಕ್ ಕಂದರಗಳಲ್ಲಿ ಇಟಾಲಿಯವರು ೬೦೦ನ್ನು ಬಾಂಬುಗಳನ್ನು ೧೫ ಸಾವಿರ ಹಬಸಿ ಜನಸಂದಣಿಯ ಮೇಲೆ ಒಗೆದರಂತೆ. ೨ ಘಂಟೆಯ ತನಕ ಬಾಂಬಿನ ಮಳೆ ಸುರಿಯಿತು. ೧ ಸಾವಿರ ಹಬಸಿ ಜನರು ತೀರಿಕೊಂಡರು. ಉಳಿದವರು ದಿಕ್ಕುಪಾಲಾಗಿ ಓಡಿದ್ದರು. ಮುಸೋಲಿನಿಯವರ ಇಬ್ಬರು ಮಗಂದಿರು ೨೦ ವಿಮಾನಗಳೊಡನೆ ನಸುಕು ಹರಿಯುವ ಮುಂಚೆ ಅಸ್ಮಾರಾ ಪಟ್ಟಣದಿಂದ ಹೊರಟಿದ್ದರಾಗಿಯೂ, ೧೫೦ ಅಡಿ ಸಮೀಪದಿಂದ ಬಾಂಬುಗಳನ್ನು ಒಗೆದರೆಂದೂ, ಒಂದೊಂದು ಬಾಂಬು ಎರಡೆರಡು ರತ್ತಲಿನಷ್ಟು ಭಾರವಾಗಿತ್ತೆಂದೂ ಅಸ್ಮಾರಾದಿಂದ ವರ್ಣನೆ. ಇದು ಸುಳ್ಳೆಂದೂ ಬರೇ ೧೦ ಜನರು ಮಾತ್ರ ತೀರಿಕೊಂಡರೆಂದೂ, ೫೦ ಮಂದಿಗಳಿಗೆ ಗಾಯವಾಗಿದೆಯೆಂದೂ ಆಡಿಸ ಅಬಾಬಾ ಪಟ್ಟಣದೊಳಗಿನ ವಾರ್ತೆ. ಮಕಾಲೆಯ ದಕ್ಷಿಣ ಪಾರ್ಶ್ವದಲ್ಲಿ ಅರ್ಧ ಲಕ್ಷ ಸೈನ್ಯ ಶೇಖರಿಸಲ್ಪಟ್ಟಿದೆ. ರಾಸ ಸಿಯೂಮರವರು ಬರೇ ೩೦೦ ಜನರೊಡನೆ ಟೆಂಬಿಯನ್ ಕಂದರದಲ್ಲಿ ಅಂಬಾಸಲಾಮಾ ಕೋಟೆಯ ಅಡಿ ಇಟಾಲಿಯ ಸೈನಿಕರಿಗೆ ಇದಿರಾದರು. ಕೆಲ ಕಾಲದ ವರೆಗೆ ಒಳ್ಳೆ ಸಂಗ್ರಾಮ ನಡೆಯಿತು. ಇಟಾಲಿಯವರ ಬೆಂಬಲಕ್ಕೆ ಸೈನ್ಯ ಬಂದೊಡನೆ ರಾಸ ಸಿಯೂಮರವರ ಸೈನ್ಯವು ಬೆಟ್ಟದಲ್ಲಿ ಅಡಗಿಕೊಂಡು ಬಿಟ್ಟಿತು. ಇಟಾಲಿ ಸೈನಿಕರು ಮುಂದರಿದ ಕೂಡಲೆ ಅಡಗಿಕುಳಿತ ಸೈನಿಕರು ತಕ್ಷಣ ಸಾಗಿಹೋಗಿ ಇಟಾಲಿಯವರೊಡನೆ ತುಮುಲ ಯುದ್ಧ ಮಾಡಿ ಇಟಾಲಿಯರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿಬಿಟ್ಟರು. ಈಗ ಅನಾಲೆಯ ಬಳಿ ಫಿಟೋರಾರಿ ಅಯಾಲೆ ಸೇನಾಪತಿಗಳು ಇಟಾಲಿಗೆ ಇದಿರಾಗಿ ಅನಾಲೆ ಗ್ರಾಮವನ್ನು ಇಟಾಲಿಯವರ ಕಡೆಯಿಂದ ಸೆಳೆಕೊಂಡರಾಗಿ ಹರಾರ ಪಟ್ಟಣದ ವಾರ್ತೆ. ಮಧ್ಯಸ್ಥದ ಪನಕ ಇತ್ತಟ್ಟಿನವರು ಆವೇಶದಿಂದ ಹೋರಾಡಿದರು. ಇಟಾಲಿಯವರಿಗೆ ವಿಶೇಷ ನಷ್ಟವಾಯಿತಾಗಿಯೂ ಸುದ್ದಿಗಾರರು ತಿಳಿಸುತ್ತಾರೆ. ಅಸ್ಸೈ ಪಟ್ಟಣದ ಬಳಿ ಹಬಸಿ ಜನರು ಇಟಾಲಿಯ ಸೈನಿಕರಿಗೆ ಇದಿರಾಗಿ ಈ ಸೈನ್ಯದವರಿಗೆ ಇಟಾಲಿಯ ಸೇನಾಪತಿ ಸಂತಿನಿಯವರ ಸೈನ್ಯಪಥಕದೊಡನೆ ಒಟ್ಟುಗೂಡಗೊಡಲಿಲ್ಲ. ಇಟಾಲಿಯವರು ಇಡೀ ದಿನ ಹೋರಾಡಿದರು, ತೋಫುಗಳಿಂದ ಅಗ್ನಿಮಳೆ ಸುರಿಸಿದರು. ಆದಾಗ್ಯೂ ಹಬಸಿ ಜನರು ಅಡ್ಡಗಟ್ಟಿದರು. ಈಗ ಸೈನ್ಯದವರಿಗೆ ಆಹಾರ ಸಾಮಗ್ರಿಗಳನ್ನು ಪೂರೈಸುವದು ಕಠಿಣ. ವಿಮಾನಗಳಿಂದ ಆಹಾರ ಸಾಮಗ್ರಿ ಪೂರೈಸಲ್ಪಡುತ್ತದಾಗಿ ಅಸ್ಮಾರಾ ಪಟ್ಟಣದೊಳಗಿನ ವಾರ್ತೆ. ಇವರ ಮೇಲಿಂದ ಅಲ್ಲಿಯ ಇಟಾಲಿ ಸೈನಿಕರ ಅವಸ್ಥೆ ಕಲ್ಪನೆಯಿಂದಲೇ ತಿಳಕೊಳ್ಳಬಹುದು. ಹಬಸಿ ಜನರು ಮುಸಾ ಅಲಿ ಬೆಟ್ಟದ ಮೇಲೆ ತಳವೂರಿಕೊಂಡಿದ್ದ ಇಟಾಲಿಯರನ್ನು ಹೊಡೆದೋಡಿಸಿದರಾಗಿ ಹವಾಸ ವಾರ್ತಾವಾಹಕರ ವಾರ್ತೆ. ಪಶ್ಚಿಮ ಪಾರ್ಶ್ವದ ಓಗಡೇನದಲ್ಲಿಯೂ ಇಟಾಲಿಯವರಿಗೆ ಮುಂದರಿಯಲಾಗುವದಿಲ್ಲ. ಗೋರಾಹಿ ಗ್ರಾಮದಲ್ಲಿಯೇ ಅವರು ತಳವೂರಿಕೊಂಡಿರಬೇಕಾಗಿದೆ. ಇಟಾಲಿಯರ ಮದ ಇಲ್ಲಿ ಇಳಿಯಲಾರಂಭಿಸಿದೆ. ಪೂರ್ವ ಪಾರ್ಶ್ವದ ಅಸಾಬ ಪ್ರಾಂತದ ಬಳಿ ದನಕಿಲಿ ಜನರು ಇಟಾಲಿಯ ಸೈನಿ

[ಮುಂದೆ ೯ನೇ ಪಾನು ನೋಡಿರಿ.]

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಧಾರಣ ಬೀಳುತ್ತದೆ. ಪ್ಲೇಗಿನ ಉಪದ್ರವ ಹಿಂಗಾಯಿತು. ದನಗಳ ದೊಡ್ಡರೋಗ ಬಂದಿದೆ. ಹಲವು ದನಗಳು ಸತ್ತು ಹೋದವು. ಒಬ್ಬರಲ್ಲಿ ಒಂದೇ ದಿನ ೩-೪ ದನಗಳು ತೀರಿಕೊಂಡವು. ಇದು ಸಾಂಸರ್ಗಿಕ ರೋಗ. ಆದರಿಂದ ಸತ್ತ ದನಗಳನ್ನು ಹೊಲೆಯರ ಕಡೆ ಸುಲಿಯಗೊಡದೆ ಅವನ್ನು ಹುಗಿಸಬೇಕಾಗಿಯೂ, ಹುಗಿಯುವ ಕ್ರಮದಿಂದ ರೋಗದ ಕ್ರಿಮಿಗಳು ಹಬ್ಬುವದಿಲ್ಲವಾಗಿಯೂ ಮ್ಯುನಿಸಿಪಾಲಿಟಿಯವರು ಗೂರಕುಂಬಿ ಡಂಗುರ ಸಾರಿದ್ದಾರೆ. ಪ್ಲೇಗಿನ ಬೆನ್ನಿಗೇ ದನಗಳ ರೋಗ ಬಂದಿದೆ!

ಹೊಂತಗಲ್ಲ ಬಳಿಗೆ ದನಗಳಿಗೆ ಹುಲಿಯ ಉಪದ್ರ. ೩ ಹುಲಿಗಳು ದನಗಳ ಬೇಟೆಮಾಡುತ್ತಿವೆ. ಒಂದು ಹುಲಿ ಭಯಂಕರವಂತೆ! ದಿನಾ ೨ ದನಗಳ ಫಲಹಾರವಾಗುತ್ತಿವೆ. ಗ್ರಾಮಾಧಿಕಾರಿಗಳು ಮೇಲಧಿಕಾರಿಗಳಿಗೆ ತಿಳಿಸುವದಿಲ್ಲವೋ ಏನೋ! ತೀರ್ವೆ ವಸೂಲ ಮಾಡಿದ ಕೂಡಲೆ ಕೆಲಸ ಮುಗಿಯಿತೆಂದು ಗ್ರಾಮಾಧಿಕಾರಿಗಳು ಎಣಿಸಕೂಡದು. ಗ್ರಾಮದವರ ಆಪತ್ತಿನ ಸಂಗತಿಯನ್ನು ಮೇಲಧಿಕಾರಿಗಳಿಗೆ ಕಾಲ ಕಾಲಕ್ಕೆ ಅರಿಕೆ ಮಾಡಿಕೊಳ್ಳಬೇಕು. ಕಲ್ಲಬ್ಬೆ ಗ್ರಾಮದಲ್ಲಿ ವರ್ಷಾಸನ ೫೦-೬೦ ದನಗಳು ಹುಲಿಬಾಯ ಪಾಲಾಗುತ್ತಿವೆ. ಈ ಪ್ರಕಾರ ಗೋ ನಾಶವಾದಲ್ಲಿ ಬೇಸಾಯದ ಅಭಿವೃದ್ಧಿಯು ಹೇಗೆ ಆಗಬೇಕು [illegible] ಒಲ್ಲದು? ಗ್ರಾಮೋದ್ಧಾರ, ಬೇಸಾಯೋದ್ಧಾರ ಮಾಡುವವರೆಲ್ಲರೂ ವಿಚಾರ ಮಾಡಿ ಕಾಡು ಮೃಗಗಳ ಬಾಧೆಯಿಂದ ಜನರನ್ನು ರಕ್ಷಿಸುವ ಯೋಜನೆ ಮಾಡದಿದ್ದರೆ ಬೇಸಾಯದ ಉದ್ಧಾರವಾಗಲಿ, ಗ್ರಾಮಗಳ ಉದ್ಧಾರವಾಗಲಿ ಸಾಧಿಸದು. ಬೇಸಾಯ ಪ್ರಯೋಗ ಹೊಲದ ಒಂದು ಶಾಖೆಯನ್ನು ಇಂಥ ಪ್ರದೇಶಗಳಲ್ಲಿ ಹೊರಡಿಸಿ ನೋಡಿದಲ್ಲಿ ಬಡ ಬೇಸಾಯಗಾರರ ಕಷ್ಟಗಳ ಕಲ್ಪನೆ ಅಧಿಕಾರಿಗಳಿಗೆ ಬರುವಂತಿದೆ.

ಒಬ್ಬರು ಬರೆಯುವದೇನಂದರೆ:— ಕುಂಬರಿಗೆ ಕೊಂಡ ಸ್ಥಳದಲ್ಲಿ ಸಿಕ್ಕಿದ ಉರುವಲ ಕಟ್ಟಿಗೆಯನ್ನು ಜಂಗಲ ಖಾತೆಯವರಿಗೆ ಕಂಪೆನ್ಸೇಶನ್ ಯಾನೆ ಸ್ವಾಮಿ ಕಟ್ಟು ಪಡೆದಿದ್ದಾರೆ. ಅದನ್ನು ಮಾರಾಟ ಮಾಡಲು ಜಂಗಲ ಖಾತೆಗೆ ಸಂಬಂಧಿಸಬಹುದೇನು?

[ಈ ಕಟ್ಟಿಗೆ ಜಂಗಲ ಖಾತೆಯವರಿಂದಲೇ ಬಿನ್‌ಶರ್ತ ಮಾರಾಟ ಆದ್ದರಿಂದ ಅದನ್ನು ಇಂಥಂಥಲ್ಲಿ ಇಂಥಿಂಥವರಿಗೆ ಮಾರಾಟ ಮಾಡಬೇಕಾಗಿ ನಿರ್ಧರಿಸುವ ಹಕ್ಕು ಜಂಗಲ ಖಾತೆಯವರಿಗೆ ಇಲ್ಲ. ಸಂಪಾದಕ.]

ಕುಮಟಾ ಅರ್ಬನ್ ಬೇಂಕಿನ ಯಾಕರೋ ಸಭಾಸದರೊಬ್ಬರು ದೂರುವದೇನಂದರೆ:— ಒಡ್ಡಿಯಲ್ಲಿ ಸಾಟು ಕೊಡುತ್ತೇವಾಗಿ ಸಂಘದವರು ನಮಗೆ ಗ್ರಹಿಕೆ ಕೊಟ್ಟು ನಮ್ಮ ಕಡೆಯಿಂದ ಪೂರ್ಣ ಹಣ ತುಂಬಿಕೊಂಡರು. ಸಾಟು ಸಿಗತಕ್ಕ ರಕಮು ಇನ್ನೂ ಸಿಗಲಿಲ್ಲ. ವಿಚಾರಿಸಿದರೆ ಸಹಕಾರಿ ಖಾತೆಯವರು ಮಂಜೂರಿ ಕೊಡಲಿಲ್ಲವಾಗಿ ಹೇಳುತ್ತಾರೆ. ಸಂಘದವರು ಸಾಟು ಕೊಡುವದಕ್ಕಾಗಿ ರೂ. ೩೦೦೦ ಮಟ್ಟಿಗೆ ರಕಮನ್ನು ಪ್ರತ್ಯೇಕವಾಗಿಟ್ಟಿದ್ದಾಗಿ ತಿಳಿಯುತ್ತದೆ. ಜನರ ಸಹಕಾರಿ ಬೇಂಕಿನ ಹಣಕ್ಕೆ ಸರಕಾರಿ-ಸಹಕಾರಿ ಖಾತೆಯವರ ಬಾಧ್ಯವೇ? ಸಹಕಾರಿ ಖಾತೆಯವರಿಗೆ ಮಂಜೂರಿ ಕೊಡಲಿಕ್ಕೆ ಏನು ತೊಂದರೆಯೆಂಬ ಸಂಗತಿ ತಿಳಿಯಲಿಲ್ಲ. ಸಹಕಾರಿ ಬೇಂಕಿನ ವ್ಯವಹಾರ ತನ್ನ ಹಣವನ್ನು ತನ್ನ ಕರಾರಿನಂತೆ ಹಂಚುವಾಗ ಸಹಕಾರಿ ಖಾತೆಯ ಅನಿರ್ವಾದವೇಕೆಂದೂ ತಿಳಿಯಲಿಲ್ಲ. ಕಾಮರಾಟ ಸಹಕಾರಿ ಬೇಂಕಿನವರು ಮಾಡುವಂತೆ ಮುಂಬರದ ಕಡೆಯಿಂದ ಸಾಟು ಕೊಡುವ ರಕಮನ್ನು ತುಂಬಿಕೊಳ್ಳದೆ, ರೀತಿಯಂತೆ ಸಲ್ಲತಕ್ಕ ರಕಮನ್ನಷ್ಟೇ ತುಂಬಿಕೊಂಡು ಮಂಜೂರಿಯು ಸಿಕ್ಕ ಬಳಿಕ ಕೊಡುವದು ಉತ್ತಮ. ಆದರಿಂದ ಯಾತಕ್ಕೋ ಜನರಿಗೆ ಕಷ್ಟದಲ್ಲಿ ಸಿಲುಕಿಸುವದು. ಇತ್ಯಾದಿ.

ಅಕ್ಕಿಯ ದರ ಏರದು, ರೂ. ೫॥, ರೂ. ೩-೧೦-೦ ಎಂದು ಹೇಳಿದಾಗ್ಯೂ ಅಕ್ಕಿ ಮಾರಾಟವಾಗುವದಿಲ್ಲ. ಅಕ್ಕಿಗೆ ಗಿರಾಕಿಯೇ ಇಲ್ಲ. ಮಳೆಗಾಲದಲ್ಲಿ ಖರ್ಚಾಗತಕ್ಕದೆಂದು ಬೇಸಿಗೆಯಲ್ಲಿ ಸಿಲ್ಕು ಇಟ್ಟ ಅಕ್ಕಿ ಈಗಲೂ ಖರ್ಚಾಗಲಿಕ್ಕಿಲ್ಲ. ಇಂಥ ಪ್ರಸಂಗದಲ್ಲಿ ಬೇಸಾಯಗಾರರು ಬಾಳ್ವೆ ಮಾಡುವ ಬಗೆ ಹೇಗೆ?

ಹೊನ್ನಾವರ— (ತಾ. ೨೩-೧೧-೧೯೩೫.) ಅಕ್ಕಿಯ ದರ ಹೇರಳ ಇಳಿದಿದೆ. ಅಕ್ಕಿಗೆ ಕೇಳುವವರಿಲ್ಲ. ಹಳೇ ಅಕ್ಕಿ ಇಲ್ಲಿ ಸಿಕ್ಕುಂಟು. ಅಕ್ಕಿಯ ವರ್ತಕರಿಗೆ ಬಹಳ ನಷ್ಟ.

ಮ್ಯುನಿಸಿಪಾಲಿಟಿಯ ೨ನೇ ವಾರ್ಡಿನ ಬಾಯ್-ಇಲೆಕ್ಷನ ಮುಗಿಯಿತು. ರಾ॥ ಅನಂತ ಕಾಮತ ಇವರಿಗೆ ೬೮ ಮತಗಳು ಬಿದ್ದು ಇವರೇ ಆರಿಸಿ ಬಂದರು. ಅಸ್ಪೃಶ್ಯ ಜಾತಿಯ ಶಿವಪ್ಪ ಈತನಿಗೆ ೩೦ ಮತಗಳು ಬಿದ್ದವು. ಅಮೀರ ವಿಠ್ಠಲ ಇವರಿಗೆ ೪ ಮತಗಳು ಬಿದ್ದವು. ಅಂತು ಬಿದ್ದ ೧೦೭ ಮತಗಳಲ್ಲಿ ಶಿವಪ್ಪನ ಪಾಲಿಗೆ ಬಂದ ಮತಗಳು ಇಷ್ಟೇ. ಆಯಿದೆ ಕೌನ್ಸಿಲಿನ ಸಭಾಸದರೂ, ಜಿಲ್ಹಾ ಬೋರ್ಡಿನ ಅಧ್ಯಕ್ಷರೂ, ಸ್ಕೂಲ ಬೋರ್ಡಿನ ಸರಕಾರದಿಂದ ನೇಮಿಸಲ್ಪಟ್ಟ ಸಭಾಸದರೂ ಆದ ರಾ॥ ಗಂಗೊಳ್ಳಿಯವರು ಉಮೇದವಾರರಾಗಿ ಹೋಗಿದ್ದರು. ಆದರೆ ಶಿವಪ್ಪನಿಗೆ ಮತ ಸಿಗಲೆಂದು ಹೇಳಿ ತಮ್ಮ ಉಮೇದ್ವಾರಿಯನ್ನು ಹಿಂತೆಗೆದುಕೊಂಡದಾಗಿ ಪ್ರಕಟಣೆ ಹೊರಡಿಸಿ ಎಲ್ಲರೂ ಶಿವಪ್ಪನಿಗೇ ಮತ ಕೊಡಬೇಕಾಗಿ ವಿಧಿಸಿದರು. ಇವರ ಪ್ರೋತ್ಸಾಹದಿಂದಲೋ ಏನೋ ಶಿವಪ್ಪನಿಗೆ ಇಂತಿಷ್ಟು ಮತ ಸಿಗುವದೆಂದು ಹಾಕಿದ ಅಂದಾಜು ಇಟ್ಟ ೬೦ ಮತ ಸಿಗಬೇಕಾದರೆ ಸಾಕು ಬೇಕಾಯಿತು. ಈವಾಗ ಆರಿಸಿ ಬಂದವರು, ಮತ ಸಿಗುತ್ತಿದ್ದರೆ ರಾ॥ ಗಂಗೊಳ್ಳಿಯವರು ತಮ್ಮ ಉಮೇದ್ವಾರಿಯನ್ನು ಹಿಂತೆಗೆದುಕೊಳ್ಳುತ್ತಿರಲಿಲ್ಲವಾಗಿ ರಾ॥ ಗಂಗೊಳ್ಳಿಯವರ ಸೂರ್ವ ಆನಿಕ ಮನೋವೃತ್ತಿ ಬಲ್ಲದವರು ಎಣಿಸುತ್ತಾರೆ. ಜಿಲ್ಹಾ ಬೋರ್ಡಿನ ಅಧ್ಯಕ್ಷರಾಗಿಯೂ, ಕಾಯಿದೆ ಕೌನ್ಸಿಲಿನ ಸಭಾಸದರಾಗಿಯೂ ಇರುವ ರಾ॥ ಗಂಗೊಳ್ಳಿಯವರು ಸ್ಕೂಲ ಬೋರ್ಡಿನ ಸಭಾಸದರಾಗಿ ಸರಕಾರದಿಂದ ನೇಮಿಸಲ್ಪಟ್ಟಿದ ಬಳಿಕ, ಮ್ಯುನಿಸಿಪಾಲಿಟಿಯಲ್ಲಿ ಆರಿಸಿ ಬಾರದಿದ್ದರೆ ಎಂದೂ ಹಿಂತೆಗೆದುಕೊಳ್ಳುತ್ತಿರಲಿಲ್ಲ; ಆದರಿಂದ ಅವರು ಹಿಂತೆಗೆದುಕೊಂಡರು. ಆದರೆ ರಾ॥ ಗಂಗೊಳ್ಳಿಯವರು ಮ್ಯುನಿಸಿಪಾಲಿಟಿಯ ಇಲೆಕ್ಷನಿನಲ್ಲಿ ಬಿದ್ದ ನೋಟಿ ಇಲ್ಲಿ ಸೋಲು ಸಿಗಲಿಲ್ಲವೆಂದೇ ಜನರು ವ್ಯಕ್ತಪಡಿಸುತ್ತಾರೆ. ರಾ॥ ಅನಂತ ಕಾಮತರು ತಮ್ಮ ಉಮೇದ್ವಾರಿಯನ್ನು ಹಿಂತೆಗೆದುಕೊಂಡು ಶಿವಪ್ಪನಿಗೆ ಆರಿಸಿ ಕಳುಹಲು [illegible]ಲವಾಗಿದ್ದರೆ ಒಂದು ಪ್ರಕಾರದ ದೊಡ್ಡತನವಿತ್ತು.

ದನಗಳಿಗೆ ದೊಡ್ಡಿಗೆ ಒಯ್ಯುವ ಪೋಲೀಸರ ಕೆಲಸ ನಡೆದಿದೆ. ಆಚೆ ವಾರ ಒಂದು ಚಮತ್ಕಾರವಾಯಿತು. ಪೋಲೀಸರು ೨ ಎಮ್ಮೆ ಹಿಡಿದು ದೊಡ್ಡಿಗಟ್ಟಿದರು. ಕೂಡಲೆ ಮಾಲೀಕರು ಮುಂದಾಗಿ ದೊಡ್ಡಿ ಫೀ ಕೊಟ್ಟು ದನ ಬಿಡಬೇಕೆಂದರು. ದೊಡ್ಡಿಯವರು ಒಪ್ಪಲಿಲ್ಲ. ಈ ದನ ಅಪರಾಧಿಯಲ್ಲವಾಗಿ ರಾತ್ರ ಪ್ರತಿಪಾದನೆ, ದೊಡ್ಡಿಗೆ ತಂದೊಡನೆ ದೊಡ್ಡಿ ಫೀ ಕೊಟ್ಟು ದನ ಒಪ್ಪರೆ ಚರಾಯಿ ಬಿಡೋಣ ತು ಎಲ್ಲಿ ವೆ? ದೂರಿಡುವರಿಲ್ಲದ್ದರಿಂದಲೋ ಏನೋ, ದನ ಬಿಡಬಾರದಾಗಿ ದೊಡ್ಡಿಯವರು ಮ್ಯುನಿಸಿಪಾಲಿಟಿ ಆಫೀಸಿನ ತನಕ ಹೋಗಿ ಪ್ರತಿಪಾದಿಸಿದರು. ಅಧ್ಯಕ್ಷರು ದನಗಳನ್ನು ಬಿಟ್ಟುಕೊಡಬೇಕಾಗಿ ಹುಕುಮು ಹೊರಡಿಸಿದ ಬಳಿಕ ದೊಡ್ಡಿಯವನಿಗೆ ನಿರುಪಾಯವಾಯಿತು. ದನಗಳಿಗೆ ಸರೆಹಿಡಿಯುವ ಪೋಲೀಸರಿಗಿಂತ ದನಗಳಿಗೆ ಮೇವು ಹಾಕಿ ಜೋಪಾನ ಮಾಡುವ ದೊಡ್ಡಿಯವನ ಉಪದ್ರವ ಮೀರಿದಷ್ಟಿತು. ಮ್ಯುನಿಸಿಪಾಲಿಟಿಯವರು ಚರಾಯಿ ಬಿಲ್ ತಿದ್ದುವ ದೊಡ್ಡಿಯ ಇಜಾರವನ್ನೇ ತೆಗೆದು ಮ್ಯುನಿಸಿಪಾಲಿಟಿಯು ಸ್ವಂತವಾಗಿ ಯಾರೊಬ್ಬರಿಗೆ ದೊಡ್ಡಿಯ ಕೆಲಸ ಒಪ್ಪಿಸಿದರೆ ಜನರಿಗೆ ಕೆಲ ಮಟ್ಟಿಗೆ ಕಷ್ಟ ಪರಿಹಾರವಾಗುವದು. ಮ್ಯುನಿಸಿಪಾಲಿಟಿಯವರು ಈಗ ಇನ್ಸ್‌ಪೆಕ್ಟರ ಇವರನ್ನೊಬ್ಬರು ಹೆಚ್ಚಿಸಿದ್ದಾರೆ. ಆ ಆಸಾಮಿಗೆ ರೊಬ್ಬರಿಗೆ ಈ ಕೆಲಸ ವಹಿಸಬಹುದಾಗಿ ನಾಗರಿಕರೊಬ್ಬರು ಸೂಚಿಸುತ್ತಾರೆ.

ಜಿಲ್ಲಾಧಿಕಾರಿ ಮುಕ್ಕಾಮು ಇಲ್ಲಿದೆ. ಬಂದರದೊಳಗಿನ ಕೆಲವು ಸ್ಥಳಗಳನ್ನು ಗ್ರಾಮಸ್ಥರು ತೀರ್ವೆ, ಮೋಜಣಿ ಫೀ ವೊದಲಾದವುಗಳನ್ನೆಲ್ಲ ವಸೂಲ ಮಾಡಿ ಅನುಕೂಲವಿದ್ದವರಿಗೆ ಒಪ್ಪಿಸಿದ್ದರು. ಅವರ ಸ್ಥಳಗಳ ಅಗ್ನಿದಾರರು ಸ್ಥಳವನ್ನು ತಮಗೆ ಕೊಡಬೇಕೆಂದೂ, ತಮಗೆ ಕೊಡದೆ ಗ್ರಾಮಸ್ಥರು ಬೇರೆಯವರಿಗೆ ಕೊಟ್ಟು ತಮಗೆ ಅನ್ಯಾಯ ಮಾಡಿರುವರಾಗಿಯೂ ಮಾಡಿದ ಅರ್ಜಿಗಳಂತೆ ಜಿಲ್ಲಾಧಿಕಾರಿಗಳು ಸ್ವತಃ ಸ್ಥಳ ನೋಡಿ ಜಾಗಗಳನ್ನೆಲ್ಲ ಸವಾಲಿಗಿಡಬೇಕೆಂದು ವಿಧಿಸಿದ್ದಾರೆ. ಗ್ರಾಮಸ್ಥರ ನಂಟಿಗೆಯ ಮೇಲೆ ತೀರ್ವೆ, ಮೋಜಣಿ ಫೀ ವೊದಲಾದ ಫೀ ಕೊಟ್ಟ ಜನರಿಗೆ ನಷ್ಟ.

ಬಂದರದಿಂದ ಕೆಳಗಿನ ವಾಳ್ಯಕ್ಕೆ ಹೋಗುವ ಮಾರ್ಗದ ದಕ್ಕೆಗಳನ್ನು ಕಟ್ಟುವ ಕೆಲಸ ನವಂಬರ ತಿಂಗಳಾದರೂ ಹಾಗೇ ಬಿದ್ದಿದೆ. ಅದನ್ನು ಕಟ್ಟಿಸುವ ಆಲೋಚನೆ ಮ್ಯುನಿಸಿಪಾಲಿಟಿಯವರಿಗಿಲ್ಲವೇ? ಹೀಗೆ ಆಲಸ್ಯ ಯಾಕೆ?

ಇಲ್ಲಿಯ ಸಬ್‌ಜಜ್ಜರಾದ ರಾ॥ ಭಾಂಬುರೇಯವರಿಗೆ ಕಾರೆಗಾಂವಿಗೆ ವರ್ಗವಾಗಿ ಅವರ ಬದಲಿಗೆ ರಾ॥ ಪಾಟೀಲ ಎಂಬವರಿಗೆ ನೇಮಿಸಲಾಗಿದೆ.

ಕೆಕ್ಕಾರ— ಶ್ರೀ ಸಿದ್ಧಿವಿನಾಯಕ ವಿದ್ಯಾಲಯದವರು ವರ್ಷಂಪ್ರತಿ ಮಾಡುತ್ತಿರುವ ದೀಪಾರಾಧನೆಯು ಕಳೆದ ಸೋಮವಾರ ಮಾಡಲ್ಪಟ್ಟಿತು. ರಾ॥ ಸರ್ವೇಶ್ವರ ಭಟ್ಟರ ಕೀರ್ತನೆಯೂ ನಡೆಯಿತು. ಸದ್ರಿಯವರು ಒಂದು ಮಾಸಿಕಪತ್ರಿಕೆಯನ್ನು ಹೊರಡಿಸುವವರಿದ್ದಾರೆ. ಅದಕ್ಕೆ ಇಲ್ಲಿಯ ಬಹಳ ಮಂದಿ ಸಹಾಯದ ಅಭಿವಚನ ಕೊಟ್ಟಿದ್ದಾರೆ.

ಇತ್ತ ಕಡೆಯ ಹಳ್ಳಿಯವರು ಕತಗೋಡೆಯಲ್ಲಿ ಒಂದು ಅಂಚೆಕಟ್ಟೆ ಸ್ಥಾಪಿಸಿಕೊಳ್ಳುವ ಹಿಗ್ಗ ಕೆಲ ಕಾಲದಿಂದ ಯತ್ನ ಮಾಡುತ್ತಿದ್ದರು. ದಕ್ಷಿಣ ಭಾಗದ ಎಸೆಂಬ್ಲಿ ಮೆಂಬರರಾದ ಶ್ರೀ॥ ಹೊಸಮನಿಯವರ ಪ್ರಯತ್ನದಿಂದ ಮೇಲಿನ ಯತ್ನ ಕೈಗೂಡಿದೆ. ಸರಕಾರದವರು ಪ್ರಯೋಗಾರ್ಥ ತುರ್ತಕ್ಕೆ ೬ ತಿಂಗಳ ಮಟ್ಟಿಗೆ ಒಂದು ಅಂಚೆಕಟ್ಟೆಯನ್ನು ತೆರೆಯುವ ವ್ಯವಸ್ಥೆ ಮಾಡಿದ್ದಾರೆ.

ಕಳೆದ ತಾ. ೨೧ನೇಗೆ ಸಂಜೆಯ ಮುಂದೆ ಶ್ರೀ ಸಿದ್ಧಿವಿನಾಯಕ ವಿದ್ಯಾಲಯದ ರಾತ್ರಿ ವರ್ಗಕ್ಕೆ ಬರಲು ಹೊರಟಿದ್ದ ಒಬ್ಬ ವಿದ್ಯಾರ್ಥಿಗೆ ದಾರಿಯಲ್ಲಿ ಮೂವರು ಭೆಟ್ಟಿಯಾಗಿ ಅವನ ಬೆಳ್ಳಿಯ ಕೈಬಳೆಗಳನ್ನು ತೆಗೆಯಲು ಪ್ರಯತ್ನ ಮಾಡಿದರು. ಕೈಗೆ ಪೆಟ್ಟಾಯಿತು. ವಿದ್ಯಾರ್ಥಿಯು ಒದರಿದನು. ಜನರು ಕೂಡಹತ್ತಿದ್ದನ್ನು ನೋಡಿ ಕಳ್ಳರು ಪಲಾಯನ ಮಾಡಿದರು. ಕಳ್ಳರು ಯಾರೆಂಬ ಪತ್ತೆ ಸಿಗಲಿಲ್ಲ.

ಅಂಕೋಲಾ— ಇಲ್ಲಿಯ ಶ್ರೀ ಮಹಾಮಾಯಾ ದೇವಸ್ಥಾನದವರೊಬ್ಬರು ತಿಳಿಸುವದೇನಂದರೆ:— ಶ್ರೀ ದೇವಸ್ಥಾನದ ಮೊಕ್ತೇಸರರು ಭಜಕರ ಅನುಕೂಲತೆಯ ಕಡೆಗೆ ಲಕ್ಷ ಮಾಡುತ್ತಾರೆ. ಗೋವೆಯ ಶ್ರೀಮಂತ ವಿಠ್ಠು ಟ.ಬ. ಧೇಂಪೆಯವರು ದೇವಕಾರ್ಯದ ಸಮಯ ಜನರಿಗೆ ಊಟಕ್ಕೆ ಕೂಡುಕೊಳ್ಳಲು ಅನುಕೂಲವಾಗಬೇಕೆಂದು ಚಂದ್ರಶಾಲೆ ಕಟ್ಟಿಸಿಕೊಟ್ಟರು. ಅಕ್ಕ ಮಟ್ಟಿಗೆ ೪೦೦-೫೦೦ ಎಲೆ ಹಿಡಿಯಲಿಕ್ಕೆ ಏನೂ ತೊಂದರೆಯಿಲ್ಲ. ಅಂಥ ಚಂದ್ರಶಾಲೆಯ ಮೇಲೆ ಮೊಕ್ತೇಸರರು ಬೇರೆ ಇಮಾರತುಗಳ ಪೋಟಿನ ಸಾಮಾನುಗಳನ್ನು ರಾಶಿ ಮಾಡಿಟ್ಟಿದ್ದಾರೆ. ಅಲ್ಲಿ ರಾಶಿ ಹಾಕುವಾಗ ಅದೇ ವರ್ಷ ತೆಗೆಯಬೇಕೆಂದು ಹಾಕಿದ್ದು, ಈಗ ೪-೫ ವರ್ಷಗಳಾದರೂ ಆ ಪೋಟಿನ ತುಂಡುಗಳು ಅಲ್ಲಿಯೇ ರಾಶಿಯಾಗಿ ಬಿದ್ದಿವೆ. ಇನ್ನು ಕಟ್ಟಿಗೆ ಬೆಲೆ ಬರುವಂಥಾದ್ದಲ್ಲ. ಉರುವಲ ಕಟ್ಟಿಗೆ ಪ್ರತಿಯದು. ಗೆದ್ದಲು ಹತ್ತಿ ಇಮಾರತು ಸಹ ಹಾಳಾಗುವ ಸಂಭವವಿದೆ. ಆದಾಗ್ಯೂ ಮೊಕ್ತೇಸರರು ಆ ಕಡೆ ಲಕ್ಷ ಕೊಡುವದಿಲ್ಲ. ದೇವಕಾರ್ಯದ ಸಮಯ ಅಡಚಣೆಯೂ

ದಾಗ ಮಾಳಿಗೆ ರಾತ್ರಿ ತೆಗೆದು ಚಂದ್ರಕಾಂತಿ ಖಾಲಿ ಮಾಡಬೇಕೆಂದು ಹೇಳುತ್ತಾರೆ. ಪ್ರಸ: ಹೀಗೆ ಹೇಳುವದು ಮಹಾನವಮಿ ಪರ್ವದ ದೇವಕಾರ್ಯದ ಸಮಯ. ಮಳೆ ಬಿದ್ದಾಗ ಮನೆ ಕಟ್ಟುವ ಆಲೋಚನೆ ಮಾಡುವ ಮಾನವ ಪ್ರವೃತ್ತಿಯ ದೃಷ್ಟಾಂತದಂತೆ ದೇವಸ್ಥಾನದ ಮೊಕ್ತೇಸರರು ಪ್ರತಿ ದೇವಕಾರ್ಯದ ಸಮಯ ಕಾಟ ಮಾಡುತ್ತಾರೆ. ಈ ಬಾರಿ ಮಳೆ ಬಿದ್ದದರಿಂದ ಸಾಲಿಯ ಮುಂದೆ ಹೆಂಗಸರೂ, ಮಕ್ಕಳೂ ಶ್ರೀ ದೇವರ ಪ್ರಸಾದ ಪಡೆಯದೆ ಹಿಂತಿರುಗಬೇಕಾಯಿತು. ಮೊಕ್ತೇಸರರು ಈಗಲಾದರೂ ಚಂದ್ರಶಾಲೆಯನ್ನು ಖಾಲಿ ಮಾಡಿಸಬಹುದು. ಈ ದೇವಸ್ಥಾನದ ಶ್ರೀ ಲವಳನಾಥ ಪರಿವಾರ ದೇವರಿಗೆ ನೈವೇದ್ಯದ ಸಲುವಾಗಿ ಬೆಳಗಿ ಅಕ್ಕಿ ಕೊಡುವ ಸಂಪ್ರದಾಯ ಇತ್ತು. ೨-೩ ವರ್ಷಗಳಿಂದ ಕುಚ್ಚಿಗೆ ಅಕ್ಕಿ ಸಿಗುತ್ತದೆ. ಶ್ರೀ ಲವಳನಾಥ ದೇವರು ಕುಚ್ಚಿಗೆ ಅಕ್ಕಿ ಉಣ್ಣಲಾರಂಭಿಸಿದನಾಗಿ ಜನರು ಅಪಹಾಸ್ಯ ಮಾಡುತ್ತಾರೆ. ಇತ್ಯಾದಿ.

ಇಲ್ಲಿಯ ರೇಂಜರಾದ ಮಿ॥ ಕಾರಿಯಪ್ಪನವರಿಗೆ ಹುಬ್ಬಳ್ಳಿಗೆ ವರ್ಗವಾಯಿತು. ಜಂಗಲ ಅಧಿಕಾರಿಗಳಿದ್ದರೂ ತಮ್ಮ ಅಧಿಕಾರದೊಳಗೆ ಆದಷ್ಟರ ಮಟ್ಟಿಗೆ ಜನರಿಗೆ ಬಾಧಿಸದಂತೆ ಜಂಗಲಿನ ರಕ್ಷಣೆ ಮಾಡುತ್ತಿದ್ದರು. ಇದರಿಂದ ಅವರು ಬಹಳ ಲೋಕಾದರಕ್ಕೆ ಪಾತ್ರರಾಗಿದ್ದರು. ಮಿ॥ ಕಾರಿಯಪ್ಪನವರಿಗೆ ಕೆಲ ಊರ ಪ್ರಮುಖರು ಉಪಹಾರ ಕೊಟ್ಟು ಬೀಳ್ಕೊಟ್ಟರು. ಇವರ ಬದಲಿಗೆ ಮಿ॥ ರಾಮಾರಾವ ಎಂಬುವರು ಬರುವರು.

ಅವರ್ಸಾ— ಇಲ್ಲಿಯ ಮುಂಚಿನ ಪಟೇಲರಿಗೆ ಸಸ್ಪೆಂಡ ಮಾಡಿಸಿಟ್ಟಿರುವದರಿಂದ ಈಗ ಪಟೇಲಿಯು ಬಾಜೂ ಊರ ಪಟೇಲರಿಂದ ಇತ್ತೀಚೆಗೆ ವರ್ಗವಾಗಿ ಬಂದಿರುವ ಶಾನಭೋಗರ ಕಡೆಗನೇ ಇಟ್ಟಿರುತ್ತಾರೆ. ಪೋಲೀಸ ಪಟೇಲರ ಅಧಿಕಾರ ಈ ಹದ್ದಿ ಪಟೇಲರಿಗಿರುವದಿಲ್ಲ. ಆದಾಗ್ಯೂ ಪಟೇಲಿಕಿಯ ಸಿಕ್ಕಿದ್ದರಿಂದ ಅವರು ವಿಚಿತ್ರ ಲೀಲೆಗಳನ್ನು ಮಾಡುತ್ತಿದ್ದಾರೆ. ಒಂದು ದಿನ ಅವರು ಸ್ಕೂಲ ಹತ್ತಿರ ಹೋಗುತ್ತಿರುವಾಗ ದಾರಿಯಲ್ಲಿ ಹುಲ್ಲು ಹೊರೆ ಹೊರುತ್ತಿದ್ದ ಒಬ್ಬ ಹೆಂಗಸು ದಾರಿ ಬಿಡಲಿಲ್ಲವಂತೆ! ಅವಳ ಮೇಲೆ ಈ ಹದ್ದಿ ಪಟೇಲರು ಖಟ್ಲೆ ಮಾಡಲುದ್ಯುಕ್ತರಾದರು! ಇನ್ನೊಂದು ದಿನ ಒಬ್ಬ ಶಾಲಾ ಮಾಸ್ತರರಿಗೆ ಕರೆಕಳಿಸಿ, ಅವರ ವಿರುದ್ಧ [illegible] ಫಿರ್ಯಾದು ಬಂದಿರುತ್ತದೆಂದು ಹೇಳಿ, ಖಟ್ಲೆ ವಿಚಾರದ ನಾಟಕ ಮಾಡಿ ತೋರಿಸಿದರು! ಕೆಲವು ದಿನಗಳ ಹಿಂದೆ ಇಲ್ಲಿಯ ಕನ್ನಡ ಶಾಲೆಯ ಹುಡುಗರು ಒಂದು ನಾಟಕ ಮಾಡಿದ್ದರು. ವ್ಯವಸ್ಥಾಪಕರು ಈ ಪಟೇಲರ ಮನೆಯವರಿಗೆ ಬಹುಮಾನದ ಜಾಗೆಯಲ್ಲಿ ಕೂಡ್ರಿಸಲಿಕ್ಕೆ ತಪ್ಪಿದರು! ಅದ್ದರಿಂದ 'ಪರವಾನಿಗಿ ಇಲ್ಲದೆ ನಾಟಕ ಮಾಡಿದ ಬಗ್ಗೆ' ರಿಪೋರ್ಟ ಮಾಡುತ್ತೇನೆಂತಾ ಅವರು ಬೆದರಿಕೆ ಹಾಕಿದರು; ಒಂದು ಹಿತ್ತಲಲ್ಲಿ ನಡುವಿನ ಗಡಿಯ ಬಗ್ಗೆ ವಾದವುಂಟಾಗಿತ್ತು; ಅದರ ನಿಕಾಲ ಮಾಡುವ ಅಧಿಕಾರ ಸರ್ವೇ ಖಾತೆಯ ವರಿಷ್ಟರಿಗಿಲ್ಲ, ತಮಗಿದೆಯೆಂದು ಹೇಳಿ ಈ "ಪಟೇಲ+ಶ್ಯಾನಭೋಗ"ರು ಗಡಿ ಹಾಕಿಕೊಡಲಿಕ್ಕೂ, ಬೇಲಿ ಹಾಕಿಸಿಕೊಡಲಿಕ್ಕೂ ಮುಂದಾದರು! ಹದ್ದಿ ಪಟೇಲಿಕೆಯಿಂದ ಮುನಸಿಫ-ಮೆಜಿಸ್ಟ್ರೇಟರ ಅಧಿಕಾರ ಸಹ ತಮಗೆ ಸಿಕ್ಕಿದೆಯೆಂದು ಅವರು ತಿಳಿಯುತ್ತಾರೋ ಏನೋ! ಒಟ್ಟಿನಲ್ಲಿ ಅವರು ತಾಲೂಕ ಕಚೇರಿಯ ಅಧಿಕಾರಗಳನ್ನು ಸಹ ತಿರಸ್ಕರಿಸುತ್ತಾರಂತೆ! ಮೇಲಧಿಕಾರಿಗಳು ಹದ್ದಿ ಪಟೇಲರ ಲೀಲೆಗಳಿಗೆ ಬೇಗನೇ ಪ್ರತಿಬಂಧ ಮಾಡಿ ಊರವರಿಗೆ ಕಾಯಬೇಕು; ಇತ್ಯಾದಿ "ನ್ಯಾಯಕಾಂಕ್ಷಿ"ಗಳೊಬ್ಬರು ತಿಳಿಸುತ್ತಾರೆ.

ಹಳಿಯಾಳ— ಇದೇ ನವಂಬರ ತಿಂಗಳ ಪ್ರಾರಂಭಕ್ಕೆ ಸೇರಿದ ದನಗಳ ಹಾಗೂ ಬೇಸಾಯ ವಸ್ತುಗಳ ಪ್ರದರ್ಶನದ ಆಯವ್ಯಯ ಪತ್ರಿಕೆಯು ಪ್ರಕಟವಾಗಿದೆ. ಹಳಿಯಾಳ ತಾಲೂಕ ಬೇಸಾಯ ಸುಧಾರಣಾ ಸಂಘದಿಂದ ರೂ. ೧೦೦, ಮುಂ॥ ಕಲೆಕ್ಟರ ಸಾಹೇಬರವರು ಗ್ರಾಮೋದ್ಧಾರ ನಿಧಿಯಿಂದ ಕೊಡಿಸಿದ ರೂ. ೧೦೦, ಗೋರಕ್ಷಣ ಸಂಸ್ಥೆಯವರಿಂದ ರೂ. ೧೦೦, ಹಳಿಯಾಳ ಮ್ಯುನಿಸಿಪಾಲಿಟಿಯಿಂದ ರೂ. ೫೦, ಹಳಿಯಾಳ ತಾಲೂಕಾ ಲೋಕಲ್ ಬೋರ್ಡಿನಿಂದ ರೂ. ೨೫ ಮತ್ತು ಶಿರಕೋಳ ರೂಪಾಯಿ ೨೭-೩-೬; ಹೀಗೆ ಒಟ್ಟು ರೂ. ೪೦೨-೩-೦ ಪ್ರದರ್ಶನ ಕಮಿಟಿಗೆ ಜಮಾ ಬಂದಿತ್ತು. ಅದರೊಳಗಿಂದ ಬಹುಮಾನದ ಬಗ್ಗೆ ರೂ. ೫೩-೧೧-೦, ಬೋರ್ಡು ಪೆಂಡಾಲು ಬಗ್ಗೆ ಮತ್ತು ಕೂಲಿಯ ಬಗ್ಗೆ ರೂ. ೫-೦-೦, ಪ್ರದರ್ಶನ ಮಂಟಪದ ಮತ್ತು ಅಂಗಡಿಗಳ ಜಾಗದ ಬಗ್ಗೆ ರೂಪಾಯಿ ೫೪-೦-೦ ಹಕ್ಕಿನ ಕಟ್ಟು, ಬೆಳ್ಳಿ-ಬಂಗಾರಗಳ ಪದಕಗಳ ಬಗ್ಗೆ ರೂಪಾಯಿ ೧೦೬-೧೩-೦, ಹಾರ-ತುರಾಯಿ, ಅತ್ತರ-ಗುಲಾಬು, ತಾಂಬೂಲಗಳ ಬಗ್ಗೆ ರೂ. ೩೨-೧೧-೦, ಕಾಪಿ ಮತ್ತು ಪಂಕ್ತಿಗಳಲ್ಲಿ ಪಾನ, ಬೀಡಿ ಮುಂತಾದ ಪಕ್ವಾನ್ನ ಕೊಡುವದರ ರೂಪಾಯಿ ೩೫-೩-೦, ದನಗಳ ವ್ಯವಸ್ಥೆ, ಮೇವು ಮುಂತಾದ್ದಕ್ಕೆ ರೂಪಾಯಿ ೫೭-೦-೩ ದೀಪಗಳ ಖರ್ಚು ರೂ. ೨೭-೨-೬ ವಾಲಗದವರಿಗೆ ಕೊಟ್ಟ ರೂಪಾಯಿ ೧೦-೦-೦, ಟಪಾಲ ವೆಚ್ಚ ರೂಪಾಯಿ ೮-೧೦-೯ ಪ್ರದರ್ಶನದ ಭಾವಚಿತ್ರ ತೆಗೆಯಲು ತಗಲಿದ ಖರ್ಚು ರೂಪಾಯಿ ೫-೦-೦; ಹೀಗೆ ಒಟ್ಟು ಖರ್ಚು ರೂಪಾಯಿ ೪೦೦-೩-೬ ಖರ್ಚು ತೆಗೆದು ಉಳಿದ ರೂಪಾಯಿ ೨-೬-೦ ಗೋರಕ್ಷಣ ಸಂಸ್ಥೆಗೆ ಕೊಡಲ್ಪಟ್ಟಿದೆ.

ಕಾರವಾರ ವಿಭಾಗದ ಇಲಾಖಾ ಸಾಹೇಬರಾದ ರಾ॥ ವೆಂಕಟಪ್ಪಯ್ಯನವರು ತಾ. ೧೯ಕ್ಕೆ ಗೋರಕ್ಷಣ ಸಂಸ್ಥೆಯ ಗೋಶಾಲೆಗೆ ಭೆಟ್ಟಿ ಕೊಟ್ಟು, ಸಂಸ್ಥೆಯ ಕಾರ್ಯದ ಬಗ್ಗೆ ಸಮಾಧಾನ ವ್ಯಕ್ತಗೊಳಿಸಿದರು. ಮತ್ತು ಗೋಶಾಲೆಯನ್ನು ಆದರ್ಶಭೂತ ಮಾಡಲಿಕ್ಕೆ ಚಾಲಕರಿಗೆ ಅವಶ್ಯ ಸೂಚನೆ ಕೊಟ್ಟರು.

ಕಾರವಾರ— (ತಾ. ೧೬-೧೧-೩೫) ಇಲ್ಲಿ ಮಿ॥ ಸಾಲ್ಡಾನಾ ಇವರು ಹೊಸ ಮಾಮಲೇದಾರರಾಗಿ ಬಂದಿದ್ದಾರೆ. ಇದೇ ಕಾಲಕ್ಕೆ ಮಿ॥ ಡಿಸೋಝಾ ಎಂಬವರಿಗೆ ಇಲ್ಲಿಯ ಪೋಲೀಸ ಇನ್ಸಪೆಕ್ಟರ ಜಾಗೆಯ ಮೇಲೆ ವರ್ಗವಾಗಿರುತ್ತದೆ. ಇಬ್ಬರೂ ಖಾಸಾ ಭಾವ-ನೆಂಟರಂತೆ! ಪೋಲೀಸರಿಗೂ ಮೆಜಿಸ್ಟ್ರೇಟರಿಗೂ ಫೌಜದಾರಿ ಕೆಲಸಗಳಲ್ಲಿ ಮೇಲಿಂದ ಮೇಲೆ ಸಂಬಂಧ ಬರುತ್ತದೆ. ಇಂಥಲ್ಲಿ ಪರಸ್ಪರ ಆಪ್ತ-ನೆಂಟರು ಅಧಿಕಾರದಲ್ಲಿರುವದು ವಿಹಿತವೋ ಹ್ಯಾಗೆ? ಎಂಬುದನ್ನು ವರಿಷ್ಠಾಧಿಕಾರಿಗಳು ವಿಚಾರ ಮಾಡಬೇಕು, ಎಂದು ಒಬ್ಬ ಸದ್ಗೃಹಸ್ಥರು ತಿಳಿಸುತ್ತಾರೆ.

ಇಲ್ಲಿಯ ಸಿವಿಲ ಸರ್ಜನರಾದ ಡಾ॥ ಮಾರ್ಟಿಂಟರವರು ಶನಿವಾರ ತಾ. ೧೬ನೇಗೆ ಡಾ॥ ಗೋಖಲೆಯವರಿಗೆ ಚಾರ್ಜ ಕೊಟ್ಟು ಇಲ್ಲಿಂದ ಹೊರಟು ಹೋದರು. ಡಾ॥ ಮಾರ್ಟಿಂಟರವರು ಇಲ್ಲಿ ಬಂದು ಬಹಳ ದಿನಗಳಾಗಲಿಲ್ಲ. ಆದಾಗ್ಯೂ, ಡಾ॥ ಮಾರ್ಟಿಂಟರವರ ಹೆಸರು ಕೇಳದವರಿಲ್ಲ. ಸಿವಿಲ ಆಸ್ಪತ್ರಿಯಲ್ಲಿ ಬಂದ ರೋಗಿಗಳೊಡನೆ ಸಮಾಧಾನದಿಂದ ಮಾತನಾಡಿ ಎಲ್ಲರಿಗೆ ಉಪಚಾರ ವಿಧಿಸಿ ಮಧ್ಯಾಹ್ನ ೨॥ ಗಂಟೆಗೆ ಬಂಗಲೆಗೆ ಮರಳುತ್ತಿದ್ದರು. ೩ ಗಂಟೆಯ ತನಕ ಅವರು ಕೆಲಸ ಮಾಡಿದ ಉದಾಹರಣೆಗಳೂ ಇವೆ. ಸಂಜೆ ೫ ಗಂಟೆಗೆ ಅವರು ಪುನಃ ಬಂದು ರೋಗಿಗಳ ಸಮಾಚಾರ ಕೇಳುತ್ತಿದ್ದರು. ಬಡವರು, ಶ್ರೀಮಂತರು ಎಲ್ಲರೂ ಅವರಿಗೆ ಒಂದೇ. ಹೊರಗಿನ ರೋಗಿಗಳಿಗೆ ಭೆಟ್ಟಿ ಕೊಡುವ ಪ್ರಸಂಗದಲ್ಲಿ ಹೆಚ್ಚಿನ ಫೀ ಸಹ ಕೇಳುತ್ತಿದ್ದಿಲ್ಲ. "ನಾನು ಡಾಕ್ಟರನಿದ್ದೇನೆ; ಹಣದಾಸ ಅಲ್ಲ." ಎಂದವರು ಉದ್ಗರಿಸುತ್ತಿದ್ದರು! ರೋಗಿಗಳ ಚಿಂತೆಯೇ ಅವರಿಗೆ ಮುಂಚೆ. ಪ್ರತಿ ವಾರದಲ್ಲಿ ಒಂದಾದರೂ ಶಸ್ತ್ರ ಪ್ರಯೋಗ (*operation*) ಮಾಡುವ ಪ್ರಸಂಗವಿರುತ್ತಿತ್ತು. ಇಂಥ ಜಾಗೆಗೆ ಯೋಗ್ಯರಾದ ಸಿವಿಲ ಸರ್ಜನರು ಇವರು. ಉತ್ತರಾಧಿಕಾರಿಗಳಾದ ಡಾ॥ ಗೋಖಲೆಯವರು ಇವರಂತೆಯೇ ಉಪಚಾರ ನಡಸಿ ಲೋಕಾದರಕ್ಕೆ ಪಾತ್ರರಾಗಬೇಕಾಗಿ ಸೂಚನೆ.

(೭ನೇ ಪಾನಿನಿಂದ ಮುಂದರಿದದ್ದು.)

ಕರಿಗೆ ಕೊಂದು ಇಟಾಲಿಯು ಎರಿಟ್ರ್ಯ ವಸಾಹತಿನ ಒಳ ಸೇರಿದ್ದಾರೆ. ಈ ಸಂಗತಿ ಸರಕಾರಿ ಮುಖಾಂತರವೇ ಸಿದ್ಧವಾಗಿರುವದಾಗಿ ಡೆರೆಡೊವಾದ ಸುದ್ದಿಗಾರರು ಬರೆಯುತ್ತಾರೆ. ದನಕಿಲಿ ಪ್ರದೇಶ ಮರುಭೂಮಿ. ನೀರಿಗೆ ಜಾಯ್ತೆರೆಯಬೇಕು. ಇದಕ್ಕಾಗಿ ಮೋಟರ ಹತ್ತಿ ಬಂದ ಇಟಾಲಿಯ ಸೈನಿಕರಿಗೆ ಹಬಶಿ ಜನರು ಸೆರೆಹಿಡಿದಿದ್ದಾರೆ. ಹಬಸಿ ಜನರು ಮೋಟರಿನಿಂದಲೇ ರಣಾಂಗಣಕ್ಕೆ ಸೈನ್ಯಸಾಹಿತ್ಯ ಆಹಾರ ಪೂರೈಸುತ್ತಾರೆ. ಇದಕ್ಕಾಗಿ ಇಟಾಲಿಯರು ಹಬಸಿ ಮೋಟಾರು ಡ್ರೈವ್ಹರರನ್ನು ಕೊಲ್ಲುತ್ತಿದ್ದಾರೆ. ಹಬಸೀ ದೇಶದೊಳಗೆ ಮೋಟಾರು ನಡಿಸುವವರು ಕಡಿಮೆ. ಟಿಗ್ರೆ ಪ್ರಾಂತದೊಳಗಿಂದ ೧೬ ಸಾವಿರ ಗುಲಾಮರನ್ನು ಸೇನಾಪತಿ ಬೋನೋರವರು ಬಿಡುಗಡೆ ಮಾಡಿದ್ದರೆಂಬ ಸಂಗತಿ ಸುಳ್ಳು. ಇಟಾಲಿಯರ ವಶವಾದ ಪ್ರದೇಶದಲ್ಲಿ ಅಷ್ಟು ಜನಸಂಖ್ಯೆಯೇ ಇಲ್ಲ. ಲೂಟಿಯಲ್ಲಿ ದೊರೆತ ಧಾನ್ಯವನ್ನು ಧರ್ಮ ಮಾಡಿದ ಸಂಗತಿಯೂ ಸುಳ್ಳು. ಧಾನ್ಯ ಸಿಕ್ಕಿದ್ದರೆ ಇಟಾಲಿಯವರು ತಮ್ಮ ಮುಸುವಾದೊಳಗಿನ ಸೈನಿಕರಿಗೆ ಹಂಚಿ ಸಂತೈಸುತ್ತಿದ್ದರು. ಈ ಪ್ರಕಾರ ಸುಳ್ಳು ತಂತಿ ವಾರ್ತೆಗಳ ಮೇಲಿಂದ ರಣರಂಗದ ಗ್ರಹಿಕೆ ಪಡೆಯುವದು ಕಠಿಣ. ಆದಾಗ್ಯೂ ಲೋಕರೀತಿಯಂತೆ ತಿಳಿದ ವಾರ್ತೆಗಳನ್ನೂ, ಅವುಗಳ ಕುರಿತು ಸುದ್ದಿಗಾರರು ಪಡೆಯುವ ಅಭಿಪ್ರಾಯಗಳನ್ನೂ ನಮೂದಿಸಿ ಬಿಟ್ಟಿದ್ದೇನೆ. ಓದುಗರು ಇದನ್ನೇ ಸವಿಯೂಟವೆಂದು ಎಣಿಸಿ ಇಂದಿನ ಮಟ್ಟಿಗೆ ಸಮಾಧಾನಪಡೆಯಬೇಕು. ಶಿಷ್ಟಾಯಿ ಪುರಾಣದೊಳಗಿನ ಸಂಗ್ರಾಮ ಅಧ್ಯಾಯವಿದು!

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋವಿಯವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳೀಯ ಏಜೆಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents.
D. K. Nayak Bros.
D. S. Pai
K. N. Nayak.
Honavar Agent:
R. V. Prabhu Esq.

K. Padmanabha Rao & Sons,
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು !

[೫ನೇ ಪಾನಿನಿಂದ ಮುಂದರಿದದ್ದು]

ಪ್ರಾಂತಿಕ ಸರಕಾರಕ್ಕೆ ಹೆಚ್ಚಿನ ದರದಿಂದ ವಸೂಲದ ಬಡ್ಡಿ ಹಿಂತಿರುಗಿ ಕೊಡುತ್ತಿಗ್ಯಾ ಸರಕಾರವು ತಗಾವಿ ಸಾಲದ ಬಡ್ಡಿಯ ದರವನ್ನು ಇಳಿಸಲಿಲ್ಲವೇಕೆ ಎಂದು ಕೇಳಲು, ಸರಕಾರವು ಆದಂತೆ [illegible] ಶೇಕಡಾ ೩ರಂತೆ [illegible] ಲವ ಬಡ್ಡಿ [illegible] ೨ರಂತೆ [illegible] ಶೇಕಡಾ [illegible] ಖರ್ಚು ಬರುತ್ತದೆ ಒಂದರೆ ಶೇಕಡಾ ೬ ರಂತೆ ಕೊಂಡ ಸಾಲವನ್ನು ಶೇಕಡಾ ೧೦ ರಂತೆ ಕೊಟ್ಟರೂ ಸರಕಾರಕ್ಕೆ ಪ್ರಾಪ್ತಿಸುತ್ತದೆ ಸರಕಾರದ ಬಡ್ಡಿಯ ದರ ಈ ದರದೊಳಗೆ ಇರುತ್ತದೆ" ಎಂದಾಗಿ [illegible] ಪರವಾಗಿ ಉತ್ತರ ಬಿತ್ತರು ಸಾಲ ತಿರುಗಿ ಕೊಡದ ದುರ್ಜನರಿಗೆ ಸಾಲ ತಿರುಗಿ ಕೊಡುವ ಸಜ್ಜನರಿಗೆ [illegible] ಶಾಸನವೇಕೆ ?" ಎಂಬಂತೆ [illegible] ಮುಖಂಡರವರು ಕೇಳಲು, ಈ [illegible] ಅನುಸರಿಸಬೇಕಾಗಿ ಈ ಸಭೆಯಲ್ಲಿ [illegible] ರಂಗಿದೆ" ಎಂಬದಾಗಿ [illegible] ಕೊಪ್ಪರವರು ಉತ್ತರ ಕೊಟ್ಟರು [illegible] ಸಲ ಬಡ್ಡಿಯಿಂದ ಸಾಲ ಕೊಡತಕ್ಕವೆ [illegible] ಸಾಲ ಕೊಡತಕ್ಕವರ [illegible] ಸಾಲವು [illegible] ದಿಂದ ಸಾಲ ಸಿಗುವದಿಲ್ಲವೇಕೆ ಸರಕಾರದ ಆಡಳಿತೆ ಬನ್ನಾಗಿ ಇಲ್ಲವೇ? ಎಂಬದಾಗಿ [illegible] ಮಾನ ಕಾಂಸವ [illegible] ಕೊಪ್ಪರವರು [illegible] ಭದ್ರತೆಯ [illegible] ಸಾಲ ಕೊಡುವದು [illegible] ಸಾಲ ತೆಗೆದು [illegible] ಸಾಲ ಕೊಡುವದು ಬೇರೆ ಪ್ರಶ್ನೆ [illegible] ಗಳೆಯರ ಗ್ರಾಮಗಳಿಗೆ ಹೋಗಿ [illegible] ಬೇಕು [illegible] ಬಡ್ಡಿಯಿಂದ ಸಾಲ ಕೊಡತಕ್ಕ ಸರಕಾರದ ದರಕ್ಕಿಂತ ಕಡಿಮೆ! ಎಂಬ [illegible] ಉತ್ತರ ಕೊಟ್ಟರು ನನಗೆ ಸಂತೋಷವಾಯಿತು ಎಂದು [illegible] ಮಾತು ಆಡಲು, ನನಗೆ [illegible] ದೊಳಗೆ ಬಡ್ಡಿಯ ಮೇಲೆ ಬೇಕಾದ್ದು ಹಣ ಸಿಗುತ್ತದೆ" ಎಂಬದಾಗಿ ಮಿರಾಕರವರು ಉದ್ಗರಿಸಿದರು! ಈ ಪ್ರಶ್ನೋತ್ತರಗಳನ್ನು ಆಳವಾಗಿ ಪರಿಶೀಲಿಸಿದರೆ ಅಧಿಕಾರಿಗಳು [illegible] ನಡಿಸುವ ಪ್ರಯತ್ನಗಳೆಲ್ಲ ಸ್ಪಷ್ಟವಾಗುತ್ತಿವೆ ಸರಕಾರಕ್ಕೆ ಏನೊಂದೂ ಕಷ್ಟವಾಗದೆ ಬೇಸಾಯಗಾರರಿಗೆ ಹಿತವಾಗುತ್ತಿದ್ದರೆ ಅಧಿಕಾರಿಗಳಿಗೆ ಅದು ಇಷ್ಟವೇ ಅದಕ್ಕಾಗಿ ಅಧಿಕಾರಿಗಳು ಸಂತೋಷಪ್ರದರ್ಶನ ಮಾಡಿ ಹರಸಲಿಕ್ಕೂ ಸಿದ್ಧರೇ!

⁂

ಭವಭೂತಿಯು ದಾರಿದ್ರ್ಯವನ್ನು ಒಳ್ಳೆತಾಗಿ ಹಳಿದಿದ್ದಾನೆ ಮಾನವನು ಸಕಲ ಗುಣ ಸಂಪನ್ನನಿದ್ದರೂ ದಾರಿದ್ರ್ಯ ದೋಷವೊಂದಿದ್ದರೆ ಅವನು ಪತಿತನೆಂದೇ ಭವಭೂತಿಯ ಅಂಬೋಣ ಗುಣಸಮುಚ್ಚಯದಲ್ಲಿ ಒಂದು ದೋಷ ಅಡಗಿ ಹೋಗುತ್ತದಾಗಿ ಕಾಳಿದಾಸ ಕವಿಯ ವಚನಕ್ಕೆ ಭವಭೂತಿಯು ದಾರಿದ್ರ್ಯದೋಷದ ಅಪವಾದ ಕೊಟ್ಟಿದ್ದಾನೆ ದಾರಿದ್ರ್ಯದಿಂದ ಕಳ್ಳತನ, ಸುಳ್ಳತನ ಮೊದಲಾದ ಹೀನ ಪ್ರಕಾರಗಳು ಲೋಕದಲ್ಲಿ ಸಂಭವಿಸುವ ಸಂಗತಿ ಎಲ್ಲರೂ ಬಲ್ಲವ ವಿಷಯ ಆದರೆ [illegible] ದಲ್ಲಿ ಸಂಭವಿಸಿದ ಕಥೆ ಕೇಳಿದರೆ ಕರುಳು ಕರಗುತ್ತದೆ ಕಲ್ಯಾಣ ತಾಲೂಕಿನ ಚಿಂಚವಲಿ ಗ್ರಾಮದಲ್ಲಿ ರಾಮಾಗಡಲಿಯಾ ಎಂಬ ಮಗನೂ [illegible] ಎಂಬ ತಂದೆಯೂ ಕೂಡಿ ಇದ್ದರು ಪ್ರಾಯದವ [illegible] ಆದರೆ ಸಂಪಾದನೆಯಿಲ್ಲ ತಂದೆಗೂ ಸಂಪಾದನೆ ಕಡಿಮೆ [illegible] ಹಸಿವ [illegible] ಮಗನು ಅನ್ನ ಬಡಿಸಿಕೊಳ್ಳಬಾರದ [illegible] ಮಗನಿಗೆ ಹೊಟ್ಟೆತುಂಬ ಅನ್ನ ಹಾಕಲು ತಂದೆಗೆ ಗತಿ ಇರಲಿಲ್ಲ ಆದರಿಂದ ಆತನಿಗೆ ಅನ್ನ ಬಡಿಸಲಿಲ್ಲ ಮಗನ [illegible] ಕಸಿದುಕೊಂಡು ತಂದೆಗೆ ಸಿಟ್ಟಿನ ಭರದಲ್ಲಿ ಏಟು ಕೊಟ್ಟನು ಅದು ತಲೆಯ ಮೇಲೆ ಬಿದ್ದು ತತ್ಕ್ಷಣವೇ ತಂದೆಯು [illegible] ಕೊಂಡನು ಮಗನ [illegible] ಯಿತು [illegible] ಭಾಷೆಯವರು [illegible] ಗಳ [illegible] ಹಿಡಿಸುವಾಗ [illegible] ನಂದರೆ ದಾರಿದ್ರ್ಯದಿಂದಲೇ ಈ ಅನರ್ಥವೊದಗಿತು ತಂದೆಯ [illegible] ದ ಡಿಯಲುಗಳಲ್ಲಿ [illegible] ಶಿಕ್ಷೆ ಕೊಡುವ ಪ್ರಕರಣ ಇದಲ್ಲ" ಇಂಥ ಪ್ರಕರಣಗಳನ್ನೇ ಸಂಭವಿಸುತ್ತವೆ ಅಧಿಕಾರಿಗಳು ಬಡತನವನ್ನು ನೀಗಿಸಲು ಇನ್ನೂ ಉಪಾಯ ಕೈಕೊಳ್ಳದಿದ್ದರೆ ಮುಕ್ಕಾ ಅನರ್ಥಗಳುಂಟಾಗುವವು ಮಗನಿಗೆ ಹೊಟ್ಟೆ ತುಂಬ ಅನ್ನ ಕೊಡದ [illegible] ದಾರಿದ್ರ್ಯ ಸ್ಥಿತಿಯ ಫಲ! ತಂದೆಗೆ ಕೊಲ್ಲುವ [illegible] ಪುತ್ರನಾದರೂ ದಾರಿದ್ರ್ಯದ ಫಲವೇ ದೇಶದೊಳಗಿನ ಸ್ಥಿತಿ [illegible] ವಾಗಿದೆ ಅದನ್ನು ಶೀಘ್ರವೇ ಸುಧಾರಿಸದಿದ್ದರೆ ಅನರ್ಥವಿದೆ ಎಂಬದಾಗಿ ಈ ಉದಾಹರಣೆಯ ಮೇಲಿಂದ ಬೋಧಗಲಿತು ಅಧಿಕಾರಿಗಳೂ, ಪ್ರಜಾಪ್ರಮುಖರೂ ದುಡಿಯಬೇಕು. ಹೊಟ್ಟೆ ತುಂಬದಿದ್ದರೆ ಯಾವದೇ ಪ್ರಾಣಿ ಯಾರದೂ ಪರಿವೆ ಹಿಡಿಯುವದಿಲ್ಲ ಮಾನವ ಪ್ರಾಣಿಯಂತು ಕಾಣದ, ಕೇಳದ, ಹೇಳದ ಹೇಳಲಾಗದ ಪಾಪಕರ್ಮಕ್ಕೆ ಕೈಹಾಕುತ್ತಾನೆ. ಆದಕ್ಕಾಗಿಯೇ 'ಹೊಟ್ಟೇ ಸಿನ್ನಿಂದ ಕಟ್ಟ' ಎಂಬ ನಾಣ್ಣುಡಿ ಇದುವದಲ್ಲವೇ ?

⁂

ಹಿಂದುಸ್ಥಾನದೊಳಗಿನ ಟಪಾಲು ಖಾತೆಯ ನಮೂನೆಯೇ ವಿಚಿತ್ರವಾದದ್ದು ಹಿಂದುಸ್ಥಾನದೊಳಗಿನ ಪತ್ರಕರು ಟಪಾಲ ಹಾಸಲನ್ನು ಇಳಿಸಬೇಕಾಗಿ ಖಾತೆಯವರ ಕಡೆ ಅರ್ಜಿ ಮಾಡಿಕೊಂಡರು ಟಪಾಲ ಖಾತೆಯ ಡೈರೆಕ್ಟರರು ಟಪಾಲ ದರಗಳನ್ನು ಇಳಿಸಲೊಪ್ಪಲಿಲ್ಲ ಕಾರ್ಡಿನ ಉದ್ದ [illegible] ಈಗಿನಷ್ಟೇ ಇಟ್ಟು, ವಿಳಾಸದ ಸ್ಥಳವನ್ನು ಕಡಿಮೆ ಮಾಡಿ ಬರೆಯುವ ಸ್ಥಳವನ್ನು ಹೆಚ್ಚಿಸಿದ್ದಾರೆ ಬಾದಶಹರ ಮುದ್ರೆ ಈಗಿನಂತೆಯೇ ಇರುವದು ಇದರಿಂದ ಟಪಾಲು ಖಾತೆಯವರು ಪತ್ರಕರ್ತರ ಸಮಾಧಾನ ಮಾಡಲೆತ್ನಿಸುತ್ತಾರೆ ಹೊಸ ನಮೂನೆಯ ಕಾರ್ಡುಗಳು ಸದ್ಯದಲ್ಲಿಯೇ ಮಾರಾಟಕ್ಕೆ ಸಿಗುವವು ೩ ಬಿಲ್ಲಿ ಕೊಟ್ಟು ಕಾರ್ಡ ಬರೆಯುವದಸಾಧ್ಯವೆಂದು ದೂರಿತ್ತು, ಬರೆಯುಸಿಗುವ ಸ್ಥಳ ಕಡಿಮೆಯೆಂದು ದೂರಿದ್ದಿಲ್ಲ ವಿಳಾಸಕ್ಕೆ ಸ್ಥಳ ಇಡದೆ ಎರಡೂ ಬದಿಗೆ ತುಂಬಿ ಬರೆಯಗೊಟ್ಟರೂ ೩ ಬಿಲ್ಲಿ ಕೊಡುವದು ಜನಸಾಮಾನ್ಯರಿಗೆ ಕಷ್ಟ ಅದನ್ನು ಪರಿಹರಿಸಬೇಕಾಗಿ ಪತ್ರಕರ ಅಭಿಪ್ರಾಯವಿತ್ತು ಸಂಪನ್ನ ಇಂಗ್ಲಂಡ ದೇಶದಲ್ಲಿ ಇರುವ ಟಪಾಲ ದರಕ್ಕಿಂತ ಬಡ ಹಿಂದುಸ್ಥಾನ ದೇಶದೊಳಗಿನ ಟಪಾಲ ದರ ಹೆಚ್ಚು ಇಂಗ್ಲಂಡಿನವರು ೬ ಬಿಲ್ಲಿ ಕೊಟ್ಟರೆ ಅವರ ಪತ್ರ ಹಿಂದುಸ್ಥಾನಕ್ಕೆ ತಲ್ಪುತ್ತದೆ [illegible] ಹಿಂದುಸ್ಥಾನದವರು ಇಂಗ್ಲಂಡ ದೇಶಕ್ಕೆ ಪತ್ರ ಕಳುಹಬೇಕಾದರೆ ೧೦ [illegible] ಬಿಲ್ಲಿ ತೆರಬೇಕು ಇದರ ರಹಸ್ಯವೇನು! ಹೋಗುವ ಹಾದಿ ಬರುವ ಹಾದಿ ಒಂದೇ ಇರುವಾಗ ಎರಡೂ ದೇಶಗಳು ಒಂದೇ ಬಾದಶಹರ ಅಮಲ್ದಾರಿಯಲ್ಲಿರುವಾಗ, ಈ ಭೇದವೇಕೆ? ಬ್ರಿಟಿಶರು ಸ್ವತಂತ್ರರು ಹಿಂದೀಯರು ಪರತಂತ್ರರು ಇದೊಂದು ಭೇದ ಕಾಣುತ್ತದೆ ಇದೊಂದು ಭೇದದಿಂದ ಹಿಂದುಸ್ಥಾನದೊಳಗೆ ಅನೇಕ ಭೇದಗಳನ್ನು ಕಾಣಬಹುದು ಟಪಾಲು ಖಾತೆಯ ಭೇದವೂ ಈ ಭೇದದಿಂದುಂಟಾದ ಭೇದವೇ!

For sale ! For sale !! For sale !!

Udipi Syndicate Bank Preference Shares for sale !

Rate less than the market rate !

Preference shares of the face value of Rs 100/- each fully paid bearing 6% interest free of income-tax are offered for sale with the right to recover interest earned up to date It is claimed that the shares go at a premium of Rs 7 by the Bank authorities

These shares will be sold less than the market rates Intending buyers should apply to the following address

Vithal Subraya Prabhu Shiroorkar,
Post - ANKOLA.

ಜಿಲ್ಲಾ ಸಮಾಚಾರ

(ಹಳೇ ಪುಟದಿಂದ ಮುಂದುವರಿದ್ದು)

ಒಂದು ಗಂಟೆಯಲ್ಲಿ ಶವ ಕಾಣಿಸಿತ್ತು. ಮೇಲಕ್ಕೆ ತಂದು ನೋಡಲಾಗಿ ಪ್ರಾಣಜ್ಯೋತಿಯು ಹಾರಿ ಹೋಗಿತ್ತು. ದ ವ್ಯಾಧಿಯ ಬಾಧೆಯನ್ನು ತಾಳಲಾರದೆ [illegible] ಯಾರೋ ಹತ್ತಿರಿದ್ದವರು ಅವನಿಗೆ ಉಳಿಸಿಕೊಂಡರು. ಅಷ್ಟರಿಂದಲೇ ಬುದ್ಧಿಗಲಿಯದೆ ಮಾರುದಿನ ಪುನಃ ಅವನು ವಿಷಸೇವಿಸಿದನು! ಕೆಡುವ ಕಾಲಕ್ಕೆ ಬುದ್ಧಿ ಬರುವದಿಲ್ಲವೆಂದು ಹೇಳುತ್ತಾರಲ್ಲವೇ?

ದೀವನಗಡ್ಡೆಯಿಂದ ಕತ್ತಿಬಂದಿಗೆ ಹೋಗುತ್ತಿದ್ದ ದೋಣಿಯೊಂದು [illegible] ಸುಮಾರಕ್ಕೆ ನದಿಯ [illegible] ಸಿಕ್ಕಿ ಮುಳುಗಲಾರಂಭಿಸಿತು. ದೋಣಿಯು ಒಡೆದು ಹೋದದ್ದು! ನಾಯಕ ಕಂಡು ಮುರಿದು ಹೋಯಿತು. ನೀರು ಒಳಹೊಕ್ಕಿತು. ಮತ್ತೆ ಅಲ್ಲಿದ್ದ ಜನರು ಸಂಕಟಕ್ಕೆ ಎದುರಾಗಿ ಹಗಲು ರಾತ್ರಿ ದಡ [illegible] ಮಕ್ಕಳು ಕೂಡಿ ೧೫ ಜನರಿದ್ದರು. ಆ ಮೂರು ಸಾವಿರ ಮೈಲು ದೂರದಿಂದ ಅವರಿಗೆ ಉಪವಾಸ ತೆಗೆಯುವ ಪ್ರಸಂಗ ಬಂತು. ೧೦ ದಿನ ಉಪವಾಸ ತೆಗೆದರು. ಹಸಿವೆ ತಾಳಲಾರದೆ ೧ ಕೂಸು ಸತ್ತುಹೋಯಿತು. ಕೆಲವ ಸಣ್ಣ [illegible] ಕೊನೆಗೆ ಬೆಳಂಬುರದ ಮೀನುಗಾರರು ಕೆಲವರು ಮೀನ ಹಿಡಿಯಲಿಕ್ಕೆ ಸಮುದ್ರದಲ್ಲಿ ಹೊರಟವರು ಮುಳುಗುವ ದುಷ್ಟದೋಣಿ ಕಂಡು ಹಗ್ಗ ಕಟ್ಟಿ ಅದನ್ನು ಪ್ರಯತ್ನಪಟ್ಟು ದಡಕ್ಕೆ ತಂದು ಮುಟ್ಟಿಸಿದರು. ಮತ್ತು ಒಳಗಿನ ಜನರನ್ನು ಉಳಿಸಿದರು. ಅವರು ೧೫ ದಿನ ಅಂಕೋಲೆಯಲ್ಲಿದ್ದು ಭಿಕ್ಷೆ ಮಾಡಿ ಊರಿಗೆ ಸಾಗಿಸಿದರು. ಖಾರ್ವಿ ಜನರು ಅಷ್ಟರಲ್ಲಿ ಅವರ ಮೈಕಣ್ಣು ಸರಿಮಾಡಿಕೊಟ್ಟರು. ೩-೪ ದಿನಗಳ ಹಿಂದೆ ಅವರಿಗೆ ಬೀಳ್ಕೊಟ್ಟರು. ಭಗವಂತನ ಕೃಪೆಯಿದ್ದರೆ ಯಾರೂ ಸಾಯುವದಿಲ್ಲ! ಅವರಿಗೆ ಶಕ್ತಿ ಬರುತ್ತಿದೆ ಸಹಾಯವೂ ಸಿಗುತ್ತದೆ!

ಅವ್ವಸರ್ಕಿ—(ತಾ ೮ ೧೧ ೩೫) ಹಾರವಾಡಾ ಗ್ರಾಮದ ದೀಪಾ ಎಂಬುವ ಸಮುದ್ರದಂಡೆಯ ಮೇಲೆ ಗಾಬೀತರ ಮನೆಗಳಿವೆ. ಒಂದೆರಡು ಮನೆಗಳಲ್ಲಿ ಇಲಿಗಳು ಬಿದ್ದದ್ದರಿಂದ ಅವನ್ನು ಬಿಟ್ಟಿದ್ದಾರೆ. ಇನ್ನೂ ಇಲಿಗಳು ಬೀಳುತ್ತಿವೆ. ಪಂಚಾಯತಿಯಿಂದ ಹೇಳಿ ಏನೂ ಮಾಡುವುದಕ್ಕೆ ಅವ್ವಸರ್ಕಿಗೂ ಅಂಕೋಲೆಗೂ ಬರುತ್ತಾರೆ. ಪ್ಲೇಗಿನ ಕ್ಷೇತ್ರದಿಂದ ಬರುವ ಏನನ್ನು ಕೊಳ್ಳುವಾಗ ಜನರು ಜಾಗ್ರತೆಯಿಂದ ಇರಬೇಕಾಗಿ ಸೂಚನೆ.

ಚೆಂಡಿಯೆ—ಇಲ್ಲಿಯ ಕನ್ನಡ ಶಾಲೆಯಲ್ಲಿ ೧೬೦ ಹುಡುಗರು ಕಲಿಯುತ್ತಾರೆ. ಜಿಲ್ಲೆಯ ದೊಡ್ಡ ಶಾಲೆಗಳಲ್ಲೊಂದಿದು. ಇಲ್ಲಿ ಕಲಿಸುತ್ತಿದ್ದ ೩ನೇ ವರ್ಷದ ಟ್ರೇಂಡ ಶಿಕ್ಷಕರಿಗೂ ಒಬ್ಬ ೩ನೇ ವರ್ಷದ ಟ್ರೇಂಡ ಶಿಕ್ಷಕರಿಗೂ ಲೋಕಲ್ ಬೋರ್ಡಿನವರು ವರ್ಗಾಯಿಸಿ ಅವರ ಸ್ಥಳದಲ್ಲಿ ಒಬ್ಬ ಮುಲ್ಕಿ ಪಾಸಾದವರಿಗೂ ಒಬ್ಬ ಮೊದಲನೇ ವರ್ಷದ ಟ್ರೇಂಡರಿಗೂ ನೇಮಿಸಿದ್ದಾರೆ! ೩ನೆ ವರ್ಷದ ಒಬ್ಬಾತನನ್ನು ಇಲ್ಲಿ ಇಡಲಿಲ್ಲ!! ಟ್ರೇಂಡರಿಗೂ ಮುಲ್ಕಿಗಳಿಗೂ ಅಭ್ಯಂತರವಿಲ್ಲೆಂದು ಬೋರ್ಡಿನ ಸಭಾಸದರ ಮತವೋ! ಅಥವಾ ಚೆಂಡಿಯೆ ಶಾಲೆಯಲ್ಲಿ ಟ್ರೇಂಡ ಶಿಕ್ಷಕರ ಅವಶ್ಯಕತೆಯಿಲ್ಲೆಂಬ ಅವರ ಅಭಿಪ್ರಾಯವೋ! ಜನರು ಈ ವರ್ಗಾವರ್ಗಿ ನೋಡಿ ಮುಗ್ಧರಾಗಿದ್ದಾರೆ. ಕೆಲವರು ಈ ಊರಲ್ಲಿ ಸ್ವತಂತ್ರ ಶಾಲೆಯನ್ನು ಸ್ಥಾಪಿಸುವ ವಿಚಾರ ಮಾಡಹತ್ತಿದ್ದಾರೆ. ಮುಂದೇನಾಗುತ್ತದೆಂಬುದು ನೋಡಬೇಕಾಗಿದೆ.

ಹಳಿಯಾಳ—ಈಗ ಪೈರು ಕೊಯ್ಯುವ ಹಂಗಾಮು. ಕೊಯಿಲಿಗಾಗಿ ಬೆಳವಲಕಡೆ ಜನರು ಬಂದಿದ್ದರು. ಆದರೆ ಬೆಳೆಗಳು ಕಡಿಮೆಯಾಗಿ ಬಂದದ್ದರಿಂದ ಅವರಿಗೆ ಕೆಲಸ ಸಿಗಲಿಲ್ಲ.

ಈ ವರ್ಷ ಚಳಿಜ್ವರವು ಉಗ್ರರೂಪ ತಾಳಿದೆ. ಜ್ವರದಿಂದ ಹಾಸಿಗೆ ಹಿಡಿದವರಿಲ್ಲದ ಮನೆಯಿಲ್ಲ.

ಕಾಡಾನೆಗಳ ಕಾಟ ಹೆಚ್ಚಾಗಿದೆ. ಮೊದಲೇ ಬೆಳೆ ಸರಿಯಿಲ್ಲ. ಅದರಲ್ಲೂ ಆನೆಗಳ ಕಾಟದಿಂದ ಪೂರ್ತಿ ನಾಶ! ರೈತರ ಸ್ಥಿತಿ ಪ್ರಾಣಸಂಕಟವೇ ಉಂಟಾಗಿದೆ. ಇವರ ದೂರಿಗೆ ಅಧಿಕಾರಿಗಳು ಎಷ್ಟು ದೂರು ಕೊಟ್ಟರೂ ಏನೋ ಕೇಳುವವರಿಲ್ಲವಂತೆ! ಸರಕಾರದಿಂದ ಸಿಗಬೇಕು. ಅದು ಸಿಗುವವರೆಗೆ ಆನೆಗಳು ಬೆಳೆಯ ಸ್ವಾಹಾ ಮಾಡಿ ಬಿಡುವವು!

ಪೋಲೀಸ ಸ್ಟೇಷನ ಸಮೀಪ ಇದ್ದ ಬಾವಿಯಲ್ಲಿ ಒಂದು ಹೆಣ ಸಿಕ್ಕಿತ್ತು. ಊರಲ್ಲಿ ಬಹಳ ದುರ್ಗಂಧ ಬಂದದ್ದರಿಂದ ಶೋಧಕ್ಕೆ ಆರಂಭವಾಯಿತು. ನೋಡಿದರೆ ಬಾವಿಯಲ್ಲಿ ಒಂದು ಹೆಣ ತೇಲುತ್ತಿದೆ! ೨-೩ ದಿನ ಅದು ಕೊಳೆಯುತ್ತ ಬಿದ್ದಿತ್ತು. ಮೇಲಕ್ಕೆ ತೆಗೆದು ನೋಡಲಾಗಿ ಬತ್ತ ಉಬ್ಬಿ ವಿಕಾರವಾಗಿ ಹೋಗಿತ್ತು. ಯಾವಳೋ ಒಬ್ಬ ಕಾಡಿ ಹೆಂಗಸಿನ ಶವವೆಂದು ಹೇಳುತ್ತಾರೆ.

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯ ಸಹಿತ

IIIನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು IIನೇ ಭಾಗ [illegible] ಪರ್ಯಂತ ಅಧಿಕರಣಗಳು ಈಗಲೇ ತಯಾರಾಗಿವೆ ಪುಟಗಳು ೯೬೦ ಚಂ ರೂ ೧ ೮ ೦

Iನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೨೫೦ ಚಂದಾ ರೂ ೩ ೮ ೦

IIನೇ ಸಂಚಿಕೆ ೧೦ ಉಪನಿಷತ್ ಗ್ರಂಥಗಳು ಪುಟಗಳು ೭೨೮ ಚಂದಾ ರೂ ೪ ೭ ೦ ಟಪಾ ಖರ್ಚು ಪ್ರತ್ಯೇಕ. ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಓನರರಿ ಟ್ರೆಝರರ್,

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ

(ದಕ್ಷಿಣ ಕನ್ನಡ)

Siromani Udipi Narayanacharya,

CHAUKHAMBA BENARES CITY

ಮಹಾಶಿವಯೋಗಿ ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿ ಹೊಂದಿ ತನ್ನ ಸಮಸ್ತ ರೋಗ ಭಯವನ್ನು ಹೋಗಲಾಡಿಸಿ ಕೊಳ್ಳಿರಿ. ೧೦೮ರ ಸರ ೧ಕ್ಕೆ 0 6 0 ಯಿಂದ 10 ರೂ ರವರೆಗೆ ಇದ ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ರ ಸರ ೧ಕ್ಕೆ ರೂ 0 8 0ಯಿಂದ ರೂ 100 ವರೆಗೆ ಗೌರಿಶಂಕರ ೧ಕ್ಕೆ ರೂ 3-8-0 ದಿಂದ ೨೦ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ರ ಸ್ಟಾಂಪು ಕಳಿಸಿದರೆ, 1 ಕಾಪಿ ನಕ್ಷೆ ೧ ವಿಶ್ವೇಶ್ವರನ ಪಟ ನಮ್ಮ ಕೆಟಲಾಗು ಸಹ ಇನಾಮ ಕಳಿಸಲಾಗುವದು

ಪತ್ತೆ – ಶಿರೋಮಣಿ ನಾರಾಯಣಾಚಾರ್ಯ

ಚೌಖಾಂಬಾ, ಕಾಶೀ ಕ್ಷೇತ್ರ

|| ಓಂ ||

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು– ಸ್ವಾಸ್ಥ್ಯನಿಲಯ ಧಾರವಾಡ.

ಡಾ॥ ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಕ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅಮೂಲ್ಯ ಲಾಭ ಹೊಂದಿರುವರು. ಕ್ರಯ ರೂ ೧-೮-೦

ಅಶ್ವಗಂಧ ಟೋನಿಕ್ — ಮಜ್ಜಾ, ಮಾಂಸ ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯ ಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅರುಚಿ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿಯರಿಗೂ ಇದು ದಿವ್ಯೌಷಧ! ರೂ ೧-೪-೦

ಎಗ್ಸ್ ಮಿಕ್ಸ್ಚರ, ಫೀವರ ಡ್ರಾಪ್ಸ್, ಅಮೃತ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ಚಿಕ್ಕಮಕ್ಕಳಿಗೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ಮ ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂರ, ಪ್ಲೇಗ ಸ್ಪೆಸಿಫಿಕ್ ಮ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ್ ಸಹ ಸಿಗುವವು

ಇವಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೀನ ಡಿಸ್ ಪ್ರೋಚರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಲಂತಿ ಮದ್ದು ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು

ರಾ॥ ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ॐ

'दशमूलारिष्ट.'

ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆರ್ಯುವೈದ್ಯರಿಗೂ ಹಾಗೂ ಎ[illegible]ಲೋಪತಿಗಳಿಗೂ [illegible] ಔಷಧವು [illegible] ಅದರ [illegible] ಉಪಯೋಗಿಸುವ ವನಸ್ಪತಿಗಳು ಎಲ್ಲಾ [illegible] ಅನುಭವವಾಗಿರುವದರಿಂದ ಅದರ [illegible] ಸರಿಯಾಗಿ ಕೊಡುವ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು [illegible] ವನಸ್ಪತಿಗಳ ಸ್ವಾದಕ್ಕೆ [illegible] ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು [illegible] ಈ ಗ್ರಾಮ ಕಡೆಗೆ ಎಲ್ಲಾ ತರದ ವನಸ್ಪತಿಗಳು [illegible] ಸಿಗುವದರಿಂದ ಇದರ ಗುಣವು ಬಹು ಹೆಚ್ಚಿನದಾಗಿರುತ್ತದೆ.

ಈ [illegible] ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತರೇ ಇದ್ದರೂ ರೋಗನಾಶಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನು ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ ಕೆಮ್ಮು, ದಮ್ಮು, ಗುಲ್ಮ, ವಾತ, ಕ್ಷಯ, ಸಂಗ್ರಹಣಿ, ಕಾಮಿಲ ಪಾಂಡುರೋಗ, [illegible] ಉಷ್ಣವಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, [illegible] ರೋಗ ಮುಂತಾದವು, ವಾತಕ್ಷೀಣತೆ [illegible] ಇದ್ದರೆ ನಿಶ್ಚಯದಿಂದ ಇರುವವರಿಗೆ [illegible] ನಂತರ [illegible] ವಿಕಾರಗಳಿಗೆ [illegible] ರೋಗಗಳಿಗೆ ಅತ್ಯುತ್ತಮ [illegible].

ವಿಶೇಷವಾಗಿ ಹೆಂಗಸರಿಗೆ ಪ್ರಸೂತಿ ಆದನಂತರ ([illegible]) [illegible] ಯಾವದೇ ತರದ ರೋಗಗಳು [illegible] ಆಗದೆ ಮೊದಲಿನಂತೆ ನವತಾರುಣ್ಯವತಿಯರಾಗುವರು.

[illegible] ಬೇಕಾದವರು ಪತ್ರವ್ಯವಹಾರ ಮಾಡಬೇಕು.

[illegible] ಬಾಟ್ಲಿಗೆ ರೂ [illegible]
ಚಿಕ್ಕ ಬಾಟ್ಲಿಗೆ ರೂ [illegible]
ಬಾಟ್ಲಿ [illegible] ರೂ [illegible]

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಪಾಕ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ನೋಡಬೇಕು.

ನಮ್ಮ ವಿಳಾಸ –

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ – **ಕುಮಟಾ.** (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪೋಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂ.10/-ರ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ — ಸೌಕರ್ಯಗಳಿವೆ ಯಥೋಚಿತವಾದ — ಪುರಸ್ಕಾರಗಳಿವೆ
ತಪ್ಪದೆ ವ್ಯವಹಾರ ಬೆಳೆಸಿರಿ

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, **ಮುಂಬಯಿ.**
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900.

ॐ

FIXED RATE

ದಾಸಪ್ಪಾ ಕೃಷ್ಣಪ್ಪಾ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಷ್ಮೆಯ ಖಣಗಳೂ, ಕೋಟಿಂಗ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರೀ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಪಿತ್ತರ ಮಡಿಗಳೂ ನಾರ ಮಡಿಗಳೂ, ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ ಛತ್ರಿಗಳೂ ಮತ್ತು ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಎಷ್ಟೊಂದೂ ಭಯವಿಲ್ಲದೆ ನ್ಯಾಯ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel "Honesty"] **D. K. DHAKAPPA BROS.,**
Cloth Merchants,
SIRSI. N KANARA

ಹೊಸ ಮಾಲು.

ದರ ಅಗ್ಗ.

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಮಹಿಮೆ ಕಂಡು ಹಿಡಿದು ಬಹಳ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಸೇವೆಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯುಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಸೇರ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಡಬ್ಬಿಯಲ್ಲಿ ಬಂದ ಚಿಟಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಸ್ವಲ್ಪ ಕಳಿಸಲಾಗುವದು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ ಪಿ [illegible] ಡಜನ್ ಗೆ ರೂ [illegible] ವಿ ಪಿ [illegible]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ – ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಮಾರ್ಕೆಟ್‌ನ [illegible]

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ 'ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B 1270.

Monday. 2nd December, 1935

ವರ್ಷ ೧೮

ಸಂಚಿಕೆ ೨೨

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-1-0 ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬೇರೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨ ನೇ ಡಿಶಂಬರ ಸನ್ ೧೯೩೫ನೇ ಇಸವಿ.)—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ಸಹ ವಟಾಯಿಸಬರುತ್ತವೆ.

ಅಂತ್ಯ ವರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ವರಸಾಲ ಶೇಕಡಾ ೩|| ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ವರಸಾಲ ಶೇಕಡಾ ೧|| ರಂತೆ ಚಕ್ರಬಡ್ಡಿ ಕೊಡಲಾಗುವದು. ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲೂ ನಮ್ಮ **ಶಾಖೆಗಳಿವೆ:—**

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಮ್, ಆಲಪ್ಪೆ, ಬೆಂಗಳೂರು, ದಾವಣಗೇರೆ ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ, ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೨,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ್, ಲಿಮಿಟೆಡ್. ಉಡುಪಿ.

ಶಾಖೆಗಳು:— ಉಡುಪಿ, ಬ್ರಹ್ಮಾವರ, ಹೊನ್ನಾವರ, ಕುಂದಾಪುರ ಕುಮಟಾ, ಕಾರವಾರ [illegible], ಅಂಕೋಲಾ, ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ, ಕಣ್ಣಾನೂರ, ಬಪ್ಪನಾಡ, ಹಂಗಾರಕಟ್ಟಾ, ಉಳ್ಳೂರ ಮತ್ತು ಕಾಂಞ್ಞಂಗಾಡು.

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/-, 10/-, 100/- ಕೊಡಲ್ಪಡುವದು. ಅಂದರೆ ನಿಮ್ಮ ಹಣಕ್ಕೆ ಶೇಕಡಾ 6½ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಸಿಗ್ಮ ಡಿಪೋಜಿಟ್ ಮತ್ತು ಕ್ಯುಮ್ಯುಲೇಟಿವ್ ಡಿಪೋಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು.

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ.

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ ಯಂತೆ ಚಿನ್ನಾಭರಣಗಳ ಆಧಿನ ಮೇಲೆ ಶೇಕಡಾ 6½ ಯಂತೆ ಬಡ್ಡಿ ದರದಿಂದ ಸಾಲ ಕೊಡಲಾಗುವದು ಇವುಗಳಲ್ಲದ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು,

ಕುಮಟಾ,
ತಾ ೧೫-೭-೧೯೩೫

G S. Nayak,
ಏಜಂಟ, ಕುಮಟಾ.

ಬನ್ನಿರಿ! ॥ ಶ್ರೀ ಚಂದ್ರಮೌಳೀಶ್ವರ ಪ್ರಸನ್ನ: ॥ ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್, ಕುಮಟಾ. (ಉ ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಪವಿತ್ರ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಹಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ಜಾಹೀರ ನೋಟೀಸು.

(CITATION.)

ಅಸಲು

ಮುಂಬಯಿಯೊಳಗಿನ ನ್ಯಾಯಾಧಿಕಾರದ ಹ್ಯಾಕೋರ್ಟಿನಲ್ಲಿ.

ಮೃತ್ಯುಪತ್ರ ಅಥವಾ ಬಗರ ಮೃತ್ಯುಪತ್ರದ ಅಧಿಕಾರವು.

೫ನೇ ಜೊರ್ಜ, ದೇವರ ಕೃಪೆಯಿಂದ, ಗ್ರೇಟ ಬ್ರಿಟನ್, ಆಯರ್ಲಂಡ, ಮತ್ತು ಸಮುದ್ರಗಳ ಆಚೆ ಕಡೆಯ ಬ್ರಿಟಿಶ ರಾಜ್ಯಗಳ ರಾಜರೂ, ಧರ್ಮಪರಿಪಾಲಕರೂ ಹಿಂದುಸ್ಥಾನದ ಚಕ್ರವರ್ತಿಯರು.

ಬಾಯಿ ಸುಶೀಲಾಬಾಯಿ ಶ್ರೀಧರ ಕರ್ನಾಡ ಊರ್ಫ
ಬಾಯಿ ಸುಶೀಲಾಬಾಯಿ ಶ್ರೀಧರರಾವ ಕರ್ನಾಡ ಮುಂಬಯಿ.
ಹಿಂದು ರಹಿವಾಸಿಯು, ನಿರುದ್ಯೋಗಿಯು ಮುಂಬಯಿ.
ಕೋರ್ಟಿನ ಹೊರಗೆ ನ್ಯಾಯಕೊಡದಲ್ಲಿರತಕ್ಕವಳು—
ಮೃತಳು- ಇವಳ ಆಸ್ತಿ ಮತ್ತು ಋಣಕ್ಕೆ
(ರಕಮು)ಗಳ ಮೇಲಿನ ಪತ್ರದ ಬಗ್ಗೆ ಅರ್ಜಿಯು.

ದಿನಕರ ಶ್ರೀಧರ ಕರ್ನಾಡ ಮುಂಬಯಿ ಹಿಂದು ರಹಿವಾಸಿಯು (ಮುಂಬಯಿ) ಕೋರ್ಟಿನ ಹೊರಗ ತಾಡದೇವ ಫ್ರೊಜರ್ಟ್ಸ ಓಣಿಯಲ್ಲಿರತಕ್ಕ ಫ್ರೊಜರ್ಟ್ಸ ಟೆರೇಸಿನಲ್ಲಿ ಎಲ್ಲಕ್ಕೂ ಮೇಲಿನ ಅಂತಸ್ತಿನಲ್ಲಿರುವವನು ಸದರಹು ಮೃತಳ ಅಜ್ಞಾನ ಹೆಣ್ಣು ಮಕ್ಕಳಾದ ಬಾಯಿ ಶಾಂತಾಬಾಯಿ ಮತ್ತು ಬಾಯಿ ಕೃಷ್ಣಾಬಾಯಿ ಇವರ ಉಪಯೋಗ ಮತ್ತು ಹಿತ ಸಲುವಾಗಿ (ಮತ್ತು ಇವರಲ್ಲಿ ಯಾವಳೇ ಒಬ್ಬಳು ಅಜ್ಞಾನಳಿರುವ ವರೆಗ ಮಾತ್ರ — ಅರ್ಜದಾರನು.

ಸದರಹು ಮೃತಳ ಜಿಂದಗಿಯಲ್ಲಿ ಏನಾದರೂ ಹಕ್ಕು-ಸಂಬಂಧ ಇರುವದಾಗಿ ಹೇಳುವ ಎಲ್ಲ ಜನರು, ತಮಗೆ ಯೋಗ್ಯ ಕಂಡಲ್ಲಿ, ಮೇಲ್ಕಾಣಿಸಿದ ಪತ್ರವನ್ನು ಕೊಡುವದಕ್ಕಿಂತ ಮೊದಲು (ಈ ಪ್ರಕರಣದೊಳಗಿನ) ಕಾಗದಪತ್ರಗಳನ್ನು ಬಂದು ನೋಡಬೇಕೆಂದು ಇದರ ಮೂಲಕ ಕರೆಯಲ್ಪಡುತ್ತಾರೆ

ಇದಕ್ಕೆ ಸಾಕ್ಷಿ—
ಸರ್ ಜಾನ ವಿಲಿಯಮ್ ಫಿಶರ ಬ್ಯೂಮಾಂಟ ನೈಟ, ಸದರಹು ಮುಂಬಯಿ ಚೀಫ ಜಸ್ಟೀಸರು.

ಈ ಹೊತ್ತು ತಾರೀಖು ೧೮ನೇ ಅಕ್ಟೋಬರ ಸನ್ ೧೯೩೫ನೇ ಇಸ್ವಿ ಮತ್ತು ನಮ್ಮ ಆಳಿಕೆಯ ಇಪ್ಪತ್ತಾರನೇ ವರ್ಷವು.

ಆರ್. ಬಿ. ಪಟೇಲ,
ಪ್ರೊಥೊನೋಟರಿ ಮತ್ತು ಸೀನಿಯರ ಮಾಸ್ತರ.

ಜಹೀರ ಅಲಿ.
ಈ ಹೊತ್ತು ತಾ. ೧೮ನೇ
ಅಕ್ಟೋಬರ ೧೯೩೫.

ಮೆಸರ್ಸ ಲಾಲಾ ಮತ್ತು ಕಂಪನಿ,
ಅರ್ಜದಾರನ ವಕೀಲರು.

A true translation.

Sd. ***G. R. WAGLE,***
For Chief Translator.

H. M.'S HIGH COURT.
BOMBAY
Date 30-10-35
Translator's Office.

No. 1791.
E. 1779.
F. S. 3.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !
ವೃದ್ಧಿಕಾರಕ (ಶಿಶುಗಳಿಗೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭದೋಷಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ).
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಕ್ವಾಥ (ರಕ್ತವಾತ, ಉಪದಂಶ, ವಿಸ್ಫೋಟಕಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಿಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ ವಿವರಗಳೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !
ಪ್ರಶಂಸಾಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ್ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಸಾಯಂಕಾಲ ನೋಡಿ ತುಂಬ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು [illegible] ಹಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಗೌರವಾನ್ವಿತರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿ ನೆನು ಅವು ಶಾಸ್ತ್ರಸಿದ್ಧವಾಗಿ ಅನುಭವಕ್ಕೆ ಯೋಗ್ಯವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಶೀಲನವು ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಮರ್ಶ ಸಮಿತಿಗೆ ಅವಶ್ಯಕವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಪ್ರವರ್ತಿಸಿ ಯೋಗ್ಯವಾಗಿ ನಡೆಸಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಸಹಕಾರಿಗಳಾಗಿ ಸೇರಿದರೆ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿನವೂ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೫

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಅಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಅಲ್ಲಲ್ಲಿ ಇಷ್ಟಿಷ್ಟು!

ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ಮುಹೂರ್ತ ಸಮೀಪಿಸಿ ಬಂತು. ಇದೇ ಬರುವ ಡಿಸೆಂಬರ ತಾ. ೨೮ನೇ ಶನಿವಾರ ಸುವರ್ಣ ಮಹೋತ್ಸವವನ್ನು ಸಮಸ್ತ ದೇಶಬಾಂಧವರು ಆಚರಿಸತಕ್ಕದ್ದಾಗಿ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ರಾಷ್ಟ್ರೀಯ ಸಭೆಯ ವಿದ್ಯಮಾನ ರಾಜಾಜ್ಞೆ ಹೊರಡಿಸಿದ್ದಾರೆ. ಹಿಂದಭೂಮಿಯ ಸ್ವಾತಂತ್ರ್ಯಕ್ಕಾಗಿ, ಜನಸಾಮಾನ್ಯರ ಸುಖಕ್ಕಾಗಿ, ದುಃಖನಿವಾರಣೆಗಾಗಿ ರಾಷ್ಟ್ರೀಯ ಸಭೆಯು ಕಳೆದ ೫೦ ವರ್ಷಗಳಿಂದ ಹೋರಾಡುತ್ತಿದೆ. ರಾಷ್ಟ್ರೀಯ ಸಭೆಯವರು ಕಾಲೋಚಿತವಾಗಿ ಲೋಕಸ್ವಾತಂತ್ರ್ಯಕ್ಕಾಗಿ, ಲೋಕೋದ್ಧಾರಕ್ಕಾಗಿ, ಲೋಕಹಿತಕ್ಕಾಗಿ ನಡಿಸಿದ ಪ್ರಯತ್ನಗಳೆಲ್ಲ ಲೋಕವೇ ಬಲ್ಲದು. ರಾಜ್ಯಾಧಿಕಾರಿಗಳು ರಾಷ್ಟ್ರೀಯ ಸಭೆಯ ಪ್ರತಿಷ್ಠೆಯನ್ನೂ, ಲೋಕಬೆಂಬಲವನ್ನೂ ಅಪಹರಿಸಿ ರಾಷ್ಟ್ರೀಯ ಸಭೆಯ ಲೋಕಪ್ರಾತಿನಿಧ್ಯಕ್ಕೆ ಕುಂದು ತರುವದಕ್ಕಾಗಿ ನಡಿಸಿದ ಯತ್ನಗಳನ್ನೂ ಸಮಸ್ತರೂ ಬಲ್ಲ ವಿಷಯ. ರಾಷ್ಟ್ರೀಯ ಸಭೆಯಲ್ಲಿ ಧರ್ಮಭೇದವಿಲ್ಲ; ಜಾತಿಭೇದವಿಲ್ಲ; ಪಕ್ಷಭೇದವಿಲ್ಲ; ಸಂಪ್ರದಾಯಭೇದವಿಲ್ಲ; ಉಚ್ಚ-ನೀಚಭೇದವಿಲ್ಲ; ಶ್ರೀಮಂತ-ಬಡವರೆಂಬ ಭೇದವಿಲ್ಲ; ರಾಷ್ಟ್ರೀಯ ಸಭೆಯು ಸಮಸ್ತರಿಗೂ ತನ್ನ ಅಭಿಮಾನಿಗಳೆಂದೆಣಿಸಿ ಅವರೆಲ್ಲರ ಕಲ್ಯಾಣಕ್ಕಾಗಿ ಪ್ರಯತ್ನಪಡುತ್ತಿದೆ. ಪರಮಪೂಜ್ಯ ದಾದಾಭಾಯಿ ನವರೋಜಿ, ಲೋಕಮಾನ್ಯ ಟಿಳಕ, ನಾಮದಾರ ಗೋಖಲೆ, ಸರ್ ಸತ್ಯೇಂದ್ರ ಪ್ರಸನ್ನ ಸಿಂಹ, ಲಾಲಾ ಲಜಪತರಾಯ, ಪಂಡಿತ ಮೋತಿಲಾಲ ನೆಹರು, ವಿಠ್ಠಲಭಾಯಿ ಪಟೇಲ, ಸಯ್ಯದ ಹಸನ ಇಮಾಮ, ದೇಶಬಂಧು ದಾಸ, ಸೇನಗುಪ್ತ, ಮೌಲಾನಾ ಮಹಮುದ ಅಲ್ಲಿ, ಪಂ| ಮದನಮೋಹನ ಮಾಲವೀಯ, ಶ್ರೀ| ವಿಜಯರಾಘವಾಚಾರ್ಯ, ಸೌ| ಸರೋಜಿನಿ ನಾಯಡು ಮೊದಲಾದ ಸ್ತ್ರೀ-ಪುರುಷ ಮಹನೀಯರು ರಾಷ್ಟ್ರೀಯಸಭೆಯ ವಿದ್ಯಮಾನ ನಡಿಸಿದ ಲೋಕಸೇವೆ ಚಿರಸ್ಮರಣೀಯವಿದೆ. ೧೯೨೦ನೇ ಇಸ್ವಿಯಿಂದ ಈ ತನಕ ಸಪರಿವಾರ ಮಹಾತ್ಮರು ರಾಷ್ಟ್ರೀಯ ಸಭೆಯಲ್ಲಿ ಸೇರಿ ನಿಖಿಲ ಭರತ ಭೂಮಂಡಲದಲ್ಲಿ ರಾಷ್ಟ್ರೀಯ ಸಭೆಯ ಸ್ವಾತಂತ್ರ್ಯಸಂದೇಶ ಬೀರಿ ಸ್ವಾತಂತ್ರ್ಯನಿರ್ಧಾರವನ್ನು ಸಾರಿ ಜನಸಾಮಾನ್ಯರಿಗೆ ರಾಷ್ಟ್ರೀಯ ಸಭೆಯು ಕೈಕೊಂಡ ಕಾರ್ಯವನ್ನು ಮನಗಾಣಿಸಿ ಸಂಗ್ರಹಿಸಿದ ದಿಗಂತಕೀರ್ತಿಯನ್ನು ದೇಶಬಾಂಧವರು ಅನುನಿತ್ಯ ಸ್ಮರಿಸುವಂಥಾದ್ದು. ರಾಷ್ಟ್ರೀಯ ಸಭೆಯು ಅದ್ವಿತೀಯವಾದ ಲೋಕಪ್ರಾತಿನಿಧಿಕ ಸಂಸ್ಥೆ; ದೇಶಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿದ ಸಂಸ್ಥೆ; ದೇಶೋದ್ಧಾರವೇ ರಾಷ್ಟ್ರೀಯ ಸಭೆಯ ವ್ರತ. ಇಂಥ ಸಂಸ್ಥೆಯ ಮೇಲೆ ಲೋಕಶಾಹಿಯ ದೀರ್ಘದ್ವೇಷಿಗಳು ಅಧಿಕಾರಬಲದಿಂದ ಉಂಟುಮಾಡಿದ ವಿವಿಧ ಆಪತ್ತುಗಳಿಂದ ರಾಷ್ಟ್ರೀಯಸಭೆಯು ಪಾರಾಗಿ ಕೈಕೊಂಡ ಕಾರ್ಯವನ್ನು ಅಪ್ರತಿಹತವಾಗಿ ಪುರಸ್ಕರಿಸುತ್ತಿದೆ. ರಾಷ್ಟ್ರೀಯ ಸಭೆಯ ಸ್ವಾತಂತ್ರ್ಯಸಂಕಲ್ಪಕ್ಕಾಗಿ, ರಾಷ್ಟ್ರೀಯ ಸಭೆಯ ಮೇಲಿನ ಆಪನ್ನಿವಾರಣೆಗಾಗಿ ಮಹಾತ್ಮಾ ಗಾಂಧಿಯವರೂ ಪಂ| ಜವಾಹಿರಲಾಲ ನೆಹರು, ರಾಜಗೋಪಾಲಾಚಾರ್ಯ, ಬಾಬು ರಾಜೇಂದ್ರ ಪ್ರಸಾದ, ಸುಭಾಷಚಂದ್ರ ಬೋಸ, ಶರತ್‌ಚಂದ್ರಬೋಸ, ಬೆರಿಸ್ಟರ ಶೇರವಾಣಿ, ಡಾ| ಅನ್ಸಾರಿ, ಡೆ| ಅಭ್ಯಂಕರ, ಡಾ| ಕಿಚಲು, ಚೊಯ್ಥರಾಮ ಗಿಡವಾನಿ, ಜಯರಾಮದಾಸ ದೌಲತರಾಮ, ಗಂಗಾಧರರಾವ ದೇಶಪಾಂಡೆ, ಖುರ್ಶೇದ ನರಿಮಾನ, ಭುಲಾಭಾಯಿ ದೇಸಾಯಿ, ಪಂಡಿತ ಗೋವಿಂದ ವಲ್ಲಭಪಂತ, ಶೇಟ ಗೋವಿಂದದಾಸ ಪ್ರಭೃತಿ ಲೋಕನಾಯಕರ ಅತುಲ ಸ್ವಾರ್ಥತ್ಯಾಗ ಮಾಡಿ, ಕಷ್ಟಗಳನ್ನನುಭವಿಸಿ ರಾಷ್ಟ್ರೀಯಸಭೆಯ ಕೀರ್ತಿಯನ್ನು ಕಾಪಾಡಿದ್ದಾರೆ. ಇಂಥ ಲೋಕೋತ್ತರ ಸಂಸ್ಥೆಯ ಸುವರ್ಣ ಮಹೋತ್ಸವ ನಾಳೆ ತಾರೀಕು ೨೮ನೇ ಶನಿವಾರಕ್ಕೆ! ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಪ್ರಕಟಣೆಗಳನ್ನು ಹೊರಡಿಸಿ ಸುವರ್ಣ ಮಹೋತ್ಸವವನ್ನು ಪಟ್ಟಣಗಳೂ, ಹಳ್ಳಿಗಳೂ ಉತ್ಸಾಹದಿಂದ ಪಾಲಿಸಿ ರಾಷ್ಟ್ರೀಯ ಸಭೆಯ ಚೈತನ್ಯವನ್ನು ಲೋಕಕ್ಕೆ ಸಿದ್ಧಪಡಿಸಬೇಕಾಗಿ ಬಿನ್ನೈಸಿಕೊಂಡಿದ್ದಾರೆ. ಹಳ್ಳಿಗರೂ, ಪಟ್ಟಣಿಗರೂ ಮತಮತಾಂತರಗಳನ್ನು ಲೆಕ್ಕಿಸದೆ ಯಾವದೇ ಭೇದ-ಭಾವ ಹಿಡಿಯದೆ ಉತ್ಸವವನ್ನು ರಾ. ಸಭೆಯ ಪರಂಪರೆಗುಚಿತವಾದ ಐಕ್ಯಮತ್ಯದಿಂದಲೂ, ಬಂಧುಭಾವದಿಂದಲೂ ನೆರವೇರಿಸಬೇಕು. ಉತ್ಸವ ಮಂಡಳಗಳನ್ನು ಸ್ಥಾಪಿಸಿ ಕಾರ್ಯಕ್ರಮವನ್ನು ನಿಶ್ಚಯಿಸಿಕೊಂಡು ಜಿಲ್ಲಾ ಕೊಂಗ್ರೆಸ ಕಮಿಟಿಯವರ ಸಲಹೆ ಪಡೆದು ಉತ್ಸವವನ್ನು ನೆರವೇರಿಸಬೇಕು. ಜನರಿಗೆ ರಾಷ್ಟ್ರೀಯ ಸಭೆಯ ಇತಿಹಾಸವನ್ನೂ, ಅದಕ್ಕಾಗಿ ದೇಶಬಾಂಧವರು ನಡಿಸಿದ ಸ್ವಾರ್ಥತ್ಯಾಗವನ್ನೂ, ಪುರಸ್ಕರಿಸುವ-ಪುರಸ್ಕರಿಸಬೇಕಾದ ಕಾರ್ಯಕ್ರಮವನ್ನೂ ತಿಳಿಸಿಹೇಳಿ ಜನಸಾಮಾನ್ಯರಿಗೆ ಸದ್ಬೋಧೆ ಮಾಡಬೇಕು. ದೇವಸ್ಥಾನಗಳಲ್ಲಿ, ಮಸೀದಿಗಳಲ್ಲಿ, ಇಗರ್ಜ

THE AGRICULTURAL & INDUSTRIAL BANK, LIMITED.
(Incorporated in British India)
Head office:- COONDAPOOR. Branch:- KUMTA.
Telegrams:- "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.
ಹೆಡ್ ಆಫೀಸು:— ಕುಂದಾಪುರ. ಬ್ರೆಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು:- 3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ 3½, 4½, 5½, 6, 6½ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು.

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ. 2½ ವ ಜುಲೈಯಿಂದ ಡಿಸೆಂಬರ ಅಖೈರ ವರೆಗೆ 1½ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು— ಶೇಕಡಾ ರೂ. 4ರಂತೆ ಬಡ್ಡಿ. ಬಿನ್‌ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ಜಾತಿಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್ ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ **ಬಿಲುಗಳು, ದರ್ಶನಿಹುಂಡಿಗಳು**, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ ಮಾಹಿತಿ ಪುಸ್ತಕ (Rules of Business)ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S. Nayak.
Managing Directors.

ಗಳಲ್ಲಿ ರಾಷ್ಟ್ರೀಯ ಸಭೆಯು ಕೈಕೊಂಡ ದೇಶೋದ್ಧಾರ ಕಾರ್ಯ ಯಶಸ್ವಿಯಾಗಲೆಂದು ಪ್ರಾರ್ಥನೆ ನಡಿಸಬೇಕು. ಶನಿವಾರ ಮುಂಜಾನಿಗೆ ಊರತುಂಬ ಭಜನೆ ಮಾಡುತ್ತ ಮೆರವಣಿಗೆಯನ್ನು ಹೊರಡಿಸಬೇಕು. ಉತ್ಸವದ ಪ್ರೀತ್ಯರ್ಥ ಅಲ್ಲಲ್ಲಿ ರಾಷ್ಟ್ರಧ್ವಜಗಳನ್ನು ಹಚ್ಚಬೇಕು. ಪ್ರತಿಯೊಂದು ಮನೆಯವರೂ ಈ ಉತ್ಸವದಲ್ಲಿ ಸೇರಬೇಕು. ದೀಪಾರಾಧನೆ ಮಾಡಬೇಕು. ಅವಧಿ ಸ್ವಲ್ಪವೇ ಉಳಿದದ್ದರಿಂದ ಅಲ್ಲಲ್ಲಿಯ ಪ್ರಮುಖರು ಉತ್ಸವ ಮಂಡಳಗಳನ್ನೇರ್ಪಡಿಸಿ ಉತ್ಸವ ಕಾರ್ಯಕ್ರಮಗಳನ್ನು ತೀವ್ರವೇ ನಿಶ್ಚಯಿಸಬೇಕು. ರಾಷ್ಟ್ರೀಯ ಸಭೆಯವರು ರಾಷ್ಟ್ರೀಯ ಸಭೆಯ ಇತಿಹಾಸವೆಂಬ ಗ್ರಂಥವನ್ನು ಆವಿನ ಪ್ರಕಟಿಸುವವರಿದ್ದಾರೆ. ಇದನ್ನು ಬರೆದವರು ಡಾ| ಪಟ್ಟಾಭಿ ಸೀತಾರಾಮಯ್ಯನವರು. ೧೦೦೦ ಪುಟಗಳ ಪ್ರಚಂಡ ಗ್ರಂಥವಿದು. ಡಾ॥ ಸೀತಾರಾಮಯ್ಯನವರು ಮೊಟ್ಟಮೊದಲು ಒಂದು [illegible] ಎಂಬ ಮಾಸಪತ್ರಿಕೆಗೆ ಲೇಖ ಬರೆಯಲು ಪ್ರಾರಂಭಿಸಿದ್ದರು. ಅದು ಬೆಳೆಯುತ್ತ ಬೆಳೆಯುತ್ತ ೧೦೦೦ ಪುಟಗಳಷ್ಟು. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರ ಅಪೇಕ್ಷೆ ಮೇರೆಗೆ ಡಾ| ಪಟ್ಟಾಭಿಸೀತಾರಾಮಯ್ಯನವರು ಗ್ರಂಥದ ಯಾವತ್ತೂ ಹಕ್ಕು ಸಂಬಂಧವನ್ನು ರಾಷ್ಟ್ರೀಯ ಸಭೆಗೆ ಒಂದೇ ಒಂದು ಶರ್ತಿನ ಮೇಲೆ ಅರ್ಪಿಸಿದ್ದಾರೆ. ಭಾಷಾಂತರದ ಹಕ್ಕು, ಪರದೇಶಗಳೊಳಗೆ ಪ್ರಕಟಿಸುವ ಹಕ್ಕು ಮೊದಲಾದ ಹಕ್ಕುಗಳೆಲ್ಲ ರಾಷ್ಟ್ರೀಯ ಸಭೆಯವರದು. ಆದರೆ ಗ್ರಂಥದ ಬೆಲೆಯನ್ನು ರೂ. ೩-೪|| ಒಳಗೆ ಇಡಬೇಕು. ಹಿಂದುಸ್ಥಾನದ ಈಗಿನ ಜನರು ಸಾಮಾನ್ಯವಾಗಿ ಬಡವರು. ಅವರೆಲ್ಲರಿಗೆ ಕೊಂಡುಕೊಳ್ಳಲು ಅನುಕೂಲವಾಗಬೇಕೆಂದೇ ಗ್ರಂಥದ ಬೆಲೆಯನ್ನು ತೀರ ಅಗ್ಗವಾಗಿಡಬೇಕೆಂದು ಡಾ| ಪಟ್ಟಾಭಿಸೀತಾರಾಮಯ್ಯನವರು ಒಂದೇ ಒಂದು ಶರ್ತು ಹಾಕಿದ್ದಾರೆ. ವಿದೇಶಗಳಲ್ಲಿ ಬೇಕಾದ ದರ ಇಟ್ಟು ಮಾರಾಟ ಮಾಡಲಡ್ಡಿಯಿಲ್ಲ. ಮೂಲ ಇಂಗ್ಲಿಷ ಗ್ರಂಥವನ್ನು ಡಾ| ಪಟ್ಟಾಭಿಸೀತಾರಾಮಯ್ಯನವರು ಸ್ವತಃ ಅಚ್ಚುಹಾಕಿಸಬೇಕಾಗಿ ರಾಷ್ಟ್ರೀಯ ಸಭೆಯವರು ವಿಧಿಸಿ ಆ ಕುರಿತು ರೂ. ೬೦೦೦ ಮಂಜೂರಾಗಿವೆ. ಇವುಗಳಲ್ಲಿ ರೂ. ೫೭೫೦ ಗ್ರಂಥಮುದ್ರಣಕ್ಕೆ ವೆಚ್ಚವಾಗಿವೆ. ರೂ. ೨೫೦ ಇತರೇ ಖರ್ಚುಗಾಗಿ ಡಾ| ಸೀತಾರಾಮಯ್ಯನವರು ಇಟ್ಟುಕೊಂಡಿದ್ದಾರೆ. ಈ ಗ್ರಂಥ ಹಿಂದೀ, ಗುಜರಾಥಿ, ಬಂಗಾಲಿ, ಮರಾಠಿ, ಕನ್ನಡ ಮೊದಲಾದ ದೇಶಭಾಷೆಗಳಲ್ಲಿ ಭಾಷಾಂತರವಾಗಿ ಅದೇ ದಿನ ಪ್ರಕಟವಾಗುವದು. ಡಾ| ಸೀತಾರಾಮಯ್ಯನವರು ಮೊದಲಿನ ೨೫೦-೩೦೦ ಪುಟಗಳಲ್ಲಿ ರಾಷ್ಟ್ರೀಯ ಸಭೆಯ ೧೯೨೦ನೇ ಇಸ್ವಿಯ ವರೆಗಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿ ಮುಂದಿನ ೭೦೦-೮೦೦ ಪುಟಗಳಲ್ಲಿ ೧೯೨೦ನೇ ಇಸ್ವಿ ನಂತರದ ಆಂದೋಲನವನ್ನು ವಿವರಿಸಿದ್ದಾರೆ. ಡಾ| ಸೀತಾರಾಮಯ್ಯನವರು ಏನೂ ಪ್ರತಿಫಲ ಪಡೆಯದೆ, ಗ್ರಂಥ ತಯಾರಿಗೆ ತಗಲಿದ ಪೂರ್ವ ಖರ್ಚನ್ನು ಸಹ ಪಡೆಯದೆ, ''ಭಾರತ ಮಾತೆಯ ಚರಣಾರವಿಂದಗಳಲ್ಲಿ ಪಾಮರ ಸೇವಕನು ಅರ್ಪಿಸಿದ ಶ್ರದ್ಧಾಂಜಲಿಯ ಕಾಣಿಕೆ"ಯ ಬಗ್ಗೆ ರಾಷ್ಟ್ರವು ಡಾ| ಸೀತಾರಾಮಯ್ಯನವರಿಗೆ ಚಿರಕಾಲ ಋಣಿಯಾಗಿರುವದು. ಸಮಸ್ತರಿಂದಲೂ ಸೇವೆ ಪಡೆಯಲು ರಾಷ್ಟ್ರೀಯ ಸಭೆಯು ಸರ್ವಥಾ ಅರ್ಹವಿದೆ. ಸಮಸ್ತ ದೇಶಬಾಂಧವರು ರಾಷ್ಟ್ರೀಯ ಸಭೆಯ ಮಹಿಮೆಯನ್ನು ಅರಿತುಕೊಂಡು ಉತ್ಸವ ಮಂಡಳಗಳನ್ನು ಸ್ಥಾಪಿಸಿ ಸುವರ್ಣ ಮಹೋತ್ಸವವನ್ನು ಬಹು ಸಂಭ್ರಮದಿಂದ, ಸಡಗರದಿಂದ, ಅಭಿಮಾನದಿಂದ, ಉತ್ಸಾಹದಿಂದ ನೆರವೇರಿಸಬೇಕಾಗಿ ವಿನಂತಿ. ಆಗ್ರಹದ ವಿನ್ನಪ.

* *

ಈಗಿನ ಶಿಕ್ಷಣದ ಮೇಲೆ ರಾಷ್ಟ್ರೀಯ ಪ್ರಮುಖರನೇಕರು ವಿರೋಧಾಭಿಪ್ರಾಯಪಡುವ ಸಂಗತಿ ಲೋಕವಿದಿತವಿದೆ. ಈಗಿನ ಶಿಕ್ಷಣದ ಸಂಸ್ಕಾರ ಹೊಂದಿದ ವಿದ್ಯಾವಂತ ಮಹಾನುಭಾವರಿಗೆ ಹೊಟ್ಟೆ ತುಂಬಿಕೊಳ್ಳುವದು ಕಠಿಣವಾಗಿದೆ. ಮಹಾತ್ಮರು ಈ ಶಿಕ್ಷಣವನ್ನು ನೋಡಲಾರದೆ ಈಗಿನ ಶಿಕ್ಷಣಾಲಯಗಳನ್ನು ಬಿಟ್ಟುಬಿಡಬೇಕೆಂದು ಅಸಹಯೋಗ ಮನ್ವಂತರದಲ್ಲಿ ಸಾರಿದ ಉದ್ದೇಶದಿಂದ ಉಂಟಾದ ಕೋಲಾಹಲವನ್ನು ಸಕಲರೂ ಬಲ್ಲಂಥ ವಿಷಯ. ವಿದ್ಯಾಭಿಮಾನಿಗಳು [illegible] ಮಾಡಿ ಮಹಾತ್ಮರಿಗೆ [illegible]ದ್ದರು. ಸರ್ ತೇಜಬಹಾದ್ದೂರ ಸಪ್ರುರವರು ವಿಚಾರವಂತರೆಂದು ಸರಕಾರವು ಮನ್ನಿಸುತ್ತದೆ, ವಿದ್ಯಾಭಿಮಾನಿಗಳಂತು ಮನ್ನಿಸಲೇಬೇಕು. ಸಂಯುಕ್ತ ಪ್ರಾಂತಿಕ ಸರಕಾರವು ವಿದ್ಯಾವಂತರ [illegible] ದುಃಸ್ಥಿತಿಯನ್ನು ಪರಿಹರಿಸುವ ಆಲೋಚನೆ ಮಾಡಲು ಸರ್ ತೇಜಬಹಾದ್ದೂರ ಸಪ್ರುರವರ ಅಧ್ಯಕ್ಷತೆಯಲ್ಲಿ ಚೌಕಶಿ ಮಂಡಳವೊಂದನ್ನು ನೇಮಿಸಿ ಅದಕ್ಕಾಗಿ ಸರ್ ತೇಜಬಹಾದ್ದೂರ ಸಪ್ರುರವರು ವಿದೇಶಗಮನ ಮಾಡಿ ಬೇರೆ ಬೇರೆ ದೇಶಗಳೊಳಗಿನ ಉಪಾಯಗಳನ್ನೆಲ್ಲ ಪರಾಂಬರಿಸಿ ವರದಿಯನ್ನು ತಯಾರಿಸಿದ್ದಾರೆ. ಆ ವರದಿ ಸದ್ಯಕ್ಕೇ ಪ್ರಕಟವಾಗಲಿಕ್ಕಿದೆ. [illegible] ಅಂದರೆ ಕಳೆದ ನವಂಬರ ತಾ. ೧೯ನೇಗೆ ಸಂಯುಕ್ತ ಪ್ರಾಂತಿಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪರಿಷತ್ತಿನ ಅಧ್ಯಕ್ಷರಾಗಿ ಅವರು ಮಾಡಿದ ಭಾಷಣ ಮನನೀಯವಿದೆ. ವಿದ್ಯಾಭಿಮಾನಿಗಳೂ, ವಿದ್ಯಾಧಿಕಾರಿಗಳೂ, ಲೋಕನಾಯಕರೂ, ರಾಜ್ಯಾಧಿಕಾರಿಗಳೂ ವಿಚಾರ ಮಾಡಿ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸುವದವಶ್ಯ. ಡಾ| ತೇಜಬಹಾದ್ದೂರ ಸಪ್ರುರವರು ನುಡಿಯುವದೇನಂದರೆ: ''ಪರಿಸ್ಥಿತಿಯು ಕ್ರಮವಾಗಿ ಉಗ್ರರೂಪ ತಾಳುತ್ತಿದೆ. ನಮ್ಮ ಹೀಳಿಗೆಯವರ ಭವಿಷ್ಯವನ್ನೇ ನಾವು ತಿಳಿಯೆವು. ಪರದೇಶಗಳಲ್ಲಿ ಪರಿಸ್ಥಿತಿಯನ್ನು ಬಿಡದೆ ದೇಶಕಾಲೋಚಿತವಾಗಿ ಸುಧಾರಿಸುವ ಯತ್ನ ನಡೆದಿದೆ. ಉದ್ಯೋಗದಲ್ಲಿದ್ದವರು ಉತ್ಕ್ರಾಂತಿ, ಜ್ಞಾನಸಂಗ್ರಹ, ಆತ್ಮೋನ್ನತಿ ಮೊದಲಾದ ತತ್ವಗಳನ್ನು ಹೇಳಿ ಬಡಿವಾರಬಡಿಯುವದು ಸುಲಭ, ನಾನು ಮಾನಸಿಕ ಸಂಸ್ಕಾರವನ್ನು ವಿರೋಧಿಸುವದಿಲ್ಲ. ಬರೇ ಸಂಸ್ಕಾರ ವಿಚಾರದಿಂದಲೇ ಶಿಕ್ಷಣವನ್ನು ವಿಚಾರಿಸುವದಲ್ಲ. ಸಂಪಾದನೆಯ ಶಕ್ತಿಯನ್ನೂ ವಿಚಾರಿಸಬೇಕು. ನಾವು ಸಂಸ್ಕಾರದ ಆಕಾಶದಲ್ಲಿ ಉಳಿಯಲಾರೆವು. ಭೂಮಿಯ ಮೇಲೆಯೇ ನಾವು ನಿಂತುಕೊಂಡಿರಬೇಕಾಗಿದೆ. ನವಯುವಕರು ಪ್ರಶಸ್ತಿಪತ್ರ-ಅನುಗ್ರಹಗಳಿಗಾಗಿ ಪೇಚಾಡುತ್ತ ಮನೆ-ಮನೆಗೆ ತಿರುಗುತ್ತಾರೆ. ಇದರಿಂದ ಅವರ ಶೀಲಭಂಗವಾಗುತ್ತದೆ. ಬಿ.ಎ. ತೇರ್ಗಡೆಯಾದವರು ಪೋಲೀಸ ಶಿಪಾಯಿಗಳಾಗುತ್ತಾರೆ; ಎಮ್.ಎ. ಆದವರು ಬೀದಿ-ಬೀದಿಗಳಲ್ಲಿ ಹಾಲು ಮಾರಿ ನಿರ್ವಾಹಮಾಡುತ್ತಿದ್ದಾರೆ. ಇಂಟರಮೀಡಿಯೆಟ್ ಆದವರು ಸಾಯಕಲ್ ಶಿಪಾಯಿಗಳಾಗಿ ಹೊಟ್ಟೆ ತುಂಬಿಕೊಳ್ಳುತ್ತಿದ್ದಾರೆ. ಎಲ್ ಎಲ್. ಬಿ. ಆದವರು ಅಬಕಾರಿ, ರಿಜಿಸ್ಟ್ರೇಶನ್ ಖಾತೆಗಳಲ್ಲಿ ಅಡಿಯಾಳಾಗಿ (humble jobs) ಉದರಪೋಷಣೆ ಮಾಡಿಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾಲಯ ಸಂಸ್ಕಾರದ ಭಾವನೆಯಿದ್ದ ಯಾವದೇ ರಾಷ್ಟ್ರವು ಇಂಥ ಪರಿಸ್ಥಿತಿ ಸಹಿಸದು. ಜ್ಞಾನ-ಸಂಸ್ಕಾರಗಳಿಗಾಗಿ ಎಲ್ಲಿಯ ತನಕ ವಿದ್ಯಾರ್ಥಿಗಳು ನರಳುತ್ತಿರಬೇಕಾದೀತು! ಇತಿಹಾಸವನ್ನು ಅವರವರ ಜಾತ್ಯಾಭಿಮಾನಪ್ರೇರಕವಾಗುವಂತೆ ಕಲಿಸುವ ಕ್ರಮ ನಡೆದಿದೆ. ಇದರಿಂದ ಹಿಂದದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗದು. ವಿಶ್ವವಿದ್ಯಾಲಯದ ಶಿಕ್ಷಣ ಪಡೆದ ಜನರು ಜಾತಿಯ ದುರಭಿಮಾನ ಹಿಡಿಯುವಲ್ಲಿ ಅಂಥ ವಿಶ್ವವಿದ್ಯಾಲಯಗಳು ಸಮೂಲ ನಾಶವಾಗುವದೇ ಶ್ರೇಯಸ್ಕರವಾದುದು. ಅಂಥ ಸಂಸ್ಕಾರವು ನಮಗೆ ಬೇಡ." ಸರ್ ತೇಜಬಹಾದ್ದೂರ ಸಪ್ರುರವರ ವಿಚಾರಗಳನ್ನು ಪರಾಂಬರಿಸಿದರೆ ಈಗಿನ ಶಿಕ್ಷಣಾಲಯಗಳನ್ನು ಪ್ರೋತ್ಸಾಹಿಸಿ ದೇಶಬಾಂಧವರು ಉಂಟುಮಾಡಿದ ಅನರ್ಥದ ಕಲ್ಪನೆ ಬಂದೀತು. ಶಿಕ್ಷಣಕ್ರಮದ ಅಂಗೋಪಾಂಗಗಳನ್ನು ಧರ್ಮಾತ್ಮರು ದೀರ್ಘವಾಗಿ ವಿಚಾರ ಮಾಡದೆ ಸರಕಾರಿ ಮನ್ನಣೆಗೆ [illegible]ಗಿ ವಿದ್ಯಾರ್ಥಿಗಳ ಕಲ್ಯಾಣ(?)ಕ್ಕಾಗಿ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚ ಮಾಡಿ ಅಲ್ಲಲ್ಲಿ ವಿದ್ಯಾನಿಲಯಗಳನ್ನೇರ್ಪಡಿಸಿದರು. ಚಾಲಕರು ಪುನರಾ

ಇಂಡಿಯನ್ ಮರ್ಕಂಟೈಲ ಇನ್ಸೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು!

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು !

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನ್ಯಾಯಿಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ಲೋಚಿಸಿ ಈ ಸಂಸ್ಥೆಗಳ ಕಾರ್ಯಕ್ರಮವನ್ನು ಆಮೂಲಾಗ್ರ ತಿದ್ದುಪಡಿಸುವ ವಿಚಾರ ಮಾಡುವದು ಲೇಸು.

⁂

ಹಿಂದುಸ್ಥಾನಸೇರಿ ರಾಷ್ಟ್ರಸಂಘದ ತೀರ್ಮಾನದಂತೆ ಇಟಾಲಿಯನ್ನು ಬಹಿಷ್ಕರಿಸಿದೆ. ಆದರೆ ಈ ಕ್ರಮದಿಂದ ಹಿಂದುಸ್ಥಾನಕ್ಕೆ ಒಳ್ಳೇ ನಷ್ಟ. ಇಟಾಲಿಗೆ ಹಿಂದುಸ್ಥಾನ ದೇಶದಿಂದ ಮದ್ದು-ಗುಂಡು ರವಾನೆಯಾಗುವದಿಲ್ಲ. ಆದರೆ ವರ್ಷಾವಧಿ ೫||| ಕೋಟಿ ರೂಪಾಯಿಗಳ ಜಿನಸು ಇಟಾಲಿಗೆ ರಫ್ತಾಗುತ್ತದೆ. ಇಟಾಲಿಯಿಂದ ಇಲ್ಲಿ ಬರುವದು ಬರೇ ೩ ಕೋಟಿ ರೂಪಾಯಿಗಳ ಸಾಮಾನು: ಅಂದರೆ ಇಟಾಲಿಯೊಡನೆ ವ್ಯಾಪಾರ ನಡಿಸಿ ಹಿಂದೀಯರು ೨||| ಕೋಟಿ ರೂಪಾಯಿಗಳನ್ನು ಗಳಿಸುತ್ತಿದ್ದರು. ಆ ಸಂಪಾದನೆ ಈಗ ತಪ್ಪಿದೆ. ರಾಷ್ಟ್ರಸಂಘದಲ್ಲಿ ಸೇರಿದ್ದರಿಂದ ಹಿಂದುಸ್ಥಾನ ದೇಶಕ್ಕೆ ಲಾಭವಾದದ್ದೆಂಬದು ರಾಷ್ಟ್ರಸಂಘದ ಕಚೇರಿಯ ಖರ್ಚಿಗೆ ವರ್ಷಾಸನ ತೆರತಕ್ಕ ವರ್ಗಣಿ. ಬಾಕಿ ವ್ಯವಹಾರವೆಲ್ಲ ಹಿಂದಿನಂತೆ ಮುಂದೆ ನಡೆದಿದೆ. ಹಬಸಿ ದೇಶದೊಡನೆ ಹಿಂದೀಯರ ಸಹಾನುಭೂತಿಯಿದೆ ಎಂಬ ಮಾತೂ ನಿಜವಾದದ್ದು. ಹಿಂದೀಯರಿಗೆ ಅಧಿಕಾರವಿದ್ದಿದ್ದರೆ ನೆರವಾಗಲಿಕ್ಕೆ ಸಿದ್ಧರಿದ್ದಾರೆ. ಅಧಿಕಾರದ ಅಭಾವದಲ್ಲಿ ಹಿಂದಿಯರು ಮಿಕಿ ಮಿಕಿ ನೋಡುತ್ತಿರಬೇಕಾಗಿದೆ. ಬ್ರಿಟಿಶಾದಿ ರಾಷ್ಟ್ರಸಂಘದವರು ಕೈಕೊಂಡ ಬಹಿಷ್ಕಾರದ ತೀರ್ಮಾನದಿಂದ ಬಡ ಹಿಂದೀ ಪ್ರಜೆಗಳಿಗುಂಟಾದ ನಷ್ಟವನ್ನು ತುಂಬಿಕೊಡುವವರ್‍ಯಾರು? ಪ್ರಶ್ನೆ ಕೇಳುವದಕ್ಕಿಂತ ಮುಂಚೆಯೇ ಸಿದ್ಧವಾದ ಉತ್ತರವಿದೆ: ಹಿಂದೀಯರು ತಮಗೊದಗಿದ ನಷ್ಟಗಳನ್ನೆಲ್ಲ ಈ ಹಿಂದೆ ಸಹಿಸಿ ಬಂದಂತೆ ಇನ್ನು ಮುಂದೆಯೂ ಸಹಿಸುತ್ತಿರಬೇಕು.

⁂

ಇಟಾಲಿಯವರ ಬಹಿಷ್ಕಾರಕ್ಕೆದಿರಾಗುವ ಸಮಾನೆ ಮಾತ್ರ ಹಿಂದೀಯರಿಗೆ ಬೋಧಪ್ರದವಿದೆ. ಮುಸೊಲಿನಿಯವರು ದೇಶಬಾಂಧವರಿಗೆ ಮಿತವ್ಯಯದ ವ್ರತವನ್ನು ಕಠೋರವಾಗಿ ಆಚರಿಸಲು ಅಪ್ಪಣೆ ಮಾಡಿದ್ದಾರೆ: ವಿಲಾಸಗಳನ್ನೆಲ್ಲ ತೊರೆಯಬೇಕು. ಚಹಾ ಸೇವಿಸಬಾರದು; ಮೋಟಾರಿನ ಉಪಯೋಗವನ್ನು ಬಹುವಾಗಿ ಕುಗ್ಗಿಸಬೇಕು; ಸ್ವದೇಶದೊಳಗಿನ ರಸಾಯನದ ಪದಾರ್ಥಗಳನ್ನು ರಫ್ತು ಮಾಡಬಾರದು; ಉಣ್ಣೆ, ಹತ್ತಿ, ರೇಶಿಮೆ, ಜವಳಿಗಳನ್ನು ಹೊರಕಳಿಸಬಾರದು; ಇಟಾಲಿಗೆ ಬಹಿಷ್ಕರಿಸುವ ರಾಷ್ಟ್ರಗಳಿಂದ ಮುಂಗಡ ಹಣ ಬಂದನಕ ಸರಕುಗಳನ್ನು ರವಾನಿಸಬಾರದು. ವಿದೇಶಿ ವಸ್ತುಗಳಿಗೆ ಸ್ಪರ್ಶ ಮಾಡಲಿಕ್ಕಿಲ್ಲವಾಗಿ ವರ್ತಕರು ಪ್ರತಿಜ್ಞೆ ಕೊಳ್ಳುತ್ತಿದ್ದಾರೆ. ಈಗಲೇ ೧೫ ಲಕ್ಷಕ್ಕೆ ಮಿಕ್ಕ ವರ್ತಕರು ಪ್ರತಿಜ್ಞೆ ಕೊಂಡದ್ದಾಗಿ ಪ್ರಕಟವಾಗಿದೆ. ಇನ್ನೂ ವರ್ತಕರು ಪ್ರತಿಜ್ಞೆ ಕೊಳ್ಳುತ್ತಿದ್ದಾರೆ. ಯುದ್ಧ ಸಾಹಿತ್ಯಕ್ಕೆ ಅವಶ್ಯವುಳ್ಳ ಜಿನಸುಗಳನ್ನು ಸ್ವದೇಶದಲ್ಲಿಯೇ ತಯಾರಿಸಿ ಸ್ವದೇಶವಿಸ್ತಾರದ ಸಂಗ್ರಾಮವನ್ನು ಅವರು ನಡಿಸುವ ನಿರ್ಧಾರ ಮಾಡಿದ್ದಾರೆ. ಸ್ವದೇಶದೊಳಗಿನ ಪ್ರಜೆಗಳಿಗೆ ಅವಶ್ಯವುಳ್ಳ ಕಾಳು-ಕಡಿಗಳನ್ನು ತಯಾರಿಸುವದಕ್ಕಾಗಿ ಜನಸಾಮಾನ್ಯರಿಗೆ ಪ್ರೋತ್ಸಾಹಿಸಲಾಗಿದೆ. ಸೈನಿಕರಿಗೆ ಕಡಿಮೆ ಮಾಡಿ ಹೊಲಗಳಿಗೆ ಹೋಗಲು ಅಪ್ಪಣೆಯಾಗಿದೆ. ಸ್ತ್ರೀಯರು ವಿಲಾಸಗಳನ್ನೆಲ್ಲ ತೊರೆದು ಮಿತವ್ಯಯದ ಕಾರ್ಯಕ್ರಮಗಳಲ್ಲಿ ಪರಮೋತ್ಸಾಹದಿಂದ ಸೇರಿಕೊಂಡಿದ್ದಾರೆ. ಅಂಗಡಿಕಾರರಿಗೆ, ಬೇರೆ ಬೇರೆ ಜನರಿಗೆ ಸ್ತ್ರೀಯರೇ ಮುಂದಾಗಿ ಉಪದೇಶ ಮಾಡುತ್ತಿದ್ದಾರೆ. ಸ್ತ್ರೀಯರೆಂದರೆ ಗೃಹಿಣಿಯರು; ಗೃಹವ್ಯವಸ್ಥೆಯನ್ನು ಮಾಡುವ ಸಂಪೂರ್ಣ ಕೆಲಸ ಅವರದೇ. ಅವರೇ ಮುಂದಾಗಿ ಬಹಿಷ್ಕಾರವನ್ನು ನಿರರ್ಥಕಗೊಳಿಸಿ ರಾಷ್ಟ್ರಸಂಘಟನೆಯನ್ನು ಕೈಕೊಳ್ಳುವದನ್ನು ನೋಡಿದರೆ ಮನಸ್ಸು ಉಲ್ಹಾಸದಿಂದ ನಲಿದಾಡುತ್ತದೆ. ಮುಸೊಲಿನಿಯವರ ಮಹತ್ವಾಕಾಂಕ್ಷೆಯ ಬಗ್ಗೆ ಮತಭೇದವಾಗಬಹುದು. ಆದರೆ ಅವರು ತೋರಿಸಿದ ರಾಷ್ಟ್ರಸಂಘಟನೆಯ ಕಟ್ಟಾಜ್ಞೆಗಳು ಹಿಂದೀಯರಿಗೆ ಬೋಧಪ್ರದವಿವೆ. ಮುಸೊಲಿನಿಯವರ ಹಬಸಿ ಸ್ವಾತಂತ್ರ್ಯ ಘಾತಕ ಕಾರ್ಯಕ್ರಮವು ಸ್ವಾತಂತ್ರ್ಯ ಸಂಗ್ರಾಹಕ ಹಿಂದೀಯರಿಗೆ ಅನುಕರಣೀಯವಿದೆ. ಹಿಂದೀಯರಾದರೂ ಸ್ವಾತಂತ್ರ್ಯಸಂಗ್ರಾಮದಲ್ಲಿಯೇ ಇದ್ದಾರೆ. ದೇಶದೊಳಗಿನ ದಾರಿದ್ರ್ಯವನ್ನು ಹೋಗಲಾಡಿಸಲು ಟೊಂಕಕಟ್ಟಿದ್ದಾರೆ. ವಿಲಾಸ ಸಾಮುಗ್ರಿಗಳನ್ನು ವಿಚಾರದಿಂದ ಸ್ವಯಂಪ್ರೇರಣೆಯಿಂದ ತೊರೆದು ಸ್ವದೇಶಿ ಸರಕುಗಳನ್ನೇ ವ್ರತವೆಂದು ಪುರಸ್ಕರಿಸಿದನಕ ದೇಶಕ್ಕೆ ಉಳಿಗಾಲವಿಲ್ಲ. ರಾಜಕೀಯ ಸ್ವಾತಂತ್ರ್ಯಕ್ಕಿಂತ ಆರ್ಥಿಕ ಸ್ವಾತಂತ್ರ್ಯವೇ ಮೇಲಾದದ್ದು. ಆರ್ಥಿಕ ಸ್ವಾತಂತ್ರ್ಯವೆಂದರೆ:— ಆಯಕ್ಕೆ ತಕ್ಕ ವ್ಯಯ ಮಾಡಿ ಸ್ವಾವಲಂಬಿಯಾಗಿರುವದು. ಆಯಕ್ಕೆ ಮಿಕ್ಕಿ ವ್ಯಯ ಮಾಡಿ, ಅಪವ್ಯಯಮಾಡಿ, ವಿಲಾಸ ಮಾಡಿ ಹಿಂದದೇಶವು-ದರಿದ್ರವಾಗಿದೆ. ದಾರಿದ್ರ್ಯದೋಷದಿಂದ ನವಿಸ್ಥಾ ಹಿಂದುಸ್ಥಾನಕ್ಕೆ ಯಾವದೇ ಪ್ರಕಾರದಿಂದ ತಲೆಯೆತ್ತಬರುವದಿಲ್ಲ. ನಮ್ಮ ರಾಷ್ಟ್ರೋನ್ನತಿಯ ಮನೋರಥಗಳೆಲ್ಲ 'ಉತ್ಪದ್ಯಂತೇ ವಿಲೀಯಂತೆ ದರಿದ್ರಾಣಾಂ ಮನೋರಥಾಃ' ಎಂಬಂತೆ ಹುಟ್ಟುತ್ತವೆ; ಹಾಗೆಯೇ ಸಾಯುತ್ತವೆ. ಅವು ವೃದ್ಧಿ ಹೊಂದುವದಿಲ್ಲ. ಸತ್ತು ಹುಟ್ಟುತ್ತವೆಂದು ಹೇಳಿದರೂ ಅತಿಶಯೋಕ್ತಿಯಾಗದು. ಚೀನ ಸರಕಾರದ ಗ್ರಾಮ ಆರೋಗ್ಯ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾ|| ಚಿನ್‌ರವರು ಅಖಿಲ ಭೂಮಂಡಲದ ಆರೋಗ್ಯ ಪರಿಷತ್ತಿನೊಂದು ನಾನಕಿಂಗದಲ್ಲಿ ಸೇರಿಸುವ ಆಲೋಚನೆಗಾಗಿ ಜಿನೆವಾಕ್ಕೆ ಹೋಗಿದ್ದರು. ಅವರು ತ್ರಿವೇಂದ್ರಮ್‌ದಲ್ಲಿ ಪತ್ರಿಕಾ ಪ್ರತಿನಿಧಿಗಳ ಬಳಿ ನುಡಿದದ್ದೇನಂದರೆ:- "ಗ್ರಾಮ ಸುಧಾರಣಾವಾದಿಗಳು ಮೊಟ್ಟಮೊದಲು ಜನಸಾಮಾನ್ಯರ ಸಂಪಾದನೆ ಬೆಳೆಸತೊಡಗಬೇಕು. ಸಮಾಜ ಸುಧಾರಣೆಯ ಪ್ರಯತ್ನವು ಆ ಮೇಲೆ ನಡೆಯಬೇಕು. ಬೇಸಾಯಗಾರರ ಜಿನಸುಗಳಿಗೆ ಪೇಟೆಯಲ್ಲಿ ಯೋಗ್ಯ ದರ ಸಿಗುವ ಏರ್ಪಾಟು ಮಾಡುವ ವ್ಯವಸ್ಥೆಯಾಗುವದೇನೋ ವಿಹಿತ. ಆದರೆ ಬೆಳೆಯ ಪ್ರಮಾಣವನ್ನು ಬೆಳೆಸುವದರ ಕಡೆಗೆ ಮೊಟ್ಟಮೊದಲು ಹೆಚ್ಚಿನ ಲಕ್ಷ್ಯ ಪೂರೈಸಬೇಕು. ಚೀನ ದೇಶದ ಸ್ಥಿತಿ ಸಾಮಾನ್ಯವಾಗಿ ಹಿಂದುಸ್ಥಾನದಂತೆಯೇ. ಅಲ್ಲಿ ನಾವು ಬೆಳೆ ಹೆಚ್ಚೆಚ್ಚಾಗಿ ಬೆಳೆಸಲು ಪ್ರಯತ್ನ ಪಡುತ್ತಿದ್ದೇವೆ. ಚೀನ ದೇಶದಲ್ಲಿ ಒಂದು ಹೇಂಟೆಯು ೮೦ರಿಂದ ೧೦೦ ತತ್ತಿಗಳನ್ನಿಡುವಷ್ಟು ಸುಧಾರಣೆಯಾಗಿದೆ. ಹಿಂದುಸ್ಥಾನದೊಳಗೆ ೩೦—೪೦ ತತ್ತಿಗಳಿಟ್ಟರೆ ದೊಡ್ಡದು." ಮಹಾತ್ಮರು ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘ ಸ್ಥಾಪಿಸುವ ಉದ್ದೇಶ ಇದೇ. ಗ್ರಾಮದವರು ಆತ್ಮಪರೀಕ್ಷಣೆ ಮಾಡಬೇಕು. ತಮ್ಮ ಐಶ್ವರ್ಯವೆಷ್ಟು? ಅನುಕೂಲತೆಗಳೆಷ್ಟು? ಅನಾನುಕೂಲತೆಗಳೆಷ್ಟು? ದುಂದುಗಾರಿಕೆ ಎಷ್ಟು? ಖರ್ಚೆಷ್ಟು? ವಿಲಾಸವೆಷ್ಟು? ಅವಶ್ಯಕತೆಯೆಷ್ಟು? ಎಂಬ ಸಂಗತಿಗಳನ್ನೆಲ್ಲ ಜನಸಾಮಾನ್ಯರು ಅರಿತುಕೊಳ್ಳದೆ ಹೊಸ ಯಾಂತ್ರಿಕ ಯುಗದೊಳಗಿನ ಹೊಸ ಹೊಸ ಖರ್ಚಿನ ಸುಧಾರಣೆಗಳಿಗೆ ಮನಸೋತು ಮನಸ್ವೀ ನಡೆಕೊಳ್ಳುತ್ತಿದ್ದಾರೆ. ಮಹಾತ್ಮರ ಸ್ವಯಂಪೂರ್ಣತೆಯ ವಿಲಾಸತ್ಯಾಗದ ವ್ರತ ಪಾಶ್ಚಾತ್ಯ ಸುಧಾರಣಾವಾದಿಗಳಿಗೆ ಮಾನ್ಯವಾಗದು. ಇಟಾಲಿ ಪಾಶ್ಚಾತ್ಯ ರಾಷ್ಟ್ರ; ಸುಧಾರಣೆಯ

(ಮುಂದೆ ೧೦ನೇ ಪಾನು ನೋಡಿರಿ.)

For sale ! For sale !! For sale !!

Udipi Syndicate Bank Preference Shares for sale !

Rate less than the market rate !

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs. 7 by the Bank authorities.

These shares will be sold less than the market rates. Intending buyers should apply to the following address:--

Vithal Subraya Prabhu Shiroorkar,
Post:- ANKOLA.

ಬ್ರಿಟಿಶರ ಯುದ್ಧ ಪೂರ್ವತಯಾರಿ!

[ನಿರೀಕ್ಷಕನು ಬರೆದುದು.]

ಬ್ರಿಟಿಶರು ಯುದ್ಧದಲ್ಲಿ ಖಂಡಿತವಾಗಿ ದುಮುಕುವರೆಂದು ಈಗ ಯಾರೂ ಹೇಳಬಲ್ಲರು? ಕಾರಸ್ಥಾನಗಳು ಸಮರ ಗುಂಡಿಯನ್ನೇ ಸಾಧಿಸಿ ನಡೆಯುತ್ತಿವೆ. ಈಗಿನ ಬಹಿಷ್ಕಾರದಿಂದ ಇಟಾಲಿಯು ಹಣ್ಣಾಗಿ ಬರದಿದ್ದರೆ ಕಲ್ಲಿದ್ದಲಿ, ಪೆಟ್ರೋಲ ಎಣ್ಣೆಗಳನ್ನ ಪೂರೈಸದಂತೆ ಬಹಿಷ್ಕಾರ ಸಾರುವ ವಿಚಾರ ನಡೆದಿದೆ. ರಾಷ್ಟ್ರಸಂಘದ ೧೮ ಪ್ರತಿನಿಧಿಗಳ ಮಂಡಳದವರು ಈ ವಿಷಯವನ್ನು ವಿಚಾರಿಸುತ್ತಿದ್ದಾರೆ. ಪೆಟ್ರೋಲ ಎಣ್ಣೆ ಪೂರೈಸದಂತೆ ಬಹಿಷ್ಕಾರದ ಆಜ್ಞಾಪತ್ರ ಹೊರಡಿಸಿದ್ದಲ್ಲಿ ಅದನ್ನು ಪುರಸ್ಕರಿಸುವ ಸಮಸ್ತ ರಾಷ್ಟ್ರಗಳ ಶತ್ರು-ರಾಷ್ಟ್ರಗಳೆಂದು ಎಣಿಸಲ್ಪಡುವವಾಗಿ ಮುಸೊಲಿನಿಯವರು ಎಚ್ಚರಿಕೆ ಕೊಟ್ಟಿದ್ದಾರೆ. ಬ್ರಿಟಿಶ, ಫ್ರೆಂಚ, ರಶಿಯಾ ಮೊದಲಾದ ಸರಕಾರಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರಗಳನ್ನ ಕಳುಹಿ ಅನರ್ಥಕ್ಕೆ ಕಾರಣವಾಗಬಾರದೆಂದು ಇಟಾಲಿ ಮುಂಜಾಗ್ರತೆ ಕೊಟ್ಟಿದೆ. "ರಾಷ್ಟ್ರಸಂಘದ ಕರ್ತವ್ಯವನ್ನು ನಾವು ಮಾಡಿ ತೀರಬೇಕಾಗಿದೆ. ಪುರಾತನ ಕಾಲದಿಂದ ನಾವು ಗೆಳೆಯರೇನೋ ಅಹುದು" ಎಂದಾಗಿ ಬ್ರಿಟಿಶರು ಮುಸೊಲಿನಿಯವರಿಗೆ ತಿಳಿಸಿದ್ದಾರೆ. ಫ್ರೆಂಚ ಸರಕಾರವೂ ಇದೇ ಭಾಷೆಯನ್ನು ಉಪಯೋಗಿಸಿದೆ. ಮೇಲಾಗಿ ಎಣ್ಣೆ ಬಹಿಷ್ಕಾರದಿಂದ ಬ್ರಿಟಿಶ-ಇಟಾಲಿ ದೇಶಗಳೊಳಗೆ ಯುದ್ಧವೆಸಗಿದ್ದಲ್ಲಿ ಬ್ರಿಟಿಶರ ಪಕ್ಷವನ್ನೇ ಎತ್ತಿಹಿಡಿದು ತಾವು ಕಾದಾಡಬೇಕಾದೀತಾಗಿ ಪಾರೀಸದೊಳಗಿನ ಇಟಾಲಿಯ ರಾಯಭಾರಿಗಳಾದ ಸಿನೊರ ಸರೂಟಿಯವರ ಕಡೆ ಫ್ರೆಂಚ ಪ್ರಧಾನರಾದ ಲಾವಲ್‌ರವರು ಗುರುವಾರ ನಡೆದ ಗುಪ್ತ ಸಂಭಾಷಣದ ಸಮಯ ತಿಳಿಸಿದರಾಗಿ ಪಾರೀಸದೊಳಗಿನ ಪತ್ರಿಕೆಗಳು ಪ್ರಕಟಿಸುತ್ತವೆ. ಫ್ರೆಂಚ ಸರಕಾರಕ್ಕೆ ಬ್ರಿಟಿಶರು ಪ್ರಧಾನರು ಮನವೊಲಿಸಿಕೊಂಡು ಭೂಮಧ್ಯಸಮುದ್ರದೊಳಗಿನ ಫ್ರೆಂಚ ಬಂದರಗಳು ತಮಗನುಕೂಲವಾಗುವಂತೆ ವ್ಯವಸ್ಥೆಯನ್ನಿಡಲು ಏರ್ಪಾಟು ಮಾಡಿಕೊಂಡಿರುವರಾಗಿ ಜರ್ಮನ್ ಪತ್ರಿಕೆಗಳು ಬರೆದು ಬ್ರಿಟಿಶರ ಸ್ವಾರ್ಥಕಾರಸ್ಥಾನವನ್ನು ಹೊಗಳುತ್ತವೆ. ಕಳೆದ ವಾರದಿಂದ ಹೊಸ ಪಾರ್ಲಿಮೆಂಟಿನ ಸಭೆಗೆ ಪ್ರಾರಂಭವಾಗಿದೆ. ಆದರೆ ಹೇಳತಕ್ಕಂಥ ಕೆಲಸವೇನೂ ನಡೆಯಲಿಲ್ಲ. (speaker) ಯನ್ನು ಸಭಾಪತಿಗಳನ್ನು ಆರಿಸುವದು, ಸಭಾಸದರು ರಾಜನಿಷ್ಠೆಯ ಪ್ರತಿಜ್ಞೆ ಕೊಳ್ಳುವದು, ಇವೇ ಮೊದಲಾದ ಹೊಸ ಪಾರ್ಲಿಮೆಂಟಿನ ಮಾಮೂಲ ವಿಧಿ ನಡೆಯಿತು. ಪಾರ್ಲಿಮೆಂಟಿನ ಮುಖ್ಯ ಕಾರ್ಯಕ್ಕೆ ನಾಳೆ ೩ನೇ ತಾರೀಖಿನಿಂದಲೇ ಪ್ರಾರಂಭ. ನಾಳೆ ಮಂಗಳವಾರ ಬಾದಶಹರು ರಾಜಭವನದಿಂದ ಪಾರ್ಲಿಮೆಂಟಿನ ಸಭೆಗೆ ಚಿತ್ತೈಸಿ ಹೊಸ ಪಾರ್ಲಿಮೆಂಟನ್ನು ತೆರೆದು ಪ್ರಚಲಿತ ಪರಿಸ್ಥಿತಿಯ ಕುರಿತು ಹೊಸ ಪ್ರಧಾನ ಮಂಡಳದವರು ತಯಾರಿಸಿದ ಭಾಷಣವನ್ನು ಓದುವರು. ಇದಕ್ಕೆ ಸಿಂಹಾಸನ ಭಾಷಣ (Address from the Throne) ವೆನ್ನುತ್ತಾರೆ. ಈ ಭಾಷಣದ ಮೇಲೆ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುವದು. ಈ ಭಾಷಣದಲ್ಲಿ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಯಾವತ್ತೂ ವಿಷಯಗಳ ಸ್ಥಿತಿ ಕುರಿತು ಹೊಸ ಪ್ರಧಾನ ಮಂಡಳದವರು ಸೂಚಿಸುವ ಕಾರ್ಯಕ್ರಮವಿರುತ್ತದೆ. ಹಬಸಿ ಪ್ರಕರಣದ ಕುರಿತು ಪಾರ್ಲಿಮೆಂಟಿನಲ್ಲಿ ೩ ದಿನಗಳ-೪ ದಿನಗಳ ತನಕ ಸಾಧಕ-ಬಾಧಕ ಚರ್ಚೆಯಾಗುವದಿದೆ. ಬಹಿಷ್ಕಾರ ಯೋಜನೆಯಲ್ಲಿ ಬ್ರಿಟಿಶರು ಏನು ಮಾಡಬೇಕು? ಭೂಮಧ್ಯಸಮುದ್ರದೊಳಗೆ ಬ್ರಿಟಿಶರ ಸ್ವಾಮಿತ್ವವನ್ನು ಕಾಪಾಡಿಕೊಳ್ಳಲು ಬ್ರಿಟಿಶ ಯುದ್ಧ ಇಲಾಖೆಯವರು ಯಾವ ಉಪಾಯಗಳನ್ನು ಕೈಕೊಳ್ಳತಕ್ಕದ್ದು? ಇವೇ ಮೊದಲಾದ ವಿಷಯಗಳು ಸಾಂಗೋಪಾಂಗವಾಗಿ ಚರ್ಚಿಸಲ್ಪಡುವವು. ಕಲ್ಲಿದ್ದಲಿ, ಪೆಟ್ರೋಲ ಎಣ್ಣೆಗಳನ್ನು ಇಟಾಲಿಗೆ ಪೂರೈಸದಂತೆ ಬ್ರಿಟಿಶರು ಬಹಿಷ್ಕಾರ ಹಾಕುವ ಮಾತು ನಿಶ್ಚಯವಾದಂತೆಯೇ. ರಾಷ್ಟ್ರಸಂಘದವರು ಈ ಕುರಿತು ಹಿಂದುಸ್ಥಾನ ಸರಕಾರದ ಅಭಿಪ್ರಾಯವನ್ನು ಕೇಳಿದ್ದರಾಗಿ, ಆ ಕುರಿತು ಹಿಂದುಸ್ಥಾನ ಸರಕಾರವು ಒಪ್ಪಿಗೆ ಕಳುಹಿರುವದಾಗಿಯೂ ಪ್ರಕಟವಾಗಿದೆ. ಹಿಂದುಸ್ಥಾನ ಸರಕಾರವು ಬ್ರಿಟಿಶ ಸರಕಾರದೊಡನೆ ಸಹಕಾರಿಯಾಗಿ — ಅಂಕಿತವಾಗಿ ಎಂದು ಹೇಳಿದರೆ ಯಥಾರ್ಥವಾದೀತು — ನಡೆಯುತ್ತದೆಂಬ ಮಾತು ಸ್ವಯಂಸಿದ್ಧವಿದೆ. ಬ್ರಿಟಿಶ ಪ್ರಧಾನ ಮಂಡಳವು ಈ ಉಪಾಯವನ್ನು ಕೈಕೊಳ್ಳುವ ನಿರ್ಧಾರ ಮಾಡಿದ್ದರಿಂದಲೇ ಈ ಸೂಚನೆಯಾಯಿತಾಗಿ ನಾನು ತಿಳಿಯುತ್ತೇನೆ. ಮುಸೊಲಿನಿಯವರು ಈ ಉಪಕ್ರಮವನ್ನು ಮುಂಚಾಗಿಯೇ ಎಣಿಸಿ ಸೈನ್ಯರಚನೆಯಲ್ಲಿ ತಿದ್ದುಪಡಿ ಮಾಡತೊಡಗಿ[illegible] ಸೈನ್ಯಪಥಕಗಳು ಒಳಗಿಂದೊಳಗೆ ಓಡ್ಯಾಡುತ್ತಿವೆ. ರಸಾಯನ ಸಂಘದ ಸಭೆಯಾಗಿ ಪೆಟ್ರೋಲಿನ ಬದಲಿಗೆ ಉಪಯೋಗಿಸತಕ್ಕ ಜಿನಸು ತಯಾರಿಸುವ ವಿಚಾರ ನಡೆಯಿತು. ಮುಸೊಲಿನಿಯವರೇ ಈ ಸಂಘದ ಅಧ್ಯಕ್ಷರಿದ್ದರು. ಪೆಟ್ರೋಲ ಕಂಪನಿಯ ಬಂಡವಲವನ್ನು [illegible] ಲಕ್ಷ ಪವನುಗಳಿಂದ ಬೆಳಸಿ ಪೆಟ್ರೋಲಿನ ಉತ್ಪನ್ನವನ್ನು ಹೆಚ್ಚಿಸಬೇಕಾಗಿ ಠರಾವಾಗಿದೆ. ಬೇಸಾಯ ಕೆಲಸಕ್ಕಾಗಿ ಸೈನ್ಯಸೇವೆಯಿಂದ ಬಿಡುಗಡೆಯಾದ ೧,ಲಕ್ಷ ಸೈನಿಕರಿಗೆ ಪುನಃ ಸೈನ್ಯ ಇಲಾಖೆಯಲ್ಲಿ ದಾಖಲಾಗಲು ಅಪ್ಪಣೆಯಾಗಿದೆ. ಪೆಟ್ರೋಲ ಬರುವದು ಮುಖ್ಯವಾಗಿ ಎರಡು ದೇಶಗಳಿಂದ. ರಶಿಯಾ ಮತ್ತು ರುಮಾನಿಯಾ. ಇವೆರಡು ದೇಶಗಳು ಎಣ್ಣೆ ಪೂರೈಸದಂತೆ ರಾಷ್ಟ್ರಸಂಘದ ಅಪ್ಪಣೆಯಾದಲ್ಲಿ, ಆ ಅಪ್ಪಣೆಯಂತೆ ಎಲ್ಲ ರಾಷ್ಟ್ರಗಳು ನಡೆಕೊಳ್ಳುವಲ್ಲಿ ತಾವೂ ಸಿದ್ಧರಿದ್ದೇವಾಗಿ ರಾಷ್ಟ್ರಸಂಘಕ್ಕೆ ಅವು ತಿಳಿಸಿವೆ. ಅಮೇರಿಕೆಯವರು ರಾಷ್ಟ್ರಸಂಘದಲ್ಲಿ ಸೇರಿಲ್ಲ. ಅಲ್ಲಿಂದ ಪಂಚಮಾಂಶ ಪೆಟ್ರೋಲು ಇಟಾಲಿಗೆ ರಫ್ತಾಗುತ್ತದೆ. ಅಲ್ಲಿಯ ಕಂಪನಿಯವರು ಅದನ್ನು ನಿಲ್ಲಿಸಲು ಒಪ್ಪುವದಿಲ್ಲ. ಯುದ್ಧ ನಿಂತ ಬಳಿಕ ತಮ್ಮ ಯುದ್ಧೋತ್ತರ ವ್ಯಾಪಾರಕ್ಕೆ ತೊಂದರೆ ಬರಬಹುದಾಗಿ ಭೀತಿಗೊಳ್ಳುತ್ತಾರೆ. ಅಮೇರಿಕೆಯ ಸರಕಾರದವರು ಪ್ರತಿಬಂಧ ಮಾಡುವಲ್ಲಿ ತಮ್ಮದೇನೂ ಆಕ್ಷೇಪವಿಲ್ಲವಾಗಿ ಹೇಳುತ್ತಾರೆ. ಈಗಾಗಲೇ ಅಮೇರಿಕೆಯಿಂದ ಹೆಚ್ಚಾಗಿ ಎಣ್ಣೆ ರವಾನೆಯಾಗುತ್ತಿದೆ. ಆಗಸ್ಟ ತಿಂಗಳಿಗಿಂತ ಸಪ್ಟಂಬರ ತಿಂಗಳಲ್ಲಿ ಹೆಚ್ಚು ಎಣ್ಣೆ ರಫ್ತಾಯಿತಾಗಿ ಖಣಿಗಳ ಇಲಾಖೆಯವರು ಪ್ರಕಟಿಸುತ್ತಾರೆ. ಬ್ರಿಟಿಶರು ರಾಷ್ಟ್ರಸಂಘದ ಪ್ರಮುಖ ಚಾಲಕರಿರುವದರಿಂದ ಭೂಮಧ್ಯ ಸಮುದ್ರದೊಳಗೆ ಬ್ರಿಟಿಶರ ಜೀವತಂತುವೇ ಸಿಲುಕಿಕೊಂಡಿದ್ದರಿಂದ ಬ್ರಿಟಿಶರ ಪ್ರೇರಣೆ ಮೇರೆಗೆ ರಾಷ್ಟ್ರಸಂಘದ ಬಹಿಷ್ಕಾರದ ಕಾರ್ಯಕ್ರಮ ನಡೆಯುತ್ತದಾಗಿ ಅಜ್ಞನು ಸಹ ಹೇಳಬಲ್ಲನು. ಮತ್ತೂ ಭವ್ಯ ಪುರಾವೆಯನ್ನು ನಾನು ಇದೀಗಲೇ ಸಮೂದಿಸಿಬಿಡುತ್ತೇನೆ. ಮುಂಬಯಿಯೊಳಗೆ ನಾಳೆ ಮಂಗಳವಾರ ತಾ ೩ರಿಂದ ಶನಿವಾರ ತಾ ೭ನೇ ವರೆಗೆ ಯುದ್ಧದ ತಾಲೀಮು ನಡೆಯುವದಿದೆ. ಇದು 'ಸದರ್ನ ಕಮಾಂಡ' ಎಂಬ ದಕ್ಷಿಣ ಸೈನ್ಯಪಥಕದ ವಾರ್ಷಿಕ ಪ್ರಯೋಗವೆಂದು ಹೇಳುತ್ತಾರೆ. ಆದರೆ ನಾನೇನು ಹಾಗೆ ತಿಳಿಯುವದಿಲ್ಲ. ಸಮುದ್ರ ದಂಡೆಯ ಮೇಲಿನ ಸೈನ್ಯಸಂರಕ್ಷಣೆಯ ಪರೀಕ್ಷೆ ಮಾಡಲೋಸುಗ ಸಮುದ್ರ ಪಕ್ಕದಿಂದ ಶತ್ರುರೂಪ ಧಾರಣ ಮಾಡಿ 'ರೋಯಲ್ ಇಂಡಿಯನ್ ನೇವಿ' ನೌಕಾದಲದವರು ದಾಳಿ ಮಾಡುವರು, ಮುಂಬಯಿ ಪಾರ್ಶ್ವದಿಂದ ತೋಪುಗಳನ್ನು ಹಾರಿಸಿ ಸಂರಕ್ಷಣೆ ಮಾಡುವರು; ವೈಮಾನಿಕ ದಳದವರು ಶತ್ರುಗಳ ಹಡಗಗಳ ಮೇಲೆ ಆಕಾಶದಿಂದ ಬಾಂಬುಗಳನ್ನೆಸೆಯುವರು, ಮುಂಬಯಿಯಿಂದ ೭ ಮೈಲು ದೂರದಲ್ಲಿರುವ ಜುಹು ಗ್ರಾಮದಲ್ಲಿ ಸಣ್ಣ ಸಣ್ಣ ದೋಣಿಗಳಿಂದ ಶತ್ರುಸೈನಿಕರು ಬಂದಿಳಿಯುವರು. ಜುಹು ದಂಡೆಯ ಮೇಲಿನ ಸೈನಿಕರು ಹೊಸ ನಮೂನೆಯ ವಿದ್ಯುದ್ದೀಪಗಳ ಬೆಳಕಿನಿಂದ ಕತ್ತಲೆಯಲ್ಲಿ ಮುಸುಕು ಹಾಕಿಕೊಂಡು ಗುಪ್ತವಾಗಿ ಬರುವ ಶತ್ರುಸೈನ್ಯದ ಪತ್ತೆ ಮಾಡಿ ತುಬಾಕಿ ಹಾರಿಸುವರು. ಯುದ್ಧವಾಗುವಲ್ಲಿ ಮುಂಬಯಿ ಬಂದರಕ್ಕೆ ಸಂರಕ್ಷಣೆ ಮಾಡುವ ತಯಾರಿಯನ್ನು ಪರೀಕ್ಷಿಸುವದಕ್ಕಾಗಿಯೇ ಈ ಪ್ರಯೋಗಗಳು ನಡೆದಿವೆ! ಬ್ರಿಟಿಶ-ಇಟಾಲಿ ದೇಶಗಳೊಳಗಿನ ಪರಿಸ್ಥಿತಿ ವಿಪರೀತವಾಗಿರದಿದ್ದರೆ, ಯುದ್ಧದ ಪಡಿನೆಳಲು ಬೀಳದಿದ್ದರೆ ಇಂಥ ಪ್ರಯೋಗಗಳು ಅನವಶ್ಯಕ. ಆದರೆ, 'ಕೈಬಳೆಗೆ ಕನ್ನಡಿಯೇಕೆ'? ನಾಳೆ ಪಾರ್ಲಿಮೆಂಟಿನ ಸಭೆಯಲ್ಲಿ ಬಾದಶಹರ ಭಾಷಣವಾಗುತ್ತದೆ. ಬ್ರಿಟಿಶ-ಇಟಾಲಿ ದೇಶಗಳ ಸಂಬಂಧವನ್ನು ಬಾದಶಹರೇ ಪ್ರಧಾನ ಮಂಡಳದ ಸಲಹೆಯ ಮೇರೆಗೆ ಲೋಕಕ್ಕೆ ಜಾಹೀರಪಡಿಸುವವರಿದ್ದಾರೆ. ಪ್ರಸಂಗವು ಇಷ್ಟು ಸಮೀಪವೇ ಬಂದೊದಗಿದಾಗ ತರ್ಕಗಳನ್ನೇ ನಾನು ಪ್ರತಿಪಾದಿಸುತ್ತಿರುವದೇಕೆ? ಬಾದಶಹರ ಭಾಷಣಗಳನ್ನು ಓದುಗರು ಆಳವಾಗಿ ಪರಾಂಬರಿಸಿದರೆ, ಬ್ರಿಟಿಶ ಇಟಾಲಿ ದೇಶಗಳೊಳಗಿನ ಸಂಬಂಧಗಳ ಗ್ರಹಿಕೆಯಾಗುವ ಹಾಗಿರುವದರಿಂದ ಈ ಚರ್ಚೆ ಇಷ್ಟಕ್ಕೇ ನಿಲ್ಲಿಸಿ ಯುದ್ಧವಾರ್ತೆಗಳನ್ನು ಹೇಳಬಯಸುತ್ತೇನೆ.

ಕಳೆದ ವಾರದಲ್ಲಿ ಹಬಸಿ ಜನರ ವಿಜಯ ವಾರ್ತೆಗಳೇ ಹೆಚ್ಚು. ಇಟಾಲಿಯನರು ಉತ್ತರ ಪಾರ್ಶ್ವದಲ್ಲಿಯೂ, ದಕ್ಷಿಣ ಪಾರ್ಶ್ವದಲ್ಲಿಯೂ ಹಿಂಜರಿದರೆಂದೇ ವಾರ್ತೆ. ಹಬಸಿ ವಿಜಯದ ವಾರ್ತೆ ಸಟಿಯೆಂದೂ, ಇಟಾಲಿಯನರು ಗೆದ್ದ ಪ್ರದೇಶಗಳನ್ನು ಬಿಡುವದು ಅಶಕ್ಯವೆಂದೂ, ಇಂಥ ಅಸಂಬದ್ಧ ಸುಳ್ಳು ವಾರ್ತೆಗಳನ್ನು ನಿರಾಕರಿಸುವ ಅವಶ್ಯವಿಲ್ಲವಾಗಿಯೂ ರೋಮ ಪಟ್ಟಣದಿಂದ ತಂತಿ ಬಂದಿದೆ. ಇದರಿಂದ ಸಟಿಯಾವದು, ದಿಟವ್ಯಾವದು? ಎಂಬ ಪರೀಕ್ಷೆಯು ಗೋಜಿಗೆ

ನಾನು ಹೋದವಾರ ಹಿಂದ ವಾರ್ತೆಗಳನ್ನು ಬಂದಂತೆ ನಮೂದಿಸಿಬಿಟ್ಟಿದ್ದೇನೆ. ದಕ್ಷಿಣ ಪಾರ್ಶ್ವದಲ್ಲಿ ಅನಾಲೆ, ಗರ್ಲಗೋಬಿ, ಗೋರಾಹಿ ಗ್ರಾಮಗಳನ್ನು ಇಟಾಲಿಯವರು ಬಿಟ್ಟುಕೊಟ್ಟು ಹಿಂಜರಿದರೆಂದಾಗಿ ಹೇಳುತ್ತಾರೆ. ವಾಬೈಲ್ ಪ್ರದೇಶದ ದಕ್ಷಿಣ ಭಾಗವನ್ನು ಬಿಟ್ಟು ಇಟಾಲಿಯರು ಹಿಂದೆ ಸರಿದರೆಂದಾಗಿ ಜಿಜಿಗಾ ಪಟ್ಟಣಕ್ಕೆ ಬಂದ ಸುದ್ದಿಗಾರರು ಹೇಳುತ್ತಾರೆ. ಸೇನಾಪತಿ ಡೆಸ್ಟಾರವರ ಸೈನ್ಯಪಥಕವು ಇಟಾಲಿ-ಸೋಮಾಲಿ ಪ್ರಾಂತವನ್ನು ನುಗ್ಗಿ ಇಸಿಯಾ-ಬೈಡೊ ಗ್ರಾಮದ ಸಮೀಪಕ್ಕೆ ತಲ್ಪಿದೆ. ಇಲ್ಲಿಂದ ಇಟಾಲಿ-ಸೋಮಾಲಿ ಪ್ರಾಂತದ ರಾಜಧಾನಿಯಾದ ಮೊಗಾಡಿಶು ಬರೇ ೧೫೦ ಮೈಲು ದೂರ. ಮೊಗಾಡಿಶು ಮೆಕುನಾ ಬಂದರದ ದಕ್ಷಿಣ ಭಾಗದಲ್ಲಿದೆ. ಮೊಗಾಡಿಶುಗೆ ತಲ್ಪಿದರೆ ಹಬಸಿ ಜನರಿಗೆ ಬಂದರದ ಅನುಕೂಲತೆ ದೊರಕುತ್ತದೆ. ಡೆಸ್ಟಾ ಸೇನಾಪತಿಗಳು ಬಿಳೇ ಹೇಸರಗತ್ತೆಯ ಮೇಲೆ ಆರೂಢರಾಗಿ ೧ ಲಕ್ಷ ಸಿಡೂಮೊ ಪಾಳೆಯಗಾರರನ್ನು ಜೂಬಾ ಕಂದರದಿಂದ ಕೂಚು ಮಾಡಿ ಒಯ್ದರು. ದಾರಿಯಲ್ಲಿ ಜ್ವರದಿಂದ ಅನೇಕರು ಸತ್ತರು. ಇಟಾಲಿ ಸೈನಿಕರೊಡನೆ ಹೋರಾಡಿ ಹಲವರು ಮಡಿದರು. ಆದಾಗ್ಯೂ ಡೆಸ್ಟಾರವರು ಹಿಂಜರಿಯದೆ ಮುಂದಕ್ಕೆ ಸಾಗಿ ಇಟಾಲಿಯ ಸೋಮಾಲಿ ಪ್ರದೇಶವನ್ನು ನುಗ್ಗಿದ್ದಾರೆ. ಆದರಿಂದ ಇಟಾಲಿಯ ಸೇನಾಪತಿಗಳಾದ ಗ್ರೆಝಿಯಾನಿಯವರು ಹಬಸಿ ಪ್ರದೇಶಕ್ಕೆ ನುಗ್ಗುವ ಸಂಕಲ್ಪವನ್ನು ಅಷ್ಟಕ್ಕೇ ತ್ಯಜಿಸಿ ಡೆಸ್ಟಾರವರಿಗೆ ಇದಿರಾಗಹೊರಟಿದ್ದಾರೆ. ಓಗಡೇನ ಪಾರ್ಶ್ವದಲ್ಲಿ ಇಟಾಲಿಯ ಅನೇಕ ಸೈನಿಕರು ಜ್ವರದಿಂದ ಅಸ್ವಸ್ಥ ಬಿದ್ದಿದ್ದಾರೆ. ಎರಡು ಹಡಗಗಳಿಂದ ಸೈನಿಕರು ರವಾನೆಯಾದರು. ಅವರಿಗೆ ಇಟಾಲಿಗೆ ಒಯ್ಯದೆ ತ್ರಿಪೋಲಿಗೆ ಒಯ್ದು ಶುಶ್ರೂಷೆ ಮಾಡುವರಂತೆ. ಈ ಪಾರ್ಶ್ವದಲ್ಲಿ ೨೫ ಸಾವಿರ ಸೈನಿಕರಿದ್ದು ಅವರು ೩ ಪಾರ್ಶ್ವಗಳಿಂದ ಇಟಾಲಿಯವರ ಮೇಲೆ ಸಾಗಿ ಹೋಗುತ್ತಿದ್ದಾರೆ. ಈ ಪಾರ್ಶ್ವದಲ್ಲಿ ಮಳೆ! ಆದರಿಂದ ಇಟಾಲಿಯರಿಗೆ ಬಹಳೇ ಕಷ್ಟವಾಗಿದೆ. ಮುಂದರಿಯುವದು ಕಠಿಣವಾಗಿದೆ. ಉತ್ತರ ಪಾರ್ಶ್ವದಲ್ಲಿ ರಾಸ ಸೆಯೂಮರವರ ಸೈನ್ಯಕ್ಕೂ, ಇಟಾಲಿಯ ಸೈನ್ಯಕ್ಕೂ ಮಕಾಲೆಯ ನೆರೆಹೊರೆಯಲ್ಲಿ ಘನಘೋರ ಸಂಗ್ರಾಮವೆಸಗಿತು. ನೆರೆಯ ಗ್ರಾಮದಿಂದ ತಂದ ಎತ್ತಿನ ಪಲಾವನ್ನ ಮಾಡಿ ಇಟಾಲಿಯ ಸೈನಿಕರು ಸಂತೋಷಪಡುತ್ತಿದ್ದರು. ಥಟ್ಟನೆ ಹಬಸಿ ಜನರು ಸಾಗಿಹೋಗಿ ಅವರಿಗೆ ಹೊಡೆದೋಡಿಸಿದರು. ಈ ಕಡದಾಟದಲ್ಲಿ ಇಟಾಲಿಯ ಸೈನ್ಯಾಧಿಕಾರಿಗಳೊಬ್ಬರೂ, ಇತರೇ ಸೈನಿಕರೂ ಯಮಸದನ ಕಂಡರು. ಸೇನಾಪತಿ ಬೊಡೊಗ್ಲಿಯೋರವರು ಕಳೆದ ಗುರುವಾರ ಮುಂಜಾವಿಗೆ ಮಸಾವಾ ಬಂದರದಲ್ಲಿ ಬಂದಿಳಿದಿದ್ದಾರೆ. ಅವರ ನಿರೀಕ್ಷಣೆಯಮೇಲೆ ಇಟಾಲಿಯವರು ಶತ್ರುಗಳಮೇಲೆ ಸಾಗಿಹೋಗಿದ್ದಿಲ್ಲ. ಗೆದ್ದ ಪ್ರದೇಶಗಳನ್ನು ಸ್ಥಿರಪಡಿಸತೊಡಗಿದ್ದರು. ರಾಸ ಕಾಸಾ ಸೇನಾಪತಿಗಳಿಗೆ ಲಂಚ ಕೊಟ್ಟು ೧| ಲಕ್ಷ ಸೈನಿಕರೊಡನೆ ಸ್ವಪಕ್ಷಕ್ಕೆ ಸೇರಿಸಿಕೊಳ್ಳುವ ವ್ಯೂಹವನ್ನು ಅವರು ರಚಿಸಿದ್ದಾರೆ. ರಾಸ ಕಾಸಾರವರಿಗೆ ವಶ ಮಾಡಿಕೊಂಡು ಇಜಿಪ್ತ-ಸೂಡಾನ ಪ್ರಾಂತದ ಜೀವನವಾದ ಟಾನಾ ಸರೋವರವನ್ನು ಸ್ವಾಧೀನಪಡಿಸಿಕೊಳ್ಳುವ ದೊಡ್ಡ ಕಾರಸ್ಥಾನವನ್ನೇ ಅವರು ಹೂಡಿದ್ದಾರಂತೆ. ಡೆಸ್ಸಿ ಪಾರ್ಶ್ವದಿಂದಲೂ ಹಬಸಿ ಜನರು ಒತ್ತುತ್ತಿದ್ದಾರೆ. ಟೆಂಬಿಯನ್ ಗ್ರಾಮದ ಬಳಿ ದೊಡ್ಡ ಸಂಗ್ರಾಮವಾಗುವದಾಗಿ ಹೇಳುತ್ತಾರೆ. ಪೂರ್ವ ಪಾರ್ಶ್ವದ ದನಕಾಲಿ ಜನರು ಇಟಾಲಿಯವರಿಗೆ ಕಡುವಿರೋಧ ಬಗೆದು ಔಸಾ ಸುಲ್ತಾನರ ನೇತೃತ್ವದಲ್ಲಿ ಬಹಳೇ ಆವೇಶದಿಂದ ಹೋರಾಡಿದರು. ಈ ಜನರು ತೀರ ಕಾಡು. ಬತ್ತಲೆಯಾಗಿರುತ್ತಾರೆ. ಹೋರಾಡುವದಾದರೂ ಬತ್ತಲೆಯಾಗಿಯೇ. ಉಸುಬು ಬಣ್ಣವನ್ನು ಮೈಗೆ ಹಚ್ಚಿಕೊಂಡು ಪ್ರಸ್ತುತರಾಗಿ! ಇವರು ಹೋರಾಡುತ್ತಾರೆ. ದನಕಾಲಿ ಪ್ರದೇಶ ಮರುಭೂಮಿಯಾಗಿದ್ದರಿಂದ ಆ ಪಾರ್ಶ್ವದಿಂದ ಹಬಸಿ ದೇಶವನ್ನು ಗುಪ್ತವಾಗಿ ಒಳಸೇರಿ ಡೆಸಿಡೊವಾ ಪಟ್ಟಣವನ್ನು ಕೈವಶ ಮಾಡಿಕೊಳ್ಳಬೇಕಾಗಿ ಇಟಾಲಿಯವರು ಹೊಂಚುಹಾಕಿದ್ದರು. ದನಕಾಲಿಯವರು ಇದಿರಾಗುವರೆಂದು ಅವರು ಕನಸು ಮನಸಿನಲ್ಲಿಯೂ ಎಣಿಸಿದ್ದಿಲ್ಲ. ದನಕಾಲಿಯವರು ಪ್ರತಿ ರಾತ್ರೆ ಅವರಮೇಲೆ ಸಾಗಿಹೋಗಿ ದಣಿಸಿಬಿಟ್ಟರು. ಉತ್ತರ ಪಾರ್ಶ್ವದ ಅಡೋವಾ ಬಳಿ ಗ್ರಾಮದಲ್ಲಿ ಹಬಸಿ ಜನರು ಇಟಾಲಿಯರ ಗೋಣು ಮುರಿದ ಕಥೆ ಮನೋರಂಜಕವಿದೆ. ಅವರ ಶೌರ್ಯವನ್ನೂ ಸಾಹಸವನ್ನೂ ಸ್ವಾತಂತ್ರ್ಯತೇಜಸ್ಸನ್ನೂ ಅದರ ಮೇಲಿಂದ ತಿಳಿಯಬಹುದು. ಅಡೋವಾದಿಂದ ೧೭ ಮೈಲಿನ ಮೇಲೆ ಇಟಾಲಿಯರ ಕೆಂಪು ಇತ್ತು. ಅಂದೇ ಸೈನಿಕರು ೧೦ ಮೈಲು ಕೂಚು ಮಾಡಿಕೊಂಡು ಬಂದಿದ್ದರು. ಬಿಸಿಲು ಕಾಯುತ್ತಿತ್ತು! ಗಾಳಿಯಂತೂ ಉಷ್ಣತೆ! ಅವರಿಗೆ ಸಾಕಾಗಿತ್ತು. ಸುತ್ತಲೂ ಮುಳ್ಳಿನ ಬೇಲಿ ಕಟ್ಟಿಕೊಂಡು ೫೦೦ ಜನರು ಅತ್ತ ಬಿದ್ದರು. ಸುತ್ತುಮುತ್ತು ಬೆಳಕಿಗಾಗಿ ಅಗ್ನಿಕುಂಡಗಳನ್ನು ಮಾಡಿ ಸಶಸ್ತ್ರ ಕಾವಲು ಇಡಲಾಗಿತ್ತು. ಕಗ್ಗತ್ತಲೆಯಾದೊಡನೆ ಗುಹೆಗಳಲ್ಲಿ ಅಡಗಿಕೊಂಡ ೨೦೦೦ ಹಬಸಿ ಸೈನಿಕರು ಒಟ್ಟಾದರು. ಕಗ್ಗತ್ತಲೆಯಲ್ಲಿ ಸಾಮಾನ್ಯ ಜನರಿಗೇನೂ ಕಾಣುವದಿಲ್ಲ. ಆದರೆ ಈ ಜನರ ದೃಷ್ಟಿಯೇ ವಿಚಿತ್ರವಾದದ್ದು. ಬೆಕ್ಕಿನ ಪ್ರಾಣಿಯಂತೆ ಈ ಜನರು ಕತ್ತಲೆಯಲ್ಲಿಯೇ ತಿರುಗಾಡುತ್ತಾರೆ. ಒಂಡೆಗಲ್ಲು-ಬೆಟ್ಟ ಪ್ರದೇಶಗಳಲ್ಲಿ ಅಡ್ಡಾಡಬಲ್ಲರು. ಕೂಚು ಮಾಡಬೇಕೆಂದು ಅಪ್ಪಣೆಯಾದೊಡನೆ ಖಡ್ಗಧಾರಿಗಳಾಗಿ ಇವರು ಹೊರಟರು. ಬರೇ ೨೦೦ ಜನರ ಕಡೆ ತುಬಾಕಿಗಳಿದ್ದವು. ಕಾಲಿನಿಂದ ಕೂಚು ಮಾಡಲಿಲ್ಲ. ಹಾವುಗಳಂತೆ ಹೊಟ್ಟೆಯ ಮೇಲಿಂದ ಸರಸರನೆ ಹೋದರು. ದಟ್ಟವಾಗಿ ಬೆಳೆದ ಹುಲ್ಲಿನೊಳಗಿಂದ ಇವರು ಹೋಗುವಾಗ ಏನೊಂದೂ ಸಪ್ಪಳವಾಗಲಿಲ್ಲ. ಎಲ್ಲಾ ಸ್ತಬ್ಧವಾಗಿ ಇವರು ಇಟಾಲಿ ಕೆಂಪಿನ ಕಡೆಗೆ ಸಾಗಿಹೋಗುತ್ತಿದ್ದರು. ಒಬ್ಬರ ಬೆನ್ನಿಗೆ ಇನ್ನೊಬ್ಬನಾಗಿ ಒಂದೇ ಒಂದು ಸಾಲಿನಿಂದ ಇವರು ಹೋಗುತ್ತಿದ್ದರು. ಇಟಾಲಿಯ ಕಾವಲುಗಾರರಿಗೆ ಏನೂ ಕಾಣಲಿಲ್ಲ, ಏನೂ ಕೇಳಲಿಲ್ಲ. ಮುಂಭಾಗದಲ್ಲಿ ಹೋದ ಪಾಳೆಯಗಾರ ಪ್ರಮುಖರು ಕೆಂಪಿಗೆ ಮುಟ್ಟಿದೊಡನೆ ಒಮ್ಮೆಲೇ ಎದ್ದುನಿಂತು ಥಟ್ಟನೆ ಗುಂಡು ಹಾರಿಸಿ ಕ್ಷಣಾರ್ಧದಲ್ಲಿ ಇಟಾಲಿಯ ಸೈನ್ಯ ಕಾವಲುಗಾರರನ್ನು ಕೊಂದುಬಿಟ್ಟರು. ಸೈನಿಕರು ಎಚ್ಚತ್ತು ಗುಂಡು ಹಾರಿಸಿದಾಗ್ಯೂ ಹಬಸಿ ಜನರು ಜೀವದ ಪರಿವೆ ಹಿಡಿಯದೆ ಮುಳ್ಳು-ಬೇಲಿಯ ಮೇಲಿಂದ ಹಾರಿ ಇಟಾಲಿಯವರಿಗೆ ಕೊಲೆ ಮಾಡಿದರು. ಹಲವರಿಗೆ ಬೇಲಿಯ ಮುಳ್ಳು ತಾಗಿ ರಕ್ತಸುರಿಯಹತ್ತಿತ್ತು. ಪೆಟ್ಟಾದ ಭಾಗ ಜೋಲುತ್ತಿತ್ತು. ಇಟಾಲಿಯವರ ಕಡೆಯಿಂದ ಗುಂಡುಗಳು ಹಾರುತ್ತಿದ್ದವು. ಆದಾಗ್ಯೂ ಖಡ್ಗಧಾರಿ ಸಾಹಸಿ ಹಬಸಿ ಜನರು ಲೆಕ್ಕಿಸದೆ ಇಟಾಲಿಯ ಮೇಲೆ ಏಕಾಗ್ರಚಿತ್ತದಿಂದ ಸಾಗಿಹೋಗಿ ಅವರಿಗೆ ಹೊಡೆದೋಡಿಸಿದರು. ಹಬಸಿ ಜನರಿಗೆ ಹೋರಾಟ, ಬಡಿದಾಟ, ಯುದ್ಧ ಇವುಗಳ ಪರಿವೆಯೇ ಇಲ್ಲ. ಬಡಿದಾಟ-ಕಡಿದಾಟಗಳೇ ಇವರ ನಿತ್ಯಜೀವನಕ್ರಮವೆಂದು ಹಬಸಿ ದೇಶದೊಳಗೆ ಸಂಚಾರ ಮಾಡಿದ ಮಿ| ಪೆರಿಗೋರವರು ಬರೆಯುತ್ತಾರೆ. ಧೈರ್ಯದಿಂದಲೂ, ನಿರ್ಧಾರದಿಂದಲೂ ಇವರು ಹೋರಾಡುತ್ತಾರಾಗಿಯೂ ಪೆರಿಗೋರವರ ಅಂಬೋಣ "ಇವರಲ್ಲಿ ಶಿಸ್ತಿಲ್ಲ, ಹೊಸ ಪದ್ಧತಿಯ ಸೈನಿಕರ ಉಡಿಗೆ-ತೊಡಿಗೆಗಳಿಲ್ಲ. ಖಡ್ಗಗಳ ಬಾಯಿಗೆ ಹಾವುಗಳ ವಿಷ ಹಚ್ಚಿಕೊಂಡು ಇವರು ಯುದ್ಧಕ್ಕೆ ಹೊರಡುತ್ತಾರೆ. ತುಬಾಕಿ ಅದೊಂದು ವಿಲಾಸ ಸಾಹಿತ್ಯ, ದೊಡ್ಡಸ್ತನದ ಕುರುಹು. ತುಬಾಕಿಗಳಿವೆ; ಆದರೆ ಕಾಡತೂಸುಗಳಿಲ್ಲ. ಇದ್ದ ತುಬಾಕಿಗಳು ನೆಟ್ಟಗಿಲ್ಲ" ಹೀಗೆ ಸಹ ಪೆರಿಗೋರವರು ಬರೆದು ಹಬಸಿ ಸೈನಿಕರು ಪರಚಕ್ರ ಕೈಕೊಳ್ಳಲು ಅನರ್ಹರೆಂದೂ, ಆತ್ಮಸಮರ್ಥನ ಮಾಡಿಕೊಳ್ಳಲು ಯೋಗ್ಯರೆಂದೂ ಅಭಿಪ್ರಾಯಪಡುತ್ತಾರೆ. ಸೈನಿಕರಿಗೆ ತಕ್ಕಷ್ಟು ಅನ್ನಸಾಮಗ್ರಿ ಇಲ್ಲವಾಗಿ ಸುದ್ದಿಗಾರರು ಹೇಳುತ್ತಾರೆ. ರಾಸ ಸೆಯೂಮರವರ ಲಕ್ಷಾವಧಿ ಸೈನಿಕರಿಗೆ ತಕ್ಕಷ್ಟು ಆಹಾರ ಸಾಮಗ್ರಿ ಸಿಗದೆ ತೊಂದರೆಯಾಗಿರುವದಂತೆ; ಆಹಾರ ಪೂರೈಕೆ ಇಲಾಖೆಯವರು ಸರಿಯಾಗಿ ಆಹಾರ ಸಾಮಗ್ರಿಗಳನ್ನು ಪೂರೈಸುವದಿಲ್ಲವಾಗಿಯೂ ಸೈನಿಕರು ಹಸಿವೆಯಿಂದ ಬಳಲುತ್ತಾರಾಗಿಯೂ ತ್ವರ್ಯವೇ ಆಹಾರ ಪೂರೈಕೆಯಾಗಬೇಕಾಗಿಯೂ ರಾಸ ಸೆಯೂಮರವರು ಬಾದಶಹರ ಕಡೆ ದೂತರನ್ನು ಕಳುಹಿ ಕೇಳಿಕೊಂಡಿದ್ದಾರೆ. ಆದರೆ ಇವರಿಗೆ ವಿಶೇಷ ಆಹಾರ ವಿಹಾರದ ಅವಶ್ಯಕತೆಯಿಲ್ಲ. ಸೈನ್ಯದೊಡನೆ ಎತ್ತು-ಕುರಿಗಳನ್ನು ಇವರು ಹೊಡಕೊಂಡು ಹೋಗುತ್ತಾರೆ. ಅವುಗಳಿಗೆ ಕೊಂದು ಮಾಂಸ ತಿಂದು ಜೀವಿಸುತ್ತಾರೆ. ಟೇಜ ಎಂಬ ಜೇನು ತುಪ್ಪದಿಂದ ಮಾಡುವ ಸರಾಯಿಯಿದೆ. ಇದರ ಮೇಲೆ ಹಬಸಿ ಜನರಿಗೆ ಬಲು ಪ್ರೀತಿ. ಜಿಜಿಗಾ ಪಟ್ಟಣದಲ್ಲಿ ೬ ತಿಂಗಳು ಸಾಲುವಷ್ಟು ಅನ್ನಸಾಮಗ್ರಿಯಿದೆ. ಇಂಥ ಅವ್ಯವಸ್ಥಿತ ಸ್ಥಿತಿಯಲ್ಲಿಯೂ ಅವರ ಮನೋವೃತ್ತಿ ಬದಲಲಿಲ್ಲ. ಅನಾಲೆ ಸಂಗ್ರಾಮದಲ್ಲಿ ಘಾಯಪಟ್ಟ ಗೂಯಿಂಗುಲ್ ಎಂಬ ಸೈನಿಕರು ಹರಾರದ ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಹೆಂಡರ-ಮಕ್ಕಳಿದ್ದಾರೆ. ಅವರಿಗೆ ಶುಶ್ರೂಷೆ ಮಾಡುತ್ತಿದ್ದ ಡಾಕ್ಟರ ಬಳಿ ಅವರು ನುಡಿದದ್ದೇನಂದರೆ:- "ಹೆಂಡರು ಮಕ್ಕಳ ಬಗ್ಗೆ ನಾನು ಚಿಂತೆಪಡುವದಿಲ್ಲ. ನನಗೆ ದೇಶದ್ದೇ ಚಿಂತೆ. ತ್ವರ್ಯವೇ ನನ್ನ ಘಾಯಗಳನ್ನು ಗುಣಪಡಿಸಿರಿ. ಅಂದರೆ ನಾನು ಪುನಃ ರಣಕ್ಷೇತ್ರಕ್ಕೆ ಮುದದಿಂದ ಹೋಗುವೆನು" ಜಿಜಿಗಾ ಪಟ್ಟಣದಲ್ಲಿ ಪಾಳೆಯಗಾರ ಪ್ರಮುಖರೊಬ್ಬರು ರಣಹೇಡಿಗಳಾಗಿ ಓಡಿಹೋದ ವಾರ್ತೆ ರಾಜಾಧಿರಾಜರಿಗೆ ತಲ್ಪಿತು. ಬಾದಶಹರಿಗೆ ನೇಗೂಸ ಅಂದರೆ ರಾಜಾಧಿರಾಜ (King of Kings) ಎಂದು ಹೇಳುವ ಪರಿಪಾಠವಿದೆ. ಕೂಡಲೆ ಬಾದಶಹರು ಅವರಿಗೆ ಕರಿಸಿ ಚೆನ್ನಾಗಿ ಬೆತ್ತಪ್ರಹಾರ ಮಾಡಿಸಿದರು. ಅವರ ಸೈನ್ಯಾಧಿಪತ್ಯವನ್ನು ತೆಗೆದು ಆಸ್ತಿಯನ್ನು ಸರಕಾರಜಪ್ತ ಮಾಡಿ ಸೇನಾಧಿಪತ್ಯವನ್ನೂ ಆಸ್ತಿಯನ್ನೂ ಅವರ ಮಗಂದಿ

[ಮುಂದೆ ೯ನೇ ಪಾನು ನೋಡಿರಿ.]

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ಸಾಧಾರಣ ಬೀಳುತ್ತಿದೆ. ಊರಿನಲ್ಲಿ ಆರೋಗ್ಯವು ಚೆನ್ನಾಗಿದೆ.

ಮುನಸಿಪಾಲಿಟಿಯವರು ಮತದಾರರ ಪಟ್ಟಿಯನ್ನು ತಾ. ೩೦ನೇಗೆ ಪ್ರಕಟಿಸಿದ್ದಾರೆ. ಉಮೇದವಾರರ ಉಮೇದಿ ಕಳೆಯುತ್ತಿದೆ, ಮತದಾರರ ಮನ ಗೆಲ್ಲುವದಕ್ಕಾಗಿ ಅಲ್ಲಲ್ಲಿ ಪ್ರಯತ್ನಗಳು ನಡೆಯುತ್ತಿವೆ.

ಇಲ್ಲಿಯ ಕಿರಾಣಿ [illegible] ಅವರ ಮನೆಯೊಳಗಿನ ಬಾವಿಯಲ್ಲಿ ಅಕಸ್ಮಾತ್ ನೀರಿನ ಸೆಲೆ ಒಡೆಯಿತು. ತಕ್ಷಣಕ್ಕೆ ೩—೪ ಅಡಿ ನೀರು ಬಂತು. ಇದು ಭಾಗೀರಥಿ ಎಂದು ಹೇಳಿದ, ನೀರು ಸಾಧಾರಣ ಬೆಳ್ಳಗಿತ್ತಂತೆ.

ಡಿಸ್ಟ್ರಿಕ್ಟ ಜಡ್ಜರಾದ ರಾ| ಗೋವಿಂದರಾವ ಸಾಳ್ವಿಯವರು ಸರ್ಕೀಟಿಗೆ ಬಂದು ಬಟ್ಟೆಯ ವಿಚಾರಕ್ಕೆ ಹೋಗಿದ್ದರು. ಅಲ್ಲಿ ಕೆಲಸ ತೀರಿಸಿಕೊಂಡು ನಿನ್ನೆ ಶನಿವಾರ ಅಕ್ಷ ಒಂದು ಹುಲಿಯ ಬೇಟೆಯಾಡುವದಕ್ಕಾಗಿ [illegible] ಗಳ ಕಡೆಗೆ ಹೋಗಿರುತ್ತಾರೆ. ಜನರಿಗೆ ಉಪದ್ರವ ಕೊಡುವ ಹುಲಿಗಳನ್ನು ರಾ| ಸಾಳ್ವಿಯವರು ಕೊಂದು ಜನರಿಗೆ ಉಪಕಾರ ಮಾಡುವರೆಂದು ನಂಬಿಗೆ.

ಶ್ರೀ ಗೋಕರ್ಣ ಕ್ಷೇತ್ರದ ಕೋಟಿತೀರ್ಥ, ಸಮುದ್ರ, ಶ್ರೀ ಮಹಾಬಲೇಶ್ವರ ದೇವ, ಶ್ರೀ ಗಣಪತಿ ದೇವ, [illegible], ರುದ್ರಪಾದ ಮೊದಲಾದ ಕ್ಷೇತ್ರ ಸ್ಥಳಗಳಲ್ಲಿ ಕ್ಷೇತ್ರ ವಿಧಿ ಮಾಡುವ ಕುರಿತು [illegible] ವಂಶರಿಗೂ ನಡೆದ ದಾವೆಯಲ್ಲಿನ ಫೈಸಲೆ ವಿರುದ್ಧ ಕಾರವಾರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ದಾಖಲಾದ ಅಪೀಲಿನ ವಿಚಾರ ಇದೇ ಬರುವ ಸೋಮವಾರ ತಾರೀಖು ೯ನೇಯಿಂದ ಕಾರವಾರದಲ್ಲಿ ನಡೆಯುವದು.

ಹೊಸ ರಾಜ್ಯಘಟನೆಯನ್ವಯ ಎಸೆಂಬ್ಲಿ ಮತ್ತು ಕೌನ್ಸಿಲ ಹೀಗೆ ಎರಡು ಪ್ರಾಂತಿಕ ಸಭೆಗಳ ಮತದಾರರ ಯಾದಿ ತಯಾರಾಗುತ್ತಿದೆ. ಪ್ರಾಥಮಿಕ ಶಿಕ್ಷಕರಿಗೆ ಮತಾಧಿಕಾರವಿಲ್ಲವಾಗಿ ಕಲೆಕ್ಟರರು ತೀರ್ಮಾನಿಸಿದ್ದಾರೆ. ಮೆಟ್ರಿಕ್ಯುಲೇಶನ್ ಮತ್ತು ಸ್ಕೂಲ ಫೈನಲ್ ಇವೆರಡು ಪರೀಕ್ಷೆಗಳೇ ಸರಕಾರಮಾನ್ಯ ಪರೀಕ್ಷೆಯಲ್ಲಿ ಸೇರಿಸಲ್ಪಟ್ಟಿವೆ. ಮುಲ್ಕಿ ಪರೀಕ್ಷೆ ಸರಕಾರದ ವಿದ್ಯಾಖಾತೆಯದೇ ನಡೆಯುತ್ತದೆ. ಇಂಗ್ಲಿಷದ ಜ್ಞಾನವೊಂದನ್ನು ಬಿಟ್ಟರೆ ಮೆಟ್ರಿಕ್-ಫೈನಲ್ ಪರೀಕ್ಷೆಯವರಿಗೂ ಮುಲ್ಕಿ ಪರೀಕ್ಷೆಯವರಿಗೂ ಹೆಚ್ಚಿನ ಭೇದವಿಲ್ಲ. ಮೇಲಾಗಿ ಪ್ರಾಥಮಿಕ ಶಿಕ್ಷಕರಲ್ಲಿ ಟ್ರೇನಿಂಗ ಕಾಲೇಜಿನ ವಿದ್ಯಾಭ್ಯಾಸ ಮಾಡಿದವರೂ ಇದ್ದಾರೆ. ಇಂಥವರಿಗೆ ಕಲೆಕ್ಟರರು ಮತಾಧಿಕಾರವಿಲ್ಲವೆಂದು ನಿರ್ಣಯಿಸಿದ್ದು ತಪ್ಪು. ಮುಂಬಯಿ ಸರಕಾರವು ವಿಚಾರ ಮಾಡಬೇಕಾಗಿ ವಿದ್ಯಾಧಿಕಾರಿಗಳು ಸೂಚಿಸುತ್ತಾರೆ.

ನಿನ್ನೆಯಿಂದ ಕಾರವಾರದಲ್ಲಿ ಅಖಿಲ ಭಾರತೀಯ ಚರಖಾ ಸಂಘದ ಕರ್ನಾಟಕ ಶಾಖೆಯವರು ಖಾದಿ ಸಂತೆಯನ್ನು ಏರ್ಪಡಿಸಿದ್ದಾರೆ. ಈ ವಾರದ ಕೊನೆಯ ತನಕ ಸಂತೆ ನಡೆಯುವದು. ಆನಂತರ ಇಲ್ಲಿ ಕುಮಟೆಯಲ್ಲಿಯೂ ಒಂದು ಸಂತೆ ಕೂಡಿಸಬೇಕಾಗಿ ಚಾಲಕರ ಸಂಕಲ್ಪವಿದೆ. ಬಹುಶಃ ಮುಂದಿನ ವಾರದಲ್ಲಿ ರಾ| ಪರಮೇಶ್ವರ ಶಂಭು ಹೆಗಡೆಯವರ ಮನೆಯೊಳಗೆ ಸಂತೆಯಾಗುವದೆಂದು ತಿಳಿಯುತ್ತದೆ. ರಾಷ್ಟ್ರೀಯ ಸಭೆಯ ಭಕ್ತರೂ, ಖಾದಿ ಪ್ರೇಮಿಗಳೂ ಸಂತೆಯನ್ನು ಯಶಸ್ವಿ ಮಾಡಿಕೊಡಬೇಕಾಗಿ ಕೋರುತ್ತೇವೆ.

ರಾಷ್ಟ್ರಸಭಾಭಿಮಾನಿಗಳನ್ನುದ್ದೇಶಿಸಿ [illegible] ಬರೆಯುತ್ತಾರೆ:— "ಇದೇ ಬರುವ ತಾ. ೨೮ಕ್ಕೆ ಅಖಿಲ ಭಾರತದಲ್ಲಿ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವು ಬಹು ವಿಜೃಂಭಣೆಯಿಂದ ಜರಗುವದು. ಭಾರತೀಯರ ಉದ್ಧಾರಕ್ಕಾಗಿ, ಸ್ವಾತಂತ್ರ್ಯ ಪ್ರಾಪ್ತಿಗಾಗಿ ಹೋರಾಡಿದ ಒಂದೇ ಒಂದು ಸಂಸ್ಥೆಯು ರಾಷ್ಟ್ರೀಯ ಸಭೆಯು. ಅದರ ಸುವರ್ಣ ಪ್ರತಿಯೊಂದು ಮಹೋತ್ಸವದಲ್ಲಿ ಪ್ರತಿಯೊಬ್ಬರು, ಪಟ್ಟಣಿಗರು ಭಾಗಿಗಳಾಗುವದು ಕರ್ತವ್ಯವಿರುತ್ತದೆ. ಎಲ್ಲ ಊರುಗಳಲ್ಲಿ ಈ ಉತ್ಸವದ ಬಗ್ಗೆ ಭರದಿಂದ ತಯಾರಿ ನಡೆದಿದೆ. ಕುಮಟೆಯವರು ಇನ್ನೂ ಸುಮ್ಮನಿದ್ದರೆ ಇದು ಉಚಿತವಲ್ಲ. ಮುಂದಾಳುಗಳು ಮುಂದಾಗಿ ಉತ್ಸವದ ವ್ಯವಸ್ಥೆ ಮಾಡಬೇಕಾಗಿಯೂ, ಕುಮಟೆಯ ಕೀರ್ತಿಯನ್ನು ಕಾಯ್ದುಕೊಳ್ಳಬೇಕಾಗಿಯೂ ವಿನಯದಿಂದ ಬೇಡಿಕೊಳ್ಳುತ್ತೇವೆ" ಇತ್ಯಾದಿ.

ಕಟಪಾಡಿಯ ಮಂಗಳೂರ ನಾಯಕರ ಮನೆತನದ ರಾ| [illegible] ರಂಗನಾಥ [illegible] ಲಂಡನಿನಲ್ಲಿ ಈ ಬಾರಿ ನಡೆದ ಐ.ಸಿ.ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಕಳೆದ ಸೋಮವಾರ ಮುಂಬಯಿಗೆ ಬಂದಿಳಿದರು. ಅಲ್ಲಿಂದ ಸ್ಟೀಮರಿನಿಂದ ಅಂಕೋಲೆಗೆ ಬಂದು ಕಾರವಾರದ ಶ್ರೀ ಲಕ್ಷ್ಮೀನಾರಾಯಣ ಮಹಾಮಾಯಾ ದೇವರ ದರ್ಶನ ಪಡೆದು ಸೇವೆ ನಡಿಸಿ ಕುಮಟಾ ಮಾರ್ಗವಾಗಿ ಕಟಪಾಡಿಗೆ ತೆರಳಿದರು. ಜಗದಲ್ಲಿ [illegible] ಉಪಕಾರವನ್ನಿತ್ತು [illegible] ರಾ| ನಾಯಕರವರಿಗೆ [illegible] ಪ್ರಾಂತದಲ್ಲಿ ನೇಮಿಸೋಣವಾಗಿದೆ.

ಕುಮಟಾ ಅರ್ಬನ್ ಬ್ಯಾಂಕಿಗೆ ಪಾಲಗಾರರ ಕಡೆಯಿಂದ ಪಡೆದ [illegible] ದಂಡದ ಬಡ್ಡಿಯನ್ನು ಪಾಲಗಾರರಿಗೆ ತಿರುಗಿ ಕೊಡುವಂತೆ ಸಹಕಾರಿ ಖಾತೆಯವರಿಂದ ಒಪ್ಪಿಗೆ ಬಂದಿರುವದಾಗಿ ತಿಳಿಯುತ್ತದೆ. [illegible] ಮೇರೆಗೆ ಪಾಲಗಾರರಿಗೆ ದಂಡದ ಬಡ್ಡಿ ಸದ್ಯಕ್ಕೇ ತಿರುಗಿ ಸಿಗುವ ದೆಂದೆಂದು ತಿಳಿಯುತ್ತದೆ.

[illegible] ರಾ| ಅಂಗಡಿ ಕೃಷ್ಣ ಭಟ್ಟರು ಕಳೆದ ಶುಕ್ರವಾರ ತಾ. ೨೯-೧೧-೩೫ನೇ ಮಧ್ಯಾಹ್ನ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಮರಣ ಸಮಯ ಅವರಿಗೆ ೧೦೧ ವರ್ಷ ವಯಸ್ಸಾಗಿತ್ತು. ಇಷ್ಟು ವಯೋವೃದ್ಧರಾದಾಗ್ಯೂ ರಾ| ಭಟ್ಟರು ತಮ್ಮ ದಿನಚರ್ಯೆಯನ್ನು ತಾವೇ ಸಾಗಿಸಿ ಅಂಗಡಿಯ ವ್ಯವಹಾರವನ್ನೂ ನಡೆಸಿ, ಲೆಕ್ಕ-ಪತ್ರ ತಾವೇ ಬರೆಯುತ್ತಿದ್ದರು. ಸಾಯಂಕಾಲ ಎಂಟು ತಾಸು ಪರಮೇಶ್ವರನ ಭಜನೆಯಲ್ಲಿ ಕಳೆಯುತ್ತಿದ್ದರು. ರಾ| ಭಟ್ಟರವರಷ್ಟು ಗಟ್ಟಿಗರಾದ ಶತಾಯುಷಿಗಳು ಕಾಣಸಿಗುವದಪರೂಪ. ಅವರಿಗೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಕೂಡ ಇದ್ದಾರೆ. ಮೃತಾತ್ಮರಿಗೆ ಸದ್ಗತಿ ದೊರೆಯಲಿ!

[illegible]— ಚಳಿ ಕಟ್ಟಿದೆ. ಎಲ್ಲೆಲ್ಲೂ ಜ್ವರದ ಉಪದ್ರವವೇ ಕೇಳಿಬರುತ್ತಿದೆ. ಸುಗ್ಗಿ ಕಾಲದಲ್ಲಿ ಈ ಉಪದ್ರವ ಬಂದಿರುವದರಿಂದ ಜನರಿಗೆ ಬಹಳ ತೊಂದರೆ. ಸಾವಿರಾರು ಕ್ವಿನೈನ ಗುಳಿಗೆಗಳು ಹಂಚಲ್ಪಟ್ಟಿವೆ. ಇನ್ನೂ ಗುಳಿಗೆಗಳು ಬೇಕು.

ನೀರಾವರಿ ಖಾತೆಯ ಅಧಿಕಾರಿಗಳಿಗೂ ಲೋಕಲ್ ಬೋರ್ಡಿನವರಿಗೂ ಈ ಗ್ರಾಮದ ಸ| ನಂ| ೧೬೩ನೇದರಲ್ಲಿರುವ ಕೆರೆಯ ಬಗ್ಗೆ ಮಾರ ಉಪೇಕ್ಷೆಯಾಗಿದೆ. ಸನ್ ೧೮೫೭ನೇ ಇಸ್ವಿಯಲ್ಲಿ ಈ ಭಾಗವು [illegible] ಕಯೊಳಗಿಂದ ಬ್ರಿಟಿಶರ ಆಳಿಕೆಯಲ್ಲಿ ಬಂದಾಗಲೂ ಈ ಕೆರೆಯಿತ್ತು. ಕೆರೆಯ ನೀರಿನಿಂದ ನೆರೆಹೊರೆಯ ನೂರಾರು ಎಕರೆ ಭೂಮಿ ಸಾಗು ಆಗುತ್ತಿತ್ತು. ಈ ಬಗ್ಗೆ ರೂ. ೫೦೦ಕ್ಕೆ ಮಿಕ್ಕಿ ನೀರು-ತೆರಿಗೆ ವಸೂಲಾಗುತ್ತಿತ್ತು; ಈಗಲೂ ವಸೂಲಾಗುತ್ತದೆ. ಆದಾಗ್ಯೂ ೧೮೫೭ರಿಂದ ೧೯೦೮ರ ತನಕ ಸದರಿ ಕೆರೆಯ ದುರುಸ್ತಿಯನ್ನು ಸರಕಾರದವರು ಮಾಡಿದ್ದಿಲ್ಲವೆಂದು ಹೇಳುತ್ತಾರೆ. ೧೯೦೮ರಲ್ಲಿ ನೀರಾವರಿ ಖಾತೆಯವರು ಸಾವಿರಾರು ರೂಪಾಯಿ ಖರ್ಚು ಮಾಡಿಸಿ ಕೆರೆಯ ದುರುಸ್ತಿ ಮಾಡಿಸಿದರು. ಎಂಥ ದುರುಸ್ತಿ ಮಾಡಿದರೋ ಏನೋ! ೮-೧೦ ವರುಷಗಳಲ್ಲಿಯೇ ಕೆರೆಯು ಪುನಃ ಹಾಳಾಯಿತು! ತುಂಬ ಹೊಳ್ಳಾಗಿ ನೀರು ಸೋರಿ ಹೋಗ ಹತ್ತಿತು! ರೈತರು ಮೊರೆಹತ್ತಿದರು. ಆದ್ದರಿಂದ ನೀರಾವರಿ ಖಾತೆಯವರು ಈಗ ಪುನಃ ದುರುಸ್ತಿಯನ್ನು ಕೈಕೊಂಡಿದ್ದಾರೆ. ಮೊದಲಿನಂತೆ ಮೇಲಿಂದ ಮೇಲೆ ದುರುಸ್ತಿ ಮಾಡಿ ಸಂತುಷ್ಟರಾಗದೆ ಬುಡದಿಂದ ದುರುಸ್ತಿ ಮಾಡುವರೆಂದು ಜನರು ಕೋರುತ್ತಾರೆ. ಕೆರೆಯ ಏರಿಯ ಹೊಳ್ಳಿನಲ್ಲಿ ಅಗೆದು ತೆಗೆದು ದುರುಸ್ತ ಮಾಡಬೇಕು. ನೀರು ಬಿಟ್ಟಾಗ ಮಾತ್ರ ತೂಬಿನಿಂದ ನೀರು ಹೋಗಬೇಕಲ್ಲದೆ, ತೂಬು ಮುಚ್ಚಿದಾಗ ನೀರು ಹೋಗದಂತೆ ತೂಬನ್ನು ಭದ್ರವಾಗಿ ಕಟ್ಟಿಸಬೇಕು. ಏರಿಯನ್ನು ನಿಯಮಿತ [illegible] ಕಟ್ಟಿಸೆಂದು ಮೇಲೆ ಮತ್ತಲು ಬಡಿ ಹಾಕಿ ಜಿಗಿ ಗಟ್ಟಿ ಮಾಡಬೇಕು. ಹೀಗೆ ಮಾಡದಿದ್ದರೆ, ಮಾಡಿದ ದುರುಸ್ತಿಯ ಗತಿಯು ಮುಂಚಿನಂತೆಯೇ ಆಗುವದು. ಇಂದಿ ಬೋರ್ಡಿನವರು, ನೀರಾವರಿ ಖಾತೆಯವರಿಗೂ ವಾದ ಮಾಡಿದ್ದು ಈ ಬಗ್ಗೆಲ್ಲ. ಏರಿಯ ಮೇಲಿನ ದುರುಸ್ತಿ ಬಗ್ಗೆ ಆಗಿರುತ್ತದೆ, ಏರಿಯ ಮೇಲೆ ಜನರೂ, ಗಾಡಿಗಳೂ ತಿರುಗುತ್ತಿವೆ, ಏರಿಯು ಉಪಯೋಗ ರಸ್ತೆಯಂತೆ ಆಗುತ್ತದೆ. ರಸ್ತೆ ಮಾಡುವದು ಬೋರ್ಡಿಗೆ ಒಪ್ಪಿದ್ದು. ಕಾರಣ ಏರಿಯನ್ನು ದುರುಸ್ತ ಮಾಡಿರಿ; ಎಂದು ನೀರಾವರಿ ಖಾತೆಯವರು ಲೋಕಲ್ ಬೋರ್ಡಿಗೆ ಸೂಚಿಸಿದ್ದಾರೆ. ಆದಕ್ಕೆ ಬೋರ್ಡಿನವರು ಹೀಗನ್ನುತ್ತಾರೆ: "ಕೆರೆಯ ಏರಿಯನ್ನು ಕಟ್ಟುವದೂ, ದುರುಸ್ತ ಮಾಡುವದೂ ನೀರಾವರಿ ಖಾತೆಯವರ ಕರ್ತವ್ಯವು. ನೀವು ಏರಿ ಮಾಡಿರಿ, ರಸ್ತೆಯ ವಾರ್ಷಿಕ ರಿಪೇರಿಯನ್ನು ಮಾತ್ರ ಮಾಡುತ್ತೇವೆ." ಈ ವಾದದ ಅಂತ್ಯ ವೆಲ್ಲಾಗುತ್ತದೆಂದು ನೋಡಬೇಕು. ನಿಜವಾಗಿ ನೀರಾವರಿ ಖಾತೆಯ ಅಂಬೋಣ ವಾಸ್ತವ್ಯವಲ್ಲ. ಏರಿಯ ಕೆಲಸಕ್ಕೆ ೪—೫ ಯಾ ೬—೮ ಸಾವಿರ ರೂಪಾಯಿ ಖರ್ಚು ತಗಲುವದು. ಅದನ್ನು ತೆರಲಿಕ್ಕೆ ಖಾತೆಯವರು ಹಿಂಜರಿದು ಮಾತಾಡುವದು ಯುಕ್ತವೇ? ವರ್ಷಾನುವರ್ಷ ವಸೂಲ ರೂ. ೫೦೦ಕ್ಕೆ ಮೇಲ್ಪಟ್ಟು ನೀರ್ತೆರಿಗೆ ವಸೂಲ ಮಾಡುವಾಗ ೬—೮ ಸಾವಿರ ರೂಪಾಯಿ ಖರ್ಚು ಮಾಡಲಿಕ್ಕೆ ನೀರಾವರಿ ಖಾತೆಯವರು ಹಿಂದು-ಮುಂದೆ ನೋಡುವದು ನ್ಯಾಯವಲ್ಲ. ಬೋರ್ಡಿಗೆ ಇಷ್ಟು ಖರ್ಚು ಮಾಡುವ ಶಕ್ತಿಯಾದರೂ ಉಂಟೇ? ಇದರ ವಿಚಾರ ಅಧಿಕಾರಿಗಳಿಗೆ ಯಾಕೆ ಹೊಳೆಯುವದಿಲ್ಲ?

ಇಲ್ಲಿಯ ಪೇಟೆಯಲ್ಲಿ ಮಾರಾಟಕ್ಕೆ ಬಂದ ಭತ್ತವನ್ನು ಮಾಪುಗಳಿಂದ ಅಳೆಯದೆ [illegible] ಕಟ್ಟಿಗೆಯ ಕೊಳಗದಿಂದ ಮಾಡಿ ಸುಲಿಯುತ್ತಾರೆಂದು ಇಲ್ಲಿಯ ರೈತರು ದೂರುತ್ತಾರೆ. ರೈತರು ಒಕ್ಕಟ್ಟು ಮಾಡಿ ಅಲಾಯಿದಾ ಮಾಡಿದರೆ ವ್ಯಾಪಾರಿಗಳು ತಾವಾಗಿ ಬಗ್ಗುವರು. ಬೇಕಾದದು ಒಕ್ಕಟ್ಟು, ರೈತರಿಗೆ ಇದು ತಿಳಿಯಬೇಕು.

ಅಂಕೋಲಾ— (ತಾ. ೨೯-೧೧-೩೫) ಒಬ್ಬ ನಾಗರಿಕರು ತಿಳಿಸುವದೇನೆಂದರೆ:— ಇಲ್ಲಿಯ ಎಜ್ಯುಕೇಶನ ಇಂಗ್ಲಿಷ ಶಾಲೆಯ ಹುಡುಗರಿಗೆ, ಶಿಕ್ಷಕರಿಗೆ ಕ್ರಿಕೆಟ್ ಆಟದ ಹುಚ್ಚೇ ಭಾರ. ಕ್ರಿಕೆಟ್ ಆಟವೇ ಪ್ರಧಾನ ಅಭ್ಯಾಸ ವಿಷಯ. ವಿದ್ಯಾಭ್ಯಾಸ ಗೌಣ ವಿಷಯ. ಕಳೆದ ವರುಷ ಮೆಟ್ರಿಕ್ ಪರೀಕ್ಷೆಯಲ್ಲಿ ೫೦ರೊಳಗೆ ೩ ಜನರು ತೇರ್ಗಡೆ ಹೊಂದಿದ್ದರು. ಈ ಬಾರಿ ಇಷ್ಟು ಜನರು ಹೋದರೆ ಹಿಂದಿನ ೪ ಆದ್ಯಕ್ಷವಾಗಿ ಮುಂದಿನ ಕಡೆಯ ಹುಡುಗರು ತೇರ್ಗಡೆ ಹೊಂದದಿದ್ದರು. ವಿದ್ಯಾರ್ಥಿಗಳು ಕ್ರಿಕೆಟ್, ಫುಟಬಾಲ ಇವುಗಳಲ್ಲಿಯೇ ಕಾಲ ಕಳೆಯುತ್ತಾರೆ. ಆಳಸಾಕ್ ಶಾಲೆಗೆ ಯಾರಾದರೂ ಸಂದರ್ಶಿಸಿದರೆ ಕ್ರಿಕೆಟ್, ಫುಟಬಾಲ ಶಾಲೆಯೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ಈ ಶಾಲೆಯ ಹುಡುಗರಿಗಾಗಲಿ, ಶಿಕ್ಷಕರಿಗಾಗಲಿ ವಿದ್ಯಾಭ್ಯಾಸದ ಒಂದು ಚಟುವಟಿಕೆ ಬಿಟ್ಟು ಉಳಿದ ಎಲ್ಲ ಚಟುವಟಿಕೆಗಳಿವೆ. ದೀಪಾವಳಿಯ ರಜೆ ಮುಗಿಯಿತು. ೧೦-೧೨ ದಿನ ಕ್ರಿಕೆಟ್ ಪ್ರೆಕ್ಟಿಸ್ ಜೋರಿನಿಂದ ನಡೆಯಿತು. ತಾ. ೨೩ನೇಗೆ ಹುಡುಗರು 'ಹಿಪ್ ಹಿಪ್ ಹುರ್ರೇ' ಎಂಬ ಕರ್ಣಕಠೋರ ಅಬ್ಬರದಿಂದ ನಿನಾದ ಮಾಡುತ್ತ ಮೋಟಾರಿನ ಮೂಲಕ ರಾಯಭಾರದಂತೆ ಕಾರವಾರಕ್ಕೆ ತೆರಳಿದರು. ಪೇಟೆಯಲ್ಲಿ ಕೋಲಾಹಲ, ಯಾರ ದಿಗ್ವಿಜಯಕ್ಕೆಂದು ವಿಚಾರಿಸಲು, ಕಾರವಾರದಲ್ಲಿ ಕ್ರಿಕೆಟ್ ಪಂದ್ಯಾಟಕ್ಕೆಂದು ತಿಳಿಯಿತು. ಇವರಿಗೂ ಕಾರವಾರ ಹಿಂದು ಹೈಸ್ಕೂಲಿನವರಿಗೂ ಪಂದ್ಯಾಟ ನಡೆಯಿತು. ಕ್ರಿಕೆಟ್ ಆಟದಲ್ಲಿ ಒಂದೊಂದು ಪಕ್ಷದವರು ೨ ಬಾರಿ ಆಡಬೇಕು. ಕಾರವಾರದವರು ಒಂದು ಬಾರಿ ಆಡಿ ೨ನೇ ಬಾರಿಯಲ್ಲಿ ಬರೀ ೬ ಜನರು ಮಾತ್ರ ಔಟ ಆಗಿ ಆಟ ಮುಗಿಸಿದರು. ಇವರು ೨೫೪ ರನ್ ತೆಗೆದರು. ನಮ್ಮ ಎಜ್ಯುಕೇಶನ ಶಾಲೆಯವರು ಎರಡೂ ಬಾರಿ ಆಡಿ ಅಂತೂ ೩೭ ರನ್ ತೆಗೆಯ

ಬೇಕಾದರೆ ನೂಕಬೇಕಾಯಿತು. ಇಲ್ಲಿಂದ ಸುಮಾರು ೧೦೦ ಮಂದಿ ಶಾಲೆಯ ವಿದ್ಯಾರ್ಥಿಗಳು ಶಾಲಾಭ್ಯಾಸ ಬಿಟ್ಟು ತಮ್ಮ ಶಾಲೆಯ ಕ್ರಿಕೆಟ್ ಪಟುಗಳ ಪರಾಕ್ರಮ ನೋಡಹೋಗಿದ್ದರು. ಎಲ್ಲರೂ ಮೋರೆ ಸಪ್ಪಗೆ ಮಾಡಿಕೊಂಡು ಅಂಕೋಲೆಗೆ ಮರಳಿ ಬಂದರು. ಮರಳಿಬಂದಾಗ 'ಹಿಪ್ ಹಿಪ್ ಹುರ್ರೇ' ನಿನಾದವಾಗಲಿಲ್ಲ. ಕ್ರಿಕೆಟ್ ಆಟದಲ್ಲಿ ಈ ಪ್ರಕಾರ ಸೊನ್ನೆ; ಪರೀಕ್ಷೆಗಳಲ್ಲಿ ಆ ಪ್ರಕಾರ ಸೊನ್ನೆ, ಬಡ ತಾಯಿ-ತಂದೆಗಳೂ, ಪಾಲಕರೂ ತಮ್ಮ ಹುಡುಗರ ಮುಂದಿನ ಉದ್ಧಾರ ಮಾಡುವರೆಂದು ಭಾರೀ ಫೀ ತೆತ್ತು ಇಂಗ್ಲಿಷ ಶಾಲೆಗೆ ಕಳುಹಿದ್ದರಿಂದ ಸಿಗುವ ಪ್ರಯೋಜನವಿದು! ರಾಜಕೀಯ ಚಳವಳಿಯಲ್ಲಿ ಸೇರಿದ್ದರಿಂದ ಹುಡುಗರ ವಿದ್ಯಾಭ್ಯಾಸಕ್ಕೆ ತೊಂದರೆಯೂ ಗುತ್ತವಾಗಿ ಕೋಲಾಹಲ ಎಬ್ಬಿಸಿದವರೆಲ್ಲರೂ ಕಣ್ಮುಚ್ಚಿಕೊಂಡಿದ್ದಾರೆ. ಶಾಲೆಯ ಚಾಲಕರು ಅವಿಚಾರಕ್ಕೆ ಹಾಗಿ ಹುಡುಗರನ್ನು ಕೆಡಿಸಗೊಡಬಾರದು. ಶಿಕ್ಷಕರಿಗೆ ಬುದ್ಧಿ ಹೇಳಬೇಕು. ಬುದ್ಧಿ ಹೇಳುವ ಶಿಕ್ಷಕರಿಗೆ ಬುದ್ಧಿ ಇಲ್ಲದ್ದರಿಂದ ಶಾಲೆಯ ಅವಸ್ಥೆ ಹೀಗಾಗಿದೆ. ಇತ್ಯಾದಿ.

ಕಾರವಾರ— ಜಿಲ್ಲಾ ಲೋಕಲ್ ಬೋರ್ಡ ಕಚೇರಿಯ ಸಮೀಪದಲ್ಲಿರುವ "ರಾಮಚಂದ್ರ ಮನ್ಸಿ"ನಲ್ಲಿ ಈ ಹೊತ್ತು (ರವಿವಾರ ತಾ. ೧-೧೨-೩೫) ಬೆಳಿಗ್ಗೆ ರಾ|| ಸುಬ್ರಾವ ಹೆರೀಪುರಕರರ ಕೈಯಿಂದ, ಅಖಿಲ ಭಾರತೀಯ ಚರಖಾ ಸಂಘದ ಕರ್ನಾಟಕ ಶಾಖೆಯವರು ಏರ್ಪಡಿಸಿದ ಖಾದಿ-ಸಂತೆಯು ತೆರೆಯಲ್ಪಟ್ಟಿತು. ಸಂತೆಯಲ್ಲಿ ಪಂಜಾಬ, ಸಂಯುಕ್ತ ಪ್ರಾಂತ, ಬಿಹಾರ, ಆಂಧ್ರ, ತಮಿಳನಾಡು, ತಿರುಪ್ಪೂರ ಮತ್ತು ಕರ್ನಾಟಕಗಳಲ್ಲಿ ತಯಾರಾದ ತರತರದ ಉದ್ದ ಖಾದಿ, ರೇಶಿಮೆ ವಸ್ತ್ರ, ಶಾಲು, ಕಾಶ್ಮೀರದ ಉಣ್ಣೆಯ ಬಟ್ಟೆಗಳು ಮಾರಾಟಕ್ಕಿಟ್ಟಿವೆ. ಕಳೆದ ಹದಿನೈದು ವರ್ಷಗಳಲ್ಲಿ ಖಾದಿಯಲ್ಲಾದ ಸುಧಾರಣೆಯು ಸಂತೆಯೊಳಗೆ ನೋಡಸಿಗುತ್ತದೆ, ಸಂತೆಯು ಮುಂದಿನ ರವಿವಾರ ಸಂಜೆಯ ತನಕ ನಡೆಯುವದು. ಬೇಕಾದ ಖಾದಿಯನ್ನು ಕೊಂಡುಕೊಂಡು ಬಡಬಗ್ಗರ ಮನೆವಾರ್ತೆ ಉದ್ಯೋಗಕ್ಕೆ ಪ್ರೋತ್ಸಾಹನ ಕೊಡಲಿಕ್ಕೆ, ಸಕ್ರಿಯ ರಾಷ್ಟ್ರಪ್ರೇಮ ತೋರ್ಪಡಿಸಲಿಕ್ಕೆ ಕಾರವಾರ ತಾಲೂಕಿನ ಜನರಿಗೆ ಒಳ್ಳೇ ಸುಸಂಧಿ ದೊರೆತಿದೆ!

ಪದ್ಮಹಸ್ತರೊಬ್ಬರು ತಿಳಿಸುತ್ತಾರೆ:- "ವೃತ್ತ"ದ ಕಳೆದ ಸಂಚಿಕೆಯು ವಿ|| ನಾ. ಅಪ್ಪಾಸೋದವರಿಗೂ ವಿ|| ದಿಸೋಜಾರವರಿಗೂ ಸಂಬಂಧವಿರುತ್ತದಾದ್ದರಿಂದ ಕ್ರಿಮಿನಲ್ ಖಟ್ಲೆಗಳಲ್ಲಿ ಪಕ್ಷಪಾತವಾಗುವ ಸಂಭವ ತೋರುತ್ತದೆಂದು ಪ್ರಕಟವಾದದ್ದು ನಿರಾಧಾರವಾಗಿರುತ್ತದೆ; ಹೋಮ ಅಪ್ಪಾಶೆಟ್ಟರಿಗೂ ಮ್ಯಾಜಿಸ್ಟ್ರೇಟರ ಮುಂದಿನ ಖಟ್ಲೆಗಳಿಗೂ ಎಳ್ಳಷ್ಟು ಸಂಬಂಧವಿರುವದಿಲ್ಲ! ಅವೆಲ್ಲ ಫೌಜದಾರೀ ಕೆಲಸವಿರುತ್ತದೆ! ಹೋಮ ಅಪ್ಪಾಶೆಟ್ಟರು ಡಿ. ಎಸ್. ಪಿ ಯವರ ಕಚೇರಿಯಲ್ಲಿ ಕಾರಕೂನ ಕೆಲಸ ಮಾಡುತ್ತಿದ್ದರುತ್ತದೆ, ಆದ್ದರಿಂದ 'ವೃತ್ತದ' ಬುದ್ಧಿಗಾರನು ಭಯಪಡುವ ಕಾರಣವಿಲ್ಲ ಇತ್ಯಾದಿ.

ಕಾರವಾರ-ಕೋಡಿಬಾಗ ರಸ್ತೆಯ ಮೇಲೆ ಧೂಳಿಯ ಉಪದ್ರವ. ಮ್ಯುನಿಸಿಪಾಲಿಟಿಯವರು ರಸ್ತೆಯ ಮೇಲೆ ನೀರು ಹಾಕುವ ವ್ಯವಸ್ಥೆ ಮಾಡಬೇಕು. ಇಲ್ಲದ್ದರೆ ಮೋಟರು ಬಸ್ಸುಗಳನ್ನಾದರೂ ನಿಲ್ಲಿಸಬೇಕು. ಜನರ ಆರೋಗ್ಯ ದೃಷ್ಟಿಯಿಂದ ಧೂಳು ಏಳದಂತೆ ಉಪಾಯ ಕೈಕೊಳ್ಳಬೇಕು.

ಸಿದ್ದಾಪುರ— ಅಂಕೋಲೆಯಂತೆ ಈ ತಾಲೂಕಿನಲ್ಲೂ ಕರಬಂದಿ ಚಳವಳಿಯಾಗಿತ್ತು. ಅಲ್ಲಿಯಂತೆ ಇಲ್ಲೂ ಸಹ ಅತ್ಯಾಚಾರ-ಅತಿಕ್ರಮಗಳು ಬಹಳ ನಡೆದಿರಬೇಕೆಂತಲೂ, ನಡೆದಿವೆಯೆಂತಲೂ ಅನೇಕರಿಗೆ ಬಹಳ ಸಂಶಯ ಹುಟ್ಟಿಗಿರುತ್ತದೆ; ಸರಕಾರ ವಿಭಾಗದ ಕಲಾಮು ಸಾಹೇಬರು ಅಂಕೋಲೆಯಲ್ಲಿ ಸಾಕ್ಷ್ಯ ಚೌಕಶಿ ನಡೆಸಿದಂತೆ ಈ ತಾಲೂಕಿನಲ್ಲೂ ನಮ್ಮ ಕಲಾಮು ಸಾಹೇಬರು ಚೌಕಶಿ ನಡೆಸಿದರೆ ಉತ್ತಮವಾದೀತು.

ಸತ್ಯಾಗ್ರಹ ಕಾಲದಲ್ಲಿ ತೋರಿಬರುತ್ತಿದ್ದ ಒಂದು ತರದ ಒಕ್ಕಟ್ಟು; ಸಹಕಾರ ಬುದ್ಧಿ, ಬಂಧುಭಾವನೆಗಳು ಈಗ ಬಯಲಾಗಿವೆ! ಸರಕಾರಜಪ್ತಿಯ ಹೊಲ-ಭೂಮಿಗಳನ್ನು ಭಲಗುತ್ತಿಗೆ-ಲಾಗಣಿ ಮುಂತಾದ ಬಗ್ಗೆ ಜನರೇ ಕೊಳ್ಳಲು ತಾತೊರೆಯುತ್ತಾರೆ! ಇದರಿಂದ ಈಗಿನ ಅಧಿಕಾರಿಗಳಿಗೆ ತಮ್ಮ ಪ್ರತಿಷ್ಠೆ ಬೆಳೆಸಲಿಕ್ಕೆ ಬೇಕಷ್ಟು ಅವಕಾಶ ದೊರಕಿದೆ. ಆದ್ದರಿಂದಲೇ ಮೇಲಾಧಿಕಾರಿಗಳು ಕಣ್ಣಲ್ಲಿ ಎಣ್ಣೆ ಹಾಕಿ ಕಾಯಬೇಕಾಗಿದೆ.

ಒಮ್ಮೊಮ್ಮೆ ಫೊರೆಸ್ಟ ಗಾರ್ಡ ಮತ್ತಿತರ ಕಿರಿಕೋಳಿ ಸರಕಾರಿ ನೌಕರರು ಬಡ-ಬಗ್ಗರಿಗೆ ಯಾವ ರೀತಿ ಪೀಡಿಸುತ್ತಾರೆಂಬುದನ್ನು ತಿಳಿಯಬೇಕಾದರೆ ಕೆಲ ದಿನಗಳ ಹಿಂದೆ ಇಲ್ಲಿ ನಡೆದ ಒಂದು ಸಣ್ಣ ಕಥೆಯನ್ನು ಕೇಳಬೇಕು! ಹೊನ್ನಾವರ ಕಸಬಾದೊಳಗಿನ ೧ ಗಣಪತಿ ನಾಯಕ ಮತ್ತು ೨ ನಾರಾಯಣ ಕಣ್ಣಾ ಎಂಬಿಬ್ಬರು ಕಂಗಸದಾರರು ಉದ್ಯೋಗ ಹುಡುಕುತ್ತ ಈ ಊರಿಗೆ ಬಂದಿದ್ದರು! ಎಲ್ಲೂ ಕೆಲಸ ಸಿಗಲಿಲ್ಲ! ಇಲ್ಲಿಯ ಗಿರಣಿಯವನ ಹತ್ತಿರ ಒಂದು ಕೆಲಸ ಬೇಡಿದರು! ಅವನು ಕೆಲಸವಿಲ್ಲೆಂದು ಉತ್ತರ ಕೊಟ್ಟನು! ಆಗ ಗಿರಣಿಯ ಮುಂದುಗಡೆ ಒಂದು ಹಳೇ ನಾಟು ಬಿದ್ದಿತ್ತು! ಅದನ್ನಾದರೂ ಕೊಯ್ಯಲು ಕೊಟ್ಟರೆ ಹಾಕಿರೆಂದು ಕಂಗಸದಾರರು ಗಿರಣಿಯೊಡೆಯನ ಹತ್ತಿರ ಬೇಡಿಕೊಂಡರು! "ಅದಕ್ಕೆ ಪರವಾನಗಿ ಬೇಕು. ಪರವಾನಗಿ ಬಗ್ಗೆ ಅರ್ಜಿ ಮಾಡುತ್ತೇವೆ, ತಡೆಯಿರಿ." ಎಂದು ಗಿರಣಿಯವರು ಹೇಳಿದರು. ಆದರೆ ಕೈಯಲ್ಲಿ ಕಾಸಿಲ್ಲ! ಒಳಿಯಲ್ಲಿ ಕಾಳಿಲ್ಲ! ಕಾವಾವಿಗಿ ಬರುವ ಖಾಲಿ ಹೊಟ್ಟೆಯನ್ನು ಸಹಿಸುವದು ಹೇಗೆ? ಕಂಗಸದಾರರು ಪರವಾನಗಿಯು ಬಾರಿ ಕಾಯದೆ ಸ್ವಲ್ಪವೆಂದು ಕಲಿಸಿನ ತುಂಡು ಕೊಯ್ಯಹತ್ತಿದರು. ಈ ಸಂಗತಿ ಗಾರ್ಡರಿಗೆ ತಿಳಿಯಿತು. ಅವರು ಬಂದು ಪಂಚನಾಮೆ ಮಾಡಿ, ಕಂಗಸವನ್ನು ತೆಗೆದುಕೊಂಡು ಹೋಗಿ ಪಟೇಲರಲ್ಲಿಟ್ಟರು! ಕಂಗಸದಾರರು ಕಂಗಾಲ ಆದರು. ದಂಡಕ್ಕೆ ಹತ್ತರ ಕಾಸಿಲ್ಲ; ತಾಸು ದುಡಿಯುವಾ ಎರಡು ದುಡಿಯುವ ಸಾಧನವಾದ ಕಂಗಸವೂ ಗಾರ್ಡ-ಪಟೇಲರ ತಾಬೆಯಲ್ಲಿ ಹೋಯಿತು! ಕಂಗಸ ಸಿಗುವ ಬಗೆಯೇನು? ಎಂದು ಚಿಂತಿಸುತ್ತ, ದಯಾಳು ಗೃಹಸ್ಥರೊಬ್ಬರ ಸಹಾಯದಿಂದ ಎರಡು ರೂಪಾಯಿ ದಂಡ ಕಟ್ಟಿದರು, ಸರಕಾರಿ ಪಾವತಿ ಗಾರ್ಡರಿಗೆ ತೋರಿಸಿ, ಕಂಗಸ ತಿರುಗಿ ಕೊಡುತ್ತೇನೆಂದು ಗಾರ್ಡರ ವಚನ ತಕ್ಕೊಂಡರು. ಗಾರ್ಡರು ಕಂಗಸ ತಿರುಗಿ ಕೊಡಲಿಕ್ಕೆ ಪಟೇಲರಿಗೆ ಮಾತ್ರ ತಿಳಿಸಿದರು. ಪಟೇಲರೂ ಕಂಗಸದಾರರಿಗೆ ತಮ್ಮ ಮನೆಗೆ ಬರಹೇಳಿದರು! ಅದರಂತೆ ಮಾರನೇ ದಿನ ಮನೆಗೆ ಹೋಗಿ ಪಟೇಲರ ಕಡೆಗೆ ಕಂಗಸ ಬೇಡಲಾಗಿ, "ಗಾರ್ಡರ ಬಾಯಿ ಮಾತು ಉಪಯೋಗವಿಲ್ಲ; ಅವರ ಲೇಖಿ ಚೀಟು ತಕ್ಕೊಂಡು ಬನ್ನಿ." ಎಂದು ಪಟೇಲರ ಹುಕುಮಾಯಿತು! ಪುನಃ ಗಾರ್ಡರಿಗೆ ಹುಡುಕಿ ತೆಗೆದು ಅವರ ಚೀಟು ತಕ್ಕೊಂಡು ಹೋಗಿ ಪಟೇಲರ ಕಡೆಯಿಂದ ಕಂಗಸ ತಿರುಗಿ ಪಡೆಯಬೇಕಾದರೆ ಕಂಗಸದಾರರಿಗೆ ಸಾಕುಬೇಕಾಯಿತು! ಊರಲ್ಲಿ ಹೊಟ್ಟೆಗಿಲ್ಲೆಂದು ಹೊಟ್ಟೆಪಾಡಿಗಾಗಿ ದೇಶಾಂತರಕ್ಕೆ ಹೋದ ಬಡ ಕೂಲಿಯಾಳುಗಳಿಗೆ ಚಿಕ್ಕ-ಕ್ಷುಲ್ಲ ಅಧಿಕಾರಿಗಳು ಪೀಡಿಸಿದರೆ ಅವರ ಗತಿಯೇನು? ಈ ಬಗ್ಗೆ ದೊರೆಗಳ ತನಕ ದೂರು ಒಯ್ಯಲಿಕ್ಕಾದರೂ ಅವರಿಗೆ ಗತಿಯುಂಟೇ? ದೂರು ವಿಚಾರವಾಗುವ ವರೆಗೆ ಅವರಿಗೆ ಹೊಟ್ಟೆಗೆ ಕೊಡುವವರಾರು? ಇದ್ದರಿಂದ ಅರ್ಜಿ ಮುಂತಾದ್ದು ಮಾಡದೆ ಬಡವರ ಕಂಗಸದಾರರು ಸುಮ್ಮಗೆದ್ದು ಮೈಸೂರ ಕಡೆಗೆ ನಡೆದುಬಿಟ್ಟರು! ಪಟೇಲ-ಗಾರ್ಡರು ಮಾಡಿದ್ದು ಕಾಯಿದೆಗೆ ಸಮ್ಮತವೋ, ಅಸಮ್ಮತವೋ ಎಂಬುದು ನಮ್ಮ ಪ್ರಶ್ನೆಯಲ್ಲ. ಬಡಬಗ್ಗರಿಗೆ ಕೆಳಗಿನ ಅಧಿಕಾರಿಗಳು ನಿರ್ದಯತನದಿಂದ ಪೀಡಿಸದಂತೆ ಮೇಲಧಿಕಾರಿಗಳು ವ್ಯವಸ್ಥೆ ಮಾಡಬೇಕಾಗಿಯಷ್ಟೇ ನಮ್ಮ ಸೂಚನೆ ಮಾಡ.

[೭ನೇ ಪಾನಿನಿಂದ ಮುಂದರಿಸಿದ್ದು.]

ಬ್ರಿಟಿಶರ ಯುದ್ಧ ಪೂರ್ವತಯಾರಿ!

ರರಿಗೆ ಒಪ್ಪಿಸಿದರು. ಇಷ್ಟು ಕಠಿಣ ಶಿಕ್ಷೆ ರಾಜಸತ್ತಾಧಾರಿಯವರು ವಿಧಿಸಿ ರಣಹೇಡಿಗಳಿಗೆಲ್ಲ ಮುಂಜಾಗ್ರತೆ ಕೊಟ್ಟಿದ್ದಾರೆ. ಇಜಿಪ್ತ ದೇಶದಲ್ಲಿ ಒಳ್ಳೇ ಆಂದೋಲನ ನಡೆದಿದೆ. ಹಬಶಿ ದೇಶಕ್ಕೆ ದ್ರವ್ಯಸಂಗ್ರಹ ಮಾಡಿಕೊಡುವದಕ್ಕಾಗಿ ಆಣೆಪಟ್ಟಿ-ಎತ್ತುವಳಿಯಾಗುತ್ತದೆ. ಪ್ರತಿಯೊಬ್ಬರೂ ಒಂದೊಂದಾಣೆಯನ್ನು ಈ ನಿಧಿಗೆ ಅರ್ಪಿಸಬೇಕು. ಯಮೆನ್ ದೇಶದವರು ಹಬಶಿ ಜನಾಂಗಕ್ಕೆ ನೆರವಾಗುವ ಸಂಕಲ್ಪ ಮಾಡಿದ್ದಾರೆ. ವಾರ್ತೆಗಳನ್ನು ಯಥಾರ್ಥವಾಗಿ ತಿಳಕೊಳ್ಳುವದೇ ಕಠಿಣ. ಇಂಥ ಸಂದರ್ಭದಲ್ಲಿ ಕೈಸೇರಿದ ವಾರ್ತೆಗಳನ್ನು ಕಲೆಹಾಕಿದ್ದೇನೆ. ಬ್ರಿಟಿಶರ ಯುದ್ಧ ತಯಾರಿ ಮುಗಿದು ಪ್ರತ್ಯಕ್ಷ ಯುದ್ಧಪ್ರಾರಂಭವಾದ ಬಳಿಕ ಸಾಧಾರ ವಾರ್ತೆಗಳು ಸಿಗಬಹುದಾಗಿ ನನಗೊಂದು ಆಶೆ!"

— ಪ್ರಾಂತಿಕ ಭೂಭದ್ರಬೇಂಕು ಸದ್ಯಕ್ಕೆ ಪ್ರಾರಂಭವಾಗುವದು. ಈ ಬೇಂಕಿನಲ್ಲಿ ೧೫ ಮಂದಿ ಡಾಯರೆಕ್ಟರರು. ಇವರಲ್ಲಿ ೬ ಮಂದಿ ಶೇರುದಾರರಿಂದ ಆರಿಸಲ್ಪಟ್ಟವರು; ೫ ಮಂದಿ ಜಿಲ್ಲಾ ಭೂಭದ್ರಬೇಂಕುಗಳಿಂದ ಆರಿಸಲ್ಪಟ್ಟವರು. ರಿಜಸ್ಟ್ರಾರರಿಂದ ನೇಮಿಸಲ್ಪಟ್ಟವರಿಬ್ಬರು. ಪ್ರಾಂತಿಕ ಸಹಕಾರಿ ಬೇಂಕಿನಿಂದ ಆರಿಸಲ್ಪಟ್ಟವರೊಬ್ಬರು. ಸ್ವತಃ ರಿಜಸ್ಟ್ರಾರರು ಒಬ್ಬರು. ಹೀಗೆ ೧೫ ಮಂದಿಗಳು ಡಾಯರೆಕ್ಟರ ಮಂಡಳದಲ್ಲಿರುವರು. ರಾ|| ಮುಧೋಳಕರರವರು ಮೆನೆಜಿಂಗ ಡಾಯರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

[ಈ ಹೊತ್ತಿನ ಪುರವಣಿಗಳನ್ನು ನೋಡಿರಿ.]

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರತ್ತುಗಳೂ ಬಹಳ ಸೋಯಿಯುಳ್ಳವು ಇವೆ, ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ,

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents.
D. K. Nayak Bros.
D. S. Pai
K. N. Nayak.
Honavar Agent:-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು!

[೫ನೇ ಪಾನಿನಿಂದ ಮುಂದರಿಸಿದ್ದು.]

ಶಿಖರವನ್ನೇರಿದ ದಾಕ್ಷ್ಯ ಲೋಕಾದರಕ್ಕೆ ಪಾತ್ರವಾದ ರಾಷ್ಟ್ರ! ಸಂಕಟ ಕಾಲದಲ್ಲಿ ಪ್ರಜೆಗಳು ಹೇಗೆ ನಡಕೊಳ್ಳಬೇಕೆಂದು ಮುಸೊಲಿನಿಯವರು ವಿಧಿಸಿದ್ದಾರೆ. ಜನಸಾಮಾನ್ಯರು ತಕ್ಕ ಬೋಧ ಪಡೆದು ಸಂಯಮಿಗಳಾಗಿ ವರ್ತಿಸಿ ಸಂಪದಭ್ಯುದಯ ಮಾಡಿಕೊಂಡಲ್ಲಿ ಇಟಾಲಿ–ಹಬಸಿ ವಾದದಿಂದ ಹಿಂದುಸ್ಥಾನಕ್ಕೆ ಉಪಕಾರವಾದಂತೆಯೇ!

* * *

೧೯೪೪–೪೫ನೇ ಸಾಲಿನ 'ಇಂಡಿಯನ್ ಸ್ಟೋರ್ಸ ಡಿಪಾರ್ಟಮೆಂಟ' ಇಲಾಖೆಯ ವರದಿ ಪ್ರಕಟವಾಗಿದೆ. ಸರಕಾರಿ ಕೆಲಸಗಳಿಗೆ ತಗಲುವ ಸರಕುಗಳನ್ನು ಕೊಂಡುಕೊಳ್ಳುವದಕ್ಕಾಗಿ ಈ ಖಾತೆ ಏರ್ಪಡಿಸಲಾಗಿದೆ. ೧೯೪೪–೪೫ನೇ ಸಾಲಿನಲ್ಲಿ ೧೧೪೪೪೪ ಪವನುಗಳ ಸರಕು ಖರೀದಿಯಾಯಿತು. ನೋಟುಗಳಿಗಾಗಿ ಕಾಗದ ತರಿಸಲು ಅರ್ಧ ಲಕ್ಷ ಪವನು; ದಿಲ್ಲಿಯೊಳಗಿನ ಬ್ರೊಡಕಾಸ್ಟಿಂಗ ಯಾನೆ ಆಕಾಶವಾಣಿ ಠಾಣ್ಯ ಕಟ್ಟಿಸುವದಕ್ಕಾಗಿ ೧೬॥ ಸಾವಿರ ಪವನಿನ ಯಂತ್ರಸಾಮಗ್ರಿ ಖರೀದಿಯಾಯಿತು. ೮॥ ಲಕ್ಷ ಪವನಿನ ಸಾಮಾನುಗಳಿಗಾಗಿ ಜಾಹೀರಾತು ಕೊಟ್ಟು ಟೆಂಡರು. ೪॥ ಲಕ್ಷ ಪವನಿನ ಸರಕಿಗೆ ಜಾಹೀರಾತು ಇಲ್ಲದೆ ಟೆಂಡರುಗಳು. ೬ ಲಕ್ಷ ಪವನಿನ ಸಾಮಾನು ಬ್ರಿಟಿಶ ಸರಕಾರದ ಯುದ್ಧ ಇಲಾಖೆಯಿಂದ ಖರೀದಿ. ಇಂಗ್ಲಂಡದೊಳಗೆ ಟೆಂಡರುಗಳಿಂದ ೪॥ ಲಕ್ಷ ಪವನಿನ ಸಾಮಾನು ಖರೀದಿಯಾಯಿತು. ಬ್ರಿಟಿಶ ಕಾರಖಾನೆಯವರ ಕಡೆಯಿಂದ ಅಂತು ೧೦॥ ಲಕ್ಷ ಪವನು ಸಾಮಾನಿನ ಖರೀದಿಯಾಯಿತು. ವಿದೇಶಿ ಕಾರಖಾನೆಯವರ ಕಡೆಯಿಂದ ೧–೧॥ ಲಕ್ಷ ಪವನುಗಳ ಸಾಮಾನು ಖರೀದಿಯಾಯಿತು. ಫಿನ್‌ಲೆಂಡದಿಂದ ೪॥ಸಾವಿರ ಪವನಿನ ಕಾಗದ ತರಿಸಲ್ಪಟ್ಟಿತು. ಅಂತು ಸಾಮಾನು ಬಂದದ್ದು ೧೬ ಸಾವಿರ ಟನ್ನು. ಇದರೊಳಗೆ ೧೪॥ ಟನ್ನು ಸರಕು ಬ್ರಿಟಿಶ ಬಂದರದೊಳಗಿಂದ. ೭೭ ಟನ್ನು ಸಾಮಾನು ಅಮೇರಿಕೆಯ ಬಂದರದೊಳಗಿಂದ. ೧೩೩ ಟನ್ನು ಸರಕು ಬ್ರಿಟಿಶೇತರ ಯುರೋಪ ಖಂಡದೊಳಗಿನ ಬಂದರಗಳೊಳಗಿಂದ. ಇದರ ಮೇಲಿಂದ ಹಿಂದುಸ್ಥಾನ ಸರಕಾರದ ಸರಕು ಖರೀದಿ ಇಲಾಖೆಯವರು ಬ್ರಿಟಿಶ ಕಾರಖಾನೆಯವರಿಗೆ ಕೊಡುವ ರಾಜಾಶ್ರಯದ ಕಲ್ಪನೆ ಬಂದೀತು. ಹಿಂದುಸ್ಥಾನ ಸರಕಾರದ ಸರಕು ಇಲಾಖೆಯವರು ವಿಚಾರ ಮಾಡಿ ಹಿಂದೀ ಕಾರಖಾನೆಯವರಿಗೇ ಆಶ್ರಯ ಕೊಡಬೇಕಾಗಿ ವಿನಂತಿ.

* * *

ಕಾಳು–ಕಡಿಗಳ ದರ ಇನ್ನೂ ಸುಧಾರಿಸದು; ಮತ್ತೂ ದರ ಕುಗ್ಗುತ್ತಿದೆ. ಹಿಂದುಸ್ಥಾನ ಸರಕಾರವು ಕಳೆದ ವಾರದಲ್ಲಿ ೧೯೪೪–೪೫ನೇ ಸಾಲಿನ ವ್ಯಾಪಾರ ವರದಿಯನ್ನು ಪ್ರಕಟಿಸಿದೆ. ಅದರೊಳಗೆ ಬೇಸಾಯ ಜಿನಸುಗಳ ದರ ಬಹುವಾಗಿ ಕುಗ್ಗಿತೆಂದು ಅಭಿಪ್ರಾಯಪಟ್ಟಿದೆ. ಬ್ರಹ್ಮದೇಶದಲ್ಲಿ ಅಕ್ಕಿಯ ದರ ಹೇರಳವಾಗಿ ಇಳಿಯಿತು. ೧೯೩೮–೩೯ನೇ ಸಾಲಿನ ದರಕ್ಕೂ ವರದಿಯ ಸಾಲಿನ ದರಕ್ಕೂ ಶೇಕಡಾ ೬೯ರಷ್ಟು ಕಡಿಮೆ; ಅಂದರೆ ಅರ್ಧಕ್ಕೂ ಕಡಿಮೆಯಾಗಿ ದರ ಬಂತು. ಬಂಗಾಲ ಇಲಾಖೆಯಲ್ಲಿ ಶೇಕಡಾ ೫೯, ಬಿಹಾರ ಪ್ರಾಂತದಲ್ಲಿ ಶೇಕಡಾ ೬೦ರಂತೆ ದರ ಕುಗ್ಗಿತು. ಮದ್ರಾಸ ಇಲಾಖೆಯಲ್ಲಿ ಮುಖ್ಯ ಬೆಳೆ ಅಕ್ಕಿ, ನೆಲಗಡ್ಲೆಯದು. ಇವುಗಳ ಬೆಲೆ ಶೇಕಡಾ ೫೪ರಂತೆ ಇಳಿಯಿತು. ಮುಂಬಯಿಯಲ್ಲಿ ಶೇಕಡಾ ೫೦, ಪಂಜಾಬದಲ್ಲಿ ಶೇಕಡಾ ೪೮, ಮಧ್ಯಪ್ರಾಂತದಲ್ಲಿ ಶೇ. ೫೭ರಂತೆ ದರ ಇಳಿಯಿತು. ಎಲ್ಲ ಪ್ರಾಂತಗಳ ಸರಾಸರಿ ತೆಗೆದಲ್ಲಿ ಶೇಕಡಾ ೫೬॥ಯಂತೆ ದರ ಇಳಿಯಿತು. ೧೯೩೮–೩೯ನೇ ಸಾಲಿನಲ್ಲಿ ಬೇಸಾಯಗಾರರಿಗೆ ೧ ರೂಪಾಯಿ ಸಿಗುವ ಸರಕಿಗೆ ೧೯೪೪–೪೫ನೇ ಸಾಲಿನಲ್ಲಿ ೭–೮ ಆಣೆ. ಸರಕಾರಿ ವ್ಯಾಪಾರದ ವರದಿ ಹೇಳುತ್ತಿದೆ ಈ ಅಂಕೆಗಳು ಬೋಧಪ್ರದವಿವೆ. ಕಾಳು–ಕಡಿಗಳ ದರ ಇಳಿದ ಪ್ರಮಾಣದಿಂದ ಕಾರಖಾನೆಗಳ ಸರಕುಗಳ ದರ ಇಳಿಯಲಿಲ್ಲವೆಂತಲೂ ಸರಕಾರಿ ರಿಪೋರ್ಟಿನ ಅಂಬೋಣ. ಮೇಲಾಗಿ ರಫ್ತಿಗಿಂತ ಆಮದು ಮಿಗಿಲಾಯಿತು. ಅಂದರೆ ೧೧॥ ಕೋಟಿ ರೂಪಾಯಿಗಳ ಸರಕು ಹೆಚ್ಚಾಗಿ ಆಮದಾಯಿತು. ಅಂದರೆ ೧೯೪೪–೪೫ನೇ ಸಾಲಿನಲ್ಲಿ ಹಿಂದದೇಶದ ಬಡತನ ೧೧॥ ಕೋಟಿಯಿಂದ ಮಿಕ್ಕಿತು. ಹಿಂದದೇಶದವರು ಸಂಪಾದನೆಗೆ ಮಿಕ್ಕಿ ಖರ್ಚು ಮಾಡಿದರು. ಬೇಸಾಯಗಾರರ ಅವಸ್ಥೆ ಈ ಅಂಕೆಗಳ ಮೇಲಿಂದ ಗ್ರಹಿಕೆಯಾಗುವಂತಿದೆ. ಉತ್ಪತ್ತಿಯಲ್ಲಿ ರೂಪಾಯಿಗೆ ೮ ಆಣೆ! ಖರ್ಚು ಆ ಮಾನದಿಂದ ಇಳಿಯದೆ ಕಷ್ಟ! ಮೇಲಾಗಿ ತೀರ್ವೆಯನ್ನು ನಾಣ್ಯದಿಂದಲೇ ತೆರಬೇಕಾದ್ದರಿಂದ ಇವ್ಮಡಿ ತೀರ್ವೆ ತೆತ್ತಂತಾಗುತ್ತಿದೆ. ೧೯೪೪–೪೫ನೇ ಸಾಲಿನಲ್ಲಿ ಮುಂಬಯಿ ಸರಕಾರವು ರೂಪಾಯಿಗೆ ೨ ಆಣೆಯಂತೆ ಭೂಕಂದಾಯದಲ್ಲಿ ಸೂಟು ಕೊಟ್ಟಿತು. ರೂಪಾಯಿಗೆ ೨ ಆಣೆಯಂತೆ ಸೂಟು ಬಿಟ್ಟಾಗ್ಯೂ ಸರಕಾರವು ರೂಪಾಯಿಗೆ ೧೪ ಆಣೆಯಂತೆ ತೀರ್ವೆ ವಸೂಲ ಮಾಡಿದಂತಾಯಿತು. ಅಂದರೆ ರೂಪಾಯಿಗೆ ೮ ಆಣೆಯಂತೆ ತೀರ್ವೆ ವಸೂಲಿ ಪಡೆಯಲು ಸರಕಾರಕ್ಕೆ ಹಕ್ಕಿದ್ದು ಸರಕಾರವು ಆ ಪ್ರಕಾರ ನಡಕೊಳ್ಳದೆ ಶೇಕಡಾ ೭೫ರಂತೆ ತೀರ್ವೆಯನ್ನೇರಿಸಿ ಪಡೆಯಿತೆಂದು ಸ್ಪಷ್ಟವಾಗುತ್ತಿದೆ. ಬೇಸಾಯಗಾರರಿಗೆ ಸರಕಾರವು ಕಷ್ಟಕಾಲದಲ್ಲಿ ನೆರವಾಗುವ ಗೊತ್ತೈಗೇ ಉಳಿಯಿತು. ಯಾವದೇ ವರ್ಷದಲ್ಲಿ ಸರಕಾರಕ್ಕೆ ಶೇಕಡಾ ೭೫ರಂತೆ ತೀರ್ವೆ ಏರಿಸಲು ಅಧಿಕಾರವಿಲ್ಲ. ಇದ್ದ ತೀರ್ವೆಯ ಮಾನ ವಿಪರೀತವಿದೆ. ಅದು ಯೋಗ್ಯವೆಂತ ಎಣಿಸಿದಾಗ್ಯೂ ಬೇಸಾಯ ಜಿನಸುಗಳ ದರ ಅರ್ಧಕ್ಕಿಳಿದಾಗ ಸರಕಾರವು ತೀರ್ವೆಯ ಮಾನವನ್ನು ಅರ್ಧಕ್ಕಿಳಿಸಿ ವಸೂಲಿಯ ಕ್ರಮ ನಡಿಸುವದು ಲೇಸು. ಈಗಲೂ ಬೆಳೆಯ ದರ ಸುಧಾರಿಸಲಿಲ್ಲ. ಕಳೆದ ವರ್ಷ ರೂಪಾಯಿಗೆ ೧೪ ಆಣೆಯಂತೆ ವಸೂಲಾದ ತೀರ್ವೆಯೊಳಗಿಂದ ೬ ಆಣೆಯನ್ನು ಈ ವರ್ಷದ ಲೆಖ್ಖಕ್ಕೆ ಹಿಡಿದು ಜಿನಸುಗಳ ಮಾನದಿಂದ ಈ ವರ್ಷದ ತೀರ್ವೆಯನ್ನು ಇಳಿಸಿ ಲೆಖ್ಖಾಚಾರದಂತೆ ಸಲ್ಲಬೇಕಾದ ತೀರ್ವೆಯನ್ನಷ್ಟೇ ವಸೂಲಾಗುವಂತೆ ಹುಕುಮುಗಳನ್ನು ಹೊರಡಿಸಬೇಕಾಗಿ ಮುಂಬಯಿ ಸರಕಾರಕ್ಕೆ ನಮ್ರ ಸೂಚನೆ. ಬೇಸಾಯಗಾರನನ್ನು ಸರಕಾರವು ಸರ್ವರೀತಿಯಿಂದಲೂ ರಕ್ಷಿಸಲು ಬದ್ಧವಿದೆ. ಆತನ ಸ್ಥಿತಿ ಸರಕಾರದ ಮುಖ್ಯ ವಿಚಾರವಿಷಯವೆಂದೂ ಅದನ್ನು ಅಲಕ್ಷ್ಯ ಮಾಡಿದ್ದಲ್ಲಿ ಅನರ್ಥವಾಗುವದಾಗಿಯೂ ಲೋಕದೊಳಗಿನ ಅರ್ಥಶಾಸ್ತ್ರಜ್ಞರನೇಕರು ಅಭಿಪ್ರಾಯಪಟ್ಟಿದ್ದಾರೆ. ಬೇಸಾಯಗಾರನು ಕೃಷಿ-ಕರ್ಮ ಮಾಡಿ ರಾಷ್ಟ್ರಸೇವೆಯನ್ನೇ ಮಾಡುತ್ತಾನಾಗಿ ಅಮೇರಿಕೆಯ ಬೇಸಾಯ ಕಮಿಶನರರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ಸರಕಾರಿ ಸೆಂಟ್ರಲ್ ಬೇಂಕಿಂಗ ಎನ್‌ಕ್ವಾಯರಿ ಕಮೀಟಿಯವರು ಒಪ್ಪಿಕೊಂಡು ಆತನ ಅಭಿವೃದ್ಧಿಯಾಗುವಂತೆ ಸರಕಾರದ ರಾಜ್ಯಧೋರಣ ನಡೆಯಬೇಕಾಗಿಯೂ ಅಭಿಪ್ರಾಯಪಟ್ಟಿದ್ದಾರೆ. ಮದ್ರಾಸ ಸರಕಾರದ ಅಪ್ಪಣೆ ಘೋರೆಗ ಬೇಸಾಯಗಾರರ ಸ್ಥಿತಿ

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ !!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರೆನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯುಂಟು. ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತನಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಶ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸಹಿ:— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

ಪಂಚಾಂಗಕರ್ತರಿಗೆ—

೨೫|೧೧|೩೫ ಉಗ್ರ ಇವರು ಮೈಸೂರಿನಲ್ಲಿ ಕಳೆದ ವರ್ಷ ಸೇರಿದ ಅಖಿಲ ಕರ್ನಾಟಕ ಜ್ಯೋತಿಷಿಕ ಸಮ್ಮೇಲನದ ನಿರ್ಣಯಗಳನ್ನು ಕಳಿಸಿದ್ದಾರೆ. ಸಮ್ಮೇಲನವಾಗಿ ಒಂದು ವರ್ಷ ಮುಕ್ಕಿತೆನೋಸಿತು. ಆದರೆ ಸಮ್ಮೇಲನದ ಸಮಿತಿಯವರು ಕೈಕೊಂಡ ನಿರ್ಣಯವು ಈಗಲೂ ತಿಳಕೊಳ್ಳುವದವಶ್ಯವಿದ್ದದರಿಂದ ಅವರ ಪತ್ರದ ಸಾರಾಂಶ ನಮೂದಿಸಿ ವಿಚಾರಿಸುವದವಶ್ಯ. ಮೈಸೂರು ನಗರದ ಪೌರಸಭಾಮಂದಿರದಲ್ಲಿ ತಾ. ೧೩-೧೦-೩೪ನೇಯಿಂದ ೪ ದಿನಗಳ ವರೆಗೆ ಸೇರಿದ ಸಭೆ ಜ್ಯೋತಿಷ ಶಾಸ್ತ್ರದ ದೃಷ್ಟಿಯಿಂದ ಮಹತ್ವದ್ದು. ಪಂಚಾಂಗ ವಾದದ ನಿರ್ಣಯಕ್ಕೂ ಅನುಕೂಲವಾದುದು. ಮೈಸೂರಿನ ಸದ್ಧರ್ಮ ಪರಿಪಾಲಕ ಶ್ರೀಮನ್ಮಹಾರಾಜರು ಉದಾರಾಶ್ರಯ ಕೊಟ್ಟು ಸಮ್ಮೇಲನಕ್ಕೆ ಆಶೀರ್ವದಿಸಿದರು. ಶ್ರೀಮದ್ಯುವರಾಜರವರು ಪರಮ ಔದಾರ್ಯದಿಂದ ಸಮ್ಮೇಲನದ ನಾಂದಿ ಸಮಾರಂಭವನ್ನು ನೆರವೇರಿಸಿದರು. ಖಗೋಲಶಾಸ್ತ್ರನೇತ್ರರೂ, ಮದ್ರಾಸ ಹೈಕೋರ್ಟಿನ ನ್ಯಾಯಾಧೀಶರಾದ ಸರ್ ವೇ. ಪಾ. ರಾಮೇಶಂರವರು ಸಮ್ಮೇಲನದ ಅಧ್ಯಕ್ಷರು. ಸಮ್ಮೇಲನದಲ್ಲಿ ಅಖಿಲ ಕರ್ನಾಟಕದಿಂದಲೂ, ಹಿಂದುಸ್ಥಾನದ ಬೇರೆಬೇರೆ ಭಾಗಗಳಿಂದಲೂ ಜ್ಯೋತಿಷಿಗಳೂ, ವಿದ್ವಾಂಸರೂ ಚಿತ್ತೈಕ್ಯ ಒಳ್ಳೇ ಚರ್ಚೆ ನಡಿಸಿದರು. ಆದರೆ ಮಹಾಸಮ್ಮೇಲನದಲ್ಲಿ ಸಕಲ ವಿದ್ವಾಂಸರು, ಜ್ಯೋತಿಷಿಗಳ ವಿವಾದದಿಂದ ನಿರ್ಣಯ ಕೈಕೊಳ್ಳುವದು ಕಠಿಣವಾದ್ದರಿಂದಲೂ ಸಮ್ಮೇಲನಕ್ಕೆ ಕಳುಹಿದ ತಜ್ಞರ ನಿಬಂಧಗಳನ್ನೆಲ್ಲ ಪರಿಶೀಲಿಸಿ ನಿರ್ಧಾರ ಕೈಕೊಳ್ಳು ಕಠಿಣವಾದ್ದರಿಂದಲೂ ಸಮ್ಮೇಲನದವರು ೯ ವಿದ್ವನ್ಮಣಿಗಳ ವಿಶೇಷ ಸಮಿತಿಯನ್ನೇರ್ಪಡಿಸಿ ಯಾವತ್ತು ನಿಬಂಧಗಳ, ಉಪನ್ಯಾಸಗಳ ವಿಚಾರ ಮಾಡಿ ಹೊರಟ ಪ್ರಶ್ನೆಗಳನ್ನು, ಆ ಪ್ರಶ್ನೆಗಳಿಗೆ ಬೇರೆ ಬೇರೆ ಪ್ರಾಂತದವರು ಸೂಚಿಸಿದ ಪರಿಹಾರಗಳನ್ನೂ ಪ್ರಮಾಣಗಳನ್ನೂ ಆಲೋಚಿಸಿ ಪಂಚಾಂಗ ಸಿದ್ಧಾಂತಗಳನ್ನು ಸ್ಥಾಪಿಸಬೇಕಾಗಿ ಮಹಾಸಮ್ಮೇಲನದವರು ಅಪ್ಪಣೆ ಕೊಟ್ಟರು. ಅದರಂತೆ ೯ ವಿದ್ವನ್ಮಣಿಗಳ ಮಂಡಳದವರು ಪಂಚಾಂಗಕ್ಕೆ ಸಂಬಂಧಪಟ್ಟ ಯಾವತ್ತೂ ವಿಷಯಗಳನ್ನು ಕೂಲಂಕುಷವಾಗಿ ವಿಚಾರಿಸಿ ಕೈಕೊಂಡ ನಿರ್ಣಯಗಳ ವಿವರವೇನಂದರೆ:- (೧) ಪಂಚಾಂಗಗಳಲ್ಲಿ ಮುಖ್ಯವಾಗಿ ಎರಡು ಪಕ್ಷಗಳು. ಒಂದು ರೈವತ ಪಕ್ಷ; ಇನ್ನೊಂದು ಚೈತ್ರ ಪಕ್ಷ. ರೇವತಿ ನಕ್ಷತ್ರದಿಂದ ೧೮೦ ಅಂಶದ ಮೇಲೆ ವಿಶ್ವಬಿಂದು ಹಿಡಿದು ಅಯನಾಂಶಗಳನ್ನು ನಿರ್ಣಯಿಸಬೇಕಾಗಿ ರೈವತ ಪಕ್ಷದ ಸಿದ್ಧಾಂತ. ಚಿತ್ರಾ ನಕ್ಷತ್ರದಿಂದ ೧೮೦ ಅಂಶದ ಮೇಲೆ ವಿಶ್ವಬಿಂದು ಹಿಡಿದು ಅಯನಾಂಶಗಳನ್ನು ನಿರ್ಣಯಿಸಬೇಕಾಗಿ ಚೈತ್ರ ಪಕ್ಷದವರ ಅಂಬೋಣ. ರೈವತ ಪಕ್ಷ ಮನ್ನಿಸಿ ಟಿಳಕ ಪಂಚಾಂಗ ತಯಾರಾಗುತ್ತದೆ; ಚೈತ್ರ ಪಕ್ಷ ಮನ್ನಿಸಿ ಕೇತಕರ ಪಂಚಾಂಗ ತಯಾರಾಗುತ್ತದೆ. ರೈವತ ಪಕ್ಷಕ್ಕಿಂತ ಚೈತ್ರ ಪಕ್ಷವೇ ಸುಸಂಬದ್ಧವಾದದ್ದು; ಹಿಂದು ಖಗೋಲಶಾಸ್ತ್ರ ಸಂಪ್ರದಾಯಕ್ಕೆ ಅನುಗುಣವಾದದ್ದು; ಅದರಿಂದ ಅಯನಾಂಶ ನಿರ್ಧಾರಕ್ಕೆ ಚೈತ್ರ ಪಕ್ಷವನ್ನೇ ಸ್ವೀಕರಿಸಬೇಕೆಂದು ವಿಶೇಷ ಸಮಿತಿಯವರ ನಿರ್ಣಯ. (೨)-(೩) ತಿಥ್ಯಾದಿಸಾಧನದಲ್ಲಿ ರವಿ-ಚಂದ್ರರಿಗೆ ಬೀಜಸಂಸ್ಕಾರ ಅವಶ್ಯಕ. ಇದನ್ನು ಪ್ರಾಚೀನ ಹಿಂದು ಜ್ಯೋತಿಷಾಚಾರ್ಯರು ಒಪ್ಪಿರುವರಾಗಿ ವಿಶೇಷ ಸಮಿತಿಯವರ ಅಭಿಪ್ರಾಯ. ಬೀಜ ಸಂಸ್ಕಾರವೆಂದರೆ ಕಾಲಮಾನದಂತೆ ರವಿ-ಚಂದ್ರರ ಅಂಶಗಳಲ್ಲಿ ಮಾಡತಕ್ಕ ತಿದ್ದುಪಡಿ. ರವಿ-ಚಂದ್ರರ ಕುರಿತು ಪ್ರಾಚೀನ ಜ್ಯೋತಿಷಾಚಾರ್ಯರು ಅಂಶಗಳನ್ನು ನಿರ್ಣಯಿಸಿ ಈಗ ೧೪೦೦ ವರ್ಷಗಳಾದವು. ಅವುಗಳನ್ನೇ ಅವಲಂಬಿಸಿ ತಿಥಿಗಳನ್ನು ಪಂಚಾಂಗಕರ್ತರು ಈಗಲೂ ನಿರ್ಣಯಿಸುತ್ತಾರೆ. ಬಾಣವೃದ್ಧಿರಸಕ್ಷಯ ಎಂಬದೊಂದು ನಿಬಂಧಕಾರರ ಸಿದ್ಧಾಂತ. ಪ್ರತಿಯೊಂದು ತಿಥಿ ಅಂದರೆ ದಿನ ಸಾಮಾನ್ಯವಾಗಿ ೨೪ ತಾಸಿನದು: ೬೦ ಘಳಿಗೆಯದು. ದಿನಮಾನದಲ್ಲಿ ಹೆಚ್ಚು-ಕಡಿಮೆಯಾಗುತ್ತದೆ. ಹೆಚ್ಚೆಂದರೆ ೫ ಘಳಿಗೆ, ಕಡಿಮೆ ಎಂದರೆ ೬ ಘಳಿಗೆ; ಹೀಗೆ ಈ ಸಿದ್ಧಾಂತದ ಅಭಿಪ್ರಾಯ. ಅಂದರೆ ಯಾವದೇ ತಿಥಿ ೬೫ ಘಳಿಗೆಗೆ ಮಿಕ್ಕಿರಬಾರದು; ೫೪ ಘಳಿಗೆಗೆ ಕುಗ್ಗಿರಬಾರದು. ಈ ಸಿದ್ಧಾಂತವಾಗಿ ೧೪೦೦ ವರ್ಷಗಳಾದವು ಪ್ರತ್ಯಕ್ಷವಾಗಿ ಕೆಲವು ತಿಥಿಗಳು ೬೫ ಘಳಿಗೆಗೆ ಮಿಕ್ಕುತ್ತವೆ; ೫೩ ಘಳಿಗೆಗೆ ಕುಗ್ಗುತ್ತವೆ. ಆದಾಗ್ಯೂ ೬೫-೫೪ರೊಳಗೇ ತಿಥಿಗಳನ್ನು ಹಿಡಿಯುತ್ತಾರೆ. ರವಿ-ಚಂದ್ರರಿಗೆ ಬೀಜಸಂಸ್ಕಾರವಿಲ್ಲದ್ದರಿಂದ ತಿಥಿಗಳ ಕಾಲ ಲೆಖ್ಖದಲ್ಲಿಯೂ ಪ್ರತ್ಯಕ್ಷ ತಿಥಿಗಳ ಅವಧಿಯಲ್ಲಿಯೂ ಹೆಚ್ಚು-ಕಡಿಮೆಯಾಗುತ್ತದೆ. ಕಾಲಗತಿಗನುಸಾರವಾಗಿ ರವಿ-ಚಂದ್ರರಿಗೆ ಬೀಜಸಂಸ್ಕಾರ ಮಾಡಿಕೊಂಡು ತಿಥಿಗಳ ಗಣಿತ ಮಾಡಬೇಕಾಗಿ ವಿದ್ವನ್ಮಣಿಗಳ ನಿರ್ಣಯ. (೪) ಭಮಧ್ಯ-ಭೂಮಧ್ಯಗಳಿಗೆ ಭೇದವಿರಕೂಡದು. ಅವೆರಡೂ ಒಂದೇ ಎಂದು ಭಾವಿಸಿ ಗಣಿತ ಮಾಡಬೇಕು. ಸಮಸ್ತ ಖಗೋಲಶಾಸ್ತ್ರಜ್ಞರೂ ಭಮಧ್ಯ-ಭೂಮಧ್ಯಗಳ ಅಭೇದವನ್ನೊಪ್ಪಿದ್ದಾರೆ. ಭಮಧ್ಯವೆಂದರೆ ತಿಥ್ಯಾದಿ ಗಣಿತಕ್ರಮಕ್ಕೆ ಬೇಕಾಗುವ ಬಿಂದು; ಭೂಮಧ್ಯವೆಂದರೆ, ಗ್ರಹಣಾದಿ ಗಣಿತಕ್ರಮಕ್ಕೆ ಬೇಕಾಗುವ ಬಿಂದು. ಈಗಿನ ಪಂಚಾಂಗಕರ್ತರು ತಿಥ್ಯಾದಿಗಳ ಗಣಿತವನ್ನು ಪುರಾತನ ಲೆಖ್ಖದಂತೆ ಮಾಡುತ್ತಾರೆ; ಅಂದರೆ ರವಿ-ಚಂದ್ರರಿಗೆ ಬೀಜಸಂಸ್ಕಾರ ಮಾಡದೆ ಮಾಡುತ್ತಾರೆ. ಈ ಗಣಿತದಂತೆ ಗ್ರಹಣಲೆಖ್ಖ ಮಾಡಿದ್ದಲ್ಲಿ ಪ್ರತ್ಯಕ್ಷ ಗ್ರಹಣ ಕಾಲಕ್ಕೂ ಗಣಿತದಂತೆ ಬರುವ ಕಾಲಕ್ಕೂ ವ್ಯತ್ಯಾಸ ಕಂಡು ಇದೇ ಪಂಚಾಂಗ ತಪ್ಪೆಂಬ ಜನರ ಭಾವನೆಯಾಗಿರುವದರಿಂದ ಗ್ರಹಣ ಕಾಲದ ನಿರ್ಣಯದ ಪೂರ್ತಿ ಭೂಮಧ್ಯಗಣಿತವನ್ನು ಅನುಸರಿಸುತ್ತಾರೆ. ಭೂಮಧ್ಯಗಣಿತವೆಂದರೆ ರವಿ-ಚಂದ್ರರಿಗೆ ಕಾಲಗತಿಯಂತೆ ಬೀಜಸಂಸ್ಕಾರ ಮಾಡಿಕೊಂಡು ಮಾಡಿದ ಗಣಿತ. ಭಮಧ್ಯ ಮತ್ತು ಭೂಮಧ್ಯ ಗಣಿತಗಳಲ್ಲಿ ಬಿಂದುಭೇದವಾಗದೆ ಭಮಧ್ಯದ ಬಿಂದುವೇ ಭೂಮಧ್ಯದ ಬಿಂದುವಾಗಿರಬೇಕೆಂತಲೂ ತಿಥ್ಯಾದಿ ಕಾಲನಿರ್ಣಯವೂ ಗ್ರಹಣಕಾಲ ನಿರ್ಣಯವೂ ಒಂದೇ ಬಿಂದುವಿನ ಲೆಖ್ಖದಿಂದ ನಿರ್ಣಯಿಸಬೇಕೆಂತಲೂ ವಿಶೇಷ ಸಮಿತಿಯ ನಿರ್ಣಯ. (೫) ಹಿಂದುಖಗೋಲಶಾಸ್ತ್ರಪರಿಣತರೂ, ಹೊಸ ಖಗೋಲಶಾಸ್ತ್ರ ಪರಿಣತರೂ ಸಹಕರಿಸಿ ಪ್ರಮಾಣಭೂತವಾದ ಹಿಂದು ಪಂಚಾಂಗವನ್ನು ನಿರ್ಮಿಸಬೇಕು. (೬) ಮೈಸೂರು ನಗರದಲ್ಲಿ ಶೀಘ್ರದಲ್ಲಿಯೇ ಒಂದು ವೇಧಯಂತ್ರಶಾಲೆಯನ್ನು ಸ್ಥಾಪಿಸಬೇಕು. ಈ ಯಂತ್ರಶಾಲೆಯೊಳಗಿಂದ ಸಿಗುವ ವೇಧಜ್ಞಾನದ ಮೇಲಿಂದ ಪಂಚಾಂಗ ಪ್ರಕಟನೆಯನ್ನು ಕೈಕೊಳ್ಳಬೇಕು. ಈ ಪಂಚಾಂಗ ಶಾಸ್ತ್ರಶುದ್ಧವಾಗುವದರಿಂದ ಪಂಚಾಂಗಕರ್ತರೊಳಗೆ ಏಕಾಭಿಪ್ರಾಯವಾಗಲು ಒಳ್ಳೇ ಅನುಕೂಲವಾಗುವದಾಗಿ ವಿಶೇಷ ಸಮಿತಿಯವರು ಸೂಚಿಸಿದ್ದಾರೆ. ಸಮಿತಿಯವರು ವಿಚಾರಮಾಡತಕ್ಕ ೪೦ ಪ್ರಬಂಧಗಳನ್ನು ತಮ್ಮ ನಿರ್ಣಯದ ಜೊತೆಗೆ ಪ್ರಕಟಿಸಿದ್ದಾರೆ. ಸಮಿತಿಯ ವೃತ್ತಾಂತ, ಸಮ್ಮೇಲನದ ವೃತ್ತಾಂತ ಮೊದಲಾದ ವಿವರವುಳ್ಳ ಗ್ರಂಥವು ಸದ್ಯಕ್ಕೇ ಪ್ರಕಟವಾಗಿದೆ. ಇದರ ಬೆಲೆ ೧ ರೂಪಾಯಿ. ಪಂಚಾಂಗಕರ್ತರು ಹೊಸ ಪರಿಸ್ಥಿತಿಗನುಸಾರವಾಗಿ ತಮ್ಮ ತಮ್ಮ ಪಂಚಾಂಗಗಳನ್ನು ಸುಧಾರಿಸುವ ವಿಚಾರ ಮಾಡಿದ್ದಲ್ಲಿ ಧರ್ಮಶಾಸ್ತ್ರಗಳು ವಿಧಿಸಿದ ಧರ್ಮಕಾರ್ಯಗಳು ಸಕಾಲದಲ್ಲಿ ಜರುಗಿ ಧಾರ್ಮಿಕರಿಗೆ ಧರ್ಮಕಾರ್ಯಗಳ ಶ್ರೇಯಸ್ಸು ದೊರೆಯುವಂತಿದೆ. ಪಂಚಾಂಗಕರ್ತರು ತಿಥ್ಯಾದಿಗಳಿಗೆ ಒಂದು ಲೆಖ್ಖ, ಗ್ರಹಣಗಳಿಗೆ ಒಂದು ಲೆಖ್ಖ; ಹೀಗೆ ಹಿಡಿಯುವದರ ಮೇಲಿಂದ ಖಗೋಲದೊಳಗಿನ ಪ್ರತ್ಯಕ್ಷ ಗ್ರಹಸ್ಥಿತಿಗೂ ತಿಥ್ಯಾದಿಗಳಿಗೂ ಭೇದ ಉಂಟಾಗುತ್ತದೆಂಬ ಸಂಗತಿ ಸ್ಪಷ್ಟವಿದೆ. ಈಗಿನ ಪಂಚಾಂಗಗಳು ಸರಿಯಾಗಿಲ್ಲ; ಅವುಗಳಲ್ಲಿ ತಿದ್ದುಪಡಿಯಾಗಬೇಕು; ಎಂಬ ಸಂಗತಿ ಸಹ ಸ್ಪಷ್ಟವಿದೆ. ಪಂಚಾಂಗಕರ್ತರು ವಿಚಾರ-ಮಾಡತಕ್ಕ ವಿಷಯ. ಕ ಮದನಮೋಹನ ಮಾಲವೀಯರವರ ಅಧ್ಯಕ್ಷತೆಯಲ್ಲಿ ಇಂದೂರಿನೊಳಗೆ ಸೇರಿದ ಅಖಿಲ ಭಾರತೀಯ ಜ್ಯೋತಿಷಿಕ ಸಮ್ಮೇಲನದವರು ಇಂದೂರಿನ ಜ್ಯೋತಿಷತೀರ್ಥ ಪಂಡಿತ ನೀಲಕಂಠ ಮಂಗಲಜಿ ಜೋಶಿಯವರಿಗೆ ಈಗಿನ ಕಾಲಮಾನಕ್ಕುಚಿತವಾದ ಪಂಚಾಂಗವನ್ನು ತಯಾರಿಸಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ. ಇದೇ ಪ್ರಕಾರ ಅಖಿಲ ಕರ್ನಾಟಕ ಜ್ಯೋತಿಷಿಕ ಸಮ್ಮೇಲನದವರು ತಾವು ನೇಮಿಸಿದ ವಿದ್ವನ್ಮಣಿಗಳ ವಿಶೇಷ ಸಂಗತಿಯ ನಿರ್ಣಯಗಳಿಗನುಸಾರವಾಗಿ ಪಂಚಾಂಗವನ್ನು ಪ್ರಕಟಿಸುವ ವ್ಯವಸ್ಥೆ ಮಾಡುವದು ಲೇಸು.

* * *

— ಇಂದೂರಿನ ಶೇಟ ಸರ್ ಸ್ವರೂಪಚಂದ ಹುಕುಮಚಂದರವರಿಗೆ ೬೫ ವರುಷ ಪ್ರಾಯವಾಯಿತು. ಅವರು ಸದ್ಯಕ್ಕೆ ತಮ್ಮ ಹೀರಕ ಮಹೋತ್ಸವವನ್ನು ನೆರವೇರಿಸಿದರು. ಐಶ್ವರ್ಯವಂತ ಪುರುಷರು; ಧರ್ಮಾತ್ಮರು; ಧಾರ್ಮಿಕರು; ದಿಗಂಬರ ಜೈನ ಪಂಥದವರು. ಪ್ರಮುಖರು. ಈತನಕ ಇವರು ಧರ್ಮ ಮಾಡಿದ ರಕಮು ಅರ್ಧ ಕೋಟಿಗೆ ಮಿಕ್ಕುತ್ತದೆ. ಐಶ್ವರ್ಯವಂತರು ಶೇಟ ಹುಕುಮಚಂದರವರಂತೆ ಧರ್ಮಬುದ್ಧಿ ಹಿಡಿದು ವರ್ತಿಸಿದ್ದಲ್ಲಿ ಹಿಂದಭೂಮಿಯೊಳಗಿನ ಕಷ್ಟ ಕೆಲ ಮಟ್ಟಿಗೆ ನಿವಾರಣೆಯಾಗುವಂತಿದೆ. ಸರ್ ಹುಕುಮಚಂದರವರು ದೀರ್ಘಾಯುಗಳಾಗಲಿ.

ಗೋಮಾಂತಕ ಚಾಂಬಾವಲಿ ಸಂಸ್ಥಾನದ
ಶ್ರೀ ದಾಮೋದರ ದೇವರ
ಭಾವಚಿತ್ರಗಳು
ಈ ಕೆಳಗಿನ ಪತ್ತೆಯ ಮೇಲೆ ಮಾರಲಿಗುತ್ತವೆ:
ಬೆಲೆ ೧ ರೂಪಾಯಿ
ಪತ್ತೆ:- **ಪುರುಷೋತ್ತಮ ಲಕ್ಷ್ಮಯ್ಯ**
ಶ್ಯಾನಭಾಗ ಮಕಾನ, **ಕುಮಟಾ.**
ದಾಮೋದರ ನಾಗಪ್ಪ ಶ್ಯಾನಭಾಗ
ಸ್ಟೇಶನರಿ ಮಕಾನ, **ಕಾರವಾರ.**
ಯಶವಂತ ವಿಷ್ಣು ನಾಯಕ ಬೊಂಬಿ,
ಮರ್ಚಂಟ್, **ಮಡಗಾಂವ-ಗೋವಾ.**
ವೆಂಕಟೇಶ ರವಳ ಕಾಮತ,
ದಲಾಲ, **ವಾಸ್ಕೋಡಿಗಾಮಾ-ಗೋವಾ.**
ಕಾಶೀನಾಥ ದಾಮೋದರ ನಾಯಕ, ದಲಾಲ,
ಅನಂತ ಬಿಲ್ಡಿಂಗ, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ಒಂದಿಷ್ಟು !

ಪಂಢರಪುರದಲ್ಲಿ ಕಾರ್ತಿಕ ಏಕಾದಶಿ ಜಾತ್ರೆ ಮುಗಿಯಿತು. ಕಾರ್ತಿಕ ಶುದ್ಧ ೬ರ ಶನಿವಾರಕ್ಕೆ ವರ್ಷಾಸನದಂತೆ ಶ್ರೀ ರುಕ್ಮಿಣಿ-ಪಾಂಡುರಂಗ ದೇವಸ್ಥಾನಗಳನ್ನು ವರ್ಷಾಸನದಂತೆ ಸ್ವಚ್ಛಗೊಳಿಸಿ ಎರಡೂ ದೇವಸ್ಥಾನಗಳಲ್ಲಿ ರುದ್ರಾಭಿಷೇಕ, ಪವಮಾನಾಭಿಷೇಕ ಮೊದಲಾದ ವಿಧಿ ನಡೆಸಿ ಪ್ರಕ್ಷಾಲನಪೂಜೆ ಸಮಾರಂಭವೂ ಒಳ್ಳೇ ಸಡಗರದಿಂದ ನೆರವೇರಿಸಲ್ಪಟ್ಟಿತು. ಅಂದಿನಿಂದ ಶ್ರೀ ದೇವಸ್ಥಾನದಲ್ಲಿ ನಿತ್ಯಕ್ರಮಕ್ಕೆ ಪ್ರಾರಂಭವಾಗಿದೆ. ಈ ಜಾತ್ರೆಗೆ ೧ ಲಕ್ಷಕ್ಕೆ ಮಿಕ್ಕಿ ಜನಸಂದಣಿ ಸೇರಿತ್ತು. ತಲೆಪಟ್ಟಿ ರೂ. ೩೨೬೪-೧೨-೦ ಆಗಿದೆ. ತಲೆಗೆ ೪ ಆಣೆ ಪಟ್ಟಿ ತೆರಬೇಕು. ಈ ಲೆಕ್ಕದಂತೆ ೧೩೦೫೯ ಜನರು ಶ್ರೀ ಪಾಂಡುರಂಗದೇವರ ದರ್ಶನ ಪಡೆದು ಕೃತಕೃತ್ಯರಾದರು. ಕಳೆದ ವರ್ಷಕ್ಕಿಂತ ಈ ವರ್ಷದ ಜಾತ್ರೆಗೆ ಜನರು ಹೆಚ್ಚು. ಕಳೆದ ವರ್ಷ ತಲೆಪಟ್ಟಿ ೩೦೭೩-೪-೦ ರೂ. ಆಗಿತ್ತು. ಅಂದರೆ ಸರಾಸರಿ ೮-೧೦ ಸಾವಿರ ಜನರು ಈ ವರ್ಷ ಹೆಚ್ಚಿದ್ದರು.

* * *

ಕ್ರಿಕೆಟ್ ಆಟ ಪರದೇಶಿ ಮತ್ತು ಅರಾಷ್ಟ್ರೀಯವಿದ್ದು ವರ್ಜನೀಯವಿದ್ದುದರಿಂದ ಅದನ್ನು ಬಹಿಷ್ಕರಿಸಬೇಕಾಗಿ ಅಹಮದಾಬಾದದೊಳಗಿನ ನಾಗರಿಕರು ನಿರ್ಣಯಿಸಿದ್ದಾರೆ. ಅಹಮದಾಬಾದದಲ್ಲಿ ಆಸ್ಟ್ರೇಲಿಯಾದಿಂದ ಬಂದ ಕ್ರಿಕೆಟ್ ಸಂಗಡದವರು ಆಡಹೋಗುವ ಸಂದರ್ಭದಲ್ಲಿ ಜನರು ಅನುಸರಿಸಬೇಕಾದ ಧೋರಣವನ್ನು ನಾಗರಿಕರು ಸ್ಪಷ್ಟ ಮಾಡಿದ್ದಾರೆ. ಆಸ್ಟ್ರಿಯಾ ದೇಶದ ಕ್ರಿಕೆಟ್ ಸಂಗಡದ ವಿಷಯ ಚಮತ್ಕಾರವಿದೆ. ಈ ಸಂಗಡವನ್ನು ಪಟಿಯಾಲಾ ಮಹಾರಾಜರವರು ಆಸ್ಟ್ರೇಲಿಯಾದಿಂದ ತರಿಸಿ ಹಿಂದುಸ್ಥಾನದೊಳಗೆ ಆಡಿಸುತ್ತಿದ್ದಾರೆ. ಸಾವಿರಾರು ರೂಪಾಯಿ ಖರ್ಚನ್ನು ಪಟಿಯಾಲಾ ಮಹಾರಾಜರವರೇ ಪೂರೈಸುತ್ತಿದ್ದಾರೆ. ಮುಂಬಯಿಯೊಳಗೆ ಅಖಿಲ ಭಾರತೀಯ ಹಿಂದೀ ಸಂಗಡದವರು ಪಟಿಯಾಲಾ ಯುವರಾಜರ ನೇತೃತ್ವದಲ್ಲಿ ಡಿಸೆಂಬರ ೫ನೇ ತಾರೀಖಿಗೆ ಆಸ್ಟ್ರೇಲಿಯಾ ಸಂಗಡದವರಿಗೆ ಎದುರಾಗುವರು. ತಂದೆ ತರಿಸಿದ ಸಂಗಡದವರಿಗೆ ಮಗನಿದಿರಾಗುವ ನೋಟ ಚಿತ್ತವೇಧಕವಲ್ಲವೇ? ದೇಶದಲ್ಲಿ ದಾರಿದ್ರ್ಯ ಹಬ್ಬಿಕೊಂಡಾಗ ಆ ಕುರಿತು ವಿನಿಯೋಗ ಮಾಡಲು ಇದ್ದಷ್ಟು ಹಣ ಸಾಲದಾಗ ಆಸ್ಟ್ರೇಲಿಯಾದಿಂದ ಪರದೇಶಿ ಆಟಗಾರರನ್ನು ತರಿಸಿ ಸ್ವಂತ ಖರ್ಚಿನಿಂದ ಆಡಿಸುವದು ಶೋಚನೀಯವಲ್ಲವೇ? ಹಿಂದಭೂಮಿಯ ದುರ್ದೈವವಲ್ಲವೇ? ಇಂಥ ಆಟಗಳನ್ನು ಬಹಿಷ್ಕರಿಸಬೇಕಾಗಿ ಅಹಮದಾಬಾದದವರು ಕೈಕೊಂಡ ನಿರ್ಣಯ ತೀರ ಸಮಯೋಚಿತವಾದದ್ದು. ದೇಶದೊಳಗೆ ದೇಶೀ ವಿನೋದ ಸಾಧನೆಗಳೇ ಇಲ್ಲವೇನು?

* * *

ಭಾವನಗರ ಸಂಸ್ಥಾನಿಕರು ವಿಹಾರಪರ್ಯಟನಕ್ಕಾಗಿ ಲಂಡನ್ನಿಗೆ ತೆರಳಿದ್ದರು. ೭ ವಾರ ಉಳಿದುಕೊಂಡು ಹಿಂದಭೂಮಿಗೆ ಮರಳಿದರು. ಇವರ ಪ್ರಾಯ ೨೪ ವರುಷ. ೮ ಸಾವಿರ ಪವನುಗಳ ಸರಕು ಖರೀದಿ ಮಾಡಿ ತಂದಿದ್ದಾರೆ. ಪ್ರಯಾಣ ಖರ್ಚು ಪ್ರತ್ಯೇಕ. “ಸಂಸ್ಥಾನಿಕರು ದೊಡ್ಡವರಲ್ಲ. ಒರೇ ೩ ಸಾವಿರ ಚದರ ಮೈಲು ಪ್ರದೇಶದ ಒಡೆಯರು. ೫ ಲಕ್ಷ ಪ್ರಜೆಗಳ ಅಧಿಪತಿಗಳು. ವರ್ಷಾಸನ ೭॥ ಲಕ್ಷ ಪವನುಗಳ ಉತ್ಪನ್ನವಿದೆ. ಇವರ ಖರ್ಚು ದುಂದುಗಾರಿಕೆಯದು.” ಎಂಬರ್ಥದಿಂದ ಲಂಡನ್ನಿನೊಳಗಿನ ‘ಸಂಡೇ ಎಕ್ಸಪ್ರೆಸ್’ ಪತ್ರಿಕೆಯು ಚೇಷ್ಟೆ ಮಾಡುತ್ತಿದೆ. ಮಹಾರಾಜರ ಸರಕು ತುಂಬಿದ ಸಂದೂಕಗಳಿಗೆ ಹೇರು ಒಯ್ಯಲು ಒಬ್ಬರಿಗೆ ೩ ದಿನಗಳು ತಗಲಿದವು. ಇವರು ೯ ನಾಯಿಗಳನ್ನು ಕೊಂಡಿದ್ದಾರೆ. ೧ಕ್ಕೆ ೨೫ ಪವನು; ೧ಕ್ಕೆ ೧೦೦ ಪವನು. ಇವುಗಳಿಗಾಗಿ ಪ್ರತ್ಯೇಕ ಪ್ರತ್ಯೇಕ ಪಂಜರಗಳು. ೫೦ ನಮೂನೆಯ ಸೂಟು ಯಾನೆ ಪೋಷಾಕುಗಳನ್ನು ಖರೀದಿ ಮಾಡಿದರು. ಮಹಾರಾಣಿಯವರು ೧೨ ಉಡಿಗೆಗಳನ್ನೂ ವಸ್ತ್ರಗಳನ್ನೂ ಕೊಂಡು ತಂದರು. ಅನೇಕ ಪಾತ್ರೆಗಳ ಖರೀದಿಯಾಯಿತು. ಬಾನಾವಳಿಯವರಿಗೆ ಇನಾಮು ಹಂಚಿದರು. ಒಬ್ಬ ಚಾಕರನಿಗೆ ೨೫ ಪವನು ಬೆಲೆಯ ಒಂದು ಚಿನ್ನದ ಗಡಿಯಾರವನ್ನು ಕೊಟ್ಟರು. ಹುಡುಗರಿಗಾಗಿ ಆಟದ ಸಾಮಾನು ಕೊಂಡ ಲೆಕ್ಕವಿಲ್ಲ. ಈ ದುಂದುಗಾರಿಕೆ ನೋಡಿ ಅಂಗಡಿಕಾರರು ಚಕಿತರಾದರಾಗಿ ‘ಸಂಡೇ ಎಕ್ಸಪ್ರೆಸ್’ ಪತ್ರಿಕೆಯು ಬರೆಯುತ್ತಿದೆ. ನಷ್ಟ ದುಡ್ಡು ಕೊಟ್ಟು ನಾವು ಮೂರ್ಖರೆಂದು ಲೋಕದಲ್ಲಿ ಹೇಳಿಸಿಕೊಳ್ಳುವ ಸಂಸ್ಥಾನಿಕರಂಥ ದಕ್ಷ ಜನರು ನಮ್ಮ ಹಿಂದುಸ್ಥಾನದಲ್ಲಿಯೇ ದೊರಕಬೇಕು. ಬ್ರಿಟಿಶ ಅಂಗಡಿಯವರು ಲಾಭ ಪಡೆದು ಕುಚೇಷ್ಟೆ ಮಾಡುತ್ತಾರೆ. ಇದು ವಿಪರೀತವಲ್ಲವೇ? ಸಂಸ್ಥಾನಿಕರಿಗೆ ಯಾಕೆ ಸದ್ಬುದ್ಧಿ ಬರಬಾರದು?

* * *

ಜರ್ಮನಿಯೊಳಗಿನ ಪ್ರಜೆಗಳ ಕಷ್ಟನಿವಾರಣೆಯ ಪ್ರಕಾರವನ್ನು ನಾವು ತಿಳಿಕೊಂಡಿರುವದವಶ್ಯ. ಜರ್ಮನಿಯಲ್ಲಿ ಉದ್ಯೋಗ ಸಿಗದೆ ಕಷ್ಟಪಡುವವರ ಸಂಖ್ಯೆ ಹೆಚ್ಚು. ಅವರಿಗಾಗಿ ಜರ್ಮನ್ ಸರಕಾರವು ಜನರ ಕಡೆಯಿಂದ ದ್ರವ್ಯನಿಧಿ ಕೂಡಿಸುತ್ತಿದೆ, ತರತರದಿಂದ ಕೂಡಿಸುತ್ತಿದೆ. ಆತ್ಮಸಂತೋಷದಿಂದ ಹಣ ಕೊಡಬೇಕೆಂದು ಸರಕಾರಿ ಪ್ರಕಟಣೆ. ಆದರೆ ನಡೆಯುವದೆಲ್ಲ ಒತ್ತಾಯದ್ದು. ಇದೇನು ದೊಡ್ಡ ಮಾತಲ್ಲ. ಹಿಂದೀ ಪ್ರಜೆಗಳು ಸಂತೋಷ ವೇಷದಿಂದ ನಡೆಸುವ ಒತ್ತಾಯಗಳನ್ನೆಲ್ಲ ಒಲ್ಲದ ಮನಸು. ಅದಿಂತಿರಲಿ. ವಾರಕ್ಕೆ ಒಂದು ದಿನ ಒಪ್ಪತ್ತಿದ್ದು ಎರಡನೇ ಊಟದ ಖರ್ಚನ್ನು ಸರಕಾರಕ್ಕೆ ತೆರಬೇಕು. ಬಾನಾವಳಿಯವರು ಜನರಿಗೆ ಒಂದು ಊಹೆ ಹಾಕಿ ಎರಡು ಊಟದ ಖರ್ಚು ಎತ್ತುವಳಿ ಮಾಡಿ ಒಂದು ಊಟದ ಖರ್ಚನ್ನಿಟ್ಟುಕೊಂಡು ಎರಡನೇ ಊಟದ ಖರ್ಚನ್ನು ಸರಕಾರಕ್ಕೆ ತುಂಬಬೇಕು. ಪಂಡಿತ ಜವಾಹಿರಲಾಲರಿಗೆ ಇದೇ ಪ್ರಕಾರ ಜರ್ಮನಿಯೊಳಗಿನ ನಿರುದ್ಯೋಗಿಗಳಿಗಾಗಿ ಒಪ್ಪತ್ತುಣ್ಣುವ ಪ್ರಸಂಗ ಬಂತು. ಹಿಂದುಸ್ಥಾನದೊಳಗಿನ ವಿದ್ಯಾರ್ಥಿಗಳು ಸ್ವಸುಖಕ್ಕಾಗಿ ದಿನಾ ೧-೨ ರೂಪಾಯಿಗಳನ್ನು ಸಹಜ ಖರ್ಚು ಮಾಡುತ್ತಾರೆ. ಒಂದೊಂದು ಬಿಲ್ಲೆಯನ್ನು ಇಟ್ಟು ದೇಶಕಾರ್ಯಕ್ಕೆ ಅರ್ಪಿಸಬಾರದೇನೆಂದು ಪಂಡಿತ ಜವಾಹಿರಲಾಲರು ಬರೆದ ಈ ಸಂಗತಿಯನ್ನು ಉಲ್ಲೇಖಿಸಿ ‘ಹರಿಜನ’ ಪತ್ರಿಕೆಯಲ್ಲಿ ಶ್ರೀ| ಮಹಾದೇವಭಾಯಿ ದೇಸಾಯಿಯವರು ಪ್ರಶ್ನಿಸುತ್ತಾರೆ.

ಸಾಭಾರ ಸ್ವೀಕಾರ.

ಪೋವಳಾಂ— [ಪ್ರಕಾಶಕ:- ಶ್ರೀ| ಜಯವಂತ ವಾಸುದೇವ ಕುಲಕರ್ಣಿ, ಕೊಂಕಣಿ ಸಾಹಿತ್ಯ ಸಂಘ, ಗಿರಗಾಂವ-ಮುಂಬಯಿ, ಬೆಲೆ ೮ ಆಣೆ.] ಮುಂಬಯಿಯಲ್ಲಿ ಕೊಂಕಣಿ ಭಾಷೆಯ ಅಭಿಮಾನಿಗಳು ಕೊಂಕಣಿ ಸಾಹಿತ್ಯ ಸಂಘವನ್ನೇರ್ಪಡಿಸಿ ಕೊಂಕಣಿ ಸಾಹಿತ್ಯ ತಯಾರಿಸುವ ಸಂಕಲ್ಪ ಮಾಡಿದ್ದಾರೆ. ‘ಪೋವಳಾಂ’ ಇದು ಮೊದಲನೇ ಪುಸ್ತಕ. ಕೊಂಕಣಿ ಭಾಷೆಗೆ ಪ್ರತ್ಯೇಕ ಲಿಪಿ ಇಲ್ಲ. ಇಂಗ್ಲಿಷ, ಕನ್ನಡ, ಮರಾಠಿ ಹೀಗೆ ಮೂರು ಲಿಪಿಗಳಲ್ಲಿ ಕೊಂಕಣಿ ಭಾಷೆಯ ಪುಸ್ತಕಗಳು ತಯಾರಾಗುತ್ತಿವೆ. ಈ ಭಾಷೆಯನ್ನು ರತ್ನಾಗಿರಿ, ಗೋವಾಂತಕ, ದಕ್ಷಿಣೋತ್ತರ ಕನ್ನಡ ಪ್ರದೇಶದಲ್ಲಿ ಮಾತಾಡುತ್ತಾರೆ. ಮರಾಠಿಯಲ್ಲಿ ‘ಎ’ಕಾರವಿಲ್ಲ, ಇದಕ್ಕಾಗಿ ಗ್ರಂಥದವರು ದೀರ್ಘ ಏಕಾರದ ಚಿನ್ಹವನ್ನು ತಿರುಗಿಸಿ ಎಕಾರ ಮಾಡಿದ್ದಾರೆ. ‘ಪೋವಳಾಂ’ದೊಳಗಿನ ಕಥೆಗಳು ನಿತ್ಯ-ವ್ಯವಹಾರದೊಳಗಿನವು ಇದ್ದು ಆಹ್ಲಾದದಾಯಕವಿವೆ. ‘ಆಗೋ ಗಂಗಾ’, ‘ದೇವಸ್ಥಾಲೆಂ ಸವಳೆಂ’ ಮೊದಲಾದ ಕಥೆಗಳನ್ನೋದಿದರೆ ಒಳ್ಳೇ ವಿನೋದವಾಗುತ್ತದೆ. ಕೊಂಕಣಿ ಭಾಷೆಯವರು ಈ ಪುಸ್ತಕವನ್ನು ಓದಿ ಸ್ವಭಾಷೆಯ ಸಾಹಿತ್ಯಕ್ಕೆ ಪ್ರೋತ್ಸಾಹಕೊಡಬೇಕಾಗಿ ವಿನಂತಿ.

ಕಂಠೀರವ (ವಿಶೇಷ ಸಂಚಿಕೆ, ಮಂಗಳೂರು)- ‘ಕಂಠೀರವ’ಕರ್ತರು ದಸರೆಯ ಪ್ರೀತ್ಯರ್ಥ ಹೊರಡಿಸಿದ ಸಂಚಿಕೆ ವಾಚನೀಯವಿದೆ. ಉಡುಪಿಯ ಶ್ರೀ| ಎನ್. ರಾಜಗೋಪಾಲಕೃಷ್ಣರಾಯರ ‘ಗಂಡನಂತೆ ಹೆಂಡತಿ’ ಎಂಬ ಲೇಖ ಈಗಿನ ದಿನಮಾನದಲ್ಲಿ ಗಂಡ-ಹೆಂಡರ ನಡವಳಿಕೆಯನ್ನು ನಿಶ್ಚಯಿಸಿ ಸಂಸಾರವನ್ನು ಸುಖಮಯ ಮಾಡಲು ತೀರ ಅನುಕೂಲವಾಗುವಂತಿದೆ. ಗಂಡ-ಹೆಂಡಿರು ಭಿನ್ನ ಭಿನ್ನ ಪರಂಪರೆಯವರಿದ್ದಾಗ ಗಂಡನು ಹೆಂಡತಿಯ ಮನಸ್ಸೊಲಿಸುವದಕ್ಕಾಗಿ ತನ್ನ ಕುಲ ಪರಂಪರೆಯನ್ನು ತ್ಯಜಿಸದೆ ಅವಳಿಗ ತನ್ನ ಕುಲ ಪರಂಪರೆಯೊಳಗೆ ಸೇರಿಸಿಕೊಂಡು ಸುಖವಾಗುವ ನಮೂನೆಯನ್ನು ಚಿತ್ತವೇಧಕವಾಗಿ ವರ್ಣಿಸಿದ್ದಾರೆ. ಕೋಲಾರದ ಶ್ರೀ| ಗೋಪಾಲರಾಯರು ‘ ಹೊಲೆಯೋ, ಕೊಳೆಯೋ? ಎಂಬ ಲೇಖದಲ್ಲಿ ಪುರಾತನ ಸಂಪ್ರದಾಯದ ಅಜ್ಞ ಹೆಂಗಸರ ಗಡಿಬಿಡಿಯಿಂದ ಉಂಟಾದ ಅನರ್ಥವನ್ನು ವರ್ಣಿಸಿದ್ದಾರೆ. ಶ್ರೀ| ಪಂಜೆ ಮಂಗೇಶರಾಯರ ‘ಹಳೇ ಸಬಅಸಿಸ್ಟಂಟರ ಸುಳ್ಳು ಡೈರಿಯಿಂದ ’ ಎಂಬ ಲೇಖದಲ್ಲಿ ಪ್ರಾಥಮಿಕ ಶಿಕ್ಷಕರ ತರತರದ ಕಷ್ಟಗಳನ್ನೂ, ಬೇರೆ ಬೇರೆ ಪ್ರಕಾರದ ಚಟುವಟಿಕೆಗಳನ್ನೂ ವಿನೋದದಿಂದ ವರ್ಣಿಸಿ ಅವರ ಸ್ಥಿತಿಯನ್ನು ಪ್ರಮುಖರು ಸುಧಾರಿಸಲು ಯತ್ನಪಡಬೇಕಾಗಿ ಅತ್ಯಾಗ್ರಹದಿಂದ ಸೂಚಿಸಿದ್ದಾರೆ. ಶ್ರೀ| ಕಟಪಾಡಿ ಶ್ರೀನಿವಾಸ ಶೆಣೈ, ಆಲೂರ ವೆಂಕಟರಾವ, ಡಾ| ಪಿ. ಬಿ. ಶೆಟ್ಟಿ, ಪಂಡಿತ ತಾರಾನಾಥ, ಶ್ರೀ| ಎಮ್. ಎನ್. ಕಾಮತ, ಪಂಡಿತಾ ರಮಾಬಾಯಿ ಮೊದಲಾದವರ ವಿವಿಧ ವಿಷಯಗಳ ಮೇಲಿನ ವಾಚನೀಯ ಲೇಖಗಳಿವೆ. ವಿಮೆ, ಬ್ಯಾಂಕು ಮೊದಲಾದ ಮಾಹಿತಿಯೂ, ಮೈಸೂರಿನ ರಾಜ್ಯಭಾರ, ಕೈಗಾರಿಕೆ ಮೊದಲಾದವುಗಳ ಮಾಹಿತಿಯೂ ಇವೆ. [illegible] ವಿದ್ವಾಂಸರಾದ ನ್ಯಾಯತೀರ್ಥ ಶ್ರೀ| ಪಿ. ಶಾಂತರಾಜ ಶಾಸ್ತ್ರಿಗಳವರು ಶ್ರೀ ಗೋಮಟೇಶ್ವರ ವಿಗ್ರಹದ ಕಥೆಯನ್ನು ಸವಿಸ್ತರವಾಗಿ ವರ್ಣಿಸಿದ್ದಾರೆ. ಸಂಚಿಕೆಯು ವಾಚನೀಯವಿದೆ; ಸಂಗ್ರಾಹ್ಯವಿದೆ.

NOTICE.

THE SIRSI ELECTRIC LICENCE, 1935.

The Public are hereby informed that the undersigned has applied to the Government of Bombay for license to supply electric energy to the public of Sirsi. The copy of the draft license can be had from the undersigned on payment of annas 8/—. Copy of the plan can be seen at the Sirsi Municipal office or in the office of the Laxmi Rice Mill, Sirsi. All those who have any representation to make should do so in writing to the Secretary to the Government P. W. D., Bombay, within three months, from the date of publication.

Address:—
The Laxmi Rice Mill,
Sirsi. N. KANARA.

ANANT SUBRAO KASARKOD,
Managing Proprietor,
Sirsi Electric Supply Co.

DRAFT.

The Sirsi Electric License, 1935.

License for the supply of electrical energy granted by the Government of Bombay under the Indian Electricity Act, 1910.

License. License is hereby granted to Anant Subrao Kasarkod, L. M. E., of Sirsi to supply electrical energy in the area with the powers, and upon the terms and conditions all specified below

1. Short Title. This License may be cited as "The Sirsi Electric License, 1935."

2. Interpretation. The several words, terms and expressions which have been defined in the Indian Electricity Act, 1910 or the Rules made there-under, shall have in this license the same respective meaning provided that:—

(1) The "Rules" shall mean the Rules made under the act;

(2) The Expression "**The Licensee**" shall mean and include the said Mr. A. S. Kasarkod, L. M. E., and his permitted assigns;

(3) The expression "Deposited Map" shall mean the plan of the area of supply as herein-after specified, which is deposited with Government, in pursuance of the rules, which plan is signed, for the purpose of identification, by the Joint-Secretary, to the Government of Bombay in the Public Works Department and by the licensee.

(4) The expression "the commencement of this license" shall mean the date of the notification by the Government of Bombay in the Bombay Government Gazette by whom this license is granted.

and

(5) the term "Government" shall mean the Government of Bombay.

3. Security. (1) The period within which the licensee shall show under sub-clause (*a*) of clause I of the Schedule * the Act that he is in a position fully to discharge the duties and obligations imposed upon him by the license throughout the area of supply, shall, unless otherwise ordered by Government under clause (*b*) of sub-section 3 of section 4 of the Act, be six months from the commencement of this license.

(2) Unless otherwise ordered by Government under clause (*b*) of sub-section (3) of section 4 of the Act, the sum which the licensee shall deposit or secure to the satisfaction of Government under sub-clause (*b*) of clause I of the Schedule of the Act, shall be Rupees two thousand, and the period within which such sum shall be deposited or secured shall be three months from the commencement of this license.

4. Area of Supply. The area within which the supply of energy is authorised by this license, hereinafter referred to as "the area of supply", shall be the whole of the area comprised within the Municipal limits of the Sirsi Municipality, shown as bounded by a green line on the Deposited Map.

5. Area of Compulsory Supply. (1) The licensee shall within a period of eighteen months from the commencement of this license execute works to the satisfaction of Government for the purpose of a full and continuous supply of energy throughout the streets or parts of streets as are mentioned below and coloured Red on the Deposited Map, and also such additional streets or parts of streets as Government may, after consultation with the licensee, direct, within six months from the commencement of this license:-

1. Chanpattan Bazar Road from the Post Office to the Veterinary Dispensary.

2 Library Road from Sub judge's court to the Petrol pump

3 Shimpi Galli, from Chanpattan Bazar junction to the Vithoba Temple

4 Rayar Pethe from the Municipal Office to the Vishnu Temple

5 Basti Galli, from Alur's building to Devikeri

6 Nadig Galli, from Chitugi's Vakhar to the Maruti Temple

(2) In the case of any difference between the description of the streets mentioned in sub-clause (1) above and that indicated on the Deposited Map, the latter shall prevail

(3) The licensee shall commence to secure the works aforesaid within six months from the commencement of this license and shall commence the supply of energy within eighteen months therefrom

(4) The licensee shall every three months submit reports to Government and also the Electrical Engineer to Government specifying the progress made, up to date from the commencement of the license, in the execution of the work in the compulsory area

5. Revocation of License. If the licensee fails to comply with the provisions of sub-clauses (1), (3) or (4) of this clause, or if in the opinion of Government, the progress made during any portion of the said period of eighteen months is unsatisfactory, the license shall be liable to be revoked and the security furnished, as per sub-clause (2) of clause 3 above forfeited

6. Purposes of Supply (1) Subject to the provisions of this license, and the Act and the Rules, the licensee shall be entitled, during the continuance of this license, to supply energy within the area of supply for all purposes, and in bulk and to other licensees for their own purposes — Provided that no supply of energy shall be commenced to be given by the licensee either in retail to any owner or occupier of private premises, or in bulk to a distributing licensee unless and until the licensee's work have been inspected by the Government and Electrical Inspector and passed by him in writing, and until Government have approved,

(a) The form of requisition to be made by such owner or occupier or distributing licensee for such supply of energy

(b) the form of written contract or agreement with the licensee to take a supply of energy to be executed or entered into such by owner or occupier or distributing licensee, and

(c) the amounts of all miscellaneous charges which the licensee proposes to make against such owner or occupier or distributing licensee as incidental to, and in connection with such supply

(2) Clauses V VI VII, IX, X and XI of the Schedule to the Act shall wherever necessary be read as expressly added to or varied to the extent set out in the proviso to sub-clause (1) of this clause

(3) The licensee shall not supply energy to any premises unless the owner or occupier of such premises shall have satisfied the licensee that all works, including repairs relating to electrical wires fitting and apparatus on such premises have been carried out by a licensed electrical contractor and under the supervision of a Competency certificate-holder under the rules issued by Government in this behalf or by such other person as may be authorised to carry out such work under rule No 40—A of the rules, and clause VI of the Schedule to the Act shall be deemed to have been modified accordingly

7 System of Supply (1) The system of supply of energy which may be adopted for the purpose of this license shall be the following —

I. Alternating Current.

Single or three phase, three or four wire, periodically 50 cycles per second The pressure of supply at the consumer's terminals shall be as under

(a) 230 volts between each phase and neutral for general purposes viz lights fans heaters etc

(b) 400 volts between phase for motive power purposes and purposes other than those specified in (a) above and—

(c) Any pressure upto 6,600 volts for feeders and for supply to any large consumer for power purposes

or

II Direct Current.

For general purposes. viz lights, fans, heaters etc

(a) A continuous current low pressure supply at the consumer's terminals at a pressure of 220–230 volts between one of the outers and the middle conductor of a three wire system the middle conductor being connected to earth at the generating station, but insulated at all other parts, or

(b) A continuous current low pressure supply at a pressure of 220–230 volts between the conductors of a two-wire system

For Power Purposes. A continuous current medium pressure supply at a pressure of 440/460 volts between the outers,

(1) Provided always that the licensee may, from time to time, with the previous consent in writing of, and subject to such limitations and conditions as shall be prescribed in writing, by Government adopt any other system of supply for the purpose of this license and that no high tension mains shall be brought within or near the populated areas without the specific sanction of Government in each case

(2) The feeders, distributing mains and service lines shall be overhead, provided that wherever and whenever specifically permitted or required to do so in writing by Government, such feeders, distributing mains or service lines shall be laid underground

Provided that—

(*a*) No work or works shall be commenced by the licensee unless and until the method of construction shall have been previously approved, in writing, by the Electrical Engineer to Government

(*b*) Where overhead mains are used, they shall be nowhere at a height less than 20 feet from the ground level of the streets at all crossings & in all the routes where Raths or Taboots or similar religious processions are likely to pass In case of dispute, such routes and heights shall be determined by the District Magistrate

(*c*) In narrow lanes or streets, the posts shall be placed on the extreme edge of the lane or street and a special construction to be approved he Electrical Engineer to Government shall be adopted to keep the wires clear of every building

(*d*) Nothing in this license shall authorise the licensee to use overhead mains at any higher pressure than the medium pressure without the written sanction of Government in each case, and subject to any conditions or limitations which Government may prescribe

(3) Due precaution shall be taken to avoid any possible interference with the adjacent telephone or telegraph circuits due to inductive method The electric wires shall be suitably transposed where necessary

(4) For the purpose of rule 61 of the Rules, the maximum wind pressure shall be taken as 15 pounds per square foot

8 Generating, Receiving, Transforming & Distributing Stations

(1) The Generating, Receiving, Transforming and Distributing stations shall be within the area of supply But the licensee shall be at liberty either to generate energy to satisfy the whole or any part of their requirements or to buy the whole or any part of the energy they require for distribution and resell the same within the area of supply When energy is bought from outside the area of supply, the licensee may, if necessary, lay down or place electric supply lines, in accordance with the Act and the Rules for the conveyance and transmission of energy, from the point of bulk supply outside the area of supply, to the boundary of the area of supply

(2) Properly qualified man for ..tricity shall be employed in the generating station, and the whole undertaking shall be under the charge of a fully qualified Electrical Engineer with previous experience

9 Rates-Limits of prices to be charged. The prices to be charged by the licensee for energy supplied by him shall not exceed the maxima set out below, or, in case of a method of charge approved by Government under Clause (*c*) of sub section (3) of Section 23 of the Act, such maxima as Government may fix on approving the method

(1) Where energy is supplied through meter

For General Supply Purposes—

(*a*) For lights and fans a rate of ans 8 per unit

(*b*) For Heating and Refrigerating Purposes — a rate of annas 3 per unit

(2) For Motive Power Purposes and purposes other than those provided for in items 1 (*a*) & (*b*) a rate of Rs 3/ per K W per month plus annas 3 per unit

Provided that the total consumption of energy in all the Government Buildings in the area supply shall be treated as a single bulk supply and a rebate of 1 per cent shall be granted for every 250 units consumed per month upto maximum of 35 per cent

Note. The term "unit" occuring in this sub clause shall mean the energy contained in a current of 1000 Ampered flowing under an Electric Motive force of 1 volt during 1 hour

(2) A Minimum charge of Rs 3/- per month in the cases referred to in items (*a*) and (*b*) of sub-clause 1 above shall be charged exclusive of meter rent, and irrespective of whether

energy of that value has been consumed or not

(3) **Meter rent.** *The rent to be charged for meters shall not exceed - As 8 per month for a D C meter or a single phase A C meter,*

and

Re 1/- per month for a poly phase A C meter

(4) Where energy is not supplied through meter, a fixed rate of Rs 1-8-0 per mensem shall be charged for a 20 watt light and a proportionate rate for every additional 20 watts or part there-of burning for not more than 6 hours per night i e from 6 P M to 12 midnight

(5) In the case of large consumers contracts may be made for fixed period at such rates not exceeding the rates specified in sub clause (1) of this clause as may be agreed upon

(6) Without prejudice to anything contained in the above clauses the licensee may at any time enter into a special contract with the Municipality of Sirsi for supply of energy to the Municipality for public lighting upon such terms and conditions and at such rates not exceeding the maximum charges specified above, as may for the time being be mutually agreed upon

10 Breaking up of Streets The length of trenches to be *opened on any street at any one* time and the period for which they may remain *open shall be determined from time to time by* Government or the local authority by whom such streets are reparable

11 Purchase of Undertaking (1) The option of purchase given by Section (7) sub-section (1) of the Act shall be exercisable first on the expiration of 40 years from the commencement of this license & thereafter on the expiration of every subsequent period of 10 years therefrom The percentage of the value of lands buildings works material and plant of the licensee referred to in sub section (1) of section 7 of the Act which shall be added to such value under the second proviso to that sub-section on account of compulsory purchases, shall be 10%

(2) In accordance with clause *(d)* (ii) of sub section (2) of Section 3 of the Act it is hereby declared that the generating station belonging to the licensee and used in connection with the undertaking, or where energy is bought from any other person or company the receiving and distributing sub stations used in conection with the undertaking shall form part of the undertaking for the purposes of purchase under Section 5 or Section 7 of the Act

12 Assignment of the license. At any time after the commencement of this license the licensee may with the previous consent in writing of Government, and subject to compliance with such conditions upon which such consent may be given assign this license and transfer the whole of the undertaking in respect of which this license is granted (including all lands, buildings works materials and the plant of the licensee) to any individual or company formed or to be formed and registered in accordance with the law for the time being in force in British India or in Great Britain, under any enactment relating to companies for the time being in force there and having authority to take over the license and the said undertaking as the case may be and to exercise the power and perform the obligations given to or imposed upon the licensee under this license and the Act, and the Rules, and on such assignment and transfer the rights powers authorities, obligations and liabilities of the licensee shall be exercisable by and shall attach to such individual or company formed or to be formed as aforesaid

ANANT SUBRAO KASARKOD,
SIRSI.

Applicant

Dated this 2nd day of December, One Thousand Nine Hundred and Thirty Five

* * *

— ಅಲೀಗಡದೊಳಗಿನ ಮುಸಲ್ಮಾನ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳೆಲ್ಲರೂ ಫೆಜ್ ಟೊಪ್ಪಿಗೆಯನ್ನು ಹಾಕಿಕೊಳ್ಳಬೇಕಾಗಿ ನಿಯಮವಿದೆ. ಈ ಟೊಪ್ಪಿಗೆಗಳು ಇಟಾಲಿ ದೇಶದಿಂದ ಬರುತ್ತವೆ. ಇಟಾಲಿ ಹಬಶಿ ವಾದದಲ್ಲಿ ಮುಸಲ್ಮಾನ ದೇಶಗಳ ಬಲ [illegible] ದೇಶದ ಪರ. ವಿದ್ಯಾರ್ಥಿಗಳು ಆ ಟೊಪ್ಪಿಗೆಯನ್ನು ಧರಿಸಲಿಲ್ಲ. ಅವುಗಳ ಬೆಲೆ ೧|| ಕಟ್ಟಿರಿ ಎಂದು ವಿದ್ಯಾಲಯದವರು ವಿದ್ಯಾರ್ಥಿಗಳಿಗೆ ದಂಡನ ಮಾಡಿದರು. ಆದರಿಂದ ವಿದ್ಯಾರ್ಥಿಗಳೊಳಗೆ ಒಳ್ಳೇ ಗಡಿಬಿಡಿ ಉಂಟಾಗಿದೆ. ವಿದ್ಯಾರ್ಥಿಗಳು ಬೇರಾದ ಸ್ವದೇಶಿ ಟೊಪ್ಪಿಗೆಗಳನ್ನು ಹಾಕಿಕೊಳ್ಳುವಂತೆ ವಿಧಿಸಬೇಕಾಗಿ ವಿದ್ಯಾಲಯದವರಿಗೆ ಅರಿಕೆ ಮಾಡಿಕೊಂಡಿದ್ದರೆ [illegible] ರಾಷ್ಟ್ರದ ಅಭಿಮಾನ ಬರುವಿತ್ತು. ಆದನ್ನವರು ತ್ಯಜಿಸಿದ್ದರೆ ಆದಾಗ್ಯೂ ಅಲೀಗಡದವರು ಅವುಗಳ ಅಭಿಮಾನ ಬಿಡಲೊಲ್ಲರು. ಈಗಿನ ಪರಿಸ್ಥಿತಿಯಲ್ಲಂತೂ ಇದು ಅತಿ ಹಾಸ್ಯಾಸ್ಪದ!

— ಇಟಾಲಿಯವರು ಬಹಿಷ್ಕಾರ ಪರಿಹರಿಸಿಕೊಳ್ಳುವದಕ್ಕಾಗಿ ಅವಶ್ಯವಾಗುವ ಜಿನಸುಗಳನ್ನು ಸ್ವದೇಶದಲ್ಲಿಯೇ ತಯಾರಿಸಲಾರಂಭಿಸಿದ್ದಾರೆ. ಹಾಲಿನಿಂದ ಉಣ್ಣೆ ತಯಾರಿಸಲ್ಪಡುತ್ತದೆ. [illegible] ಯಿಂದ [illegible] ತಯಾರಿಸಬರುತ್ತದಾಗ ಇಟಾಲಿಯೊಳಗಿನ ರಸಾಯನಶಾಸ್ತ್ರವಿಶಾರದರ ಶೋಧ.

— ಫ್ರೆಂಚ ಸರಕಾರವು ದೇಶದೊಳಗಿನ ನಿರುದ್ಯೋಗಿಗಳ ನಿರ್ವಾಹಕ್ಕಾಗಿ ಈ ತನಕ ೪ ಕೋಟಿ ಹಣವನ್ನು ಖರ್ಚು ಮಾಡುತ್ತಿತ್ತು. ಈ ವರುಷ ೨|| ಕೋಟಿ ಹಣವನ್ನು ಖರ್ಚು ಮಾಡಬೇಕೆಂದು ನಿರ್ಧರಿಸಿದೆ. ಸ್ವದೇಶಿ ಸರಕಾರದ ಸ್ವಪ್ರಜಾಸಂರಕ್ಷಣದ ಉಪಾಯವಿದು.

ಯನ್ನು ವಿಚಾರಿಸಿದ ರಾ| ಸತ್ಯನಾಥನ್, ಆಯ್ ಸಿ ಎಸ್. ರವರೂ ಈ ಉಲ್ಲೇಖ ಕೊಟ್ಟು ತಮ್ಮ ಅಭಿಪ್ರಾಯ ಹಾಗೇ ಇರುವದಾಗಿ ಬರೆಯುತ್ತಾರೆ. ಇಂಥ ಪ್ರಸಕ್ತಿಯಲ್ಲಿ ತೀರ್ವೆಯ ಮಾನ ಇಳಿಸಿದರೆ ಸರಕಾರಿ ಆಡಳಿತೆಯ ಖರ್ಚು ಪೂರೈಸಬರದಾಗಿ ಸರಕಾರವು ನೆಪ ಹೇಳಬರದು ಬೇಸಾಯಗಾರರ ಕಲ್ಯಾಣವೇ ಸರಕಾರದ ಕರ್ತವ್ಯ ಆಡಳಿತೆಯ ಖರ್ಚು ಪೂರೈಸಿಕೊಳ್ಳುವದು ಸರಕಾರದ ಧರ್ಮವಲ್ಲ ಬೇಸಾಯಗಾರರ ಕಲ್ಯಾಣವಾಗುವಂತೆ ಕಾಲೋಚಿತವಾದ ಕ್ರಮ ಕೈಕೊಳ್ಳುವದೇ ಸರಕಾರದ ಕರ್ತವ್ಯ ಮುಂಬಯಿ ಸರಕಾರವು ಇದನ್ನೆಲ್ಲ ಪರಾಂಬರಿಸಿ ತೀರ್ವೆಯನ್ನು ಇಳಿಸಿ ಬೇಸಾಯಗಾರರಿಗೆ ಕಾಯಬೇಕಾಗಿ ವಿನಂತಿ

ಗೌ| ಸಾ| ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ.

ವಾರ್ಷಿಕ ಸಾಧಾರಣ ಸಭೆಯ ವೃತ್ತಾಂತ

ಮೇಲ್ಕಾಣಿಸಿದ ಸಂಸ್ಥೆಯ ೧೯ನೇ ವಾರ್ಷಿಕ ಸಾಧಾರಣ ಸಭೆಯು ಕಳೆದ ತಾ. ೧೭ಕ್ಕೆ ಮುಂಬಯಿಯೊಳಗೆ ಫ್ರೋಎರ್ಸ ಗುಜರಾಥಿ ಸಭಾಮಂದಿರದಲ್ಲಿ ಡಾ| ಎ ವ್ಹಿ ಬಾಳಿಗಾ, ಎಫ್ ಆರ್ ಸಿ ಎಸ್ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಭೆಗೆ ೩೦ ಸಭಾಸದರೂ, ಹಲವು ಮಂದಿ ಪ್ರೇಕ್ಷಕರೂ ಬಂದಿದ್ದರು

ರಾ| ರಾಮಚಂದ್ರ ಕೃಷ್ಣ ಪ್ರಭು ಇವರು ೧೯೩೪-೩೫ರ ವರದಿಯನ್ನೂ ಲೆಕ್ಕವನ್ನೂ ಮಂಜೂರಿಗಾಗಿ ಸಭೆಯ ಮುಂದಿಟ್ಟು ನುಡಿದದ್ದೇನಂದರೆ.- 'ಸ್ಥೂಲ ಮಾನದಿಂದ ನೋಡಿದರೆ ವರದಿಯ ವರುಷದಲ್ಲಿ ಹಿಂದಿನ ವರ್ಷಕ್ಕಿಂತ ಹೆಚ್ಚು ಪ್ರಗತಿಯಾಗಿದೆ ಆದರೆ ಸಭಾಸದರ ವರ್ಗಣಿಯ ವಸೂಲಿಯು ಕಡಿಮೆಯಾಗಿದೆ ಸಂಸ್ಥೆಯ ಸಭಾಸದರೆಲ್ಲರೂ ತಮ್ಮ ತಮ್ಮ ಬಾಕಿಯಿರುವ ವರ್ಗಣಿಯನ್ನು ವಸೂಲ ಕೊಟ್ಟು ಸಂಸ್ಥೆಯ ಕಾರ್ಯಕ್ಕೆ ನೆರವಾಗಬೇಕಾಗಿ ಪ್ರಾರ್ಥನೆಯಿದೆ " ವರದಿಯು ಮಂಜೂರಾಯಿತು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಹಣ ಕಡಿಮೆ ಬೀಳುತ್ತಿರುವದರಿಂದ ದೀಪಾವಳಿಯಲ್ಲಿ ಕೂಡುವ ಹಣದೊಳಗಿಂದ [illegible] ವರ್ಷಗಳ ಮಟ್ಟಿಗೆ ಶೇಕಡಾ ೫೦ರಷ್ಟು ವಿನಿಯೋಗಿಸಬಹುದೆಂತಲೂ ನಿರ್ಣಯವಾಯಿತು ಆ ಮೇಲೆ ೧೯೩೫—೩೬ನೇ ವರ್ಷದ ಅಧಿಕಾರಿಗಳ ಚುನಾವಣೆಯಾಗಿ ಡಾ| ಬಾಳಿಗಾರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಸಭೆಯ ಮುಕ್ತಾಯ ಮಾಡುವಾಗ ಅಧ್ಯಕ್ಷರು ಹೇಳಿದ್ದೇನಂದರೆ.— " ವಿದ್ಯಾರ್ಥಿ-ವೇತನಗಳನ್ನು ಹಂಚುವಾಗ ಪಕ್ಷಪಾತ ನಡೆಯುತ್ತದೆಂದು ಕೆಲವರ ತಕರಾರು ಕೇಳಬರುತ್ತದೆ ಆದರೆ ಅಂಥ ಪಕ್ಷಪಾತವಾಗುವದಿಲ್ಲೆಂದು ನಾನು ಖಾತ್ರಿಪೂರ್ವಕ ಹೇಳಬಲ್ಲೆ ರಾ| ಜೇ. ಪಿ ಮಹಾಲೆಯವರು ತಮಗೆ ದೊರೆತ ಎಲ್ಲ ಹಣ ತಿರುಗಿ ಕೊಟ್ಟಿದ್ದಾರೆ ರಾ| ಎಲ್ ಬಿ ಮಹಾಲೆಯವರು ಅಂಶತಃ ತಿರುಗಿ ಕೊಟ್ಟಿದ್ದಾರೆ. ಬಾಕಿ ಒಬ್ಬರೂ ಇವರನ್ನು ಅನುಕರಿಸಬೇಕಾಗಿ ನನ್ನ ಆಗ್ರಹದ ಸೂಚನೆಯಿದೆ ರಾ| ಬ| ಎಸ್ ಎಲ್ ತಾಮ್ಹಣ್ಕರಯವರು ಉದಾರ ಅಂತಃಕರಣದಿಂದ ಈ ಸಂಸ್ಥೆಗೆ ರೂ ೧೦೦ನ್ನು ದಾನ ಮಾಡಿದ್ದಾರೆ ಸಂಸ್ಥೆಯ ಪತಿಯಿಂದ ನಾನು ಅವರ ಆಭಾರವನ್ನು ಸಲ್ಲಿಸುತ್ತೇನೆ" ಅಧ್ಯಕ್ಷೋಪಕಾರವಾಗಿ ಸಭೆ ಸಮಾಪ್ತಿಯಾಯಿತು

ಅಶ್ವಾರೂಢ ಕವಚ!

ನಿರಾಶರಾದವರಿಗೆ "**ಅಶ್ವಾರೂಢ**" ಯಂತ್ರವು "ಗುಳ-ಪರ್ವತದಲ್ಲಿ ಮಧು ವೃಷ್ಟಿಯಂತೆ" ಇಷ್ಟಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು ೪ ಆಣೆ ಸ್ಟ್ಯಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರಗಳ ಬೆಲೆ ರೂ 20-0-0, ಬೆಳ್ಳಿಯ ಯಂತ್ರಕ್ಕೆ ರೂ 3-0-0, ತಾಮ್ರದ ಯಂತ್ರಕ್ಕೆ ರೂ 2-0-0

ಪತ್ತೆ. ದೇವಿದಾಸ ಪಿ. ಕೆ. ಕೆ. ಎನ್.,
ಜ್ಯೋತಿಷಿ, ಕುಮಟಾ. [ಉ| ಕನ್ನಡ]

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ

III ನೇ ಸಂಚಿಕೆ ಶ್ರೀ ಅನುವ್ಯಾಖ್ಯಾನದ II ನೇ ಭಾಗ ಜನ್ಮಾದ್ಯಧಿಕರಣಗಳು ಈಗಲೇ ತಯಾರಾಗಿವೆ ಪುಟಗಳು ೩೦೦ ಬೆಲೆ ರೂ ೧-೩-೦

I ನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೨೩೦ ಚಂದಾ ರೂ ೨-೮-೦

II ನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೦೦ ಚಂದಾ ರೂ ೪-೭-೦ ಟಪಾಲ ಹಾಸಲು ಪ್ರತ್ಯೇಕ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಒನರೆರಿ ಟ್ರೆಝರರ್
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ.
(ದಕ್ಷಿಣ ಕನ್ನಡ)

Siromani Udipi Narayanacharya,
CHAUKHAMBA BENARES CITY.

ಮಹಾಶಯರೇ, ಉಪನೇತ್ರ ಸ್ಪಷ್ಟವಾದ ದೃಷ್ಟಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿ ಕೊಳ್ಳಿರಿ 10ರ ವರ 1ಕ್ಕೆ 0 6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣ ಪಾಗುತ್ತ ಆಗುತ್ತ ಕ್ರಯ ಕಡ್ಡು ಮಾ. ಕಾರಿ ಸರ 32 ದರ 1ಕ್ಕೆ ರೂ 0 8-0ಯಿಂದ ರೂ 100 ವರೆಗೆ ಗಾಡಿಕಂಠಿರ 1ಕ್ಕೆ ರೂ 3-8-0 ರಿಂದ 5ರವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0 1 0ದ ಸ್ಟ್ಯಾಂಪು ಕಳಿಸಿದರೆ, 1 ಕಾಶೀ ನಕ್ಷೆ, 1 ವಿಶ್ವೇಶ್ವರನ ದರ್ಶನ, ಕೆಟಲಾಗು ಸಹ ಉಚಿತ ಕಳಿಸಲಾಗುವದು

ಪತ್ತೆ – **ಶಿರೋಮಣಿ ನಾರಾಯಣಾಚಾರ್ಯ,**
ಚೌಖಾಂಬಾ, ಕಾಶೀ ಕ್ಷೇತ್ರ

|| ಓಂ ||

ಡಾ| ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಕ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು ಅನೇಕ ಸ್ತ್ರೀಯರು ಇದರಿಂದ ಅನುಕೂಲ ಲಾಭ ಹೊಂದಿರುವರು ಕ್ರಯ ರೂ ೧-೮-೦

ಅಶ್ವಗಂಧ ಟಾನಿಕ್.— ಮುದಿ, ತರುಣ ಸರ್ವರನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ ಅವಿಚಾರ ಮುಂತಾದವುಗಳೆಲ್ಲ ನಷ್ಟವಾಗುವವು. ಶಾಂತಿಕಾರಕ್ಕೆ ಇದು ದಿವ್ಯೌಷಧ! ರೂ ೧-೮-೦

ಎಗ್ಯು ಮಿಕ್ಷ್ಚರ, ಫೀವರ ಡ್ರಾಪ್ಸ, ಅಮ್ಲ ಸುಧಾ, ಕರ್ಪೂರಾರ್ಕ, ಸಾಯುರಸ ಪಾಚಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿತ್ಯಗಟ್ಟಲೆ ಇವುಗಳ ಉಪಯೋಗವಾಗುವುದು. ಇವು ಅನುಪಮ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವ ಸಿದ್ಧವಾದ **ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.**

ಇವಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಸ್ಚರ, ಟಾನಿಕ್, ಬ್ಲಡ್ ಮಿಕ್ಷ್ಚರ, ಕಾಲರೇಲ, ಡಿರ್ ವ್ಹೊಟರ, ಸಾಯುರವ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು ಬಾಳಂತಿ ಮದ್ದು ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೇದ ವೈದ್ಯರಿಗೂ ಜನರಿಗೂ ಎಲ್ಲ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದ್ದು ಆದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ [illegible] ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ಶೀಘ್ರವಾಗಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನು ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ (ವಾತ, ಕ್ಷಯ, ವಾಂತಿ) ಕೂಡಿದ ಪಾಂಡರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ ಮತ್ತು ಜಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಶ್ಮರಿರೋಗ ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯ ಶುದ್ಧಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮತ್ತು ಹೆಂಗಸರಿಗೆ ಪ್ರಸವ ಆದ ನಂತರ ಆಗುವ [illegible] ವಿಕಾರಗಳಿಗೆ ಪಚನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹೊಟ್ಟೆ ಶೂಲಿ ಮುಂತಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾದಮೇಲೆ) ದಿನಕ್ಕೊಂದು ಔನ್ಸಿನಂತೆ ೧೫ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವುಳ್ಳವರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿಗೆ ರೂ ೧—೪—೦
„ ಬಾಟ್ಲಿ ೬ಕ್ಕೆ ರೂ ೬—೧೨—೦
„ ಬಾಟ್ಲಿ ೧೨ಕ್ಕೆ ರೂ ೧೨—೦ ೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಪುಷ್ಟ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, [illegible], ಲೋಹಾಸವ, ಮಹಾ ನಾರಾಯಣ ತೈಲ, [illegible] ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಕ್ಕುವವು. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ — ಕುಮಟಾ. (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪೋಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯಮಾಪನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ

ಪ್ರತಿಯೊಂದು ಸಾವಿರ ರೂಪಾಯಿಗಳ **ವಿಮಾಪತ್ರದ ಮೇಲೆ**

ವರ್ಷ ಒಂದರ ರೂ. 10/-ರ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ಪ್ರಾಮಾಣಿಕರೂ ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳೂ ಯಥೋಚಿತವಾದ — ಪುರಸ್ಕಾರಗಳೂ ತಪ್ಪದೆ ವ್ಯವಹಾರ ಬೆಳಸಿರಿ

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರ —

ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ ಮುಂಬಯಿ.

ಉತ್ತರ ಕನ್ನಡದ ಜಿಲ್ಹಾಧಿಕಾರಿಗಳು ಮೆಸರ್ಸ ಜೀವನ ಏಜನ್ಸಿ, ಕಾರವಾರ.

Established 1900

ॐ

FIXED RATE

ದಾಸಪ್ಪಾ ಕೃಷ್ಣಪ್ಪಾ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಬಟ್ಟೆ ಅಂಗಡಿ, ಶಿರ್ಸಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಷ್ಮೆಯ ಖಣಗಳೂ, ಕೋಟಿಂಗ ಮತ್ತು ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು, ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಷ್ಮೆ ಖಿದ್ದರ ಮಡಿಗಳೂ, ನಾರ ಮಡಿಗಳೂ ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ ಛತ್ರಿಗಳೂ ವಗೈರೆ ಎಲ್ಲ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಯೋಗ್ಯ ದರದಿಂದ ಸಿಗುವವು. ಠೋಕ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel *"Honesty"*] **D K DHAKAPPA BROS.,**

ಹೊಸ ಮಾಲು.

Cloth Merchants,
SIRSI N KANARA

ದರ ಅಗ್ಗ.

ಸುಲಭ ಕ್ರಯ **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರು ಗಳಿಗೆ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ ಮೂರು ಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ ಕಳಿಸಲಾದೀತು ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦, [illegible] ಡಜನ್‌ಗಳಿಗೆ ರೂ ೨-೮-೦ ವಿ ಪಿ [illegible]

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦ [illegible]

ಇವನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B 1270. Monday, 9th December, 1935

ವರ್ಷ ೧೮

ಕಾನಡಾವೃತ್ತ

THE KANARA NEWS.

ಸಂಚಿಕೆ ೨೩

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0
ಮನಿಯಾರ್ಡರಿನಿಂದ
ರೂ. 3-1-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರಾಕ್ಟಿನ (೧೫ ಎಮ್ ಅಗಲ)
೮ ಸಾಲುಗಳವರೆಗೆ ರೂ 1-0-0
೮ ನಂತರ ಪ್ರತಿಸಾಲಿಗೆ 0-2-0
ಹೆಚ್ಚಿಗದ ಸಾಲು ಎಷ್ಟು ಬೇಕಾಗಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೯ ಮಾಹೆ ಡಿಶಂಬರ ಸನ್ ೧೯೩೫ನೇ ಇಸವಿ.)*—

ರೂ. ೧೦ ಯಾ ಹೆಚ್ಚಿನ ಬೆಲೆಯ

ಕನ್ನಡ ಸೇವಿಂಗ್ಸ ಸರ್ಟಿಫಿಕೇಟುಗಳು.

ಮುದ್ದತ್ತು ತೀರುವ ಮುಂಚೆ ನಗದು ವಟಾಯಿಸಬರುತ್ತವೆ.

ಅಂತು ದರಸಾಲ ಶೇಕಡಾ ೪-೬-೦ ರಂತೆ ಬಡ್ಡಿ ಸಿಗುತ್ತದೆ!

ಆರಾರು ತಿಂಗಳಿಗೆ ದರಸಾಲ ಶೇಕಡಾ ೩|| ರಂತೆ ಬಡ್ಡಿ ಕೊಟ್ಟು, ಮುದ್ದತ್ತು ತೀರಿದ ಮೇಲೆ ದರಸಾಲ ಶೇಕಡಾ ೧|| ರಂತೆ ಹೆಚ್ಚಿಗೆ ಬಡ್ಡಿ ಕೊಡಲಾಗುವದು!

ನಡುವೆ ಬಡ್ಡಿ ತೆಗೆದುಕೊಳ್ಳದೆ ಇಟ್ಟರೆ, ರೂ. ೧೦೦ರ ರಕಮು ಮುದ್ದತ್ತಿನ ಕೊನೆಗೆ ರೂ. ೧೨೨-೧೪-೬ ಆಗುತ್ತದೆ

ಸವಿಸ್ತರ ಮಾಹಿತಿ ಬಗ್ಗೆ ಬರೆಯಿರಿ.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಬ್ಯಾಹಟ್ಟಿಯವರ ಬಿಲ್ಡಿಂಗ, ಹುಬ್ಬಳ್ಳಿ.

ಈ ಕೆಳಗಿನ ನಗರಗಳಲ್ಲಿಯೂ ನಮ್ಮ ಶಾಖೆಗಳಿವೆ:—

ಮುಂಬಯಿ-ಕೋಟೆ, ಮುಂಬಯಿ-ಮಾಂಡವಿ, ಕಲ್ಲಿಕೋಟೆ, ಕೊಚ್ಚಿ, ಎರ್ನಾಕುಲಮ್, ಅಲಪ್ಪಿ, ಬೆಂಗಳೂರು, ದಾವಣಗೇರಿ, ಚಿಕ್ಕಮಗಳೂರು, ಮಂಗಳೂರು-ಬಂದರ, ಮಂಗಳೂರು-ಶಹರ ಕಾಸರಗೋಡ, ಪುತ್ತೂರ, ಕಾರ್ಕಳ, ಉಡುಪಿ, ಕುಂದಾಪುರ ಮತ್ತು ಗಂಗೊಳ್ಳಿ

ಸಂಕಲ್ಪಿತ ಮೂಲಧನ	೬,೦೦,೦೦೦
ತೆತ್ತ ಮೂಲಧನ	೩,೩೧,೦೦೦
ಕ್ಷೇಮನಿಧಿ	೪,೫೦,೦೦೦
ಠೇವುಗಳು	೫೮,೬೩,೦೦೦
ವ್ಯವಹಾರದ ಹಣ	೭೩,೪೯,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು — ಉಡುಪಿ ಬ್ರಹ್ಮಾವರ, ಹೊನ್ನಾವರ ಕುಂದಾಪುರ [illegible] ಕಾರವಾರ [illegible], ಅಂಕೋಲಾ, ಹುಬ್ಬಳ್ಳಿ ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ ಕಲ್ಯಾಣಪುರ, ಬಸ್ರೂರ, ಹಂಗಾರಕಟ್ಟಾ, ಬಳ್ಳಾರಿ ಮತ್ತು ಕಾಂಞಂಗಾಡು

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟುಗಳು** ರೂಪಾಯಿ 3-12-0, 7-8-0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/- 10/-, 100/- ಕೊಡಲ್ಪಡುವವು ಅಂದರೆ ನಿಮ್ಮ ಹಣಕ್ಕೆ ಶೇಕಡಾ ೬ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಅವರ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೋಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೋಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ.

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ

ಚಿನ್ನಾಭರಣಗಳ ಈಡಿನ ಮೇಲೆ ಶೇಕಡಾ ೭|| ಯಂತೆ ಬಡ್ಡಿ ದರದಿಂದ ಸಾಲ ಕೊಡಲಾಗುವದು.

ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

ಕುಮಟಾ,
ತಾ ೧೫ ೭-೧೯೩೫

G S. Nayak,
ಏಜಂಟ, ಕುಮಟಾ

ಬನ್ನಿರಿ || ಶ್ರೀ ಚಂದ್ರಮೌಳೀಶ್ವರ ಪ್ರಸನ್ನಃ || **ನೋಡಿರಿ**

❀ ಉಡುಪಿ ಬ್ರಾಹ್ಮಣರ ❀

ದಿ ಮೊಡರ್ನ ಹಿಂದೂ ಹೋಟೆಲ್,

ಮಹಾಶಯರೇ, **ಕುಮಟಾ.** (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಪಂಕ್ತಿ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

“ದಿ ಮೊಡರ್ನ ಹಿಂದೂ ಹೋಟೆಲ್”ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ.

ಗಿಬ್ಬ ಹೈಸ್ಕೂಲಿನ ಅತಳತೆಯ ಚರ್ಚೆ.

(ಮುಂಬಯಿಯ ಓರ್ವ ಸುದ್ದಿಗಾರರಿಂದ)

ಮುಂಬಯಿ, ತಾ ೧-೧೨-೩೫

ಕುಮಟೆಯ ಗಿಬ್ಬ ಹೈಸ್ಕೂಲಿನ ಆರ್ಥಿಕ ಸ್ಥಿತಿಯು ಕೆಟ್ಟಿರುವದರಿಂದ ಇಲ್ಲಿ ಮುಂಬಯಿಯಲ್ಲಿ ದ್ರವ್ಯಸಹಾಯ ದೊರಕಿಸಲು ಶಾಲೆಯ ಗವರ್ನಿಂಗ ಬೋರ್ಡಿಯ ಅಧ್ಯಕ್ಷರಾದ ಡಾ| ಅಣ್ಣಪ್ಪಾ ರಾಮಚಂದ್ರ ಪೈಯರೂ, ಶಾಲೆಯ ಶಿಕ್ಷಕರಾದ ರಾ| ಜಗನ್ನಾಥ ಗಾವಸ್ಕರರೂ ಬಂದಿದ್ದರು. ಮುಂಬಯಿಯಲ್ಲಿ ಅವರಿಗೆ ರೂ ೩-೪ ಸಾವಿರ ದ್ರವ್ಯ ಸಹಾಯ ದೊರೆತಿರುವದಾಗಿ ತಿಳಿಯುತ್ತದೆ. ಶಾಲೆಯ ಬಗ್ಗೆ ಸಲಹೆ-ಸಮಾಲೋಚನೆಗಳನ್ನು ಸಂಪಾದಿಸಲು ತಾ. ೨೪-೧೧-೩೫ನೇ ದಿನ ಶಾಲೆಯ ಹಳೇ ವಿದ್ಯಾರ್ಥಿಗಳ ಹಾಗೂ ಹಿತಚಿಂತಕರ ಒಂದು ಸಭೆ ಕರೆಯಲ್ಪಟ್ಟಿತ್ತು. ೪೦-೫೦ ಗೃಹಸ್ಥರು ಸಭೆಗೆ ಬಂದಿದ್ದರು. ಕೆಲವು ಸಭಾಸದರು ಶಾಲಾ ಚಾಲಕರ ಸಂಬಂಧ ತಮಗೆ ಕಂಡದ್ದನ್ನಾಡಿದರು, ಮತ್ತು ಸುಧಾರಣೆಯ ಬಗ್ಗೆ ಸಯುಕ್ತಿಕ ಸೂಚನೆಗಳನ್ನು ಮಾಡಿದರು. ಅಭ್ಯಾಗತ ಮಹಾಶಯರೀರ್ವರೂ ಎಲ್ಲ ಟೀಕೆಯನ್ನು ಕೇಳಿಕೊಂಡು ತಪ್ಪು ಒಪ್ಪಿಕೊಳ್ಳಬೇಕಾಯಿತು. ತಪ್ಪು ಒಪ್ಪಿಕೊಂಡದ್ದಾಗಿ ಈರ್ವರೂ ಆಡಿತೋರಿಸಿದ್ದಾರೆ. ಆಡಿದಂತೆ ನಡೆಯುತ್ತಾರೋ ಹ್ಯಾಗೆಂಬುದನ್ನು ನೋಡಬೇಕಾಗಿದೆ. ಸಭೆಯ ವೃತ್ತಾಂತವು ಕುಮಟಾಪುರದವರಿಗೂ, ತಮ್ಮ ವಾಚಕರಿಗೂ ಮನೋರಂಜನೀಯವಾಗುವಂತಹದಿರುವದರಿಂದ ಅದನ್ನು ಸಂಕ್ಷೇಪಿಸಿ ಕಳಿಸಿದ್ದೇನೆ.

ಸಭೆ ಬೆಳಿಗ್ಗೆ ೮॥ ಘಂಟೆಗೆ ಡಾ| ಅಣ್ಣಪ್ಪಾ ಪದ್ಮನಾಭ ನಾಯಕರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ, ಗಿಬ್ಬ ಹೈಸ್ಕೂಲಿನ ಸಾಂಪತ್ತಿಕ ಸ್ಥಿತಿಯು ನಿಕೃಷ್ಟಾವಸ್ಥೆಗೆ ಮುಟ್ಟಿರುತ್ತದೆಂತಲೂ, ಡಾ| ಪೈ ಮತ್ತು ಗಾವಸ್ಕರ ಇವರು ಸಹಾಯ ದೊರಕಿಸಲು ಬಂದಿರುತ್ತಾರೆಂತಲೂ ಅರುಹಿ, "ಈ ಶಾಲೆಯದ್ದರಿಂದಲೇ ನಾವು ಇಂಗ್ಲೀಷ ಕಲಿತು ಮುಂದೆ ಬಂದಿದ್ದೇವೆ, ಶಾಲೆಯು ಅಡಚಣೆಯಲ್ಲಿ ಬಂದಾಗ ನಾವು ಕೈ ಕೊಡಬೇಕಾದದು ನಮ್ಮ ಕರ್ತವ್ಯವಿದೆ. ನಾವು ಅದನ್ನು ಮಾಡಬೇಕಾಗಿದೆ. ಶಾಲೆಯ ಚಾಲಕರೂ ತಮ್ಮ ಕರ್ತವ್ಯ ಮರೆಯಲಾಗದು. ಹಿಂದೆ ಗಿಬ್ಬ ಹೈಸ್ಕೂಲು ಇದೇ ಜಿಲ್ಹೆಯಲ್ಲಿ ಅಗ್ರಸ್ಥಾನ ಪಡೆದಿತ್ತು. ಈಚೀಚೆ ಶಾಲೆಯ ಸ್ಥಿತಿ ಕೆಡುತ್ತ ನಡೆದಿದೆ. ಶಿಕ್ಷಕರು ಊರ ಚಳವಳಿಗಳಲ್ಲಿ ಸೇರಿ ಮುಖ್ಯವಾದ ಅಭ್ಯಾಸ-ಶಿಕ್ಷಣಗಳ ಕಡೆಗೆ ದುರ್ಲಕ್ಷ ಮಾಡುತ್ತಾರೆಂದು ನಾನು ಕೇಳುತ್ತೇನೆ. ಹೀಗಾಗದಂತೆ ಚಾಲಕರು ವ್ಯವಸ್ಥೆ ಮಾಡಬೇಕಾಗಿ ಕೋರುತ್ತೇನೆ. ಕುಮಟೆಯ ನಾಗರಿಕರಾದರೂ ತಮ್ಮ ಪಕ್ಷ ಸಂಘಗಳ ಕ್ಷುದ್ರ ಭೇದಗಳನ್ನು ಬಿಟ್ಟುಕೊಟ್ಟು ಒಮ್ಮನಸ್ಸಿನಿಂದ ಶಾಲೆಯ ಅಭ್ಯುದಯಕ್ಕೆ ಯತ್ನ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ" ಎಂದು ನುಡಿದರು.

ಅಧ್ಯಕ್ಷರ ಹಿಂದಿನಿಂದ ರಾ| ಗೋಳಿ ರಾಮಚಂದ್ರರಾಯರ ಭಾಷಣವಾಯಿತು. ಅವರು ನುಡಿದದ್ದೇನಂದರೆ— "ಈಗ ನಾವು ಹಣ ಕೂಡಿಸಿ ಕೊಟ್ಟು ಚಾಲಕರಿಗೆ ಕಳಿಸಿಕೊಟ್ಟರೆ ಅಷ್ಟರಿಂದ ಶಾಲೆಯ ಅಡಚಣಿಗಳು ಪರಿಹಾರವಾಗುತ್ತವೋ ಎಂಬುದರ ವಿಚಾರ ಮಾಡಬೇಕು. ಈಗ ಕೊಟ್ಟ ಹಣ ಖರ್ಚು ಮಾಡಿ ನಾಳೆ ಯಾರಾದರು ಅವರು ಪುನಃ ಬಂದರೆ ನಾವೇನು ಮಾಡುವದೇನು? ನಮ್ಮ ಶಕ್ತಿಯೆಷ್ಟು? [illegible] ಮರ ಬೀಳುತ್ತದೆಂದು ಕಂಡಾಗ್ಯೂ ಆ ಮರಕ್ಕೆ ಹಿಡಿದು ನಿಲ್ಲಿಸುವಷ್ಟು ಶಕ್ತಿ ನಮ್ಮಲ್ಲಿದೆಯೋ ಹೇಗೆ? ಈ ಎಲ್ಲ ಸಂಗತಿಗಳ ವಿಚಾರ ಮಾಡಬೇಕು. ಈಗ ನಾಲ್ಕಾರು ಬಡಿಗೆ ಕಾಲ-ಕಡಿಗಳು. ಸಂಸ್ಥೆಗೆ [illegible] ಇರುವ ವಸ್ತು [illegible] ದಿನದಿಂದ ಜೀವನಪ್ರ ಅಗ್ಗವಾಗಿದೆ. ಎಲ್ಲ ಕಡೆಗಳಲ್ಲಿ ಸಂಬಳಗಳಲ್ಲಿ ಕಡಿತವಾಗುತ್ತಿದೆ. ಕುಮಟೆ ಶಾಲೆಯ ಶಿಕ್ಷಕರ ಸಂಬಳಗಳು ಮಾತ್ರ ಮುಂಚಿನಂತೆಯೇ ಇವೆ! ಇದು ಯುಕ್ತವೇ? ಶಾಲೆಯು ಸಂಪನ್ನವಾಗಿರುತ್ತಿದ್ದರೆ ಒಂದು ವೇಳೆ ಇದಕ್ಕೆ ಆಕ್ಷೇಪ ಬರುತ್ತಿದ್ದಿಲ್ಲ. ಆದರೆ ಶಾಲೆಯು ಸಾಲ ಮಾಡಿ ನಡೆಯುತ್ತಿರುವಾಗಲೂ ಕಡಿಮೆ ಸಂಬಳ ತಕ್ಕೊಂಡು ದುಡಿಯಲು ಶಿಕ್ಷಕರು ತಯಾರಾಗಬಾರದೇ? ಪುಣೆಯ ಫರ್ಗ್ಯೂಸನ್ ಕಾಲೇಜಿನ ಅಧ್ಯಾಪಕರನ್ನು ನೋಡಿರಿ. ವಿಲಾಯತಿಗೆ ಹೋಗಿ ಉಚ್ಚ ಶಿಕ್ಷಣ, ಉಚ್ಚ ಪದವಿಗಳನ್ನು ಪಡೆದುಬಂದ ವಿದ್ವನ್ಮಣಿಗಳು ಬರೇ ರೂ ೧೦೦ ೧೫೦ ವೇತನ ಸ್ವೀಕರಿಸಿ ದುಡಿಯುತ್ತಾರೆ! ನಮ್ಮ ಶಿಕ್ಷಕರೂ ಅವರ ಅನುಕರಣ ಮಾಡಿದರೆ ಶಾಲೆ ಸುಧಾರಿಸಲಿಕ್ಕೆ ವಿಳಂಬವಾಗದು." ಆ ಬಳಿಕ ಒಬ್ಬ ಸಭಿಕರು ಎದ್ದುನಿಂತು "ಜಿಲ್ಹೆಯ ಹೊರಗಿನ ಜನರನ್ನು ಶಿಕ್ಷಕರಾಗಿ ನೇಮಿಸುವ ಚಾಲಕರ ಮನೋವೃತ್ತಿ ನೋಡಿ ಖೇದವಾಗುತ್ತದೆ. ಖುದ್ದ ಕುಮಟೆಯಲ್ಲಿ ಎಷ್ಟೋ ಜನ ಪದವೀಧರರಿದ್ದಾರೆ. ಕಡಿಮೆ ಸಂಬಳ ಕೊಟ್ಟರೂ ನಿಸ್ವಾರ್ಥಬುದ್ಧಿಯಿಂದ ದುಡಿಯಲಿಕ್ಕೆ ಅವರು ಸಿದ್ಧರಿದ್ದಾರೆ. ಚಾಲಕರು ಅವರಿಗೆ ದೂರದಲ್ಲಿಡುವದರ ಉದ್ದೇಶವೇನು?" ಎಂದು ಪೃಚ್ಛೆ ಮಾಡಿದರು. ರಾ| ಗೋಳಿಯವರ ಸೂಚನೆಗೆ ಬೆಂಬಲ ಕೊಟ್ಟು ರಾ| ಭಟ್ಕಳ [illegible] ಹೇಳಿದ್ದೇನಂದರೆ "ಶಿಕ್ಷಕರು ತ್ಯಾಗಬುದ್ಧಿಯಿಂದ ದುಡಿಯಬೇಕು. ಶಿಕ್ಷಣಕ್ರಮ ಸುಧಾರಿಸಿ ಉಚ್ಚ ತರಗತಿಗೆ ತರಲು ಯತ್ನ ಮಾಡಬೇಕು. ಯಾವ ವಿಷಯದ ಪರಿಣಾಮವು ಹೇಗಾಗುತ್ತದೋ ಆ ವಿಷಯ ಕಲಿಸುವ ಶಿಕ್ಷಕನು ತನ್ನ [illegible] ಸಂಬಳ [illegible] ಅಭ್ಯಾಸಕ್ರಮದಲ್ಲೇ [illegible] ಮ್ಯುನಿಸಿಪಾಲಿಟಿಗಳಲ್ಲಿ ಲಕ್ಷಗೊಡಬಾರದು ಹೀಗೆ ಮಾಡಿದರೆ ಶಾಲೆಯು ಕೆಡದು." ತರುವಾಯ ರಾ| ಸದಾಶಿವ ಭಟ್ಟರು ಮಾತಾಡಲೆದ್ದರು. ರಾ| ಗೋಳಿಯವರ [illegible] ರಿಂದ ಅಭ್ಯಾಗತರು ನೊಂದುಕೊಳ್ಳುವರೆಂದು ತೋರುತ್ತದೆ. "ಇವೆಲ್ಲ ಹಿರಿ ಅವರೂ ರಾ| [illegible] ರು ದೀನರಾಗಿ ಸಹಾಯ ಬೇಡುತ್ತಿದ್ದಾರೆ. ಅವರಿಗೆ ನೆರವಾಗತಕ್ಕದ್ದು ನಮ್ಮ ಕರ್ತವ್ಯ"ವೆಂದು ಅವರು ಸಮಾಧಾನ ಮಾಡಿದರು. ರಾ| [illegible] ಗೋವಿಂದರಾಯರು ನುಡಿದದ್ದೇನಂದರೆ "ಎಲ್ಲ ತರದಿಂದ ಕುಮಟೆಯು ನಾಡು ಹಾಳಾಗಿದೆ. ಊರತುಂಬ ಪಕ್ಷ ಸಂಗಡಗಳಾಗಿವೆ. ಇದು [illegible] ಈಗಿನ ಕಠಿಣ ಕಾಲಮಾನದಲ್ಲಿ ಜನರೆಲ್ಲರೂ ಒಕ್ಕಟ್ಟು ಮಾಡಿ ದುಡಿದರೇನೇ ಬಾಳುವೆ ಮಾಡುವದು. ಊರ ಜನರು ತಮ್ಮ ಮತಭೇದಗಳನ್ನು ಮರೆತು ಶಾಲೆಗೆ ನೆರವಾಗಬೇಕೆಂದು ನನ್ನ ಸೂಚನೆಯಿದೆ. ಊರಲ್ಲಿ ಐಕ್ಯವಿದ್ದರೆ ಚಾಲಕರು ಹಣ ಕೂಡಿಸಲಿಕ್ಕೆ ಇಲ್ಲಿಗೆ ಬರುವದವಶ್ಯ [illegible] ಇದ್ದಿಲ್ಲ. ಡಾ| ಅಣ್ಣಪ್ಪ ಪೈಯವರು ಈ ಹೊತ್ತು ಇಲ್ಲಿ ಸಭೆ ಮಾಡಿದಂತೆಯೇ ಕುಮಟೆಯಲ್ಲೂ ಎಲ್ಲ ಮಹಾಜನರ ಸಭೆ ಕೂಡಿಸಿ ಸಂಧಾನ ಮಾಡಿ ತರುವರೆಂದು ನಾನು ಹಾರೈಸುತ್ತೇನೆ." ಆ ಮೇಲೆ, ರಾ| ಗೋಳಿ ಅನಂತರಾಯರು ಶಾಲೆಯ ಉತ್ಪನ್ನವೆಷ್ಟು? ಖರ್ಚೆಷ್ಟು? ಶಾಲೆಯು ಅಡಚಣೆಯಲ್ಲಿ ಬರಲು ಕಾರಣವೇನಾಯಿತು? ಎಂದು ತಿಳಿಯಲು ಬಯಸಿದರು. ಆ ಕುರಿತು ಖುಲಾಸೆ ಮಾಡಿ ರಾ| ಗಾವಸ್ಕರರು ಹೇಳಿದ್ದೇನಂದರೆ- "ಶಾಲೆಯ ಹಿಂದಿನ ಆಡಳಿತ ಬಗ್ಗೆ ಹೇಳಲಿಕ್ಕೆ ನನಗೆ [illegible] ಹಿಂದೆ ಆದದ್ದು ಆಗಿಹೋಯಿತು! ಮುಂದೆ ಶೀಘ್ರ [illegible] ನಡೆಯುವಂತೆ ನಿಮ್ಮ ಸೂಚನೆಗಳನ್ನೆಲ್ಲ ಶಾಲಾ-ವ್ಯವಸ್ಥಾಪಕರ ಮುಂದೆ ಇಡುವೆನು. ಶಿಕ್ಷಕರು ಬೇರೆ ಬೇರೆ ಮ್ಯುನಿಸಿಪಾಲಿಟಿಗಳಲ್ಲಿ ಸೇರುವದರಿಂದ ಶಾಲೆಗೆ ನಷ್ಟವಾಗುತ್ತದೆಂದು ನಮಗೂ ತಿಳಿದುಬಂದಿದೆ. ಶಿಕ್ಷಕರು ಈ ಮುಂದೆ ಅನ್ಯ ವ್ಯವಸಾಯಗಳಲ್ಲಿ ಲಕ್ಷಗೊಡದಂತೆ ನಾವು ವ್ಯವಸ್ಥೆ ಮಾಡುತ್ತೇವೆ. ಈಗ ಶಾಲೆಗೆ ರೂ ೧೦೦೦ದಷ್ಟು ಸಾಲವಿದೆ. ಶಾಲೆಯು ಕಟ್ಟಿರುವ ಇಮಾರತು ಜೀರ್ಣವಾಗಿದೆ. ಅದರ ದುರುಸ್ತಿ ಮಾಡಿಸಿದ ಹೊರತು ಗತ್ಯಂತರವಿಲ್ಲ, ಅದಕ್ಕೆ ರೂ ೧೦೦೦ ಹಣ ಬೇಕು. ಸರಕಾರದಿಂದ ಸಿಗುವ ಗ್ರಾಂಟ ರಕಮು ಕಡಿಮೆಯಾಗುತ್ತ ಹೋಗಿದೆ. ಪ್ರತಿ ವರ್ಷ ರೂ ೫೦೦ಕ್ಕೆ ಮಿಕ್ಕಿ ತುಟ್ಟಿ ಬರುತ್ತಿದೆ. ನಮಗೂ ಕುಮಟಾ ಮ್ಯುನಿಸಿಪಾಲಿಟಿಗೂ ಆದ ತಡನಾಮೆಯಂತೆ ಮ್ಯುನಿಸಿಪಾಲಿಟಿಯವರು ನಮಗೆ ಗ್ರಾಂಟು ಕೊಡಬೇಕು. ಮ್ಯುನಿಸಿಪಾಲಿಟಿಯವರು ಮಧ್ಯದಲ್ಲಿ ಕೊಡುವದನ್ನು ನಿಲ್ಲಿಸಿಬಿಟ್ಟಿರು [illegible] ಈಗ ಬಡಿ ಸಿಗುತ್ತದೆ. ತಾವು ಉದಾರಬುದ್ಧಿಯಿಂದ ಸಹಾಯ ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ."

ಮ್ಯುನಿಸಿಪಲ್ ಗ್ರಾಂಟಿನ ಸುದ್ದಿ ಬಂದದ್ದರಿಂದ ರಾ| ಗೋಳಿ ರಾಮಚಂದ್ರರಾಯರು ಸಭಾಸದರಿಗೆ ಮ್ಯುನಿಸಿಪಾಲಿಟಿಯ ಅಂಬೋಣವನ್ನು ಸ್ವತಃ ನಿವೇದಿಸಬೇಕೆಂದು ಹೇಳಿದ್ದೇನಂದರೆ "ಮ್ಯುನಿಸಿಪಾಲಿಟಿಗೂ ಶಾಲೆಗೂ ಆದ ತಡನಾಮೆಯಲ್ಲಿ ಎರಡು ಶರ್ತುಗಳಿವೆ ( ) ಮ್ಯುನಿಸಿಪಾಲಿಟಿಯ ಸಾಂಪತ್ತಿಕ ಸ್ಥಿತಿ ಸರಿಯಾಗಿರಬೇಕು, (೨) ಶಾಲೆಯ ಸ್ಥಿತಿಯೂ ಸಮಾಧಾನಕರವಿರಬೇಕು. ಹಾಗಾದರೆ ಮಾತ್ರ ಮ್ಯುನಿಸಿಪಾಲಿಟಿಯು ಗ್ರಾಂಟು ಕೊಡಲು ಬದ್ಧವಿದೆ. ಮ್ಯುನಿಸಿಪಾಲಿಟಿಯವರು ಶಾಲೆಯ ಬಗ್ಗೆ ವಿಗತವಾರ ಮಾಹಿತಿ ಕೇಳಿದಾಗ ಶಾಲಾ-ಚಾಲಕರು ಮಾಹಿತಿ ಪೂರೈಸಲಿಲ್ಲವಂತೆ! ಅಂತೆಯೇ ಮ್ಯುನಿಸಿಪಾಲಿಟಿಯವರು ಗ್ರಾಂಟು ಕೊಡಲಿಲ್ಲೆಂದು ಕೇಳಿದ್ದೇನೆ. ಶಾಲೆಯವರು ಮಾಡಿದ್ದು ತಪ್ಪೆಂದು ನಾನು ಭಾವಿಸುತ್ತೇನೆ. ಮುಂದಾದರೂ ಇಂಥ ನಡತೆಯಿಂದ ಶಾಲೆಯವರು ತಮಗೆ ಸಿಗುತ್ತಿರುವ ಸಹಾಯ ಕಳಕೊಳ್ಳಲಿಕ್ಕಿಲ್ಲವಾಗಿ ನನಗ ಆಶೆಯಿದೆ."

ಬಳಿಕ, ರಾ| ರಾಜಾರಾಮ ಭಟ್ಟರು ಒಂದು ಹೊಸ ಸೂಚನೆ ಕೊಟ್ಟರು. "ವಿದ್ಯಾಪ್ರಸಾರಕ್ಕಾಗಿ ಈ ಶಾಲೆ ನಡೆದಿದೆ. ಅದೇ ಕಾರ್ಯಕ್ಕೆ ಇನ್ನೊಂದು ಸಂಸ್ಥೆಯು ಕೈಹಾಕಲು [illegible] ಕುಮಟೆಯ ಶ್ರೀ [illegible] ದೇವರ ಮಠದಲ್ಲಿ ಬೇರೆ ಬೇರೆ ಹಣವಿದೆ. ಧರ್ಮಾದಾಯದ ಮೂರು ನಿಧಿಗಳು ಕೂಡಿ ೧ ಲಕ್ಷದಷ್ಟು ಹಣವಿರುತ್ತದಾಗಿ ಹೇಳುತ್ತಾರೆ. ಅದರ ಬಡ್ಡಿಯನ್ನು ಉಚ್ಚ ವಿದ್ಯಾಪ್ರಸಾರಕ್ಕೆ [illegible] ನನ್ನ ಸೂಚನೆಯಿದೆ. ಬಡ್ಡಿ [illegible] ಶಾಲೆಗೆ ಸಹಾಯವನ್ನು ಮಾಡಬಹುದು. ಡಾ| ಅಣ್ಣಪ್ಪ ಪೈಯವರು ಪ್ರಯತ್ನ ಮಾಡಿದರೆ ಈ ಕಾರ್ಯಕ್ಕೆ [illegible]" ಡಾ| ಪೈಯವರು ಈ ಸೂಚನೆಗೆ ತಮ್ಮ ಒಪ್ಪಿಗೆ ಕೊಟ್ಟು ಸಂಪೂರ್ಣ ಸಿದ್ಧಿಗೆ ಯತ್ನಿಸುವೆನೆಂದು ಆಶ್ವಾಸನೆ ಕೊಟ್ಟರು. ಇನ್ನೂ ಕೆಲವು ಸಭಿಕರ ಭಾಷಣಗಳಾದ ಮೇಲೆ ಸಭಿಕರ [illegible], ನಿಧಿಯು ಮುಂದಿನ ವ್ಯವಸ್ಥೆಯ [illegible] ಸೂಚನೆಗಳನ್ನು ಮಾಡಲಿಕ್ಕೆ [illegible] ರಾ| [illegible] ಅವರ ಅಧ್ಯಕ್ಷರು, ಡಾ| [illegible] ಮತ್ತು ರಾ| ಸುಬ್ರಾಯ ರಂಗ ಪೈ ಇವರು ಕಾರ್ಯದರ್ಶಿ ಮತ್ತು [illegible] ಸಭೆಯಲ್ಲೇ ಕೆಲವರ [illegible] ರೂ ೭೦೦ ಸಭೆಯಲ್ಲೇ ಸಿಕ್ಕಿದವು. ಸಭೆಯ ಮುಕ್ತಾಯವಾಗಬೇಕಾದರೆ ಹನ್ನೆರಡೂವರೆ ಘಂಟೆ [illegible] ಪೂರ್ಣ [illegible] ಗಿಬ್ಬ ಹೈಸ್ಕೂಲಿನ ಚಾಲಕರು ಸುಮೂಹ [illegible] ಶಾಲೆಯ ಆಡಳಿತೆಯನ್ನು [illegible] ನಡೆಸಿದರೆ ಮುಂಬಯಿ ಯಾತ್ರೆ ಫಲಿಸೀತೆಂದು ಹೇಳಬಹುದು.

ಸಚಿತ್ರ | ಸಮಾಜ | ಮಾಸಪತ್ರಿಕೆ.

ಸಂಪಾದಕ- ಬಾಲಚಂದ್ರ ಘಾಣೇಕರ.

ಇದರಲ್ಲಿ ಉತ್ತಮ ಕಥೆ ಲೇಖ, ವಿನೋದ, ಭವಿಷ್ಯ ಎಲ್ಲಾ ಇವೆ. ಪ್ರತಿ ತಿಂಗಳಿಗೆ ತಪ್ಪದೆ ಹೊರಡುವದು. ವಾರ್ಷಿಕ ೧ ರೂ. ಮನಿಯಾರ್ಡರ ಮಾಡಿ ವರ್ಗಣಿದಾರರಾಗಿರಿ.

ಮ್ಯಾನೇಜರ 'ಸಮಾಜ', ಧಾರವಾಡ

ಅಲ್ಲಿಲ್ಲಿ ಇಷ್ಟಿಷ್ಟು!

ಇನಕಮ್ ಟ್ಯಾಕ್ಸ ಖಾತೆಯ ಚೌಕಶಿ ಮಾಡಿ ಇನಕಮ್ ಟ್ಯಾಕ್ಸ ಎತ್ತುವಳಿಯ ಕ್ರಮವನ್ನು ಸುಧಾರಿಸುವದಕ್ಕಾಗಿ ಸರಕಾರವು ಬ್ರಿಟಿಶ ತಜ್ಞರನ್ನು ನೇಮಿಸಿ ಆಲೋಚಿಸುತ್ತಿದೆ. ಈಗಿನ ಇನಕಮ್ ಟ್ಯಾಕ್ಸ ಎತ್ತುವಳಿಯ ಕ್ರಮದಿಂದ ಜನರಿಗೆ ಬಹಳ ಕಷ್ಟವಾಗುತ್ತಿದೆ. ಉತ್ಪನ್ನ ತಪಾಸ ಮಾಡುವವರಿಗೆ ಎಂಥ ಲೆಕ್ಕಪತ್ರ ಕೊಟ್ಟಾಗ್ಯೂ ಸಮಾಧಾನಪಡಿಸುವದು ಕಠಿಣ. ಯಾವ ರೀತಿಯಿಂದ ಲೆಕ್ಕ ಇಟ್ಟಲ್ಲಿ ಇವರಿಗೆ ಸಮಾಧಾನವಾಗುತ್ತದೆಂಬುದಾಗಿ ತಿಳಿಯುವದಿಲ್ಲ. ಇನಕಮ್ ಟ್ಯಾಕ್ಸ ಖಾತೆಯಿಂದ ನೋಟೀಸು ಬಂದವರೆಲ್ಲರೂ ಅಪರಾಧಿಗಳೆಂದೇ ಎಣಿಸಿ ಖಾತೆಯವರು ವಂಚನೆಯನ್ನು ಗ್ರಹಿಸಿಕೊಂಡು ಗುನ್ಹೆಗಾರರೆಂಬಂತೆ ತಪಾಸ ಮಾಡುತ್ತಾರೆ. ಈ ಪದ್ಧತಿ, ಈ ಸಂಶಯದ ಕಾರಣವೇನೆಂದು ಯಾರಿಗೂ ತಿಳಿಯದ ಮಾತು. ‘ಊರಿದ್ದಲ್ಲಿ ಹೊಲಗೇರಿಯಿದೆ, ಇರುವದು ಸಹಜ, ಹೊಲೆಯರು ಚಾಡಿ ಹೇಳುವರೆಂದು ಇನಕಮ್ ಟ್ಯಾಕ್ಸ ಪರೀಕ್ಷಕರ ಬಾಯಿಗಳಿಂದ ತಪ್ಪುವದೇ ಕಠಿಣ. ಲೆಕ್ಕ ಎಷ್ಟು ಸಮಾಧಾನಕರವಿದ್ದಾಗ್ಯೂ ಪರೀಕ್ಷಕರಿಗೆ ಸಮಾಧಾನವಾಗುವದಿಲ್ಲ. ಅದು ಪರೀಕ್ಷಕರ ತಪ್ಪಲ್ಲ ಊರೊಳಗಿನ ಹೊಲೆಯರ ತಪ್ಪು. ಆದರೆ ಪರೀಕ್ಷಕರು ಇಂಥ ಚಾಡಿ-ಮಾತುಗಳಿಗೆ ನಂಬಿ ಸಭ್ಯರಿಗೆ ಪೀಡಿಸುವ ಪದ್ಧತಿ ಯೋಗ್ಯವಲ್ಲ. ಸರಕಾರವು ಇಂಥಿಂಥ ಗ್ರಾಮಗಳಿಂದ ಇಂತಿಷ್ಟು ಇನಕಮ್ ಟ್ಯಾಕ್ಸ ವಸೂಲಾಗುವಂತೆ ಇನಕಮ್ ಟ್ಯಾಕ್ಸನ್ನು ಆಕರಿಸಬೇಕೆಂದು ಖಾತೆಯವರಿಗೆ ವಿಧಿಸಲಿಲ್ಲ. ಕಂದಾಯದ ಪಟ್ಟಿ ಕೊಡುವ ಪದ್ಧತಿ ಹೋಗಲಾಯಿತು, ಆಂಗ್ಲಮಯದಲ್ಲ. ಆದರಿಂದ ಲೆಕ್ಕಪತ್ರಗಳ ಲೆಕ್ಕವನ್ನೇ ಆಧರಿಸಿ ಇನಕಮ್ ಟ್ಯಾಕ್ಸನ್ನು ಇನಕಮ್ ಟ್ಯಾಕ್ಸ ಖಾತೆಯವರು ಆಕರಿಸಬೇಕಾಗಿಯೂ, ಸಿವಿಲ್ ಕೋರ್ಟಿನಲ್ಲಿ ಮಾನ್ಯವಾಗುವಂಥ ಲೆಕ್ಕವನ್ನು ಧಿಕ್ಕರಿಸಿ ಮನಸೋಕ್ತ ಇನಕಮ್ ಟ್ಯಾಕ್ಸನ್ನು ಆಕರಿಸದಂತೆ ಕಾಯಿದೆಯಿಂದ ವಿಧಿಸಬೇಕಾಗಿಯೂ ಚೌಕಶಿ ಮಂಡಳದವರಿಗೆ ಅರಿಕೆ.

* * *

ಈಗಿನ ಇನ್‌ಕಮ್ ಟ್ಯಾಕ್ಸ ಎತ್ತುವಳಿಯ ಕ್ರಮದಲ್ಲಿ ಇನ್ನೂ ಒಂದು ದೊಡ್ಡ ದೋಷವಿದೆ. ಇಂಗ್ಲಂಡ ದೇಶದೊಳಗೆ ಸಂಸಾರದ ಖರ್ಚನ್ನು ಕಳೆಯುವ ಕ್ರಮವಿದೆ. ಹಿಂದೀಯರು ಬ್ರಿಟಿಶ ಪ್ರಜೆಗಳಾದಾಗ್ಯೂ ಆ ಅನುಕೂಲತೆ ಹಿಂದೀಯರಿಗಿಲ್ಲ. ೨ ಸಾವಿರಕ್ಕೆ ಮಿಕ್ಕಿ ಪ್ರಾಪ್ತಿಯಿದ್ದಾಗ್ಯೂ ಕುಟುಂಬ ದೊಡ್ಡದಿದ್ದು ಆ ಪ್ರಾಪ್ತಿ ಸಂಸಾರದ ಖರ್ಚಿಗೆ ಸಾಲದಿದ್ದರೆ ಅಂಥವನ ಕಡೆಯಿಂದ ಇನಕಮ್ ಟ್ಯಾಕ್ಸ ಎತ್ತುವಳಿಯಾಗದಂತೆ ಇಂಗ್ಲಂಡ ದೇಶದಲ್ಲಿ ಕಾಯಿದೆಯಿದೆ. ವಿವಾಹಿತನಿಗೆ ಇಂತಿಷ್ಟು, ಮಕ್ಕಳಿಗೆ ಇಂತಿಷ್ಟು, ಆಪ್ತರಿಗೆ—ಆಶ್ರಿತರಿಗೆ ಇಂತಿಷ್ಟು ಹೀಗೆ ಖರ್ಚನ್ನು ಆವರವರ ದರ್ಜೆಯಂತೆ ನಿಶ್ಚಯಿಸಿದ್ದಿದ್ದು-ಅದನ್ನು ಉತ್ಪನ್ನದೊಳಗಿಂದ ವಜಾ ಕಳೆದು ಉಳಿಯುವ ಉತ್ಪನ್ನದ ಮೇಲೆ ಮಾತ್ರ ಇನಕಮ್ ಟ್ಯಾಕ್ಸನ್ನು ಆಕರಿಸುತ್ತಾರೆ. ಈ ಸಂಗತಿ ಈ ಹಿಂದಿಯೇ ಪ್ರಕಟಗೊಂಡಿದೆ. ಇದೇ ಪ್ರಕಾರ ಹಿಂದುಸ್ಥಾನದಲ್ಲಿಯೂ ಸುಧಾರಣೆಯಾಗುವದು ತೀರ ಅವಶ್ಯವಿದೆ. ಉದರನಿರ್ವಾಹಕ್ಕೆ ಸಾಗಿಸಿಕೊಂಡು ಉಳಿಯುವ ಉತ್ಪನ್ನದ ಮೇಲೆ ಇನಕಮ್ ಟ್ಯಾಕ್ಸ ಆಕರಿಸಬಹುದು.

* * *

೧೯೨೩ನೇ ಇಸ್ವಿಯಲ್ಲಿ ಪ್ರಾಥಮಿಕ ಶಿಕ್ಷಣ ಕಾನೂನು ಆಯಿತು. ಈ ಕಾನೂನಿನ ಸಂಕಲ್ಪವೇನೋ ವಿದ್ಯಾಭಿವೃದ್ಧಿಯದು. ಪ್ರಾಥಮಿಕ ಶಿಕ್ಷಣದ ವಿಕಾಸವಾಗಬೇಕು, ವಿಸ್ತಾರವಾಗಬೇಕು, ಮುಂಬಯಿ ಇಲಾಖೆಯೊಳಗಿನ ಅಜ್ಞರೆಲ್ಲರೂ ತಜ್ಞರಾಗಬೇಕು, ಎಂಬ ಪೂರ್ವಪೀಠಿಕೆ ಮಾಡಿ ಈ ಕಾಯಿದೆಯನ್ನು ಮುಂಬಯಿ ಸರಕಾರವು ಮಂಡಿಸಿತು; ಕಾಯಿದೆ ಕೌನ್ಸಿಲು ಮನ್ನಿಸಿತು. ಆದರೆ ಈ ಕಾಯಿದೆಯಿಂದ ಶಿಕ್ಷಣದ ವಿಕಾಸವಿಲ್ಲ, ವಿಸ್ತಾರವೂ ಇಲ್ಲ. ಇದ್ದ ಶಿಕ್ಷಣ ಬಾಳಿಕೊಂಡುಳಿದರೆ ಸಾಕಾಗಿದೆ. ಪ್ರಾಥಮಿಕ ಶಿಕ್ಷಕರ ಗೋಳಾಟವನ್ನಂತು ಹೇಳಿ ತೀರದು. ಈ ಕಾನೂನಿನ ಅನೇಕ ಕಲಮಿನನ್ವಯ ಸ್ಕೂಲ ಬೋರ್ಡುಗಳಿಗೆ ಒಪ್ಪಿಸಿದ ಪ್ರಾಥಮಿಕ ಶಿಕ್ಷಕರ ದರ್ಜೆಯೇನು? ಅವರು ಸರಕಾರಿ ನೌಕರರೋ ಹೇಗೆ? ಎಂಬ ಸಂಗತಿಯನ್ನು ಕಳೆದ ನವಂಬರ ತಾ. ೧೬ನೇಗೆ ಮುಂಬಯಿಯಲ್ಲಿ ಸೇರಿದ ಮುಂಬಯಿ ಕಾಯಿದೆ ಕೌನ್ಸಿಲಿನ ಸಭೆಯಲ್ಲಿ ಶ್ರೀ| ಸೋಮಣರವರು ಕೇಳಲು, ಅವರು ಸರಕಾರಿ ನೌಕರರಲ್ಲವಾಗಿಯೂ, ಸರಕಾರಿ ನೌಕರರಾಗಿ ಅವರು ಸ್ಕೂಲ ಬೋರ್ಡಿಗೆ ಕೊಡಲ್ಪಟ್ಟವರಲ್ಲವಾಗಿಯೂ, ಅನೇಕ ಕಲಮಿನಂತೆ ಅವರು ಸ್ಕೂಲ ಬೋರ್ಡಿನ ಸ್ವಾಧೀನ ಹೋಗಿದ್ದಾರಾಗಿಯೂ ವಿದ್ಯಾ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕಾಂತ (ನಿಶಕ್ತಿಗಳಿಗೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣಗಳಿಗೆ ಅತ್ಯುತ್ತಮ).
ಹಿಮಸಾಗರ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾ[illegible] ತೈಲ (ರಕ್ತವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಪ್ಲೀಹ ರೋಗಗಳಿಗೆ ಅತ್ಯುತ್ತಮ).
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ರಕ್ತವಾತ, ಅಪತಂತ್ರಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಶ್ರೇಷ್ಠ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರ ಬೇಕಾಗಿದ್ದಾರೆ:-

ಹೆಚ್ಚಿನ ವಿವರಗಳಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಆಮೂಲಾಗ್ರ ನೋಡಿ ಬಹಳ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, ಅನುಭವಿಗಳಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭೂತ್ಯವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತ ಇತ ಅನೇಕ ವನಸ್ಪತಿಗಳ ಉಪಯೋಗವು ಇವರಿಗೆ ಇರುತ್ತದೆ. ಇಂಥಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಷಯ ಶೋಧಕ್ಕೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಬೇಕು. ಅಭಿನಂದನೀಯವು. ಇಂಥಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ಯೋಪಯೋಗಿಯಾದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯಾಸಪರಿ ಪ್ರಯತ್ನತೆ ಸಫಲವಾಗಲೆಂದೂ, ವೈದ್ಯಶಾಲೆಯು ದಿನೇ ದಿನೇ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೩.

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ಯಾಪೀಠ ಪರಿಷತ್ ಇತ್ಯಾದಿ;

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ

ಇಲಾಖೆಯ ದಿವಾಣರಿಂದ ದಿ| ಬ| ಕೆಂಬಳಿಯವರು ಉತ್ತರ ಕೊಟ್ಟರು ಮತ್ತು ಸರಕಾರಿ ನೌಕರರಿಗೆ ಅನ್ವಯಿಸುವ ಕತ್ತರಿಯ ಉದ್ಧಾರ ಕ್ರಮ ಪ್ರಾಥಮಿಕ ಶಿಕ್ಷಕರಿಗೆ ಅನ್ವಯಿಸುವದಿಲ್ಲವಾಗಿ ಉತ್ತರ ಕೊಟ್ಟರು. ಪ್ರಾಥಮಿಕ ಶಿಕ್ಷಕರು ಸರಕಾರಿ ನೌಕರರಲ್ಲವೆ ಪ್ರಾಥಮಿಕ ಶಿಕ್ಷಕರ ಸಂಬಳದಲ್ಲಿ ಕತ್ತರಿ ಮಾಡಲಿಕ್ಕೆ ಸರಕಾರ ಮನ್ನಣೆಯೇಕೆ? ಅನೇಕ ಕಪಿ ಸನ್ನಯ ಬೋರ್ಡಿಗೆ ಒಪ್ಪಿಸಿದ ೧೯೨೩ನೇ ಇಸ್ವಿಯ ವರೆಗಿನ ಶಿಕ್ಷಕರಿಗೆ ಸರಕಾರವು ಆ ಪೂರ್ವದಲ್ಲಿ ನಡಿಸಿದಂತೆ ನಡಿಸಿಕೊಳ್ಳಲು ಬದ್ಧವಿದೆ ಸರಕಾರದ ಹಕ್ಕುಗಳು, ಸರಕಾರದ ಹೊಣೆಗಳು, ಕರ್ತವ್ಯಗಳು, ಅಧಿಕಾರಗಳು, (೮)-(೨)ನೇ ಕಲಮಿನನ್ವಯ ಸ್ಕೂಲ ಬೋರ್ಡಿಗೆ ಸರಕಾರವು ವಹಿಸಿ ಸಂಬಳದ ಸ್ಕೇಲುಯ ನ ಪ್ರಮಾಣವನ್ನು ಹೆಚ್ಚು-ಕಡಿಮೆ ಮಾಡ ನಿಶ್ಚಯಿಸಿದ ಸ್ಕೇಲಿನಂತೆ ಸಂಬಳವನ್ನು ಸಕಾಲದಲ್ಲಿ ತೆರಲು (೮) (೨) (೪) ಕಲಮಿನಂತೆ ಸ್ಕೂಲ ಬೋರ್ಡುಗಳು ಬದ್ಧವಿವೆ. ಸರಕಾರ ಮನ್ನಣೆ ಪಡೆದ ಪಗಾರಿನ ಸ್ಕೇಲುಗಳಲ್ಲಿ ಹೆಚ್ಚು-ಕಡಿಮೆ ಮಾಡಲು ಸ್ಕೂಲ ಬೋರ್ಡಿಗೆ ಅಧಿಕಾರವಿಲ್ಲ ಶಿಕ್ಷಕರ ಕೆಲಸದಿಂದ ಕಡಿಮೆ ಮಾಡುವಲ್ಲಿ ಸರಕಾರದ ಕರ ದೂರಿಕೊಳ್ಳಲು (೮) (೨) (೮) ಕಲಮಿನಿಂದ ವಿಧಿಸಲ್ಪಟ್ಟಿದೆ. ಹೀಗೆ ಕಟ್ಟು-ಮುಟ್ಟಿಗೂ ಸರಕಾರದ ಅಂಕಿಯಿರುವಾಗ, ೧೯೨೩ನೇ ಇಸ್ವಿಯ ಪೂರ್ವದಲ್ಲಿ ಸರಕಾರವೇ ಶಿಕ್ಷಕರಿಗೆ ನೇಮಿಸಿಕೊಂಡಾಗ, ಈಗಲೂ ವಿದ್ಯಾ ಇಲಾಖೆಯವರ ಮೇಲ್ವಿಚಾರ ಇದ್ದಾಗ ಪ್ರಾಥಮಿಕ ಶಿಕ್ಷಕರು ಸರಕಾರಿ ನೌಕರರಲ್ಲವಾಗಿ ಹೇಳುವದು ಹೇಗೆ? ಸರಕಾರಿ ನೌಕರರಲ್ಲವಾದರೆ ಸರಕಾರವು ೧೯೨೩ನೇ ಇಸವಿಯ ಪ್ರಾಥಮಿಕ ಶಿಕ್ಷಣ ಕಾನೂನಿನಂತೆ ಸಂಬಳದ ರಕಮನ್ನು ಸರಕಾರವು ಬೋರ್ಡಿಗೆ ಪೂರೈಸಲು ಬದ್ಧವಿದ್ದಾಗ ಸರಕಾರವು ದ್ರವ್ಯಸಹಾಯವನ್ನು ಕತ್ತರಿಸಿ ಕೊಡುವ ಬಗೆ ಹೇಗೆ? ಮತ್ತು ಆ ಪ್ರಮಾಣದಂತೆ ಪ್ರಾಥಮಿಕ ಶಿಕ್ಷಕರ ಪಗಾರು ಕತ್ತರಿಸಿಹೋದ ಬಗೆ ಹೇಗೆ? ನಷ್ಟವಾಗುವಾಗ ಪ್ರಾಥಮಿಕ ಶಿಕ್ಷಕರು ಸರಕಾರಿ ನೌಕರರು. ಲಾಭವಾಗುವಾಗ ಬೋರ್ಡಿನ ನೌಕರರು, ಹೀಗೆ ಸರಕಾರದ ಅಂಬೋಣವಿರುವದೇ? ಈಗಲೂ ಸರಕಾರವು ಶಿಕ್ಷಕರ ಸಂಬಳದ ಬಗ್ಗೆ ಕೊಡುವ ದ್ರವ್ಯಸಹಾಯವನ್ನು ಕತ್ತರಿಸಿ ಕೊಡುವದೇಕೆ? ಸರಕಾರಿ ನೌಕರರಲ್ಲವಾದರೆ, ಸ್ಕೂಲ ಬೋರ್ಡಿಗೆ ಸರ್ವಾಧಿಕಾರವಿದ್ದರೆ, ಶಿಕ್ಷಕರ ಸಂಬಳವನ್ನು ಕತ್ತರಿಸಲು ಸರಕಾರಿ ವಿದ್ಯಾ ಇಲಾಖೆಗೆ ಯಾವ ಅಧಿಕಾರ ಇರುತ್ತದೆ? ಪಗಾರಿನ ಸ್ಕೇಲಿನಲ್ಲಿ ಹೆಚ್ಚು-ಕಡಿಮೆ ಮಾಡುವದೂ ನಿಶ್ಚಯಿಸಿದ ಸ್ಕೇಲಿನಂತೆ ಕೊಡಬೇಕಾದ ಸಂಬಳಕ್ಕೆ ಕತ್ತರಿ ಹಾಕುವದೂ ಒಂದೇ ಅಲ್ಲ. ಸ್ಕೇಲನ್ನು ತಿದ್ದುಪಡಿ ಮಾಡಿದಾಗ ಸ್ಕೇಲಿನಂತೆ ಸಂಬಳ ಕೊಡಲು ಸರಕಾರವು ಬದ್ಧವಿದೆ, ಬೋರ್ಡುಗಳೂ ಬದ್ಧವಿವೆ ಹೀಗಿದ್ದು ಸರಕಾರಿ ನೌಕರರಲ್ಲವಾಗಿ ದಿ| ಬ| ಕೆಂಬಳಿಯವರು ಸರಕಾರಿ ಅಭಿಪ್ರಾಯ ಕೊಟ್ಟಿದ್ದನ್ನು ನೋಡಿ ಆಶ್ಚರ್ಯವಾಗಿದೆ. ಪ್ರಾಥಮಿಕ ಶಿಕ್ಷಕರು ಸರಕಾರಿ ನೌಕರರಿರಲಿ, ಇಲ್ಲದಿರಲಿ, ಸರಕಾರವು ಅವರೊಡನೆ ಮಾಡಿದ ಕರಾರಿನಂತೆ ಸಂಬಳ ತೆರಲು ಬದ್ಧವಿದೆ ಸರಕಾರಿ ನೌಕರರಲ್ಲವೆಂದು ಸರಕಾರವು ಹೇಳಿದೊಡನೆ ಸರಕಾರದ ಹೊಣೆ ತಪ್ಪದು. ರಾ| ಸೋಮಣರವರಾಗಲಿ, ಇತರೇ ಸಭಾಸದರಾಗಲಿ ಪುರವಣಿ ಪ್ರಶ್ನೆಗಳನ್ನು ಕೇಳಿ ಸರಕಾರದ ಕಡೆಯಿಂದ ಖುಲಾಸೆ ಮಾಡಿಕೊಳ್ಳಬಹುದಿತ್ತು. ಪ್ರಾಥಮಿಕ ಶಿಕ್ಷಕರು ಈ ಕುರಿತು ತಕ್ಕ ಉಪಾಯ ಕೈಕೊಳ್ಳುವದು ವಿಹಿತ.

⁂

ಈಗ 'ಸ್ವರಾಜ್ಯ ಮನ್ವಂತರ,' ರಾಜ್ಯಾಧಿಕಾರದ ದಾನ ಕೊಡಲು ಬ್ರಿಟಿಶರು ಮುಂದಾಗಿದ್ದಾರೆ. ಆದರೆ ರಾಜ್ಯಕರ್ತರಲ್ಲಿ ಹೊಸ ಮನ್ವಂತರಕ್ಕೆ ತಕ್ಕದ್ದಾಗಿ ವಿಚಾರ ಪಲ್ಲಟವಾಗಲಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಬೇಕಾದ ಇಸಮನ್ನು ನೇಮಿಸಿಕೊಳ್ಳುವ ಅಧಿಕಾರವಿದೆ ಅವರಿಗೆ ಕೆಲಸದಿಂದ ಕಡಿಮೆ ಮಾಡುವ ಅಧಿಕಾರವೂ ಅವಕ್ಕೇ ಉಳಿಯಬೇಕು ಕಳೆದ ಕಾಯದೆ ಕೌನ್ಸಿಲು ಸಭೆಯಲ್ಲಿ ಮುಂಬಯಿ ಸರಕಾರವು ಲೋಕಲ್ ಬೋರ್ಡ ಕಾಯಿದೆಯನ್ನು ತಿದ್ದುಪಡಿ ಮಾಡಿಕೊಂಡು ಬೋರ್ಡಿನ ನೌಕರರನ್ನು ಬೋರ್ಡಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಕೆಲಸದಿಂದ ಕಡಿಮೆ ಮಾಡುವ ಅಧಿಕಾರವನ್ನು ಸರಕಾರವು ಪಡೆದಿದೆ. ಅಂದರೆ ಜಿಲ್ಲಾ ಬೋರ್ಡುಗಳಿಗೆ ಆಡಳಿತ ನಡಿಸಲು ಯೋಗ್ಯರಾರು, ಅಯೋಗ್ಯರಾರು? ಎಂಬ ಸಂಗತಿ ಜ್ಞಾನವಿರುವದಾಗಿ ಮನ್ನಿಸಲು ಸರಕಾರವು ಸಿದ್ಧವಿಲ್ಲ ಈ ತನಕ ಸ್ಥಾನಿಕ ಸ್ವರಾಜ್ಯವನ್ನು ಸರಕಾರವು ಹಿಂದೀಯರಿಗೆ ದಾನ ಮಾಡಿ ಪಾಠ ಕಲಿಸಿದಾಗ್ಯೂ ಬೋರ್ಡುಗಳು ಮೂಲಾಕ್ಷರಗಳನ್ನೇ ಕಲಿಯಲಿಲ್ಲವಾಗಿ ಸರಕಾರದ ಅಭಿಪ್ರಾಯವಾಗಿದೆಂದು ಈಗ ವಿಚ್ಛಳವಾಗಿ ಸ್ವರಾಜ್ಯದ ನಿದರ್ಶನವಾಗಿ ಕೇಳಬಹುದು ಸರಕಾರದ ಅಪನಂಬಿಗೆಗೆ ಪಾತ್ರವಾಗಿ ಬೋರ್ಡುಗಳು ಸುಸೂತ್ರವಾಗಿ ಕಾರಬಾರ ನಡಿಸಲಾರವು, ಅದರಿಂದ ಸರಕಾರವು ಸ್ಥಾನಿಕ ಸ್ವರಾಜ್ಯದ

THE AGRICULTURAL & INDUSTRIAL BANK, LIMITED.
(Incorporated in British India)
Head office:– COONDAPOOR. Branch:– KUMTA.
Telegrams.– "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್.
ಹೆಡ್ ಆಫೀಸು:— ಕುಂದಾಪುರ. ಬ್ರೆಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು:-3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ 3½, 4½, 5½, 6, 6½ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಆಖೈರ ವರೆಗೆ ಸಾಲಿಯಾನ ಶೇಕಡಾ ರೂ 2½ ವ ಜುಲೈಯಿಂದ ಡಿಸೆಂಬರ ಆಖೈರ ವರೆಗೆ 1½ರಂತೆ ಬಡ್ಡಿಯಿಂದ ಬಿನ್ ಮಿರ್ಜಿನಿಂದ ಅಂಗೀಕರಿಸಲಾಗುವವು

ಸೇವಿಂಗ್ಸ್ ಬೇಂಕ ಠೇವು— ಶೇಕಡಾ ರೂ 4ರಂತೆ ಬಡ್ಡಿ. ಬಿನ್ ಮಿರ್ಜಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯಾಯತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿ ಹುಂಡಿಗಳು ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ ಮಾಹಿತಿ ಪುಸ್ತಕ (Rules of Business)ವನ್ನು ಪಡೆಯಿರಿ.

ಕುಮಟಾ,
ತಾ 23—10—1935.

K Vaman Shenai &
G. Balakrishna S Nayak.
Managing Directors.

ಸಂಸ್ಥೆಗಳನ್ನು ಕಳಸೋಸಿ ಕಿತ್ತೊಗೆಯುವದು ಲೇಸು ಮೊಟ್ಟಮೊಟ್ಟಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ನಿಯಂತ್ರಿಸಿ ಕೈ-ಕಾಲು ಹೆಡಮುರಿಗೆ ಕಟ್ಟಿ ಪಾರಗಲಿಸುವದು ಅಸಾಧ್ಯ ಮಾತು.

* * *

ಕಳೆದ ತಾ. ೩೧ ೩-೩೫ನೇಗೆ ಅಂತ್ಯವಾಗುವ ಮುಂಬಯಿ ಸರಕಾರದ ಭೂಕಂದಾಯದ ವರದಿ ಪ್ರಕಟವಾಗಿದೆ. "ಮುಂಬಯಿ ಸರಕಾರಕ್ಕೆ ರೂ. ೩೪೧೧೬೦೦೦ ಭೂಕಂದಾಯ ಸಲ್ಲತಕ್ಕದ್ದು. ಅವುಗಳಲ್ಲಿ ರೂ ೩೪೦೭೪೦೦೦ ವಸೂಲಾಯಿತು. ಸರಕಾರವು ಒಟ್ಟು ೮೭೩ ಪ್ರಕರಣಗಳಲ್ಲಿ ಚರ-ಜಂಗಮ ಜಪ್ತ ಮಾಡಬೇಕಾಯಿತು ಮತ್ತು ಒಟ್ಟು ೭೮೮ ಪ್ರಕರಣಗಳಲ್ಲಿ ಭೂಮಿಯನ್ನು ಸರಕಾರಜಪ್ತ ಮಾಡಬೇಕಾಯಿತು! ಸರಕಾರವು ಈ ಪ್ರಕಾರ ಭೂಕಂದಾಯದ ವಸೂಲಿಯ ಬಗ್ಗೆ ಒತ್ತಾಯ ಮಾಡುವ ಪ್ರಸಂಗವೇ ಬರಲಿಲ್ಲ, ಬೇಸಾಯಗಾರರು ಸ್ವಸಂತೋಷದಿಂದ ತೀರ್ವೆ ತೆತ್ತರು; ಮುಲ್ಕಿ ಅಧಿಕಾರಿಗಳು ಮನವೊಲಿಕೆಯಿಂದ ತೀರ್ವೆಯನ್ನು ವಸೂಲ ಮಾಡಿದರು; ಭೂಕಂದಾಯ ಪದ್ಧತಿ ಕಾಲಮಾನಕ್ಕೆ ತಕ್ಕದ್ದಾಗಿರುತ್ತದೆಂಬವಕ್ಕೆ ಇದೇ ಸಾಕ್ಷಿ." ಎಂಬದಾಗಿ ಸರಕಾರದ ಅಂಬೋಣ. ಜನರು ಕಷ್ಟದಲ್ಲಿದ್ದರೆ, ಸರಕಾರದ ಪದ್ಧತಿ ಜನರ ಸ್ಥಿತ್ಯಂತರಕ್ಕೆ ಅನುರೂಪವಾಗಿ ರೂಪಾಂತರ ಹೊಂದದಿದ್ದರೆ ರೂ. ೩೪೧೧೬೦೦೦ ರಕಮಿನೊಳಗಿಂದ ರೂ. ೩೪೦೭೪೦೦೦ ರಕಮು ವಸೂಲಾಗುತ್ತಿದ್ದಿಲ್ಲವಾಗಿ ರಿಪೋರ್ಟಿನಲ್ಲಿ ಬರೆದು ಸರಕಾರವು ತನ್ನ ಬೆನ್ನು ತಾನೇ ತಟ್ಟಿಕೊಂಡಿದೆ. ಭೂಕಂದಾಯದ ವರ್ಷದಲ್ಲಿ ಕಾಳು-ಕಡಿಗಳ ದರ ಅರ್ಧಕ್ಕೆ ಇಳಿದಾಗ, ಬೆಳೆಯ ಮಾನವೂ ಕುಗ್ಗಿದಾಗ ತೀರ್ವೆಯನ್ನು ತೆರಬೇಕಾದರೆ ಜನರು ಯಾವ ಪರಿಯಿಂದ ಒದ್ದಾಡಿದರೆಂದು ಕಲ್ಪಿಸಿ ತಿಳಿಯಬೇಕು. ರೆವಿನ್ಯೂ ಅಧಿಕಾರಿಗಳು ಗ್ರಾಮಾಧಿಕಾರಿಗಳಿಗೆ ಗದರಿಸುವದನ್ನೂ, ಗ್ರಾಮಾಧಿಕಾರಿಗಳು ರೈತರಿಗೆ ಒತ್ತಾಯಪಡಿಸುವದನ್ನೂ ಬೇಸಾಯಗಾರರು ಬಲ್ಲಾದ ವಿಷಯ, ಸರಕಾರಕ್ಕಾದರೂ ಅಗೋಚರವಾದ ವಿಷಯವಿಲ್ಲ! ಭೂಕಂದಾಯದ ಪದ್ಧತಿ, ಭೂಕಂದಾಯದ ಕಾಯಿದೆ ಕ್ರಮ ಕಠಿಣವೆಂದು ಲೋಕವೇ ಹೇಳುತ್ತಿದೆ. ಮುಲ್ಕಿ ಅಧಿಕಾರಿಗಳಂತು ತೀರ್ವೆ ವಸೂಲಿಗಾಗಿ ಬೇಕಾದ ಬಲಾತ್ಕಾರವನ್ನು ನಡಿಸಲಿಕ್ಕೂ ಸಿದ್ಧರಿದ್ದಾರೆ. ತೀರ್ವೆಯನ್ನು ಸಕಾಲದಲ್ಲಿ ತೆರದ ಪ್ರಾಣಿಯು ದುಷ್ಟನು, ಪತಿತನು. ತೀರ್ವೆ ವಸೂಲಿಯ ದಿನಗಳಲ್ಲಿ ರೈತರು ಪಡುವ ಕಷ್ಟವನ್ನು ಗ್ರಹಿಸಬೇಕಾದರೆ ಅವರು ದೀನರಾಗಿ ಕೊಳ್ಳುವ ಸಾಲಗಳ ಪರಿಣಾಮವನ್ನು ವಿಚಾರಿಸಬೇಕು. ಕಾಳು-ಕಡಿಗಳ ಮಾರಾಟದ ದರ ಕಡಿಮೆ ಮಾಡಿ ಇಲ್ಲವೆ ಹೊಲಗಳನ್ನು ಒತ್ತೆಹಾಕಿ ತೀರ್ವೆ ತುಂಬುವ ಕ್ರಮ ಸರಕಾರಕ್ಕೆ ಗೊತ್ತೇ ಇಲ್ಲ! ಸಂತೋಷದಿಂದ, ಸರಕಾರಿ ತೀರ್ವೆ ಪದ್ಧತಿಯ ಔದಾರ್ಯವನ್ನು ವರ್ಣಿಸಿ ಹೊಗಳಿ, ಇಂಥ ಪದ್ಧತಿಯನ್ನು ಪ್ರಚಾರ ಮಾಡಿದ ಬಗ್ಗೆ ಕಾಯ್ದೆ ಕಲ್ಪಕರಿಗೆ ಹರಸಿ, ಬೇಸಾಯಗಾರರು ತೀರ್ವೆ ತುಂಬುತ್ತಾರೆಂದು ಮುಂಬಯಿ ಸರಕಾರವು ಎಣಿಸಿದ್ದನ್ನು ನೋಡಿದರೆ ಅಜ್ಞಾನದ ಬಗ್ಗೆ ಮರುಗಬೇಕೋ, ಧೂರ್ತತನದ ಬಗ್ಗೆ ನಿಷೇಧ ಮಾಡಬೇಕೋ ತಿಳಿಯದು. ಈಗಿನ ಭೂಕಂದಾಯದ ಪದ್ಧತಿ ತೀರ ದುಷ್ಟವಾಗಿದೆಯೆಂದೂ, ಕಾಲಮಾನಕ್ಕೆ ಬಾಹಿರವಾಗಿ, ಬೇಸಾಯಗಾರರ ಸ್ಥಿತ್ಯಂತರಕ್ಕನುರೂಪವಾಗಿ ಪಲ್ಲಟ ಹೊಂದುವದಲ್ಲವಾಗಿಯೂ ತಜ್ಞರನೇಕರು ಅಭಿಪ್ರಾಯಪಟ್ಟಿದ್ದಾರೆ. ಸರಕಾರವು ಅಜ್ಞಾನವೆಷ ಧರಿಸಿ ಭಯಂಕರ ಕಷ್ಟದಿಂದ ರಾಜಾರ್ಥವನ್ನು ನಿರುಪಾಯವಾಗಿ ತೆತ್ತ ಬಡ ಬೇಸಾಯಗಾರರಿಗೆ 'ಥೇಂಕ್ಸ'ದ ಅರ್ಥಶೂನ್ಯ ಉಪಕಾರದ ಪ್ರತಿಫಲ ಕೊಟ್ಟು ಆತ್ಮಶ್ಲಾಘನೆ ಮಾಡಿಕೊಳ್ಳುವದು ಯೋಗ್ಯವಲ್ಲ. ಅರೆಹೊಟ್ಟೆಯನ್ನುಂಡು ರಾಜಾರ್ಥವನ್ನು ರಾಜಭಕ್ತಿಯಿಂದ ಸಕಾಲದಲ್ಲಿ ಬೇಸಾಯಗಾರರು ಭವಿಷ್ಯದ ಸುಖಪಾತ್ರೆಯಿಂದ ತೆತ್ತಿದ್ದಾರೆ, ದಾರಿದ್ರ್ಯದಲ್ಲಿ ಮುಳುಗಿ ಹೋದಾಗ್ಯೂ ರಾಜಾರ್ಥಕ್ಕೆ ನ್ಯೂನತೆ ಮಾಡಲಿಲ್ಲ. ಸರಕಾರವು ವಿಪರೀತ ಅರ್ಥ ಮಾಡಿ ಆತ್ಮವಂಚನೆಯನ್ನೂ ಲೋಕವಂಚನೆಯನ್ನೂ ಮಾಡಲೀಸದೆ ತೀರ್ವೆಯ ಪದ್ಧತಿಯನ್ನು ತಿದ್ದುಪಡಿ ಮಾಡುವ ವಿಚಾರವನ್ನು ಕಾರ್ಯವೇ ಕೈಕೊಳ್ಳಬೇಕು. ಇಲ್ಲದಿದ್ದರೆ ಅಕ್ಷೇಮವುಪದೆ. ಜನರು ಸಂತೋಷದಿಂದ ತಮ್ಮ ನಿರ್ವಾಹ ಸಾಗಿಸಿಕೊಂಡು ಯೋಗ್ಯತೆಂಗಯೆಂದೆಣಿಸಿ ತೀರ್ವೆಯನ್ನು ತೆರುತ್ತಾರೆಂದು ಸರಕಾರವು ತಿಳಿಯಲಾಗದು. ಬೇಸಾಯದ ಉತ್ಪನ್ನ ಖರ್ಚು, ಬೇಸಾಯಗಾರರ ಉದರನಿರ್ವಾಹದ ಖರ್ಚು, ಇವನ್ನೆಲ್ಲ ಸರಕಾರವು ಪರಿಶೀಲಿಸಿದರೆ ಬೇಸಾಯಗಾರರು ತೀರ್ವೆಯನ್ನು ತೆರುವದೊತ್ತಟ್ಟಿಗಿರಲಿ, ತೀರ್ವೆಯಷ್ಟೇ ರಕಮನ್ನು ಸರಕಾರವು ಬಡ ಬೇಸಾಯಗಾರರಿಗೆ ಹಂಚಿದಾಗ್ಯೂ ಅವರ ಕಷ್ಟಪರಿಹಾರವಾ ಮು. ಮದ್ರಾಸದೊಳಗಿನ ರೈತರ ಸ್ಥಿತಿಯನ್ನು ವಿಚಾ ಮಾಡಲೋಸುಗ ಮದ್ರಾಸ ಸರಕಾರದಿಂದ ನೇಮಿ ಲ್ಪಟ್ಟ ರಾ| ಸತ್ಯನಾಥನ್‌ರವರು ತಮ್ಮ ರಿಪೋರ್ಟಿನ ಬೇಸಾಯದ ಸ್ಥಿತಿಯನ್ನು ಒಳ್ಳೇ ಚಿತ್ರವೇಧ ವಾಗಿ ವರ್ಣಿಸಿದ್ದಾರೆ. "ಬೇಸಾಯಗಾರರ ಸ್ಥಿತಿ ಪ್ರತಿ ೫ ವರ್ಷಗಳಲ್ಲಿ ಮೂರು ನಮೂನೆಯದಾಗುತ್ತದೆ ೧ ವರ್ಷ ಒಳ್ಳೇ ಬೆಳೆ, ೧ ವರ್ಷ ಹೀನ ಬೆಳೆ, ೩ ವರ್ಷ ಸಾಮಾನ್ಯ ಬೆಳೆ. ಒಳ್ಳೇ ಬೆಳೆಯಾದ ವರ್ಷ ಬೇಸಾಯಗಾರನು ಸಾಲವಿಲ್ಲದೆ ನಿರ್ವಾಹ ಮಾಡಬಹುದು; ಬೆಳೆ ಕೆಟ್ಟು ಹೋದ ವರುಷ ಕೂಳಿಗೆ ಸಾಲ ಸಾಗುವಳಿಗೆ ಸಾಲ, ಉಡಿಗೆ-ತೊಡಿಗೆಗಳಿಗಾಗಿ ಸಾಲ ಸಾಮಾನ್ಯ ಬೆಳೆಯಾದ ವರ್ಷಗಳಲ್ಲಿಯೂ ಆತನು ಕೆಲಮಟ್ಟಿಗೆ ಸಾಲ ತರಲೇಬೇಕೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಮದುವೆಗಾಗಿ, ಎತ್ತುಕೊಳ್ಳಲು ಸಾಲ ತರುವದಂತು ಆಯಿತು, ಸಾಗುವಳಿ ಖರ್ಚಿಗೂ ಸಾಲ ತರಬೇಕು; ತೀರ್ವೆ ಮತ್ತು ಬಡ್ಡಿ ಇವುಗಳನ್ನು ಕೊಟ್ಟು ಹಣ ತಿಲ್ಕು ಉಳಿದಲ್ಲಿ ಸಾಗುವಳಿ ಖರ್ಚಿಗಾಗಿ ತಂದ ಸಾಲವನ್ನು ಆತ ತೀರಿಸಬಹುದು ಆದರೆ ಬಹುತರವಾಗಿ ಇಷ್ಟು ಸುಸ್ಥಿತಿ ಆತನಿಗೆ ಪ್ರಾಪ್ತವಾಗುವದಿಲ್ಲ. ಆದರಿಂದ ಸಾಗುವಳಿ ಖರ್ಚಿಗಾಗಿ ತಂದ ಸಾಲದ ರಕಮು ಕ್ರಮವಾಗಿ ಸಾಲದ ಹೊರೆಯಲ್ಲಿ ಸೇರುತ್ತದೆ.

[Even in the middling years, the cultivator, I maintain, is obliged to borrow to some extent, not only for special expenses like marriage or to buy a bullock, but also for his cultivation expenses. If payment of land revenue and of interest on standing debt do not absorb almost all his surplus, he may be able to pay off at least the recurring debt for cultivation expenses. Often as not, he is unable to do even this and so the borrowings for

[ಮುಂದೆ ೧೦ನೇ ಪಾನು ನೋಡಿರಿ.]

For sale ! For sale !! For sale !!

Udipi Syndicate Bank Preference Shares for sale !

Rate less than the market rate !

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs. 7 by the Bank authorities

These shares will he sold less than the market rates. Intending buyers should apply to the following address:--

Vithal Subraya Prabhu Shiroorkar,
Post:- ANKOLA.

ರಾಮ-ರಾವಣರೀರ್ವರಿಗೂ ಸ್ವಸ್ತಿ!

[ನಿರೀಕ್ಷಕನು ಬರೆದುದು.]

ಗುರುವಾರ ತಾ ೫ನೇಗೆ ರೀತಿಯಂತೆ ಸಿಂಹಾಸನ ಭಾಷಣದ ವಾಚನವಾಯಿತು. ಸಂಪ್ರದಾಯದಂತೆ ಬಾದಶಹರು ಆ ಭಾಷಣವನ್ನು ಓದಬೇಕಾಗಿತ್ತು. ಆದರೆ ಬಾದಶಹರ ಸಹೋದರಿಯರು ಮುನ್ನಿನ ದಿನವೇ ತೀರಿಕೊಂಡಿದ್ದರಿಂದ ಬಾದಶಹರು ಪಾರ್ಲಿಮೆಂಟಿನ ಸಭೆಗೆ ಚಿತ್ತೈಸಲಿಲ್ಲ ಆ ಬಗ್ಗೆ ಬಾದಶಹರು ಅಂತಃಕರಣಪೂರ್ವಕವಾಗಿ ವ್ಯಸನಪ್ರದರ್ಶನ ಮಾಡಿದ್ದರು. ಬಾದಶಹರ ಅಪ್ಪಣೆ ಮೇರೆಗೆ ದೊರೆಗಳೊಬ್ಬರು ಭಾಷಣ ಓದುವ ವಿಧಿ ಮುಗಿಸಿದರು “ಇತಾಲಿ-ಹಬಸಿ ವಾದವನ್ನು ಸಂಧಿಯಿಂದ ತೀರ್ಗಡೆ ಮಾಡಲು ಪ್ರಧಾನ ಮಂಡಳವು ಪಕ್ಷಪ್ರಯತ್ನ ಮಾಡುವದು ಸದ್ಯಕ್ಕಿದ್ದ ಸೈನ್ಯಸಾಹಿತ್ಯ ಸಾಮ್ರಾಜ್ಯ ರಕ್ಷಣೆಗೆ ಉಚಿತವಾದದ್ದಿಲ್ಲ; ಅದನ್ನು ಬೆಳಸತಕ್ಕದ್ದು,” ಎಂಬದಾಗಿ ರಾಜಾಜ್ಞೆಯಾಗಿದೆ ಫ್ರೆಂಚ ಪ್ರಧಾನರಾದ ಲಾವಲ್‌ರವರು ಇನ್ನೂ ಸಂಧಿಯ ವಿಚಾರ ಬಿಡಲೊಲ್ಲರು. ಶುಕ್ರವಾರ ಬ್ರಿಟಿಶ ಸರಕಾರವು ತನ್ನ ಸೂಚನೆಗಳನ್ನು ಫ್ರೆಂಚ ಸರಕಾರಕ್ಕೆ ತಿಳಿಸಿದೆ. ಇತಾಲಿ-ಹಬಸಿ ದೇಶವನ್ನು ಇತಾಲಿಗೆ ಹಂಚಿಕೊಟ್ಟು ಸಂಧಿ ಮಾಡುವ ಯೋಜನೆ ಇದೆಂದು ಹೇಳುತ್ತಾರೆ. ಮುಸೋಲಿನಿಯವರಿಗೆ ಇವು ಮಾನ್ಯವಾಗುವ ಲಕ್ಷಣಗಳಿಲ್ಲ. ಇವನ್ನು ತಿದ್ದುಪಡಿ ಮಾಡಿಕೊಳ್ಳುವದಕ್ಕಾಗಿ ಲಾವಲ್‌ರವರ ಪ್ರಯತ್ನ. ಬ್ರಿಟಿಶ ವಿದೇಶ ಇಲಾಖೆಯ ಪ್ರಧಾನರಾದ ಸರ್ ಸೆಮ್ಯುಅಲ್ ಹೋರರವರಿಗೆ ಅಸ್ವಾಸ್ಥ್ಯ ಉಂಟಾಗಿದೆ ಅದಕ್ಕಾಗಿ ಸ್ವಿತ್ಸರ್ಲಂಡಿನಲ್ಲಿ ಅವರು ವಿಶ್ರಾಂತಿ ಪಡೆಯಬೇಕೆಂದು ರಾಜವೈದ್ಯರು ಅಭಿಪ್ರಾಯ ಕೊಟ್ಟಿದ್ದಾರಂತೆ. ಅದರಂತೆ ಅವರು ಮೊನ್ನೆ ಲಂಡನಿನಿಂದ ಹೊರಡುವವರಿದ್ದರು ಹಾದಿಯ ಮೇಲೆ ಅವರು ಲಾವಲ್‌ರವರಿಗೆ ಭೆಟ್ಟಿಯಾಗಿ ಸಂಧಿಯ ಶರ್ತುಗಳನ್ನು ತಿದ್ದುಪಡಿ ಮಾಡುವರೆಂದು ಹೇಳುತ್ತಾರೆ. ಆದರೆ ರೋಮ ಪಟ್ಟಣದಲ್ಲಿ ಸಂಧಿ ಪ್ರಸ್ತಾಪದ ವಾರ್ತೆಯೇ ಇಲ್ಲ ಇತಾಲಿ ಸರಕಾರದೊಡನೆ ಸಂಧಿ ಪ್ರಸ್ತಾಪ ನಡೆಯುವದಿಲ್ಲವಾಗಿ ಅಧಿಕಾರಿಗಳು ಹೇಳುತ್ತಾರೆ. ಇತಾಲಿಯ ಪ್ರಧಾನ ಮಂಡಳದವರು ಯುದ್ಧ ಪುರಸ್ಕಾರ ವಿಚಾರವನ್ನೇ ನಡೆಸಿದ್ದಾರೆ. ಎಣ್ಣೆ, ಕಲ್ಲಿದ್ದಲಿ ಮೊದಲಾದ ಉರುವಲ ಸಾಮಗ್ರಿಯನ್ನು ಕಬ್ಬಿಣವನ್ನೂ ಇತಾಲಿಗೆ ಪೂರೈಸದಂತೆ ರಾಷ್ಟ್ರಸಂಘದವರು ಇದೇ ಬರುವ ಗುರುವಾರ ತಾರೀಖ ೧೨ನೇಗೆ ಸೇರುವ ಸಭೆಯಲ್ಲಿ ನಿರ್ಣಯ ಮಾಡುವವರಿದ್ದಾರೆ. ಅದಕ್ಕೆ ಮತ ಕೊಟ್ಟವರೆಲ್ಲರೂ ತನ್ನ ಶತ್ರುಸ್ಥಾನದಲ್ಲಿರಬೇಕಾದೀತೆಂಬ ಇತಾಲಿ ಸರಕಾರದ ಮುಂಜಾಗ್ರತೆ ಬ್ರಿಟಿಶ-ಫ್ರೆಂಚ ಸರಕಾರಗಳಿಗೆ ಈ ಮುಂಜಾಗ್ರತೆ ಅನ್ವಯಿಸುವದಿಲ್ಲವಾಗಿಯೂ ಇತಾಲಿ ಸರಕಾರದ ಅಪ್ಪಣೆ. ಇದರರ್ಥವೇ ನನಗೆ ತಿಳಿಯದು. ಇತಾಲಿಯ ಬಹಿಷ್ಕಾರಕ್ಕೆ ಮೂಲ ಕಾರಣ ಬ್ರಿಟಿಶರು, ಎಣ್ಣೆ ಕಲ್ಲಿದ್ದಲಿಗಳನ್ನು ಪೂರೈಸದಂತೆ ಉಪಕ್ರಮ ಮಾಡಿದವರು ಅವರೇ! ಅವರಿಗೇ ಬಿಟ್ಟು ಉಳಿದವರಿಗೆ ದಂಡಿಸುವದು, ಶತ್ರುಗಳನ್ನೆಣಿಸುವದು ಎಲ್ಲಿಯ ನ್ಯಾಯ? ಬ್ರಿಟಿಶರ ಮೇಲೆ ಇತಾಲಿಯವರಿಗೆ ಮಮತೆಯಿರುವದಾಗಿ ನಾನಂತು ಎಣಿಸುವದಿಲ್ಲ ಇತಾಲಿಯಲ್ಲಿ ಬ್ರಿಟಿಶರಿಗೆ ಕಠೋರವಾದ ಬಹಿಷ್ಕಾರ ಬ್ರಿಜ್ ಅಸ್ಕಿಟ ಆಟ ಬ್ರಿಟಿಶರದೆಂದು ಅಲ್ಲಿ ತ್ಯಜಿಸಲ್ಪಟ್ಟಿದೆ ಸಂಜೆ ೫ ಘಂಟೆಗೆ ಚಹ ಕುಡಿಯುವ ಸಂಪ್ರದಾಯ ನಿಂತಿದೆ! ಇಂಗ್ಲಿಷ ಲಿಪಿಯ ಪತ್ರಿಕೆಗಳನ್ನೋದುವವರಿಗೆ ಹುಯಿಲೇಸುತ್ತಾರೆ ಇಂಗ್ಲಿಷರಿಗೆ ವಾಹನಗಳಲ್ಲಿ ಕೂಡ್ರಿಸಿಕೊಳ್ಳಲು ಗಾಡಿಕಾರರು ಒಪ್ಪುವದಿಲ್ಲ ಬ್ರಿಟಿಶ ಪ್ರವೇಶಗಳಿದ್ದ ಸಿನೆಮಾ ಚಿತ್ರಪಟಗಳೊಳಗಿಂದ ಆ ಪ್ರವೇಶಗಳನ್ನು ಕತ್ತರಿಸುತ್ತಾರೆ ಬ್ರಿಟಿಶ ದೇಶದಿಂದ ಆಮದಾದ ಮದ್ಯ ಕುಡಿಯುವದಿಲ್ಲ, ಸಿಗರೇಟುಗಳನ್ನು ಸೇದುವದಿಲ್ಲ. ಇಂಗ್ಲಿಷ ಗ್ರಂಥಗಳಿದ್ದ ವಾಚನಾಲಯಗಳಲ್ಲಿ ಓದುಗರ ಅಭಾವ, ಇಷ್ಟು ಕಠೋರ ಪ್ರವೃತ್ತಿ ಇತಾಲಿಯಲ್ಲೆಲ್ಲ ಹಬ್ಬಿಕೊಂಡಿದೆ ಎಣ್ಣೆಯ ಪ್ರತಿಬಂಧದಿಂದ ಇತಾಲಿಗೆ ಒಳ್ಳೇ ಸಂಕಟ ಅದನ್ನು ಪರಿಹರಿಸಿಕೊಳ್ಳುವದಕ್ಕಾಗಿ ಇತಾಲಿಯವರು ನೆರೆಯ ಅಲ್ಬೇನಿಯಾ ಪ್ರಾಂತದಲ್ಲಿ ಪೆಟ್ರೋಲ-ಎಣ್ಣೆ ತಯಾರಿಸುವದಕ್ಕಾಗಿ ಸ್ಥಾಪನೆಯಾದ ಹೊಸ ಪೆಟ್ರೋಲ ಕಂಪನಿಗೆ ೭ ಕೋಟಿ ಲಾಯರು ಅಂದರೆ ಸರಾಸರಿ ೪ ಕೋಟಿ ರೂಪಾಯಿಗಳ ಬಂಡವಲನ್ನು ಸರಕಾರವು ಪೂರೈಸಬೇಕಾಗಿ ಇತಾಲಿ ಮಂತ್ರಿಮಂಡಳದ ನಿರ್ಣಯ ಇದಲ್ಲದೆ ಅಮೇರಿಕೆಯೊಳಗಿನ ನ್ಯೂ ಜರ್ಸಿ ಪಟ್ಟಣದೊಳಗಿನ ಸ್ಟ್ಯಾಂಡರ್ಡ ಆಯಿಲ್ ಕಂಪನಿಯೊಡನೆ ಇತಾಲಿ ಸರಕಾರವು ತಹನಾಮೆ ಮಾಡಿರುವದಾಗಿಯೂ, ಆ ಕಂಪನಿಯವರು ಕರಾರ ಮಾಡಿರುವದಾಗಿಯೂ, ೩೦ ವರುಷಗಳ ತನಕ ಇತಾಲಿಯವರು ಈ ಕಂಪನಿಯಿಂದಲೇ ಎಣ್ಣೆ ಪಡೆಯಬೇಕಾಗಿ ಕರಾರಾಗಿರುವದಾಗಿಯೂ ಪ್ಯಾರೀಸದೊಳಗಿನ 'ಲೆ ಮೆಟಿನ್' ಪತ್ರಿಕೆಯು ರೋಮದೊಳಗಿನ ಸುದ್ದಿಗಾರರ ಅಂಬೋಣ ಇತಾಲಿಗೆ ಅವಶ್ಯವುಳ್ಳ ಸಂಪೂರ್ಣ ಎಣ್ಣೆಯನ್ನು ಈ ಕಂಪನಿಯವರು ಪೂರೈಸಬೇಕಂತೆ. ಭೂಮಧ್ಯ ಸಮುದ್ರದಿಂದ ಈ ಎಣ್ಣೆ ತುಂಬಿದ ಹಡಗಗಳನ್ನು ಕಳಿಸುವದು ಸಹಜವಾಗಿ ಕಠಿಣ ಮಾತು. ಜಿಬ್ರಾಲ್ಟರ ಸಾಮುದ್ರಧುನಿ ದಾಟಲು ಬ್ರಿಟಿಶರು ಒಪ್ಪಿಗೆ ಕೊಡಲಾರರು ಆದದರಿಂದ ಪೆಸಿಫಿಕ್ ಮಹಾಸಾಗರ, ಹಿಂದೀ ಮಹಾಸಾಗರದೊಳಗಿಂದ ಇತಾಲಿ-ಸೋಮಾಲಿ ಪ್ರಾಂತಕ್ಕೆ ತಲ್ಪಿಸುವ ವ್ಯವಸ್ಥೆಯಾಗುವದಂತೆ ಮೇಲಾಗಿ ಅಲ್ಬೇನಿಯಾದೊಳಗಿನ ಎಣ್ಣೆ ಕಂಪನಿಗೆ ಅವಶ್ಯವುಳ್ಳ ೧ ಬಿಲ್ಲ ಲಾಯರು (೭೦ ಕೋಟಿ ರೂಪಾಯಿ)ಗಳ ಬಂಡವಲನ್ನು ಅಲ್ಲಿ ಎತ್ತುವಳಿ ಮಾಡಿ ಅಲ್ಬೇನಿಯಾ ಕಂಪನಿಗೆ ಪೂರೈಸುವ ವಿಚಾರವೂ ನಡೆದಿರುವದಾಗಿಯೂ ರೋಮ ಸುದ್ದಿಗಾರರು ಪತ್ತೆ ಹಚ್ಚಿದ್ದಾರೆ. ಇದೇ ಬರುವ ಡಿಸೆಂಬರ ೧೮ನೇ ತಾರೀಖಿಗೆ ಇತಾಲಿಯಲ್ಲೆಲ್ಲ Wedding Ring Day ಯಾನೆ ವಿವಾಹ-ಉಂಗುರಗಳನ್ನು ಸರಕಾರಕ್ಕೆ ಅರ್ಪಿಸುವ ಸಮಾರಂಭವಾಗುವದಿದೆ ರಾಣಿಯವರು ತಮ್ಮ ಉಂಗುರವನ್ನು ಇತಾಲಿ ಸರಕಾರಕ್ಕೆ ಕಳುಹಿ “ಈ ಕಾಣಿಕೆ ಅಮೂಲ್ಯವಿದೆ ನಾನು ಇತಾಲಿ ಜನಾಂಗಕ್ಕೆ ಸೇರಿದ ಸ್ಮರಣ ಮುದ್ರಿಕೆಯಿದು.” ಎಂಬದಾಗಿ ರಾಣಿಯವರು ಉದ್ಗರಿಸಿ ಮುಸೋಲಿನಿಯವರಿಗೆ ಉಂಗುರವನ್ನು ಕಳುಹಿದ್ದಾರೆ. ಮಹಾರಾಣಿಯವರು ಮೊಂಟೆನಿಗ್ರೋದ ಅರಸುಮನೆತನಕ್ಕೆ ಒಪ್ಪಿದವರು. ಅರಸರಾದ ಇಮೆನ್ಯುಅಲ್‌ರೊಡನೆ ೧೮೯೬ನೇ ಇಸ್ವಿ ಆಕ್ಟೋಬರ ತಿಂಗಳಲ್ಲಿ ಅವರ ವಿವಾಹವಾಯಿತು ಅಂದಿನಿಂದ ಈ ಉಂಗುರ ಅವರು ಧರಿಸಿದ್ದ ಅರಸರಾದ ಇಮೆನ್ಯುಅಲ್‌ರವರೂ ತಮ್ಮ ಉಂಗುರವನ್ನೂ, ಅದರಜೊತೆಗೆ ಕೆಲವು ಚಿನ್ನದಪಾತ್ರೆಯನ್ನೂ ಕಾಣಿಕೆಯಾಗಿ ರಾಷ್ಟ್ರಕ್ಕೆ ಅರ್ಪಿಸಿದ್ದಾರೆ. ದೇಶತುಂಬ ಉಂಗುರ ಅರ್ಪಿಸುವ ಗದ್ದಲ ಭರದಿಂದ ನಡೆದಿದೆ. ಇತಾಲಿ ಸರಕಾರವು ಶಸ್ತ್ರಾಸ್ತ್ರಗಳಿಗಾಗಿ ರೋಖ ಹಣ ಕೊಡುವ ಪ್ರಸಂಗವಿದ್ದದರಿಂದ ಕೋಶವನ್ನು ಭದ್ರಪಡಿಸುವದಕ್ಕಾಗಿ ಸಕಲ ಪ್ರಜಾ ಜನರು ಅಮೂಲ್ಯ ಕಾಣಿಕೆಯನ್ನರ್ಪಿಸಿ ಉತ್ಸಾಹದಿಂದ ನೆರವಾಗುತ್ತಲಿದ್ದಾರೆ. ಬ್ರಿಟಿಶರು ೩೦ ಕೋಟಿ ಪವನಿನ ಸಾಲ ಹೊರಡಿಸಿದ್ದರು. ಅದು ಒಂದೇ ದಿನದೊಳಗೆ-ಏಕೆ? ೧-೨ ತಾಸುಗಳಲ್ಲಿಯೇ-ಬ್ರಿಟಿಶ ಸರಕಾರಕ್ಕೆ ಒತ್ತೈಸಿತು. ಇದರ ಬಡ್ಡಿಯ ದರ ದರಸಾಲು ದರ ಶೇಕಡಾ ರೂ ೧ರಂತೆ ಶಸ್ತ್ರಾಸ್ತ್ರಗಳನ್ನು ಬೆಳಸುವದಕ್ಕಾಗಿ, ಹಿಂದಿನ ಸಾಲಗಳನ್ನು ತೀರಿಸುವದಕ್ಕಾಗಿ ಈ ಸಾಲ ಪಡಕೊಳ್ಳಲಾಗಿದೆ. ಏಡನ್‌ದ ಸಂರಕ್ಷಣೆಗಾಗಿ ಹಿಂದುಸ್ಥಾನ ಸರಕಾರಕ್ಕೆ ಬ್ರಿಟಿಶ ಸಾಮ್ರಾಜ್ಯ ಸರಕಾರವು ಅಪ್ಪಣೆ ಮಾಡಿ ಹಿಂದೀ ಕಾಲಾಳುಗಳ ಸೈನ್ಯವನ್ನೊಂದು ಪುಣೆಯಿಂದ ಕಳೆದ ವಾರ ರವಾನಿಸಿತು. ಕಳೆದ ವಾರದಿಂದ ಮುಂಬಯಿಯಲ್ಲಿ ಯುದ್ಧ-ನಾಟಕ ನಡೆದಿದೆ ಶತ್ರು ಹಡಗುಪಡೆಗಳು ಮುಂಬಯಿ ಪಟ್ಟಣದ ಮೇಲೆ ಸಾಗಿಬರುತ್ತಿವೆ ಅವುಗಳ ಪತ್ತೆ ಹಚ್ಚಲು ಸೈನ್ಯಾಧಿಕಾರಿಗಳು ತೊಡಗಿದ್ದಾರೆ 'ಇಂಡಸ್' 'ಕಾರ್ನವಾಲೀಸ' ಎಂಬ ಹಿಂದೀ ಸೈನ್ಯ ಇಲಾಖೆಯ ಹಡಗುಪಡೆಗಳು 'ಬಾಕರ' 'ಬ್ರೈಟ' ಎಂಬ ಹೆಸರನ್ನು ಧರಿಸಿ ಮುಂಬಯಿ ಬಂದರದ ಮೇಲೆ ಆಕಸ್ಮಾತ್ ಸಾಗಿ ಬಂದವು. ಅವುಗಳಿಗೆ ಹಿಂದೀ ನೌಕಾ ಸೈನ್ಯಾಧಿಕಾರಿಗಳು ಇದಿರಾಗುವರು. ಜಿಬ್ರಾಲ್ಟರದ ಸಮೀಪ ಹೂಡ-ರಿನೌನ ಹಡಗಗಳು ಅಟ್ಲಾಂಟಿಕ್ ಮಹಾಸಾಗರದಲ್ಲಿ ತಾಲೀಮಿಗಾಗಿ ಹೊರಟಿವೆ. ಬಾದಶಹರಾದ ರಾಸ ತಫಾರಿಯವರೂ ಹಿಂಜರಿಯಲೊಪ್ಪುವದಿಲ್ಲ. ಬಾದಶಹರಿಗೆ ರಾಜ್ಯನಿಷ್ಠೆಯನ್ನರ್ಪಿಸಿ ರಣಾಂಗಣಕ್ಕೆ ವೀಳ್ಯ ಕೊಡಕೊಂಡುಬಂದ ಸೈನಿಕರಿಗೆ ಅಪ್ಪಣೆ ಕೊಟ್ಟದ್ದೇನಂದರೆ:- “ನಾವು ಸಿಂಹವ್ಯಾಘ್ರಗಳು, ಸಿಂಹ ಮರಿಗಳು, ವಿಮಾನಗಳಿಗೆ, ತೋಪುಗಳಿಗೆ ಹೆದರುವವರಲ್ಲ ಒಂದೇ ನಾವು ವಿಜಯ ಮಾಲೆಯನ್ನು ಧರಿಸಿ ಮರಳಬೇಕು; ಇಲ್ಲವೆ ನಮ್ಮ ಮಾಂಸವನ್ನು ರಣಹದ್ದುಗಳು ತಿನ್ನಬೇಕು. ನಾವು ಇಂದಲ್ಲ ನಾಳೆ ಸಾಯಲೇಬೇಕು ಜ್ವರದಿಂದ, ಬೇರೆ ರೋಗದಿಂದ ಸಾಯಬೇಕು ದೇಶಕ್ಕಾಗಿ ಒಂದಿಲ್ಲೊಂದು ದಿನ ಸಾಯುವದು ಶ್ರೇಯಸ್ಕರವಲ್ಲವೇ? ಇತಾಲಿಯವರು ಯಾಂತ್ರಿಕ ತೋಪುಗಳಿಂದ ನಿಮಗೆ ಹಿಮ್ಮೆಟ್ಟಿಸುವರು. ಅವಕ್ಕೆ ನೀವು ಸೊಪ್ಪುಹಾಕಬೇಡಿ. ಪರಮಾತ್ಮನು ನಮ್ಮ ಬೆಂಬಲಕ್ಕಿದ್ದಾನೆ. ನಿಮ್ಮೊಡನೆ, ನಿಮ್ಮಂತೆ ರಣಭೂಮಿಯಲ್ಲಿ ಹೋರಾಡಿ ರಕ್ತ ಚೆಲ್ಲಲು ನಾನೂ ಬರುವೆನು. ದೇಶಕ್ಕಾಗಿ ಪ್ರಾಣಾರ್ಪಣ ಮಾಡಲು ನಾನು ಸಿದ್ಧನಿದ್ದೇನೆ.” ಎಂಬದಾಗಿಯೂ ಬಾದಶಹರು ಸೈನಿಕರಿಗೆ ಹುರಿದುಂಬಿಸುತ್ತಿದ್ದಾರೆ ಇತಾಲಿಯವರ ಅಂತರಂಗದಿಂದ ಉತ್ತರ ಇತಾಲಿ

ಪ್ರದೇಶದೊಳಗಣ ಸೈನ್ಯಪಥಕಗಳನ್ನು ದಕ್ಷಿಣ ಇತಾಲಿಗೆ ವರ್ಗಾಯಿಸಿದ್ದಾರೆ. ಭೂಮಧ್ಯಸಮುದ್ರದೊಳಗೆ ಸ್ಫೋಟವಾದಲ್ಲಿ ಸ್ವದೇಶರಕ್ಷಣೆಯ ಯೋಜನೆ ಇದೆಂದು ಸುದ್ದಿಗಾರರ ಅಭಿಮತ. ಇತಾಲಿ-ಎರಿಟ್ರಿ, ವಸಾಹತಿಗಿದಿರಾಗಿ ಕೆಂಪು ಸಮುದ್ರದ ಆಚೆಗಿರುವ ಯೆಮೆನ್ ಸರಕಾರವು ಒಳ್ಳೇ ಯುದ್ಧ ತಯಾರಿ ನಡಿಸಿದೆ. ೭೦೦೦ ಸೈನಿಕರಿಗೆ ದಾಖಲಪಡಿಸಿಕೊಳ್ಳಲಾಗಿದೆ. ಕೆಂಪು ಸಮುದ್ರದ ದಂಡೆಗುಂಟ ಕಂದಕಗಳನ್ನು ಕಡಿದು ಮುಳ್ಳು-ಬೇಲಿ ಕಟ್ಟಲ್ಪಟ್ಟಿದೆ. ಬ್ರಿಟಿಶ ದೇಶದಿಂದ ೫ ಸಂಚಾರಕ ತೋಫುಗಳೂ ೫ ವಿಮಾನುಗಳೂ ತರಿಸಲ್ಪಟ್ಟಿವೆ. ತೋಫುಗಳು ಗುಡ್ಡ ಹತ್ತಬಲ್ಲವು. ಒಂದೊಂದು ತೋಫಿನಲ್ಲಿ ೨-೨ ಯಾಂತ್ರಿಕ ತುಬಾಕಿಗಳಿರುತ್ತವೆ. ಒಂದೊಂದು ತುಬಾಕಿಯಲ್ಲಿ ೪೦೦೦೦ ಗುಂಡುಗಳಿರುತ್ತವೆ ನಿಮಿಷಕ್ಕೆ ೩೦೦ ಗುಂಡು ಹಾರುತ್ತವೆ. ಒಂದೊಂದು ತೋಫಿನ ಬೆಲೆ ೧೦-೧೦ ಸಾವಿರ ಪವನು. ಒಂದೊಂದು ವಿಮಾನಿನಲ್ಲಿ ಬೊಂಬು ಹಾರಿಸುವ ೩-೩ ಯಂತ್ರಗಳಿರುತ್ತವೆ. ೧೦-೧೦ ಸಾವಿರ ಬಾಂಬುಗಳಿರುತ್ತವೆ. ಇವು ತೋಫುಗಳಷ್ಟೇ ಘಾತಕವಾದವು. ಇವಲ್ಲದೆ ಜಪಾನ ದೇಶದಿಂದ ೧೦ ಸಾವಿರ ಪವನ ಬೆಲೆಯ ೨೦ ಸಾವಿರ ಸೈನ್ಯ ಪೋಷಾಕು ತರಿಸಲ್ಪಟ್ಟಿವೆ ೨೦೦೦ ಸಾವಿರ ಡೇರೆಗಳು ತರಿಸಲ್ಪಟ್ಟಿವೆ. ೩ ಹಡಗು ಪಡೆಗಳನ್ನು ತಯಾರಿಸಿ ತ್ವರ್ಯವೇ ಕಳಿಸುವಂತೆ ಬ್ರಿಟಿಶ ಕಂಪನಿಗಳಿಗೆ ತಿಳಿಸಲಾಗಿದೆ. ಪ್ರಾಣದ ಪರಿವೆ ಹಿಡಿಯದೆ ಸ್ವದೇಶದ ಸ್ವಾತಂತ್ರ್ಯವನ್ನು ರಕ್ಷಿಸಬೇಕಾಗಿಯೂ, ಸ್ವದೇಶ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡುವದು ಪರಮ ಶ್ರೇಯೋದಾಯಕವೆಂದೂ, ಮಾತೃಭೂಮಿಯ ರಕ್ಷಣೆಗಾಗಿ ಹೋರಾಡಿ ಮಡಿಯುವವರಿಗೆ ಸ್ವರ್ಗಪ್ರಾಪ್ತಿಯಾಗುವದೆಂದು ಕುರಾನ ಗ್ರಂಥದಲ್ಲಿ ದೇವರ ಅಪ್ಪಣೆ ಕೊಟ್ಟದ್ದಾಗಿಯೂ ಇಜಿಪ್ತದೊಳಗಿನ ಮುಸಲ್ಮಾನ ಸಂಘದವರು ಹಬಸಿ ಧರ್ಮಬಾಂಧವರಿಗೆ ಪ್ರೇರೇಪಿಸುತ್ತಾರೆ. ಈ ಪ್ರಕಾರ ಎಲ್ಲಿ ನೋಡಿದಡಲ್ಲಿ ರಣಜ್ವಾಲೆ ಉರಿಯುತ್ತಿರುವಾಗ ರಣೋತ್ಸಾಹದಿಂದ ಬಾಹು ಸ್ಫುರಣವಾಗುತ್ತಿರುವಾಗ ಲಾವಲ್‌ರವರ ಮಧ್ಯಸ್ಥಿಕೆ ಸರ್ವಮಾನ್ಯವಾಗುವ ಬಗೆ ಹೇಗೆ? ಮುಸೊಲಿನಿ ರಾಕ್ಷಸನಿಗೆ ಸಮಾಧಾನ ಮಾಡುವದು ಎಷ್ಟು ಕಷ್ಟ ಅಸಾಧ್ಯ ಅದನ್ನು ಸಾಧಿಸಹೋದರೆ ಹಬಸಿ ಜನಾಂಗಕ್ಕೆ ಸಮಾಧಾನ ಮಾಡುವ ಬಗೆ ಹೇಗೆ? ಬ್ರಿಟಿಶರಂತು ಪ್ರಸಿದ್ಧ ಆಂಗ್ಲ ಲೇಖಕರಾದ ಬರ್ನಾರ್ಡ ಶಾರು ನುಡಿದಂತೆ, ''ಸಭ್ಯ ಠಕ್ಕರು' (Gentlemanly Thugs) ಅಂದರೆ ಪರಪೀಡೆ ಮಾಡಿ ಪರದ್ರವ್ಯಾಪಹಾರ ಮಾಡುವ ಸಭ್ಯ ರೂಪ ತಾಳಿದ ಮೋಸಗಾರರು. ಇಂಥ ಜನರಿಗೆ ಸಮಾಧಾನ ಮಾಡಿ ಸಂಧಿ ಪ್ರಸ್ತಾಪವನ್ನು ಸಾಧ್ಯಪಡಿಸುವದು ಎಂದಾದರೂ ಶಕ್ಯವೇ? ಲಂಡನಿನ 'ಮೋರ್ನಿಂಗ ಪೋಸ್ಟ' 'ಡೇಲಿ ಮೇಲ' ಮೊದಲಾದ ಪತ್ರಿಕೆಗಳು ಎಲ್ಲೆಯ ಪ್ರತಿಬಂಧದಿಂದ ಯುದ್ಧಕಾಲ ತೀರ ಸಮೀಪಿಸಿ ಬಂತೆಂದು ಅಭಿಪ್ರಾಯಪಡುತ್ತವೆ. ಯುದ್ಧಕಾಲವನ್ನು ಸಮೀಪಿಸುವಂಥ ಉಪಕ್ರಮಗಳನ್ನು ಕೈಕೊಂಡು ಸಂಧಿಯ ಮಾತನ್ನು ನಡಿಸುವದು 'ರಾಮಾಯ ಸ್ವಸ್ತಿ ರಾವಣಾಯ ಸ್ವಸ್ತಿ' ಹೀಗೆ ರಾಮರಾವಣರೀರ್ವರಿಗೂ ಸ್ವಸ್ತಿವಾಚಕ ಆಶೀರ್ವಚನಗಳಿಂದ ಹರಸುವ ನಮೂನೆಯೆಂದು ಯಾರೂ ಹೇಳದಿರರು. ಪಾರ್ಲಿಮೆಂಟಿನ ಸಭೆಯಲ್ಲಿ ಬ್ರಿಟಿಶ ಧೋರಣವನ್ನು ಧಿಕ್ಕರಿಸುವಾಗ ಸಭಾಸದರಾದ ಮೆನೇಜರ ಎಟ್ಲಿಯವರು ಸಂಕ್ಷಿಪ್ತರಾಗಿ ನುಡಿದದ್ದೇನಂದರೆ.—''ದೇಶದೊಳಗೆ ದರೋಡೆಯು ಚಟ ಹಬ್ಬಿದಾಗ ದರೋಡೆ ಖೋರರಿಗೂ ದರೋಡೆಗೀಡಾದ ಮನೆಯವರಿಗೂ ಸರಕಾರಕ್ಕೂ (house breaker, householder, & the Home Secretary) ರಾಜಿ ಮಾಡಿಕೊಳ್ಳುವ ಯೋಜನೆಯಿದು. ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಬೇಕೆಂದು ಮಾಡಿದ ಸೂಚನೆ ಸಂಧಿ ಪ್ರವೃತ್ತಿಯ ದ್ಯೋತಕವಲ್ಲ." ಈ ಪ್ರಕಾರ ಈಗಿನ ಸ್ಥಿತಿಯಿದೆ. ಎಲ್ಲೆಯ ಪ್ರತಿಬಂಧ ಇದೇ ಬರುವ ಗುರುವಾರ ಪ್ರಚುರವಾಗುವದು ಆಮೇಲೆ ಇತಾಲಿ-ಬ್ರಿಟಿಶ ವಾದಕ್ಕೆ ಕಳೆಯೇರುವದೆಂದು ನಾ ಈಗ ಹೇಳಬಲ್ಲೆ.

ಯುದ್ಧ ವಾರ್ತೆಗಳನ್ನು ಹೇಳಬಾರದಾಗಿ ನನಗೆ ಅನಿಸುತ್ತದೆ. ಇತಾಲಿಯ ಹೊಸ ಸೇನಾಪತಿಗಳಾದ ಬೊಡೊಗ್ಲಿಯೋ ಅವರು ಸುದ್ದಿಗಾರರಿಗೆ ಕರಿಸಿ ಮುಂಜಾಗ್ರತೆ ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಹೋರಾಟಕ್ಕೆ ಬಾಧೆ ಬರುವಂಥ ಸುದ್ದಿ ಪ್ರಕಟವಾದಲ್ಲಿ ಆ ಸುದ್ದಿಗಳಿಗೆಲ್ಲ ಆಯಾ ಪತ್ರಿಕೆಗಳ ಸುದ್ದಿಗಾರರನ್ನು ಜವಾಬದಾರ ಹಿಡಿಯಲಾದೀತೆಂಬ ಕಠೋರವಾದ ಅಪ್ಪಣೆ ಇತಾಲಿ ಸರಕಾರವು ಇದೇ ಪ್ರಕಾರ ಅಪ್ಪಣೆಯನ್ನು ಹೊರಡಿಸಿ ಪೂರ್ವ ಆಫ್ರಿಕೆಗೆ ಹೋಗುವ ಪಡಸುಪಡೆಗಳ ಸಂಚಾರವನ್ನು ಪ್ರಕಟಿಸದಂತೆ ಪತ್ರಿಕೆಗಳಿಗೆ ವಿಧಿಸಿದೆ. ಹಬಸಿ ಸರಕಾರವೂ ಇದೇ ಪ್ರಕಾರ ಅಪ್ಪಣೆಯನ್ನು ಹೊರಡಿಸಿದೆ. ಸಂಗ್ರಾಮದೊಳಗಿನ ಸಹಜವಾದ ಅವಸ್ಥೆಯಿದು' ಮುಂಬಯಿ ಬಂದರದೊಳಗೆ ನಡೆದ ಯುದ್ಧ ನಾಟಕದಲ್ಲಿಯೂ ಸೈನ್ಯಾಧಿಕಾರಿಗಳು ಇದೇ ಪ್ರಕಾರ ಅಪ್ಪಣೆಗಳನ್ನು ಹೊರಡಿಸಿ ಯುದ್ಧ ಭಾವನೆಯನ್ನು ಓದುಗರಲ್ಲಿ ಹುಟ್ಟಿಸಿದ್ದಾರೆ' ಇಂಥ ಪ್ರಸಕ್ತಿಯಲ್ಲಿ ಸುಸಂಗತವಾದ ವಾರ್ತೆಗಳನ್ನು ತಿಳಕೊಳ್ಳುವದೇ ಕಠಿಣ. ಇತಾಲಿಯ ಸೈನಿಕರು ಮಾರ್ಗರಚನೆಯಲ್ಲಿಯೇ ತೊಡಗಿದ್ದಾರೆಂದೂ ದೀರ್ಘಾಲೋಚನೆಯಿಂದ ಮಾರ್ಗಗಳ ರಚನೆಯಾಗುತ್ತಲಾಗಿಯೂ, ಯುದ್ಧ ನಿಂತ ಬಳಿಕ ಗೆದ್ದ ಪ್ರದೇಶವನ್ನು ಇತಾಲಿಯ ವಸಾಹತಿಗೆ ಸೇರಿಸುವ ತಯಾರಿ ಈಗಿನಿಂದಲೇ ನಡೆದಿರುವದಾಗಿಯೂ ಆದರಿಂದ ಯುದ್ಧ ವಾರ್ತೆ ಹೆಚ್ಚಾಗಿ ಕೇಳಬರುವದಿಲ್ಲವಾಗಿಯೂ ಮುಂಬಯಿಯ ಟ್ಯಾಯ್ಮ್ಸ ಕರ್ತರು [illegible] ಇತಾಲಿಯ ಸೈನಿಕರು ಬೇಸರಪಟ್ಟಿದ್ದಾರಂತೆ ಹಬಸಿ ದೇಶದೊಳಗಿಂದ ತಮ್ಮನ್ನು ಸ್ವದೇಶಕ್ಕೆ ಕಳುಸಲು ಅವರು ಪಿತ್ತಾಯ ಪಡಿಸುತ್ತಿರಾಗಿಯೂ ಕೆಲಸ ಮಾಡಲು ಒಪ್ಪುವದಿಲ್ಲವಾಗಿಯೂ ಅಸ್ಮಾರಾದೊಳಗಿನ ಇತಾಲಿ ಪಕ್ಷಪಾತಿ ಪತ್ರಿಕೆಗಳೇ ಬರೆದು ಇದಕ್ಕೆ ದೊಂಬಿಯ ಬಣ್ಣ ಕೊಡುತ್ತಿವೆ ದಕ್ಷಿಣ ಪಾರ್ಶ್ವದಲ್ಲಿ ಇತಾಲಿಯವರು ಭಯಂಕರವಾದ ಬಾಂಬುಗಳನ್ನು ಒಗೆಯುತ್ತಿದ್ದಾರೆ ಒಂದು ಬಾಂಬಿನ ಸ್ಫೋಟವಾದರೆ ಸಾವಿರಾರು ಚೂರುಗಳು ಸುತ್ತು ಮುತ್ತು ಹಾರುತ್ತವೆ ಈ ಚೂರು ತಾಗಿ ಒಂದಿಷ್ಟು ಸ್ವಲ್ಪ ಕೆಡವಿದರೆ ಸಾಕು ಆ ಮನುಷ್ಯನ ಆಯುಷ್ಯ ತುಂಬಿತೆಂದೇ ಎಣಿಸಬೇಕು ಮರಣವಾದ ಬಳಿಕ ಶವ ಬೇಗ ದುರ್ಗಂಧ ಬೀಳುತ್ತದೆ ತಕ್ಷಣವೇ ಲಿಂಬೆಹಣ್ಣಿನ ರಸವನ್ನು ಗಾಯದ ಮೇಲೆ ಹಿಂಡಿದರೆ ಅಪಾಯವಾಗುವದಿಲ್ಲವಾಗಿ ಶುಶ್ರೂಷಾ ಪಥಕಗಳ ಪಾರ್ಕರರು ಅಭಿಪ್ರಾಯಪಡುತ್ತಾರೆ ಆದಾಗ್ಯೂ ಹಬಸಿ ಜನರು ಹಿಮ್ಮೆಟ್ಟುವದಿಲ್ಲ ಧೈರ್ಯದಿಂದ ಇದಿರಾಗುತ್ತಾರಾಗಿ ಜಜಿಗಾ ದಕ್ಷಿಣ-ಪಾರ್ಶ್ವದ 'ರ್ಯೂಟರ' ಸುದ್ದಿಗಾರರಾದ ಮಿ| ವ್ಹೊಲ್ಬೇರ ಕೊಲಿನ್ಸರವರು ತಂತಿಯಿಂದ ತಿಳಿಸುತ್ತಾರೆ. ರಣಕ್ಷೇತ್ರದಲ್ಲಿ ಗಾಯಪಟ್ಟವರಿಗೆಲ್ಲ ಶುಶ್ರೂಷೆ ಮಾಡಲು ತಕ್ಕಷ್ಟು ಪಥಕಗಳಿಲ್ಲದ್ದರಿಂದ ನೂರಾರು ಮಂದಿ ಹಬಸಿ ಜನರು ಸಾಯುತ್ತಾರಾಗಿಯೂ ಈಗ ಶುಶ್ರೂಷೆ ಮಾಡುವ ಇಜಿಪ್ತ, ಇಂಗ್ಲೀಸ, ಅಮೇರಿಕೆಯ ಪಥಕಗಳು ತಕ್ಕಷ್ಟಿಲ್ಲವಾಗಿಯೂ ಮಿ| ಕೊಲಿನ್ಸರವರ ಅಂಬೋಣ ಯುದ್ಧ ವಾರ್ತೆಯ ನಮೂನೆ ಇನ್ನೊಂದಿದೆ ಹಬಸಿ ಜನರು ಹಿಮ್ಮೆಟ್ಟುತ್ತಾರೆ ಇತಾಲಿಯರು ಗರ್ವದಿಂದ ಮುಂದರಿದ ಕೂಡಲೆ, ಥಟ್ಟನೆ ಹಿಂಬದಿಯಿಂದ ಸಾಗಿಹೋಗಿ ಮುತ್ತಿಗೆ ಹಾಕಿ ಇತಾಲಿಯರಿಗೆಲ್ಲ ಕೊಂದು ಅವರ ಬಳಿಯಲ್ಲಿರುವ ತೋಫು-ತುಬಾಕಿಗಳನ್ನು, ಮದ್ದು-ಗುಂಡುಗಳನ್ನು ಕೈವಶ ಮಾಡಿಕೊಳ್ಳುತ್ತಾರೆ. ಇಂಥ ಪ್ರಸಂಗಗಳು ದಕ್ಷಿಣ ಪಾರ್ಶ್ವದ ರಣಾಂಗಣದಲ್ಲಿ ಸಂಭವಿಸಿದವಾಗಿ ವಾಚಕರು ಆ ರಣಾಂಗಣದ ಮೇಲೆ ವಿಜಯ ಬೆಳಸಿ ತಂದ ಸಾಮಗ್ರಿಗಳನ್ನು ನೋಡಿ ಡೆರಾಡೋವಾದೊಳಗಿನ ಕ್ರಾನಿಕಲ್ ಪತ್ರಿಕೆಯ ಸುದ್ದಿಗಾರರು ಬರೆಯುತ್ತಾರೆ ಬಾದಶಹರೊಡನೆ ಸಂಚರಿಸಿದವರ ಕಡೆಯಿಂದಲೇ ಸುದ್ದಿಗಾರರು ಈ ಸಂಗತಿಯನ್ನು ತಿಳಕೊಂಡರು ವಿಷಾರಿ ಮೋಗಗೆ ಕೋರಾಹಿಯಲ್ಲಿ ಅನೇಕ ಜನರು ಬಲಿಬಿದ್ದರು. ಸೇನಾಪತಿ ಮಹೇದ ಪಾಶಾರವರು ಸೈನಿಕರಿಗೆಲ್ಲ ಆತ್ಮರಕ್ಷಣೆ ಮಾಡಿಕೊಳ್ಳಲು ಈಗ ಉಪಾಯ ತಿಳಿಸಿದ್ದಾರೆ. ಅಡಗಿಕೂತು ದಗಿಸಿ ಕೋರಾಹಿ ಗ್ರಾಮದೊಳಗಿಂದ ಇತಾಲಿಯವರಿಗೆ ಹಬಸಿಗಳು ಹೊಡೆದೋಡಿಸಿದರು. ಈಗ ಬಾಂಬು ಹಾರಿಸಿದ್ದರಿಂದ ಏನೂ ಪ್ರಯೋಜನವಾಗುವದಿಲ್ಲ ಡಗಬೂರದಲ್ಲಿ ಇತಾಲಿಯವರು ಬಾಂಬಿನ ಮಳೆ ಗರೆದರು. ೧೦೦-೧೦೦ ರತ್ತಲು ಭಾರದ ಬಾಂಬುಗಳನ್ನು ಒಗೆದರು. ಆದರೂ ಹಬಸಿ ಜನರಿಗೆ ಪೆಟ್ಟಾಗಲಿಲ್ಲ. ಕೆಲವು ಸ್ಫೋಟಿಸದವೆ ಹಾಗೇ ಬಿದ್ದವು ಬಾಂಬುಗಳೆಯುವ ಎರಡು ವಿಮಾನುಗಳಿಗೆ ಗುಂಡು ಹೊಡೆದು ವೆಬಿ ಶಿಬೇಲ ನದಿಯಲ್ಲಿ ಹಬಸಿಗಳು ಕೆಡಹಿದರು. ಅದರಿಂದ ವಿಮಾನುಗಳು ೬ ಸಾವಿರ ಅಡಿ ಒಳಗೆ ಹಾರಿಬರುವದಿಲ್ಲ. ಹಬಸಿರಿಗೆ ಈಗ ಬೇಕಷ್ಟು ಮದ್ದು-ಗುಂಡಿನ ಪೂರೈಕೆಯಿದೆ ಆಹಾರ-ಸಾಮಗ್ರಿಯಿದೆ. ಒಣ ಧಾನ್ಯ ತಿಂದು ಸೈನಿಕರು ಮುದದಿಂದ ಹೋರಾಡುತ್ತಿದ್ದಾರೆ. ದಕ್ಷಿಣ ಪಾರ್ಶ್ವದೊಳಗಿನ ನದಿಗಳೆಲ್ಲ ಬತ್ತಿಹೋದವು. ನೀರಿಲ್ಲ. ಜ್ವಾಲಾಮುಖಿ ಪ್ರದೇಶದಲ್ಲಿ ಸುಣ್ಣ ತುಂಬಿದ ಸರೋವರಗಳಿವೆ ಆದರಿಂದ ಇತಾಲಿಯರಿಗೆ ಸೈನಿಕರನ್ನು ಸಾಲಾಗಿ ನಿಲ್ಲಿಸಿಕೊಂಡು ಯುದ್ಧ ಮಾಡುವದು ಅಶಕ್ಯ ಮಾತು. ಆದರಿಂದ ಇತಾಲ್ಯರವರು ಬಾವಿಗಳುಳ್ಳ ಪ್ರದೇಶಗಳಲ್ಲಿ ತಂಡುಗಟ್ಟಿ ಉಳಿಯುತ್ತಾರಾಗಿ ಮುಂಬಯಿ "ಟ್ಯಾಯ್ಮ್ಸ" ಪತ್ರಿಕೆಯ ಅದಿಸ ಅಬಾಬಾದೊಳಗಿನ ಸುದ್ದಿಗಾರರ ವಾರ್ತೆ ಈ ಪಾರ್ಶ್ವದಲ್ಲಿ ಸೋಮಾಲಿ ಜನರು ಇತಾಲ ಸೈನ್ಯದಲ್ಲಿ ದಾಖಲಾಗಿ ಹೋರಾಡುತ್ತಿದ್ದರು. ಸ್ವಜನರಿಗಿದಿರಾಗಿ ಹೋರಾಡಲು ಅವರೊಪ್ಪದೆ ದೊಂಬಿಯನ್ನೆಬ್ಬಿಸಿದ್ದರಿಂದ ಇತಾಲಿಯರಿಗೆ ಪೇಚಾಟವಾಗಿರುವದಂತೆ. ಓಗದೇನ ಪ್ರದೇಶದೊಳಗೆ ಬಿಸಿಲು-ತಾಪ, ಕೊಳಕು-ನೀರು ಈ ನೀರಿನ ಜೊತೆಗೆ Cambel Bug ಎಂಬದೊಂದು ತಗಣ ಕಚ್ಚಿದರೆ ದೊಡ್ಡ ಪ್ರಾಣಿಯ ರಕ್ತ ಸುರಿಯುತ್ತಿರುತ್ತವೆ ಜನರೂ, ಜನಾವರಗಳೂ, ಎಲ್ಲವೂ ಈ ತಗಣಿಗೆ ಹೆದರುತ್ತವೆ ಆದರಿಂದಲೂ ದಕ್ಷಿಣ ಪಾರ್ಶ್ವದಲ್ಲಿ ಇತಾಲಿಯವರು ಮುಂದೆ ಸರಿಯಲಾರರು ರಾಸ ದೆಸ್ತಾ ಸೇನಾಪತಿಗಳು ಇತಾಲಿ ಸೋಮಾಲಿ ಪ್ರಾಂತವನ್ನು ನುಗ್ಗಿ ಅಮೂರಾ ಪಟ್ಟಣವನ್ನು ಕೈವಶ ಮಾಡಿಕೊಂಡರು ಗೋರಾಹಿ, ಗುರ್ಲಗೋಬಿ ಪಟ್ಟಣಗಳನ್ನು ಇತಾಲ್ಯರವರ ಕೈಯೊಳಗಿಂದ ಸೆಳಕೊಂಡರಾಗಿ ಹಬಸಿ ಸರಕಾರದ ಪ್ರಕಟಣೆ. ಉತ್ತರ ಪಾರ್ಶ್ವದ ಮಕಾಲೆಯ ನೆರೆಹೊರೆಯಲ್ಲಿ ರಾಸ|ಸೆಯೂಮ ಸೇನಾಪತಿಗಳು ಸಿಡಿಗೋಲಿದ ಮೇಲೆ ಮಂಗಳವಾರ ರಾತ್ರಿ ಸಾಗಿಹೋದರು ಇತಾಲಿಯವರಿಗೂ ಹಬಸಿ ಸೈನಿಕರಿಗೂ ಘನಘೋರ ಸಂಗ್ರಾಮವಾಯಿತು ಹಬಸಿ ಜನರಿಗೆ ಹಿಮ್ಮೆಟ್ಟಬೇಕಾದದ್ದಾಗಿ ಜಿಬುಟಿಯೊಳಗಿನ ವಾರ್ತೆ ಮಕಾಲೆ ಪ್ರದೇಶವನ್ನು ಹಬಸಿ ಜನರು ಪುನಃ ಕೈವಶ ಮಾಡಿಕೊಂಡರಾಗಿ ಹೇಳುತ್ತಾರೆ ಈ ತಿಂಗಳೊಳಗೆ ಒಳ್ಳೇ ಸಂಗ್ರಾಮವಾಗುವದಿದೆ ರಣಭೂಮಿಗೆ ಸೈನ್ಯಪಥಕಗಳು ತಂಡುಗಟ್ಟಿ ಹೋಗುತ್ತಿರುವವಾಗಿ ಸುದ್ದಿಗಾರರು ಹೇಳಿ ವಾಚಕರಿಗೆ ಕಿವಿ ನೆಟ್ಟಗೆ ಮಾಡಹೇಳುತ್ತಾರೆ ನಾನು ಇದಕ್ಕಿಂತ ಹೆಚ್ಚೇನು ಹೇಳಲಿ?

(ಈ ಹೊತ್ತಿನ ಪುರವಣಿ ನೋಡಿರಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದ ಮುಖ್ಯ ವಾರ್ತೆ ಕಲ್ಯಾಣಿ ಎಂಬ ವೇಶ್ಯೆಯ ನಿಧನವು; ಕೊಲೆಪಾತಕವು! ಕಲ್ಯಾಣಿಯು ಮಂಗಳವಾರ ರಾತ್ರಿ ೮ ಘಂಟೆಯ ತನಕ ಕ್ಷೇಮದಿಂದ ಇದ್ದಳು. ನಸುಕು ಹರಿಯುವ ಮುಂಚೆಯೇ ತೀರಿಕೊಂಡಿದ್ದಾಳೆ. ಪೆಟ್ಟು ಹೊಡೆದು ಅವಳಿಗೆ ಕೊಂದರೆಂದು ಊರ ತುಂಬ ವಾರ್ತೆ. ಕೊಲೆಗಡಕನ ಹೆಸರನ್ನು ಊರ ತುಂಬ ಹೇಳಾಡುತ್ತಿದ್ದಾರೆ. ಆದರೆ ಇನ್ನೂ ತನಕ ಪೋಲೀಸರು ಯಾರಿಗೂ ಸೆರೆಹಿಡಿದ ವರ್ತಮಾನವಿಲ್ಲ. ಪೋಲೀಸರು ಸರಿಯಾಗಿ ಚೌಕಶಿ ನಡಿಸುವದಿಲ್ಲವೆಂದು ಕಲ್ಯಾಣಿಯ ತಮ್ಮನು ಪೋಲೀಸ ಸುಪರಿಂಟೆಂಡೆಂಟ ಸಾಹೇಬರಿಗೆ ತಂತಿ ಮಾಡಿದಂತೆ, ಪೋಲೀಸ ಸುಪರಿಂಟೆಂಡೆಂಟರು ಶುಕ್ರವಾರ ಬಂದು ಕಲ್ಯಾಣಿಯ ಮನೆ, ನೆರೆ-ಹೊರೆಯ ಸ್ಥಳ ನೋಡಿ ಒಬ್ಬಿಬ್ಬ ಸಾಕ್ಷಿಗಾರರ ಸಾಕ್ಷಿ ಕೊಂಡು ಹಾಗೆಯೇ ಕಾರವಾರಕ್ಕೆ ತೆರಳಿದರು. ಪೋಲೀಸರು ಅನಾಸ್ಥೆ ಮಾಡುವ ಕಾರಣವೇನೆಂದು ತಿಳಿಯಲಿಲ್ಲ. ಕೊಲೆಯೋ, ನಿಧನವೋ? ಎಂಬ ಚರ್ಚೆ ಇನ್ನೂ ನಡೆದದಾಗಿ ಹೇಳುತ್ತಾರೆ. ಮೆಡಿಕಲ್ ಆಫೀಸರರಾದ ಡಾ| ಕಾರ್ನಾಡರವರು ಯಾವ ಅಭಿಪ್ರಾಯಪಟ್ಟಿದ್ದಾರೆಂಬ ಸಂಗತಿ ಇನ್ನೂ ಹೊರಬೀಳಲಿಲ್ಲ. ಶವಕ್ಕೆ ಪೆಟ್ಟಾಗಿತ್ತಾಗಿಯೂ ಶವವನ್ನು ಎತ್ತಿದೊಡನೆ ಮೂಗಿನ ಹೊಳ್ಳೆಗಳಿಂದ ನೆತ್ತರ ಸುರಿಯುತ್ತಾಗಿಯೂ, ಎದೆಯ ಎಡ ಪಾರ್ಶ್ವ ಕಪ್ಪಾಗಿತ್ತಾಗಿಯೂ ಪಂಚನಾಮೆಯ ಕಾಲಕ್ಕೆ ನೋಡಿದ ಜನರು ಹೇಳುತ್ತಾರೆ. ಪ್ರತ್ಯಕ್ಷ ಪಂಚನಾಮೆ ಏನಾಯಿತೆಂಬ ಸಂಗತಿ ತಿಳಿಯಲಿಲ್ಲ. ತಾಲೂಕ ಕಚೇರಿಯ ಬಳಿಯಲ್ಲಿಯೇ ಈ ಪ್ರಕರಣ ಒದಗಿದೆ. ತಾಲೂಕ ಕಚೇರಿಯಲ್ಲಿ ಪೋಲೀಸ ಪೇದೆಗಳಿದ್ದಾರೆ; ತವರ-ಬಂದೋಬಸ್ತಿಗೆ ಪೋಲೀಸ ಪೇದೆಗಳಿದ್ದಾರೆ. ಬಹುತರವಾಗಿ ಮಧ್ಯರಾತ್ರಿಯ ಸುಮಾರಿಗೆ ನಿಧನ ಒದಗಿತೆಂದು ನೆರೆ-ಹೊರೆಯವರ ಅಂಬೋಣ. ಹೀಗಿದ್ದು, ಈ ಕೊಲೆ-ಪಾತಕದ ಪತ್ತೆ ಹಚ್ಚಲು ಪೋಲೀಸರಿಗೆ ಈ ತನಕ ಸಾಧ್ಯವಾಗದದ್ದು ಪರಮಾಶ್ಚರ್ಯವು! ಇಂಥ ಪ್ರಕರಣಗಳನ್ನು ಪತ್ತೆ ಮಾಡಲಾಗದಿದ್ದಲ್ಲಿ ಪೋಲೀಸ ಖಾತೆಯ ಕೀರ್ತಿಗೆ ಕಲಂಕವಿದೆ. ಪೋಲೀಸ ಸುಪರಿಂಟೆಂಡೆಂಟರು ಅವಶ್ಯ ಕಂಡಲ್ಲಿ ಇಲ್ಲಿಯ ಫೌಜದಾರರ ಬೆಂಬಲಕ್ಕೆ ಇನ್ನೊಬ್ಬ ಪೋಲೀಸ ಆಫೀಸರರನ್ನಾದರೂ ಕಳುಹಿ ಕೊಲೆಪಾತಕಿಯ ಪತ್ತೆ ಹಚ್ಚಿ ಆತನಿಗೆ ನ್ಯಾಯಾಸನದ ಮುಂದೆ ಎಳೆಯಬೇಕಾಗಿ ಸೂಚನೆ. ಇಂಥ ಪ್ರಕರಣಗಳು ಇಲ್ಲಿ ಘಟಿಸುವದು ಅಪರೂಪ. ಆದ್ದರಿಂದ ಇಡೀ ತಾಲೂಕ ತುಂಬ ಇದೊಂದು ಚರ್ಚೆಯ ವಿಷಯವಾಗಿದೆ.

ಡಿಸ್ಟ್ರಿಕ್ಟ ಜಜ್ಜರವರು ಸಾಂತಗಲ್ಲಿನಲ್ಲಿ ಬೇಟೆಗೆ ಹೋದಾಗ ಹುಲಿ ಸಿಗಲಿಲ್ಲ. ಆ ದಿನ ಹುಲಿ ಹೊರಬೀಳಲಿಲ್ಲ. ಆದ್ದರಿಂದ ಡಿಸ್ಟ್ರಿಕ್ಟ ಜಜ್ಜರು ಹಾಗೆಯೇ ಮರಳಬೇಕಾಯಿತು. ಡಿಸ್ಟ್ರಿಕ್ಟ ಜಜ್ಜರು ಹೋಗುವ ಮುನ್ನಿನ ದಿನ ಒಂದು ಹುಲಿ ಬಂದು ಒಂದು ಎತ್ತಿಗೆ ಮುರಕೊಂಡು ಹೋಗಿತ್ತು. ಒಂದೆಡೆ ಆ ಶವ ನಾರುತ್ತಿತ್ತು. ಹೀಗೆ ಹುಲಿಯ ರಾಜ್ಯವಾದರೆ ಜನರು ಬಾಳ್ವೆ ಮಾಡುವ ಬಗೆ ಹೇಗೆ?

ಮೊನ್ನೆ ತಾ. ೬ನೇಗೆ ಹೊಸ ರಾಜ್ಯಘಟನೆಯಂತೆ ಆಗುವ ಇಲೆಕ್ಷನಿನ ಕಚ್ಚಾ ಮತದಾರರ ಯಾದಿಗಳು ಪ್ರಕಟವಾಗಿವೆ. ಮೊನ್ನೆಯಿಂದ ೨೧ ದಿನಗಳೊಳಗೆ ಮತದಾರರಾಗಲು ಪಾತ್ರತೆ ಇದ್ದು ಹೆಸರು ದಾಖಲ ಇಲ್ಲದವರು ಕಲೆಕ್ಟರರ ಕಡೆ ತಮ್ಮ ಪಾತ್ರತೆಯನ್ನು ಉಲ್ಲೇಖಿಸಿ ಅರ್ಜಿ ಮಾಡಿಕೊಳ್ಳತಕ್ಕದ್ದಾಗಿ ಜಾಹೀರ ಪ್ರಕಟಣೆ ಹೊರಡಿಸಲಾಗಿದೆ. ಇಲೆಕ್ಷನಿನಲ್ಲಿ ರಾಷ್ಟ್ರೀಯ ಸಭೆಯವರು ನಿಲ್ಲುವವರಿದ್ದಾರೆ. ಆದ್ದರಿಂದ ಜನರು ಈಗಿನಿಂದಲೇ ಮುಂಜಾಗ್ರತೆ ಪಡೆದು ತಮ್ಮ ತಮ್ಮ ಹೆಸರುಗಳನ್ನು ತತ್ಪರತೆಯಿಂದ ದಾಖಲಪಡಿಸಿಕೊಳ್ಳತಕ್ಕದ್ದು.

ಮ್ಯುನಿಸಿಪಾಲಿಟಿಯವರು ಸೆಕ್ರೆಟರಿ ರಾ| ಬಂಟವಾಳ ಪ್ರಭುಗಳವರಿಗೆ ರೂ. ೧೦ ಡಿಗ್ರೇಡ ಮಾಡಿ ಪುನಃ ಕೆಲಸದ ಮೇಲೆ ನೇಮಿಸಿಕೊಂಡಿದ್ದಾರೆ.

ಮಾರ್ಗಗಳ ಧೂಳಿ ಏಳಲು ಪ್ರಾರಂಭವಾಯಿತು. ಮ್ಯುನಿಸಿಪಾಲಿಟಿಯವರು ಮಾರ್ಗಗಳ ಮೇಲೆ ನೀರು ಹಾಕುವ ವ್ಯವಸ್ಥೆ ಮಾಡಬೇಕು.

ಇಲ್ಲಿಯ ಶಿರಸ್ತೇದಾರರಾದ ರಾ| ಮಾವಿನಕುರ್ವೆಯವರಿಗೆ ೧ ತಿಂಗಳ ಬಗ್ಗೆ ಹೊನ್ನಾವರದ ಮಾಮಲೇದಾರರಾಗಿ ನೇಮಿಸಲ್ಪಟ್ಟಿದೆ.

ಕಳೆದ ಸತ್ಯಾಗ್ರಹದ ಚಳವಳಿಯ ಕಾಲದಲ್ಲಿ ಅಂಕೋಲೆಯ ರಣಕ್ಷೇತ್ರದ ಸುತ್ತುಮುತ್ತಲು ಜಾದಾ ಪೋಲೀಸರನ್ನು ನೇಮಿಸಿ ಅವರ ಖರ್ಚಿನ ಭುರ್ದಂಡವನ್ನು ಆಯಾಯ ಊರುಗಳ ಮೇಲೆ ಹೊರಿಸಿದ್ದು ವಾಚಕರ ನೆನಪಿನಲ್ಲಿರಬಹುದು. ಗೋಕರ್ಣ ಊರಿನವರ ಮೇಲೂ ಈ ಭುರ್ದಂಡ ತೆರುವ ಬಾಧ್ಯತೆ ಹೊರಿಸಲ್ಪಟ್ಟಿತ್ತು. ಮ್ಯುನಿಸಿಪಾಲಿಟಿಯುಳ್ಳ ಊರಲ್ಲಿ ಜಾದಾ ಪೋಲೀಸ ತೆರಿಗೆಯನ್ನು ವಸೂಲ ಮಾಡಿ ಕೊಡುವ ಕೆಲಸ ಮ್ಯು|ಯ ಮೇಲೆ ಹೊರಿಸಲ್ಪಟ್ಟಿತು. ಗೋಕರ್ಣ ಮ್ಯು|ಯವರು ತಮ್ಮಿಂದ ಈ ವಸೂಲಿಯ ಕೆಲಸವಾಗುವದಿಲ್ಲೆಂದು ಸಾರಿದರು. ಆದಕಾರಣ ಮುಂದೆ ಪ್ರಕರಣ ನಡೆದು ಸರಕಾರ-ಮ್ಯುನಿಸಿಪಾಲಿಟಿಯವರು ಸದರಿ ಕರದ ವಸೂಲಿಯ ಬಗ್ಗೆ ದಲಾಲಿ ಕೊಡುವ ತರದ ಮೇಲೆ ರಾ| ಸದಾಶಿವ ಸ್ಥಳೀಕರ ಎಂಬವರಿಗೆ ನೇಮಿಸಿದರು. ರಾ| ಸ್ಥಳೀಕರರು ಈಗ ಕರ-ವಸೂಲಿಯ ಕೆಲಸವನ್ನು ಜಾರಿಯಿಂದ ನಡಿಸಿದ್ದಾರೆ. ವಸೂಲಿಯ ಕ್ರಮ ನಡಿಸುವಾಗ ಜನರ ಧಾರ್ಮಿಕ ಭಾವನೆಗಳನ್ನಾಗಲಿ, ಸ್ಥಿತಿ-ಗತಿಯನ್ನಾಗಲಿ, ಯುಕ್ತಾಯುಕ್ತತೆಯನ್ನಾಗಲಿ ಲಕ್ಷಿಸುವದಿಲ್ಲ. ಕಳೆದ ತಾ. ೧ಕ್ಕೆ ರಾ| ಮಹೇಶ್ವರ ಶಿವರಾಮ ಭಟ್ಟ ಎಂಬ ಬ್ರಾಹ್ಮಣರ ಮನೆಯಲ್ಲಿ ಜಪ್ತಿ ವಾರಂಟು ತಕ್ಕೊಂಡು ಅವರು ವಸೂಲಿಗೆ ಹೋಗಿದ್ದರು. ರಾ| ಭಟ್ಟರ ಹತ್ತರ ದುಡ್ಡಿದ್ದಿಲ್ಲ! ಕಾಲಸ್ಥಿತಿಯೇ ಕಠಿಣವಾಗಿದೆ; ಬಡ ಭಟ್ಟರ ಹತ್ತರ ದುಡ್ಡು ಎಲ್ಲಿಂದ ಬರಬೇಕು? ಅಂತು ಜಪ್ತಿ ಕ್ರಮ ನಡಿಸಬೇಕಾಯಿತು. ರಾ| ಸ್ಥಳೀಕರರು (ಇವರೂ ಬ್ರಾಹ್ಮಣರೇ!) ಸ್ವತಃ ಒಳಗೆ ಹೋಗಿ ಬೇಕಾದಷ್ಟು ಚರ-ಜಂಗಮಗಳನ್ನು ತರಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಶೂದ್ರನೊಬ್ಬನಿಗೆ ಒಳಗೆ-ಮಡಿ ಜಾಗದಲ್ಲಿ-ಕಳಿಸಿಕೊಟ್ಟರು! ಅದೊಂದಾಯಿತು. ರಾ| ಭಟ್ಟರು ತೆರತಕ್ಕದ್ದು ರೂ. ೬-೧೪-೧. ಆ ಬಗ್ಗೆ ರಾ| ಸ್ಥಳೀಕರರು ಎಷ್ಟು ಸಾಮಾನು ಜಪ್ತಿ ಮಾಡಿಸಿದರೆಂದು ನೋಡಿರಿ! ಅಜಮಾಸ ೨೫ ಮಣ ತೂಕದ - ಈಗಿನ ಧಾರಣೆಯಂತೆ ಅಜಮಾಸ ೪೦ ರೂ.ಗಳ ಬೆಲೆಯ - ೫ ಪಾತ್ರೆಗಳನ್ನು ಜಪ್ತ ಮಾಡಿದರು. ಇಷ್ಟರಿಂದಲೂ ಅವರಿಗೆ ತೃಪ್ತಿಯಾಗಿದ್ದಿಲ್ಲ! ಇನ್ನೂ ಕೆಲವು ಸಾಮಾನು ಹಿಡಿಯಬೇಕೆಂದು ಅವರ ವಿಚಾರವಿತ್ತು. ಆದರೆ ಪಟೇಲರು ಸಾಕೆಂದು ಹೇಳಿದ್ದರಿಂದ ಅವರು ಅಷ್ಟಕ್ಕೇ ಜಪ್ತಿಯನ್ನು ಮುಗಿಸಿದರು. ಕರವಸೂಲ ಮಾಡಬೇಕಾದದು ಯುಕ್ತವೇ. ಆದರೆ ವಸೂಲಿಯ ಕಾಲಕ್ಕೆ ಜನರ ಧರ್ಮಭಾವನೆಗಳನ್ನು ನೋಯಿಸಕೂಡದು; ಯುಕ್ತಾಯುಕ್ತತೆಯ ವಿಚಾರ ತೊರೆಯಬಾರದು; ಕಾಲಮಾನ-ಪರಿಸ್ಥಿತಿಯನ್ನನುಲಕ್ಷಿಸಿ ಸೌಮ್ಯತನದಿಂದ ಕರ-ವಸೂಲಿಯನ್ನು ನಡಿಸಬೇಕು. ಇಷ್ಟು ಬುದ್ಧಿಯಿಲ್ಲದ ಇವರನ್ನು ಕೂಡಲೆ ಕಡಿಮೆ ಮಾಡಬೇಕಾಗಿ ಗೋಕರ್ಣಸ್ಥರೊಬ್ಬರು ವಿನಂತಿ ಮಾಡುತ್ತಾರೆ.

ಹೊನ್ನಾವರ— (ತಾ. ೧-೧೨-೩೫) ಚಲೋ ಚಳಿ ಬೀಳುತ್ತದೆ. ಊರಲ್ಲಿ ಆರೋಗ್ಯವಿದೆ. ದುರ್ಗಾಕೇರಿಯೊಳಗಿನ ಶ್ರೀ ಮುಖ್ಯಪ್ರಾಣ ದೇವರ ದೀಪೋತ್ಸವಗಳು ಸಾಂಗವಾಗಿ ನೆರವೇರಿದವು.

ಇಲ್ಲಿಯ ಸಬಜಜ್ಜರಾದ ರಾ| ಭಾಂಬುರೆಯವರಿಗೆ ಇಸ್ಲಾಮಪುರಕ್ಕೆ ವರ್ಗವಾಗಿ ತಂತಿ ಬಂದದ್ದರಿಂದ ನಿನ್ನೆ ಅವರು "ಕ್ಲಾರ್ಕ ಆಫ್ ದಿ ಕೋರ್ಟ"ರ ಕಡೆ ಚಾರ್ಜು ಕೊಟ್ಟು ಹೊರಟು ಹೋದರು. ಹೊಸ ಸಬಜಜ್ಜರಾದ ರಾ| ಪಾಟೀಲರು ರಜೆ ತಕ್ಕೊಂಡಿದ್ದಾರೆಂದು ವಾರ್ತೆಯಿದೆ.

ಮೆ| ಕಲೆಕ್ಟರ ಸಾಹೇಬರು ಕಸಬಾ ಕನ್ನಡ ಶಾಲೆಗೆ ಭೆಟ್ಟಿ ಕೊಟ್ಟಿದ್ದರು. ಶಾಲೆಯ ಇಮಾರತು ಬಹಳ ಜೀರ್ಣವಾಗಿದ್ದು ಅದರಲ್ಲಿ ಶಾಲೆ ಮಾಡುವದು ಯುಕ್ತವಲ್ಲೆಂದು ಅವರ ಅಭಿಪ್ರಾಯವಾಯಿತು. ಇಂಜಿನಿಯರ ಖಾತೆಯವರ ಕಡೆಯಿಂದ ಶಾಲಾ ಇಮಾರತಿನ ತಪಾಸಣೆ ಮಾಡಿಸಿ, ಅವರು ಅದು ಅಪಾಯಕರವಿರುವದಿಲ್ಲೆಂದು ತಿಳಿಸಿದರೆ ಮಾತ್ರ ಶಾಲೆಯನ್ನು ಅಲ್ಲಿ ಕೂಡಿಸಬಹುದೆಂತಲೂ, ಅಪಾಯಕರವೆಂತ ಅವರ ಅಭಿಪ್ರಾಯವಾದಲ್ಲಿ ಶಾಲೆಯನ್ನು ಇನ್ನೊಂದು ಸ್ಥಳಕ್ಕೆ ವರ್ಗಾಯಿಸಬೇಕೆಂತಲೂ ಸಾಹೇಬರು ಶಾಲಾ-ಪುಸ್ತಕದಲ್ಲಿ ಬರೆದು ಇಟ್ಟಿದ್ದಾರೆ.

ಮಹಿಮೆ ಗ್ರಾಮದಲ್ಲಿ ಕಾಡಾನೆಗಳು ಬಹಳೇ ಕಾಡುತ್ತಿವೆ. ಶಿಕಾರಿಯು ಆನೆಗಳನ್ನು ಹುಡುಕುತ್ತಿದ್ದಾನೆ. ಇನ್ನೂ ಶಿಕಾರಿಯಾದ ಸುದ್ದಿಯಿಲ್ಲ. ಹಳೇ ಶಿಕಾರಿ ಪಾಸ್ಕೋನೇ ಈ ಕೆಲಸಕ್ಕೆ ಯೋಗ್ಯನೆಂದು ರೈತರ ಮತ. ಪಾಸ್ಕೋಗೆ ಪುನಃ ಲ್ಯಾಸೆನ್ಸ ಕೊಡುವ ಬಗ್ಗೆ ಜನರು ಅರ್ಜಿ ಮಾಡಿರುತ್ತಾರಂತೆ. ಇದರಿಂದ ಹೊಸ ಶಿಕಾರಿಯ ಹೊಟ್ಟೆಯಲ್ಲಿ ಉರಿಯುತ್ತಿದೆ. ಅವನು ಪಾಸ್ಕೋನ ವಿರುದ್ಧ ಅಲ್ಲ-ಸಲ್ಲದ ಆರೋಪಗಳನ್ನು ಮಾಡಿ ಅಧಿಕಾರಿಗಳಿಗೆ ಬರಕೊಂಡಿದ್ದಾನೆಂದು ವಾರ್ತೆ ಕೇಳಿಬರುತ್ತಿದೆ. ರೈತರು ತನ್ನ ವಿರುದ್ಧ ಹೋಗುವದನ್ನು ಕೇಳಿ, ರೇಗಿಗೆದ್ದು ಹೊಸ ಶಿಕಾರಿಯು ದೃಢ ನಿಶ್ಚಯದಿಂದ ಶಿಕಾರಿಗೆ ಹೊರಟಿದ್ದಾನಂತೆ. ದೃಢ ನಿಶ್ಚಯದ ಫಲವೇನಾಗುತ್ತದೆಂದು ನೋಡಬೇಕು.

ಕಂಚಿಬೀಳ ಎಂಬ ಮಜರೆಯಲ್ಲೂ ಕಾಡಾನೆಗಳು ಬಂದು ಬಹಳೇ ಕಬ್ಬು, ಬಾಳೆ ಮುಂತಾದ ಪೈರು ಹಾಳು ಮಾಡಿವೆ. ರೈತರಿಗೆ ಚಲೋ ಪೆಟ್ಟು ಬಿದ್ದಿದೆ!

ಅಂಕೋಲಾ— ಹೋದ ಸಂಚಿಕೆಯಲ್ಲಿ ಏಡ್ವರ್ಡ ಹ್ಯಾಸ್ಕೂಲಿನ ವಿದ್ಯಾರ್ಥಿಗಣದ ಕ್ರೀಡಾಸಕ್ತಿಯನ್ನು ಕುರಿತು "ನಾಗರಿಕ"ನು ಬರೆದ ಪತ್ರಕ್ಕೆ ಪ್ರತ್ಯುತ್ತರವಾಗಿ ರಾ| ಎಸ್. ಕೇ. ಪೈರು ಬರೆಯುವದೇನೆಂದರೆ:— "ನಾಗರಿಕ"ನು ಕ್ರಿಕೆಟ್ ಆಟ ಪರದೇಶಿ ಆಟವೆಂದು ಟೀಕಿಸಿದ್ದಾದರೆ, ಅವನು ತನ್ನ ಟೀಕಾಸ್ತ್ರವನ್ನು ಅಂಕೋಲೆಯ ವಿದ್ಯಾರ್ಥಿಗಳ ಮೇಲೆಯೇ ಬಿಡಬೇಕಾಗಿದ್ದಿಲ್ಲ. ಅದು ಸರ್ವವ್ಯಾಪಿ ದೋಷ (?) ವಾಗಿದೆ. ಹುಡುಗರು ತೆರವಾದ ಹವೆಯಲ್ಲಿ ವ್ಯಾಯಾಮ-ಮನೋರಂಜನೆಗಾಗಿ ಆಟಗಳನ್ನಾಡುವದೇ ಅವನಿಗೆ ಸೇರುವದಿಲ್ಲವಾದರೆ ಅವನ ಮತ ಯಾರೂ ಪುಷ್ಟೀಕರಿಸರು. ಸಂಜೆಯ ಮುಂದೆ ಹುಡುಗರು ಕೆಲ ಹೊತ್ತು ಆಡಲೇಬೇಕಾಗಿ ನನ್ನಂತೆ ಬಹುಜನರ ಮತವಿರುತ್ತದೆ. ಅಂಕೋಲೆಯ ವಿದ್ಯಾರ್ಥಿಗಳು ನಮ್ಮ ಇಡೀ ಜಿಲ್ಹೆಯಲ್ಲಿ ಪ್ರಥಮರಾಯರೂ, ನಿಪುಣಿಗಳೂ ಇರುತ್ತಾರೆಂದು ನಾನು ಅಭಿಮಾನದಿಂದ ಹೇಳಬಲ್ಲೆನು. ಆದರೆ ಅವರು ಇಡೀ ದಿನ ಕ್ರೀಡಾಂಗಣದಲ್ಲಿರುತ್ತಾರೆ, ಅಭ್ಯಾಸದ ಕಡೆಗೆ ಲಕ್ಷಗೊಡುವದಿಲ್ಲೆಂದು ಹೇಳುವದು ಶುದ್ಧ ತಪ್ಪು. ಹೋದ ಮೆಟ್ರಿಕ್ ಪರೀಕ್ಷೆಯ ಪರಿಣಾಮ ತೋರಿಸಿ ಅವರಿಗೆ ಹೀಯಾಳಿಸುವದು ಉಚಿತವಲ್ಲ. ಬಹುತೇಕ ಶಾಲೆಗಳ ಪರಿಣಾಮ ಹಾಗಾದಾಗ ಅಂಕೋಲೆಯ ವಿದ್ಯಾರ್ಥಿಗಳನ್ನೇ ಹಳಿಯುವದು ಎಲ್ಲಿಯ ನ್ಯಾಯ? ಕಾರವಾರದ ಪಂದ್ಯಾಟದಲ್ಲಿ ಅಂಕೋಲೆಯ ಶಾಲೆಯವರು ಸೋತರೇನೋ ಅಹುದು. ಅದಕ್ಕೆ ಕಾರಣಗಳಿವೆ. ಒಂದನೇ ಕಾರಣ ಪರಸ್ಥಳ; ಎರಡನೇದು ಪರಸ್ಥ ಜನಸಮುದಾಯದ ಮುಂದೆ ಸ್ವಕೀಯರ ಸಹಾನುಭೂತಿಯ ಪ್ರೋತ್ಸಾಹ ಅವರಿಗಿದ್ದಿಲ್ಲ; ಕೊನೆಯ ಹಾಗೂ ಬಲವತ್ತರ ಕಾರಣವೆಂದರೆ, ಕಾರವಾರದ ವಿದ್ಯಾರ್ಥಿಗಳು ಬೇರೆ ಹಳಿದದ್ದರಿಂದ ಅವರು ಹತಬುದ್ಧರಾದರು! ಇಂಥ ವಿರೋಧಪೂರ್ಣ ವಾತಾವರಣದಲ್ಲಿ ಅಂಕೋಲೆಯವರು ತೋರಿಸಿದ ಶೌರ್ಯ ನಿಸ್ಸಂಶಯವಾಗಿ ಭೂಷಣಾಸ್ಪದವಿದೆ." ಇತ್ಯಾದಿ.

ಹಳಿಯಾಳದೊಳಗಿನ ಗೋರಕ್ಷಣ ಸಂಸ್ಥೆಯ ಪ್ರಚಾರಕರಾದ ರಾ| ಬಾಬಳೆಯವರು ಇಲ್ಲಿಂದ ಅವರ್ಸಾ, ಹಾರವಾಡಾ, ಬೇಲೇಕೇರಿ ಮುಂತಾದ ಹಳ್ಳಿಗಳಲ್ಲಿ ಪ್ರವಾಸ ಮಾಡಿ ಕಾರ

ನಾವಕ್ಕೆ ಹೋಗಿದ್ದಾರೆ. ಅಪ್ಪರ್ನಿಯಲ್ಲಿ ಕೀರ್ತನೆಯಿಂದಲೂ ಭಿಕ್ಷೆಯಿಂದಲೂ ರೂ. ೧೭—೧—೭ ಸಿಕ್ಕಿತೆಂದು ತಿಳಿಯುತ್ತದೆ. ಹಾದಿಯಾ, ಬೇಲೇಕೇರಿ, ಬಂದರಗಳ ಊರುಗಳಲ್ಲಿ ರೂ. ೪—೧೧—೬ ಪ್ರಾಪ್ತಿಯಾಯಿತು. ಸಂಘದ ಬಗ್ಗೆ ಡಾ। ಮುಳೆಯವರು ಕಷ್ಟಪಟ್ಟು ಕೆಲಸ ಮಾಡುವದನ್ನು ನೋಡಿ ಜನರು ಅವರನ್ನು ಪ್ರೀತಿಯಿಂದ ಸತ್ಕರಿಸಿದರು.

ಬಾಸವಾಡೆಯಲ್ಲಿ ಈಗ ಇಲಿಗಳು ಬೀಳುವದಿಲ್ಲ. ಊರಲ್ಲಿ ಆರೋಗ್ಯವಿದೆ.

ಶ್ರೀ ಲಕ್ಷ್ಮೀನಾರಾಯಣ-ಮಹಾಮಾಯಾ ದೇವರ ದರ್ಶನಕ್ಕೆ ಡಾ। ರಮಾನಾಥರಾವ ನಾಡಕರ್ಣಿ, ಆಯ್. ಸಿ. ಎಸ್. ಇವರು ಬುಧವಾರ ತಾ. ೨೭-೧೧-೩೫ನೇ ಅಪರಾಹ್ನ ೪ ಘಂಟೆಗೆ ಬಂದು ತಲ್ಪಿದರು. ಸೋಮವಾರ ಮುಂಬಯಿಯಲ್ಲಿ ಲೀಕಯಂತ ರಾಜನಾಗಿ ೧೪ ದಿವಸಗಳ ರಜೆ ಪಡಕೊಂಡು ಕುಲದೇವರ ದರ್ಶನಕ್ಕಾಗಿ ಬಂದಿದ್ದರು. ಕಟಪಾಡಿಯಿಂದ ಅವರ ತಂದೆಯವರಾದ ಡಾ। ಶಾಂತಾರಾಮ ಪಾಂಡುರಂಗ ನಾಯಕ ವಕೀಲರವರೂ, ಅವರ ಪತ್ನಿಯರೂ ಮಗನಿಗೆ ಕರಕೊಂಡು ಹೋಗುವದಕ್ಕಾಗಿ ಇಲ್ಲಿ ಬಂದಿದ್ದರು. ಡಾ ಪಾಂಡುರಂಗ ನಾಯಕರವರು ಶ್ರೀ ದೇವಸ್ಥಾನದ ಮೊಕ್ತೇಸರರು. ರಮಾನಾಥರಾಯರಿಗೆ ದೇವಸ್ಥಾನದವರು ಒಳ್ಳೇ ಸತ್ಕಾರ ಮಾಡಿದರು. ಎತ್ತರವಾದ ಹಂದರ ಹಾಕಿ ಖುರ್ಚಿ, ಮೇಜು, ಬೆಂಚು ಮೊದಲಾದ ಸರಂಜಾಮುವನ್ನಿಟ್ಟು ಯೋಗ್ಯತೆಗೆ ಸರಿಯಾಗಿ ಅವರಿಗೆ ಸ್ವಾಗತ ಮಾಡಲಾಯಿತು. ಮಾರನೇ ದಿನ ಗುರುವಾರ ಶ್ರೀ ದೇವರಿಗೆ ಮಹಾಪೌರಿ ಪೂಜೆಯ ಸೇವೆಯಾಯಿತು. ಈ ಸೇವೆಗೆ ಊರೊಳಗಿನ ಮಹನೀಯರೆಲ್ಲ ಆಮಂತ್ರಿತರಾಗಿ ಕೂಡಿಸೋಣವಾಗಿತ್ತು. ಎಲ್ಲರೂ ರಮಾನಾಥರಾಯರ ದೇವಭಕ್ತಿ ನೋಡಿ ಪ್ರಶಂಸಿಸಿದರು. ನಮ್ಮಲ್ಲಿಯ ಶಿಕ್ಷಣ ಪಡೆದ ಜನರೆಲ್ಲರೂ ದೇವಭಕ್ತಿಯನ್ನು ತಳೆದು ನಡಕೊಂಡರೆ ಸಮಾಜದಲ್ಲಿ ಗೌರವವಿದೆ; ಸಮಾಜಕ್ಕೂ ಅದೊಂದು ಭೂಷಣವೇ. ರಮಾನಾಥರಾಯರು ಸಿಂಧ ಪ್ರಾಂತದಲ್ಲಿ ಅಸಿಸ್ಟಂಟ ಕಲೆಕ್ಟರರಾಗಿ ಸದ್ಯಕ್ಕೆ ನೇಮಿಸಲ್ಪಟ್ಟಿದ್ದಾರೆ.

ಕಾರವಾರ— ಶಿರ್ಸಿಯ ಖೂನಿ ಖಟ್ಲೆಯಲ್ಲಿ ಆರೋಪಿ ಭಂಗಾರಿ ಇವನಿಗೆ ಸೆಶನ್ಸ ಜಡ್ಜರಾದ ರಾ। ಸಾಳವಿಯವರು ದೇಹಾಂತ ಶಿಕ್ಷೆಯನ್ನು ಹೇಳಿದ್ದಾರೆ. ಖಟ್ಲೆಯ ಹಕೀಕತು ಈ ಕೆಳಗಿನಂತಿದೆ: ಕಳೆದ ಜುಲಾಯಿ ತಿಂಗಳಲ್ಲಿ ಭಂಗಾರಿಗೆ ಒಂದು ದಾವೆಯ ಖರ್ಚಿಗೆ ಹಣ ಬೇಕಾಯಿತು. ಅದ್ದರಿಂದ ಅವನು ಶಿರ್ಸಿ-ಬನವಾಸಿ ರಸ್ತೆಯ ಮೇಲಿರುವ ಗಣೇಶ ಕೃಷ್ಣಪ್ಪ ಎಂಬವನ ಮನೆಯಲ್ಲಿ ಕಳವು ಮಾಡಲು ಹೊಕ್ಕನು. ಗಣೇಶನೂ, ಅವನ ಹೆಂಡತಿಯೂ ಹೊಲಕ್ಕೆ ಹೋಗಿದ್ದರು. ಮನೆಯಲ್ಲಿ ನಾಗು ಎಂಬ ೧೩ ವರ್ಷದ ಹುಡುಗಿಯೊಬ್ಬಳೇ ಇದ್ದಳು. ಭಂಗಾರಿಯು ನಾಗುವಿಗೆ ಕತ್ತಿಯಿಂದ ಇರಿದನು. ಆಕೆಯು ಸತ್ತುಬಿದ್ದಳು. ಭಂಗಾರಿಯು ಅವಳ ಮೈಮೇಲಿನ ೩-೪ ರೂಪಾಯಿ ಬೆಲೆ ಬಾಳುವ ದಾಗಿನೆಗಳನ್ನು ಅಪಹರಿಸಿ ಓಡಿಹೋದನು. ಮ ಜಡ್ಜ ಸಾಹೇಬರು ಅವನಿಗೆ ಕೊಲೆ ಮಾಡಿದ ಬಗ್ಗೆ ದೇಹಾಂತ ಶಿಕ್ಷೆಯನ್ನು, ಬಲಾತ್ಕಾರದ ಕಳವು ಮಾಡಿದ ಬಗ್ಗೆ ೫ ವರ್ಷಗಳ ಶಿಕ್ಷೆಯನ್ನು ವಿಧಿಸಿದ್ದಾರೆ.

“ನ್ಯಾಯಪ್ರಿಯ”ರೊಬ್ಬರು ಬರೆಯುತ್ತಾರೆ:—“ಪೋಲೀಸರ ಅತ್ಯಾಚಾರಗಳ ಪ್ರಕರಣವೊಂದು ಇಲ್ಲಿಯ ನ್ಯಾಯಾಸನದ ಮುಂದೆ ಪ್ರಕಾಶಕ್ಕೆ ಬಂದಿದೆ. ಅಮದಳ್ಳಿಯ ಹನುಮಂತನೆಂಬವನ ಮೇಲೆ ಇಲ್ಲಿಯ ಪೋಲೀಸರು ಕಳವಿನ ಆಪಾದನೆ ಹೊರಿಸಿ ಖಟ್ಲೆ ಹಾಕಿದ್ದರು. ತನಗೆ ಕೈಮ ಮಾಡುವ ಮುಂಚೆ ಪೋಲೀಸರು ಚನ್ನಾಗಿ ಛಳಸಿದರೆಂತ ಹನುಮಂತನ ಅಂಬೋಣ. ಕೈಮ ಮಾಡಿದ ಮೇಲೆ ಅವನ ಅಂಗಝಡ್ತಿಯ ಪಂಚನಾಮೆಯಲ್ಲಿ “ಆರೋಪಿಯ ಮೈ-ತಪಾಸ ಮಾಡಿ ನೋಡಲು ಹೊಸ ಪೆಟ್ಟು-ಕಚ್ಚು ಏನೂ ಇದ್ದಿಲ್ಲ” ವೆಂದು ಬರೆದಿದೆ. “ಹೊಸ” ಎಂಬ ವಿಶೇಷಣ ಹಾಕುವ ಗೂಢವೇನು? ಹನುಮಂತನು ಬಡವನು; ಪೆಟ್ಟು ತಿಂದು ಹಣ್ಣಾಗಿದ್ದನು. ಪೋಲೀಸರ ವಿರುದ್ಧ ಏನೂ ಹೇಳಲು ಅವನಿಗೆ ಧೈರ್ಯವಿದ್ದಿಲ್ಲ. ಜೈಲಿಗೆ ರಿಮಾಂಡ ಮಾಡಿದ ಮೆಜಿಸ್ಟ್ರೇಟರ ಮುಂದೆ ಅವನು ದೂರಲಿಲ್ಲ. ಸುದೈವದಿಂದ ಅವನು ಜೈಲಿಗೆ ಕಳಿಸಲ್ಪಟ್ಟು ಜೈಲಿನಲ್ಲಿ ಜೇಲರರು ಅವನ ಮೈಗೆ ಆದ ಗಾಯಗಳನ್ನು ಕಂಡುಹಿಡಿದರು. ಮತ್ತು ಸಿವ್ಹಿಲ ಸರ್ಜನರ ಕಡೆಯಿಂದ ಗಾಯಗಳಾದ ಬಗ್ಗೆ ಸರ್ಟಿಫಿಕೇಟ ತಕ್ಕೊಂಡರು. ಎಲ್ಲ ಸಂಗತಿಗಳು ಮೆ। ಡಿ। ಮೆ।ರ ಕೋರ್ಟಿನ ಮೇಲೆ ಹಾಕಲ್ಪಟ್ಟಿವೆ. ಅವರ ಹುಕುಮಿನಂತೆ ೨ನೇ ವರ್ಗದ ಮೆಜಿಸ್ಟ್ರೇಟರಾದ ರಾ। ನಾಯ್ಕರ ಮುಂದೆ ಹನುಮಂತನ ಜಬಾನಿಯಾಯಿತು. ಅದರಲ್ಲಿ ಅವನು ಫೌಜದಾರರೇ ಸ್ವತಃ ತನಗೆ ಹೊಡೆದರೆಂದು ಹೇಳಿದ್ದಾನೆ. ಈ ಚೌಕಶಿಯು ಎಲ್ಲಿಗೆ ಮುಟ್ಟುತ್ತದೆಂದು ಜನರು ನೋಡುತ್ತಿದ್ದಾರೆ. ಹನುಮಂತನ ಮೇಲೆ ಹಾಕಿದ ಕಳವಿನ ಖಟ್ಲೆಯ ವಿಚಾರ ಮುಗಿದು ಅವನು ನಿರ್ದೋಷಿಯೆಂದು ಮುಕ್ತನಾಗಿದ್ದಾನೆ. ಫಿರ್ಯಾದಿಯು ಹೇಳುವ ಕಳವಿನ ಕಥೆಯೇ ನಂಬಬರುವದಿಲ್ಲವೆಂದು ಮೆಜಿಸ್ಟ್ರೇಟರು ಬರೆದಿದ್ದಾರೆ. ಸುಳ್ಳು ಫಿರ್ಯಾದು ವಿಚಾರಕ್ಕೆ ಹಿಡಿದು ನಿರಪರಾಧಿ ಹನುಮಂತನಿಗೆ ಕ್ರೂರತನದಿಂದ ಛಳಿಸಿದ ಬಗ್ಗೆ ಪೋಲೀಸರಿಗೆ ಜನರು ಕೇಳಿಯುತ್ತಾರೆ.” ಇತ್ಯಾದಿ.

ತಾ. ೬ನೇ ಸಂಜೆಯ ಸನಕ ಪಾದಿ ಸಂತೆಯಲ್ಲಿ ರೂ. ೭೦೦ ರ ವ್ಯಾಪಾರವಾಗಿರುತ್ತದೆ.

ರಸ್ತೆಯ ಮೇಲೆ ನೀರು ಹಾಕುವದಕ್ಕೂ, ಬೆಂಕಿ ಬಿದ್ದಲ್ಲಿ ಬೆಂಕಿ ನಂದಿಸುವದಕ್ಕೂ ಇಲ್ಲಿಯ ಮ್ಯುನಿಸಿಪಾಲಿಟಿಯವರು ಒಂದು ಮೋಟಾರಗಾಡಿ ತರಿಸಿದ್ದಾರೆ. ‘ಫಾಯರ-ಫ್ಯಾಟರ’ ಯೆಂದೆ ಅಗ್ನಿನಾಶಕವೆಂದು ಅದರ ಹೆಸರು. ಇಮಾರತುಗಳನ್ನು ತೊಳೆದು ಸ್ವಚ್ಛಗೊಳಿಸಲಿಕ್ಕೂ ಅದು ಉಪಯೋಗಕ್ಕೆ ಬೀಳುತ್ತದಂತೆ. ೪॥ ಸಾವಿರ ರೂಪಾಯಿ ಕಿಮ್ಮತ್ತು ಬಿದ್ದಿರಬಹುದೆಂದು ಹೇಳುತ್ತಾರೆ. ಈ ಗಾಡಿಯಿಂದ ಘೋಳಿಯ ಉಪದ್ರವ ದೂರವಾಗುವದೆಂದು ಆಶಿಸುವೆ.

ಹಳಿಯಾಳ— ಚಳಿ ಬೀಳುತ್ತಿದೆ. ಚಳಿ ಜ್ವರಕ್ಕೆ ಭರತ ಬಂದಿದೆ. ಒಂದೊಂದು ಮನೆಯಲ್ಲಿ ಎಲ್ಲ ಜನರು ಹಾಸಿಗೆ ಹಿಡಿದದ್ದರಿಂದ ಗಂಜಿ ಬೇಯಿಸಿ ಹಾಕುವವರಿಲ್ಲ!

ಹಳಿಯಾಳ ಪೋಸ್ಟ ಆಫೀಸಿನವರು ಮುಂಚೆ ಮದನಳ್ಳಿ, ಭಾಗವಡಾಡ, ಮತ್ತು ಸಾಂಬ್ರಾಣಿ ಹೀಗೆ ೩ ಬೀಟು ಮಾಡಿ ಟಪಾಲು ಬಟವಡೆ ಮಾಡುತ್ತಿದ್ದರು. ಹಳ್ಳಿಯವರಿಗೆ ನಾಲ್ಕು ದಿನಗಳಿಗೊಮ್ಮೆ ಟಪಾಲು ಸಿಗುತ್ತಿತ್ತು. ಕೆಲವು ಕಾಲದ ನಂತರ ಒಂದೇ ಬೀಟು ಮಾಡಿದರು. ಒಬ್ಬನೇ ಟಪಾಲದವನು ಹಳ್ಳಿಗಳಲ್ಲಿ ಟಪಾಲು ಮುಟ್ಟಿಸುತ್ತಿದ್ದನು. ೮ ದಿವಸಗಳಿಗೊಮ್ಮೆ ಟಪಾಲು ಸಿಗುತ್ತಿತ್ತು. ಧಾರವಾಡದಿಂದ (ಹಳಿಯಾಳ ತಾಲೂಕು ಧಾರವಾಡ ಕೋರ್ಟಿಗೆ ಒಳಪಟ್ಟಿದೆ.) ನೋಟೀಸು,ವಾರಂಟು ತಾರೀಖು ತಿಳಿಸಿ ಬರೆದ ಪತ್ರಗಳು ಮುದ್ದತ್ತು ತೀರಿದ ಮೇಲೆ ಬಂದು ಮುಟ್ಟುವವೆಂದು ಒಮ್ಮೊಮ್ಮೆ ಕೇಳಿಸುತ್ತಿತ್ತು. ಈಗ ಸಾಂಬ್ರಾಣಿಯ ಬ್ರಾಂಚ ಪೋಸ್ಟ ಆಫೀಸನ್ನು ತೆಗೆದು ಹಾಕಿದ್ದಾರೆ. “ಡಲಿವ್ಹರಿ ಏಜಂಟ”ನಿಗೆ ನೇಮಿಸಿದ್ದಾರೆ. ಅವನು ನಾಲ್ಕು ದಿವಸಗಳಲ್ಲಿ ಒಮ್ಮೆ ಹಳಿಯಾಳದಿಂದ ಟಪಾಲು ಒಯ್ದು ಬಟವಡೆ ಮಾಡತಕ್ಕದ್ದು! ಕೆಲವು ಹಳ್ಳಿಗಳಲ್ಲಿ ಟಪಾಲ ಬಟವಡೆ ಮಾಡುವದು ಇಲ್ಲವಾಗಿ ಹೊಸ ಹುಕುಮು ಬಂದಿದೆ. ಅವರು ಹಳಿಯಾಳಕ್ಕೆ ಬಂದು ಯಾ ಈ ಏಜಂಟನ ಬಳಿ ತಮ್ಮ ಟಪಾಲು ಉಂಟೋ ಎಂದು ಚೌಕಶಿ ಮಾಡತಕ್ಕದ್ದು. ಅವರು ಹೀಗೆ ಬಂದು ಚೌಕಶಿ ಮಾಡಿ ಒಯ್ಯದಿದ್ದರೆ ಪತ್ರಗಳು ತಿರುಗಿ ಬರೆದವನಿಗಾಗಲಿ, “ಮೃತಪತ್ರಗಳ ಕಚೇರಿ”ಗಾಗಲಿ ತಿರುಗಿ ಹೋಗುವವು! ಲೋಕಾನುಕೂಲತೆಗಾಗಿ ನಿರ್ಮಾಣವಾದ ಟಪಾಲ ಖಾತೆಯ ಲೋಕಸೇವೆಯಿದು! ಹಾಗಿ ಟಪಾಲ ಒಯ್ಯುವವಗೆ ಶಿಕ್ಷೆ ಮಾಡಬಾರದೇಕೆಂದು ಹೇಳುವ ಟಪಾಲು ಖಾತೆಯವರು ‘ರದ ವ್ಯವಸ್ಥೆ (?) ಯಿಂದ ಹಳ್ಳೀ ಜನರಿಗೆ ಆಗುವ [illegible]ತೆಯನ್ನು ತಪ್ಪಿಸಬಾರದು.

ಇಲ್ಲಿಯ ರೇಂಜ ಆಫೀಸರರಾದ ರಾ। ಚಕ್ಕೋ ಇವರು ವಿಶೇಷ ಶಿಕ್ಷಣ ಪಡೆಯುವ ಬಗ್ಗೆ ೨ ತಿಂಗಳ ಹಿಂದೆ ವಿಲಾಯತಿಗೆ ಹೋಗಿದ್ದರು. ಕೆಲವು ದಿನಗಳ ಹಿಂದೆ ಅವರು ಸ್ವರ್ಗವಾಸಿಗಳಾದರೆಂದು ದುಃಖಪ್ರದ ವರ್ತಮಾನ ಬಂದಿದೆ. ಮೃತಾತ್ಮರಿಗೆ ಶಾಂತಿ ದೊರೆಯಲಿ!

ಈ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಬೆಳೆ ಸರಿಯಾಗಿ ಬರದಿಲ್ಲವಾದ್ದರಿಂದ ಅಲ್ಲಿಯ ರೈತರಿಗೆ ತೀರ್ವೆ ಸೂಟ ಬಿಡಬೇಕೆಂದೂ, ಕಾಡಾನೆಗಳ ಉಪದ್ರವದಿಂದ ಬೆಳೆ ಕಳಕೊಂಡವರಿಗೂ ಸೂಟ ಸಿಗಬೇಕಾಗಿಯೂ ಮೇಲಧಿಕಾರಿಗಳ ಕಡೆಗೆ ಕೇಳಿಕೊಂಡ ರಿಪೋರ್ಟು ಆಗಿದ್ದದಾಗಿ ತಿಳಿಯುತ್ತದೆ. ಯಾವ ಯಾವ ಹಳ್ಳಿಗಳ ಬಗ್ಗೆ ಎಂಬುದು ತಿಳಿಯಲಿಲ್ಲ. ಎಲ್ಲ ಜನರಿಗೆ ಈ ಸೂಟು ಸಿಗುತ್ತದೋ, ಯಾ “ಅರಸಿಕ” ಕೆಲವು ಬಾಕೀದಾರರಿಗೆ ಮಾತ್ರ ಸಿಗುತ್ತದೋ ಎಂಬುದನ್ನು ನೋಡಬೇಕು.

ದಿ ಕುಮಟಾ ಅರ್ಬನ್ ಕೋ-ಒಪರೇಟಿವ್ಹ ಬೇಂಕ, ಲಿಮಿಟೆಡ್.

ಜಾಹೀರ ನೋಟೀಸು.

ಸದ್ಯದ ಬಿಕ್ಕಟ್ಟಿನ ಆರ್ಥಿಕ ಪರಿಸ್ಥಿತಿಯು ಮೂಲಕ ಬೇಂಕದ ಯಾವತ್ತೂ ಸಾಲಗಾರರಿಗೆ ಬಡ್ಡಿಯ ದರವಾರಿನಲ್ಲಿ ಯೋಗ್ಯ ಸವಲತ್ತುಗಳನ್ನು ಕೊಡತಕ್ಕದ್ದೆಂದು ಒಂದು ಸವಲತ್ತಿನ ಯೋಜನೆಯನ್ನು ಮೆ॥ ಅ॥ ರಜಿಸ್ಟ್ರಾರ ಸಾ॥ರ ಮಂಜೂರಿಯಿಂದ ತಯಾರಿಸಲ್ಪಟ್ಟಿದೆ. ಸದ್ರಿ ಸವಲತ್ತಿನ ಯೋಜನೆಯ ಪ್ರಕಾರ ಸಾಲಗಾರರು ಅಥವಾ ಜಾಮೀನದಾರರು ಬೇಂಕಿಗೆ ತಮ್ಮ ತಮ್ಮ ಸಾಲದ ರಕಮನ್ನು ರೋಖ ವಸೂಲ ಕೊಟ್ಟು, ತಮ್ಮ ಬಾಕಿಯನ್ನು ನಿಖಾಲೆ ಮಾಡಿದಲ್ಲಿ ಅವರಿಂದ ಬೇಂಕಿಗೆ ಬರತಕ್ಕ ದಂಡದ ಬಡ್ಡಿ ಸೂಟು ಬಿಡುವದರಲ್ಲಿ ಬರುವದು. ಮುಕ್ತ ಬೇಂಕಿಗೆ ಸಲ್ಲತಕ್ಕ ಸಾದಾ ಬಡ್ಡಿ ರಖಮಿನಲ್ಲಿ ದರ ಸಾ. ದ. ಶೇ. ೩ರಂತೆ ತೆಗೆದುಕೊಳ್ಳುವದರಲ್ಲಿ ಬರುವದು. ಸದ್ರಿ ಸವಲತ್ತುಗಳು ಮುಖ್ಯತಃ ನಮ್ಮ ಬೇಂಕಿಗೆ ಚಾಲೂ ಸಾಲಿನ ಬಗ್ಗೇ ಸ್ವಲ್ಪ ಅವಧಿಯ ವರೆಗೆ ಇರುವ ಮೂಲಕ ಯಾವತ್ತೂ ಸಾಲಗಾರರು ಈ ಸವಲತ್ತುಗಳ ಫಾಯಿದೆ ತೆಗೆದುಕೊಂಡು ತಮ್ಮ ತಮ್ಮ ಸಾಲ ನಿಖಾಲೆಯನ್ನು ಕೂಡಲೇ ಮಾಡತಕ್ಕದ್ದು.

೨. ಈ ಪೂರ್ವದಲ್ಲಿ ತಾ. ೧-೧೧-೩೫ರಿಂದ ಯಾವ ಯಾವ ಸಾಲಗಾರರು ತಮ್ಮ ಸಾಲ ಪೂರ್ಣ ವಸೂಲ ಕೊಟ್ಟು ನಿಖಾಲೆ ಮಾಡಿರುತ್ತಾರೋ ಅವರು ಸವಲತ್ತಿನ ಯೋಜನೆಯಂತೆ ವಸೂಲ ಕೊಟ್ಟ ಹೆಚ್ಚಿನ ಬಡ್ಡಿಯ ರಖಮನ್ನು ಬೇಂಕಿನಲ್ಲಿ ಬಂದು ಪರತ ತೆಗೆದುಕೊಂಡು ಹೋಗತಕ್ಕದ್ದು.

೩. ಈ ಬಗ್ಗೆ ಸವಿಸ್ತರ ಮಾಹಿತಿ ಪ್ರತ್ಯೇಕವಾಗಿ ಹಂಚಿದ ಹಸ್ತಪತ್ರಿಕೆಯಲ್ಲಿ ಅಥವಾ ಬೇಂಕಿನಲ್ಲಿ ಸಿಗುವದು.

ಕುಮಟಾ, *5—12—1935.*

K. R. Swadi. *Manager.*
Annapa R. Pai. *Chairman.*

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಏಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
D. S. Pai
K. N. Nayak.
Honavar Agents-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು!

[೫ನೇ ಪಾನಿನಿಂದ ಮುಂದುವರಿದ್ದು.]

cultivation expenses go to swell the standing debt.]" ಅಂದರೆ ತೀರ್ವೆಗಿಲ್ಲ; ಬಡ್ಡಿಗಿಲ್ಲ; ಸಾಗುವಳಿ ಖರ್ಚಗಿಲ್ಲ. ಋಣ—ಶೋಧನದ ಖರ್ಚಿನ ಮಾತಂತು ಎತ್ತಬೇಡಿ. ಇಂಥ ಸ್ಥಿತಿಯಲ್ಲಿ ಜನಸಾಮಾನ್ಯರು ಅತ್ಯಸಂತೋಷದಿಂದ ತೀರ್ವೆ ತೆತ್ತರೆಂದು ಮುಂಬಯಿ ಸರಕಾರವು ನಮೂದಿಸಿ ಬಡ ಬೇಸಾಯಗಾರರಿಗೆ ಅಣಕಿಸುವದೇಕೆ?

⁂

ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ತಯಾರಿ ಎಲ್ಲೆಲ್ಲಿಯೂ ಭರದಿಂದ ನಡೆದಿದೆ. ರಾಷ್ಟ್ರೀಯ ಪ್ರಮುಖರೂ, ಇತರ ಲೋಕನಾಯಕರೂ ರಾಷ್ಟ್ರೀಯ ಸಭೆಯ ರಾಷ್ಟ್ರಪ್ರಾತಿನಿಧ್ಯಕ್ಕೆ ಅನುಗುಣವಾಗಿ ಉತ್ಸವ ಪಾಲಿಸಲು ಸಿದ್ಧತೆ ಮಾಡುತ್ತಿದ್ದಾರೆ. ಕಲಕತ್ತೆಯ ಮ್ಯುನಿಸಿಪಾಲಿಟಿಯವರು ಉತ್ಸವವನ್ನು ಸಡಗರದಿಂದ ಸಮಾಚರಿಸುವ ನಿರ್ಧಾರ ಕೈಕೊಂಡು ಅದರಂತೆ ಕಾರ್ಯಕ್ರಮದ ತಯಾರಿ ನಡೆಸಿದ್ದಾರೆ. ಮದ್ರಾಸ-ಮಂಗಳೂರ ಮ್ಯು| ಯವರೂ ಇದೇ ಪ್ರಕಾರ ನಿರ್ಧಾರ ಮಾಡಿದ್ದಾರೆ. ಮುಂಬಯಿಯಲ್ಲಿ ಮಹೋತ್ಸವವು ಒಳ್ಳೇ ಆಥಾಟದಿಂದ ನಡೆಯುವದು. ೧೮೮೫ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆಯು ಡಿಸೆಂಬರ ೨೮ನೇ ತಾರೀಖಿಗೆ ಶ್ರೀ| ಡಬ್ಲ್ಯೂ. ಸಿ. ಬ್ಯಾನರ್ಜಿ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಆ ಕಾಲದಲ್ಲಿ ಬರೇ ೭೨ ಪ್ರತಿನಿಧಿಗಳಿದ್ದರು. ೭೨ ಪ್ರತಿನಿಧಿಗಳ ಮೇಳಿಕೆಯ ರಾಷ್ಟ್ರೀಯ ಸಭೆಯ ವ್ಯಾಪವು ಕ್ರಮವಾಗಿ ಬೆಳೆದು ಇಂದಿಗೆ ರಾಷ್ಟ್ರೀಯ ಸಭೆಯು ಸ್ವದೇಶ-ವಿದೇಶಗಳಲ್ಲಿ ಕೀರ್ತಿ ಪಡೆದಿದೆ. ಇಂಥ ರಾಷ್ಟ್ರೀಯ ಸಭೆಯ ಜನ್ಮಸ್ಥಾನ ಮುಂಬಯಿ. ಆದರಿಂದ ಮುಂಬಯಿಯಲ್ಲಿಯೇ ಉತ್ಸವದ ಮುಖ್ಯ ಕಾರ್ಯಕ್ರಮ ನಡೆಯತಕ್ಕದ್ದಾಗಿ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರವರ ಆಜ್ಞಾಪತ್ರ ಹೊರಡಿಸಿದ್ದಾರೆ. ಅದರಂತೆ ಮುಂಬಯಿಯಲ್ಲಿ ಅಖಿಲ ಭಾರತೀಯ ಕಾರ್ಯಕ್ರಮ ನಡೆಯುವದು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಕಳೆದ ೫೦ ವರ್ಷಗಳಲ್ಲಿ ರಾಷ್ಟ್ರಸ್ವಾತಂತ್ರ್ಯದ ರಥವನ್ನು ನಡೆಸಿದ ವಿದ್ವಮಾನ ಸಾರಥಿಗಳೆಲ್ಲ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಸನ್ಮಾನಿಸಿದ್ದಾರೆ. ಅಧ್ಯಕ್ಷರು ಈಗ ಜೀವಂತ [illegible]ಲಿ, ಯಾವದೇ ಸಂಪ್ರದಾಯದವರಿರಲಿ, ಉತ್ಸವದ ದಿನ ರಾಷ್ಟ್ರೀಯ ಸಭೆಗೆ ನಿಷ್ಠೆಯನ್ನು ಪ್ರದರ್ಶಿಸಬೇಕಾಗಿ ಪ್ರಾಂತಿಕ ಕೊಂಗ್ರೆಸ ಕಮಿಟಿಯವರ ಬಿನ್ನಹ. ರಾಷ್ಟ್ರೀಯ ಸಭೆಯು ಜನ್ಮವನ್ನೆತ್ತಿದ ಪವಿತ್ರ ಮಂದಿರದ ಮೇಲೆ ಉತ್ಸವದ ಸಮಯ ಸ್ಮಾರಕ ಶಿಲೆ ಇಡೋಣವಾಗುವದು. 'ಸಿವಿಲ ಸದನ'ದಲ್ಲಿ ರಾಷ್ಟ್ರಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಪ್ರಾಣಾರ್ಪಣೆ ಮಾಡಿದ ವೀರ ಯೋಧರ ಪುಣ್ಯ ಸ್ಮರಣೆಗಾಗಿ ಸ್ಮಾರಕ ಸ್ತಂಭವಿಡಲ್ಪಡುವದು, ಅಮರಾವತಿಯ ಹನುಮಾನ ವ್ಯಾಯಾಮ ಶಾಲೆಯ ವಿದ್ಯಮಾನ ೨೦೦ ಮಂದಿ ಜಟ್ಟಿಗಳು ತಮ್ಮ ಮಲ್ಲವಿದ್ಯೆಯ ಪ್ರದರ್ಶನ ಮಾಡುವರು. ಆ ದಿನ ಇಡೀ ಮುಂಬಾಪುರಿಯಲ್ಲಿ ದೀಪೋತ್ಸವ. ಶಾಲೆಗಳಿಗೂ ರಜೆ. ಸರಕಾರಿ ಹುದ್ದೆಗಳನ್ನು ಪಡೆದ ದೊಡ್ಡ ದೊಡ್ಡ ಅಧಿಕಾರಿಗಳು ಸಹ ಈ ಉತ್ಸವದಲ್ಲಿ ಸೇರಬೇಕಾಗಿ [illegible]ಯ ಪಡುತ್ತಾರೆ. ರಾಷ್ಟ್ರೀಯ ಸಭೆಯ ಚಳವಳಿಯಿಂದಲೇ ಹಿಂದೀಯರಿಗೆ ದೊಡ್ಡ ದೊಡ್ಡ ಹುದ್ದೆಗಳೂ ದೊರೆತಿವೆ. ಅವರು ಕೃತಜ್ಞರಾಗಿ ಈ ಉತ್ಸವದೊಳಗ ಸೇರಬೇಕು. ರಾಷ್ಟ್ರೀಯ ಸಭೆಯವರು ಈ ಉತ್ಸವವನ್ನು ಸಮಸ್ತ ಪಕ್ಷಗಳಿಗೂ ಅನುಕೂಲವಾಗುವಂತೆ ಪಾಲಿಸಲು ಸಂಕಲ್ಪ ಮಾಡಿದ್ದಾರೆ. ಆ ದಿನ ಪ್ರತಿಯೊಂದು ಮನೆಯಲ್ಲಿ ರಾಷ್ಟ್ರಧ್ವಜ ಹಚ್ಚಬೇಕೆಂದು ನಿಶ್ಚಿತವಾಗಿದೆ. ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನ ತೆರೆಯಬೇಕೆಂದು ಗೊತ್ತಾಗಿದೆ. ಮುಂಬಯಿಯೊಳಗಿನ ಉತ್ಸವ ಸಮಾರಂಭವು ಜನವರಿ ೫ನೇ ತಾರೀಖಿನ ತನಕ ನಡೆಯುವದು. ೨೮ನೇ ರವಿವಾರ ಧ್ವಜಾರೋಹಣ ಸಮಾರಂಭವಾಗುವದಿದೆ. ದೇಶದೊಳಗಿನ ಜನರೆಲ್ಲರೂ ರಾಷ್ಟ್ರೀಯ ಸಭೆಯ ರಾಷ್ಟ್ರಕಾರ್ಯವನ್ನು ಸ್ಮರಿಸಿ ಉತ್ಸವವನ್ನು ಐಕ್ಯಮತ್ಯದಿಂದ ಉತ್ಸವವನ್ನು ಸಾದರಗೊಳಿಸುವರಾಗಿ ನಂಬಿಗೆ. ರಾಷ್ಟ್ರೀಯ ಸಭೆಯ ಮೇಲಿನ ಜನಸಾಮಾನ್ಯರ ಪ್ರೀತಿಯನ್ನೂ, ಭಕ್ತಿಯನ್ನೂ ಒಂದು ಸಂಗತಿಯ ಮೇಲಿಂದ ಸಿದ್ಧಪಡಿಸಬಹುದು. ವಿಜಯನಗರದಲ್ಲಿ ರಾಷ್ಟ್ರಪತಿಗಳ ದ. ಬಾಬು ರಾಜೇಂದ್ರ ಪ್ರಸಾದರವರು ಸಂಜೆ ೬ ಘಂಟೆಗ ತಲ್ಪುವವರಿದ್ದರು. ಆ ಸಭೆ ಮ್ಯುನಿಸಿಪಾಲಿಟಿಯ ಉಪವನದಲ್ಲ ಸೇರುವದಿತ್ತು. ೧೦ ಸಾವಿರಕ್ಕೆ ಮಿಕ್ಕಿ ಜನರು ರಾಷ್ಟ್ರಪತಿಗಳಿಂದ ರಾಷ್ಟ್ರೋದ್ಧಾರದ ಸದುಪದೇಶ ಕೊಂಡಲು ಆತುರರಾಗಿ ಕೂತುಕೊಂಡಿದ್ದರು. ರಾಷ್ಟ್ರಪತಿಗಳಿಗೆ ಕಾರಣಾಂತರದಿಂದ ಸಕಾಲಗಳ್ಳಿ ತಲ್ಪಲಾಗಲಿಲ್ಲ. ೨ ಘಂಟೆಯ ವಿಳಂಬವಾಗುವದಾಗಿ ತಂತಿ ಕೊಟ್ಟರು. ಜನರು ಕಾದು ಕೂತರು. ಎಷ್ಟು ಪ್ರಯತ್ನಪಟ್ಟರೂ ರಾಷ್ಟ್ರಪತಿಗಳಿಗೆ ರಾತ್ರಿ ೧೦—೧೨ ಘಂಟೆಯ ತನಕ ತಲ್ಪಲಾಗಲಿಲ್ಲ. ಮಧ್ಯರಾತ್ರಿಯ ವರೆಗೆ ಜನರು

ಇಂಡಿಯನ್ ಮರ್ಕೆಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ— ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ!!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್. ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ವರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯಿದೆ, ಇನ್‌ಕಮ್‌ಟೇಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೬ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ ಖಾಯಿಶ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತೆ:— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

NOTICE.

THE SIRSI ELECTRIC LICENSE, 1935.

The Public are hereby informed that the undersigned has applied to the Government of Bombay for license to supply electric energy to the public of Sirsi. The copy of the draft license can be had from the undersigned on payment of annas 8/-. Copy of the plan can be seen at the Sirsi Municipal office or in the office of the Laxmi Rice Mill, Sirsi. All those who have any representation to make should do so in writing to the Secretary to the Government P. W. D., Bombay, within three months, from the date of publication.

Address—
The Laxmi Rice Mill,
Sirsi. N. KANARA.

ANANT SUBRAO KASARKOD,
Managing Proprietor,
Sirsi Electric Supply Co.

DRAFT.

The Sirsi Electric License, 1935.

License for the supply of electrical energy granted by the Government of Bombay under the Indian Electricity Act, 1910.

License. License is hereby granted to Anant Subrao Kasarkod, L. M. E., of Sirsi to supply electrical energy in the area with the powers, and upon the terms and conditions all specified below.

1. Short Title. This License may be cited as "The Sirsi Electric License, 1935."

2. Interpretation. The several words, terms and expressions which have been defined in the Indian Electricity Act, 1910 or the Rules made thereunder, shall have in this license the same respective meaning provided that:—

(1) The "Rules" shall mean the Rules made under the act;

(2) The Expression "**The Licensee**" shall mean and include the said Mr. A. S. Kasarkod, L. M. E., and his permitted assigns;

(3) The expression "Deposited Map" shall mean the plan of the area of supply as herein-after specified, which is deposited with Government, in pursuance of the rules, which plan is signed, for the purpose of identification, by the Joint-Secretary, to the Government of Bombay in the Public Works Department and by the licensee.

(4) The expression "the commencement of this license" shall mean the date of the notification by the Government of Bombay in the Bombay Government Gazette by whom this license is granted.

and

(5) the term "Government" shall mean the Government of Bombay.

3. Security. (1) The period within which the licensee shall show under sub-clause (*a*) of clause I of the Schedule to the Act that he is in a position fully to discharge the duties and obligations imposed upon him by the license throughout the area of supply, shall, unless otherwise ordered by Government under clause (*b*) of sub-section 3 of section 4 of the Act, be six months from the commencement of this license.

(2) Unless otherwise ordered by Government under clause (*b*) of sub-section (3) of section 4 of the Act, the sum which the licensee shall deposit or secure to the satisfaction of Government under sub-clause (*b*) of clause I of the Schedule of the Act, shall be Rupees two thousand, and the period within which such sum shall be deposited or secured shall be three months from the commencement of this license.

4. Area of Supply. The area within which the supply of energy is authorised by this license, hereinafter referred to as "the area of supply", shall be the whole of the area comprised within the Municipal limits of the Sirsi Municipality, shown as bounded by a green line on the Deposited Map.

5. Area of Compulsory Supply. (1) The licensee shall within a period of eighteen months from the commencement of this license execute works to the satisfaction of Government for the purpose of a full and continuous supply of energy throughout the streets or parts of streets as are mentioned below and coloured Red on the Deposited Map, and also such additional streets or parts of streets as Government may, after consultation with the licensee, direct, within six months from the commencement of this license:-

1. Chanpattan Bazar Road from the Post Office to the Veterinary Dispensary.

2 Library Road from Sub-judge's court to the Petrol pump

3 Shimi Galli from Champatan Bazar junction the Vithoba Temple

4 Ravivar Pethe from the Municipal Office to the Vishnu Temple

Basti Galli from Alur's building to Devikeri

6 Nadhe Galli from Chittagi's Vakhar to the Maruti Temple

(2) In the case of any difference between the description of the streets mentioned in sub clause (1) above and that indicated on the Deposited Map the latter shall prevail

(3) The licensee shall commence to secure the works for and within six months from the commencement of this license and shall commence the supply of energy within eighteen months therefrom

(4) The licensee shall every three months submit reports to Government and also the Electrical Engineer to Government specifying the progress made up to date from the commencement of the license in the execution of the work in the commercial area

5 **Revocation of License** If the licensee fails to comply with the provisions of sub clauses (1) (3) or (4) of this clause or if in the opinion of Government the progress made during any portion of the said period of eighteen months is unsatisfactory the license shall be liable to be revoked and the security furnished as per sub-clause 2) of clause 3 shall be forfeited

6 **Purposes of Supply** (1) Subject to the provisions of this license and the Act and the Rules the licensee shall be entitled during the continuance of this license to supply energy within the area of supply for all purposes and in bulk and to other licensees for their own purposes — Provided that no supply of energy shall be commenced to be given by the licensee either in retail to any owner or occupier of private premises or in bulk to a distributing licensee unless and until the licensee's work have been inspected by the Government and Electrical Inspector and passed by him in writing and until Government have approved,

(*a*) The form of requisition to be made by such owner or occupier or distributing licensee for such supply of energy

(*b*) the form of written contract or agreement with the licensee to take a supply of energy to be executed or entered into such by owner or occupier or distributing licensee and

(*c*) the amounts of all miscellaneous charges which the licensee proposes to make against such owner or occupier or distributing licensee as incidental to, and in connection with such supply

(2) Clauses V VI, VII IX, X and XI of the Schedule to the Act shall wherever necessary be read as expressly added to or varied to the extent set out in the proviso to sub clause (1) of this clause

(3) The licensee shall not supply energy to any premises unless the owner or occupier of such premises shall have satisfied the licensee that all works, including repairs, relating to electrical wires, fitting and apparatus on such premises, have been carried out by a licensed electrical contractor and under the supervision of a Competency certificate holder under the rules issued by Government in this behalf or by such other person as may be authorised to carry out such work under rule No 40—A of the rules, and clause VI of the Schedule to the Act shall be deemed to have been modified accordingly

7 **System of Supply** (1) The system of supply of energy which may be adopted for the purpose of this license shall be the following —

I. Alternating Current.

Single or three phase three or four wire, periodically 50 cycles per second The pressure of supply at the consumer's terminals shall be as under —

(*a*) 230 volts between each phase and neutral for general purposes viz lights fans, heaters etc

(*b* 400 volts between phase for motive power purposes and purposes other than those specified in (*a*) above and—

(*c*) Any pressure upto 6 600 volts for feeders and for supply to any large consumer for power purposes

or

II Direct Current.

For general purposes viz lights fans, heaters etc

(*a*) A continuous current low pressure supply at the consumer's terminals at a pressure of 220 230 volts between one of the outers and the middle conductor of a three wire system, the middle conductor being connected to earth at the generating station but insulated at all other parts *or*

(*b*) A continuous current low pressure supply at a pressure of 220-230 volts between the conductors of a two wire system

For Power Purposes A continuous current medium pressure supply at a pressure of 440/460 volts between the outers

(1) Provided always that the licensee may, from time to time, with the previous consent in writing of, and subject to such limitations and conditions as shall be prescribed in writing by Government adopt any other system of supply for the purpose of this license and that no high tension mains shall be brought within or near the populated areas without the specific sanction of Government in each case

(2) The feeders, distributing mains and service lines shall be overhead, provided that wherever and whenever specifically permitted or required to do so in writing by Government, such feeders distributing mains or service lines shall be laid underground

Provided that—

(*a*) No work or works shall be commenced by the licensee unless and until the method of construction shall have been previously approved, in writing by the Electrical Engineer to Government

(*b*) Where overhead mains are used, they shall be nowhere at a height less than 20 feet from the ground level of the streets at all crossings & in all the routes where Raths or Taboots or similar religious processions are likely to pass In case of dispute, such routes and heights shall be determined by the District Magistrate

(*c*) In narrow lanes or streets, the posts shall be placed on the extreme edge of the lane or street and a special construction to be approved by the Electrical Engineer to Government shall be adopted to keep the wires clear of every building

(*d*) Nothing in this license shall authoris the licensee to use overhead mains at any higher pressure than the medium pressure without the written sanction of Government in each case and subject to any conditions or limitations which Government may prescribe

(3) Due precaution shall be taken to avoid any possible interference with the adjacent telephone or telegraph circuits due to inductive method The electric wires shall be suitably transposed where necessary

(4) For the purpose of rule 61 of the Rules, the maximum wind pressure shall be taken as 15 pounds per square foot

8 Generating, Receiving, Transforming & Distributing Stations

(1) The Generating, Receiving, Transforming and Distributing stations shall be within the area of supply But the licensee shall be at liberty either to generate energy to satisfy the whole or any part of their requirements or to buy the whole or any part of the energy they require for distribution and resell the same within the area of supply When energy is bought from outside the area of supply, the licensee may, if necessary, lay down or place electric supply lines in accordance with the Act and the Rules for the conveyance and transmission of energy from the point of bulk supply outside the area of supply, to the boundary of the area of supply

(2) Properly qualified man for electricity shall be employed in the generating station and the whole undertaking shall be under the charge of a fully qualified Electrical Engineer with previous experience

9 Rates Limits of prices to be charged The prices to be charged by the licensee for energy supplied by him shall not exceed the maxima set out below or, in case of a method of charge approved by Government under Clause (*c*) of sub section (3) of Section 23 of the Act, such maxima as Government may fix on approving the method

(1) Where energy is supplied through meter

For General Supply Purposes—

(*a*) For lights and fans a rate of ans 8 per unit

(*b*) For Heating and Refrigerating Purposes — a rate of annas 3 per unit

(2) For Motive Power Purposes and purposes other than those provided for in items 1 (*a*) & (*b*) a rate of Rs 3/ per K W per month plus annas 3 per unit

Provided that the total consumption of energy in all the Government Buildings in the area supply shall be treated as a single bulk supply and a rebate of 1 per cent shall be granted for every 250 units consumed per month upto maximum of 35 per cent

Note - The term 'unit' occurring in this sub-clause shall mean the energy contained in a current of 1,000 Ampered flowing under an Electric Motive force of 1 volt during 1 hour

(2) A Minimum charge of Rs 3/- per month in the cases referred to in items (*a*) and (*b*) of sub clause 1 above shall be charged exclusive of meter rent, and irrespective of whether

energy of that value has been consumed or not.

(3) **Meter rent.** The rent to be charged for meters shall not exceed:- As. 8 per month for a D. C. meter, or a single phase A. C. meter,

and

Re. 1/- per month for a poly phase A. C. meter.

(4) Where energy is not supplied through meter, a fixed rate of Rs. 1-8-0 per mensem shall be charged for a 20 watt light and a proportionate rate for every additional 20 watts or part there-of burning for not more than 6 hours per night. i. e. from 6 P. M. to 12 midnight.

(5) In the case of large consumers, contracts may be made for fixed period at such rates not exceeding the rates specified in sub-clause (1) of this clause as may be agreed upon

(6) Without prejudice to anything contained in the above clauses the licensee may at any time enter into a special contract with the Municipality of Sirsi for supply of energy to the Municipality for public lighting upon such terms and conditions and at such rates, not exceeding the maximum charges specified above, as may for the time being be mutually agreed upon.

10. Breaking up of Streets. The length of trenches to be opened on any street at any one time and the period for which they may remain open shall be determined from time to time by Government or the local authority by whom such srteets are reparable.

11. Purchase of Undertaking. (1) The option of purchase given by Section (7) sub-section (1) of the Act shall be exercisable first on the expiration of 40 years from the commencement of this license & thereafter on the expiration of every subsequent period of 10 years therefrom. The percentage of the value of lands, buildings, works, materials and plant of the licensee referred to in sub-section (1) of section 7 of the Act which shall be added to such value under the second proviso to that sub-section on account of compulsory purchases, shall be 10%.

(2) In accordance with clause *(d)* (ii) of sub-section (2) of Section 3 of the Act, it is hereby declared that the generating station belonging to the licensee and used in connection with the undertaking, or where energy is bought from any other person or company, the receiving and distributing sub-stations used in conection with the undertaking shall form part of the undertaking for the purposes of purchase under Section 5 or Section 7 of the Act.

12. Assignment of the license. At any time after the commencement of this license the licensee may, with the previous consent in writing of Government, and subject to compliance with such conditions upon which such consent may be given, assign this license and transfer the whole of the undertaking in respect of which this license is granted (including all lands, buildings, works, materials and the plant of the licensee) to any individual or company formed or to be formed and registered in accordance with the law for the time being in force in British India or in Great Britain, under any enactment relating to companies for the time being in force there, and having authority to take over the license and the said undertaking as the case may be and to exercise the power and perform the obligations given to or imposed upon the licensee under this license and the Act, and the Rules, and on such assignment and transfer the rights, powers, authorities, obligations and liabilittes of the licensee shall be exercisable by and shall attach to such individual or company formed or to be formed as aforesaid.

ANANT SUBRAO KASARKOD,
SIRSI.

Applicant.

Dated this 2nd day of December, One Thousand Nine- Hundred and Thirty Five.

◆

— ಜರ್ಮನಿ-ಆಸ್ಟ್ರಿಯಾ ದೇಶದೊಳಗೆ ವ್ಯಾಪಾರ ಕರಾರು ಆಗಿದೆ. ಕಲ್ಲಿದ್ದಲಿ-ಗೊಬ್ಬರ ಮೊದಲಾದ ಪದಾರ್ಥಗಳನ್ನು ಜರ್ಮನರು ಆಸ್ಟ್ರಿಯಾ ದೇಶಕ್ಕೆ ಕಳುಹುವರು.

— ಶಿವಾನ ಗ್ರಾಮದ ಕಾಯಸ್ಥರು ಅಖಿಲ ಭಾರತೀಯ ಕಾಯಸ್ಥ ವಿವಾಹ ಘಟನೆಯ ಸಂಘವನ್ನು ಸ್ಥಾಪಿಸಿದ್ದಾರೆ. ಕಾಯಸ್ಥ ಸಮಾಜದೊಳಗಿನ ವಧುಗಳಿಗೆ ಯೋಗ್ಯ ವರ ಸಂಪಾದಿಸಿ ಕೊಡುವದು ವರನಿಗೆ ಯೋಗ್ಯಳಾದ ವಧುವನ್ನು ಸಂಪಾದಿಸಿ ಕೊಡುವದು, ಸಮಾಜದೊಳಗಿನ ವಧೂ-ವರರ ತಾಲಿಕೆಗಳನ್ನಿಡುವದು ಇವೇ ಮೊದಲಾದ ಕಾರ್ಯಗಳನ್ನು ಈ ಸಂಘವು ನಡಿಸುವದು. ಈ ಉದ್ದೇಶಕ್ಕೆ ಪೋಷಕವಾಗುವಂತೆ ಮಾಸಪತ್ರಿಕೆಗಳನ್ನೂ, ಹಸ್ತಪತ್ರಿಕೆಗಳನ್ನೂ ಜಾಹೀರಾತುಗಳನ್ನೂ ಸಂಘವು ಪ್ರಕಟಿಸುವದು. ಈಗಿನ ಮನ್ವಂತರದಲ್ಲಿ ವಿಧವಾ ವಿವಾಹ, ಮಿಶ್ರವಿವಾಹ, ಅಂತರ್‌ರಾಷ್ಟ್ರೀಯ ವಿವಾಹ ಮೊದಲಾದ ತರತರದ ವಿಚಿತ್ರವಿವಾಹಗಳ ಪ್ರಚಾರ ನಡೆದಿದೆ. ಸ್ವಸಮಾಜದೊಳಗಿನ ಕನ್ನಿಕೆಯರಿಗೆ ತಕ್ಕ ವರಸಂಗ್ರಹಪ್ರಚಾರ ನಡೆಯದೆ ಆಗುವ ಸಂಕಟಗಳನ್ನು ಈ ಸಂಘವು ಪರಿಹರಿಸಿ ಸಮಾಜದ ಕಲ್ಯಾಣ ಮಾಡುವದು.

— ಬಂಗಾಲ ಇಲಾಖೆಯ ಜಲಪೈಗುರಿ ಎಂಬ ಗ್ರಾಮದಲ್ಲಿ ಮುಕರ್ಜಿ ಎಂಬ ವರ್ತಕರು ಕೆಂಡದ ಮೇಲೆ ನಡೆದು ತೋರಿಸಿದರು. ೩೦ ಫೂಟು ಉದ್ದ, ೬ ಫೂಟ ಅಗಲ ೧೪ ಇಂಚು ಆಳ; ಇಷ್ಟು ಭಾಗದಲ್ಲಿ ಕೆಂಡ ಹಾಸೋಣಾಗಿತ್ತು. ಮೊಟ್ಟಮೊದಲು ಮುಕರ್ಜಿಯವರ ಎಲ್ಲರ ಸಮಕ್ಷ ಕಾಲು ತೊಳಕೊಂಡು ಬೆಂಕಿಯ ಮೇಲೆ ನಡೆದು ತೋರಿಸಿದರು. ಕೆಂಡ ಹಾಯ್ದು ಆದ ಬಳಿಕ ಅವರ ಕಾಲು ಪರೀಕ್ಷಿಸೋಣಾಯಿತು ಅದರೊಳಗೆ ಯಾವದೇ ವಿಕಾರ ಕಂಡುಬರಲಿಲ್ಲ. ೧೮೦ ಅಡಿಗಳ ತನಕ ತಾವು ಕೆಂಡದ ಮೇಲೆ ನಡೆದು ಹೋಗಬಲ್ಲೆವಾಗಿ ಮುಕರ್ಜಿಯವರ ಹೇಳುತ್ತಾರೆ.

ವರ್ಷನೋತ್ಸವಕ್ಕಾಗಿ ಕಾದುಕೊಂಡಿದ್ದರು. ಅಧ್ಯಕ್ಷರು ಆ ದಿನ ಬರಲಿಕ್ಕಿಲ್ಲವಾಗಿಯೂ, ದಾದರ್ ಗ್ರಾಮದಲ್ಲಿ ಉಳಿಯಬೇಕಾಯಿತಾಗಿಯೂ ರಾತ್ರಿ ೧ ಘಂಟೆಗೆ ತಂತಿ ಬಂತು. ಆಗ ಜನಸಂದಣಿ ಮುರಿಯಿತು. ಜನಸಾಮಾನ್ಯರ ಪ್ರೀತಿ-ವಿಶ್ವಾಸಗಳಿಗೆ ಪಾತ್ರವಾದ ಇಂಥ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವನ್ನು ಸಮಸ್ತರೂ ಉತ್ಸಾಹದಿಂದ ಪಾಲಿಸಬೇಕೆಂದು. ಇನ್ನು ಪ್ರತ್ಯೇಕವಾಗಿ ಹೇಳುವದುಳಿಯಿತೇ?

—ಸಾತಾರಾ ಜಿಲ್ಹೆಯ ವಾಯಿ ತಾಲೂಕಿನ ಭಾಸೂರಗಡ ಗ್ರಾಮದ ಬಳಿ ಪರ್ವತವು ಥಕ್ಕನೆ ಇಬ್ಭಾಗವಾಗಿ ೩೫ ಅಡಿ ಕುಸಿದು ತಗ್ಗಿತು. ದೊಡ್ಡ ಸಪ್ಪಳವಾಯಿತಂತೆ ಇದೇನು ಚಮತ್ಕಾರವೆಂದು ಜನರು ಆಶ್ಚರ್ಯಪಡುತ್ತಿದ್ದಾರೆ

ಪುಣೆಯಲ್ಲಿ ಹಿಂದು ಮಹಾಸಭೆಯ ಅಧಿವೇಶನ ಇದೇ ತಿಂಗಳಲ್ಲಿ ಸೇರುವದಿದೆ. ಅದಕ್ಕೆ ಪಂಡಿತ ಮದನಮೋಹನ ಮಾಲವೀಯರವರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ.

— ಮುಂಬಯಿ ಕಾಯಿದೆ ಕೌನ್ಸಿಲಿನ ಸಭೆ ಆಜ ಶನಿವಾರ ಅಂತ್ಯವಾಯಿತು. ಈಗಿನ ಕಾಯಿದೆ ಕೌನ್ಸಿಲನ್ನು ವಿಸರ್ಜಿಸಿ ಹೊಸ ಚುನಾವಣೆ ಮಾಡಬೇಕಾಗಿ ರಾ| ಸಾ| ಕುಲಕರ್ಣಿಯವರು ತಂದ ಠರಾವು ರದ್ದಾಯಿತು. ವಿಜಾಪುರ ಜೈಲನ್ನು ಕಾಯಂ ಇಡಬೇಕೆಂಬ ಠರಾವು ಮಂಜೂರಾಗಿದೆ. ಬೇಸಾಯ ಶಿಕ್ಷಣ ಕೊಡಲು ಈ ಜೈಲಿನಲ್ಲಿ ಹೆಚ್ಚಿನ ಅನುಕೂಲತೆ ಇರುವದಾಗಿ ಸರಕಾರವು ವಾದಿಸಿ ಬೇಸಾಯೋದ್ಧಾರಕ್ಕಾಗಿಯೇ ವಿಜಾಪುರ ನರಕದ ಉದ್ಧಾರ ಮಾಡಿದೆ. ಸಭಾಸದರು ಮಾಡಿದ ವಿರೋಧವೆಲ್ಲ ನಿರರ್ಥಕವಾಯಿತು.

— ಗುರುವಾರ ಸಂಜೆ ಪ್ರಾರ್ಥನೆ ಸಮಯ ಮಹಾತ್ಮರಿಗೆ ಸ್ವಲ್ಪ ತಲೆನೋವಾಯಿತು. ನಾಗಪುರದಲ್ಲಿ ಈ ವಾರ್ತೆ ತಿಳಿದೊಡನೆ ಡಾ| ಖರೇಯವರು ವರ್ಧಾಕ್ಕೆ ಹೋಗಿ ಮಹಾತ್ಮರ ದೇಹ ಪರೀಕ್ಷೆ ಮಾಡಿದರು. ೭ ದಿವಸಗಳ ತನಕ ವಿಶ್ರಮಿಸಬೇಕಾಗಿ ಸಲಹೆ ಕೊಟ್ಟರು. ಈಗ ಮಹಾತ್ಮರ ಪ್ರಕೃತಿ ನೆಟ್ಟಗಿದೆ. ಯಾರೂ ವಿಷಯವಾಗಿ ಚಿಂತೆಪಡುವ ಕಾರಣವಿಲ್ಲ.

ಗೋವಾಂತಕ ಚಾಂಬಾವಲಿ ಸಂಸ್ಥಾನದ

ಶ್ರೀ ದಾಮೋದರ ದೇವರ ಭಾವಚಿತ್ರಗಳು

ಈ ಕೆಳಗಿನ ಪತ್ತೆಯ ಮೇಲೆ ಮಾರಲಿಕ್ಕುಂಟು:

ಬೆಲೆ ೧ ರೂಪಾಯಿ.

ಪತ್ತೆ:- ಪುರುಷೋತ್ತಮ ಲಕ್ಷ್ಮಯ್ಯ
ಶ್ಯಾನಭಾಗ ದುಕಾನ, **ಕುಮಟಾ.**
ದಾಮೋದರ ನಾಗಪ್ಪ ಶ್ಯಾನಭಾಗ
ಸ್ಟೇಶನರಿ ದುಕಾನ, **ಕಾರವಾರ.**
ಯಶವಂತ ವಿಷ್ಣು ನಾಯಕ ಬೊಂಬಿ,
ಮರ್ಚಂಟ, **ಮಡಗಾಂವ-ಗೋವಾ.**
ವೆಂಕಟೇಶ ಶಿವಳ ಕಾಮತ,
ದಲಾಲ, **ವಾಸ್ಕೊ ದ ಗಾ-ಗೋವಾ.**
ಕಾಶೀನಾಥ ದಾಮೋದರ ನಾಯಕ, ದಲಾಲ,
ಆನಂದಬಿಲ್ಡಿಂಗ, ಪ್ರಿನ್ಸೆಸ್ ಸ್ಟ್ರೀಟ, ಮುಂಬಯಿ ೨.

ಅಶ್ವಾರೂಢ ಕವಚ!

ನಿರಾಶರಾದವರಿಗೆ "ಅಶ್ವಾರೂಢ" ಯಂತ್ರವು 'ಗುಳ-ಪರ್ವತದಲ್ಲಿ ಮಧು-ವೃಷ್ಟಿಯಂತೆ" ಇಷ್ಟ ಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು. ೪ ಆಣೆ ಸ್ಟಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು.

ಯಂತ್ರಧಾರಣಾ ನಂತರ ೧ ತಿಂಗಳಿನಿಂದ ೧ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು. ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರಕ್ಕೆ ಬೆಲೆ ರೂ. 20-0-0, ಬೆಳ್ಳಿಯ ಯಂತ್ರಕ್ಕೆ ರೂ. 3-0-0, ತಾಮ್ರದ ಯಂತ್ರಕ್ಕೆ ರೂ. 2-0-0.

ಪತ್ತೆ:- ದೇವಿದಾಸ ಪಿ.ಕೆ.ಕೆ.ಎನ್.,
ಜ್ಯೋತಿಷಿ, ಕುಮಟಾ. [ಉ. ಕನ್ನಡ.]

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ.

III ನೇ ಸಂಚಿಕೆ. ಶ್ರೀ ಅನುವ್ಯಾಖ್ಯಾನವು. IIನೇ ಭಾಗ ಜನ್ಮಾದ್ಯೇಕಾದಶಾಧಿಕರಣಗಳು. ಈಗಲೇ ತಯಾರಾಗಿವೆ ಪುಟಗಳು ೧೬೦. ಚಂ. ರೂ. ೧-೮-೦

Iನೇ ಭಾಗ, ಜಿಜ್ಞಾಸಾಧಿಕರಣ ಪುಟಗಳು ೨೩೧ ಚಂದಾ ರೂ. ೨-೮-೦.

IIನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು. ಪುಟಗಳು ೭೧೮, ಚಂದಾ ರೂ. ೪-೬-೦. ಟಪಾಲು ಹಾಸಲು ಪ್ರತ್ಯೇಕ. ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಜನರಲ್ ಟ್ರೆಝರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ
(ದಕ್ಷಿಣ ಕನ್ನಡ)

Siromani Udipi Narayanacharya,
CHAUKHAMBA BENARES CITY.

ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿ [illegible] 1183 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಿದ್ಧವಾಗುತ್ತ ಅಗುತ್ತ ಕ್ರಿಯ [illegible]. ಕಂಠಿ ಸರ 32 ಮಣಿ 1ಕ್ಕೆ ರೂ. 0-8-0 ಯಿಂದ ರೂ. 100 ವರೆಗೆ. ಗೌರಿಶಂಕರ 1ಕ್ಕೆ ರೂ. 3-8-0 ರಿಂದ 50 ವರೆಗೆ. [illegible] ವಿವರ ತಿಳಿಯಲು ಅಪೇಕ್ಷಿಸುವವರು 0-1-0 ಸ್ಟಾಂಪು ಕಳಿಸಿರಿ, 1 ಸಾರೆ ನಕ್ಕೆ, [illegible] ಕಳಿಸಲಾಗುವದು.

ಪತ್ತೆ: ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಿ ಔಷಧಗಳು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಕೋಶದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಕೂಲ ಹೊಂದಿರುವರು. ಕ್ರಯ ರೂ. ೧-೮-೦.

ಅಶ್ವಗಂಧ ಟೋನಿಕ್:— ಮಜ್ಜಾ, [illegible] ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ಶೀಘ್ರಸ್ಖಲನ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಶಾರೀರಿಕ ಶಕ್ತಿಗೆ ಇದು ದಿವ್ಯೌಷಧ! ರೂ. ೧-೪-೦.

ಎಗ್ಸ್ ಮಿಕ್ಶ್ಚರ, ಫೀವರ ಡ್ರಾಪ್ಸ್, ಅಮೃತ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರಸಿದ್ಧಿಹೊಂದಿದ ಸಂಸಾರಿಕರು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ನಿಶ್ಚಿಂತೆಯಿಂದ ಇವುಗಳ ಉಪಯೋಗಮಾಡುವದು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ಮತ್ತು ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂರ. ಪ್ಲೇಗ ಸ್ಪೆಸಿಫಿಕ್ ಮತ್ತು ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು:

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ, ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲರೇಲ, ಡಿಸ್ ಪೋಜರ, ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಪೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಳಂತಿ ಮದ್ದು, ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು.

ಉತ್ತರ ಕನ್ನಡ ಜಿಲ್ಲೆಯ **ಸೋಲ್ ಏಜಂಟರು:-**

ಡಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ. ಕನ್ನಡ)

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಎಷ್ಟು ತರದಾ ಗ [illegible] ಕರಿಗೂ ಹಾಗೂ [illegible] ಧಾನ್ಯಂಸಿಗರಿಗೂ ಸಿಗ [illegible] ಆದರೆ ಇವರಲ್ಲಿ ಬಹು [illegible] ಸ್ವತಿಗಳು ಎಲ್ಲಾ ಕಷಾಯಗಳಿಗಿಂತ [illegible] ವದರಿಂದ ಅವರ [illegible] ಕಡಿಮೆ ಆದ ಉಂಟು. ಆದರೆ ನಮ್ಮ ತಯಾರಿಸಿದ 'ದಶಮೂಲಾರಿಷ್ಟ'ವು ಹತ್ತೊಂದು ವನಸ್ಪತಿಗಳ ಮಿಶ್ರಣದಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರ ಸಿದ್ಧ ಆದ ಪರಿ [illegible] ಎಲ್ಲಾ ಕರಿದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹು ಬಲವತ್ತರವಾಗಿರುತ್ತದೆ.

ಈ ಔಷಧದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಯಾಗಿ ಎಂಥ ಅಶಕ್ತರಿದ್ದರೂ ಹೊಸ ರುಚಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ.

ಅಜೀರ್ಣ (ಅರುಚಿ, ಶೀತ, [illegible] ಗುಲ್ಮ, ವಾತ, ಕ್ಷಯ, ವಾಂತಿ) ಕಾಮಿಲೆ ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಕಟಿ ಮುಂತಾದ ಸ್ಥಳದಲ್ಲಿ ದೋಷ ಇರುವವರಿಗೆ ಹಾಗೂ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ [illegible] ದೇ ತರದ ವಾಯು ವಿಕಾರದಿಂದ ಹುಟ್ಟಿದ [illegible] ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೫ ದಿವಸಗಳ ವರೆಗೆ ಕೊಟ್ಟರೆ ಪ್ರಸೂತಿ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ಆರೋಗ್ಯವಂತರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೬ ಔನ್ಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬ ೧೨-೦
,, ಬಾಟ್ಲಿ ೧೨ಕ್ಕೆ ರೂ ೧೨—೦ ೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ ಅಶ್ವಗಂಧಾರಿಷ್ಟ ಕೂಷ್ಮಾಂಡಪಾಕ, ದ್ರಾಕ್ಷಾಸವ ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ — **ಕುಮಟಾ.** (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಥ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಜೀವವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪಾಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲಿನ ೫ ವರ್ಷಗಳ ಮೌಲ್ಯಮಾಪನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂ.10/-೦ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ,
ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ — ಸೌಕರ್ಯಗಳವೆ ಯಥೋಚಿತವಾದ — ಪುರಸ್ಕಾರಗಳವೆ
ತಪ್ಪದೆ ವ್ಯವಹಾರ ಬೆಳಿಸಿರಿ

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —

ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.

ಉತ್ತರ ಕನ್ನಡದ ಜಿಲ್ಲಾಧಿಕಾರಿಗಳು - ಮೆಸರ್ಸ ಜೀವನ ಏಜನ್ಸಿ, ಕಾರವಾರ.

Established 1900

FIXED RATE

ದಾಸಪ್ಪಾ ಕೃಷ್ಣಪ್ಪಾ

ಢಾಕಪ್ಪನವರ ಬ್ರದರ್ಸ

ಇವರ ಒಂದೇ **ದರದ** ಜವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೆಂಗಳೂರಿ ಊರಿನ ಹೊಸ ಹೊಸ ನಮೂನೆಯಾದ ಸೀರೆಗಳೂ, ತರತರದ ಪತ್ತಲ [illegible], ಕೋಟಿಂಗ ಶರ್ಟಿಂಗ ಫ್ಯಾನ್ಸಿ ಬಟ್ಟೆಗಳೂ ಅಂದವಾದ ಖಾದಿಯ ವಸ್ತ್ರಗಳೂ, ಹಸಿ ರುಮಾಲು, ಉಲ್ಲನ್, ಟೊಪ್ಪಿಗಳೂ ಧೋತರ ಜೋಡುಗಳೂ, ರೇಶ್ಮಿ ಖಣ [illegible] ಮುಂತಾದ ಎಲ್ಲ ತರದ ಜವಳಿಯ. ಕಬ್ಬಿಣದ ಮಜಬೂತ ಟ್ರಂಕುಗಳೂ ಛತ್ರಿಗಳೂ ವಗೈರೆ ಎಲ್ಲ ತರದ ಸಾಮಾನು ಆಬಾಲವೃದ್ಧರಿಗೂ ಮೆಚ್ಚ ಹೋಗುವ ಹಾಗೆ ಒಂದೇ ದರದಿಂದ ಸಿಗುವವು ರೊಖ ವ್ಯಾಪಾರಕ್ಕೆ ಕಮಿಶನ ದೊರೆಯುವದು

Tel "Honesty"] **D. K. DHAKAPPA BROS.,**

ಹೊಸ ಮಾಲು.

Cloth Merchants,
SIRSI. N KANAR

ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** **ಸುಲಭ ಕ್ರಯ**



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಸಿನಸಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಮೆದುಳಿನ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂಗಿನಲ್ಲಿ ಬಿಟ್ಟ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾಗುವದಿಲ್ಲ. ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ಸ್ಪೆಷಲ್ ೪ ಆಣೆ ಡಜನ್ ೧ಕ್ಕೆ ರೂ ೩-೮-೦ ವಿ ಪಿ ಖರ್ಚು [illegible] ಮಾಡುವಾಗ ನಿಮ್ಮ ಹೆಸರನ್ನೂ, ಆದ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — [illegible] ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦ ಮೆಡ್ರಾಸ [illegible]

ಇದನ್ನು ಪಾಂಡುರಂಗ ಕೃಷ್ಣ ವ್ಯಾಸಭಟ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರ

Reg No. B. 1270.

Monday, 16th December, 1935

ವರ್ಷ ೧೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿನಿಂದ
ರೂ. 3-1-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-4-0.
ಬಿಡಿ ಸಂಚಿಕೆಗೆ 0-1-0.
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೨೪

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೫ ಎಮ್ ಅಗಲ) ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0

ಹೆಡ್ಡಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಪ್ರಮಾಣ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—*(ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೧೬ ಮಾಹೆ ಡಿಶಂಬರ ಸನ್ ೧೯೩೫ನೇ ಇಸವಿ.)*—

ESTD 1906

CANARA BANK

LIMITED.

ಕೆನರಾ ಬ್ಯಾಂಕ ಲಿಮಿಟೆಡ್.

(ಸ್ಥಾಪನೆ ೧೯೦೬)

ಹತ್ತೊಂಭತ್ತು ಕಾರ್ಯಾಲಯಗಳ ಹೆಸರು

ಮುಂಬಯಿ—ಫೋರ್ಟ್,
ಮು:   ಶಾಂಖ್ಸಿ,
ಮಂಗಳೂರು-ಬಂದರ,
ಮಂಗಳೂರು-ಶಹರ,
ಚಿಕ್ಕಮಗಳೂರು,
ಎರ್ನಾಕುಲಮ್,
ಬೆಂಗಳೂರು,
ಕಾಸರಗೋಡ,
ಕಲ್ಲಿಕೋಟೆ,
ಕುಂದಾಪುರ,
ದಾವಣಗೆರೆ,
ಗಂಗೊಳ್ಳಿ,
ಬಂಟ್ವಾಳ,
ಪುತ್ತೂರ,
ಉಡುಪಿ
ಹುಬ್ಬಳ್ಳಿ,
ಕಾರ್ಕಳ,
ಆಲಪ್ಪೆ
ಮು ಶ್ರಿ
ಕೊಚ್ಚಿ

[illegible]

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಶಾಖೆಗಳು.— ಉಡುಪಿ ಬ್ರಹ್ಮಾವರ, ಹೊನ್ನಾವರ, ಕುಂದಾಪುರ, ಕುಮಟಾ ಕಾರವಾರ, ಸಿರ್ಸಿ, ಅಂಕೋಲಾ ಹುಬ್ಬಳ್ಳಿ, ಬೆಳಗಾಂವ, ಮಂಗಳೂರ, ಬೆಂಗಳೂರ ಸಿಟಿ, ಕಣ್ಣಾನೂರ, ಪಯ್ಯನೂರ ಹಂಗಾರಕಟ್ಟೆ, ಬಳ್ಳಾರಿ ಮತ್ತು ಕಾಂಞ್ಞಗಾಡು

5 ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೇಶ್ ಸರ್ಟಿಫಿಕೇಟು**ಗಳು ರೂಪಾಯಿ 3 12-0, 7-8 0, 75-0-0 ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/, 10/-, 100/- ಕೊಡಲ್ಪಡುವದು ಅಂದರೆ ನಿಮ್ಮ ಹಣಕ್ಕೆ ಶೇಕಡಾ 6¼ರಷ್ಟು ಬಡ್ಡಿ ಸಿಗುವದು. ಇವುಗಳನ್ನು ಮುದ್ದತು ತೀರುವ ಮೊದಲೇ ಪಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½, 6 ರಂತೆ ಬಡ್ಡಿ

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ

ಚಿನ್ನಾಭರಣಗಳ ಈಡಿನ ಮೇಲೆ ಶೇಕಡಾ ೭॥ಯಂತೆ ಬಡ್ಡಿ ದರದಿಂದ ಸಾಲ ಕೊಡಲಾಗುವದು.

ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು

ಕುಮಟಾ,
ತಾ ೧೫-೭-೧೯೩೫

G. S. Nayak,
ಏಜಂಟ ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ, (ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ

ಬಿ. ರಾಮಕೃಷ್ಣಯ್ಯಾ, ಮಾಲಕ

ಒಂದಿಷ್ಟು!

ಬಿಹಾರದ ಸುಪ್ರಸಿದ್ಧ ರಾಷ್ಟ್ರೀಯ ನೇತಾರರಾದ ಭಾಗಲ್ಪುರದ ಶ್ರೀ| ದೀಪನಾರಾಯಣಸಿಂಗರವರು ಕಳೆದ ನವೆಂಬರ ೨೯ನೇ ತಾರೀಖಿಗೆ ಸ್ವರ್ಗಸ್ಥರಾದರು. ಶ್ರೀ ದೀಪನಾರಾಯಣಸಿಂಗರವರು ರಾಷ್ಟ್ರೀಯ ಸಭೆಯ [illegible] ದಕ್ಷರು. ಸತ್ಯಾಗ್ರಹದಲ್ಲಿ ಅನೇಕ ಸಾರೆ ಕಾರಾಗೃಹವಾಸವನ್ನು ಅನುಭವಿಸಿದ್ದಾರೆ ನಾಮಾಂಕಿತ ದೇಶಭಕ್ತರು. ಇವರು ವಿದೇಶ ಪ್ರಯಾಣದ ಪ್ರೀತಿ ವಿಶೇಷ. ಮಹಾಯುದ್ಧ ಸಮಯದಲ್ಲಿ ಇವರು ಜರ್ಮನಿ ಕಡೆ ಹೋಗಿದ್ದರು. [illegible] ಇಟಲಿಯಲ್ಲಿ ಅಲ್ಲಿಂದ ಮರಳುವಾಗ ಇವರ [illegible] ಹಡಗಾಪೆಗಳಿಗೆ ಒಳಬೀಳುವುದಿತ್ತು. [illegible] ದಲೇ ಇದು ತಪ್ಪಿತು. ೧೯೧೦ನೇ ಇಸ್ವಿಯ [illegible] ಜಪಾನದ ಕಡೆ ತಿರುಗಾಡ ಹೋದರು. ೧೯೨೨ [illegible] ಇಸ್ವಿಯಲ್ಲಿ ಅಸಹಕಾರದಲ್ಲಿ ಸೇರಿ [illegible] ಜಿಲ್ಲೆಯಲ್ಲಿ [illegible] ಕೊಂಗ್ರೆಸ ಕಮಿಟಿಗಳನ್ನು ಸ್ಥಾಪಿಸಿ ೩ ವಾರಗಳಲ್ಲಿ ೧ ಲಕ್ಷ ರೂಪಾಯಿಗಳನ್ನು ತಿಲಕ ಸ್ವರಾಜ್ಯ ನಿಧಿಗೆ ಕೂಡಿಸಿದರು. ಸದ್ಯಕ್ಕೆ [illegible] ಈ ತನಕ ೨೨ ದೇಶಗಳಲ್ಲಿ ಸಂಚರಿಸಿದ್ದಾರೆ. ಇವರಿಗೆ ಕಲಾ-ಕೌಶಲ್ಯ, ಸಂಗೀತ, ಸ್ತ್ರೀ ಶಿಕ್ಷಣ ಆರೋಗ್ಯವರ್ಧನ ಮೊದಲಾದವುಗಳನ್ನು ಪ್ರಾಂತಕ್ಕೆ [illegible] ಸುಸಂಸ್ಕೃತ ಮಾಡಬೇಕೆ [illegible] ಇತ್ತು. ಬಡ ಜನರ ಕಷ್ಟವಾದರೆ [illegible] ಯಾವಾಗಲೂ ಮಿಡಿಯುತ್ತಿದ್ದರು. ಭೂಕಂಪಗ್ರಸ್ತರಿಗೆ ಇವರು ಮಾಡಿದ ಸೇವೆ ಚಿರಸ್ಮರಣೀಯವಾದದ್ದು. ಇವರು ಧರ್ಮನಿಷ್ಠರು ಶಿವಭಕ್ತರು. ತಂದೆಯವರು [illegible] ಕಾಲೇಜಿನ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಅವರು ೧ ಲಕ್ಷ ರೂಪಾಯಿಗಳನ್ನು ಅರ್ಪಿಸಿದ್ದರೆ. ಬೇರೆ [illegible] ಇವರು ಸಾಯುವ ತನಕ ಯಾರಿಗೂ ಹೇಳಲಿಲ್ಲ. ತಂದೆಯವರು ಧರ್ಮಿಷ್ಠರೆಂಬ ಲೌಕಿಕವಿತ್ತು. ಮಾನವಂತ ಧರ್ಮಾತ್ಮರೆಂದು ಹೆಸರುವಾಸಿಯಾಗಿದ್ದಾರೆ. ದೀಪನಾರಾಯಣಸಿಂಗರವರು [illegible] ಪರಂಪರೆಯನ್ನು ನಡೆಸಿದರು. ಮರಣ ಸಮಯ [illegible] ತಮ್ಮ [illegible] ಹೆಸರಲ್ಲಿ [illegible] ೧॥ ಲಕ್ಷ ಉತ್ಪತ್ತಿ ಬರುವ ಆಸ್ತಿಯನ್ನು ಒಪ್ಪಿಸಿದ್ದಾರೆ. ಈ ನಿಧಿಯನ್ನು ಮುಖ್ಯವಾಗಿ ಔದ್ಯೋಗಿಕ ಹಾಗೂ ಶಾಸ್ತ್ರೀಯ ಶಿಕ್ಷಣವನ್ನು ಪ್ರಚುರಗೊಳಿಸುವದಕ್ಕಾಗಿ ವಿನಿಯೋಗಿಸಬೇಕೆಂದು ದೀಪನಾರಾಯಣಸಿಂಗರವರು ಅಪ್ಪಣೆ ಮಾಡಿದ್ದಾರೆ. ಇಂಥ ಧರ್ಮನಿಷ್ಠರು, ರಾಷ್ಟ್ರೀಯ ಸಭೆಯ ವಿಶಿಷ್ಟ ಸೇವಕರು, ಲೋಕಾದರಕ್ಕೆ ಪಾತ್ರರಾದವರು ತೀರಿ ಬಿಹಾರ ಪ್ರಾಂತಕ್ಕೂ ಅಖಿಲ ಹಿಂದುಸ್ಥಾನಕ್ಕೂ ಬಹಳ ನಷ್ಟವಾಗಿದೆ. ಮೃತಾತ್ಮರಿಗೆ ಸದ್ಗತಿ ದೊರೆಯಲಿ!

* * *

ಬೆಳಗಾಂವದಲ್ಲಿ ನಾರಾಯಣ ಮಹಾರಾಜ ಎಂಬ ಸಾಧುಗಳಿಗೊಂದು ಒಳ್ಳೇ ಪ್ರಸ್ಥವಿದೆ. ಇವರು ಕಳೆದ ವರ್ಷ ೧ ಸಾವಿರಕ್ಕೆ ಮಿಕ್ಕ ಸತ್ಯನಾರಾಯಣ ವ್ರತ ನಡಿಸಿ ಪ್ರಚಂಡ ಚಮತ್ಕಾರ ಮಾಡಿತೋರಿಸಿದರು. ಈ ಸಾಧುಗಳ ಸಂಬಂಧವು [illegible] ಕುರಿತು ಮರಾಠಿ ಪತ್ರಿಕೆಗಳಲ್ಲಿ ಒಳ್ಳೇ [illegible] ಸಾಧುಗಳಲ್ಲಿ [illegible] ಇಲ್ಲ, ಯೋಗ್ಯತೆ ಇಲ್ಲ. ಸಾಧುತ್ವವಿಲ್ಲ, ಬರೇ ದಂಭಾಚಾರ, ಇವರ [illegible] ಸ್ತ್ರೀಯರಲ್ಲಿ, [illegible] ಮೊದಲಾದ ಅನೇಕ ಆರೋಪಗಳಿವೆ. [illegible] ಲಕ್ಷಾವಧಿ ಮೊಬಲಗಿನ ಆಸ್ತಿ ಹೋಗಿ ಅವರು ಕಟ್ಟಕಡೆಗೆ [illegible] ತೀರಿಕೊಂಡರಲ್ಲಾ. ನಿಧನ ಸಹಜವಲ್ಲವಾಗಿಯೂ '[illegible]' ಮಾಸಪತ್ರಿಕೆಯಲ್ಲಿ ಸವಿಸ್ತರ ಲೇಖ ಬರೆದಿದ್ದಾರೆ. [illegible] ಆ ಸತ್ಯನಾರಾಯಣನಿಗೇ ಗೊತ್ತಿದೆ. ಇದೇ ಬರುವ ಮಾಘ ಶುದ್ಧ [illegible] ದಿಂದ [illegible] ತನಕ ೧೧ ದಿವಸಗಳವರೆಗೆ ಸತ್ಯನಾರಾಯಣ ವ್ರತಗಳಾಗುವವು. ಅಹೋ-ರಾತ್ರಿ ವ್ರತಗಳು ನಡೆಯುವವು. ಪ್ರತಿ ತಾಸಿಗೆ ೧೦೮, ೨೪ ತಾಸಿಗೆ ೨೫೯೨, ಅಂದರೆ ೧೧ ದಿವಸಗಳಲ್ಲಿ ೨೮೫೧೨ ಸತ್ಯನಾರಾಯಣಗಳಾಗುವವು. ಈ ಸಮಾರಂಭಕ್ಕಾಗಿ ಬೆಳಗಾಂವ, ಧಾರವಾಡ ಮೊದಲಾದ ಕಡೆಗಳಿಂದ ವೇದಶಾಸ್ತ್ರಸಂಪನ್ನ ಬ್ರಾಹ್ಮಣರು [illegible] ರವಾನೆಯಾಗುವವರಿದ್ದಾರೆ. ಬೆಲ್ಲ, ತುಪ್ಪ ಮೊದಲಾದವುಗಳು ಖರೀದಿಯಾಗುತ್ತಿವೆ. ಇದೆಂಥ ಚಮತ್ಕಾರವೆಂದು ಜನಸಾಮಾನ್ಯರಿಗೆ ತಿಳಿಯುವದಿಲ್ಲ.

* * *

ಪಂಢರಪುರ ತಾಲೂಕಿನ ಕರಕಂಬ ಗ್ರಾಮದಲ್ಲಿ ಬೇಸಾಯಗಾರರ ಪರಿಷತ್ತಾಯಿತು. ಆ ಪರಿಷತ್ತಿನಲ್ಲಿ ಮುಖ್ಯ ಕೋರಿದ ಠರಾವುಗಳ ವಿವರ - (೧) ಹೊಸ ರಾಜ್ಯಘಟನೆಯ ಪ್ರಕಾರ ನಡೆಯುವ ಇಲೆಕ್ಷನಿನಲ್ಲಿ ಬೇಸಾಯಗಾರರ ಹಿತ ಮಾಡುವ ಧೈರ್ಯಶೀಲ, ಕಾರ್ಯದಕ್ಷ ಕಾರ್ಯಕರ್ತರಿಗೇ ಆರಿಸಿ ಕಳುಹಬೇಕು |(೨) ಈ ಬಾರಿ ಮಾಢೆ ಮತ್ತು ಸೊಲ್ಲಾಪುರ ತಾಲೂಕುಗಳಲ್ಲಿ ಭೂಕಂದಾಯದ ಪುನರ್ವಿಚಾರವಾಗುವದಿದೆ. ಇಂಥ ಪುನರ್ವಿಚಾರದಲ್ಲಿ [illegible] ತೀರ್ವೆ ಏರುತ್ತದೆಂಬ ಅನುಭವ ಎಲ್ಲರಿಗುಂಟು. ಆದಂದ ಸರಕಾರವು ಪುನರ್ವಿಚಾರ ಕ್ರಮಕ್ಕೆ ತಡೆಹಾಕಬೇಕು (೩) ಗ್ರಾಮಸುಧಾರಣೆಯ ನೆವ ಮಾಡಿ ಸರಕಾರಿ ಅಧಿಕಾರಿಗಳು ಬೇಸಾಯಗಾರರ ಕಡೆಯಿಂದ ತಮ್ಮ ಅಧಿಕಾರದ ದುರುಪಯೋಗ ಮಾಡಿ ವರ್ಗಣಿಯನ್ನು ಕೂಡಿಸುತ್ತಾರೆ. ಸರಕಾರ ಗ್ರಾಮಸುಧಾರಣೆಯ ಕ್ರಮದಿಂದ ಬೇಸಾಯಗಾರರಿಗೆ ನಿಜವಾದ ಹಿತವಾಗುವದಿಲ್ಲ. ಆದರಿಂದ ಮಹಾತ್ಮರು ಹೊರಡಿಸಿದ ಗ್ರಾಮೋದ್ಧಾರ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!
ವೃದ್ಧಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
[illegible] (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
[illegible] (ರಕ್ತವಾತ, [illegible], ಅಪಸ್ಮಾರಗಳಿಗೆ ರಾಮಬಾಣ)
ಭುವನರಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಪ್ರಶಸ್ತ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-
ಹೆಚ್ಚಿನ [illegible], ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!
ಪ್ರಶಂಸಾ ಪತ್ರ.

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಇವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿವಸ ನಾನು ಸ್ವತಃ ನೋಡಿ ಬಹಳ ಆನಂದಪಟ್ಟೆನು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಮನೆತನಕ್ಕೆ ಸೇರಿದವರಾಗಿಯೂ, [illegible] ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು. ಅವು ಶಾಸ್ತ್ರಸಿದ್ಧವಾಗಿ ಅನುಭವಕ್ರಮವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವೂ ಇವರಿಗೆ ಇರುತ್ತದೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಭಾಗ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಆದರ್ಶಪ್ರಾಯವಾಗಿ ನಡಿಸಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ [illegible] ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ. ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸ ಅಭಿವೃದ್ಧಿಗೆ ಬರುವಂತಾಗಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ,

ಮೊಕ್ಕಾಂ, ಉಡುಪಿ ೧೦-೧೧-೧೯೩೫
ವಿದ್ವಾನ್ ಶ್ರೀ ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ. ಪೋಸ್ಟ್, ದ. ಕನ್ನಡ

ಸಂಘದ ಪುರಸ್ಕಾರ ಮಾಡತಕ್ಕದ್ದು (೪) ತಾ ೨೮ನೇಗೆ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವನ್ನು ಸಂಭ್ರಮದಿಂದ ಪಾಲಿಸಬೇಕು (೫) ಮ್ಯುನಿಸಿಪಾಲಿಟಿಯವರು ತೆರಿಗೆಯನ್ನು ಬೇಸಾಯಗಾರರಿಂದ ಎತ್ತುವದ ಮಾಡಬಾರದು (೬) ಬಡ್ಡಿಯ ದರವನ್ನು ಇಳಿಸಬೇಕು. ಇವೇ ಮೊದಲಾದ ಠರಾವುಗಳಾದವು. ಈ ಠರಾವುಗಳು ವಿಚಾರಣೀಯವೆನಿಸಿ ಸರಕಾರವು ವಿಚಾರ ನಡಿಸಿ ಬೇಸಾಯಗಾರರಿಗೆ ಹಿತವಾಗುವಂಥ ಉಪಾಯಗಳನ್ನು ಕಲ್ಪಿಸಬೇಕು.

⁂

ನಾಲ್ಕು ಕಡೆಗೆ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ತಯಾರಿ ಭರದಿಂದ ನಡೆದಿದೆ. ಮಹಾರಾಷ್ಟ್ರ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ ಶಂಕರರಾವ ದೇವರವರು ರತ್ನಾಗಿರಿ, ಸಂಗಮನೇರ, ದೇವರೂಖ, ರಾಜಾಪುರ, ಪಣಜೆ, ಮಡಗಾಂವ, ಮೋರಿಗಾಂವ, ಸಾಲಸೆಟ, ಬೆಳಗಾಂವ ತನಕ ಸಂಚಾರ ಬೆಳಿಸಿ ರಾಷ್ಟ್ರೀಯ ಸಭೆಯ ಸಂದೇಶವನ್ನು ತಿಳಿಸಿಹೋಗಿದರು ಇದರಂತೆ ಅಲ್ಲಲ್ಲಿಯ ರಾಷ್ಟ್ರಪ್ರಮುಖರು ಹಳ್ಳಿ-ಹಳ್ಳಿಗಳಲ್ಲಿ ರಾಷ್ಟ್ರೀಯ ಸಭೆಯ ಕಾರ್ಯದ ವಿವರ ತಿಳಿಸುತ್ತಿದ್ದಾರೆ. ಡಾ| ಸಾಂಬಳೆಕರ ಎಂಬವರು ಶಿರಫೋಣೆಗೆ ಹೋಗಿದ್ದರು ಸುವರ್ಣ ಮಹೋತ್ಸವದ ಮಹತ್ವವನ್ನು ಅವರು ಹಳ್ಳಿಗರಿಗೆ ತಿಳಿಸುವಾಗ ಅಲ್ಲಿಯ ಪೋಲೀಸ ಪಟೇಲರು ಅವರಿಗೆ ಪ್ರತಿಬಂಧ ಮಾಡಿದರಾಗಿ ಪುಣೆಯ 'ಲೋಕಶಕ್ತಿ' ಪತ್ರಿಕೆಯ ಸುದ್ದಿಗಾರರು ತಿಳಿಸುತ್ತಾರೆ. ಪೋಲೀಸ ಪಟೇಲರಿಗೆ ಜಿಲ್ಲಾ ಮೆಜಿಸ್ಟ್ರೇಟರು ಇಷ್ಟು ವಿಶೇಷ ಅಧಿಕಾರ ಕೊಟ್ಟು ಸತ್ಕರಿಸುವರಾಗಿ ಆಶೆ

⁂

ಮದ್ರಾಸ ಇಲಾಖೆಯಲ್ಲಿ ಹೊಸದೊಂದು ಸರ್ಕ್ಯುಲಾರು ಹೊರಟಿದೆ. ಬೋರ್ಡ ಮೆಂಬರರು ಯಾವ ಪಕ್ಷದವರೆಂದು ತಿಳಕೊಳ್ಳುವದೇ ಈ ಸರ್ಕ್ಯುಲಾರಿನ ಮುಖ್ಯ ಉದ್ದೇಶ. ಈ ಸರ್ಕ್ಯುಲಾರವನ್ನು ಎಲ್ಲ ಮೆಂಬರರಿಗೆ ಕಳಿಸುವದಿಲ್ಲ ಕೆಲವು ಮೆಂಬರರಿಗೆ ಮಾತ್ರ ಕಳಿಸುತ್ತಾರೆ "ನೀವು ಯಾವ ಪಕ್ಷದವರು? ಕೊಂಗ್ರೆಸ ಪಕ್ಷದವರೋ? ಜಸ್ಟಿಸ್ ಪಕ್ಷದವರೋ?" ಈ ಮಾಹಿತಿಯನ್ನು ಲೋಕಲ್‌ಬೋರ್ಡ ಇನಸ್ಪೆಕ್ಟರರಿಗೆ ಕಳಿಸಬೇಕಾಗಿ ಸಭಾಸದರಿಗೆ ಸೂಚನೆ. ಈ ಸರ್ಕ್ಯುಲಾರು ಗುಪ್ತವಾದದ್ದು ಚಿತ್ತೂರ ಜಿಲ್ಲಾ ಬೋರ್ಡಿನ ಸಭಾಸದರು ಈ ಸರ್ಕ್ಯುಲಾರನ್ನು ಬಹಿರಂಗಗೊಳಿಸಿದ್ದಾರೆ. ಮದ್ರಾಸ ಸರಕಾರವು ಸಭಾಸದರ ಪಕ್ಷ-ಭೇದಗಳನ್ನು ಅರಿತುಕೊಂಡು ಬಡತಿಗಳಿಗೆ ವಣಿಸಬಯಸುತ್ತದೇನು?

⁂

'ಮುಂಬಯಿ ಕ್ರೋನಿಕಲ್' ಪತ್ರಿಕೆಯಲ್ಲಿ ಮುಂಬಯಿಯ ಡಿ. ಎಫ್. ಡಿ'ಲಿಮಾ ಎಂಬವರು ವಿಲಕ್ಷಣವಾದ ಎರಡು ಸಂಗತಿಗಳನ್ನು ನಮೂದಿಸಿ ವಿವರ ಕೇಳುತ್ತಾರೆ. ದೇವಸ್ಥಾನಗಳಲ್ಲಿ ಉಪಹತಿಗಳ ನಿವಾರಣೆಯಾಗುತ್ತದೆಂದು ಅನೇಕರ ಭಾವನೆಯಿದೆ. ಅಪ್ಪಗಳ ವಿವರವೇನೆಂದು ಲಿಮಾರವರ ಪ್ರಶ್ನೆ. ಲಿಮಾರವರ ಮುಸಲ್ಮಾನ ಗೆಳೆಯರೊಬ್ಬರಿಗೆ ಅರ್ಧಾಂಗ ವಿಕಾರವಾಗಿತ್ತು. ಅವರು ೪ ವರ್ಷಗಳ ತನಕ ಡಾಕ್ಟರರ, ಹಕೀಮರ ಉಪಚಾರ ಪಡೆದರು. ಅವರಿಗೆ ಏನೂ ಪ್ರಯೋಜನವಾಗಲಿಲ್ಲ. ಮುಸಲ್ಮಾನ ಧರ್ಮಾಭಿಮಾನಿಗಳು ಅಜಮೀರದಲ್ಲಿ ಯಾತ್ರೆ ಮಾಡಿ ಸಾಧುಗಳ ಸಮಾಧಿಯ ದರ್ಶನ ಕೊಂಡಲ್ಲಿ ವಿಕಾರಪರಿಹಾರವಾಗುತ್ತದೆಂದು ನುಡಿದರು. ಅದರಂತೆ ಅವರು ಅಜಮೀರಕ್ಕೆ ಹೋಗಿ ಸಾಧು ಸಮಾಧಿಗಳ ದರ್ಶನ ಕೊಂಡು ಕ್ಷೇಮದಿಂದ ಮರಳಿದ್ದಾರೆ. ಸಮಾಧಿಯ ಸನ್ನಿಧಿಯಲ್ಲಿ ನಿಂತು ಭಕ್ತಿಪೂರ್ವಕ ಪ್ರಾರ್ಥನೆ ಮಾಡಿದೊಡನೆ ಅರ್ಧಾಂಗವಿಕಾರ ಪರಿಹಾರವಾಗುತ್ತದಾಗಿ ಅವರು ಲಿಮಾರವರ ಬಳಿ ಹೇಳಿದರು. ಇನ್ನೊಬ್ಬ ಹಿಂದುವಿಗೆ ನಿಶ್ಚೇತನವಾಗುತ್ತಿತ್ತು. ೩೦ ವರ್ಷ ಹರೆಯದವನು ಆದರೆ ಯಾವಾಗಲೂ ಅಶಕ್ತನು ಮುಂಬಯಿಯೊಳಗಿನ ದೊಡ್ಡದೊಡ್ಡ ಡಾಕ್ಟರರು ಉಪಚಾರ ಮಾಡಿದಾಗ್ಯೂ ಆತನು ರೋಗಮುಕ್ತನಾಗಲಿಲ್ಲ ಪಂಢರಪುರಕ್ಕೆ ಹೋಗಿ ಶ್ರೀ ವಿಠೋಬ ದೇವರ ಚಿತ್ತಾಕರ್ಷಕ ಮೂರ್ತಿಯ ದರ್ಶನ ಪಡೆದೊಡನೆ ಆತನ ದೌರ್ಬಲ್ಯವೆಲ್ಲ ಪರಿಹಾರವಾಗಿ ಸಶಕ್ತನಾಗಿದ್ದಾನೆ ಇದರ ರಹಸ್ಯವೇನು? ವಿಚಾರವಂತರು ಈ ಚಮತ್ಕಾರದ ಕಾರಣವನ್ನು ಶೋಧಿಸಬಲ್ಲರೇ?" ಎಂಬದಾಗಿಯೂ ಲಿಮಾರವರು ಪ್ರಶ್ನಿಸುತ್ತಾರೆ

⁂

ಮುಂಬಯಿ ಕಾಯದೆ ಕೌನ್ಸಿಲಿನ ಪುಣೆಯ ಅಧಿವೇಶನದಲ್ಲಿ ರಾವಸಾಹೇಬ ಕುಲಕರ್ಣಿಯವರು ಒಂದು ವಿನೋದ ಮಾಡಿದರು "ಕೌನ್ಸಿಲಿನ ೧೨ ಮಂದಿ ಸಭಾಸದರು ತಮ್ಮ ಪತ್ತೆಯನ್ನು ೧೨ನೇ ಬಂಗಲೆಯಂತ ಕೊಟ್ಟಿದ್ದಾರೆ. ಇದು ದೊಡ್ಡ ಖಾನಾವಳಿಯೇನು?" ಎಂದು ಕೇಳಿದರು. ಡಿ| ಬಿ| ಕಾಂಬಳೆಯವರು ಕಿಡಿಕಿಡಿ ಕೋಪಗೊಂಡು ಥಟ್ಟನೆ ಎದ್ದು ಒಮ್ಮೆಲೇ ನುಡಿದದ್ದೇನಂದರೆ:— "ಅದು ಖಾನಾವಳಿಯಲ್ಲ; ನನ್ನ ವಾಸ್ತವ್ಯದ ಬಂಗಲೆ. ಅದಕ್ಕೆ 'ಖಾನಾವಳಿ' ಯೆಂದು ಸಂಬೋಧಿಸಿ ರಾ| ಸಾ| ಕುಲಕರ್ಣಿಯವರು ತಮ್ಮ ಅಪಮಾನ ಮಾಡಿದರಾಗಿ ಅವರು ಉದ್ಗರಿಸಿದರು. ಡಿ| ಬಿ| ಕಾಂಬಳೆಯವರ ಬಂಗ್ಲೆಯಲ್ಲಿ ಕೌನ್ಸಿಲಿನ ಸಭಾಸದರಿಗೆ ಅನ್ನಸಂತರ್ಪಣೆಯಾಗುತ್ತದೆಂಬ ಸಂಗತಿ ರಾ| ಸಾ| ಕುಲಕರ್ಣಿಯವರಿಗೇನು ಗೊತ್ತು? ಅನ್ನಸಂತರ್ಪಣೆ ಮಾಡುವ ಉದ್ದೇಶವೇನೆಂದು ತಿಳಿಯಲಿಲ್ಲ. ಡಿ| ಬಿ| ಕಾಂಬಳೆಯವರ ಮಗಂದಿರರಿಗೆ ಅಬಕಾರಿ ಖಾತೆಯೊಳಗೆ ದೊಡ್ಡ ಪಗಾರದ ಹುದ್ದೆ ಸಿಕ್ಕಿರುವದಾಗಿಯೂ, ರಾ| ಸಾ| ಕುಲಕರ್ಣಿಯವರ ಸುದ್ದಿ. "ದಿವಾಣರಾದರೆ ಅನ್ನ-ಸಂತರ್ಪಣೆ ಹಾಕಬರುತ್ತದೆ. ಮಕ್ಕಳಿಗೆ ತಮ್ಮ ತಮ್ಮ ಖಾತೆಯೊಳಗೆ ದೊಡ್ಡ ದೊಡ್ಡ ಹುದ್ದೆ ಸಂಪಾದಿಸಬರುತ್ತದೆ." ಎಂಬದಾಗಿ ವಿಶಾಲ ವಿಚಾರದ ಜನಸಾಮಾನ್ಯರು ದೂರಲಿಕ್ಕೇನೂ ಅಡ್ಡಿಯಿಲ್ಲ. ಡಿ| ಬಿ| ಕಾಂಬಳೆಯವರು ಮತಸಂಪಾದನೆಗಾಗಿ ಅನ್ನಸಂತರ್ಪಣೆ ಮಾಡುವವರಲ್ಲ. ಮಗನ ನೌಕರಿಗಾಗಿ ದಿವಾಣರಾದವರಲ್ಲ. ತಮ್ಮಿಂದ ಲೋಕಸೇವೆಯಾಗಬೇಕೆಂಬದೇ ದಿವಾಣ ಬಹಾದ್ದೂರರ ಉದ್ದೇಶ. ದಿವಾಣ ಬಹಾದ್ದೂರರ ಲೋಕಸೇವೆಯ ಪ್ರವೃತ್ತಿ ರಾವಸಾಹೇಬರಿಗೆ ತಿಳಿಯದಿದ್ದದ್ದು ಪರಮಾಶ್ಚರ್ಯ! ಅಥವಾ ತಿಳಿದೂ ಜನವೂ ತಿಳಿಯಲೆಂದು ರಾವಸಾಹೇಬರು ಹೊರಗೆಡಹಿರಬಹುದೇನು?

THE AGRICULTURAL & INDUSTRIAL BANK, LIMITED.

(*Incorporated in British India*)

Head office:– COONDAPOOR. **Branch:– KUMTA.**

Telegrams:- " BANKERS. "

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.

ಹೆಡ್ ಆಫೀ .— ಕುಂದಾಪುರ. ಬ್ರೆಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು:- 3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ. 3½, 4½, 5½, 6, 6½ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು.

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ. 2½ ವ ಜುಲೈಯಿಂದ ಡಿಸೆಂಬರ ಅಖೈರ ವರೆಗೆ 1½ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು:— ಶೇಕಡಾ ರೂ. 4ರಂತೆ ಬಡ್ಡಿ. ಬಿನ್ ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು.

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯ್ಯಾತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, **ದರ್ಶನಿ ಹುಂಡಿಗಳು, ಚೆಕ್ಕುಗಳು** ವಗೈರೆ ವಟ್ಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ **ಮಾಹಿತಿ ಪುಸ್ತಕ (Rules of Business)**ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S. Nayak.
Managing Directors.

ಅಲ್ಲಲ್ಲಿ ಇಷ್ಟಿಷ್ಟು!

ಡಾ. ಅಂಬೇಡಕರರು ಒಳ್ಳೇ ಪ್ರಸಿದ್ಧಿಗೆ ಬಂದರು. ಹಿಂದು ಧರ್ಮವನ್ನೇ ಬಿಟ್ಟುಹೋಗುತ್ತೇವಾಗಿ ಅವರು ಡಂಗರ ಸಾರಿದ್ದರೆ ಹಿಂದು ಪ್ರಮುಖರ ಶಿಷ್ಟ ಮಂಡಳವೊಂದು ಪುಣ್ಯಾತ್ಮರಿಗೆ ಧರ್ಮಾಂತರ ಹೊಂದಬಾರದೆಂದು ಅರಿಕೆ ಮಾಡಿಕೊಂಡಿತು. ೫ ವರ್ಷಗಳ ತನಕ ತಾವು ಸನಾತನಿಗಳ ನಡತೆಯನ್ನು ವಿಚಾರಿಸಿ ಆ ಮೇಲೆ ಯುಕ್ತ ಕಂಡ ಉಪಾಯ ಕೈಕೊಳ್ಳುವೆವಾಗಿ ಅವರು ತಿಳಿಸಿದ್ದಾರೆ. ಕೆಲ ಹರಿಜನರು ಮನುಸ್ಮೃತಿ, ರಾಮಾಯಣ, ಮಹಾಭಾರತ ಮೊದಲಾದ ಹಿಂದು ಧರ್ಮ ಗ್ರಂಥಗಳನ್ನು ಸುಟ್ಟು ಕೃತಕೃತ್ಯರಾದರು! ಪವಿತ್ರ ಗ್ರಂಥಗಳಿಗೆ ಅಪವಿತ್ರವಾದ ಕಾಲುಗಳಿಂದ ಮೆಟ್ಟಿ ಭೂತ ಪಿಶಾಚಿಗಳಂತೆ ಕುಣಿದು ಆಮೇಲೆ ಸುಟ್ಟರಂತೆ!! ಈ ಪ್ರಕಾರಗಳಿಂದ ಅಸ್ಪೃಶ್ಯರ ಉದ್ಧಾರವಾಗುತ್ತಿದ್ದರೆ ಇಂಥ ಅತ್ಯಾಚಾರಗಳು ಕ್ಷಮ್ಯವಿವೆ. ಆದರೆ ಇವುಗಳಿಂದ ಪ್ರಯೋಜನವೇನಿದೆ? ಅಸ್ಪೃಶ್ಯರಿಗೆ ಹಿಂದು ಧರ್ಮದ ಮೇಲೆ ಶ್ರದ್ಧೆಯಿಲ್ಲ ಇಷ್ಟೇ ಇದರ ಮೇಲಿಂದ ಸಿದ್ಧವಾಗುತ್ತದೆ, ಹೊರತು ಹಿಂದು ಧರ್ಮದಲ್ಲಿ ನೀವು ಉಳಿಯಲು ಅವರು ಪಾತ್ರರಾಗುವದಿಲ್ಲ. ಪೂಜ್ಯ ಧರ್ಮಗ್ರಂಥಗಳನ್ನು ತುಳಿದು ಧನ್ಯತೆ ಪಡೆಯುವವರಿಗೆ ಧರ್ಮತ್ಯಾಗ ಮಾಡಬಾರದೆಂದು ಹೇಳುವದು ಕಷ್ಟ! ಇಂಥವರು ಧರ್ಮದಲ್ಲಿ ಉಳಿಯುವದೂ ಕಷ್ಟ! ಡಾ| ಅಂಬೇಡಕರರು ಹಿಂದು ಧರ್ಮದಲ್ಲುಳಿದು ಹಿಂದು ಧರ್ಮದವರ ಮೇಲೆ ಉಪಕಾರ ಮಾಡುವದಿಲ್ಲ. ಹಿಂದು ಧರ್ಮದಲ್ಲಿ ಅವರು ಉಳಿಯಬೇಕಾದರೆ ಕೆಲ ಹಿಂದು ಧರ್ಮಾನುಯಾಯಿಗಳ ನಡತೆ ಹೋಗಿದ್ದಾಗ್ಯೂ ಅವನ್ನು ಸುಧಾರಿಸಲೆತ್ನಿಸುವದು ಅವರ ಕರ್ತವ್ಯ. ಅಸ್ಪೃಶ್ಯರು ಹಿಂದು ಧರ್ಮದ ಅಂಗಗಳಾಗಿ ಇರುವ ಪರ್ಯಂತ, ಇರಬೇಕಾದವರಂತೆ ಅವರು ಹಿಂದು ಧರ್ಮವನ್ನು ಹೀಯಾಳಿಸಬಾರದು. ಮಹಾತ್ಮರು ನುಡಿದಂತೆ, ಧರ್ಮವು ಪರಮಾತ್ಮಸಾಧನೆಯ ಮಾರ್ಗ, ಅಂತರಾತ್ಮನಿಗೂ ಪರಮಾತ್ಮನಿಗೂ ಗಂಟುಹಾಕುವ ಸಾಧನ, ಇದು ಜನ್ಮಬಂಧನ ಭಾವನೆಯೇ ಧರ್ಮದ ಮೂಲ. ಐಹಿಕ ಕಷ್ಟಗಳಿಂದ, ಸುಖೋಪಭೋಗಗಳಿಂದ ಧರ್ಮತ್ಯಾಗವಾಗಲಿ, ಧರ್ಮಸ್ವೀಕಾರವಾಗಲಿ ಒದಗಿ ಬರದು. ಜೀವನವೇ ಧರ್ಮದಲ್ಲಿ ಬೆರತು ಹೋಗಿದೆ. ಅಸ್ಪೃಶ್ಯರೂ, ಅಸ್ಪೃಶ್ಯ ಪ್ರಮುಖರೂ ವಿಚಾರ ಮಾಡಿ ವೃಥ ವಿಚಾರಗೆಟ್ಟು ಇಂಥ ಅತ್ಯಾಚಾರಗಳನ್ನು ಆಚರಿಸಲಾಗದು. ಅಸ್ಪೃಶ್ಯತೆಯನ್ನು ಸ್ಥಿರಪಡಿಸಬೇಕೆಂದು ಯಾರಿಗೂ ಅನಿಸುವದಿಲ್ಲ. ಅಸ್ಪೃಶ್ಯತೆಯನ್ನು ನಿವಾರಿಸುವದಕ್ಕಾಗಿಯೇ ಮಹಾತ್ಮರಂಥ ವಿಚಾರವಂತ ಪ್ರಮುಖರೆಲ್ಲರೂ ತೊಡಗಿದ್ದಾರೆ. ಸಮಾಜದಲ್ಲಿ ಉಚ್ಚ-ನೀಚ ದರ್ಜೆಗಳು ಇರುತ್ತವೆ. ಇಂಗ್ಲಂಡದಲ್ಲಿಯೂ ಇದೇ ಪ್ರಕಾರ ದರ್ಜೆಗಳಿವೆ. ಮೇಲಿನವರು ಇತರ ದರ್ಜೆಯವರೊಡನೆ ಶರೀರಸಂಬಂಧ ಬೆಳಿಸಲು, ಅನ್ನಸಂಬಂಧ ಮಾಡಲು ಒಪ್ಪುವದಿಲ್ಲೆಂಬ ಸಂಗತಿ ಲೋಕವಿಖ್ಯಾತವಾದುದು. ಮುಸಲ್ಮಾನ ಧರ್ಮದಂಥ ಲೋಕಶಾಹಿ ಧರ್ಮದಲ್ಲಿಯೂ ಸಯ್ಯದ ಎಂಬ ಮನೆತನದವರು ಸಾಮಾನ್ಯ ದರ್ಜೆಯವರೊಡನೆ ಶರೀರಸಂಬಂಧ ಬೆಳಸಲೊಪ್ಪುವದಿಲ್ಲವೆಂಬ ಸಂಗತಿ ಎಲ್ಲರೂ ಒಪ್ಪಿದ ವಿಷಯ. ಹಿಂದು ಸಮಾಜದಲ್ಲಿ ಆರೋಗ್ಯ ನಿಯಮಗಳೂ, ಆಹಾರ ನಿಯಮಗಳೂ, ಆಚಾರ-ವಿಚಾರ ನಿಯಮಗಳೂ ಧಾರ್ಮಿಕ ವಿಧಿಗಳಲ್ಲಿ ರೂಪಾಂತರ ಹೊಂದಿರುವದರಿಂದ ಸ್ಪೃಶ್ಯಾಸ್ಪೃಶ್ಯತೆಯು ಮರೆಯು ಮಿತಿಮೀರಿದೆಂಬ ಮಾತು ನಿಜವಿದ್ದರೂ ಅದನ್ನು ಸಂಪೂರ್ಣವಾಗಿ ಒಮ್ಮೆಲೇ ತೊಡೆದು ಎಲ್ಲರೂ ಸಹಭೋಜನಗಳನ್ನು ಆಚರಿಸಬೇಕೆಂದು ಹೇಳುವದು ತೀರ ತಪ್ಪು. ಹಾಗೆ ಒಮ್ಮೆಲೇ ಬಂಧನಗಳನ್ನು ತುಂಡರಿಸಲುದ್ಯುಕ್ತವಾದರೆ ಸಮಾಜಘಾತವಾಗುವದು. ಸಮಸ್ತ ಹಿಂದು ಸಮಾಜ ಒಕ್ಕಟ್ಟಾಗುವ ಬದಲು ಒಡೆದುಹೋಗಿ ಧರ್ಮಘಾತವಾಗುವದು. ಮಡಿ ಮುಂದಿನ ವಿಚಾರಸರಣಿಯನ್ನು ಸುಧಾರಿಸಬೇಕು. ಮಡಿಯೆಲ್ಲಿದೆ? ಅದರ ಆವಶ್ಯಕತೆಯೇನು? ಅದನ್ನು ಪಾಲಿಸುವ ಬಗೆ ಹೇಗೆ? ಧರ್ಮಾಭಿಮಾನಿಗಳೊಡನೆ ನಡಿಸುವ ವ್ಯವಹಾರದಲ್ಲಿ ಅವರ ಮನಸ್ಸು ನೋಯದಂತೆ ನಡಿಯುವ ಬಗೆ ಹೇಗೆ? ಎಂಬ ಸಂಗತಿಗಳನ್ನೆಲ್ಲ ಮಡಿ ಮುಂದಿಗಳಿಗೆ ತಿಳಿಸಿ ವಿಚಾರಕ್ರಾಂತಿಯನ್ನುಂಟು ಮಾಡಬೇಕು. ಅಸ್ಪೃಶ್ಯರಿಗೆ ಅಸ್ಪೃಶ್ಯತೆಯ ಕಾರಣಗಳನ್ನು, ಕೀಳು ಆಚಾರ ವಿಚಾರಗಳನ್ನೂ ತ್ಯಜಿಸಿ ಶುಚಿರ್ಭೂತರಾಗಲು ಪ್ರೇರೇಪಿಸಬೇಕು. ಹೀಗೆ ಇತ್ತಟ್ಟಿನವರ ಮನೋವೃತ್ತಿಯಲ್ಲಿ ತಿದ್ದುಪಡಿ ಮಾಡದೆ ಒಮ್ಮೆಲೇ ಅಸ್ಪೃಶ್ಯೋದ್ಧಾರ ಮಾಡಲೆಳಸುವದು ತೀರ ದತ್ತತನ. ಡಾ. ಅಂಬೇಡಕರರು ವಿಚಾರವಂತರೆಂದು ಹೇಳಿಸಿಕೊಳ್ಳುತ್ತಾರೆ, ಅಸ್ಪೃಶ್ಯರ ಪ್ರಮುಖರೆಂದೂ ಅವರಿಗನೇಕರು ಹೇಳುತ್ತಾರೆ. ಇಂಥವರೇ ದಡ್ಡರಾಗಿ ಧರ್ಮಾಂತರದ ಬೆದರಿಕೆ ಹಾಕಿದ ಬಳಿಕ, ಧರ್ಮಗ್ರಂಥಗಳ ವಿನಾಶವನ್ನು ಪುರಸ್ಕರಿಸಿದ ಬಳಿಕ ಯಾರೇನು ಹೇಳುವದುಳಿಯಿತು?

⁂

ಅಸ್ಪೃಶ್ಯರಲ್ಲಿಯೂ ಕಠಿಣ ಜಾತಿ ಬಂಧನಗಳಿವೆ. ಔಂಧದೊಳಗಿನ 'ಪುರುಷಾರ್ಥ' ಮಾಸಿಕ ಪತ್ರಿಕೆಯವರು ಒಂದು ಉದಾಹರಣೆಯನ್ನು ನಮೂದಿಸಿದ್ದಾರೆ. ಸಾತಾರಾ ಜಿಲ್ಹೆಯೊಳಗಿನ ಬ್ರಾಹ್ಮಣನೊಬ್ಬನು ಹೊಲೆಯನ ಹುಡುಗಿಯೊಡನೆ ಪ್ರೇಮಸಂಬಂಧ ಬೆಳಸಿದ್ದಾನೆ. ಆ ಹುಡುಗಿಯ ಮನೆಯಲ್ಲಿ ಹೋಗಿ ಊಟ ಮಾಡುತ್ತಾನೆ, ಉಳಿಯುತ್ತಾನೆ. ಆತನಿಗೆ ಮನೆಯಲ್ಲಿ ಹೊರಹಾಕಿದರು. ಈಗ ೧೬ ವರುಷಗಳಿಂದವು ಆತನು ಆ ಹೊಲೆಯ ಹೆಂಗಸಿನ ಮನೆಯಲ್ಲಿದ್ದಾನೆ. ಆತನಿಗೆ ಬ್ರಾಹ್ಮಣರಂತೂ ಸ್ಪರ್ಶ ಮಾಡುವದಿಲ್ಲ. ಹೊಲೆಯರೂ ಆತನಿಗೆ ಪಂಕ್ತಿಯಲ್ಲಿ ಸೇರಿಸಿಕೊಳ್ಳುವದಿಲ್ಲ! ಹೊಲೆಯ ಹೆಂಗಸಿಗೂ ಹೊಲೆಯರು ಬಹಿಷ್ಕರಿಸಿದ್ದಾರೆ!! ಬ್ರಾಹ್ಮಣನಿಗೆ ಹೊಲೆಯರು ಸಹ ಅಸ್ಪೃಶ್ಯನೆಂದು ತಿಳಿಯುತ್ತಾರೆ. ಕಾರಣವೇನೆಂದು ತಿಳಿಯಿತೇ? ಬ್ರಾಹ್ಮಣನು ಸ್ವಜಾತಿ ಬಿಟ್ಟದ್ದರಿಂದ ಪತಿತನಾಗಿದ್ದಾನೆ. ಜಾತಿಗೆಟ್ಟವನೊಡನೆ ಹೊಲೆಯರು ಸಹ ಪಂಕ್ತಿಭೋಜನ ಮಾಡಲೊಪ್ಪುವದಿಲ್ಲ. ಜಾತಿವಂತ ಹೊಲೆಯರು ಜಾತಿಗೆಟ್ಟ ಬ್ರಾಹ್ಮಣನಿಗಿಂತ ಮೇಲೆಂದು ಅವರ ಅಂಬೋಣ. ಅಸ್ಪೃಶ್ಯರಲ್ಲಿಯೂ ಈ ಪ್ರಕಾರದ ಭಾವನೆಯಿದೆ. ಬ್ರಾಹ್ಮಣನು ಜಾತಿಯಲ್ಲಿರುವ ತನಕ ಪೂಜ್ಯನು; ಆದರಾರ್ಹನು. ಜಾತಿಗೆಟ್ಟ ಬಳಿಕ ಆತನು ಪತಿತನು, ಹೊಲೆಯನಿಗಿಂತ — ಏಕೆ ಯಾವದೇ ಜಾತಿಯವನಿಗಿಂತ — ಕಡೆ. ಡಾ| ಅಂಬೇಡಕರರು ಬ್ರಾಹ್ಮಣಾದಿಗಳಿಗೆ ಹಳಿಯುವಾಗ ಸ್ವಸಮಾಜದೊಳಗಿನ ಪರಂಪರೆಯ ವಿಚಾರ ಮಾಡಬೇಕು. ಅಸ್ಪೃಶ್ಯ ಶಬ್ದದಲ್ಲಿ ಅನೇಕ ಜಾತಿಗಳ ಸೇರ್ಪಡೆಯಾಗುತ್ತಿದ್ದಾಗ್ಯೂ ಆ ಜಾತಿಗಳೊಳಗೆ ಪರಸ್ಪರ ವ್ಯವಹಾರಗಳಿಲ್ಲ. ಡಾ| ಅಂಬೇಡಕರರೂ ಸಮಾಜಸುಧಾರಕರೂ ಬಲವಾಗಿ ಪರಾಂಬರಿಸಿ ಅಸ್ಪೃಶ್ಯ ಸಮಾಜವನ್ನು ಸುಧಾರಿಸಲೆತ್ನಿಸಬೇಕು. ಡಾ| ಅಂಬೇಡಕರರಂಥವರು ಸಮಾಜದವರ ಪೀಡನೆಗೆ ಬೇಸರಪಟ್ಟು ಧರ್ಮಾಂತರ ಹೊಂದಿದರೆ ಅಸ್ಪೃಶ್ಯ ಸಮಾಜದ ಸುಧಾರಣೆಯನ್ನು ಮಾಡುವವರ್ಯಾರು? ಇದನ್ನೂ ಡಾ| ಅಂಬೇಡಕರರು ವಿಚಾರಿಸತಕ್ಕ ವಿಷಯ. ಆತ್ಮನಿರೀಕ್ಷಣೆ ಮಾಡದೆ ಬರೇ ದೋಷಾವಿಷ್ಕರಣದಿಂದ ಮೋಕ್ಷವಾಗುವದಿಲ್ಲ, ಇಹದಲ್ಲಿಯೂ ಮೋಕ್ಷವಿಲ್ಲ, ಪರದಲ್ಲಿಯೂ ಮೋಕ್ಷವಿಲ್ಲ

⁂

ಮುಂಬಯಿಯಲ್ಲಿ ಕಳೆದ ದೀಪಾವಳಿ ರಜೆಯೊಳಗೆ ಸಂಯುಕ್ತ ಗೌಡಸಾರಸ್ವತ ಪರಿಷತ್ತು ಸೇರಿತು. ಈ ಹಿಂದಿನ ಪರಿಷತ್ತು ೧೯೧೬ನೇ ಇಸ್ವಿಯಲ್ಲಿ ಅಲಿಬಾಗದಲ್ಲಿ ಸೇರಿತ್ತು. ೧೮ ವರ್ಷಗಳ ಮೇಲೆ ಈ ಪರಿಷತ್ತು ಮುಂಬಯಿಯಲ್ಲಿ ಸೇರಿತು. ಬೆರಿಸ್ಟರ ವಿಶ್ವನಾಥ ಗಣಪತ ದಳವಿಯವರು ಸ್ವಾಗತಾಧ್ಯಕ್ಷರಿದ್ದರು. ಮುಂಬಯಿ ಶಾಯಿದೆ ಕೌನ್ಸಿಲಿನ ಸಭಾಸದರಾದ ಪುಣೆಯ ಬಾಳಕೃಷ್ಣ ಸೀತಾರಾಮ ಕಾಮತರವರು ಪರಿಷತ್ತಿನ ಅಧ್ಯಕ್ಷರು. ಸ್ವಾಗತಾಧ್ಯಕ್ಷ-ಪರಿಷತ್ತಿನ ಅಧ್ಯಕ್ಷರೀರ್ವರ ಸಮಯೋಚಿತ ಭಾಷಣಗಳಾದ

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.

(೧೯೦೬ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು!

ಬೇಕು! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ಒಳಿಗೆ ಈ ಕೆಳಗೆ ವಿವರಿಸಿದ ಠರಾವುಗಳಾದವು. ೧೬ ವರ್ಷಗಳಲ್ಲಿ ತೀರಿಕೊಂಡ ಗೌಡಸಾರಸ್ವತ ಸಮಾಜದೊಳಗಿನ ೮೦ ಮಂದಿ ಪ್ರಮುಖರ ಬಗ್ಗೆ ದುಃಖ ಪ್ರದರ್ಶನ ಮಾಡಲಾಯಿತು. ಸ್ವಸಮಾಜದವರು ಎಲ್ಲೆಲ್ಲಿ, ಯಾವ್ಯಾವ ಕೆಲಸ ಮಾಡುತ್ತಾರೆಂಬ ಸಂಗತಿ ತಿಳಿಯುವಂತೆ ಒಂದು ಡಿರೆಕ್ಟರಿಯನ್ನು ತಯಾರಿಸತಕ್ಕದ್ದು, ಇದಕ್ಕಾಗಿ ರೂ ೧೦೦೦ ಗಳ ತನಕ ಖರ್ಚು ಮಾಡಬಹುದು, ಡಿರೆಕ್ಟರಿಯನ್ನು ಅಚ್ಚುಹಾಕಲಿಕ್ಕೆ ಪ್ರತ್ಯೇಕ ನಿಧಿಯನ್ನು ಏರ್ಪಡಿಸಬೇಕು. ಸ್ವಜ್ಞಾತಿಯೊಳಗಿನ ಬೇರೆ ಬೇರೆ ಸಂಸ್ಥೆಗಳ ಸಹಕಾರವಾಗುವಂತೆ, ವಿಚಾರ ವಿನಿಮಯವಾಗುವಂತೆ ಕಾರ್ಯಕಾರಿ ಮಂಡಳದವರು ವ್ಯವಸ್ಥೆ ಮಾಡಬೇಕು. ಸೈನ್ಯಶಾಲೆ, ವಿಶ್ವವಿದ್ಯಾಲಯ, ಸೈನ್ಯಪಡೆ ಮೊದಲಾದವುಗಳಲ್ಲಿ ಸ್ವಜ್ಞಾತಿಯವರು ಸೇರಿ ಪ್ರಯೋಜನ ಪಡೆಯಬೇಕು. ಸೈನ್ಯ ಶಿಕ್ಷಣ ಸಂಪಾದಿಸುವದಕ್ಕಾಗಿ ವಿದ್ಯಾರ್ಥಿಗಳು ವಿಶೇಷ ಪ್ರಯತ್ನ ಪಡೆಯಬೇಕು. ಅಖಿಲ ಗೌಡಸಾರಸ್ವತ ಸಮಾಜದ ಏಕೀಕರಣಕ್ಕೆ ಪ್ರೋತ್ಸಾಹಕವಾಗುವಂತೆ ಒಳ-ಜಾತಿಗಳೊಳಗೆ ವಿವಾಹಗಳನ್ನು ಘಟಿಸಬೇಕು. ಮತ್ತು ಇಂಥ ವಿವಾಹಗಳಿಗೆ ಪ್ರೋತ್ಸಾಹ ಕೊಡುವದಕ್ಕಾಗಿ ವಧೂ ವರರ ಹೆಸರು, ವಯಸ್ಸು, ಗೋತ್ರ, ಶಿಕ್ಷಣ, ಕುಲಸ್ಥಿತಿ ಮೊದಲಾದ ಮಾಹಿತಿಯನ್ನು ಸಂಗ್ರಹಿಸಬೇಕು. ಪಾಲಕರ ಹಾಗು ವಧೂ-ವರರ ಮಿಶ್ರ-ವಿವಾಹದ ತಯಾರಿಯನ್ನು ನಮೂದಿಸಿಡಬೇಕು. ಶಿಕ್ಷಣ ವಿವಾಹ ಖರ್ಚಿಗೆ ಅನುಕೂಲತೆಯಾಗುವಂತೆ ಶಿಕ್ಷಣ-ವಿವಾಹ ವಿಮೆ ಸಂಸ್ಥೆಯನ್ನೇರ್ಪಡಿಸಬೇಕು. ಪ್ರತಿಯೊಂದು ವರ್ಷದಲ್ಲಿ ೧೦ ಮಿಶ್ರ ವಿವಾಹಗಳನ್ನಾದರೂ ಒದಗಿಸಿ ತಂದು ಪರಿಷತ್ತಿನ ಸಂಕಲ್ಪಿತ ಕಾರ್ಯ ನೆರವೇರಿಸಿದ ಪುಣ್ಯ ಕಟ್ಟಿಕೊಳ್ಳಬೇಕು. ಮುಂಬಯಿಯಲ್ಲಿ ಉಳಿಯುವ ಹಾಗೂ ಬರುವ ಸಮಸ್ತ ಗೌಡಸಾರಸ್ವತ ಜನರ ಹಾಗೂ ಜ್ಞಾತಿಸಂಸ್ಥೆಗಳ ಹಿತಕ್ಕಾಗಿ ಮುಂಬಯಿಯೊಳಗೆ ಒಂದು ಇಮಾರತನ್ನು ಕಟ್ಟಿಸಬೇಕು. ಇದಕ್ಕೆ ಅವಶ್ಯವಿರುವ ಖರ್ಚನ್ನು ಗೌಡಸಾರಸ್ವತ ದೇವಾಲಯದವರೂ ಧಾರ್ಮಿಕ ಸಂಸ್ಥೆಯವರೂ ನಿಧಿಯವರೂ, ಪೂರೈಸಬೇಕು. ರವುಪುರದಲ್ಲಿ ಸ್ವಜ್ಞಾತಿಯವರ ಉಪಯೋಗಕ್ಕಾಗಿ ಧರ್ಮಶಾಲೆಯೊಂದನ್ನು ಕಟ್ಟಿಸಬೇಕೆಂದು ಸೂರಜ್ಞಾಪುರದ ಜ್ಞಾತಿಬಾಂಧವರು ಹಣ ಕೂಡಿಸುತ್ತಿದ್ದಾರೆ, ಅದಕ್ಕೆ ಎಲ್ಲರೂ ಪ್ರೋತ್ಸಾಹಿಸಬೇಕಾಗಿ ಪರಿಷತ್ತಿನ ವಿನಂತಿ. ಸ್ತ್ರೀಯರ ಉನ್ನತಿಗಾಗಿ ಎಲ್ಲೆಲ್ಲಿಯೂ ಮಹಿಳಾ ಮಂಡಳಗಳನ್ನು ಸ್ಥಾಪಿಸಬೇಕು. ಪ್ರಸಿದ್ಧ ಸಾಧು ಸೋಹಿರೋಬಾನಾಥ ಅಂಬಿಯೇ ಇವರ ಸಮಾಧಿಯ ಜೀರ್ಣೋದ್ಧಾರಕ್ಕಾಗಿ ಜ್ಞಾತಿಯವರು ಪ್ರಯತ್ನ ಪಡತಕ್ಕದ್ದು. ಈಗಿನ ಹಿಂದು ಕಾಯಿದೆಯಿಂದ ಸ್ತ್ರೀಯರಿಗೆ ಅನ್ಯಾಯವಾಗಿದೆ. ಅದನ್ನು ತಿದ್ದುಪಡಿ ಮಾಡಿ ಸ್ತ್ರೀಯರಿಗೆ ಪುರುಷರಂತೆ ವಾರಸಾ ಹಕ್ಕು, ವಾಂಟಣಿಯ ಹಕ್ಕು ಸಿಗುವಂತೆ ಕಾಯಿದೆಯಲ್ಲಿ ತಿದ್ದುಪಡಿಯಾಗತಕ್ಕದ್ದು. ಸಂಯುಕ್ತ ಗೌಡಸಾರಸ್ವತ ಪರಿಷತ್ತಿನಲ್ಲಿ ಆದ ನಿರ್ಣಯಗಳನ್ನೋದಿದರೆ ಜ್ಞಾತಿ ಪರಿಷತ್ತುಗಳ ಜ್ಞಾತಿ ಉದ್ಧಾರ ಕಾರ್ಯದ ಸ್ವರೂಪ ತಿಳಿಯುತ್ತದೆ. ಇಂಥ ಪರಿಷತ್ತುಗಳು ೧೬ ವರ್ಷಗಳ ತನಕ ಸೇರದಿದ್ದರೂ ಜ್ಞಾತಿಯವರಿಗ ನಷ್ಟವಿಲ್ಲ! ಮಿಶ್ರ ವಿವಾಹದ ನಿರ್ಧಾರವಂತೂ ತೀರ ಹಾಸ್ಯಾಸ್ಪದ!

⁂

ಬೇಸಾಯಗಾರರ ಮೇಲೆ ಹೊಸ ಸಂಕಟ ಒದಗಲಿಕ್ಕಿದೆ. ಇನಕಮ್ ಟ್ಯಾಕ್ಸನ್ನು ಬೇಸಾಯಗಾರರ ಮೇಲೆ ಹೊರಿಸಲು ಸರಕಾರದ ಆಲೋಚನೆ. ಮುಂಬಯಿ 'ಟೈಮ್ಸ' ಪತ್ರಿಕೆಯಲ್ಲಿ ಈ ಕುರಿತು ಪತ್ರವ್ಯವಹಾರ ಪ್ರಕಟವಾಗುತ್ತಿದೆ. ರೂ ೨೦೦೦ ಗಳ ಮೇಲೆ ಇನಕಮ್ ಟ್ಯಾಕ್ಸ ಇರಬೇಕಾಗಿ ಒಬ್ಬರ ಅಂಬೋಣ. ರೂ ೬೦೦೦ ಗಳ ಮೇಲೆ ಇನಕಮ್ ಟ್ಯಾಕ್ಸ ಇರಬೇಕಾಗಿ ಹಿಂದೀ ವರ್ತಕ ಸಂಘದ ಶಿಫಾರಸಿಯಿತು. ಸರಕಾರಕ್ಕೆ ಭೂಕಂದಾಯ ತೆತ್ತ ಬಳಿಕ ಉಳಿಯುವ ರಕಮಿನ ಮೇಲೆ ಇನಕಮ್ ಟ್ಯಾಕ್ಸ ಆಕರಿಸಬೇಕಾಗಿ ಹಿಂದೀ ವ್ಯಾಪಾರಸ್ಥರ ಸೂಚನ. ಮುಂಬಯಿ 'ಟ್ಯಾಯ್ಮ್ಸ' ಪತ್ರಿಕೆಯೊಳಗಿನ ಪತ್ರವ್ಯವಹಾರದ ಮೇಲಿಂದ ಸರಕಾರವು ಇದನ್ನು ಗಾಂಭೀರ್ಯದಿಂದ ಆಲೋಚಿಸುತ್ತದಾಗಿ ನಿಂಡಿತವಾಗಿ ತಿಳಿಯಲಿಕ್ಕೆ ಏನೂ ಅಡ್ಡಿಯಿಲ್ಲ. ಒಮ್ಮೆ ಭೂಕಂದಾಯದ ತೆರಿಗೆ ತೆತ್ತ ಬಳಿಕ ಪುನಃ ಇನಕಮ್ ಟ್ಯಾಕ್ಸ ಖಾತೆಯಿಂದ ತೆರಿಗೆ ವಸೂಲ ಮಾಡುವ ಪದ್ಧತಿ ಲೋಕದಲ್ಲಿ ಎಲ್ಲಿಯೂ ಇಲ್ಲ. ಸರಕಾರಕ್ಕೆ ತೆರಿಗೆ ವಸೂಲ ಮಾಡುವ ಅಧಿಕಾರ ಒಂದೇ ಬಾರಿಯಿದೆ. ಒಂದು ಉತ್ಪನ್ನದ ಮೇಲೆ ಒಂದು ಖಾತೆಯಿಂದ ತೆರಿಗೆ ವಸೂಲ ಮಾಡಿದ ಬಳಿಕ ಇನ್ನೊಂದು ಖಾತೆಯಿಂದ ಅದೇ ಉತ್ಪನ್ನದ ಮೇಲೆ ತೆರಿಗೆ ವಸೂಲ ಮಾಡುವ ಕ್ರಮ ಸುಧಾರಿಸಿದ ಯಾವದೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿಲ್ಲ. ಬೇಸಾಯಗಾರರು ತೀರ್ವೆ ತೆರುತ್ತಾರೆ, ಲೋಕಲ್ಫಂಡ ತೆರುತ್ತಾರೆ. ಕಾಳು-ಕಡಿಗಳ ದಾರಣೆ ಸರಕಾರದ ಕೃತ್ರಿಮ ದೂಷಾಯಿಯಿಂದ ಇಳಿದು ರೈತರಿಗೆ ನಷ್ಟ. ಸಾಗುವಳಿ ಖರ್ಚು ಏರಿ ನಷ್ಟ, ಮಳೆ ಸರಿಯಾಗಿ ಬೀಳದೆ, ಬೆಳೆ ಬಾರದೆ ಸಂಕಟ ಹೀಗೆ ವಿವಿಧತಾಪತ್ರಯಗಳಿಂದ ಬೇಸಾಯಗಾರರು ಬೆಂದು ಬೆಂಡಾಗಿದ್ದಾರೆ. ಬೇಸಾಯಗಾರರಿಗೆ ಜೀವನಕ್ರಮ ನಡಿಸಲಾಗದೆ ಅವರು ಸಾಲದಲ್ಲಿ ಮುಳುಗುತ್ತಿದ್ದಾರೆ. ದೊಡ್ಡ ದೊಡ್ಡ ಉತ್ಪನ್ನವಿದ್ದ ಬೇಸಾಯಗಾರ ಸಾವುಕಾರರಿಗೆ ಮಾತ್ರ ಸರಕಾರವು ಇನಕಮ್ ಟ್ಯಾಕ್ಸ ಆಕರಿಸಬಹುದಾಗಿ ನಾವ ಹೇಳಬಹುದು. ಆದರೆ ಇನಕಮ್ ಟ್ಯಾಕ್ಸಿನ ಲೆಕ್ಕದಲ್ಲಿ ಉತ್ಪನ್ನದ ಲೆಕ್ಕ ಮಾಡುವ ಕ್ರಮವನ್ನೂ, ಪ್ರತ್ಯಕ್ಷ ಉತ್ಪನ್ನ ಸಿಗುವ ರಕಮನ್ನೂ ಅನುಭವದಿಂದ ಜನರು ಬಲ್ಲಾದ ವಿಷಯ! ಹೀಗಾಗಿ ಸಾವಕಾರರು ಇನಕಮ್ ಟ್ಯಾಕ್ಸ ತೆರುತ್ತಿದ್ದಾಗ್ಯೂ ಪ್ರತ್ಯಕ್ಷ ಸಾಗುವಳಿ ಮಾಡುವವರು, ಚಿಕ್ಕ-ಪುಟ್ಟ ರೈತರಿರುವವರಿಂದ ಪರ್ಯಾಯದಿಂದ ಇನಕಮ್ ಟ್ಯಾಕ್ಸಿನ ಹೊರೆ ರೈತರ ಮೇಲೆಯೇ ಬೀಳುತ್ತದೆ. ಬಡ ಜನರ ಕಲ್ಯಾಣಕ್ಕಾಗಿ ಶ್ರೀಮಂತರಿಗೆ ತೆರಿಗೆ ಆಕರಿಸುತ್ತೇವಾಗಿ ಹುರಿದುಂಬಿಸುವದು ಸುಲಭ ಮಾತು. ಇದರಿಂದ ಅಜ್ಞರು ಮೋಸಹೋಗಬಹುದು. ಉಪ್ಪಿನ ತೆರಿಗೆ ಹೇರುವಾಗ, "ಬಡ ಜನರು ಸರಕಾರದ ಬಡೀತೆ ಏನೂ ಖರ್ಚು ಕೊಡುವದಿಲ್ಲ. ಆದರಿಂದ ಅವರ ಪಾಲು ಪಡೆಯಲು ಈ ತೆರಿಗೆ ಕಲ್ಪಿಸಲ್ಪಟ್ಟಿದೆ." ಎಂಬದಾಗಿ ವಾದಿಸಿ ಆ ತೆರಿಗೆ ಹೇರಲಾಯಿತು. ಹೀಗೆ ಶ್ರೀಮಂತ-ಬಡವರೊಳಗೆ ಮತ್ಸರಭಾವ ಹುಟ್ಟಿಸಿ ಸಮಯಕ್ಕೆ ತಕ್ಕದ್ದಾಗಿ ಆಯಾ ಪ್ರತಿನಿಧಿಗಳ ಬೆಂಬಲ ಪಡೆದು ತರ ತರದ ತೆರಿಗೆಗಳನ್ನು ಎತ್ತುವಳಿ ಮಾಡುವ ಕ್ರಮ ಅನುಭವದ ಮಾತು. ಹಿಂದಿ ವರ್ತಕ ಸಂಘದವರು ಇನಕಮ್ ಟ್ಯಾಕ್ಸಿನ ಹೊರೆಯಿಂದ ತಮ್ಮನ್ನು ತಪ್ಪಿಸಿಕೊಳ್ಳುವದಕ್ಕಾಗಿ ಪ್ರಯತ್ನ ಪಡುವದರ ಬದಲು ಬೇಸಾಯಗಾರರಿಗೂ 'ನನ್ನಂತೆ ಆಗು ಮಗನೇ' ಎಂಬದಾಗಿ ಪರಿಣಮಿಸುವದು ಉಚಿತವಲ್ಲ. ಬೇಸಾಯಗಾರರು ತೀರ ವಿಪನ್ನಾವಸ್ಥೆಯಲ್ಲಿದ್ದಾರೆ! ಸಾವಕಾರ-ಬೇಸಾಯಗಾರರಾದರೂ ವಿಶೇಷ ಲಾಭ ಪಡೆಯುವದಿಲ್ಲ. ಒಂದವಲಿಗೆ

(ಮುಂದೆ ೧೧ನೇ ಪಾನು ನೋಡಿರಿ.)

For sale ! For sale !! For sale !!

Udipi Syndicate Bank Preference Shares for sale !

Rate less than the market rate !

Preference shares of the face value of Rs. 100/- each fully paid bearing 6% interest free of income-tax are offered for sale with the right to recover interest earned up to date. It is claimed that the shares go at a premium of Rs 7 by the Bank authorities

These shares will be sold less than the market rates Intending buyers should apply to the following address:--

Vithal Subraya Prabhu Shiroorkar,
Post:- ANKOLA.

ಲೋಕಕಂಟಕನಿಗೆ ಶಾಸನವೇ, ಪಾರಿತೋಷಕವೇ?

[ನಿರೀಕ್ಷಕನು ಬರೆದುದು.]

ಇಟಾಲಿಯ ಮುಸೊಲಿನಿಯವರು ಲೋಕಕಂಟಕರೆಂದು ರಾಷ್ಟ್ರಸಂಘವು ತೀರ್ಮಾನಿಸಿ ಶಾಸನಕ್ರಮವನ್ನು ಲೋಕತುಂಬ ಪುರಸ್ಕರಿಸುವ ವಿಚಾರ ಮಾಡುತ್ತಿದೆ. ಗುರುವಾರ ತಾ ೧೨ನೇಗೆ ರಾಷ್ಟ್ರಸಂಘದ ಸಭೆ ಸೇರಿ ಎಣ್ಣೆ ಬಹಿಷ್ಕಾರದ ಆಲೋಚನೆಯಾಗುವದಿತ್ತು. ರಾಷ್ಟ್ರಸಂಘದ ತೀರ್ಮಾನದಂತೆ ಲೋಕದೊಳಗಿನ ೫೦ ರಾಷ್ಟ್ರಗಳು ಇಟಾಲಿಯನ್ನು ಬಹಿಷ್ಕರಿಸಿ ರಾಷ್ಟ್ರಸಂಘಕ್ಕೆ ಬೆಂಬಲ ಕೊಡುತ್ತಿವೆ. ಗುರುವಾರದ ಸಭೆಯಲ್ಲಿ ಎಣ್ಣೆ ಬಹಿಷ್ಕಾರದ ವಿಚಾರವಾಗಿ ನಿರ್ಣಯವಾಗುವದಿತ್ತು. ಕಾರ್ಯಕ್ರಮದಂತೆ ರಾಷ್ಟ್ರಸಂಘದ ಸಭೆ ಮಧ್ಯಾಹ್ನ ಕೂಡಿತು. ಬಹಿಷ್ಕಾರದ ಚರ್ಚೆಯಾಗಲಿಲ್ಲ, ಮತ್ತು ಹಾಗೆಯೇ ಸಭೆಯು ಬುಧವಾರ ತನಕ ಮುಂದೆ ಸರಿಸಲ್ಪಟ್ಟಿದೆ. ಒಳಗಿಂದೊಳಗೆ ಮಧ್ಯಸ್ಥಿಕೆ ನಡೆಯುತ್ತಿರುವದಾಗಿಯೂ ಮುಸೊಲಿನಿಯವರ ಮನವೊಲಿಸಲಿಕ್ಕಾಗಿ ಫ್ರೆಂಚ ಪ್ರಧಾನಮಂತ್ರಿ ಲಾವಲ್‌ರವರು ಪ್ರಯತ್ನ ಮಾಡುತ್ತಿದ್ದಾರಾಗಿಯೂ, ಬ್ರಿಟಿಶ ವಿದೇಶ ಕಾರ್ಯದ ಪ್ರಧಾನರಾದ ಸರ್ ಸಾಮ್ಯುಅಲ್ ಹೋರರವರು ಫ್ರೆಂಚ ಪ್ರಧಾನರ ಕೈ ಹಿಡಿಯುತ್ತಿದ್ದಾರಾಗಿಯೂ ಲೋಕವಾರ್ತೆ. ಹೋರರವರು ಸ್ವಿತ್ಝರ್ಲಂಡಕ್ಕೆ ವಿಶ್ರಾಂತಿಗೆ ಹೋಗುವಾಗ ಶನಿವಾರ-ರವಿವಾರ ಪಾರೀಸದಲ್ಲಿ ಉಳಿದು ೨ ದಿನ ತಾಸುಗಳ [illegible] ಮಧ್ಯಸ್ಥಿಕೆಯ ಚರ್ಚೆ ಮಾಡಿ ನಿರ್ಧರಿಸಿದರಂತೆ! ಮುಸೊಲಿನಿಯವರಿಗೆ ಹಬಸಿ ದೇಶದ ಟಿಗ್ರೇ ಪ್ರಾಂತವನ್ನು ಒಪ್ಪಿಸಬೇಕು, ದನಕಾಲಿ ಪ್ರದೇಶವನ್ನೂ ಒಪ್ಪಿಸಬೇಕು. ದಕ್ಷಿಣ ಪ್ರಾಂತದಲ್ಲಿ ಓಗಡೇನ ಪ್ರಾಂತವನ್ನೂ ಒಪ್ಪಿಸಬೇಕು. ದನಕಾಲಿ ಪ್ರದೇಶದ ಮೇಲೆ ಸಾರ್ವಭೌಮ (?) ಅಧಿಕಾರವು ಹಬಸಿಯರದಿರಬೇಕು. ಪ್ರತಿಯಾಗಿ ಮುಸೊಲಿನಿಯವರು ಎರಿಟ್ರಿಯ ಪ್ರಾಂತದೊಳಗಿನ ಅಸ್ಸಾಬ ಬಂದರವನ್ನು ಹಬಸಿ ದೊರೆಗೆ ಒಪ್ಪಿಸಿ ಅಲ್ಲಿಯ ತನಕ ಉಗಿಬಂಡಿಯನ್ನು ಕಟ್ಟಲು ಅನುಕೂಲವಾದ ಪ್ರದೇಶವನ್ನು ಕೊಡಬೇಕು. ಮುಸೊಲಿನಿಯವರು ಇದಕ್ಕೆ ಒಪ್ಪದಿದ್ದಲ್ಲಿ ಬ್ರಿಟಿಶರು ತಮ್ಮ ಸೋಮಾಲಿ ಪ್ರಾಂತದೊಳಗಿನ ಝೈಲಾ ಬಂದರವನ್ನು ಹಬಸಿ ದೇಶದವರಿಗೆ ಒಪ್ಪಿಸಲು ಸಿದ್ಧರಿದ್ದಾರೆ. ಈ ಮಧ್ಯಸ್ಥಿಕೆ ಬ್ರಿಟಿಶ ಪ್ರಧಾನ ಮಂಡಳಕ್ಕೆ ಮಾನ್ಯವಾಗಿದೆ. ಇದನ್ನು ರಾಷ್ಟ್ರಸಂಘದವರಿಗೆ ಅಂತರಂಗದಿಂದ ತಿಳಿಸಿ ಅವರೆಲ್ಲರ ಮನವೊಲಿಸಿಕೊಂಡು ಹಬಸಿದೇಶದ ದ್ರೋಹ ಮಾಡುವ ಪ್ರಚಂಡ ವ್ಯೂಹವನ್ನೇ ಪಾಶ್ಚಾತ್ಯ ರಾಜಕಾರಣಪಟುಗಳಾದ ಹೋರ-ಲಾವಲ್‌ರವರು ರಚಿಸಿದ್ದರು! ಇಟಾಲಿಯವರು ಈ ತನಕ ಕೈವಶಮಾಡದ ಪ್ರದೇಶವನ್ನು ಗೆಲ್ಲಲಿಕ್ಕೆ ಅಸಾಧ್ಯ ಮಾತು. ಗೆಲ್ಲುವ ಮುಂಚೆಯೇ ಹಬಸಿ ದೇಶದ ಅಭಿಮಾನಿಗಳಾದ, ಇಟಾಲಿಯದ್ವೇಷಿಗಳಾದ, ಇಟಾಲಿ ರಾಕ್ಷಸನ ಬಾಯೊಳಗಿಂದ ಹಬಸಿ ದೇಶವನ್ನು ಸಂರಕ್ಷಿಸಲು ಮುಂದಾದ ಬ್ರಿಟಿಶ ಫ್ರೆಂಚರು ಹಬಸಿ ದೇಶವನ್ನು ತುಂಡರಿಸಿ ಇಟಾಲಿಗೆ ಒಪ್ಪಿಸಿದ್ದನ್ನು ನೋಡಿ ಎಲ್ಲರಲ್ಲಿಯೂ ಗಲಿಬಿಲಿ! ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಸಭಾಸದರು ಗುಪ್ತ ರಹಸ್ಯವನ್ನು ಕುರಿತು ಸಂಪೂರ್ಣವಾಗಿ ವಿವರ ಕೇಳಿದರು. 'ಪತ್ರಿಕೆಗಳೊಳಗಿನ ವಿವರಗಳನ್ನಷ್ಟೇ ನಾನು ಓದಿದ್ದೇನೆ. ದಿನಾ ತಂತಿಗಳ ಮೇಲೆ ತಂತಿಗಳು ಬರುತ್ತಿವೆ. ನಾನು ವ್ಯಾಕುಲನಾಗಿದ್ದೇನೆ. ಫ್ರೆಂಚ ಪತ್ರಿಕೆಗಳು ಮಧ್ಯಸ್ಥಿಕೆಯ ವಿವರವನ್ನು ಪ್ರಕಟಿಸಿ ಗೊಂದಲ ಮಾಡಿವೆ. ಇನ್ನೂ ಸಂಪೂರ್ಣ ಮನೋನಿಶ್ಚಯವಾಗಿಲ್ಲ. ಸಮಾಧಾನಕಾರಕ ಕಾರ್ಯವೇ ಯಾವತ್ತೂ ವಿಷಯಗಳನ್ನು ಪಾರ್ಲಿಮೆಂಟಿಗೆ ತಿಳಿಸಿಕೊಳ್ಳುತ್ತೇನೆ." ಎಂಬದಾಗಿ ಮುಖ್ಯ ಪ್ರಧಾನರಾದ ಮಿ| ಬಾಲ್ಡ್ವಿನ್‌ರವರು ಸಭಾಸದರ ಸಮಾಧಾನ ಮಾಡಲೆತ್ನಿಸಿದರು. ಇತ್ತ ರಾಷ್ಟ್ರಸಂಘದಲ್ಲಿಯೂ ಒಳ್ಳೇ ಗಡಿಬಿಡಿ [illegible] ಬ್ರಿಟಿಶ ಪ್ರತಿನಿಧಿಗಳಾದ ಮಿ| ಈಡನ್‌ರವರು ಸಮಾಧಾನ ಮಾಡಲೆತ್ನಿಸಿದರು. ಅವರು ವಾದ ಮಾಡಲು, 'ಹೋರ-ಲಾವಲ್‌ರವರ ಮಧ್ಯಸ್ಥಿಕೆಯ ಶರ್ತುಗಳು ನಿಶ್ಚಿತವಲ್ಲ, ಅವು ಸೂಚನೆಗಳು. ಅವನ್ನು ಸುಧಾರಿಸಲು ನೀವು ಸೂಚಿಸಬಹುದು' ಎಂಬದಾಗಿ ಅವರು ಹೇಳಿದರಂತೆ! ತುರ್ಕಸ್ಥಾನದ ಪ್ರತಿನಿಧಿಗಳೂ ಪೋಲಂಡದ ಪ್ರತಿನಿಧಿಗಳೂ, ರಶಿಯನ ಮಂಡಳ [illegible] ಸ್ವೀಡನದ ಪ್ರತಿನಿಧಿಗಳೂ ಮೊದಲುಗೊಂಡು ಹೋರ-ಲಾವಲ್‌ರ ಗುಪ್ತ ಕಾರಸ್ಥಾನವನ್ನು ಕಡುತರವಾಗಿ ವಿರೋಧಿಸಿದರಂತೆ! ಲಾವಲ್‌ರವರ ಸವಿ-ಸವಿ ಮಾತುಗಳಿಗೆ ಮರುಳುಗೊಳ್ಳದಂತೆ 'ರಾಷ್ಟ್ರಸಂಘವು ಸೂಚನೆಗಳನ್ನು ಧಿಕ್ಕರಿಸಿದ್ದಲ್ಲಿ ನಾವು ರಾಷ್ಟ್ರಸಂಘಕ್ಕೆ ದೂರ' ಈ ರೀತಿಯಾಗಿ ದೊಡ್ಡಸ್ತನದ ಮಾತುಗಳನ್ನು ಮಿ| ಈಡನ್‌ರವರು ಉಚ್ಚರಿಸಿದರಂತೆ ಪ್ರಕಟವಾಗಿದೆ. ಮುಸೊಲಿನಿಯವರು ಉದ್ಧಟತನದಿಂದ ಕಳೆದ ಶನಿವಾರ [illegible] ಸೇರಿದ ಪ್ರಜಾಪ್ರಾತಿನಿಧಿಕ ಸಭೆಯಲ್ಲಿ ಆರ್ಭಟದಿಂದ ಭಾಷಣ ಮಾಡಿದ್ದರು, ಬ್ರಿಟಿಶ ವಿದೇಶ ಇಲಾಖೆಯ ಪ್ರಧಾನರಾದ ಹೋರರವರಿಗೆ ಹೇಳಿದ್ದರು, ಇದು ಸಂಗ್ರಾಮೋತ್ತೇಜಕ ಭಾಷಣವೆಂದು ಸುದ್ದಿಗಾರರು ಪ್ರಕಟಿಸಿದ್ದರು. ಆದೇ ಮುಸೊಲಿನಿಯವರ ಕಡೆ ಬುಧವಾರ ಮಧ್ಯಸ್ಥಿಕೆಯ ಪತ್ರಿಕೆಯನ್ನು ಫ್ರೆಂಚ-ಬ್ರಿಟಿಶ ರಾಯಭಾರಿಗಳು ಒಪ್ಪಿಸಲು, ವಿಚಾರ ಮಾಡುವೆವಾಗಿಯೂ, ಮಧ್ಯಸ್ಥಿಕೆಯ ಪ್ರಯತ್ನ ಸ್ತುತ್ಯವಿರುವದಾಗಿಯೂ, ಸೂಚನೆಗಳಲ್ಲಿ ಇನ್ನೂ ತಿದ್ದುಪಡಿಯಾಗಬೇಕಾಗಿಯೂ, ಇಟಾಲಿಯವರಿಗೆ ಇನ್ನೂ ಅನುಕೂಲತೆಗಳು ದೊರೆಯಬೇಕಾಗಿಯೂ ನುಡಿದರಂತೆ! ಟಿಗ್ರೇ-ದನಕಾಲಿ ಪ್ರದೇಶಗಳನ್ನು ಒಪ್ಪಿಸುವದರಿಂದ ಎರಿಟ್ರಿ ವಸಾಹತಿಗೆ ಭದ್ರತೆ ದೊರಕಿ ಹೆಚ್ಚುಮಟ್ಟಿಗೆ ೧೦ ಲಕ್ಷ ಲೋಕಸಂಖ್ಯೆಯು ಇಟಾಲಿಯ ವಶವಾಗುವದು. ಟಿಗ್ರೇ ಪ್ರಾಂತದಲ್ಲಿ ಬೇಸಾಯ ಮಾಡಲಿಕ್ಕೆ ಒಳ್ಳೇ ಅನುಕೂಲತೆ ಇದ್ದು ಅರ್ಧ ಲಕ್ಷ ಇಟಾಲಿಯರನ್ನು ಅಲ್ಲಿ ತಂದಿಡಬಹುದು. ವರ್ಷಾಸನ ೩೫ ಲಕ್ಷ ವಸೂಲಿನ ಇಟಾಲಿ ಸರಕಿಗೆ ಗಿರಾಕಿ ದೊರೆತಂತಾಗುತ್ತದೆ. ಪೋಟ್ಯಾಶ್ ಯಾನೆ ಮರದ ಉಪ್ಪು ದನಕಾಲಿ ಮರುಭೂಮಿಯಲ್ಲಿ ವಿಪುಲವಾಗಿ ದೊರಕುತ್ತದೆ. ಇದರ ಪ್ರಯೋಜನ ಬಹಳ. ಮೇಲಾಗಿ ಇವೆರಡೂ ಪ್ರದೇಶಗಳು ಎರಿಟ್ರಿಗೆ ಜೋಡಿಸುವದರಿಂದ ದೇಶರಕ್ಷಣೆಯ ಬಂದೋಬಸ್ತನ್ನು ಚನ್ನಾಗಿ ಇಡಬಹುದು. ಎರಿಟ್ರಿ ದೇಶದ ಆಡಳಿತೆ ಖರ್ಚು, ಅಂದರೆ ಪೋಲೀಸ ಖರ್ಚು, ಸೈನ್ಯ ಖರ್ಚು ಇಟಾಲಿ ಸರಕಾರಕ್ಕೆ ಕೈಯಿಂದ ಹೋಗುತ್ತದೆ. ಟಿಗ್ರೇ-ದನಕಾಲಿ ಪ್ರದೇಶಗಳು ಕೈವಶವಾದಲ್ಲಿ ಇಟಾಲಿ ಸರಕಾರಕ್ಕೆ ಸಂಪತ್ತಿನ ಭಂಡಾರ ದೊರಕಿದಂತೆಯೇ! ಎರಿಟ್ರಿಯೊಳಗಿನ ಮಸುವಾ ಬಂದರ ಒಳ್ಳೇ ಊರ್ಜಿತಾವಸ್ಥೆಗೆ ತಲ್ಪಿ ಇಟಾಲಿದೇಶ ಸಂಪನ್ನವಾಗುವದು, ಭದ್ರವಾಗುವದು. ಇದಕ್ಕಾಗಿಯೇ ಮುಸೊಲಿನಿಯವರು ಈವಾಗ ಸಂಧಿ ವಿಚಾರ ಮಾಡಿ ತಿಳಿಸುತ್ತೇವಾಗಿ ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಬಸಿ ಒಡೆಯರು ಇದಕ್ಕೆ ಎಷ್ಟಕ್ಕೂ ಒಪ್ಪುವದಿಲ್ಲ. ಈವೀಗಲೇ ಮಧ್ಯಸ್ಥಿಕೆಯನ್ನು ಅವರು ತಿರಸ್ಕಾರಪೂರ್ವಕ ಧಿಕ್ಕರಿಸಿದಂತೆ ಪ್ರಕಟವಾಗಿದೆ. ಹೋರ-ಲಾವಲ್‌ರವರ ಸಂಭಾಷಣವಾಗಿ ಹಬಸಿ ದೇಶದ ಪಾಲುಪಟ್ಟಿ ನಿಶ್ಚಯವಾದ ಬಳಿಕ ಲಾವಲ್‌ರವರು ಹಬಸಿ ದೇಶದ ರಾಯಭಾರಿಗಳಾದ ಮಿ| ವೊಲ್ಡೆಮಾರಿಯಮ್‌ರವರಿಗೆ ಕರಿಸಿ ವಿಚಾರಿಸಿದರು. "ರಾಷ್ಟ್ರಸಂಘದವರು ಹಬಸಿ ದೇಶದ ಮೇಲೆ ಇಟಾಲಿಯವರು ಬಲಾತ್ಕಾರ ಮಾಡುತ್ತಾರಾಗಿ ಅಭಿಪ್ರಾಯಪಟ್ಟು ಇಟಾಲಿ ಲೋಕಕಂಟಕನೆಂದು ಸಾರಿದ್ದಾರೆ. ಅಂಥ ಲೋಕಕಂಟಕರಿಗೆ ಯಾವದೇ ಪ್ರಕಾರ ಪ್ರಯೋಜನವಾಗುವ ಸೂಚನೆಗಳನ್ನು ನಾವು ಮನ್ನಿಸಲಾರೆವು. ಹಬಸಿ ದೇಶದ ಪ್ರದೇಶವನ್ನು, ಸಾರ್ವಭೌಮತ್ವವನ್ನೂ ರಾಷ್ಟ್ರಸಂಘವು ಮನ್ನಿಸಿದೆ. ಅದಕ್ಕೆ ಕುಂದು ತರುವಂಥ ಸೂಚನೆಗಳನ್ನು ನಾವು ಮನ್ನಿಸೆವು. ರಾಷ್ಟ್ರಸಂಘಕ್ಕೆ ತಿರಸ್ಕರಿಸಿ ಬಾಹುಬಲದಿಂದ ದುರ್ಬಲ ರಾಷ್ಟ್ರಕ್ಕೆ ಅಪಚಾರ ಮಾಡಲೆತ್ನಿಸುವವರಿಗೆ ನಾವು ತಲೆಬಗ್ಗಿಸಲಾರೆವು." ಎಂಬದಾಗಿ ಹಬಸಿ ರಾಯಭಾರಿಗಳು ಲಾವಲ್‌ರವರಿಗೆ ನಿರ್ದಾಕ್ಷಿಣ್ಯದಿಂದ, ನಿರ್ಧಾರದಿಂದ ಹೇಳಿದರು. "ಕೊಂಚ ಪ್ರದೇಶವನ್ನಾದರೂ ಇಟಾಲಿಗೆ ಒಪ್ಪಿಸುವ ಪ್ರಸಂಗದಲ್ಲಿ ಲೋಕಕಂಟಕನಿಗೆ ಇದಿರಾಗಿ ಒಬ್ಬೊಂಟಿಗ ಹಬಸಿ ಪ್ರಾಣಿ ಜೀವಂತ ಇರುವ ತನಕ ಜೀವದ ಪರಿವೆ ಬಿಟ್ಟು ಹೋರಾಡುವೆವು. ಹೊರತು ಸ್ವಸಂತೋಷದಿಂದ ಸ್ವದೇಶದ ಭಾಗವನ್ನು ನಾವು ಒಪ್ಪಿಸಲೊಪ್ಪುವೆವೆಂಬ ಮಾತು ಅಶಕ್ಯವಿದೆ." ಈ ಪ್ರಕಾರ ಹಬಸಿ ರಾಯಭಾರಿಗಳು ಪತ್ರಿಕಾ ಪ್ರತಿನಿಧಿಗಳ ಬಳಿ ಗಾಂಭೀರ್ಯದಿಂದ, ಸಾತ್ವಿಕ ಉದ್ವೇಗದಿಂದ, ಸುಧಾರಿಸಿದ ರಾಷ್ಟ್ರಗಳ ಮುತ್ಸದ್ದಿಗಳ ಕುಟಿಲನೀತಿಗೆ ಹೇಸಿ, ಉದ್ಗರಿಸಿದ್ದಾರೆ. ಹಬಸಿ ರಾಷ್ಟ್ರ ಸೈನ್ಯ ಸಾಹಿತ್ಯದಿಂದ, ಚತುರಂಗಬಲದಿಂದ, ತೋಪು-ತುಪಾಕಿಗಳಿಂದ, ಮದ್ದು-ಗುಂಡಿನಿಂದ ದುರ್ಬಲವಿದ್ದಾಗ್ಯೂ ಮನಸ್ಸಿನಿಂದ ಪ್ರಬಲವಾದದ್ದಿದೆ. ಬಾಹ್ಯ ಆಡಂಬರಕ್ಕೆ, ಪಶುಬಲಕ್ಕೆ ಬೆದರಿ ಸ್ವದೇಶ ಸ್ವಾತಂತ್ರ್ಯ ಕಳಕೊಳ್ಳಲು ಎಷ್ಟು ಮಾತ್ರವೂ ಸಿದ್ಧವಿಲ್ಲ. ಸುಧಾರಣೆಯ ಶಿಖರವನ್ನೇರಿದ, ಲೋಕತುಂಬ ಸುಧಾರಣೆಯ ಸಂದೇಶ ಬೀರಿ ಜಗದುದ್ಧಾರ ಮಾಡಲು ಟೊಂಕ ಕಟ್ಟಿದ ಮುತ್ಸದ್ದಿಗಳ ಸತ್ವಪರೀಕ್ಷೆಯನ್ನು ಮಾಡಲು ಕಾಡು-ಕಪ್ಪು ಜನಾಂಗವೆಂದು ಲೋಕದಲ್ಲಿ ಹೀನಾಯಿಸಲ್ಪಡುವ ದುರ್ಬ

ಲ ಹಬಸಿ ರಾಷ್ಟ್ರವು ಪ್ರಾಣದ ಹಂಗೆಯಿಲ್ಲದೆ ಎದೆಗಟ್ಟಿ ಮಾಡಿ ನೆಟ್ಟಗೆ ನಿಂತಿದೆ. ಹೋರ್‌ನ್-ಲಾವಲ್‌ರವರು ಜಿನೆವಾದಲ್ಲಿ ಈ ಪ್ರವೃತ್ತಿ ನೋಡಿ ವ್ಯಗ್ರರಾಗಿದ್ದಾರೆ. ಲಾವಲ್-ಈಡನ್‌ರವರು ಪಾರೀಸ ಪಟ್ಟಣದಿಂದ ಜಿನೆವಾಕ್ಕೆ ಬರುವ ತನಕ ಉಗಿಬಂಡಿಯಲ್ಲಿ ಗುಪ್ತಾಲೋಚನೆ ಮಾಡಿದರು. ಜಿನೆವಾದಲ್ಲಿಯೂ ಆಪ್ತಾಲೋಚನೆ ನಡಿಸಿದ್ದಾರೆ. ಮುಸೋಲಿನಿಯವರು ಸಾಮರ್ಥ್ಯವಂತರು, ಅವರಿಗೆ ಮನವೊಲಿಸಿಕೊಳ್ಳಬೇಕಾಗಿ ಲಾವಲ್‌ರವರ ಸಾಧನೆ. ದುರ್ಬಲ ಹಬಸಿ ಜನಾಂಗ ತಮ್ಮಂಥ ಸಮರ್ಥ ಜನಾಂಗಗಳಿಗೆ ಇದಿರಾಗಲು ಧೈರ್ಯತಳೆದುದು ಎಂಬದೇ ಬ್ರಿಟಿಶ-ಫ್ರೆಂಚ ಮುತ್ಸದ್ದಿಗಳ ಎಣಿಕೆ ಇತ್ತು ಹಾಗೆಯೇ ಎಣಿಸಿ ಚೇಂಬರಲೇನರವರು ಬ್ರಿಟಿಶ ಪಾರ್ಲಿಮೆಂಟನಲ್ಲಿ ಭಾಷಣ ಮಾಡಿದ್ದಾರೆ. "ಬ್ರಿಟಿಶ-ಫ್ರೆಂಚರು ಸೂಚಿಸಿದ ಮಧ್ಯಸ್ತಿಕೆಗೆ ಮುಸೋಲಿನಿಯವರು ಒಡಂಬಟ್ಟು, ಹಬಸಿ ಸರಕಾರ ಒಪ್ಪದಿದ್ದರೆ ರಾಷ್ಟ್ರಸಂಘವು ಈ ಇಟಾಲಿ-ಹಬಸಿ ವಾದದೊಳಗಿಂದ ಮೈತೆಗೆದುಕೊಂಡು ಬಿಡುವದು." ಇದರ ಅರ್ಥವೇನಂದರೆ— ಮುಸೋಲಿನಿಯವರಿಗಾಗಿಯೇ ಒಡಂಬಡಿಕೆ ದೊರತು ಹಬಸಿ ಜನಾಂಗದ ಕಲ್ಯಾಣವನ್ನಾಗಲಿ, ರಕ್ಷಣೆಯನ್ನಾಗಲಿ ಬ್ರಿಟಿಶ ಮುತ್ಸದ್ದಿಗಳು ವಿಚಾರಿಸುವದಿಲ್ಲವಾಗಿ ಇದರ ಮೇಲಿಂದ ಸ್ಪಷ್ಟವಾಯಿತು. ಲೋಕಕಂಟಕನೆಂದು ಮುಸೋಲಿನಿಯವರಿಗೆ ಹಳಿದು ಶಾಸನಕ್ರಮದ ವಿಚಾರ ನಡಿಸಿ ಪುನಃ ಅವರ ಮನವೊಲಿಕೆಗಾಗಿಯೇ ಮಧ್ಯಸ್ತಿಕೆ ನಡೆಯುತ್ತದಾದ ಬಳಿಕ, ಆ ಮಧ್ಯಸ್ತಿಕೆಗೆ ಒಪ್ಪಬೇಕಾಗಿ ಹಬಸಿ ಜನಾಂಗದ ಮೇಲೆ ಒತ್ತಾಯವಾಗುತ್ತದಾದ ಬಳಿಕ, ಲೋಕಕಂಟಕನಿಗೆ ರಾಷ್ಟ್ರಸಂಘವು ಪುರಸ್ಕಾರ ಮಾಡುತ್ತದೆಂದು ಸಿದ್ಧವಾಗುತ್ತದಲ್ಲವೇ? ರಾಷ್ಟ್ರಸಂಘವು ಲೋಕಕಂಟಕತನವನ್ನು ನಿರ್ಬಂಧಿಸಲು ಜನ್ಮವನ್ನೆತ್ತಿದೆ ಅದೇ ಆತ್ಮಹತ್ಯ ಮಾಡಿಕೊಳ್ಳುತ್ತದೇನೆಂಬುದನ್ನು ನೋಡಬೇಕಾಗಿದೆ. ಹಬಸಿ ದೇಶದ ಪ್ರದೇಶವನ್ನು ಇಟಾಲಿಗೊಪ್ಪಿಸುವ ಯಾವದೇ ಮಧ್ಯಸ್ತಿಕೆಗೆ ಹಬಸಿ ಸರಕಾರದ ಒಪ್ಪಿಗೆಯಿಲ್ಲ ಹಬಸಿ ಪ್ರದೇಶ ಪಡೆದತನಕ ಮುಸೋಲಿನಿಯವರಿಗೆ ಸಮಾಧಾನವಿಲ್ಲ. ಅಂದಬಳಿಕ ಮಧ್ಯಸ್ತಿಕೆಯ ಗೋಜನ್ನೇ ನಾನು ಇಷ್ಟಕ್ಕೇ ಬಿಟ್ಟು ಹಬಸಿ ದೇಶದ ಈಗಿನ ಯುದ್ಧ ವಾರ್ತೆಗಳನ್ನು ವಿವರಿಸಬಯಸುತ್ತೇನೆ.

ಮಧ್ಯಸ್ತಿಕೆ ವಿಚಾರ ನಡಿಸುತ್ತಿರುವಾಗಲೇ ಬ್ರಿಟಿಶರು ಯುದ್ಧ ತಯಾರಿಯನ್ನೂ ನಡಿಸುತ್ತಿದ್ದಾರೆ. ವೈಮಾನಿಕ ದಲವನ್ನು ಘಟಿಸುವದಕ್ಕಾಗಿ ವಿಮಾನ ಇಲಾಖೆಯವರು ಬಳ್ಳೇ ತಯಾರಿ ನಡಿಸಿದ್ದಾರೆ ತರತರದ ವಿನಾಶಕ ಯಂತ್ರಗಳೂ, ದ್ರವಗಳೂ ತಯಾರಾಗುತ್ತಿವೆ. ಬೋಲ್ಟನ್ ಪೊಲ ಕಂಪನಿಯಲ್ಲಿ ಗುಪ್ತವಾಗಿ ಯುದ್ಧ ಸಾಮಗ್ರಿಗಳು ತಯಾರಿಸಲ್ಪಡುತ್ತವಾಗಿ ಲಂಡನಿನ 'ಸಂಡೇ ರಿಫರಿ' ಪತ್ರಿಕೆಯ ಸ್ವಂತ ಪ್ರತಿನಿಧಿಗಳು ಪ್ರಕಟಿಸುತ್ತಾರೆ. ಕಾರಖಾನೆಯಲ್ಲಿ ನಡೆಯುವ ಓಘಗಳನ್ನು ಬಹಿರಂಗಗೊಳಿಸದಂತೆ ೧೨೦೦ ಮಂದಿ ಮುಖ್ಯ ಮುಖ್ಯ ಕೆಲಸಗಾರರ ಕಡೆಯಿಂದ ಪ್ರತಿಜ್ಞೆಗಳು ಕೊಳ್ಳಲಾಗಿವೆ. ಇಜಿಪ್ತದೊಳಗಿನ ರಾಷ್ಟ್ರೀಯಪಕ್ಷದವರಿಗೆ ಸಾಮ್ರಾಜ್ಯಸರಕಾರವು ಧಿಕ್ಕರಿಸಿ ೧೯೩೦ನೇ ಇಸ್ವಿಯ ರಾಜ್ಯಘಟನೆಗೆ ತಡೆ ಹಾಕಿತ್ತು. ವಿದ್ಯಾರ್ಥಿಗಳ ಬಂಡಾಯದಿಂದಲೋ ಸಮಸ್ತರ ಐಕ್ಯಮತ್ಯದಿಂದಲೋ ಆ ರಾಜ್ಯಘಟನೆ ಪ್ರಚುರಗೊಳಿಸಬೇಕಾಗಿ ಈಗ ರಾಜಾಜ್ಞೆ ಹೊರಟಿದೆ. ವಿದೇಶ ಇಲಾಖೆಯ ಪ್ರಧಾನರಾದ ಸರ್ ಸಮ್ಯುಎಲ್ ಹೋರರವರು ಈ ರಾಜ್ಯಘಟನೆಯನ್ನು ರದ್ದುಪಡಿಸಿದ ಭಾಷಣ ಮಾಡಿ ಒಂದು ತಿಂಗಳಾಗಲಿಲ್ಲ ಅಷ್ಟರಲ್ಲಿ ಆ ರಾಜ್ಯಘಟನೆಯನ್ನು ಪ್ರಚುರಗೊಳಿಸುವ ಪ್ರಕಟನೆ ಹೊರಟಿದೆ. ಇಜಿಪ್ತ ದೇಶವನ್ನು ಈವಾಗ ಸಂತೃಪ್ತಪಡಿಸದಿದ್ದಲ್ಲಿ, ಮುಂದೆ ಯುದ್ಧವೆಸಗಿದ್ದಲ್ಲಿ ಸ್ಥಿತಿ ಕಠಿಣವಾಗುವದಾಗಿ ಎಣಿಸಿ ಪಟ್ಟದ ರಾಜ್ಯಘಟನೆಯ ಪುನರುಜ್ಜೀವನವಾಗಿರುವದಾಗಿ ನಾನು ತಿಳಿಯುತ್ತೇನೆ. ಚೀನ-ಜಪಾನ ಪ್ರಕರಣವೂ ಗಡುಚಾಗುತ್ತ ನಡೆದಿದೆ. ಬ್ರಿಟಿಶ ಜಪಾನ ದೇಶಗಳೊಳಗೆ ಕಲಹವಾಗುವ ಲಕ್ಷಣಗಳು ತೋರಿಬರುತ್ತಿವೆ ಇದನ್ನೂ ಇಂದಿಗೇ ವಿವರಿಸಿಬಿಡಬೇಕೆಂದು ನನಗೆ ಅನಿಸಿತ್ತು. ಆದರೆ ಬ್ರಿಟಿಶ ಫ್ರೆಂಚರ ಸಂಧಾನದ ಚರ್ಚೆಯಲ್ಲಿಯೇ ಸ್ಥಳ ವ್ಯಾಪಿಸಿ ಹೋದ್ದರಿಂದ ನನ್ನ ನಿರುಪಾಯವಾಗಿದೆ ಓದುಗರು ಬೇಸರಾಗಬಾರದು.

ರಣಕ್ಷೇತ್ರದ ಮೇಲಿನ ಹೋರಾಟದ ವಾರ್ತೆಗಳು ಈ ವಾರದಲ್ಲಿ ವಿಶೇಷ ಬರಲಿಲ್ಲ ಉತ್ತರ ಪಾರ್ಶ್ವದಲ್ಲಿ ವಿಮಾನಗಳ ಮೇಲಿಂದ ಇಟಾಲಿಯವರು ಬಾಂಬುಗಳನ್ನೊಗೆದು ಆಸ್ಪತ್ರೆಗಳನ್ನು ಸಹ ಹಾಳುಗೆಡಹುವರು ಗೋಂಡರದ ಮೇಲೆಯೂ ಬಾಂಬುಗಳು ಒಗೆಯಲ್ಪಟ್ಟವು ಅನೇಕ ನಿರುಪದ್ರವಿ ಹಳ್ಳಿಗರು ಬಲಿಬಿದ್ದರು ಗ್ರಾಮನಿವಾಸಿಗಳನ್ನೂ, ಚಿಕಿತ್ಸಾಲಯಗಳನ್ನೂ ಹಾಳುಗೆಡಹುವದು ಯುದ್ಧನೀತಿಯಲ್ಲವಾಗಿ ಬಾದಶಹರು ರಾಷ್ಟ್ರಸಂಘದ ಕಡೆ ದೂರಿಕೊಂಡಿದ್ದಾರೆ. ಡೆಸ್ಸಿ ಪಟ್ಟಣಕ್ಕೆ ಬಾದಶಹರು ಹೋಗಿದ್ದರು ಈ ಸಂಧಿ ಸಾಧಿಸಿ ಇಟಾಲಿಯ ವಿಮಾನಗಳು ತಂಡುಗಟ್ಟಿ ಹೋಗಿ ಬಾಂಬುಗಳ ಸುರಿಮಳೆಗರೆದವು, ಚಿಕಿತ್ಸಕ ಅಧಿಕಾರಿಗಳಿಗೂ, ಇತರ ೨೦೦ ಮಂದಿ ಜನರಿಗೂ ಬಳ್ಳೇ ಘಾಯಗಳಾಗಿವೆ ಅವರು ಪ್ರಾಣಾಂತಿಕ ಅವಸ್ಥೆಯಲ್ಲಿದ್ದಾರಾಗಿ ಹೇಳುತ್ತಾರೆ ೪೨ ಮಂದಿಗಳು ತೀರಿಕೊಂಡರು ಮಕಾಲೆಯ ಸುತ್ತುಮುತ್ತು ರಾಸ ಸೆಯೂಮರವರು ತಳವೂರಿಕೊಂಡಿದ್ದಾರೆ ರಾತ್ರಿ ಇಟಾಲಿಯ ಸೈನಿಕರ ಮೇಲೆ ಸಾಗಿ ಹೋಗಿ ಅವರಿಗೆ ಕೊಲ್ಲುತ್ತಾರೆ. ಒಂದು ದಿವಸ, ಇನ್ನೊಂದು ದಿನ ೩ ಹೀಗೆ ೭ ಜನರು ಗುಂಡು ತಾಗಿ ಮಡಿದರು ಇಟಾಲಿಯವರು ಈ ಉಪದ್ರವ ತಾಳಲಾರದೆ ಓಡಿಹೋದರು ಮಕಾಲೆಯ ಬಳಿ ಹಬಸಿ ಸೈನಿಕರಿಗೆ ಆಹಾರ ಸಾಮಗ್ರಿಗಳ ಕೊರತೆ. ಡೆಸ್ಸಿಯೊಳಗೆ ತುಂಬಾ ಕಾಳು-ಕಡಿಯಿದೆ ಅಲ್ಲಿಂದ ರಾಸ ಸೆಯೂಮ ಸೇನಾಪತಿಗಳಿಗೆ ಅವಶ್ಯವುಳ್ಳಷ್ಟು ಆಹಾರ ಸಾಮಗ್ರಿಯನ್ನು ಪೂರೈಸುವದಕ್ಕಾಗಿ ಡೆಜ್ಜಾಕ್ಮೈಜ್‌ರವರಿಗೆ ನೇಮಿಸಲಾಗಿದೆ ಹವಾಶ ನದಿಯ ಮೇಲಿರುವ ಅವಾಶ ರೇಲ್ವೆ ಸ್ಟೇಶನದಲ್ಲಿ ೪ ಮಂದಿ ಇಟಾಲಿ ಪಾದ್ರಿಗಳು ಸಂಕ ಮುರಿಯುವ ಆಲೋಚನೆಯಲ್ಲಿದ್ದರೆಂತ ತೋರುತ್ತದೆ ಸಂದೇಹದ ಮೇಲೆ ಅವರಿಗೆ ಹಿಡಿದು ಅಡೀಸ ಅಬಾಬಾಕ್ಕೆ ರವಾನಿಸಲಾಗಿದೆ ಅವರ ಕಡೆ ಉಡಿಗೆಯಲ್ಲಿ ಅಡಗಿಸಿದ ೨೫೦ ಪವನುಗಳು ದೊರೆತವು. ಇಟಾಲಿಯವರು ಮಕಾಲೆಯನ್ನು ಬಿಟ್ಟು ಹಿಂಜರಿದರಾಗಿ ಜಿಬುಟಿಯಿಂದ ಡೆರೆದೊವಾಕ್ಕೆ ಹೋದ ಯುರೋಪಿಯನ್ ಪ್ರವಾಸಿಯು ಅಂಬೋಣ. ಆ ಹಾದಿ ಮುಂದರಿಯಲಿಕ್ಕೆ ಯೋಗ್ಯವಲ್ಲೆಂದು ತಾವು ಬಿಟ್ಟು ಹಿಂಜರಿದೆವಾಗಿ ಇಟಾಲಿ ಪಕ್ಷದ ಅಂಬೋಣ. ಇಟಾಲಿ ಸೈನಿಕರು ಡೆಸ್ಸಿ ಮಾರ್ಗದಿಂದಲೂ ಡೆಬ್ರಾಟಬೋರ ಮಾರ್ಗದಿಂದಲೂ ಅಡಿಸ ಅಬಾಬಾ ಪಟ್ಟಣದ ಮೇಲೆ ಸಾಗಿ ಹೋಗಲು ಹವಣಿಸುತ್ತಿದ್ದಾರೆ ಡೆಸ್ಸಿಯಾಗಲಿ ಡೆಬ್ರಾಟಬೋರಾಗಲಿ ಇಟಾಲಿಯ ಕೈವಶವಾದರೆ ಅಡೀಸ ಅಬಾಬಾ ಪಟ್ಟಣವು ಕೈವಶವಾದಂತೆಯೇ! ಆದರೆ ಇವೆರಡೂ ಪಟ್ಟಣಗಳು ಕೈವಶವಾಗುವದು ಬಲು ಕಠಿಣ! ಡೆಬ್ರಾಟಬೋರ ಪಟ್ಟಣವು ಗುನಾ ಪರ್ವತದ ಅಡಿಗಿದೆ. ಉತ್ತರ ಹಬಸಿ ದೇಶದ ಮುಖ್ಯಸ್ಥಾನವಿದು ಚಿಕ್ಕ ಪಟ್ಟಣವಾದರೂ ಬಳ್ಳೇ ಸುರಕ್ಷಿತವಿದೆ ಇಲ್ಲಿ ಭದ್ರವಾದ ಕೋಟೆ ಕಟ್ಟಿದ್ದಾರೆ ಬಂಡೆಗಲ್ಲು ಕೊರೆದು ಮದ್ದು-ಗುಂಡುಗಳನ್ನಿಡಲು ದೊಡ್ಡ ದೊಡ್ಡ ಗುಹೆಗಳು ಕಟ್ಟಲ್ಪಟ್ಟವೆ ವೈಮಾನಿಕ ಠಾಣ್ಯವಿದೆ, ಟೆಲಿಫೋನವಿದೆ. ನಾಲ್ಕಾರು ವಿಮಾನಗಳು ಮದ್ದು-ಗುಂಡು, ಔಷಧ ಸಾಮಗ್ರಿ, ಸೈನಿಕರನ್ನು ತುಂಬಿಕೊಂಡು ಬರುತ್ತಿವೆ ಸಿಲವೆಸ್ಟ್ರಿ ಎಂಬ ಇಟಾಲಿಯನು ಇಲ್ಲಿ ಗ್ರೀಸ ದೇಶದವರ ವೇಷತಾಳಿ ೭-೮ ತಿಂಗಳು ಗವರ್ನರರ ಅತಿಥಿಯಾಗಿ ಉಳಿದು ಹೆಸರನ್ನು ಸಹ ಬದಲಿಸಿಕೊಂಡು ಸಂಚರಿಸುತ್ತಿದ್ದರು ಅವರು ಈ ಕೋಟೆಯ ಯಾವತ್ತೂ ಮಾಹಿತಿಯನ್ನು ಪಡೆಕೊಂಡರು ಸೇನಾಪತಿಗಳಾದ ಫಿಕೋರಾಯವರು ಇವರ ಗುರುತು ಹಿಡಿದು ಸೆರೆಹಿಡಿದಿಟ್ಟರು ಬಾದಶಹರು ಇವರಿಗೆ ವಿಚಾರಣೆ ಮಾಡಬೇಕಾಗಿ ಅಡಿಸ ಅಬಾಬಾದಿಂದ ಹುಕುಮು ಹೊರಡಿಸಿದೊಡನೆ ಇವರು ಬಿಡುಗಡೆ ಮಾಡಲ್ಪಟ್ಟರು. ಇವರಿಗೆ ಬಿಡುಗಡೆಯಾದ ಕೆಲ ದಿನಗಳಲ್ಲಿಯೇ ಈಗಿನ ವಾದಪ್ರಾರಂಭವಾಗಿ ಯುದ್ಧ ಸಂಭವಿಸಿತು " ಈ ಕೋಟೆ ತೀರ ಭದ್ರವಿದೆ ಇದನ್ನು ಕೈವಶ ಮಾಡಿಕೊಳ್ಳುವದು ಕಷ್ಟ. ಇದೆಂದೂ ಬೀಳದು. ಮಳೆಗಾಲದ ತನಕ ಈ ಕೋಟೆಯ ಸುತ್ತುಮುತ್ತು ನಾವು ಹೋರಾಡಬೇಕು ಮಳೆ ಬಿದ್ದೊಡನೆ ನಮ್ಮ ಅವಸ್ಥೆಯೇನೆಂಬದು ಶ್ರೀದೇವರಿಗೇ ಗೋಚರ " ಈ ಪ್ರಕಾರ ಅಭಿಪ್ರಾಯಪಡುತ್ತಾರಾಗಿ ಪ್ರಕಟವಾಗಿದೆ. ಡೆಸ್ಸಿ ಮಾರ್ಗವೂ ಇದಕ್ಕೂ ಕಠಿಣ ಎರಿಟ್ರಿಯೊಳಗಿನ ಅಸ್ಸಬ ಬಂದರದೊಳಗಿಂದ ದನಕಾಲಿ ಮಾರ್ಗವಾಗಿ ಡೆಸ್ಸಿಗೆ ತಲ್ಪಲು ಸುಲಭವೆಂದು ಕಾಣುತ್ತದೆ ದನಕಾಲಿ ಜನರು ಭಯಂಕರ ಹುಲಿ, ಚಿರ್ತೆ, ನರಿ ಮುಂತಾದ ಕಾಡು ಪಶುಗಳು ತುಂಬಿ ತುಳುಕುತ್ತಿವೆ ಆದರೆ ಹಾದಿ ನೆಟ್ಟಗಿದ್ದು ಸಹಜ ತಲ್ಪಬಹುದೆಂಬ ಮೋಹವಾಗುತ್ತದೆ ಇಟಾಲಿಯವರು ಮೋಟಾರುಗಳಿಂದ ಸಂಚಾರಕ ತೋಫುಗಳಿಲ್ಲದೆ ಮುಂದರಿದರು ಹವಾಶ ನದಿಯ ಗುಂಟ ಇವರು ಕೂಚು ಮಾಡಲಾರಂಭಿಸಿದರು ತಾಸಿಗೆ ೨೦-೩೦ ಮೈಲಿನಂತೆ ಓಡುತ್ತಿದ್ದರು ಆದರೆ ಬಹು ಕಾಲ ಓಡಲಾಗಲಿಲ್ಲ ಇದು ಉಷ್ಣ ಕಟಿಬಂಧದೊಳಗಿನ ಪ್ರದೇಶ. ಉಷ್ಣತೆ ೧೨೦ ಅಂಶಕ್ಕೇರಿತು ತೋಫುಗಳ ಒಳಗಿದ್ದವರು ಹೊರಬರಬೇಕಾಯಿತು ನೀರು ಎಲ್ಲಿಯೂ ಇಲ್ಲ ಮೋಟಾರಿಗೂ ಇಲ್ಲ, ಜನರಿಗೂ ಇಲ್ಲ. ಏಡನ್, ಸೂಡಾನ ಬಂದರಿಂದ ನೀರು ಬರಬೇಕು ಒಂದೇ ದಿನದಲ್ಲಿ ಪ್ರಯಾಣ ನಿಂತಿತು ಹವಾಶ ನದಿಯು ಹರಿಯುವ ನಮೂನೆ ಬಹು ವಿಚಿತ್ರವಿದೆ ದಕ್ಷಿಣ ಪಾರ್ಶ್ವದಿಂದ ನದಿ ಅಭಾಟದಿಂದ ಹರಿದು ಬರುತ್ತದೆ ದನಕಾಲಿ ಮರುಭೂಮಿ ಸೇರಿದೊಡನೆ ಅಭಾಟವೆಲ್ಲ ಕ್ರಮವಾಗಿ ಕಡಿಮೆಯಾಗಿ ಮುಂದೆ ಇಡೀ ನದಿ ಅದೃಶ್ಯವಾಗುತ್ತದೆ. ನದಿಯ ಮೇಲೆ ನಂಬಿಗೆ ಇಟ್ಟು ಇಟಾಲಿಯನು ಸಾಗುತ್ತಿದ್ದರು ಒಂದು ದಿನ ಪ್ರಯಾಣ ಬೆಳಸಿದರೂ ನದಿ ಎಲ್ಲಿಯೂ ಕಾಣಸಲಿಲ್ಲ ದಣುವಾರಿಸಿಕೊಳ್ಳಲು ಮುಕ್ಕಾಮು ಮಾಡುವಷ್ಟರಲ್ಲಿ ದಕ್ಷಿಣ ಪಾರ್ಶ್ವದಿಂದ ನದಿಯಗುಂಟ ಹಬಸಿ ಸೈನಿಕರು ಸಾಗಿಹೋಗಿ ಮುತ್ತಿಗೆ ಹಾಕಿ ಇಟಾಲಿಯರಿಗೆ ಹೊಡೆದೋಡಿಸಿದರು. ಹಬಸಿ ಸೈನಿಕರು ನದಿಯ ಗುಣವು ಬದಿಯಿಂದ ಕೂಚು ಮಾಡುತ್ತಿದ್ದರಿಂದ ಅವರಿಗೆ ಬೇಕಷ್ಟು ನೀರಿನ ಪೂರೈಕೆ ಮಾಡಿಕೊಳ್ಳಲು ಬರುತ್ತಿತ್ತು ಆದಾಗ್ಯೂ ಇಟಾಲಿಯರಿಗೆ ಈ ದಾರಿಯ ಮೋಹ ಇಡದು ಡೆಸ್ಸಿಯಿಂದ ಅಡಿಸಅಬಾಬಾಕ್ಕೆ ಹೋಗಲು ಮಾರ್ಗ ಸಹ ಉಂಟು ಡೆಸ್ಸಿಗೆ ಮಕಾಲೆಪ್ರಾಂತದಿಂದ ತಲ್ಪಬೇಕಾದರೆ ಬೆಟ್ಟ-ಗುಡ್ಡ-ಕಂದರಗಳನ್ನು ದಾಟಬೇಕು ಅದು ಸಹಸಾ ಸಾಧ್ಯವಾದ ಮಾತಲ್ಲ ಆದರಿಂದ ದನಕಾಲಿ ಮರುಭೂಮಿಯ ಪಾರ್ಶ್ವದಿಂದಲೇ ಸಾಗಿಹೋಗಬೇಕಾಗಿ ಮತ್ತೂ ಆಲೋಚನೆ ನಡೆದಿದೆ ಅಲ್ಲಿಯೇ ಇಟಾಲಿಯ ಸೊಕ್ಕು ಮುರಿಯಬಹುದಾಗಿ ಸುದ್ದಿಗಾರರ ಅಂಬೋಣ. ಅದೇನಿದ್ದಾಗ್ಯೂ ಈಡನ-ಹೋರ-ಲಾವಲ್‌ರವರು ಮುಸೋಲಿನಿಯವರಿಗೆ ಸಂಗ್ರಾಮದ ಕಷ್ಟಕೊಳ್ಳಗೊಡದೆ ಆ ಪ್ರದೇಶವನ್ನು ಪಾರಿತೋಷಕ ಕೊಡುವ ಕಾರಸ್ಥಾನ ಹೂಡಿ ಹಬಸಿ ದೇಶಕ್ಕೆ ಉಪಕಾರ ಮಾಡುವ ಉಪಕ್ರಮವನ್ನು ಕೈಕೊಂಡಿದ್ದಾರೆ ಇದು ಶಾಸನವೇ, ಪಾರಿತೋಷಕವೇ? ಓದುಗರು ತಿಳಕೊಂಡರಾಯಿತು.

(ಈ ಹೊತ್ತಿನ ಪುರವಣಿ ನೋಡಿರಿ.)

ಸ್ಥಾನಿಕ ವೃತ್ತಾಂತ.

ಕುಮಟಾ— ಕಲ್ಯಾಣ ಶೆಟ್ಟಿಯ ನಿಧನ ಕಾರಣದ ಪತ್ತೆ ಇನ್ನೂ ಸಿಗಲಿಲ್ಲವು. ಪೋಲೀಸರು ಚೌಕಶಿ ನಡಿಸುತ್ತಿದ್ದಾರೆ. ನಿಧನವಾದ ಸುದ್ದಿ ತಿಳಿದೊಡನೆ ಪೋಲೀಸರು ಸಿವಿಲ್ ಸರ್ಜನರಿಗೆ ತರಿಸಿ ಮರಣೋತ್ತರ ಚೌಕಶಿ ನಡಿಸಿದ್ದಲ್ಲಿ ನಿಧನ ಕಾರಣವು ಶೀಘ್ರವೇ ತಿಳಿಯುತ್ತಿತ್ತಾಗಿ ಅನೇಕರ ಹೇಳಿಕೆ. ಶೀಘ್ರವೇ ಈ ಪ್ರಕರಣದ ಇತ್ಯರ್ಥ ವಾಗಬಹುದಾಗಿ ಹೇಳುತ್ತಾರೆ.

ಕಳೆದ ಸೋಮವಾರ ತಾ. ೯ನೇಗೆ ತಾಲೂಕ ಕಚೇರಿಯೊಳಗಿನ ಧಪೇದಾರ ಗೋಪಾಳನಿಗೆ ಹಿರ್ಶ ಡಿವ್ಹಿಜನ್ ಆಸಿಸ್ಟಂಟ ಕಲೆಕ್ಟರರು ಸಸ್ಪೆಂಡ ಮಾಡಿದ ಹುಕುಮು ಬಂದಂತೆ ಆತನು ಕೆಲಸದಿಂದ ಬಿಡುಗಡೆಯಾಗಿದ್ದಾನೆ. ಯಾವ ಮುದ್ದತಿಗಾಗಿ ಆಸಿಸ್ಟಂಟ ಕಲೆಕ್ಟರರು ಈ ಹುಕುಮು ಹೊರಡಿಸಿದರೆಂಬುದು ತಿಳಿಯುವದಿಲ್ಲ. ತಾಲೂಕ ಕಚೇರಿಯಿಂದ ಅಂತರಂಗ ಹೊರಬೀಳುವದಿಲ್ಲ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಉರುವಲ ಕಟ್ಟಿಗೆಯ ವ್ಯಾಪಾರಿಗಳೊಳಗೆ ಒಳ್ಳೇ ಮೇಲಾಟ. ಇಲ್ಲಿ ಸರಕಾರ ಕಟ್ಟಿಗೆ ಡಿಪೋ ಇದೆ. ಇನ್ನೊಬ್ಬರು ಕಟ್ಟಿಗೆ ತಂದು ಮಾರುತ್ತಾರೆ. ಬೇರೆ ಕಟ್ಟಿಗೆ ಸಿಲ್ಕು ಇಲ್ಲದಿದ್ದಲ್ಲಿ ಡಿಪೋದವನು ತನ್ನ ಧಾರಣೆಯನ್ನು ೯ ಆಣೆ ತನಕ ಏರಿಸುತ್ತಾರೆ. ಸಿಲ್ಕು ಇದ್ದರೆ ೪ ಆಣೆಗೂ ಮಾರುತ್ತಾರೆ. ಡಿಪೋದವರಿಗೆ ಬಿಕ್ರಿ ಮಾಡುವದಕ್ಕಾಗಿ ಜಂಗಲ ಖಾತೆಯವರು ಗೋಕರ್ಣ ಡಿಪೋ ಸದರ ರಸ್ತೆಯನ್ನು ಸಾಣಿಕಟ್ಟೆಯ ತನಕ ಬೆಳಿಸುತ್ತಾರೆ. ಸಾಣಿಕಟ್ಟೆಯವರು ಸಹ ಗೋಕರ್ಣ ಡಿಪೋದಿಂದ ಕಟ್ಟಿಗೆ ತರಬೇಕಾಗಬಹುದೇನು? ಜಿಲ್ಹಾಧಿಕಾರಿಗಳು ಈ ಗೊಂದಲವನ್ನು ಹರಿಸಬೇಕಾಗಿ ವಿನಂತಿ.

ಕಳೆದ ೭ನೇ ತಾರೀಖಿಗೆ ಪ್ರಕಟವಾದದ್ದು ಇಂಡಿಯಾ ಕೌನ್ಸಿಲ ಆಫ ಸ್ಟೇಟಿನ ಮತದಾರರ ಯಾದಿ. ಹೊರತು ಹೊಸ ರಾಜ್ಯ ಘಟನೆಯನ್ವಯ ಸ್ಥಾಪಿತವಾಗಲಿಕ್ಕಿದ್ದ ಪ್ರಾಂತಿಕ ಕಾಯಿದೆ ಕೌನ್ಸಿಲುಗಳದಲ್ಲ.

ಸಾಲಗಾರರ ಕಡೆಯಿಂದ ಬರಸಾಲ ಪರ ಶೇಕಡಾ ೬ ರಂತೆ ಬಡ್ಡಿ ಆಕರಿಸಿ ಸಾಲ ವಸೂಲ ಮಾಡುವ ಕುಮಟಾ ಅರ್ಬನ್ ಸಹಕಾರಿ ಬೇಂಕಿನವರ ಉಪಕ್ರಮ ಪ್ರಶಂಸನೀಯವಿದೆ. ಸಾಲಗಾರರು ತ್ವರ್ಯವೇ ಹಣದ ವ್ಯವಸ್ಥೆ ಮಾಡಿ ಸಾಲಗಳನ್ನು ತೀರಿಸಿ ಉಪಕ್ರಮದ ಪ್ರಯೋಜನ ಪಡೆಯತಕ್ಕದ್ದು. ಇನ್ನೂ ಅಡಚಣೆಯಿದ್ದಲ್ಲಿ ಬೇಂಕಿನವರ ಕಡೆ ತಮ್ಮ ಸ್ಥಿತಿ-ಗತಿಯನ್ನು ಅರಿಕೆ ಮಾಡಿಕೊಂಡು ಬಡ್ಡಿಯನ್ನು ಇಳಿಸಿಕೊಳ್ಳುವ ಇಲ್ಲವೆ ಸೂಟ ಪಡೆಯುವ ಪ್ರಯತ್ನ ಮಾಡತಕ್ಕದ್ದು. ಬೇಂಕಿನವರೂ, ಸಹಕಾರಿ ಖಾತೆಯವರೂ ಈಗಿನ ದಿನಮಾನ ವಿಚಾರ ಮಾಡಿ ಬೇಂಕಿನ ಭದ್ರತೆಗೆ ಭಂಗ ಬರದಂತೆ ಪರಮಾವಧಿಯ ಅನುಕೂಲತೆಗಳನ್ನು ಪೂರೈಸಬೇಕಾಗಿ ಸಂಸ್ಥೆಯ ಸ್ಥಳೀಕ ಹಿತಕಾಂಕ್ಷಿಗಳೊಬ್ಬರ ಸೂಚನೆ.

ಹೆಗಡೆಯಲ್ಲಿ ತಾ ೨೮ಕ್ಕೆ ರಾಷ್ಟ್ರೀಯ ಮಹಾಸಭೆಯ ಸುವರ್ಣ ಮಹೋತ್ಸವ ಜರುಗಿಸುವ ಬಗ್ಗೆ ರಾ। ಶ್ರೀನಿವಾಸ ವೈಕುಂಠ ಶಾನಭಾಗ, ರಾ। ಗೋಪಾಲಕೃಷ್ಣ ಕುಪ್ಪ ಹೆಗಡೆ, ರಾ। ಮಂಜಯ್ಯಾ ಕೃಷ್ಣ ಶಾನಭಾಗ, ರಾ। ದಾಮೋದರ ಅಚ್ಯುತ ಪೈ ವಗೈರೆ ೭ ಜನರದೊಂದು ಮಂಡಳ ನೇಮಕವಾಗಿದೆ.

ಹೊನ್ನಾವರ— ಕಳೆದ ತಾ. ೬-೧೨-೩೫ನೇ ದಿನ ಈ ಊರ ನಾಗರಿಕರು ಸಭೆ ಸೇರಿ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಜರುಗಿಸಬೇಕಾಗಿ ಗೊತ್ತುಪಡಿಸಿದ್ದಾರೆ. ಆ ಬಗ್ಗೆ ರಾ। ಮಂಜನಾಥ ಭಟ್ಟ ಕರ್ಕಿಯವರ ಅಧ್ಯಕ್ಷತೆಯ ಕೆಳಗೆ ಒಂದು ಉತ್ಸವ ಮಂಡಳ ನೇಮಕವಾಗಿದೆ. ಉತ್ಸವ ಮಂಡಳದವರು ಊರವರ ಕಡೆಯಿಂದ ವಂತಿಗೆಗಳನ್ನು ಕೂಡಿಸಿ ಎಲ್ಲ ವ್ಯವಸ್ಥೆ ಮಾಡಬೇಕೆಂದು ಗೊತ್ತಾಗಿದೆ. ಡಿಸೆಂಬರ ತಾ ೨೮ಕ್ಕೆ ಒಂದೇ ದಿನದ ಕಾರ್ಯಕ್ರಮ ಹೀಗೆ ನಿಶ್ಚಿತವಾಗಿರುತ್ತದೆ. ಆ ದಿನ ಮುಂಜಾನೆ ೬ ಘಂಟೆಗೆ ಪ್ರಭಾತ ಫೇರಿ, ೮ಗೆ ಧ್ವಜವಂದನೆ, ೧೦ರಿಂದ ಮಧ್ಯಾಹ್ನ ೧ರ ವರೆಗೆ ಖಾದಿಯ ಮಾರಾಟ, ಸಂಜೆ ೪ಕ್ಕೆ ಮಹಾತ್ಮಾಜಿಯವರ ಹಾಗೂ ಭಾರತಮಾತೆಯ ಭಾವಚಿತ್ರಗಳೊಡನೆ ಮೆರವಣಿಗೆ; ಮೆರವಣಿಗೆಯ ಕೊನೆಗೆ ಸಾರ್ವಜನಿಕ ಸಭೆ ಮತ್ತು ರಾತ್ರಿ ೮ಕ್ಕೆ ದೀಪೋತ್ಸವ; ಹೀಗೆ ಕಾರ್ಯಕ್ರಮ ನಿರ್ಣಯವಾಗಿರುತ್ತದೆ. ಸಾರ್ವಜನಿಕ ಸಭೆಯಲ್ಲಿ ರಾಷ್ಟ್ರಗೀತೆಗಳು ಹಾಡಲ್ಪಡುವವು; ರಾಷ್ಟ್ರಪತಿಗಳ ಸಂದೇಶ ಓದಲ್ಪಡುವದು; ರಾಷ್ಟ್ರೀಯ ಸಭೆಯ ಇತಿಹಾಸ ತಿಳಿಸಲ್ಪಡುವದು.

ಹೊಸ ಸಬಜಡ್ಜರಾದ ರಾ ಪಾಟೀಲರು ತಾ. ೧೧ಕ್ಕೆ ಬಂದು ಹಾಜರಾದರು.

ಇನಕಮ್ ಟೇಕ್ಸ ಅಧೀಕಾರಿ ಕಚೇರಿ ಬಂದುಹೋಯಿತು. ಈ ವರ್ಷ ವ್ಯಾಪಾರದಲ್ಲಿ ಹೇರಳ ಹಾನಿಯಾಗಿದೆಯೆಂದು ವರ್ತಕರು ಅಳುತ್ತಾರೆ. ಜನರಿಗೂ ಈ ಸಂಗತಿ ಮನವರಿಕೆಯಾಗಿದೆ. ಬೇಂಕಿನಿಂದ ಪಡೆದ ಸಾಲ ತೀರಿಸಲಿಕ್ಕಾಗದೆ ವರ್ತಕರು ಚಿಂತೆಯಲ್ಲಿದ್ದಾರೆ. ಇನಕಮ್ ಟೇಕ್ಸ ಖಾತೆಯವರು ವಿಚಾರ ಮಾಡಬೇಕು.

ಇಲ್ಲಿ ಖಾದಿ ಸಿಗುವದು ದುರ್ಲಭವಾಗಿದೆ. ಚರಖಾ ಸಂಘದವರು ಇಲ್ಲೊಂದು ಖಾದಿ ಸಂತೆಯನ್ನು ಮಾಡಬಹುದು. ಇಲ್ಲವೆ ಕೆಲವು ಖಾದಿ ಕೊಟ್ಟು ಖಾದಿ-ಹೊಕಿಂಗ ಮಾಡಿಸಬಹುದು. ಚಳೋ ವ್ಯಾಪಾರವಾದೀತೆಂದು ಹೇಳಲಿಕ್ಕಡ್ಡಿಯಿಲ್ಲ. ಚರಖಾ ಸಂಘದವರು ಇತ್ತ ಕಡೆಗೆ ಗಮನಿಸಬೇಕು.

ಇಲ್ಲಿಯ ಉರುವಲ ಕಟ್ಟಿಗೆಯ ಡಿಪೋ ಕಂಟ್ರಾಕ್ಟರರಿಗೂ, ಬೇರಂತೆ ಕೂಪ ಕಂಟ್ರಾಕ್ಟರರಿಗೂ ತಕರಾರತ್ತು ನಡೆದಿದೆ. ಜಂಗಲ ಖಾತೆಯವರು ಡಿಪೋ ಸರಹದ್ದಿನಲ್ಲಿ ಕೂಪ ಕಂಟ್ರಾಕ್ಟರರಿಗೆ ಕಟ್ಟಿಗೆ ಮಾರಗೊಡಲಿಕ್ಕಿಲ್ಲವಾಗಿ ನಂಬಿಗೆ ಕೊಟ್ಟಿದ್ದು ಅದರಂತೆ ಖಾತೆಯವರಿಗೆಲ್ಲ ಹುಕುಮು ಹೊರಡಿಸಿದರು. ಕೂಪ ಕಂಟ್ರಾಕ್ಟರರು ಹೊನ್ನಾವರ ಹೊಳೆಯಿಂದ ಸಮುದ್ರ ಮಾರ್ಗವಾಗಿ ಕಟ್ಟಿಗೆ ರಫ್ತು ಮಾಡುವ ಬಗ್ಗೆ ಬೇರಂತೆಯಿಂದ ಕೂಡಿಸಿದ ಕಟ್ಟಿಗೆ ತಂದು ಇಲ್ಲಿ ಮಾರುತ್ತಾರೆ. ಅದರಿಂದ ಡಿಪೋದ ಕಡೆಗೆ ಜನರು ಸುಳಿಯುವದಿಲ್ಲ. ಆ ಕಟ್ಟಿಗೆ ಅಗ್ಗ, ಈ ಕಟ್ಟಿಗೆ ತುಟ್ಟಿ. ಅದರಿಂದ ಡಿಪೋ ಕಂಟ್ರಾಕ್ಟರರು ಜಂಗಲ ಖಾತೆಯವರಿಗೆ ಅರಿಕೆ ಮಾಡಿಕೊಳ್ಳುತ್ತಿದ್ದಾರೆ. ಜಂಗಲ ಖಾತೆಯವರು ಕಾಯಿದೆಗೆ ಸಮ್ಮತವಾಗದ ನಿರ್ಬಂಧಗಳನ್ನು ಕಲ್ಪಿಸಿ ಕಂಟ್ರಾಕ್ಟರರಿಗೂ ಬಡ ಜನರಿಗೂ ದಣಿಸುವದೇಕೆ? ಈ ಹಿಂದಿನಂತೆಯೇ ಕೂಪ ಕಂಟ್ರಾಕ್ಟರರಿಗೂ ಕಟ್ಟಿಗೆ ಮಾರಾಟ ಮಾಡಗೊಟ್ಟದ್ದರೆ ಡಿಪೋ ಕಂಟ್ರಾಕ್ಟರರ ಕಟ್ಟಿಗೆ ದರದ ಮೇಲೆ ಅಂಕೆಯಿರುತ್ತದೆ.

ಭಟಕಳ— ಕರ್ನಾಟಕದೊಳಗಿನ ಕೊಂಗ್ರೆಸ ಕಾರ್ಯಕರ್ತರಲ್ಲೊಬ್ಬರಾದ ರಾ। ಬುರ್ಲಿಯವರು ಹಿಂದೆ ಇಲ್ಲಿ ಬಂದು ಒಂದು ಕೊಂಗ್ರೆಸ ಕಮಿಟಿ ಸ್ಥಾಪಿಸಿ ಹೋಗಿದ್ದರು. ಮೊನ್ನೆ ಪುನಃ ಅವರೇ ಬಂದು ಕೊಂಗ್ರೆಸ ಸುವರ್ಣ ಮಹೋತ್ಸವ ಜರುಗಿಸುವ ಬಗ್ಗೆ ಇಲ್ಲಿಯವರಿಗೆ ಉತ್ತೇಜಿಸಿ ಒಂದು ಉತ್ಸವ ಮಂಡಳವನ್ನು ನಿರ್ಮಿಸಿದ್ದಾರೆ. ರಾ। ವೆಂಕಟೇಶ ನಾಯಕರು ಮಂಡಳದ ಅಧ್ಯಕ್ಷರು. ನಗರಸಂಕೀರ್ತನೆ, ಧ್ವಜವಂದನೆ, ಮೆರವಣಿಗೆ ಮುಂತಾದ ಕಾರ್ಯಕ್ರಮದ ವ್ಯವಸ್ಥೆಯ ಬಗ್ಗೂ, ನಿಧಿ ಸಂಗ್ರಹ ಮಾಡಲಿಕ್ಕೂ ಬೇರೆ ಬೇರೆ ಸದ್ಗೃಹಸ್ಥರ ನೇಮಣೂಕಿಯಾಗಿದೆ.

ಸುವರ್ಣ ಮಹೋತ್ಸವದ ಚಾಲನೆಯ ಬಗ್ಗೆ ವ್ಯವಸ್ಥೆಯಾಗುವದರಲ್ಲಿ ಕೊಂಗ್ರೆಸ ಕೆಲಸಗಾರರೊಳಗೆ ಸಣ್ಣದೊಂದು ಗಡಿಬಿಡಿಯಾಗಿದೆ. ಹೊಸ ಕೊಂಗ್ರೆಸ ಕಮಿಟಿಯು ಸ್ಥಾಪನೆಯಾದ ಮೇಲೆ ಹಿಂದಿನ ಕಮಿಟಿಯ ಅಧ್ಯಕ್ಷರು ತಮ್ಮ ಕಡೆಗಿರುವ ಶಿಲ್ಕು ಹಣ ರೂ ೧೩೭॥ಯನ್ನು ಹೊಸ ಕಮಿಟಿಯ ಕೋಶಪಾಲಕರ ಕಡೆಗೆ ಒಪ್ಪಿಸಿದ್ದರೆಂದು ಹೇಳುತ್ತಾರೆ. ಸುವರ್ಣ ಮಹೋತ್ಸವದ ಪೂರ್ವಸಿದ್ಧತೆಗಾಗಿ ಈ ಹಣದೊಳಗಿಂದ ಕೆಲವು ಹಣ ತೆಗೆಯಬೇಕಾಗಿ ಕಮಿಟಿಯವರು ಪ್ರಸ್ತಾಪ ತೆಗೆಯಲಾಗಿ ಹಿಂದಿನ ಶಿಲ್ಕು ಹಣ ತಮ್ಮ ಕಡೆಗೆ ವಸೂಲ ಬಂದಿರುವದಿಲ್ಲವಾಗಿ ಈಗಿನ ಕಮಿಟಿಯ ಅಧ್ಯಕ್ಷರೂ, ಕೋಶಪಾಲಕರೂ, ಕಾರ್ಯವರ್ತಿಗಳೂ ಹೇಳುತ್ತಿದ್ದು ನೋಡಿ ಜನರೆಲ್ಲ ಸಂಶಯಜಾಲದಲ್ಲಿ ಬಿದ್ದಿದ್ದಾರೆ! ಕೆಲಸಗಾರರೂ ಬೇಸರಪಡುತ್ತಿದ್ದಾರೆ! ಸತ್ಯ—ಸತ್ಯಾಗ್ರಹಗಳ ಬಗ್ಗೆ ಕಾದಾಡುವ ಕೊಂಗ್ರೆಸ ಕಮಿಟಿಗಳಲ್ಲಿ ಲೋಪ-ವಂಚನೆಗಳಿಗೆ ಎಡೆಯುಂಟೇ? ಎಂದು ಕೆಲವರು ಕೇಳುತ್ತಿದ್ದಾರೆ. ಅಂತು ಈ ಗಡಿಬಿಡಿಯ ಮೂಲಕ ಸುವರ್ಣ ಮಹೋತ್ಸವವು ಯಾವ ನಮೂನೆಯದಾಗುತ್ತದೆಂದು ತಿಳಿಯದಾಗಿದೆ.

ಸಿದ್ದಾಪುರ— (ತಾ. ೯-೧೨-೩೫) ಕಳೆದ ತಿಂಗಳಲ್ಲಿ ಇಲ್ಲಿಯ ತಾಲೂಕ ಕಚೇರಿಯೊಳಗಿನ ಮಾರಿ ದ್ಯಾವಾ ಎಂಬ ಪಟ್ಟೇವಾಲನಿಗೆ ಹಿರ್ಶ ಡಿವ್ಹಿಜನಲ್ ಮೆಜಿಸ್ಟ್ರೇಟರಾದ ಮಿ। ಆಲಿಕ್ಸಾಂಡರರವರು ೪ ವರ್ಷಗಳ ಶಿಕ್ಷೆ ಮತ್ತು ರೂ. ೨೫ ದಂಡ ವಿಧಿಸಿದ್ದಾರೆ. ದಂಡ ತೆರದಿದ್ದಲ್ಲಿ ಇನ್ನೆರಡು ತಿಂಗಳ ಶಿಕ್ಷೆ. ಪಟ್ಟೇವಾಲನ ಹೆಂಡತಿಗೂ, ನೆರೆ-ಹೊರೆಯವನ ಹೆಂಡತಿಗೂ ಜಗಳವಾಯಿತಂತೆ. ಈ ಸಂಗತಿ ಪಟ್ಟೇವಾಲನಿಗೆ ತಿಳಿದೊಡನೆ ಆತನು ಅವಳ ಗಂಡನಿಗೆ ಚೂರಿಯಿಂದ ತಿವಿದನು. ಅಷ್ಟರಲ್ಲಿ ಜನರು ಕೂಡಿ ಕೂಡಲೇ ಗಾಯಪಟ್ಟವನನ್ನು ಅಸ್ಪತ್ರಿಗೆ ಒಯ್ದು ಉಪಚರಿಸಿದರು. ತಾನು ಆ ಕಾಲದಲ್ಲಿ ಆಸಿಸ್ಟಂಟ ಕಲೆಕ್ಟರರ ಡೇರೆ ಹೊಡೆಯುವ ಕೆಲಸ ಮಾಡುತ್ತಿದ್ದೆನಾಗಿಯೂ, ಸತ್ಯಾಗ್ರಹದಲ್ಲಿ ತಾನು ಸರಕಾರಿ ಕೆಲಸವನ್ನು ಮಾಡಿದ್ದರಿಂದ ಜನರು ನನ್ನ ಮೇಲೆ ಸುಳ್ಳು ಅಪಾದನೆ ಹೊರಿಸಿ ಸಾಕ್ಷಿ ಕೊಡುತ್ತಾರಾಗಿಯೂ ಮಾರಿ ಪಟ್ಟೇವಾಲನು ವಾದಿಸಿದನು. ಮೆಜಿಸ್ಟ್ರೇಟರು ಈ ಸಾಧನೆಗೊಪ್ಪಲಿಲ್ಲ. ಗುನ್ಹೆ ನಡೆವಾಗ ಡೇರೆ ಹೊಡೆಯುವ ಕೆಲಸ ಆತ ಮಾಡುತ್ತಿದ್ದಿಲ್ಲವಾಗಿ ಅವರು ಖಂಡಿತ ಅಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಕೋರ್ಟಿನಿಂದಲೇ ತಮ್ಮ ಪತ್ನಿಯವರನ್ನು ಸಾಕ್ಷಿಗೆ ಕರಿಸಿ ವಿಚಾರ ಮಾಡಿದರು. ಮಾರಿಯು ಬಚಾವಿಯ ಬಗ್ಗೆ ಕೊಟ್ಟ ಸಾಕ್ಷಿದಾರರ ಸಾಕ್ಷಿ ತೀರ ಕೃತ್ರಿಮವೆಂದು ಅಭಿಪ್ರಾಯಪಟ್ಟಿದ್ದಾರೆ. ಮಾರಿಯು ಸತ್ಯಾಗ್ರಹ ಸಮಯ ೨೫ ದಿಂಡಿ ಭತ್ತ ಬರುವ ಭೂಮಿ ಕೊಂಡಿದ್ದನೇನೋ ಅಹುದು. ಆದರೆ ಅದರ ಬಗ್ಗೆ ಜನರು ಈತನ ಮೇಲೆ ದ್ವೇಷ ಹಿಡಿದಿದ್ದಾರಾಗಿ ಸಾಧಿಸಿದ್ದು ತೀರ ವ್ಯಸನಕರ. ಮೆಜಿಸ್ಟ್ರೇಟರು ಈ ಸಾಧನೆ ಸಿದ್ಧವಾಗಲಿಲ್ಲವಾಗಿ ಅಭಿಪ್ರಾಯಪಟ್ಟು ಸತ್ಯಾಗ್ರಹಿಗಳಿಗೆ ದೋಷಾಪವಾದದಿಂದ ಬಿಡುಗಡೆ ಮಾಡಿದ್ದಾರೆ. ಈತನ ಗುನ್ಹೆ ಭಯಂಕರದ್ದಿರುವದಾಗಿಯೂ, ಕೆಲಸ ಹೋಗುವ ಪ್ರಸಂಗವಿರುವದರಿಂದ ಶಿಕ್ಷೆಯನ್ನು ಕಡಿಮೆ ಮಾಡಿರುವದಾಗಿಯೂ ಮೆಜಿಸ್ಟ್ರೇಟರು ತಮ್ಮ ತೀರ್ಪಿನಲ್ಲಿ ಬರೆದಿದ್ದಾರೆ.

ಅಂಕೋಲಾ— ರಾ। ಬುರ್ಲಿ ಬಿಂದುಮಾಧವರಾಯರು ತಾ. ೯ಕ್ಕೆ ಇಲ್ಲಿ ಬಂದು ರಾಷ್ಟ್ರೀಯ ಸಭೆಯ ಜ್ಯುಬಿಲಿ ಉತ್ಸವದ ಕಾರ್ಯಕ್ರಮ ಗೊತ್ತುಪಡಿಸುವ ಕೊಂಗ್ರೆಸ ಕಮಿಟಿಯ ಸಭೆಯನ್ನು ಕೂಡಿಸಿದರು. ಸಭೆಯಲ್ಲಿ ಸದರಿ ಉತ್ಸವವು ಅಂಕೋಲೆಯ ಮರ್ಯಾದೆಗೆ ಯೋಗ್ಯವೆನಿಸುವ ರೀತಿಯಲ್ಲಿ ನೆರವೇರಿಸಲ್ಪಡಬೇಕಾಗಿ ನಿರ್ಣಯವಾಯಿತು. ತಾ. ೨೮ನೇಗೆ ಮುಂಜಾನೆ ಪ್ರಭಾತ ಫೇರಿ, ಧ್ವಜವಂದನೆಗಳನ್ನೂ, ಸಾಯಂಕಾಲಕ್ಕೆ ಮೆರವಣಿಗೆ, ಸಭೆ, ದೀಪೋತ್ಸವಗಳನ್ನೂ ಮಾಡಬೇಕಾಗಿಯೂ ಕರ್ನಾಟಕ ಜ್ಯುಬಿಲಿ ಮಂಡಳದವರು ಪ್ರಕಟಿಸಿರುವ "ನಮ್ಮ ಕೊಂಗ್ರೆಸ್ಸು" ಎಂಬ ಪುಸ್ತಕದ ೧೦೦೦ ಪ್ರತಿಗಳನ್ನು ತರಿಸಿ ಊರಲ್ಲೆಲ್ಲ ಪ್ರಸಾರ ಮಾಡಬೇಕಾಗಿಯೂ ಠರಾವಾಗಿದೆ. ಅಂಕೋಲಾ ತಾಲೂಕಿನಲ್ಲಿರುವ ಸತ್ಯಾಗ್ರಹಿಗಳ ಯಾದಿಯೊಂದು ತಯಾರಾಗುವದು. ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವವು ಅಖಿಲ ಭಾರತೀಯ ಸ್ವರೂಪದ್ದಿರುವದರಿಂದಲೂ, ರಾಷ್ಟ್ರೀಯ ಸಭೆಯು ಕಳೆದ ೫೦ ವರ್ಷಗಳಿಂ

ದ ಭಾರತೀಯರ ಉದ್ಧಾರಕ್ಕಾಗಿ ಮಾಡುತ್ತ ಬಂದಿರುವ ಮಹಾಕಾರ್ಯದ ಸ್ಮರಣಾರ್ಥ ಈ ಉತ್ಸವವಿರುವದರಿಂದಲೂ, ಅದನ್ನು ಶಕ್ತ್ಯನುಸಾರ ರೀತಿಯಿಂದ ನಡಿಸಬೇಕಾಗಿಯೂ ಪಕ್ಷ-ಪಂಗಡಗಳ ಭೇದವನ್ನು ಲೆಕ್ಕಿಸದೆ ಎಲ್ಲ ನಾಗರಿಕರು ಅದರಲ್ಲಿ ಸೇರಬೇಕೆಂದು ಕೊಂಗ್ರೆಸ ಕಮೀಟಿಯು ವಿನ್ನೈಸಿಕೊಂಡಿರುತ್ತದೆ.

ಇನ್ನೊಬ್ಬ ನಾಗರಿಕನು ಬರೆಯುವದೇನಂದರೆ.— ನಾಗರಿಕನ ವಿಚಾರಸರಣಿ ನೋಡಿ ನಾನು ಬೆಪ್ಪಾಗಿದ್ದೇನೆ. ಕ್ರಿಕೆಟ್, ಫುಟಬೊಲ ಆಟಗಳನ್ನು ಆಡುವದು ಈಗ ರೂಢಿಯಾಗಿ ಹೋಗಿದೆ ಮುಂಬಯಿಯಲ್ಲಿ ದೊಡ್ಡ ದೊಡ್ಡವರು ಸಹ ಈ ಆಟಗಳನ್ನು ಆಡು-ಆಡಿಸುತ್ತಾರೆ. ಈ ಆಟಗಳಿಂದ ಹುಡುಗರೊಳಗೆ ಬಂಧುಭಾವವೂ, ಸಹಕಾರವೂ ಪ್ರತಿಪಕ್ಷದ ಬಗ್ಗೆ ಆದರವೂ, ಪ್ರೇಮವೂ ಉಂಟಾಗುತ್ತವೆ. ಇವನ್ನು ಮಿತಿಯಿಂದ ಆಡಬೇಕೆಂದು ಯಾರೂ ಹೇಳುವರು ಎಷ್ಟರ್ಧ ಶಾಲೆಯೊಳಗಿನ ವಿದ್ಯಾರ್ಥಿಗಳು ಇಡೀ ದಿನ ಆಟವಾಡುತ್ತಾರೆಂದು ಹೇಳುವದು ತಪ್ಪು. ಶಿಕ್ಷಕರು ಶಾಲೆಯ ಬಗ್ಗೆ ಒಳ್ಳೇ ಆಸ್ಥೆಯಿಂದ ದುಡಿಯುತ್ತಾರೆ. ಸತ್ಯಾಗ್ರಹದ ಗಡಿಬಿಡಿಯಲ್ಲಿ ಶಾಲೆಯ ಉತ್ಪನ್ನ ಇಳಿದಾಗ ಅರ್ಧ ಪಗಾರು ಕೊಂಡು ಸಂಸ್ಥೆಯನ್ನು ಕಾಪಾಡಿಕೊಂಡ ಶ್ರೇಯಸ್ಸು ಸಂಪೂರ್ಣವಾಗಿ ಶಿಕ್ಷಕರದೇ. ಇಷ್ಟು ನಿಸ್ಸ್ವಾರ್ಥ ಶಿಕ್ಷಕರಿಗೆ ಇಲ್ಲಿಯ ನಾಗರಿಕರು ನಿಂದಿಸುವದು ಕೃತಘ್ನತೆ. ವಿದ್ಯಾಧಿಕಾರಿಗಳ ಅಪ್ಪಣೆ ಮೇರೆಗೆ ಈ ಪಂದ್ಯಾಟ ನಡೆಯುತ್ತದೆಂಬ ಮಾತನ್ನೂ ಲಕ್ಷದಲ್ಲಿಡತಕ್ಕದ್ದು. ಇತ್ಯಾದಿ

ಕೋಡಿಬಾಗ— ಇಲ್ಲಿಯ ರಾ। ಶ್ರೀನಿವಾಸ ಗಿರಿರಾವ ಹೊಸಳೇಕರರು ಕಳೆದ ಗುರುವಾರ ರಾತ್ರಿ ಕಾಳೀನದಿಯಲ್ಲಿ ಹಾರಿ ದೈವಾಧೀನರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಶ್ರೀನಿವಾಸರಾಯರು ಆತ್ಮಘಾತ ಮಾಡುವ ಕಾರಣವೇನಾಯಿತೆಂದು ತಿಳಿಯುವದಿಲ್ಲ. ಅವರು ನಿಪುಣ ಪ್ರಾಥಮಿಕ ಶಿಕ್ಷಕರಾಗಿದ್ದರು. ಗಣಿತ ಹಾಗು ವ್ಯಾಕರಣ ಕಲಿಸುವದರಲ್ಲಿ ವಿಶೇಷ ನೈಪುಣ್ಯ ತೋರಿಸುತ್ತಿದ್ದರು. ಸರಕಾರಿ ನೌಕರಿಯೊಳಗಿಂದ ನಿವೃತ್ತರಾದ ಮೇಲೆ ಬಾಡದೊಳಗಿನ ಇಂಗ್ಲಿಷ ಶಾಲೆಯಲ್ಲಿ ಸೇರಿ ಆ ಶಾಲೆಯ ಬಾಲ್ಯಾವಸ್ಥೆಯಲ್ಲಿ ಒಳ್ಳೇ ಸೇವೆ ಮಾಡಿದ್ದರು. ಶ್ರೀನಿವಾಸರಾಯರ ಅಕಾಲಿಕ, ಆಕಸ್ಮಿಕ ಅಂತದ ಸುದ್ದಿ ತಿಳಿದೊಡನೆ ಬಾಡ ನ್ಯೂ ಇಂಗ್ಲಿಷ ಶಾಲೆಯು ಮುಚ್ಚಲ್ಪಟ್ಟಿತು. ಶಾಲೆಯ ಹುಡುಗರೂ, ಶಿಕ್ಷಕರೂ ಸಭೆಸೇರಿ ಶ್ರೀನಿವಾಸರಾಯರ ನಿಧನದ ಬಗ್ಗೆ ದುಃಖ ವ್ಯಕ್ತಗೊಳಿಸಿದರು. ಮೃತಾತ್ಮರ ಆತ್ಮಕ್ಕೆ ಪರಮಾತ್ಮನು ಸದ್ಗತಿಯನ್ನೀಯಲಿ!

ಮಾಜಾಳಿ— ಮಾಜಾಳಿಯ ಮನ ಎಸ್. ಬೋರಕರರು ತಾ. ೬-೧೨-೩೫ನೇಗೆ ಮುಂಜಾನೆ ವಿಷಮಜ್ವರದಿಂದ ಕೈಲಾಸವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ರಾ। ಬೋರಕರರು ಮುಂಬಯಿಯಲ್ಲಿ ಹಲವು ವರ್ಷ ನೌಕರಿ ಮಾಡಿ ಪ್ರಕೃತಿಯು ನೆಟ್ಟಗಿರದ ಮೂಲಕ ಊರಿಗೆ ತಿರುಗಿ ಬಂದಿದ್ದರು. ಸಾರ್ವಜನಿಕ ಕಾರ್ಯದಲ್ಲಿ ತತ್ಪರತೆಯಿಂದ ದುಡಿಯುತ್ತಿದ್ದರು. ಶಾರದಾ ಕಾನೂನಿಗೆ ವಿರುದ್ಧ ಮದುವೆಗಳನ್ನು ಮಾಡಿಸಿದ ಬಗ್ಗೆ ಕೆಲವು ಜೋಯಿಸರ ವಿರುದ್ಧ ಇವರೇ ಫಿರ್ಯಾದು ಮಾಡಿದ್ದರು. ಕಾರವಾರದ ಒಂದು ಸಭೆಯ ಸಭಾಸದರಿದ್ದರು. ಮೃತಾತ್ಮರಿಗೆ ಶಾಂತಿಯಾಗಲಿ!

ಕಾರವಾರ— ಹವೆ ನೆಟ್ಟಗಿಲ್ಲ. ಊರಲ್ಲಿ ಜ್ವರ, ಹ್ಯಾಲಿ-ಮೊದಲಾದ ಉಪದ್ರವಗಳಿವೆ. ಕೋಡೂರ ಗ್ರಾಮದಲ್ಲಿ ಬೆಟ್ಟಕ್ಕೆ ಹುಲ್ಲು ತರಹೋದ ಬಾಬು ಎಂಬ ಹುಡುಗನಿಗೆ ಸರ್ಪದಂಶವಾಗಿ ಆತನು ತೀರಿಕೊಂಡಿದ್ದಾನೆ. ಪ್ಲೇಗಿನ ಉಪದ್ರವವೂ ಅಲ್ಲಲ್ಲಿದೆ.

ಶಿರ್ಸಿಯ ರಾ। ಸುಂದರರಾವ ಪಂಡಿತರವರು ಭೂಭದ್ರ ಬೇಂಕಿನ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿದ್ದರಷ್ಟೇ. ರಿಜಿಸ್ಟ್ರಾರರು ರಾ। ಪಂಡಿತರಿಗೆ ಕರಸಿ, ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಮನವೊಲಿಸಿದರಾಗಿಯೂ, ರಾ। ಪಂಡಿತರು ರಿಜಿಸ್ಟ್ರಾರರ ದಾಕ್ಷಿಣ್ಯ ಮುರಿಯಲಾಗದೆ ರಾಜಿನಾಮೆಯನ್ನು ಹಿಂತೆಗೆದುಕೊಂಡರಾಗಿಯೂ ತಿಳಿಯುತ್ತದೆ. ಶ್ರೀ ವಾ। ಎಸ್. ಡಿ. ನಾಡಕರ್ಣಿಯವರ ನಿಧನದಿಂದ ತೆರವಾದ ಸ್ಥಳದಲ್ಲಿ ರಾ। ಜಿ. ಎಸ್. ತೇಲಂಗರವರಿಗೆ ಸಭಾಸದರಾಗಿ ನೇಮಿಸಲಾಗಿದೆ. ಭೂಭದ್ರ ಬೇಂಕಿನ ಕಚೇರಿಯನ್ನು ತೆರೆಯುವದಕ್ಕಾಗಿ ದಿವಾಣರಾದ ರಾ। ಬಾ। ಕಂಬಳಿಯವರು ಬರಲಿಕ್ಕಿದ್ದಾರಾಗಿ ತಿಳಿಯುತ್ತದೆ. ಬೇಂಕಿನ ಆಫೀಸನ್ನು ಇಲ್ಲಿಂದ ಕುಮಟೆಗೆ ವರ್ಗಾಯಿಸುವ ಆಲೋಚನೆ ನಡೆದಿರುವದಾಗಿ ತಿಳಿಯುತ್ತದೆ. ಚೆಯರಮನ್ನರಿಗೆ ಆಫೀಸು ಇಟ್ಟು ಕೆಲಸ ಮಾಡಲಿಕ್ಕೆ ತೊಂದರೆಯಾಗುವದರಿಂದ ಕುಮಟೆಗೆ ಒಯ್ಯುವ ಆಲೋಚನೆಯಂತೆ!

ಶ್ರೀ ವಾ। ಎಸ್. ಡಿ ನಾಡಕರ್ಣಿ ಇವರ ನಿಧನದಿಂದ ತೆರವಾದ ಜಿಲ್ಹಾ ಬೋರ್ಡಿನ ಮೆಂಬರ ಸ್ಥಳದ ಬಗ್ಗೆ ಕಲೆಕ್ಟರರು ಬ್ಯೂ-ಇಲೆಕ್ಷನಿನ ಜಾಹೀರನಾಮೆ ಹೊರಡಿಸಿದ್ದಾರೆ. ಉಮೇದ್ವಾರರು ಹೆಸರು ದಾಖಲಮಾಡಿಸುವದು ಇದೇ ಬರುವ ತಾ. ೧೯ನೇ ಗುರುವಾರ. ಇಲೆಕ್ಷನು ತಾ. ೧೧-೨-೩೬ನೇ ಮಂಗಳವಾರ.

ಕಾರವಾರ ಹಿಂದು ಸ್ಕೂಲ ಮತ್ತು ಹ್ಯಾಸ್ಕೂಲಗಳೊಳಗಿನ ವಿದ್ಯಾರ್ಥಿಗಳಲ್ಲಿ ಕ್ರಿಕೆಟ ಪಂದ್ಯಾಟ ನಡೆಯಿತು. ಹ್ಯಾಸ್ಕೂಲಿನವರು ಗೆದ್ದರು. ಹ್ಯಾಸ್ಕೂಲಿಗೂ, ಹೊನ್ನಾವರದೊಳಗಿನ ಸೆಂಟ ಥೊಮಸ್ ಹ್ಯಾಸ್ಕೂಲಿನವರಿಗೂ ವ್ಹಾಲಿಬೊಲ ಎಂಬ ಚೆಂಡಿನ ಆಟದ ಶರ್ಯತ್ತು ನಡೆಯಿತು. ಇವರೊಳಗೂ ಹ್ಯಾಸ್ಕೂಲಿನವರೇ ಗೆದ್ದರು. ಪಂದ್ಯಾಟ ನೋಡಲೋಸುಗ ಶಾಲೆಗಳಿಗೆ ರಜೆ ಕೊಡಲಾಗಿತ್ತು. ಹಬ್ಬದ ರಜೆ, ಬೇಸಿಗೆ ರಜೆ, ಪಂದ್ಯಾಟ ರಜೆ; ಹೀಗೆ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅವಧಿಗಿಂತ ರಜಾ ದಿನಗಳೇ ಹೆಚ್ಚು!

ಮರೆಯಬೇಡಿರಿ! **ಲಕ್ಷ್ಯದಲ್ಲಿಡಿರಿ!!**

ಕಳೆದ ೫೦ ವರ್ಷಗಳಿಂದ ಭಾರತೀಯರ ಉದ್ಧಾರಕ್ಕಾಗಿ,
ಸ್ವರಾಜ್ಯ ಸಂಪಾದನೆಗಾಗಿ ನಾನಾ ತರದ ಕಷ್ಟ-ನಷ್ಟಗಳನ್ನನುಭವಿಸಿ ಹೋರಾಡಿದ
ಒಂದೇ ಒಂದು ಸಂಸ್ಥೆಯು **ಹಿಂದೀ ರಾಷ್ಟ್ರೀಯ ಸಭೆಯು.**
ಇದೇ ಬರುವ ತಾ. ೨೮-೧೨-೩೫ಕ್ಕೆ **ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವ**
ಜರುಗಿಸಬೇಕಾಗಿ ರಾಷ್ಟ್ರಪತಿಗಳೂ, ಲೋಕನಾಯಕರೂ ಅಪ್ಪಣೆ ಮಾಡಿದ್ದಾರೆ.
ಎಲ್ಲ ಊರುಗಳಲ್ಲಿ ಈ ಉತ್ಸವವನ್ನು ನೆರವೇರಿಸಿ ರಾಷ್ಟ್ರೀಯ ಸಭೆಯ ಬಗ್ಗೆ
ತಮಗಿರುವ ಭಕ್ತಿ-ವಿಶ್ವಾಸಗಳನ್ನೂ, ಪ್ರೇಮವನ್ನೂ ಪ್ರಕಟಿಸಿರಿ. ವಂದೇ ಮಾತರಂ!

ಗೌ। ಸಾ। ಬ್ರಾ। ಸ್ಕಾಲರಶಿಪ್ ಲೀಗ, ಮುಂಬಯಿ.

೧೯೩೫-೩೬ನೇ ವರ್ಷದ ಕಾರ್ಯಕಾರಿ ಮಂಡಳ.

ಅಧ್ಯಕ್ಷ- ರಾ। ವಿಠ್ಠಲ ಧಕ್ಕಪ್ಪ ಪ್ರಭು, ಜೆ. ಪಿ.

ಕೋಶಾಧ್ಯಕ್ಷರು- ರಾ। ಸುಬ್ರಾಯ ರಂಗ ಪೈ ಮತ್ತು ರಾ। ಕೇಶವ ಮಾಬು ನಾಯ್ಕ.

ಕಾರ್ಯದರ್ಶಿಗಳು- ರಾ। ಗೋವಿಂದ ಶ್ರೀನಿವಾಸ ಗುಡಾಳ ಮತ್ತು ರಾ। ರಾಮಚಂದ್ರ ನರಸಿಂಹ ಪ್ರಭು

ಸಾಧಾರಣ ಸಭಾಸದರು- ರಾ। ರಾಮಚಂದ್ರ ಕೃಷ್ಣ ಪ್ರಭು (ಮುಂಬಯಿ ಕೌನ್ಸಿಲರು), ಆರ್. ವಿ. ಶಾನಭಾಗ, ಗುಂಡಾ ವ್ಹಿ. ಕಾಮತ, ಅನಂತ ವ್ಹಿ. ಪ್ರಭು, ಕೆ. ಜೀ. ಪ್ರೋವಕಾರ.

ಸ್ಥಾನಿಕ ಪ್ರತಿನಿಧಿಗಳು.

ಕಾರವಾರ- ರಾ। ಕೃಷ್ಣರಾವ ಪಳದೀಪುರಕರ (ವಕೀಲ) ಮತ್ತು ಜೀ. ಪಿ. ಶೇಣ್ವಿ.

ಅಂಕೋಲೆ- ರಾ। ಶ್ರೀಧರ ವ್ಹಿ. ಭಟ್ಟ, ಬಿ. ಎ., ಶ್ರೀನಿವಾಸ ಗಣೇಶ ಪೈ, ಶ್ರೀಧರ ನಾರಾಯಣ ಪ್ರಭು.

ಕುಮಟೆ- ರಾ। ಕೃಷ್ಣ ಪದ್ಮನಾಭ ಪ್ರಭು, (ವಕೀಲ), ನಾರಾಯಣ ಎಮ್. ಶಾನಭಾಗ, ಮರ್ತು ಮುಕುಂದ ಪೈ.

ಹೊನ್ನಾವರ- ರಾ। ಕೊಡ್ಲ ವಾಸುದೇವ ಶಾನಭಾಗ ಮತ್ತು ಅನಂತ ಮರ್ತು ಶಾನಭಾಗ.

೧೯೩೫ರಲ್ಲಿ ಆದ ಆಧಾರಸ್ತಂಭರೂ, ಆಜೀವ ಸಭಾಸದರೂ

ಆಧಾರಸ್ತಂಭರು- ರಾ। ಮರ್ತು ಮಂಗಪ್ಪಾ ಗಾಯತೋಂಡೆ, ಮುಂಬಯಿ

ಆಜೀವ ಸಭಾಸದರು- ರಾ। ರಾ। ಪಾಂಡುರಂಗ ವ್ಹಿ. ಕಾಮತ, ಗೋಪಾಳ ನಾರಾಯಣ ಪೈ, ಗೋವಿಂದ ಶ್ರೀನಿವಾಸ ಗುಡಾಳ, ರಂಜಾಳ ಅನಂತರಾವ ಶೆಣೈ, ಕುಂದಾಪುರ ವಿಠ್ಠಲ ಶಾನಭಾಗ, ಮರ್ತು ಶೇಷಗಿರಿ ಕಾಮತ, ಎಸ್. ಎಸ್. ಶಾ. ಬಿ. ಎ., ಗೋಪಾಳಕೃಷ್ಣ ಮಾಧವ ಭಟ್ಟ, ಡಾ। ಎಸ್. ಎಸ್. ರಾವ್, ಎಮ್. ಬಿ. ಬಿ. ಎಸ್, ರಾ। ಯು. ವಿ. ರಾವ್ (ಎಲ್ಲರೂ ಮುಂಬಯಿ ನಿವಾಸಿಗಳು) ಮತ್ತು ಡಾ। ಎಸ್. ಎಮ್. ಕಾಮತ, ಎಮ್. ಬಿ. ಬಿ. ಎಸ್, ಹುಬ್ಬಳ್ಳಿ.

ಸಹಾಯಕರು- ರಾ। ಕೇ. ಎಸ್. ಶಾನಭಾಗ, ಮುಂಬಯಿ.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಡಿಮೆ ದರಗಳೂ, ಶರತುಗಳೂ ಬಹಳ ಸೋಯಿಯುಳ್ಳವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳೀಕ ಏಜಂಟರ ಕಡೆಗೆ- ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ತಿಳಿವದು.

Kumta Agents-
D. K. Nayak Bros
D. S. Pai
K. N. Nayak.
Honavar Agent:-
R. V. Prabhu Esq.

K. Padmanabha Rao & Sons.
BELGAUM
Chief Agents for
Karnatak Districts & S. M. State.

ಅಲ್ಲಲ್ಲಿ ಇಷ್ಟಿಷ್ಟು!

[ಕಳೆದ ವಾರದಿಂದ ಮುಂದರಿಸಿದ]

ಶೇಕಡಾ ೨ರಿಂದ ೫ ರತನಕ ಬಡ್ಡಿ ಸಿಕ್ಕಿದರೆ ದೊಡ್ಡ ಪಾಯಿತೆಂದು ದಿ. ಸತ್ಯನಾಥನ್‌ರವರು ಮದ್ರಾಸ ಸರಕಾರಕ್ಕೆ ಮಾಡಿದ ರಿಪೋರ್ಟದಲ್ಲಿ ಬರೆದಿದ್ದಾರೆ. ಇಷ್ಟು ಬಡ್ಡಿ ಸಿಗಬೇಕಾದರೂ ಸರಿಯಾಗಿ ಬೆಳೆ ಹುಟ್ಟಬೇಕು. ಅದು ಹುಟ್ಟುವದು ೫ ವರ್ಷಕ್ಕೊಮ್ಮೆ! ಇಂಥ ಸಂಗತಿಯಲ್ಲಿ ಬೇಸಾಯಗಾರರ ಮೇಲೆ ಹೊಸ ತೆರಿಗೆಯನ್ನು ಹೇರುವ ವಿಚಾರ ಮಾಡುವದು ತೀರ ಅನ್ಯಾಯವು. ವರ್ತಕರಾಗಲಿ, ಅಧಿಕಾರಿಗಳಾಗಲಿ ಬೇಸಾಯ. ಉತ್ಪನ್ನದ ಮೇಲಿನ ತೆರಿಗೆಯ ಭಾರವನ್ನು ಇಳಿಸಲಿಕ್ಕೆಬೇಕು. ಒಂದು ಸಾಧನದ ಜೀವನಾಧಾರವೇ ಬೇಸಾಯವಾಗಿರುವಾಗ ಅದು ತೀರ ಕಂಗೆಟ್ಟಾಗ, ಈಗಿನ ಕಂದಾಯ ಪದ್ಧತಿಯಿಂದ ಸಂಕಟದಲ್ಲಿ ಸಿಲುಕಿಕೊಂಡಾಗ ಅವರಿಗೊದಗುವ ಕಷ್ಟನಿವಾರಣೆ ಮಾಡಿ ಉತ್ಪನ್ನದ ಅಭಿವೃದ್ಧಿಗೈಯಬೇಕು. ವರ್ತಕರು ಈ ವಿಚಾರ ಮಾಡದೆ ಸ್ವಾರ್ಥಾಂಧರಾಗಿ ಬೇಸಾಯಗಾರರ ಘಾತ ಮಾಡಲುದ್ಯುಕ್ತರಾದದ್ದು ನೋಡಿ ಬಹಳಾಶ್ಚರ್ಯವಾಗುತ್ತದೆ.

* * *

ಇನ್ನೊಂದು ಸಂಕಟವನ್ನೂ ಇವರಿಗೆ ವಿಚಾರಿಸುವದುಚಿತ. ಸದ್ಯ ಮುಂಬಯಿ ಇಲಾಖೆಯಂತೆ ಮದ್ರಾಸ ಇಲಾಖೆಯಲ್ಲಿಯೂ ರೈತವಾರಿ ಪದ್ಧತಿಯಿದೆ. ರೈತವಾರಿ ಅಂದರೆ ಪ್ರತಿ ೩೦ ವರ್ಷಕ್ಕೊಮ್ಮೆ ತೀರ್ವೆಯನ್ನು ತಿದ್ದುಪಡಿ ಮಾಡುವದು. ಈ ಅವಧಿಯನ್ನು ಸರಕಾರವು ಲ್ಯಾಂಡ್ ರೆವಿನ್ಯೂ ಕೋಡಿನ ೧೦೭ನೇ ಕಲಮಿನಲ್ಲಿ ವಿಧಿಸಿದೆ. ೩೦ ವರ್ಷಗಳಲ್ಲಿ ರೈತರು ಸ್ವಕಷ್ಟದಿಂದ ಭೂಸುಧಾರಣೆ ಮಾಡಿದಲ್ಲಿ ಅದರ ಪ್ರಯೋಜನ ಈ ೩೦ ವರುಷಗಳಲ್ಲಿ ಪಡೆಯಬೇಕಾಗಿಯೂ ಸ್ವಂತ ಕಷ್ಟದಿಂದ ಭೂಮಿಯ ಸುಧಾರಣೆಯಾದ್ದಲ್ಲಿ ಅದರ ಮೇಲೆ ಸರಕಾರವು ತೆರಿಗೆಯನ್ನು ಹೇರದೆ ಸ್ವಂತ ಕಷ್ಟ ಮಾಡುವವರಿಗೆ ಪ್ರೋತ್ಸಾಹ ಕೊಡಬೇಕಾಗಿದ್ದೂ ಸರಕಾರದ ನಿಯಮ. ಮದ್ರಾಸ ಸರಕಾರವು ಈ ನಿಯಮವನ್ನು ಧಿಕ್ಕರಿಸಿದೆ. ಈ ಕುರಿತು ನಿಷೇಧ ಮಾಡಿ ಮದ್ರಾಸ ಕಾಯಿದೆ ಕೌನ್ಸಿಲಿನ ಸಭಾಸದರಾದ ಕೊಲ್ಲಂಗೋಡದ ಸರ್ ವಾಸುದೇವ ರಾಜಾರವರು ಬರೆದ ಪತ್ರವನ್ನು ಮದ್ರಾಸ ಸರಕಾರವು ಧಿಕ್ಕರಿಸಿದೆ. ಮಲಬಾರ ಜಿಲ್ಹೆಯಲ್ಲಿ ಹೊಸ ಕ್ರಮದಂತೆ ತೀರ್ವೆ ಆಕಾರಣೆಯಾಗುವದು ಈ ಜಿಲ್ಹೆಯಲ್ಲಿ ತೀರ್ವೆ ಆಕರಣೆಯಾಗಿ ೩೦ ವರ್ಷ ಕಳೆಯಲಿಲ್ಲ. ಆದಾಗ್ಯೂ ಮದ್ರಾಸ ಸರಕಾರವು ತೀರ್ವೆ ತಿದ್ದುಪಡಿ ಮಾಡಲುದ್ಯುಕ್ತವಾಗಿದೆ. ಒಂದು ಬೆಳೆಯಾಗುವ ಭೂಮಿಯಲ್ಲಿ ಇನ್ನೊಂದು ಬೆಳೆಯಾಗುತ್ತಿದ್ದರೆ, ಖುಷ್ಕಿ ಭೂಮಿಯನ್ನು ಸಾಗುವಳಿ ಮಾಡಿದರೆ, ತೋಟ ಮಾಡಿದರೆ, ಸರಕಾರವು ತೀರ್ವೆಯನ್ನು ತಿದ್ದುಪಡಿ ಮಾಡಿ ಹೊಸ ತೀರ್ವೆಯನ್ನು ಆಕರಿಸುವದು. ೩೦ ವರುಷಗಳ ತನಕ ಹಾದಿ ಕಾಯಲಿಕ್ಕಿಲ್ಲ. ಮದ್ರಾಸ ಸರಕಾರದ ಈ ಹುಕುಮು ಭೂಕಂದಾಯದ ಪರಂಪರೆಯನ್ನೇ ಭಂಗಿಸುತ್ತದೆ. ಸರ್ವಾಧಿಪತಿಗಳಾಗಿದ್ದ ಕರ್ಝನ್ ದೊರೆಗಳು ೧೯೦೨ನೇ ಇಸ್ವಿಯಲ್ಲಿ ಸರಕಾರಿ ಪ್ರಕಟಣೆಯನ್ನು ಹೊರಡಿಸಿ ೩೦ ವರ್ಷಗಳ ಒಳಗೆ ತೀರ್ವೆಯಲ್ಲಿ ತಿದ್ದುಪಡಿಯಾಗಲಿಕ್ಕಿಲ್ಲವಾಗಿ ಆಶ್ವಾಸನ ಕೊಟ್ಟಿದ್ದಾರೆ. ೧೯೧೯ನೇ ಇಸ್ವಿಯಲ್ಲಿ ಜಾಯಿಂಟ ಪಾರ್ಲಿಮೆಂಟರಿ ಕಮಿಟಿಯವರು ಈಗಿನ ನಿಯಮಗಳನ್ನು ಕಾಯಿದೆ ಕೌನ್ಸಿಲಿನಲ್ಲಿ ಮಂಡಿಸಿ ಕಾಯಿದೆ ಕೌನ್ಸಿಲಿನ ಅಧಿಕಾರಕ್ಕೆ ತೀರ್ವೆ ತಿದ್ದುಪಡಿ ಒಳಪಟ್ಟಿರಬೇಕಾಗಿ ಸೂಚಿಸಿದ್ದುಂಟು. ಸರಕಾರಿ ಹುಕುಮುಗಳಿಂದ ತೀರ್ವೆಯನ್ನು ಬೇಕಾದ ಹಾಗೆ ತಿದ್ದುಪಡಿ ಮಾಡುವ ಕ್ರಮ ಆಕ್ಷೇಪಾರ್ಹವೆಂದು ಸರಕಾರ ಪಕ್ಷಪಾತಿ ಸಾಯಮನ್ ಕಮಿಶನ್ನಿನ ರಿಪೋರ್ಟಿನಲ್ಲಿ ಬರೆದಿದೆ. ಸಾಯಮನ್ ವರದಿಯನ್ನು ಶಿರಸಾ ಮನ್ನಿಸುವ ಸರಕಾರವು ಬೇಸಾಯಗಾರರಿಗೆ ಉಪಕಾರಕವಾಗುವ ಸೂಚನೆಗಳನ್ನು ಈ ತನಕ ಜಾರಿಯಲ್ಲಿ ತರಲು ಅಜಾಗ್ರತೆ ಮಾಡುವ ಕಾರಣವೇನ? ಗ್ರಾಮ ಸುಧಾರಣೆಯ ಹೊಸ ಮನ್ವಂತರದಲ್ಲಿಯೂ ಬೇಸಾಯಗಾರರ ಕಷ್ಟಪರಿಹಾರವಾಗಬಾರದೇ?

* * *

ಮುಂಬಯಿಯ ಸರಾಫ ಪೇಟೆಯಲ್ಲಿ ಒಳ್ಳೇ ಗದ್ದಲ. ಬೆಳ್ಳಿಯ ದರ ಸೋಮವಾರದಿಂದ ಇಳಿಯಲಾರಂಭಿಸಿದೆ. ಸೋಮವಾರ ೧೦೦ ತೊಲೆಗೆ ರೂ ೬೪|| ದರವಿತ್ತು. ಅದು ಇಳಿಯುತ್ತ ರೂ. ೫೯|| ವರೆಗೆ ಇಳಿದು ಬಂದಿದೆ. ಇನ್ನೂ ಇಳಿಯುವ ಲಕ್ಷಣಗಳಿವೆ. ಅಮೇರಿಕೆಯ ಸರಕಾರದವರು ಲಂಡನಿನ ಸರಾಫ ಪೇಟೆಯಲ್ಲಿ ಬೆಳ್ಳಿ ಕೊಳ್ಳುತ್ತಿದ್ದರಂತೆ. ಈ ವಾರದಲ್ಲಿ ಅವರು ಕೊಳ್ಳುತ್ತಿಲ್ಲ. ಮುಂಬಯಿಯಿಂದ ಕಳಿಸಿದ ೨೫೦೦೦ ಬೆಳ್ಳಿಯ ಗಟ್ಟಿಗಳು ಅಲ್ಲಿಯೇ ಬಿದ್ದುಕೊಂಡಿವೆ. ಅವಕ್ಕೆ ಗಿರಾಕಿಯಿಲ್ಲ. ಅಮೇರಿಕೆಯು ಖರೇದಿ ನಿಂತರೆ ಬೆಳ್ಳಿಗೆ ಕೇಳುವವರಿಲ್ಲ. ಅಮೇರಿಕೆಯ ಸರಕಾರದವರು ಚೀನ ಮೊದಲಾದ ದೇಶಗಳಲ್ಲಿ, ಎಲ್ಲಿ ಬೇಕಾದಲ್ಲಿ, ಅಗ್ಗ ಸಿಗುವಲ್ಲಿ ಖಾಸ ಖರೇದಿ ಮಾಡುವೆವಾಗಿ ಪ್ರಕಟಿಸುತ್ತಾರೆ. ಈ ಖರೇದಿ ಎಲ್ಲಿ ಮಾಡುತ್ತಾರೆಂದು ತಿಳಿಯಲಿಲ್ಲ. ಚೀನ ದೇಶದಲ್ಲಿ ಬೆಳ್ಳಿಯ ವ್ಯವಹಾರ ಹೆಚ್ಚು. ಅಲ್ಲಿ ಬೆಳ್ಳಿಯನ್ನು ಮಾರಾಟಕ್ಕೆ ತೆಗೆದಿದ್ದಾರೆ. ೨೫ ಕೋಟಿ ಔಂಸು ಬೆಳ್ಳಿಯನ್ನು ಚೀನ ಸರಕಾರವು ಅಮೇರಿಕೆಯ ಸರಕಾರಕ್ಕೆ ಕೊಳ್ಳಹೇಳಿತಂತೆ. ಅಮೇರಿಕೆಯ ಸರಕಾರವು ಒಪ್ಪಲಿಲ್ಲ. ಚೀನ ಸರಕಾರವು ಬೆಳ್ಳಿಯ ನಾಣ್ಯವನ್ನು ತೆಗೆಯುವ ಆಲೋಚನೆ ಮಾಡಿ ಬೆಳ್ಳಿಯನ್ನು ಮಾರಾಟ ಮಾಡಲಾರಂಭಿಸಿದ್ದರಿಂದ ಬೆಳ್ಳಿ ಅಗ್ಗವಾಯಿತಾಗಿ ಹೇಳುತ್ತಾರೆ. ಅಮೇರಿಕೆಯ ಸರಕಾರವು ಬೆಳ್ಳಿ ಖರೇದಿ ಮಾಡಲೊಪ್ಪದ್ದರಿಂದ ಬೆಳ್ಳಿಯ ದರ ಇಳಿಯಿತಾಗಿ ಹೇಳುತ್ತಾರೆ. ಚಿನ್ನದ ದರ ಇಳಿಯುವ ಸಂಭವವಿರುವದಾಗಿಯೂ ಅನೇಕರ ಹೇಳಿಕೆ. ರಶಿಯಾ ದೇಶದಲ್ಲಿ ಚಿನ್ನದ ಗಣಿಗಳು ಸಿಕ್ಕಿವೆ; ಆದರಿಂದ ಚಿನ್ನದ ದರ ಸದ್ಯಕ್ಕೇ ಇಳಿಯಬಹುದು. ಆದ್ದರಿಂದ ಚಿನ್ನ-ಬೆಳ್ಳಿ ಖರೇದಿ ಮಾಡದಂತೆ ಜನರು ಜಾಗರೂಕರಾಗಿರಬೇಕಾಗಿ ಮುಂಬಯಿ ವರ್ತಕರ ಅಂಬೋಣ. ಬೆಳ್ಳಿಯ ದರ ಇಳಿದದ್ದರಿಂದ ಹತ್ತಿಯ ದರ ಖಂಡಿ ೧ಕ್ಕೆ ರೂ. ೫ರಂತೆ ಇಳಿಯಿತು. ಬೇರೆ ಬೇರೆ ಧಾನ್ಯ-ಜಿನಸುಗಳ ಧಾರಣೆ ಇಳಿಯುವ ಸಂಭವವಿದೆ. ನೋಟುಗಳ ವ್ಯವಹಾರ ಬೆಳೆದ ಹಾಗೆ ಚಿನ್ನ-ಬೆಳ್ಳಿ ಧಾತುವಿನ ಉಪಯೋಗ ಕಡಿಮೆಯಾಗಿ ಅವುಗಳ ಬೆಲೆ ಇಳಿಯುವದಾಗಿ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸುತ್ತಾರೆ.

* * *

ಮಹಾತ್ಮರ ಪ್ರಕೃತಿ ಸುಧಾರಿಸುತ್ತಿದೆ. ರಕ್ತಾಭಿಸರಣದ ವೇಗ ಇಳಿದಿದೆ, ನಾಡಿಯು ಸುಧಾರಿಸಿದೆ. ಮಹಾತ್ಮರು ಬಹಳ ಅಶಕ್ತರಾಗಿದ್ದಾರೆ. ಆದರೆ ಪ್ರಸನ್ನವದನರು. ಡಾಕ್ಟರರು ಮಹಾತ್ಮರಿಗೆ ವಿಶ್ರಾಂತಿ ಪಡೆಯಬೇಕಾಗಿ ಸಲಹೆ ಕೊಟ್ಟಿದ್ದಾರೆ. ಬುಧವಾರ ಎಲ್ಲೂರಿನಿಂದ ಬಂದ ೪೨೦ ಜನರು ಮಹಾತ್ಮರ ದರ್ಶನ ಪಡೆದು ರೂ. ೨೫೦ಗಳ ಕಾಣಿಕೆ ಅರ್ಪಿಸಿದರು.

* * *

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ!!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ೩೦ ರಷ್ಟು ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೭ರಂತೆ ಬಡ್ಡಿಯಿದೆ, ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುವದಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಶ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಪತೆ:— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

NOTICE.

THE SIRSI ELECTRIC LICENSE, 1935.

The Public are hereby informed that the undersigned has applied to the Government of Bombay for license to supply electric energy to the public of Sirsi. The copy of the draft license can be had from the undersigned on payment of annas 8/—. Copy of the plan can be seen at the Sirsi Municipal office or in the office of the Laxmi Rice Mill, Sirsi. All those who have any representation to make should do so in writing to the Secretary to the Government P. W. D., Bombay, within three months, from the date of publication.

Address:-
The Laxmi Rice Mill,
Sirsi. N. KANARA.

ANANT SUBRAO KASARKOD,
Managing Proprietor,
Sirsi Electric Supply Co.

DRAFT.

The Sirsi Electric License, 1935.

License for [illegible]
granted by [illegible]
the Indian [illegible]

License. License is hereby granted to Anant Subrao Kasarkod, L. M. F., of Sirsi to supply electrical energy in the area with the powers, and upon the terms and conditions all specified below.

1. Short Title. This License may be cited as "The Sirsi Electric License, 1935."

2. Interpretation. The several words, terms and expressions which have been defined in the Indian Electricity Act, 1910 or the Rules made thereunder, shall have in this license the same respective meaning provided that:—

(1) The "Rules" shall mean the Rules made under the act;

(2) The Expression "**The Licensee**" shall mean and include the said Mr. A. S. Kasarkod, L. M. E., and his permitted assigns;

(3) The expression "Deposited Map" shall mean the plan of the area of supply as herein-after specified, which is deposited with Government, in pursuance of the rules, which plan is signed, for the purpose of identification, by the Joint-Secretary, to the Government of Bombay in the Public Works Department and by the licensee.

(4) The expression "the commencement of this license" shall mean the date of the notification by the Government of Bombay in the Bombay Government Gazette by whom this license is granted.

and

(5) the term "Government" shall mean the Government of Bombay.

3. Security. (1) The period within which the licensee shall show under sub-clause (a) of clause I of the Schedule to the Act that he is in a position fully to discharge the duties and obligations imposed upon him by the license throughout the area of supply, shall, unless otherwise ordered by Government under clause (b) of sub-section 3 of section 4 of the Act, be six months from the commencement of this license.

(2) Unless otherwise ordered by Government under clause (b) of sub-section (3) of section 4 [illegible] Act, the sum which the licensee shall secure to the satisfaction of Govern- [illegible] b-clause (b) of clause I of the [illegible] ct, shall be Rupees two thousand, and the period within which such sum shall be deposited or secured shall be three months from the commencement of this license.

4. Area of Supply. The area within which the supply of energy is authorised by this license, hereinafter referred to as "the area of supply", shall be the whole of the area comprised within the Municipal limits of the Sirsi Municipality, shown as bounded by a green line on the Deposited Map.

5. Area of Compulsory Supply. (1) The licensee shall within a period of eighteen months from the commencement of this license execute works to the satisfaction of Government for the purpose of a full and continuous supply of energy throughout the streets or parts of streets as are mentioned below and coloured Red on the Deposited Map, and also such additional streets or parts of streets as Government may, after consultation with the licensee, direct, within six months from the commencement of this license:-

1. Chanpattan Bazar Road from the Post Office to the Veterinary Dispensary.

2 Library Road from Sub-judge's court to the Petrol pump
Shimpi Galli from Champattan Bazar junction to the Vithoba Temple
Ravar Peth from the Municipal Office to the Vishnu Temple
Basti Galli from [illegible] to [illegible]
Nadig Galli from [illegible] to the Maruti Temple

(2) In the case of any difference between the description of the streets mentioned in sub clause (1) above and that indicated on the Deposited Map the latter shall prevail

(3) The licensee shall commence to execute the works foresaid within six months from the commencement of this license and shall commence the supply of energy within eighteen months therefrom

(4) The licensee shall every three months submit reports to Government and also the Electrical Engineer to Government specifying the progress made up to date from the commencement of the license in the execution of the work in the compulsory area

5 **Revocation of License** If the licensee fails to comply with the provisions of sub clauses (1) (3) or (4) of this clause or if in the opinion of Government the progress made during any portion of the said period of eighteen months is unsatisfactory the license shall be liable to be revoked and the security furnished as per sub clause (2) of clause 3 above forfeited

6 **Purposes of Supply** (1) Subject to the provisions of this license and the Act and the Rules the licensee shall be entitled during the continuance of this license to supply energy within the area of supply for all purposes, and in bulk and to other licensees for their own purposes —
Provided that no supply of energy shall be commenced to be given by the licensee either in retail to any owner or occupier of private premises, or in bulk to a distributing licensee unless and until the licensee's work have been inspected by the Government and Electrical Inspector and passed by him in writing and until Government have approved,

(a) The form of requisition to be made by such owner or occupier or distributing licensee for such supply of energy

(b) the form of written contract or agreement with the licensee to take a supply of energy to be executed or entered into such by owner or occupier or distributing licensee and

(c) the amounts of all miscellaneous charges which the licensee proposes to make against such owner or occupier or distributing licensee as incidental to, and in connection with such supply

(2) Clauses V, VI VII IX, X and XI of the Schedule to the Act shall wherever necessary be read as expressly added to or varied to the extent set out in the proviso to sub clause (1) of this clause

(3) The licensee shall not supply energy to any premises unless the owner or occupier of such premises shall have satisfied the licensee that all works, including repairs, relating to electrical wires, fitting and apparatus on such premises have been carried out by a licensed electrical contractor and under the supervision of a Competency certificate-holder under the rules issued by Government in this behalf or by such other person as may be authorised to carry out such work under rule No 40—A of the rules, and clause VI of the Schedule to the Act shall be deemed to have been modified accordingly

7 **System of Supply.** (1) The system of supply of energy which may be adopted for the purpose of this license shall be the following —

[illegible] **Current.**
Single [illegible] ee or four wire,
periodical [illegible] pressure of
supply at the consumer's terminals shall be as under —

(a) 230 volts between each phase and neutral for general purposes viz lights fans heaters etc

(b) 400 volts between phase for motive power purposes and purposes other than those specified in (a) above and—

(c) Any pressure upto 6,600 volts for feeders and for supply to any large consumer for power purposes

or

II Direct Current.

For general purposes viz lights, fans heaters etc

(a) A continuous current low pressure supply at the consumer's terminals at a pressure of 220 230 volts between one of the outers and the middle conductor of a three-wire system, the middle conductor being connected to earth at the generating station but insulated at all other parts, *or*

(b) A continuous current low pressure supply at a pressure of 220-230 volts between the conductors of a two wire system

For Power Purposes. A continuous current medium pressure supply at a pressure of 440/460 volts between the outers.

(1) Provided always that the licensee may, from time to time, with the previous consent in writing of, and subject to such limitations and conditions as shall be prescribed in writing, by Government adopt any other system of supply for the purpose of this license and that no high tension mains shall be brought within or near the populated areas without the specific sanction of Government in each case

(2) The feeders, distributing mains and service lines shall be overhead, provided that wherever and whenever specifically permitted or required to do so in writing by Government, such feeders, distributing mains or service lines shall be laid underground

Provided that—

(*a*) No work or works shall be commenced by the licensee unless and until the method of construction shall have been previously approved, in writing, by the Electrical Engineer to Government

(*b*) Where overhead mains are used, they shall be nowhere at a height less than 20 feet from the ground level of the streets at all crossings & in all the routes where Raths or Taboots or similar religious processions are likely to pass In case of dispute, such routes and heights shall be determined by the District Magistrate

(*c*) In narrow lanes or streets, the posts shall be placed on the extreme edge of the lane or street and a special construction to be approved by the Electrical Engineer to Government, shall be adopted to keep the wires clear of every building

(*d*) Nothing in this license shall authorise the licensee to use overhead mains at any higher pressure than the medium pressure without the written sanction of Government in each case, and subject to any conditions or limitations which Government may prescribe

(3) Due precaution shall be taken to avoid any possible interference with the adjacent telephone or telegraph circuits due to inductive method The electric wires shall be suitably transposed where necessary

(4) For the purpose of rule 61 of the Rules, the maximum wind pressure shall be taken as 15 pounds per square foot

8 Generating, Receiving, Transforming & Distributing Stations.

(1) The Generating, Receiving, Transforming and Distributing stations shall be within the area of supply But the licensee shall be at liberty either to generate energy to satisfy the whole or any part of their requirements or to buy the whole or any part of the energy they require for distribution and resell the same within the area of supply When energy is bought from outside the area of supply, the licensee may, if necessary, lay down or place electric supply lines, in accordance with the Act and the Rules for the conveyance and transmission of energy, from the point of bulk supply outside the area of supply, to the boundary of the area of supply

(2) Properly qualified man for electricity shall be employed in the generating station, and the whole undertaking shall be under the charge of a fully qualified Electrical Engineer with previous experience

9. Rates Limits of prices to be charged. The prices to be charged by the licensee for energy supplied by him shall not exceed the maxima set out below or, in case of a method of charge approved by Government under Clause (*c*) of sub-section (3) of Section 23 of the Act, such maxima as Government may fix on approving the method

(1) Where energy is supplied through meter.

For General Supply Purposes—

(*a*) For lights and fans a rate of ans 8 per unit.

(*b*) For Heating and Refrigerating Purposes — a rate of annas 3 per unit

(2) For Motive Power Purposes and purposes other than those provided for in items 1 (*a*) & (*b*) a rate of Rs 3/- per K W per month plus annas 3 per unit

Provided that the total consumption of energy in all the Government Buildings in the area supply shall be treated as a single bulk supply and a rebate of 1 per cent shall be granted for every 250 units consumed per month upto maximum of 35 per cent

Note.- The term "unit occuring in this sub clause shall mean the energy contained in a current of 1,000 Ampered flowing under an Electric Motive force of 1 volt during 1 hour

(2) A Minimum charge of Rs 3/ per month in the cases referred to in items (*a*) and (*b*) of sub-clause 1 above shall be charged exclusive of meter rent, and irrespective of whether

nergy of that value has been consumed or not.

(3) **Meter rent** The rent to be charged for meters shall not exceed— As 8 per month for a D C meter or a single phase A C meter,

and

Re 1/ per month for a poly phase A C meter

(4) Where energy is not supplied through meter a fixed rate of Rs 1-8-0 per mensem shall be charged for a 20 watt light and a proportionate rate for every additional 20 watts or part thereof burning for not more than 6 hours per night i.e. from 6 p.m. to 12 midnight

(5) In the case of large consumers contracts may be made for fixed periods at such rates not exceeding the rates specified in sub clause (1) of this clause as may be agreed upon

(6) Without prejudice to anything contained in the above clause the licensee may at any time enter into a special contract with the Municipality of Sirsi for supply of energy to the Municipality for public lighting on such terms and conditions and at such rates not exceeding the maximum charges prescribed above as may for the time being be mutually agreed upon

10 Breaking up of Streets The location of trenches to be opened in any street at any one time and the period for which the same may remain open shall be determined from time to time by Government or the local authority by whom such streets are repairable

11 Purchase of Undertaking (1) The option of purchase given by Section (7) sub section (1) of the Act shall be exercisable first on the expiration of 40 years from the commencement of this license & thereafter on the expiration of every subsequent period of 10 years therefrom The percentage of the value of lands buildings works materials and plant of the licensee referred to in sub section (1) of section 7 of the Act which shall be added to such value under the second proviso to that sub section on account of compulsory purchases shall be 10/

(2) In accordance with clause (*d*) (ii) of sub section (2) of Section 3 of the Act it is hereby declared that the generating station belonging to the licensee and used in connection with the undertaking or where energy is bought from any other person or company the receiving and distributing sub stations used in conection with the undertaking shall form part of the undertaking for the purposes of purchase under Section 5 or Section 7 of the Act

12 Assignment of the license At any time after the commencement of this license the licensee may, with the previous consent in writing of Government and subject to compliance with such conditions upon which such consent may be given assign this license and transfer the whole of the undertaking in respect of which this license is granted (including all lands, buildings, works materials and the plant of the licensee) to any individual or company formed or to be formed and registered in accordance with the law for the time being in force in British India or in Great Britain, under any enactment relating to companies for the time being in force there and having authority to take over the license and the said undertaking as the case may be and to exercise the power and perform the obligations given to or imposed upon the licensee under this license and the Act and the Rules, and on such assignment and transfer the rights powers, authorities, obligations and liabilities of the licensee shall be exercisable by and shall attach to such individual or company formed or to be formed as aforesaid

ANANT SUBRAO KASARKOD,
SIRSI.
Applicant.

Dated this 2nd day of December One Thousand Nine Hundred and Thirty Five

◆

— ಕೊಚೀನದೊಳಗಿನ ಎರ್ನಾಕುಲಂ ಪಟ್ಟಣದಲ್ಲಿ ಮಹಾರಾಜಾ ಕಾಲೇಜಿದೆ ಇಲ್ಲಿಯ ವಿದ್ಯಾರ್ಥಿಗಳೊಳಗಿನ ಹಿಂದೀ ಭಾಷೆಯ ಅಭಿಮಾನ ನೋಡಿ ಮಹಾರಾಜರವರು ಹಿಂದೀ ಅಧ್ಯಾಪಕರನ್ನು ನೇಮಿಸಬೇಕಾಗಿ ರಾಜಾಜ್ಞೆ ಹೊರಡಿಸಿದ್ದಾರೆ

— ಬ್ರಿಟಿಶ ದೇಶದಲ್ಲಿ ವಿಮೆ ಕಂಪನಿಗಳು ಹೊಸ ಪದ್ಧತಿಯನ್ನು ಏರ್ಪಡಿಸಿವೆ ವಿಮಾನುಗಳ ಪೆಟ್ಟಿನಿಂದ ಜನರಿಗೆ ರಕ್ಷಿಸಬೇಕೆಂಬುದೇ ಈ ಪದ್ಧತಿಯ ಉದ್ದೇಶ ಮ್ಯುನಿಸಿಪಾಲಿಟಿಯವರು ತಮ್ಮ ನೀರಿನ ಭಾಂಡಾರಗಳಿಗೆ ವಿಮೆ ಇಳಿಸಲಾರಂಭಿಸಿದ್ದಾರೆ ೧೦೦ ಪವನಿನ ವಿಮೆ ಇಳಿಸಬೇಕಾದರೆ ೯ ಪನ್ನಿನಂತೆ ಕಂತು ತುಂಬಬೇಕು

— ಮದ್ರಾಸದೊಳಗೆ ಪೆಟ್ರೋಲ ಮಾರಾಟ ಬರ್ಮಾ ಶೆಲ್ ಕಂಪನಿಗೂ, ವೆಸ್ಟರ್ನ ಇಂಡಿಯಾ ಆಯಿಲ್ ಕಂಪನಿಗೂ ಬಡಿದಾಟ ಬರ್ಮಾ ಶೆಲ್ ಕಂಪನಿನ ಗ್ಯಾಲನ್ನಿನ ದರ ಇಳಿದು ೧ ರೂ ೯ ಪೆನ್ಸ ವೆಸ್ಟರ್ನ ಇಂಡಿಯಾ ಆಯಿಲ್ ಕಂಪನಿಯವರು ರೂ ೧ ೧॥ಂ ಮಾಡಿದ್ದರಿಂದ ಬರ್ಮಾ-ಶೆಲ್ ಕಂಪನಿಯವರು ೧ ರೂಪಾಯಿಗೆ ಇಳಿಸಿದ್ದಾರೆ ಮತ್ತೂ ಎಷ್ಟರ ಮಟ್ಟಿಗೆ ಇಳಿಯುತ್ತದೋ ನೋಡಬೇಕು ಮೋಟಾರಿನವರಿಗೆ ಸ್ವಲ್ಪ ಸುಖ

— ರಾ| ವಿಶ್ವಾಸ ಎಂಬ ಬಂಗಾಲಿ ಸಾಹಸಿಗನು ಸೈಕಲಿನ ಮೇಲೆ ಪೃಥ್ವಿಪ್ರದಕ್ಷಿಣೆ ಮಾಡಲಾರಂಭಿಸಿದ್ದಾನೆ ೯೧ ಸಾವಿರ ಮೈಲು ಈತನ ಸಂಚಾರವಾಯಿತು ಗುಡ್ಡ ಗಿರಿ-ಕಂದರ ಮರು ಭೂಮಿ ಚಳಿ ಮಳೆ ಉರಿ ಬಿಸಿಲು ಇವುಗಳಲ್ಲಿ ಈತ ಪ್ರಯಾಣ ಮಾಡಿದ್ದಾನೆ ಈತನು ಹೊರಟಿದ್ದು ಸಿಂಗಾಪುರದಿಂದ ಬಂಗಾಲ, ಪಂಜಾಬ, ಅಫಘಾನಿಸ್ಥಾನ, ಇರಾಣ, ಸಿರಿಯಾ ಮಲಯಾ ಚೀನ ಜಪಾನ ದೇಶಗಳನ್ನೆಲ್ಲ ಸುತ್ತಿದ್ದಾನೆ ಇನ್ನು ೩ ೪ ವರ್ಷಗಳ ತನಕ ಈತನು ಸಂಚರಿಸುತ್ತಿರುವನು

ಮುಖ್ಯ ಪ್ರಧಾನರಾದ ಮಿ| ಬಾಲ್ಡವಿನ್‌ರವರ ಮಗಂದಿರಿಯು ಇಂದಿಯ ಪ್ರವಾಸಕ್ಕೆ ಇದೇ ಬರುವ ಜನವರಿ ತಿಂಗಳಲ್ಲಿ ಬಿತ್ತರಿಸುವವರಿದ್ದಾರೆ. ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಹಾಜರಿರುವರು. ಹೊಸ ಕಾನೂನಿನಂತೆ ನಡೆಯುವ ಇಲೆಕ್ಸನಿನ ಮೋಜಣಿಯನ್ನು ನೋಡುವರು. ಆ ವೇಳೆ ಮಹಾತ್ಮರಿಗೂ ರವೀಂದ್ರನಾಥ ಟಾಗೋರರವರಿಗೂ ಸೌ| ಸರೋಜಿನೀ ನಾಯುಡುರವರಿಗೂ ಕಂಡು ಅವರೊಡನೆ ಮಾತನಾಡಿ ಸ್ವದೇಶಕ್ಕೆ ಮರಳುವರು. ಹಿಂದುಸ್ಥಾನದ ಸಂಚಾರದ ಕುರಿತು ಅವರೊಂದು ಗ್ರಂಥವನ್ನು ಪ್ರಕಟಿಸುವವರಿದ್ದಾರೆ.

⁂

ಇಚಲಕರಂಜಿಯ ರಾ| ಮುಳೇ ಇವರು ಹಲವು ಯುಗಗಳ ಶನಿಕ ಸ್ಕೂಲನ್ನು ಸತತವಾಗಿ ನಡಿಸಿ ಪ್ರಜೆಯ ಕಾರ್ಯೋನ್ನತಿಯಲ್ಲಿ ಗಳಿದ್ದಾರೆ. ಈ ಬಗ್ಗೆ ಪ್ರಜೆಯಲ್ಲಿ ರಾ| ನರಸಿಂಹ ಚಿಂತಾಮಣಿ ಕೇಳಕರ ಇವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಅವರಿಗೆ ರೂ ೧೫೦೦ರ ಪಾರಿತೋಷಕ ಕೊಡಲಾಯಿತು. ಸಂಸ್ಥಾನಿಕರಾದ ಶ್ರೀಮಂತ ಬಾಬಾಸಾಹೇಬ ಘೋರಪಡೆಯವರು ರಾ| ಮುಳೇಯವರಿಗೆ ಪುಷ್ಪಹಾರ ಹಾಕಿ ಉತ್ತೇಜಿಸಿದರು. ರಾ| ಮುಳೇಯವರು ಒಡ ಹುಡುಗರು ಚಿಕ್ಕಂದಿನಿಂದಲೇ ಇವರಿಗೆ ಸ್ಕೂಲಿನ ಛಂದ ಒದಲಾರ್ಗ ಪ್ರಾವೀಣ್ಯ ಸಂಪಾದಿಸಿ ಇಂದಿಗ ಅವರು ಹೆಸರು ಪಡೆದಿದ್ದಾರೆ. ಪರೀಕ್ಷೆಯೊಳಗಿನ ಬೇರೆ ಬೇರೆ ವ್ಯಾಯಾಮ ಮಂಡಳದವರು ಬೆಳ್ಳಿಯ ಒಳ್ಳೆಯ ಸುವರ್ಣ ಪದಕ ಫೌಂಟನ್ ಪೆನ್ ಮೊದಲಾದವುಗಳನ್ನಿತ್ತು ಸತ್ಕರಿಸಿದರು.

⁂

ನಾಶಿಕದೊಳಗೆ ಚೈತ್ರ ಮಾಸದಲ್ಲಿ ಜರುಗಲಿಕ್ಕಿದ್ದ ರಥೋತ್ಸವವು ಕಳೆದ ಮಂಗಳವಾರ ಸಡಗರದಿಂದ ನೆರವೇರಿತು. ಅಸ್ಪೃಶ್ಯರು ಸತ್ಯಾಗ್ರಹದ ಹೆದರಿಕೆ ಹಾಕಿದ್ದರಿಂದ ಶಾಂತತೆ ರಕ್ಷಣೆಗಾಗಿ ಸರಕಾರವು ರಥೋತ್ಸವವನ್ನು ಹೊರಡಿಸಬಾರದೆಂದು ಪ್ರತಿಬಂಧಕ ಹುಕುಮು ಹೊರಡಿಸಿ ಈ ಬಾರಿ ಮಂಗಳವಾರ ಅಸ್ಪೃಶ್ಯರು ನಾಶಿಕ ಗ್ರಾಮದೊಳಗೆ ಸೇರಬಾರದೆಂದು ಮಜಿಸ್ಟ್ರೇಟರು ವಿಧಿಸಿ ರಥೋತ್ಸವವನ್ನು ನೆರವೇರಿಸಗೊಟ್ಟರು. ಅಸ್ಪೃಶ್ಯರು ಸಂತಪ್ತರಾಗಿ ಧರ್ಮಗ್ರಂಥಗಳನ್ನು ಸುಟ್ಟರಂತೆ, ತಮ್ಮ ಕಡೆಗಿರುವ ದೇವರ ಮೂರ್ತಿಗಳನ್ನು ಒಡೆದರಂತೆ!!

ಗೋಮಾಂತಕ ಜಾಂಬಾವಲಿ ಸಂಸ್ಥಾನದ

ಶ್ರೀ ದಾಮೋದರ ದೇವರ ಭಾವಚಿತ್ರಗಳು

ಈ ಕೆಳಗಿನ ಪತ್ತೆಯ ಮೇಲೆ ಮಾರಲಿಕ್ಕುತ್ತವೆ

ಬೆಲೆ ೧ ರೂಪಾಯಿ

ಪತ್ತೆ – ಪುರುಷೋತ್ತಮ ಲಕ್ಷ್ಮಯ್ಯ
ಶ್ಯಾನಭಾಗ ದುಕಾನ, ಕುಮಟಾ
ದಾಮೋದರ ನಾಗಪ್ಪ ಶ್ಯಾನಭಾಗ
ಸ್ಟೇಶನರಿ ದುಕಾನ ಕಾರವಾರ
ಯಶವಂತ ವಿಷ್ಣು ನಾಯಕ ಬೊಂಬಿ,
ಮರ್ಚಂಟ್, ಮಡಗಾಂವ ಗೋವಾ
ವೆಂಕಟೇಶ ರವಳ ಕಾಮತ
ದಲಾಲ, ವಾಸ್ಕೋ ದ ಗಾಮಾ ಗೋವಾ.
ಕಾಶೀನಾಥ ದಾಮೋದರ ನಾಯಕ, ದಲಾಲ,
ಆನಂದಬಿಲ್ಡಿಂಗ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ೨

ಅಶ್ವಾರೂಢ ಕವಚ!

ನಿರಾಶರಾದವರಿಗೆ 'ಅಶ್ವಾರೂಢ ಯಂತ್ರವು ಟಳ ಪನ ತದಲ್ಲಿ ಮಧು ವೃಷ್ಟಿಯಂತೆ' ಇಷ್ಟ ಸಿದ್ಧಿ ಮಾಡುವದಲ್ಲದೆ ಮತ್ತೂ ಅನೇಕ ತರದ ಲಾಭಗಳಾಗುವವು. ೪ ಆಣೆ ಸ್ಟ್ಯಾಂಪಿನೊಡನೆ ಜಾತಕದ ನಕಲು ಕಳಿಸಿ ೩ ಪ್ರಶ್ನೆಗಳನ್ನು ಕೇಳಿದ್ದಲ್ಲಿ ಸರಿಯಾದ ಉತ್ತರ ಕಳಿಸಲಾಗುವದು.

ಯಂತ್ರಧಾರಣ ನಂತರ ೧ ತಿಂಗಳಿನಿಂದ ೧೦ ವರ್ಷದೊಳಗಾಗಿ ಫಲಪ್ರಾಪ್ತಿ ಕಂಡುಬರುವದು. ಸುವರ್ಣದ ತಗಡಿನಿಂದ ತಯಾರು ಮಾಡಿದ ಯಂತ್ರಕ್ಕೆ ಬೆಲೆ ರೂ 20-0 0 ಬೆಳ್ಳಿಯ ಯಂತ್ರಕ್ಕೆ ರೂ 3-0-0 ತಾಮ್ರದ ಯಂತ್ರಕ್ಕೆ ರೂ 2 0-0

ಪತ್ತೆ ದೇವಿದಾಸ ಪಿ.ಕೆ.ಕೆ.ಎನ್.,
ಜ್ಯೋತಿಷಿ ಕುಮಟಾ. [ಉ ಕನ್ನಡ]

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ ಟೀಕಾ ತಾತ್ಪರ್ಯಸಹಿತ

IIIನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು IIನೇ ಭಾಗ ಜನ್ಮಾದ್ಯಧಿಕರಣಗಳು ಈಗಲೇ ತಯಾರಾಗಿವೆ ಪುಟಗಳು ೨೬೦ • ೧೬೧

Iನೇ ಭಾಗ ಜಿಜ್ಞಾಸಾಧಿಕರಣ ಪುಟಗಳು ೩೩೧ ಚಂದಾ ರೂ ೩ ೮-೦

IIನೇ ಸಂಚಿಕೆ ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೧೮ ಚಂದಾ ರೂ ೪ ೬-೦ ಟಪಾಲು ಹಾಸಲು ಪ್ರತ್ಯೇಕ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಒನರರಿ ಟ್ರೆಝರರ್
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ
(ದಕ್ಷಿಣ ಕನ್ನಡ)

ಕಥಾಕುಂಜ.

(ಸಣ್ಣ ಕಥೆಗಳ ಮಾಸಪತ್ರಿಕೆ)
ಮುಂಬಯಿ ಕರ್ನಾಟಕ ಪ್ರಾಂತದ ವಿದ್ಯಾಖಾತೆಯವ
ರಿಂದ ಶಾಲೆ-ಕಾಲೇಜು ಹಾಗು ವಾಚನಾಲಯಗಳಿಗೆ
ಮಂಜೂರಾದೆ

ಕನ್ನಡ ನಾಡಿನ ಸುಪ್ರಸಿದ್ಧ ಬರಹಗಾರರ ಕಥೆ [illegible] ನಾಡಿನ ಸಾಹಿತ್ಯ ಸುದ್ದಿ ಮಾಸಭವಿಷ್ಯ ಮೊದಲಾದವುಗಳನ್ನು ಒದಗಿಸುವ ಏಕಮಾತ್ರ ಮಾಸಪತ್ರಿಕೆ ಕನ್ನಡಿಗರಲ್ಲಿ [illegible] ವಾರ್ಷಿಕ ವರ್ಗಣಿ ೨-೪-೦ (ಟಪಾಲ ಸಹಿತ) ಶಾಲೆ-ಕಾಲೇಜು ವಾಚನಾಲಯಗಳಿಗೆ ೨ ರೂ

ಬಿಡಿ ಸಂಚಿಕೆಗಳ ಮಾದರಿಗೆ ಮುಕ್ಕಾಲ ಪಟ್ಟಿಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕಾಗಿದ್ದಾರೆ

ಜಾಹಿರಾತು ಕೊಡುವವರಿಗೆ ಸುವರ್ಣ ಸಂಧಿ!

ವರ್ಗಣಿಗೆ ಈಗಲೇ ಬರೆಯಿರಿ ಈ ವರ್ಷದ ಚಂದಾದಾರರಿಗೆ ಮಾತ್ರ ೧೦೦ ಪುಟಗಳ ವಿಶೇಷ ಸಂಚಿಕೆ ಉಚಿತ

ಕಥಾಕುಂಜ ಕಾರ್ಯಾಲಯ, ಬೆಳಗಾವಿ

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು ಸ್ವಾಸ್ಥ್ಯನಿಲಯ ಧಾರವಾಡ.

ಡಾ| ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮಕಾರಿ ಔಷಧಗಳು

ಅಶೋಕಾ ಕಾರ್ಡಿಯಲ್ — ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವವಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಕೂಲ, ಲಾಭ ಹೊಂದಿರುವರು. ಕ್ರಯ ರೂ ೧ ೮-೦

ಅಶ್ವಗಂಧ ಟೋನಿಕ್ — ಮಜ್ಜಾ, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನನಷ್ಟ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಕುತ್ತಕ್ಕೆ ಇದು ದಿವ್ಯೌಷಧ! ರೂ ೧-೮-೦

ಎಗ್ಯು ಮಿಕ್ಸ್ಚರ, ಫೀವರ ಡೆಸ್ಪ್ರಸ್, ಆಮ್ಲ ಸುಧಾ, ಕರ್ಪೂರಾರ್ಕ, ಸಾಯುರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ತಕ್ಕಗಟ್ಟಲೆ ಇವುಗಳ ಉಪಯೋಗವಾಗುತ್ತದೆ. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ವೇಳೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಸ್ಚರ, ಬಾಲಾಮೃತ, ಬ್ಲಡ್ ಮಿಕ್ಸ್ಚರ, ಕಾಲರೇಲ, ಡಿಲ್ ವಾಟರ, ಸಾಯುರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಪಿಂಡ, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. [illegible] ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು.

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು

ರಾ| ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ ಕನ್ನಡ)

ॐ

'दशमूलारिष्ट.'

ದಶಮೂಲಾರಿಷ್ಟ

ಇದು ಬಹುತರವಾಗಿ ಎಲ್ಲ ಆರ್ಯವೈದ್ಯರಿಗೂ ಹಾಗೂ ಎಲ್ಲ ಫಾರ್ಮಸಿಗಳವರಿಗೂ ತಿಳಿದ ಔಷಧವಾಗಿದ್ದರೂ ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಂಡು ಬರುವದಿಲ್ಲ. ಆದರೆ ನಮ್ಮಲ್ಲಿ ತಯಾರಿಸಿದ ದಶಮೂಲಾರಿಷ್ಟವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಆ ಪರಿ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಹಳ ಬಲವತ್ತರವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನ ಕ್ರಿಯೆ ಸರಿಪಡಿಸಿ ಎಂಥ ಅಶಕ್ತರು ಇದ್ದರೂ ರೋಗ ನಾಶಿಸಿ ಮೈಯಲ್ಲಿ ತಾಕತ್ತನ್ನು, ಶಕ್ತಿಯನ್ನು ಹುಟ್ಟಿಸುವದಾಗಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು ಗುಲ್ಮ, (ವಾತ, ಕ್ಷಯ, ವಾಂತಿ) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಟವ್ಯಾಧಿ ಮೂಲವ್ಯಾಧಿ ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಾಶಯ ಕಟ್ಟಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ ಮುಖ್ಯತಃ ಹೆಂಗಸರಿಗೆ ಪ್ರಸವವಾದ ನಂತರ ಆಗುವ ವಿಕಾರಗಳಿಗೆ, ನರಗಳ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವ ತರದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ.

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವತಿಯರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬—೧೨—೦
,, ಬಾಟ್ಲಿ ೧೨ಕ್ಕೆ ರೂ ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ, ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಅನೇಕ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,
ಮಾಲಕ,
ಆರ್ಯಧನ್ವಂತರಿ ಔಷಧಾಲಯ,
ಪೋಸ್ಟ — **ಕುಮಟಾ.** (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!
[illegible] ಕಡಿಮೆಯಾದ ವ್ಯಯದಿಂದ ಕ್ರಮಕ್ರಮವಾದ ಅಭಿವೃದ್ಧಿ
[illegible] ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ
[illegible] ಕನ್ನಡಿಗರದೇ ಆದ
ಮಂಗಳೂರಿನ
ಪೋಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್
ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!
ನಾಡಿನ ವಾತ್ಸಲ್ಯ ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.
ಮೊದಲನೇ ವರ್ಷದ ಮೌಲ್ಯನಿರ್ಣಯದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ
ವರ್ಷ ಒಂದರ ರೂ. 10-ರ ಬೋನಸ್ ಹಂಚಲಾಗುವದು!
ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ,
ವ್ಯಾಪಕರೂ ಯೋಗ್ಯರೂ ಆದ ಏಜಂಟರು ಬೇಕು!
ಅವರಿಗೆ ವಿಶೇಷವಾದ ಸೌಕರ್ಯಗಳನ್ನು ಯಥೋಚಿತವಾದ ಪುರಸ್ಕಾರಗಳನ್ನೂ
ತಪ್ಪದೆ ವ್ಯವಹಾರ ಬೆಳಸಿರಿ
ಮುಂಬಯಿ ಕರ್ನಾಟಕದ ಮುಖ್ಯ ಏಜಂಟರು —
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಚೀಫ್ ಏಜಂಟರು ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900

ॐ

FIXED RATE

ದಾಸಪ್ಪಾ ಕೃಷ್ಣಪ್ಪಾ
ಢಾಕಪ್ಪನವರ ಬ್ರದರ್ಸ
ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಸಿ

ನಮ್ಮಲ್ಲಿ ಜೇಪಿ ಜೋರಿ ಅಂಚಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪಕ್ಕಾ ರೇಶ್ಮೆಯ ಖಣಗಳು ಕೋಟಿಂಗ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ ಜಮಖಾನ ರುಮಾಲು ಉಷ್ಣ ಸೇರ್, ಟೊಪ್ಪಿಗಳೂ, ಧೋತರ ಜೋಡಗಳೂ, ರೇಶ್ಮೆ ಜಿಲ್ತರ [illegible] ಮುಂತಾದ ಎಲ್ಲ ತರದ ಜವಳಿಯ ಕಬ್ಬಿಣದ ಮಜಬೂತ ಟ್ರಂಕುಗಳೂ ಛತ್ರಿಗಳೂ ಮತ್ತೆ ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಭಯವಿಲ್ಲದೆ ನ್ಯಾಯ ದರದಿಂದ ಸಿಗುವವು ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel 'Honesty'] **D. K. DHAKAPPA BROS.,**
Cloth Merchants,
SIRSI N KANARA

ಹೊಸ ಮ್ಹಾಲು. **ದರ ಅಗ್ಗ.**

ಸುಲಭ ಕ್ರಯ! ಡಾಕ್ಟರ ಜೀ. ಬೀ ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು ತಲೆಯುಲ್ಲಿಯ. ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಅಲರ್ಜೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಸೇರಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮುಖ್ಯ ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬೆರೆದು ಉಪಯೋಗಿಸಿದರೆ ಎಲ್ಲವೂ ಪರಿಹಾರವಾಗುವದು ಇದನ್ನು ಅನೇಕ ಪ್ರಭುಗಳು ಸ್ವಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪ್ಯಾಕೆಟ ಕಳಿಸಲಾಗುವದು ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ ಪಿ ೪ ಆಣೆ ಡಜನ್ ೧ಕ್ಕೆ ರೂ. ೩ ೮ ೦ ವಿ ಪಿ ೦-೫-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ – ಗುರುಬಸವ ಅಂಡ್ ಕಂಪನಿ ಪಿ.ಟಿ. ಪೋ ಬಾ ನಂ ೧೦ ಮಾರ್ಕೆಟ್ [illegible]

(Registered Trade Mark)

No. B 1270. Monday, 23rd December, 1935

೧೪

ವರ್ಗಣಿ.
ಮುಂಗಾಡ
ರೂ 2-4-0.
ಹಿಂದಿನ
ರೂ. 3-1-0.
ವಿದ್ಯಾರ್ಥಿ ಸೇರಿ
ರೂ 3-1-0.
ಗೆ 0-1-0
ಗೆ 0-2-0

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೩೫

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಮುದ್ರಾಕ್ಷರದ (೧೪ ಎಮ್ ಉದ್ದ ೬ ಸಾಲುಗಳವರೆಗೆ ರೂ 1-0-0 ಆ ನಂತರ, ಪ್ರತಿಸಾಲಿಗೆ 0-2-0 ಹೆಚ್ಚಿಂಗದ ಸಾಲು ಎಷ್ಟು ಕೊಡ್ತಿರುವದೋ ೮ ಪಾಠದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—ಕುಮಟಾ— ಕಾನಡಾವೃತ್ತ, ಸೋಮವಾರ ತಾರೀಖು ೨೩ ಮಾಹೆ ಡಿಸೆಂಬರ ಸನ್ ೧೯೩೫ನೇ ಇಸವಿ. —

ESTD 1906

NARA BANK

LIMITED.

ನರಾ ಬ್ಯಾಂಕ

ಲಿಮಿಟೆಡ್.

(ಸ್ಥಾಪನೆ ೧೯೦೬)

ಹತ್ತೊಂಭತ್ತು ಕಾರ್ಯಾಲಯಗಳ ಹೆಸರ

ಮುಂಬಯಿ—ಫೋರ್ಟ,
ಮುಂಬಯಿ-ಮಾಂಡ್ವಿ,
ಮಂಗಳೂರು ಬಂದರ,
ಮಂಗಳೂರು-ಶಹರ
ಚಿಕ್ಕಮಗಳೂರು,
ಎರ್ನಾಕುಳಮ್,
ಬೆಂಗಳೂರು,
ಕಾಸರಗೋಡ,
ಕಲ್ಲಿಕೋಟೆ,
ಕುಂದಾಪುರ,
ದಾವಣಗೆರೆ
ಗಂಗೊಳ್ಳಿ
ಬಂಟ್ವಾಳ,
ಪುತ್ತೂರ,
ಉಡುಪಿ,
ಹುಬ್ಬಳ್ಳಿ,
ಕಾರ್ಕಳ,
ಅಲೆಪ್ಪಿ,
ಮತ್ತು
ಕೊಚ್ಚಿ

ಠೇವಣಾತಿಯ ವರ್ಗಗಳು ವಾರ್ಷಿಕ ಶೇಕಡಾ ೪ರ ವರೆಗೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ ಸಿಂಡಿಕೇಟ್, ಲಿಮಿಟೆಡ್, ಉಡುಪಿ.

ಶಾಖೆಗಳು — ಉಡುಪಿ ಬ್ರಹ್ಮಾವರ, ಹೊನ್ನಾವರ ಕುಂದಾಪುರ ಕುಮಟಾ ಕಾರವಾರ ಸಿರ್ಸಿ,
ಅಂಕೋಲಾ ಹುಬ್ಬಳ್ಳಿ ಬೆಳಗಾಂವ ಮಂಗಳೂರ, ಬೆಂಗಳೂರ ಸಿಟಿ ಶಕ್ತಿನಗರ,
[illegible] ಹಂಗಾರಕಟ್ಟಾ, ಬಳ್ಳಾರಿ ಮತ್ತು [illegible]

5 ವರ್ಷದ ಮುದತ್ತಿನ ನಮ್ಮ ಲಕ್ಷ್ಮೀ ಕೇಶ್ ಸರ್ಟಿಫಿಕೇಟುಗಳು ರೂಪಾಯಿ 3-12-0, 7-8 0, 75-0 0, 375/- 750/- ಇವುಗಳಿಗೆ ಒಟ್ಟು ಕೂಡಿಸಿ ಕ್ರಮವಾಗಿ ರೂ 5/-, 10/-, 100/-, 500/-, 1000/- ಕೊಡಲ್ಪಡುವದು ಅಂದರೆ ನಿಮ್ಮ ಹಣಕ್ಕೆ ಶೇಕಡಾ 6⅔ರಷ್ಟು ಬಡ್ಡಿ ಸಿಗುವದು. ಇವುಗಳನ್ನು ಮುದ್ದತು ತೀರವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ. ನಮ್ಮ **ಪಿಗ್ಮಿ ಡಿಪೊಜಿಟ್** ಮತ್ತು **ಕ್ಯುಮ್ಯುಲೇಟಿವ್ ಡಿಪೊಜಿಟ್ ಸ್ಕೀಮು** ನಿಮ್ಮೆಲ್ಲರಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ ರೂ 5, 5½ 6 ರಂತೆ ಬಡ್ಡಿ

ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ರಂತೆ ಚಿನ್ನಾಭರಣಗಳು ಇಡಿಸಿದ ಮೇಲೆ ಒಳ್ಳೇ ರಿಯಾಯತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು.
ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು.

ಕುಮಟಾ,
ತಾ ೧೫-೭-೧೯೩೫

G. S Nayak,
ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ || ನೋಡಿರಿ !!

ಉಡುಪಿ ಬ್ರಾಹ್ಮಣರ

ದಿ ಮೊಡರ್ನ ಹಿಂದೂ ಹೊಟೆಲ್,

ಕುಮಟಾ. (ಉ. ಕನ್ನಡ)

ಮಹಾಶಯರೇ,

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರಾವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವುಳ್ಳದ್ದಾಗಿ ಇತ್ತೀಚೆಗೆ ಹೊಸದಾಗಿ ತೆರೆದಿರುವ ನಮ್ಮ

"ದಿ ಮೊಡರ್ನ ಹಿಂದೂ ಹೊಟೆಲ್"ದಲ್ಲಿ ಬಂದು ಅನುಭವ ಪಡೆಯಿರಿ!

ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ.

ಬಿ. ರಾಮಕೃಷ್ಣಯ್ಯಾ, ಮಾಲಕ.

ನೋಟೀಸು.

ಶ್ರೀ ಗೋಕರ್ಣ ಜೀವೋತ್ತಮ ಮಠದ ಶ್ರೀ ಮದಿಂದಿರಾಕಾಂತತೀರ್ಥ ಶ್ರೀಪಾದವಡೇರ ಶ್ರೀ ಸ್ವಾಮಿಗಳವರ ಮುಖ್ತ್ಯಾರ (೧) ಶೇಷಗಿರಿ ನಾರ್ಣಪ್ಪ ಕಾಮತ ಸಾಕೀನ ಟೆಂಕಣಕೇರಿ (೨) ಪಾಂಡುರಂಗ ರಾಮಚಂದ್ರ ಕಾಮತ ಸಾಕೀನ ಕೇಡಗೇರಿ (೩) ಲಕ್ಷ್ಮಣ ಗೋವಿಂದ ಮಹಾಲೆ ಸಾಕೀನ ಕೇಡಗೇರಿ ತಾಲೂಕ ಅಂಕೋಲಾ ಕೂಡಾ ೩ ಜನರು ತಾಲೂಕ ಮುಡಕೂರ ಅಂಕೋಲಾ ಕಸಬಾ ಕೇಣಿ ಎನಾಯಿಕಸಾದ ಜೋವಾಂವ.ಣಿ ಯಾನೆ ಜಾನು ಬಿನ್ ದೇವು ಗಡಕ ಇವನಿಗೆ ಈ ನೋಟೀಸ ಮೂಲಕ ತಿಳಿಸ.ವದೇನೆಂದರೆ:— ಶ್ರೀ ಸಂಸ್ಥಾನದ ಮಾಲಕಿಯ ಅಂಕೋಲಾ ಕಸಬಾ ಗ್ರಾಮದ ಸ. ನ. ೧೫೭ಕೆ ಕ್ಷೇ. ೪-೩೭-೦ ಆಕಾರ ರೂಪಾಯಿ ೩೦-೬-೮ರ ಭೂಮಿ ನಿನಗೆ ಚಾಲಗೇಣಿಗೆ ಇದ್ದಂಥಾದ್ದು ಇದೇ ಬರುವ ಧಾತು (1936-37) ಸಂವತ್ಸರ ಫಸಲಿಗೆ ನಿನಗೆ ಚಾಲಗೇಣಿಗೆ ಇಡುವದು ನಮ್ಮ ಖುಷಿ ಇಲ್ಲದ್ದರಿಂದ ಸದರಿ ಭೂಮಿಯನ್ನು ಇದೇ ಬರುವ 1936ನೇ ಇಸವಿ ಮಾರ್ಚ ತಾರೀಕು 31ರ ವರೆಗಾಗಿ ನಮ್ಮ ಕಡೆಗೆ ಒಪ್ಪಿಸಿಕೊಟ್ಟು ಆ ಬಗ್ಗೆ ನಮ್ಮಿಂದಾ ಪಾವತಿ ಪಡೆಯತಕ್ಕದ್ದು. ಶಿವಾಯ ಸದರಿ ಭೂಮಿ ಬಾಬು ಚಾಲು ಯುವ (1935-36) ಸಂವತ್ಸರದ ಫಸಲಿಗೆ ನಿನ್ನಿಂದಾ ಶ್ರೀ ಸಂಸ್ಥಾನಕ್ಕೆ ಬರಬೇಕಾದ ತಲ್ಲಲಿಕ್ಕೆ ಮೂಸಿನ ಕುಚ್ಚಿಗೆ ಅಕ್ಕಿ ಖಂಡಗ 34 ಮುವತ್ತನಾಲ್ಕು, ನಗದಿ ರೂಪಾಯಿ 10-9-7 ಹತ್ತು ಕೂಡಾ ಇದೇ ಬರುವ ಮಾಘ ಶು|| ೩೦ರ ವರೆಗೆ ನಮಗೆ ವಸೂಲ ಕೊಡತಕ್ಕದ್ದಲ್ಲದೇ ಹಿಂದಿನ ಗೇಣಿ ಬಾಕಿ ಕೂಡಲೆ ವಸೂಲ ಕೊಟ್ಟು ನಮ್ಮಿಂದ ಪಾವತಿ ಪಡೆಯತಕ್ಕದ್ದು. ಇದಕ್ಕೆ ವಿರೋಧವಾಗಿ ನೀನು ನಡೆದಲ್ಲಿ ಸದರಿ ಭೂಮಿ ಕಬಜಾ ಬರ ಪಡಿಸಿಕೊಳ್ಳುವರೆ, ಗೇಣಿ ವಸೂಲ ಪಡಕೊಳ್ಳುವರೆ ಸಹಾ ನಿನ್ನ ಮೇಲೆ ಕಾಯಿದೇಶೀರ ಇಲಾಜು ನಡಿಸಿದ್ದಲ್ಲಿ ಆ ಬಗ್ಗೆ ತಗಲಿದ ಖರ್ಚು ವ ಶ್ರೀ ಸಂಸ್ಥಾನಕ್ಕೆ ಆಗುವ ಲುಕಸಾನು ಸಹಾ ತೆರುವದಕ್ಕೆ ನೀನೇ ಜವಾಬದಾರನಾಗಿರಬೇಕು. ಈ ವಿಷಯಕ್ಕೆ ನಾವು ನಿನಗೆ ಟಪಾಲ ರಿಜಿಸ್ಟರಿ ತಾರೀಕ 14-11-1935ನೇ ದಿವಸ ಕಳ್ಸಿದ ನೋಟೀಸು ಜಾರಿ ಮಾಡಿಕೊಳ್ಳುವರೆ ನೀನು ಬುದ್ಧಿಪೂರ್ವಕ ತಪ್ಪಿಸಿಕೊಳ್ಳುತ್ತಿದ್ದಿ ಎಂತಾ ನಮಗೆ ತಿಳಿದುಬಂದದ್ದರಿಂದಾ ಈ ಜಾಹೀರ ನೋಟೀಸ ಮೂಲಕ ನಿನಗೆ ತಿಳಿಸಿರುತ್ತದೆ.

ಅಂಕೋಲಾ, ತಾ. 19-12-1935.

ಶೇಷಗಿರಿ ನಾರ್ಣಪ್ಪ ಕಾಮತ.
ಪಾಂಡುರಂಗ ರಾಮಚಂದ್ರ ಕಾಮತ
ಲಕ್ಷ್ಮಣ ಗೋವಿಂದ ಮಹಾಲೆ.

Note:— ಸದರಿ ಜಮೀನಿನಲ್ಲಿ ಪೋಟ ಚಾಲಗೇಣಿಗಾರರಾಗಿ ಇದ್ದರೆಂತಾ ಕಂಡುಬರುವ (1) ಅಯಪ್ಪ ಬಿನ್ ಬೀರಪ್ಪ, (2) ಲಿಂಗಾ ಬಿನ್ ಪುರ್ಸಪ್ಪ (3) ಬೊಮ್ಮ ಬಿನ್ ಹನುಮಂತ (4) ರೇಕತಾಯರ ವ ಕೋಂ ಬುಡಾಣು (5) ಹೊಲಿಯಪ್ಪ ಪುರ್ಸಪ್ಪ, ಇವರು ಈ ನೋಟೀಸಿನ ಮಜಕೂರು ತಿಳಕೊಂಡು ಅದಕ್ಕನುಸಾರವಾಗಿ ನಡೆಯತಕ್ಕದ್ದು.

ಶೇಷಗಿರಿ ನಾರ್ಣಪ್ಪ ಕಾಮತ.
ಪಾಂಡುರಂಗ ರಾಮಚಂದ್ರ ಕಾಮ
ಲಕ್ಷ್ಮಣ ಗೋವಿಂದ ಮಹಾಲೆ.

—ಹಿಂದುಸ್ಥಾನದೊಳಗಿನ ರಾಜಬಂದಿಗಳಿಗೆ ಗತಿ ಮಾಡಬೇಕಾದಾಗಿ ಸಾಮ್ರಾಜ್ಯ ಸರಕಾರ ಆಶಿಸ್ತ್ರಯು. ಒಟ್ಟು ೨೧ ಜನರು ಈಗ ಸೆರೆಯಲ್ಲಿದ್ದು ಉಳಿದವರೆಲ್ಲರೂ ಬಿಡುಗಡೆಯಾಗಿದ್ದು ಸುಭಾಸಚಂದ್ರ ಬೋಸರವರು ರಾಜ್ಯಶಾಸ್ತ್ರದ ಪುರಸ್ಕಾರ ಮಾಡುತ್ತಿದ್ದುದರಿಂದ ಅವರಿಗೆ ಈ ದೇಶದಲ್ಲಿ ಬರಲಿಕ್ಕೆ ಪ್ರತಿಬಂಧಿಸೋಣಾಗಿದೆ. ಔಷಧೋಪಚಾರಕ್ಕಾಗಿ ಇಂಗ್ಲಂಡ ದೇಶಕ್ಕೆ ಬರುವ ತ್ಯಪಿತ್ತಲ್ಲಿ ಮಾತ್ರ ಆ ವಿಷಯ ವಿಚಾರಿಸಲ್ಪಡುವ

ಶ್ರೀ ಮಧ್ವಾಚಾರ್ಯರ ಗ್ರಂಥ ಕನ್ನಡ ಭಾಷಾಂತರಗಳು.

ಕನ್ನಡದಲ್ಲಿ ವಿಷಯದಲ್ಲಿ ಮೂಲ, ಟೀಕೆ, ತಾತ್ಪರ್ಯ

I ನೇ ಸಂಚಿಕೆ. ಶ್ರೀ ಅನುವ್ಯಾಖ್ಯಾನವು. ಭಾಗ ಜಿಜ್ಞಾಸಾಧಿಕರಣಗಳು. ತಯಾರಾಗಿವೆ. ಪುಟಗಳು ೧೬೦ ಚಂ ರೂ. ೧

I ನೇ ಭಾಗ, ಜಿಜ್ಞಾಸಾಧಿಕರಣ. ಪುಟ ೩೬೧. ಚಂದಾ ರೂ. ೩ ೮ ೦

II ನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥ ಪುಟಗಳು ೨೧೮. ಚಂದಾ ರೂ ೪ ೬-೦. ಟಪಾಲ ಖರ್ಚು ಪ್ರತ್ಯೇಕ. ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಆನರರಿ ಟ್ರೆಝರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡ
(ದಕ್ಷಿಣ ಕ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು !

ಮೃದ್ವೀಕಾಸವ (ನೇತ್ರಗಳಿಗೆ ಅತ್ಯಂತ ಗುಣಕಾರಿ).
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ, ಧಾತುಕ್ಷೀಣಗಳಿಗೆ ಅತ್ಯುತ್ತಮ).
ಹಿಮಸಾಗರ ತೈಲ್ಯ (ನಿದ್ರಾನಾಶಕ್ಕೆ ಅತ್ಯುತ್ತಮ).
ಮಹಾಮಾಷ ತೈಲ್ಯ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ).
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ).
ಗುಡ ಪಿಪ್ಪಲಿ (ಲಿವರ್ ರೋಗಗಳಿಗೆ ಅತ್ಯುತ್ತಮ).
ಕೈಲಾಸ ರಸ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ).
ಅಮೃತ ಪ್ರಾಶ (ಪಕ್ಷವಾತ, ಅಪಸ್ಮಾರ, ಉಪಸ್ಮಾರಗಳಿಗೆ ರಾಮಬಾಣ)
ಭುವನಾಂಜನ (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ).
ಮಹಾ ಕುಲಾಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಶ್ರೇಷ್ಠ).

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:—.

ಹೆಚ್ಚಿನ ಮಾಹಿತಿಗೂ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು !

ಪ್ರಶಂಸಾ ಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಅವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿನ ಕಾರ್ಯಾಂತರದಲ್ಲಿ ನೋಡುವ ಅವಕಾಶ ದೊರೆತ್ತಿತು. ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ. ಇದರ ವ್ಯವಸ್ಥಾಪಕರು ಜಿಲ್ಲೆಯ ಸುಪ್ರಸಿದ್ಧ ವೈದ್ಯ ಮನೆತನಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ. ಇವರು ಸಿದ್ಧಪಡಿಸಿದ ಔಷಧಗಳನ್ನು ಪರೀಕ್ಷಿಸಿ ನೋಡಿದೆನು. ಇವು ಶಾಸ್ತ್ರಸಿದ್ಧವಾಗಿ ಅನುಭವಪೂರ್ಣವಾಗಿ ಇರುತ್ತವೆ. ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಉಪಯೋಗವನ್ನು ಇವರು ತಿಳಿದಿರುತ್ತಾರೆ. ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲಕ್ಕೆ ವನಸ್ಪತಿ ವಿಚಾರದ ಸಂಬಂಧ ಅತ್ಯಗತ್ಯವೆಂದು ಸೂಚಿಸುತ್ತೇನೆ. ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಪ್ರವರ್ತಿಸಿ ವ್ಯವಸ್ಥಿತವಾಗಿ ನಡೆಸುತ್ತಿರುವ ಇದರ ವ್ಯವಸ್ಥಾಪಕರು ಯತ್ನಿಸಿರುವುದು ಅಭಿನಂದನೀಯವು. ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಅನ್ಯೋನ್ಯವಾಗಿ ಸೇರಿದರೆ ಮಹಾಮಂಡಲದ ಉದ್ದೇಶ ಸಫಲವಾಗುತ್ತದೆ. ಈ ವೈದ್ಯಶಾಲೆಯು ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸವೂ ಅಭಿವೃದ್ಧಿಗೆ ಬರುವಂತಾಗಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮೊಕ್ಕಾಂ, ಉಡುಪಿ. ೧೦-೧೧-೧೯೩೫

ವಿದ್ವಾನ್ ಕೇ. ಶೇಷಶಾಸ್ತ್ರಿ, ಪ್ರಧಾನ ಮಂತ್ರಿ,
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇನ್ಸ್ಟಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,

ಕಟಪಾಡಿ ಪೋಸ್ಟು, ದ. ಕನ್ನಡ.

ಜಿಲ್ಲಾ ಬೋರ್ಡಿನ ಸಭೆ.

ತಾಲೂಕ ಬೋರ್ಡುಗಳಿಗೆ ಛಾಟಿ; ಸುವರ್ಣ ಮಹೋತ್ಸವದ ವಿವಾದ.

ಹೇರೂರ ಶೆಣೈಯವರ ದುರ್ದೈವ—ಸ್ಕೂಲ ಬೋರ್ಡ ಜಮಾ-ಖರ್ಚಿನ ಚರ್ಚೆ.

(ಬಿಟ್ಟಲ್ಲಿಂದ)

ಕಾನಡಾ ಜಿಲ್ಲಾ ಬೋರ್ಡಿನ ತ್ರೈಮಾಸಿಕ ಸಭೆ ಕಳೆದ ತಾ. ೧೦ನೇ ಮಂಗಳವಾರ ಕಾರವಾರದೊಳಗಿನ ಬೋರ್ಡಿನ ಸಭಾಮಂದಿರದಲ್ಲಿ ಸೇರಿತು. ಸಭೆಯ ಕೆಲಸ ಮಂಗಳ-ಬುಧ-ಗುರು-ಶುಕ್ರವಾರ ಹೀಗೆ ೪ ದಿವಸಗಳ ತನಕ ನಡೆಯಿತು. ಹಿಂದಿನ ತಾರಿ ಮುಕ್ತೇವಾದರಿಗೆ ಸೂಟಿ, ಸಂಕಟದ ಕೆಲಸಗಳಿಗೆ ಮಂಜೂರಿ; ಸುಲೇಕೆರೆ, ಹೀಪನಹಳ್ಳಿ, ಇಸಳೂರ ಗ್ರಾಮಗಳಲ್ಲಿ ಗ್ರಾಮಪಂಚಾಯತುಗಳ ಸ್ಥಾಪನೆ; ಮೊದಲಾದ ವಿಷಯಗಳ ಮೇಲೆ ಠರಾವುಗಳಾದವು. ಅಂಕೋಲೆಯಲ್ಲಿ ರಾ॥ ಸಾವಗೇರಿಯವರು ಒಳ್ಳೇ ಔಷಧೋಪಚಾರ ಮಾಡುತ್ತಾರೆ, ರೋಗಿಗಳಿಗೆ ಶುಶ್ರೂಷೆ ಮಾಡುವದರಲ್ಲಿ ಇವರು ಒಳ್ಳೇ ನಿಪುಣರು. ಇವರ ಕಡೆಯಿಂದ ಉಪಚಾರ ಹೊಂದಲು ಜನರಿಗೆ ಪ್ರೀತಿ. ಬಡವರಿಗೆ ಇವರು ಒಳ್ಳೇ ರೀತಿಯಿಂದ ನಡಿಸಿಕೊಳ್ಳುತ್ತಾರೆ; ಆದರಿಂದ ಆಸ್ಪತ್ರೆಯಲ್ಲಿ ರೋಗಿಗಳ ಗಲಾಟೆ; ಔಷಧ ಸಾಮಗ್ರಿ ಖರ್ಚಾಗಿ ಹೋಯಿತು; ಅದಕ್ಕಾಗಿ ಹೆಚ್ಚಿನ ಪ್ರತ್ಯುಪಾಯ-ಔಷಧಗಳ ಪೂರೈಕೆ ಮಾಡಿಕೊಡಬೇಕಾಗಿ ಅಲ್ಲಿಯ ಸಭಾಸದರಾದ ರಾ॥ ಪ್ರಭು, ಭಟ್ಟರವರು ಸೂಚಿಸಿದ್ದರು; ಆದರಂತೆ ರೂ. ೧೦೦ರ ಗ್ರಾಂಟು ಕೊಡಬೇಕಾಗಿ ತೀರ್ಮಾನವಾಯಿತು.

ಸಬ್-ಓವರಸೀಯರರಾದ ರಾ॥ ಅಯ್ಯರವರ ಮೇಲೆ ಸರಕಾರವು ಪಟ್ಟಿ ಮಾಡಿಕೊಟ್ಟಿತ್ತು. ಆ ಪಟ್ಟಿ ತಾ. ೩೦-೧೦-೩೫ನೇಗೆ ಹಿಂತೆಗೆದುಕೊಳ್ಳಲಾಗಿದೆ. ಆದಾಗ್ಯೂ ಲೆಕ್ಕದಲ್ಲಿ ಗೊಂದಲ ಮಾಡಿರುವದಾಗಿಯೂ (confusion of accounts & misappropriation of monies) ಕಲೆಕ್ಟರರು ಬೋರ್ಡಿನ ಅಧ್ಯಕ್ಷರಿಗೆ ಬರೆದು ಅವರಿಗೆ ತಕ್ಕ ಶಾಸನ ಮಾಡಬೇಕಾಗಿ ತಿಳಿಸಿದರು. ಆದರಂತೆ ಬೋರ್ಡಿನ ಅಧ್ಯಕ್ಷರು ಚೌಕಶಿ ನಡಿಸುತ್ತಿದ್ದಾರೆ. ಸಭೆಯ ಕಾಲಕ್ಕೆ ಚೌಕಶಿಯು ಪೂರ್ಣತೆಯಾಗಿದ್ದಿಲ್ಲ. ಆದರಿಂದ ಸದ್ಯಕ್ಕೆ ರಾ॥ ಅಯ್ಯರರಿಗೆ ಕೆಲಸದ ಮೇಲೆ ಹಾಜರ ಮಾಡಿಕೊಳ್ಳಬೇಕಾಗಿ ನಿರ್ಣಯವಾಯಿತು. ರಾ॥ ಅಯ್ಯರರವರ ಮೇಲಿನ ಆರೋಪಗಳ ಬಗ್ಗೆ ಈ ಹಿಂದೆ ಜಿಲ್ಲಾ ಬೋರ್ಡಿನ ಚೌಕಶಿ ಮಂಡಳ ನೇಮಿಸಲ್ಪಟ್ಟು ಅವರು ನಿರ್ದೋಷಿಗಳೆಂದು ಬೋರ್ಡಿನ ನಿರ್ಣಯವಾಗಿದೆ. ಇದರಿಂದ ಕಲೆಕ್ಟರರಿಗೆ ಸಮಾಧಾನವಾಗದೆ ಅವರ ಮೇಲೆ ಪಟ್ಟಿ ಮಾಡಲಾಗಿತ್ತು. ಪಟ್ಟಿಯೊಳಗೆ ರಾ॥ ಅಯ್ಯರರಿಗೆ ತಮ್ಮ ನಿರಪರಾಧಿತನವನ್ನು ಸಿದ್ಧಪಡಿಸಲು ಇಂಬುಗೊಡದೆ ಪುನಃ ಮುಂಚಿನ ಆರೋಪಗಳನ್ನೇ ಅವರ ಮೇಲೆ ಹೊರಿಸಿ ಈ ಮುಂಚೆ ಅವರು ನಿರ್ದೋಷಿಗಳೆಂದು ನಿರ್ಣಯ ಕೊಟ್ಟ ಬೋರ್ಡಿಗೆ ಶಾಸನ ಮಾಡಲು ವಿಧಿಸುವ ಕ್ರಮ ನೂತನವಾದದ್ದು. ಬೋರ್ಡಿನವರು ಈ ಹಿಂದೆ ವಿಚಾರದಿಂದ ಕೈಕೊಂಡ ನಿರ್ಣಯವನ್ನು ಹೀಗೆ ಧಿಕ್ಕರಿಸಬಲ್ಲರು. ? ಬೋರ್ಡಿನ ಸಭಾಸದರು ಬದಲಿಸಿದರೆಂದು ಮುಂಚಿನ ಚೌಕಶಿಯನ್ನೆಲ್ಲ ಧಿಕ್ಕರಿಸಿ ಪುನಃ ಪುನಃ ಹಿಂದಿನ ಪ್ರಕರಣಗಳನ್ನು ವಿಚಾರಿಸುತ್ತ ಉಳಿದರೆ ಬೋರ್ಡಿನ ಕಾರಭಾರ ನಡಿಸುವ ಬಗೆ ಹೇಗೆಂದು ತಿಳಿಯದು. ಪಟ್ಟಿ ಹಿಂತೆಗೆದುಕೊಂಡ ಕೂಡಲೆ ಅಧ್ಯಕ್ಷರು ರಾ॥ ಅಯ್ಯರರಿಗೆ ಹಾಜರಪಡಿಸಿಕೊಳ್ಳದೆ ೧-೧॥ ತಿಂಗಳ ತನಕ ಕಾಲಹರಣ ಮಾಡಿದ್ದು ಅನ್ಯಾಯ! ಈ ಸಂಬಳವನ್ನು ಅಧ್ಯಕ್ಷರು ಹೇಗೆ ಯಾರ ಕಡೆಯಿಂದ ರಾ॥ ಅಯ್ಯರರಿಗೆ ಮುಟ್ಟಿಸುವರು?

ಡಿಸೆಂಬರ ತಾ. ೨೮ನೇಗೆ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವ. ಆ ಉತ್ಸವದ ಪ್ರೀತ್ಯರ್ಥ ಬೋರ್ಡು ರೂ ೧೦೦ ರ ತನಕ ಖರ್ಚು ಮಾಡಿ ಯಾವದೊಂದು ಕಾರ್ಯಕ್ರಮ ಕೈಕೊಳ್ಳಬೇಕಾಗಿ ಬೋರ್ಡಿನ ಸಭಾಸದರಾದ ರಾ॥ ಶಾನಭಾಗರವರು ತಾರೀಖು ೭-೧೨-೧೯೩೫ನೇಗೆ ಪತ್ರ ಬರೆದ ಮೇರೆಗೆ ಆ ವಿಷಯ ಕಾರ್ಯಕ್ರಮ ಪತ್ರಿಕೆಯಲ್ಲಿ ಹೋಗಿತ್ತು; ಪತ್ರ ಯಾವಾಗ ಬಂದಿತ್ತೆಂದು ರಾ॥ ದತ್ತಾ ನಾಯ್ಕರವರು ಪ್ರಶ್ನಿಸಿದರು. ಈ ವಿಷಯ ಚರ್ಚೆಗೆ ಕೊಳ್ಳಬರುವದಿಲ್ಲವಾಗಿಯೂ ಅವರು ಆಕ್ಷೇಪಿಸಿದರು. ಖಾನ ಸಾಹೇಬ ಇದ್ರೂಸರವರೂ ಅದೇ ಪ್ರಕಾರ ಆಕ್ಷೇಪ ಮಾಡಿದರು. ಸಕಾಲದಲ್ಲಿ ಪತ್ರ ತಲ್ಪಿತ್ತಾಗಿಯೂ ಅದನ್ನು ಚರ್ಚಿಸಲು ಆಕ್ಷೇಪವಿಲ್ಲವಾಗಿಯೂ ಅಧ್ಯಕ್ಷರು ಹೇಳಿದರು. ಮುಂಚಿನ ವಿಷಯಗಳ ಚರ್ಚೆಯಾದನಂತರದ ವಿಷಯಗಳ ಚರ್ಚೆ ಮಾಡಬರುವದಿಲ್ಲವಾಗಿಯೂ, ಇದು ೬೧ನೇ ವಿಷಯವಿದ್ದದರಿಂದ ೬೦ ವಿಷಯಗಳ ಚರ್ಚೆಯಾದನಂತರ ಇದನ್ನು ಚರ್ಚೆಗೆ ಕೊಳ್ಳಬಾರದಾಗಿಯೂ ಖಾನಸಾಹೇಬ ಇದ್ರೂಸರವರು ವಾದಿಸಿದರು. ಬಹುಮಂದಿ ಸಭಾಸದರು ಈ ವಿಷಯವನ್ನು ಇದೀಗಲೇ ಚರ್ಚಿಸಬೇಕಾಗಿ ಅಭಿಪ್ರಾಯಪಟ್ಟದ್ದರಿಂದ ಈಗ ಚರ್ಚೆ ಮಾಡಗೊಡುತ್ತೇನಾಗಿ ಅಧ್ಯಕ್ಷರು ಹೇಳಿದರು. ಈ ಚರ್ಚೆಯಾದದ್ದು ಗುರುವಾರ ಸಂಜೆ; ೩-೪ ದಿವಸಗಳ ತನಕ ಬೋರ್ಡಿನ ಇತರ ಕೆಲಸ ಮುಗಿದ ಬಳಿಕ! ಇಷ್ಟು ಚರ್ಚೆಯಾಗಿ ಠರಾವು ಸೂಚಿಸಲಿಂಬು ಸಿಕ್ಕಿತು. ಬೋರ್ಡು ರೂ. ೧೦೦ ಖರ್ಚು ಮಾಡಿ ಉತ್ಸವದ ದಿನ ಧರ್ಮಶಾಲೆಗಳಲ್ಲಿ ಪಾತ್ರೆಗಳನ್ನು ಹಂಚಬೇಕಾಗಿ ರಾ॥ ಶಾನಭಾಗರು ಸೂಚಿಸಿದರು. ರಾ॥ ವೆಂಕಟರಮಣ ಭಟ್ಟರು ಅನುಮೋದಿಸಿದರು. ಈ ಠರಾವಿನ ಮೇಲೆ ಅನು [illegible] ಮತ ಕೊಟ್ಟಲ್ಲಿ ರಾಷ್ಟ್ರೀಯ ಸಭೆಯು ಪುರಸ್ಕರಿಸುವ ರಾಜಕೀಯ ಮತಕ್ಕೆ ಬೆಂಬಲ ಕೊಟ್ಟಂತಾಗುತ್ತದೇನೆಂದು ಖಾ॥ ಫಿಲಿಪೋಸರವರು ಅಧ್ಯಕ್ಷರಿಗೆ ಕೇಳಿದರು. ಜಾರ್ಜರ ರೌಪ್ಯ ರಾಜ್ಯಾರೋಹಣೋತ್ಸವದ ಸಮಯ ಸಂಭ್ರಮ ಖರ್ಚಿಗಾಗಿ ಮತಕೊಟ್ಟವರು ಸರಕಾರದ ರಾಜ್ಯಧೋರಣಕ್ಕೆ ಮತ ಕೊಟ್ಟಂತಾಗುತ್ತದೇನೆಂದು ರಾ॥ ಶಾನಭಾಗರು ವಾದಿಸಿದರು. "ರಾಷ್ಟ್ರೀಯಸಭೆಯುತ್ಸವದ ಮಾತು ಬೇರೆ; ಬಾದಶಹರ ಉತ್ಸವದ ವಿಷಯ ಬೇರೆ. ನಾವು ಆ ಬಾದಶಹರ ರಾಜ್ಯದಲ್ಲಿದ್ದೇವೆ. ಮತಪ್ರದರ್ಶನದ ಪ್ರಶ್ನೆ ಉದ್ಭವಿಸುವದಿಲ್ಲ." ಎಂಬದಾಗಿ ಖಾ॥ ಫಿಲಿಪೋಸರವರು ಉದ್ಗರಿಸಿದರು! ಠರಾವಿನಲ್ಲಿ ರಾಜಕೀಯ ಮತದ ಉಲ್ಲೇಖವಿಲ್ಲದ್ದರಿಂದಲೂ, ರಾಷ್ಟ್ರೀಯ ಸಭೆಯು ಪರೋಪಕಾರ ಉದ್ದೇಶ ಹಿಡಿದು ನಡಿಯುವ ಸಂಸ್ಥೆಯಾದ್ದರಿಂದಲೂ ರಾಷ್ಟ್ರೀಯ ಸ [illegible] ಈ ತನಕ ಬೇಕಾಯಿದೇಶೀರ ಸಭೆಯಾಗದ್ದರಿಂದಲೂ ([illegible]) ಅಭಿಪ್ರಾಯವೇನೂ ಆಗುವದಿಲ್ಲವಾಗಿ ಅಧ್ಯಕ್ಷರು ಖಾ॥ ಫಿಲಿಪೋಸರವರಿಗೆ ಸಮಾಧಾನ ಹೇಳಿದರು. ರೂ. ೧೦೦ನ್ನು ಖರ್ಚು ಮಾಡಲು ಕಲೆಕ್ಟರರ ಅಪ್ಪಣೆ ಪಡಕೊಳ್ಳುವ ಅವಶ್ಯವುಂಟೆಂದು ರಾ॥ ದತ್ತಾ ನಾಯ್ಕರು ಆಕ್ಷೇಪಿಸಿದರು. ಬೋರ್ಡಿನ ಧರ್ಮಶಾಲೆಗಳಿಗೆ ಅವಶ್ಯವುಳ್ಳ ಸಾಮಗ್ರಿಗಳನ್ನು ಪೂರೈಸಲು ಕಲೆಕ್ಟರರ ಅಪ್ಪಣೆ ಪಡೆಯುವ ಅವಶ್ಯಕತೆಯಿಲ್ಲವಾಗಿ ಕಾಯಿದೆಯಿದೆ. ಠರಾವಿನಲ್ಲಿ ಉತ್ಸವದ ಉಲ್ಲೇಖ ಮಾತ್ರದಿಂದ ಪರವಾನಗಿಯ ಅವಶ್ಯಕತೆಯಿರುವದಾಗಿ ತಮ್ಮ ಅಭಿಪ್ರಾಯವಿಲ್ಲ. ವಾಗಿ ಅಧ್ಯಕ್ಷರು ಆ ಆಕ್ಷೇಪ ರದ್ದುಪಡಿಸಿದರು. ಬೋರ್ಡಿಗೆ ನಿರ್ಣಯಾಧಿಕಾರ ಸಿಕ್ಕಿದ್ದು ರಾಷ್ಟ್ರೀಯ ಚಳವಳಿಯ ಫಲವೆಂದು ರಾ॥ ಶಾನಭಾಗರು ಪ್ರತಿಪಾದಿಸಿ ಕೃತಜ್ಞತಾಬುದ್ಧಿಯಿಂದ ಈ ಉತ್ಸವದ ನಿರ್ಣಯವನ್ನು ಸರ್ವರೂ ಕೈಕೊಳ್ಳಬೇಕಾಗಿ ಬಿನ್ನೈಸಿದರು; ಬೋರ್ಡಿನ ಹಣವನ್ನು ರಾಷ್ಟ್ರೀಯ ಸಭೆಯ ಉತ್ಸವದ ಹೆಸರಿನಿಂದ ವಿನಿಯೋಗಿಸುವದು ತಮ್ಮ ಹಾಲು ಒಯ್ದು ಈಚಲಮರದ ಬಳಿ ಕುಡಿಯುವ ನಮೂನೆಯೆಂದು ರಾ॥ ದತ್ತಾ ನಾಯ್ಕರು ವಿರೋಧಿಸಿದರು. ಈ ಉಪಮೆಗೆ ರಾ॥ ಶಾನಭಾಗರು ವಿರೋಧಿಸಿದ ಬಳಿಕ ಠರಾವಿನ ಮೇಲೆ ಮತ ಎಣಿಕೆ ಮಾಡಲಾಯಿತು. ಅಧ್ಯಕ್ಷರಾದ ರಾ॥ ಗಂಗೊಳ್ಳಿಯವರು ಸ್ವಂತ ಮತ ಕೊಟ್ಟರು. ರಾ॥ ಸೀತಾರಾಮ ವೆನಡೆ ಸೂಚಕ-ಅನುಮೋದಕ ಹೀಗೆ ೪ ಮತಗಳು ಅನುಕೂಲ ಬಿದ್ದವು. ರಾ॥ ದತ್ತಾ ನಾಯ್ಕ, ಖಾನಸಾಹೇಬ ಇದ್ರೂಸ, ಕೆಪ್ಟನ್ ಜೋಗಿ ನಾಯ್ಕರವರೂ, ಉಪಾಧ್ಯಕ್ಷರಾದ ರಾ॥ ಗೋಪಾಳರಾವ ದೇವರವರೂ ಪ್ರತಿಕೂಲ ಮತ ಕೊಟ್ಟರು! ರಾ॥ ದೇವರವರ ವಿರೋಧ ನೋಡಿ ಸಭಿಕರು ಬೆಸ್ತಾದರು!! ರಾ॥ ವಿಶ್ವೇಶ್ವರ ಹೆಗಡೆ, ರಾ॥ ಚನ್ನಪ್ಪ ನಾಯ್ಕ, ಖಾ॥ ಫಿಲಿಪೋಸರವರು ತಟಸ್ಥ ನಿಂತರು. ಅಧ್ಯಕ್ಷರು ಅಧ್ಯಕ್ಷಸ್ಥಾನದ ಮತ ಕೊಟ್ಟು ಠರಾವನ್ನು ಮಂಜೂರ ಮಾಡಿಕೊಂಡರು.

ಸಾಳುಕಟ್ಟೆಯ ಒಡ್ಡಿಗೆ ವಿಶೇಷ ದುರುಸ್ತಿ ಮಾಡುವದರ ದೆಸೆಯಿಂದ ರೂ. ೩೭೦ ಬೇಡಿತ್ತು. ಒಡ್ಡನ್ನು ವಹಿಸಿಕೊಳ್ಳುವಾಗ ವಿಶೇಷ ದುರುಸ್ತಿ ಖರ್ಚಿನ ಕರಾರು ಇಲ್ಲದ್ದರಿಂದ ಆ ಕುರಿತು ಖರ್ಚು ಮಾಡಲು ಬರುವದಿಲ್ಲವಾಗಿ ತಕರಾರಾಗಿದೆ. "ಈ ಒಡ್ಡು ಕಟ್ಟಿಸುವ ಕೆಲಸ ಸರಕಾರದ್ದು. ಈ ಬಗ್ಗೆ ಸರಕಾರವು ವರ್ಷಾಸನ ರೂ. ೬೦ನ್ನು ತೆರುತ್ತಿತ್ತು. ನೀರಾವರಿ ಖಾತೆಯಿಂದ ಈ ಹಣ ಸಿಗುತ್ತಿತ್ತು. ಒಡ್ಡಿನ ಪ್ರಯೋಜನ-ಹೊಲಗಳಿಗೆ. ಈ ವಿಚಾರದಿಂದ ಸರಕಾರವು ತೀರ್ವೆಯನ್ನೆತ್ತುವಳಿ ಮಾಡುತ್ತದೆ. ಸರಕಾರವು ಒಡ್ಡನ್ನು ಅಲಕ್ಷ ಮಾಡಿದೆ. ಇದರ ಖರ್ಚನ್ನು ಸರಕಾರವು ತೆರಬೇಕು;" ಎಂಬದಾಗಿ ಸಭಾಸದರೊಬ್ಬರು ಪ್ರತಿಪಾದಿಸಿದರು. ಆದರೆ ಒಡ್ಡನ್ನು ವಹಿಸಿಕೊಳ್ಳುವಾಗ ವಿಶೇಷ ದುರುಸ್ತಿಯ [illegible] ದಾವಿ ಇಲ್ಲದ್ದರಿಂದ ಈ ವಿಚಾರ ಅವಶ್ಯವಿಲ್ಲವಾಗಿ ಅಭಿಪ್ರಾಯವಾಗಿ ವಿಶೇಷ ದುರುಸ್ತಿಯ ಬಗ್ಗೆ ಖರ್ಚು ಮಾಡಬಾರದೆಂಬ ನಿರ್ಣಯವಾಯಿತು.

ಸಿವ್ಹಿಲ್ ಸರ್ಜನರು ಕಾರವಾರದೊಳಗಿನ ಸಿವ್ಹಿಲ್ ಆಸ್ಪತ್ರೆಯ ಖರ್ಚಿಗೆ ರೂ. ೩೦೦ ಬೇಡಿದ್ದರು. "ಹಣದ ಅಡಚಣೆಯ ಮೂಲಕ ಬೋರ್ಡು ಸಿವ್ಹಿಲ್ ಸರ್ಜನರ ಸೂಚನೆಯನ್ನು ಮನ್ನಿಸಲಿಲ್ಲ. ಈ ಬಗ್ಗೆ ತುಂಬಾ ವ್ಯಸನಪ್ರದರ್ಶನ ಮಾಡಿದೆ.

ಉಸುಬು ಮತ್ತು ಕಲ್ಲು-ಕಣಿಗಳ ಫೀಯನ್ನು ಸರಕಾರವು ಲೋಕಲ್ ಕಾನೂನಿನಂತೆ ಬೋರ್ಡಿಗೆ ತೆರಲು ಬದ್ಧವಿದೆ. ಸರಕಾರಿ ಗಣಿಗಳಲ್ಲಿ ಎತ್ತುವಳಿ ಮಾಡಿದ ಫೀ ಮಾತ್ರ ಪಡೆಯಲು ಬೋರ್ಡಿಗೆ ಅಧಿಕಾರವಿರುವದಾಗಿಯೂ, ಮಾಲ್ಕೀದಾರರ ಕಡೆಯಿಂದ ಪಡೆದ ಫೀಯನ್ನು ಬೋರ್ಡಿಗೆ ಪಡೆಯಲು ಹಕ್ಕಿಲ್ಲವಾಗಿಯೂ ಸರಕಾರದ ಸಾಧನ. ವಸೂಲ ಮಾಡಿದ ಫೀಯನ್ನು ಸರಕಾರವು ಈ ತನಕ ಕೊಟ್ಟದ್ದಿಲ್ಲ. ಚರ್ಚೆಯಾದ ಬಳಿಕ ಕೆಲವು ವರ್ಷಗಳ ಲೆಕ್ಕ ಇರುವದಿಲ್ಲವಾಗಿಯೂ, ಇದ್ದ ವರ್ಷಗಳ ಫೀ ಕೊಡಲಿಕ್ಕೆ ಅಡ್ಡಿಯಿಲ್ಲವಾಗಿಯೂ ಉತ್ತರ ಸಿಕ್ಕಿದೆ. ಉಸುಬಿನ ಫೀ ಕಸ್ಟಮ್ ಖಾತೆಯವರು ವಸೂಲ ಮಾಡುತ್ತಾರಾಗಿಯೂ, ಹಿಂದುಸ್ಥಾನ ಸರಕಾರದ ಕಾನೂನಿನಂತೆ ಅದು ವಸೂಲಾಗುತ್ತದಾಗಿಯೂ ಪ್ರಾಂತಿಕ ಸರಕಾರದ ಅಂಬೋಣ. ಹಾಗಿದ್ದರೆ ಉಸುಬಿನ ಫೀಯನ್ನು ಬೋರ್ಡಿಗೊಪ್ಪಿಸುವ ಕಾನೂನಿಗೆ ಸರ್ವಾಧಿಪತಿಗಳು ಒಪ್ಪಿದ ಬಗೆ ಹೇಗೆ? ಈ ಕುರಿತು ಸಂಬಂಧಪಟ್ಟ

[ಮುಂದೆ ೧೦ನೇ ಪಾನು ನೋಡಿರಿ.]

ಅಲ್ಲಲ್ಲಿ ಇಷ್ಟಿಷ್ಟು!

ನೂತನ ರಾಜ್ಯಘಟನೆಯ ಖರ್ಚಿಗೆ ಅವಶ್ಯವುಳ್ಳ ದ್ರವ್ಯಸಂಪಾದನೆ ಮಾಡುವ ವಿಚಾರದಲ್ಲಿ ರಾಜ್ಯಕರ್ತರು ತೊಡಗಿದ್ದಾರೆ. ಬೇಸಾಯಗಾರರ ಮೇಲೆ ಇನ್ನಿಷ್ಟು ತೆರಿಗೆ ಹೇರುವ ವಿಚಾರ ನಡೆದಿದೆ. ಈ ಸಮಯ ಬೇಸಾಯಗಾರರ ಸಂಪಾದನೆಯ ಸಾಮರ್ಥ್ಯವನ್ನು ವಿಚಾರಿಸುವದುತ್ತಮ. ಮದ್ರಾಸದ ರಾ| ಶಂಕರಲಿಂಗ ಗೌಡರವರು Taxable Capacity of British Indian Agriculturist ಯಾನೆ ಬ್ರಿಟಿಶ ಹಿಂದುಸ್ಥಾನದೊಳಗಿನ ಕೃಷಕರ ಮೇಲೆ ತೆರಿಗೆ ಹೇರುವ ಹಾಗೂ ಅವರಿಗೆ ತೆರಿಗೆ ಸಹಿಸುವ ಸಾಮರ್ಥ್ಯವೆಂಬ ಗ್ರಂಥವನ್ನು ಸದ್ಯಕ್ಕೇ ಪ್ರಕಟಿಸಿದ್ದಾರೆ. ರಾ| ಶಂಕರಗೌಡರು ತಂಜಾವರ ಸೀಮೆಯೊಳಗಿನ ಪ್ರದೇಶದ ಚೌಕಶಿ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ರಾ| ಶಂಕರಗೌಡರು ಪಂಡೆಗುಂಟೆದ ಪ್ರದೇಶದ ಪರಿಸ್ಥಿತಿಯನ್ನೇ ಸಮಾಲೋಚಿಸಿದ್ದಾರೆ. ಈ ಪ್ರದೇಶದಲ್ಲಿ ಭತ್ತ ಬೆಳೆಯುತ್ತದೆ. ಇಡೀ ಬೆಳೆಯ ಬೆಲೆ ರೂ. ೭೫೭೩೪೦೨. ಇದರೊಳಗಿಂದ ಸಾಗುವಳಿಯ ಖರ್ಚು, ವಕೀಲರ ಲಾಭ, ಮಳೆ-ನಾಳೆಗಳಿಂದುಂಟಾದ ಹಾನಿ ಇವುಗಳ ಸಂಬಂಧ ಸರಕಾರಿ ನಿಯಮಗಳಂತೆ ಲೆಕ್ಕ ಹಾಕಿದರೆ ರೂ. ೩೯೬೨೦೦೦ ವಜಾ ಆಗಬೇಕು. ಉಳಿದ ರೂ. ೩೬೧೫೪೦೨. ಇಷ್ಟೆಲ್ಲ ಭೂಮಿಯ ಕಂದಾಯ ರೂ. ೨೩೭೯೨೭೪ ಘನಕಂದಾಯದ ಜೊತೆಗೆ ಎತ್ತುವಳಿ ಮಾಡುವ ಲೋಕಲ್ ಫಂಡಿನಂಥ ತೆರಿಗೆಗಳನ್ನು ಹಿಡಿದರೆ ಅಂತು ರೂ. [illegible] ರಾಜ್ಯಭಾರದ ಲೆಕ್ಕಕ್ಕೆ ವಜಾ ಆಗಬೇಕು! ಅಂದರೆ ರೂ. ೩೬ ಲಕ್ಷಗಳ ಮೇಲೆ ೨೬ ಲಕ್ಷ ಕಂದಾಯ. ಅಂದರೆ ರೂ. ೧ ಉತ್ಪನ್ನದಲ್ಲಿ ೧೨ ಆಣೆ ಸರಕಾರಕ್ಕೆ! ಒರೆ ೪ ಆಣೆ ಸಾಗಲಿರುವ ವರ್ಷದ [illegible] ಬೇಸಾಯದ ಸೋತಿ ನಡಿಸಿದ ಒಬ್ಬ ರೈತನಿಗೆ! ಭೂಲೋಕದೊಳಗಿನ ಕಾಮಧೇನುವೆಂದು [illegible] ಹಿಂದುಸ್ಥಾನಕ್ಕೆ ಬರಬೇಕಾಗಬಾರದು. ಯಾಕಂದರೆ ಹಿಂದುಸ್ಥಾನದೊಳಗೆ ಬೆಳೆಯುವ ಅಕ್ಕಿ ಹಿಂದೀಯರ ನಿರ್ವಾಹಕ್ಕೆ ಸಾಲುವದಿಲ್ಲ. ಸರಾಸರಿ ಎಕರೆಗೆ ೭೫ ರತ್ತಲು ಭತ್ತ ಕಡಿಮೆ ಬೆಳೆಯುತ್ತದೆ. ರಾ| ಗೌಡರ ಲೆಕ್ಕ. ಇಷ್ಟಾಗಿಯೂ ಪರದೇಶಗಳಿಂದ ಬರುವ ಅಕ್ಕಿ ಅಗ್ಗ! ಹಿಂದುಸ್ಥಾನದೊಳಗಿನ ಅಕ್ಕಿ ತುಟ್ಟಿ. ಇದರ ಕಾರಣವನ್ನು ರಾ| ಗೌಡರು ಒಂದು ಕೋಷ್ಟಕ ಕೊಟ್ಟು ನಿರೂಪಿಸಿದ್ದಾರೆ. ರಾವಸಾಹೇಬ ರಾಜಗೋಪಾಲ ಪಿಳ್ಳೆ, ಹಿಂದೂಸ್ತಾನದ [illegible] ಸಾಹೇಬರವರು ತಯಾರಿಸಿದ ಕೋಷ್ಟಕ ಪ್ರಕಾರ ಇದರ ಬೇಸಾಯಗಾರರ ದುರವಸ್ಥೆಯ ಕಲ್ಪನೆ ಒದಗುತ್ತದೆ. ಸಿಯಾಮ ದೇಶದ ವ್ಯಾಪಾರಕ್ಕೆ ಹೇರಳ ಅಕ್ಕಿ ಬರುತ್ತಿದೆ. ಅಲ್ಲಿ ಎಕರೆಗೆ ರೂ. [illegible] ಕಂದಾಯ, ತಂಜಾವರದಲ್ಲಿ ಎಕರೆ ರೂ. ೭ [illegible] ಕಂದಾಯ. ಅಂದರೆ ಸರಾಸರಿ ಸಿಯಾಮದ [illegible] ಪಟ್ಟು ಹೆಚ್ಚು ತಂಜಾವರ ಸೀಮೆಯಲ್ಲಿ! ಸಿಯಾಮದೊಳಗೆ ಎಕರೆಗೆ [illegible] ರತ್ತಲು ಅಕ್ಕಿ ಹುಟ್ಟುತ್ತದೆ. ತಂಜಾವರ ಸೀಮೆಯು ಅಂದರೆ ಕಾವೇರಿ ನದಿಯ ಫಲವತ್ತಾದ ಪ್ರದೇಶದಲ್ಲಿ ಎಕರೆಗೆ ೧೬೪೪ ರತ್ತಲು ಅಕ್ಕಿ ಹುಟ್ಟುತ್ತದೆ. ಲೆಕ್ಕ ಮಾಡಿದರೆ ಸಿಯಾಮ ದೇಶದಲ್ಲಿ ೧ ರೂಪಾಯಿ ಕಂದಾಯ ತೆರುವ ಭೂಮಿಗೆ ೫೫೦ ರತ್ತಲು ಅಕ್ಕಿ ಹುಟ್ಟುತ್ತದೆ. ತಂಜಾವರದಲ್ಲಿ ೧ ರೂಪಾಯಿ ಕಂದಾಯ ತೆರುವ ಭೂಮಿಗೆ ೧೩೦ ರತ್ತಲು ಅಕ್ಕಿ ಹುಟ್ಟುತ್ತದೆ. ಸಿಯಾಮ ದೇಶ ಸುಧಾರಿಸಿದ ದೇಶವಲ್ಲ; ಹಿಂದುಳಿದ ದೇಶ. ತಂಜಾವರ ಸೀಮೆ ಸುಧಾರಿಸಿದ ಪಾಶ್ಚಾತ್ಯ ರಾಷ್ಟ್ರದ ಕೈಕೆಳಗಿದೆ. ಹೀಗಿದ್ದು ಬೇಸಾಯದ ಅವಸ್ಥೆ ಹೀಗೆ. ಕಂದಾಯದ ಹೋರೆಯಿಂದ ಬೇಸಾಯಗಾರರು ಏಳ್ಗೆಯಿಲ್ಲದೆ ಗೋಳಿಡುತ್ತಿರುವಾಗ ಕಂದಾಯದ ಪ್ರಮಾಣವನ್ನು ತಗ್ಗಿಸಿ ಬೇಸಾಯಕ್ಕೆ ಪ್ರೋತ್ಸಾಹ ಕೊಟ್ಟು ಪ್ರಜೆಗಳ ಉದರನಿರ್ವಾಹಕ್ಕೆ ಅವಶ್ಯವುಳ್ಳಷ್ಟು ಆಹಾರ ಸಾಮಗ್ರಿಗಳನ್ನು ತಯಾರಿಸುವಂತೆ ಸರಕಾರವು ಉಪಾಯ ಕೈಕೊಳ್ಳುವದರ ಬದಲು ಭೂಕಂದಾಯವನ್ನು ಏರಿಸುವ ವಿಚಾರ ಮಾಡುವದು ಬೇಸಾಯಗಾರರ ದುರ್ದೈವ. ಸರಕಾರವು ಗ್ರಾಮ ಸುಧಾರಣೆ ನಿಧಿಯ ವಿನಿಯೋಗವನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಮಾದರಿಯ ಗ್ರಾಮಗಳನ್ನು ನಿಶ್ಚಯಿಸಿಕೊಂಡು ಸರ್ವೇ ಯಾನೆ ಪರಿಸ್ಥಿತಿಯನ್ನು ಪರಾಂಬರಿಸಿ ವಿಚಾರ ನಡಿಸಿದ್ದಲ್ಲಿ ಗ್ರಾಮಸುಧಾರಣೆಯ ಅಡಿಗಲ್ಲು ತಯಾರಿಸಿದಂತಾಗುವದು; ಗ್ರಾಮಸುಧಾರಣೆಯ ಉಪಾಯ ಕೈಕೊಳ್ಳಲಿಕ್ಕೆ ಅನುಕೂಲವಾಗುವದು. ರಾ| ಶಂಕರಗೌಡರವರು ತಂಜಾವರ ಸೀಮೆಯ ಚೌಕಶಿ ನಡಿಸಿ ಗ್ರಾಮಸುಧಾರಕರಿಗೆಲ್ಲ ಮಾದರಿ

THE AGRICULTURAL & INDUSTRIAL BANK, LIMITED.

(Incorporated in British India)

Head office:- COONDAPOOR. Branch:- KUMTA.

Telegrams. "BANKERS."

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು:— ಕುಂದಾಪುರ. ಬ್ರೆಂಚ:— ಕುಮಟಾ.

ಠೇವಣಾತಿಗಳು.

ಕಾಯಂ ಠೇವು:-3, 6, 12, 24, 36 ತಿಂಗಳುಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ. 3½, 4½, 5½, 6, 6½ ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು.

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಅಖೈರ ವರೆಗೆ ಸಾಲಿಯಾನ ಶೇಕಡಾ ರೂ 2½ ವ ಜುಲೈಯಿಂದ ಡಿಸೆಂಬರ ಅಖೈರ ವರೆಗೆ 1½ ರಂತೆ ಬಡ್ಡಿಯಿಂದ ಬಿನ್‌ಖರ್ಚಿನಿಂದ ಅಂಗೀಕರಿಸಲಾಗುವವು.

ಸೇವಿಂಗ್ಸ ಬೇಂಕ ಠೇವು:— ಶೇಕಡಾ ರೂ. 4 ರಂತೆ ಬಡ್ಡಿ. ಬಿನ್‌ಖರ್ಚಿನಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು.

ಕ್ಯುಮ್ಯುಲೆಟಿವ್ ಡಿಪೂಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು.

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೇ ರಿಯ್ಯಾತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು.

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ, ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು.

ಒಳ್ಳೇ ಖಾತ್ರಿಯಾದ ಬಿಲುಗಳು, ದರ್ಶನಿಹುಂಡಿಗಳು, ಚೆಕ್ಕುಗಳು ವಗೈರೆ ವಟಾಯಿಸಲ್ಪಡುವವು.

ಎಲ್ಲಾ ತರದ ಬೇಂಕ ವ್ಯವಹಾರಗಳು ನಡಿಸಲಾಗುವವು.

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು.

ಸವಿಸ್ತರ ಮಾಹಿತಿ ಬಗ್ಗೆ ನಮ್ಮ **ಮಾಹಿತಿ ಪುಸ್ತಕ (Rules of Business)**ವನ್ನು ಪಡೆಯಿರಿ.

ಕುಮಟಾ,
ತಾ. 23—10—1935.

K. Vaman Shenai &
G. Balakrishna S. Nayak.
Managing Directors

ಹಾಕಿಕೊಟ್ಟಿದ್ದಾರೆ. ಈ ಬಗ್ಗೆ ಅವರಿಗೆ ತುಂಬಾ ಅಭಿನಂದನೆ. ಬೇಸಾಯಗಾರರ ಮೇಲೆ ಕರದ ಹೊರೆ ಹೇರಲು ಹಂಚಿಕೆ ಹುಡುಕುವವರು ಬೇಸಾಯಗಾರರ ಪರಿಸ್ಥಿತಿಯನ್ನು ಆಳವಾಗಿ ಪರಾಂಬರಿಸಿ ಮುಂದರಿಯು ಬೇಕಾಗಿ ಸೂಚನೆ.

⁂

ಸಕ್ಕರೆಯ ಆಮದು ಬೆಳೆಯುತ್ತಲಿದೆ. ೧೯೩೪-೩೫ನೇ ಇಸ್ವಿಯಲ್ಲಿ ೯-ಲಕ್ಷ ಟನ್ನು ಸಕ್ಕರೆ ಆಮದಾಗುವದಾಗಿ ಸರಕಾರದ ಅಂದಾಜು. ಅದರಿಂದ ರೂ ೧||| ಕೋಟಿ ಸರಕಾರಕ್ಕೆ ಉತ್ಪನ್ನ ಸಿಗಬಹುದೆಂದು ಹಿಂದುಸ್ಥಾನ ಸರಕಾರದ ಅರ್ಥ ಖಾತೆಯವರು ಎಣಿಸಿದ್ದರು. ಆಕ್ಟೋಬರ ತಿಂಗಳಿಗೆ ಅಂತ್ಯವಾಗುವ ೭ ತಿಂಗಳೊಳಗೆ ೧೩ ಲಕ್ಷ ಟನ್ನು ಸಕ್ಕರೆ ಆಮದಾಗಿ ಸರಕಾರಕ್ಕೆ ರೂ ೩ ಕೋಟಿ ೪೦ ಲಕ್ಷ ಉತ್ಪನ್ನವಾಯಿತು. ಪರದೇಶದ ಸಕ್ಕರೆ ಆಮದಿಗೆ ಹಿಂದುಸ್ಥಾನ ಸರಕಾರವು ಉತ್ತೇಜನ ಕೊಡುವದರಿಂದ ಸ್ವದೇಶದೊಳಗಿನ ಸಕ್ಕರೆ ಉದ್ದಿಮೆಯೂ, ಬೆಲ್ಲದ ಉದ್ದಿಮೆಯೂ ನಿಂತುಹೋಗಿ ಜನಸಾಮಾನ್ಯರಿಗೆ ನಷ್ಟ) ರಾಷ್ಟ್ರೀಯ ಸಭೆಯ ಸಭಾಸದರು ಸರಕಾರಿ ಜಮಾ-ಖರ್ಚಿನ ಚರ್ಚೆಯ ಕಾಲಕ್ಕೆ ಅರ್ಥಖಾತೆಯ ಧೋರಣವನ್ನು ಕಡುತರವಾಗಿ ವಿರೋಧಿಸಿ ಈ ಧೋರಣದಿಂದ ದೇಶದೊಳಗಿನ ಸಕ್ಕರೆಯ ವ್ಯಾಪಾರ ನಾಶವಾಗುವದಾಗಿ ಭವಿಷ್ಯ ಹೇಳಿದಾಗ್ಯೂ ಅರ್ಥಖಾತೆಯವರು ಒಪ್ಪಲಿಲ್ಲ. ಪರದೇಶಿ ಸಕ್ಕರೆಯ ಮೇಲೆ ಆಮದು ತೆರಿಗೆಯು ಒಮ್ಮೆ ತಗ್ಗಿದ್ದರಿಂದ ಈ ಅವಸ್ಥೆಯಾಯಿತು. ಇಷ್ಟಾಗಿ ಪರದೇಶದಿಂದ ಬರುವ ಬಿಳೀ ಸಕ್ಕರೆ ದೇಹಕ್ಕೆ ಹಿತಕರವಲ್ಲ; ಅದರಿಂದ ಹಲ್ಲು ಕೆಡುತ್ತವೆ; ಎಂದಾಗಿ ಪ್ರಸಿದ್ಧ ದಂತವೈದ್ಯರಾದ ಡಾ| ಎಸ್. ಕೆ. ಗುಪ್ತರವರು ಆರೋಗ್ಯ ಪತ್ರಿಕೆಯಲ್ಲಿ ಬರೆಯುತ್ತಾರೆ. ಎಂಜಲು ಮತ್ತು ಸಕ್ಕರೆಯ ಮಿಶ್ರಣದಿಂದ ಅಮ್ಲ ಬಿಮಾರಾಗಿ ಹಲ್ಲು ಕೆಡುವದಂತು ಆಯಿತು. ಬೇರೆ ಪದಾರ್ಥದ ಸೇವನ ಮಾಡಿದಾಗ್ಯೂ ಈ ಅಮ್ಲ ತಯಾರಾಗಲು ಅನುಕೂಲವಾಗುತ್ತದೆ. ಬಿಸ್ಕೀಟು, ಕೇಕು ಮೊದಲಾದ ಸಕ್ಕರೆಯುಳ್ಳ ಸವಿ ಸವಿ ಪದಾರ್ಥಗಳನ್ನು ಭೋಜನೋತ್ತರ ತಿನ್ನುವದು ಈಗಿನ ಸುಧಾರಿಸಿದ ಜನಗಳ ಕ್ರಮ. ಭೋಜನೋತ್ತರ ಹಣ್ಣು-ಹಂಪಲ ತಿನ್ನುವ ಪುರಾತನ ರೂಢಿ ಹಲ್ಲುಗಳಿಗೆ ಹಿತಕರವಾದದ್ದು. ಕಾಯಿ-ಪಲ್ಲೆಯನ್ನು ಸಹ ಭೋಜನ ಮುಗಿದ ಬಳಿಕ ತಿನ್ನಬಹುದು. ಹಣ್ಣು-ಹಂಪಲ, ಕಾಯಿ-ಪಲ್ಲೆಗಳ ಸೇವನದಿಂದ ಬಾಯೊಳಗ' ಅಮ್ಲ ಜನಕ ಕ್ರಿಮಿಗಳ ನಾಶವಾಗುತ್ತದೆ. Cellulose ಎಂಬ ಸವಿ ಪದಾರ್ಥ ಹಲ್ಲುಗಳಿಗೆ ಹಿತಕರ. ಇದು ಇಲ್ಲಿಯ ದಾಸ ಕಬ್ಬಿನಲ್ಲಿ ಹೆಚ್ಚಾಗಿರುತ್ತದೆ. ಈ ಕಬ್ಬಿನ ಬೆಲ್ಲ ತಿಂದಲ್ಲಿ ಶರೀರ ಜೀವಗಿಗೆ ಒಳ್ಳೇಯದು. ಸೆಲುಲೋಜ ಎಂಬ ಸವಿ ಪದಾರ್ಥ ಹಣ್ಣು-ಹಂಪಲಗಳಲ್ಲಿಯೂ, ಕಾಯಿ-ಪಲ್ಲೆಗಳಲ್ಲಿಯೂ ಇರುವದರಿಂದ ಅವನ್ನು ಭೋಜನೋತ್ತರ ಸೇವಿಸುತ ಪರಿಪಾಠವಿಡಬೇಕಾಗಿ ಡಾ|| ಗುಪ್ತರವರ ಅಂಬೋಣ. ಸರ್ವಾಧಿಪತಿಗಳು ಅರ್ಥ ಖಾತೆಯ ಧೋರಣದಿಂದ ಉಂಟಾದ ಅವಸ್ಥೆಯನ್ನು ಪರಾಂಬರಿಸಿ ಆಪನ್ನಿವಾರಣೆಯ ಹಿಕಾಂದಂತೆ ವಿದೇಶಿ ಸಕ್ಕರೆಯ ಮೇಲಿನ ತೆರಿಗೆಗನ್ನ ತ್ವರ್ಯವೇ ಏರಿಸಬೇಕಾಗಿ ಹಲವರು ಸೂಚಿಸುತ್ತಾರೆ. ಆಪನ್ನಿವಾರಣೆ ಅಧಿಕಾರದ ಕಟಾಕ್ಷ ರಾಷ್ಟ್ರೀಯ ಸಭೆಯ ಮೇಲೆ ! ಇಂಥ ಆಪತ್ತು ನಿವಾರಣೆಗಾಗಿ ಅವುಗಳ ಆ ಅಧಿಕಾರದ ಪ್ರಯೋಗವಾಗದ್ದರೆ ಹಿಂದೀಯರಿಗೆ ಸ್ವರಾಜ್ಯಾಧಿಕಾರ ಪಡೆಯುವ ಲವಲವಿಕೆ ಈಗಿನಷ್ಟು ತೀವ್ರವಾಗುತ್ತಿತ್ತೇ ?

⁂

ಮುಲ್ಕಿಯಲ್ಲಿ ಈ ಬಾರಿಯ ಪ್ರತಿಷ್ಠೆಯ ಮಹೋತ್ಸವವು ಒಳ್ಳೇ ಸಡಗರದಿಂದ, ಉತ್ಸಾಹದಿಂದ ನೆರವೇರಿತು. ಗೌಡಸಾರಸ್ವತ ಬ್ರಹ್ಮವೃಂದದ ಶ್ರೀ ಕಾಶಿ ಮಠಾಧೀಶರಾದ ಶ್ರೀ ಸುಕೃತೀಂದ್ರತೀರ್ಥ ಶ್ರೀ ಸ್ವಾಮಿಗಳವರು ಪ್ರತಿಷ್ಠೆಯ ಮುನ್ನಾದಿನ ಸೋಮವಾರ ರಾತ್ರಿ ವೈಭವದಿಂದ ಚಿತ್ತೈಸಿದ್ದರು. ೧೪ ವರ್ಷಗಳ ಮೇಲೆ ಶ್ರೀ ಗುರುಗಳದರ್ಶನವಾದ್ದರಿಂದ ಮುಲ್ಕಿಯಲ್ಲೆಲ್ಲ ಅಭೂತಪೂರ್ವವಾದ ಉತ್ಸಾಹ. ೧೪ ವರ್ಷಗಳ ಪೂರ್ವದಲ್ಲಿ ಶ್ರೀಗಳು ಮಂಗಳೂರಿನ ಶಿಷ್ಯವೃಂದದ ಅತ್ಯಾಗ್ರಹದ ಮೇರೆಗೆ ಮಂಗಳೂರಿಗೆ ಹೋಗಿ ಅಲ್ಲಿ ನಡೆದ ಪ್ರೀತಿಭೋಜನ ಸಮಾರಂಭದಲ್ಲಿ ಸೇರಿದ ಶಿಷ್ಯರ ಮೇಲೆ ಸ್ವಜ್ಞಾತಿ ಶಿಸ್ತಿನ ಪಾಲನೆಗಾಗಿ ಹೊರಡಿಸಿದ ಬಹಿಷ್ಕಾರ ರಾಯಸ ವಿರುದ್ಧ ಶ್ರೀಗಳ ಮೇಲೆ ಫೌಜದಾರಿ ಮತ್ತು ದಿವಾಣಿ ಮೊಕದ್ದಮೆಗಳು ನಡೆದು ಅವುಗಳೊಳಗಿಂದ ಶ್ರೀಗಳು ಮರ್ಯಾದೆಯಿಂದ ಪಾರಾದ ವೃತ್ತಾಂತವನ್ನು ಎಲ್ಲರೂ ಬಲ್ಲಾದ ವಿಷಯ. ಆ ಕಾಲದಲ್ಲಿ ಶ್ರೀಗಳು ಮಂಗಳೂರನ್ನು ಬಿಟ್ಟು ಕೊಟ್ಟು ಮೊದಲಾದ ಕಡೆ ಸಂಚರಿಸುತ್ತಿದ್ದರು. ೧೪ ವರ್ಷಗಳ ತರುವಾಯ ಶ್ರೀ ಗುರುಗಳವರು ಮಂಗಳೂರ ಮಾರ್ಗವಾಗಿಯೇ ಮುಲ್ಕಿಗೆ ತಲ್ಪಿದರು. ಮಂಗಳೂರಿನಲ್ಲಿಯೂ ಶ್ರೀಗಳಿಗೆ ಶಿಷ್ಯರು ಒಳ್ಳೇ ವೈಭವದಿಂದ ಸ್ವಾಗತ ಮಾಡಿದರು. ಶ್ರೀಗಳು ಚಿತ್ತೈಸುವ ಮಾರ್ಗಗಳ ಮೇಲೆ ತಳಿರು-ತೋರಣಗಳನ್ನು ಹಾಕಿ ಸೊಗಸಾಗಿ ಶಿಷ್ಯರು ಶೃಂಗರಿಸಿದ್ದರು; ಫಲ-ಪುಷ್ಪಗಳ ಕಾಣಿಕೆ ಮಾಡಿದರು, ಆರತಿ ಎತ್ತಿದರು. ಶ್ರೀಗಳು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರವಿವಾರ ರಾತ್ರಿ ಮುಕ್ಕಾಮು ಮಾಡಿ ಮರುದಿನ ರಾತ್ರಿ ಮುಲ್ಕಿಗೆ ತಲ್ಪಿದರು. ಮಂಗಳವಾರ ಪ್ರತಿಷ್ಠೆಯ ಉತ್ಸವ. ಶ್ರೀಗಳೇ ಶ್ರೀ ನೃಸಿಂಹ ದೇವರ ಅಭಿಷೇಕ ಕಾರ್ಯ ನೆರವೇರಿಸಿದರು. ಶ್ರೀಗಳ ಆಗಮನದಿಂದ ಉತ್ಸವಕ್ಕೆ ಒಳ್ಳೇ ಕಳೆ ಏರಿತ್ತು. ಶ್ರೀ ನೃಸಿಂಹ ದೇವರಿಗೆ ಶ್ರೀ ಕಾಶಿ ಮಠಾಧೀಶರೇ ಪೂರ್ವಕಾಲದಲ್ಲಿ ಸ್ಥಾಪಿಸಿದ್ದು. ಈ ಮೂರುತಿ ಶ್ರೀ ಕಾಶಿ ಮಠಾಧೀಶರ ಪೂರ್ವಪರಂಪರೆಯವರಿಗೆ ಯಾತ್ರೆ ಸಮಯ ಸಿಕ್ಕಿತ್ತಾಗಿಯೂ, ಅದನ್ನು ಶ್ರೀಗಳು ಆ ದೇವರ ಸಂಕಲ್ಪದಂತೆ ಮುಲ್ಕಿಯಲ್ಲಿ ಸ್ಥಾಪಿಸಿದ್ದರಾಗಿಯೂ ಹೇಳುತ್ತಾರೆ. ಶ್ರೀ ಕಾಶೀ ಮಠಾಧೀಶರಿಗೆ ಈ ದೇವರ ಮೇಲೆ ವಿಶೇಷ ನಿಷ್ಠೆ; ಮಂಗಳೂರಿಗೆ ಹೋಗುವ ಪೂರ್ವದಲ್ಲಿ ಅತ್ತ ಕಡೆ ಹೋದಲ್ಲಿ ಶ್ರೀಗಳು ಸಂಕಟದಲ್ಲಿ ಬೀಳಬಹುದಾಗಿ ಶ್ರೀ ದೇವರ ಅಪ್ಪಣೆಯಾಗಿತ್ತಾಗಿಯೂ, ಮಂಗಳೂರ ಶಿಷ್ಯರ ಅತ್ಯಾಗ್ರಹದ ಮೇರೆಗೆ ಸಮಾಜ ಕಲ್ಯಾಣ ಇಚ್ಛೆಯಿಂದ ಪ್ರೇರಿತರಾಗಿ ಮಂಗಳೂರಿನ ತನಕ ಶ್ರೀಗಳು ಹೋಗಿದ್ದರಾಗಿಯೂ ಹೇಳುತ್ತಾರೆ. ಹದಿನಾಲ್ಕು ವರ್ಷಗಳ ತನಕ ಭಕ್ತ-ಭಕ್ತವತ್ಸಲರೊಳಗೆ ಉಂಟಾದ ವಿಯೋಗದುಃಖ ಪರಿಹಾರವಾದದ್ದನ್ನು ಕಂಡು ಎಲ್ಲರೂ ಸಂತೋಷಪಡುತ್ತಾರೆ; ನಾವೂ ಸಂತೋಷಪಡುತ್ತೇವೆ. ಶ್ರೀಗಳೂ, ಶ್ರೀಗಳ ಶಿಷ್ಯವೃಂದವೂ ಐಕ್ಯಮತ್ಯದಿಂದ ಸಮಾಜಕಲ್ಯಾಣವನ್ನು ಸಾಧಿಸುವಂತೆ ಮುಲ್ಕಿಯೊಳಗಿನ ಶ್ರೀ ನರಹರಿಯು ಪ್ರೇರೇಪಿಸಲೆಂದು ಪ್ರಾರ್ಥಿಸುತ್ತೇವೆ.

⁂

ಬೆಳ್ಳಿಯ ಗಬಾಟೆ ವಿಪರೀತ. ೧೦೦ ತೊಲೆಗೆ ಮಂಗಳವಾರ ರೂ. ೫೩ ಆಯಿತು. ಗಿರಾಕಿ ಇಲ್ಲ. ಸರಾಫ ಕಟ್ಟೆಯವರು ದರ ಇನ್ನೂ ಇಳಿಯಬಹುದೆಂದೂ, ವರ್ತಕರು ನಷ್ಟಹೊಂದಿ ಗೋಳಿಡುವರೆಂದೂ ಸರಾಫ ಕಟ್ಟೆಯನ್ನೆ ತೆರೆಯಲಿಲ್ಲ. ತೆರೆದಿಟ್ಟಿದ್ದರೆ ದರ ರೂ. ೫೦-೦-೦ಕ್ಕೆ ಇಳಿಯುತ್ತಿತ್ತೆಂದು ವರ್ತಕರ ಅಂಬೋಣ. ಬೆಳ್ಳಿ ಮಾರುವವರಿದ್ದಾರೆ ಕೊಳ್ಳುವವರಿಲ್ಲ. ಎಲ್ಲೆಲ್ಲಿಯೂ ಗಿರಾಕಿ ಇಲ್ಲ. ಅಮೇರಿಕೆ ಸರಕಾರದವರು ಲಂಡನ್ನಿನ ಪೇಟೆಯಲ್ಲಿ ಬೆಳ್ಳಿ ಖರೀದಿ ಮಾಡುವದು; ಹಿಂದೀ ವರ್ತಕರು ಬೆಳ್ಳಿಯನ್ನು ಅಲ್ಲಿ ಕಳುಹಿಕೊಡುವದು. ಆದರೆ ಈಗ ಈ ದ್ರಾವಿಡ ಪ್ರಾಣಾಯಾಮದಿಂದ ಹಿಂದೀಯರಿಗೆ ಸಂಕಟ. ಗಿರಾಕಿಗೆ ಬೆಳ್ಳಿ ಎಷ್ಟು ಬೇಕು, ಎಂಬ ಗ್ರಹಿಕೆ ಸಿಗದ್ದರಿಂದ ಲಂಡನ್ನಿನ ಪೇಟೆಯಲ್ಲಿ ಬೆಳ್ಳಿಯ ಛಟ್ಟಿಗಳನ್ನು ಕಳುಹಿಸುವದು ಕಷ್ಟವಾಗಿದೆ. ಈಗ ಮುಂಬಯಿ ಸರಾಫ ಕಟ್ಟೆಯಲ್ಲಿ ೩೫ ಸಾವಿರ ಛಟ್ಟಿಗಳು ಮಾರಾಟಕ್ಕೆ ಸಿದ್ಧವಿವೆ. ಆದರೆ ಗಿರಾಕಿಯಿಲ್ಲ. ಮುಂಬಯಿಯಿಂದ ಲಂಡನ್ನಿಗಿರುವಂತೆ ಟೆಲಿಫೋನಿನ ವ್ಯವಸ್ಥೆ ಇಡಬೇಕಾಗಿ ಸರಾಫ ಕಟ್ಟೆಯವರು ಆಗ್ರಹ ಮಾಡುತ್ತಿದ್ದಾರೆ. "ಲಂಡನ್ನಿನ ಮಧ್ಯಸ್ಥಿಕೆ ನಮಗೆ ಬೇಡ. ನ್ಯೂಯೋರ್ಕದೊಡನೆ ಟೆಲಿಫೋನಿನ ವ್ಯವಸ್ಥೆ ಮಾಡಿಕೊಡಿ" ಎಂಬದಾಗಿ ಮುಂಬಯಿ ವರ್ತಕರ ಬಿನ್ನಹ. ಆ ವ್ಯವಸ್ಥೆ ಇನ್ನೂ ಆಗಲಿಲ್ಲ. ಅದರಿಂದ ಬೆಳ್ಳಿಯ ದರ ಕ್ರಮವಾಗಿ ತಗ್ಗುತ್ತದೆ. ಚಿನ್ನದ ದರ ಏರ ಪ್ರಾರಂಭವಾಗಿದೆ. ಲಂಡನ್ನಿನ ಪೇಟೆಯಲ್ಲಿ ಔಂಸಿಗೆ ೧|| ಪೆನ್ನಿ ಏರಿತು." ಇನ್ನೂ ಏರುವದಾಗಿ ಹೇಳುತ್ತಾರೆ. ಬೆಳ್ಳಿಗೆ ಗಿರಾಕಿ ಇಲ್ಲ; ಅದರಿಂದ ಅದು ಮಾರಲಾಗುವದಿಲ್ಲ. ಚಿನ್ನದ ದರ ಏರುತ್ತದೆ; ಅದರಿಂದ ಅದನ್ನು ಮಾರುವವರಿಲ್ಲ. ಚಿನ್ನ-ಬೆಳ್ಳಿ ವರ್ತಕರು ಎಲ್ಲಿಗೆ ಮುಟ್ಟುತ್ತಾರೆಂದು ಹೇಳುವದು ಕಠಿಣ.

ಇಂಡಿಯನ್ ಮರ್ಕಂಟೈಲ ಇನ್ಶೂರನ್ಸ ಕಂಪನಿ, ಲಿಮಿಟೆಡ್, ಮುಂಬಯಿ.

(೧೯೦೭ ರಲ್ಲಿ ಸ್ಥಾಪನೆಯಾದದ್ದು.)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು !

ಬೇಕಾ! ಕರ್ನಾಟಕದೊಳಗಿನ ಜಿಲ್ಹೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು; ಅನುಭವಿಕ ಆರ್ಗನ್ಯಾಯಿಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯೆಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, ಕಾರವಾರ.

ಹೋರರು ಬಲಿಬಿದ್ದರು!

[ನಿರೀಕ್ಷಕನು ಬರೆದುದು.]

ಹಬಸಿ ದೇಶವನ್ನು ಪಾಲುಪಟ್ಟಿ ಮಾಡಿ ಲೋಕಕಂಟಕ ಮುಸೊಲಿನಿಗೆ ಪಾರಿತೋಷಕ ಕೊಡುವ ಹೋರ-ಲಾವಲ್‌ರವರ ಕುಟಿಲ ಕಾರಸ್ಥಾನ ಸಂಪೂರ್ಣವಾಗಿ ಸೋತುಹೋಗಿದೆ. ದನಕಾಲಿ, ಟಿಗ್ರೆ, ಒಗಡೇನ ಪ್ರದೇಶಗಳನ್ನು ಮುಸೊಲಿನಿಯವರಿಗೆ ಉಡುಗರೆ ಮಾಡಿ ಲೋಕಶಾಂತಿಯನ್ನು ಸ್ಥಾಪಿಸುವ ಹೋರ-ಲಾವಲ್‌ರವರ ಆಕಸ್ಮಿಕಪ್ರಸಂಗದಿಂದ ಹೋರರು ರಾಜಿನಾಮೆ ಕೊಟ್ಟು ಅಧಿಕಾರಚ್ಯುತರಾಗಬೇಕಾಯಿತು. ವಿದೇಶ ಇಲಾಖೆಯ ಸರ್ ಸಮ್ಯುಅಲ್ ಹೋರರವರು ಬ್ರಿಟಿಶ ದೇಶದ ಗೌರವವನ್ನೂ, ಚಾತುರ್ಯವನ್ನೂ ಲೋಕಕ್ಕರುಹಿ ಬ್ರಿಟಿಶ ದೇಶದ ಕೀರ್ತಿಯನ್ನು ಲೋಕದಲ್ಲಿ ಬೆಳಗಿಸಿದರೆಂದು ಅವರಿಗೆ ಹೊಗಳು ಹರಿಸಿದ ಪತ್ರಿಕೆಗಳೇ ಅವರಿಗೆ ಹಳದು ಪ್ರಧಾನಪದವನ್ನು ತ್ಯಜಿಸಲು ಒತ್ತಾಯಪಡಿಸಿದರು. ಮುಖ್ಯ ಪ್ರಧಾನರಾದ ಮಿ| ಬಾಲ್ಡ್ವಿನ್‌ರವರು ಹೋರರಿಗೆ ಒದುಕಿಸಿ ಕೊಂಡಲ್ಲಿ ತಮ್ಮ ಅಧಿಕಾರತ್ಯಾಗವಾಗುವದಾಗಿ ಮನಗಂಡು ಹೋರ-ಲಾವಲ್‌ರವರ ಮಧ್ಯಸ್ಥಿಕೆಯ ಸೂಚನೆಗಳನ್ನು ತಿರಸ್ಕರಿಸಿಬಿಟ್ಟಿದ್ದಾರೆ. 'ಅವು ಸತ್ತು ಹೋದವು. ಅವನ್ನು ನಾವು ಪುನರುದ್ಧರಿಸಲು ಸರ್ವಥಾ ಪ್ರಯತ್ನಪಡಲಿಕ್ಕಿಲ್ಲ." ಎಂಬದಾಗಿ ಗುರುವಾರದ ಪಾರ್ಲಿಮೆಂಟಿನಲ್ಲಿ ಖಂಡಿತ ವಚನ ಕೊಟ್ಟರು. ಲಾವಲ್‌ರವರ ಆಸನವೂ ನಡುಗತೊಡಗಿದೆ. ಅವರು ಈ ವಾರದಲ್ಲಿ ರಾಜಿನಾಮೆ ಕೊಡಬೇಕಾದೀತಾಗಿಯೂ ಫ್ರೆಂಚ ಲೋಕಪ್ರತಿನಿಧಿ ಸಭೆಯವರು ಅವರಿಗೆ ಪ್ರಧಾನ ಪದದಿಂದ ಪದಚ್ಯುತ ಮಾಡುವರಾಗಿಯೂ ಹೇಳುತ್ತಾರೆ. ಫ್ರೆಂಚ ಪ್ರಧಾನ ಮಂಡಳದೊಳಗೂ ಗಡಿಬಿಡಿಯುಂಟಾಗಿದೆ. ಲಾವಲ್‌ರವರಿಗೂ ಹೆರಿಯೊಟ್‌ರವರಿಗೂ ಮನಸ್ತಾಪ ಉಂಟಾಗಿದೆ. ಹಬಸಿ ದೇಶವನ್ನು ಅಪಹರಿಸುವ ಯೋಜನೆಯನ್ನು ಮನ್ನಿಸಲಿಕ್ಕೆ ಹೆರಿಯೊಟ್‌ರವರು ಸಿದ್ಧರಿಲ್ಲ! ಇವರು ಇಟಾಲಿಯ ವಿರೋಧಕರು, ಹಬಸಿ ಪಕ್ಷಪಾತಿಗಳು ಇವರು ಸದ್ಯಕ್ಕೇ ರಾಜಿನಾಮೆ ಕೊಡುವ ಪ್ರಸಂಗವಿದೆ. ಇವರು ರಾಜಿನಾಮೆ ಕೊಟ್ಟಲ್ಲಿ ಇವರ ಪಕ್ಷದ ಲೋಕಪ್ರತಿನಿಧಿಗಳು ಲಾವಲ್‌ರವರ ವಿರೋಧಕರಾದರೆ ಲಾವಲ್‌ರವರು ಪದಚ್ಯುತರಾಗಬೇಕು. ಈ ವಾರದಲ್ಲಿಯೇ ಈ ಘಟನೆ ಒದಗಬಹುದು. ಲೋಕಕಂಟಕನಿಗೆ ಹಬಸಿ ದೇಶವನ್ನು ಬಲಿ ಕೊಡುವ ಕಪಟ ಕಾರಸ್ಥಾನ ನಡಿಸಿದ ಹೋರ-ಲಾವಲ್‌ರವರು ಸ್ವತಃ ಬಲಿಬಿದ್ದ ನೋಟ ನೋಡಿ ನನಗೆ ಸಂತೋಷವಾಗುತ್ತದೆ. ಲೋಕಕಂಟಕರಿಗೆ ಹೋರ-ಲಾವಲ್‌ರಂಥ ಮಹಾನುಭಾವರು ಆಶ್ರಯ ಕೊಡುವದರಿಂದಲೇ ಲೋಕಕಂಟಕತನವು ಲೋಕದಲ್ಲಿ ಲೋಕೋಪಕಾರದ ವೇಷ ಬರಕೊಂಡು ಲೋಕವಂಚನೆ ಮಾಡುತ್ತಿದೆ. ಈ ಮಧ್ಯಸ್ಥಿಕೆಯ ಚರ್ಚೆಯಿಂದ ಒಂದೆರಡು ಮಾತುಗಳು ಸಿದ್ಧವಾಗಿವೆ:- ಬ್ರಿಟಿಶರು ರಾಷ್ಟ್ರಸಂಘದ ಗೌರವಕ್ಕಾಗಿ ಹೋರಾಡಲು ಸಿದ್ಧರಿದ್ದಾರೆ. ಇಟಾಲಿಗೆ ಅವರು ಬೆದರುವದಿಲ್ಲ. ಇಟಾಲಿಯವರೊಡನೆ ಹೋರಾಡಿದ್ದಲ್ಲಿ ರಾಷ್ಟ್ರಸಂಘದ ಘಾತವಾಗುವದಾಗಿ ಹೋದರು ಅಂಜಿಕೊಂಡು ಲಾವಲ್‌ರವರ ಮಧ್ಯಸ್ಥಿಕೆಗೆ ತಲೆದೂಗಿದರಂತೆ! ಎಣ್ಣೆಯ ಬಹಿಷ್ಕಾರವನ್ನು ರಾಷ್ಟ್ರಸಂಘದವರು ಕೈಕೊಂಡಲ್ಲಿ ಮತ ಕೊಟ್ಟ ರಾಷ್ಟ್ರಗಳಿಗೂ, ಇಟಾಲಿಗೂ ಯುದ್ಧವಾಗುವದಾಗಿಯೂ ಆ ಯುದ್ಧದಲ್ಲಿ ಸೇರಿ ಮುಸೊಲಿನಿಯೊಡನೆ ಹೋರಾಡಲು ಲಾವಲ್‌ರವರು ಎಳ್ಳಷ್ಟೂ ಒಪ್ಪಲಿಲ್ಲವಾಗಿಯೂ ಒಬ್ಬಂಟಿಗರಾಗಿ ಬ್ರಿಟಿಶರು ಹೋರಾಡಿದಲ್ಲಿ ರಾಷ್ಟ್ರಸಂಘದೊಳಗಿನ ಐಕ್ಯಸೂತ್ರ ಹರಿದುಹೋಗಿ ಅನರ್ಥ ಒದಗುವದಾಗಿಯೂ ಹೋರರು ಅಂಜಿದರಂತೆ! ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಇದೇ ಪ್ರಶ್ನೆಯನ್ನು ತಿಳಿಸಿ ಮಿ| ಬಾಲ್ಡ್ವಿನ್‌ರವರು ತಮ್ಮ ಧೋರಣವನ್ನು ಸ್ಪಷ್ಟ ಮಾಡಿದ್ದಾರೆ "ಭೂಮಧ್ಯ ಸಮುದ್ರದೊಳಗೆ ಇಟಾಲಿಯೊಡನೆ ಹೋರಾಡುವ ಸಾಮರ್ಥ್ಯ ನಮಗುಂಟು, ನಾವು ವಿಜಯಶ್ರೀವಿಭೂಷಿತರಾಗಲೇಬೇಕು." ಎಂಬದಾಗಿಯೂ ಹೇಳಿದರು. ಅವರ ಭಾಷಣದ ನಂತರ ಸಭಾಸದರಿಗೆ ತಮ್ಮ ಹಿಂದಿನ ವಿರೋಧವನ್ನು ಕುಗ್ಗಿಸಲು ಹುರಿದುಂಬಿಸಿದರು. ಆದರೆ ಆ ಸಾಮರ್ಥ್ಯವನ್ನು ಪ್ರಯೋಗಿಸಲು ಫ್ರೆಂಚರ ಅಭಾವದಲ್ಲಿ ಸಾಮ್ರಾಜ್ಯ ಸರಕಾರವು ಸಿದ್ಧವಿಲ್ಲ. ಅದಕ್ಕಾಗಿಯೇ ಸಂಧಿ ಪ್ರಸ್ತಾವವನ್ನು ಉಪಸ್ಥಾಪಿಸಿತ್ತು. ಇನ್ನು ಸಂಧಿಯ ಸಂಭಾಷಣಗಳು ನಡೆಯುತ್ತಿರುವದಾಗಿ ಪ್ರಕಟವಾಗಿದೆ. ಮುಸೊಲಿನಿಯವರು ರಾಕ್ಷಸನಂತೆ ಬೊಬ್ಬಿರಿಯುತ್ತಿದ್ದಾರೆ. ಬುಧವಾರ ಪೊಂಟಿನಿಯಾ ನಗರ ಸಂಸ್ಥಾಪನೆಯ ಸಮಯ ಕೊನೆ ತನಕ ತಾವು ಯುದ್ಧ ನಡಿಸಿ ಖಚಿತವಾಗಿ ಅವರು ನಿರ್ಧಾರದಿಂದ ಹೇಳಿದರು. ಸದಸದ್ವಿವೇಕ ಬುದ್ಧಿಯಂತೆ ಸ್ವದೇಶದವರ ರಕ್ಷಣಾರ್ಥವಾಗಿ ನಾವು ಪ್ರಯೋಗವನ್ನು ನಡಿಸಿದ್ದೇವಾಗಿಯೂ ಅವರು ನುಡಿದರು. 'ಪೋಪೊಲೊ ಡಿ ಇಟಾಲಿಯಾ' ಪತ್ರಿಕೆಯಲ್ಲಿ ಮುಸೊಲಿನಿಯವರು ಒಂದು ಲೇಖ ಬರೆದು ೫೦ ರಾಷ್ಟ್ರಗಳು ಇಟಾಲಿಗೆ ಹಾಕಿದ ಮುತ್ತಿಗೆಗೆ ಸ್ವದೇಶ ಸೊಪ್ಪು ಹಾಕಲಿಕ್ಕಿಲ್ಲವಾಗಿ ಸಾರಿದ್ದಾರೆ. ಯುದ್ಧ ಖರ್ಚಿಗಾಗಿ ವಿವಾಹ ಉಂಗುರಗಳನ್ನು ಸಮರ್ಪಿಸುವ ಸಮಾರಂಭವು ಒಳ್ಳೇ ವಿಜೃಂಭಣೆಯಿಂದ ರೋಮದಲ್ಲಿ ನೆರವೇರಿತು. ಮಹಾರಾಣಿಯವರೂ, ದೊಡ್ಡ ದೊಡ್ಡ ಸರದಾರರ ಪತ್ನಿಯರೂ ತಮ್ಮ ತಮ್ಮ ಉಂಗುರಗಳನ್ನೂ, ಪದಕಗಳನ್ನೂ ಚಿನ್ನ ಕರಗಿಸುವ ಕೋವೆಯಲ್ಲಿ ಹಾಕಿ ಧನ್ಯತೆ ಪಡೆಯುವ ದೃಶ್ಯ ನಿಜವಾಗಿಯೂ ಅಪೂರ್ವವಾದುದು. ಇಟಾಲಿಸರಕಾರವು ಮದ್ದು-ಗುಂಡುಗಳಿಗೆ ಅವಶ್ಯವುಳ್ಳ ೧೩ ಲಕ್ಷ ಡಾಲರು ಬೆಲೆಯ ೧ ಲಕ್ಷ ಟನ್ನಿಗೆ ಮಿಕ್ಕಿದ ಹಳೇ ಉಕ್ಕನ್ನು ಅಮೇರಿಕೆಯಲ್ಲಿ ಖರೀದಿ ಮಾಡಿದೆ. ಹಬಸಿ ಸರಕಾರವು ಪಾರೀಸ ಮಧ್ಯಸ್ಥಿಕೆಯನ್ನು ಧಿಕ್ಕರಿಸಿ ಇವುಗಳ ಆಧಾರದ ಮೇಲಿಂದ ಚರ್ಚೆ ನಡಿಸುವದಸಾಧ್ಯವೆಂದು ಉತ್ತರ ಕೊಟ್ಟಿದೆ. ಈ ಪ್ರಕಾರ ಹೋರ-ಲಾವಲ್‌ರವರ ಮಧ್ಯಸ್ಥಿಕೆ ಒಂದು ವಾರದೊಳಗೆ ಜನನವಾಗಿ ಮೃತಿಯನ್ನೈದಿದೆ. ಲಾವಲ್‌ರವರು ಪದಭ್ರಷ್ಟರಾಗಿ ಹೆರಿಯೊಟ್‌ರವರು ಫ್ರೆಂಚ ಪ್ರಧಾನ ಮಂಡಳದ ಮುಖ್ಯಸ್ಥರಾದರೆ ಮಧ್ಯಸ್ಥಿಕೆಯ ಮಾತು ಹಿಂದಾಗಿ ಶಾಸನಕ್ರಮದ ಅನಿವಾರ್ಯವಾಗುವದಾಗಿಯೂ, ಇಟಾಲಿಗೂ ಬ್ರಿಟಿಶ-ಫ್ರೆಂಚರಿಗೂ ಹೋರಾಟವಾಗುವದಾಗಿಯೂ ನಾನು ಎಣಿಸುತ್ತೇನೆ. ಹೋರರವರ ರಾಜಿನಾಮೆಯು ಎಲ್ಲ ರೀತಿ ಇಟಾಲಿಯೊಳಗೆ ಆಶ್ಚರ್ಯ-ಗೊಂದಲವಾಗಿರುವದಾಗಿ ರೋಮದೊಳಗಿನ ಸುದ್ದಿಗಾರರು ತಂತಿಯಿಂದ ತಿಳಿಸುತ್ತಾರೆ. ಲೋಕಕ್ಷೋಭದ ವಿಚಾರದಿಂದ ಬ್ರಿಟಿಶ ಸರಕಾರವು ಇಟಾಲಿಯ ವಿಷಯ ತಮ್ಮ ರಾಜ್ಯಧೋರಣವನ್ನು ತಿದ್ದುಪಡಿ ಮಾಡಬಹುದಾಗಿ ಬರ್ಲಿನ್‌ದೊಳಗಿನ ಪತ್ರಿಕೆಗಳ ಅಂಬೋಣ. ಅಂತು ಹೇಳುವದಿಷ್ಟೇ- ಇಟಾಲಿ-ಹಬಸಿ ವಾದ ಸಂಧಾನದಿಂದ ತೀರ್ಮಾನವಾಗುವ ಲಕ್ಷಣಗಳಿಲ್ಲ! ಯುದ್ಧ ಲಕ್ಷಣಗಳೇ ಎದ್ದೆದ್ದು ಕಾಣುತ್ತಿವೆ!

ಸಂಧಿ ಪ್ರಸ್ತಾಪಿಸಿದ ವಾರ್ತೆಯನ್ನು ಇಷ್ಟಕ್ಕೇ ಬಿಟ್ಟು ಯುದ್ಧ ವಾರ್ತೆಗಳನ್ನರುಹಬಯಸುತ್ತೇನೆ. ಹಬಸಿ ದೇಶದವರು ಈಗ ಗೆಲ್ಲಲಾರಂಭಿಸಿದ್ದಾರೆ. ಇಟಾಲಿಗೆ ಅಲ್ಲಲ್ಲಿ ಅಡ್ಡಗಟ್ಟುತ್ತಿದ್ದಾರೆ. ಉತ್ತರ ಪಾರ್ಶ್ವದ ಟಕಾಝಿ ನದಿಯ ಬಳಿ ೩ ದಿನಗಳ ತನಕ ಘನಘೋರ ಸಂಗ್ರಾಮವಾಯಿತು. ಅವರೊಳಗೆ ಸುಮಾರು ೨೭೩ ಮಂದಿ ಇಟಾಲಿಯರು ತೀರಿಕೊಂಡರು. ೫೦೦ ಮಂದಿ ಹಬಸಿ ಜನರು ತೀರಿಕೊಂಡರಾಗಿ ರೋಮದೊಳಗಿನ ವಾರ್ತೆ. ೩ ಸಾವಿರ ಹಬಸಿ ಸೈನಿಕರು ಇಟಾಲಿಯರಿಗೆ ಹಿಮ್ಮೆಟ್ಟಿಸಿದರಂತೆ. ಟಕಾಝಿಯ ಪಶ್ಚಿಮ ಪಾರ್ಶ್ವದಲ್ಲಿ ಈ ಸಂಗ್ರಾಮ ನಡೆಯಿತು. ಹಬಸಿ ಜನರು ಬಹು ಚಾತುರ್ಯದಿಂದ ಇಟಾಲಿಯವರಿಗೆ ಮುತ್ತಿಗೆ ಹಾಕುತ್ತಾರಾಗಿ ಮುಂಬಯಿ 'ಟೈಮ್ಸ' ಕರ್ತರು ಬರೆಯುತ್ತಾರೆ. ಉತ್ತರ ಪಾರ್ಶ್ವದಲ್ಲಿ ಇಟಾಲಿ ಸೈನಿಕರಿಂದ ಇನ್ನು ಮುಂದು ಸರಿಯಲಾಗುವದಿಲ್ಲ. ಇಟಾಲಿಯವರಿಗೆ ಸರಾಸರಿ ೧೦೦ ಮೈಲು ವಿಸ್ತಾರವಾದ ರಣಭೂಮಿಯನ್ನು ಕಾಪಾಡಿಕೊಳ್ಳುವದು ಪ್ರಯಾಸವಾಗಿದೆ. ಅಷ್ಟು ಜನರಿಗೆ ಆಹಾರ ಸಾಮುಗ್ರಿಗಳನ್ನು ಕೆಂಪು ಸಮುದ್ರದ ಪಾರ್ಶ್ವದಿಂದ ತಂದು ಪೂರೈಸುವದೂ ಕಷ್ಟಸಾಧ್ಯ ಮಾತು. ಮೇಲಾಗಿ ಸೈನ್ಯ 'ಕೂಚು' ಮಾಡಲಿಕ್ಕೆ ಮಾರ್ಗಗಳನ್ನು ಕಟ್ಟಬೇಕು; ಕಟ್ಟಿದ ಮಾರ್ಗಗಳನ್ನು ಭದ್ರಪಡಿಸಬೇಕು; ಗೆದ್ದುಕೊಂಡ ಪ್ರದೇಶದೊಳಗಿನ ಜನರ ಮನವೊಲಿಸಿಕೊಳ್ಳಬೇಕು; ಇಲ್ಲದಿದ್ದರೆ ಪಕ್ಕದಿಂದ ಹಬಸಿ ಸೈನಿಕರು ಇಟಾಲಿಯರ ಮೇಲೆ ಸಾಗಿಹೋಗಿ ಅನರ್ಥವಾಗುವದೇ! ಇವೆಲ್ಲ ಕಾರಣಗಳ ಮೂಲಕ ಇಟಾಲಿಯರಿಗೆ ಇನ್ನೆರಡು-ಮೂರು ವಾರಗಳ ತನಕ ಮುಂದರಿಯಲಾಗಲಿಕ್ಕಿಲ್ಲವಾಗಿ ಮಕಾಲೆಯೊಳಗಿನ 'ರ್‍ಯುಟರ' ಸುದ್ದಿಗಾರರು ಬರೆಯುತ್ತಾರೆ. ಸಯೂಮ ಸೇನಾಪತಿಗಳಿಗೆ ಲಂಚ ಕೊಟ್ಟು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಇಟಾಲಿಯರು ಹೊಂಚುಹಾಕಿದ್ದಾರಾಗಿಯೂ ಅವರು ಬರೆಯುತ್ತಾರೆ. ಮುಸೊಲಿನಿಯವರು ೧|| ಕೋಟಿಪವನ್ನ ಖರ್ಚಿಗಾಗಿ ಪೂರ್ವ ಆಫ್ರಿಕೆಯೊಳಗಿನ ಸೇನಾಪತಿಯಾದ ಬೊಡೊಗ್ಲಿಯೋರಿಗೆ ರವಾನಿಸಿದ್ದಾರೆ! ರಣಾಂಗಣದ ಮೇಲೆ ಶತ್ರುಗಳಿಗದಿರಾಗಲು ರ ತಫಾರಿಯವರು ಕಳೆದ ನವೆಂಬರ ೨೮ನೇ ಗುರುವಾರ ಅರುಣೋದಯಕ್ಕೆ ಅಡೀಸ ಅಬಾಬಾದಿಂದ ಹೊರಟು ಡೆಸ್ಸಿಗೆ ತಲ್ಪಿದರು. ಬಾದಶಹರು ರಣಾಂಗಣಕ್ಕೆ ಹೋಗುವಾಗ ಸಂಪ್ರದಾಯದಂತೆ ಆಬುನಾ ಪಾದ್ರಿಗಳಿಗೆ ಜೊತೆಗೆ ಕರೆದುಕೊಳ್ಳದೆ ರಾಜಧಾನಿಯಲ್ಲಿಯೇ ಬಿಟ್ಟು ಹೊರಟರು ಆ ಸಮಯ ಆರೆದು ಅ|

ನುಡಿಗಳನ್ನು ಕೇಳಿದರೆ ರೋಮಾಂಚಗಳೇಳುತ್ತವೆ. "ನಾನು ಇದೀಗ ಹೊರಟಿದ್ದೇನೆ. ನಾನು ಮರಳಿ ಬರುವೆನೋ, ರಣಾಂಗಣದಲ್ಲಿ ಶತ್ರುಗಳೊಡನೆ ಹೋರಾಡಿ ಮಡಿಯುವೆನೋ ನಾನರಿಯೆ. ನಾನು ಮರಳಿ ಬಾರದಿದ್ದಲ್ಲಿ ನನಗೆ ಅತ್ಯಂತ ಸಂತೋಷವಿದೆ. ನೀವು ನನ್ನ ಆಸನದಲ್ಲಿ ವಿರಾಜಮಾನರಾಗಿ ನನ್ನ ರಾಜ್ಯ, ಪತ್ನಿ, ಮಗಂದಿರ ಸಂರಕ್ಷಣೆ ಮಾಡಬೇಕು." ಎಂಬದಾಗಿ ಬಾದಶಹರು ಅಬುನಾ ಪಾದ್ರಿಗಳ ಬಳಿ ವೀರಾವೇಶದಿಂದಲೂ, ನಿರ್ಧಾರದಿಂದಲೂ, ಸ್ವದೇಶಸ್ವಾತಂತ್ರ್ಯಾಭಿಲಾಷೆಯಿಂದಲೂ ಉದ್ಗರಿಸಿದರು. "ಇತಾಲಿಯರಿಗೆ ಅವರ ಸಾಮರ್ಥ್ಯದ, ಸೈನ್ಯ ಚಾತುರ್ಯದ ಅಭಿಮಾನವಿದ್ದರೆ ನಮಗೆ ನಮ್ಮ ದೇವರ ಅಭಿಮಾನವಿದೆ." ಎಂಬದಾಗಿ ಅಬುನಾರವರು ಬಾದಶಹರಿಗೆ ಹರಸಿ ಕಳುಹಿದರು. ಬಾದಶಹರಿಗೆ ಮುಟ್ಟಿಸಿಕೊಡಲು ೨೫ ಮೈಲುಗಳ ತನಕ ರಾಣಿಯರೂ, ಅರಸುಮನೆತನದವರೂ ಹೋಗಿದ್ದರು. ಅಡೀಸ ಅಬಾಬಾದಿಂದ ಡೆಸ್ಸಿ ೬೦೦ ಮೈಲು ದೂರ. ಡೆಬ್ರಾಬಿರಾನ ಗ್ರಾಮದಲ್ಲಿ ಬಾದಶಹರು ಶುಕ್ರವಾರ ತಳವೂರಿದರು. ಸತ್ಕರಿಸಬಂದ ಗ್ರಾಮದವರಿಗೆ ಬಾದಶಹರು ಹೇಳಿದ್ದೇನಂದರೆ:- "ನಾನು ಸಮರಾಂಗಣಕ್ಕೆ ಹೊರಟಿದ್ದೇನೆ. ಅವಶ್ಯವಿದ್ದಲ್ಲಿ ಸೈನಿಕರೊಡನೆ ಕಂದಕಗಳಲ್ಲಿ ನಿಂತು ಶತ್ರುಗಳೊಡನೆ ಜೂಜುವೆ." ಹೋದಹೋದಲ್ಲಿ ಬಾದಶಹರಿಗೆ ಇದೇ ಪ್ರಕಾರ ಸ್ವಾಗತ-ಸತ್ಕಾರಗಳಾಗುತ್ತವೆ. ಬಾದಶಹರು ಕೆಂಪು ಡೇರೆಯನ್ನು ಹೊಡಕೊಂಡು ಕೆಂಪು ಪೀಠದ ಮೇಲೆ ಸಿಂಹಾಸನವನ್ನು ರಚಿಸಿ ಅಲ್ಲಲ್ಲಿಯ ಪಾಳೆಯಗಾರರ ವಂದನೆಗಳನ್ನು ಸ್ವೀಕರಿಸುತ್ತಾರೆ. ಗ್ರಾಮದವರು ಬಾದಶಹರಿಗೆ ಗೋವು, ಆಡು, ಕೋಳಿಗಳನ್ನು ಸಮರ್ಪಿಸುತ್ತಾರೆ. ಅವನ್ನು ಹಬಸಿ ದೇಶದೊಳಗಿನ ಸಂಪ್ರದಾಯದಂತೆ ಕೊಂದು ಮಾಂಸವನ್ನು ಬೇಯಿಸದ ಎಲ್ಲರೂ ತಿನ್ನುತ್ತಾರೆ. ಬಾದಶಹರ ಕಡೆ ತಮ್ಮ ಸಾಹಸವನ್ನು ಪ್ರದರ್ಶಿಸುವದಕ್ಕಾಗಿ ಪಾಳೆಯಗಾರರು ಸಿಂಹ, ಚಿರ್ಚಾ ಮೊದಲಾದ ಕ್ರೂರ-ದುಷ್ಟ ಶ್ವಾಪದಗಳನ್ನು ಅರ್ಪಿಸುತ್ತಾರೆ. ಬಾದಶಹರು ಡೆಸ್ಸಿಗೆ ತಲ್ಪಿ ಅಲ್ಲಿ ಕೆಲವು ದಿನ ಉಳಿದು ಕಳೆದ ಶುಕ್ರವಾರ ಮಕಾಲೆಯ ಕಡೆ ರಣಾಂಗಣಕ್ಕೆ ರಾಜಪುತ್ರರೊಡನೆ ಹೊರಡುವವರಿದ್ದರು. ಬಾದಶಹರ ಸರಂಜಾಮು ರಾಜಠೀವಿಗೆ ಸರ್ವಥಾ ಅನುರೂಪವಾದದ್ದು:- ೨೦ ಅರಬಸ್ಥಾನದ ಚಪಲ ಕುದುರೆಗಳಿವೆ. ಇವು ಸಹಜ ಬೆಟ್ಟ ಹತ್ತಿ ಕೂಚು ಮಾಡಬಲ್ಲವು. ಬಾದಶಹರೂ ಯುವರಾಜರೂ ಹತ್ತುವ ಎರಡು ಕುದುರೆಗಳಿಗೆ ಚಿನ್ನದ ಥಡಿಗಳಿವೆ. ಅಂಗರಕ್ಷಕರಿಗಾಗಿ, ಪರಿವಾರದವರಿಗಾಗಿ ೧೨೦ ತಟ್ಟುಕುದುರೆಗಳಿವೆ. ೧೫೦ ಹೇಸರಗತ್ತೆಗಳಿವೆ. ೫ ಕೆಂಪು ಗುಡಾರಗಳಿವೆ. ವಿಶ್ರಮಿಸುವದಕ್ಕಾಗಿ ಕೆಂಪು ಮತ್ತು ನೀಲಿ ಬಣ್ಣದ ಡೇರೆಗಳಿವೆ. ದರಬಾರನ್ನು ಸೇರಿಸಲು ಒಂದು ದೊಡ್ಡ ಡೇರೆ ಕೊಳ್ಳಲಾಗಿದೆ. ಯಾರಿಗೂ ದೃಷ್ಟಿ ಬೀಳಬಾರದೆಂದು ಜಾಗ್ರತೆ ಕೊಳ್ಳುವರೆ ಒಬ್ಬ ಪ್ರಮುಖರಿಗೆ ನೇಮಿಸಲಾಗಿದೆ. ಅವರು ಮುಂದಾಗಿ ಬಾದಶಹರ ಸಂಚಾರ ವ್ಯವಸ್ಥೆಯನ್ನಿಡಬೇಕು. ಬಾದಶಹರು ಖಾಕಿ ಬಣ್ಣದ ಪೋಷಾಕು ಮಾಡಿಕೊಂಡು ಮುಂದರಿಯುತ್ತಾರೆ. ಹಬಸಿ ಜನರು ಸ್ವಭಾವತಃ ನಿರ್ಧಾರವಂತ ಪುರುಷರು. ಅಂಜಿಕೆ ಎಂಬ ಶಬ್ದವೇ ಅವರ ಕೋಶದಲ್ಲಿಲ್ಲ. ಮೇಲಾಗಿ ಗಟ್ಟಿ ಜನರು. 'ಇವರ ನಿರ್ವಾಹಕ್ಕೆ ವರ್ಷಕ್ಕೆ ೧ ಪವನಿದ್ದರೆ ಸಾಕು' ಹೀಗೆ ಅಡೀಸ ಅಬಾಬಾದಿಂದ ಇಜಿಪ್ತ ದೇಶದ ಕೈರೋ ಪಟ್ಟಣಕ್ಕೆ ಹೋದ ಶುಶ್ರೂಷಾ ಪಥಕದ ಡಾಕ್ಟರರು 'ಅಲ್ಬಾಲ್ಬ' ಪತ್ರಿಕೆಯ ಪ್ರತಿನಿಧಿಗಳ ಬಳಿ ನುಡಿದರು. ಸೈನ್ಯ ರಾಣ್ಯದಲ್ಲಿರುವಾಗ ಒಂದು ಹಿಡಿ ಜೋಳ ತಿಂದರೆ ಹಬಸಿ ಸೈನಿಕನ ಬೆಳಗಿನ ಭೋಜನ ತೀರಿತು. ಮಧ್ಯಾಹ್ನ ಮತ್ತು ರಾತ್ರಿ ಭೋಜನಕ್ಕೆ ಮಾಂಸ, ಜೋಳ. ಬೆಟ್ಟ ಪ್ರದೇಶದಲ್ಲಿ ಪ್ರತ್ಯಕ್ಷ ಹೋರಾಡಹೊರಟಾಗಲಂತೂ ಇದೂ ಬೇಡ. ಬೆಟ್ಟದಲ್ಲಿ ಬೇಟೆಯಾಡಿ ಆ ಮಾಂಸ ತಿಂದು ಜೀವಿಸುತ್ತಾನೆ. ಇತಾಲಿಯ ಬಾಂಬುಗಳಿಗೆ ಬಲಿಬಿದ್ದ ಮೃಗಗಳ ಮಾಂಸ ತಿಂದು ಕೂಡ ಜೀವಿಸಬಲ್ಲನು. ಜೀನಸುಗಳ ದರ ಈ ಯುದ್ಧಕಾಲದಲ್ಲಿಯೂ ತೀರ ಅಗ್ಗ. ರೂ. ೧ಕ್ಕೆ ೪೦ ರೊಟ್ಟಿ; ೨ ಆಣೆಗೆ ೪೦ ಕೋಳಿ ತತ್ತಿ; ರೂ. ೧||ಗೆ ಒಂದು ದೊಡ್ಡ ಕುರಿ; ರೂ. ೧ಕ್ಕೆ ಒಂದು ಕುರಿ ಮರಿ; ರೂ. ೧೫ಕ್ಕೆ [illegible] ಆಕಳು; ೨ ಯಾ ೩ ಆಣೆಗಳಿಗೆ ೧ ಕೋಳಿ. ರೂ. ೧ಕ್ಕೆ ೪೦ ರತ್ತಲು ಶುದ್ಧ ಹಾಲು. ರೂ. ೧ಕ್ಕೆ ೧೧ ರತ್ತಲು ತುಪ್ಪ. ಇತಾಲಿಯರು ಡೆಜ್ಜಾಚ ಎಂಬ ಪಾಳೆಯಗಾರನಿಗೆ ವಶಮಾಡಿಕೊಂಡರು. ಲಂಚ ಕೊಟ್ಟಾಯಿತು ಮೇಲೆ ರೂಪವತಿ ಇತಾಲಿ ಸ್ತ್ರೀಯೊಡನೆ ಮದುಮಾಡಿಸಿದರು. ಮುಸಾಅಲಿ ಪರ್ವತದ ಬಳಿ ದನಕಾಲಿ ಜನರು ಹಬಸಿ ಜನರ ಜೊತೆಗೆ ಇತಾಲಿಯರೊಡನೆ ಹೋರಾಡುತ್ತಿದ್ದಾರೆ. ಬಾದಶಹರ ಸಾನ್ನಿಧ್ಯದಿಂದ ಹಬಸಿ ಸೈನಿಕರಲ್ಲಿ ಒಳ್ಳೇ ಹುರುಪು ಬಂದು ಅವರು ಇತಾಲಿಯರೊಡನೆ ನಿಕರದಿಂದ ಹೋರಾಡುವರು.

ದಕ್ಷಿಣ ಪಾರ್ಶ್ವದ ಓಗಡೇನ ಪ್ರದೇಶದಲ್ಲಿಯೂ ಇತಾಲಿಯರಿಗೆ ಸಾಕು-ಬೇಕಾಗಿದೆ. ಅನಪೇಕ್ಷಿತವಾಗಿ ಮಳೆ ಬಿದ್ದು ಅರ್ಧಕ್ಕೆ ಮಿಕ್ಕಿ ಜನರು ಚಳಿಜ್ವರದಿಂದ ನರಳುತ್ತಿದ್ದಾರೆ. ಸಾಸಾಬೆನ್ನ, ಡಗಾಬೋರ ಪಟ್ಟಣಗಳನ್ನು ಕೈವಶ ಮಾಡಿಕೊಳ್ಳಲಿಕ್ಕೆ ಇತಾಲಿಯರಿಗೆ ಇನ್ನೂ ಅಸಾಧ್ಯ! ಚಳಿಜ್ವರದ ಉಪದ್ರವ ತಾಳಲಾರದೆ ಇತಾಲಿಯ ಸೈನಿಕರು ೨ ತಿಂಗಳಲ್ಲಿ ಆಕ್ರಮಿಸಿದ ಓಗಡೇನ ಪ್ರದೇಶವನ್ನು ಬಿಟ್ಟು ಹಿಂಜರಿದರು. ಲಂಚ ಕೊಟ್ಟು ಸೋಮಾಲಿ ಜನರಿಗೆ ಇತಾಲಿಯರು ಸೈನ್ಯದಲ್ಲಿ ದಾಖಲಪಡಿಸಿಕೊಂಡಿದ್ದರು. ಈ ಜನರು ತಮಗೆ ಅವಶ್ಯವುಳ್ಳ ಮದ್ದು-ಗುಂಡುಗಳನ್ನು ಕೆಂಪುಸಮುದ್ರದ ಆಚೆಗಿರುವ ಯೆಮೆನ್ ಪ್ರಾಂತದಿಂದ ಹಬಸಿ ಜನರ ಹೆಸರು ಹೇಳಿಕೊಂಡು ಪೂರೈಸಿಕೊಳ್ಳುತ್ತಿದ್ದರು. ಸತ್ಯಸ್ಥಿತಿ ತಿಳಿದೊಡನೆ ಯೆಮೆನ್ ದೇಶದ ವ್ಯಾಪಾರಿಗಳು ವಂಚಕ ಸೋಮಾಲಿ ಜನರಿಗೆ ಸೆರೆಹಿಡಿದಿಟ್ಟಿದ್ದಾರೆ! ಇತಾಲಿಯರು ಬಾಂಬು ಒಗೆದು ಈ ಭಾಗದಲ್ಲಿ ಹಬಸಿ ಜನರಿಗೆ ದಣಿಸಲುದ್ಯುಕ್ತರಾಗಿದ್ದಾರೆ. ಡೋಲೋದಿಂದ ೧೫೦ ಮೈಲು ಅಂತರವಿರುವ ನೆಜಲಿದಲ್ಲಿ ಅನೇಕ ಸೈನಿಕರು ಬಾಂಬಿಗೆ ಬಲಿಬಿದ್ದರಾಗಿ ಇತಾಲಿಯ ಮೊಗಾಡಿಸಿಯೋ ಗ್ರಾಮದ ವಾರ್ತೆ. ಗುಂಡುಹಾಕಿ ಕೆಲ ವಿಮಾನಗಳಿಗೆ ಕೆಳಗಿಳಿಸಿದರಾಗಿಯೂ ಹೇಳುತ್ತಾರೆ. ಇಂಥ ವಾರ್ತೆಗಳನ್ನು ನಂಬುವದು ಕಠಿಣ. ಇತಾಲಿಯ ವಿಮಾನಗಳು ಬಾಂಬಿನ ಸುರಿಮಳೆಗರೆಯುವ ಸಂಗತಿ ನಿಜ. ಆದರೆ ಅದರಿಂದ ವಿಶೇಷ ಹಾನಿಯಾಗುತ್ತಿದೆಂಬ ಮಾತು ಸುಳ್ಳು. ಸಿಸಾಬೇನದ ಬಳಿ ನಡೆದ ಹೋರಾಟದಲ್ಲಿ ಹಬಸಿ ಜನರ ಕಾರ್ಯವು ಸಿದ್ಧವಾಗಿರುವದಾಗಿ ಸೇನಾಪತಿ ವಾಹೀಬ ಪಾಶಾರವರು 'ಮುಂಬಯಿ ಕ್ರಾನಿಕಲ' ಪತ್ರಿಕೆಯ ಡೆರೆಡೊವಾದೊಳಗಿನ ಸುದ್ದಿಗಾರರ ಬಳಿ ಉದ್ಗರಿಸಿದರು. ಸೇನಾಪತಿ ಪಾಶಾರಿಗೆ ಸುದ್ದಿಗಾರರು ಹರಾರ ಪಟ್ಟಣದಲ್ಲಿ ಭೆಟ್ಟಿಯಾಗಿ ಯುದ್ಧ ಸಮಾಚಾರ ಕೇಳಿದರು. "ಜಲಭೂತಬಲದಿಂದಲೇ ನಮ್ಮ ವಿಜಯವಾಗುವದು. ನೀರಿನ ಅಭಾವದಲ್ಲಿ ಇತಾಲಿಯರು ಪ್ರತಿಯೊಂದೆಡೆ ಹಿಂಜರಿಯಲೇ ಬೇಕು." ಎಂಬದಾಗಿ ಸೇನಾಪತಿಗಳು ಉದ್ಗರಿಸಿದರು. ಓಗಡೇನ ಪ್ರಾಂತದಲ್ಲಿ ಇತಾಲಿಯರು ಗೋರಾಹಿ ಗ್ರಾಮವನ್ನು ಬಿಟ್ಟು ಲಗಬಗೆಯಿಂದ ಹಿಮ್ಮೆಟ್ಟುತ್ತಿದ್ದಾರೆ. ಡೆಸ್ಟಾ ಸೇನಾಪತಿಗಳು ಇತಾಲಿ-ಸೋಮಾಲಿ-ಪ್ರಾಂತದೊಳಗಿನ ಲುಗ್ ಗ್ರಾಮದ ಮೇಲೆ ಗುರಿಯಿಟ್ಟು ಕೂಚು ಮಾಡುತ್ತಿದ್ದಾರೆ. ಹಮಾರ ಗ್ರಾಮದಲ್ಲಿ ೨ ಸಾವಿರ ಇತಾಲಿಯ ಸೈನಿಕರನ್ನು ಅವರು ಸೆರೆಹಿಡಿದಿದ್ದಾರೆ. ಆದರಿಂದ ರೋಮ ಪಟ್ಟಣದಿಂದ ೬ ಸಾವಿರ ಇತಾಲಿ ಸೈನಿಕರು ರವಾನಿಸಲ್ಪಟ್ಟಿರುವರಾಗಿ 'ರೇಡಿಯೋ ನ್ಯೂಸ' ಪತ್ರಿಕೆಯ ವಾರ್ತೆ. ಡೆಜ್ಜಾಚ, ಅಥವರ್ಕ ಎಂಬ ಎಳೆ ಪಾಳೆಯಗಾರರು ಶತ್ರುಗಳೊಡನೆ ನಿಕರದಿಂದ ಹೋರಾಡಿ ಮಡಿದರು. ಇದರಿಂದ ಅಲ್ಲಿಯ ಸೋಮಾಲಿ ಜನರಲ್ಲಿ ಒಳ್ಳೇ ವೀರಾವೇಶ ತುಂಬಿದೆ. ಅವರ ಚಿಕ್ಕ ಮಗನಿಗೆ ಮುಖ್ಯಸ್ಥರಾಗಿ ನೇಮಿಸಿಕೊಂಡು ಸೈನಿಕರು ಹೋರಾಡುತ್ತಿದ್ದಾರೆ. ತುರುನಿಶ್ ಎಂಬ ಸ್ತ್ರೀಯ ಸಾಹಸ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದು. ಈ ರಣಾಂಗಣದಲ್ಲಿ ಪುರುಷರೊಡನೆ ಸ್ತ್ರೀಯರೂ ಹೋರಾಡುತ್ತಿದ್ದಾರೆ. ಸಂಚಾರಕ ತೋಫಿನಲ್ಲಿ ಆರೂಢರಾಗಿ ಹಬಸಿ ಜನರು ಇತಾಲಿಯರ ಮೇಲೆ ಸಾಗಿಹೋದಾಗ ತೋಫು ತೀರ ಬಿಸಿಯಾಯಿತು. ಆದರೊಳಗಿಂದ ಹೊರಬಂದರೆ ಶತ್ರುಗಳು ಸೆರೆಹಿಡಿಯುತ್ತಾರೆ; ಒಳಕೂತರೆ ಬೆಂದು ಸಾಯಬೇಕು. ಅಂಥ ಪ್ರಸಕ್ತಿಯಲ್ಲಿ ತುರುನಿಶಳು ಪ್ರಸಂಗಾವಧಾನ ಹಿಡಿದು ತೋಫನ್ನು ತಂಪು ಮಾಡಿದಳು. ಆದರಿಂದ ಸೈನಿಕರು ಕೃತಜ್ಞರಾಗಿ ಅವಳಿಗೇ ಸೈನ್ಯಾಧಿಕಾರಿಯಾಗಿ ನೇಮಿಸಿಕೊಂಡು ಅವಳ ಕೈಕೆಳಗೆ ಹೋರಾಡುತ್ತಿದ್ದಾರೆ. ಬಾದಶಹರು ದಕ್ಷಿಣ ರಣಾಂಗಕ್ಕೆ ಪರಿಸ್ಥಿತಿ ನೋಡಹೋದಾಗ ತುರುನಿಶಳ ಸಾಹಸ ಕೇಳಿ ಅವಳಿಗೆ ಫಿಟುರೋರಾರಿ ಎಂಬ ಸೇನಾಪತಿಗಳ ಬಿರುದು ಕೊಟ್ಟು ಸತ್ಕರಿಸಿದ್ದಾರೆ. ದಕ್ಷಿಣ ಪಾರ್ಶ್ವದಲ್ಲಿ ಆಹಾರ-ಸಾಮಗ್ರಿಗಳ ಕೊರತೆಯಿತ್ತು. ಮದ್ದು-ಗುಂಡಿನ ಕೊರತೆಯಿತ್ತು; ಹಣದ ಅಡಚಣಿಯಿತ್ತು; ಬಾದಶಹರು ೧| ಲಕ್ಷ ಡಾಲರು ಹಣ ಕಳುಹಿದ್ದಾರೆ; ೩ ಸಾವಿರ ಚೀಲ ಹಿಟ್ಟು ಕಳುಹಿದ್ದಾರೆ. ಮತ್ತು ಮೋಟಾರು ತುಂಬಿ ಮದ್ದು-ಗುಂಡುಗಳು ರವಾನೆಯಾಗುತ್ತಿವೆ. ಈ ಪ್ರಕಾರ ರಣದೇವತೆಯ ಆವಾಹನವಾಗುತ್ತಿರುವಾಗ ಸಂಧಿ ಪ್ರಸ್ತಾಪ ನಡೆಸಹೋದ ಹೋರರು ಬಲಿಬಿದ್ದದ್ದು ಆಶ್ಚರ್ಯವಲ್ಲ. ಲಾವಲ್‌ರವರಾದರೂ ಅವರನ್ನೇ ಹಿಂಬಾಲಿಸಬೇಕು. ರಾಷ್ಟ್ರಸಂಘದವರು ಇತಾಲಿಯನ್ನು ಶಾಸನ ಮಾಡುವ ನಿರ್ಧಾರ ಮಾಡಿದ್ದಾರೇನೋ ಅಹುದು. ಅದನ್ನು ಕೊನೆಗಾಣಿಸುವ ಕ್ರಮವನ್ನಷ್ಟು ತಿಳಕೊಳ್ಳಲು ನಾನು ಕುತೂಹಲಪಡುತ್ತೇನೆ

— ರಾಷ್ಟ್ರಸಭೆಯ ಸುವರ್ಣ ಮಹೋತ್ಸವದ ಸಮಯ ದೀಪೋತ್ಸವ ಮಾಡಬಾರದೆಂದು ರಾಷ್ಟ್ರಪತಿಗಳ ಆಜ್ಞೆ. ಉತ್ಸವ ಪ್ರಸಂಗದಲ್ಲಿ ಸಮಸ್ತ ಪಕ್ಷದವರಿಗೆ ಸಮ್ಮತವಾಗುವಂತೆ ರಾಷ್ಟ್ರಸಭೆಯ ಉತ್ಕರ್ಷ ರಾಷ್ಟ್ರಸ್ವಾತಂತ್ರ್ಯಕ್ಕಾಗಿ ನಡೆಸಿದ ಸಂಗ್ರಾಮ ಇವುಗಳನ್ನು ವರ್ಣಿಸಿ, ರಾಷ್ಟ್ರೀಯ ಸಭೆಯ ಗುಣ-ಸಂಕೀರ್ತನೆ ಮಾಡಬೇಕಾಗಿಯೂ ಆಜ್ಞೆ ಹೊರಟಿದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿ ವಿಶೇಷವಿಲ್ಲ. ಒಮ್ಮೊಮ್ಮೆ ಮೋಡಕವಿದು ಸೆಕೆಯಾಗುತ್ತದೆ

ಆಸಿಸ್ಟಂಟ ಕಲೆಕ್ಟರರು ಕಳೆದ ವಾರ ಜಮಾಬಂದಿಯ ಕೆಲಸ ಮುಗಿಸಿದರು. ಜಮಾಬಂದಿಯ ಸಂಪ್ರದಾಯ— ಉದ್ದೇಶ ಸ್ತುತ್ಯವಿದೆ. ಪ್ರಾಂತ ಸಾಹೇಬರು ಗ್ರಾಮಾಧಿಕಾರಿಗಳ ಕಡೆಯಿಂದ ಜನರ ದೂರುಗಳನ್ನು ಕೇಳಿಕೊಂಡು ಅವನ್ನು ಪರಿಹರಿಸುವ ಕ್ರಮ ಕೈಕೊಳ್ಳಲನುಕೂಲವಾಗಬೇಕಾಗಿ ಜಮಾಬಂದಿಯ ಕ್ರಮದ ಏರ್ಪಾಟು. ಈಗ ಆ ಉದ್ದೇಶವೆಲ್ಲ ಬಯಲಾಗಿ ಸರಕಾರಿ ತೀರ್ವೆ ವಸೂಲಿಯ ರಿಕಾರ್ಡಬಂದ ಪುಸ್ತಕದ ಮೇಲೆ ಸಹಿ ಕೊಳ್ಳುವ ವಿಧಿ ಮಾತ್ರ ನಡೆಯುತ್ತದೆ. ಗ್ರಾಮಾಧಿಕಾರಿಗಳು ಜನರ ದೂರು ಕೇಳುವದಿಲ್ಲ; ಹೇಳಿದರೂ ಅವುಗಳ ಪರಿಹಾರವೇನೂ ಆಗುವದಿಲ್ಲ. ಜಮಾಬಂದಿಯ ಕಾಲದಲ್ಲಿ ದೂರು ಹೇಳಿದ್ದರಿಂದ ಸರಕಾರಕ್ಕೆ ಜನರ ಅಡಚಣೆಗಳ ಕಲ್ಪನೆ ಬರದೆ ಜನರ ಕಷ್ಟ ನಿವಾರಣೆಯಾಗುವದಿಲ್ಲ. ತಾವು ದೂರು ಹೇಳಿಕೊಂಡಲ್ಲಿ ಪ್ರಾಂತ ಸಾಹೇಬರ ಮರ್ಜಿ ಇರದುಕ್ಕಿಲ್ಲವಾಗಿ ಗ್ರಾಮಾಧಿಕಾರಿಗಳು ಸುಳ್ಳೇ ಗ್ರಹಿಸಿ ಗ್ರಾಮದ ಜನರ ಸ್ಥಿತಿ-ಗತಿಯನ್ನು ಹೇಳಿಕೊಳ್ಳಲು ಹೆದರುತ್ತಾರೆ. ಪ್ರಾಂತ ಸಾಹೇಬರು ಪ್ರೋತ್ಸಾಹ ಕೊಟ್ಟು ದೂರು ಪರಿಹರಿಸಿಕೊಡಗಿದರೆ ಜಮಾಬಂದಿಯ ಉದ್ದೇಶ ಸಫಲವಾಗುವಂತಿದೆ

ಕಲ್ಯಾಣಿ ಪೇಟ್ಯೆಯ ಮರಾಠಿ ಜೋಶಿ ಎಲ್ಲಿಗೆ ಹುಟ್ಟಿತೆಂದು ತಿಳಿಯುವದಿಲ್ಲ. ಪಂಚನಾಮೆಯು ಸಂಚಲಿಗೆ ಕಳಿಸುವದರಲ್ಲಿ ಪಕ್ಷಪಾತವಾಯಿತಾಗಿ ಪ್ರಕಟವಾಗಿದೆ. ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಪ್ರಕರಣವನ್ನು ತರಿಸಿಕೊಂಡು ಅದನ್ನು ಪೂರ್ಣ ಚೌಕಶಿಯನ್ನು ನಡಿಸಿ, ಕೊಲೆಯೋ, ನಿಧನವೋ ? ಎಂಬ ಪ್ರಶ್ನೆಯ ನಿರ್ಣಯ ಮಾಡದಿದ್ದರೆ ಕೊಲೆಪಾತಕದ ಪತ್ತೆ ಈಗಿನ ರಾಜ್ಯಭಾರದಲ್ಲಿ ಪತ್ತೆ ಹತ್ತುವದಿಲ್ಲವೆಂಬ ಲೋಕಾಪವಾದ ಬೀಳುವಂತಿದೆ. ಪೋಲೀಸರು ಆಸಕ್ತಿಯಿಂದ ದುಡಿಯಬೇಕು

ಪೊಲೀಸರು ರಾತ್ರಿ ಹೊತ್ತಿಗೆ ಸಾಕಿದ ನಾಯಿಗಳನ್ನು ಗುಂಡು ಹಾಕಿ ಕೊಲ್ಲತೊಡಗಿದ್ದಾರೆ. ರಾತ್ರಿ ಸಮಯ ಗುಂಡು ತಪ್ಪಿ ದಾರಿಹೋಕರಿಗೆ ತಾಗುವ ಭೀತಿಯಿದೆ. ಆದ್ದರಿಂದ ಪೋಲೀಸರು ಹಿಡಾಯತ ನಾಯಿ ಬೇಟೆಯನ್ನು ನಿಲ್ಲಿಸಬೇಕಾಗಿ ಒಬ್ಬರು ಸೂಚಿಸುತ್ತಾರೆ. ನಾಯಿಗಳ ಉಪದ್ರವಕ್ಕಿಂತ ಗುಂಡುಹಾಕಿ ಹೊಡೆಯುವ ಉಪಟಳ ಹೆಚ್ಚು

ಮೊನ್ನೆ ಶನಿವಾರ ಸಂಜೆ ೫ ಘಂಟೆಗೆ ಉ. ಪರಮೇಶ್ವರ ಶಂಭು ಹೆಗಡೆ ಇವರ ಪಟಾಂಗಣದಲ್ಲಿ ಅಖಿಲ ಭಾರತೀಯ ನೂಲುಗಾರ ಸಂಘದ ಖಾದಿ-ಸಂತೆಯ ಉದ್ಘಾಟನ ಸಮಾರಂಭವಾಯಿತು. ಹೊನ್ನಾವರದ ವಕೀಲ ಶ್ರೀ ಶಿವರಾವ ಶಾಸ್ತ್ರಿಗಳವರು ಸಂತೆಯನ್ನು ತೆರೆಯುವಾಗ ನುಡಿದದ್ದೇನಂದರೆ— "ಮೋಟಾರು, ಉಗಿಬಂಡಿ ಇವುಗಳ ಅಭಾವವಿದ್ದಾಗ ನಮ್ಮ ದೇಶದೊಳಗೆ ಸಂತೆಗಳ ವ್ಯವಸ್ಥೆಯಿತ್ತು; ಈಗಲೂ ಹಲವೆಡೆ ಸಂತೆ ನಡೆಯುತ್ತದೆ. ಸಂತೆಯಲ್ಲಿ ಬೇರೆ ಬೇರೆ ಹಳ್ಳಿಗಳಲ್ಲಿ ಹುಟ್ಟುವ ಬೇರೆ ಬೇರೆ ಜೀನಸುಗಳು ಬಂದು ಜನರಿಗೆ ಅನುಕೂಲವಾಗುತ್ತದೆ. ಅಂತೆಯೇ ಕರ್ನಾಟಕ ಶಾಖೆಯವರು ಖಾದಿ-ಸಂತೆಯನ್ನೇರ್ಪಡಿಸಿದ್ದಾರೆ. ಖಾದಿ ದುಬಾರಿ ಎಂಬದಾಗಿ ಸಾಮಾನ್ಯರ ಕಲ್ಪನೆಯಿದೆ. ಖಾದಿ-ಸಂತೆಯಲ್ಲಿಟ್ಟ ಅರಿವೆ-ಅಂಚಡಿ ನೋಡಿದ ಬಳಿಕ ಈ ಗ್ರಹಿಕೆ ದೂರವಾಗುವಂತಿದೆ. ಖಾದಿಯ ಪ್ರೋತ್ಸಾಹಕ್ಕೆ ಸರಕಾರದ ಪ್ರತಿಬಂಧವಿಲ್ಲ. ಪರದೇಶಿ ಅರಿವೆಯನ್ನು ಬಹಿಷ್ಕರಿಸಬೇಕಾಗಿ ಯಾರೂ ಹೇಳಕೂಡದು, ಅದು ಕಾಯಿದೆಯಿಂದ ಪ್ರತಿಬಂಧಿಸಲ್ಪಟ್ಟಿದೆ. ಸ್ವದೇಶಿಗೆ ಪ್ರೋತ್ಸಾಹ ಕೊಡಿರಿ; ಖಾದಿಯನ್ನು ಧರಿಸಿರಿ ಎಂಬದಾಗಿ ಪ್ರಚಾರ ಮಾಡಲಿಕ್ಕೆ ತುಂಬಾ ಇಂಬಿದೆ. ಹಿಂದೀಯರ ಉತ್ಪನ್ನವಾ ೭ ಬಿಲ್ಲಿ ಖಾದಿಯಿಂದ ದಿನಂಪ್ರತಿ ೧-೨ ಆಣೆ ಸಿಕ್ಕಿದ್ದಾಗ್ಯೂ ಅವರಿದ ಹಳ್ಳೀ ಲಾಭವಾಗುವಂತಿದೆ ನಮ್ಮ ಎಷ್ಟ ದೇಶಬಾಂಧವರಿಗೆ ಅನ್ನದಾನ ಮಾಡಿದ ಶ್ರೇಯಸ್ಸು ಸ್ವಂತ ಉಪಯೋಗಕ್ಕಾಗಿ ಕೊಂಡ ಖಾದಿಯ ಖರೀದಿಯಿಂದ ಸಿಗುವಂತಿದೆ ಇಂಗ್ಲಂಡ, ಜಪಾನ ಮೊದಲಾದ ದೇಶಗಳಲ್ಲಿ ನಿರುದ್ಯೋಗಿಗಳನ್ನು ಹೋಗಲಾಡಿಸುವದಕ್ಕಾಗಿ ನಿರುದ್ಯೋಗಿಗಳ ಲೆಕ್ಕವಿಟ್ಟು ಅವರಿಗೆ ಸರಕಾರವು ಕೆಲಸ ಪೂರೈಸುತ್ತದೆ, ಇಲ್ಲವೆ ಹೊಟ್ಟೆಗೆ ಕೊಡುತ್ತದೆ ಆ ದೇಶಗಳಲ್ಲಿ ನೀಡುವ ಕ್ರಮ ಪ್ರವಿಷ್ಠರಿಸಲ್ಪಡುತ್ತದೆ. ನಮ್ಮೀ ದೇಶದೊಳಗೆ ಸರಕಾರದ ಕಡೆ ನಿರುದ್ಯೋಗಿಗಳ ಲೆಕ್ಕವೇ ಇಲ್ಲ. ಅಂದ ಮೇಲೆ ಅವರ ಕಷ್ಟನಿವಾರಣೆ ಮಾಡುವ ಪ್ರಶ್ನೆ ಸರಕಾರದ ಮಟ್ಟಿಗೆ ಉದ್ಭವಿಸುವದಿಲ್ಲ. ಖಾದಿಯ ಪ್ರಚಾರದಿಂದ ದೇಶಕ್ಕೆ ಲಾಭವಿರುವದರಿಂದ, ಬಡ ದೇಶಬಾಂಧವರಿಗೆ ಉದರನಿರ್ವಾಹವಾಗುವಂತಿರುವದರಿಂದ ಹೆಚ್ಚಿನ ಖಾದಿ ಸಂತೆಯಲ್ಲಿ ವ್ಯಾಪಾರ ಮಾಡಿ ಪ್ರೋತ್ಸಾಹ ಕೊಡಬೇಕಾ। ಎಸ್.ಕೆ. ಮಾಡಿಕೊಳ್ಳುತ್ತೇನೆ. ಹಳಿಯಾಳದಲ್ಲಿ ರೂ. ೫೦೦, ಕಾರವಾರದಲ್ಲಿ ೯೦೦ರ ಖಾದಿ ವಿಕ್ರಯವಾಯಿತು. ಇಲ್ಲಿ ಇದಕ್ಕೂ ಹೆಚ್ಚಿಗೆ ವಿಕ್ರಯವಾಗಬೇಕು. ರಾಷ್ಟ್ರೀಯ ಚಳವಳಿಯು ಈ ಊರ ಹೆಸರು ವಿಶೇಷವಿದೆ, ಅದಕ್ಕೆ ತಕ್ಕಹಾಗೆ ಖಾದಿ ಸಂತೆಯಲ್ಲಿ ವ್ಯಾಪಾರವಾಗಬೇಕು" ಇತ್ಯಾದಿ ಹೇಳಿ ಶ್ರೀ ಶಾಸ್ತ್ರಿಗಳವರು ಸಂತೆಯನ್ನು ತೆರೆದರು. ತಾ ೨೫ನೇ ಬುಧವಾರದ ವರೆಗೆ ಸಂತೆ ನಡೆಯುವದು. ಸಮಸ್ತರೂ ಪ್ರೋತ್ಸಾಹಿಸಬೇಕು

ವಾಲಗಳ್ಳಿ ಗ್ರಾಮದ ಸಮೀಪ ಬಂದು ಹುಲಿ ಹಳ್ಳೀ ನಾಯಿಗಳ ಬೆನ್ನಟ್ಟಿತ್ತು. ಅನೇಕ ವರ್ಷಗಳ ಫಲಾಹಾರ ಮಾಡುತ್ತಿತ್ತು. ಗುಡಿವಾರ ಪಟೇಲರ ಹತ್ತಿರ ಒಂದು ಆಕಳನ್ನು ಕೊಂದು ಹೋಯಿತು. ಪುನಃ ಅದು ಪ್ರಘಾತದಂತೆ ತಿನ್ನಬಂದಾಗ ಅಲ್ಲಿಯೇ ಸಬ್-ಇನ್ಸ್ಪೆಕ್ಟರರಾದ ಮಿ ಶ್ರೀ ಎಸ್ ಕಾಂಬಾರರವರೂ, ಮಿ ವಿ ಬಿ ನಾಡರವರೂ ಚಾತುರ್ಯದಿಂದ ಗುರಿ ಹಿಡಿದು ಕೊಂದರು. ಈ ಬಗ್ಗೆ ರೈತರು ಇವರೀರ್ವರಿಗೆ ಹರಸುತ್ತಾರೆ. ಹುಲಿಯು ಸಾಧಾರಣ ದೊಡ್ಡದಿತ್ತು.

ಇಲ್ಲಿಯ, ನಾ ಸಾಗರ ದಾಸ ಕ್ಯಾಶಿಯರ್ ಇವರು ಇಂದಿನ ಸಂಜೆ ಹೃದ್ರೋಗದಿಂದ ಅಕಾಲಿಕವಾಗಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವ್ಯಸನ ವೈಕುಂಠವಾಸಿಗಳು ಹಳ್ಳೀ ಸಾಗರಗಂಡು ಬೆಳ್ಳ ಪ್ರಾಯದವರಾದಾಗ್ಯೂ ಅಕ್ಕರೆಯಿಂದ ಸಾರ್ವಜನಿಕ ಚಳವಳಿಗಳಲ್ಲಿ ಸೇರಿ ಮನಮುಟ್ಟಿ ದುಡಿದಿದ್ದಾರೆ. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಇಲ್ಲಿ ಬಿಜಯಿಸಿದಾಗ ಅವರಿಗೆ ಉತ್ಸಾಹದಿಂದ ಸ್ವಾಗತ ಮಾಡಿ ತಾಮ್ರದ ಕೊಡವನ್ನು ತಮ್ಮ ಜನ ಭಕ್ತಿಯ ಸ್ಮರಣಾರ್ಥ ಅರ್ಪಿಸಿದ್ದರು. ಕುಲದೇವರಾದ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ವ್ಯವಸ್ಥಾಪಕ ಮಂಡಳಿಯ ಕಾರ್ಯದರ್ಶಿಗಳಾಗಿ ಇವರು ನಡಿಸಿದ ಶ್ರೀ ದೇವರ ವ್ಯವಸ್ಥೆಯನ್ನು ಭಜಕರು ಪುನಃ ಪುನಃ ಸ್ಮರಿಸಿ ಮರುಗುತ್ತಾರೆ. ಇವರ ಆಕಸ್ಮಿಕ ನಿಧನದಿಂದ ಇವರ ಕುಟುಂಬದವರ ಮೇಲೆ ದೊಡ್ಡ ಆಪತ್ತು ಬಂದೊದಗಿದೆ. ಅವರ ಪತ್ನಿಯವರು, ಕುಟುಂಬದ ರಾ। ಅನಂತ ನಾರಾಯಣ ಶಾನಭಾಗ ಮೊದಲಾದ ಆಪ್ತೇಷ್ಟರೂ ಶೋಕಚಕ್ರದ ಕಡೆಗೆ ದೃಷ್ಟಿಯನ್ನಿಟ್ಟು ಸಮಾಧಾನ ಮಾಡಿಕೊಳ್ಳಬೇಕಲ್ಲದೆ ಬೇರೆ ಏನೂ ಉಪಾಯವಿಲ್ಲ. ಮೃತಾತ್ಮರಿಗೆ ಪರಮಾತ್ಮನು ಸದ್ಗತಿಯನ್ನೀಯಲಿ!

ಜಿಲ್ಹಾ ಬೋರ್ಡ-ತಾಲೂಕ ಬೋರ್ಡುಗಳ ಮತದಾರರ ಯಾದಿ ಪ್ರಕಟವಾಗಿದೆ. ಮತದಾರರಾಗಲರ್ಹರು ತಮ್ಮ ತಮ್ಮ ಹೆಸರುಗಳನ್ನು ಯಾದಿಯಲ್ಲಿ ನೋಡಿಕೊಂಡು ಹೆಸರಿಲ್ಲದಿದ್ದಲ್ಲಿ ಮಾಮಲೇದಾರರ ಕಡೆ ತಾ. ೧೬-೧-೩೬ನೇದರೊಳಗೆ ಅರ್ಜಿ ಸಲ್ಲಿಸಿಕೊಳ್ಳತಕ್ಕದ್ದು.

ಇದೇ ಕಳೆದ ತಾ. ೩೩ ಮಿ॥ ಕಲೆಕ್ಟರ ಸಾಹೇಬರೂ, ತಾ ೧೭ಕ್ಕೆ ಪ್ರಾಂತ ಸಾಹೇಬರೂ ಮೂರೂರ ಗ್ರಾಮಕ್ಕೆ ಭೆಟ್ಟಿ ಕೊಟ್ಟು ಅಲ್ಲಿ ನಡೆದಿರುವ ಗ್ರಾಮಸುಧಾರಣೆಯ ಕಾರ್ಯವನ್ನು ಪ್ರತ್ಯಕ್ಷ ನೋಡಿದರು. ಊರವರು ಸ್ವಂತ ಖರ್ಚಿನಿಂದ ತಯಾರಿಸಿದ ಮಾರ್ಗಗಳನ್ನೂ, ಹುಗಿದು ನಾಮಶೇಷ ಆಗಿ ಹೋದ ನೀರಾವರಿ ಕೆರೆಗಳನ್ನು ದುರಸ್ತು ಮಾಡಿದ್ದನ್ನೂ, ಊರವರೇ ಸ್ಥಾಪಿಸಿ ನಡೆಸಿದ ಶ್ರೀ ಶಂಭುಲಿಂಗ ವಾಚನಾಲಯವನ್ನೂ, ಊರ ಮಹಾನುಭಾವರೊಬ್ಬರು ತೋಡಿಸಿದ ಕುಡಿಯುವ ನೀರಿನ ಧರ್ಮಾರ್ಥ ಬಾವಿಗಳನ್ನೂ, ಹರಿಜನರು ತಮ್ಮ ವಾಸ್ತವ್ಯದ ಭಾಗದಲ್ಲಿ ತಯಾರಿಸಿದ ಅರ್ಧ-ಮೈಲು ಉದ್ದ ರಸ್ತೆಯನ್ನೂ, ರೈತರು ಜಮೀನ ಸುತ್ತಲೂ ಹಾಕಿದ ಹಾಗಾರವನ್ನೂ, ತಮ್ಮ ತಮ್ಮ ತೋಟಗಳಲ್ಲಿ ರೈತ ಜನರು ಹಚ್ಚಿದ ಹೊಸ ಎಲೆ ಬಳ್ಳಿಗಳನ್ನೂ, ಕೊಚ್ಚಿಬಾಗಿ ಹೋದ ಭೂಮಿ ವಕ್ಕಲ ಮಾಡಿದ್ದನ್ನೂ, ಹಾಗೆ ಭೂಮಿಯ ಸುತ್ತಲಿರುವ ಜಂಗಲು ಸ್ವಚ್ಛ ಮಾಡಿದ್ದನ್ನೂ, ಮನೆಗಳಲ್ಲೂ ಹಿತ್ತಲುಗಳಲ್ಲೂ ಭಾವಿಗಳಲ್ಲೂ ಮಾರ್ಗಗಳ ಮೇಲೂ ಊರ ಜನರು ಕಾಪಾಡಿಕೊಂಡ ಸ್ವಚ್ಛತೆಯನ್ನೂ ನೋಡಿ ಸಾಹೇಬರೀರ್ವರೂ ಸಂತೋಷಪಟ್ಟರು. ಶಾಲೆಯ ಸಮೀಪ ಇರುವ ಹಳ್ಳಕ್ಕೆ ಸಂಕ ಕಟ್ಟುವ ಬಗ್ಗೆ, ಹರಿಜನರು ಈ ಮುಂದೆ ತಯಾರಿಸುವ ರಸ್ತೆಯ ಬಗ್ಗೆ, ಮತ್ತು ತೀರ ನಾಮಶೇಷ ಆಗಿ ಬಿದ್ದ ಎರಡು ದೊಡ್ಡ ಕೆರೆಗಳ ದುರಸ್ತಿಯ ಬಗ್ಗೆ ರೂ. ೮೦೦ರ ಮಟ್ಟಿಗೆ ಧನಸಹಾಯ ಮಾಡಬೇಕೆಂದು ರೈತರು ಸಾಹೇಬರ ಕಡೆಗೆ ಬೇಡಿಕೆ ಮಾಡಿದರು. ಸಾಹೇಬರು ವಿಚಾರ ಮಾಡುತ್ತೇವಾಗಿ ಆಶ್ವಾಸನ ಕೊಟ್ಟಿದ್ದಾರೆ. ಊರವರು ಗ್ರಾಮಸುಧಾರಣೆ ಬಗ್ಗೆ ಮಾಡುತ್ತಿರುವ ಪ್ರಯತ್ನಗಳಿಗೆ ಯೋಗ್ಯ ಪ್ರೋತ್ಸಾಹ ಮತ್ತು ಸಹಾಯ ನೀಡುವದು ಅಧಿಕಾರಿಗಳ ಕರ್ತವ್ಯವಿದೆ.

ಹೊನ್ನಾವರ— (ತಾ. ೧೫-೧೨-೩೫) ಮಾರ್ಗಗಳ ಮೇಲೆ ತುಂಬ ಧೂಳು. ಕಿವಿ, ಮೂಗು, ಬಾಯೊಳಗೆ ಎಲ್ಲೆಲ್ಲಿಯೂ ಧೂಳಿ. ಕಾಲುದಾರಿಯಿಂದ ನಡೆಯುವರಿಗೆ ಬಲು ಉಪದ್ರವ. ಮಿಠಾಯಿ ಅಂಗಡಿಯವರಿಗೆ ಮಾತ್ರ ಲಾಭ. ತಿಂಡಿ-ತಿನಸುಗಳ ಮೇಲೆ ಧೂಳಿ ಬೀಳುವದರಿಂದ ಮಿಠಾಯಿಯ ಭಾರ ಹೆಚ್ಚಾಗಿ ಲಾಭ! ಧೂಳಿ ನೋಡಿ ಗಿರಾಕಿಗಳು ಕೊಳ್ಳದಿದ್ದರೆ ನಷ್ಟ. ಮ್ಯುನಿಸಿಪಾಲಿಟಿಯವರು ಹಣ ಒಟ್ಟು ಹಾಕುತ್ತಿದ್ದಾರೆ. ಮೊದಲಿನ ರಿಫಂಡಿನ ನಿಯಮದಲ್ಲಿ ಬಿಗುಪಡಿಯಾಗಿದೆ. ೧ ರೂಪಾಯಿ ತೆರಿಗೆಯ ನಗರ ಮ್ಯುನಿಸಿಪಾಲಿಟಿಯ ಗಡಿಯಲ್ಲಿ ಸೇರಿ ೩ ತಿಂಗಳೊಳಗೆ ಗಡಿಪಾರಾದರೆ ಆ ತೆರಿಗೆ ತಿರುಗಿ ಸಿಗುತ್ತಿತ್ತು. ಈಗ ತೆರಿಗೆ ರಕಮು ರೂ. ೨ಕ್ಕೆ ಏರಿಸಲ್ಪಟ್ಟಿದೆ; ಅವಧಿ ೧ ತಿಂಗಳಿಗೆ ಇಳಿಸಲ್ಪಟ್ಟಿದೆ. ಇದರಿಂದ ಬಹಳೇ ರಕಮು ಒಟ್ಟಾಗುತ್ತಿದೆ. ಆದಾಗ್ಯೂ ಮಾರ್ಗದ ಮೇಲೆ ಧೂಳಿ ಏಳದಂತೆ ನೀರು ಹಾಕುವ ಏರ್ಪಾಟಿಲ್ಲ. ಕಾರವಾರ ಮ್ಯುನಿಸಿಪಾಲಿಟಿಯವರಂತೆ ಮೋಟಾರನ್ನು ತರಿಸಿ ನೀರಿನಿಂದ ಮಾರ್ಗಗಳನ್ನು ತೋಯಿಸುವ ಏರ್ಪಾಟು ಮಾಡಬೇಕು

ಸಂಶಿ ಗ್ರಾಮದಲ್ಲಿ ಕ್ರಿಶ್ಚನ ಜಾತಿಯ ಇಬ್ಬರೊಳಗೆ ಜಗಳವಾಯಿತು. ಸಿಟ್ಟಿನಿಂದ ಒಬ್ಬನು ಎನೀಯವನ ೧೪ ಭತ್ತದ ಗೊಣಬೆಗಳಿಗೆ ಬೆಂಕಿ ಹಾಕಿಬಿಟ್ಟನು; ಗೊಣಬೆಗಳೆಲ್ಲ ಸುಟ್ಟು ಬೂದಿಯಾದವು. ಸುಮಾರು ರೂ. ೫೦೦--೬೦೦ ನಷ್ಟ. ಮದ್ಯಸೇವನೆಯಿಂದ ಮೈಮರೆತಾಗ ಈ ಅನರ್ಥ ಒದಗಿತಾಗಿ ಹೇಳುತ್ತಾರೆ. ಮದ್ಯಪಿಗಳು ಬೋಧ ಪಡೆಯಬಹುದು.

ಕುಮಟಾ-ಹೊನ್ನಾವರ ರಸ್ತೆಯನ್ನು ಅಗಲ ಮಾಡುವ ಯೋಜನೆಯನ್ನು ಪ್ರಾಂತಿಕ ಸರಕಾರವು ಮಂಜೂರ ಮಾಡುತ್ತದೆ. ಬಡಗಣ ಹೊಳೆಗೆ ಸಂಕ ಕಟ್ಟುವ ನಿಶ್ಚಯವಾಗಿದೆ. ಇವೆರಡೂ ಕೆಲಸಗಳು ಮುಂದಿನ ಸಾಲಿನಲ್ಲಿ ಪೂರ್ತಿಯಾಗುವವಾಗಿ ತಿಳಿಯುತ್ತದೆ. ಹೊನ್ನಾವರ-ಕುಮಟಾ ಕಡೆ ಮೋಟಾರುಗಳನ್ನು ಓಡಿಸಲಿಕ್ಕೆ ಬಡಗಣಿ ತಾರಿಯ ಆತಂಕ ಪರಿಹಾರವಾಯಿತು!

ಭಟಕಳ— ಈ ತಿಂಗಳ ಮೊದಲನೇ ವಾರದಲ್ಲಿ ದಕ್ಷಿಣ ಭಾಗದ ಮಿ॥ ಕಮಿಶನರ ಸಾಹೇಬರು ಇಲ್ಲಿ ಮುಕ್ಕಾಮು ಮಾಡಿದ್ದರು. ಆ ಸಮಯ ಸಾಧಿಸಿ ಇಲ್ಲಿಯ ಮ್ಯುನಿಸಿಪಾಲಿಟಿಯವರು ಅವರಿಗೆ ಒಂದು ಮಾನಪತ್ರ ಕೊಟ್ಟು ತಮ್ಮ

ಅಡಚಣೆಗಳನ್ನು ಅರುಹಿದರು. ಸನ್ ೧೯೦೩ರಲ್ಲಿ ಮ್ಯು| ಯವರು ತಮ್ಮ ದವಾಖಾನೆ ತೆರೆದರು. ಆಗ ಅದಕ್ಕೆ ವರಕಾಲ ರೂ. ೧೫೦೦ ಖರ್ಚು ಬರುವದೆಂದು ಅಂದಾಜು ಮಾಡಲ್ಪಟ್ಟಿತು. ಅದರಲ್ಲಿ ಸರಕಾರವು ರೂ. ೫೦೦ ಜಿ| ಲೋಕಲ್ ಬೋರ್ಡಿನವರು ರೂ. ೩೦೦ ಮತ್ತು ಮ್ಯು| ಯವರು ರೂ. ೪೦೦ ಕೆರಬೇಕಾಗಿ ಹಂಚಿ ಹಾಕಿದ್ದರು. ಮುಂದೆ ದವಾಖಾನೆಯಲ್ಲಿ ಬರುವ ರೋಗಿಗಳ ಸಂಖ್ಯೆ ಬೆಳೆಯುತ್ತ ಹೋದಹಾಗೆ ಖರ್ಚು ಬೆಳೆಯಿತು, ಈಗ ದವಾಖಾನೆಯ ಖರ್ಚು ರೂ. ೪೨೦೦ಕ್ಕೆ ಮುಟ್ಟಿ ಹೋಗಿದೆ. ಸರಕಾರದವರು ತಾವು ಕೊಡತಕ್ಕ ರಕಮನ್ನು ರೂ. ೧೪೦೦ಕ್ಕೆ ಏರಿಸಿದ್ದಾರೆ ಆದರೆ ಬೋರ್ಡಿನವರು ರೂ. ೩೦೦ಕ್ಕಿಂತ ಹೆಚ್ಚು ಕೊಡಲೊಪ್ಪುವದಿಲ್ಲ! ದವಾಖಾನೆಯಲ್ಲಿ ಬರುವ ಜನರಲ್ಲಿ ಶೇಕಡಾ ೩೩ರಷ್ಟು ಬೋರ್ಡಿಗೊಪ್ಪಿದ ಕ್ಷೇತ್ರದೊಳಗಿನವರಿರುತ್ತಾರೆ. ಆದಾಗ್ಯೂ ಬೋರ್ಡಿನವರು ತಮ್ಮ ಗ್ರಾಂಟು ಬೆಳಸುವದಿಲ್ಲ! ಈ ಕುರಿತು ಬೋರ್ಡಿಗೆ ಬುದ್ಧಿ ಹೇಳಿ ಬೋರ್ಡಿನ ಗ್ರಾಂಟು ರೂ. ೧೦೦೦ಕ್ಕೆ ಏರುವಂತೆ ವ್ಯವಸ್ಥೆ ಮಾಡಬೇಕಾಗಿ ಮ್ಯು|ಯ ಮೊದಲನೇ ಬೇಡಿಕೆ. ಮ್ಯು| ನಡೆಸುತ್ತಿರುವ ಶಾಲೆಗಳ ಖರ್ಚ ಪ್ರಮಾಣದಿಂದ ಬೋರ್ಡಿನವರು ಮ್ಯು|ಯಿಂದ ಗ್ರಾಂಟು ಬೇಡುತ್ತಾರೆ; ಶಾಲೆಗಳಲ್ಲಿ ಮ್ಯು|ಯ ಹೊರಗಿನ ಹುಡುಗರು ಬರುತ್ತಾರೆ ಅವರ ಲೆಕ್ಕ ಮ್ಯು|ಯ ಲೆಕ್ಕದಲ್ಲಿ ಹಿಡಿಯಬಾರದು; ಆ ಮಾನದಿಂದ ಗ್ರಾಂಟು ಕಡಿಮೆ ಹಿಡಿಯಬೇಕು; ಹೀಗೆ ಮ್ಯು|ಯ ಅಂಬೋಣ. ಬೋರ್ಡಿನವರು ಇದಕ್ಕೆ ಕಿವಿಗೊಡುವದಿಲ್ಲ! ಈ ಪ್ರಕರಣದಲ್ಲೂ ಮಧ್ಯಸ್ಥಿಕೆ ಮಾಡಿ ನ್ಯಾಯ ನಿಕಾಲೆ ಮಾಡಬೇಕಾಗಿ ಮ್ಯು|ಯ ಎರಡನೇ ಬೇಡಿಕೆ. ಬೋರ್ಡಿಗೆ ಹಿಂದೆ ಮ್ಯು|ಯವರು ದಾರು ತೆಗೆಯುವ ಖರ್ಚಿನ ಬಗ್ಗೆ ವರಸಾಲ ರೂ ೩೦ ಕೊಡುತ್ತಾ ಬಂದಿದ್ದರು. ಈಗ ಖರ್ಚು ಬಹಳ ಬೆಳೆದಿರುವದರಿಂದ ಬೋರ್ಡಿನವರು ಮ್ಯು|ಯ ಕಡೆಯಿಂದ ರೂ. ೨೪೬ ಗ್ರಾಂಟು ಬೇಡುತ್ತಾರೆ! ಇದೇ ನ್ಯಾಯ ಬೇರೆ ಎರಡು ಸಂಗತಿಗಳಲ್ಲಿಯೂ ಅನುಸರಿಸಬೇಕೆಂದು ಮಾತ್ರ ಬೋರ್ಡಿಗೆ ಕಾಣುವದಿಲ್ಲ! ಮ್ಯು|ಯವರು ಈಗ ಬಹಳೇ ಅಡಚಣೆಯಲ್ಲಿದ್ದಾರೆ. ಆದಾಗ್ಯೂ ಶಾಲೆ-ದವಾಖಾನೆಗಳ ಪ್ರಕರಣದಲ್ಲಿ ಬೋರ್ಡಿನವರು ಮ್ಯು|ಗೆ ನ್ಯಾಯ ಕೊಡಲು ಒಪ್ಪುವರಾದರೆ ಮ್ಯು|ಯವರು ಈ ಗ್ರಾಂಟು ಕೊಡಲಿಕ್ಕೆ ಸಿದ್ಧರಿದ್ದಾರೆ. ಭಟಕಳದಲ್ಲಿ ಮುಸಲ್ಮಾನರ ಜನಸಂಖ್ಯೆ ಹೆಚ್ಚು. ಮುಸಲ್ಮಾನ ಸ್ತ್ರೀಯರಲ್ಲಿ ಪರದೆಯ ಪದ್ಧತಿಯುವ ಅದ್ದರಿಂದ ಇಲ್ಲಿ ಸ್ತ್ರೀ-ಡಾಕ್ಟರಳೊಬ್ಬಳು ಬೇಕಾಗಿದ್ದಾಳೆ. ಸರಕಾರದವರು ಈ ಬಗ್ಗೆ ಯೋಗ್ಯ ಧನಸಹಾಯ ಮಾಡಬೇಕಾಗಿ ಮ್ಯು|ಯ ಮೂರನೇ ಬೇಡಿಕೆ. ಮ್ಯು|ಯ ಮುಖ್ಯ ಕಚೇರಿಯೂ, ನಾಲ್ಕು ನಾಕೆಗಳೂ ಭಾಡಿಗೆಯ ಮನೆಗಳಲ್ಲಿವೆ. ಸ್ವತಂತ್ರ ಕಚೇರಿ ಮತ್ತು ನಾಕೆಗಳನ್ನು ಕಟ್ಟಬೇಕೆಂದು ಮ್ಯು|ಯ ಸಂಕಲ್ಪವಿದೆ. ಆ ಬಗ್ಗೆ ಮ್ಯು|ಯವರು ಕೆಲವು ಸರಕಾರಿ ಪಡ ಸ್ಥಳದ ಬಗ್ಗೆ ಮನವಿ ಮಾಡಿದ್ದಾರೆ. ಸದರಿ ಸ್ಥಳಗಳು ಮ್ಯು|ಗೆ ಮೋಫತ ದೊರಕಿಸಬೇಕಾಗಿ ಮ್ಯು|ಯವರ ನಾಲ್ಕನೇ ಬೇಡಿಕೆ. ಜನರ ಬಡತನದ ಮೂಲಕ ಇನ್ನೂ ಹೆಚ್ಚಿಗೆ ಕರಗಳನ್ನು ಹೇರಲಿಕ್ಕಾಗಲಿ, ಇದ್ದ ಕರಗಳನ್ನು ಬೆಳಸಲಿಕ್ಕಾಗಲಿ ಸಾಧ್ಯವಿರುವದಿಲ್ಲ. ಕಾರಣ ಜಿ| ಲೋ| ಬೋರ್ಡಿನವರು ಮ್ಯು|ಯ ಬೇಡಿಕೆಗಳನ್ನು ಮನ್ನಿಸಿ ಧನಸಹಾಯ ಮಾಡದಿದ್ದರೆ ಆರೋಗ್ಯ, ಊರ-ಸ್ವಚ್ಛತೆ ಮುಂತಾದ ವಿಷಯಗಳಲ್ಲಿ ಸುಧಾರಣೆ ಮಾಡಲಿಕ್ಕೆ ಆಸ್ಪದ ದೊರೆಯಲಾರದು ಎಂದು ಮ್ಯು|ಯವರು ಸಮಾರೋಪ ಮಾಡಿದರು

ಮಿ| ಕಮಿಶನರ ಸಾಹೇಬರು ಮಾನಪತ್ರಕ್ಕೆ ಉತ್ತರ ಕೊಡುವಾಗ ಮ್ಯು|ಯ ಮೊದಲಿನ ಎರಡು ಬೇಡಿಕೆಗಳ ಬಗ್ಗೆ ಏನೂ ಹೇಳಲಿಲ್ಲ! "ನಿಮ್ಮ ಆರ್ಥಿಕ ಸ್ಥಿತಿ ನೀವೇ ಸುಧಾರಿಸಿರಿ; ಖರ್ಚು ತಗ್ಗಿಸಿರಿ, ಮನೆ ಕರ ಸರಿಯಾಗಿ ಆಕರಿಸಿರಿ; ವಸೂಲಿಯ ಕ್ರಮ ಜಾರಿಯಿಂದ ನಡಿಸಿರಿ. ಸಿಂಧ ಪ್ರಾಂತವು ಮುಂಬಯಿ ಇಲಾಖೆಯಿಂದ ಬೇಗನೇ ಬೇರೆಯಾಗುವದು. ಆಗ ಮುಂಬಯಿ ಸರಕಾರಕ್ಕೆ ರೂ. ೫೦ ಲಕ್ಷ ಉಳಿತಾಯವಾದೀತೆಂದು ಹೇಳುತ್ತಾರೆ. ಆಗ ಮ್ಯು|ಯವರು ಪ್ರಯತ್ನ ಮಾಡಿದರೆ ಏನಾದರೂ ಸಿಕ್ಕೀತು. ಪರದೆಯ ಪದ್ಧತಿಯ ಮೂಲಕ ಸ್ತ್ರೀ ಡಾಕ್ಟರಳು ಬೇಕೆಂದು ಹೇಳುತ್ತೀರಿ! ಆದರೆ ಬ್ರಿಟಿಶರ ಆಳಿಕೆಯಲ್ಲಿ ಪರದೆಯ ಪದ್ಧತಿಯ ಅಗತ್ಯವೇನು? ಕ್ರಮೇಣ ನೀವು ಈ ಪದ್ಧತಿ ನಷ್ಟಗೊಳಿಸಬೇಕು. ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡಿರಿ; ಶಿಕ್ಷಣ ಕೊಡಿರಿ, ಅವರಿಗೆ ಪ್ರಾತಿನಿಧಿಕ ಸಂಸ್ಥೆಗಳಿಗೆ ಕಳಿಸಿಕೊಡಿರಿ. ನೀವು ಹೀಗೆ ಮಾಡಿದರೆ ನಿಮಗೆ ಸ್ತ್ರೀ-ಡಾಕ್ಟರಳ ಅಗತ್ಯ ಬೀಳದು. ಅಗತ್ಯವಿದ್ದಲ್ಲಿ ಘೋಷಾ ಹೆಂಗಸರಿಗೆ ಶಿಶುಪಾಲನ, ಆರೋಗ್ಯರಕ್ಷಣ ಮುಂತಾದ ವಿಷಯಗಳಲ್ಲಿ ಸಲಹೆ ಕೊಡಲು ಪರೀಕ್ಷೆಯಲ್ಲಿ ಉತ್ತೀರ್ಣಳಾದ ಒಬ್ಬ ವೈದ್ಯಕೀಯ ಸಲಹೆಗಾರಳನ್ನು ನೀವು ನೇಮಿಸಿಕೊಳ್ಳಬಹುದು. ಆನಕ ವರೆಗೆ ಈಗಿರುವ ದಾದಿಯು ಆ ಕೆಲಸ ಮಾಡುವಳು." ಎಂದು ಸಾಹೇಬರು ನುಡಿದರು. ಮಾನಪತ್ರದ ಸಮಾರಂಭ ಮುಗಿದ ಮೇಲೆ ನೆರೆದ ಗೃಹಸ್ಥರಿಗೆಲ್ಲ ಮ್ಯು|ಯ ಚೇಅರಮನ್ನರಾದ ಮಿ| ಕಾಶಿಮಜಿ ದೋಹಿಯುದ್ದೀನ ಸಾಹೇಬರು ಚಹಾಪಾನವನ್ನಿತ್ತರು. ಚಹಾ ಕುಡಿಯುವಾಗ ಕಮಿಶನರ ಸಾಹೇಬರೂ, ಅವರ ಪತ್ನಿಗಳಾದ ಶ್ರೀಮತಿ ಕ್ಲೇಟನ್‌ರವರೂ, ಮ್ಯು|ಯ ಅಧ್ಯಕ್ಷ ಮಿ| ಸಿದ್ದೀಕರವರಿಗೆ ಶ್ರೀಮತಿ ಸಿದ್ದೀಕರವರು ಈ ಸಮಾರಂಭಕ್ಕೆ ಬಂದಿದ್ದರೆ ಸೊಗಸಾಗುತ್ತಿತ್ತೆಂದು ಉದ್ಗಾರಗಳನ್ನು ತೆಗೆದರು!

ಮ್ಯು|ಯವರು ಮಿ| ಕಮಿಶನರ ಸಾಹೇಬರಿಗೆ ಮಾನಪತ್ರ ಕೊಡುವರೆಂದು ಕರದಾರರಿಗೆ ತಿಳಿಸಲಿಲ್ಲ. ಊರ-ಪರವೂರುಗಳಲ್ಲಿರುವ ತಮ್ಮ ನೆಂಟ-ಮಿತ್ರರಿಗಷ್ಟೇ ಆಮಂತ್ರಣಗಳನ್ನು ಕಳಿಸಿದ್ದರು. ಸಾರ್ವಜನಿಕ ಸಂಸ್ಥೆಗಳಲ್ಲಿ ಈ ಭೇದಭಾವವು ಯೋಗ್ಯವೇನು?

ಅಂಕೋಲಾ— ಶಿಂಕಣಕೇರಿಯ ಶ್ರೀ ಬೊಮ್ಮಯ್ಯ ದೇವಸ್ಥಾನದಲ್ಲಿ ಬಂಡೀಹಬ್ಬ, ಆಪಾರಿ ಮುಂತಾದ ಉತ್ಸವಗಳ ಕಾಲಕ್ಕೆ ಕುರಿ-ಕೋಳಿಗಳ ಹಿಂಸೆಯಾಗುತ್ತಿತ್ತು. ಹಿಂಸೆಯನ್ನು ನಿಲ್ಲಿಸಬೇಕಾಗಿ ದೇವಸ್ಥಾನದ ವಹಿವಾಟದಾರರೂ, ಭಜಕರೂ ಪ್ರಯತ್ನ ಮಾಡಿ ಈಗ ದೇವರ ಒಪ್ಪಿಗೆಯನ್ನು ಪಡೆದಿದ್ದಾರೆ. ಈ ಬಗ್ಗೆ ತಮಗಾದ ಸಂತೋಷ ವ್ಯಕ್ತಗೊಳಿಸಲಿಕ್ಕೆ ಡಾ| ದತ್ತಾ ನಾಗಪ್ಪ ನಾಯ್ಕರು ಕೇಸರಭಾತದ ಸಂತರ್ಪಣೆ ಮಾಡುವವರಿದ್ದಾರೆ ಆದರೆ 'ಊರಿದ್ದಲ್ಲಿ ಹೊಲಗೇರಿ' ಉಂಟೆಂದು ಹೇಳುತ್ತಾರಲ್ಲವೇ? ದೇವರ ಅಪ್ಪಣೆಯಿಂದ ಹಿಂಸೆಯನ್ನು ನಿಲ್ಲಿಸುತ್ತಿರುವಾಗ್ಯೂ ಕೆಲ ಕೀಳಿಗಳು ಅಜ್ಞ ಜನರಲ್ಲಿ ಅದರ ವಿರುದ್ಧ ಚಳವಳ ನಡಿಸಿದ್ದಾರೆ! ದೇವರು ಅವರಿಗೆ ಸದ್ಬುದ್ಧಿಯನ್ನಿತ್ತು ಸನ್ಮಾರ್ಗಕ್ಕೆ ತರಲೆಂದು ಹಾರೈಸುತ್ತೇವೆ.

ಅವರ್ಸಾ— ಸತ್ಯಾಗ್ರಹದ ಕಾಲದಲ್ಲಿ ಅಂಕೋಲೆಯ ಪಟೇಲನಾಗಿಯೂ, ಯಾರ್ಯಾರೂ ಶೇಂದಿ-ಶರಾಬ ಅಂಗಡಿಗಳ ಮುಕ್ತ ಮಾಡಲು ಮುಂದೆ ಬಾರದಿದ್ದಲ್ಲಿ ಮುಕ್ತೇದಾರನಾಗಿಯೂ ಒಳ್ಳೇ ಹೆಸರು ಪಡೆದ ಕಾಮಣ್ಣಾ ಬೀದಿ ಪಡಿಯ ಹೆಸರು ಈಗ ಕರೀ ಯಾದಿಯಲ್ಲಿ ಬಿದ್ದಿರುತ್ತದಂತೆ! ಅವನು ಅವರ್ಸೆಯ ಮತ್ತು ಹಾರವಾಡೆಯ ಶರಾಬ ಅಂಗಡಿಗಳ ಮುಕ್ತೇದಾರನಿದ್ದನು. ಸರಕಾರದವರು ಅವನ ಮುಕ್ತೆಯನ್ನು ರದ್ದುಪಡಿಸಿ, ಸದರಿ ಅಂಗಡಿಗಳನ್ನು ಪುನಃ ಲಿಲಾವಿಗೆ ಇಟ್ಟಿದ್ದಾರೆ. ಚಳವಳಿಯ ಕಾಲದಲ್ಲಿ ಅವನು ಮಾಡಿದ ಪರಾಕ್ರಮಗಳನ್ನೂ, ಕಾಂಗ್ರೆಸ ಕಾರ್ಯಕರ್ತರ ವಿರುದ್ಧ ಅವನು ಮಾಡಿದ ಸುಳ್ಳು ಅರ್ಜಿ-ಫಿರ್ಯಾದುಗಳನ್ನೂ ಜನರು ಎಂದೆಂದೂ ಮರೆಯಲಿಕ್ಕಿಲ್ಲ, ಕೆಲವು ಕಾಲದ ಹಿಂದೆ ಅಧಿಕಾರಿಗಳ ಕೊರಳಲ್ಲಿ ಪುತ್ತಳಿಯಾಗಿ ಮೆರೆಯುತ್ತಿದ್ದ ಕಾಮಣ್ಣನು ಈಗ ಕರೀ ಯಾದಿಯಲ್ಲಿ ಸೇರಿದ್ದು ನೋಡಿ ಜನರು ಆಶ್ಚರ್ಯಗೊಂಡಿದ್ದಾರೆ!!

ಹಳಿಯಾಳ— ಇನ್ನೂ ಊರಲ್ಲಿ ಚಳಿ ಜ್ವರವಿದೆ. ಹರಿಯುವ ಹಳ್ಳಗಳು ಈಗಲೇ ಹರಿಯುವದಿಲ್ಲ. ಬೇಸಿಗೆಯಲ್ಲಿ ನೀರಿನ ಕೊರತೆಯಾಗುವದೆಂದು ಜನರು ಭಯಗ್ರಸ್ತರಾಗಿದ್ದಾರೆ. ಬೆಳೆಯಿಲ್ಲದೆ ಮೊದಲೇ ಅನ್ನದ ಬರಗಾಲ ಬಂದಿದೆ. ಅದಕ್ಕೆ ನೀರಿನ ಬರಗಾಲ ಕೂಡಿದರೆ ಜನರ ಗತಿಯೇನೆಂದು ದೇವರೇ ಬಲ್ಲ!

೮—೧೦ ದಿನಗಳಿಂದ ಇಲ್ಲಿ ಮಹಮ್ಮದೀ ವೈರಾಗಿಗಳ ಸುಳಿದಾಟ ಹೆಚ್ಚಾಗಿದೆ. ೪೦-೫೦ ಗಂಡಸರು, ಹೆಂಗಸರು, ಮಕ್ಕಳು ಇದ್ದಾರೆ; ಊರಲ್ಲೆಲ್ಲ ಭಿಕ್ಷೆ ಬೇಡುತ್ತಾರೆ, ಮಂತ್ರ-ತಂತ್ರವನ್ನು ಮಾಡುತ್ತಾರೆ! ಹಿಂದುಗಳು ಮುಟ್ಟಿದ ಆಹಾರ ಉಣ್ಣುವದಿಲ್ಲವಂತೆ! ಒಳಗಿಂದೊಳಗೆ ಜಾತಿಗೆಡಿಸುವ ಕಾರ್ಯವನ್ನೂ ಮಾಡುತ್ತಾರೆಂದು ವಾರ್ತೆಯಿದೆ. ಮೊನ್ನೆ ಒಬ್ಬ ಹಿಂದು ಮನುಷ್ಯನಿಗೆ "(ಹಿಂದು ಧರ್ಮ) ನೆಂಬ ನರಕ ಬಿಟ್ಟು (ನಮ್ಮ ಧರ್ಮವ) ಸ್ವರ್ಗಕ್ಕೆ ಬಾ! ಮೋಕ್ಷ ಮಾರ್ಗ ತೋರಿಸಿಕೊಡುತ್ತೇವೆ," ಎಂದು ಅವರು ಹೇಳಿದರಂತೆ. ವೈರಾಗಿಗಳ ಬಾಹ್ಯ ವೇಷ ನೋಡಿ ಜನರು ಮೋಸಹೋಗಬಾರದು.

ಎಲ್ಲ ಕಡೆಯಲ್ಲಿ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ಪ್ರೀತ್ಯರ್ಥ ಏನಾದರೂ ಕಾರ್ಯ ಮಾಡಬೇಕೆಂದು ನಿರ್ಣಯಿಸುತ್ತವೆ. ನಮ್ಮ ನಗರ ಸಭೆಯವರು ಈ ತನಕ ಯಾವದೇ ವಿಚಾರ ಮಾಡಿಲ್ಲ.

ಹ| ಭ| ಪ| ಕರಂಡೇ ಶಾಸ್ತ್ರಿಯವರು ತಮ್ಮ ಚಿಕ್ಕ ಬಾಲಕನಾದ ಅನಂತನನ್ನು ಕರೆಕೊಂಡು ಇಲ್ಲಿಗೆ ಬಂದಿದ್ದಾರೆ. ಅನಂತನು ಬಾಲ ಕವಿಯೂ, ಬಾಲ ಹರಿದಾಸನೂ ಆಗಿರುತ್ತಾನೆ. ಅವನ ಕೀರ್ತನೆಯ ಶೈಲಿಯೂ, ಗಾಯನವೂ, ಹಾವ-ಭಾವಗಳೂ ಮನೋಹರವಾಗಿವೆ. ರಾಗದ ಪೆಟ್ಟಿಗೆ, ಸತಾರ, ತಬಲಾ, ಮುರಲಿ ಮುಂತಾದ ವಾದ್ಯಗಳನ್ನು ಬಾರಿಸುವದರಲ್ಲಿ ಪ್ರವೀಣನೆಂದು ಪ್ರಶಸ್ತಿ ಪತ್ರಗಳನ್ನೂ, ಬೆಳ್ಳಿ-ಬಂಗಾರಗಳ ಪದಕಗಳನ್ನೂ ಪಡೆದಿದ್ದಾನೆ. ತಂದೆ ಮಕ್ಕಳ ಕೀರ್ತನ-ಪ್ರವಚನಗಳು ಅಲ್ಲಲ್ಲಿ ನಡೆದಿವೆ. ಜನರು ತಂಡ-ತಂಡವಾಗಿ ಕೂಡುತ್ತಾರೆ.

ದುರುಸ್ತಿ.

ತಾ. ೩-೧೨-೩೭-೩೫ನೇ ಸಂಚಿಕೆಯಲ್ಲಿ 'ಪಂಚಾಂಗಕರ್ತರಿಗೆ' ಎಂಬ ಲೇಖದಲ್ಲಿ ಕೆಲವು ತಪ್ಪು ಸರಿಯಾಗಬೇಕು.

(೧) ರೈವತ ಮತ್ತು ಚಿತ್ರಾ ಪಕ್ಷಗಳ ವಿವರ ಹೀಗೆ— "ರೇವತಿ (ಝೀಟಾ) ನಕ್ಷತ್ರಸ್ಥಾನವೇ ಕ್ರಾಂತಿ ವೃತ್ತದ ಆರಂಭಸ್ಥಾನವೆಂದೂ, ಆ ಝೀಟಾ ನಕ್ಷತ್ರದಿಂದ ವಿಷುವ-ಕ್ರಾಂತಿ ವೃತ್ತಗಳ ವಸಂತ-ಸಂಪಾತ ಬಿಂದುವಿನ ಅಂತರವೇ ಅಯನಾಂಶವೆಂದೂ ರೈವತ ಪಕ್ಷದವರ ಸಿದ್ಧಾಂತ. ಚಿತ್ರಾ ನಕ್ಷತ್ರದಿಂದ ೧೮೦ ಅಂಶಗಳ ಮೇಲಿರುವ ಬಿಂದುವೇ ಕ್ರಾಂತಿವೃತ್ತದ ಆರಂಭಸ್ಥಾನವೆಂದೂ, ಆ ಚಿತ್ರಾ ನಕ್ಷತ್ರದಿಂದ ವಿಷುವ-ಕ್ರಾಂತಿ ವೃತ್ತಗಳ ವಸಂತಸಂಪಾತ ಬಿಂದುವಿನ ಅಂತರವೇ ಅಯನಾಂಶವೆಂದೂ ಚೈತ್ರ ಪಕ್ಷದವರ ಸಿದ್ಧಾಂತ."

(೨) ಎರಡು ಪಕ್ಷಗಳವರ ಪಂಚಾಂಗಗಳೆಂದರೆ ದೃಕ್‌ತುಲ್ಯ ಪಂಚಾಂಗಗಳು.

(೩) 'ದಿನ-ಮಾನದಲ್ಲಿ ಹೆಚ್ಚು-ಕಡಿಮೆಯಾಗುತ್ತದೆ.' ಎಂಬದರ ಬದಲಿಗೆ 'ತಿಥಿಮಾನದಲ್ಲಿ ಹೆಚ್ಚು-ಕಡಿಮೆಯಾಗುತ್ತದೆ.'

(೪) '೫೩ ಗಳಿಗೆ' ಎಂಬದರ ಬದಲು '೫೪ ಗಳಿಗೆ', '೭ ಗಳಿಗೆ' ಎಂಬದರ ಬದಲು '೬ ಗಳಿಗೆ'.

(೫) ಭೂಮಧ್ಯವೆಂದರೆ— 'ಗ್ರಹಗಣಿತ ಕ್ರಮಕ್ಕೆ ಬೇಕಾಗುವ ಬಿಂದು' ಎಂದು ತಿಳಿದು ಈಗಿನ ಕೆಲವು ಪಂಚಾಂಗ ಕರ್ತರು ತಿಥ್ಯಾದಿಗಳ ಗಣಿತವನ್ನು [illegible] ಲಭ್ಯವಂತೆ ಮಾಡುತ್ತಾರೆ. ಎಂಬುದಾಗಿ ಭೂಮಧ್ಯ-ಭೂಮಧ್ಯಗಳೆರಡರ ಪದರದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕು

(೬) ರಾ| ಗ. ರಾ. ಉಪ್ಪುರವರ ಲೇಖದ ಸಾಲಿಂದ 'ಇದರ ಬೆಲೆ ೧ ರೂಪಾಯಿ.' ಎಂಬ ವಾಕ್ಯದ ವರೆಗೆ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತಾರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents-
D. K. Nayak Bros.
D. S. Pai
K. N Nayak.
Honavar Agent:-
R. V. Prabhu Esq.

K. PadmanabhaRao & Sons
BELGAUM
Chief Agents for
Karnatak Districts & S M. State

ಜಿಲ್ಹಾ ಬೋರ್ಡಿನ ಸಭೆ.

(೩ನೇ ಪಾನಿನಿಂದ ಮುಂದರಿಸಿದ್ದು)

ಕಾನೂನುಗಳನ್ನು ಪರಾಂಬರಿಸಿ ಮುಂದಿನ ಸಭೆಯಲ್ಲಿ ಇದರ [illegible]ಕ್ಷವಾಗಿ ನಿರ್ಣಯವಾಯಿತು. ಸರಕಾರದ ಕಡೆ ಬೋರ್ಡಿಗೆ ಸಲ್ಲತಕ್ಕ ಹಣದ ಲೆಕ್ಕದ ಅಭಾವದಲ್ಲಿ ಸರಕಾರದ ಕಡೆಯಿಂದ ಎಷ್ಟು ಹಣವು ವಸೂಲು ಸಿಗತಕ್ಕದ್ದೆಂಬುದರ ಕುರಿತು ಮುಂದಿನ ಸಭೆಯಲ್ಲಿ ವಿಚಾರವಾಗುವದು ಲೇಸು.

ತಾಲೂಕ ಬೋರ್ಡುಗಳನ್ನು ರದ್ದುಪಡಿಸಬೇಕಾಗಿ ಅಧ್ಯಕ್ಷರು ಕಮಿಶನರರಿಗೆ ಬರೆದಿದ್ದರು; ಈ ಕುರಿತು ಬೋರ್ಡಿನ ಅಭಿಪ್ರಾಯ ಪಡೆದು ಕಳುಹಬೇಕಾಗಿ ಕಮಿಶನರರು ಬರೆದಿದ್ದರು. ಬೆಳಗಾಂವಿ ಜಿಲ್ಹೆಯೊಳಗಿನ ತಾಲೂಕ ಬೋರ್ಡುಗಳನ್ನು ರದ್ದು ಮಾಡಲು ಸರಕಾರವು [illegible] ಮಾಡಿದೆ ಎಂಬದಾಗಿಯೂ ಬರೆದಿತ್ತು. ಈ ವಿಷಯದ [illegible] ಚರ್ಚೆಗೆ ಬಂದೊಡನೆ ತಾಲೂಕ ಬೋರ್ಡುಗಳನ್ನು ರದ್ದು ಮಾಡಬಾರದೆಂದೂ ಡಾ॥ ಕಾಸರಗೋಡರವರ ಸೂಚನೆ. ಬೆಳಗಾಂವಿಯೊಳಗಿನ ಪ್ರಯೋಗ ನೋಡಿ ಮುಂದರಿಯಬಹುದೆಂದು ಇವರ ಅಭಿಪ್ರಾಯ. ಈ ಠರಾವಿನ ಚರ್ಚೆ ಬುಧವಾರ ಮುಂದರಿಯಬೇಕಾಗಿತ್ತು; ಜಮಾ ಖರ್ಚಿನ ಪತ್ರಿಕೆ ಚರ್ಚೆಯಾದ ಬಳಿಕ ಚರ್ಚಿಸಬಹುದಾಗಿ ಅಧ್ಯಕ್ಷರು ತಿಳಿಸಿಯಾಯಿತು. ಅದರಂತೆ ಆ ಠರಾವು ಪುನ್ಹಾ ಚರ್ಚೆಗೆ ಬಂದ ಈ ಕಾಲದಲ್ಲಿ ಸೂಚಕರು ಹಾಜರಿದ್ದಿಲ್ಲ. ಅವರ ಅಭಾವದಲ್ಲಿ ಅವರ ಸೂಚನೆಯನ್ನು ಚರ್ಚಿಸುವದು ವಿಚಾರಕ್ಕನುವಲ್ಲವಾಗಿ ಸಭಾಸದರು ಆಕ್ಷೇಪಿಸಿದರು. ಬಹುತೇಕ ಸಭಾಸದರು ಕಾರಣಾಂತರದಿಂದ ಸಭೆಯಲ್ಲಿ ಹಾಜರ ಇಲ್ಲದ್ದರಿಂದಲೂ, ಅವರ ಅಭಿಪ್ರಾಯ ತಾಲೂಕ ಬೋರ್ಡುಗಳು ರದ್ದಾಗಬಾರದಾಗಿರುವದೆಂದಲೂ ಈಗ ಆ ಸಭೆಯ ಅಂತ್ಯಕಾಲ (ರಾತ್ರಿ ೧೧ಗಂ) ಆದ್ದರಿಂದಲೂ ಈ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಬೇಕೆಂದು ಡಾ॥ ವಿಶ್ವೇಶ್ವರ ಹೆಗಡೆಯವರು ಸೂಚಿಸಿದರು. ಮತ ಎಣಿಕೆ ಮಾಡಲು ಅಧ್ಯಕ್ಷರ ಸಹಿತ ಅನುಕೂಲ ೭, ಪ್ರತಿಕೂಲ ೪, ಹೀಗೆ ಮತ ವಿಭಾಗಣೆಯಾಗಿ ಠರಾವು ಮಂಜೂರಾಯಿತು. ಅಧ್ಯಕ್ಷರಾದ ಡಾ॥ ಗಂಗೊಳ್ಳಿಯವರು, ತಮ್ಮ ಪಟ ಸಾಧಿಸುವದಕ್ಕಾಗಿಯೇ ಸಭೆಯ ಅಂತ್ಯಕಾಲದಲ್ಲಿ ಸಭಾಸದರ ಗೈರಹಾಜರಿಯಲ್ಲಿ ಈ ಠರಾವನ್ನು ಮಾಡಿಕೊಂಡಿರುವರಾಗಿ ಹಲವು ಸಭಾಸದರ ಅಭಿಪ್ರಾಯ. ತಾಲೂಕ ಬೋರ್ಡುಗಳನ್ನು ರದ್ದು ಮಾಡಿದ ಬೆಳಗಾಂವಿ ಜಿಲ್ಹೆಯೊಳಗಿನ ಪ್ರಯೋಗದ ಫಲ ನೋಡುವಷ್ಟು ತಾಳ್ಮೆ ಅಧ್ಯಕ್ಷರಿಗಿರಲಿಲ್ಲ. ಸಿರ್ಸಿ, ಸಿದ್ದಾಪುರ, ಯಲ್ಲಾಪುರ ಮೊದಲಾದ ಘಟ್ಟದ ಮೇಲಿನ ತಾಲೂಕುಗಳಲ್ಲಿ ತಾಲೂಕ ಬೋರ್ಡುಗಳ ಅಭಾವದಲ್ಲಿ ಬಹು ತೊಂದರೆಯಾಗುವಂತಿದೆ. ಡಾ॥ ಹೆಗಡೆಯವರ ಸೂಚನೆ ಮೇರೆಗೆ ಠರಾವನ್ನು ಮುಂದಿನ ಸಭೆಯ ತನಕ ಮುಂದರಿಸಿದ್ದಲ್ಲಿ [illegible] ಕುರಿತು ಕೆಳಹಂತಕ್ಕೀಡು ಸರ್ವಸಾಧಾರಣ[illegible]. ಜಿಲ್ಹಾ ಬೋರ್ಡನ್ನು ರದ್ದುಪಡಿಸುವ ಠರಾವ [illegible] ಸೂಚಿಸಿಕೊಂಡು ಅಧ್ಯಕ್ಷರು ತಮ್ಮ ಕಾರಕೀರ್ದಿಯನ್ನು ಅಜರಾಮರವಾಗಿ ಮಾಡಿಕೊಳ್ಳಬಹುದಾಗಿ ಹಲವರು ಹೇಳುತ್ತಾರೆ. ನಮ್ಮ ಜಿಲ್ಹೆಯ ಮಟ್ಟಿಗೆ ಈ ಪ್ರಯೋಗ ಮಾಡಿ ನೋಡಬಹುದು.

ಬೋರ್ಡಿನ ಪತ್ರಿಕೆಯ ನಮೂನೆ ಹೇಳತಕ್ಕಂತಾದ್ದಿದೆ. ಜಿಲ್ಹಾ ಬೋರ್ಡಿನ ಉತ್ಪನ್ನ ರೂ ೧೫೩೪೮೭; ಖರ್ಚು ರೂ ೧೬೦೨೩೯ ಅಂದರೆ ರೂ ೬-೭ ಸಾವಿರ ತುಟ್ಟಿ. ಬೋರ್ಡಿನ ಸಾಂಪತ್ತಿಕ ಸ್ಥಿತಿ ಇದರ ಮೇಲಿಂದ ತಿಳಿಯುವಂತಿದೆ. ಪಟ್ಟಣದ ಸ್ವರಾಜ್ಯದ ಕಲ್ಪನೆಯೂ ಬರುವಂತಿದೆ. ಜಮಾ-ಖರ್ಚು ಪತ್ರಿಕೆಯನ್ನು ಬಾಯಿಗೂಡಿಸದೆ ಮಂಜೂರ ಮಾಡಿದಲ್ಲಿ ಬೋರ್ಡಿನ ಮುಕ್ತ[illegible]ತನಕ್ಕೆ ಭಂಗ ಬರುವದೆ. ಬಾಯಿಗೂಡಿಸಲಿಕ್ಕೆ ತಕ್ಕಷ್ಟು ದ್ರವ್ಯಾನುಕೂಲತೆಯಿಲ್ಲ. ಪಟ್ಟಣದ ಪವರವನ್ನು ಕಡಿಸಿ ಬಾಯಿಗೂಡಿಸಬೇಕು. ಅವರಿಗೆ ಇವಕ್ಕೂ ದೈವದ ಅನುಕೂಲತೆಯು [illegible] ಪ್ರಕಾರದಿಂದ ಬೋರ್ಡಿನ ದ್ರವ್ಯಸಹಾಯವನ್ನು ಕಲ್ಪಿಸಲಿಕ್ಕೆ ಹಾದಿ. ಮೊದಲು ಮಾರ್ಗರಚನೆಗಾಗಿ ಸರಕಾರದಿಂದ ಬೋರ್ಡಿಗೆ ರೂ ೪೫ ಸಾವಿರ ದ್ರವ್ಯ ಸಹಾಯ ಸಿಗುತ್ತಿತ್ತು. ಅದು ಈಗ ಇಳಿದೂ ೨೩ ಸಾವಿರಕ್ಕೆ ತಪ್ಪಿದೆ. ಅವಶ್ಯ[illegible] ಬೋರ್ಡಿನವರು ಮಾಡಿದ ಸಕಲ ಪ್ರಯತ್ನಗಳು ನಿರರ್ಥಕ. ಸರಕಾರಕ್ಕೆ ಹಣದ ಅಡಚಣೆ ತಪ್ಪಲಿಲ್ಲ. ಇದಾಗ್ಯೂ ಬೋರ್ಡು ಜಮಾ-ಖರ್ಚು ಬಾಯಿಗೂಡಿಸಿಕೊಂಡು ವ್ಯವಹಾರ ನಡಿಸುತ್ತಿದೆ. ರೂ ೬ ಸಾವಿರ ತುಟ್ಟಿಯನ್ನು ಹೋಗಲಾಡಿಸುವದಕ್ಕಾಗಿ ತಾಲೂಕ ಬೋರ್ಡುಗಳಿಗೆ ಕೊಡತಕ್ಕ ಗ್ರಾಂಟುಗಳಿಗೆ ಕತ್ತರಿ. ಜಿಲ್ಹಾ ಬೋರ್ಡಿನ ಕೆಲ ಬಾಬುಗಳಿಗೆ ಕತ್ತರಿ. ಹೀಗೆ ಕತ್ತರಿ ಹಾಕಿ ಜಮಾ-ಖರ್ಚು ಬಾಯಿಗೂಡಿಸಲ್ಪಟ್ಟಿತು. ಕತ್ತರಿ ಮಾಡುವಾಗ ನಡೆದ ಒಂದು ವಿಷಯ ನಮೂದಿಸಬಹುದು. ಕುಮಟಾ-ಸಿದ್ದಾಪುರ ಮಾರ್ಗದ ಮೇಲಿನ ಮಾಗೋಡ ನದಿಗೆ ಒಡ್ಡು ಕಟ್ಟುವ ಸಂಬಂಧ ೧ ಸಾವಿರ ರೂಪಾಯಿ ನಮೂದಿಸಿತ್ತು. ಅದನ್ನು ಇಳಿಸಿ ರೂ ೫೦೦ ಮಾಡಿತು. ಈ ವಿಷಯದ ವಿವರವೇನಂದರೆ —

ಹೇರೂರ ಸೀಮೆಯಿಂದ ಸಿದ್ದಾಪುರಕ್ಕೆ ಹೋಗುವ ಮಾರ್ಗದಲ್ಲಿ ಮಾಗೋಡ ಹೊಳೆಯಿದೆ. ಈ ಹೊಳೆ ವಿಸ್ತೃತ. ಇಲ್ಲಿ ನೀರಿನ ಸೆಳವು ಬಹಳ. ಬೋರ್ಡಿಗೆ ಈ ಮಾರ್ಗ ಒಪ್ಪಿಸುವ ಮುಂಚೆ ಈ ಮಾರ್ಗದ ವ್ಯವಸ್ಥೆ ಇಂಜನಿಯರ ಖಾತೆಯವರು ನಡಿಸುತ್ತಿದ್ದರು. ಈ ಹೊಳೆಯನ್ನು ಮಳೆಗಾಲದಲ್ಲಿ ದೋಣಿಯಿಂದ ದಾಟಬಹುದು. ಬೇಸಿಗೆಯಲ್ಲಿ ದಾಟುವದಕ್ಕಾಗಿ ಇಂಜನಿಯರ ಖಾತೆಯವರು ದೊಡ್ಡ ದೊಡ್ಡ ಕಲ್ಲು ಹಾಸಿ ಹಾದಿ ಮಾಡಿದ್ದರು. ಈ ಹಾದಿಯ ಮೇಲೆ ಯಾವಾಗಲೂ ಮೊಳಕಾಲು ನೀರು ಇರುತ್ತಿತ್ತು. ಮಳೆಗಾಲದಲ್ಲಿ ದೊಡ್ಡ ದೊಡ್ಡ ಮರಗಳು ಹರಿದು ಬಂದು ಕಲ್ಲು ಕಿತ್ತುಕೊಂಡು ಹೋಗುತ್ತಿದ್ದವು. ಇಂಜನಿಯರ ಖಾತೆಯವರು ಸಾವಿರಾರು ರೂಪಾಯಿ ಖರ್ಚು ಮಾಡಿ ಅದನ್ನು ಕಟ್ಟಿಸುತ್ತಿದ್ದರು. ಬೋರ್ಡಿನ ಆಡಳಿತೆಯಲ್ಲಿ ಅಷ್ಟು ಖರ್ಚು ಮಾಡಲು ಅಸಾಧ್ಯವಾಯಿತು. ಕಲ್ಲು ಕಿತ್ತುಹೋಗಿ ೪ ಗಾಡಿಗಳು ದಾಟಿ ಹೋಗುವಾಗ ನೀರಿನ ಪ್ರವಾಹದಲ್ಲಿ ಸಿಲುಕಿ ಗಾಡಿ, ಎತ್ತು, ಸಾಮಾನು, ಗಾಡಿಕಾರ ಎಲ್ಲ ಬಳದು ಹೋದವು. ಇದನ್ನು ನೆಟ್ಟಗೆ ಮಾಡಲಿಕ್ಕೆ ೧೦-೨೦ ಸಾವಿರ ರೂಪಾಯಿ ಬೇಕು. ಬೋರ್ಡಿನ ಕಡೆ ಅಷ್ಟು ಹಣವಿಲ್ಲ. ಅದಕ್ಕಾಗಿ ಕಳೆದ ವರ್ಷ ರೂ. ೨೦೦೦ ನಿಧಿ ಇಡಲ್ಪಟ್ಟಿತು. ಈ ವರ್ಷ ಮತ್ತೆರಡು ಸಾವಿರ ರೂಪಾಯಿ ಇಡಬೇಕಾಗಿದ್ದಿತ್ತು; ಹಣದ ಅಡಚಣೆಯಿಂದ ೧ ಸಾವಿರ ರೂಪಾಯಿ ಇಟ್ಟಿತ್ತು, ಜಮಾ-ಖರ್ಚು ಬಾಯಿಗೂಡಿಸುವದಕ್ಕಾಗಿ ರೂ. ೫೦೦ ತೆಗೆದರು. ಈ ನಮೂನೆಯಿಂದ ಅಲ್ಲಿ ಮಾಗೋಡ ಹೊಳೆಗೆ ಒಡ್ಡಾಗುವದು ಯಾವ ಸಂವತ್ಸರದಲ್ಲಿಯೋ ಏನೋ! ಹೇರೂರ ಸೀಮೆಯವರು ಮಳೆಗಾಲ-ಬೇಸಿಗೆಯಲ್ಲಿ, ಮಳೆಗಾಲಕ್ಕಿಂತ ಬೇಸಿಗೆಯಲ್ಲಿ-ಇತರ ಭಾಗಗಳಿಂದ ಪ್ರತ್ಯೇಕವಾಗಿರಬೇಕು, ದ್ವೀಪಾಂತರ ವಾಸವೆಂದು ಹೇಳಬಹುದು. ಇದಕ್ಕಾಗಿ ಅವರು ಕರ್ಕಿಸವಾಲಿನ ಮೇಲಿಂದ ಹುಲ್ಲು ರಸ್ತೆ ಮಾಡಿದ್ದಾರೆ. ಈ ರಸ್ತೆ ಬೆಟ್ಟದ ಮೇಲಿಂದ, ತೋಟಗಳೊಳಗಿಂದ, ಅಂಗಳಗಳೊಳಗಿಂದ, ಮನೆ-ತೋಟಗಳೊಳಗಿಂದ ಹಾದುಹೋಗುತ್ತದೆ! ಇಕ್ಕಟ್ಟಿನ ರಸ್ತೆ! ಸ್ವಲ್ಪ ಅಜಾಗ್ರತೆಯಾದರೆ ಕಾಲು ಯಾ ಟೊಂಕ ಮುರಿದುಕೊಳ್ಳುವದೇ. ಈ ಮಾರ್ಗ ಸರಿಪಡಿಸಲಿಕ್ಕಾದರೂ ೫-೬ ಸಾವಿರ ರೂ. ಬೇಕು. ತಾಲೂಕ ಬೋರ್ಡಿನವರು ೧೦೦ ರೂ. ಖರ್ಚು ಮಾಡುತ್ತಾರೆ. ಅದು ಎಲ್ಲಿಯೂ ಮುಟ್ಟುವದಿಲ್ಲ. ಜಿಲ್ಹಾ ಬೋರ್ಡಿನವರು ಇನ್ನು ೧೦೦ ರೂ. ಈ ಬಗ್ಗೆ ಮಂಜೂರ ಮಾಡಿದ್ದಾರೆ. ಮಾಗೋಡ ಹೊಳೆಯು ಒಡ್ಡಿಲ್ಲದ್ದರಿಂದ ಹೇರೂರ ಸೀಮೆಯ ತೋಟಿಗರು ಕರ್ಕಿ ಸವಾಲ ರಸ್ತೆಯ ಮೇಲಿಂದ ಸಿದ್ದಾಪುರಕ್ಕೆ ಹೋಗಬೇಕು; ಇಲ್ಲವೆ ಸಿರ್ಸಿಗೆ ಹೋಗಬೇಕು. ಇದು ಸುತ್ತು ಬೀಳುತ್ತದೆ. ಸರಾಸರಿ ೨-೩ ರೂಪಾಯಿ ಹೆಚ್ಚಿನ ಖರ್ಚು ತಗಲುತ್ತದೆ. ಹೇರೂರ ಸೀಮೆಯ ಉತ್ಪತ್ತಿ ಅಡಿಕೆ, ಯಾಲಕ್ಕಿ. ಅವರಿಗೆ ಊಟಕ್ಕೆ ಬೇಕಾದನ್ನು ಅಕ್ಕಿ. ಅಕ್ಕಿ ಬೇಲ ಮನೆಗೆ ತರಬೇಕಾದರೆ ರೂ. ೨ ಹೆಚ್ಚಿಗೆ ತೆರಬೇಕು. ಅಡಿಕೆ ಬೇಲ ಮಾರಾಟಕ್ಕೊಯ್ಯಬೇಕಾದರೆ ರೂ ೨ ಹೆಚ್ಚಿಗೆ ಖರ್ಚು ತೆರಬೇಕು. ಹೀಗೆ ಬೇಲಕ್ಕೆ ರೂ ೪ ಹೆಚ್ಚಿನ ಖರ್ಚು ಬೀಳುತ್ತದೆ. ಬಡ ರೈತರಿಗೆ ಬಲು ಕಷ್ಟ! ಸರಕಾರದ ಕಡೆಗೆ ದೂರಿಕೊಳ್ಳಲಿಕ್ಕೆ ಬೋರ್ಡಿನ ಸ್ವರಾಜ್ಯ ಅಡ್ಡ ಬರುತ್ತದೆ. ಬೋರ್ಡಿನ ಕಡೆ

ಉಡುಪಿ ಸಿಂಡಿಕೇಟ ಬೇಂಕಿನ ಶೇರುಗಳು ಮಾರಾಟಕ್ಕೆ!

ಬಾಜಾರಿ ದರಕ್ಕಿಂತ ಕಡಿಮೆ!!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.

ಈ ಬೇಂಕಿನ ಪ್ರಿಫರನ್ಸ ಶೇರು ಮಾರುವದಿದೆ! ಶೇರುಗಳು ೧೦೦ ರೂಪಾಯಿಗಳವು. ದರಸಾಲ ದರ ಶೇಕಡಾ ರೂಪಾಯಿ ೬ರಂತೆ ಬಡ್ಡಿಯಿದೆ. ಇನ್‌ಕಮ್‌ಟೆಕ್ಸ ಮಾಫಿ. ಹಿಂದಿನ ಬಡ್ಡಿ ವಸೂಲಿಯ ಹಕ್ಕು ಸಹಿತ ಮಾರುವದಿದೆ. ಪೇಟೆಯೊಳಗೆ ಸಿಗುವ ದರಕ್ಕಿಂತ ಕಡಿಮೆ ದರದಿಂದ ಮಾರಾಟ ಮಾಡಲ್ಪಡುವವು.

ಈ ಶೇರುಗಳು ಉಡುಪಿಯಲ್ಲಿ ರೂಪಾಯಿ ೧೦೭ರಂತೆ ಮಾರಾಟವಾಗುತ್ತವಾಗಿ ಬೇಂಕಿನವರು ಹೇಳುತ್ತಾರೆ. ಖಾಯಿಶ ಇದ್ದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಸಹಿ— ವಿಠ್ಠಲ ಸುಬ್ರಾಯ ಪ್ರಭು ಶಿರೂರಕರ,
ಪೋಸ್ಟ:— ಅಂಕೋಲಾ.

ದೊರಕೊಂಡರೆ ಹಣದ ಅಭಾವ ಎಲ್ಲೆಲ್ಲಿಯೂ ಈ ಅವಸ್ಥೆ ತೋರ್ಪಡುವದರಿಂದ ಈ ಅವಸ್ಥೆಯನ್ನು ಪರಿಹರಿಸಲು ಅಸಾಧ್ಯ ಹೋಗು. ಗ್ರಾಮಸುಧಾರಣೆಯ ಮನ್ವಂತರದಲ್ಲಿ ಜಿಲ್ಲಾಧಿಕಾರಿಗಳು ಈ ಕುರಿತು ಚೌಕಶಿ ನಡಿಸಿ ಪರಿಹರಿಸಬೇಕು ಬೋರ್ಡಿಗೆ ಪ್ರಜಾನುಕೂಲತೆಯ ಕಾರ್ಯಗಳನ್ನು ಒಪ್ಪಿಸಿದ ಕೂಡಲೆ ಸರಕಾರದ ಕರ್ತವ್ಯ ಮುಗಿಯದು. ಜಮಾ-ಖರ್ಚಿನ ಬಗ್ಗೆ ನಡೆದ ಉಳಿದ ಚರ್ಚೆ ಅಷ್ಟೇನು ಮಹತ್ವದ್ದಲ್ಲ.

ಸ್ಕೂಲ ಬೋರ್ಡ ಜಮಾ-ಖರ್ಚಿನ ಚರ್ಚೆಯೊಂದು ವಿಚಾರಾರ್ಹವಿದೆ. ಸ್ಕೂಲ ಬೋರ್ಡಿನ ಆಡಳಿತೆಯಲ್ಲಿ ಸರಕಾರದ ಗ್ರಾಂಟಿನ ಕತ್ತರಿಯ ಮೂಲಕ ಸ್ಕೂಲ ಬೋರ್ಡಿನ ಶಿಲ್ಕು ರೂ ೩೮ ಸಾವಿರ ಇದ್ದದ್ದು ರೂ ೧೩ ಸಾವಿರಕ್ಕೆ ಬಂದಿದೆ! ೩ ವರ್ಷಗಳಲ್ಲಿ ರೂ ೨೫ ಸಾವಿರ ಕಡಿಮೆಯಾಯಿತು ಆದರಿಂದ ಸ್ಕೂಲ ಬೋರ್ಡಿನ ಚೇರಮನ್ನರು ಜಮಾ-ಖರ್ಚಿನ ಪತ್ರಿಕೆಯನ್ನು ಬೋರ್ಡಿಗೆ ಕಳುಹುವಾಗ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ಆಲೋಚನೆ ನಡಿಸಬೇಕಾಗಿ ಸೂಚಿಸಿದ್ದರು "ಲೋಕಲ್ಫಂಡನ್ನು ಏರಿಸಬೇಕು, ವೃತ್ತಿ ತೆರಿಗೆಯನ್ನು ಹಾಕಬೇಕು" ಎಂಬುದಾಗಿಯೂ ಸೂಚಿಸಿದ್ದರು. ಇವೆರಡೂ ಸೂಚನೆಗಳು ಬೋರ್ಡಿಗೆ ಸಾಧ್ಯವಾಗಲಿಲ್ಲ. ಜನರಿಗೆ ಇನ್ನ ಲೋಕಲ್ಫಂಡ ಕೊಡಲಿಕ್ಕೆ ಸಾಧ್ಯ; ಏರಿಸುವದಂತು ಕಷ್ಟವೇ. ವೃತ್ತಿತೆರಿಗೆಯನ್ನಿಡುವದು ಪ್ರಶಸ್ತವಲ್ಲವಾಗಿಯೂ, ಅದರಿಂದ ಪ್ರಯೋಜನ ಸಿಗಲಿಕ್ಕಿಲ್ಲವಾಗಿಯೂ ಈ ಹಿಂದೆಯೇ ಬೋರ್ಡಿನಲ್ಲಿ ಚೌಕಶಿಯಿಂದ ತೀರ್ಮಾನವಾದದ್ದಿದೆ. ಇದೇ ಜಿಲ್ಲೆಯಲ್ಲಿ ೩೧೫ ಶಾಲೆಗಳಿವೆ ಇವುಗಳಲ್ಲಿ ೨೯೬ ಶಾಲೆಗಳು, ೧೭ ವರ್ಗಗಳು ಇವುಗಳಲ್ಲಿ ೧೧ ಶಾಲೆಗಳಿಗೆ ಸರಕಾರವು ಗ್ರಾಂಟು ಕೊಡಲೊಪ್ಪುವದಿಲ್ಲ ಯಾಕಂದರೆ ಈ ಶಾಲೆಗಳಲ್ಲಿ ಸರಕಾರಿ ನಿಯಮಕ್ಕೆ ಕಡಿಮೆಯಾಗಿ ವಿದ್ಯಾರ್ಥಿಗಳಿದ್ದಾರೆ. ಇವು ಬಹುತರವಾಗಿ ಘಟ್ಟದ ಮೇಲಿನ ಶಾಲೆಗಳು. ಇವನ್ನು ಮುಚ್ಚಿದರೆ ವಿದ್ಯಾಮಂದಿರವೇ ಆ ಪ್ರದೇಶದಲ್ಲಿ ನಾಶಹೊಂದುತ್ತದೆ ವಿದ್ಯಾಪ್ರಸಾರದ ಯುಗದಲ್ಲಿ ಶಾಲೆಗಳನ್ನು ಕಿತ್ತುಹಾಕಲು ಬೋರ್ಡಿಗೆ ಒಪ್ಪಿಗೆಯಿಲ್ಲ ಇವುಗಳಿಗಾಗಿ ಬೋರ್ಡು ರೂ ೨೯೦೦ ತೆರುತ್ತದೆ. ಶಾಲೆಯ ಇಮಾರತುಗಳ ವಿಶೇಷ ದುರುಸ್ತಿಗೆಂದು ಖರ್ಚು ಮಾಡಿದ ರಕಮುಗಳ ತಮ್ಮ ಪಾಲನ್ನು ಸರಕಾರವು ತೆರುವದಿಲ್ಲ. ವಿಶೇಷ ದುರುಸ್ತಿಯ ದ್ರವ್ಯಸಹಾಯ ಕೊಡುವ ಪೂರ್ವದಲ್ಲಿ ಬೋರ್ಡು ಪಾಲಿಸಬೇಕಾದ ನಿಯಮಗಳಿವೆ. ಪ್ಲಾನ-ಎಸ್ಟಿಮೇಟುಗಳನ್ನು ಬೋರ್ಡು ತಯಾರಿಸಿ ಸರಕಾರಕ್ಕೆ ಕಳುಹಿ ಸರಕಾರಿ-ತಪಾಸಕರ ಅನುಮತಿ ಪಡೆದು ಆ ಮೇಲೆ ದುರುಸ್ತಿ ಕೆಲಸ ಕೈಕೊಂಡಲ್ಲಿ ಸರಕಾರವು ತನ್ನ ಪಾಲು ತೆರುತ್ತದೆ ಈ ವಿಧಿಯನ್ನೆಲ್ಲ ಪಾಲಿಸಿ ದುರುಸ್ತಿ ಮಾಡಹೋದಲ್ಲಿ ಇಮಾರತು ಬಿದ್ದುಹೋಗದಿದ್ದರೆ ಪುಣ್ಯ! ಮೇಲಾಗಿ ಈ ವಿಧಿಯಿಂದ ಖರ್ಚು ಸಹ ಬೆಳೆಯುತ್ತದೆ. ಆದರಿಂದ ಬೋರ್ಡಿನವರು ಆ ಗೊಡವೆಗೆ ಹೋಗದೆ ರೀತಿಯಂತೆ ತಮ್ಮ ಖಾತೆಯವರ ಕಡೆಯಿಂದ ಪ್ಲಾನ-ಎಸ್ಟಿಮೇಟುಗಳನ್ನು ತಯಾರಿಸಿ ಕೆಲಸ ನಡಿಸಿಕೊಳ್ಳುತ್ತಾರೆ. ಈ ಖರ್ಚು ಅವಶ್ಯವೆಂತಾಗಲಿ, ಪೋಲಾಯಿತೇನೇ ಎಂತಾಗಲಿ ಸರಕಾರಿ ಲೆಖ್ಖ-ತಪಾಸಕರ ತಂಟೆಯಿಲ್ಲ ಸರಕಾರಿ ಲೆಖ್ಖ ತಪಾಸಕರು-ಖರ್ಚನ್ನು ಮನ್ನಿಸುವಾಗ ವಿಶಿಷ್ಟ ವಿಧಿಯಂತೆ ಆ ಖರ್ಚು ನಡೆಯಲಿಲ್ಲವೆಂದು ನಮೂದಿಸುವದು ಅಧಿಕಾರಬಲವಲ್ಲದೆ ಮತ್ತೇನು? ಇದಲ್ಲದೆ ಪ್ರಾಥಮಿಕ ಶಿಕ್ಷಣ ಕಾಯಿದೆಯಂತೆ ವಿದ್ಯಾಪ್ರಸಾರ ಮಾಡುವದು ಸರಕಾರದ ಧ್ಯೇಯ. ಬೋರ್ಡಿನವರು ವಿದ್ಯಾಪ್ರಸಾರಕ್ಕಾಗಿ ಹೊಸದಾಗಿ ಶಾಲೆಗಳನ್ನು ಸ್ಥಾಪಿಸಿ ವಿದ್ಯಾವಿಸ್ತಾರ ಮಾಡಿದ್ದಲ್ಲಿ (voluntary expansion) ಸರಕಾರವು ಖರ್ಚು ಕೊಡಲೊಪ್ಪುವದಿಲ್ಲ. ಈ ನೆಪದಿಂದ ೪ [illegible] ಉರ್ದು ಶಿಕ್ಷಕರ ಪಗಾರಿನ ಪಾಲು ಧಿಕ್ಕರಿಸಿದೆ. ಸಕ್ತಿಯಿಂದ ಶಿಕ್ಷಣವನ್ನು ಎಲ್ಲೆಲ್ಲಿಯೂ ಪುರಸ್ಕರಿಸದಲ್ಲಿ ಸರಕಾರವು ಖರ್ಚು ಕೊಡಲೊಪ್ಪುತ್ತದೆ. ಸಕ್ತಿ ಶಿಕ್ಷಣಕ್ರಮಕ್ಕೆ ಅವಶ್ಯವುಳ್ಳ ತನ್ನ ಪಾಲು ತೆರಲು ಬೋರ್ಡಿಗೆ ಸಾಮರ್ಥ್ಯವಿಲ್ಲ. ಹೀಗಾಗಿ ಸರಕಾರಿ ಗ್ರಾಂಟಿನ ಬಾಬುಗಳಿಗೆ ಕತ್ತರಿ; ಗ್ರಾಂಟಿನ ಮೊಬಲಗಿಗೇ ಕತ್ತರಿ. ಹೀಗೆ ಕತ್ತರಿ ಹಾಕಿದ್ದರಿಂದ ಸ್ಕೂಲ ಬೋರ್ಡಿನವರು ಪ್ರಾಥಮಿಕ ಶಿಕ್ಷಕರ ಸಂಬಳಕ್ಕೆ ರೂ. ೭-೧೪-೦ಯಂತೆ ಕತ್ತರಿ ಹಾಕಿ ಜಮಾ-ಖರ್ಚನ್ನು ಬಾಯಿಗೂಡಿಸಿದ್ದಾರೆ ಕತ್ತರಿಯ ಸಮಯ ಒಂದು ಚಿಕ್ಕ ವಿವರದ ಚರ್ಚೆಯಾಯಿತು:- ಎಡ್ಮಿನಿಸ್ಟ್ರೇಟಿವ್ಹ ಆಫೀಸರ ಮೊದಲಾದ ಆಫೀಸಿನೊಳಗಿನ ಸರಕಾರಿ ನೌಕರರಿಗೆ ಕತ್ತರಿಯಿಲ್ಲದೆ ಸಂಬಳ ಕೊಡಲು ಬೋರ್ಡು ಬದ್ಧವಿದೆ ಅವರ ಬಗ್ಗೆ ಸರಕಾರವು ಬೋರ್ಡಿಗೆ ಕೊಡತಕ್ಕ ಗ್ರಾಂಟಿನಲ್ಲಿ ಕತ್ತರಿ ಮಾಡಿದಾಗ್ಯೂ ಬೋರ್ಡು ಅವರ ಪಗಾರವನ್ನು ಕತ್ತರಿಸದೆ ಸರಕಾರವು ಮಾಡಿದ ಕತ್ತರಿ ರಕಮನ್ನು ತುಂಬಿ ತೆರಬೇಕು ಉದಾ— ಎಡ್ಮಿನಿಸ್ಟ್ರೇಟಿವ್ಹ ಆಫೀಸರರಿಗೆ ರೂ ೨೬೦ ಸಂಬಳವಿದೆ. ಅದರೊಳಗೆ ಸರಕಾರವು ರೂ ೨೩೩ನ್ನು ಕೊಡುತ್ತದೆ ಉಳಿದ ರೂ. ೨೭ರಲ್ಲಿ [illegible] ರೂ. ೧೮ ಸರಕಾರಿ ಗ್ರಾಂಟು, [illegible] ರೂ. ೯ ಬೋರ್ಡಿನ ಪಾಲು ಸರಕಾರದಿಂದ ಸಿಗುವ ರೂ. ೧೮ರಲ್ಲಿ ಗ್ರಾಂಟಿನ ಮೊಬಲಗಿನ ಕತ್ತರಿ ಮೇರೆಗೆ ಶೇಕಡಾ ೧೭ರಂತೆ ಕಡಿಮೆಯಾಗುತ್ತದೆ. ಅಂದರೆ ರೂ. ೧೮ರ ಬದಲಿಗೆ ರೂ. ೩-೨-೬ ಕಡಿಮೆಯಾಗಿ ರೂ. ೧೪-೧೩-೬ ಸಿಗುತ್ತದೆ. ಆದಾಗ್ಯೂ ಬೋರ್ಡು ರೂ. ೧೮ ಪೂರಾ ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಸಂಬಳವನ್ನು ಸಂಪೂರ್ಣವಾಗಿ ತೆರಬೇಕು ಅಂದರೆ ಪರ್ಯಾಯದಿಂದ ಪ್ರಾಥಮಿಕ ಶಿಕ್ಷಕರ ಸಂಬಳಕ್ಕೆ ಹೆಚ್ಚಿನ ಕತ್ತರಿ ಹಾಕಿ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಂಥ ಸರಕಾರಿ ನೌಕರರಿಗೆ ತೆರಬೇಕು ಯಾಕಂದರೆ ಎಡ್ಮಿನಿಸ್ಟ್ರೇಟಿವ್ಹ ಆಫೀಸರರು ಸರಕಾರಿ ನೌಕರರು, ಪ್ರಾಥಮಿಕ ಶಿಕ್ಷಕರು, ಹೊಸ ವ್ಯಾಖ್ಯೆಯಂತೆ ಸರಕಾರಿ ನೌಕರರಲ್ಲ ಅಂದರೆ ಸರಕಾರಿ ನೌಕರರಲ್ಲದ ಬಡ ಶಿಕ್ಷಕರು ಸರಕಾರಿ ನೌಕರರಾದ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಂಥ ಸಂಪನ್ನರ ಪಗಾರವನ್ನು ಪಟ್ಟಿ ಕೂಡಿಸಿ ಕೊಡಬೇಕು ಇದು ಅನ್ಯಾಯವೆಂದು ಡಾ! ಫಿಲಿಪೋಸರವರು ಪ್ರತಿಪಾದಿಸಿದರು. ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಕಡೆಯಿಂದ ಪ್ರತ್ಯಕ್ಷ ಲೆಖ್ಖದ ಮೂಲಕ ಸಭಾಸದರಿಗೆ ಸಮಾಧಾನವಾಗಲಿಲ್ಲ. ಸರಕಾರವು ಕತ್ತರಿ ಹಾಕದೆ ಗ್ರಾಂಟಿನ ರಕಮನ್ನು ಬೋರ್ಡಿಗೆ ಕೊಡಬೇಕಾಗಿಯೂ ಇಲ್ಲವೆ ಶಾಲೆಗಳನ್ನು ತಿರುಗಿ ಒಪ್ಪಿಸಿಕೊಳ್ಳಬೇಕಾಗಿಯೂ ಬೋರ್ಡಿನಲ್ಲಿ ಸರ್ವಾನುಮತದ ಠರಾವಾಗಿದೆ. ಸರಕಾರವು ಶಾಲೆಗಳನ್ನೊಪ್ಪಿಸಿಕೊಳ್ಳದಿದ್ದಲ್ಲಿ, ದ್ರವ್ಯಸಹಾಯವನ್ನು ಬೆಳೆಸದಿದ್ದಲ್ಲಿ ಬಡ ಪ್ರಾಥಮಿಕ ಶಿಕ್ಷಕರನ್ನು ಸುಲಿ-ಸುಲಿದು ವಿದ್ಯಾಪ್ರಸಾರವನ್ನು ನಡಿಸುವದು ಅಸಾಧ್ಯ ಹೋಗು ಕಳೆದ ಎಪ್ರಿಲ ಅಖೇರಿಗೆ ಶಿಲ್ಕು ಇದ್ದ ರೂ ೧೩ ಸಾವಿರ ಇನ್ನೊಂದೆರಡು ವರುಷ ಸಾಕು ಆ ಮೇಲೆ ಒಂದೇ ಸ್ಕೂಲ ಬೋರ್ಡು ಶಾಲೆಗಳನ್ನು ಮುಚ್ಚಬೇಕು; ಇಲ್ಲವೆ ನಾದಾರ ಅರ್ಜಿಯನ್ನು ದಾಖಲಿಸಿ ವಿದ್ಯಾಪ್ರಸಾರದ ಕರ್ತವ್ಯದಿಂದ ಬೋರ್ಡು ಬಿಡುಗಡೆಯಾಗಬೇಕು. ಪ್ರಾಥಮಿಕ ಶಿಕ್ಷಕರು ಸಂಬಳಕ್ಕೆ ಒದಗಿದ ಕತ್ತರಿ ತಿಂದು-ತಿಂದು ಬೇಸರಪಟ್ಟಿದ್ದಾರೆ. ಇನ್ನು ಅವರಿಗೆ ಸುಲಿಯಲಿಕ್ಕೂ ಸಾಧ್ಯವಿಲ್ಲ [illegible] ಕೊನೆಯ ತಿಂದು ಹೊಟ್ಟೆ ತುಂಬುತ್ತಿದ್ದರೆ ಆಗಿಗೆ ಮಾಡುವ ಕಷ್ಟ ಯಾರಿಗೂ ಬೇಡ. ಸರಕಾರವು ಸುವಿಚಾರ ಮಾಡಿ ತನ್ನ ಅಡಚಣೆಯನ್ನೇ ಯಾವಾಗಲೂ ಮುಂದೊಡ್ಡಿ ಬೋರ್ಡಿಗೆ ತಿರಸ್ಕರಿಸುವದಕ್ಕಾದರೂ ಸೀಮೆಯಿದೆ, ಎಂದು ತಿಳಿದು ಶೀಘ್ರವೇ ಬೋರ್ಡುಗಳ ಸಂಪದಭ್ಯುದಯ ಮಾಡಲು ಉಪಾಯಯೋಜನೆ ಮಾಡದಿದ್ದರೆ ಮುಂದೆ ಅನರ್ಥವಿದೆ; ಅಪಘಾತವಿದೆ.

ಜಿಲ್ಲಾ ಬೋರ್ಡಿನ ಸಭೆಯ ವೃತ್ತಾಂತದ ಮುಖ್ಯ ಸ್ವರೂಪವಿದು

॥ ಓಂ ॥

ಡಾ॥ ಮುಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು— ಸ್ವಾಸ್ಥ್ಯನಿಲಯ, ಧಾರವಾಡ.

ಡಾ! ಮುಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ಕಂಡುಹಿಡಿಯಲ್ಪಡುವ ಅತ್ಯಂತ ಪರಿಣಾಮಕಾರಕ ಔಷಧಗಳು.

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಕೂಲ, ಲಾಭ ಹೊಂದಿರುವರು ಕ್ರಯ ರೂ. ೧-೮-೦.

ಅಶ್ವಗಂಧ ಟೊನಿಕ್:— ಮೆದುಳು, ಮಾಂಸ, ನರಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಶಕ್ತಿಗೆ ಇದು ದಿವ್ಯೌಷಧ ರೂ. ೧-೪-೦.

ಎಗ್ಸ್ ಮಿಕ್ಶ್ಚರ, ಫೀವರ ಡ್ರಾಪ್ಸ್, ಅಮೃತ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಗಳು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ! ಬಿಕ್ಕಟ್ಟಿನ ಪ್ರಸಂಗಗಳ ಉಪಯೋಗವಾಗುವವು. ಇವು ಅಮೂಲ್ಯ ಔಷಧಗಳು!!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವಸಿದ್ಧವಾದ ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ್ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲರೋ, [illegible], ಸಾಯರಪ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, [illegible], [illegible] ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಣಂತಿ ಮದ್ದು ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು—

ರಾ। ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ. ಕನ್ನಡ)

ಓಂ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರುಗಳಿಗೂ ಹಾಗೂ ಎಲ್ಲ ಫಾರ್ಮಸಿಗಳಲ್ಲೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅದರ ಗುಣಗಳು ಸರಿಯಾಗಿ ಕಾಣಿಸದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಇದರ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಎಲ್ಲಾ ಉತ್ಕೃಷ್ಟವಾಗಿರುತ್ತದೆ.

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತರು ಇದ್ದರೂ ಕೂಡ ಗುಣಪಡಿಸಿ ಮೈಯಲ್ಲಿ ತೇಜಸ್ಸನ್ನೂ, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ.

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ,) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಮೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ, ಗರ್ಭಾಶಯದ ಕಟಿ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮತ್ತು ಹೆಂಗಸರಿಗೆ ಪ್ರಸವ ಆದನಂತರ ಆಗುವಂಥ ಪೀಡೆಗಳಿಗೆ, ಪಚನ ವಿಕಾರಗಳಿಗೆ ಹಾಗೂ ಎಲ್ಲಾ ತರದ ವಾಯು ವಿಕಾರದಿಂದ ಹುಟ್ಟಿಕೊಂಡ ಮುಂತಾದ ರೋಗಗಳಿಗೆ ಅತ್ಯುತ್ತಮವಾಗಿ ಉಪಯೋಗಿಸುತ್ತದೆ.

ವಿಶೇಷವಾಗಿ ಹೆಂಗಸರಿಗೆ.— ಪ್ರಸೂತಿ ಆದನಂತರ (ದಿವ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿವಸದ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗಗಳು ಮುಂದೆ ಆಗದೆ ಮೊದಲಿನಂತೆ ನವತಾರುಣ್ಯವುಳ್ಳವರಾಗುತ್ತಾರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುವೆವು. ದೇಶಿಯವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬—೧೨—೦.
,, ಬಾಟ್ಲಿ ೧೨ಕ್ಕೆ ರೂ. ೧೨—೦—೦.

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಾದಿಚೂರ್ಣ, ಕುಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪ್ರಮೇಹಾರಿ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು.

ನಮ್ಮ ವಿಳಾಸ —

ಪಿ. ಅಚ್ಯುತ ಪಂಡಿತ,
ಮಾಲಕ,
'ಆಯುರ್ಧನ್ವಂತರಿ ಔಷಧಾಲಯ,'
ಪೋಸ್ಟ — **ಕುಮಟಾ.** (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!
ಸಮರ್ಪಕ ಆಡಳಿತದಿಂದ ಕಡಿಮೆಯಾದ ವ್ಯಯದಿಂದ, ಕ್ರಮ ಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ, ಉಚ್ಚ ಗೌರವವನ್ನೂ
ಸಂಪಾದಿಸಿರುವ ಕನ್ನಡಿಗರದೇ ಆದ
ಮಂಗಳೂರಿನ
ಪಾಪ್ಯುಲರ್ ಇನ್ಸೂರೆನ್ಸ್ ಕೊ. ಲಿಮಿಟೆಡ್
ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!
ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ
ಮೊದಲಿನ ೫ ವರ್ಷಗಳ ಮೌಲ್ಯಮಾಪನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ
ವರ್ಷ ಒಂದರ ರೂ. 10 -ರ ಬೋನಸ್ ಹಂಚಲಾಗುವದು!
ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ,
ವ್ಯಾಪಕರೂ ಯೋಗ್ಯರೂ ಆದ ಏಜಂಟರು ಬೇಕು!
ಅವರಿಗೆ ವಿಪುಲವಾದ ಸೌಕರ್ಯಗಳ ಯಥೋಚಿತವಾದ — ಪುರಸ್ಕಾರಗಳ
ತಪ್ಪದೆ ವ್ಯವಹಾರ ಬೆಳಸಿರಿ
ಮುಂಬಯಿ ಶಾಖೆಯ ಮುಖ್ಯ ಏಜಂಟರ —
ಪ್ರಭಾಕರ ಕಂಪನಿ, 415 ಶೇಖ ಮೆಮನ್ ರಸ್ತೆ, ಮುಂಬಯಿ.
ಉತ್ತರ ಕನ್ನಡದ ಜಿಲ್ಲಾ ಚೀಫ ಏಜಂಟ ಸುಕರ್ಮ ಜೀವನ ಏಜನ್ಸಿ, ಕಾರವಾರ.

Established 1900 | ಓಂ | **FIXED RATE**

ದಾಸಪ್ಪಾ ಕೃಷ್ಣಪ್ಪಾ
ಧಾಕಪ್ಪನವರ ಬ್ರದರ್ಸ
ಇವರ ಒಂದೇ ದರದ ಅರಿವೆ ಅಂಗಡಿ, ಶಿರಸಿ

ನಮ್ಮಲ್ಲಿ ಮೇಲೆ ಮೇಲೆ ಬರುವ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ [illegible] ಖಣಗಳೂ, ಕೋಟಿಂಗ ಶರ್ಟಿಂಗ [illegible] ಫ್ಲಾನೆಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು [illegible] ಉಪ್ಪಿಗಳೂ ಧೋತರ ಜೋಡುಗಳೂ, ರೇಶ್ಮೆ ಪಿತಾಂಬರ [illegible] ಮುಂತಾದ ಎಲ್ಲ ತರದ ಜಮಖಾನೆ, ಕಬ್ಬಿಣದ ಮಜಬೂತ ಟ್ರಂಕುಗಳು ಛತ್ರಿಗಳೂ ಮತ್ತು ಎಲ್ಲಾ ತರದ ಮಾಲು ಆಬಾಲವೃದ್ಧರಿಗೂ ಮೋಸ ಹೋಗುವ ಭಯವಿಲ್ಲದೆ ಸ್ಥಾಯಿ ದರದಿಂದ ಸಿಗುವವು. ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು

Tel "Honesty'] **D K DHAKAPPA BROS.,**
Cloth Merchants,
SIRSI N KANARA

ಹೊಸ ಮಾಲು. | ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ ಜೀ. ಬೀ. ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟ ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರ ಗಳಿಗೆ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಡಮೋಹ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರೆಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ ಕಳಿಸಲಾಗದು. ಡಬ್ಬಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ಖರ್ಚ ಡಜನ್ ೧ಕ್ಕೆ ರೂ. ೨-೮-೦. ವಿ. ಪಿ. ೦-೬-೦
ದಯಮಾಡಿ ನಿಮ್ಮ ಹೆಸರನ್ನು ಅಡ್ರೆಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.
ವಿಳಾಸ— ಗುಂಟೂರು ಅಂಡ್ ಕಂಪನಿ ಲಿಮಿಟೆಡ್ ಪೋಸ್ಟ ಬಾಕ್ಸ ೫೧೦ ಮದರಾಸ [illegible]

ಇದನ್ನು ಪಾಂಡುರಂಗ ಕೃಷ್ಣ ವ್ಯಾಸಭಾಗ (ಸಂಪಾದಕ) ಇವರು ತಮ್ಮ 'ಸ್ಟಾರ್ ಆಫ್ ಕೆನರಾ ಪ್ರೆಸ್ಸಿ'ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. THE KANARA NEWS. Saturday, 28th Dec., '35.

ವರ್ಷ ೧೮

ಸಂಚಿಕೆ ೨೬

ಕಾನಡಾವೃತ್ತ

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವ ಸಂಚಿಕೆ.

-*(ಕುಮಟಾ— ಕಾನಡಾವೃತ್ತ, ಶನಿವಾರ ತಾರೀಖು ೨೮ ನೆಯ ಡಿಶಂಬರ ಸನ್ ೧೯೩೫ನೇ ಇಸವಿ.)*-

ರಾಷ್ಟ್ರಪತಿಗಳ ಪವಿತ್ರ ಸಂದೇಶ.

ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಮುಂಬಯಿಯಲ್ಲಿ ಈ ಹೊತ್ತು ಸುವರ್ಣ ಮಹೋತ್ಸವ ಸಮಾರಂಭದ ಸಮಯ ಅಪ್ಪಣೆ ಕೊಟ್ಟದ್ದೇನಂದರೆ—



ಐವತ್ತು ವರ್ಷಗಳ ಹಿಂದೆ ಇದೇ ದಿನ ಮುಂಬಯಿ ಪುರಿಯಲ್ಲಿ ರಾಷ್ಟ್ರೀಯ ಸಭೆಯ ಪ್ರಥಮ ಅಧಿವೇಶನ ಸೇರಿತ್ತು. ಅದಕ್ಕೆ ಅಲ್ಲಲ್ಲಿಂದ ಹಲ-ಕೆಲವು ಪ್ರತಿನಿಧಿಗಳಷ್ಟೇ ಬಂದಿದ್ದರು. ಲೋಕನಿಯುಕ್ತ ಪ್ರತಿನಿಧಿಗಳೆಂದು ಅವರಿಗೆ ಕರೆಯುವದು ಸಾಧ್ಯವಿದ್ದಿಲ್ಲ ಆದಾಗ್ಯೂ ಅವರು ಭಾರತೀಯ ಲೋಕಗಂಗೆಯ ಏಕನಿಷ್ಠ ಸೇವಕರಾಗಿದ್ದರೆಂಬುದು ಖಂಡಿತ ಮಾತು. ಈ ಪ್ರಥಮ ರಾಷ್ಟ್ರೀಯ ಸಭೆಯ ಮುಂದಿನ ಸ್ಪಷ್ಟ ಧ್ಯೇಯವಾದರೂ ಪ್ರಜಾಸ್ವಾತಂತ್ರ್ಯವೇ ಆಗಿತ್ತು. ಸ್ವಾತಂತ್ರ್ಯದ ವ್ಯಾಖ್ಯೆ ಮಾತ್ರ ಆಗ ಯಾರೂ ಮಾಡಿದ್ದಿಲ್ಲ. ಸ್ವಾತಂತ್ರ್ಯದ ಕಲ್ಪನೆಗೆ ಈಗ ಮೂರ್ತ ರೂಪ ದೊರೆತಿದೆ. ಪೂರ್ಣ ಸ್ವರಾಜ್ಯ ಯಾನೆ ಸಂಪೂರ್ಣ ಸ್ವಾತಂತ್ರ್ಯ ಇದೇ ಪ್ರಜಾ-ಸ್ವಾಧೀನತೆಯೆಂದು ಈಗ ಸ್ಪಷ್ಟವಾಗಿದೆ, ಜನರು ಆರಿಸಿಕೊಟ್ಟ ಪ್ರತಿನಿಧಿಗಳ ತಂತ್ರದಿಂದಲೇ ರಾಜ್ಯಭಾರ ನಡೆಯತಕ್ಕದೆಂಬುದು ಅದರ ಅರ್ಥ. ಯಾವುದೊಂದು ವಂಶದ, ವರ್ಗದ ಯಾ ಜಾತಿಯ ಸ್ವಾತಂತ್ರ್ಯವು ನಾವಳಿಸುವ ಸ್ವಾತಂತ್ರ್ಯವಲ್ಲ. ಅತಿ ದರಿದ್ರರಿಗೊಡಗೂಡಿ ಯಾವತ್ತರಿಗೂ ಸಿಗುವ ಸ್ವಾತಂತ್ರ್ಯವೇ ನಾವಿಚ್ಛಿಸುವ ಸ್ವಾತಂತ್ರ್ಯವು! ಜನಸಾಮಾನ್ಯರ ಸುಲಿಗೆಯನ್ನು ನಿಲ್ಲಿಸಬೇಕಾದರೆ ರಾಜಕೀಯ ಸ್ವಾತಂತ್ರ್ಯದೊಂದಿಗೆ ನಿಜವಾದ ಆರ್ಥಿಕ ಸ್ವತಂತ್ರ್ಯವೂ ಸಿಗಬೇಕು. ಆ ಧ್ಯೇಯ ಸಾಧಿಸಲಿಕ್ಕೆ ಅವಶ್ಯವಿರುವ ಸಾಧನಗಳೂ ಈಗ ಪೂರ್ಣ ನಿಶ್ಚಿತವಾಗಿವೆ. ಅವು ನ್ಯಾಯ ಹಾಗು ಶಾಂತಿಮಯವಿರತಕ್ಕದ್ದು. ಸಾರಾಸಾರ ವಿಚಾರ ಮಾಡಿಯೇ ರಾಷ್ಟ್ರೀಯ ಸಭೆಯವರು ೧೯೨೦ರಿಂದ ಇಂಥ ಸಾಧನಗಳನ್ನು ಅಂಗೀಕರಿಸಿದ್ದಾರೆ. ಈ ಸಾಧನಗಳ ಅತ್ಯುಗ್ರ ಸ್ವರೂಪದಲ್ಲಿ ಶಾಂತಿಪೂರ್ಣ ಅಸಹಕಾರ ಮತ್ತು ಶಾಂತತಾಮಯ ಪ್ರತೀಕಾರ ಇವುಗಳ ಸಮಾವೇಶವಾಗುತ್ತಿದ್ದು, ಈ ಸಾಧನಗಳಿಂದ ಹೋರಾಡಿ ಸಹಸ್ರಾವಧಿ ಸ್ತ್ರೀ-ಪುರುಷರು ಬಂದಿವಾಸ ಅನುಭವಿಸಿದ್ದಾರೆ, ಆಸ್ತಿ-ಪಾಸ್ತಿಗಳನ್ನು ಕಳಕೊಂಡಿದ್ದಾರೆ, ತಮ್ಮ ಪ್ರೀತಿಯ ವಸ್ತುಗಳ ಮೇಲೆ ಧಾರೆ ನೀರು ಎರೆದಿದ್ದಾರೆ. ಬಹಳ ಜನರು ಗುಂಡಿನೇಟು, ಲಾಠಿ ಪ್ರಹಾರ ಮುಂತಾದವುಗಳಿಗೆ ಇದಿರಾಗಿ ದೇಹದಂಡನೆ ಅನುಭವಿಸಿದ್ದಾರೆ! ಪ್ರಾಣವನ್ನೂ ಕಳಕೊಂ '' ಲೋಕಪ್ರಸಿದ್ಧ ಕಾರಣಗಳ ಮೂಲಕ ಈಗ ನಿಃಶಸ್ತ್ರ ಪ್ರತಿಕಾರ ನಿಲ್ಲಿಸಲ್ಪಟ್ಟಿದೆ.

ಪ್ರಾರಂಭದಲ್ಲಿ ಸಣ್ಣದೊಂದು ಸಂಸ್ಥೆಯಾಗಿದ್ದ ರಾಷ್ಟ್ರೀಯ ಸಭೆಯು ಈಗ ವಿರಾಟ್‌ಸ್ವರೂಪ ತಾಳಿದೆ, ಹಿಂದೀ ಜನತೆಯ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಆಸೇತುಹಿಮಾಚಲ ಅದರ ಶಾಖೆಗಳು ಹಬ್ಬಿಕೊಂಡಿವೆ. ಕಾನೂನು ಮಂಡಳಗಳಲ್ಲಿ ಪ್ರವೇಶ, ಕೈನೂಲು-ಕೈಮಗ್ಗಗಳ ಪುನರುಜ್ಜೀವನ, ಹಳ್ಳಿಗಳೊಳಗಿನ ಸಣ್ಣ ಸಣ್ಣ ಉಪಯುಕ್ತ ಉದ್ದಿಮೆಗಳ ಉದ್ಧಾರ, ಹಳ್ಳಿಗಳ ಪುನರ್ಘಟನೆ, ಹಳ್ಳಿ ಜನರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಆರೋಗ್ಯ-ವಿಷಯಕ ಸುಧಾರಣೆ, ಸಂಪೂರ್ಣ ಮದ್ಯಪಾನ ನಿರೋಧನ, ರಾಷ್ಟ್ರೀಯ ಶಿಕ್ಷಣ ಪ್ರಸಾರ, ಅಸ್ಪೃಶ್ಯತೆಯ ಉಚ್ಚಾಟನ, ಜಾತಿ ಜಾತಿಗಳೊಳಗಿನ ಐಕ್ಯಸಾಧನೆ, ಪ್ರಾಯಸ್ಥ ಸ್ತ್ರೀ-ಪುರುಷರಲ್ಲಿ ಉಪಯುಕ್ತ ಜ್ಞಾನದ ಪ್ರಸಾರಣ, ಔದ್ಯೋಗಿಕ ಕೂಲಿಕಾರರ ಹಾಗು ಒಕ್ಕಲಿಗರ ಸಂಘಟಣೆ ಮತ್ತು ಗ್ರಾಮೋದ್ಯೋಗಗಳ ಪುನರುಜ್ಜೀವನದಿಂದ ಅವರ ಆರ್ಥಿಕ ಜೀವನದ ಸಂಸ್ಕರಣ ಇವೇ ಈಗಿನ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಅಂಗಗಳಾಗಿವೆ.

ಈ ರೀತಿ ರಾಷ್ಟ್ರೀಯ ಸಭೆಯ ಕಾರ್ಯಕ್ರಮವು ಸರ್ವ ವ್ಯಾಪಿಯಾಗಿದೆ. ಉತ್ತಮೋತ್ತಮ ಭಾರತೀಯ ಸ್ತ್ರೀ-ಪುರುಷರು ಈ ಕಾರ್ಯಕ್ರಮವನ್ನು ನಿಷ್ಠೆಯಿಂದ ಅನುಸರಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಶಿರಸಾ ವಹಿಸಿ ತ್ಯಾಗಬುದ್ಧಿಯಿಂದ ಜನಸಾಮಾನ್ಯರು ಈ ಕಾರ್ಯಕ್ರಮವನ್ನು ಆನಂದದಿಂದ ಕೈಕೊಂಡಿದ್ದಾರೆ. ರಾಷ್ಟ್ರೀಯ ಸಭೆಯು ಮಾಡಿರುವ ಕಾರ್ಯವು ನಿಜವಾಗಿ ಅಭಿಮಾನಾಸ್ಪದವಿದೆ. ಆದರೂ ಆನಂದೋತ್ಸವದ ಸಮಯವಿದಲ್ಲ, ವಿಶ್ರಮಿಸುವ ಕಾಲವೂ ಇದಲ್ಲ! ಇನ್ನೂ ಸಾಧಿಸಬೇಕಾದ ಕೆಲಸ ಬಹಳವಿದೆ. ನಾವು ಇದಕ್ಕೆ ತಾಳ್ಮೆಯಿಂದ ದುಡಿಯಬೇಕು. ಪರಾಕಾಷ್ಠೆಯ ಸ್ವಾರ್ಥತ್ಯಾಗ ಮಾಡಲು ಸಿದ್ಧರಿರಬೇಕು. ದೃಢನಿಶ್ಚಯದಿಂದ ಕಾದಾಡಲು ಸನ್ನದ್ಧರಾಗಬೇಕು.

ಈಗ ನಾವು ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಆತ್ಮಾರ್ಪಣೆ ಮಾಡಿದ, ನಾನಾ ತರದ ಕಷ್ಟಗಳನ್ನನುಭವಿಸಿದ, ಈಗಲೂ ಮಾತೃಭೂಮಿಯ ಪ್ರೇಮಕ್ಕಾಗಿ ಇನ್ನೂ ಬಳಲುತ್ತಿರುವ, ಯಾವತ್ತೂ ಜ್ಞಾತ ಅಜ್ಞಾತ ಸ್ತ್ರೀ ಪುರುಷ ಬಾಲಕ-ಬಾಲಕಿಯರಿಗೆ ವಂದನೆಗಳನ್ನರ್ಪಿಸಬೇಕಾಗಿದೆ. ಈ ವಿರಾಟ್ ಸಂಸ್ಥೆಯ ಬೀಜಗಳನ್ನು ಬಿತ್ತಿ, ಅವಿಶ್ರಾಂತ ಶ್ರಮದಿಂದ ಅದನ್ನು ಸಾಕಿ ಸಲಹಿದ ಮಹಾನುಭಾವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ.

೫೦ ವರುಷಗಳ ಹಿಂದೆ ನೆಟ್ಟ ಈ ಸಣ್ಣ ಬೀಜವು ಇಂದಿಗೆ ಅತಿ ವಿಸ್ತೀರ್ಣವಾದ ದೇಶದ ಸಂದಿಗೊಂದಿಗಳಲ್ಲಿ ಶಾಖೋಪಶಾಖೆಗಳಿಂದ ಹಬ್ಬಿಕೊಂಡ ಅತಿ ಪ್ರಚಂಡ ವೃಕ್ಷವಾಗಿ ನಿಂತಿದೆ. ಅಗಣ್ಯ ಸ್ತ್ರೀ-ಪುರುಷರ ತ್ಯಾಗದ ಪುಷ್ಪಗಳು ಅದಕ್ಕೆ ಹಿಡಿದಿವೆ. ಏಕನಿಷ್ಠ ಸೇವೆಯಿಂದ ಅದನ್ನು ಈ ಮುಂದೆ ಪೋಷಿಸಿ ಅದಕ್ಕೆ ಬೇಗನೆ ಫಲಗಳು ಬರುವಂತೆ ಮತ್ತು ಭಾರತವರ್ಷವು ನಿಸರ್ಗ ನಿಯಮದಂತೆ ಸ್ವತಂತ್ರ ಹಾಗು ವೈಭವಸಂಪನ್ನ ರಾಷ್ಟ್ರವಾಗುವಂತೆ ಯತ್ನಿಸುವದು ಇನ್ನು ಬದುಕುಳಿದ ನಮ್ಮೆಲ್ಲರ ಕರ್ತವ್ಯವಾಗಿದೆ. ಗತಕಾಲದ ಸ್ಮರಣೆ ಮಾಡಿ, ಲೋಕಮಾನ್ಯರು ಸಾರಿದಂತೆ, ನಮ್ಮ ಜನ್ಮಸಿದ್ಧ ಹಕ್ಕಾದ ಸಂಪೂರ್ಣ ಸ್ವರಾಜ್ಯವನ್ನು ಸಂಪಾದಿಸಿಯೇ ತೀರುವೆವೆಂದು ಇನ್ನೊಮ್ಮೆ ದೃಢ ಸಂಕಲ್ಪ ಮಾಡುವದೇ ಇಂದಿನ ನಮ್ಮ ಕರ್ತವ್ಯವು.

— ಬಾಬು ರಾಜೇಂದ್ರ ಪ್ರಸಾದ.

ಹಿಂದೀ ರಾಷ್ಟ್ರೀಯ ಮಹಾಸಭೆಯ ಮಾಹಿತಿಯ ಕೋಷ್ಟಕ.

ಅಧಿವೇಶನ ಕ್ರಮಾಂಕ	ತಾರೀಖು	ಸಭೆ ಸೇರಿದ ಪಟ್ಟಣ	ಸ್ವಾಗತ ಸಮಿತಿಯ ಅಧ್ಯಕ್ಷರು	ಮಹಾಸಭೆಯ ಅಧ್ಯಕ್ಷರು	ಪ್ರತಿನಿಧಿಗಳ ಸಂಖ್ಯೆ
೧	೨೮—೧೨—೧೮೮೫	ಮುಂಬಯಿ	ಏ. ಓ. ಹ್ಯೂಮ	ಉಮೇಶಚಂದ್ರ ಬಾನರ್ಜಿ	೭೨
೨	೨೭—೧೨—೧೮೮೬	ಕಲಕತ್ತಾ	ಡಾ| ರಾಜೇಂದ್ರಲಾಲ ಮಿತ್ರ	ದಾದಾಭಾಯಿ ನವರೋಜಿ	೪೩೬
೩	೨೮—೧೨—೧೮೮೭	ಮದ್ರಾಸ	ಸರ್ ಟಿ ಮಾಧವರಾವ	ಬದ್ರುದ್ದೀನ ತಯ್ಯಬಜಿ	೬೦೭
೪	೨೬—೧೨—೧೮೮೮	ಅಲಹಾಬಾದ	ಪಂಡಿತ ಅಯೋಧ್ಯಾನಾಥ	ಜಾರ್ಜ ಯೂಲ.	೧೨೪೮
೫	೨೬—೧೨—೧೮೮೯	ಮುಂಬಯಿ	(ಸರ್) ಫಿರೋಜಶಹಾ ಮೆಹತಾ	ಸರ್ ವಿಲಿಯಮ್ ವೆಡರ್ಬರ್ನ್	೧೮೮೯
೬	೨೬—೧೨—೧೮೯೦	ಕಲಕತ್ತಾ	ಮನಮೋಹನ ಘೋಷ	ಸರ್ ಫಿರೋಜಶಹಾ ಮೆಹತಾ	೬೭೭
೭	೨೮—೧೨—೧೮೯೧	ನಾಗಪೂರ	ಸಿ. ನಾರಾಯಣಸ್ವಾಮಿ ನಾಯಡು	ಪಿ| ಆನಂದಾ ಚಾರ್ಲು	೮೧೨
೮	೨೮—೧೨—೧೮೯೨	ಅಲಹಾಬಾದ	ಪಂ| ವಿಶ್ವಂಭರನಾಥ	ಉಮೇಶಚಂದ್ರ, ಬಾನರ್ಜಿ (೨)	೬೨೫
೯	೨೭—೧೨—೧೮೯೩	ಲಾಹೋರ	ಸರದಾರ ದಯಾಳಸಿಂಗ	ದಾದಾಭಾಯಿ ನವರೋಜಿ (೨)	೮೬೭
೧೦	೨೬—೧೨—೧೮೯೪	ಮದ್ರಾಸ	ಡಾ| ಪಿ. ಆರ್. ನಾಯಡು	ಆಲ್ಫ್ರೆಡ್ ವೆಬ್ಬ	೧೧೬೩
೧೧	೨೭—೧೨—೧೮೯೫	ಪುಣೆ	ರಾ| ಬ| ಎಸ್. ಎಮ್. ಭಿಡೇ	(ಸರ್) ಸುರೇಂದ್ರನಾಥ ಬಾನರ್ಜಿ	೧೫೮೪
೧೨	೨೮—೧೨—೧೮೯೬	ಕಲಕತ್ತಾ	ಸರ್ ರಮೇಶಚಂದ್ರ ಮಿತ್ರ	ಎಮ್. ಆರ್. ಸಯಾನಿ	೭೮೪
೧೩	೨೭—೧೨—೧೮೯೭	ಉಮರಾವತಿ	ಗಣೇಶ ಶ್ರೀಕೃಷ್ಣ ಖಾಪರ್ಡೆ	(ಸರ್) ಶಂಕರನ್ ನಾಯರ	೬೯೨
೧೪	೨೯—೧೨—೧೮೯೮	ಮದ್ರಾಸ	ಎನ್. ಸುಬ್ಬರಾವ ಪಂತಲು	ಆನಂದ ಮೋಹನ ಬೋಸ	೬೧೪
೧೫	೨೭—೧೨—೧೮೯೯	ಲಖನೌ	ಬಾಬು ಬಿನ್ನಿಲಾಲ ಸಿಂಗ	ರಮೇಶಚಂದ್ರ ದತ್ತ	೭೮೯
೧೬	೨೭—೧೨—೧೯೦೦	ಲಾಹೋರ	ರಾಯಬಹಾದ್ದೂರ ಕಾಲಿಪ್ರಸನ್ನರಾಯ	(ಸರ್) ನಾರಾಯಣರಾವ ಚಂದಾವರಕರ	೫೬೭
೧೭	೨೬—೧೨—೧೯೦೧	ಕಲಕತ್ತಾ	ಮಹಾರಾಜಬಹಾದ್ದೂರ ಜಗದೀಂದ್ರನಾಥರಾಯ	(ಸರ್) ದಿನಶಾ ಎದಲಜಿ ವಾಚ್ಛಾ	೮೯೬
೧೮	೨೩—೧೨—೧೯೦೨	ಅಹಮದಾಬಾದ	ದಿ| ಬ| ಅಂಬಾಲಾಲ ಸಾಕರಲಾಲ	(ಸರ್) ಸುರೇಂದ್ರನಾಥ ಬಾನರ್ಜಿ (೨)	೪೭೧
೧೯	೨೮—೧೨—೧೯೦೩	ಮದ್ರಾಸ	ನಾ| ನವಾಬ ಸಯ್ಯದ ಮಹಮ್ಮದ	ಲಾಲ ಮೋಹನ ಘೋಷ	೫೩೮
೨೦	೨೬—೧೨—೧೯೦೪	ಮುಂಬಯಿ	ಸರ್ ಫಿರೋಜಶಹಾ ಮೆಹತಾ	ಸರ್ ಹೆನ್ರಿ ಕೊಟನ್	೧೦೧೦
೨೧	೨೭—೧೨—೧೯೦೫	ಬನಾರಸ	ಮುನಶಿ ಮಾಧವಲಾಲ	ನಾ| ಗೋಪಾಲಕೃಷ್ಣ ಗೋಖಲೆ	೭೫೬
೨೨	೨೬—೧೨—೧೯೦೬	ಕಲಕತ್ತಾ	(ಸರ್) ರಾಸ ಬಿಹಾರಿ ಘೋಷ	ದಾದಾಭಾಯಿ ನವರೋಜಿ (೩)	೧೬೬೩
೨೩	೨೬—೧೨—೧೯೦೭	ಸುರತ	ತ್ರಿಭುವನದಾಸ ಮಾಲವಿ	(ಸರ್) ರಾಸಬಿಹಾರಿ ಘೋಷ	೧೬೦೦
೨೪	೨೮—೧೨—೧೯೦೮	ಮದ್ರಾಸ	ದಿ| ಬ| ಕೇ. ಕೃಷ್ಣಸ್ವಾಮಿರಾವ	" "	೬೨೬
೨೫	೨೭—೧೨—೧೯೦೯	ಲಾಹೋರ	ಲಾಲಾ ಹರಕಿಸನಲಾಲ	ಪಂ| ಮದನಮೋಹನ ಮಾಲವೀಯ	೨೪೩
೨೬	೨೬—೧೨—೧೯೧೦	ಅಲಹಾಬಾದ	ನಾ| ಪಂ| ಸುಂದರಲಾಲ	ಸರ್ ವಿಲಿಯಮ್ ವೆಡರ್ಬರ್ನ (೨)	೬೩೬
೨೭	೨೬—೧೨—೧೯೧೧	ಕಲಕತ್ತಾ	(ಸರ್) ಭೂಪೇಂದ್ರನಾಥ ಬಸು	ಬಿಶನ್ ನಾರಾಯಣ ಧಾರ	೪೪೬
೨೮	೨೬—೧೨—೧೯೧೨	ಬಾಂಕಿಪೂರ	ಮಝರ್-ಅಲ್-ಹಕ್ಕ	ರಾ| ಬ| ಆರ್. ಎನ್. ಮುಧೋಳಕರ	೨೦೭
೨೯	೨೬—೧೨—೧೯೧೩	ಕರಾಚಿ	ನಾ| ಹರಚಂದರಾಯ ವಿಶಿನದಾಸ	ನಾ| ನವಾಬ ಸಯ್ಯದ ಮಹಮ್ಮದ	೩೪೯
೩೦	೨೮—೧೨—೧೯೧೪	ಮದ್ರಾಸ	ಸರ್ ಸುಬ್ರಹ್ಮಣ್ಯ ಅಯ್ಯರ	(ಸರ್) ಭೂಪೇಂದ್ರನಾಥ ಬಸು	೮೬೬
೩೧	೨೭—೧೨—೧೯೧೫	ಮುಂಬಯಿ	(ಸರ್) ದಿನಶಾ ವಾಚ್ಛಾ	(ಸರ್) ಸತ್ಯೇಂದ್ರ ಪ್ರಸನ್ನ ಸಿಂಹ	೨೨೫೯
೩೨	೨೬—೧೨—೧೯೧೬	ಲಖನೌ	ಪಂ| ಜಗತ್ ನಾರಾಯಣ	ಅಂಬಿಕಾಚರಣ ಮಝುಮದಾರ	೨೨೯೮
೩೩	೨೬—೧೨—೧೯೧೭	ಕಲಕತ್ತಾ	ರಾಯಬಹಾದ್ದೂರ ಬೈಕುಂಠನಾಥ ಸೇನ	ಡಾ| ಎನಿ ಬೇಝಂಟ	೪೯೬೭
೩೪	೨೯—೮—೧೯೧೮	ಮುಂಬಯಿ(ಸ್ಪೆಶಲ್)	ವಿಠ್ಠಲಭಾಯಿ ಪಟೇಲ	ಸಯ್ಯದ ಹುಸನ ಇಮಾಮ	೪೯೬೮
	೨೬—೧೨—೧೯೧೮	ದಿಲ್ಲಿ	ಹಕೀಮ ಅಜಮಲಖಾನ	ಪಂಡಿತ ಮದನಮೋಹನ ಮಾಲವೀಯ (೨)	೪೮೬೫
೩೫	೨೭—೧೨—೧೯೧೯	ಅಮೃತಸರ	ಸ್ವಾಮಿ ಶ್ರದ್ಧಾನಂದ	ಪಂ| ಮೋತಿಲಾಲ ನೆಹರು	೭೦೩೧
೩೬	೪—೯—೧೯೨೦	ಕಲಕತ್ತಾ(ಸ್ಪೆಶಲ್)	ಬ್ಯೋಮಕೇಶ ಚಕ್ರವರ್ತಿ	ಲಾಲಾ ಲಜಪತರಾಯ	೩೬೩೦
	೨೬—೧೨—೧೯೨೦	ನಾಗಪೂರ	ಶೇಟ ಜಮನಾಲಾಲ ಬಜಾಜ	ಸಿ| ವಿಜಯ ರಾಘವಾಚಾರ್ಯ	೧೪೫೮೨
೩೭	೨೭—೧೨—೧೯೨೧	ಅಹಮದಾಬಾದ	ಸರದಾರ ವಲ್ಲಭಭಾಯಿ ಪಟೇಲ	ಹಕೀಮ ಅಜಮಲಖಾನ	೬೨೩೪
೩೮	೨೬—೧೨—೧೯೨೨	ಗಯಾ	ವ್ರಜಕಿಶೋರ ಪ್ರಸಾದ	ದೇಶಬಂಧು ಚಿತ್ತರಂಜನದಾಸ	೩೫೩೬
೩೯	೧೫—೯—೧೯೨೩	ದಿಲ್ಲಿ(ಸ್ಪೆಶಲ್)	ಡಾ| ಎಮ್. ಎ. ಅನ್ಸಾರಿ	ಮೌ| ಅಬುಲ ಕಲಮ ಆಝಾದ	೨೦೦೦
	೨೮—೧೨—೧೯೨೩	ಕಾಕಿನಾಡ	ಕೊಂಡ ವೆಂಕಟಪಯ್ಯಾ	ಮೌಲಾನಾ ಮಹಮ್ಮದ ಅಲ್ಲಿ	೧೬೬೧
೪೦	೨೬—೧೨—೧೯೨೪	ಬೆಳಗಾಂವ	ಗಂಗಾಧರರಾವ ದೇಶಪಾಂಡೇ	ಮಹಾತ್ಮಾ ಗಾಂಧಿ	೧೮೪೪
೪೧	೨೬—೧೨—೧೯೨೫	ಕಾನಪೂರ	ಡಾ| ಮುರಾರಿಲಾಲ	ಸೌ| ಸರೋಜಿನೀ ನಾಯಡು	೨೬೫೮
೪೨	೨೬—೧೨—೧೯೨೬	ಗೋಹತ್ತಿ	ಟೀ. ಆರ್. ಫೂಕನ್	ಶ್ರೀನಿವಾಸ ಅಯ್ಯಂಗಾರ	೧೬೩೯
೪೩	೨೬—೧೨—೧೯೨೭	ಮದ್ರಾಸ	ಸಿ. ಎನ್. ಮುದಲಿಯಾರ	ಡಾ| ಎಮ್. ಎ. ಅನ್ಸಾರಿ	೨೬೬೩
೪೪	೨೯—೧೨—೧೯೨೮	ಕಲಕತ್ತಾ	ಜೇ. ಎಮ್. ಸೇನಗುಪ್ತ	ಪಂ| ಮೋತಿಲಾಲ ನೆಹರು (೨)	೩೧೦೦
೪೫	೨೯—೧೨—೧೯೨೯	ಲಾಹೋರ	ಡಾ| ಕಿಚಲೂ	ಪಂ| ಜವಾಹಿರಲಾಲ ನೆಹರು	೧೬೦೦
೪೬	೨೯—೩—೧೯೩೧	ಕರಾಚಿ	ಡಾ| ಚೊಯ್ತರಾಮ ಗಿಡವಾನಿ	ಸರದಾರ ವಲ್ಲಭಭಾಯಿ ಪಟೇಲ	೫೩೦೦
೪೭	೨೬—೧೦—೧೯೩೪	ಮುಂಬಯಿ	ವೀರ ಖುರ್ಶೇದ ನರಿಮಾನ	ಬಾಬು ರಾಜೇಂದ್ರ ಪ್ರಸಾದ	.....

ಟಿಪ್ಪಣಿ:- ೧೯೨೯ರ ಸಭೆಯಲ್ಲಿ ಮುಂದಿನ ಸಭೆಗಳನ್ನು ಫೆಬ್ರುವರಿ ಯಾ ಮಾರ್ಚ ತಿಂಗಳಲ್ಲಿ ನೆರೆಯಿಸಬೇಕೆಂದು ನಿರ್ಣಯವಾಗಿತ್ತು. ಆ ಮೂಲಕ ೧೯೩೦ರಲ್ಲಿ ಕೊಂಗ್ರೆಸ್ಸು ಕೂಡಲಿಲ್ಲ. ೧೯೩೨ರಲ್ಲಿ ಜಗನ್ನಾಥಪುರಿಯಲ್ಲಿ ಕೊಂಗ್ರೆಸ್ಸು ಕೂಡಿಸುವ ಬಗ್ಗೆ ಸಿದ್ಧತೆಗಳು ಆಗಿದ್ದವು. ಆದರೆ ಆದು ಸತ್ಯಾಗ್ರಹ ಕಾಲವಾದ್ದರಿಂದ ಅರಸರು ಕೊಂಗ್ರೆಸ ಕೂಡಿಸಲಿಕ್ಕೆ ಅಡ್ಡಿ ಮಾಡಿದರು. ಆದಾಗ್ಯೂ ೧೯೩೨ ಎಪ್ರಿಲ ತಿಂಗಳಲ್ಲಿ ದಿಲ್ಲಿಯಲ್ಲಿ ಸತ್ಯಾಗ್ರಹದ ಅಂಗವೆಂದು ಕೊಂಗ್ರೆಸ್ಸು ಕೂಡಿಸಬೇಕೆಂದು ನಿರ್ಣಯವಾಯಿತು. ಪಂ| ಮಾಲವೀಯರು ಅಧ್ಯಕ್ಷರಾಗಲು ಒಪ್ಪಿಕೊಂಡು ದಿಲ್ಲಿಗೆ ಬರಲು ಹೊರಟಿದ್ದರು. ಹಾದಿಯಲ್ಲೇ ಅವರಿಗೆ ಸೆರೆಯಾಯಿತು. ನೆರೆದ ಪ್ರತಿನಿಧಿಗಳು ಅಹಮದಾಬಾದಿನ ಶ್ರೀ| ರಣಛೋಡದಾಸ ಅಮೃತಲಾಲ ಇವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ೬—೭ ಠರಾವುಗಳನ್ನು ಮಾಡಿದರು. ಅಷ್ಟರಲ್ಲಿ ಪೋಲೀಸರು ಬಂದು ಪ್ರತಿನಿಧಿಗಳನ್ನೆಲ್ಲ ಕೈದು ಮಾಡಿದರು. ೧೦ ನಿಮಿಷಗಳಲ್ಲಿ ಕೊಂಗ್ರೆಸ್ಸು ಮುಗಿಯಿತು! ಮರುವರುಷ ೧೯೩೩ರಲ್ಲಿ ಕಲಕತ್ತೆಯಲ್ಲಿ ಇದೇ ತರದ ಕೊಂಗ್ರೆಸ್ಸು ಶ್ರೀಮತಿ ನೇಲಿ ಸೇನಗುಪ್ತರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಅರಸರು ಜಾಹೀರಾದ ಕೊಂಗ್ರೆಸ ಅಧಿವೇಶನಕ್ಕೆ ಹೋಗುತ್ತಾರೆಂದು ಸಂಶಯ ಬಂದ ಪ್ರಯಾಣಿಕರಿಗೆಲ್ಲ ಹಾದಿಯಲ್ಲೇ ಸೆರೆಹಿಡಿದು ಹಾಕಿದರು. ಆದರೂ ೧೦೦-೨೦೦ ಪ್ರತಿನಿಧಿಗಳು ಕಲಕತ್ತೆಗೆ ಮುಟ್ಟಿ ರೇಲ್ವೆ ನಿಲ್ದಾಣದ ಬಳಿ ಅಧಿವೇಶನ ಕೂಡಿಸಿಯೇ ಬಿಟ್ಟರು. ೫-೬ ನಿಮಿಷಗಳಲ್ಲಿ ಪೋಲೀಸರು ಬಂದು ಅವರನ್ನು ಬಂಧಿಸಿದರು. ೧೯೩೪ರಲ್ಲಿ ರಾಷ್ಟ್ರೀಯ ಸಭೆ ಮಾಡಲಿಕ್ಕೆ ತಯಾರಿಯಿದ್ದಿಲ್ಲ. ಮುರಿದು ಹೋದ ಕಮಿಟಿಗಳ ಪುನರ್ಘಟನೆ ಮಾಡಬೇಕಾಗಿತ್ತು. ಸಂಯುಕ್ತ ಪಾರ್ಲಿಮೆಂಟರಿ ಕಮಿಟಿಯ ವರದಿ ಪ್ರಕಟವಾದ ಮೇಲೆ ಅಧಿವೇಶನ ಮಾಡಬೇಕೆಂಬ ಕಲ್ಪನೆಯೂ, ಕೊಂಗ್ರೆಸ ಅಧಿವೇಶನ ಮುಂದೂಡಲಿಕ್ಕೆ ಕಾರಣವಾಗಿತ್ತು. ಕೊನೆಗೆ ೧೯೩೪ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ರಾಷ್ಟ್ರೀಯ ಸಭೆಯು ಮುಂಬಯಿಯಲ್ಲಿ ಸೇರಿತು. ಈ ಅಧಿವೇಶನದ ಸ್ವಾಗತವೂ ವೈಶಿಷ್ಟ್ಯವೂ ಇನ್ನೂ ಮರೆಯಲಾಗಿಲ್ಲವಷ್ಟೇ!

ರಾಷ್ಟ್ರಪತಿಗಳ ಅಲ್ಪ ಪರಿಚಯ.

ಉಮೇಶಚಂದ್ರ ಬಾನರ್ಜೀ.– ಮುಂಬಯಿಯಲ್ಲಿ ಕೂಡಿದ ಮೊದಲನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರು. ಬಂಗಾಲದೊಳಗಿನ ಮೊದಲನೇ ಹಿಂದೀ ಬೆರಿಸ್ಟರರು. ಹಾಯಕೋರ್ಟಿನ ನ್ಯಾಯಾಧೀಶಪದವನ್ನು ಕೊಡಮಾಡಿದರೂ ಸ್ವೀಕರಿಸಲಿಲ್ಲ. ಧೈರ್ಯುಳ್ಳವರೂ ಬುದ್ಧಿವಂತರೂ ಆಗಿದ್ದರು. "ಶಾಪಭ್ರಷ್ಟ ದೇವದೂತ"ರೆಂದು ಇವರಿಗೆ ಕರೆಯುತ್ತಿದ್ದರು ೧೮೯೨ರಲ್ಲಿ ಪ್ರಯಾಗದಲ್ಲಿ ಸೇರಿದ ೮ನೇ ರಾಷ್ಟ್ರೀಯ ಸಭೆಗೆ ಇನ್ನೊಮ್ಮೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ವೃದ್ಧಾಪ್ಯದಲ್ಲಿ ವಿಲಾಯತಿಗೆ ಹೋಗಿ ಪ್ರಿವ್ಹಿ ಕೌನ್ಸಿಲಿನ ಮುಂದೆ ವಕೀಲಿ ನಡೆಸುತ್ತಿದ್ದರು. ಅಲ್ಲಿಯೂ ಹಿಂದುಸ್ಥಾನದ ಪರವಾಗಿ ವ್ಯಾಖ್ಯಾನ ಮುಂತಾದವುಗಳನ್ನು ಕೊಟ್ಟು ಹೋರಾಡುತ್ತಿದ್ದರು.

ದಾದಾಭಾಯಿ ನವರೋಜಿ:– ಇವರಿಗೆ ರಾಜಕಾರಣಿಗಳು ವೃದ್ಧ ಪಿತಾಮಹರೆಂದು ಸಂಬೋಧಿಸುತ್ತಿದ್ದರು ಇದರ ಮೇಲಿಂದಲೇ ರಾಜಕಾರಣದೊಳಗಿನ ಅವರ ಸ್ಥಾನದ ಅರಿವು ಆಗುತ್ತದೆ. ೧೮೨೫ರಲ್ಲಿ ಇವರ ಜನ್ಮ. ತಾರುಣ್ಯದಲ್ಲಿ ಶಿಕ್ಷಕರೂ ಪ್ರೊಫೆಸರರೂ ಆಗಿ ಶಿಕ್ಷಣಸೇವೆ ಮಾಡಿದರು. ಸ್ತ್ರೀ-ಶಿಕ್ಷಣದ ಕೈವಾರಿಗಳು. ೧೮೫೫ರ ಸುಮಾರಿಗೆ ಕಾಮಾ ಕಂಪನಿಯ ಮನೇಜರರಾಗಿ ವಿಲಾಯತಿಗೆ ಹೋದರು. ಅಲ್ಲಿ 'ಈಸ್ಟ ಇಂಡಿಯಾ ಎಸೋಸಿಯೇಶನ' ಎಂಬ ಸಂಘವನ್ನು ಸ್ಥಾಪಿಸಿ ವಿಲಾಯತಿಯ ಜನರಲ್ಲಿ ಹಿಂದುಸ್ಥಾನದ ಬಗ್ಗೆ ಜಾಗೃತಿ ಮಾಡಹತ್ತಿದರು. ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಹಿಂದುಸ್ಥಾನದಲ್ಲೇ ಕೊಳ್ಳಬೇಕೆಂತಲೂ, ಉಚ್ಚ ಅಧಿಕಾರಸ್ಥಾನಗಳಲ್ಲಿ ಹಿಂದೀ ಜನರ ಸಮಾವೇಶ ಮಾಡಬೇಕೆಂತಲೂ ಚಳವಳಿ ಮಾಡಿ ಆ ಬಗ್ಗೆ ಘೋರ ಪ್ರಯತ್ನ ನಡೆಸಿದರು. ೧೮೭೦ರ ಸುಮಾರಿಗೆ ಮುಂಬಯಿಗೆ ಬಂದು ಮುಂಬಯಿ ನಗರ ಸಭೆಯ ಸಭಾಸದರಾಗಿ ಬಹಳೇ ಸುಧಾರಣೆಗಳನ್ನು ಮಾಡಿದರು. ಹಿಂದೀ ಜನರ ದಾರಿದ್ರ್ಯದ ಮೇಲೆ ಅನೇಕ ನಿಬಂಧಗಳನ್ನು ಬರೆದರು. ರಾಷ್ಟ್ರೀಯ ಸಭೆಯ ಜನಕರಲ್ಲಿ ಇವರು ಅಗ್ರೇಸರರು ೧೮೯೨ರಲ್ಲಿ ವಿಲಾಯತಿಯ ಪಾರ್ಲಿಮೆಂಟಿನ ಸಭಾಸದರಾಗಿ ಆರಿಸಲ್ಪಟ್ಟರು. ಇವರು ೨ನೇ, ೯ನೇ ಹಾಗೂ ೨೨ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ೧೯೦೬ರಲ್ಲಿ ಮಂದಪಕ್ಷ-ತೀವ್ರಪಕ್ಷಗಳಲ್ಲಿ ಕಲಹಗಳುಂಟಾಗಿ ರಾಷ್ಟ್ರೀಯ ಅಧಿವೇಶನವು ಸುಸಂಗತವಾಗಿ ಪಾರಗಾಣುವ ಲಕ್ಷಣಗಳು ಕಾಣಹತ್ತದ್ದರಿಂದ ಉಭಯ ಪಕ್ಷಗಳಲ್ಲಿ ಐಕ್ಯಸಾಧನಗಳನ್ನು ಒದಗಿಸತರುವವರಾಗಿಯೇ ಇವರಿಗೆ ಮುದ್ದಾಂ ವಿಲಾಯತಿಯಿಂದ ಕರೆತಂದು ಅಧ್ಯಕ್ಷಪದದಲ್ಲಿ ಕೂಡಿಸಿದ್ದರು. ಅಧ್ಯಕ್ಷಪದದಿಂದ ಸ್ವರಾಜ್ಯವೇ ರಾಷ್ಟ್ರೀಯ ಸಭೆಯ ಧ್ಯೇಯವೆಂತಲೂ, ಎಲ್ಲ ರೋಗಗಳಿಗೂ ಸ್ವರಾಜ್ಯಪ್ರಾಪ್ತಿಯೇ ಮದ್ದೆಂತಲೂ ಇವರು ಅಧ್ಯಕ್ಷಪದದಿಂದ ಖಂಡತುಂಡವಾಗಿ ಸಾರಿದರು. ಇವರ ಪ್ರತಿಷ್ಠೆಯಿಂದಲೇ ಆ ವರ್ಷದ ರಾಷ್ಟ್ರೀಯ ಸಭೆಯು ಸುಸೂತ್ರವಾಗಿ ಪಾರುಗಂಡಿತು. ಇವರ ವಂಶಜರನೇಕರು ಇನ್ನೂ ರಾಷ್ಟ್ರೀಯ ಸಭೆಯ ಸೇವೆಯನ್ನು ಮಾಡುತ್ತಲಿದ್ದಾರೆ. ೬೦ ವರುಷಗಳ ತನಕ ಅಖಂಡ ದೇಶಸೇವೆ ಮಾಡಿ ೧೯೧೭ನೇ ಇಸ್ವಿಯಲ್ಲಿ ಪರಂಧಾಮವನ್ನೈದಿದರು.

ಬದ್ರುದ್ದಿನ ತಯ್ಯಬಜಿ:— ಇವರು ಮುಂಬಯಿ ಹಾಯಕೋರ್ಟಿನ ಸುವಿಖ್ಯಾತ ಬೆರಿಸ್ಟರರು. ನ್ಯಾ। ತೆಲಂಗ, ಸರ್ ಫಿರೋಜಶಹಾ ಮೆಹ್ತಾ ಇವರೊಡನೆ ಸೇರಿ ಮುಂಬಯಿಯ ರಾಜಕಾರಣದ ತ್ರಿಮೂರ್ತಿಗಳಲ್ಲೊಬ್ಬರಾಗಿದ್ದರು. ಮುಸಲ್ಮಾನರು ಜಾತಿಭೇದ ಮರೆತು ಕೊಂಗ್ರೆಸ್ಸಿನಲ್ಲಿ ಸೇರಬೇಕೆಂದು ಪ್ರಯತ್ನ ನಡೆಸಿದರು. ಮದ್ರಾಸಿನಲ್ಲಿ ಕೂಡಿದ ೩ನೇ ಅಧಿವೇಶನದ ಅಧ್ಯಕ್ಷಪದದ ಮಾನವು ಇವರಿಗೆ ಕೊಡಲ್ಪಟ್ಟಿತು. ರಾಷ್ಟ್ರೀಯ ಸಭೆಯ ಹುರುಪಿನ ಕಾರ್ಯಕರ್ತರನ್ನು ತಮ್ಮ ಜಾಲದಲ್ಲಿ ಸಿಲುಕಿಸಿಹಾಕುವ ಆ ಕಾಲದ ರಾಜ್ಯಕರ್ತರ ಧೋರಣವಿದ್ದಂತೆ ಇವರು ಮುಂದೆ ಮುಂಬಯಿ ಹಾಯಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟರು. ಇವರು ೧೯೦೬ರಲ್ಲಿ ಪರಲೋಕವಾಸಿಗಳಾದರು.

ಜೊರ್ಜ ಯೂಲ:— ೪ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರು. ಕಲಕತ್ತೆಯ ದೊಡ್ಡ ವ್ಯಾಪಾರಸ್ಥರು ಹಿಂದುಸ್ಥಾನದ ಬಗ್ಗೆ ಇವರಿಗೆ ಸಹಾನುಭೂತಿ ಬಹಳ. ಹಿಂದುಸ್ಥಾನದಲ್ಲಿರುವಾಗಲೂ, "ವಿಲಾಯತಿಗೆ ಮರಳಿಹೋದಮೇಲೂ ಹಿಂದೀ" ಜನರ ಹಕ್ಕು-ಬಾಧ್ಯತೆಗಳ ಬಗ್ಗೆ ಕಳಕಳಿಯಿಂದ ಹೋರಾಡುತ್ತಿದ್ದರು.

ಸರ್ ವಿಲಿಯಮ್ ವೆಡರಬರ್ನ:— ಮುಂಬಯಿ ಇಲಾಖೆಯ ಸಿವಿಲ್ ಸರ್ವಿಸಿನಲ್ಲಿ ಕೆಲಸ ಮಾಡಿ ಸೇವಾನಿವೃತ್ತರಾಗಿದ್ದರು. ನೌಕರರಿರುವಾಗಲೇ ಪ್ರಜೆಗಳ ಪರವಾಗಿ ಮೇಲಧಿಕಾರಿಗಳೊಡನೆ ಹೋರಾಡುತ್ತಿದ್ದರು; ಆದ್ದರಿಂದ ಇವರಿಗೂ ಬೇರೆ ಅಧಿಕಾರಿಗಳಿಗೂ ಕೂಡಿ ಬರುತ್ತಿದ್ದಿಲ್ಲ. ಸೇವಾನಿವೃತ್ತರಾದ ಮೇಲೆ ದಾದಾಭಾಯಿ ನವರೋಜಿ ಮತ್ತು ಹ್ಯೂಮ ಸಾಹೇಬರೊಡನೆ ಸಹಕಾರ ಮಾಡಿ ಕೊಂಗ್ರೆಸ ಸಂಸ್ಥೆಯನ್ನು ನಿರ್ಮಾಣ ಮಾಡಿದವರಲ್ಲಿ ಇವರೊಬ್ಬರು. ೧೮೮೯ರಲ್ಲಿ ಮುಂಬಯಿಯಲ್ಲಿ ಸೇರಿದ ೫ನೇ ಅಧಿವೇಶನದ ಅಧ್ಯಕ್ಷಸ್ಥಾನದ ಮಾನವು ಇವರಿಗೇ ದೊರೆಯಿತು ವಿಲಾಯತಿಯಲ್ಲಿ ಇವರು 'ಇಂಡಿಯಾ' ಎಂಬ ಪತ್ರವನ್ನು ಸ್ವಾರ್ಥತ್ಯಾಗಪೂರ್ವಕ ನಡೆಸಿ ಹಿಂದುಸ್ಥಾನದ ಸೇವೆ ಮಾಡಿದರು. ಪ್ರಯಾಗದಲ್ಲಿ ಸೇರಿದ ೨೫ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರ ಮಾನ ಇವರಿಗೇ ದೊರೆಯಿತು. ತೀವ್ರ-ಮಂದ ಪಕ್ಷಗಳಲ್ಲಿ ಐಕ್ಯ ಮಾಡುವ ಉದ್ದೇಶದಿಂದಲೇ ಮುದಿತನದಲ್ಲಿ ಹಿಂದುಸ್ಥಾನಕ್ಕೆ ಬಂದಿದ್ದರು. ದುರ್ದೈವದಿಂದ ಅವರ ಯತ್ನಗಳು ಆಗ ಯಶಸ್ವಿಯಾಗಲಿಲ್ಲ.

ಸರ್ ಫಿರೋಜಶಹಾ ಮೆಹ್ತಾ:— ಮುಂಬಯಿಯ ಸಿಂಹನೆಂದು ಖ್ಯಾತಿಗೊಂಡವರು ಮಂದಪಕ್ಷದವರಾದರೂ ಆಳರಸರಿಗೆ ತಲೆಬಗ್ಗಿಸದವರು. ತೆಲಂಗ, ತಯ್ಯಬಜಿಯವರೊಡನೆ ಮುಂಬಯಿಯ 'ಪ್ರೆಸಿಡೆನ್ಸಿ ಎಸೋಸಿಯೇಶನ್' ಸಂಸ್ಥೆಯನ್ನು ಸ್ಥಾಪಿಸಿದವರು. ವಿಖ್ಯಾತ ಬೆರಿಸ್ಟರರು. ಪ್ರಾರಂಭದಿಂದಲೇ ಕೊಂಗ್ರೆಸದಲ್ಲಿ ಸೇರಿ ಸಾಯುವ ತನಕ ರಾಷ್ಟ್ರೀಯ ಸಭೆಯ ಸೂತ್ರಗಳನು ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದರು ಮುಂಬಯಿ ನ. ಸಭೆಯ ಪ್ರತಿಷ್ಠೆ-ಉತ್ಕರ್ಷಗಳ ಆಧಾರಸ್ತಂಭರಿವರೇ ಎಂದು ಹೇಳಲಡ್ಡಿಯಿಲ್ಲ. ಇವರ ತೇಜಸ್ವಿ ಮೂರ್ತಿಯನ್ನೂ, ನವಾಬೀ ವೃತ್ತಿಯನ್ನೂ ನೋಡಿ ಸಾಧಾರಣ ಜನರು ಬೆದರುತ್ತಿದ್ದರು. ಇವರು ೧೯೧೫ರಲ್ಲಿ ದಿವಂಗತರಾದರು. ಕಲಕತ್ತೆಯಲ್ಲಿ ನೆರೆದ ೬ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು.

ರಾವಬಹಾದ್ದೂರ ಆನಂದಾಚಾರ್ಲು (ಮದ್ರಾಸ).— ಜನ್ಮತಃ ಶ್ರೀಮಂತರು, ಬುದ್ಧಿವಂತರು. 'ವರ್ಗದಲ್ಲಿ ಶಿಕ್ಷಕರು ಇಲ್ಲದಿದ್ದಾಗ್ಯೆ ಸಹಾಧ್ಯಾಯಿಗಳನ್ನು ಕಲಿಸುವಷ್ಟು ಯೋಗ್ಯತೆಯುಳ್ಳವರು. ಮುಂದೆ ವಕೀಲಿ ಮಾಡಿ ಹೇರಳ ಸಂಪಾದನೆ ಮಾಡಿದರು. ನಾಗಪುರದಲ್ಲಿ ಸೇರಿದ ೭ನೇ ಕೊಂಗ್ರೆಸ್ಸಿನ ಅಧ್ಯಕ್ಷರು.

ಆಲ್ಫ್ರೆಡ್ ವೆಬ್:— ಇವರು ಆಯರ್ಲಂಡದವರು, ಪಾರ್ಲಿಮೆಂಟದ ಸಭಾಸದರಾಗಿದ್ದರು. ಇವರಿಗೆ ಅನ್ಯಾಯ-ಜುಲುಮೆಗಳು ಸೇರುತ್ತಿದ್ದಿಲ್ಲ. ಆಯರ್ಲಂಡದವರಾದ್ದರಿಂದ ಸ್ವಾತಂತ್ರ್ಯ-ಪಾರತಂತ್ರ್ಯಗಳ ಸುಖ-ದುಃಖವನ್ನು ಚನ್ನಾಗಿ ಅರಿತಿದ್ದರು. ಹಿಂದುಸ್ಥಾನದ ಬಗ್ಗೆ ವಿಶೇಷ ಸಹಾನುಭೂತಿಯುಳ್ಳವರಾದ್ದರಿಂದ ಮದ್ರಾಸದಲ್ಲಿ ಸೇರಿದ ೧೦ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷಪದ ಇವರಿಗೆ ಕೊಡಲ್ಪಟ್ಟಿತು.

ಸುರೇಂದ್ರನಾಥ ಬಾನರ್ಜೀ— ಪ್ರಭಾವಿ ವಕ್ತೃತ್ವಶಾಲಿಗಳು, ಬಂಗಾಲದಿಂದ ಆಯ್. ಸಿ. ಎಸ್. ಪರೀಕ್ಷೆಗೆ ಹೋದವರಲ್ಲಿ ಇವರೇ ಮೊದಲು. ಸರಕಾರಿ ನೌಕರಿಯಲ್ಲಿ ಸೇರಿದ ೩ ವರ್ಷಗಳಲ್ಲಿಯೇ ಇವರು ಕೆಲವೊಂದು ಕಾರಣದಿಂದ ರಾಜೀನಾಮೆ ಕೊಡಬೇಕಾಯಿತು. ಅಂದಿನಿಂದ ವೃತ್ತಪತ್ರಗಳಿಂದಲೂ, ವ್ಯಾಖ್ಯಾನಗಳಿಂದಲೂ ಜನಜಾಗೃತಿಯನ್ನುಂಟು ಮಾಡಿದರು ಇವರ 'ಬಂಗಾಲಿ' ಪತ್ರ ಹೆಸರಾದ ವೃತ್ತಪತ್ರವು. ರಾಷ್ಟ್ರೀಯ ಸಭೆಯು ಜನ್ಮವೆತ್ತುವ ೪ ವರ್ಷಗಳ ಮುಂಚೆಯೇ ಕಲಕತ್ತಾ ಹಾಯಕೋರ್ಟಿನ ನ್ಯಾಯಾಧೀಶರ ಮೇಲೆ ಕಡುತರವಾದ ಟೀಕೆ ಮಾಡಿ ತುರಂಗಕ್ಕೆ ಹೋದ ವೀರಾಗ್ರಣಿಗಳು. ಕಲಕತ್ತೆಯಲ್ಲಿ ರಿಪನ್ ಕೊಲೇಜನ್ನು ಸ್ಥಾಪಿಸಿದರು ಇವರೇ. ರಾಷ್ಟ್ರೀಯ ಸಭೆಯ ಪೂರ್ವದಲ್ಲಿ ಬಂಗಾಲದಲ್ಲಿ ಪ್ರಾಂತಿಕ ಸಮ್ಮೇಲನಗಳನ್ನು ಕೂಡಿಸಲಾರಂಭಿಸಿ ರಾಷ್ಟ್ರೀಯ ಸಭೆಯ ಕಲ್ಪನೆಗೆ ಪ್ರೇರಣೆ ಕೊಟ್ಟ ಶ್ರೇಯಸ್ಸು ಇವರಿಗೇ ಸಲ್ಲತಕ್ಕದ್ದು, ಮೊದಲಿನಿಂದಲೂ ರಾಷ್ಟ್ರೀಯ ಸಭೆಯ ವ್ಯಾಸಪೀಠದ ಮೇಲೆ ತಮ್ಮ ಅಮೋಘ ವಕ್ತೃತ್ವದಿಂದ ದಂಗುಬಡಿಸಿದ ವೀರರು. ೧೮೯೫ರಲ್ಲೂ ೧೯೦೨ರಲ್ಲೂ ಹೀಗೆ ಎರಡಾವರ್ತಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ರಾಷ್ಟ್ರೀಯ ಸಭೆಯಲ್ಲಿ ಇವರು ಇರುವ ತನಕ ಅಧ್ಯಕ್ಷರ ಗೈರಹಾಜರಿಯಲ್ಲಿ ಅಧ್ಯಕ್ಷಸ್ಥಾನ ಸ್ವೀಕರಿಸುವ ಮಾನ ಇವರಿಗೇ ದೊರೆಯುತ್ತಿತ್ತು. ವಂಗ-ಭಂಗದ ತರುವಾಯ ವಿಲಾಯತಿಯಲ್ಲಿ ಜಾಗೃತಿಯನ್ನುಂಟು ಮಾಡಿ ವಂಗ-ಭಂಗವನ್ನು ರದ್ದುಪಡಿಸಲಿಕ್ಕೆ ಒತ್ತಾಯಪಡಿಸಿದ ಶ್ರೇಯಸ್ಸು ಬಹ್ವಂಶದಿಂದ ಇವರಿಗೇ ಸಲ್ಲತಕ್ಕದ್ದು. ಮೊಂಟಗ್ಯೂ ಸಾಹೇಬರ ಸುಧಾರಣೆಗಳು ಬಂದ ತರುವಾಯ ಇವರ ಮೊದಲಿನ ಹುರುಪು ಮಾಯವಾಯಿತು. ಬಾಬು ಸುರೇಂದ್ರನಾಥರು ಸರ್ ಸುರೇಂದ್ರರಾಗಿ ಬಂಗಾಲದ ದಿವಾಣರಾದರು. ೧೯೨೫ರಲ್ಲಿ ಸ್ವರ್ಗವಾಸಿಗಳಾದರು.

ರಹಿಮತುಲ್ಲಾ ಸಯಾನಿ:— ಮುಂಬಯಿಯ ಶ್ರೀಮಂತ ಖೋಜಾ ಮುಸಲ್ಮಾನರು ರಾಷ್ಟ್ರೀಯ ವೃತ್ತಿಯವರು. ಪ್ರಾಂತಿಕ ಹಾಗು ವರಿಷ್ಠ ಕಾನೂನು ಮಂಡಳಗಳಲ್ಲಿ ಸಭಾಸದರಾಗಿದ್ದರು. ಸಾರ್ವಜನಿಕ ಕಾರ್ಯಗಳಲ್ಲಿ ಸೇರಿ ಎಲ್ಲ ಜಾತಿಯವರಿಂದ ಮಾನ್ಯತೆ ಪಡೆದಿದ್ದರು. ೧೮೯೬ರಲ್ಲಿ ಕಲಕತ್ತೆಯೊಳಗೆ ಸೇರಿದ ರಾಷ್ಟ್ರೀಯ ಸಭೆಯ ಅಧ್ಯಕ್ಷರು.

ಸರ್ ಶಂಕರನ್ ನಾಯರ:— ಮಲಬಾರದ ನಾಯರ ಜಾತಿಯ ಬುದ್ಧಿಮಾನ್ ವಕೀಲರು. ರಾಷ್ಟ್ರೀಯ ಸಭೆಯಲ್ಲಿ ಸೇರಿ ಉತ್ಸಾಹದಿಂದ ಕೆಲಸ ಮಾಡಿದ್ದರಿಂದ ಅಮರಾವತಿಯಲ್ಲಿ ಸೇರಿದ ೧೩ನೇ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ಮುಂದೆ ಸರಕಾರದವರು ಇವರಿಗೆ ತಮ್ಮ ಬದಿಗೆ ಒಲಿಸಿಕೊಂಡು ಮೊದಲು ಮದ್ರಾಸ ಹಾಯಕೋರ್ಟಿನ ನ್ಯಾಯಾಧೀಶರಾಗಿಯೂ, ಮಹಾಯುದ್ಧದ ಕಾಲದಲ್ಲಿ ವ್ಹಾಯಸರಾಯರ ಕಾರ್ಯಕಾರಿ ಮಂಡಳದ ಸಭಾಸದರಾಗಿಯೂ ನೇಮಿಸಿದ್ದರು ಕಾರ್ಯಕಾರಿ ಸಭಾಸದರಿದ್ದಾಗ ಇವರು ಸ್ವತಂತ್ರ ವೃತ್ತಿಯಿಂದ ನಡೆಯುತ್ತಿದ್ದರೆಂದು ಬಲ್ಲವರು ಹೇಳುತ್ತಾರೆ. ೧೯೧೯ರಲ್ಲಿ ಪಂಜಾಬ ಪ್ರಕರಣದಿಂದಲೂ, ಆ ಕಾಲಕ್ಕೆ ಘಟಿಸಲ್ಪಡುತ್ತಿದ್ದ ಸುಧಾರಣೆಗಳ ವಿಷಯದಲ್ಲಿ ಹಿಂದುಸ್ಥಾನ ಸರಕಾರದ ಕೂಡ ಮತಭೇದ ಉಂಟಾದ್ದರಿಂದಲೂ ರಾಜೀನಾಮೆ ಕೊಟ್ಟು ಹೊರಬಿದ್ದರು. ೧೯೨೨ರಲ್ಲಿ ಮುಂಬಯಿಯಲ್ಲಿ ಸೇರಿದ ಸರ್ವಪಕ್ಷೀಯ ಪರಿಷತ್ತಿನ ಅಧ್ಯಕ್ಷರು ಇವರೇ ಆಗಿದ್ದರು. ಪರಿಷತ್ತಿನ ಕೊನೆಗೆ ಕೆಲವೊಂದು ವಿಷಯದಲ್ಲಿ ಪ್ರತಿನಿಧಿಗಳಿಗೂ ಇವರಿಗೂ ಮತಭೇದ ಉಂಟಾದ್ದರಿಂದ ಇವರು ಅಧ್ಯಕ್ಷಸ್ಥಾನ ಬಿಟ್ಟು ಎದ್ದು ನಡೆದರು. ಕೊನೆ-ಕೊನೆಗೆ ಇವರು ವಾನಪ್ರಸ್ಥಾಶ್ರಮವನ್ನು ಧರಿಸಿದ್ದರಿಂದ ಅವರ ಹೆಸರು ರಾಜಕಾರಣದಲ್ಲಿ ವಿಶೇಷ ಕೇಳಬರುತ್ತಿದ್ದಿಲ್ಲ.

ಆನಂದ ಮೋಹನ ಬೋಸ:— ಪೂರ್ವ ಬಂಗಾಲದ "ತೇಜಸ್ವಿ ತಾರೆ"ಯೆಂದು ಇವರಿಗೆ ಕರೆಯುತ್ತಿದ್ದರು. ಕಲ

ಕತ್ತಾ ಹ್ಯಾಕೋರ್ಟಿನ ಬ್ಯಾರಿಸ್ಟರರಾಗಿದ್ದು ರಾಜಕಾರಣದಲ್ಲಿ ವಿಶೇಷ ಭಾಗ ತೆಗೆದುಕೊಳ್ಳುತ್ತಿದ್ದರು. ೧೮೯೮ರಲ್ಲಿ ಮದ್ರಾಸದಲ್ಲಿ ಸೇರಿದ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಇವರೆ ಅಧ್ಯಕ್ಷರಾಗಿದ್ದರು. ರಮೇಶಚಂದ್ರ ದತ್ತ ಬಾಬು ಸುರೇಂದ್ರನಾಥನ ಸಂಗಡ ಆಯ್. ಸಿ. ಎಸ್. ಪರೀಕ್ಷೆಯ ಬಗ್ಗೆ ಹೋದ ಮೂವರು ಬಂಗಾಲಿ ತರುಣರಲ್ಲಿ ಇವರೊಬ್ಬರು. ಪರೀಕ್ಷೆಯ ೩ನೇ ಸ್ಥಾನಕ್ಕೆ ಬಂದರು. ಇವರು ಸರಕಾರಿ ನೌಕರಿಯಲ್ಲಿ ಸೇರಿ ಕಮಿಶನರರ ಸ್ಥಾನದ ವರೆಗೆ ಏರಿದ್ದರು. ನೌಕರಿಯಲ್ಲಿದ್ದಾಗಲೂ, ನೌಕರಿಯಿಂದ ನಿವೃತ್ತರಾದ ಮೇಲೂ ಅರ್ಥಶಾಸ್ತ್ರದ ಹಾಗೂ ಹಿಂದುಸ್ಥಾನದ ಆರ್ಥಿಕ ಸ್ಥಿತಿಯ ವಿಶೇಷ ಅಭ್ಯಾಸ ಮಾಡಿದವರು. ಋಗ್ವೇದದ ಭಾಷಾಂತರವನ್ನು, ರಾಮಾಯಣ ಮಹಾಭಾರತಗಳ ಇಂಗ್ರಜಿ ಪದ್ಯಮಯ ಭಾಷಾಂತರವನ್ನೂ ಇವರು ಮಾಡಿದ್ದರು. ಇವರು ಬರೆದ ಹಿಂದುಸ್ಥಾನದ ಆರ್ಥಿಕ ಇತಿಹಾಸವು ಪ್ರಮಾಣಭೂತ ಗ್ರಂಥವಾಗಿದೆ. ೧೮೯೯ರಲ್ಲಿ ಲಖನೌದಲ್ಲಿ ಸೇರಿದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಬಡೋದೆ ಸಂಸ್ಥಾನದ ದಿವಾನರಾಗಿರುವಾಗ ೧೯೦೯ರಲ್ಲಿ ಸ್ವರ್ಗವಾಸಿಗಳಾದರು.

ಸರ್ ನಾರಾಯಣರಾವ ಚಂದಾವರಕರ

೧೮೫೫ರಲ್ಲಿ ಹೊನ್ನಾವರದಲ್ಲಿ ಜನ್ಮ ತಾಳಿದರು. ವಿದ್ಯಾರ್ಥಿದೆಸೆಯಲ್ಲಿ ಶಿಷ್ಯವೃತ್ತಿ ಮೊದಲಾದವುಗಳನ್ನು ಪಡೆದರು. ಬಿ. ಎ. ಪರೀಕ್ಷೆಯಲ್ಲಿ ಮೊದಲನೇ ವರ್ಗದಲ್ಲಿ ಉತ್ತೀರ್ಣರಾದರು. ಕೆಲಕಾಲ ಇಂದುಪ್ರಕಾಶ ಪತ್ರದ ಇಂಗ್ರಜಿ ವಿಭಾಗದ ಸಂಪಾದಕೀಯ ಕೆಲಸ ಮಾಡುತ್ತಿದ್ದರು. ಮುಂದೆ ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂಬಯಿ ಹ್ಯಾಕೋರ್ಟಿನ ವಕೀಲರಾದರು. ಇವರ ವಾಕ್ಪಟುತ್ವವು ಎಲ್ಲರಿಗೆ ಗೊತ್ತಿದ್ದುದರಿಂದ ರಾಷ್ಟ್ರೀಯ ಸಭೆಯು ೧೮೮೫ರಲ್ಲಿ ವಿಲಾಯತಿಗೆ ಕಳಿಸಿದ ನಿಯೋಗ ಮಂಡಳದಲ್ಲಿ ಇವರ ಆಯ್ಕೆಯಾಗಿದ್ದಿತು. ಪ್ರಾರಂಭದಿಂದ ಇವರು ರಾಷ್ಟ್ರೀಯ ಸಭೆಯ ಸೇವೆ ಮಾಡುತ್ತ ಬಂದಿದ್ದರಿಂದ ೧೯೦೦ರಲ್ಲಿ ಲಾಹೋರ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನದ ಬಹುಮಾನ ಇವರಿಗೆ ಸಿಕ್ಕಿತು. ಲಾಹೋರದಲ್ಲಿರುವಾಗಲೇ ಇವರಿಗೆ ಮುಂಬಯಿ ಹ್ಯಾಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಿದ ಸುದ್ದಿಯು ಇವರಿಗೆ ತಿಳಿಯಿತೆಂದು ಹೇಳುತ್ತಾರೆ. ಇವರು ನಿಸ್ಸೀಮ ಸುಧಾರಕರಾಗಿದ್ದರು. ಹ್ಯಾಕೋರ್ಟಿನಿಂದ ನಿವೃತ್ತರಾದ ಮೇಲೆ ಕೆಲಕಾಲ ಇಂದೂರ ಸಂಸ್ಥಾನದ ದಿವಾನರಾಗಿದ್ದರು. ಮೊಂಟಿಗ್ಯೂ ಸುಧಾರಣೆ ಮೂಲಕ ಅಸ್ತಿತ್ವದಲ್ಲಿ ಬಂದ ಮೊದಲನೇ ಮುಂಬಯಿ ಪ್ರಾಂತಿಕ ಕಾನೂನು ಮಂಡಳಕ್ಕೆ ಇವರೇ ಅಧ್ಯಕ್ಷರಾಗಿ ನೇಮಿಸಲ್ಪಟ್ಟರು. ೧೯೨೩ರಲ್ಲಿ ಕೈಲಾಸವಾಸಿಗಳಾದರು.

ಸರ್ ದಿನಶಾ ವಾಚ್ಛಾ — ೧೮೪೪ರಲ್ಲಿ ಇವರ ಜನ್ಮ. ಬಿ. ಎ. ವರೆಗೆ ಕಲಿಯುವ ಮೊದಲೇ ಹಿರಿಯರ ಉದ್ಯೋಗದಲ್ಲಿ ಇವರಿಗೆ ಸೇರಬೇಕಾಯಿತು. ಇವರು ಅರ್ಥಶಾಸ್ತ್ರದ ಗಾಢ ಅಭ್ಯಾಸ ಮಾಡಿದ್ದಾರೆ. ರಾಷ್ಟ್ರೀಯ ಸಭೆಯಲ್ಲಿ ಅರ್ಥಶಾಸ್ತ್ರಜ್ಞರೆಂತಲೇ ಇವರ ವಿಖ್ಯಾತಿ. ಮುಂಬರಿಯುತ್ತ ಬೆಳೆಯುತ್ತಿರುವ ಹಿಂದುಸ್ಥಾನ ಸರಕಾರದ ಸೈನ್ಯ ಖಾತೆಯ ಖರ್ಚಿನ ಮೇಲೆ ಕಡುಕರವಾಗಿ ಟೀಕಿಸುತ್ತಿದ್ದರು. ೧೯೦೧ರಲ್ಲಿ ರಾಷ್ಟ್ರೀಯ ಸಭೆಯ ಕಲಕತ್ತೆಯ ಅಧಿವೇಶನಕ್ಕೆ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ರಾಷ್ಟ್ರೀಯ ಸಭೆಯ ಬಾಲ್ಯತ್ವವನ್ನೂ ತಾರುಣ್ಯವನ್ನೂ ನೋಡಿದ ವೃದ್ಧಪುರುಷರು ಇವರೊಬ್ಬರೇ. ಈಗ ಇವರಿಗೆ ೯೨ನೇ ವರುಷ ನಡೆಯುತ್ತದೆ.

ಲಾಲಮೋಹನ ಘೋಷ — ೧೮೪೯ರಲ್ಲಿ ಇವರ ಜನ್ಮ. [illegible]ನೇ ವರ್ಷ ಪ್ರಾಯದಲ್ಲಿ ವಿಲಾಯತಿಗೆ ಹೋಗಿ ಬೆರಿಸ್ಟರರಾದರು. ಮತ್ತು ಕಲಕತ್ತೆಯ ಹ್ಯಾಕೋರ್ಟಿನಲ್ಲಿ ವಕೀಲಿ ನಡೆಸುತ್ತಿದ್ದರು. ಇವರು ಉತ್ತಮ ತರದ ವಾಗ್ಮಿಗಳು. [illegible] ತಮ್ಮ ವಾಕ್ಪಟುತ್ವದಿಂದ ಇಂಗ್ಲಿಷ ಜನರ ಮನಸ್ಸನ್ನು [illegible] ತ್ತಿದ್ದರು. ಹಿಂದುಸ್ಥಾನದ ಪರವಾಗಿ ಹೋರಾಡಲಿಕ್ಕೆ ಹಿಂದೀ ಮನುಷ್ಯನು ಬ್ರಿಟಿಶ ಪಾರ್ಲಮೆಂಟಿನಲ್ಲಿರಬೇಕು ಎಂಬ ತತ್ವದಿಂದ ಇಂಗ್ಲಂಡಿಗೆ ಹೋಗಿ ಪಾರ್ಲಮೆಂಟಿನ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಂತಿದ್ದರು. ಆ ಕಾಲದಲ್ಲಿ ಆಯರ್ಲಂಡದ ಹೋಮರೂಲ ಚಳವಳಿಯು ಉತ್ಕಟಾವಸ್ಥೆಗೆ ಬಂದಿತ್ತು. ಚುನಾವಣೆಯ ಸಮಯಕ್ಕೆ ಬಂದಾಗ ಆಯರಿಶ ಮತದಾರರಿಗೆ ಗ್ಲಾಡ್‌ಸ್ಟನ್ [illegible] ವಿರೋಧ ಮಾಡಿದರು. ಇಲ್ಲವಿದ್ದರೆ ಇವರು ನಿಂದಿತರಾಗಿ ಆರಿಸಿ ಬರುತ್ತಿದ್ದರು. ೧೯೦೩ರಲ್ಲಿ ಮದ್ರಾಸದಲ್ಲಿ ಕೂಡಿದ ರಾಷ್ಟ್ರೀಯ ಸಭೆಗೆ ಇವರು ಅಧ್ಯಕ್ಷರಾಗಿದ್ದರು. ಇವರು ೧೯೦೯ರಲ್ಲಿ ಸ್ವರ್ಗಸ್ಥರಾದರು.

ಹೆನ್ರಿ ಕಾಟನ್ — ಇವರ ಹಿರಿಯರು ಹಿಂದುಸ್ಥಾನದಲ್ಲಿ ನೌಕರರಾಗಿದ್ದರು. ಇವರೂ ಸಹ [illegible] ಸರ್ವಿಸದಲ್ಲಿ ಸೇರಿ ಕೆಲಸ ಮಾಡಿದರು. ಹಿಂದುಸ್ಥಾನದ ಬಗ್ಗೆ ಇವರಿಗೆ ವಿಶೇಷ ಸಹಾನುಭೂತಿ ಇದ್ದಿತು. ೧೯೦೪ರಲ್ಲಿ ಮುಂಬಯಿಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನ ಇವರಿಗೆ ಕೊಡಲ್ಪಟ್ಟಿತು. [illegible] ಬ್ರಿಟಿಶ ಪಾರ್ಲಮೆಂಟಿನ ಸಭಾಸದರಾಗಿ ಹಿಂದುಸ್ಥಾನದ ಬಗೆ ಆಸ್ಥೆಯಿಂದ ಕಾದಾಡುತ್ತಿದ್ದರು.

ನಾಮದಾರ ಗೋಪಾಲ ಕೃಷ್ಣ ಗೋಖಲೆ

ತೀರ ಬಡತನದಲ್ಲಿ ಇವರ ಜನ್ಮ ಆಯಿತು. ಅಣ್ಣನು ಆಸ್ಥೆಯಿಂದ ಇವರಿಗೆ ವಿದ್ಯಾಭ್ಯಾಸ ಮಾಡಿಸಿದನು. ತಮ್ಮ ೧೮ನೇ ವಯಸ್ಸಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪುಣೆಯ ಡೆಕ್ಕನ್ ಎಜ್ಯುಕೇಶನ ಸೊಸಾಯಟಿಯಲ್ಲಿ ಸೇರಿದರು. ಇತಿಹಾಸ ಮತ್ತು ಅರ್ಥಶಾಸ್ತ್ರ ಇವುಗಳ ವಿಷಯ ಕಲಿಸುವಾಗಲೆ ಇವರಿಗೆ ಪ್ರಸಿದ್ಧಿ [illegible] ಗಳ ಕಾರ್ಯ ಮಾಡುತ್ತಿರುವಾಗ ಕಾಂಗ್ರೆಸ್ಸಿನಲ್ಲಿ ಸೇರಿ ತಮ್ಮ ಮೇಧಾವಿತ್ವದಿಂದ [illegible] ರಾಗಿದ್ದ ಶ್ರೀ ನ್ಯಾ. ಮಹಾದೇವ ಗೋವಿಂದ ರಾನಡೆಯವರ ಶಿಷ್ಯರೆಂದು ಇವರ ಖ್ಯಾತಿ. ೧೯ ವರುಷ ಪುಣೆಯ ಫರ್ಗ್ಯುಸನ ಕಾಲೇಜಿನಲ್ಲಿ ಪ್ರೊಫೆಸರರೆಂದು [illegible] ಮುಂಬಯಿ ಕಾಯದೆ ಕೌನ್ಸಿಲಿನಲ್ಲಿ [illegible] ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ಸಭಾಸದರಾಗಿ ಆರಿಸಿ ಬಂದರು. [illegible] ಸರಕಾರಿ ಅಂದಾಜು ಪತ್ರಿಕೆಗಳ ಗಾಢ ಅಭ್ಯಾಸ ಮಾಡಿ ಸರಕಾರದ ಟೀಕೆ ಮಾಡುತ್ತಿದ್ದರು. ಅಂಕಿಸಂಖ್ಯೆಗಳನ್ನು [illegible] ಇವರಿಗೆ ಎದುರಾಡಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಿದ್ದಿಲ್ಲ. ಅಷ್ಟು ದೀರ್ಘಾಭ್ಯಾಸ ಮಾಡಿ ಸೂಕ್ಷ್ಮ ಮಾಹಿತಿಯನ್ನು ಇವರು ಸಂಪಾದಿಸುತ್ತಿದ್ದರು. ಇತರ ವ್ಯವಸಾಯಗಳಲ್ಲಿ ಸೇರಿ ಪುರಸತ್ತಿನ ಕಾಲದಲ್ಲಿ ದೇಶಸೇವೆ ಮಾಡುವವರಿಂದಲೇ ಕಾರ್ಯಭಾಗವಾಗದೆಂಬುದನ್ನು ಮನಗಂಡು ೧೯೦೫ರಲ್ಲಿ ಸರ್ವಂಟ್ಸ್ ಆಫ್ ಇಂಡಿಯಾ ಸೊಸಾಯಟಿ ಯಾನೆ ಭಾರತ ಸೇವಕ ಸಮಾಜ ಎಂಬ ಸ್ವಾರ್ಥತ್ಯಾಗಿ ದೇಶಸೇವಕರ ಸಮಾಜಸೇವಕರ ಅಪೂರ್ವ ಸಂಸ್ಥೆಯೊಂದು ಇವರೇ ಸ್ಥಾಪಿಸಿದರು. ೧೯೦೫ರಲ್ಲಿ ಶ್ರೀ ಕ್ಷೇತ್ರ ಕಾಶೀ ನಗರದಲ್ಲಿ ಗಂಗಾ ನದಿಯ ತೀರದ ಮೇಲೆ ಕೂಡಿದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ತಾರುಣ್ಯದಲ್ಲಿ ಹಿಂದೀ ರಾಷ್ಟ್ರಸಭೆಯ ನೇತೃತ್ವದ ಮಾನ ಸಿಕ್ಕಿದ ಮಹಾನುಭಾವರು ಇವರೇ. ೧೯೧೫ರಲ್ಲಿ ದೇಹಾವಸಾನವಾಗುವ ತನಕ ರಾಷ್ಟ್ರೀಯ ಸಭೆಯ ಎಲ್ಲ ಸೂತ್ರಗಳನ್ನು ಇವರೇ ನಡಿಸುತ್ತಿದ್ದರು. ಸರಕಾರ ದರಬಾರದಲ್ಲಿ ನಿಂತ ಮಾನಸಹಿತ ದೊರೆಯುತ್ತಿದ್ದಾಗ್ಯೂ ಯಾವದೆ ಅಧಿಕಾರದ ಆಮಿಷಕ್ಕೆ ಬಲಿಬೀಳಲಿಲ್ಲ. ಇವರಿಗೆ ತ್ಯಾಗದ ಮೂರ್ತಿಯೆಂದು ಹೇಳಬಹುದು.

ಡಾ| ರಾಸಬಿಹಾರಿ ಘೋಷ — ಕಲಕತ್ತೆಯ ಹೆಸರಾದ ಬೆರಿಸ್ಟರರು. ತಿಂಗಳಿಗೆ ಅರ್ಧ ಲಕ್ಷ ರೂಪಾಯಿಗಳ ತನಕ ಇವರ ಸಂಪಾದನೆ. ಸಮಾಜಸೇವೆಗಾಗಿ ಲಕ್ಷಾವಧಿ ಹಣವನ್ನು ಇವರು ಖರ್ಚು ಮಾಡಿದ್ದಾರೆ. ೧೯೦೭ರಲ್ಲಿ ಸುರತದಲ್ಲಿ ಸೇರಿದ ರಾಷ್ಟ್ರೀಯ ಸಭೆಗೆ ಇವರೇ ಅಧ್ಯಕ್ಷರಾಗತಕ್ಕವರು. ಆದರೆ ಪ್ರಾರಂಭದಲ್ಲಿಯೇ ಆ ಕಾಂಗ್ರೆಸ್ಸು ಮುರಿದು ಹೋಯಿತು. ಮುಂದಿನ ವರುಷ ಮದ್ರಾಸದಲ್ಲಿ ಸೇರಿದ ರಾಷ್ಟ್ರೀಯ ಸಭೆಗೆ ಇವರನ್ನೇ ಅಧ್ಯಕ್ಷರನ್ನಾಗಿ ಆರಿಸಿದ್ದರು. [illegible] ವೃತ್ತಿಯವರಾದ್ದಾಗ್ಯೂ ಕೊನೆ ತನಕ ಇವರ ಪ್ರವೃತ್ತಿಯು ರಾಷ್ಟ್ರೀಯರ ಕಡೆಗೆ ಒಲಿಯುತ್ತಿತ್ತು.

ಪಂಡಿತ ಮದನಮೋಹನ ಮಾಲವೀಯ — ೧೮೬೧ರಲ್ಲಿ ಇವರು ಪ್ರಯಾಗದ ವಿದ್ವಾನ್ ರಾಜಪುರೋಹಿತರ ಮನೆತನದಲ್ಲಿ ಜನಿಸಿದರು. ಮೊದಲು ಸಂಸ್ಕೃತ ಕಲಿತು ನಂತರ ಇಂಗ್ಲಿಷ ಕಲಿಯಲಾರಂಭಿಸಿದರು. ಇಂಗ್ಲಿಷ ಕಲಿತರೂ ತಮ್ಮ ಸನಾತನ ಧರ್ಮವನ್ನು ಉಜ್ವಲ ರೀತಿಯಿಂದ ಪಾಲಿಸುತ್ತ ಬಂದಿರುತ್ತಾರೆ. ೧೮೮೬ರಲ್ಲಿ ಕೂಡಿದ ೨ನೇ ರಾಷ್ಟ್ರೀಯ ಸಭೆಯಲ್ಲಿಯೇ ವ್ಯಾಪಕ ಸಂಸ್ಥೆಯ ತಿರ್ಮಾನದ ಮೇಲೆ ಮೋಹಕ ರೀತಿಯಿಂದ ಮಾತನಾಡಿ ಪ್ರಸಿದ್ಧಿಗೆ ಬಂದವರು. ಅಂದಿನಿಂದ ರಾಷ್ಟ್ರೀಯ ಸಭೆಯಲ್ಲಿ ಸೇರಿರುತ್ತಾರೆ. ನಡುನಡುವೆ ರಾಷ್ಟ್ರೀಯ ಸಭೆಯ ಸಂಚಾಲಕರಿಗೂ ಇವರಿಗೂ ಮತಭೇದಗಳಾದಾಗ್ಯೂ ರಾಷ್ಟ್ರೀಯ ಸಭೆ ಬಿಡುವ ಯೋಚನೆ [illegible] ೧೯೦೯ರಿಂದ ೧೯೨೦ರ ತನಕ ವರಿಷ್ಠ ಕಾಯದೆ ಕೌನ್ಸಿಲಿನ ಲೋಕಪಕ್ಷದ ಪ್ರತಿನಿಧಿಗಳಾಗಿ ಹೋರಾಡಿದವರು ಇವರೇ. ಹೊಸ ಮಂಡಳ ಸಭೆಗಳಲ್ಲಿಯೂ ಇವರು ಅನೇಕ ಸಲ ಆರಿಸಿಬಂದು ದುಡಿದಿದ್ದಾರೆ. ಕಾಶಿ ಹಿಂದೂ ವಿದ್ಯಾಪೀಠದ ಸಂಸ್ಥಾಪನೆಯ ಶ್ರೇಯಸ್ಸು ಸಂಪೂರ್ಣವಾಗಿ ಇವರಿಗೇ ಸಲ್ಲತಕ್ಕದ್ದು. ಆ ಕಾರ್ಯಕ್ಕಾಗಿ ದೇಶಸಂಚಾರ ಮಾಡಿ ೧|| ಕೋಟಿ ರೂಪಾಯಿಗಳನ್ನು ಕೂಡಿಸಿದ್ದಾರೆ. ಪಂಜಾಬದಲ್ಲಿ ಅತ್ಯಾಚಾರಗಳಾದ ಮೇಲೆ ಪಂಡಿತ ಮೋತಿಲಾಲರೊಂದಿಗೆ ಅಲ್ಲಲ್ಲಿ ಸಂಚಾರ ಮಾಡಿ ಪುರಾವೆಯನ್ನು ಸಂಗ್ರಹಿಸಿ ಲಷ್ಕರಿ ಜುಲುಮಿಯ ಸತ್ಯ ವೃತ್ತಾಂತವನ್ನು ಹೊರಗೆ ತೆಗೆದವರು ಇವರೇ. [illegible] ಕಾಂಗ್ರೆಸ ರಾಜಕಾರಣದಲ್ಲಿ ಇವರೇ [illegible] ಹೇಳಬಹುದು. ೧೯೩೦ನೇ ಇಸ್ವಿಯ [illegible] ಲೋಕಮಾನ್ಯರ ಪುಣ್ಯತಿಥಿಯ ಸ್ಮರಣಾರ್ಥ ಮುಂಬಯಿಯಲ್ಲಿ ಹೊರಟ ಸತ್ಯಾಗ್ರಹ ಮೆರವಣಿಗೆಯಲ್ಲಿ ಇವರು [illegible] ಅಹಿಂಸಾಮಯ ಸತ್ಯಾಗ್ರಹ ಸಂಗ್ರಾಮ ಸತ್ಯಾಗ್ರಹದ ಇತಿಹಾಸದಲ್ಲಿ ಅವಿಸ್ಮರಣೀಯವಾದದ್ದು. ಈಗ [illegible] ವರ್ಷದ ಮುದುಕರಾದಾಗ್ಯೂ ತರುಣರಂತೆ ಹುರುಪಿನಿಂದ ದೇಶಕಾರ್ಯ ಮಾಡುತ್ತಲಿದ್ದಾರೆ. ಎಲ್ಲ ಪಕ್ಷಗಳಲ್ಲಿಯೂ ಮಾನ್ಯತೆಯುಳ್ಳ ಇವರು ೧೯೦೯ರಲ್ಲಿ, ೧೯೧೮ರಲ್ಲಿಯೂ ಇವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು.

ಬಿಶನ್ ನಾರಾಯಣ ಧಾರ — ಕಾಶ್ಮೀರಿ ಬ್ರಾಹ್ಮಣರು. ವಿಲಾಯತಿಗೆ ಹೋಗಿ ಬೆರಿಸ್ಟರರಾದರು. ಎಳೆಯ ವಯಸ್ಸಿನಲ್ಲಿ ಕಲಿಯುವಾಗಲೇ ರಾಜಕಾರಣದಲ್ಲಿ ಸೇರಿದರು. [illegible] ರಾಷ್ಟ್ರೀಯ ಸಭೆಯ ರಾಜಕಾರಣದಲ್ಲಿ ಪ್ರಾಮುಖ್ಯದಿಂದ ಸೇರಿದರು. ಆಳವಾದ ವಿಚಾರಗಳಿಂದ ಇವರ ಖ್ಯಾತಿ. ೧೯೧೧ರಲ್ಲಿ ಕಲಕತ್ತೆಯ ಕಾಂಗ್ರೆಸ ಅಧಿವೇಶನದ ಅಧ್ಯಕ್ಷರಾಗಿದ್ದರು.

ರಾ| ಬ| ಆರ್ ಎನ್ ಮುಧೋಳಕರ — ಉಮರಾವತಿಯ ಸುಪ್ರಸಿದ್ಧ ವಕೀಲರು. ಉದ್ಯೋಗಧಂದೆಗಳ ಅಭಿವೃದ್ಧಿಗಳ ಬಗ್ಗೆ ಇವರಿಗೆ ವಿಶೇಷ ಆಸೆ. ಆ ಕಾಲದಲ್ಲಿ ಕಾಂಗ್ರೆಸಿನೊಳಗೆ ಇವರಷ್ಟು ಶ್ರಮಪಟ್ಟು ಕೆಲಸ ಮಾಡುವವರಿದ್ದಿಲ್ಲ. ೧೯೧೨ರಲ್ಲಿ ಬಾಂಕಿಪೂರ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

ನಬಾಬ ಸಯ್ಯದ ಮಹಮ್ಮದ (ಮದ್ರಾಸ)

೧೯೧೩ರಲ್ಲಿ ಕರಾಚಿಯ ರಾಷ್ಟ್ರೀಯ ಸಭೆಯ ಅಧ್ಯಕ್ಷರು. ಜಾತ್ಯಭಿಮಾನಕ್ಕಿಂತ ರಾಷ್ಟ್ರಾಭಿಮಾನವೇ ಇವರಲ್ಲಿ ಹೆಚ್ಚಾಗಿ ವಾಸಿಸುತ್ತಿತ್ತು. ಪ್ರತ್ಯೇಕ ಮತದಾನ ಸಂಘಗಳ ಯೋಜನೆಗೆ ಇವರು ವಿರುದ್ಧರಿದ್ದರು. ನಾ| ಜಿನ್ನಾ, ನಾ| ಮಝರುಲ ಹಕ ಇವರೊಂದಿಗೆ ಹಿಂದು ಮುಸಲ್ಮಾನರಲ್ಲಿ ಐಕ್ಯ ಬೆಳೆಸಿ

ತ್ತ ಪದಗಳಲ್ಲಿ ಇವರ ಆಗಿನ ವಿಶೇಷವತ್ತು. ಇವರ ಪ್ರಯತ್ನದ ಪರೀ ನುಡಿವೆ ೧೯೧೬ರಲ್ಲಿ ಹಿಂದು ಮುಸಲ್ಮಾನರ "ಲಖನೌ ಕರಾರು" ಒಪ್ಪಲಾಯಿತು.

ನಾಮದಾರ ಭೂಪೇಂದ್ರನಾಥ ಬಸು — ಕಲಕತ್ತೆಯ ಹೆಸರಾದ ಸೊಲಿಸಿಟರರು. ಕೆಲ ಕಾಲ ವರಿಷ್ಠ ಶಾಸನ ಕೌನ್ಸಿಲಿನಲ್ಲಿ ಬಂಗಾಲದ ಪ್ರತಿನಿಧಿಗಳಾಗಿದ್ದರು. ೧೯೧೪ರಲ್ಲಿ ಮದ್ರಾಸ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಮುಂದೆ ಭಾರತ ಮಂತ್ರಿಗಳ "ಇಂಡಿಯಾ ಕೌನ್ಸಿಲಿ"ನ ಸಭಾಸದರಾಗಿದ್ದರು. ಮೊಂಟೆಗ್ಯೂ ಸಾಹೇಬರ ಹಿಂದೀ ಸಂಚಾರದ ಕಾಲಕ್ಕೆ ಇವರ ಜೊತೆಗಿದ್ದರು.

ಸರ್ ಸತ್ಯೇಂದ್ರ ಪ್ರಸನ್ನ ಸಿಂಹ— ಕಲಕತ್ತೆಯಲ್ಲಿ ಬ್ಯಾರಿಸ್ಟರ ಆಗಿ ಧನ ಮಾನಗಳನ್ನು ಸಂಪಾದಿಸಿದರು. ೧೯೦೮ರಲ್ಲಿ ಬಂಗಾಲ ಸರಕಾರದ ಮೊದಲನೇ ಹಿಂದೀ ಎಡ್ವೋಕೇಟ ಜನರಲ. ೧೯೦೯ರಲ್ಲಿ ವ್ಹಾಯಿಸರಾಯರ ಕಾರ್ಯಕಾರಿ ಮಂಡಳದ ಮೊದಲನೇ ಹಿಂದೀ ಸಭಾಸದ, ಸಾಮ್ರಾಜ್ಯದ ಯುದ್ಧ ಪರಿಷತ್ತಿನಲ್ಲಿ ಹಿಂದೀ ಪ್ರತಿನಿಧಿ, ಬ್ರಿಟಿಶ ಮಂತ್ರಿಮಂಡಳದ ಮೊದಲನೇ ಹಿಂದೀ ಮಂತ್ರಿ, ಮೊದಲನೇ ಹಿಂದೀ ಲಾರ್ಡ, ಮೊದಲನೇ ಹಿಂದೀ ಗವರ್ನರ ಮುಂತಾದ ಉಚ್ಚ ಉಚ್ಚ ಅಧಿಕಾರಗಳನ್ನು ಪಡೆದ ಭಾಗ್ಯಶಾಲಿಗಳಿವರೇ. ೧೯೧೫ನೇ ಇಸ್ವಿಯಲ್ಲಿ ಯಾವದೇ ಅಧಿಕಾರದ ಮೇಲೆ ಇರದ್ದರಿಂದ ಮುಂಬಯಿಯವರು ಒಮ್ಮೆ ಕಾಂಗ್ರೆಸ ಅಧ್ಯಕ್ಷಪದದ ಹೂಮಾಲೆಯನ್ನು ಹಾಕಿ ಮನ್ನಿಸಿದ್ದರಷ್ಟೇ. ರಾಷ್ಟ್ರೀಯ ಸಭೆಗೂ ಸತ್ಯೇಂದ್ರರಿಗೂ ಇದೊಂದೇ ಸಂಬಂಧ.

ಬಾಬು ಅಂಬಿಕಾಚರಣ ಮುಝುಮದಾರ — ಬಂಗಾಲದ ಹೆಸರಾದ ವಕ್ತೃತ್ವಶಾಲಿ ವಕೀಲರು. ರಾಷ್ಟ್ರೀಯ ಸಭೆಯ ಚಿರಕಾಲ ಸೇವೆ ಮಾಡಿದ್ದರು. ರಾಷ್ಟ್ರೀಯ ಸಭೆಯ ಉತ್ತಮ ಇತಿಹಾಸ ಬರೆದಿದ್ದಾರೆ. ೧೯೧೬ರಲ್ಲಿ ಲಖನೌ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

ಡಾ| ಎನಿ ಬೆಸೆಂಟ — ಸುಪ್ರಸಿದ್ಧ ವಿಶ್ವವಿಖ್ಯಾತಿಯವರು ಸಮುದಾಯ ಥಿಯೊಸೊಫಿಕಲ್ ಸೊಸೈಟಿಯ ಅಧ್ಯಕ್ಷರಾದವರು. ನಾನಾ ಮತಗಳ ಗೊಂದಲದ ಪ್ರವಾಹದಲ್ಲಿ ತೇಲಾಡುತ್ತ ತೇಲಾಡುತ್ತ ಹಿಂದಭೂಮಿಗೆ ಬಂದು ಹಿಂದು ತತ್ವಜ್ಞಾನದಲ್ಲೂ, ಧರ್ಮದಲ್ಲೂ ಆತ್ಮೋದ್ಧಾರದ ಮಾರ್ಗ ಕಂಡು ಹಿಡಿದವರು. ಹಿಂದುಸ್ಥಾನದಲ್ಲಿ ಥಿಯೊಸೊಫಿಯ ವಿಶೇಷ ಪ್ರಸಾರ ಮಾಡಿದ ಶ್ರೇಯಸ್ಸು ಇವರಿಗೇ ಸಲ್ಲತಕ್ಕದ್ದು. ಕಾಶಿಯಲ್ಲಿ ಹಿಂದು ಸೆಂಟ್ರಲ್ ಕಾಲೇಜ ಸ್ಥಾಪಿಸಿದವರು ಇವರೇ. ಹಿಂದಭೂಮಿಯೇ ತಮ್ಮ ದತ್ತಕ ತಾಯ್ನಾಡು ಎಂದು ಅವರು ಹೇಳುತ್ತಿದ್ದರು. ಮಹಾಯುದ್ಧಕ್ಕೆ ಪ್ರಾರಂಭವಾದ ಮೇಲೆ ಇವರಿಗೆ ಹಿಂದೀ ರಾಜಕಾರಣದಲ್ಲಿ ಸೇರುವ ಸ್ಫೂರ್ತಿಯಾಯಿತು. ೧೯೧೫ರ ತನಕ ರಾಷ್ಟ್ರೀಯ ಸಭೆಯಂದರೆ ನಾತಾಳದಲ್ಲಿ ಸೇರುತ್ತಿದ್ದ ಬರೇ ಸಮ್ಮೇಳನವಾಗಿತ್ತು, ಕಾರ್ಯಕಾರಿ ಸಂಸ್ಥೆಯಾಗಿದ್ದಿಲ್ಲ. ರಾಷ್ಟ್ರೀಯ ಸಭೆಯ ಕಾರ್ಯ ಇಡೀ ವರ್ಷ ನಡಿಸುವ ಒಂದು ಸಂಸ್ಥೆ ಬೇಕೆಂದು ಅಮ್ಮನವರ ಮತವಾಯಿತು. ಮತ್ತು ಹೋಮ-ರೂಲ — ಅಂತರ್ಗತ ಕಾರಭಾರದಲ್ಲಿ ಸ್ವಾಯತ್ತತೆ ಎಂಬರ್ಥದಿಂದ ಇಂಗ್ಲಿಷ ಭಾಷೆಯಲ್ಲಿ ರೂಢವಾದ ಶಬ್ದವಿದು — ಇದೇ ರಾಷ್ಟ್ರದ ಮುಂದಿನ ಸಾಧ್ಯಾಂಶವೆಂದು ಅವರ ಸೂಚನೆಯಿತ್ತು. ೧೯೧೬ರ ಜುಲೈ ತಿಂಗಳಲ್ಲಿ ಅವರು "ಹೋಮ ರೂಲ ಲೀಗ" ಎಂಬ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿದರು. ಅದೇ ಕಾಲಕ್ಕೆ ಪುಣೆಯಲ್ಲಿ ಲೋ| ಟಿಳಕರು ಹೂಡಿದಂಥ ಸ್ವರಾಜ್ಯ ಸಂಘದೊಡನೆ ಸಹಕಾರ ಮಾಡಿ ತಮ್ಮ ಶಿಷ್ಯರ ಮುಖಾಂತರ ಹಾಗು ಹೋಮ ರೂಲ ಲೀಗಿನ ಮುಖಾಂತರ ಇಡೀ ದೇಶದಲ್ಲಿ ಪ್ರಚಂಡ ಪ್ರಚಾರ ಕಾರ್ಯ ನಡಿಸಿ ೧೯೧೭ರ ರಾಷ್ಟ್ರೀಯ ಸಭೆಯನ್ನು ಸ್ವಾಧೀನಪಡಿಸಿಕೊಂಡರು. ಆ ವೇಳೆಯಲ್ಲಿ ಇವರು ಬಿರುಗಾಳಿಯನ್ನೇ ಎಬ್ಬಿಸಿದರೆಂದು ಹೇಳಬಹುದು. ಅದ್ದರಿಂದ ೧೯೧೭ನೇ ಜೂನದಲ್ಲಿ ಮದ್ರಾಸ ಸರಕಾರದವರು ಅಮ್ಮನವರನ್ನೂ, ಅವರ ಇಬ್ಬರು ಸಹಕಾರಿಗಳನ್ನೂ ಸ್ಥಾನಬದ್ಧ ಕೈದಿಗಳಾಗಿ ಮಾಡಿಟ್ಟರು. ಅಮ್ಮನವರ "ನ್ಯೂ ಇಂಡಿಯಾ" ಪತ್ರದ ಸಾವಿರಗಟ್ಟಲೆ ರೂಪಾಯಿ ಜಾಮೀನು ಜಪ್ತಾಯಿತು. ದೇಶದಲ್ಲಿ ಹಾಹಾಕಾರವೆದ್ದಿತು. ಅಖಿಲ ಇಂಡಿಯಾ ಕಾಂಗ್ರೆಸ ಕಮಿಟಿಯವರು ಸಭೆಸೇರಿ ಈ ಕೃತಿಯ ತೀವ್ರ ನಿಷೇಧ ಮಾಡಿದರು, ಮತ್ತು ಹಿಂದುಸ್ಥಾನಕ್ಕೆ ಸ್ವರಾಜ್ಯದಾನ ಮಾಡುವದೇ ಬ್ರಿಟಿಶ ಸರಕಾರದ ಧ್ಯೇಯವೆಂದು ಸಾರಬೇಕೆಂದು ಆಗ್ರಹ ಮಾಡಿದರು. ಸತ್ಯಾಗ್ರಹ ಮಾಡಬೇಕೆಂಬ ಮಾತೂ ಹೊರಟಿತು. ಮಹಾಯುದ್ಧದ ಕಾಲವದು. ಹಿಂದವಾಸಿಗಳಿಗೆ ಸಮಾಧಾನ ಮಾಡುವದವಶ್ಯವಿತ್ತು. ಭಾರತ ಮಂತ್ರಿಗಳು ತಾ| ೨೦—೮—೧೯೧೭ ಕ್ಕೆ ಜವಾಬದಾರ ರಾಜ್ಯವೇ ಗುರಿಯೆಂದು ಸಾರಿದರು. ಅಮ್ಮನವರನ್ನೂ ಬಿಡುಗಡೆ ಮಾಡಿದರು. ಅದೇ ವರ್ಷ ಕಲಕತ್ತೆಯಲ್ಲಿ ಜರುಗಲಿಕ್ಕಿದ್ದ ರಾಷ್ಟ್ರೀಯ ಸಭೆಯ ನೇತೃತ್ವವನ್ನು ಅಮ್ಮನವರಿಗೆ ಕೊಟ್ಟು ಸತ್ಕರಿಸಿದರು. ೧೯೧೮ರಲ್ಲಿ ಮೊಂಟೆಗ್ಯೂ ಸುಧಾರಣೆಗಳ ವರದಿ ಪ್ರಕಟವಾಗಲು ತಮ್ಮ [illegible] ಅಮ್ಮನವರು ಲೋ| ಟಿಳಕರೊಡನೆ ಒಮ್ಮತದಿಂದ ಕಾರ್ಯ ಮಾಡಿದರು. ಮೊಂಟೆಗ್ಯೂ ವರದಿ ಪ್ರಕಟವಾದ ಕೂಡಲೇ "ಈ ಯೋಜನೆ ಇಂಗ್ಲಂಡು ಕೊಡುವದಕ್ಕೂ ಹಿಂದುಸ್ಥಾನವು ಸ್ವೀಕರಿಸುವದಕ್ಕೂ ಯೋಗ್ಯವಲ್ಲ" ಎಂದು "ನ್ಯೂ ಇಂಡಿಯಾ" ಪತ್ರದಲ್ಲಿ ನಿಶ್ಚಯವಾಗಿ ಬರೆದಿದ್ದರು. ಮುಂದೆ ಕ್ರಮೇಣ ಅವರಿಗೆ ಆ ವರದಿ ಯೋಜನೆಯು ಯೋಗ್ಯವೆಂದು ತೋರಿತು. ೧೯೧೮ರ ದಿಲ್ಲಿಯ ಅಧಿವೇಶನದಲ್ಲಿ ರಾಷ್ಟ್ರೀಯ ಸಭೆಗೂ ಅಮ್ಮನವರಿಗೂ ಮತಭೇದವಾಯಿತು. ೧೯೧೯ರಲ್ಲಿ ರೌಲೆಟ ಕಾಯದೆಯ ವಿರುದ್ಧ ಮಹಾತ್ಮರು ಸತ್ಯಾಗ್ರಹ ಹೂಡಲು ಯೋಚಿಸಿದ ಕೂಡಲೆ ಅಮ್ಮನವರ ಕೆರಳಿತು. ಸತ್ಯಾಗ್ರಹದ ವಿರುದ್ಧ ಅವರು ತೀವ್ರ ಪ್ರಚಾರ ಮಾಡತೊಡಗಿದರು. ಇದರಿಂದ ಅವರು ದೇಶದಲ್ಲಿ ಅಪ್ರಿಯರಾಗಿ ರಾಷ್ಟ್ರೀಯ ಸಭೆಯಿಂದ ಹೊರಬೀಳಬೇಕಾಯಿತು. ೧೯೨೪ರ ಸುಮಾರಕ್ಕೆ ನವ ಪಕ್ಷದ ಪರಿಷತ್ತು ಕೂಡಿಸಲು ಇವರು ಬಹಳ ಖಟಪಟಿ ಮಾಡಿದ್ದರು. ಮುದಿತನದಲ್ಲಿ ಇವರ ತರುಣರನ್ನು ನಾಚಿಸುವ ಕಾರ್ಯಕ್ಷಮತೆಗಳನ್ನು ನೋಡಿ ಯುವಕರು ತಲೆದೂಗುತ್ತಿದ್ದರು. ೧೯೩೩ರಲ್ಲಿ ಅಮ್ಮನವರ ನಿಧನವಾಯಿತು.

ಸಯ್ಯದ ಹಸನ ಇಮಾಮ — ಸರ್ ಅಲ್ಲಿ ಇಮಾಮರ ಅನುಜರು. ಹೆಸರಾದ ಬ್ಯಾರಿಸ್ಟರರು. ೫ ವರ್ಷಗಳ ವರೆಗೆ ಕಲಕತ್ತೆಯ ಹಾಯಿಕೋರ್ಟಿನ ನ್ಯಾಯಾಧೀಶರಾಗಿದ್ದರು. ಮುಂದೆ ಪಾಟಣಾದಲ್ಲಿ ಹೊಸ ಹಾಯಿಕೋರ್ಟು ಸ್ಥಾಪನೆಯಾದ ಮೇಲೆ ರಾಜೀನಾಮೆ ಕೊಟ್ಟು ಪಾಟಣಾದೊಳಗೆ ವಕೀಲಿಯನ್ನಾರಂಭಿಸಿದರು. ಉಜ್ವಲ ರಾಷ್ಟ್ರೀಯರು. ಹಿಂದು-ಮುಸಲ್ಮಾನರೈಕ್ಯವಾದಿಗಳು. ಪ್ರತ್ಯೇಕ ಮತದಾರ ಸಂಘಗಳ ವಿರೋಧಕರು. ಏನೇನೂ ಜಾತ್ಯಾಭಿಮಾನವಿದ್ದಿಲ್ಲ. ಮೊಂಟಫರ್ಡ ವರದಿಯ ಬಗ್ಗೆ ರಾಷ್ಟ್ರಮತ ವ್ಯಕ್ತಗೊಳಿಸಲು ೧೯೧೮ನೇ ಇಸ್ವಿಯ ಆಗೋಸ್ತ ತಿಂಗಳಲ್ಲಿ ಮುಂಬಯಿಯಲ್ಲಿ ಕೂಡಿದ ಖಾಸಾ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು.

ಪಂಡಿತ ಮೋತಿಲಾಲ ನೆಹರು — ಅಲಾಹಾಬಾದ-ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದರು. ಆದರೆ ಅಸ್ವಾಸ್ಥ್ಯದ ಮೂಲಕ ಬಿ.ಎ. ಪರೀಕ್ಷೆಗೆ ಕೂಡ್ರಲಿಲ್ಲ. ಹಾಯಿಕೋರ್ಟ ವಕೀಲಿ ಪರೀಕ್ಷೆ ಕೊಟ್ಟು ವಕೀಲರಾದರು. ವಕೀಲಿಯಲ್ಲಿ ಗಳಿಸಿದ ಲಕ್ಷಗಳಿಗೆ ಎಣಿಯಿಲ್ಲ. ತಾರುಣ್ಯದಲ್ಲಿ ನೇಮಸ್ತ ವ್ಯಕ್ತಿಯವರಾಗಿದ್ದು ಸರಕಾರಿ ದರಬಾರದಲ್ಲಿ ಮನ್ನಣೆಪಡೆದವರಾಗಿದ್ದರು. ದೊಡ್ಡ ಸಂಸ್ಥಾನಿಕರಂತೆ ಇವರ ಪ್ರಸಂಗವಿತ್ತು. ಪ್ರಯಾಗದೊಳಗಿನ ಇವರ "ಆನಂದ ಭುವನ"ದೊಳಗಿನ ವೈಭವ ನೋಡಿ ಗವ್ಹರ್ನರರ "ಅರಮನೆ"ಯು ನಾಚಿಕೆಪಡುತ್ತಿತ್ತು! ೧೯೧೯ರಲ್ಲಿ ಇವರು ಸಂಪೂರ್ಣವಾಗಿ ರಾಷ್ಟ್ರೀಯ ಸಭೆಯಲ್ಲಿ ಬಂದು ಸೇರಿದರು, ಅಧ್ಯಕ್ಷರಾದರು. ಅಲ್ಲಿ ಸಹಕಾರದ ಬಗ್ಗೆ ಒಪ್ಪಿದರು. ಮುಂದೆ ಮಹಾತ್ಮರ ಆದೇಶದಂತೆ [illegible], ವಿಲಾಸ ವೈಭವಗಳ ತ್ಯಾಗಮಾಡಿ, ಅಸಹಯೋಗಿಗಳೂ ಸತ್ಯಾಗ್ರಹಿಗಳೂ ಆದರು. ಸ್ವರಾಜ್ಯಪಕ್ಷದ ಅಧ್ಯಕ್ಷರಾಗಿ ಎಸೆಂಬ್ಲಿಯಲ್ಲಿ ಸೇರಿ ಇವರು ಮಾಡಿದಂಥ ಕೆಲಸವನ್ನೂ, ತೋರ್ಪಡಿಸಿದ "ಪಾರ್ಲಮೆಂಟರಿ" ಜಾಣ್ಮೆಯನ್ನೂ ಜನತೆಯೂ ಸರಕಾರವೂ ಚಿರಸ್ಮರಣೀಯವಾದದ್ದು. ಪಂಡಿತಜಿಯವರು ತಮ್ಮ ಸರ್ವಸ್ವವನ್ನು ರಾಷ್ಟ್ರಕ್ಕೆ ಒಪ್ಪಿಸಿದ್ದನ್ನು ಹೆಸರಿಸಿ ಹೇಳಬೇಕಿಲ್ಲ. ತಮ್ಮ ಒಬ್ಬಂಟಿಗ ಮಗನಾದ "ಜವಾಹಿರ"ನನ್ನು ರಾಷ್ಟ್ರದ ಚರಣಗಳಿಗೆ ಅರ್ಪಿಸಿದ್ದರೆ, ರಾಷ್ಟ್ರವು ಆ "ಜವಾಹಿರ" (ರತ್ನ)ವನ್ನು ತನ್ನ ಮುಕುಟದಲ್ಲಿಟ್ಟುಕೊಂಡಿದೆ. ೧೯೩೦ರ ಸತ್ಯಾಗ್ರಹ ಸಮರದಲ್ಲಿ ಪಂಡಿತಜಿಯವರು ಎರಡನೇ ಬಾರಿ ಸೆರೆಮನೆ ಸೇರಿದರು. ಅಲ್ಲಿ ಪ್ರಕೃತಿ ಕೆಟ್ಟಿತು. ಅದರಿಂದಲೇ ೧೯೩೧ನೇ ಇಸ್ವಿಯ ಫೆಬ್ರುವರಿ ತಾ| ೬ಕ್ಕೆ ಪರಂಧಾಮವನ್ನೈದಿದರು. ಪಂಡಿತರ "ಆನಂದ ಭುವನ"ವು ಈಗ "ಸ್ವರಾಜ್ಯ ಭವನ"ವಾಗಿದೆ.

ಲಾಲಾ ಲಜಪತರಾಯ — ಇವರು ಪಂಜಾಬದಲ್ಲಿ ಭಾರತೀಯ ರಾಜಕಾರಣದಲ್ಲಿ "ಲಾಲ-ಬಾಲ-ಪಾಲ" ಎಂದು ಪ್ರಖ್ಯಾತಿಗೊಂಡ ತ್ರಿಮೂರ್ತಿಗಳೊಳಗೆ ಇವರೊಬ್ಬರು. ಪಂಜಾಬದ ಸಿಂಹರೆಂತಲೂ ಇವರಿಗೆ ಸಂಬೋಧಿಸುತ್ತಿದ್ದರು. ಶಿಕ್ಷಣವನ್ನು ಮುಗಿಸುತ್ತಲೇ ವಕೀಲಿಯನ್ನಾರಂಭಿಸಿದರು. ಮತ್ತು ಅದೇ ಕಾಲಕ್ಕೆ ದೇಶಸೇವೆ, ಸಮಾಜ ಸೇವೆಗಳ ಕಂಕಣವನ್ನು ಧರಿಸಿದರು. ಆರ್ಯ ಸಮಾಜದ ಶ್ರೇಷ್ಠ ಕಾರ್ಯಕರ್ತರಲ್ಲಿ ಇವರೊಬ್ಬರು. ಆರ್ಯ ಸಮಾಜದೊಳಗಿನ ಸ್ವಾಮಿ ದಯಾನಂದ ಕಾಲೇಜ ಮುಂತಾದ ಶಿಕ್ಷಣ ಸಂಸ್ಥೆಗಳ ಸಂಸ್ಥಾಪನೆಯಲ್ಲಿ ಇವರೇ ಪ್ರಮುಖರು. ಇವರು ಪ್ರತಿಭಾಶಾಲಿ ಲೇಖಕರೂ ಆಗಿದ್ದರು. ಬಂಗಭಂಗದ ಚಳವಳಿಯ ಕಾಲಕ್ಕೆ ಸರಕಾರವು ಇವರಿಗೆ ಸೆರೆಹಿಡಿದು ಮಂಡಾಲೆಗೆ ಗಡೀಪಾರು ಮಾಡಿದ್ದರು. ೧೯೦೭ರಲ್ಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷತ್ವವನ್ನು ಇವರಿಗರ್ಪಿಸಬೇಕೆಂದು ಬಹಳ ಆತುರದಿಂದ ಹೋರಾಡುತ್ತಿದ್ದ ಲೋ| ಟಿಳಕರು ಇವರು ಅಗ್ರಸರರಾಗಿದ್ದರು. ನೇಮಸ್ತರುಗಳು ಎಷ್ಟರಲ್ಲಿ ಇದರಿಂದರೆ ಸುರತದಲ್ಲಿ ಗೊಂದಲವಾಯಿತು. ಮಹಾಯುದ್ಧದ ಕಾಲದಲ್ಲಿ ಲಾಲಾಜಿಯವರು ಅಮೇರಿಕೆಯಲ್ಲಿದ್ದರು. ೧೯೧೯ರ ತನಕ ಸ್ವದೇಶಕ್ಕೆ ಮರಳಿ ಬರಲು ಇವರಿಗೆ ಅಪ್ಪಣೆ ಕೊಡಲಿಲ್ಲ. ಅಮೇರಿಕೆಯಲ್ಲಿದ್ದಾಗ ಅಲ್ಲಿ ಹಿಂದೀ ತರುಣರ ಸಹಾಯದಿಂದ ಮಾತೃಭೂಮಿಯ ಬಗ್ಗೆ ಒಳ್ಳೇ ಜಾಗೃತಿಯನ್ನುಂಟುಮಾಡಿದರು. ೧೯೨೦ರಲ್ಲಿ ಅವರು ಮರಳಿ ಬಂದ ಕೂಡಲೆ ದೇಶವು ಆದರ ಪ್ರೇಮದಿಂದ ಬರಮಾಡಿಕೊಂಡು ಆ ವರ್ಷ ಸೇರಿದ ಕಲಕತ್ತೆಯ ಖಾಸಾ ಕಾಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ಆರಿಸಲಾಯಿತು. ಕೌನ್ಸಿಲ ಬಹಿಷ್ಕಾರದ ಬಗ್ಗೆ ಮತಭೇದವಿದ್ದರೂ ಅವರು ತನು-ಮನ-ಧನದಿಂದ ಅಸಹಕಾರ ಚಳವಳಿಯಲ್ಲಿ ಸೇರಿದರು ಮತ್ತು ೨ ವರ್ಷ ಕಾರಾಗೃಹವಾಸವನ್ನು ಅನುಭವಿಸಿದರು. ಕೆಲ ಕಾಲ ಅವರು ಎಸೆಂಬ್ಲಿಯ ಸಭಾಸದರಾಗಿದ್ದರು. ೧೯೨೮ರಲ್ಲಿ ಸಾಯಿಮನ ಕಮಿಶನವು ಲಾಹೋರಿಗೆ ಹೋದಾಗ ಅದರ ವಿರೋಧಕ್ಕೆಂದು ಹೊರಟ ಮೆರವಣಿಗೆಯ ಮೇಲೆ ಮಾಡಿದ ಲಾಠೀ ಪ್ರಹಾರದಲ್ಲಿ ಇವರಿಗೆ ಏಟು ಬಿದ್ದಿತು. ಆ ಪೆಟ್ಟಿನಿಂದಲೇ ತಾ| ೧೭-೧೧-೧೯೨೮ ನೇ ಲಾಲಾಜಿಯವರು ವೀರಸ್ವರ್ಗವನ್ನೈದಿದರು.

ಸಿ| ವಿಜಯರಾಘವಾಚಾರಿಯರ — ಇವರು ಸೇಲಮದ ಪ್ರಸಿದ್ಧ ವಕೀಲರು. ಪ್ರಾರಂಭದಿಂದ ಕಾಂಗ್ರೆಸದಲ್ಲಿ ಕೆಲಸಮಾಡುವರು. ಕಾಂಗ್ರೆಸ್ಸು ನೇಮಸ್ತರ ಕೈಯಲ್ಲಿ ಹೋದ ಮೇಲೆ ಕಾಂಗ್ರೆಸ ಬಿಟ್ಟು ಹೋಗಿದ್ದರು. ೧೯೧೬ರಲ್ಲಿ ಪುನಃ ಕಾಂಗ್ರೆಸಿಗೆ ಬಂದು ಸೇರಿದರು. ಕೆಲ ಕಾಲ ವರಿಷ್ಠ ಶಾಸನ ಕೌನ್ಸಿಲಿನಲ್ಲಿ ಮದ್ರಾಸ ಇಲಾಖೆಯ ಪ್ರತಿನಿಧಿಗಳಾಗಿದ್ದರು. ಇವರ ಪ್ರಗಾಢ ರಾಷ್ಟ್ರೀಯ ಸ್ಫೂರ್ತಿಯು

ರುತ್ತಾರೆ. ಇವರನ್ನು ರಾಜ್ಯಘಟನಾಶಾಸ್ತ್ರಕೋವಿದರು ಹಿಂದುಸ್ಥಾನದಲ್ಲಿ ಬೇರೊಬ್ಬರಿಲ್ಲ. ಅವರ ದೀರ್ಘಕಾಲೀನ ಸೇವೆಯನ್ನು ಅನುಲಕ್ಷಿಸಿ ಅಸಹಕಾರ ಯುಗದಲ್ಲಿ ನಾಗಪೂರದೊಳಗೆ ಸೇರಿದ ರಾಷ್ಟ್ರೀಯ ಸಭೆಯ ನಾಯಕತ್ವವನ್ನು ಇವರಿಗೆ ಅರ್ಪಿಸಿದ್ದರು. ಈಗ ವೃದ್ಧಾಪ್ಯದ ಮೂಲಕ ಏಕಾಂತದಲ್ಲಿ ವಿಶ್ರಾಂತಿಸುಖವನ್ನನುಭವಿಸುತ್ತಿದ್ದಾರೆ.

ಹಕೀಮ ಅಜಮಲಖಾನ:— ಇವರು ಅಪ್ರತಿಮ ಹಕೀಮರಾಗಿದ್ದು ಲಕ್ಷಾವಧಿ ಹಣ ಸಂಪಾದಿಸಿದ್ದರು. ರಾಷ್ಟ್ರೀಯ ವೃತ್ತಿಯವರು. ೧೯೧೯ರಲ್ಲಿ ರಾಷ್ಟ್ರೀಯ ಸಭೆಯಲ್ಲಿ ಸೇರಿ ಮಹಾತ್ಮರ ಅನುಯಾಯಿಗಳಾದರು. ೧೯೨೧ರಲ್ಲಿ ದಿಲ್ಲಿಯೊಳಗೆ ಯುನಾನಿ ಮತ್ತು ಆಯುರ್ವೇದ ಪದ್ಧತಿಗಳನ್ನು ಏರ್ಪಾಡು ಮಾಡುವದಕ್ಕೆ ಟಿಬ್ಬಿ ಕಾಲೇಜು ಎಂಬ ದೊಡ್ಡ ಶಿಕ್ಷಣಸಂಸ್ಥೆಯನ್ನು ತೆರೆದಿರುತ್ತಾರೆ. ಈ ಅಸಾಮಿಯವರೊಡನೆ ಹಿಂದು ಮುಸಲ್ಮಾನರ ಐಕ್ಯದ ಬಗ್ಗೆ ಹೋರಾಡಿದ ವೀರ ಪುರುಷರಲ್ಲೊಬ್ಬರು. ೧೯೨೧ರಲ್ಲಿ ಕೂಡಿದ ಅಹಮದಾಬಾದ ಕೊಂಗ್ರೆಸಿನ ಅಧ್ಯಕ್ಷಸ್ಥಾನವು ಇವರಿಗೆ ದೊರಕಿತ್ತು.

ದೇಶಬಂಧು ಚಿತ್ತರಂಜನದಾಸ: 'ಕಲಿಯುಗದ ಕರ್ಣ'ನ ಅವತಾರವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಲಕತ್ತೆಯ ಹೈಕೋರ್ಟಿನಲ್ಲಿ ವಿಖ್ಯಾತ ಬೆರಿಸ್ಟರರಾಗಿದ್ದರು. ತಿಂಗಳಿಗೆ ೫೦ ಸಾವಿರದ ವರೆಗೆ ಇವರಿಗೆ ಪ್ರಾಪ್ತಿಯಿತ್ತಂತೆ. ಅದರ ಅರ್ಧ ಧರ್ಮವೂ ಅಷ್ಟೆ! ಎಷ್ಟು ಸಾವಿರಾರು ವಿದ್ಯಾರ್ಥಿಗಳು ದಾಸ ಬಾಬುಗಳ ಔದಾರ್ಯದಿಂದ ಕಲಿಯುತ್ತಿದ್ದರು. ೧೯೧೭ರಲ್ಲಿ ಇವರು ರಾಷ್ಟ್ರೀಯ ಸಭೆಯಲ್ಲಿ ಪ್ರಾಮುಖ್ಯದಿಂದ ಸೇರಿದರು. ಲೋಕಮಾನ್ಯ ಟಿಳಕರ ಕಳೆಗೆ ಇವರೇ ರಾಷ್ಟ್ರೀಯ ಸಭೆಯಲ್ಲಿ ಪ್ರಧಾನಿಗಳಾಗಿದ್ದರು. ಕಲಕತ್ತೆಯ ಸ್ಪೆಶಲ ಕೊಂಗ್ರೆಸಿನಲ್ಲಿ ಇವರು ಮಹಾತ್ಮರ ಅಸಹಕಾರದ ತೀರ್ಮಾನಕ್ಕೆ ಕಡುತರವಾಗಿ ವಿರೋಧಿಸಿದರು. ಆದರೆ ತೀರ್ಮಾನವು ಪಾಸಾದ ಕೂಡಲೆ ಅದಕ್ಕನುಸಾರವಾಗಿ ನಡೆಯುತ್ತ ತಮ್ಮ ಅಮೌಲ್ಯ ವಕೀಲಿಯ ಮೇಲೆ ಧಾರೆಯೆರೆದು ದೇಶದ ಬಗೆ ಫಕೀರರಾದರು. ೧೯೨೧ರ ಪ್ರಾರಂಭದಲ್ಲಿ ಇವರು ವಿದ್ಯಾರ್ಥಿಗಳನ್ನುದ್ದೇಶಿಸಿ 'ಶಾಲಾ ಕಾಲೇಜುಗಳನ್ನು ಬಿಟ್ಟು ಹೊರಗೆ ಬನ್ನಿರಿ.' ಎಂದು ಹೇಳಿದ ಕೂಡಲೆ ೧೦—೧೨ ಸಾವಿರ ವಿದ್ಯಾರ್ಥಿಗಳು ಒಮ್ಮೆಲೇ ಹೊರಬಿದ್ದರು. ಕಲಕತ್ತೆಯ ವಿದ್ಯಾರ್ಥಿಗಳ ಮೇಲೆ ದಾಸ ಬಾಬುಗಳ ಪ್ರಭಾವವಷ್ಟಿತ್ತು. ೧೯೨೧ರಲ್ಲಿ ಯುವರಾಜರು ಹಿಂದುಸ್ಥಾನಕ್ಕೆ ಬಂದಾಗ ಅವರ ಸ್ವಾಗತ ಸಮಾರಂಭಗಳಿಗೆ ಬಹಿಷ್ಕಾರ ಹಾಕಬೇಕಾಗಿ ರಾಷ್ಟ್ರಾಜ್ಞೆಯಾದಂತೆ ಕಲಕತ್ತೆಯಲ್ಲಿ ಕಡುತರವಾದ ಬಹಿಷ್ಕಾರ ಬೀಳುವದೆಂದು ಮನಗಂಡು ಆಳರಸರು ಸ್ವಯಂಸೇವಕ ದಲಗಳನ್ನು ಬೇಕಾಯಿದೇಶೀರ ಠರಾಯಿಸಿ ಉಗ್ರ ದಬ್ಬಾಳಿಕೆಯನ್ನಾರಂಭಿಸಿದರು. ದೇಶಬಂಧುಗಳ ಒಬ್ಬೊಂಟಿಗ ಮಗನಾದ ಚಿರರಂಜನನು ಮೊದಲೇ ಸೆರೆಯಾದನು. ಕೂಡಲೆ ಸಾವಿರಾರು ಯುವಕರು ಸ್ವಯಂಸೇವಕರಾಗಿ ಅವನ ಹಿಂಬಾಲಿಕೆಯಿಂದ ಕಾರಾಗೃಹವನ್ನು ಸೇರಿದರು. ಅಹಮದಾಬಾದಿನ ರಾಷ್ಟ್ರೀಯ ಸಭೆಯ ನಿಯೋಜಿತ ಅಧ್ಯಕ್ಷರಾದ ದಾಸ ಬಾಬುಗಳು ಕೊನೆಗೆ ಕಾರಾಗೃಹವನ್ನು ಸೇರಿದರು. ರೀಡಿಂಗ ದೊರೆಗಳು ದೇಶಬಂಧುಗಳೊಡನೆ ಸಂಧಾನದ ಪ್ರಸ್ತಾಪ ತೆಗೆದ ವಿಷಯವು ಇತಿಹಾಸಪ್ರಸಿದ್ಧ ಸಂಗತಿಯಾಗಿದೆ. ೧೯೨೨ರಲ್ಲಿ ಚಿತ್ತರಂಜನದಾಸರು ಗಯಾ ಕೊಂಗ್ರೆಸಿನ ಅಧ್ಯಕ್ಷರಾದರು. ಕೌನ್ಸಿಲು-ಪ್ರವೇಶದ ವಿಷಯದಲ್ಲಿ ಇವರ ಪಕ್ಷದವರಿಗೂ ರಾಷ್ಟ್ರೀಯ ಸಭೆಯ ಬಹುಮತದ ಪಕ್ಷದವರಿಗೂ ತೀವ್ರ ಮತಭೇದ ಉಂಟಾಗಿ ಗಯಾ ಕ್ಷೇತ್ರದಲ್ಲಿಯೇ ಇವರು ನೂತನವಾದ ಸ್ವರಾಜ್ಯ ಪಕ್ಷದ ಅಡಿಗಲ್ಲನ್ನಿಟ್ಟರು. ದಾಸ-ನೆಹರುಗಳಂಥ ಮಹಾರಥಿಗಳ ವಿರೋಧವನ್ನು ಕಟ್ಟಿಕೊಳ್ಳಬಾರದೆಂದು ರಾಷ್ಟ್ರೀಯ ಸಭೆಯವರು ಸ್ವರಾಜ್ಯ ಪಕ್ಷಕ್ಕೆ ಪ್ರೇಮದ ಆಶೀರ್ವಾದಗಳನ್ನು ಕೊಟ್ಟು ಮನ್ನಿಸಬೇಕಾಯಿತು. ೧೯೨೪-೨೫ರಲ್ಲಿ ಭಾರತೀಯ ರಾಜಕಾರಣದ ನೇತೃತ್ವವು ದಾಸ ಬಾಬುಗಳ ಕಡೆಗೆ ಇತ್ತು. ಈ ರೀತಿ ಲೋಕಮಾನ್ಯತೆಯ ಶಿಖರದ ಮೇಲೆ ಇರುವಾಗಲೇ ಅವರು ಅಕಾಲಿಕ ನಿಧನ ಹೊಂದಿದರು. ದೇಶವೆಲ್ಲ ಹಳಹಳಿಸಿತು. ಇವರು ಶ್ರೇಷ್ಠ ತರಗತಿಯ ವಾಕ್ಪಟುಗಳೂ, ಸರಸ್ವತೀ ಭಕ್ತರೂ, ಕವಿಗಳೂ ಆಗಿದ್ದರು.

ಮೌಲಾನಾ ಅಬುಲ್ ಕಲಮ ಅಝಾದ:— ಘನ ವಿದ್ವಾಂಸರು, ಧಾರ್ಮಿಕ ಪ್ರವೃತ್ತಿಯವರು. ಮುಸಲ್ಮಾನ ಸಮಾಜದಲ್ಲಿ ಇವರ ಪ್ರಾಬಲ್ಯವಿದೆ. ಜಾತ್ಯಭಿಮಾನಕ್ಕಿಂತ ಇವರಿಗೆ ರಾಷ್ಟ್ರಾಭಿಮಾನ-ದೇಶಾಭಿಮಾನವೇ ಹೆಚ್ಚು. ವಿಶಾಲ ದೃಷ್ಟಿಯಿಂದ ರಾಷ್ಟ್ರಕಾರ್ಯದ ವಿಚಾರ ಮಾಡುತ್ತಾರೆ. ಇತ್ತ ೧೫ ವರ್ಷಗಳಿಂದ ಇವರು ಕೊಂಗ್ರೆಸ ಕಾರ್ಯಕಾರಿ ಮಂಡಳದಲ್ಲಿ ಸಭಾಸದರಿದ್ದಾರೆ. ಕೌನ್ಸಿಲು-ಪ್ರವೇಶದ ಪ್ರಕರಣದ ನಿಕಾಲೆ ಮಾಡುವದಕ್ಕೆ ೧೯೨೩ರಲ್ಲಿ ದಿಲ್ಲಿಯಲ್ಲಿ ಕೂಡಿದ ಖಾಸಾ ರಾಷ್ಟ್ರೀಯ ಸಭೆಗೆ ಇವರೇ ಅಧ್ಯಕ್ಷರಾಗಿ ಕುಶಲತೆಯಿಂದ ಸಭೆಯ ಕಾರ್ಯವನ್ನು ಪಾರಗಾಣಿಸಿದ್ದರು.

ಮೌಲಾನಾ ಮಹಮ್ಮದ ಅಲಿ— ಇಸ್ಲಾಮ ಧರ್ಮದ ಉತ್ಕಟ ಅಭಿಮಾನಿಗಳು. ಅಲೀಗಢ ಕಾಲೇಜಿನ ತೇಜಸ್ವಿ ವಿದ್ಯಾರ್ಥಿಗಳು. ಆಯ್. ಸಿ. ಎಸ್. ಪರೀಕ್ಷೆಯಲ್ಲಿ ಯಶಸ್ಸು ದೊರಕದೆ ಬಡೋದೆ ಸಂಸ್ಥಾನದಲ್ಲಿ ನೌಕರಿ ಹಿಡಿದರು. ಮುಂದೆ ನೌಕರಿಯನ್ನು ಬಿಟ್ಟು 'ಕೊಮ್ರೇಡ' ಮತ್ತು 'ಹಮದರ್ದ' ಎಂಬ ಇಂಗ್ಲಿಷ ಮತ್ತು ಉರ್ದು ಪತ್ರಿಕೆಗಳನ್ನು ಹೊರಡಿಸಿದರು. ಮಹಾಯುದ್ಧಕ್ಕಾರಂಭವಾಗುತ್ತಲೇ ಬ್ರಿಟಿಶ ಸರಕಾರದ ವಿರುದ್ಧವಾಗಿ ಯುದ್ಧದಲ್ಲಿ ಸೇರಿದ ತುರ್ಕಸ್ಥಾನದ ಬಗ್ಗೆ ವಿಶೇಷ ಸಹಾನುಭೂತಿ ತೋರ್ಪಡಿಸುತ್ತಿದ್ದುದರಿಂದ ಇವರಿಗೂ ಇವರ ಜ್ಯೇಷ್ಠಬಂಧುಗಳಾದ ಮೌ. ಶೌಕತ ಅಲ್ಲಿಯವರಿಗೂ ಆಳರಸರು ೪ ವರ್ಷ ಬಂದಿವಾಸದಲ್ಲಿಟ್ಟರು. ಅಮೃತಸರ ಕೊಂಗ್ರೆಸ್ಸಿನ ಕಾಲಕ್ಕೆ ಎಲ್ಲ ಕೈದಿಗಳೊಡನೆ ಇವರೂ ಬಿಡುಗಡೆಯಾದರು. ಕೂಡಲೆ ಖಿಲಾಫತ ಸಂಸ್ಥೆಯ ಸುರಕ್ಷಿತತೆಯ ಬಗ್ಗೆ ದೇಶದಲ್ಲೆಲ್ಲ ಪ್ರಚಂಡ ಚಳವಳಿಯನ್ನೆಬ್ಬಿಸಿದರು. ಮಹಾತ್ಮರೂ ಸಹ ಖಿಲಾಫತ ಪ್ರಶ್ನೆಯನ್ನು ರಾಷ್ಟ್ರೀಯ ಪ್ರಶ್ನೆಯನ್ನಾಗಿ ಮಾಡಬೇಕಾಗಿ ಆಗ್ರಹಪಟ್ಟ ಶ್ರೇಯಸ್ಸು ಇವರದೇ. ಅಸಹಕಾರದ ಯುಗದಲ್ಲಿ ಅಲಿ ಬಂಧುಗಳು ಮಹಾತ್ಮರ ಎಡ-ಬಲ ಭುಜಗಳಾಗಿದ್ದರು. ೧೯೨೧ರಲ್ಲಿ ಇವರಿಬ್ಬರ ಮೇಲೂ, ಬೇರೆ ಕೆಲವರ ಮೇಲೂ ಸರಕಾರದವರು ಸುಪ್ರಸಿದ್ಧ 'ಕರಾಚಿ ಖಟ್ಲೆ'ಯನ್ನು ಹೂಡಿದರು. ಅದರಲ್ಲಿ ಇವರಿಗೆ ೨ ವರ್ಷ ಕಾರಾಗೃಹವಾಸವಾಯಿತು. ಆ ಕಾಲದ ಇವರ ದೇಶಸೇವೆಯನ್ನು ಅನುಲಕ್ಷಿಸಿ ದೇಶವು ಇವರಿಗೆ ೧೯೨೩ರಲ್ಲಿ ಕಾಕಿನಾಡಿನಲ್ಲಿ ಸೇರಿದ ರಾಷ್ಟ್ರೀಯ ಸಭೆಯ ನೇತೃತ್ವವನ್ನು ಅರ್ಪಿಸಿತು. ಆ ಮೇಲೆ ಕ್ರಮೇಣವಾಗಿ ಇವರಲ್ಲಿ ಜಾತ್ಯಭಿಮಾನವೇ ಮೇಲಾಗಿ ಇವರು ರಾಷ್ಟ್ರೀಯ ಸಭೆಯಿಂದ ಒಡೆದುಹೋದರು. ಆದಾಗ್ಯೂ ದೇಶದ ಸ್ವಾತಂತ್ರ್ಯದ ಬಗ್ಗೆ ಇವರು ಕಳವಳಿಸುತ್ತಿದ್ದರು. ದೇಹದಲ್ಲಿ ನೆಟ್ಟಗಿಲ್ಲದಿದ್ದರೂ ಮೊದಲನೇ ದುಂಡು ಮೇಜಿನ ಪರಿಷತ್ತಿಗೆ ಹೋಗಿ, ಅಲ್ಲಿ "ಸ್ವತಂತ್ರ ಹಿಂದುಸ್ಥಾನಕ್ಕೆ ನನಗೆ ಮರಳಿ ಕಳಿಸಿರಿ. ಇಲ್ಲವಾದರೆ ಇಲ್ಲಿಯೇ ನಾನು ಸಾಯಬಯಸುವೆನು." ಎಂದು ಖಂಡ-ತುಂಡವಾಗಿ ಉದ್ಗರಿಸಿದರು! ದುರ್ದೈವದಿಂದ ಮೇಲಿನಂತೆ ಉದ್ಗಾರ ತೆಗೆದ ಕೆಲ ದಿನಗಳಲ್ಲಿಯೇ ಲಂಡನಿನಲ್ಲಿಯೇ ಇವರ ದೇಹಾವಸಾನವಾಯಿತು.

ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿ:— ಈ ಜಗದ್ವಂದ್ಯ ಅಹಿಂಸಾ ಧರ್ಮದ ಮೂರ್ತಿಗಳ, ಸತ್ಯ-ಸತ್ತ್ವಗಳ ಪ್ರತಿಷ್ಠಾಪನಾಚಾರ್ಯರ, ಜಗದುದ್ಧಾರಕ್ಕಾಗಿ ಜನಿಸಿದ ಅವತಾರಿ ವಿಭೂತಿಗಳ ಚರಿತ್ರವನ್ನೂ, ಚಾರಿತ್ರ್ಯವನ್ನೂ ವಾಚಕರು ಚೆನ್ನಾಗಿ ಅರಿತಿರುವರು. ೧೯೨೦ರಿಂದ ಈ ವರೆಗೆ ರಾಷ್ಟ್ರೀಯ ಸಭೆಯ ಚಾಲಕತ್ವವು ಇವರನ್ನೇ ಅವಲಂಬಿಸಿಯದೆ. ಮಹಾತ್ಮರೆಂದರೆ ರಾಷ್ಟ್ರೀಯ ಸಭೆ; ರಾಷ್ಟ್ರೀಯ ಸಭೆಯೆಂದರೆ ಮಹಾತ್ಮರು; ಹೀಗೆ ಪರ್ಯಾಯ ಶಬ್ದಗಳೇ ಆಗಿವೆ. ೧೯೨೪ರಲ್ಲಿ ನಮ್ಮ ಕರ್ನಾಟಕದೊಳಗೆ ಸೇರಿದ ರಾಷ್ಟ್ರೀಯ ಸಭೆಯ ಅಧ್ಯಕ್ಷಪದದ ಹೂಮಾಲೆಯನ್ನು ಇವರಿಗರ್ಪಿಸಿ ರಾಷ್ಟ್ರವು ಆ ಪದದ ಹೆಚ್ಚಳವನ್ನು ಹೆಚ್ಚಿಸಿದೆ!

ಶ್ರೀಮತಿ ಸರೋಜಿನಿ ನಾಯಡು.— ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಮೊದಲನೇ ಹಿಂದೀ ಮಹಿಳೆಯಿವರೇ. ತಮ್ಮ ತೇಜಸ್ವಿ ಕಾವ್ಯಮಯ ವಾಕ್ಪಟುತ್ವದಿಂದ ಬ್ರಿಟಿಶ ಸಾಮ್ರಾಜ್ಯದಲ್ಲೂ ಸ್ವತಂತ್ರ ಅಮೇರಿಕೆಯಲ್ಲೂ ಪ್ರಸಿದ್ಧರಾಗಿರುವರು. ಮಹಾತ್ಮಾ ಗಾಂಧಿಗಳ ಪರಮ ಸ್ನೇಹವನ್ನೂ ವಿಶ್ವಾಸವನ್ನೂ ಸಂಪಾದಿಸಿದ ಪುಣ್ಯ ಇವರದಾಗಿದೆ. ಸತ್ಯಾಗ್ರಹದ ಕಾಲದಲ್ಲಿ ಮುಂಬಯಿಯೊಳಗಿನ ಚಳವಳಿಯಲ್ಲಿ ಜೀವಜ್ಯೋತಿಯನ್ನು ತುಂಬಿ ೯ ತಿಂಗಳು ಕಾರಾಗೃಹವಾಸವನ್ನನುಭವಿಸಿದರು. ೧೯೩೦ರಲ್ಲಿ ಪುನಃ ಕಾರಾಗೃಹಕ್ಕಟ್ಟಿಬಿಟ್ಟರು. ೧೯೨೫ರಲ್ಲಿ ಇವರು ಅಮೇರಿಕೆಗೆ ಹೋಗಿ ಅಲ್ಲಿ ಹಿಂದುಸ್ಥಾನದ ಬಗ್ಗೆ ಜಾಗೃತಿಯನ್ನುಂಟು ಮಾಡಿದ ಅಮೌಲ್ಯ ಸೇವೆಗಾಗಿ ಆ ವರ್ಷದ ಕೊಂಗ್ರೆಸಾಧಿಪತ್ಯದ ಮಾನವು ಇವರಿಗರ್ಪಿಸಲಾಯಿತು. ದೇವಿಯವರಿಗೀಗ ೫೬ ವರುಷ ಪ್ರಾಯ. ಆದಾಗ್ಯೂ ೧೬ ವರ್ಷದ ಯುವತಿಯಂತೆ ಹುರುಪಿನಿಂದ ರಾಷ್ಟ್ರಕಾರ್ಯ ಮಾಡುತ್ತಿದ್ದಾರೆ.

ಶ್ರೀನಿವಾಸ ಅಯ್ಯಂಗಾರ— ಮದ್ರಾಸ ಹೈಕೋರ್ಟಿನ ವಿಖ್ಯಾತ ವಕೀಲರು. ೧೯೧೬ರಲ್ಲಿ ಮದ್ರಾಸ ಸರಕಾರದ ಎಡ್ವೊಕೇಟ—ಜನರಲ್‌ರಿದ್ದರು. ಮರು ವರುಷ ರಾಜೀನಾಮೆ ಕೊಟ್ಟು ರಾಜಕಾರಣದಲ್ಲಿ ಸೇರಿದರು. ೧೯೨೨ರಲ್ಲಿ ಕೌನ್ಸಿಲ-ಪ್ರವೇಶದ ವಾದವೆದ್ದ ಮೇಲೆ ದಾಸ-ನೆಹರೂ ಪಕ್ಷಕ್ಕೆ ಸೇರಿ ಸ್ವರಾಜ್ಯ ಪಕ್ಷದ ದಕ್ಷಿಣ ಹಿಂದುಸ್ಥಾನದ ಮುಂದಾಳುಗಳಾದರು; ೧೯೨೩ರ ಚುನಾವಣೆಯಲ್ಲಿ ಆರಿಸಿಬಂದು ಅಸೆಂಬ್ಲಿಯ ಸಭಾಸದರಾದರು. ಕೃತಿಗಿಂತ ಉಕ್ತಿ ಹೆಚ್ಚು. ಸ್ವರಾಜ್ಯ-ಸ್ವಾತಂತ್ರ್ಯಗಳ ವಾದ ಉಪಸ್ಥಿತವಾದಾಗ ಸ್ವಾತಂತ್ರ್ಯವಾದಿಗಳ ಧುರೀಣತ್ವವನ್ನು ವಹಿಸಿದ ಮಹಾನುಭಾವರಿವರು. ೧೯೨೬ರಲ್ಲಿ ಗೋಹತ್ತಿಯಲ್ಲಿ ಸೇರಿದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದರು. ೧೯೩೦ರಿಂದ ಇವರು ಅಜ್ಞಾತವಾಸದಲ್ಲಿದ್ದಾರೆ. ಕೆಲವು ದಿನಗಳ ಹಿಂದೆ ಇವರಿಗೆ ಪುನಃ ಕಾರ್ಯಕ್ಷೇತ್ರದಲ್ಲಿ ಅವತರಿಸಲು ಮನಒಲಿಸಿದ ವರ್ತಮಾನ ವಾಚಕರ ನೆನಪಿನಲ್ಲಿರಬಹುದು.

ಡಾ। ಎಮ್. ಏ. ಅನ್ಸಾರಿ— ದಿಲ್ಲಿಯೊಳಗಿನ ಪ್ರಖ್ಯಾತ ಡಾಕ್ಟರರು. ಹಿಂದು-ಮುಸಲ್ಮಾನರ ಒಗ್ಗಟ್ಟು ಒದಗಿಸಿಕೊಡಲು ಹಗಲಿರುಳು ಹೋರಾಡುವ ಮಹಾನುಭಾವರು. ಹೋಮ ರೂಲ ಚಳವಳಿಯ ಕಾಲಕ್ಕೆ ರಾಜಕಾರಣದಲ್ಲಿ ಬಿದ್ದು, ಅಸಹಕಾರ ಯುಗದಲ್ಲಿ ರಾಷ್ಟ್ರಧುರೀಣರಲ್ಲೊಬ್ಬರಾದರು. ಕೌನ್ಸಿಲು-ಪ್ರವೇಶಕ್ಕೆ ಇವರ ವಿರೋಧವಿತ್ತು. ೧೯೨೭ರಲ್ಲಿ ಮದ್ರಾಸ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ೧೯೨೮ರಲ್ಲಿ ಹಿಂದೀ ರಾಜ್ಯಘಟನೆ ತಯಾರಿಸಲಿಕ್ಕೆ ಕರೆಯಲ್ಪಟ್ಟ ಸರ್ವಪಕ್ಷೀಯ ಪರಿಷತ್ತಿನ ಅಧ್ಯಕ್ಷರೂ ಇವರೇ ಆಗಿದ್ದರು. ೧೯೩೦ರಲ್ಲೂ, ೧೯೩೨ರಲ್ಲೂ ಸೆರೆಮನೆಯನ್ನು ಸೇರಿದ್ದಾರೆ. ಉಜ್ವಲ ರಾಷ್ಟ್ರಭಕ್ತರಿವರು; ಜಾತಿಭಕ್ತರಲ್ಲ. ಇವರಿಗೀಗ ೫೫ ವರ್ಷ ಪ್ರಾಯ.

ಜವಾಹಿರಲಾಲ ನೆಹರು— ದಿವಂಗತ ಪಂಡಿತ ಮೋತಿಲಾಲರ ಏಕಮೇವ ಪುತ್ರರತ್ನವಿದು. ಬಾಲ್ಯದಲ್ಲಿ ಇಂಗ್ರಜೀ ಗೃಹಸ್ಥರ ಅಂಕೆಯಲ್ಲಿ ಇವರ ಶಿಕ್ಷಣ ನಡೆಯಿತು. ಮುಂದೆ ವಿಲಾಯತಿಗೆ ಹೋಗಿ ಉಚ್ಚ ಶಿಕ್ಷಣ ಪಡೆದರು. ೧೯೧೨ರಲ್ಲಿ ಬ್ಯಾರಿಸ್ಟರರಾದರು. ಕೆಲ ಕಾಲ ವಕೀಲಿ ಮಾಡಿ, ಅಸಹಕಾರ ಯುಗದಲ್ಲಿ ರಾಜಕಾರಣದಲ್ಲಿ ಸೇರಿದರು. ಈ ತನಕ ಅವರು ೯ ಬಾರಿ ತುರಂಗಕ್ಕೆ ಹೋಗಿದ್ದಾರೆ. ತಮ್ಮ ಆಯುಷ್ಯವನ್ನೇ ಹಿಂದಮಾತೆಯ ಚರಣಕಮಲಗಳಿಗೆ ಅರ್ಪಿಸಿದ್ದಾರೆ. ಶ್ರೀಮಂತರ ವಿಲಾಸಿ ವಾತಾವರಣದಲ್ಲಿ ಹುಟ್ಟಿ ಬೆಳೆದ ಇವರು ಸ್ವಸುಖದ ಹಾಗು ವಿಲಾಸೋಪಭೋಗಗಳ ಮೇಲೆ

[ಮುಂದೆ ೧೪ನೇ ಪಾನು ನೋಡಿರಿ.]

ರಾಷ್ಟ್ರೀಯ ಸಭೆಯೂ, ನಮ್ಮ ಕನ್ನಡ ಜಿಲ್ಲೆಯೂ.

(ಗೆಳೆಯನಿಂದ)

ರಾಷ್ಟ್ರೀಯ ಸಭೆಗೂ ನಮ್ಮೀ ಉತ್ತರ ಕನ್ನಡ ಜಿಲ್ಲೆಗೂ ಪ್ರಥಮ ಸಂಬಂಧ ಕೈ| ವಾ| ಸರ್ ನಾರಾಯಣರಾವ ಚಂದಾವರಕರ ಇವರಿಂದಲೇ. ಮುಂಬಯಿಯಲ್ಲಿ ೧೮೮೫ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆ ಸ್ಥಾಪನೆಯಾದ ಬಳಿಕ ಸರ್ ನಾರಾಯಣರಾಯರು ಸರ್ ಫಿರೋಜಶಹಾ ಮೆಹ್ತಾ ಮೊದಲಾದವರೊಡನೆ ಸಹಕಾರಿಯಾಗಿ ಕೆಲಸ ಮಾಡುತ್ತಿದ್ದರು. ಸರ್ ನಾರಾಯಣರಾಯರು ರಾಷ್ಟ್ರೀಯ ಸಭೆಯ ಪುರಸ್ಕಾರದ ಉತ್ಸಾಹ ನೋಡಿ ಸರ್ ನಾರಾಯಣರಾಯರಿಗೆ ೧೯೦೦ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ನೇಮಿಸೋಣಾಯಿತು. ಆ ಮೇಲೆ ಮುಂಬಯಿ ಹೈಕೋರ್ಟಿನ ನ್ಯಾಯಾಧೀಶರಾದ ಬಳಿಕ ಅವರು ರಾಜಕೀಯ ವ್ಯಾಪಾರಗಳೊಳಗಿಂದ ಅಲಿಪ್ತರಾದರು. ನಮ್ಮೀ ಜಿಲ್ಲೆಯೊಳಗೆ ರಾಷ್ಟ್ರೀಯ ಸಭೆಯ ಹೆಸರು ಲೋಕಮಾನ್ಯರಿಂದಲೇ ಕೇಳೋಣಾಯಿತೆಂದು ಧಾರಾಳವಾಗಿ ಹೇಳಬಹುದು. ಲೋಕಮಾನ್ಯರ 'ಕೇಸರಿ'ಯ ವಾಚನದಿಂದ ಕಾರವಾರದಲ್ಲಿ ಸಾರ್ವಜನಿಕ ಗಣಪತಿಉತ್ಸವ, ಅಂಕೋಲೆಯಲ್ಲಿ ಸ್ವದೇಶಿ ಅಂಗಡಿ, ಶಿರ್ಶಿಯಲ್ಲಿ ವನದುಃಖ ನಿವಾರಣಾ ಸಭೆ, ಹಳಿಯಾಳದಲ್ಲಿ ತಾಲೂಕ ಸಭೆ ಮೊದಲಾದ ಚಿಕ್ಕ-ಪುಟ್ಟ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತಿದ್ದವು. ಇವುಗಳಿಗೆ ಸುಸಂಘಟಿತ ರೂಪವಿರಲಿಲ್ಲ. ಇಡೀ ಕಾನಡಾ ಜಿಲ್ಲೆಗೆ ಜಿಲ್ಹಾ ಬೇಸಾಯ ಸಂಘವೆಂಬದೊಂದು ಸಂಸ್ಥೆಯಿತ್ತು. ಇವು ರಾಷ್ಟ್ರೀಯ ಸಭೆಯ ಅಂಗಗಳಾಗಿ ಮೂಡಿಯಲಿಲ್ಲ. ಆಗಿಂದಾಗ ಸ್ಥಳಿಕ ಸಂಕಟಗಳ ವಿಚಾರ ಮಾಡಿ ಅವುಗಳಿಗೆ ತಕ್ಕ ಪರಿಹಾರವನ್ನು ಸೂಚಿಸಿ ಜಿಲ್ಹಾಧಿಕಾರಿಗಳ ಕಡೆ ವಿನಂತಿಮಾಡಿಕೊಳ್ಳುತ್ತಿದ್ದವು. ೧೯೧೬ನೇ ಇಸ್ವಿಯಲ್ಲಿ ಲಖನೌದೊಳಗೆ ರಾಷ್ಟ್ರೀಯ ಸಭೆಯಾದ ಬಳಿಕ ಕಾನಡಾ ಜಿಲ್ಹಾ ಬೇಸಾಯ ಸಂಘದವರು ಕಾರವಾರ ಮುಕ್ಕಾಮಿನಲ್ಲಿ ೪-೧೧-೧೯೧೬ನೇಗೆ ಕೊಂಗ್ರೆಸ ಲೀಗ ಸುಧಾರಣಾ ಯೋಜನೆಯನ್ನು ಸರ್ವಾನುಮತದಿಂದ ಪುರಸ್ಕಾರ ಮಾಡಿದ ಸಂಗತಿ ನೆನಪಾಗುತ್ತದೆ. ಈ ಸಭೆಗೆ ಶ್ರೀ| (ಈಗ ರಾವಸಾಹೇಬ) ಮಂಜನಾಥರಾವ ಕಾಯಕಿಣಿಯವರು ಅಧ್ಯಕ್ಷರಾಗಿದ್ದರು. ಡಾ| ಎನಿಬಿಝಂಟರವರ ಹೋಮರೂಲಿನ ಚಳವಳಿಯಲ್ಲಿ ಬಿಝಂಟಮ್ಮನವರು ಇಡೀ ಭರತಭೂಮಿಯಲ್ಲಿ ಹೋಮ ರೂಲಿನ ಬಿರುಗಾಳಿ ಬೀಸಿದ ಸಂಗತಿ ಸರ್ವಶ್ರುತವಿದೆ. ಆ ಕಾಲದಲ್ಲಿ ಶಿರ್ಶಿ, ಹಳಿಯಾಳ, ಹೊನ್ನಾವರ ಕಡೆಗಳಲ್ಲಿ ಹೋಮ ರೂಲ ಲೀಗಿನ ಶಾಖೆಗಳು ಸ್ಥಾಪಿಸಲ್ಪಟ್ಟವು. ಶಿರ್ಶಿಯ ರಾ| ವಾಸುದೇವರಾವ ಕೊಪ್ಪಳ, ರಾ| ಭೀಮರಾವ ರಿತ್ತಿ, ರಾ| ಶೇಷಗಿರಿರಾವ ಕೇಶವೈನ ಮೊದಲಾದವರು ಹೋಮ ರೂಲಿನ ಪುರಸ್ಕರ್ತರು. ಆದಾಗ್ಯೂ ಜಿಲ್ಹೆಯಲ್ಲಿ ಏಕಸೂತ್ರವಾದ ರಾಜಕಾರಣದ ಚಳವಳಿಯಿರಲಿಲ್ಲ. ಮುಂಬಯಿಯೊಳಗಿನ ರಾ| ವರ್ಟೀ ಮೊದಲಾದ ಕನ್ನಡಿಗರ ಮುಂಬಯಿಯೊಳಗೆ 'ಕೆನರಾ ಪೀಪಲ್ಸ ಎಸೋಸಿಯೇಶನ್' ಎಂಬದೊಂದು ಸಂಸ್ಥೆಯನ್ನು ಸ್ಥಾಪಿಸಿ ಕಾನಡಾ ಜಿಲ್ಹೆಯೊಳಗಿನ ರಾಜಕಾರಣಕ್ಕೆ ಜಿಲ್ಹಾ ಸ್ವರೂಪ ಕೊಟ್ಟರು.' ಈ ಸಂಸ್ಥೆಯವರ ಧ್ಯೇಯ, ಸರಕಾರ ಮತ್ತು ಜನರ ಮಧ್ಯಸ್ಥಿಕೆಯದಿತ್ತು. ಈ ಸಂಸ್ಥೆಯ ಪರವಾಗಿಯೇ ಕಾರವಾರದಲ್ಲಿ ಸರ್ ನಾರಾಯಣರಾಯರ ಅಧ್ಯಕ್ಷತೆಯೊಳಗೆ ಕಾನಡಾ ಜಿಲ್ಹೆಯ ಪ್ರಥಮ ಪರಿಷತ್ತು ೧೯೨೦ನೇ ಇಸ್ವಿ ಮೇ ೧೫ನೇ ತಾರೀಖಿಗೆ ಸೇರಿತು. ಈ ಸಭೆಯ ಕಾಲಕ್ಕೆ ಸರ್ ನಾರಾಯಣರಾಯರು ನೇಮಸ್ತ ವೃತ್ತಿಯವರಾಗಿದ್ದರು. ಜಿಲ್ಹೆಯೊಳಗೆಲ್ಲ ಹೋಮ ರೂಲಿನ ಬಿರುಗಾಳಿ ಬೀಸುತ್ತಿದ್ದಾಗ್ಯೂ ನಮ್ಮ ಪರಿಷತ್ತು ನೇಮಸ್ತದಾರಿಯಿಂದಲೇ ಮಾರ್ಗಕ್ರಮಣ ಮಾಡಿತು. ಹೋಮ ರೂಲ ವಿಚಾರದ ಜನಗಳಿಗೆ ಪರಿಷತ್ತಿನ ನಿರ್ಣಯಗಳಿಂದ ಸಮಾಧಾನವಾಗದಿದ್ದದ್ದು ಸಹಜ. ಆದಾಗ್ಯೂ ರಾಜಕಾರಣ ಚಟುವಟಿಕೆಯ ಪ್ರಾರಂಭವೆಂದು ಈ ಪರಿಷತ್ತಿಗೆ ಮಹತ್ವವಿದೆ. ಈ ಪರಿಷತ್ತು ಮೊದಲನೇದು; ಹಾಗು ಕೊನೆಯದು. ಆ ಮೇಲೆ ಅದೇ ಇಸ್ವಿಯ ಅಗಸ್ಟ ತಿಂಗಳಲ್ಲಿ ಲೋಕಮಾನ್ಯರ ನಿಧನವಾಯಿತು. ಮಹಾತ್ಮರ ಅಪೇಕ್ಷೆಯಂತೆ ಕುಮಟಾ, ಅಂಕೋಲಾ, ಕಾರವಾರ, ಶಿರ್ಶಿ, ಗೋಕರ್ಣ ಮೊದಲಾದ ಕಡೆಗಳಲ್ಲಿ ಹರತಾಳವಾಯಿತು. ಶಿರ್ಶಿ, ಹೊನ್ನಾವರ, ಹಳಿಯಾಳ, ಗೋಕರ್ಣ ಮೊದಲಾದ ಕಡೆಗಳಲ್ಲಿ ನಾಗರಿಕರು ಸಭೆಸೇರಿ ದುಃಖಪ್ರದರ್ಶನ ಮಾಡಿದರು. ಹೊನ್ನಾವರದಲ್ಲಿ ಲೋಕಮಾನ್ಯರ ಸ್ಮಾರಕ ಕೀರ್ತನ ಸಹ ಆಯಿತು. ಅದೇ ಸಮಯ ಜಾದಾ ರಾಷ್ಟ್ರೀಯ ಸಭೆ ಆಯಿತು. ಅಸಹಕಾರದ ಶಂಖನಾದವಾಯಿತು. ಆ ಶಂಖನಾದದಿಂದ ನಮ್ಮೀ ಕನ್ನಡ ಜಿಲ್ಹೆ ಜಾಗೃತವಾಯಿತು. ಸರಕಾರದ ಸಂಪರ್ಕವಿದ್ದ ಸಂಸ್ಥೆಗಳನ್ನು ಅಲ್ಲಲ್ಲಿಯವರು ತ್ಯಜಿಸಿದರು. ಕೌನ್ಸಿಲು ಬಹಿಷ್ಕಾರವನ್ನು ಮನ್ನಿಸದೆ ಕೌನ್ಸಿಲು ಚುನಾವಣೆಗೆ ನಿಂತ ಶಿರ್ಶಿಯ ವಕೀಲರಿಗದಿಂದಾಗಿ ಕಾರವಾರದ ಫ್ಲೋರೆಸ್ಟ ಗಾರ್ಡರಿಗೆ ಮತ ಕೊಟ್ಟು ಕಳುಹಿದ ನಮ್ಮ ಜಿಲ್ಹೆಯವರ ರಾಷ್ಟ್ರೀಯ ವೃತ್ತಿ ಎಲ್ಲರ ನೆನಪಿನಲ್ಲಿರಬೇಕು. ಅಸಹಯೋಗ ಮನ್ವಂತರದಲ್ಲಿಯೇ ಕುಮಟಾ, ಹೊನ್ನಾವರ, ಭಟಕಳ, ಶಿರ್ಶಿ, ಸಿದ್ದಾಪುರ, ಹಳಿಯಾಳ ಕಡೆಗಳಲ್ಲಿ ಕೊಂಗ್ರೆಸ ಕಮಿಟಿಗಳು ಸ್ಥಾಪನೆ ಹೊಂದಿದವು. ಲೋಕಮಾನ್ಯರ ಸ್ವರಾಜ್ಯ ಸಂಘದ ಝುಂಜಾವಾತದಿಂದಲೂ ಒಳ್ಳೇ ಜಾಗೃತಿಯಾಯಿತು. ಸಭಾಸದತ್ವವನ್ನು ತ್ಯಜಿಸುವದು, ಕೌನ್ಸಿಲಿಗೆ ಮತ ಕೊಡದಿರುವದು, ಶಾಲೆಗಳನ್ನು ಬಿಡುವದು, ಪಟೇಲರು ರಾಜೀನಾಮೆ ಕೊಡುವದು ಮೊದಲಾದ ಕ್ರಮಗಳು ನಡೆದವು. ಅಸಹಕಾರಿಗಳ ತಾಪ ತಾಳಲಾರದೆ ಇಷ್ಟು ರಾವಸಾಹೇಬರು ತಮ್ಮ ಬಿರುದುಗಳನ್ನೂ, ಪದಕಗಳನ್ನೂ ತ್ಯಜಿಸಿದರು. ಅವರೂ ಅಧಿಕಾರಿಗಳ ರೋಷವಾಗಬಾರದೆಂದು ಅಸಹಕಾರಕ್ಕೂ, ಬಿರುದು-ಪದಕಗಳ ತ್ಯಾಗಕ್ಕೂ ಏನೂ ಸಂಬಂಧವಿಲ್ಲವಾಗಿ ಸಾರಿದರು. ಶಿರ್ಶಿಯೊಳಗಿನ ಇಂಗ್ಲಿಷ ಶಾಲೆಯ ವಿದ್ಯಾರ್ಥಿಗಳು ಕ್ರಿಕೆಟ್, ಫುಟಬೊಲ ಆಟಗಳನ್ನು ಆಡಲಿಕ್ಕಿಲ್ಲವಾಗಿ ಅಧ್ಯಾಪಕರಿಗೆ ಪತ್ರಬರೆದರು. ಚಹ ಮತ್ತು ವಿದೇಶಿ ಸಕ್ಕರೆಗೆ ಶಿರ್ಶಿಯಲ್ಲಿ ಕಠಿಣ ಬಹಿಷ್ಕಾರ. ಕೌನ್ಸಿಲು ಬಹಿಷ್ಕಾರ ಅವರ್ಣನೀಯವಾದುದು. ಶೇಕಡಾ ೧೦ ಸಹ ಮತ ಬೀಳಲಿಲ್ಲ. ಯಲ್ಲಾಪುರದಲ್ಲಿ ೬೦೦ ಮತಗಳಿದ್ದವು; ಒಂದು ಸಹ ಮತ ಬೀಳಲಿಲ್ಲ. ಹಳಿಯಾಳದಲ್ಲಿಯೂ ಇದೇ ಗತಿ. ಮತ ಕೊಟ್ಟ ಬಗ್ಗೆ ಹೊನ್ನಾವರ ತಾಲೂಕಿನ ಒಂದು ಹಳ್ಳಿಯಲ್ಲಿ ಒಬ್ಬ ಮತದಾರನಿಗೆ ಚಹದಂಗಡಿಯಲ್ಲಿ ಚಹಾ ಸಹ ಸಿಗದೆ ಒಳ್ಳೇ ಪೇಚಾಟವಾಯಿತು. ಭರತನಹಳ್ಳಿಯ ಸೀಮೆಯಲ್ಲಿ ೪೦ ಗ್ರಾಮಗಳ ಪಟೇಲರು ರಾಜೀನಾಮೆ ಕೊಟ್ಟರು. ಅಸಹಕಾರ ಯುಗದಲ್ಲಿ ನಮ್ಮೀ ಜಿಲ್ಹೆಗೆ ಇಷ್ಟೆಲ್ಲ ಉತ್ಸಾಹ ಬರಲು ಮಹಾತ್ಮರ ಆಗಮನವೇ ಕಾರಣ! ಮಹಾತ್ಮರು ತಾ. ೧೦-೧೧-೧೯೨೦ನೇಗೆ ಹಳಿಯಾಳ ತಾಲೂಕ ಸಭೆಯ ಆಮಂತ್ರಣವನ್ನು ಸ್ವೀಕರಿಸಿ ಮೌ| ಶೌಕತ ಅಲ್ಲಿಯವರೊಡನೆ ಆಗಮಿಸಿದ ಸಂಗತಿ ನೆನಪಾದಿಸಲು ಅತಿ ಆನಂದವಾಗುತ್ತದೆ. ದೇ| ಭ| ಗಂಗಾಧರರಾಯರು ಮಹಾತ್ಮರ ಭಾಷಣವನ್ನು ಸಭಿಕರಿಗೆ ತಿಳಿಸಿ ಹೇಳಿದರು. ಮಹಾತ್ಮರಿಗೆ ಆ ಕಾಲದಲ್ಲಿ ರೂ. ೫೦೦ಗಳನ್ನು ಹಳಿಯಾಳದವರು ಕಾಣಿಕೆಯಾಗಿ ಅರ್ಪಿಸಿದರು. ಗೋಕರ್ಣ ಮಂಡಳದವರು ರೂ. ೫೦ ಕಾಣಿಕೆ ಮಾಡಿದರು. ಮಹಾತ್ಮರು ಹಾಗೆಯೇ ಹಿಂತೆರಳಿದರು. ಆ ಕಾಲದಲ್ಲಿ ರಾಷ್ಟ್ರೀಯ ಸಭೆಯ ಅಂಗವೆಂದು ಜಿ. ೮ ದೂರುಗಳನ್ನು ಚೌಕಶಿ ಮಾಡಬಂದ ಕೊಲಿನ್ಸ ಸಾಹೇಬರಿಗೆ ಬಹಿಷ್ಕರಿಸೋಣಾಯಿತು. ಹೋದ ಹೋದಲ್ಲಿ ಕೊಲಿನ್ಸ ಸಾಹೇಬರ ಕಡೆ ಮಾತಾಡುವ ಜನರೇ ಇರಲಿಲ್ಲ. ಕಮಿಶನರ ಕೆಡಲ್‌ರವರು ಶಿರ್ಶಿಯೊಳಗಿನ ಸಭ್ಯ ಗೃಹಸ್ಥರ ಮೇಲೆ ನಡಿಸಿದ ಅತ್ಯಾಚಾರದ ಕುರಿತು ಇಡೀ ಜಿಲ್ಹೆಯೊಳಗೆ ಅವರಿಗಾದ ಬಹಿಷ್ಕಾರವೂ, ಹಳಗೆಯಲ್ಲಿ ಕೊಂಕಣ ಮರಾಠಾ ಜಾತಿಯವರ ಸಭೆ ಸೇರಿದಾಗ ಅಲ್ಲಿ ಉಂಟಾದ ಒಡದಾಟವೂ, ಜಿಲ್ಹೆಯೊಳಗೆ ಹಬ್ಬಿದ ರಾಷ್ಟ್ರೀಯವಾತಾವರಣದ ಪರಿಣಾಮ. ಅಂಕೋಲಾ, ಕುಮಟಾ, ಶಿರ್ಶಿ, ಸಿದ್ದಾಪುರ ಮೊದಲಾದ ಕಡೆ ರಾಷ್ಟ್ರೀಯ ಶಾಲೆಗಳ ಸ್ಥಾಪನೆ ಹೊಂದಿದ್ದುದರೂ ರಾಷ್ಟ್ರೀಯ ಸಭೆಯ ಕಾರ್ಯಕ್ರಮದ ಅಂಗವಾಗಿಯೇ. ಶಿರ್ಶಿಯಲ್ಲಿ ಪಂಚ ಕೋರ್ಟಿನ ಸ್ಥಾಪನೆಯಾಯಿತು! ಮುಜಾನದಂಥ ಸಣ್ಣ ಗ್ರಾಮದಲ್ಲಿ ಸಹ ಖಿಲಾಫತ ಕಮಿಟಿಯ ಸ್ಥಾಪನೆಯಾಯಿತು. ಮದ್ಯಪಾನೋಚ್ಚಾಟನದ ಕಾರ್ಯಕ್ರಮ ಕೈಕೊಳ್ಳೋಣಾಯಿತು. ಅಸಹಕಾರಿತೆಯ ಮನ್ವಂತರದಿಂದ ನಮ್ಮ ಜಿಲ್ಹೆಯೊಳಗೆ ರಾಷ್ಟ್ರೀಯ ಸಭೆಯ ವಾತಾವರಣವು ಹಬ್ಬಿಕೊಂಡಿದೆ. ಮುಂಬಯಿಯೊಳಗಿನ ಮುಂದಿನ ವಿದ್ಯಾಭ್ಯಾಸವನ್ನು ಮಹಾತ್ಮರ ಅಪ್ಪಣೆ ಮೇರೆಗೆ ನಿಲ್ಲಿಸಿ ಈ ಜಿಲ್ಹೆಗೆ ಬಂದ ಶ್ರೀ| ಶಂಕರ ದತ್ತಾತ್ರೇಯ ನಾಡಕರ್ಣಿ ಮೊದಲಾದ ವಿದ್ಯಾರ್ಥಿಗಳು ಹಳ್ಳಿ-ಹಳ್ಳಿಗಳಲ್ಲಿ ಸಹ ಪ್ರಚಾರ ಕಾರ್ಯವನ್ನು ನಡಿಸಿದರು. ಮಹಾತ್ಮರ ಅಪ್ಪಣೆ ಮೇರೆಗೆ ಸಭಾಸದರನ್ನು ಕೇಳಿಸುವ, ಸ್ವರಾಜ್ಯಫಂಡನ್ನು ಕೂಡಿಸುವ ಕೆಲಸವು ಬಹುಜಾಗ್ರತೆಯಿಂದ ನಡೆಯಿತು. ಈ ಜಿಲ್ಹೆಯಲ್ಲಿ ೧೩೧೧ ಸಭಾಸದರು ಕೂಡಿದರು. ರೂ. ೧೬೧೧ ಟಿಳಕ ಸ್ವರಾಜ್ಯ ನಿಧಿಗೆ ಕೂಡಿದವು; ಈ ಜಿಲ್ಹೆಯೊಳಗೆ ೧೬ ಸಾವಿರ ಸಭಾಸದರೂ, ಅಷ್ಟೇ ದ್ರವ್ಯನಿಧಿಯೂ ಕೂಡಬೇಕಾಗಿದ್ದಿತು. ಮೌ| ಹಬಿಬುಲ್ಲಾಖಾನ, ಕೀರ್ತನ ಕೇಸರಿ ಜಯರಾಮಾಚಾರ್ಯ ಮೊದಲಾದವರ ಉಗ್ರ ಚಳವಳಿಯ ನೆನಪಾದರೆ ಒಂದು ತರದ ಆನಂದಾಶ್ಚರ್ಯವಾಗುತ್ತಿದೆ. ಕರ್ನಾಟಕದ ಲೋಕನಾಯಕರಾದ ದೇ| ಭ| ಗಂಗಾಧರರಾವ ದೇಶಪಾಂಡೆ, ದೇ| ಭ| ಮುಜಲಿ, ದೇ| ಭ| ಯಾಳಗಿ ಮೊದಲಾದವರು ನಮ್ಮೀ ಜಿಲ್ಹೆಯಲ್ಲಿ ಸಂಚರಿಸಿ ಉಂಟುಮಾಡಿದ ರಾಷ್ಟ್ರೀಯ ಜಾಗೃತಿ

(ಮುಂದೆ ೯ನೇ ಪಾನು ನೋಡಿರಿ.)

ಕಾನಡಾವೃತ್ತ.

ಮಿತಿ ಯುವ ನಾಮ ಸಂವತ್ಸರ ಪುಷ್ಯ ಶು ೩ ಗೆ ಶನಿವಾರ

ಸುದಾಮ ದೇವರ ಕಾಣಿಕೆ.

ಆಸೇತುಹಿಮಾಚಲ ಹಬ್ಬಿಕೊಂಡ ವಿರಾಟ್ ಸ್ವರೂಪಿ ಅಖಿಲ ಭಾರತ ರಾಷ್ಟ್ರೀಯ ಸಭೆಗೆ ಸುವರ್ಣ ಮಹೋತ್ಸವದ ಸುಸಮಯ ರಾಷ್ಟ್ರಪ್ರೇಮಪೂರಿತವಾದ "ವೃತ್ತ" ವು ಬಡ ಭಕ್ತಿಯಿಂದ ಈ ಸಂಚಿಕೆಯನ್ನು ಕಾಣಿಕೆ ಮಾಡುತ್ತದೆ. ದ್ವಾರಕಾಧೀಶನಾದ ಶ್ರೀ ಕೃಷ್ಣ ಪರಮಾತ್ಮನ ಕಡೆ ಸ್ನೇಹಪರನಾದ ಸುದಾಮನು ಬಡ ಭಾವನೆಯಿಂದ ಅರ್ಪಿಸಿದ ಅವಲನ್ನು ಹರಕು ಬಂದಿಯೊಳಗಿಂದ ಬಡಿಸುವ ಪೂರ್ವದಲ್ಲಿಯೇ, ಅತ್ಯುತ್ಸಾಹದಿಂದ ಹರಿದು ಸೇವಿಸಿ ಶ್ರೀ ಸುದಾಮ ದೇವನಿಗೆ ಉದ್ಧರಿಸಿದಂತೆ ರಾಷ್ಟ್ರೀಯ ಸಭೆಯು ಈ ಕಾಣಿಕೆಯನ್ನು ಸ್ವೀಕರಿಸಿ 'ವೃತ್ತ'ಕ್ಕೆ ಆಶೀರ್ವದಿಸಬೇಕಾಗಿ 'ವೃತ್ತ'ವು ವಿರಾಟ್ ಸ್ವರೂಪ ತಾಳಿದ ರಾಷ್ಟ್ರೀಯ ಸಭೆಯೆಡೆ ನಮ್ರಭಾವದಿಂದ ಬೇಡಿಕೊಳ್ಳುತ್ತದೆ. ರಾಷ್ಟ್ರೀಯ ಸಭೆಯ ಗೌರವಕ್ಕೆ, ಸಡಗರಕ್ಕೆ, ವೈಭವಕ್ಕೆ, ಪ್ರತಿಷ್ಠೆಗೆ ಅನುಗುಣವಾಗಿ ದೇಶಬಾಂಧವರನೇಕರು ವಿಶೇಷ ಕಾಣಿಕೆಗಳನ್ನು ಅರ್ಪಿಸುತ್ತಿದ್ದಾರೆ. 'ಮುಂಬಯಿ ಕ್ರೋನಿಕಲ್', ದಿಲ್ಲಿಯ 'ಹಿಂದುಸ್ಥಾನ ಟೈಮ್ಸ್', ಕಲಕತ್ತೆಯ 'ಎಡ್ವಾನ್ಸ್' ಮೊದಲಾದ ದೊಡ್ಡ ದೊಡ್ಡ ಪತ್ರಿಕೆಗಳು ರಾಷ್ಟ್ರೀಯ ಸಭೆಯ ಗುಣಸಂಕೀರ್ತನೆ ಮಾಡಿ ವಿಶೇಷ ಸಂಚಿಕೆಗಳನ್ನು ಇಂದು ಹೊರಡಿಸಿ ರಾಷ್ಟ್ರೀಯ ಸಭೆಯ ಆಶೀರ್ವಾದ ಪಡೆಯುವವು. ನಮ್ಮ ಕರ್ನಾಟಕದೊಳಗೆ ಬೆಳಗಾವಿಯ 'ಸಂಯುಕ್ತ ಕರ್ನಾಟಕ', ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಗಳು ತಮ್ಮ ವಿಶೇಷ ಸಂಚಿಕೆಗಳನ್ನು ಇಂದು ಅರ್ಪಿಸಿ ಕರ್ನಾಟಕ ಪತ್ರಿಕಾಪ್ರಪಂಚದ ಪರವಾಗಿ ರಾಷ್ಟ್ರೀಯ ಸಭೆಯ ಆಶೀರ್ವಾದಗಳನ್ನು ಪಡೆಯುವವು. 'ವೃತ್ತ' ವು ಬಡ ಕಾನಡಾ ಜಿಲ್ಹೆಯದು; ಜಿಲ್ಹೆಯ ಬಡತನದ ಸಂಸಾರಕ್ಕನುಗುಣವಾಗಿ 'ವೃತ್ತ' ವು ಈ ಕಾಣಿಕೆಯನ್ನು ಭಾರತಾಂಬೆಯ ಚರಣಾರವಿಂದಗಳಲ್ಲಿ ಭಕ್ತಿಯುತ ಅಂತಃಕರಣದಿಂದ ಅರ್ಪಿಸುತ್ತಿದೆ. ರಾಷ್ಟ್ರೀಯ ಸಭೆಯು ಇದನ್ನು ಸ್ವೀಕರಿಸಿ 'ವೃತ್ತ'ದ ಸಾಮರ್ಥ್ಯವನ್ನು ಬೆಳಸಿ ಪೋಷಿಸಿ; ರಾಷ್ಟ್ರೀಯ ಪ್ರಸಂಗಗಳಲ್ಲಿ ಇದಕ್ಕೂ ಮಿಗಿಲಾದ ಸೇವೆ ನೀಡುವಂತೆ ಅನುಗ್ರಹಿಸಬೇಕಾಗಿ 'ವೃತ್ತ'ದ ಪ್ರಾರ್ಥನೆ.

ರಾಷ್ಟ್ರೀಯ ಸಭೆಯು ಆ ಕಾಲದಲ್ಲಿ ಸರ್ವಾಧಿಪತಿಗಳಾದ ಡಫರಿನ್‌ರವರ ಆಶೀರ್ವಾದದಿಂದಲೇ ಜನ್ಮಹೊಂದಿತ್ತು. ರಾಜಕೀಯ ಚಟುವಟಿಕೆಯ ಅಂಗವನ್ನು ಸರ್ವಾಧಿಪತಿ ಡಫರಿನ್ ದೊರೆಗಳೇ ಜನಕರಾದ ಹ್ಯೂಮರವರಿಗೆ ಬೋಧಿಸಿದ್ದರು. ಲೋಕಮತವನ್ನರಿತುಕೊಳ್ಳಲು ಅನುಕೂಲವಾಗಬೇಕೆಂದು ಸರ್ವಾಧಿಪತಿ ಡಫರಿನ್ ದೊರೆಗಳು ರಾಷ್ಟ್ರೀಯ ಸಭೆಯ ಕಲ್ಪನೆಯನ್ನು ಹ್ಯೂಮರವರಿಗೆ ಸೂಚಿಸಿದ್ದರಾಗಿ ಹೇಳುತ್ತಾರೆ. ಒಂದೆರಡು ವರ್ಷಗಳಲ್ಲಿಯೇ ರಾಷ್ಟ್ರೀಯ ಸಭೆಯ ತಾಪವನ್ನು ಅಧಿಕಾರಿಗಳು ತಾಳಲಾರದೆ ಅದನ್ನು ಬಾಲ್ಯಾವಸ್ಥೆಯಲ್ಲಿಯೇ ಒಗ್ಗಿ ಒಡಿಯಬೇಕೆಂದು ಹವಣಿಸಿದರು. ಪ್ರಯಾಗದಲ್ಲಿ ೪ನೇ ಅಧಿವೇಶನ ಸೇರಿಸದಂತೆ ಅಧಿಕಾರಿಗಳು ನಡಿಸಿದ ಕುಯುಕ್ತಿಗಳನ್ನು ಇಲ್ಲಿ ನಮೂದಿಸಬಹುದು. ಖುಸ್ರೋ ಬಾಗದಲ್ಲಿ ಸಭೆ ಸೇರಿಸಲು ಸರಕಾರವು ಮುಂಚೆ ಅಪ್ಪಣೆ ಕೊಟ್ಟು, ಆ ಮೇಲೆ ಹಿಂತೆಗೆದುಕೊಂಡಿತು. ಕೋಟೆಯ ಬಳಿಯಲ್ಲಿದ್ದ ಬೈಲು ಪ್ರದೇಶವನ್ನು ಬಾಡಿಗೆಗೆ ಕೊಟ್ಟು, ಮೊದಲೇ ಕೊಂಡ ಬಾಡಿಗೆಯನ್ನು ೪ ತಿಂಗಳ ತರುವಾಯ ಹಿಂತಿರುಗಿ ಕೊಟ್ಟಿತು. ಗೆಳೆಯರ ಮನೆಗಳಲ್ಲಿ ರಾಷ್ಟ್ರೀಯ ಸಭೆಯನ್ನು ನೆರಿಸುವ ಪ್ರಯತ್ನ ಮಾಡಲು ಸ್ನೇಹಭಾವಿಯವರು ಇದಕ್ಕಪ್ಪಣೆ ಕೊಡಲಿಲ್ಲ. ಬರೇ ೭ ವಾರಗಳುಳಿದವು! ಪ್ರಯಾಗದಲ್ಲಿ ನವಾಬರದೊಂದು ವಿಶಾಲವಾದ ಅರಮನೆಯಿತ್ತು. ನವಾಬರು ಲಖನೌದಲ್ಲಿದ್ದರು. ಸ್ವಾಗತ ಸಮಿತಿಯವರು ಅಂತರಂಗದಿಂದ ಒಬ್ಬರಿಗೆ ಅವರೆದೆ ಕಳುಹಿ ಅರಮನೆಯನ್ನು ಬಾಡಿಗೆಗೆ ಪಡಕೊಂಡರು, ಅಲ್ಲಿ ರಾಷ್ಟ್ರೀಯ ಸಭೆಯನ್ನು ನೇಮಿಸಿದ ತಾರೀಖಿಗೆ ಸೇರಿಸಿ ಯಶಸ್ವಿ ಮಾಡಿದ್ದಾರೆ. ಇದೇ ಪ್ರಕಾರ ಕಾಲ-ಕಾಲದಲ್ಲಿ ನಿರ್ಮಲಾಂತಃಕರಣದಿಂದ, ನಿಸ್ಪೃಹತನದಿಂದ ರಾಷ್ಟ್ರೀಯ ಸಭೆಯ ಸೇವೆಯನ್ನು ಜರುಗಿಸಿ ರಾಷ್ಟ್ರೀಯ ಸಭೆಯ ಇಂದಿನ ವ್ಯಾಪಕತೆಗೆ ಕಾರಣರಾದವರನೇಕರಿದ್ದಾರೆ. ಅಂಥ ಮಹನೀಯರಿಗೆಲ್ಲ "ವೃತ್ತ"ವು ಭಕ್ತಿಪೂರ್ವಕವಾಗಿ ವಂದಿಸಿ ರಾಷ್ಟ್ರೀಯ ಸಭೆಯಂತೆಯೇ 'ವೃತ್ತ'ದ ವ್ಯಾಪವನ್ನು ಬೆಳಸಬೇಕಾಗಿ, ಬೆಳೆಯುವಂತೆ ಹರಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತದೆ.

ರಾಷ್ಟ್ರಸ್ವಾತಂತ್ರ್ಯವನ್ನು ಬಯಸುವವನು, ಅದಕ್ಕಾಗಿ ಅಲ್ಪಾಂಶದಿಂದಾದರೂ ಪರಿಶ್ರಮಪಡುವವನು ಈಗಿನ ರಾಜ್ಯಕರ್ತರ ರೋಷಕ್ಕೆ ಪಾತ್ರನಾಗಲೇಬೇಕು. ರಾಷ್ಟ್ರೀಯ ಸಭೆಯ ಇತಿಹಾಸವೇ ಇದಕ್ಕೆ ಸಾಕ್ಷಿ. ಅಧಿಕಾರಿಗಳಿಗೆ ನೋಯಿಸದೆ, ಅವರ ಮನಒಲವಿನಿಂದ ರಾಷ್ಟ್ರಸ್ವಾತಂತ್ರ್ಯವನ್ನಪೇಕ್ಷಿಸುವವನು ತೀರ ದಡ್ಡನು, ಆತನಿಗ ಅಧಿಕಾರಿಗಳ ಅಂತರಂಗದ ಪರಿಜ್ಞಾನವಿಲ್ಲ. ಸರ್ವಾಧಿಪತಿ ಡಫರಿನ್‌ರವರಾದರೂ ರಿಪನ್ ದೊರೆಗಳ ಕಾರಕೀರ್ದಿಯಲ್ಲಿ ದೇಶತುಂಬ ಹಬ್ಬಿದ ಸ್ವಾತಂತ್ರ್ಯಾಭಿಲಾಷೆಯನ್ನು ದಬ್ಬುವದಕ್ಕಾಗಿಯೇ ಸೌಮ್ಯ ಪ್ರಕೃತಿಯ ಜನಗಳಿಗೆ ರಾಷ್ಟ್ರೀಯ ಸಭೆಯನ್ನು ಸ್ಥಾಪಿಸಲು ಉತ್ತೇಜನ ಕೊಟ್ಟರೆಂದು ಹೇಳುತ್ತಾರೆ. ಸ್ವಾತಂತ್ರ್ಯವಾದಿಗಳ ನ್ಯಾಯ್ಯ ಆಕಾಂಕ್ಷೆಗಳನ್ನು ಅಪಹರಿಸುವದಕ್ಕಾಗಿ ಸೌಮ್ಯ ಪ್ರಕೃತಿಯ ರಾಷ್ಟ್ರೀಯ ಸಭೆಯ ಮೂಲ ಕಲ್ಪನೆ! ಸಂಸ್ಥಾಪಕರು ನಿಸ್ಪೃಹರಿದ್ದದರಿಂದಲೂ, ರಾಷ್ಟ್ರಸ್ವಾತಂತ್ರ್ಯದ ಅಭಿಮಾನಿಗಳಿದ್ದವರಿಂದಲೂ, ಸ್ವಾತಂತ್ರ್ಯ ದೇವಿಯ ನಿಷ್ಠಾವಂತ ಉಪಾಸಕರಿದ್ದದರಿಂದಲೂ ರಾಷ್ಟ್ರೀಯ ಸಭೆಯು ಇಂದಿಗೆ ರಾಷ್ಟ್ರಸ್ವಾತಂತ್ರ್ಯದ ಪುರಸ್ಕಾರ ಮಾಡುವ ವೈಭವಶಾಲಿ ಸಂಸ್ಥೆಯಾಗಿದೆ. ಇಂಥ ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ಸುದಿನ ಇಂದು!

ರಾಷ್ಟ್ರಪತಿಗಳ ಅಲ್ಪ ಪರಿಚಯವನ್ನು ಪರಾಂಬರಿಸಿದರೆ ಭಾರತಾಂಬೆಯ ಚರಣಾರವಿಂದಗಳಲ್ಲಿ ಲೀನರಾದ ಪುಣ್ಯಾತ್ಮರ ನೆನಪಾಗಿ ಮನಸ್ಸು ಆಲ್ಹಾದಗೊಳ್ಳುತ್ತದೆ. ಮಹಾತ್ಮರು ನುಡಿದಂತೆ, ರಾಷ್ಟ್ರೀಯ ಸಭೆಯ ಸೇವೆಯಲ್ಲಿ ಸಮಸ್ತರೂ ಸೇರಿಕೊಂಡಿದ್ದಾರೆ, ಹಿಂದು-ಮುಸಲ್ಮಾನ-ಕ್ರೈಸ್ತ ಎಂಬ ಧರ್ಮಭೇದವಿಲ್ಲ, ಹಿಂದೀ-ಯುರೋಪಿಯನ್ ಎಂಬ ವರ್ಣಭೇದವಿಲ್ಲ, ಸ್ತ್ರೀ-ಪುರುಷರೆಂಬ ಲಿಂಗಭೇದವಿಲ್ಲ. ಎಲ್ಲರೂ ರಾಷ್ಟ್ರೀಯ ಸಭೆಯ ನಿಶ್ಚಿಂತ ಸೇವಕರೇ. ತಮ್ಮ ತಮ್ಮ ಶಕ್ತಿಯ ಮಟ್ಟಿಗೆ, ತಮ್ಮ ತಮ್ಮ ಬುದ್ಧಿಯ ಮಟ್ಟಿಗೆ ಸಮಸ್ತರೂ ಸಕಾಲದಲ್ಲಿ ರಾಷ್ಟ್ರೀಯ ಸಭೆಯ ಸೇವೆ ಮಾಡಿ ರಾಷ್ಟ್ರೀಯ ಸಭೆಯು ರಾಷ್ಟ್ರದ ಒಂದೇ ಒಂದು ಪ್ರಾತಿನಿಧಿಕ ಸಂಸ್ಥೆಯೆಂದು ಲೋಕಕ್ಕೆ ಸಿದ್ಧಗೊಳಿಸಿದ್ದಾರೆ. ಮಹಾತ್ಮರು ಸಾರಿ ಹೇಳಿದಂತೆ, ರಾಷ್ಟ್ರೀಯ ಸಭೆಗೆ ಅಖಿಲ ಜನಾಂಗದ ಅಭಿಮಾನವಿದೆ. ೩೫ ಕೋಟಿ ದೀನ-ದರಿದ್ರ-ಅಜ್ಞ ಜನಾಂಗಕ್ಕೆ ಹಿತವಾಗುವಂಥ ಯೋಜನೆಗಳನ್ನು ಮಾತ್ರ ರಾಷ್ಟ್ರೀಯ ಸಭೆಯು ಪರಿಶ್ರಮಪೂರ್ವಕವಾಗಿ ಪುರಸ್ಕರಿಸುವದು; ಅವರ ರಕ್ಷಣೆಗಾಗಿ ಸಕಲ ಪ್ರಯತ್ನಗಳನ್ನೂ ನಡಿಸುವದು; ಅವರಿಗೆ ತಾಪ ಕೊಡುವಂಥ ಯಾವದೇ ಯೋಜನೆಯನ್ನು ಎಷ್ಟಕ್ಕೂ ಪುರಸ್ಕರಿಸದು, ಒಮ್ಮೆಲೇ ಅದನ್ನು ತಿರಸ್ಕರಿಸಿ ಬಿಡುವದು. ಮಹಾತ್ಮರ ಆಧಿಪತ್ಯದಲ್ಲಿ ರಾಷ್ಟ್ರೀಯ ಸಭೆಯು ಈ ಪ್ರಕಾರ ವಿಕಾಸ ಹೊಂದುತ್ತಲಿದೆ; ಪೂರ್ಣಾವಸ್ಥೆಯನ್ನು ಇನ್ನೂ ಹೊಂದಲಿಲ್ಲ. ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ರಾಷ್ಟ್ರೀಯ ಸಭೆಯ ಮೂಲ್ಯ ಸಂಕಲ್ಪವನ್ನೂ, ನೆರವೇರಿಸಬೇಕಾದ ಕಾರ್ಯವನ್ನೂ ವಿಚಾರಿಸಿ ಸುವರ್ಣ ಮಹೋತ್ಸವದ ಸಂಭ್ರಮ-ಸಡಗರಗಳಲ್ಲಿ ರಾಷ್ಟ್ರೀಯ ಸಭೆಯ ಸೇವಕರು ಮರುಳಿ ಹೋಗದೆ ಸಂಕಲ್ಪಕ್ಕುಚಿತವಾದ ಜವಾಬದಾರಿಗಳನ್ನರಿತುಕೊಂಡು ರಾಷ್ಟ್ರೀಯ ಸಭೆಯ ಕಾರ್ಯವನ್ನು ದೃಢ ಸಂಕಲ್ಪದಿಂದ ಪುರಸ್ಕರಿಸಬೇಕಾಗಿ ಇಂದಿಗೆ ಮುಂಬಯಿಯಿಂದ ರಾಷ್ಟ್ರಾಜ್ಞೆ ಹೊರಡಿಸಿದ್ದಾರೆ. ರಾಷ್ಟ್ರೀಯ ಸಭೆಯ ಚರಣಾರವಿಂದಗಳಲ್ಲಿ ಅಂತಃಕರಣಪೂರ್ವಕವಾಗಿ ಸೇವೆ ಮಾಡಿದ ರಾಷ್ಟ್ರಸೇವಾನಿರತರ ಆಶೀರ್ವಾದವನ್ನು ಇದಕ್ಕಾಗಿಯೇ ರಾಷ್ಟ್ರಪತಿಗಳು ಪಡೆಯಲು ವ್ಯಗ್ರರಾಗಿದ್ದಾರೆ. ರಾಷ್ಟ್ರಪತಿಗಳ ರಾಷ್ಟ್ರಾಜ್ಞೆಯನ್ನು ಇಂದಿಗೆ 'ವೃತ್ತ'ವು ಶಿರಸಾ ವಹಿಸಿಕೊಂಡು ರಾಷ್ಟ್ರೀಯ ಸಭೆಯ ಗೌರವಕ್ಕುಚಿತನಾಗಿ ಸೇವೆಗೈಯ್ಯಲು ಬಡ 'ವೃತ್ತ'ಕ್ಕೆ ತಕ್ಕ ಚೈತನ್ಯವನ್ನೂ, ದಕ್ಷತೆಯನ್ನೂ, ಸದ್ಬುದ್ಧಿಯನ್ನೂ ಅನುಗ್ರಹಿಸಬೇಕಾಗಿ ಬೇಡಿಕೊಂಡು ಸುವರ್ಣಮಹೋತ್ಸವದ ಶುಭ ಪ್ರಸಂಗದಲ್ಲಿ ಸುದಾಮ ದೇವರ ಅವಲು-ರೂಪಿಯಾದ ಈ ಸಂಚಿಕೆಯನ್ನು ಕಾಣಿಕೆಯಾಗಿ ರಾಷ್ಟ್ರೀಯ ಸಭೆಯ ಪದಾರ್ಪಣ ಮಾಡುತ್ತದೆ. ಸುದಾಮ ದೇವರಿಗೆ ಶ್ರೀ ಕೃಷ್ಣ ಪರಮಾತ್ಮನು ಕರುಣಿಸಿದಂತೆ, ಭಾರತಮಾತೆಯೂ, ರಾಷ್ಟ್ರೀಯ ಸಭೆಯೂ 'ವೃತ್ತ'ಕ್ಕೆ ಹರಸಿ ಅನುಗ್ರಹಿಸಬೇಕಾಗಿ ಪ್ರಾರ್ಥನೆ.

☞ ಮುಂದಿನ ಸಂಚಿಕೆ ವಾಡಿಕೆಯಂತೆ ತಾ ೬-೧-೩೬ನೇ ಸೋಮವಾರ ಪ್ರಕಟವಾಗುವದು.

ರಾಷ್ಟ್ರಸಭೆಯೂ, ನಮ್ಮ ಕನ್ನಡ ಜಿಲ್ಲೆಯೂ.

(೫ನೇ ಪಾನಿನಿಂದ ಮುಂದವರಿಸಿದ್ದು.)

ಯ ಫಲವನ್ನು ನಾವೀಗ ಅನುಭವಿಸುತ್ತಿದ್ದೇವೆ. ೧೯೨೧ನೇ ಇಸ್ವಿಯಲ್ಲಿ ಅಲ್ಲೀ ಬಂಧುಗಳಿಗೆ ಸರೆಹಿಡಿದಾಗ ಅವರ ಭಾವಚಿತ್ರಗಳನ್ನಾಗಲಿ, ಮಹಾತ್ಮರ ಭಾವಚಿತ್ರವನ್ನಾಗಲಿ ರಾಜಮಾರ್ಗಗಳ ಮೇಲೆ ಮೆರಿಸಬಾರದಾಗಿ ಹೊನ್ನಾವರದ ಮೆಜಿಸ್ಟ್ರೇಟರು ಪ್ರತಿಬಂಧಕ ಹುಕುಮನ್ನು ಹೊರಡಿಸಿದ್ದರು. ಸಭೆಯನ್ನು ಸಹ ಸೇರಿಸಬಾರದಾಗಿ ಹುಕುಮನ್ನು ಹೊರಡಿಸಿದರು. ಅದನ್ನು ಮುರಿದು ಹೊನ್ನಾವರದ ನಾಗರಿಕರು ಶ್ರೀ| ಕೃಷ್ಣರಾವ ಬಲಕೂರರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿದರು. ಶ್ರೀ| ಶಿವರಾವ ಶಾಸ್ತ್ರಿ ಮೊದಲಾದ ಮೂವರ ಮೇಲೆ ಮುಖಬಂದಿ ಹುಕುಮುಗಳು ಸಹ ಹೊರಟವು. ೧೯೨೨ನೇ ಇಸ್ವಿಯಲ್ಲಿ ದೇ|ಭ| ಗಂಗಾಧರರಾವ ದೇಶಪಾಂಡೆಯವರಿಗೆ ಅಲ್ಲಲ್ಲಿ ಮಾನಪತ್ರಗಳು ಸಹ ಅರ್ಪಿಸಲ್ಪಟ್ಟವು. ಖಾದಿಯ ಪ್ರಸಾರವೂ ಜಿಲ್ಲೆಯೊಳಗೆ ಹಬ್ಬಿತು. ಹಲವೆಡೆ ಕೈರಾಟಗಳು ಜನ್ಮವೆತ್ತಿದವು. ಗಯಾ ಕೊಂಗ್ರೆಸಿನಲ್ಲಿ ಕೌನ್ಸಿಲು ಪ್ರವೇಶದ ಕುರಿತು ಮತಭೇದವಾದ್ದರಿಂದ ದೇಶಬಂಧು ದಾಸ-ನೆಹರೂರವರು ಸ್ಥಾಪಿಸಿದ ಹೊಸ ಸ್ವರಾಜ್ಯ ಪಕ್ಷವನ್ನು ರಾಷ್ಟ್ರೀಯ ಸಭೆಯು ಮನ್ನಿಸಿ ಕೌನ್ಸಿಲು ಪ್ರವೇಶವನ್ನು ಪುರಸ್ಕರಿಸಿದ ಬಳಿಕ ನಮ್ಮ ಜಿಲ್ಲೆಯು ರಾಷ್ಟ್ರೀಯ ಸಭೆಯ ಅಪ್ಪಣೆಯಂತೆ ನಡೆದು ಕೊಂಗ್ರೆಸ್ಸು ಉಮೇದವಾರರಾದ ರಾ| ಕರ್ಕಿಯವರಿಗೆ ಪ್ರಾಂತಿಕ ಕೌನ್ಸಿಲಿಗೆ ಕಳುಹಿತು. ದಕ್ಷಿಣ ಭಾಗದ ಪರವಾಗಿ ಎಸೆಂಬ್ಲಿಗೆ ನಿಂತ ಶ್ರೀ| ದತ್ತೋ ಳವಿಯವರಿಗೇ ಮತ ಕೊಟ್ಟು ರಾಷ್ಟ್ರೀಯ ಸಭೆಯ ಮೇಲಿನ ತನ್ನ ನಿಷ್ಠೆಯನ್ನು ವ್ಯಕ್ತಗೊಳಿಸಿದೆ. ಈ ಪ್ರಕಾರ ಜಿಲ್ಲೆಯು ಪ್ರತಿಯೊಂದು ರಾಷ್ಟ್ರೀಯ ಸಭೆಯ ಚಳವಳಿಯಲ್ಲಿ ಸೇರಿ ಇಡೀ ಹಿಂದುಸ್ಥಾನದೊಡನೆ ಮಾರ್ಗಕ್ರಮಣ ಮಾಡುತ್ತಿದೆ. ರಾಷ್ಟ್ರೀಯ ಸಭೆಯು ಕಾಲ-ಕಾಲಕ್ಕೆ ಹೊರಡಿಸಿದ ಅಪ್ಪಣೆಯನ್ನು ಪಾಲಿಸಿ ಜಿಲ್ಲೆಯವರು ಸ್ವಾತಂತ್ರ್ಯ ಮಾರ್ಗದ ಮೇಲೆ ಕೂಚು ಮಾಡುತ್ತಿದ್ದಾರೆ. ೧೯೨೩ರಲ್ಲಿ ನಾಗಪುರದಲ್ಲಿ ನಡೆದ ಧ್ವಜಸಂಗ್ರಾಮದ ಪ್ರತಿಧ್ವನಿ ಈ ಜಿಲ್ಲೆಯಲ್ಲಿಯೂ ನಡೆದು. ಧ್ವಜದ ಮೆರವಣಿಗೆಗಳಾದವು ೧೯೨೪ನೇ ಇಸ್ವಿಯಲ್ಲಿ ಶ್ರೀ ಗೋಕರ್ಣ ಕ್ಷೇತ್ರದೊಳಗೆ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಭಾರತೀಕೃಷ್ಣ ತೀರ್ಥಜಿಯವರ ಅಧ್ಯಕ್ಷತೆಯಲ್ಲಿ ಸೇರಿದ ಪ್ರಾಂತಿಕ ಪರಿಷತ್ತಿನ ವೈಭವವನ್ನೂ, ಶ್ರೀಗಳಿಗೆ ಸಮಸ್ತರು ಮಾಡಿದ ಸತ್ಕಾರವನ್ನೂ, ಆ ಪ್ರಾಂತಿಕ ಪರಿಷತ್ತಿನಿಂದ ಉಂಟಾದ ನವಚೈತನ್ಯವನ್ನೂ ರಾಷ್ಟ್ರಜಾಗೃತಿಯನ್ನೂ ಜಿಲ್ಲೆಯೊಳಗಿನವರೆಲ್ಲರೂ ಚಿರಕಾಲ ಸ್ಮರಿಸಬೇಕಾದ ವಿಷಯಗಳು. ಶ್ರೀಗಳು ಗೋಕರ್ಣ, ಕುಮಟಾ, ಶಿರ್ಶಿ ಮೊದಲಾದ ಕಡೆಗಳಲ್ಲಿ ದಿಗ್ವಿಜಯ ಬೆಳಸಿ ರಾಷ್ಟ್ರೀಯ ಸಭೆಯ ಸಂದೇಶವನ್ನು ಕುಶಲತೆಯಿಂದ ತಿಳಿಹೇಳಿದರು. ಕರ್ನಾಟಕವು ಮಹಾತ್ಮರ ನೇತೃತ್ವದಲ್ಲಿ ಹಿಂದಭೂಮಿಯ ಸ್ವಾತಂತ್ರ್ಯ ಸಂಗ್ರಾಮವನ್ನು ನಡಿಸಲು ಸಿದ್ಧವಿರುವದೆ ಈ ಪರಿಷತ್ತಿನಿಂದ ಸ್ಪಷ್ಟವಾಯಿತು. ಅದೇ ವರ್ಷ ಮಹಾತ್ಮರು ೨೧ ದಿನಗಳ ಉಪವಾಸವನ್ನಾಚರಿಸಿದರು ಈ ಉಪವಾಸದೊಳಗಿಂದ ಮಹಾತ್ಮರು ಸುಖದಿಂದ ಪಾರಾಗಲೆಂದು ಇಡೀ ಜಿಲ್ಲೆಯಲ್ಲಿ ಪ್ರಾರ್ಥನೆಗಳು ನಡೆದವು. ಮಹಾತ್ಮರ ಉಪವಾಸದ ಕೊನೆಯ ದಿನ ಅಲ್ಲಲ್ಲಿ ಆಯುರಾರೋಗ್ಯ ಚಿಂತನವಾಯಿತು. ಅದೇ ವರ್ಷ ಬೆಳಗಾವಿಯಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನ. ಮಹಾತ್ಮರೇ ಈ ಸಭೆಯ ಅಧ್ಯಕ್ಷರು ಇದಕ್ಕೆ ನಮ್ಮ ಕನ್ನಡ ಜಿಲ್ಲೆಯೊಳಗಿಂದ ಸ್ವಾಗತ ಸಮಿತಿಯ ಸಭಾಸದರಾಗಿ ಅನೇಕರು ದಾಖಲಾಗಿ ಬೆಳಗಾಂವಿಯಲ್ಲಿ ಹೋಗಿ ಮಹಾತ್ಮರ ದರ್ಶನ ಪಡೆದು ಕೃತಕೃತ್ಯರಾದರು. ಮಹಾತ್ಮರ ಅಪ್ಪಣೆಯಂತೆ ಜಿಲ್ಲೆಯಲ್ಲಿ ವಿಧಾಯಕ ಕಾರ್ಯಕ್ರಮದ ಪ್ರಚಾರ ನಡೆಯಿತು. ೧೯೨೫ನೇ ಇಸ್ವಿಯಲ್ಲಿ ದೇಶಬಂಧು ದಾಸರವರು ತೀರಿಕೊಂಡರು ಆ ಬಗ್ಗೆ ಜಿಲ್ಲೆಯ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಹರತಾಳವಾಯಿತು ದುಃಖ ಪ್ರದರ್ಶಕ ಸಭೆಗಳಾಗಿ ಠರಾವುಗಳಾದವು. ೧೯೨೬ನೇ ಇಸ್ವಿಯಲ್ಲಿ ನಾಮದಾರ ಪರಾಂಜಪೆಯವರು ಮತಸಂಗ್ರಹ ಮಾಡುವದಕ್ಕಾಗಿ ಕಾರವಾರಕ್ಕೆ ಬಂದಿದ್ದರು ರಾಷ್ಟ್ರೀಯ ಸಭೆಗೆ ಅವರು ಒಪ್ಪಿದವರಲ್ಲವಾದ್ದರಿಂದ ಅವರಿಗೆ ಮತ ಸಿಗಲಿಕ್ಕಿಲ್ಲವಾಗಿ ತುಂಬಿದ ಸಭೆಯಲ್ಲಿಯೇ ಉತ್ತರ ದೊರೆಯಿತು. ೧೯೨೮ನೇ ಇಸ್ವಿಯಲ್ಲಿ ತಿರಸ್ಕೃತ ಸಾಯಮನ್ ಸಪ್ತಕರ ಆಗಮನ. ಆ ಸಮಯ ರಾಷ್ಟ್ರೀಯ ಸಭೆಯ ಅನುಜ್ಞೆಯಂತೆ ಈ ಜಿಲ್ಲೆಯಲ್ಲಿ ಹರತಾಳ ಆಚರಿಸಲ್ಪಟ್ಟಿತು. ಕಠಿಣವಾದ ಹರತಾಳ. ಅದೇ ಇಸ್ವಿಯಲ್ಲಿ ಬಾರ್ಡೋಲಿಯೊಳಗಿನ ಶೀರ್ವೆ ಏರಿಕೆಯ ಕುರಿತು ಬಾರ್ಡೋಲಿಯ ರೈತರು ನಡಿಸಿದ ಸಂಘಟಣೆಯನ್ನು ಸಿದ್ದಾಪುರ ತಾಲೂಕಿನ ಪರಕುಳಿ, ಹಸರಗೋಡಗಳೊಳಗಿನ ರೈತರು ಪುರಸ್ಕರಿಸಿ ಅವರಿಗೆ ಬೆಂಬಲ ಕೊಟ್ಟಿದ್ದಾರೆ ಶೀರ್ವೆ-ಏರಿಕೆಯ ಕಾನೂನುಗಳನ್ನು ನಿಷೇಧಿಸಿದ್ದಾರೆ. ಲಾಲಾ ಲಜಪತರಾಯರು ಸ್ಯಾಮನ್ ಕೂಟದ ಬಹಿಷ್ಕಾರದ ಸಮಯ ಪೋಲೀಸರ ಪೆಟ್ಟು ಬಿದ್ದು ತೀರಿಕೊಂಡದ್ದರ ಸ್ಮರಣಾರ್ಥ ಶಿರ್ಸಿ, ಅಂಕೋಲಾ, ಕಾರವಾರ, ಹೊನ್ನಾವರ ಮೊದಲಾದ ಕಡೆ ಹರತಾಳಗಳಾದವು. ಚೆಂಡಿಯೆ, ತೋಡೂರ, ಅವರ್ಸಗಳಂಥ ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ಸಹ ಹರತಾಳ ಆಯಿತು. ಲಾಲಾಜಿಯವರಿಗೆ ಸದ್ಗತಿ ಪ್ರಾಪ್ತವಾಗಲೆಂದು ಪ್ರಾರ್ಥನೆಯಾಯಿತು. ಅದೇ ವರ್ಷ ಕಲಕತ್ತೆಯೊಳಗ ರಾಷ್ಟ್ರೀಯ ಸಭೆ. ಪಂಡಿತ ಮೋತಿಲಾಲ ನೆಹರುರವರು ಅಧ್ಯಕ್ಷರು. ಅವರಿಗೂ, ಜವಾಹಿರಲಾಲರಿಗೂ ಮತಭೇದವಾಗಿ ಮಹಾತ್ಮರ ಅತ್ಯಾಗ್ರಹದ ಮೇರೆಗೆ ಪಂ| ಜವಾಹಿರಲಾಲರವರು ತಮ್ಮ ವಿರೋಧವನ್ನು ಒರೆಯಲ್ಲಿ ಹಾಕಿದರು. ಆ ವರ್ಷ ಶಿರ್ಸಿ, ಸಿದ್ದಾಪುರ ಕಡೆಗಳಲ್ಲ ಶೀರ್ವೆ ಏರಿಕೆಯಾಗಿ ಒಳ್ಳೇ ಗಲಾಟೆ. ಶಿರ್ಸಿ, ಸಿದ್ದಾಪುರಗಳೊಳಗಿನ ರೈತರು ಸಭೆಸೇರಿ ಶೀರ್ವೆಯನ್ನು ಕುಗ್ಗಿಸಬೇಕಾಗಿ ಅಧಿಕಾರಿಗಳಿಗೆ ಬಿನ್ನೈಸಿಕೊಂಡರು. ಲೋಕಕ್ಷೋಭವನ್ನು ಪರಿಹರಿಸುವದಕ್ಕಾಗಿ ಡಿ| ಡೆಪ್ಯುಟಿ ಕಲೆಕ್ಟರರ ಹೇರೂರಿನಂಥ ಚಿಕ್ಕ ಗ್ರಾಮದಲ್ಲಿ ಸಭೆಸೇರಿಸಿ ಜನರಿಗೆ ಸಮಾಧಾನ ಪಡಿಸಲೆತ್ನಿಸಿದರು ಇದರಿಂದ ಯಾರಿಗೂ ಸಮಾಧಾನವಾಗಲಿಲ್ಲ. ಜನರು ಹೆಚ್ಚೆಚ್ಚಾಗಿ ರಾಷ್ಟ್ರೀಯ ಸಭೆಯ ಕಡೆ ಒಲಿಯಲಾರಂಭಿಸಿದರು. ವಿಧಾಯಕ ಕಾರ್ಯಕ್ರಮವನ್ನೂ ಪ್ರಾಮುಖ್ಯವಾಗಿ ಖಾದಿಯನ್ನು ಪ್ರಚುರಗೊಳಿಸಲು ಯತ್ನ ನಡೆದವು. ಶಿರ್ಸಿಯಲ್ಲಿ ಚರಖಾ ಸಂಘದ ಸ್ಥಾಪನೆಯಾಯಿತು ಖಾದಿ ಪ್ರದರ್ಶನಗಳೂ ನಡೆದವು ೧೯೨೯ನೇ ಇಸ್ವಿಯ ಡಿಸೆಂಬರದಲ್ಲಿ ಲಾಹೋರದೊಳಗೆ ರಾಷ್ಟ್ರೀಯ ಸಭೆ ಪಂಡಿತ ಜವಾಹಿರಲಾಲರೇ ಅಧ್ಯಕ್ಷರು ಈ ಸಭೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯಾಯಿತು; ದೇಶತುಂಬ ಸ್ವಾತಂತ್ರ್ಯದ ಘೋಷಣೆಯಾಯಿತು. ಆ ಮೇಲೆ ಕಾಯಿದೆಭಂಗ, ಕರನಿರಾಕರಣೆ ಮೊದಲಾದ ಉಗ್ರ ಉಪಕ್ರಮಗಳು ರಾಷ್ಟ್ರೀಯ ಸಭೆಯ ಅಪ್ಪಣೆಯಂತೆ ನಡೆದವು. ಶಿರ್ಸಿ, ಸಿದ್ದಾಪುರ ಕಡೆಗಳಲ್ಲಿ ನಡೆದ ವರ್ತಮಾನಗಳನ್ನೆಲ್ಲ ಸಮಸ್ತರೂ ಬಲ್ಲಂಥ ವಿಷಯ. ಶ್ರೀ| ದಿವಾಕರರವರು ದಕ್ಷಿಣ ಭಾಗದ ಕಮಿಶನರರಾದ ಮಿ| ಸ್ಮಾರ್ಟರವರೊಡನೆ ಒಡಂಬಡಿಕೆ ಮಾಡಿಕೊಂಡ ಬಳಿಕ ಜನರು ಬಹು ಕಷ್ಟವಾದರೂ ಶೀರ್ವೆಯನ್ನು ಸರಕಾರಕ್ಕೆ ಸಲ್ಲಿಸಿ ರಾಷ್ಟ್ರೀಯ ಸಭೆಯ ವರ್ಚಸ್ಸನ್ನು ಲೋಕಕ್ಕೆ ಮನಗಾಣಿಸಿದ್ದಾರೆ. ೧೯೩೦-೩೨ನೇ ಇಸ್ವಿಯ ಆಂದೋಲನದಲ್ಲಿ ನಮ್ಮ ಜಿಲ್ಲೆಯವರು ನಡಿಸಿದ ರಾಷ್ಟ್ರೀಯ ಸೇವೆಯನ್ನು ಕರ್ನಾಟಕಸ್ಥರೆಲ್ಲರೂ ಮನ್ನಿಸುತ್ತಿದ್ದಾರೆ. ಆ ಸೇವೆಯು ಈಗ ಎಲ್ಲರ ಸ್ಮರಣೆಯಲ್ಲಿದೆ. ನಮ್ಮೀ ಕಾನಡಾ ಜಿಲ್ಲೆ ಹಿಂಮುಳಿದ ಜಿಲ್ಲೆ; ಎಲ್ಲ ಪರಿಯಿಂದಲೂ ಹಿಂದುಳಿದದ್ದು. ಅಂಥ ಜಿಲ್ಲೆ ಅಸಹಯೋಗ ಮನ್ವಂತರದಲ್ಲಿ ಒಮ್ಮೆಲೇ ಮುಂದರಿದು, ಕಾಯಿದೆಭಂಗವನ್ನು ಸಹ ಪುರಸ್ಕರಿಸುವಷ್ಟು ಉಗ್ರರೂಪ ಧರಿಸಿದ ಬಗೆ ಹೇಗೆಂದು ಒಮ್ಮೆಲೇ ಯಾರಿಗೂ ಹೊಳೆಯದು. ಆದರೆ ನಮ್ಮೀ ಕಾನಡಾ ಜಿಲ್ಲೆಯ ಪರಂಪರೆಯೇ ಅಸಹಕಾರದ್ದು. ಇದಕ್ಕಾಗಿ ಸರ್ ಥೊಮಸ್ ಮನ್ರೋರವರ ಸ್ಮರಣ-ಟಿಪ್ಪಣಿಗಳನ್ನು ಬರೆದ ಸರ್ ಅಲೆಕ್ಝಾಂಡರ ಜೇ ಆರ್ಬುತ್‌ನೋಟ್‌ರವರ ಗ್ರಂಥದ ಅವತರಣಿಕೆಯ ಮೇಲಿಂದ ತಿಳಿಯುವಂತಿದೆ. ಸರ್ ಆರ್ಬುತ್‌ನೋಟ್‌ರವರು ಬರೆಯುವದೇನಂದರೆ:—

> “ಮನ್ರೋರವರಿಗೆ ಭೂಕಂದಾಯ ಆಕರಿಸುವದು ಬಹು ಕಷ್ಟವಾಯಿತು. ಕೆಲವು ಪಕ್ಕಾಗಳನ್ನು ಪೋಟ್ಟು ಮೊದಲು ತಮಗೆ ಕೊಟ್ಟಿನಕ ತಾವು ಭೂಕಂದಾಯದ ಚರ್ಚೆ ಮಾಡಬರುವದಿಲ್ಲವಾಗಿ ರೈತರು ಗಟ್ಟಿ ಕೂತರು. ರೈತರು ನಿಯಂತ್ರಿಸಲಸಾಧ್ಯ. ಹೈದರಲ್ಲಿಯ ಕಾರಕೀರ್ದಿಯಲ್ಲಿ ಅವರಿಗೆ ದೊರೆತ ಅನುಕೂಲತೆಗಳು ಮಾಯವಾದವು. ಕಂಪನಿಯವರ ಆಡಳಿತೆಯಲ್ಲಿ ಇನ್ನು ಕೆಲವು ಅದೃಶ್ಯವಾದವು. ಆದರಿಂದ ಅವರಿಗೆ ಅಧಿಕಾರಿಗಳಲ್ಲಿ ನಂಬಿಗೆಯುಳಿಯಲಿಲ್ಲ. ಮೈಸೂರ ಸರಕಾರದ ಕಾರಕೀರ್ದಿಯಲ್ಲಿ ಭೂಕಂದಾಯ ತೀರ ಅಲ್ಪವಾಗಿದ್ದಿತು. ನಾನು ೧೭೮೯ನೇ ಇಸ್ವಿಯಲ್ಲಿದ್ದಷ್ಟು ಕಂದಾಯವನ್ನು ಹೇರ ನಿಶ್ಚಯ ಮಾಡಿದ್ದೆನು. ಈ ಸಂಗತಿ ಅವರಿಗೆ ತಿಳಿದೊಡನೆ ಅವರು ಸಂಘಟನೆ ಮಾಡಿ ನನ್ನೊಡನೆ ಹೋರಾಡಿದರು. ಹೈದರಲ್ಲಿಯ ಕಾರಕೀರ್ದಿಯಲ್ಲಿ ಆಕರಿಸಲ್ಪಟ್ಟ ಯಾವ ತಪ್ಪು ತೆರಿಗೆಗಳನ್ನು ಕುಗ್ಗಿಸಲೊಪ್ಪದನಕ ತಾವು ಭೂಕಂದಾಯದ ವಿಷಯವನ್ನು ಚರ್ಚಿಸಲೊಪ್ಪಲಿಕ್ಕಿಲ್ಲವಾಗಿ ಅವರು ನಿಶ್ಚಯದಿಂದ ನನಗೆ ಹೇಳಿ ಕಳುಹಿದರು. ಹೀಗೆ ಮುಂದಾಗಿ ಅವರ ವಚನ ಕೊಡಲು ನಾನೊಪ್ಪಲಿಲ್ಲ. ಅವರು ಕಚೇರಿಗೆ ಬರಲೊಪ್ಪಲಿಲ್ಲ. ಕರೆಯಹೋದ ಪೇದಗಳಿಗೆ ತಪ್ಪಿಸಿಕೊಂಡರು ಅಧಿಕಾರಿಗಳಿಗೆ ನೀರು ಕೊಡಲಿಲ್ಲ; ಬೆಂಕಿ ಕೊಡಲಿಲ್ಲ. ನಾನು ಒಂದು ಹಳ್ಳಿಗೆ ಹೋದೊಡನೆ ಅವರು ಮತ್ತೊಂದು ಹಳ್ಳಿಗೆ ಓಡುತ್ತಿದ್ದರು.”

ನಮ್ಮೀ ಜಿಲ್ಲೆಯೊಳಗಿನ ರೈತರ ಸ್ವಭಾವವನ್ನು ಮನ್ರೋರವರ ಶಬ್ದಗಳಲ್ಲಿ ಆರ್ಬುತನೋಟ್‌ರವರು ನಿವೇದಿಸಿದ್ದಾರೆ. ಈ ಸಂಗತಿ ಘಟಿಸಿದ್ದು ೧೮ನೇ ಶತಮಾನದಲ್ಲಿ. ನಮ್ಮ ಜಿಲ್ಲೆಯ ಪರಂಪರೆ ಈ ಪ್ರಕಾರದ್ದಿದೆ. ಆದರಿಂದಲೇ ಅಸಹಕಾರ-ಸತ್ಯಾಗ್ರಹ ಉಪಕ್ರಮಗಳಲ್ಲಿ ನಮ್ಮ ಜಿಲ್ಲೆಯವರು ಉತ್ಸಾಹದಿಂದ ಸೇರಿ ರಾಷ್ಟ್ರಸೇವೆ ಮಾಡಿದ್ದಾರೆ. ಇದೇ ಪ್ರಕಾರ ರಾಷ್ಟ್ರೀಯ ಸಭೆಯ ಅಪ್ಪಣೆಗಳನ್ನು ನಮ್ಮೀ ಜಿಲ್ಲೆಯು ಶಿರಸಾ ಮನ್ನಿಸಿ ರಾಷ್ಟ್ರ ಸ್ವಾತಂತ್ರ್ಯ ಸಂಪಾದನೆಯ ಕಾರ್ಯದಲ್ಲಿ ರಾಷ್ಟ್ರೀಯ ಸಭೆಯ ಕಾರ್ಯಕರ್ತರಿಗೆ ನೆರವಾಗಲಿ !!

* * *

ಕುಮುಟೆಯೊಳಗಿನ ವಾರ್ತೆ.

(೧೪ನೇ ಪಾನಿನಿಂದ ಮುಂದರಿಸಿದ್ದು.)

'ಯುವಕ ಸಂಘವೆಂಬ ಸಂಸ್ಥೆಯನ್ನು ತೆರೆದರು. ಜನವರಿಯಲ್ಲಿ "ಸ್ವಾತಂತ್ರ್ಯ ದಿನ"ವನ್ನಾಚರಿಸಿದರು. ಕೊಂಗ್ರೆಸ ಮೆಂಬರರನ್ನು ಕೂಡಿಸಹತ್ತಿದರು. ಹೋಳಿ ಹುಣ್ಣಿವೆಯ ಮರುದಿನ ಕರ್ನಾಟಕ ಧುರೀಣರಾದ ದೇ. ಭ. ಗಂಗಾಧರರಾಯರು ಬಂದು ಮಹಾತ್ಮರ ಸ್ವಾತಂತ್ರ್ಯದ ಕಾದಾಟದಲ್ಲಿ ಹಾರಿರೆಂದು ಸಾರಿ ಸುಪ್ತಾವಸ್ಥೆಯಲ್ಲಿದ್ದ ಕೆಂಡಗಳನ್ನು ಅಲ್ಲಾಡಿಸಿಟ್ಟು ಮರಳಿದರು. ಅವರ ಹಿಂದಿನಿಂದ ಸ್ವಾಮಿ ವಿದ್ಯಾನಂದರೆಂಬವರು ಬಂದು ವೀರಶ್ರೀಯನ್ನು ತುಂಬಿದರು. ಅಂತು ತಾ. ೧೩-೪-೩೦ಕ್ಕೆ ಕುಮುಟೆಯವರು ಒಂದು ಸ್ವಯಂಸೇವಕ ಪಥಕವನ್ನು ಅಂಕೋಲೆಯ ರಣಕ್ಷೇತ್ರಕ್ಕೆ ವಿಜೃಂಭಣೆಯಿಂದ ಕಳಿಸಿಕೊಟ್ಟರು. ಅಂಕೋಲೆಯಲ್ಲಿ ಪ್ರಮುಖರಿಗೆ ಸೆರೆಬಿದ್ದ ಸುದ್ದಿ ಬಂದು ತಲುಪುತ್ತಲೇ ಕುಮುಟೆಯಲ್ಲೂ ರಣಹುರುಪಿನ ಸಂಚಾರವಾಯಿತು. ತಾ. ೧೬-೪-೩೦ಕ್ಕೆ ಇಲ್ಲಿಯೂ ಒಂದು ಸ್ವಯಂಸೇವಕ-ಶಿಬಿರದ ಸ್ಥಾಪನೆಯಾಯಿತು. ತಾ. ೨೧ಕ್ಕೆ ಅಂದವಾಗಿ ಸಿಂಗರಿಸಿದ ಬೀದಿಗಳ ಮೇಲಿಂದ ಹಾದು ಹೋಗಿ ಸ್ವಯಂಸೇವಕರು ಉಪ್ಪು ನೀರು ತಂದು ಉಪ್ಪು ಮಾಡಿದರು. ಒಂದು ತೊಲೆ ಸತ್ಯಾಗ್ರಹಿ ಉಪ್ಪು ರೂ. ೫೧ಕ್ಕೆ ಜಾಹೀರ ರೀತಿಯಿಂದ ಮಾರಲಾಯಿತು. ೬ ೫ ದಿನ ಇದೇ ಕ್ರಮ ನಡೆಯಿತು. ಕೆಲ ಪ್ರಮುಖ ಸ್ವಯಂಸೇವಕರಿಗೆ ಸೆರೆಯಾಯಿತು. ಕಠೋರ ಶಿಕ್ಷೆಗಳೂ ಆದವು. ಆದರೆ ಜನರು ಹಿಂಜರಿಯಲಿಲ್ಲ. ಸತ್ಯಾಗ್ರಹಗಳು ಹೆಚ್ಚಾಗುತ್ತ ನಡೆದವು. ತಾ. ೨೬ಕ್ಕಂತೂ ೧೫-೨೦ ಸಾವಿರ ಜನರು — ಸ್ತ್ರೀ-ಪುರುಷ-ಬಾಲಕರು — ಸಮುದ್ರ ದಂಡೆಗೆ ಹೋಗಿ ಉಪ್ಪಿನ ಕಾಯಿದೆಯನ್ನು ಮುರಿದರು! ಈ ತಾಲೂಕಿನ ಹಳ್ಳಿಗಳಲ್ಲೂ ಸತ್ಯಾಗ್ರಹ ಹಬ್ಬಿತು. ರೈತ ಜನರು ನಿರ್ಭಯ ರೀತಿಯಿಂದ ಉಪ್ಪು-ನೀರು ತಂದು ಮನೆಯಲ್ಲಿ ಉಪ್ಪು ಮಾಡಹತ್ತಿದರು. ತಾ. ೧-೬-೩೦ಕ್ಕೆ ಇಲ್ಲಿಯ ಸತ್ಯಾಗ್ರಹಿಗಳೂ ಅಂಕೋಲೆಯ ಸತ್ಯಾಗ್ರಹಿಗಳೂ ಸಾಣಿಕಟ್ಟೆಯ ಉಪ್ಪಿನ ಆಗರಗಳಲ್ಲಿ "ದಾಳಿ" ಮಾಡಿದರು. ಸಾವಿರಾರು ಮಣ ಉಪ್ಪನ್ನು ಸತ್ಯಾಗ್ರಹಿಗಳು ಒಯ್ದರೆಂದು ಹೇಳುತ್ತಾರೆ (೬-೭ ಮಣ ಉಪ್ಪು ಒಯ್ದರೆಂದು ಸರಕಾರಿ ಅಂದಾಜ!) ಆ ವರ್ಷದ ಮಳೆಗಾಲದಲ್ಲಿ ಕುಮುಟೆಯಲ್ಲಿ ೪-೫ ಸತ್ಯಾಗ್ರಹಿ ಉಪ್ಪಿನ ಸಂತೆಗಳಾದವು. ಜಂಗಲ ಸತ್ಯಾಗ್ರಹ ನಡೆಯಿತು. ಒಮ್ಮೆಯಂತು ಸ್ತ್ರೀಯರೇ ಮುಂದಾಗಿ ಸರಕಾರಿ ಬೆಟ್ಟದಲ್ಲಿ ಹೋಗಿ ಜಂಗಲ ಕಾಯಿದೆಯನ್ನು ಮುರಿದರು. ಪ್ರಭಾತ ಫೇರಿಗಳೂ, ಸಾಯಂ ಫೇರಿಗಳೂ, ಗಾಂಧಿ-ದಿನದ ಉತ್ಸವಗಳೂ ಅವ್ಯಾಹತವಾಗಿ ನಡೆಯುತ್ತಿದ್ದವು. ಸೆರೆ—ಶೇಂದಿ ಅಂಗಡಿಗಳ ಮುಂದೆ ಸರ್ಪಗಾವಲು ಇಡಲ್ಪಟ್ಟಿತು. ವರ್ತಕರ ಸಂಘ ನಿರ್ಮಾಣವಾಗಿ ಪರದೇಶಿ ವಸ್ತುಗಳನ್ನು ಕಠೋರತನದಿಂದ ಬಹಿಷ್ಕರಿಸಬೇಕೆಂಬ ನಿರ್ಣಯವಾಯಿತು. ಕೆಲ ಕಾಲ ಈ ಬಹಿಷ್ಕಾರ ಚನ್ನಾಗಿ ನಡೆಯಿತು. ಸಿಗರೇಟುಗಳು ಪೇಟೆಯಿಂದ ಓಡಿಹೋದವು. ಚಹಾ ಸೊಪ್ಪಿಗೂ ಬಹಿಷ್ಕಾರ ಬಿತ್ತು. ದಸರೆಯ ದಿನ ನಗರ ಸಭೆಯ ಮೇಲೆ ರಾಷ್ಟ್ರಧ್ವಜ ಹಾರ್ಯಾಡಹತ್ತಿತು. ಆ ಕಾಲದಲ್ಲಿ "ವೃತ್ತ" ಮತ್ತು "ಧುರೀಣ" ಪತ್ರಿಕೆಗಳು ರಾಜಶಾಸನದನ್ವಯ ಬೇಡಿದ ಜಾಮೀನು ತುಂಬಲಾಗದ್ದರಿಂದ ಪ್ರಕಟವಾಗುತ್ತಿದ್ದಿಲ್ಲ. ಶೇಂದಿ ತೆಗೆಯಲು ಕೊಟ್ಟ ತೆಂಗಿನ ಮರಗಳ ಕೊನೆಗಳನ್ನು ಕೊಯ್ಯುವ ಸತ್ಯಾಗ್ರಹ ಸಹ ನಡೆಯಿತು. ೧೯೩೦ರ ಸತ್ಯಾಗ್ರಹದಲ್ಲಿ ಕುಮುಟೆಯಿಂದ ನೂರಾರು ಜನರು ಸೆರೆಮನೆಯನ್ನು ಸೇರಿದರು

ಗಾಂಧಿ-ಇರ್ವಿನ್ ಒಪ್ಪಂದವಾದ ಮೇಲೆ ಸತ್ಯಾಗ್ರಹ ತಡೆಯಿತು. ಮತ್ತು ಸಂಘಟನೆಯ ಕಾರ್ಯಕ್ಕೆ ಆರಂಭವಾಯಿತು. ಆದರೆ ಮಧ್ಯದಲ್ಲಿ ಸ್ವಯಂಸೇವಕರಿಗೂ ಕೊಂಗ್ರೆಸ ಕಮಿಟಿಯವರಿಗೂ ಕೆಲವು ವಿಷಯಗಳಲ್ಲಿ ವೈಮನಸ್ಯವುಂಟಾಗಿ ಕೊಂಗ್ರೆಸ ಕೆಲಸದಲ್ಲಿ ಶೈಥಿಲ್ಯವುಂಟಾಯಿತು.

೧೯೩೧ರ ಕೊನೆಗೆ ಮಹಾತ್ಮರು ದುಂಡು ಮೇಜಿನ ಪರಿಷತ್ತು ತೀರಿಸಿ ವಿಲಾಯತಿಯಿಂದ ಮರಳಿ ಬರುತ್ತಲೇ ಇಲ್ಲೂ ನವಜಾಗೃತಿಯುಂಟಾಯಿತು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದ ಹೊಸ ಯುದ್ಧಾರಂಭದ ರಣಭೇರಿಯು ಹೊಸ ಸ್ಫೂರ್ತಿಯನ್ನುಂಟು ಮಾಡಿತು. ತಾ. ೪-೧-೩೨ಕ್ಕೆ ಸಾರ್ವತ್ರಿಕ ದಬ್ಬಾಳಿಕೆಯ ಘೋಷಣೆಕ್ಕನುಸಾರವಾಗಿ ಆಳರಸರು ಶ್ರೀ॥ ಕಲ್ಯಾಣಪುರಕರ ಮತ್ತು ಮೂಜಿಯವರಿಗೆ ಸೆರೆಹಿಡಿದರು. ಪುನಃ ಪ್ರಭಾತ ಫೇರಿಗಳು ಮತ್ತು ಸ್ವಯಂಸೇವಕರ ಚಟುವಟಿಕೆಗಳು ಸುರುವಾದವು. ತಾ. ೧೪-೧-೩೨ಕ್ಕೆ ಮಧ್ಯರಾತ್ರಿಯು ಕಳೆದುಹೋದ ಮೇಲೆ ನೂರಾರು ಜನರು ಒಟ್ಟುಗೂಡಿ ಸದ್ದಿಲ್ಲದೆ, ನೂರಾರು ರೂಪಾಯಿ ಖರ್ಚು ಮಾಡಿ ತಯಾರಿಸಿದ ಸಾಗವಾನಿಯ ದೊಡ್ಡ ಧ್ವಜಸ್ತಂಭವನ್ನು ನಿಲ್ಲಿಸಿದರು! ಇದರಿಂದ ಅಧಿಕಾರಿಗಳು ರೊಚ್ಚಿಗೆದ್ದರು. ಕೆಲಕೆಲವು ಜನರಿಗೆ ಸೆರೆಹಿಡಿಯುವ ಕುಹಕಗಳು ನಡೆದವು. ತಾ. ೨೪-೧-೩೨ನೇ ಉಷಃಕಾಲಕ್ಕೆ ಸ್ಪೆಶಲ ಮೆಜಿಸ್ಟ್ರೇಟರು ಪೋಲೀಸ ಪಡೆಯೊಡನೆ ಬಂದು ಆಗಸಕ್ಕೆ ತಲೆಯೆತ್ತಿದ್ದ ಭವ್ಯವಾದ ಧ್ವಜಸ್ತಂಭವನ್ನು ಕಡಿಸಿ ಚೆಲ್ಲಿದರು! ೬೭ ಸ್ವಯಂಸೇವಕರಿಗೆ ಸೆರೆಹಿಡಿದರು. ಧ್ವಜಸ್ತಂಭ ನೆಟ್ಟ ಜಾಗೆಯನ್ನು ಸರಕಾರದ ವಶದಲ್ಲಿ ತೆಗೆದುಕೊಂಡು ಪೋಲೀಸ ಕಾವಲಿಟ್ಟರು. ಹೊಸ ದಬ್ಬಾಳಿಕೆಯ ಹೊಸ ರೂಪ ನೋಡಿ ಶಿಬಿರಗಳೂ, ಕೊಂಗ್ರೆಸ ಸಂಸ್ಥೆಗಳೂ ನಾಮಶೇಷವಾದವು. ಫೆಬ್ರುವರಿಯಲ್ಲಿ "ವೃತ್ತ"ದ ಮೇಲೆ ಕ್ರಿಮಿನಲ ಎಮೆಂಡಮೆಂಟ ಕಾಯದೆಯ ಕೆಳಗೆ ಖಟ್ಲೆಯಾಗಿ ರೂ. ೨೦೦ ದಂಡವಾಯಿತು (ಹಾಯಕೋರ್ಟಿನವರು ಅಪೀಲಿನಲ್ಲಿ ಈ ಶಿಕ್ಷೆ ರದ್ದುಪಡಿಸಿದರೆಂಬ ಮಾತು ಬೇರೆ), ಎರಡೇ ತಿಂಗಳಲ್ಲಿ ಎಲ್ಲ ತರದ ಕೊಂಗ್ರೆಸ ಚಟುವಟಿಕೆಗಳು ತೀರಿದವು. ಯೋಗ್ಯ ಸಂಘಟನೆಯಿಲ್ಲದ್ದರಿಂದಲೇ ಹೀಗಾಗಲು ಕಾರಣವಾಯಿತೆಂದು ತಜ್ಞರು ಹೇಳುತ್ತಾರೆ. ಅದೇನಿದ್ದಾಗ್ಯೂ ಕುಮುಟೆಯಿಂದಲೂ, ತಾಲೂಕಿನಿಂದಲೂ ೬೪ ಜನರು ಈ ಎರಡನೇ ಸತ್ಯಾಗ್ರಹದಲ್ಲಿ ಸ್ವರಾಜ್ಯಾಶ್ರಮಕ್ಕೆ ಹೋದರೆಂಬ ಸಂಗತಿ ಸ್ಪಷ್ಟವಿದೆ. ಮೇ ತಿಂಗಳ ಕೊನೆಗೆ ಪುನಃ "ವೃತ್ತ"ದ ಮೇಲೆ ಸಂಕಟ ಬಂತು. ಶ್ರೀಮತಿ ಗೌರಮ್ಮನವರ ಬಗ್ಗೆ ಪ್ರಕಟವಾದ ಸುದ್ದಿಗಳ ಬಗ್ಗೆ "ವೃತ್ತ"ದ ಮೇಲೆ ಖಟ್ಲೆಯಾಯಿತು! 'ಧುರೀಣ'ನಿಗೂ ಲಗಾಮು ಬಿತ್ತು. ಜುಲೈ ತಿಂಗಳಲ್ಲಿ "ವೃತ್ತ"ದ ಮೇಲೆ ಇನ್ನೂ ಒಂದು ಖಟ್ಲೆ ಹೂಡಿದರು. 'ವೃತ್ತ'ಕಾರರು ಕಾವಾಡಿ, ಕಾವಾಡಿ ಸೌ॥ ಗೌರಮ್ಮನವರ ಬಗ್ಗೆ ಆದ ಖಟ್ಲೆಯಲ್ಲಿ ನಿರ್ದೋಷಿಗಳೆಂದು ಹೊರಬಿದ್ದರು. ಅಂಕೋಲೆಯಲ್ಲಿ ಜರುಗಿದ ಜಿಲ್ಲಾ ಪರಿಷತ್ತಿನ ಸುದ್ದಿಯ ಬಗ್ಗೆ ಆದ ಖಟ್ಲೆಯಲ್ಲಿ ಮಾತ್ರ ದಂಡ ತೆರಲೇಬೇಕಾಯಿತು. ಈ ರೀತಿ ಮೇಲಿಂದ ಮೇಲೆ ಖಟ್ಲೆಗಳಾಗಹತ್ತಿದ್ದರಿಂದ "ವೃತ್ತವು" ಆಗೋಸ್ತ ೧೯೩೨ರಿಂದ ಜೂನ ೧೯೩೪ರ ತನಕ ೨೧ ತಿಂಗಳು ಅಜ್ಞಾತವಾಸ ಹಿಡಿಯಿತು.

ಇತ್ತಲಾಗಿ ಕುಮುಟೆಯಲ್ಲಿ ಕೊಂಗ್ರೆಸ ಸಂಸ್ಥೆಗಳು ಅಸ್ತಿತ್ವದಲ್ಲಿಲ್ಲ. ಆದರೂ ಕೊಂಗ್ರೆಸ ಭಕ್ತಿಯು ತುಂಬಾ ಇದೆ. ೧೯೩೪ರ ಫೆಬ್ರುವರಿಯಲ್ಲಿ ಹರಿಜನರ ಕಾರ್ಯಕ್ಕಾಗಿ ದೇಶಸಂಚಾರ ಮಾಡುತ್ತ ಮಹಾತ್ಮರು ಇಲ್ಲಿ ಚಿತ್ತೈಸಿದಾಗ ಕುಮುಟೆಯವರು ಅವರಿಗೆ ಅನುಪಮೇಯ ಉತ್ಸಾಹದಿಂದ ಸತ್ಕರಿಸಿದರು. ಅಂಕೋಲೆಯಿಂದ ಕುಮುಟೆಗೆ ಬರುವ ಮಾರ್ಗಕ್ಕೆ ಹೊಂದಿರುವ ಹಳ್ಳಿಗಳ ಜನರು ಅಲ್ಲಲ್ಲಿ ಅವರಿಗೆ ಸತ್ಕಾರ ಮಾಡಿ ಯಥಾಶಕ್ತಿ ಕಾಣಿಕೆಗಳನ್ನು ಅರ್ಪಿಸಿದರು. ಹೋದ ಬೇಸಿಗೆಯಲ್ಲಿ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರು ಬಂದಾಗಲೂ ರಾಜವೈಭವದಿಂದ ಸ್ವಾಗತವನ್ನಿತ್ತು ರಾಷ್ಟ್ರೀಯ ಸಭೆಯ ಮೇಲಿರುವ ತಮ್ಮ ಅಚಲ ನಿಷ್ಠೆಯ ಪುರಾವೆಯನ್ನು ಕುಮುಟೆಯ ಹಾಗೂ ಕುಮುಟಾ ತಾಲೂಕಿನ ನಾಗರಿಕರು ಕೊಟ್ಟಿರುತ್ತಾರೆ. ಕಳೆದ ವರ್ಷ ನಡೆದ ಎಸೆಂಬ್ಲಿ ಚುನಾವಣೆಯಲ್ಲಿ ವಿಶೇಷ ಪ್ರಚಾರವಿದ್ದಿಲ್ಲವಾದಾಗ್ಯೂ ಕೊಂಗ್ರೆಸ ಪಕ್ಷದ ಹುರಿಯಾಳುವಿಗೇ ತಮ್ಮ ಮತಗಳನ್ನು ಕೊಟ್ಟು ಈ ತಾಲೂಕಿನವರು ಕೊಂಗ್ರೆಸ್ಸಿನ ಧ್ಯೇಯ-ಕಾರ್ಯಗಳ ಬಗ್ಗೆ ತಮ್ಮ ಭಕ್ತಿ-ವಿಶ್ವಾಸಗಳನ್ನು ತುಂಬಾ ವ್ಯಕ್ತಗೊಳಿಸಿದ್ದಾರೆ. ಮುಂದೆ ಸಹ ಕುಮುಟೆಯವರು ರಾಷ್ಟ್ರೀಯ ಸಭೆಯ ಸೇವೆಯನ್ನು ನಿಷ್ಠೆಯಿಂದ ಮಾಡುವರೆಂದು ನಂಬಲಿಕ್ಕಡ್ಡಿಯಿಲ್ಲ.

ಗೋಕರ್ಣದೊಳಗಿನ ವಾರ್ತೆ.

ಹೋಮ ರೂಲ ಚಳವಳಿಯ ಕಾಲಕ್ಕೆ ಗೋಕರ್ಣದಲ್ಲಿ ವಿಶೇಷ ಕಾರ್ಯವೇನೂ ನಡೆದದ್ದಿಲ್ಲ. ಆದರೂ ಓದಬಲ್ಲ ಜನರಲ್ಲಿ ರಾಜಕಾರಣದ ಪ್ರವೃತ್ತಿಯು ಅಂಕುರಿಸಹತ್ತಿತು. ಈ ಕನ್ನಡ ಊರಲ್ಲಿ ಹೋಮ ರೂಲ ಚಳವಳಿಯ ಮುಖಪತ್ರವಾಗಿದ್ದ ಪುಣೆಯ 'ಕೇಸರಿ'ಯ ೧೪-೧೫ ಪ್ರತಿಗಳು ಇಲ್ಲಿ ಬರುತ್ತಿದ್ದುದೇ ಇದಕ್ಕೆ ಸಾಕ್ಷಿ. ಲೋಕಮಾನ್ಯರು ದಿವಂಗತರಾದ ಮೇಲೆ ಕ್ಷೇತ್ರವಾಸಿಗಳು ಅಂಗಡಿಗಳನ್ನು ಮುಚ್ಚಿ, ದುಃಖಪ್ರದರ್ಶನದ ಸಭೆ ಮಾಡಿ ಕೊಂಗ್ರೆಸ ರಾಜಕಾರಣದ ಶಂಕುಸ್ಥಾಪನೆ ಮಾಡಿದರು. ಅಸಹಕಾರದ ಯುಗದಲ್ಲಿ ಇಲ್ಲಿಯವರು ಮನಃಪೂರ್ವಕ ಅಸಹಕಾರದ ಚಳವಳಿಯಲ್ಲಿ ಸೇರಿದರು. ಕೈನೂಲು-ಕೈಮಗ್ಗಗಳ ಪ್ರಸಾರವಾಯಿತು. ಖಾದಿಯ ಪ್ರಚಾರ ನಡೆಯಿತು. ೨-೩ ಜನರು ಸರಕಾರಿ ನೌಕರಿಗೆ ಸಲಾಮು ಹೊಡೆದರು. ಒಂದು ರಾಷ್ಟ್ರೀಯ ಶಾಲೆಯನ್ನು ತೆರೆದರು. ಅದು ೫-೬ ವರ್ಷ ನಡೆಯಿತು.

೧೯೨೪ನೇ ಇಸ್ವಿಯ ಮೇ ತಿಂಗಳಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ದ್ವಾರಕಾ ಪೀಠಾಧೀಶರಾದ ಶ್ರೀ ಭಾರತೀ ಕೃಷ್ಣ ತೀರ್ಥರ ಅಧ್ಯಕ್ಷತೆಯಲ್ಲಿ ಇಲ್ಲಿಯೇ ಸೇರಿತ್ತು. ಆದರಿಂದ ಇಲ್ಲಿಯ ನಾಗರಿಕರಿಗೆ ರಾಜಕಾರಣದ ಶಿಕ್ಷಣ ಒಳ್ಳೇತಾಗಿ ಸಿಕ್ಕಿತು

೧೯೩೦ರಲ್ಲಿ ಅಂಕೋಲೆಯಿಂದಲೂ, ಕುಮುಟೆಯಿಂದಲೂ ಸತ್ಯಾಗ್ರಹಿ ಸ್ವಯಂಸೇವಕರು ಬಂದು ಇಲ್ಲೊಂದು ಶಿಬಿರವನ್ನು ತೆರೆದರು. ಉಪ್ಪಿನ ಕಾಯಿದೆಯ ಉಲ್ಲಂಘನೆಯಾಯಿತು. ಮುಂದೆ ಜಂಗಲ ಕಾನೂನಿನ ಉಲ್ಲಂಘನೆಯಾಯಿತು. ಆದರೆ ಯಾರಿಗೂ ಜೈಲಿಗೆ ಹೋಗುವ ಸಂಧಿಯು ಸಿಗಲಿಲ್ಲ. ಪ್ರಭಾತ ಫೇರಿ, ಧ್ವಜವಂದನಾದಿ ಕಾರ್ಯಕ್ರಮ ನಡೆದೇ ಇತ್ತು. ಹುಲ್ಲುಬನ್ನಿಯನ್ನು ಜನರು ಕೊಡಲಿಲ್ಲ. ೧೯೩೧ರ ಪ್ರಾರಂಭಕ್ಕೆ ಸತ್ಯಾಗ್ರಹಿ ಜನರು ಶೇಂದಿ ಕೊನೆಗಳನ್ನು ಕಡಿದರು. ಆಗ ಮಾತ್ರ ೮—೧೦ ಜನರಿಗೆ ಸೆರೆಯಾಯಿತು; ಜನತೆಯ ಬೆಂಬಲದಿಂದ ಸತ್ಯಾಗ್ರಹಿಗಳು ಗಂಗಾವಳಿಯಿಂದ ತದಡಿಯ ತನಕ ಸೆರೆ-ಶೇಂದಿ ಅಂಗಡಿಗಳ ಮುಂದೆ ಕಠೋರ ಸರ್ಪಗಾವಲು ಇಟ್ಟು ಮದ್ಯದ ವ್ಯಾಪಾರಕ್ಕೆ ಕೆಲವು ತಿಂಗಳುಗಳ ತನಕ ಸಂಪೂರ್ಣ ತಡೆಹಾಕಿಟ್ಟಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗದು.

೧೯೩೧ನೇ ಇಸ್ವಿಯ ಫೆಬ್ರುವರಿಯಲ್ಲಿ ಮಹಾಶಿವರಾತ್ರಿಯೊಳಗಿನ ರಥೋತ್ಸವದ ಕಾಲಕ್ಕೆ ಗೋಕರ್ಣಕ್ಷೇತ್ರದಲ್ಲಿ ರಾಷ್ಟ್ರೀಯ ಸಭೆಯ ಪ್ರಾಬಲ್ಯವೆಷ್ಟಿತ್ತೆಂದು ಅಧಿಕಾರಿಗಳಿಗೂ, ಜನರಿಗೂ ಒಳಿತಾಗಿ ತಿಳಿದು ಬಂತು. ತೇರು ಎಳೆಯುವ ಕಾಲಕ್ಕೆ ಜನದಟ್ಟಣೆಯಲ್ಲಿ ವ್ಯವಸ್ಥೆಯನ್ನಿಟ್ಟು ಅಪಘಾತ ಮುಂತಾದವುಗಳಾಗದಂತೆ ನೋಡಿಕೊಳ್ಳಲು ಶಿಬಿರಾಧಿಪತಿಗಳು ೬-೭ ಸ್ವಯಂಸೇವಕರಿಗೆ ಲಾಠಿಗಳನ್ನು ಕೊಟ್ಟು ಕಳಿಸಿದ್ದರು. ಪೋಲೀಸರಿಗೆ ಇದು ಸರಿದೋರಲಿಲ್ಲ. ಅವರು ಇಲ್ಲಿಗೆ ಬಂದಿದ್ದ ಪ್ರಾಂತ ಸಾಹೇಬರಿದ್ದಲ್ಲಿ ಹೋಗಿ ಏನೇನೋ ದೂರಿಕೊಂಡರು. ಪ್ರಾಂತ ಸಾಹೇಬರು ಸ್ವಯಂಸೇವಕರ ಲಾಠಿಗಳನ್ನು ಕಸಿದುಕೊಳ್ಳಲು ಹುಕುಮು ಮಾಡಿದರು! ಪೋಲೀಸರು ಲಾಠಿಗಳನ್ನು ಕಸಕೊಂಡು ಹೋದರು! "ಸ್ವಯಂಸೇವಕರು ಸತ್ಯಾಗ್ರಹಕ್ಕಾಗಲಿ, ಬಡಿದಾಟ ಮಾಡಲಿಕ್ಕಾಗಲಿ ಬಂದಿದ್ದಿಲ್ಲ; ಮಹಾಜನ ಸಮುದಾಯದಲ್ಲಿ ವ್ಯವಸ್ಥೆಯಿಟ್ಟು ಸಮಾಜಸೇವೆ ಮಾಡುವರೆ ಸಲುವಾಗಿ ಬಂದಿದ್ದರು! ಲಾಠಿಗಳನ್ನು ಕಸಕೊಂಡು ಅಧಿಕಾರಿಗಳು ಅವರಿಗೆ ಅಪಮಾನ ಮಾಡುವದಾದರೇನು?" ಎಂದು ಜನರು ಹೇಳಹತ್ತಿದರು. ತೇರು ಎಳೆಯಲಿಕ್ಕೆ ಬಂದ ಸಹಸ್ರಾವಧಿ ಜನರು ತೇರು ಇದ್ದಲ್ಲಿಯೇ ಬಿಟ್ಟು, ಶ್ರೀ ಮಹಾಬಲೇಶ್ವರನಿಗೂ ರಥದಲ್ಲಿಯೇ ಬಿಟ್ಟುಕೊಟ್ಟು,

ಪರಾರಿ ಹೋದರು! ೫ ನಿಮಿಷಗಳಲ್ಲಿ ಊರೊಳಗಿನ ದೊಡ್ಡವಸ್ತಿ ಅಂಗಡಿಗಳು - ಜಾತ್ರೆಗಾಗಿ ಪರ-ಊರಿನಿಂದ ಬಂದ ನೂರಾರು ಅಂಗಡಿಗಳು ಸಹ — ಮುಚ್ಚಲ್ಪಟ್ಟವು! ಕ್ಷೇತ್ರಸ್ಥರೂ ಯಾತ್ರಿಕರೂ ತೋರ್ಪಡಿಸಿದ ಈ ರಾಷ್ಟ್ರಾಭಿಮಾನವನ್ನು ಕಣ್ಣಾರೆಕಂಡವನು ನಿಜವಾಗಿ ಧನ್ಯನು!

ದಿಲ್ಲಿ-ಒಪ್ಪಂದದ ತರುವಾಯ ಪ್ರಭಾತ ಫೇರಿ ಮುಂತಾದ ಸತ್ಯ-ಕಾರ್ಯಗಳು ಸಾಗುತ್ತಲೇ ಇದ್ದವು. ೧೯೩೨ರ ಚಳುವಳಿಗೆ ಪ್ರಾರಂಭವಾಗುತ್ತಲೇ ಇಲ್ಲಿಯ ಸಂಸ್ಥೆಗಳೂ ಬೇಕಾಯಿದೇಶೀರ ಆದವು. ಆದರೂ ಸತ್ಯಾಗ್ರಹಿಗಳು ಪ್ರಭಾತ-ಫೇರಿಗಳನ್ನೂ, ಮಾಸಿಕ ಧ್ವಜವಂದನೆಯ ಕಾರ್ಯಕ್ರಮವನ್ನೂ ನಡಿಸುತ್ತಾ ಉಳಿದರು. ಈ ಬಗ್ಗೆ ಹಲವು ಜನರಿಗೆ ಸೆರೆಯಾಯಿತು. ೧೯೩೨ನೇ ಮೇ ತಿಂಗಳಲ್ಲಿ ಡಾ! ಹಾರ್ಡೀಕರರ ಆಜ್ಞೆಯ ಮೇರೆಗೆ "ಸ್ವದೇಶಿ ದಿನ" ದ ಆಚರಣೆ ಮಾಡಿ ಸ್ವದೇಶಿ ಫೇರಿ ಹೊರಡಿಸಿದ ಬಗ್ಗೆ ೭ ಜನ ಚಿಕ್ಕ ಮಕ್ಕಳಿಗೂ ಸೆರೆ-ಶಿಕ್ಷೆಗಳಾದವು. (ಹಿರಿಯರು ಮಾಡಿದ ಅಪೀಲಿನಲ್ಲಿ ಮುಂದೆ ಇವರು ಬಿಡುಗಡೆಯಾದರು.) ಸತ್ಯಾಗ್ರಹಕ್ಕಾರಂಭವಾದ ಮೇಲೆ ೭—೮ ತಿಂಗಳ ತನಕ ಕರಪತ್ರಗಳು ಹೊರಡುತ್ತಿದ್ದವು. ಈ ಬಗ್ಗೆ ಅಲ್ಲಲ್ಲಿ ಜಪ್ತಿ-ಝಡತಿಗಳ ಸತ್ರ ನಡೆಯಿತು. ಮುದ್ರಣ ಕಾನೂನು ಉಲ್ಲಂಘಿಸಿ ಕರಪತ್ರಗಳನ್ನು ಹಂಚಿದ ಬಗ್ಗೆ ಹಲವರಿಗೆ ಸೆರೆಯಾಯಿತು. ಹಾಜರು ಹುಕುಮು ಮುರಿದ ಬಗ್ಗೆ ಹಲವರು ತುರಂಗಕ್ಕೆ ಹೋದರು. ಕಾಗಾಲದಲ್ಲಿ ಉಪವಾಸ-ಸತ್ಯಾಗ್ರಹ ಮಾಡಿದ ಬಗ್ಗೆ ಶ್ರೀ! ದೇವಕೀಬಾಯಿ ಹೆಗಡೆ ಎಂಬವರೂ, ಇನ್ನಿಬ್ಬರೂ ಜೈಲಿಗೆ ಕಳಿಸಲ್ಪಟ್ಟರು. ಅಂತು ಈ ಎರಡೂ ಸಂಗ್ರಾಮಗಳಲ್ಲಿ ಕೂಡಿ ಗೋಕರ್ಣದಿಂದ ೩೦, ಬಂಕಿಕೋಡ್ಲದಿಂದ ೬, ತದಡಿಯಿಂದ ೨, ಅಘನಾಶಿನಿಯಿಂದ ೮; ಹೀಗೆ ೪೬ ಜನರು ಗಾಯಗೊಂಡು ಬಂದಿದ್ದಾರೆ. ಇತ್ತೀಚೆಗೆ ಪುನಃ ಕೊಂಗ್ರೆಸ ಕಮಿಟಿಯ ಸ್ಥಾಪನೆಯಾಗಿದೆ. ಶ್ರೀ ಮಹಾಬಲೇಶ್ವರನು ಮುಂಚಿನಂತೆಯೇ ತನ್ನ ಕ್ಷೇತ್ರವಾಸಿಗಳಿಗೆ ಬುದ್ಧಿ ಕೊಟ್ಟು, ರಾಷ್ಟ್ರಸ್ವಾತಂತ್ರ್ಯದ ಹೋರಾಟದಲ್ಲಿ ಧೈರ್ಯದಿಂದ ಕಾದಾಡಲು ಅವರಿಗೆ ಶಕ್ತಿ ಕೊಡಲೆಂದು ಪ್ರಾರ್ಥಿಸುತ್ತೇವೆ.

ಭಟಕಳದೊಳಗಿನ ವಾರ್ತೆ.

ಭಟಕಳದಲ್ಲಿ ರಾಜಕಾರಣವು ಬಂದದ್ದು ಅಸಹಕಾರ ಯುಗದಲ್ಲಿ. ಊರೊಳಗೆ ಹಿಂದು-ಮುಸಲ್ಮಾನ ಮುಂದಾಳುಗಳು ಒಂದು ಕೊಂಗ್ರೆಸ ಕಮಿಟಿಯನ್ನು ಸ್ಥಾಪಿಸಿ ಕಾರ್ಯಾರಂಭ ಮಾಡಿದರು. ಚರಖಾ-ಖಾದಿಗಳ ಪ್ರಚಾರ ಭರದಿಂದ ಸಾಗಿತು. ನೂರಾರು ಬಡಬಗ್ಗರಿಗೆ ಉದ್ಯೋಗ ಸಿ[illegible] ರೂ. ೮೦೦ ರಷ್ಟು ಟಿಳಕ ಸ್ವರಾಜ್ಯ ನಿಧಿ ಕೂಡಿತು. ಮುಂದೆ ಮಹಮ್ಮದೀಯ ಬಂಧುಗಳು ಖಿಲಾಫತ ಚಳವಳಿಯನ್ನು ಸ್ವತಂತ್ರ ನಡಿಸಹತ್ತಿದ ಮೇಲೆ ಕೊಂಗ್ರೆಸ ಚಳವಳಿ ತಣ್ಣಗಾಯಿತು.

೧೯೩೦ ರಲ್ಲಿ ಇಲ್ಲೂ ಒಂದು ಶಿಬಿರ ತೆರೆಯಲ್ಪಟ್ಟು ಸತ್ಯಾಗ್ರಹಕ್ಕೆ ಆರಂಭವಾಯಿತು. ಉಪ್ಪಿನ ಸತ್ಯಾಗ್ರಹ, ಜಂಗಲ ಕಾನೂನು ಭಂಗ, ಸೆರೆಯಂಗಡಿಗಳ ಮುಂದೆ ಸರ್ಪಗಾವಲು ಮುಂತಾದ ನೈಮಿತ್ತಿಕ ಕಾರ್ಯಗಳು, ಫೇರಿ, ಧ್ವಜವಂದನೆ ಮುಂತಾದ ನಿತ್ಯ ಕಾರ್ಯಗಳೂ ನಡೆದವು. ಸೇಂದಿ ತೆಗೆಯಲು ಕೊಟ್ಟ ತೆಂಗಿನ ಮರಗಳ ಕೊನೆಗಳನ್ನೇ ಕೊಯ್ದು ಒಮ್ಮೆಲೇ ಸೇಂದಿಯ ಪುರವಟಿಯನ್ನೇ ನಿಲ್ಲಿಸಿಬಿಡುವ ಯುಕ್ತಿ ಹುಡುಕಿ ತೆಗೆದದ್ದು ಮೊಟ್ಟಮೊದಲು ಭಟಕಳದವರೇ. ಈ ಪ್ರಥಮ ಸತ್ಯಾಗ್ರಹ ಸಮರದಲ್ಲಿ ಅನೇಕರಿಗೆ ಸೆರೆ-ಶಿಕ್ಷೆಗಳಾದವು. ಶ್ರೀ! ಸುಕ್ರಿ ಕೋಂ ಸಣ್ಣಕೂಸಾ, ಕೃಷ್ಣಮ್ಮಾ ಕೋಂ ಮಂಜಪ್ಪಾ (ಇಬ್ಬರೂ ನಾಮಧಾರಿ ಜಾತಿಯವರು) ಎಂಬ ಮಹಿಳೆಯರೂ ಮುದದಿಂದ ಸ್ವರಾಜ್ಯಾಶ್ರಮಕ್ಕೆ ತೆರಳಿದರು.

೧೯೩೨ರ ಸಂಗ್ರಾಮದಲ್ಲಿ ಕೊಂಗ್ರೆಸ ಸಂಸ್ಥೆಗಳು ಬೇರೆ ಕಡೆಯಂತೆ ಇಲ್ಲೂ ಬೇಕಾಯಿದೇಶೀರ ಆದವು. ಪ್ರಭಾತ ಫೇರಿಯಂಥ ಕಾರ್ಯಗಳಿಗೂ ಅಡ್ಡಿಯಾಗಹತ್ತಿತು. ಪ್ರಭಾತ ಫೇರಿಯವರ ಮೇಲೆ ಲಾಠಿ-ಹಲ್ಲೆಯಾಯಿತು. ಮುಖಂಡರಿಗೆ ಹಾಜರು ಹುಕುಮು ಕೊಡಲ್ಪಟ್ಟಿತು. ಆ ಮೇಲೆ ವಿಶೇಷ ಕಾರ್ಯವೇನೂ ನಡೆಯಲಿಲ್ಲ. ಇತ್ತೀಚೆ ಒಂದು ಹೊಸ ಕೊಂಗ್ರೆಸ ಕಮಿಟಿಯು ಸ್ಥಾಪನೆಯಾಗಿದೆ. ಎರಡೂ ಸತ್ಯಾಗ್ರಹ ಸಮರಗಳಲ್ಲಿ ಕೂಡಿ ಭಟಕಳ ಪೇಟೆಯಿಂದ ೨೭ ಜನರು ಸೆರೆಮನೆ ಸೇರಿದ್ದರು. ೨-೩ ಜನರು ಎರಡೆರಡಾವರ್ತಿ ಹೋದವರಿದ್ದಾರೆ.

ಕಾರವಾರದೊಳಗಿನ ವಾರ್ತೆ.

ಕಾರವಾರವು ಜಿಲ್ಲೆಯ ಮುಖ್ಯ ಸ್ಥಳ; ಸುಶಿಕ್ಷಿತರ ಕೇಂದ್ರ. ಆದರೆ ಸರಕಾರಿ ಅಧಿಕಾರಿಗಳಿಂದಲೂ, ಪೆನ್ಶನರ ಜನರಿಂದಲೂ ತುಂಬಿದ ಈ ಪಟ್ಟಣದಲ್ಲಿ ಕೊಂಗ್ರೆಸ ರಾಜಕಾರಣಕ್ಕೆ ಇಂಬು ಬಹಳ ದೊರೆಯುವದಿಲ್ಲ. ೧೯೨೦ ರ ಪೂರ್ವದಲ್ಲಿ ಹೇಳತಕ್ಕಂಥ ರಾಜಕಾರಣವಿಲ್ಲಿರಲಿಲ್ಲ. ೧೯೨೦ರಲ್ಲಿ ಸರ ನಾರಾಯಣ ಚಂದಾವರಕರ ಇವರ ಅಧ್ಯಕ್ಷತೆಯಲ್ಲಿ ಕಾರವಾರ ಜಿಲ್ಲೆಯ ಪ್ರಥಮ ರಾಜಕೀಯ ಜಿಲ್ಲಾ ಪರಿಷತ್ತು ಇಲ್ಲಿ ಸೇರಿತ್ತು. ಕೊಂಗ್ರೆಸ ಭಕ್ತರನೇಕರು ಪರಿಷತ್ತಿನಲ್ಲಿ ಸೇರಿದರಾಗ್ಯೂ ಅದು ಮಂದಗಾಮಿಗಳ ಸಮ್ಮೇಲನದಂತೆಯೇ ಆಯಿತೆಂದು ಹೇಳಬೇಕಾಗಿದೆ. ಪರಿಷತ್ತಿನಲ್ಲಿ ಜಂಗಲ ಸಂಬಂಧದ ದುಃಖಗಳು ಮಾತ್ರ ಕೆಲವರ ಬಾಯಿಯಿಂದ ರಸಭರಿತವಾಗಿ ಬಣ್ಣಿಸಲ್ಪಟ್ಟವು. ಮುಂದೆ ಅಸಹಕಾರಿತೆಯ ಕಾಲದಲ್ಲಿ ಇಲ್ಲೂ ಕೊಂಗ್ರೆಸ ಕಮಿಟಿಯ ಸ್ಥಾಪನೆಯಾಗಿ ಖಾದಿ ಪ್ರಚಾರ ಮುಂತಾದ ಕಾರ್ಯಗಳು ನಡೆದವು. ಹಳದೀಪುರಕರ ಬಂಧುಗಳು ಕೊಂಗ್ರೆಸ ಕಾರ್ಯವನ್ನು ಅಂದಿನಿಂದ ನಿಷ್ಠೆಯಿಂದ ಮಾಡುತ್ತಲಿದ್ದಾರೆ.

೧೯೩೦ರಲ್ಲಿ ಅಂಕೋಲೆಯಲ್ಲಿ ಸ್ವಾಮಿ ವಿದ್ಯಾನಂದ, ಶ್ರೀ! ಶಾಮರಾವ ಶೇಣ್ವಿ ಮೊದಲಾದವರಿಗೆ ಸೆರೆಹಿಡಿದ ವರ್ತಮಾನ ತಿಳಿದ ಮೇಲೆ, ಸೆರೆಯಾದವರ ಅಭಿನಂದನೆಗಾಗಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ! ಸುಬ್ರಾಯ ಹಳದೀಪುರಕರರು ಆವೇಶದಿಂದ ಮಾತಾಡಿ ತಮ್ಮ ಬಂಧುಭಗಿನಿಯವರಿಗೆ ಉತ್ಸಾಹದಿಂದ ಸಮರದಲ್ಲಿ ಧುಮುಕಿರೆಂದು ಬೋಧಿಸಿದರು. ಮರುದಿನವೇ ಅವರಿಗೆ ಸೆರೆಯಾಯಿತು. ಅವರ ಹಿಂದಿನಿಂದ ಸದಾಶಿವಗಡದ ಶ್ರೀ! [illegible] ನಾಡಕರ್ಣಿ ಮೊದಲಾದವರನೇಕರು ಟೊಂಕ ಕಟ್ಟಿ ಮುಂದಾದರು. ಉಪ್ಪಿನ ಸತ್ಯಾಗ್ರಹ, ಜಂಗಲ ಕಾಯಿದೆ ಭಂಗ ಮೊದಲಾದ ಕ್ರಮಗಳು ನಡೆದವು. ಅಧಿಕಾರಿಗಳೂ ತಮ್ಮ ದಬ್ಬಾಳಿಕೆಯ ಬಾರಕೋಲಿನ ಉಪಯೋಗ ನಿರಾತಂಕ ಮಾಡಿದರು. ಶ್ರೀ! ಗಂಗೊಳ್ಳಿ, ಶಾನಭಾಗ, ಕಾಮತ ಮತ್ತು ನಾಡಕರ್ಣಿ ವಕೀಲರು ಸತ್ಯಾಗ್ರಹ ಪುರಸ್ಕರಿಸುತ್ತಾರೆಂದು ಪ್ರಕರಣ ಮಾಡಿ ಅವರ ಸನದುಗಳನ್ನು ರದ್ದುಪಡಿಸಬೇಕಾಗಿ ಹೈಕೋರ್ಟಿಗೆ ಶಿಫಾರಸು ಮಾಡಿದರು. ಇಲ್ಲಿ ನಡೆದ ಎಲ್ಲಕ್ಕೂ ಮಹತ್ವದ ಕಾರ್ಯವೆಂದರೆ ತುರಂಗದಿಂದ ಹೊರಗೆ ಬಂದ ಕೈದಿಗಳ ವ್ಯವಸ್ಥೆ. ಸರಕಾರದವರು ಕೈದಿಗಳನ್ನು ಬಿಡುವಾಗ ಅವರಿಗೆ ಹೆಸರಿಗೆ ಪೂರ್ತ ಟಿಕೆಟಿಗೆ ಕೊಡುತ್ತಿದ್ದರು. ಅದ್ದರಿಂದ ಹಾದೀ ವೆಚ್ಚಕ್ಕೆ ಸಾಲುವಷ್ಟು ಹಣ ಪೂರೈಸುವ ಕೆಲಸ ಜನರೇ ಮಾಡಬೇಕಾಯಿತು. ಕಾರವಾರಸ್ಥರು ಈ ಕಾರ್ಯ ಚೆನ್ನಾಗಿ ಮಾಡಿದ್ದಾರೆ.

೧೯೩೨ ರ ಜನವರಿಯಲ್ಲಿ ಶ್ರೀ! ಸುಬ್ರಾಯ ಹಳದೀಪುರಕರರಿಗೆ ಸೆರೆಯಾಯಿತು. ೧೫ ದಿವಸಗಳಲ್ಲಿ ಅವರು ತಿರುಗಿ ಬಂದು ವಿದೇಶಿ ಬಟ್ಟೆಗಳ ಬಹಿಷ್ಕಾರ ಪ್ರಚಾರ ಮಾಡಿ ತಿರುಗಿ ಜೈಲಿಗೆ ಹೋದರು. ಅವರ ಹಿಂದಿನಿಂದ ಇನ್ನೂ ಕೆಲವರು ಸೆರೆಮನೆ ಸೇರಿದರು. ಅಂತು ಅಧಿಕಾರಸ್ಥರ ಪ್ರಾಬಲ್ಯವಿದ್ದ ಕಾರವಾರದಲ್ಲಿಯೂ ರಾಷ್ಟ್ರಾಭಿಮಾನ ತುಂಬಾ ನೆಲೆಸಿರುತ್ತದೆಂದು ಸ್ಪಷ್ಟವಾಯಿತು.

೨—೩ ವರ್ಷಗಳಿಂದ ಹರಿಜನ ಕಾರ್ಯ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ಡಾ! ನಾಡಕರ್ಣಿಯವರು ಮನಮುಟ್ಟಿ ಆ ಬಗ್ಗೆ ದುಡಿಯುತ್ತಿದ್ದಾರೆ. ೧೯೩೪ರಲ್ಲಿ ಮಹಾತ್ಮರು ಇಲ್ಲಿ ಬಂದಾಗ ಕಾರವಾರಸ್ಥರು ಅವರಿಗೆ ಭಕ್ತಿಯಿಂದ ಸ್ವಾಗತವನ್ನಿತ್ತು ಮನ್ನಿಸಿದ್ದಾರೆ. ರಾಷ್ಟ್ರಕಾರ್ಯದಲ್ಲಿ ಕಾರವಾರಿಗರು ಎಂದೂ ಹಿಂದೆ ಬೀಳಲಾರರು.

ಹಳಿಯಾಳದೊಳಗಿನ ವಾರ್ತೆ.

ಹಳಿಯಾಳದಲ್ಲಿ ೧೯೨೦ರ ಮುಂಚೆ ಸ್ವದೇಶಿಯ ಪ್ರಚಾರವಷ್ಟೇ ನಡೆದಿತ್ತು. ೧೯೨೧ರಲ್ಲಿ ಕೊಂಗ್ರೆಸ ಚಳವಳಿಗೆ ಪ್ರಾರಂಭವಾಗಿ ಎರಡು ವರ್ಷ ಚೆನ್ನಾಗಿ ಕೆಲಸ ನಡೆಯಿತು. ೫೦೦೦ ರೂ. ಟಿಳಕ ಸ್ವರಾಜ್ಯ ನಿಧಿ ಕೂಡಿತು. ಕೊಂಗ್ರೆಸ ಕಮಿಟಿಯ ಸ್ಥಾಪನೆಯಾಯಿತು. ಕೆಲವು ಯುವಕರು ಶಾಲೆ-ಕಾಲೇಜುಗಳನ್ನು ಬಿಟ್ಟರು. ಕೆಲವರು ಸರಕಾರಿ ನವಕರಿಗಳನ್ನು ಬಿಟ್ಟರು. ೧೯೨೧ರ ನವಂಬರ ತಿಂಗಳಲ್ಲಿ ಅಲ್ಲೀ-ಬಂಧುಗಳ ಸಮೇತ ಮಹಾತ್ಮರು ಇಲ್ಲಿ ಬಂದಿದ್ದರು. ಖಿಲಾಫತ ಕಮೀಟಿಯೊಂದು ಹೊರಟಿತು. ಕೊಂಗ್ರೆಸ ಕಾರ್ಯಕರ್ತರು ನಗರ ಸಭೆಯನ್ನು ತಮ್ಮ ಸ್ವಾಧೀನ ಪಡೆದುಕೊಂಡು ತರತರದ ಸುಧಾರಣೆಗಳನ್ನು ಮಾಡಿದರು. ಒಂದು ಇಂಗ್ಲಿಷ ಶಾಲೆಯನ್ನು ತೆರೆದರು. ಡಾ! ಸಕ್ಕರೆ ನಿಂಗಪ್ಪಣ್ಣನವರು ಈ ಶಾಲೆಯ ಬಗ್ಗೆ ಒಂದು ಕಟ್ಟಡ ಕಟ್ಟಿಸಿಕೊಟ್ಟರು. ಈಗಲೂ ಈ ಶಾಲೆಯು ಚೆನ್ನಾಗಿ ನಡೆದಿದೆ. ಅಸಹಕಾರ ಯುಗದಲ್ಲಿ ಇಲ್ಲಿ ಕೈನೂಲಿನ ಪ್ರಚಾರ, ಖಾದಿಯ ಪ್ರಸಾರ, ವಿದೇಶಿ ಬಟ್ಟೆಗಳ ಹೋಳಿ, ಮಾದಕ ವಸ್ತುಗಳ ನಿರೋಧ ಮುಂತಾದ ಕಾರ್ಯಗಳು ಭರದಿಂದ ಸಾಗಿದವು. ಅಧಿಕಾರಿಗಳು ಈ ಚಟುವಟಿಕೆಗಳಿಗೆ ತಡೆಹಾಕಲು ಬಹಳೇ ಯತ್ನ ಮಾಡಿದರು. ಆದರೆ ಯಾರಿಗೂ ಶಿಕ್ಷೆ-ಸೆರೆಗಳಾಗಲಿಲ್ಲ. ಮುಳಶೀ ಪೇಟೆಯ ಸತ್ಯಾಗ್ರಹದಲ್ಲಿ ಇಲ್ಲಿಯ ಇಬ್ಬರು ಸೇರಿ ಎರಡೆರಡಾವರ್ತಿ ಸೆರೆಮನೆಯ ಸುಖವನ್ನು ಅನುಭವಿಸಿ ಬಂದರು.

೧೯೨೪ರಿಂದ ೧೯೩೦ರ ವರೆಗೆ ಚಿತ್ತವೇಧಕ ಕಾರ್ಯವೇನೂ ನಡೆಯಲಿಲ್ಲ. ಆದರೂ ಘಟನಾತ್ಮಕ ಕಾರ್ಯ ಸಾಗುತ್ತಲೇ ಇತ್ತು.

ದೇಶದಲ್ಲಿ ಸತ್ಯಾಗ್ರಹ ಸಂಗ್ರಾಮಕ್ಕೆ ಆರಂಭವಾದ ಮೇಲೆ ಇಲ್ಲಿಂದ ೬ ಜನರು ಸ್ವಯಂಸೇವಕರಾಗಿ ರಣಾಂಗಣಕ್ಕೆ ಹೋದರು. ಇಲ್ಲಿ ಪ್ರಚಾರ ಮಾಡಬಂದ ೪—೫ ಜನರಿಗೆ ಸೆರೆಯಾಯಿತು. ಹಿಂದು ಸಭೆಯ ಅಧ್ಯಕ್ಷರಾದ ಬಗ್ಗೆ ಡಾ! ಅಪ್ಪಾರಾವ ಫಡನೇಸರಿಗೆ ೬ ತಿಂಗಳ ಶಿಕ್ಷೆಯಾಯಿತು. ಸತ್ಯಾಗ್ರಹಿ ಉಪ್ಪಿನ ಮಾರಾಟ, ಜಂಗಲ ಸತ್ಯಾಗ್ರಹ, ನಗರ ಸಂಕೀರ್ತನೆ, ಮಾಸಿಕ ಧ್ವಜವಂದನೆ ಮುಂತಾದ ಕಾರ್ಯಕ್ರಮಗಳು ನಡೆಯುತ್ತಲಿದ್ದವು. ಒಂದು ದಿವಸ ಎರಡಾವರ್ತಿ ಪೋಲೀಸರು ಬಂದು ಲಾಠಿ-ಹಲ್ಲೆ ಮಾಡಿದರು. ೧೦—೧೫ ಜನರಿಗೆ ಚಲೋ ಪೆಟ್ಟಾಯಿತು. ಸತ್ಯಾಗ್ರಹಿಗಳಿಗೆ ಯಾವದೇ ವಿಧದಿಂದ ಆಶ್ರಯ ಕೊಡಬಾರದೆಂದು ನಾಗರಿಕರಿಗೆ ಹುಕುಮುಗಳಾದವು. ಈ ಹುಕುಮು ಪಾಲಿಸದ ಬಗ್ಗೆ ಕೆಲವರಿಗೆ ತುರಂಗಕ್ಕೆ ಕಳಿಸಲಾಯಿತು. ಅಂತು ಹಳಿಯಾಳದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಥಾಶಕ್ತಿ ಕಾದಾಡಿದ್ದಾರೆ. ಅವರ ರಾಷ್ಟ್ರೀಯ ಪ್ರವೃತ್ತಿಯು ಇನ್ನೂ ಜೀವಂತವಿದೆ.

೧೯೩೨ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾರವಾರ ಜಿಲ್ಲೆಯಿಂದ ಸೆರೆಮನೆಗೆ ಹೋದವರ ಮಾಹಿತಿ.

ತಾಲೂಕು	ಗಂಡಸರು	ಹೆಂಗಸರು	ಸ್ಥಾನಬದ್ಧರು
ಕಾರವಾರ	೧೪	...	೧
ಅಂಕೋಲಾ	೩೨೦	೧೭	೨೪
ಕುಮಟಾ	೭೪	...	೮
ಹೊನ್ನಾವರ	೪	...	೨
ಸಿದ್ದಾಪುರ	೨೭೮	೫೭	೩
ಸಿರ್ಸಿ	೧೪೩	೨೫	೧೧
ಯಲ್ಲಾಪುರ	೪೦	೪	...
ಒಟ್ಟು.	೮೭೩	೧೦೩	೫೧

ಟಿಪ್ಪಣಿ:— ಕಾರವಾರದ ಸೆರೆಮನೆಯಲ್ಲಿದ್ದವರು ತಯಾರಿಸಿದ ಯಾದಿಯಿದು. ಸಬ್-ಜೈಲಿನಲ್ಲೇ ಶಿಕ್ಷೆ ಅನುಭವಿಸಿದವರ, ಶಿರ್ಸಿ-ಸಿದ್ದಾಪುರ-ಅಂಕೋಲೆಯಿಂದ ಹೊರಗಿಂದ ಹೊರಗೆ ಬೆಳಗಾಂವಿಗೆ ಒಯ್ಯಲ್ಪಟ್ಟ ಕೈದಿಗಳ ಸಂಖ್ಯೆ ಇದರಲ್ಲಿ ಸೇರಿರುವದಿಲ್ಲ. ಹಳಿಯಾಳದ ಲೆಕ್ಕವೂ ಇದರಲ್ಲಿಲ್ಲ.

ಅಂಕೋಲೆಯೊಳಗಿನ ವಾರ್ತೆ.

ಸನ್ ೧೯೦೬ರ ತನಕ ಅಂಕೋಲೆಯಲ್ಲಿ ರಾಜಕಾರಣದ ಸುಳಿವಿದ್ದಿಲ್ಲ ವಂಗ-ಭಂಗದ ಚಳವಳಿಯು ಬಲವಾದ ಮೇಲೆ ಅದರ ಅಸ್ಪಷ್ಟ ಪ್ರತಿಧ್ವನಿಯು ಇಲ್ಲಿ ಕೇಳಬರಹತ್ತಿತು ಅದೇ ಕಾಲಕ್ಕೆ ಕೊಲೇಜ ಶಿಕ್ಷಣ ಮುಗಿಸಿ ಬಂದ ರಾ ವಿಶ್ವನಾಥ ಪ್ರಭುರ ಪ್ರೇರಣೆಯಿಂದ ಅಂಕೋಲೆಯಲ್ಲಿ ಕೆಲ ಉತ್ಸಾಹಿ ತರುಣರು ಸ್ವದೇಶಿಯ ಪ್ರಚಾರ ಮಾಡತೊಡಗಿದರು ಸಹಕಾರಿ ತತ್ವದ ಮೇಲೆ ಒಂದು ಸ್ವದೇಶಿ ಸರಕುಗಳ ಅಂಗಡಿಯನ್ನು ತೆರೆದರು ೩ ೪ ವರ್ಷ ಒಳ್ಳೇ ವ್ಯಾಪಾರವಾಯಿತು ಆದರೆ ಸಹಕಾರ ಸಂಸ್ಥೆಗಳ ಜ್ಞಾನವಿಲ್ಲದ್ದರಿಂದ ಅಂಗಡಿಯು ಮುಚ್ಚುವ ಪ್ರಸಂಗ ಬಂತು

ಮುಂದೆ ೧೯೧೬ರಲ್ಲಿ ಹೋಮ ರೂಲ ಚಳವಳಿಯು ಇಡೀ ಭಾರತವರ್ಷವನ್ನು ಕಂಪಿಸುತ್ತಿರುವಾಗ ಕೆಲವು ತರುಣರು ಅಂಕೋಲೆಯಲ್ಲಿ ಸ್ವರಾಜ್ಯ ಸಂಘದ ಒಂದು ಶಾಖೆಯನ್ನು ತೆರೆಯಲು ಯತ್ನ ಮಾಡಿದರು ಅವರಿಗೆ ಹಿರಿಯರ ಪ್ರೋತ್ಸಾಹ ದೊರೆಯಲಿಲ್ಲ ಸ್ವರಾಜ್ಯ ಸಂಘದ ಶಾಖೆಯ ಬದಲು "ಯುವಕ ಸಂಘ"ವು ಸ್ಥಾಪನೆಯಾಯಿತು ಈ ಸಂಘದವರು ಅತ್ಯಾದರದಿಂದ ರಾಷ್ಟ್ರೀಯ ವಾಙ್ಮಯವನ್ನು ತರಿಸಿ, ಪ್ರತಿ ರವಿವಾರ ವ್ಯಾಖ್ಯಾನಗಳನ್ನು ಏರ್ಪಡಿಸಿ ಯುವಕರಲ್ಲಿ ರಾಷ್ಟ್ರಪ್ರೇಮದ ಬೀಜಗಳನ್ನು ಬಿತ್ತಿದರು. ಶ್ರೀ ರಾಮರಾವ ಕೃಷ್ಣ ಶೇಣವಿಯವರ ಅನುಜರಾದ ಶ್ರೀ ವಾ ಶ್ರೀನಿವಾಸರಾಯರೇ ಈ ಸಂಸ್ಥೆಯ ಪ್ರಾಣವಾಗಿದ್ದರೆಂದು ಹೇಳಲಡ್ಡಿಯಿಲ್ಲ ಸ್ವರಾಜ್ಯ ಸಂಘವು ಅಸ್ತವಾದ ಬಳಿಕ ಈ ಸಂಸ್ಥೆಯೂ ಮಾಯವಾಯಿತು

೧೯೨೧ರ ಅಸಹಕಾರ ಯುಗದಲ್ಲಿ ಇತರ ತಾಲೂಕುಗಳಂತೆ ಇಲ್ಲಿಯೂ ಒಂದು ಕೊಂಗ್ರೆಸ ಕಮಿಟಿಯು ಮಾಡಲ್ಪಟ್ಟಿತ್ತು ರೂ ೨೮೦೦ ರಷ್ಟು "ಟಿಳಕ ಸ್ವರಾಜ್ಯ ನಿಧಿ" ಕೂಡಿಸಲ್ಪಟ್ಟಿತು ಚರಖಾ-ಖಾದಿಗಳ ಪ್ರಚಾರ ನಡೆಯಿತು ಖಾದಿ-ಬಟ್ಟೆಗಳ ಒಂದು ಅಂಗಡಿ ತೆರೆಯಲ್ಪಟ್ಟಿತು ಇದರ ಹೊರಗೆ ಆ ಕಾಲದಲ್ಲಿ ವಿಶೇಷ ಕಾರ್ಯವೇನೂ ಆಗಲಿಲ್ಲ ೧೯೨೫ರಿಂದ ೧೯೩೦ರ ತನಕ ಕೊಂಗ್ರೆಸ ಕಮಿಟಿಯು ಸಹ ಅಸ್ತಿತ್ವದಲ್ಲಿರಲಿಲ್ಲ

ಅಂಕೋಲೆಯವರ ಸಂಸ್ಮರಣೀಯ ಕಾರ್ಯಕ್ಕೆ ೧೯೩೦ನೇ ಇಸ್ವಿಯ ಎಪ್ರಿಲ ತಿಂಗಳಲ್ಲಿ ಪ್ರಾರಂಭವಾಯಿತು ಮಹಾತ್ಮಾ ಗಾಂಧಿಯವರು ಇತಿಹಾಸಪ್ರಸಿದ್ಧ ದಂಡೀ ಯಾತ್ರೆಗೆ ಹೊರಟ ಮೇಲೆ ಕರ್ನಾಟಕದ ಮುಂದಾಳುಗಳು ಸತ್ಯಾಗ್ರಹ ಸಂಗ್ರಾಮದ ಪ್ರಚಾರಕ್ಕೆ ಅಡ್ಡಾಡುತ್ತ ಅಂಕೋಲೆಗೆ ಬಂದಿದ್ದರು ಉಪ್ಪಿನ ಸತ್ಯಾಗ್ರಹ ಮಾಡುವದು ಕಾರವಾರ ಜಿಲ್ಹೆಯಲ್ಲೇ ಅನುಕೂಲವೆಂದು ಅವರ ಅಭಿಪ್ರಾಯವಿತ್ತು ಅದರಂತೆ ಉಪ್ಪಿನ ಕಾಯಿದೆ ಮುರಿಯಲಿಕ್ಕೆ ಈ ಜಿಲ್ಹೆಯೊಳಗಿನ ಯಾವದೊಂದು ಸ್ಥಳ ಗೊತ್ತುಮಾಡಿಸುವಾಗ ಕೆಲವರು ಅಂಕೋಲೆಯ ಹೆಸರು ಸೂಚಿಸಿದರು ಆ ತನಕ ಅಂಕೋಲೆಯವರು ವಿಶೇಷ ಉತ್ಸಾಹವಾಗಲಿ, ಪರಾಕ್ರಮವಾಗಲಿ ತೋರಿಸಿದ್ದಿಲ್ಲ ಆದರೆ ಅಂಕೋಲೆಯಲ್ಲಿ ತೀವ್ರ ಪಕ್ಷಭೇದಗಳಾಗಲಿ, ತೀವ್ರ ರಾಜನಿಷ್ಠರಾಗಲಿ ಇಲ್ಲದಿದ್ದರಿಂದ ಅಂಕೋಲೆಯನ್ನೇ ರಣಕ್ಷೇತ್ರ ಮಾಡಬಹುದಾಗಿ ಮನಗಂಡು ಮುಂದಾಳುಗಳು ಪಟ್ಟಣದಲ್ಲೂ ಹಳ್ಳಿಗಳಲ್ಲೂ ಭರದಿಂದ ಪ್ರಚಾರ ನಡಿಸಿದರು ಜನರೂ ಕೂಡ ಉತ್ಸಾಹ ತೋರಿಸಿದರು ಎಪ್ರಿಲ ತಿಂಗಳ ಮೊದಲನೇ ವಾರದಲ್ಲಿ ಕರ್ನಾಟಕದ ಸತ್ಯಾಗ್ರಹಿ ವೀರರು ಬಂದು ತಳವೂರಿದರು, ಸ್ವಾಮಿ ವಿದ್ಯಾನಂದರವರು ಬಂದು ಹಳ್ಳಿಗಳಲ್ಲಿ ಅಡ್ಡಾಡಿ ರಣೋತ್ಸಾಹವನ್ನು ಬೀರಿದರು ತಾ ೧೩ಕ್ಕೆ ಶ್ರೀ ಹನುಮಜ್ಜಯಂತಿಯ ದಿನ — ಜಾಲಿಯಾನವಾಲಾಬಾಗದ ಕೊಲೆಯ ಪುಣ್ಯತಿಥಿಯ ದಿನ — ಅಂಕೋಲೆಯಲ್ಲಿ ಸ್ವಾಮಿ ವಿದ್ಯಾನಂದರವರ ನೇತೃತ್ವದಲ್ಲಿ ಉಪ್ಪಿನ ಕಾಯಿದೆಯ ಉಲ್ಲಂಘನೆಯಾಯಿತು ೧೦ ಸಾವಿರಕ್ಕೆ ಮೇಲ್ಪಟ್ಟು ಸ್ತ್ರೀ-ಪುರುಷರು ಪರವೂರುಗಳಿಂದ ಹೊರಟು ರಾಷ್ಟ್ರೀಯ ಉತ್ಸಾಹವನ್ನು ತೋರ್ಪಡಿಸಿದರು ಅಂಕೋಲೆಯ ಇತಿಹಾಸದಲ್ಲಿ ಆ ದಿನವು ಸುವರ್ಣಾಕ್ಷರಗಳಿಂದ ಬರೆಯಬೇಕು ಮರುದಿನವೇ ಬೆಳಿಗ್ಗೆ ಶ್ರೀ ಸ್ವಾಮಿ ವಿದ್ಯಾನಂದರವರಿಗೂ ಉಪ್ಪು ಮಾಡಿದ ಸ್ವಯಂಸೇವಕ ಪಥಕದ ನಾಯಕರಾದ ಶ್ರೀ ಎನ್ ಪಿ ನಾಡಕರ್ಣಿಯವರಿಗೂ, ಸೆರೆಹಿಡಿದು ಕಾರಾಗೃಹಕ್ಕಟ್ಟಿದರು ಜನರ ಉತ್ಸಾಹವು ದ್ವಿಗುಣಿತವಾಯಿತು ದಿನಾಲು ಸತ್ಯಾಗ್ರಹ ನಡೆಯಿತು ತಾ ೧೮ ೪ ೩೦ಕ್ಕೆ ಶ್ರೀ ರಾಮರಾವ ಶೇಣ್ವಿಯವರಿಗೂ ಸೆರೆಯಾಯಿತು ಇದರಿಂದ ಜನರ ಹುರುಪು ಮೇರೆದಪ್ಪಿತು ಹಳ್ಳಿಗಳಲ್ಲಿಯೂ ಜನರು ಉಪ್ಪು ಮಾಡಹತ್ತಿದರು ನೂರಾರು ಹಳ್ಳಿಗರು ಅಂಕೋಲೆಯ ಶಿಬಿರದಲ್ಲಿ ಬಂದು ಸೇರಿದರು ಅಂಕೋಲೆಯು ದೊಡ್ಡದೊಂದು ಸತ್ಯಾಗ್ರಹದ ಶಿಬಿರವಾಯಿತು ಕರ್ನಾಟಕದ ಸೇನಾನಿಗಳಾದ ಡಾ ಹರ್ಡೀಕರರು ಸ್ವತಃ ಶಿಬಿರಾಧಿಪತ್ಯ ವಹಿಸಿ ಸಮರವನ್ನು ನಾಲ್ಕು ಕಡೆಗೆ ನಡಿಸಲಿಕ್ಕೆ ಸ್ವಯಂಸೇವಕರನ್ನು ಬೇರೂರುಗಳಿಗೆ ಕಳಿಸಲಾರಂಭಿಸಿದರು ಎಲ್ಲ ತಾಲೂಕಿನಲ್ಲಿ ಸತ್ಯಾಗ್ರಹ ಕಾಯಿದೆಭಂಗ ಹರತಾಳ [illegible] ಇವೇ ಸುದ್ದಿಗಳು ಕೇಳಹತ್ತಿದವು ತಾ ೫ ೫ ೩೦ಕ್ಕೆ ಮಹಾತ್ಮಾಜಿಗೆ ಸೆರೆಯಾದ ಮೇಲೆ ಶಿಬಿರದವರು ಒಂದು ನಿಶ್ಚಿತ ಕಾರ್ಯಕ್ರಮವನ್ನು ಅನುಸರಿಸಹತ್ತಿದರು ಪ್ರತಿ ತಿಂಗಳು ಕಾನೂನು ಉಲ್ಲಂಘನ ಉಪ್ಪಿನ ಸಂತೆಗಳಾಗಹತ್ತಿದವು, ತಿಂಗಳಿಗೆ ಎರಡು ಸತ್ಯಾಗ್ರಹವಾಗಹತ್ತಿತು ಹುಲ್ಲುಬನ್ನಿಯ ಕರನಿರಾಕರಣೆಯಾಯಿತು ಸೆರೆ ಶೇಂದಿ ಅಂಗಡಿಗಳ ಮುಂದೆ ಕಾವಲು ಇಡಲಾಯಿತು ಕುಡುಕ ಜಾತಿಯ ಜನರ ಸಭೆ ಸೇರಿಸಿ ಮದ್ಯಪಾನದ ವಿರುದ್ಧ ಪ್ರಚಾರ ಮಾಡಲಾಯಿತು ಸೆರೆ-ಶೇಂದಿಯ ವ್ಯಾಪಾರಕ್ಕೆ ತಡೆಬಿತ್ತು ಇಲ್ಲಿಂದ ಸ್ವಯಂಸೇವಕರನ್ನು ಕಳಿಸಿ ಕಾರವಾರದಲ್ಲಿ ನಡೆಯುವ ಸೆರೆ ಶೇಂದಿ ಅಂಗಡಿಗಳ ಲಿಲಾಂವಿನ ಕಾರ್ಯಕ್ಕೆ ಕಾವಲಿಡಲಾಯಿತು, ಅದರಿಂದ ಲಿಲಾಂವು ಮುಂದೂಡಬೇಕಾಯಿತು ೨೦೦ಕ್ಕೆ ಮೇಲ್ಪಟ್ಟು ಸ್ತ್ರೀ ಪುರುಷರು ಕಾರಾಗೃಹಕ್ಕೆ ಹೋದರು ಈ ತಾಲೂಕಿನ ನಾಡವರ ಜಾತಿಯವರೂ ಹೈಸ್ಕೂಲಿನ ವಿದ್ಯಾರ್ಥಿಗಳೂ ತೋರ್ಪಡಿಸಿದ ಉತ್ಸಾಹ-ಪರಾಕ್ರಮಗಳು ಚಿರಸ್ಮರಣೀಯವಾಗಿವೆ ವ್ಯಾಪಾರಿಗಳು ಸಹ ಪರದೇಶಿ ವಸ್ತುಗಳ ವ್ಯಾಪಾರವನ್ನು ಆದಷ್ಟರ ಮಟ್ಟಿಗೆ ಕುಗ್ಗಿಸಿ ಸ್ವದೇಶಿ ವಸ್ತುಗಳ ಪ್ರಸಾರವನ್ನು ಬೆಳಸಿದರು ೧೯೩೦ರ ಕೊನೆಗೆ ಕರಬಂದಿಯ ಕಲ್ಪನೆಯು ಹೊರಟಿತು ಮತ್ತು ಅನೇಕರು ತೀರ್ವೆ ಕೊಡಲಿಲ್ಲ ಕೆಲವರೆ ಪಟೇಲರು ರಾಜಿನಾಮೆ ಕೊಟ್ಟರು ಗಾಂಧಿ-ಇರ್ವಿನ್ ಒಪ್ಪಂದವಾಗಿ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಾಗ ೪೫ ಪಟೇಲರ ರಾಜಿನಾಮೆಗಳು ಕೊಂಗ್ರೆಸ ಕಾರ್ಯಕರ್ತರ ಕೈಕೆಳಗಿದ್ದವು ಒಪ್ಪಂದವಾದ್ದರಿಂದ ಸತ್ಯಾಗ್ರಹವೂ, ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮವೂ ತಡಿಸಲ್ಪಟ್ಟು ಬಾಕಿಯಿದ್ದ ಭೂಕಂದಾಯವೆಲ್ಲ ವಸೂಲ ಕೊಡಲಾಯಿತು

ಸತ್ಯಾಗ್ರಹದ ವಿರಾಮ ಕಾಲದಲ್ಲಿ ಹಳ್ಳಿಗಳಲ್ಲೆಲ್ಲಿ ಸಂಘಟನೆಯ ಕೆಲಸ ನಡೆಯಿತು. ಗ್ರಾಮ ಪಂಚಾಯತಗಳು ನ್ಯಾಯನಿವಾಡೆಯ ಬಗ್ಗೆ ಪಂಚರ ಮಂಡಳಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟವು ಭಾಸ್ಕೇರಿಯಲ್ಲಿ ಭುವನೇಶ್ವರ ಶಿಬಿರವನ್ನು ತೆರೆದು ೫೦ ಸ್ವಯಂಸೇವಕರಿಗೆ ಸೈನಿಕ ಶಿಕ್ಷಣ ಕೊಡಲ್ಪಟ್ಟಿತು. ೧೯೩೨ರಲ್ಲಿ ಜನವರಿಯ ಪ್ರಾರಂಭಕ್ಕೆ ದಬ್ಬಾಳಿಕೆಗೆ ಪ್ರಾರಂಭವಾಗುತ್ತಲೇ ಇಲ್ಲಿಯೂ ಅದರ ಪ್ರತಿಧ್ವನಿ ಕೇಳಬಂತು. ಅಂಕೋಲೆಯಲ್ಲಿ ಜನವರಿ ತಾ ೮ಕ್ಕೆ ಜಿಲ್ಹೆಯೊಳಗಿನ ಮುಂದಾಳುಗಳು ಸಭೆ ಸೇರಿ ಮುಂದಿನ ಕಾರ್ಯದ ರೂಪರೇಷೆಯನ್ನು ನಿಶ್ಚಯಿಸಿದರು ಪ್ರಕಟ ರೀತಿಯಿಂದ ಕೆಲಸ ಮಾಡಿದ್ದಲ್ಲಿ ತೊಂದರೆಗಳು ಬರುವವೆಂಬ ಭೀತಿಯಿಂದ ಸಭೆಯ ಕಾರ್ಯವು ಅಂತರಂಗದಿಂದಲೇ ನಡೆಯಿತು. ಸಭೆಯ ಕೆಲಸ ಮುಗಿಸಿ ಮುಂದಾಳುಗಳು ತಮ್ಮ ತಮ್ಮ ಊರಿಗೆ ಹೋಗಲು ಮರಳಿದರು ಅಷ್ಟರಲ್ಲಿ ರಾಜಶಾಸನವನ್ನು ಅಂಕೋಲೆಯಲ್ಲಿ ಶ್ರೀ ರಾಮರಾವ ಶೇಣ್ವಿ ಸುಬ್ರಾಯ ನಾಡಕರ್ಣಿ ಮೊದಲಾದ ಐದು ಪ್ರಮುಖ ಕಾರ್ಯಕರ್ತರಿಗೆ ಸೆರೆಯಾಯಿತು ಕಾರವಾರಕ್ಕೆ ತಿರುಗಿ ಹೋಗಲು ಮೋಟಾರು ಹತ್ತಿದ ಶ್ರೀ ಸುಬ್ರಾಯ ಹಳದೀಪುರಕರರಿಗೂ ಸೆರೆಯಾಯಿತು ಜಿಲ್ಹೆಯೊಳಗಿನ ಯಾವತ್ತೂ ಕೊಂಗ್ರೆಸ ಕಮೀಟಿಗಳು ಬೇಕಾಯಿದೇಶೀರ ಠರಾಯಿಸಿದ ವರ್ತಮಾನ ಬಂತು ಜನರೆಲ್ಲರೂ ಚಕಿತರಾದರು ೨ ವಾರಗಳು ಕಳೆದ ಮೇಲೆ ಜನರ ಸತ್ಯಾಗ್ರಹಕ್ಕೆ ಪ್ರಾರಂಭವಾಯಿತು ತಾ ೨೬-೧-೩೨ಕ್ಕೆ ಅಧಿಕಾರಿಗಳಮುಷ್ಟಿ ಬಿದ್ದ ಕೊಂಗ್ರೆಸ ಕಚೇರಿಯ ಮೇಲೆ ದಾಳಿ ಮಾಡಿ ಸತ್ಯಾಗ್ರಹಿಗಳು ಅದನ್ನು ವಶಗತ ಮಾಡಿಕೊಂಡರು ಒಂದರ ಹಿಂದೊಂದು ಯುದ್ಧಮಂಡಳದ ಏರ್ಪಾಟಾಗಹತ್ತಿದವು ಪ್ರತಿ ತಿಂಗಳ ೨೬ನೇ ತಾರೀಖಿಗೆ ಗಾಂಧಿ ದಿನದ ಆಚರಣೆ ಮಾಡಲ್ಪಡಹತ್ತಿತು ಇದಕ್ಕೆ ಪೋಲೀಸರು ಅಡ್ಡಿಮಾಡಿ ಮುಂದೆ ಬಂದ ಸತ್ಯಾಗ್ರಹಿಗಳಿಗೆ ಸೆರೆಮನೆಗಟ್ಟುತ್ತಿದ್ದರು ಅದೇ ವರ್ಷದ ರಾಷ್ಟ್ರೀಯ ವಾರದಲ್ಲಿ ಜಂಗಲ ಸತ್ಯಾಗ್ರಹವೂ ನಡೆಯಿತು. ಆ ಕಾಲದಲ್ಲಿ ಕರಪತ್ರಗಳನ್ನು ಹೊರಡಿಸಿ ಕಾರ್ಯಕರ್ತರು ಭರದಿಂದ ಪ್ರಚಾರ ಕಾರ್ಯ ನಡಿಸಿದ್ದರು ಹಳ್ಳಿಗಳಲ್ಲಿ ಸೇರಿ ಅವರಲ್ಲಿ ಸಂಘಟಿತೆಯ ಪ್ರಚಾರವನ್ನು, ಕರಬಂದಿಯ ಉಪದೇಶವನ್ನು ಮಾಡುತ್ತಿದ್ದ ಧಾರವಾಡದ ಸುಪ್ರಸಿದ್ಧ ಕಾರ್ಯಕರ್ತರಾದ ದೇಶಭಕ್ತ ದತ್ತಾತ್ರಯ ಕರಮರಕರರಿಗೆ ಸುಮಾರು ೩ ತಿಂಗಳು ಸೆರೆಹಿಡಿಯಲು ಪೋಲೀಸರು ಮಾಡಿದ ಘೋರ ಪ್ರಯತ್ನಗಳ ಕಥೆಯು ಕಾದಂಬರಿ ಕಥೆಯಷ್ಟು ಅದ್ಭುತವಾಗಿರುತ್ತದೆ ನೂರಾರು ಹಳ್ಳಿಗಳಲ್ಲಿ, ನೂರಾರು ಮನೆಗಳಲ್ಲಿ ಕರಮರಕರರ ಬಗ್ಗೆ ಝಡತಿ-ತಪಾಸಣೆಗಳಾದವು ಆದರೆ ಕರಮರಕರರು ಕೈಗೆ ಸಿಗಲೊಲ್ಲರಾದರು ಹಳ್ಳಿಗರು ಕೊಂಗ್ರೆಸ್ಸಿನ ಮೇಲೆ ಅಚಲ ನಿಷ್ಠೆಯನ್ನಿಟ್ಟು ಕರಮರಕರರ ಪತ್ತೆ ಒಬ್ಬನೇ ಕೊಡಲಿಲ್ಲ ಕೊನೆಗೆ ಮಾರ್ಚ ತಾ. ೧೮ಕ್ಕೆ ಅವರೇ ಪೋಲೀಸ ಉಪದ್ರವಕ್ಕೆ ಬೇಸತ್ತು ಝಡತಿ-ತಪಾಸಣೆಗಳ ತ್ರಾಸದಿಂದ ಜನರಿಗೆ ಮುಕ್ತ ಮಾಡಲು ಪೋಲೀಸರ ಕೈವಶರಾದರು ಆದರೆ ಅವರು ಬಿತ್ತಿದ ಕರಬಂದಿಯ ಬೀಜಗಳು ಬೇಗನೆ ಬೇರೂರಿದವು ಸೂರ್ವೆ, ಶಿಟಗೇರಿ, ಭಾಸಗೋಡ, ಹಿಚ್ಕಡ, ಕಣಗಿಲ, ಸಗಡಗೇರಿ, ಬೆಳಸರೆ, ವಾಸರೆ, ಹೊಸ್ಕಟ್ಟ ಮತ್ತು ಬೋರಳ್ಳಿ ಈ ೧೦ ಹಳ್ಳಿಗಳೊಳಗಿನ ನೂರಾರು ಖಾತೆದಾರರು ತೀರ್ವೆ ಕೊಡಲು ಒಪ್ಪಲಿಲ್ಲ ಕರಬಂದಿಯಲ್ಲಿ ಸೇರಿದವರು ಹೆಚ್ಚಾಗಿ ನಾಡೋರ ಜಾತಿಯವರಾಗಿದ್ದರು ವಿಶೇಷತಃ ಉಪ್ಪರೆಯ ಹಾಲಕ್ಕಿ ಗೌಡರೂ ಕರಬಂದಿಯಲ್ಲಿ ಸೇರಿದ್ದರು ಸರಕಾರದವರು ಈ ಬಗ್ಗೆ ಕಠೋರ ಉಪಾಯಗಳನ್ನವಲಂಬಿಸಿ ಚರ ಚಂದಗಿಯನ್ನೂ, ಸ್ಥಾವರಾಸ್ತಿಗಳನ್ನೂ ಜಪ್ತ ಮಾಡಿದರು ನೂರಾರು ಮನೆಯವರನ್ನು ಹೊರಗೆ ಹಾಕಿ ಕೀಲಿ ಹಾಕಿದರು ದನ-ಕರುಗಳನ್ನೂ, ಮಳೆಗಾಲಕ್ಕಾಗಿ ಸಂಗ್ರಹಿಸಿಟ್ಟ ಕಾಳು-ಕಡಿಗಳನ್ನೂ, ಅಡಿಗೆ-ಪಾತ್ರೆಗಳನ್ನೂ ಸಹ ಜಪ್ತ ಮಾಡಿ ಒಯ್ದರು ಜಪ್ತಾದ ಚರ-ಚಂದಗಿಯ ಲಿಲಾಂವಿನಲ್ಲಿ ಜನರ್ಯಾರೂ ಸವಾಲು ಮಾಡಬರಲಿಲ್ಲ ಅದ್ದರಿಂದ ಅಧಿಕಾರಿಗಳು ಗ್ರಾಮ-ಪೋಲೀಸ ಮೊದಲಾದ ಕೆಳತರಗತಿಯ ನೌಕರರಿಗೆ ಲಿಲಾಂವಿನಲ್ಲಿ ಸವಾಲಮಾಡಲು ಅಪ್ಪಣೆ ಕೊಡಬೇಕಾಯಿತು ಆನಿಯ ಪಾಲು ಕಾಸಿಗೆ ಮಾರಲ್ಪಟ್ಟಿತು ಆದಾಗ್ಯೂ ಕರಬಂದಿಯ ವೀರರು ಸಹಿಸಿಕೊಂಡು ತಮ್ಮ ವ್ರತವನ್ನೇ ಮುಂದರಿಸಿದರು. ಕರಬಂದಿ ಮಾಡಿದ ಕೆಲ ರೈತರ ಬಗ್ಗೆ ಅನೇಕ ದೂರುಗಳು ಕೇಳಬರುತ್ತಿವೆ ಆ ದೂರುಗಳಲ್ಲಿ ತಥ್ಯಾಂಶ [illegible] ಒಪ್ಪಬೇಕಾಗುತ್ತದೆ ಆದರೂ ಅವರು ಸಹಿಸಿದ ಕಷ್ಟ-ಯಾತನೆಗಳ, ಮಾಡಿದ ಸ್ವಾರ್ಥತ್ಯಾಗದ ಬೆಲೆಯನ್ನು ನಾವು ಎಣಿಸಲೇ ಬೇಕು ಸ್ಥಾವರಾಸ್ತಿಗಳು [illegible]

ಕ್ಕೆ ಆಗ್ಗಾಗ ಯೋಗ್ಯ ನ್ಯಾಯಾಲಯವರು ಸರಕಾರಕ್ಕೆ ಸಿಗಲಿಲ್ಲ ಕೆಲವೆಡೆ ಅಧಿಕಾರಿಗಳು ಅಕ್ರಮಗಳಿಂದ ತಮ್ಮ ವರಸ್ಸೇ ಮುಂದೆ ಮಾಡಿ ಅವರ ಮುಖಾಂತರ ಹೀನ ರೀತಿ ಅನೇಕ ಅಸ್ತ್ರಗಳನ್ನು ಕೊಂದು ಕೊಂಡವಾಗಿ ಆ ಕಾಲದಲ್ಲಿ ಕೇಳಿಬರುತ್ತಿತ್ತು ಪತ್ರಿಕೆಗೆ ಅವುಗಳಲ್ಲಿ ಕೆಲವು ಸಂಗತಿಗಳು ಬೆಳಕಿಗೆ ಬರಲಿಕ್ಕೆ ಗ್ಯಾದರ್ಶಿಗೆ ಸಮಾಧಾನವರು ಯಾರೂ ಸಿಗಪ್ಪರಿಂದ ಸರಕಾರದವರು ಕಾಯಿದಾರರಿಂದ ಮೂಲದ ಮುಕದ್ದಮ ಸ್ವಸ್ಥರಿಗೆ ಕರಸಿ ಉಳಿವರೆ ನಮೂದ ಇರುವ ಸುಮಾರು ನೂರಾರು ಎಕರೆ ಉತ್ತಮ ಹೊಲಗಳನ್ನು ಅವರಿಗೆ ತೋಟಿಕೆಯ ಪೂರ್ತಿ ಕಿಮ್ಮತ್ತು ತಕ್ಕಂತೆ ಮಾರಿದರು ಈ ವರ್ಷಗಳಲ್ಲಿ ಅಲ್ಲಲ್ಲಿ ಕೆಲವು ಬೆಂಕಿಯ ಮೊದಲಾದ ಅನಾಹುತಗಳಾದವು ಅಧಿಕಾರಿಗಳು ಈ ಅನಾಹುತಗಳನ್ನು ಸತ್ಯಾಗ್ರಹದ ಚಳವಳಿಗೆ ಜೋಡಿಸಲು ಪ್ರಯತ್ನ ಮಾಡಿದರು ಶಿರಗುಂಜಿ ಪಟೇಲರ ಮನೆಗೆ ಬೆಂಕಿ ಬಿದ್ದ ಪ್ರಕರಣವನ್ನಷ್ಟೇ ನೋಡಿದರೆ ಪೋಲೀಸರ ಕುಟಿಲತ್ವದ ಕಲ್ಪನೆಯಾಗುವಂತಿದೆ ಈ ಬೆಂಕಿಗೆ ಕಾರಣರೆಂದು ೬-೭ ಜನರ ಮೇಲೆ ರಾಜಶಾಸನದನ್ವಯ ಖಟ್ಲೆ ಹೂಡಿ ಕಠೋರ ಶಿಕ್ಷೆ ವಿಧಿಸಿದರು ದುರ್ದೈವದಿಂದ ಆರೋಪಿಗಳ ಅಪೀಲಿನ ವಿಚಾರದ ಕಾಲಕ್ಕೆ ನ್ಯಾಯಮೂರ್ತಿಗಳಿಗೆ ಫಿರ್ಯಾದಿ ಕಥೆಯ ನಿಜಸ್ವರೂಪವು ಕಂಡುಬರಲಿಲ್ಲ ಮುಂದೆ ಇದೇ ಪ್ರಕರಣದಲ್ಲಿ ಪಿನಲ್ ಕೋಡಿನನ್ವಯ ಇನ್ನೂ ಕೆಲವರ ಮೇಲೆ ತನಿಖೆ ನಡಿಸಿ ಪೋಲೀಸರು ಮಾಡಿದ ಖಟ್ಲೆಯು ಸೆಶನ್ಸ ಕೋರ್ಟಿನಲ್ಲಿ ವಿಚಾರಕ್ಕೆ ಬಂತು ಪೋಲೀಸರ ಕುಹಕಗಳೆಲ್ಲ ಆಗ ಬಯಲಿಗೆ ಬಂದವು ನ್ಯಾಯಮೂರ್ತಿ ನೇವಿಸರವರು ಫಿರ್ಯಾದಿ ಪೋಲೀಸರ ಕಥೆಯನ್ನು ಎಳ್ಳಷ್ಟು ನಂಬದೆ ತಮ್ಮ ಮುಂದಿನ ಆರೋಪಿಗಳನ್ನೆಲ್ಲ ನಿರ್ದೋಷಿಗಳೆಂದು ಬಿಡುಗಡೆ ಮಾಡಿದ್ದಲ್ಲದೆ ರಾಜಶಾಸನದನ್ವಯ ಹಿಂದೆ ತುರುಂಗಕ್ಕೆ ಹೋದ ಕೈದಿಗಳು ನಿರಪರಾಧಿಗಳೆಂತಲೂ, ಅವರನ್ನು ಕೂಡಲೆ ಮುಕ್ತ ಮಾಡಬೇಕೆಂತಲೂ ಮೇಲಧಿಕಾರಿಗಳ ಕಡೆಗೆ ಶಿಫಾರಸು ಮಾಡಿ ಬರೆದು ಹಾಕಿದ್ದರೆಂತ ಬಲ್ಲವರು ಹೇಳುತ್ತಾರೆ

ಇತ್ತ ಅಂಕೋಲೆಯಲ್ಲಿ ಮೇಲಿಂದ ಮೇಲೆ ಸಣ್ಣ-ದೊಡ್ಡ ಸತ್ಯಾಗ್ರಹಗಳು ನಡೆಯುತ್ತಲೇ ಇದ್ದವು ಅಂಕೋಲೆಯ ಎಡ್ವರ್ಡ ಶಾಲೆಯ ವಿದ್ಯಾರ್ಥಿಗಳನೇಕರು ಸ್ವಯಂಸ್ಫೂರ್ತಿಯಿಂದ ರಣಾಂಗಣಕ್ಕಿಳಿದು ಶೌರ್ಯದಿಂದ ಹೋರಾಡಿ ಕಾರಾಗೃಹವಾಸವನ್ನನುಭವಿಸಿದರು ಹೆಣ್ಣು ಮಕ್ಕಳು ಸಹ ಪುರುಷರಷ್ಟೇ ಧೈರ್ಯದಿಂದ ಮುಂದಾಗಿ ಹೋರಾಡಿದರು. ಕುಮಾರಿ ಅನಸೂಯಾ ಶಾಂಗಿ, ಕು| ಕಮಲಾ ಕಸಬೇಕರ ಮೊದಲಾದ ವಿದ್ಯಾರ್ಥಿನಿಯರು ತೋರಿಸಿದ ಶೌರ್ಯ-ಸಾಹಸಗಳು ಪ್ರಶಂಸನೀಯವಿವೆ. ಇದೇ ಮೇರೆಗೆ ಕೇವಲ ಹರತಾಳವನ್ನಾಚರಿಸಿದ ಬಗ್ಗೆ ಅನೇಕ ವರ್ತಕರ ಮೇಲೆ ಅಧಿಕಾರಿಗಳು ಖಟ್ಲೆ ಹೂಡಿ ಶಿಕ್ಷೆ ಮಾಡಿದರು ಸತ್ಯಾಗ್ರಹದ ಬಗ್ಗೆ ಯಾವದೇ ತರದಿಂದ ಸಹಾನುಭೂತಿ ವ್ಯಕ್ತಗೊಳಿಸಿದವರೆಲ್ಲರೂ ಜೈಲಿಗಟ್ಟಲ್ಪಟ್ಟರು. ಅಂತು ಅಂಕೋಲೆಯ ಪಟ್ಟಣದಿಂದ ೧೨೦ಕ್ಕೆ ಮೇಲ್ಪಟ್ಟು ಸ್ತ್ರೀ-ಪುರುಷ ನಾಗರಿಕರು-ಹಲಕೆಲವು ಚಿಕ್ಕ ಬಾಲಕರು-ಸಹ ಶ್ರೀಕೃಷ್ಣನ ಜನ್ಮಸ್ಥಾನದ ಸುಖೋಪಭೋಗಗಳನ್ನು ಅನುಭವಿಸಲು ಆನಂದೋತ್ಸಾಹದಿಂದ ತೆರಳಿದರು

ಅಂಕೋಲೆಯಲ್ಲಿ ೧೯೩೨ನೇ ಇಸ್ವಿಯ ಜುಲ್ಯಾ ೨ನೇ ತಾರೀಖಿಗೆ ಕೂಡಿದ ಜಿಲ್ಲಾ ಪರಿಷತ್ತಿನ ಕಥೆಯು ಸತ್ಯಾಗ್ರಹದ ಪುರಾಣದಲ್ಲಿ ಪ್ರಮುಖ ಕಥೆಯು ಘಟ್ಟದ ಮೇಲಿಂದಲೂ, ಕೆಳಗಿಂದಲೂ ೪೦-೫೦ ಪ್ರತಿನಿಧಿಗಳು ಅಂಕೋಲೆಗೆ ಬಂದು ಪ್ರಾತಃಕಾಲದಲ್ಲಿ ಶ್ರೀ ನಾರಾಯಣ ದೇವಸ್ಥಾನದಲ್ಲಿ ಸಭೆಸೇರಿದರು ಅಧ್ಯಕ್ಷರ ಚಿಕ್ಕ ಭಾಷಣವಾಯಿತು. ೫-೬ ಠರಾವುಗಳೂ ಆದವು ಎಲ್ಲ ಕಾರ್ಯ ಹತ್ತೆಂಟು ನಿಮಿಷಗಳಲ್ಲಿ ಮುಗಿಯಿತು ಅಷ್ಟರಲ್ಲಿ ಪೋಲೀಸರಿಗೆ ಸುಳುವು ಹತ್ತಿ ಬಂದು ೪೯ ಜನರಿಗೆ ಸೆರೆಹಿಡಿದರು. ಮುಂದೆ ೧೬ ಜನರಗಿಟ್ಟುಕೊಂಡು ಉಳಿದವರನ್ನು ಬಿಟ್ಟುಕೊಟ್ಟರು ಈ ಪರಿಷತ್ತಿಗೆ ಸಾವಿರಾರು ಜನರು ನೆರೆದಿದ್ದರೆಂದು ನೋಡಿದವರು ಹೇಳುತ್ತಾರೆ. ಇದೇ ಮೇರೆಗೆ ಕೆಲವು ದಿನಗಳ ಮೇಲೆ ಬಾಸಗೋಡಿನಲ್ಲಿ ಅಂಕೋಲಾ ತಾಲೂಕ ಪರಿಷತ್ತು ಸೇರಿತ್ತು. ಅಲ್ಲಿಯೂ ಕೆಲವರಿಗೆ ಸೆರೆಯಾಯಿತು ಅಂತು ಈ ತಾಲೂಕಿನಿಂದ ೧೯೩೦-೩೨ರ ಸತ್ಯಾಗ್ರಹದಲ್ಲಿ ಕಾರಾಗೃಹವಾಸವನ್ನನುಭವಿಸಿದವರಲ್ಲಿ ಪುರುಷರು—ಸ್ತ್ರೀಯರು — ಸತ್ಯಾಗ್ರಹೋತ್ತರ ಕಾಲದಲ್ಲಿ ಕರಬಂದಿಯಿಂದ ಸರ್ವನಾಶ ಮಾಡಿಕೊಂಡ ರೈತರ ಸಂಕಟನಿವಾರಣೆಗಾಗಿ ಕರ್ನಾಟಕದ ಕೆಲ ಮುಖಂಡರು ಪ್ರಯತ್ನಪಡುತ್ತಲಿದ್ದಾರೆ ಕರ್ನಾಟಕದಲ್ಲೂ, ಹೊರಗೂ ಧನಸಹಾಯ ಒಟ್ಟುಗೂಡಿಸಿ ನಿರಾಶ್ರಿತರಿಗೆ ಗುಡಿಸಲುಗಳನ್ನೂ, ಸಾಗುವಳಿಯ ಸಾಧನಗಳನ್ನೂ ಪೂರೈಸಿ ನೆರವಾಗುತ್ತಲಿದ್ದಾರೆ ಈ ಸಂದರ್ಭದಲ್ಲಿ ಮುಂಬಾಪುರಸ್ಥರು ದಯಾರ್ದ್ರ ಬುದ್ಧಿಯಿಂದ ವಿಶೇಷ ಸಹಾಯ ಮಾಡಿದ ಬಗ್ಗೆ ಅಂಕೋಲೆಯವರು ತುಂಬಾ ಋಣಿಯಾಗಿದ್ದಾರೆ

೧೯೩೪ರಲ್ಲಿ ಮಹಾತ್ಮರು ಇಲ್ಲಿ ಚಿತ್ತೈಸಿದಾಗ ಅಂಕೋಲೆಯವರು ಅವರಿಗೆ ಭಕ್ತಿಪೂರ್ವಕ ಸ್ವಾಗತ-ಸತ್ಕಾರಗಳನ್ನು ನೀಡಿ ತಮ್ಮ ಕಾಣಿಕೆಯನ್ನರ್ಪಿಸಿದ್ದಾರೆ. ಕಳೆದ ಬೇಸಿಗೆಯಲ್ಲಿ ರಾಜೇಂದ್ರ ಪ್ರಸಾದರವರು ಬಂದಾಗಲೂ ರಾಷ್ಟ್ರಪತಿಗೆ ಸುಚಿತವಾದ ಸನ್ಮಾನ ಮಾಡಲು ಅಂಕೋಲೆಯವರು ಹಿಂದೆ ಬೀಳಲಿಲ್ಲ ಮಹಾತ್ಮರ ಆಗಮನವಾದ ಲಾಗಾಯ್ತು ಸಮಾಜದಿಂದ ಅಸ್ಪೃಶ್ಯತೆಯನ್ನು ಹೊರನೂಕಿ ಹಾಕುವ ಪ್ರವೃತ್ತಿಯು ನಾಗರಿಕರಲ್ಲಿ ಬೆಳೆಯುತ್ತ ಹೋಗಿದೆ. ಕರಬಂದಿಯಿಂದಲೂ, ಸತ್ಯಾಗ್ರಹದಿಂದಲೂ ಕುಡುಕ ಜನರೊಳಗಿನ ಕುಡುಕತನವು ಕಡಿಮೆಯಾಗಿರುವದೆಂದು ಸೂಕ್ಷ್ಮ ನಿರೀಕ್ಷಣೆಯಿಂದ ಕಂಡುಬರುತ್ತದೆ ಅಂತು ಅಂಕೋಲೆಯವರು ಶಕ್ತಿಮೀರಿ ರಾಷ್ಟ್ರಕಾರ್ಯ ಮಾಡಿದ್ದಾರೆ, ಮುಂದೆ ಸಹ ಇದೇ ರೀತಿ ರಾಷ್ಟ್ರಕಾರ್ಯದಲ್ಲಿ ಭಾಗಿಗಳಾಗಿ ಈ ಹಿಂದೆ ಗಳಿಸಿದ ಕೀರ್ತಿಯನ್ನು ಕಾಪಾಡಿಕೊಳ್ಳುವರೆಂದು ನೆರೆ ನಂಬಿದ್ದೇವೆ.

ಕುಮಟೆಯೊಳಗಿನ ವಾರ್ತೆ.

ಸನ್ ೧೯೧೬ರ ಪೂರ್ವದಲ್ಲಿ ಕುಮಟೆಯೊಳಗೆ ರಾಜಕಾರಣದ ಗಂಧ-ವಾಸನೆಯಿದ್ದಿಲ್ಲ. ವೃತ್ತಪತ್ರಿಕೆಗಳನ್ನೋದುವ ಕೆಲ ಸುಶಿಕ್ಷಿತರಿಗಷ್ಟು ಕೊಂಗ್ರೆಸದ ಅಲ್ಪ ಸ್ವಲ್ಪ ಮಾಹಿತಿಯಿದ್ದಿರಬಹುದು ೧೯೧೬ರಲ್ಲಿ "ಕಾನಡಾ ವೃತ್ತ" ದ ಜನ್ಮವಾದ ಮೇಲೆ ಕುಮಟೆಯಲ್ಲಿ ರಾಜಕಾರಣದ ಬೀಜ ಎಂದು ಬಿತ್ತಿದೆಂದು ಹೇಳಬಹುದು 'ವೃತ್ತ'ವಾದರೂ ಮೊದಮೊದಲು ವಿಶಾಲ ರಾಜಕಾರಣದ ಚರ್ಚೆ ಮಾಡುತ್ತಿದ್ದಿಲ್ಲ ಸ್ಥಾನಿಕ ಸಂಗತಿಗಳನ್ನಷ್ಟೇ ಚರ್ಚಿಸುತ್ತಿತ್ತು. ಕ್ರಮೇಣ ಮುಂದೆ ರಾಜಕಾರಣದಲ್ಲಿ ಪ್ರವೇಶ ಮಾಡಿತು. ಆದರೂ ಹೊಸಬನ ದಾಕ್ಷಿಣ್ಯದಿಂದಲೇ ರಾಜಕೀಯ ಪ್ರಶ್ನೆಗಳ ಚರ್ಚೆ ನಡೆಯುತ್ತಿತ್ತು ೧೯೧೯ ರಲ್ಲಿ "ವೃತ್ತ"ದಲ್ಲಿ ಪಂಜಾಬದ ಅತ್ಯಾಚಾರಗಳ ಸಂಬಂಧ ತುಸು ಉಗ್ರ ಟೀಕೆ ಪ್ರಕಟವಾಯಿತು ಕೂಡಲೆ 'ವೃತ್ತ'ಕಾರರಿಗೆ ರೂ ೧೦೦೦ ಜಾಮೀನು ಕೊಡಬೇಕಾಗಿ ಹುಕುಮು ಬಂತು' ಜಾಮೀನು ಕೊಡಲಾಗದೆ ಸಂಪಾದಕರು ಪತ್ರಿಕೆಯನ್ನು ನಿಲ್ಲಿಸಿಬಿಟ್ಟರು ಆದರೆ 'ವೃತ್ತ'ದಂಥ ನಿರ್ಭಯ ಪತ್ರಿಕೆಯ ಆವಶ್ಯಕತೆಯನ್ನು 'ವೃತ್ತ'ದ ೩ ವರ್ಷಗಳ ಸೇವೆಯಿಂದ ಜನತೆಯು ಚನ್ನಾಗಿ ಅರಿತುಬಿಟ್ಟಿತ್ತು ಅದ್ದರಿಂದಲೇ ಜಿಲ್ಲೆಯೊಳಗಿನ ಹಾಗು ಪರಸ್ಥಳಗಳಲ್ಲಿ ವಾಸಿಸುವ ಕನ್ನಡಿಗರು ವಂತಿಗೆಗಳಿಂದ ರೂ. ೧೦೪೦ ಕೂಡಿಸಿ, 'ವೃತ್ತ'ಕಾರರಿಗೆ ಜಾಮೀನು ತುಂಬಿ ೩ ತಿಂಗಳಲ್ಲಿಯೇ ತಿರುಗಿ ಪತ್ರ ಪ್ರಕಟಿಸಲು ನೆರವಾದರು ಈ ಪುನರ್ಜನ್ಮದ ಕಾಲಕ್ಕೆ, ಮೊದಲು ಪಾಕ್ಷಿಕವಾಗಿದ್ದ 'ವೃತ್ತ'ವು ವಾರಪತ್ರಿಕೆಯಾಯಿತು ಮತ್ತು ಬಹಿರಂಗವಾಗಿ, ಹೆಚ್ಚಿನ ಧೈರ್ಯದಿಂದ ರಾಷ್ಟ್ರೀಯ ಸಭೆಯ ರಾಜಕಾರಣವನ್ನು ತಿಳಿಸಿಹೇಳಲು ಪ್ರಾರಂಭಿಸಿತು ಅಂದಿನಿಂದ 'ವೃತ್ತ'ವು ರಾಷ್ಟ್ರೀಯ ಸಭೆಯ ನಿಷ್ಠಾವಂತ ಅನುಯಾಯಿಯಾಗಿ ತನ್ನ ಶಕ್ತ್ಯನುಸಾರ ರಾಷ್ಟ್ರಸೇವೆ ಮಾಡುತ್ತ ಬಂದಿದೆ ೧೯೩೦ ರಿಂದ ೧೯೩೪ ರ ವರೆಗೆ "ಕಾನಡಾ ಧ್ವನಿ"ವು ಯಥಾಶಕ್ತಿ ರಾಷ್ಟ್ರಸೇವೆ ಮಾಡಿತು

೧೯೨೦ರಲ್ಲಿ ಕುಮಟೆಯಲ್ಲಿ ಕೊಂಗ್ರೆಸ ಕಮಿಟಿಗಳಾಗಲಿ, ಕೊಂಗ್ರೆಸ ಸಭಾಸದರಾಗಲಿ ಇದ್ದಿಲ್ಲ ಆದರೂ ಲೋಕಮಾನ್ಯರು ದಿವಂಗತರಾದ ತಂತಿ ವರ್ತಮಾನ ಬರುತ್ತಲೇ ಕುಮಟೆಯ ವರ್ತಕರು "ಹರತಾಳ"ವನ್ನಾಚರಿಸಿ ರಾಜಕಾರಣದಲ್ಲಿ ಅಡಿಯಿಟ್ಟರು. ಮುಂದೆ ಕೆಲ ದಿನಗಳಲ್ಲಿ ರಾಷ್ಟ್ರೀಯ ಸಭೆಯು ಮಂಜೂರ ಮಾಡಿದ ಮಹಾತ್ಮಾಜಿಯವರ ಅಸಹಕಾರದ ತೀರ್ಮಾನದಿಂದ ಇಲ್ಲಿಯ ಜನರಲ್ಲೂ ನವಚೈತನ್ಯದ ಸಂಚಾರವಾಗಹತ್ತಿತು ಅದೇ ವರ್ಷದ ನವಂಬರ ತಿಂಗಳಲ್ಲಿ ಜರುಗಿದ ಕೌನ್ಸಿಲ-ಎಸೆಂಬ್ಲಿಗಳ ಚುನಾವಣೆಗಳ ಮೇಲೆ ಮತದಾರರು ರಾಷ್ಟ್ರಾಜ್ಞೆಯಂತೆ ಕಠೋರ ಬಹಿಷ್ಕಾರ ಹಾಕಿದರು ೧೯೨೧ರಲ್ಲಿ ಮುಂಬಯಿಂದ ಶಾಲಾ-ಕೊಲೇಜುಗಳನ್ನು ಬಿಟ್ಟು ಕೆಲ ಯುವಕರು ಬಂದು ಇಲ್ಲಿ ಕೊಂಗ್ರೆಸ ಮೆಂಬರರನ್ನು ಬಂದಮಾಡಿದರು ರೀತಿಯಂತೆ ತಾಲೂಕ ಕೊಂಗ್ರೆಸ ಕಮಿಟಿಯ ಸ್ಥಾಪನೆಯಾಯಿತು ಹಳ್ಳಿ-ಹಳ್ಳಿಗಳಲ್ಲೂ ಜನರು ಭರಭರನೆ ಕೊಂಗ್ರೆಸ ಮೆಂಬರರಾದರು, ಜಿಲ್ಲಾ ಕೊಂಗ್ರೆಸ ಕಮಿಟಿಯೂ ಘಟಿಸಲ್ಪಟ್ಟು ಕುಮಟೆಯೇ ಕೊಂಗ್ರೆಸ ಕಾರ್ಯದ ಕೇಂದ್ರವಾಯಿತು ಶ್ರೀ ಶ್ರೀಪಾದರಾವ ಕಲ್ಯಾಣಪುರಕರರು ವಕೀಲಿ ಬಿಟ್ಟು ಕೊಂಗ್ರೆಸ ಕಾರ್ಯದ ಆಧಿಪತ್ಯವನ್ನು ವಹಿಸಿಕೊಂಡರು ರೂ. ೫॥ ಸಾವಿರ ಟಿಳಕ ಸ್ವರಾಜ್ಯನಿಧಿಯನ್ನು ಕಲೆಹಾಕಿದರು ಸರಕಾರಿ ಮತ್ತು ಅರ್ಧ-ಸರಕಾರಿ ಶಾಲೆಗಳ ಮೇಲೆ ರಾಷ್ಟ್ರೀಯ ಸಭೆಯು ಬಹಿಷ್ಕಾರ ಹಾಕಬೇಕೆಂದು ನಿರ್ಣಯಿಸಿದ ಮೇರೆಗೆ ಹಲಕೆಲವು ವಿದ್ಯಾರ್ಥಿಗಳು ಶಾಲೆಗಳನ್ನು ಬಿಟ್ಟು ಬಂದರು ಅಂಥ ವಿದ್ಯಾರ್ಥಿಗಳ ಹಾಗೂ ರಾಷ್ಟ್ರೀಯ ಶಿಕ್ಷಣ ಪಡೆಯಬಿಚ್ಛಿಸುವ ಚಿಕ್ಕ ಬಾಲಕರ ಬಗ್ಗೆ "ಭಾರತೀ ರಾಷ್ಟ್ರೀಯ ಶಾಲೆ"ಯು ತೆರೆಯಲ್ಪಟ್ಟಿತು ಕೈನೂಲು-ಕೈಮಗ್ಗಗಳ ಪ್ರಚಂಡ ಪ್ರಚಾರ ನಡೆಯಿತು. ಇದೇ ತಾಲೂಕಿನಲ್ಲಿ ಆಗ ಕನಿಷ್ಠ ೧೦೦೦ ಚರಕಗಳೂ, ೧೦೦ ಕೈಮಗ್ಗಗಳೂ ಖಾದಿ ಕಾರ್ಯ ಮಾಡುತ್ತಿದ್ದವೆಂದು ಹೇಳಲಡ್ಡಿಯಿಲ್ಲ ಕರೀ, ಕೆಂಪು ಮೊದಲಾದ ಟೊಪ್ಪಿಗೆಗಳು ಬೂದಿಪಾಲಾಗಿ ಎಲ್ಲ ಕಡೆಯಲ್ಲಿ ಬಿಳಿ ಗಾಂಧೀ-ಟೊಪ್ಪಿಗೆಗಳ ಸಾಮ್ರಾಜ್ಯವೇ ಹಬ್ಬಿಕೊಂಡಿತ್ತು ಆದರೆ ಆ ಸಾಮ್ರಾಜ್ಯ ಬಹಳ ಕಾಲ ತಡೆಯಲಿಲ್ಲ ದೇಶದಲ್ಲಿ ಅಸಹಕಾರದ ಚಳವಳಿಯು ಮಂದವಾಗುತ್ತ ನಡೆದಂತೆ ಇಲ್ಲಿಯ ಚಳವಳಿಯೂ ಮಂದವಾಯಿತು ೧೯೨೪ರಲ್ಲಿ ಶ್ರೀ ಕ್ಷೇತ್ರ ಗೋಕರ್ಣದೊಳಗೆ ಕರ್ನಾಟಕ ಪ್ರಾಂತಿಕ ಪರಿಷತ್ತು ಸೇರಿದ್ದರಿಂದಲೂ, ಆ ವರ್ಷದ ರಾಷ್ಟ್ರೀಯ ಸಭೆಯ ಅಧಿವೇಶನವು ಬೆಳಗಾವಿಯಲ್ಲಿ ಸೇರತಕ್ಕದ್ದಿದ್ದದ್ದರಿಂದಲೂ ಅಲ್ಲಿಯ ತನಕ ಕೊಂಗ್ರೆಸ ಕೆಲಸ ಸುಸೂತ್ರ ನಡೆಯಿತು ಕುಮಟೆಯಲ್ಲಿ ಸ್ವಯಂಸೇವಕರ ಶಿಬಿರ ತೆರೆದು ನೂರಾರು ಯುವಕರಿಗೆ ಸ್ವಯಂಸೇವಕ ಶಿಕ್ಷಣ ಕೊಟ್ಟು ಅವರಿಗೆ ಬೆಳಗಾಂವಿಗೆ ಕಳಿಸಿ ಕೊಟ್ಟಿದ್ದರು ಕೊಂಗ್ರೆಸ ಮುಗಿಯುತ್ತಲೇ ಎಲ್ಲವೂ ತಣ್ಣಗಾಯಿತು ಕಮಿಟಿಗಳು ಮುರಿದುಹೋದವು ರಾಷ್ಟ್ರೀಯ ಶಾಲೆಯು ಧನಸಹಾಯವಿಲ್ಲದೆ ಮುಚ್ಚಲ್ಪಟ್ಟಿತು ಕೈಮಗ್ಗ-ಕೈರಾಟೆಗಳೂ ಮೂಲೆಗುಂಪಾದವು ಜನರ ಪೋಷಾಕಿನಲ್ಲಿ ಉಂಟಾದ ಸಾದಾತನವಷ್ಟೇ ಉಳಿಯಿತು ಒಮ್ಮೆ ನಷ್ಟವಾದ ಮೋಹಕ ತಿರುಗಿ ಬರಲಿಲ್ಲ. ಜನತೆಯಲ್ಲಿ ಜಾಗೃತವಾದ ರಾಷ್ಟ್ರಪ್ರೇಮವೂ, ರಾಷ್ಟ್ರಾಭಿಮಾನವೂ ಅಳಿದುಹೋಗಲಿಲ್ಲ, ಬೂದಿಯ ಆವರಣದಲ್ಲಿ ಸುಡುತ್ತಿರುವ ಅದೃಶ್ಯ ಕೆಂಡದಂತೆ ಒಳಗಿಂದೊಳಗೆ ಸುಡುತ್ತಲಿಯಿತು.

೧೯೩೦ನೇ ಇಸ್ವಿಯ ಪ್ರಾರಂಭದಲ್ಲಿ ಪುನಃ ಕುಮಟೆಯ ಜನರಲ್ಲಿ ಚೇತರಿಕೆ ಕಾಣಹತ್ತಿತು ಯುವಕರು ಒಟ್ಟುಗೂಡಿ

[ಮುಂದೆ ೧೦ನೇ ಪಾನು ನೋಡಿರಿ]

ರಾಷ್ಟ್ರಪತಿಗಳ ಅಲ್ಪ ಪರಿಚಯ

(೬ನೇ ಪಾನಿನಿಂದ ಮುಂದರಿಸಿದ್ದು)

ತಿಲಾಂಜಲಿಯಿಟ್ಟು ಭಾರತಾಂಬೆಯ ಸ್ವಾತಂತ್ರ್ಯಕ್ಕಾಗಿ ಹೆಣಗಾಡುವ ಬದ್ಧಕಂಕಣರಾಗಿದ್ದಾರೆ ಈ ಮಹಾವೀರರು ಪಂ. ಮೋತಿಲಾಲರ "ಜವಾಹಿರ ನಲ್ಲ" ಹಿಂದಮಾತೆಯ ಕೊರಳಲ್ಲಿ ಹೊಳೆಯುತ್ತಿರುವ ಅಪ್ರತಿಮ "ಜವಾಹಿರ"ವು! ೧೯೨೯ರಲ್ಲಿ ಲಾಹೋರ ಕಾಂಗ್ರೆಸ್ಸಿನ ಅಧ್ಯಕ್ಷರ ರಿಂದ "ಸಂಪೂರ್ಣಸ್ವಾತಂತ್ರ್ಯವೇ ರಾಷ್ಟ್ರೀಯಸಭೆಯ ಧ್ಯೇಯವು" ಎಂದು ಜಗತ್ತಿಗೆ ಸಾರಿದ ಧೀರ ವೀರರಿವರೇ. ಜವಾಹಿರಲಾಲರ ಸಮಾಧಾನಕ್ಕಾಗಿ ಮಹಾತ್ಮರು ಸಹ ತಮ್ಮ ನಿಶ್ಚಿತ ಮತಾಭಿಪ್ರಾಯಗಳನ್ನು ಬದಲಿಸಲು ತಯಾರಾಗುತ್ತಾರೆ. ಜವಾಹಿರಲಾಲರ ಮೇಲೆ ಮಹಾತ್ಮರಿಗಷ್ಟು ಪ್ರೀತಿ ವಿಶ್ವಾಸವಿದೆ. ಸ್ವತಃ [illegible] ಮುಂತಾದವರು ಇವರು ಸಮತಾವಾದಿಗಳಾದ್ದರಿಂದ ತಮ್ಮ ಸರ್ವಸ್ವವನ್ನು ಬಡವರಲ್ಲಿ ಹಂಚಿಕೊಡಲು ಸಿದ್ಧರಿದ್ದಾರೆ. ತರುಣ ಹಿಂದುಸ್ಥಾನದ ಆಶೆ ಆಕಾಂಕ್ಷೆಗಳ ಇವರ ಮೇಲೆಯೇ ಸಮಾವಿಷ್ಟವಾಗಿವೆ. ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರು ಇವರೇ ಆಗಬೇಕೆಂದು ಬಹಳ ಜನರು ಹಾರೈಸುತ್ತಿದ್ದಾರೆ.

ಸರದಾರ ವಲ್ಲಭಭಾಯಿ ಪಟೇಲ— ಬ್ಯಾರಿಸ್ಟರರು ಪ್ರೆಸಿಡೆಂಟ ವಿಠ್ಠಲಭಾಯಿ ಪಟೇಲರ [illegible] ೧೯೩೦ರಲ್ಲಿ ರಾಜಕಾರಣದಲ್ಲಿ [illegible] ಇವರ ಉದ್ಯೋಗ ಹೆಚ್ಚು. ಆದ್ದರಿಂದಲೇ [illegible]ರೆಂದು ಇವರಿಗೆ ಕರೆಯುತ್ತಾರೆ. [illegible] ಪಡಿಯಲ್ಲಿ [illegible] ತೀರ್ಪ ಏರಿಸಿದ ಬಗೆ ೧೯೨೮ರಲ್ಲಿ ಇವರು ಬಾರ್ಡೋಲಿಯಲ್ಲಿ ಕರಬಂದಿ ಚಳವಳ ಹೂಡಿ ಯಶಸ್ಸು ಸಾಧಿಸಿ ಹೆಸರಾಗಿದ್ದಾರೆ. ಆಗ ಬಾರ್ಡೋಲಿಯವರು ಅವರಿಗೆ ಸರದಾರರನ್ನಾಗಿ ಮಾಡಿದ್ದರು. ಅಂದಿನಿಂದ ವಲ್ಲಭಭಾಯಿಯವರಿಗೆ ಸರದಾರ ಎಂಬ ಬಿರುದು ಸಿದ್ಧಿಸಿತು. ಕಳೆದ ಸತ್ಯಾಗ್ರಹದಲ್ಲಿ ಅವರು ಮೂರಾವರ್ತಿ ಕಾರಾಗೃಹಕ್ಕೆ ಹೋಗಿದ್ದಾರೆ. ಗಾಂಧಿ-ಇರ್ವಿನ ಒಪ್ಪಂದವಾದ ಮೇಲೆ ಕರಾಚಿಯಲ್ಲಿ ಸೇರಿದ ರಾಷ್ಟ್ರೀಯಸಭೆಯ ಅಧ್ಯಕ್ಷರಪದವಿ ಇವರಿಗೆ ದ[illegible]ತ್ತು.

ಬಾಬು ರಾಜೇಂದ್ರ ಪ್ರಸಾದ— ೧೯೦೨ರಲ್ಲಿ ಮೆಟ್ರಿಕ ಪರೀಕ್ಷೆಯಲ್ಲಿ ಅಗ್ರಸ್ಥಾನ ಪಡೆದು ಕಾಲೇಜಿಗೆ ಹೋದರು. ಎಲ್ಲ ಪರೀಕ್ಷೆಗಳಲ್ಲಿ ಉತ್ತಮ ರೀತಿಯಿಂದ ಉತ್ತೀರ್ಣರಾಗಿ ವಕೀಲರಾದರು. ಕಲಕತ್ತೆಯ ಹೈಕೋರ್ಟಿನಲ್ಲಿ, ಪಾಟಣಾ ಹೈಕೋರ್ಟದಲ್ಲಿ ವಕೀಲಿ ಮಾಡಿ [illegible] ಸಂಪಾದನೆ ಮಾಡಿದರು. ೧೯೧೭ರಲ್ಲಿ ಚಂಪಾರಣ್ಯದಲ್ಲಿನ ಸತ್ಯಾಗ್ರಹ ಕಾಲಕ್ಕೆ ಇವರ ರಾಜಕಾರಣದಲ್ಲಿ ಬಿದ್ದರು. ೧೯೨೦ರಲ್ಲಿ ಅಸಹಕಾರದ ಆಂದೋಲನವಾದ ಕೂಡಲೆ ತಮ್ಮ ಭರಭರಾಟೆಯ ವಕೀಲಿಯ ಮೇಲೆ ಧಾರೆಯೆರೆದು, ಅಂದಿನಿಂದಲೂ ರಾಷ್ಟ್ರಕಾರ್ಯದಲ್ಲೇ ನಿರತರಾಗಿದ್ದಾರೆ. ಖಾದಿ ಪ್ರಸಾರ, ರಾಷ್ಟ್ರೀಯ ಶಿಕ್ಷಣ, ಹಿಂದೀ ಪ್ರಚಾರ, ಅಸ್ಪೃಶ್ಯರ ಸೇವೆ ಇತ್ಯಾದಿ ಘಟನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸತ್ಯಾಗ್ರಹ ಸಂಗ್ರಾಮದಲ್ಲಿ ಮೂರಾವರ್ತಿ ಅವರು ತುರಂಗ ಸೇರಿದರು. ಬಿಹಾರದ ಭೂಕಂಪದ ಆಪತ್ತು ಬಂದೊದಗಿದಾಗ ಅವರು ತುರಂಗದಿಂದ ಮುಕ್ತರಾದರು. ಆಗ ಅವರ ಪ್ರಕೃತಿಯು ಕೆಟ್ಟಿದ್ದರೂ ಅವರು ಹಾಸಿಗೆಯಿಂದ ಎದ್ದು ಬಂದು ಆಪದ್ಗ್ರಸ್ತರ ಸಂಕಟನಿವಾರಣೆಯ ಕಾರ್ಯ ಕೈಕೊಂಡರು. ಅವರು ನಡಿಸಿರುವ ಕಾರ್ಯ, ಮಾಡಿರುವ ತಪಶ್ಚರ್ಯೆಗಳಿಗೆ ಮೆಚ್ಚಿ ರಾಷ್ಟ್ರವು ೧೯೩೪ರಲ್ಲಿ ಮುಂಬಯಿಯಲ್ಲಿ ಕೂಡಿದ ವೈಭವಶಾಲಿ ರಾಷ್ಟ್ರೀಯ ಸಭೆಯ ಅಧ್ಯಕ್ಷತನದ ಮುಕುಟವನ್ನು ಅವರಿಗೆ ಅರ್ಪಿಸಿತು. ಇಂದು ದೇಶದಲ್ಲ ಅಡ್ಡಾಡಿ ಅವರು ಮಾಡುತ್ತಿರುವ ರಾಷ್ಟ್ರಕಾರ್ಯಪ್ರಚಾರವು ವೃತ್ತಪತ್ರಗಳಲ್ಲಿ ದಿನಾಲು ಓದಸಿಗುತದೆ. ಭಾವೀ ರಾಷ್ಟ್ರಪತಿಗಳ ಮುಂದೆ ಅವರು ಹೊಸದೊಂದು ರಾಷ್ಟ್ರಸೇವೆಯ ಕ್ರಮವನ್ನೇ ಹಾಕಿಕೊಟ್ಟಿದ್ದಾರೆ. ರಾಷ್ಟ್ರಪತಿಯ ಮುಕುಟವೆಂದರೆ ರಾಷ್ಟ್ರಸೇವೆಯ ಜವಾಬದಾರಿಯೆಂದು ಅವರ ಭಾವನೆ.

ESTD 1906
CANARA BANK
LIMITED.
ಕೆನರಾ ಬ್ಯಾಂಕ
ಲಿಮಿಟೆಡ್.
(ಸ್ಥಾಪನೆ ೧೯೦೬)
ಹತ್ತೊಂಭತ್ತು ಕಾರ್ಯಾಲಯಗಳ ಹೆಣಿಕೆ
ಮುಂಬಯಿ—ಫೋರ್ಟ,
ಮುಂಬಯಿ-ಮಾಂಡ್ವಿ,
ಮಂಗಳೂರು-ಬಂದರ,
ಮಂಗಳೂರು-ಶಹರ
ಚಿಕ್ಕಮಗಳೂರು,
ಎರ್ನಾಕುಳಮ್,
ಬೆಂಗಳೂರು,
ಕಾಸರಗೋಡ,
ಕಲ್ಲಿಕೋಟೆ,
ಕುಂದಾಪುರ,
ದಾವಣಗೆರೆ,
ಗಂಗೊಳ್ಳಿ,
ಬಂಟ್ವಾಳ,
ಪುತ್ತೂರ,
ಉಡುಪಿ,
ಹುಬ್ಬಳ್ಳಿ
ಕಾರ್ಕಳ,
ಆಲಪ್ಪೆ
ಮತ್ತು
ಕೊಚ್ಚಿ
ಠೇವಣಿಯು [illegible] ವಾರ್ಷಿಕ ಶೇಕಡಾ ೩ರ ವರೆಗೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್, ಉಡುಪಿ.
ಶಾಖೆಗಳು – ಉಡುಪಿ ಬ್ರಹ್ಮಾವರ, ಹೊನ್ನಾವರ ಕುಂದಾಪುರ ಕುಮಟಾ ಕಾರವಾರ ಸಿರ್ಸಿ, ಅಂಕೋಲಾ, ಹುಬ್ಬಳ್ಳಿ ಬೆಳಗಾಂವ ಮಂಗಳೂರ, ಬೆಂಗಳೂರ ಸಿಟಿ [illegible], ಬಯ್ಯನಾರ ಹಂಗಾರಕಟ್ಟ, [illegible] ಮತ್ತು [illegible]

೫ ವರ್ಷ ಮುದ್ದತ್ತಿನ ನಮ್ಮ **ಲಕ್ಷ್ಮೀ ಕೆಶ್ ಸರ್ಟಿಫಿಕೇಟು**ಗಳು ರೂಪಾಯಿ 3 12 0 7 8 0, 75-0-0, 375/ 750/- ಇವುಗಳಿಗೆ ಬಡ್ಡಿ ಕೂಡಿಸಿ ಕ್ರಮವಾಗಿ ರೂ 5/- 10/ 100/ 500/, 1000/ ಕೊಡಲ್ಪಡುವದು ಅಂದರೆ ನಮ್ಮ ಹಣಕ್ಕೆ ಶೇಕಡಾ 6½ರಷ್ಟು ಬಡ್ಡಿ ಸಿಗುವದು ಇವುಗಳನ್ನು ಮುದ್ದತು ತೀರುವ ಮೊದಲೇ ವಟಾಯಿಸಲ್ಪಡುವ ವ್ಯವಸ್ಥೆಯುಂಟು

ಹಣವನ್ನು ಗಳಿಸಲಿಕ್ಕೆ ಗೊತ್ತಿದ್ದವರು ಬಹಳ ಆದರೆ ಉಳಿಸಲಿಕ್ಕೆ ಗೊತ್ತಿದ್ದವರು ಕಡಿಮೆ ನಮ್ಮ **ಪಿಗ್ಮಿ ಡಿಪೋಜಿಟ್ ಮತ್ತು ಕ್ಯುಮ್ಯುಲೇಟಿವ್ ಡಿಪೋಜಿಟ್ ಸ್ಕೀಮು** ನಿಮ್ಮಲ್ಲಿಗೆ ಹಣವನ್ನು ಉಳಿಸುವ ಉಪಾಯವನ್ನು ಕಲಿಸುವದು

ಕಾಯಂ ಠೇವು — ಒಂದು, ಎರಡು, ಐದು ವರ್ಷಗಳಿಗೆ ಕ್ರಮವಾಗಿ ಶೇಕಡಾ
ರೂ 5 5½, 6 ರಂತೆ ಬಡ್ಡಿ
ಚಾಲ್ತಿ ಮತ್ತು ಸೇವಿಂಗ್ಸ ಬೇಂಕ ಠೇವುಗಳು ಶೇಕಡಾ 2 ಮತ್ತು 3½ಯಂತೆ
ಬಿನ್ನಾಭರಣಗಳ ಈಡಿನ ಮೇಲೆ ಒಳ್ಳೇ ರಿಯಾಯತಿ ಬಡ್ಡಿ ದರದಿಂದ ಸಾಲ ಕೊಡಲಾಗುವದು
ಇವುಗಳಲ್ಲದೆ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಪತ್ರದ್ವಾರ ಅಥವಾ ಸಮಕ್ಷ ವಿಚಾರಿಸಿಕೊಳ್ಳಬಹುದು
ಕುಮಟಾ, } G. S. Nayak,
ತಾ ೧೫ ೨ ೧೯೩೫ } ಏಜಂಟ, ಕುಮಟಾ

ಬನ್ನಿರಿ! || ಶ್ರೀ ಚಂದ್ರಮೌಳೀಶ್ವರ ಪ್ರಸನ್ನ ! || ನೋಡಿರಿ !!
ಉಡುಪಿ ಬ್ರಾಹ್ಮಣರ
ದಿ ಮೊಡರ್ನ ಹಿಂದೂ ಹೊಟೆಲ್,
ಮಹಾಶಯರೇ, ಕುಮಟಾ. (ಉ. ಕನ್ನಡ)

ಶ್ರೀ ಗೋಕರ್ಣ ಕ್ಷೇತ್ರಕ್ಕೆ ಬರುವ ಹವೀಕ ಬ್ರಾಹ್ಮಣರೇ ಮೊದಲಾಗಿ ಎಲ್ಲಾ ಮತದ ಪರಊರಿನ ಪ್ರವಾಸಿಕರಿಗೂ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ ಕಡೆಗೆ ಹೋಗುವ ಟ್ರೆವ್ಹಲರರಿಗೂ ಉಳಕೊಳ್ಳಲಿಕ್ಕೂ, ಇತರ ಊಟೋಪಚಾರಕ್ಕೂ ಬಹಳ ಸೌಕರ್ಯವಾಗುವದಕ್ಕಾಗಿ ಇತ್ತೀಚಿಗೆ ಹೊಸದಾಗಿ ತೆರೆದಿರುವ ನಮ್ಮ
" ದಿ ಮೊಡರ್ನ ಹಿಂದೂ ಹೊಟೆಲ್ "ದಲ್ಲಿ ಬಂದು ಅನುಭವ ಪಡೆಯಿರಿ !
ಸೂಚನೆ - ವ್ಯವಸ್ಥೆ ಬಗ್ಗೆ ಪರಊರಿನವರು ಪತ್ರ ಮೂಲಕ ತಿಳಿಸುವದುತ್ತಮ
ಬಿ. ರಾಮಕೃಷ್ಣಯ್ಯಾ, ಮಾಲಕ.

ॐ

'दशमूलारिष्ट.'

'ದಶಮೂಲಾರಿಷ್ಟ'

ಇದು ಬಹುತರವಾಗಿ ಎಲ್ಲ ಆಯುರ್ವೈದ್ಯರ ಕಡೆಗೂ ಹಾಗೂ ಎಲ್ಲ ಫಾರ್ಮಸಿಗಳಲ್ಲಿಯೂ ಸಿಗುವ ಔಷಧವಾಗಿರುತ್ತದೆ. ಆದರೆ ಇದರಲ್ಲಿ ಉಪಯೋಗಿಸುವ ವನಸ್ಪತಿಗಳು ಎಲ್ಲಾ ಕಡೆಯಲ್ಲಿ ಸಿಗುವದು ದುರ್ಲಭವಾಗಿರುವದರಿಂದ ಅವರ ಗುಣಗಳು ಸರಿಯಾಗಿ ಕಾಣದೆ ಇರುವದುಂಟು. ಆದರೆ ನಮ್ಮಲ್ಲಿ ತಯಾರಿಸಿದ 'ದಶಮೂಲಾರಿಷ್ಟ'ವು ಯಾವದೊಂದು ವನಸ್ಪತಿಗಳ ನ್ಯೂನತೆ ಇಲ್ಲದೆ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಿದೆ. ಅದರೆ ಈ ಪ್ರಾಂತದಲ್ಲಿ ಎಲ್ಲಾ ತರದ ವನಸ್ಪತಿಗಳು ತಾಜಾ ಸಿಗುವದರಿಂದ ಇದರ ಗುಣವು ಬಲು ಬಲವತ್ತರವಾಗಿರುತ್ತದೆ

ಈ ಮಿಶ್ರಣದಿಂದ ಹೊಟ್ಟೆಯೊಳಗಿನ ಪಚನಕ್ರಿಯೆ ಸರಿಪಡಿಸಿ ಎಂಥ ಅಶಕ್ತತೆ ಇದ್ದರೂ ರೋಗ ನಾಶಿಸಿ ಪ್ರತ್ಯಕ್ಷ ತಾಕತ್ತನ್ನು, ಶಕ್ತಿಯನ್ನೂ ಉಂಟುಮಾಡಿ ಆನಂದಗೊಳಿಸುತ್ತದೆ

ಇದರಿಂದ ಅರುಚಿ, ಕೆಮ್ಮು, ದಮ್ಮು, ಗುಲ್ಮ, (ವಾತ, ಕ್ಷಯ, ವಾಂತಿ) ಕಾಮಿಲೆ, ಪಾಂಡುರೋಗ, ರಕ್ತ ಸಂಬಂಧದ ಕುಷ್ಠವ್ಯಾಧಿ, ಶೂಲವ್ಯಾಧಿ, ಪ್ರಮೇಹ, ಅಗ್ನಿಮಾಂದ್ಯ, ಉದರರೋಗ, ಅಸ್ಥಿರೋಗ, ಮೂತ್ರಕೃಚ್ಛ್ರ, ಧಾತುಕ್ಷೀಣತೆ ಗರ್ಭಕೋಶಯ ತಟ ಇಲ್ಲದೆ ಮಕ್ಕಳಿಲ್ಲದೇ ಇರುವವರಿಗೆ, ಮುಖ್ಯತಃ ಹೆಂಗಸರಿಗೆ ಪ್ರಸವ ಆದ ನಂತರ ಆಗುವಂಥ ವಿಕಾರಗಳಿಗೆ, ಪಚನ ವಿಕಾರಗಳಿಗೆ ಹಾಗೂ ಯಾವದೇ ತರದ ವಾಯು ವಿಕಾರದಿಂದ ಹುಟ್ಟಿಕೊಳ್ಳುವಂಥಾದ ರೋಗಗಳಿಗೆ ಅತ್ಯುತ್ತಮ ಗುಣಕಾರಿಯಾಗಿರುತ್ತದೆ

ವಿಶೇಷವಾಗಿ ಹೆಂಗಸರಿಗೆ — ಪ್ರಸೂತಿ ಆದ ನಂತರ (ದಿನ ಎರಡಾವರ್ತಿ) ಒಂದೊಂದು ಔನ್ಸಿನಂತೆ ೧೨ ದಿನಗಳ ವರೆಗೆ ಕೊಟ್ಟರೆ ಸೂತಿಕಾ ಸಂಬಂಧವಾದ ಯಾವದೇ ತರದ ರೋಗ[illegible] ಮುಂದೆ ಆಗದೆ ಮೊದಲಿನಂತೆ ಸದಾರೋಗ್ಯವಂತರಾಗುತ್ತಾರೆ

ವ್ಯಾಪಾರಸ್ಥರಿಗೆ ಕಮಿಶನ್ ಕೊಡಲಾಗುವದು. ಬೇಕಾದವರು ಪತ್ರವ್ಯವಹಾರ ಮಾಡಬೇಕು.

೧೨ ಔನ್ಸ ಬಾಟ್ಲಿ ೧ಕ್ಕೆ ರೂ ೧—೪—೦
,, ಬಾಟ್ಲಿ ೬ಕ್ಕೆ ರೂ ೬—೧೨—೦
,, ಬಾಟ್ಲಿ ೧೨ಕ್ಕೆ ರೂ ೧೨—೦—೦

ಇದಲ್ಲದೆ, ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಚ್ಯವನಪ್ರಾಶಾವಲೇಹ, ಅಶ್ವಗಂಧಿಮಿಶ್ರ ಕೂಷ್ಮಾಂಡಪಾಕ, ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಕುಮಾರಿ ಆಸವ, ಪಿಪ್ಪಲ್ಯಾಸವ, ಪುನರ್ನವಾ ಆಸವ, ಅಶೋಕಾರಿಷ್ಟ, ಕನಕಾರಿಷ್ಟ, ಲೋಹಾಸವ, ಮಹಾನಾರಾಯಣ ತೈಲ, ಹಿಮಸಾಗರ ತೈಲ, ಬೃಹತ್ ಭೃಂಗರಾಜ ತೈಲ ಮೊದಲಾದ ಉತ್ತಮ ಔಷಧಗಳು ತಯಾರ ಸಿಗುತ್ತವೆ. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ನಮ್ಮ ವಿಳಾಸ—

ಪಿ. ಅಚ್ಯುತ ಪಂಡಿತ,
ಮಾಲಕ,
ಆಯುರ್ಧನ್ವಂತರಿ ಔಷಧಾಲಯ,
ಪೋಸ್ಟ — **ಕುಮಟಾ.** (ಉ ಕನ್ನಡ)

ಬ್ರಿಟಿಶ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ

ಮಂಗಳೂರಿನ

ಪೊಪ್ಯುಲರ್ ಇನ್ಶೂರೆನ್ಸ್ ಕೊ. ಲಿಮಿಟೆಡ್

ಎಂಬ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ!

ನಾಡಿನ ವಾತ್ಸಲ್ಯ-ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ ೫ ವರ್ಷಗಳ ವ್ಯಾಲ್ಯುವೇಶನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂ. 10/–ರ ಬೋನಸ್ ಹಂಚಲಾಗುವದು!

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ,
ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ — ಸೌಕರ್ಯಗಳಿವೆ ಯಥೋಚಿತವಾದ — ಪುರಸ್ಕಾರಗಳಿವೆ
ತಪ್ಪದೆ ವ್ಯವಹಾರ ಬೆಳಸಿರಿ

ಮುಂಬಯಿ ಸಂಸ್ಥಾನದ ಮುಖ್ಯ ಏಜಂಟರು —
ಪ್ರಭಾಕರ ಕಂಪನಿ, 415 ಶೇಕ ಮೆಮನ್ ರಸ್ತೆ, **ಮುಂಬಯಿ.**
ಉತ್ತರ ಕನ್ನಡದ ಜಿಲ್ಹಾಧಿಕಾರಿಗಳ – ಮೆಸರ್ಸ್ ಜೀವನ ಏಜನ್ಸಿ, ಕಾರವಾರ.

Established 1900

ॐ

FIXED RATE

ದಾಸಪ್ಪಾ ಕೃಷ್ಣಪ್ಪಾ

ಧಾಕಪ್ಪನವರ ಬ್ರದರ್ಸ

ಇವರ ಒಂದೇ ದರದ ಜವಳಿ ಅಂಗಡಿ, ಶಿರ್ಶಿ

ನಮ್ಮಲ್ಲಿ ಬೇರೆ ಬೇರೆ ಊರಿನ ಹೊಸ ಹೊಸ ನಮೂನೆವಾರ ಸೀರೆಗಳೂ, ತರತರದ ಪತ್ತಾರೇಷ್ಮೆಯ ಖಣಗಳೂ, ಕೋಟಿಂಗ ವ ಶರ್ಟಿಂಗ ಫ್ಯಾಶನೇಬಲ್ ಬಟ್ಟೆಗಳೂ, ಅಂದವಾದ ಖಾದಿಯ ವಸ್ತ್ರಗಳೂ, ಜರಿ ರುಮಾಲು ಉಪ್ಪರ್ಣೆ, ಟೊಪ್ಪಿಗಳೂ, ಧೋತರ ಜೋಡುಗಳೂ, ರೇಶ್ಮೆ ಖದ್ದರ ಮಡಿಗಳೂ, ಸಾದ ಮಡಿಗಳೂ ಮುಂತಾದ ಎಲ್ಲ ತರದ ಜವಳಿಯೂ, ಕಬ್ಬಿಣದ ಮಜಬೂತ ಟ್ರಂಕುಗಳೂ, ಛತ್ರಿಗಳೂ ವಗೈರೆ ಎಲ್ಲಾ ತರದ ಮ್ಹಾಲು ಆಬಾಲವೃದ್ಧರಿಗೂ ಮೋಸ ಹೋಗುವ ಏನೊಂದೂ ಭಯವಿಲ್ಲದೆ ಸೋಯಿ ದರದಿಂದ ಸಿಗುವವು ರೋಖ ವ್ಯಾಪಾರಕ್ಕೆ ಕಮಿಶನ್ ದೊರೆಯುವದು.

Tel "Honesty"] **D. K DHAKAPPA BROS.,**

ಹೊಸ ಮ್ಹಾಲು.

Cloth Merchants,
SIRSI. N KANARA

ದರ ಅಗ್ಗ.

ಸುಲಭ ಕ್ರಯ! **ಡಾಕ್ಟರ್ ಜೀ ಬೀ ಯವರ ಸುಗಂಧಿ ನಶ್ಯದ ಪುಡಿ.** ಸುಲಭ ಕ್ರಯ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ನೆಗಡಿ, ಒಂಟಿತಲೆನೋವು ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಅಲ್ಪದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಸೇರಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ಪೋಷ್ಟಿ ಪಿ ೪ ಅಣೆ ಡಜನ್ ೧ಕ್ಕೆ ರೂ. ೨-೮-೦ ವಿ ಪಿ ೦-೫-೦

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ — ಗುರುಬಸವ **ಅಂಡ್** ಕಂಪನಿ ಲಿಮಿಟೆಡ್, ಪೋ. ಬಾ. ೫೧೦, [illegible]

ಇದನ್ನು ಪಾಂಡುರಂಗ ಕೃಷ್ಣ ಶ್ಯಾನಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

ರಾಷ್ಟ್ರೀಯ ಸಭೆಯ ಸ್ವರೂಪವೂ ಧ್ಯೇಯವೂ.



ಮಹಾತ್ಮರು ೨ನೇ ರೌಂಡ ಟೇಬಲ್ ಪರಿಷತ್ತಿನಲ್ಲಿ ರಾಷ್ಟ್ರೀಯ ಸಭೆಯ ಒಬ್ಬೊಂಟಿಗ ಪ್ರತಿನಿಧಿಗಳಾಗಿ ರಾಷ್ಟ್ರೀಯ ಸಭೆಯ ಸ್ವರೂಪ-ಧ್ಯೇಯಗಳನ್ನು ವರ್ಣಿಸಿದ್ದಾರೆ. ಅದೇನಂದರೆ :— "ರಾಷ್ಟ್ರೀಯ ಸಭೆಯ ಪರವಾಗಿ ನುಡಿಯುವ ನಾನೊಬ್ಬ [illegible] ಪ್ರತಿನಿಧಿಯಾಗಿದ್ದೇನೆ. ತಾವು ರಾಷ್ಟ್ರೀಯ ಸಭೆಯ ಸ್ವರೂಪವನ್ನೂ ಧ್ಯೇಯವನ್ನೂ ಲಕ್ಷದಲ್ಲಿಡುವದವಶ್ಯ. ಯಾಕಂದರೆ ಅದರಿಂದ ನನ್ನ ಮೇಲಿರುವ ಮಹಾ ದೊಡ್ಡ ಜವಾಬದಾರಿಯ ಕಲ್ಪನೆ ತಮಗೆ ಬಂದು ನನ್ನ ಬಗ್ಗೆ ತಮ್ಮ ಸಹಾನುಭೂತಿಯನ್ನು ಪ್ರದರ್ಶಿಸಲನುಕೂಲವಾಗುವದು. ರಾಷ್ಟ್ರೀಯ ಸಭೆಯು ಹಿಂದುಸ್ಥಾನದೊಳಗಿನ ರಾಜಕೀಯ ಸಂಘಟನೆಯ ಸಂಸ್ಥೆಗಳಲ್ಲಿ ತೀರ ಪುರಾತನದಿಂದ ನಡೆದು ಬಂದ ಸಂಸ್ಥೆಯಾಗಿದೆಯೆಂದು ನಾನು ಹೇಳಿದರೆ ತಪ್ಪಾಗಲಾರದು. ರಾಷ್ಟ್ರೀಯ ಸಭೆಯು ೫೦ ವರ್ಷಗಳ ಪುರಾತನ ಸಂಸ್ಥೆ. ಈ ಅವಧಿಯಲ್ಲಿ ಪ್ರತಿ ವರ್ಷ ಈ ಸಭೆಯ ಅಧಿವೇಶನಗಳಾಗಿವೆ."

"ರಾಷ್ಟ್ರೀಯ ಸಭೆಯೊಳಗಿನ 'ರಾಷ್ಟ್ರೀಯ' ಶಬ್ದ ಅರ್ಥಪೂರ್ಣವಾದದ್ದು. ಅದು ಯಾವದೊಂದು ಜಾತಿಹಿತ, ವರ್ಗಹಿತ ಯಾ [illegible] ಪುರಸ್ಕರಿಸುವದಿಲ್ಲ. ಅಖಿಲ ಭಾರತವರ್ಷದ ಕಲ್ಯಾಣಕ್ಕಾಗಿ, ಹಿಂದುಸ್ಥಾನದ ಸಮಸ್ತ ವರ್ಗದವರಿಗಾಗಿ, ರಾಷ್ಟ್ರೀಯ ಸಭೆಯು ಪರಿಶ್ರಮಪಡುತ್ತದೆ. ಒಬ್ಬ ಇಂಗ್ಲಿಷ ಪುರುಷನೇ ರಾಷ್ಟ್ರೀಯ ಸಭೆಯ ಕಲ್ಪನೆಯ ಜನಕನೆಂದು ನಮೂದಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ. ಎಲನ್ ಒಕ್ಟೇವ್ಹಿಯನ್ ಹ್ಯೂಮರವರು ರಾಷ್ಟ್ರೀಯ ಸಭೆಯ ಜನಕರೆಂದು ತಮಗೆ ವಿದಿತವಾದ ಸಂಗತಿ. ಸರ್ ಫಿರೋಜಶಹಾ ಮೇಥಾ ಮತ್ತು [illegible] ಜನರು ಪ್ರೀತಿಯಿಂದ ಪಿತಾಮಹನೆಂದು ಸಂಬೋಧಿಸುವ ದಾದಾಭಾಯಿ ನವರೋಜಿ ಹೀಗೆ ಈರ್ವ ಪಾರ್ಸಿ ಮಹನೀಯರು ರಾಷ್ಟ್ರೀಯ ಸಭೆಯ [illegible] ಮಾಡಿದರು. ಪ್ರಾರಂಭದಿಂದಲೇ ಮುಸಲ್ಮಾನರೂ, ಕ್ರಿಸ್ತಿಯರೂ, ಎಂಗ್ಲೋ ಇಂಡಿಯನ್‌ರೂ ರಾಷ್ಟ್ರೀಯ ಸಭೆಯಲ್ಲಿ ಸೇರಿದ್ದರು. ಅಂತೆಯೇ ಇಲ್ಲಿರುವ [illegible] ಸಮಸ್ತ ಧರ್ಮದವರೂ ಪಂಥದವರೂ, ಜಾತಿಯವರೂ ರಾಷ್ಟ್ರೀಯ ಸಭೆಯಲ್ಲಿ ಸೇರಿದ್ದರೆಂದು ನಾನು ಹೇಳಬಲ್ಲೆ. ಕೈ| ವಾ| ಬದ್ರುದ್ದೀನ ತಯ್ಯಬಜಿಯವರು ರಾಷ್ಟ್ರೀಯ ಸಭೆಗೆ [illegible]. ಮುಸಲ್ಮಾನರೂ ಪಾರ್ಸಿಯರೂ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದಾರೆ. ಹಿಂದೀ ಕ್ರಿಶ್ಚನ್ ಅಧ್ಯಕ್ಷರೊಬ್ಬರ ಹೆಸರು ನನಗೀಗ ನೆನಪಾಗಿದೆ. ಅವರು ಡಬ್ಲ್ಯು. ಸಿ. ಬಾನರ್ಜಿಯವರು. ಕಾಲೀಚರಣ ಬಾನರ್ಜಿಯವರಿಗಿಂತ ನಿರ್ಮಲ ಅಂತಃಕರಣದ ಪುರುಷರನ್ನು ನಾನರಿಯೆ. ಇವರು ರಾಷ್ಟ್ರೀಯ ಸಭೆಯೊಡನೆ ಸಂಪೂರ್ಣವಾಗಿ ಏಕರೂಪರಾಗಿದ್ದರು. ಇಂದಿಗೆ ಮಿ| ಕೆ. ಟಿ. ಪೋಲ್‌ರವರು ಹಾಜರಿಲ್ಲ. ಅವರ ಗೈರಹಾಜರಿಯಿಂದ ನನ್ನ [illegible] ರಾಷ್ಟ್ರೀಯ ಸಭೆಯೊಳಗೆ [illegible] ಅವರು ಯಾವದೇ ಅಧಿಕಾರಸ್ಥಾನ ಪಡೆದು ಕೆಲಸ ಮಾಡಿದ್ದನ್ನು ನಾನರಿಯೆ. ಆದಾಗ್ಯೂ ಅವರು ರಾಷ್ಟ್ರೀಯ ಪಕ್ಷದವರು [illegible] ನಾ ನಿಮಗೆ ಖಂಡಿತವಾಗಿ ಹೇಳಬಲ್ಲೆ. ಮೌ| ಮಹಮ್ಮದ ಅಲ್ಲಿಯವರೂ ಹಾಜರಿಲ್ಲ. ಆ ಕುರಿತು ಸಹ ನಮಗೆ [illegible]. ಅವರೂ ಒಮ್ಮೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಿದ್ದರು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದ ೧೫ ಮಂದಿ ಸಭಾಸದರಲ್ಲಿ [illegible] ಮುಸಲ್ಮಾನರು. ಸ್ತ್ರೀಯರೂ ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದರು. ಡಾ| ಎನಿ ಬಿಝೆಂಟರವರು ಮೊದಲನೇಯವರು. ಸೌ| ಸರೋಜಿನಿ ನಾಯಡುರವರು ಎರಡನೇಯವರು. ಸೌ| ಸರೋಜನಿ ನಾಯಡುರವರು ಕಾರ್ಯಕಾರಿ ಮಂಡಳದ ಸಭಾಸದರಿದ್ದಾರೆ. ಜಾತಿ-ಪಕ್ಷಗಳ ಅಭಾವವಿರುವಂತೆ ಸ್ತ್ರೀ-ಪುರುಷ ಭೇದದ ಅಭಾವ ಸಹ ರಾಷ್ಟ್ರೀಯ ಸಭೆಯಲ್ಲಿರುವದಾಗಿ ಇದರ ಮೇಲಿಂದ ಸ್ಪಷ್ಟವಾಗುತ್ತದೆ."

"ಪ್ರಾರಂಭದಿಂದಲೇ ರಾಷ್ಟ್ರೀಯ ಸಭೆಯು ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ಪುರಸ್ಕರಿಸಿದೆ. ಒಂದು ಕಾಲದಲ್ಲಿ ರಾಷ್ಟ್ರೀಯ ಸಭೆಯ ಜೊತೆಗೆ ಸಾಮಾಜಿಕ ಪರಿಷತ್ತು ಸೇರುತ್ತಿತ್ತು. [illegible] ಕೈ. ವಾ. ನ್ಯಾಯಮೂರ್ತಿ ರಾನಡೇಯವರು ಈ ಪರಿಷತ್ತಿಗಾಗಿ ಸರ್ವಸಾಮರ್ಥ್ಯವನ್ನು [illegible]. ಅವರ ನೇತೃತ್ವದಲ್ಲಿ ಸಾಮಾಜಿಕ ಪರಿಷತ್ತು ಅಸ್ಪೃಶ್ಯತೆಯ ನಿವಾರಣೆಯ ಕ್ರಮವನ್ನು ಪ್ರಾಮುಖ್ಯವಾಗಿ ಕೈಕೊಂಡಿತ್ತು. ಅನಂತರ ೧೯೨೦ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆಯು ಒಂದು ದೊಡ್ಡ ಆಕ್ರಮಣ ಮಾಡಿದ. ಅಸ್ಪೃಶ್ಯತಾನಿವಾರಣೆಯು ರಾಜಕೀಯ ಪ್ರಶ್ನೆಯೊಡನೆ ಸರಿಸಮಾನವಾಗಿ ರಾಜಕೀಯ ಕಾರ್ಯಕ್ರಮದಲ್ಲಿ ಸೇರಿಸಲ್ಪಟ್ಟಿತು. ರಾಷ್ಟ್ರೀಯ ಸಭೆಯು ಹಿಂದು-ಮುಸಲ್ಮಾನರ ಐಕ್ಯವನ್ನು ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ಅವಶ್ಯ ಪೀಠಿಕೆಯೆಂದು ಅಭಿಪ್ರಾಯಪಟ್ಟಿದೆ. ಹಿಂದು-ಮುಸಲ್ಮಾನರ ಐಕ್ಯವೆಂದರೆ ಸಮಸ್ತ ಧರ್ಮಾನುಯಾಯಿಗಳೊಳಗಿನ ಐಕ್ಯ. ಅಂತೆಯೇ ಅಸ್ಪೃಶ್ಯತೆಯ ನಿವಾರಣೆಯೂ ಸಂಪೂರ್ಣ ಸ್ವಾತಂತ್ರ್ಯದ ಅಡಿಗಲ್ಲೆಂದು ರಾಷ್ಟ್ರೀಯ ಸಭೆಯ ಅಭಿಪ್ರಾಯ."

"೧೯೨೦ನೇ ಸಾಲಿನಲ್ಲಿಟ್ಟ ರಾಷ್ಟ್ರೀಯ ಸಭೆಯ ಸ್ವರೂಪವು ಇಂದಿಗೂ ಅಚಲವಾಗಿದೆ. ಸರ್ವ ಪರಿಯಿಂದಲೂ ರಾಷ್ಟ್ರೀಯ ಪ್ರಯತ್ನವನ್ನಾಗಿ ಮಾಡುವದು ರಾಷ್ಟ್ರೀಯ ಸಭೆಯ ಧ್ಯೇಯವಿದೆ. ಇದೇ ರಾಷ್ಟ್ರೀಯ ಸಭೆಯೊಳಗಿನ 'ರಾಷ್ಟ್ರೀಯ' ಶಬ್ದದ ಅರ್ಥ. ಈ ಧ್ಯೇಯಸಂಪಾದನೆಗಾಗಿ ರಾಷ್ಟ್ರೀಯ ಸಭೆಯು ತೀರ ಪ್ರಾರಂಭ ಕಾಲದಿಂದಲೇ ಪ್ರಯತ್ನ ಮಾಡುತ್ತಲಿದೆ. ಕಾಶ್ಮೀರ ಮತ್ತು ಮೈಸೂರ ಸಂಸ್ಥಾನಗಳ ಪುರಸ್ಕಾರ ಮಾಡಿದವರೂ ಹಿಂದುಸ್ಥಾನದ ಪಿತಾಮಹರು, ಮತ್ತು ಈ ಸಂಸ್ಥಾನಗಳ ವೈಭವವು ಬಹುತರವಾಗಿ ದಾದಾಭಾಯಿ ನವರೋಜಿ ಮತ್ತು ರಾಷ್ಟ್ರೀಯ ಸಭೆಯ ಫಲವೆಂದು ನಮ್ರತಾಪೂರ್ವಕವಾಗಿ ನಾನು ನಮೂದಿಸುತ್ತೇನೆ. ಬಾಲ್ಯಾವಸ್ಥೆಯಿಂದಲೇ ರಾಷ್ಟ್ರೀಯ ಸಭೆಯು ಸಂಸ್ಥಾನಿಕರ ಪುರಸ್ಕಾರ ಮಾಡಿದೆ. ಈಗಲೂ ರಾಷ್ಟ್ರೀಯ ಸಭೆಯು ಸಂಸ್ಥಾನದೊಳಗಿನ ಅಂತರ್ಗತ ಕಾರಭಾರದಲ್ಲಿ ಸೇರದೆ ಅಲಿಪ್ತವಾಗಿದ್ದು ಸಂಸ್ಥಾನಿಕರಿಗುಪಕಾರ ಮಾಡಿದೆ. ರಾಷ್ಟ್ರೀಯ ಸಭೆಯಿಂದ ಹಲವು ಬಾರಿ ಧ್ಯೇಯಕ್ಕನುಗುಣವಾಗಿ ವರ್ತಿಸಲಿಕ್ಕಾಲಿಲ್ಲೆಂಬ ಸಂಗತಿಯನ್ನು ನಾನು ಅರಿತಿದ್ದೇನೆ. ಆದರೆ ರಾಷ್ಟ್ರೀಯ ಸಭೆಯ ಇತಿಹಾಸವನ್ನು ಚನ್ನಾಗಿ ಪರಿಶೀಲಿಸಿದರೆ, [illegible] ಹೆಚ್ಚಾಗಿ ನಿಮಗೆ ಕಂಡುಬಂದೀತು. ಬ್ರಿಟಿಶ-ಹಿಂದುಸ್ಥಾನದೊಳಗಿನವರಿಂದಲ್ಲಿ, ಇಲ್ಲವೆ ಹಿಂದೀ (ಸಂಸ್ಥಾನಿಕ) ಹಿಂದುಸ್ಥಾನದೊಳಗಿನವರಿಂದಲ್ಲಿ, ೭ ಲಕ್ಷ ಗ್ರಾಮಗಳಲ್ಲಿ ಚದರಿಬಿದ್ದ ಅರೆಹೊಟ್ಟೆ ಉಣ್ಣುವ, ಮೂಕ ಲಕ್ಷಾವಧಿ ಪ್ರಜೆಗಳ ಪ್ರತಿನಿಧಿತ್ವವನ್ನು ರಾಷ್ಟ್ರೀಯ ಸಭೆಯು ಅಂಗೀಕರಿಸಿದೆ. ರಾಷ್ಟ್ರೀಯ ಸಭೆಯ ಮೂಲ ಸ್ವರೂಪವಿದು. ರಾಷ್ಟ್ರೀಯ ಸಭೆಯವರು ಯಾವದೊಂದು ಹಕ್ಕಿನ ಸಂರಕ್ಷಣೆಯನ್ನು ಪುರಸ್ಕರಿಸಬೇಕಾದರೆ ಕೋಟ್ಯಾವಧಿ ದೀನ ಪ್ರಜೆಗಳ ಹಿತವನ್ನೇ ಗುರಿಯಾಗಿಟ್ಟುಕೊಂಡು ವಿಚಾರಿಸಿ ಪುರಸ್ಕಾರ ಮಾಡುತ್ತಾರೆ. ಅದಕ್ಕಾಗಿಯೇ ಬೇರೆ ಬೇರೆ ಹಿತಸಂಬಂಧಗಳಲ್ಲಿ ತಿಕ್ಕಾಟವು [illegible] ನಿಮಗೆ ಕಂಡುಬಂದೀತು. ಈ ತಿಕ್ಕಾಟದಲ್ಲಿ ನಿಜವಾಗಿ ದೀನ ಪ್ರಜೆಗಳ ಅಹಿತ ಕಾಣುತ್ತಿದ್ದರೆ, ಕೋಟ್ಯಾವಧಿ ಜನಾಂಗದ ಸಂರಕ್ಷಣೆಗಾಗಿ ರಾಷ್ಟ್ರೀಯ ಸಭೆಯು ಪ್ರತಿಯೊಂದು ವಿಶಿಷ್ಟ ಹಕ್ಕನ್ನು ತ್ಯಾಗ ಮಾಡಲು ಸಿದ್ಧವಿರುವದಾಗಿ ನಾನು ರಾಷ್ಟ್ರೀಯ ಸಭೆಯ ಪರವಾಗಿ ನಿರ್ದಾಕ್ಷಿಣ್ಯದಿಂದ [illegible]. ರಾಷ್ಟ್ರೀಯ ಸಭೆಯು [illegible] ಸಂಸ್ಥೆಯಿದೆ. ಮತ್ತು ಕ್ರಮವಾಗಿ ಅದರ ಸ್ವರೂಪ ವ್ಯಾಪಕವಾಗುತ್ತಿದೆ. ಈ ಸಂಘಟನೆಯ ಬಲದಿಂದ ಅಖಿಲ ಭಾರತೀಯ [illegible] ಸಂಘದವರು ೨೦೦೦ ಗ್ರಾಮಗಳೊಳಗಿನ ಅರ್ಧ ಲಕ್ಷ ಸ್ತ್ರೀಯರಿಗೆ ಕೆಲಸ ಪೂರೈಸಿಕೊಟ್ಟಿದ್ದಾರೆ. ಇವರಲ್ಲಿ [illegible] ಸ್ತ್ರೀಯರು ಮುಸಲ್ಮಾನ ಧರ್ಮದವರು. ಅಸ್ಪೃಶ್ಯರೆಂದು ಹೇಳಲ್ಪಡುವ ಸಾವಿರಾರು ಸ್ತ್ರೀಯರಿದ್ದಾರೆ. ವಿಧಾಯಕ ಮಾರ್ಗದಿಂದ ನಾವು ಗ್ರಾಮಪ್ರವೇಶ ಮಾಡಿದ್ದೇವೆ. ಸಮಸ್ತ ೭ ಲಕ್ಷ ಗ್ರಾಮಗಳನ್ನು ವ್ಯಾಪಿಸುವ ಪ್ರಯತ್ನ ನಡೆದಿದೆ. ಇದು ದೈವಸಾಧ್ಯ ಪರಾಕ್ರಮ! ಮನುಷ್ಯ ಪ್ರಯತ್ನಕ್ಕೆ ಈ ಕಾರ್ಯ ಶಕ್ಯವಿದ್ದರೆ, ರಾಷ್ಟ್ರೀಯ ಸಭೆಯು ಎಲ್ಲ ಗ್ರಾಮಗಳನ್ನು ವ್ಯಾಪಿಸಿಕೊಂಡು ಮನೆಮನೆಗೂ ಕೈರಾಟೆಯ ಸಂದೇಶವನ್ನು ಬೀರಿದ ಚಮತ್ಕಾರವನ್ನು [illegible]."

ವಾರ್ತೆಗಳು.

— ಶ್ರೀ ಕಮಲಾ ನೆಹರೂರವರ ಪ್ರಕೃತಿ ಒಮ್ಮಿಂದೊಮ್ಮೆ ಕೆಟ್ಟಿತು. ಕ್ರಮವಾಗಿ ಅವರ ಚೈತನ್ಯಹರಣವಾಗುತ್ತದಾಗಿ ಮಹಾತ್ಮರಿಗೆ ಪಂ। ಜವಾಹಿರಲಾಲರು ತಂತಿ ಕೊಟ್ಟರು. ಶ್ರೀ ಡಾಕ್ಟರರು ಉಪಚಾರ ಮಾಡಿದರು. ಅದರಿಂದ ಅವರಿಗೆ ಕೆಲ ಘಟ್ಟಿಗೆ ರೋಗದ ಬಲ ಹಿಮ್ಮೆಟ್ಟಿ ಅವರು ಸ್ವಲ್ಪ ಆರಾಮ ಕೊಳ್ಳಲಾರಂಭಿಸಿದ್ದಾರೆ. ಸ್ವಲ್ಪ ಆರೆಯುವ ಹಾಗೆ ಡಾಕ್ಟರರು ಹಿಂದವಾಸಿಗಳಿಗೆ ಧೈರ್ಯ ಕೊಡುತ್ತಾರೆ. ಶ್ರೀ ಕಮಲಾ ನೆಹರೂರವರಿಗೆ ತ್ವರ್ಯವೇ ಸ್ವಾಸ್ಥ್ಯ ಪ್ರಾಪ್ತಿಯಾಗಲೆಂದು ಪರಮಾತ್ಮನೆಡೆ ಪ್ರಾರ್ಥನೆ

— ರವಿವಾರಕ್ಕೆ ದಿಲ್ಲಿಯ ಗಾಂಧಿ ಉಪವನದಲ್ಲಿ ಸ್ವದೇಶಿ ಪ್ರದರ್ಶನವನ್ನು ಡಾ. ಅನ್ಸಾರಿಯವರು ತೆರೆದು ಸುವರ್ಣ ಮಹೋತ್ಸವಕ್ಕೆ ಪ್ರಾರಂಭಿಸಿದರು. ರಾಷ್ಟ್ರೀಯ ಸಭೆಯಷ್ಟು ಲೋಕಕಾರ್ಯವನ್ನು ಸರಕಾರವು ಸಹ ಮಾಡಿಲ್ಲವಾಗಿ ಡಾ. ಅನ್ಸಾರಿಯವರು ಉದ್ಗರಿಸಿದರು. ಮಹಾತ್ಮರ ನೇತೃತ್ವದಲ್ಲಿ ರಾಷ್ಟ್ರೀಯ ಸಭೆಯು ನಿಸ್ವಾರ್ಥ ಲೋಕಸೇವಕರ ಕಾರ್ಯಕ್ಷಮ ಸಂಸ್ಥೆಯಾಗುವದಾಗಿಯೂ ಉದ್ಗರಿಸಿದರು. ಬಳಿಕ ಆಸಫ ಅಲ್ಲಿಯವರೂ ರಾಷ್ಟ್ರೀಯ ಸಮರದಲ್ಲಿ ಬಲಿಬಿದ್ದವರ ಸ್ಮರಣೆ ಮಾಡಿದರು.

— ಹೈದರಾಬಾದದ ಕಲೆಕ್ಟರರು ಅಲ್ಲಿಯ ಮ್ಯುನಿಸಿಪಾಲಿಟಿಯ ಮೇಲೆ ಪ್ರತಿಬಂಧಕ ಹುಕುಮನ್ನು ಹೊರಡಿಸಿ, ರಾಷ್ಟ್ರೀಯ ಸಭೆಯ ಸುವರ್ಣ ಮಹೋತ್ಸವದ ವಿಷಯವನ್ನು ಚರ್ಚಿಸಬಾರದಾಗಿ ವಿಧಿಸಿದ್ದಾರೆ.

— ಮದ್ರಾಸ ಸರಕಾರವು ರಾಷ್ಟ್ರಧ್ವಜದ ಕುರಿತು ೧೯೩೩ನೇ ಇಸ್ವಿಯಲ್ಲಿ ಹೊರಡಿಸಿದ ಹುಕುಮುಗಳು ಇನ್ನೂ ಊರ್ಜಿತವಿರುವವಾಗಿಯೂ, ಸರಕಾರಿ ಆಶ್ರಯ ಪಡೆಯುವ ಸ್ಥಾನಿಕ ಸಂಸ್ಥೆಗಳು ರಾಷ್ಟ್ರಧ್ವಜವನ್ನು ಹಾರಿಸತಕ್ಕದ್ದಲ್ಲವಾಗಿ ವಿಧಿಸಿದೆ. ಸುವರ್ಣ ಮಹೋತ್ಸವ ಖರ್ಚು ತೆರಿಗೆದಾರರ ಹಣದ ಅಪವ್ಯಯವಾದ್ದರಿಂದಲೂ, ಒಂದು ರಾಜಕೀಯ ಪಕ್ಷದ ಅಭಿಮಾನಪ್ರದರ್ಶನವಾಗುವದರಿಂದಲೂ, ಈ ರಕಮನ್ನು ಸರಕಾರವು ಮನ್ನಿಸಲಿಕ್ಕಿಲ್ಲವಾಗಿ ಆಜ್ಞೆಯಾಗುತ್ತದೆ.

— ಗಡಿನಾಡಿನಲ್ಲಿ ರಾಷ್ಟ್ರೀಯ ಸಭೆಯ ಮೇಲಿನ ಸರಕಾರದ ಪ್ರತಿಬಂಧ ಇನ್ನೂ ದೂರವಾಗಿಲ್ಲ. ಅದರಿಂದ ಆ ಪ್ರಾಂತದಲ್ಲಿ ಸುವರ್ಣ ಮಹೋತ್ಸವದ ಪ್ರೀತ್ಯರ್ಥ ಯಾವದೇ ಉತ್ಸವ ನಡೆಯದು. ಗಡಿನಾಡಿನ ರಾಷ್ಟ್ರೀಯ ಸಭೆಯವರು ಮೌನದಿಂದ ರಾಷ್ಟ್ರೀಯ ಸಭೆಯ ಉತ್ಸವವನ್ನು ನೆರವೇರಿಸುವರು.

— ಬ್ರಿಟಿಶ ಪ್ರಧಾನ ಮಂಡಳವು ಮಿ। ಈಡನ್‌ರವರಿಗೆ ವಿದೇಶಿ ಇಲಾಖೆಯ ಪ್ರಧಾನ ನೇಮಿಸಿದೆ. ಇದರ ಮೇಲಿಂದ ಬ್ರಿಟಿಶ ಸರಕಾರವು ಇಟಾಲಿಯ ದ್ವೇಷ ಬೆಳೆಯುತ್ತದಾಗಿ ಇಟಾಲಿ ಸರಕಾರದ ಅಭಿಪ್ರಾಯವಾಗುವದಂತೆ !

ಶ್ರೀ ಮಧ್ವಾಚಾರ್ಯರ ಗ್ರಂಥಗಳ ಕನ್ನಡ ಭಾಷಾಂತರಗಳು.

ಕನ್ನಡಲಿಪಿಯಲ್ಲಿ ಮೂಲ, ಟೀಕಾ, ತಾತ್ಪರ್ಯಸಹಿತ,

III ನೇ ಸಂಚಿಕೆ ಶ್ರೀ ಅನುವ್ಯಾಖ್ಯಾನವು. II ನೇ ಭಾಗ ಜನ್ಮಾದ್ಯೇಕಾದಶಾಧಿಕರಣಗಳು. ಈಗಲೇ ತಯಾರಾಗಿವೆ. ಪುಟಗಳು ೨೬೦ ಚಂ ರೂ. ೧ ೮-೦

I ನೇ ಭಾಗ ಜಿಜ್ಞಾಸಾಧಿಕರಣ. ಪುಟಗಳು ೨೫೧ ಚಂದಾ ರೂ ೩ ೮ ೦

II ನೇ ಸಂಚಿಕೆ. ೧೦ ಉತ್ಕೃಷ್ಟ ಗ್ರಂಥಗಳು ಪುಟಗಳು ೭೧೮ ಚಂದಾ ರೂ. ೪-೬-೦ ಟಪಾಲು ಹಾಸಲು ಪ್ರತ್ಯೇಕ ಪ್ರತಿಗಳು ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಒನರರಿ ಟ್ರೆಝುರರ್,
ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ.
(ದಕ್ಷಿಣ ಕನ್ನಡ)

ಇಂಡಿಯನ್ ಮರ್ಕಂಟೈಲ ಇನ್ಶ್ಯೂರನ್ಸ ಕಂಪನಿ, ಲಿಮಿಟೆಡ್,
ಮುಂಬಯಿ.
(೧೯೦೭ ರಲ್ಲಿ ಸ್ಥಾಪನೆಯಾದದ್ದು)

ಶುದ್ಧ ಭಾರತೀಯ- ಸ್ವದೇಶಿ ಸುಸಂಪನ್ನ ಜೀವ-ವಿಮೆಯ ಸಂಘವು.

ಸ್ವರ್ಗಸ್ಥ ಸರ್ ಮನಮೋಹನದಾಸ ರಾಮಜಿ, ನೈಟ್, ಇವರ ಅಧ್ಯಕ್ಷತೆಯಲ್ಲಿ ವಿಶೇಷ ವೃದ್ಧಿ ಹೊಂದಿದ ಕಂಪನಿಯು !

ಬೇಕಾ! ಕರ್ನಾಟಕದೊಳಗಿನ ಜಿಲ್ಲೆಗಳಲ್ಲಿ ಕಂಪನಿಯ ಕೆಲಸ ಮಾಡಲು ಉತ್ಸಾಹಿ, ವಜನದಾರ ಏಜಂಟರು ಬೇಕು, ಅನುಭವಿಕ ಆರ್ಗನೈಝರರು ಬೇಕು. ಕಮಿಶನ್ ಹಾಗು ತಲಬು ಸಿಗುವದು. ಸವಿಸ್ತರ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಿ. ಯಲ್ಲಾಪುರಕರ ಎಂಡ್ ಸನ್ಸ,
ಕರ್ನಾಟಕ ಪ್ರಾಂತ್ಯದ ಚೀಫ ಏಜಂಟರು,
ಸಂತೆಪೇಟೆ, **ಕಾರವಾರ.**

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.
ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಕರಾರುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು..

Kumta Agents.
D. K. Nayak Bros.
D. S. Pai
K. N. Nayak.
Honavar Agent
R. V. Prabhu Esq.

K. Padmanabha Rao & Sons
BELGAUM
Chief Agents for
Karnatak Districts & S. M. State.

॥ ಓಂ ॥

ಡಾ॥ ಮಹಿಷಿಯವರ ಅಮೂಲ್ಯ ಔಷಧಗಳು

ಹೆಡ್ ಆಫೀಸು- ಸ್ವಾಸ್ಥ್ಯನಿಲಯ, ಧಾರವಾಡ.

ಡಾ। ಮಹಿಷಿಯವರು ಬಹು ವರ್ಷಗಳ ಪರಿಶೀಲನದಿಂದಲೂ, ಅನುಭವದಿಂದಲೂ ಸಿದ್ಧಪಡಿಸಿದ ಪ್ರಯೋಗದಿಂದ ತಯಾರಿಸಲ್ಪಡುವ ಅತ್ಯಂತ ಪರಿಣಾಮ ಕರ ಔಷಧಗಳು

ಅಶೋಕಾ ಕಾರ್ಡಿಯಲ್:— ಸ್ತ್ರೀಯರ ಮುಟ್ಟಿನ ಹಾಗೂ ಗರ್ಭಾಶಯದ ಎಲ್ಲ ರೋಗಗಳಿಗೆ ಇದು ಸಿದ್ಧೌಷಧವು. ಇದರ ಉಪಯೋಗದಿಂದ ಸ್ತ್ರೀಯರ ಅನೇಕ ರೋಗಗಳು ಗುಣವಾಗುವದಲ್ಲದೆ ಬಂಜೆತನವು ನಷ್ಟವಾಗುವದು. ಅನೇಕ ಸ್ತ್ರೀಯರು ಇದರಿಂದ ಅನುಕೂಲ, ಲಾಭ ಹೊಂದಿರುವರು. ಕ್ರಯ ರೂ ೧-೮-೦.

ಅಶ್ವಗಂಧ ಟೊನಿಕ್:— ಮ.ಜಾ, ನರಾಂಪ ಸಂಗಳನ್ನು ಬಲಪಡಿಸುವ ಉತ್ಕೃಷ್ಟ ಶಕ್ತಿವರ್ಧಕ ಔಷಧವು. ಇದರ ಸೇವನೆಯಿಂದ ಮೂತ್ರದಲ್ಲಿ ಧಾತು ಹೋಗುವದು, ಸ್ವಪ್ನಾವಸ್ಥೆ, ಇಂದ್ರಿಯಕ್ಷಯ, ನಪುಂಸಕತ್ವ, ವಿಸ್ಮರಣ, ಬುದ್ಧಿಭ್ರಂಶ, ಅಜೀರ್ಣ ಮುಂತಾದವುಗಳೆಲ್ಲ ನಷ್ಟವಾಗುವವು. ಬಾಣಂತಿ ಶಕ್ತಿಗೆ ಇದು ದಿವ್ಯೌಷಧ ರೂ. ೧-೮-೦

ಎಗ್ಮ್ಯು ಮಿಕ್ಶ್ಚರ, ಫೀವರ ಡ್ರೊಪ್ಸ, ಅಮೃತ ಸುಧಾ, ಕರ್ಪೂರಾರ್ಕ, ಸಾಯರಪ್ ವಾಸಕ ಇವು ಪ್ರತಿಯೊಬ್ಬ ಸಂಸಾರಿಕನು ಸಂಗ್ರಹಿಸಿಡತಕ್ಕ ಔಷಧಿಗಳಾಗಿವೆ. ನಿಕ್ಕಟ್ಟಿಗೆ ಇವುಗಳ ಉಪಯೋಗವಾಗುವದು. ಇವು ಅಮೂಲ್ಯ ಔಷಧಗಳು !!

ಇದಲ್ಲದೆ ಪ್ಲೇಗ ಪ್ರತಿಬಂಧ ವ ನಿವಾರಣೆಯ ಬಗ್ಗೆ ಅನುಭವ ಸಿದ್ಧವಾದ ಪ್ಲೇಗ ಕ್ಯೂಅರ, ಪ್ಲೇಗ ಸ್ಪೆಸಿಫಿಕ್ ವ ಕೈಗೆ ಕಟ್ಟಿಕೊಳ್ಳುವ ಇಗ್ನೇಶಿಯಾ ಬೀನ್ಸ ಸಹ ಸಿಗುವವು.

ಇದಲ್ಲದೆ ಮಲೇರಿಯಾದ ಮೇಲೆ ಬಹು ಪರಿಣಾಮಕಾರಿಯಾದ ಎಂಟಿ ಮಲೇರಿಯಲ್ ಮಿಕ್ಶ್ಚರ, ಬಾಲಾಮೃತ, ಬ್ಲಡ್ ಮಿಕ್ಶ್ಚರ, ಕಾಲರೇಲ, ಡಿಸ್‌ವೊಬರ, ಸಾಯುಂಡ್ ಕ್ಯಾಲ್ಸಿಲೆಕ್ಟೋ ಫಾಸ್ಫೇಟ, ಪ್ರಮೇಹಬಿಂದು, ನೇತ್ರಬಿಂದು, ಹೇರ ಆಯಿಲ್ ಮುಂತಾದ ಅನೇಕ ಔಷಧಗಳೂ ದೊರೆಯುತ್ತಿರುವವು. ಬಾಣಂತಿ ಮತ್ತು ಸುಖಪ್ರಸೂತಿ ಗುಳಿಗೆಗಳೂ ಸಿಕ್ಕುತ್ತಿರುವವು

ಉತ್ತರ ಕನ್ನಡ ಜಿಲ್ಲೆಯ ಸೋಲ್ ಏಜಂಟರು..

ರಾ। ಶಿವರಾಮ ಗಣೇಶ ಶಾಸ್ತ್ರಿ, ಕುಮಟಾ. (ಉ. ಕನ್ನಡ)

THE AGRICULTURAL & INDUSTRIAL BANK, LIMITED.

(Incorporated in British India)

Head office – COONDAPOOR Branch – KUMTA

Telegrams - "BANKERS"

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು:— ಕುಂದಾಪುರ. ಬ್ರೆಂಚ:— ಕುಮಟಾ.

ರೇವಣಾತಿಗಳು.

ಕಾಯಂ ಠೇವು - 3 6, 12 24 36 ತಿಂಗಳ ಗಳ ಮುದ್ದತ್ತಿನ ಠೇವುಗಳಿಗೆ ಕ್ರಮವಾಗಿ ಸಾಲಿಯಾನ ಶೇಕಡಾ ರೂ 3½ 4½ 5½, 6, 6½ ರಂತೆ ಬಡ್ಡಿ ದರದಿಂದ ಅಂಗೀಕರಿಸಲ್ಪಡುವವು

ಚಾಲ್ತಿ ಠೇವುಗಳು ಜನವರಿಯಿಂದ ಜೂನ ಆಖೈರ ವರೆಗೆ ಸಾಲಿಯಾನ ಶೇಕಡಾ ರೂ 2½ ವ ಜುಲೈಯಿಂದ ಡಿಸೆಂಬರ ಆಖೈರ ವರೆಗೆ 1½ ರಂತೆ ಬಡ್ಡಿಯಿಂದ ಬಿನ್ ಮಿತಿಯಿಂದ ಅಂಗೀಕರಿಸಲಾಗುವವು

ಸೇವಿಂಗ್ಸ ಬೇಂಕ ಠೇವು — ಶೇಕಡಾ ರೂ 4 ರಂತೆ ಬಡ್ಡಿ ಬಿನ್ ಮಿರ್ಜಾಸಿಂದ ಚೆಕ್ಕುಗಳ ಸವಲತ್ತು ಕೊಡಲ್ಪಡುವದು

ಕ್ಯುಮ್ಯುಲೆಟಿವ್ ಡಿಪೊಜಿಟುಗಳು ಸಹಾ ಇಟ್ಟುಕೊಳ್ಳಲಾಗುವವು

ವಹಿವಾಟುಗಳು.

ಚಿನ್ನಾಭರಣಗಳು, ವ್ಯಾಪಾರ ಸರಕುಗಳು ವ ಇತರ ಭದ್ರತೆಗಳ ಜವಾಬದಾರಿ ಮೇಲೆ ಒಳ್ಳೆ ರಿಯಾಯ್ತಿ ದರದ ಬಡ್ಡಿಯಿಂದ ಸಾಲಗಳು ಕೊಡಲ್ಪಡುವವು

ದೇಹಜವಾಬದಾರಿಯ ಮೇಲೆ ಯೋಗ್ಯ ಬಡ್ಡಿ ದರಗಳಿಂದ ಸಾಲಗಳೂ ಓವರ್‌ಡ್ರಾಫ್ಟುಗಳೂ ಕೊಡಲ್ಪಡುವವು

ಒಳ್ಳೆ ಖಾತ್ರಿಯಾದ ಬಿಲುಗಳು, ದರ್ಶನಿಹುಂಡಿಗಳು ಚೆಕ್ಕುಗಳು ವಸೂಲ ವಹಿಯಿಸಲ್ಪಡುವವು

ಎಲ್ಲಾ ತರದ ಬೇಂಕ ವ್ಯವಹಾರಗಳು ನಡೆಸಲಾಗುವವು

ಬಡ್ಡಿ ದರಗಳು ವಗೈರೆ ಮಾಹಿತಿಯ ಬಗ್ಗೆ ಆಫೀಸಿನಲ್ಲಿ ವಿಚಾರಿಸಿ ತಿಳಕೊಳ್ಳಬಹುದು

ಸವಿಸ್ತಾರ ಮಾಹಿತಿ ಬಗ್ಗೆ ನಮ್ಮ ಮಾಹಿತಿ ಪುಸ್ತಕ (Rules of Business)ವನ್ನು ಪಡೆಯಿರಿ

ಕುಮಟಾ,
ತಾ 23—10—1935

K Vaman Shenai &
G Balakrishna S Nayak,
Managing Directors

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಪಾರಂಪರ್ಯದ ಅನುಭವ ಸಿದ್ಧೌಷಧಗಳು!

ವೃದ್ಧಿಕರವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ (ನಪುಂಸಕತ್ವ ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ ಅತ್ಯುತ್ತಮ)
ಮಹಾಮಾಷ ತೈಲ (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ (ಲಿವರ್ ರೋಗಕ್ಕೆ ಅತ್ಯುತ್ತಮ)
ಕೃಷ್ಣಾರಕ್ (ಚರ್ಮವ್ಯಾಧಿಗಳಿಗೆ ಶೀಘ್ರ ಗುಣಕಾರಿ)
ಅಮೃತ ಗ್ರಾಸ (ರಕ್ತಪಾತ, ಅವಕಾಂತ್ರಿಕ, ಅಪಸ್ಮಾರಗಳಿಗೆ ರಾಮಬಾಣ)
ಭುವನಾಂಬು (ಸರ್ವ ತರದ ಶಾರೀರಕ ನೋವುಗಳಿಗೆ ಅತ್ಯಂತ ಗುಣಕಾರಿ)
ಮಾತುಲುಂಗ ರಸಾಯನ (ಅಗ್ನಿಮಾಂದ್ಯ, ಅಜೀರ್ಣ ಇತ್ಯಾದಿಗಳಿಗೆ ಶ್ರೇಷ್ಠ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು ಲೇಹ್ಯಗಳು, ಭಸ್ಮಗಳು, ತೈಲಗಳು, ಮಾತ್ರೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಎಲ್ಲೆಲ್ಲಿಯೂ ಏಜಂಟರು ಬೇಕಾಗಿದ್ದಾರೆ:-

ಷರತ್ತಿನ ವಗೈರೆಗಳ, ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಪ್ರಶಂಸಾಪತ್ರ

ಉಡುಪಿ ತಾಲೂಕ ಕಟಪಾಡಿ ಶ್ರೀಯುತ ನಾಯಕ್ ಬ್ರದರ್ಸ ಅವರ ಶ್ರೀಮದ್ಭುವನೇಂದ್ರ ಮಹೌಷಧಾಲಯವನ್ನು ಈ ದಿವಸ ನಾನು ನೋಡಿ ಬಹಳ ಆನಂದಪಟ್ಟೆನು ಈ ವೈದ್ಯಶಾಲೆಯು ಈ ಪ್ರಾಂತ್ಯದಲ್ಲಿ ಜನಾನುರಾಗವನ್ನು ಬಹುಕಾಲದಿಂದ ಪಡೆದಂತೆ ತಿಳಿಯುತ್ತದೆ ಇದರ ವ್ಯವಸ್ಥಾಪಕರು ಈ ಜಿಲ್ಲೆಯ ಸುಪ್ರಸಿದ್ಧ ವೈದ್ಯಕುಟುಂಬಕ್ಕೆ ಸೇರಿದವರಾಗಿಯೂ, ಗಣನೀಯರಾಗಿಯೂ ಇರುವ ಶ್ರೀಮಂತರಾಗಿದ್ದಾರೆ ಇವರು ಸಿದ್ಧಪಡಿಸಿದ ಔಷಧಗಳನ್ನು ವಿಮರ್ಶಿಸಿದೆನು ಇವು ಶಾಸ್ತ್ರಸಿದ್ಧವಾಗಿ ಅನುಭವಯುಕ್ತವಾಗಿ ಇರುತ್ತವೆ ಈ ಪ್ರಾಂತ್ಯದಲ್ಲಿ ವಿಶೇಷವಾಗಿರುವ ಗುಪ್ತವಾದ ಅನೇಕ ವನಸ್ಪತಿಗಳ ಪರಿಚಯವೂ ಇವರಿಗೆ ಇರುತ್ತದೆ ಇಂತಹ ವೈದ್ಯರ ಸಹಾಯವು ಆಯುರ್ವೇದ ಮಹಾಮಂಡಲದ ವನಸ್ಪತಿ ವಿಚಾರ ಸಮಿತಿಗೆ ಅತ್ಯಗತ್ಯವೆಂದು ಸೂಚಿಸುತ್ತೇನೆ ಈ ವೈದ್ಯಶಾಲೆಯನ್ನು ಈ ಜಿಲ್ಲೆಯಲ್ಲಿ ಜವಾಬ್ದಾರಿಯಾಗಿ ಮಾಡಲು ಇದರ ವ್ಯವಸ್ಥಾಪಕರು ಯತ್ನಿಸಿರುವದು ಅಭಿನಂದನೀಯವು ಇಂತಹ ವೈದ್ಯರು ಆಯುರ್ವೇದ ಮಹಾಮಂಡಲದಲ್ಲಿ ಆಸಕ್ತಿಪಡುತ್ತಿರುವುದಾಗಲೇ ಮಹಾಮಂಡಲದ ಉದ್ದೇಶವು ಸಫಲವಾಗುತ್ತದೆ ಈ ವೈದ್ಯಶಾಲೆಯ ವ್ಯವಸ್ಥಾಪಕರ ಪ್ರಯತ್ನವು ಸಫಲವಾಗಲೆಂದೂ, ವೈದ್ಯಶಾಲೆಯು ಪ್ರತಿ ದಿವಸ ಅಭಿವೃದ್ಧಿಗೊಳ್ಳುತ್ತಿರಲೆಂದೂ, ಭಗವಂತನನ್ನು ಪ್ರಾರ್ಥಿಸುತ್ತೇನೆ

ಮೊಕ್ಕಾಂ ಉಡುಪಿ ೧೦-೧೧-೧೯೩೪

ವಿದ್ವಾನ್ ಕೇ ಶೇಷಶಾಸ್ತ್ರಿ, ಪ್ರಧಾನ ಮಂತ್ರಿ
ಆಲ್ ಇಂಡಿಯಾ ಆಯುರ್ವೇದ ವೈದ್ಯ ವಿದ್ವತ್ ಪರಿಷತ್ ಇತ್ಯಾದಿ

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ,
ಕಟಪಾಡಿ ಪೋಸ್ಟು, ದ. ಕನ್ನಡ